ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೬

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೩೮
ವಿಚಾರ ಸಾಹಿತ್ಯಮಾಲೆ - ೫೨

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೯

# ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೯)

ಗವರ್ನರ್ - ಜನರಲ್ ಅವರ ಕಾರ್ಯಕಾರಿ
ಪರಿಷತ್ ಸದಸ್ಯರಾಗಿ
(೧೯೪೨ - ೪೬)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು - ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 9** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition: 2015; Pp. xlviii + 564; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ : ೨೦೧೫
ಪುಟಗಳು : xlviii + ೫೬೪
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ-ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ-ಭಾಷಣಗಳ ಮೂಲಕ, ವೈಚಾರಿಕ ಚರ್ಚೆ-ಸಂವಾದಗಳ ಮೂಲಕ ಸಾಮಾಜಿಕ-ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್-III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize!! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧-೨)

೪. ಶ್ರೀ ಕೃಷ್ಣ ಮೂರ್ತಿಸಿರ್ಸಿ (ಸಂ. ೧೩; ಭಾಗಗಳು ೧-೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

## ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ

ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ, ಅಸ್ಪೃಶ್ಯತಾ ನವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು, ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ॥ ಅಂಬೇಡ್ಕರ್ ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರ ಮೂರ್ತಿಗಳಾಗಿದ್ದು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪ್ರಶ್ಯತೆ, ಬಡತನ ಮುಂತಾದ ಸಾಮಾಜಿಕ. ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ, ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ ಜಾತಿ ನಿರ್ಮೂಲನೆ, ಶೂದ್ರರು ಯಾರು; ಅಸ್ಪೃಶ್ಯರು ಯಾರು – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು, ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ – ಪ್ರಮುಖವಾಗಿವೆ. ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಾಗಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ,

ಜನತಾ ಮತ್ತು ಬಹಿಷ್ಕೃತ ಭಾರತ – ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಲ್ಲಿಯೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೬ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಗಣಿಸಲಾಗಿದೆ. ಆದ್ದರಿಂದ ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದು ಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರ ಡಾ॥ ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪು–ರೇಷೆಗಳನ್ನು ಸಿದಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ॥ ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೮ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ್ ಮೂನ್ ಅವರ ಬರಹಗಳನ್ನು ಸಂಗ್ರಹಿಸಿ ಒಟ್ಟು "ಡಾ॥ ಅಂಬೇಡ್ಕರ್: ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಒಟ್ಟು ಹದಿನೈದು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟಿತವಾದ ಹದಿನೈದು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರೆಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ; ಭಾಷಾವರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂ ಧರ್ಮ ದರ್ಶನ, ಪ್ರಾಚೀನ ಭಾರತದಲ್ಲಾದ

ಕ್ರಾಂತಿ ಮತ್ತು ಪ್ರತಿಕಾಂತಿ, ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು, ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನ: ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ 'ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ, ವಿಶ್ಲೇಷಣೆಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು – ಮತ್ತು ಅಸ್ಪೃಶ್ಯರು ಯಾರು – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?– ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ, ಮುಂಬರುವ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನಸಭೆ ಮತ್ತು ಸಂಸತ್ತಿನಲ್ಲಿ ಡಾ॥ ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೪೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ (೯ನೆಯ ಸಂಪುಟ (೧೯೯೧) ದಲ್ಲಿ ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ (೧೯೯೨). ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧರ್ಮ "ಗ್ರಂಥದ ಪನರ್ ಮುದ್ರಣವಾಗಿದೆ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ'. 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ', ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು, 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ॥ ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ॥ ಅಂಬೇಡ್ಕರರು ನೀಡಿದ ವಿವರಣೆಗಳೂ ಸೇರಿವೆ. ಇತ್ತೀಚೆಗೆ ಪ್ರಕಟವಾಗಿರುವ ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ॥ ಅಂಬೇಡ್ಕರರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದ ಎರಡೂ ಭಾಗಗಳಲ್ಲಿ ಲಭ್ಯವಿದೆ.

ಮಹಾರಾಷ್ಟ್ರ ಸರ್ಕಾರ ಡಾ॥ ಅಂಬೇಡ್ಕರ್‌ರವರ ಅಮೂಲ್ಯ ಮತ್ತು ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಬರವಣಿಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ, ಇದು ಒಂದು ದೊಡ್ಡ ಕೊರತೆ, ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊಟ್ಟ ಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಅದೇಶ ಹೊರಡಿಸಿತು.

| | | |
|---|---|---|
| ೧. ಡಾ॥ ಎ.ಎಂ. ರಾಜಶೇಖರಯ್ಯ | – | ಸಂಪಾದಕರು |
| ೨. ಡಾ॥ ಸಿದ್ಧಲಿಂಗಯ್ಯ | – | ಸದಸ್ಯರು |
| ೩. ಶ್ರೀ ದೇವನೂರು ಮಹದೇವ | – | ಸದಸ್ಯರು |
| ೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | – | ಸದಸ್ಯ–ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಅಲಭ್ಯವಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯ ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದುನೂರು ಪುಟಗಳನ್ನು ವಹಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದವುಗಳಾಗಿರುವುದರಿಂದ ಅವುಗಳ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

೧. ಡಾ॥ ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨. ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ೩. ಶ್ರೀ. ವೈ. ಎಂ. ಸಿ. ಶರ್ಮ, ಅಂದಿನ ಅಧ್ಯಕ್ಷರು, ಕರ್ನಾಟಕ ರಾಜ್ಯ ಭಾಷಾ ಆಯೋಗ, ಬೆಂಗಳೂರು. ನಂತರ ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ

ಮಾಡಿದ ಭಾಗಗಳಲ್ಲಿ ಪದಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿಲ್ಲರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು.  ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಲಾಗಿದೆ.

ಈಗ ಪ್ರಕಟವಾಗಿರುವ ಈ ಸಂಪುಟವು ಡಾ॥ ಅಂಬೇಡ್ಕರ್ ರಾಜಕೀಯ ಜೀವನ ಮತ್ತು ಮುಖಂಡತ್ವದಲ್ಲಿ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡಿವೆ. ಏಕೆಂದರೆ ಅವರು ಪ್ರಥಮ ಬಾರಿಗೆ ಭಾರತದ ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯ (ಸಚಿವ)ರಾಗಿ ೧೯೪೨ರಲ್ಲಿ ನೇಮಕಗೊಂಡರು. ೧೯೪೩ರಿಂದ ೧೯೪೬ರ ಅವಧಿಯಲ್ಲಿ ಅವರು ಈ ಮಹತ್ವದ ಸ್ಥಾನವನ್ನು ಅಲಂಕರಿಸಿದ್ದು, ಈ ಅವಧಿಯಲ್ಲಿ ಅದರಲ್ಲಿಯೂ ಎರಡನೆಯ ಮಹಾಯುದ್ಧದ ಸಂಕಟ ಕಾಲದಲ್ಲಿ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಮಿಕ ಸಮಸ್ಯೆಗಳತ್ತ ರಚನಾತ್ಮಕ ರೀತಿಯಲ್ಲಿ ಗಮನಹರಿಸಿದರು.  ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ ಮತ್ತು ಅವರ ತೀವ್ರ ಸಮಸ್ತೆಗಳತ್ತ ಯಾರೂ ಗಮನ ಹರಿಸುವುದಿಲ್ಲ. ಆದರೆ ಡಾ॥ ಅಂಬೇಡ್ಕರರು ತಮ್ಮ ಅಧಿಕಾರಾವಧಿಯಲ್ಲಿ ಭಾರತೀಯ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರಲ್ಲದೆ ಅವರ ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಇದರ ಕೀರ್ತಿ ಡಾ॥ ಅಂಬೇಡ್ಕರರಿಗೆ ಸಲ್ಲುವುದು.

ಅವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ಶಾಸನಸಭೆಯಲ್ಲಿ ೧೯೪೨ರಿಂದ ೧೯೪೬ರ ಅವಧಿಯಲ್ಲಿ ವಿವಿಧ ವಿಷಯಗಳ ಮೇಲೆ ಮಾಡಿದ ಭಾಷಣಗಳು ಅದರಲ್ಲಿಯೂ ಪ್ರಮುಖವಾಗಿ ಭಾರತದ ಕಾರ್ಮಿಕರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಈ ಭಾಷಣಗಳು ವಿದ್ವತ್‌ಪೂರ್ಣವೂ ಬೋಧಪ್ರದವೂ ಮತ್ತು ಸಂವೇದನಾಶೀಲವೂ ಆಗಿರುವುದಲ್ಲದೇ ಈ ದಿನಗಳಲ್ಲಿ ಕಾಣ ಸಿಗದಂತಹ ಸಾಹಿತ್ಯದ ವೈಖರಿಯನ್ನು ಪ್ರತಿಬಿಂಬಿಸುತ್ತವೆ. ಅವು ಅತ್ಯಂತ ಸ್ವೋಪಜ್ಞವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವುಗಳಲ್ಲಿ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಅಗಾಧ ಅರಿವನ್ನು ಹೊಂದಿದ್ದರೆಂಬ ಅಂಶ ಗೊತ್ತಾಗುತ್ತದೆ. ಮುಂಬಯಿ ಪರೇಲ್‌ನಲ್ಲಿ ಕೂಲಿಕಾರರ ಕಠಿಣ ಜೀವನದ ಅರಿವು ಅವರಲ್ಲುಂಟಾಗಿತ್ತು. ಈ ಕಟು ಅನುಭವದ ಹಿನ್ನೆಲೆಯಲ್ಲಿ ಅವರು ಅಧಿಕಾರದ ಅವಕಾಶ ಸಿಕ್ಕಾಗ ಸ್ವತಃ ತಾವೇ ಕಾರ್ಮಿಕ ಇಲಾಖೆಯನ್ನು ಆಯ್ದುಕೊಂಡು ಕಾರ್ಮಿಕರ ಕಲ್ಯಾಣ ಸಾಧಿಸುವ ಪಣ ತೊಟ್ಟರು.

ಅವರು ಅಧಿಕಾರದಲ್ಲಿದ್ದ ದ್ವಿತೀಯ ಮಹಾಯುದ್ದದ ಕಾಲ ದೇಶಕ್ಕೆ ಕಠಿಣ ಕಾಲವಾಗಿತ್ತಾದರೂ ಯುದ್ಧದ ಆವಶ್ಯಕತೆಗಳ ಒತ್ತಡಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಗಮನೀಯ ಪರಿವರ್ತನೆಯಾಯಿತು.  ಔದ್ಯೋಗಿಕ ವಿಸ್ತರಣೆಯ ಅವಕಾಶಗಳೊದಗಿ ಬಂದವು. ಇದರಿಂದ ಉದ್ಯಮಿಗಳು ಮತ್ತು ಉದ್ಯೋಗಪತಿಗಳಿಗೆ ಅಭಿವೃದ್ಧಿಯ ವಿಪುಲ ಅವಕಾಶ ದೊರೆತವಾದರೂ ಕಾರ್ಮಿಕರಿಗೆ ಅದರ ಲಾಭ ದೊರೆಯಲಿಲ್ಲ.  ಇದನ್ನರಿತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಕಲ್ಯಾಣ ಕುರಿತ ಅನೇಕ ಮಸೂದೆಗಳನ್ನು ಮಂಡಿಸಿ ಅವುಗಳನ್ನು ಸಮರ್ಥ ರೀತಿಯಲ್ಲಿ ನಡೆಸಿ ಕಾನೂನುಗಳನ್ನು  ಮಾಡಿದರು.

ಕಾರ್ಮಿಕರ ಬಗ್ಗೆ ಅವರು ತಳೆದಿದ್ದ ನಿಲುವು ಮತ್ತು ಸಿದ್ಧಾಂತಗಳನ್ನು ಅವರು ೧೫ನೆಯ ಸೆಪ್ಟೆಂಬರ್

೧೯೪೩ರಲ್ಲಿ ಕಾರ್ಮಿಕ ಸಮ್ಮೇಳನದ ಬಹಿರಂಗ ಅಧಿವೇಶನದ ಮೊದಲನೆಯ ಗೋಷ್ಠಿಯಲ್ಲಿ ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ಉದ್ಯೋಗಿಗಳು ಮತ್ತು (ಕೆಲಸ ಕೊಡುವ) ಧಣಿಗಳು ಪರಸ್ಪರ ಜವಾಬ್ದಾರಿ, ಗೌರವ ಮತ್ತು ಪ್ರತಿಯೊಬ್ಬರೂ ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡಲು ಸಿದ್ಧವಾಗಬೇಕು. ಈ ರೀತಿಯ ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆಯದೇ ಹೋದರೆ ಔದ್ಯೋಗಿಕ ಕಾರ್ಮಿಕರ ಕಲ್ಯಾಣದ ಸಮಸ್ಯೆ ನಿವಾರಣೆಯಾಗುವುದು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಪುರೋಗಾಮಿ ಕಾರ್ಮಿಕ ಧೋರಣೆಗಳಿಗೆ ಬಹುಮಟ್ಟಿಗೆ ಡಾ॥ ಅಂಬೇಡ್ಕರರು ನಲವತ್ತರ ದಶಕದಲ್ಲಿ ಅನುಷ್ಠಾನಕ್ಕೆ ತಂದಂತಹ ಅನೇಕ ಕಾನೂನು ವಿಧಿಗಳೇ ಕಾರಣ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಅವರು ಔದ್ಯಮಿಕ ಬೆಳವಣಿಗೆಗೆ ಬಹುಮುಖ್ಯವಾದ ಕಾರ್ಮಿಕರ ತಾಂತ್ರಿಕ ತರಬೇತಿ ಮತ್ತು ನೈಪುಣ್ಯಗಳ ವೃದ್ಧಿಯತ್ತ ಹೆಚ್ಚು ಒತ್ತು ನೀಡಿದರು. ಇವುಗಳ ಬೆಳವಣಿಗೆ ಸುಲಭ ಸಾಧ್ಯವಲ್ಲ ಮತ್ತು ಅದರಲ್ಲಿ ವಿಳಂಬವೂ ಸಹಜ. ಶಾಂತಿಯುತ ಬದಲಾವಣೆಯಲ್ಲಿ ಯಾವಾಗಲೂ ವಿಳಂಬವಾಗುತ್ತದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಭಾರತದಂತಹ ಪುರಾತನ ದೇಶದಲ್ಲಿ ಪ್ರಗತಿ ಮಂದಗತಿಯಲ್ಲಿಯೇ ಸಾಗುವುದು. ಆದ್ದರಿಂದ ಡಾ॥ ಅಂಬೇಡ್ಕರರು ನಮ್ಮ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕೆಂದು ಪ್ರತಿಪಾದಿಸಿದರು. ಇದೂ ಅಲ್ಲದೆ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಒಳ್ಳೆಯ ಸರ್ಕಾರ, ಒಳ್ಳೆಯ ಸಮಾಜ ಅವಶ್ಯ ಎಂದೂ ಅವರು ಹೇಳಿದರು.

ಭಾರತದಲ್ಲಿ ಕಾರ್ಮಿಕರು ಬಹುವಾಗಿ ಶೋಷಿತರಾಗಿದ್ದಾರೆ. ಕಾರ್ಮಿಕ ವರ್ಗವನ್ನು ಸಾಮಾಜಿಕ ಭದ್ರತೆಯ ರಕ್ಷಣೆಯಡಿಯಲ್ಲಿ ತರುವುದೇ ಡಾ॥ ಅಂಬೇಡ್ಕರರ ಮೂಲ ಗುರಿಯಾಗಿತ್ತು. ಕಾರ್ಮಿಕರ ಪರಿಹಾರ ಕಾಯ್ದೆ, ಹೆರಿಗೆ ಸೌಕರ್ಯ ಕಾಯ್ದೆ ಮುಂತಾದವು ಅವರು ಕೈಗೊಂಡ ಶಾಶ್ವತ ಮಹತ್ವದ ಕ್ರಮಗಳಾಗಿದ್ದವು.

ಡಾ॥ ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದಾಗ ಕಲ್ಲಿದ್ದಲು ಗಣಿಗಳಲ್ಲಿನ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಲು ಮುಂದಾದರು. ಅವರು ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳಲ್ಲಿ ಸುಮಾರು ೪೦೦ ಅಡಿಗಳಷ್ಟು ಆಳದವರೆಗೆ ಸ್ವತಃ ಇಳಿದು ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಾರ್ಮಿಕರ ಬಗ್ಗೆ ಅವರು ಹೊಂದಿದ್ದ ಈ ಕಾಳಜಿ, ಅದರಲ್ಲಿಯೂ ಕಲ್ಲಿದ್ದಲು ಗಣಿಗಳ ಕೆಲಸಗಾರರ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತಿಫಲವೇ ಕಲ್ಲಿದ್ದಲು ಗಣಿ ಕೆಲಸಗಾರರ ಕಲ್ಯಾಣ ಅಧ್ಯಾದೇಶ, ೧೯೪೪, ಆದ್ದರಿಂದ ಅವರು ಕಾರ್ಮಿಕ ಕಲ್ಯಾಣ ಸಮಸ್ಯೆಯ ವಿವಿಧ ಮುಖಗಳ ಬಗ್ಗೆ ಮಾಡಿದ ಅನೇಕ ಭಾಷಣಗಳು ಬಹಳ ಬೋಧಪ್ರದವಾಗಿದೆ.

ಕಾರ್ಮಿಕರ ಸಮಸ್ಯೆಗಳು ಅಲ್ಲದೆ ಆರ್ಥಿಕ ಪ್ರಗತಿಯ ಇನ್ನೊಂದು ಮುಖವೆನಿಸಿದ ಇತರ ಅಭಿವೃದ್ಧಿಪರ ಯೋಜನೆಗಳಿಗೂ ಅವರ ಕೊಡುಗೆ ಅಪಾರ. ಅವರು ಕಾರ್ಮಿಕ ಸದಸ್ಯರಾಗಿದ್ದಾಗಲೇ ಕೈಗೊಂಡ ದಾಮೋದರ ಕಣಿವೆ ವಿವಿಧೋದ್ದೇಶ ಅಭಿವೃದ್ಧಿಯ ಬೆಳವಣಿಗೆ, ಒರಿಸ್ಸಾದ ನದಿಗಳ ಬಗ್ಗೆ ವಿವಿಧ್ಧೋದ್ದೇಶ ಯೋಜನೆಗಳು, ಅಂತರ್ದೇಶೀಯ ಜಲಸಂಚಾರ ಯೋಜನೆ ಮುಂತಾದವು ಉಲ್ಲೇಖನಾರ್ಹ. ಈ ಸಂಪುಟದಲ್ಲಿ ಈ ವಿಷಯಗಳ ಕುರಿತು ಅವರು ಮಾಡಿದ ಭಾಷಣಗಳೂ, ವಿಧಾನಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೂ ಬಹಳ ಮಹತ್ವದವುಗಳಾಗಿವೆ. ಇವುಗಳಿಂದ ದೇಶದ ಆರ್ಥಿಕ ಪ್ರಗತಿಯ ಸಮಸ್ಯೆಗಳ ಬಗ್ಗೆ ಅವರಿಗೆ ಎಷ್ಟು ಅರಿವಿದ್ದಿತೆಂಬುದು ಗೊತ್ತಾಗುತ್ತದೆ. ನದಿಗಳ ಪ್ರವಾಹ ನಿಯಂತ್ರಣ, ಜಲಸಂಚಾರ, ನೀರಾವರಿ ವ್ಯವಸಾಯ ಮತ್ತು ಮಣ್ಣಿನ ರಕ್ಷಣೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದವುಗಳ ಬಗ್ಗೆ ಅವರ ವಿಚಾರಗಳು ಎಷ್ಟು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದವೆಂಬುದು ಗಮನಾರ್ಹವಾಗಿದೆ.

ಅವರು ಸಚಿವರಾಗಿದ್ದಾಗ ಸರ್ಕಾರದ ಕಾರ್ಯವಿಧಾನವನ್ನು ಸುಧಾರಿಸಲು ಕೂಡ ಗಮನ ನೀಡಿದರು.

ಅವರು ಕಾಗದ ನಿಯಂತ್ರಣ ಆಜ್ಞೆಯನ್ನು ಕುರಿತು ವಿಧಾನ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದಲ್ಲಿ ಯುದ್ಧಕಾಲದಲ್ಲಿ ಬಳಸಲಾಗುತ್ತಿದ್ದ ೧೪೯ ವ್ಯವಹಾರ ನಮೂನೆ (form)ಗಳನ್ನು ಅಮಾನತಿನಲ್ಲಿಟ್ಟು ೧೯೦ ನಮೂನೆಗಳನ್ನು ರದ್ದು ಪಡಿಸಿರುವುದಾಗಿ ತಿಳಿಸಿದರು.  ಅದೇ ರೀತಿ ಕೆಲವು ವ್ಯವಹಾರವನ್ನು ಕಡಿಮೆ ಮಾಡಬಹುದೆಂಬ ಅಂಶವನ್ನು ಭಾರತ ಸರ್ಕಾರದ ಗಮನಕ್ಕೆ ತಂದರು.

ಒಟ್ಟಿನಲ್ಲಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರೆಹಗಳು ಮತ್ತು ಭಾಷಣಗಳ ಮಾಲಿಕೆಯ ಹತ್ತನೆಯ ಸಂಪುಟದಲ್ಲಿ ಪ್ರಕಟಿತವಾಗಿರುವ ಈ ಬರೆಹಗಳು ಮತ್ತು ಭಾಷಣಗಳು ಇಂದಿಗೂ ಸಹ ಪ್ರಸ್ತುತವಾಗಿರುವ ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. ಇವು ಸಾಮಾನ್ಯ ಓದುಗರಿಗೂ, ಆಡಳಿತಗಾರರಿಗೂ, ಸಂಶೋಧಕರಿಗೂ, ಕಾರ್ಮಿಕ ವಕೀಲರಿಗೂ, ಕಾರ್ಮಿಕ ಮುಖಂಡರಿಗೂ, ಅರ್ಥಶಾಸ್ತ್ರಜ್ಞರಿಗೂ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವೂ ಬೋಧಪ್ರದವೂ ಮತ್ತು ಜ್ಞಾನಪ್ರದವೂ ಆಗಿವೆ.

ಕೊನೆಯಲ್ಲಿ ಒಂದು ಮಾತು.  ಮೊದಲಿನಿಂದಲೂ ನಿಮ್ನ ವರ್ಗಗಳ ಹಿತಾಸಕ್ತಿಗಳು ಮತ್ತು ಅಭಿವೃದ್ಧಿಯನ್ನು ಚಿಂತಿಸುತ್ತಿದ್ದು ಮತ್ತು ಅಸ್ಪೃಶ್ಯತೆಯನ್ನು ಆಮೂಲಾಗ್ರವಾಗಿ ನಿರ್ಮೂಲ ಮಾಡಲು ಪಣತೊಟ್ಟಿದ್ದ ಡಾ॥ ಅಂಬೇಡ್ಕರರು ೪೦ರ ದಶಕದ ಆರಂಭದಲ್ಲಿ ಎಂದರೆ ೧೯೪೨ರಲ್ಲಿ, ಅದರಲ್ಲಿಯೂ ಬ್ರಿಟಿಷರ ಅಧಿಕಾರಾವಧಿ ಪರ್ಯವಸಾನ ವಾಗುತ್ತಿರುವುದು ಸ್ಪಷ್ಟ ಗೋಚರವಾಗುತ್ತಿರುವ ಕಾಲದಲ್ಲಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರಿಗೆ ದೇಶ ಬಿಟ್ಟು ತೊಲಗಿ ಎಂದು ಕರೆ ನೀಡಿದ ಸಂದರ್ಭದಲ್ಲಿ ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿ ಏಕೆ ಸೇರಿದರು ಎಂಬ ಜಿಜ್ಞಾಸೆ ಓದುಗರ ಮನಸ್ಸಿನಲ್ಲಿ ಸುಳಿಯುವುದು ಸಹಜ. ಇದಕ್ಕೆ ಉತ್ತರ ಬಹುಶಃ ಡಾ॥ ಅಂಬೇಡ್ಕರರ ವಿಚಾರದಲ್ಲಿಯೇ ಅಡಗಿದೆ ಎಂದೆನಿಸುತ್ತದೆ. ಅವರ ಅಭಿಪ್ರಾಯದಲ್ಲಿ ಸರ್ಕಾರದ ಹೊರಗುಳಿದು ಹೋರಾಡುವುದಕ್ಕಿಂತಲೂ ಒಳಗಿನಿಂದ ಹೋರಾಡುವುದು ಹೆಚ್ಚು ಉಪಯುಕ್ತ ಮತ್ತು ಪ್ರಭಾವಿ ಹೋರಾಟವಾಗಬಲ್ಲದು. ಆದುದರಿಂದಲೇ ಅವರು ಸಮಾಜದ ಅತ್ಯಂತ ಶೋಷಣೆಗೊಳಗಾದ ಕಾರ್ಮಿಕವರ್ಗದ ಹಿತವನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಮಂಡಲದಲ್ಲಿ ಕಾರ್ಮಿಕ ಇಲಾಖೆಯನ್ನೇ ಸ್ವಸಂತೋಷದಿಂದ ಆಯ್ದುಕೊಂಡರು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಡಾ॥ ಅಂಬೇಡ್ಕರರ ಪ್ರಕಾರ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡ ೯೦ರಷ್ಟು ಕಾರ್ಮಿಕರು ನಿಮ್ನ ವರ್ಗಕ್ಕೆ ಸೇರಿದವರು. ಈ ಕಾರಣದಿಂದ ಅವರು ಸರ್ಕಾರ ಸೇರುವ ಈ ನಿರ್ಧಾರಕ್ಕೆ ಬಂದಿದ್ದರೆನ್ನಬಹುದು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಲ್ಲಿಯವರೆಗೂ ಜಾತಿಪ್ರಜ್ಞೆಗೇ ಪ್ರಾಧಾನ್ಯತೆ ಇತ್ತಿದ್ದ ಡಾ॥ ಅಂಬೇಡ್ಕರರು ಕಾರ್ಮಿಕ ಸಮಸ್ಯೆಗಳಿಗೆ ಮಹತ್ವ ನೀಡಿದ್ದು ಅವರಲ್ಲುಂಟಾದ ವರ್ಗಪ್ರಜ್ಞೆಯ ಸಂಕೇತವಾಗಿದೆಯೆ? ಅವರಲ್ಲಿಯ ಈ ವರ್ಗಪ್ರಜ್ಞೆಯ ದ್ಯೋತಕವಾಗಿಯೇ ಅವರು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ಸ್ಥಾಪಿಸಿದರೆನ್ನಬಹುದೇ? ಹೀಗೆ ಅವರು ತಮ್ಮ ಕಾರ್ಯಕ್ಷೇತ್ರದಡಿಯಲ್ಲಿ ತಮ್ಮ ವರ್ಗ ಪ್ರಜ್ಞೆಯು ಜಾತಿಪ್ರಜ್ಞೆಗೆ ವಿಶಾಲ ತಳಹದಿಯೊದಗಿಸಿತೆಂದು ಹೇಳಬಹುದೆ? ಈ ಕುರಿತ ಹೆಚ್ಚಿನ ಚಿಂತನೆ ಅವಶ್ಯ.

ಈ ಸಂಪುಟದ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಒಂದನೆಯ ಭಾಗದಲ್ಲಿ ಡಾ॥ ಅಂಬೇಡ್ಕರರು ಕೇಂದ್ರ ವಿಧಾನ ಸಭೆಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ತತ್ಸಂಬಂಧ ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ಭಾಗವಹಿಸಿ ಮಾಡಿದ ಭಾಷಣಗಳನ್ನು ಪ್ರಕಟಿಸಲಾಗಿದೆ. ಎರಡನೆಯ ಭಾಗದಲ್ಲಿ ಕೇಂದ್ರ ವಿಧಾನ ಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿದ್ದ ಅವರು ಸದಸ್ಯರು ತಮ್ಮ ಇಲಾಖೆಯ ಬಗ್ಗೆ

ಕೇಳಿದ ಅನೇಕ ಪ್ರಶ್ನೆಗಳಿಗೆ ನೀಡಿದ ಉತ್ತರಗಳು ಸೇರಿವೆ. ಓದುಗರು ಈ ಸೂಚನೆಯನ್ನು ಗಮನಿಸಬೇಕಾಗಿ ವಿನಂತಿ.

ಸುಮಾರು ೧೧೦೦ ಪುಟಗಳ ಈ ಬೃಹತ್ ಸಂಪುಟದ ಭಾಷಾಂತರ ಕಾರ್ಯದಲ್ಲಿ ನೆರವಾದ ಎಲ್ಲಾ ಭಾಷಾಂತರಕಾರರಿಗೆ ಸಂಪಾದಕ ಮಂಡಳಿ ಸದಾ ಋಣಿ. ಅದೇ ರೀತಿ ಈ ಕಾರ್ಯದಲ್ಲಿ ಸದಾ ಆಸಕ್ತಿ ವಹಿಸಿ ಇದರ ಪ್ರಕಟಣೆಗೆ ಕಾರಣರಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಅವರ ಸಿಬ್ಬಂದಿ ವರ್ಗದವರೆಲ್ಲರಿಗೂ ನಾವು ಅಭಾರಿಯಾಗಿದ್ದೇವೆ. ಈ ಸಂಪುಟವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಮಯೂರ್ ಪ್ರಿಂಟ್ ಆಡ್ಸ್ ಅವರಿಗೆ ನಮ್ಮ ವಂದನೆಗಳು.

**ಡಾ|| ಎ.ಎಂ. ರಾಜಶೇಖರಯ್ಯ**

ಸಂಪಾದಕ ಸಮಿತಿಯ ಪರವಾಗಿ

## ಪರಿವಿಡಿ


| | | |
|---|---|---|
| ಸಂದೇಶಗಳು | | v |
| ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ | | x |
| ಎರಡನೇ ಮುದ್ರಣಕ್ಕೆ ಮುನ್ನುಡಿ | | xiv |
| ಮೂರನೇ ಮುದ್ರಣಕ್ಕೆ ಮುನ್ನುಡಿ | | xiv |
| ಸಂಪಾದಕೀಯ | | xvi |
| ೧ | ಕೈಗಾರಿಕಾ ಉದ್ಯಮಗಳಲ್ಲಿ ಇತ್ತೀಚೆಗೆ ನಡೆದ ಕಾರ್ಮಿಕ ಮುಷ್ಕರ | ೧ |
| ೨ | ಭಾರತದ ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ವಿಭಾಗದ ಚಟುವಟಿಕೆಗಳ ಕಾರ್ಯಕ್ರಮ | ೫ |
| ೩ | ಭಾರತಕ್ಕೆ ಮರಳಿದ "ಬೆವಿನ್ ಬಾಲಕರು" ಮತ್ತು ಅದರ ಉದ್ಯೋಗ | ೯ |
| ೪ | ಕಾರ್ಮಿಕರ ಕೂಲಿಯಲ್ಲಿ ಇಳಿತ | ೧೧ |
| ೫ | ನಾಗರಿಕ ನೇತೃತ್ವ ಘಟಕಗಳಲ್ಲಿ ಪರಿಶಿಷ್ಟ ಜಾತಿಗೆ ಪ್ರಾತಿನಿಧ್ಯ | ೧೩ |
| ೬ | ಕಾರ್ಮಿಕರ ಕೂಲಿ ಹಾಗೂ ನೇಮಕಾತಿಯ ಬಗೆಗೆ ಸರ್ಕಾರದಿಂದ ಗುತ್ತಿಗೆದಾರರಿಗೆ ವಿಧಿಸಲಾದ ಕರಾರುಗಳು | ೧೪ |
| ೭ | ಇಂಗ್ಲೆಂಡಿನಲ್ಲಿಯ ತರಬೇತಿಗೆ ಆಯ್ಕೆಯಾದ ಬೆವಿನ್ ಬಾಲಕರು | ೧೫ |
| ೮ | ಬೆವಿನ್ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ವರ್ಗದ ಬಾಲಕರ ಆಯ್ಕೆ | ೧೭ |
| ೯ | ಕೇಂದ್ರ ಕಾಮಗಾರಿ ಇಲಾಖೆಯ ಮನ್ನಣೆ ಪಡೆದ ಗುತ್ತೇದಾರರು | ೧೮ |
| ೧೦ | ಫೆಡರಲ್ ರೈಲ್ವೆ ಕಾರ್ಮಿಕರ ಪರವಾಗಿ ಅಥವಾ ಮಜೂರಿ ಕಾಯ್ದೆಯಡಿ ಸಲ್ಲಿಸಲಾಗುವ ಅರ್ಜಿಗಳು* | ೧೯ |
| ೧೧ | ಕೋರ್ಟಿನ ಆದೇಶಗಳ ಶುಲ್ಕ–ದೆಹಲಿ ಪ್ರಾಂತದಲ್ಲಿ ಕಾರ್ಮಿಕರ ವೇತನ ನಿಯಮಗಳು | ೨೦ |
| ೧೨ | ಮುದ್ರಣ ಹಾಗೂ ಲೇಖನಸಾಮಗ್ರಿಗಳ ಕಾರ್ಯಾಲಯದಲ್ಲಿ ಮುಸ್ಲಿಮ್ ಗೆಜೆಟೆಡ್ ಅಧಿಕಾರಿಗಳ ಅಭಾವ | ೨೦ |
| ೧೩ | ಕಲ್ಕತ್ತಾ ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯದಲ್ಲಿ ಮುಸ್ಲಿಮರ ಅಭಾವ, ಇತ್ಯಾದಿ | ೨೨ |
| ೧೪ | ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯದ ಕಾರ್ಯ ವೇಳೆ | ೨೪ |
| ೧೫ | ಕಾರ್ಮಿಕರಿಗೆ ನೀಡಲಾದ ಅಸಮರ್ಪಕ ತುಟ್ಟಿಭತ್ಯೆಯ ಮರು ಮಂಜೂರಾತಿಯ ಪ್ರಕಟನೆ | ೨೫ |
| ೧೬ | ಕಾರ್ಮಿಕರ ಕೂಲಿ ಮಟ್ಟವನ್ನು ಏರಿಸುವ ಅಪೇಕ್ಷೆ | ೨೬ |
| ೧೭ | ಕಾರ್ಖಾನೆಯ ಕಾರ್ಮಿಕರಲ್ಲಿ ಅಸಂತೃಪ್ತಿ | ೨೮ |
| ೧೮ | ಒಬ್ಬ ಕಾರ್ಮಿಕನ ಸಂಸಾರದ ಮುಂಗಡಪತ್ರ | ೨೯ |
| ೧೯ | ಕಾರ್ಮಿಕರಿಗೆ ಅವಶ್ಯವಿದ್ದ ಸಾಮಗ್ರಿಗಳನ್ನು ನೀಡುವಲ್ಲಿ ಕೈಗೆತ್ತಿಕೊಂಡ ಕ್ರಮಗಳು | ೩೧ |

೨೦ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಕ್ರಮಗಳು ೩೧
೨೧ ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯ
ಅಭಿಯಂತರ ಸೇವೆಯ ಜಾತಿವಾರು ರಚನೆ ೩೪
೨೨ ಅಮೆರಿಕಾದ ಜಂಟಿ ಮೈಕಾ ಮಿಷನ್ ಹಾಗೂ ಲೋಹ ಶೇಖರಣೆ
ಕಂಪನಿಗೆ ಮೈಕಾ ರಫ್ತಿನ ಏಕಸ್ವಾಮ್ಯ ೩೫
೨೩ ಭಾರತದ ಕಾರ್ಮಿಕರ ಸಾಮೂಹಿಕ ನಿರುದ್ಯೋಗ ನಿವಾರಣೆಯ ಬಗೆಗೆ ಯೋಜನೆ ೩೭
೨೪ ಅಮೆರಿಕಾದ ಜಂಟಿ ಮೈಕಾ ಮಿಷನ್ ಹಾಗೂ ಲೋಹಶೇಖರಣೆ ಕಂಪನಿಗಳ
ಮೈಕಾ ರಫ್ತಿನ ಬಗೆಗೆ ಹೊಂದಿರುವ ಏಕಸ್ವಾಮ್ಯ ೩೭
೨೫ ಜಂಟಿ ಮೈಕಾ ಮಿಷನ್ ಅವರಿಂದ ವಿವಿಧ ದರ್ಜೆಯ ಅಭ್ರಕದ ಬೆಲೆ ನಿರ್ಣಯ ೩೯
೨೬ ರೈಲ್ವೇ ಸಿಬ್ಬಂದಿಗೆ ನೀಡಿದ ವೇತನದಲ್ಲಿಯ ಅಕ್ರಮಗಳು ೪೧
೨೭ ಗಯಾ ನವಾಡಿಯಾದಲ್ಲಿ ನಿರ್ಮಿಸಲಾಗುವ ವಿಮಾನ ನಿಲ್ದಾಣ
ಕಾರ್ಯಕ್ಕೆ ನೀಡಿರುವ ಅಧಿಕ ಬೆಲೆ ೪೨
೨೮ ನೂತನ ದೆಹಲಿ ದಂಡುಪ್ರದೇಶದಲ್ಲಿ ವಿಮಾನ ಇಳಿಯುವ ಕಾರ್ಯ ನಿರ್ಮಾಣಕ್ಕೆ
ಹೆಚ್ಚಿನ ದರ ನೀಡಿದ್ದರ ಬಗೆಗೆ ೪೪
೨೯ ಭಾರತೀಯ ರೈಲ್ವೆ ಕಾಯ್ದೆಯ VI-A ಪರಿಚ್ಛೇದ ಅನ್ವಯಿಸುವಲ್ಲಿ ಅಕ್ರಮಗಳು ೪೪
೩೦ ರೈಲ್ವೇ ಸಮನ್ವಯಾಧಿಕಾರಿಯ ಕಾರ್ಯಕ್ಷೇತ್ರ ೪೬
೩೧ ವೈರಿಗಳಿಂದ ವಾಯುದಾಳಿಗೆ ಈಡಾದ ಸಂತ್ರಸ್ತರ ಅವಲಂಬಿತರಿಗೆ ಪರಿಹಾರ ೪೭
೩೨ ನಾಲ್ಕನೆಯ ಕಾರ್ಮಿಕರ ಸಮ್ಮೇಳನ ಹಾಗೂ ಸ್ಥಾಯಿ
ಕಾರ್ಮಿಕ ಸಮಿತಿಯ ನಡೆವಳಿಕೆ (ಸಾರಾಂಶ) ೪೮
೩೩ ಶಾಹದರಾ ಹಾಗೂ ದೆಹಲಿ ಘೋಷಿತ ಪ್ರದೇಶಗಳಲ್ಲಿ ಬಾಡಿಗೆ
ನಿಯಂತ್ರಣ ಮಸೂದೆಯನ್ನು ಜಾರಿಗೊಳಿಸುವ ಆವಶ್ಯಕತೆ ೪೮
೩೪ ನವದೆಹಲಿಯ ಮನೆಬಾಡಿಗೆ ನಿಯಂತ್ರಣ ಪ್ರಕರಣಗಳು ೪೯
೩೫ ನವದೆಹಲಿಯ ಮನೆ ಬಾಡಿಗೆ ನಿಯಂತ್ರಣ ಖಟ್ಲೆಗಳು ೫೦
೩೬ ನವದೆಹಲಿಯಲ್ಲಿ ಮನೆ ಬಾಡಿಗೆ ನಿಯಂತ್ರಣ ಖಟ್ಲೆಗಳು ೫೧
೩೭ ದೆಹಲಿ ಪ್ರಾಂತ್ಯಕ್ಕೆ ಸಾರಾಸಗಟಾಗಿ ಪಂಜಾಬು ಬಾಡಿಗೆ ನಿಯಂತ್ರಣ
ಕಾಯಿದೆಯನ್ನು ವಿಸ್ತರಿಸುವ ಆವಶ್ಯಕತೆ ಕುರಿತು ೫೧
೩೮ ಸ್ಥಳೀಯ ಶಾಲೆ ಇತ್ಯಾದಿ ಸಿಬ್ಬಂದಿಗೆ ಕೇಂದ್ರ ಸರ್ಕಾರಿ
ನೌಕರರ ವಸತಿಗೃಹಗಳನ್ನು ಹಂಚಿಕೊಡುವ ಬಗ್ಗೆ ೫೩
೩೯ ದೆಹಲಿಯಲ್ಲಿ ಸರ್ಕಾರ ಖಾಸಗಿ ಮನೆಗಳನ್ನು ಭೋಗ್ಯಕ್ಕೆ ತೆಗೆದುಕೊಂಡ ಬಗ್ಗೆ ೫೪
೪೦ ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳ ಉತ್ತಮಿಕೆ ಬಗ್ಗೆ ೫೮
೪೧ ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳನ್ನು
ಉತ್ತಮಪಡಿಸುವುದರ ಬಗೆಗೆ ೫೯
೪೨ ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿ
ಮನೆಗಳನ್ನು ಉತ್ತಮಗೊಳಿಸುವ ಬಗೆಗೆ ೬೦
೪೩ ನವದೆಹಲಿಯ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳ ಪರಿಶೀಲನೆ ೬೦

೪೪ ನವದೆಹಲಿಯಲ್ಲಿ ಸಾಂಪ್ರದಾಯಿಕ "ಡಿ" ಮಾದರಿ
ವಸತಿ ಮನೆಗಳನ್ನು ಉತ್ತಮಪಡಿಸುವ ಬಗೆಗೆ ೬೧
೪೫ ನವದೆಹಲಿಯ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳ ಪರಿಶೀಲನೆ ೬೨
೪೬ ನವದೆಹಲಿಯ "ಸಿ" ಮಾದರಿ ವಸತಿ ಮನೆಗಳನ್ನು
ಹಂಚಿಕೆದಾರರಿಗೆ ಅವರ ಸ್ವಾಧೀನಕ್ಕೆ ವರ್ಗಾಯಿಸುವ ಬಗೆಗೆ ೬೩
೪೭ ಸಮರ ಕಾಲದ ಗಾಯಗಳ ಮಸೂದೆ (ಪರಿಹಾರ ವಿಮೆ) ೬೪
೪೮ ದೆಹಲಿ ಪಾಲಿಟೆಕ್ನಿಕ್ ತಾಂತ್ರಿಕ ತರಬೇತಿ ಕೇಂದ್ರದಲ್ಲಿ
ತರಬೇತುದಾರರನ್ನು ವಜಾಮಾಡುವ ಬಗೆಗೆ ೬೪
೪೯ ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ
ಬೈಂಡಿಂಗ್ ವಿಭಾಗದ ನೌಕರರ ಸಮಸ್ಯೆಗಳ ಬಗೆಗೆ ೬೫
೫೦ ನವದೆಹಲಿ, ಭಾರತ ಸರ್ಕಾರ ಮುದ್ರಣಾಲಯದ
ಬೈಂಡಿಂಗ್ ವಿಭಾಗದ ನೌಕರರ ಕುಂದುಕೊರತೆಗಳು ೬೬
೫೧ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸಲ್ಮಾನ ಎಂಜಿನಿಯರುಗಳು,
ಸಂಖ್ಯೆ ಕಡಿಮೆಯಾಗಿರುವುದರ ಬಗೆಗೆ ೬೭
೫೨ ಹೊಸ ಸಹಾಯಕ ಎಸ್ಟೇಟ್ ಅಧಿಕಾರಿಗಳು ಹಾಗೂ
ಎಸ್ಟೇಟ್ ಅಧಿಕಾರಿಗಳ ಸಹಾಯಕರು ೬೯
೫೩ ವಿಮಾನ ಸಂಚಾರ ಕೆಲಸಗಳಲ್ಲಿ ಒಪ್ಪಂದಗಳು ೭೦
೫೪ ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್
ವಿಭಾಗದ ಸಿಬ್ಬಂದಿ ವರ್ಗದವರ ಕುಂದುಕೊರತೆಗಳು ೭೧
೫೫ ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ
ಬೈಂಡಿಂಗ್ ವಿಭಾಗದಲ್ಲಿ ಆಯ್ಕೆ ಮಟ್ಟದ ಹುದ್ದೆಗಳು ೭೨
೫೬ ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಯಂತ್ರ
ವಿಭಾಗದ ತುಂಡು ಕಾಮಗಾರಿ ಕೆಲಸಗಾರರ ಕುಂದುಕೊರತೆಗಳು ೭೩
೫೭ ನವದೆಹಲಿಯ ಭಾರತ ಸರ್ಕಾರದ ಮುದ್ರಣಾಲಯದಲ್ಲಿನ
'ವರ್ಕ್ಸ್ ಕಮಿಟಿ'ಯ ವಾರ್ಷಿಕ ಚುನಾವಣೆ ೭೪
೫೮ ಬಂಗಾಳ ಹಾಗೂ ಬಿಹಾರದ ಗಣಿಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆ ಕಡಿಮೆಯಾದ ಬಗೆಗೆ ೭೫
೫೯ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ
ಕಂಟ್ರಾಕ್ಟರುಗಳನ್ನು ನೇಮಕ ಮಾಡುವಲ್ಲಿನ ಕುಂದುಕೊರತೆಗಳು ೭೬
೬೦ ಕೇಂದ್ರೀಯ ಲೋಕೋಪಯೋಗಿ ಇಲಾಖೆ ಕಛೇರಿಗಳಲ್ಲಿ ಹಾಗೂ
ಅಧೀನ ಎಂಜಿನಿಯರಿಂಗ್ ಸೇವೆಗಳಲ್ಲಿ ಮುಸ್ಲಿಮ್ ಕೋಮಿನವರ ಸಂಖ್ಯೆ ೭೬
೬೧ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಎಂಜಿನಿಯರಿಂಗ್
ವಿಭಾಗದ ಸಿಬ್ಬಂದಿಯನ್ನು ಸೇವೆಯಿಂದ ತೆಗೆಯುವ ಬಗೆಗೆ ೭೭
೬೨ ಕಲ್ಕತ್ತೆಯಲ್ಲಿರುವ ಭಾರತರ ಸರ್ಕಾರ ಮುದ್ರಣಾಲಯದಲ್ಲಿ ಮುಸ್ಲಿಮ್ ಲಿನೊ
ಆಪರೇಟರುಗಳು ಹಾಗೂ ಮಾನೊ ಆಪರೇಟರುಗಳು ೭೭
೬೩ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ
ಮುಸಲ್ಮಾನ ಕಾರ್ಯಪಾಲಕ ಅಭಿಯಂತರರು ೭೯

| | | |
|---|---|---|
| ೬೪ | ನವದೆಹಲಿಯಲ್ಲಿನ ತಾತ್ಕಾಲಿಕ ಕಟ್ಟಡಗಳು | ೮೦ |
| ೬೫ | ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಮತ್ತು ಕಾಗದದ ಇಲಾಖೆಯಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ | ೮೧ |
| ೬೬ | ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಹಾಗೂ ಲೇಖನ ಸಾಮಗ್ರಿ ವಿಭಾಗದಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ | ೮೨ |
| ೬೭ | ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಹಾಗೂ ಲೇಖನಸಾಮಗ್ರಿ ವಿಭಾಗದಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ | ೮೩ |
| ೬೮ | ಮುದ್ರಣ ಹಾಗೂ ಲೇಖನ ಸಾಮಗ್ರಿ ಇಲಾಖೆಯಲ್ಲಿ ಮುಸ್ಲಿಮ್ ಹಾಗೂ ಮುಸ್ಲಿಮೇತರ ತರಬೇತುದಾರರ ನಡುವೆ ತಾರತಮ್ಯ | ೮೩ |
| ೬೯ | ನವದೆಹಲಿಯಲ್ಲಿನ ಭಾರತ ಸರ್ಕಾರದ ಮುದ್ರಣಾಲಯದ ಯಂತ್ರಗಳ ದುರಸ್ತಿ | ೮೪ |
| ೭೦ | ಅಲಿಗಢದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಹೆಚ್ಚುವರಿ ಸಿಬ್ಬಂದಿ | ೮೫ |
| ೭೧ | ಅಲಿಗಡದಲ್ಲಿನ ಭಾರತ ಸರ್ಕಾರದ ಮುದ್ರಣಾಲಯದ ಮ್ಯಾನೇಜರ್ ವಿರುದ್ಧ ದೂರು | ೮೭ |
| ೭೨ | ನವದೆಹಲಿಯ ಸಚಿವಾಲಯದ ಉತ್ತರ ಹಾಗೂ ದಕ್ಷಿಣ ಕಟ್ಟಡಗಳಲ್ಲಿ ತಾತ್ಕಾಲಿಕ ಕೊಠಡಿಗಳು, ಇತ್ಯಾದಿಗಳ ಬಗೆಗೆ | ೮೮ |
| ೭೩ | ನವದೆಹಲಿಯ, ಉತ್ತರ ಬ್ಲಾಕ್ ಸಚಿವಾಲಯದ, ಗುಮಾಸ್ತರ ಶೌಚಾಲಯ ಇತ್ಯಾದಿಗಳಲ್ಲಿ ಬೆಳಕಿನ ಕೊರತೆ | ೮೯ |
| ೭೪ | ದೆಹಲಿ ಬಾಡಿಗೆ ನಿಯಂತ್ರಣ ಆದೇಶದಲ್ಲಿ ಕಷ್ಟಗಳು | ೯೧ |
| ೭೫ | ಸಂಭಾವ್ಯ ತೈಲಮೂಲಗಳ ಶೋಧನೆ ಹಾಗೂ ವೈಜ್ಞಾನಿಕ ಅನ್ವೇಷಣೆಗೆ ಪರವಾನಗಿ (ರಹದಾರಿ) | ೯೨ |
| ೭೬ | ನವದೆಹಲಿಯಲ್ಲಿ ಸಾಂಪ್ರದಾಯಿಕ ವಸತಿಗೃಹಗಳ ಎದುರಿಗೆ 'ಹೆಚ್ಚು ಆಹಾರ ಬೆಳೆಯಿರಿ' ಚಳವಳಿಗೆ ಅನುಗುಣವಾಗಿ ಸಾಂಪ್ರದಾಯಿಕ ವಸತಿ ನಿಲಯಗಳ ಕಾಂಪೌಂಡುಗಳ ಮಧ್ಯೆ ಗೋಡೆಹಾಕುವ ಅಗತ್ಯತೆಯ ಬಗೆಗೆ | ೯೩ |
| ೭೭ | ಹೊಸ ಪ್ರದೇಶದಲ್ಲಿರುವ ಸರ್ಕಾರಿ ಸೇವಕರು ನವದೆಹಲಿಯ ಹಳೆಯ ಪ್ರದೇಶದಲ್ಲಿ ವಸತಿಮನೆಗಳಿಗಾಗಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡುವ ಅಗತ್ಯತೆ | ೯೩ |
| ೭೮ | ಕೆಲವು ಖನಿಜಗಳ ವಿಚಾರದಲ್ಲಿ ಭಾರತ ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ವಿಧಾನ ಶಾಖೆಯ ಕಾರ್ಯಭಾರ ಕುರಿತು | ೯೫ |
| ೭೯ | ನವದೆಹಲಿಯಲ್ಲಿರುವ ಸಾಂಪ್ರದಾಯಿಕ ವಸತಿ ಮನೆಗಳಲ್ಲಿ ಶೋಧಿಸದ ನೀರಿಗೆ ನಳವನ್ನು ಜೋಡಿಸುವ ಬಗೆಗೆ | ೯೮ |
| ೮೦ | ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಉದ್ದಿಮೆಯ ನಿಯೋಗದ ವಿಷಯ | ೧೦೦ |
| ೮೧ | ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಗಣಿ ಕೆಲಸಗಾರರಿಗೆ ಅಗ್ಗದ ಬೆಲೆ ಧಾನ್ಯ ಅಂಗಡಿಗಳ ಯೋಜನೆ | ೧೦೧ |
| ೮೨ | ಯುದ್ಧದಲ್ಲಿನ ಗಾಯಗಳಿಗೆ (ಪರಿಹಾರ ವಿಮೆ) ಮಸೂದೆ ಆಯ್ಕೆಸಮಿತಿಯ ವರದಿಯ ಮಂಡನೆ | ೧೦೩ |
| ೮೩ | ಭಾರತೀಯ ಬಾಯ್ಲರುಗಳ (ತಿದ್ದುಪಡಿ) ಮಸೂದೆ | ೧೦೩ |
| ೮೪ | ಮಹಿಳಾ ಗಣಿಕೆಲಸಗಾರರ ತಾಯ್ತನ ಸೌಲಭ್ಯ (ತಿದ್ದುಪಡಿ) ಮಸೂದೆ | ೧೦೪ |

೮೫ ಮೋಟಾರು ವಾಹನಗಳ (ಚಾಲಕರು) ತಿದ್ದುಪಡಿ ಮಸೂದೆ ೧೦೪
೮೬ ಸಿಮ್ಲಾದಲ್ಲಿ ಶಾಸನಸಭೆ ವಾಸ್ತವ್ಯದ ಏರ್ಪಾಟು ಅಸಮರ್ಪಕವಾಗಿದ್ದುದರ ಬಗೆಗೆ ೧೦೫
೮೭ ಸಿಮ್ಲಾ ಕಾರ್ಟ್‌ರಸ್ತೆ ವಸತಿನಿಲಯಗಳ ಬಳಿ ಒಂದು ರಿಕ್ಷಾ
ನಿಲ್ದಾಣವನ್ನು ಮಂಜೂರು ಮಾಡುವ ಬಗ್ಗೆ ೧೦೭
೮೮ ದೆಹಲಿ ಹಾಗೂ ನವದೆಹಲಿಯಲ್ಲಿ ನೀರು ಸರಬರಾಜು ೧೦೭
೮೯ ಕೇಂದ್ರಿಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸಲ್ಮಾನ ಸಹಾಯಕ
ಎಸ್ಟೇಟ್ ಅಧಿಕಾರಿಗಳು ೧೦೮
೯೦ ಗಜಿಯಾಬಾದ್ ಹೊಸ ಕಟ್ಟಡಗಳ ನಿರ್ಮಾಣ ೧೦೯
೯೧ ಕೈಗಾರಿಕಾ ಕಾರ್ಮಿಕರಿಗೆ ಆರೋಗ್ಯ ವಿಮೆಯ ಯೋಜನೆ ೧೧೦
೯೨ ಬಾಬರ್ ರಸ್ತೆ ಪ್ರದೇಶದಲ್ಲಿ ಯುದ್ಧಪೂರ್ವ ಬಾಡಿಗೆಗಿಂತ ಕಡಿಮೆ
ಬಾಡಿಗೆಗಳನ್ನು ನಿಗದಿಪಡಿಸುವ ಬಗೆಗೆ ೧೧೧
೯೩ ಉಕ್ಕು, ಸಿಮೆಂಟು ಹಾಗೂ ಮರದ ಉಪಯೋಗವು ಅಗತ್ಯವಾಗಿರುವಂತಹ
ನಿರ್ಮಾಣ ಕಾರ್ಯವನ್ನು ನಿಷೇಧಿಸುವುದು ೧೧೨
೯೪ ಯುದ್ಧ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನವದೆಹಲಿ ಹಾಗೂ
ಸಿಮ್ಲಾದಲ್ಲಿ ಕಟ್ಟಡಗಳ ನಿರ್ಮಾಣದ ವೆಚ್ಚ ೧೧೪
೯೫ ಮೊದಲಿನ ಸ್ಟಾಂಡರ್ಡ್ ಕಾಲಮಾನದಿಂದಾಗಿ ತೊಂದರೆಗೆ ಒಳಗಾದ ಕಾರ್ಖಾನೆಗಳು ೧೧೫
೯೬ ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಕುಸಿತ ೧೧೭
೯೭ ಬ್ರಿಟಿಷ್ ಭಾರತದಲ್ಲಿ ಬ್ರಿಟಿಷ್ ಅಥವಾ ಅಮೆರಿಕದ ಕಂಪನಿಗಳಿಗೆ
ತೈಲಸಂಪನ್ಮೂಲಗಳಿಗೆ ರಿಯಾಯಿತಿ ೧೧೮
೯೮ ಕಾರ್ಮಿಕ ಸ್ಥಾಯಿ ಸಮಿತಿಯ ಮೂರನೇ ಸಭೆಯ ಕಲಾಪಗಳ ಸಾರಾಂಶ ೧೧೯
೯೯ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚು ಸಂಬಳದ
ಹುದ್ದೆಗಳಲ್ಲಿರುವ ಸಿಖ್ ಧರ್ಮೀಯರು ೧೧೯
೧೦೦ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಮುಖ್ಯ
ಇಂಜಿನಿಯರ್‌ರವರ ಕಛೇರಿಯ ಶಾಖೆಯನ್ನು ಸ್ಥಾಪಿಸುವುದು ೧೨೦
೧೦೧ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ
ಶ್ರೀ ಬಕ್ಷಿ ಮದನ್‌ಸಿಂಗ್ ಎಂಬುವವರ ನೇಮಕಾತಿಯ ವಿರುದ್ಧ ನೀಡಿದ ದೂರು ೧೨೧
೧೦೨ ಭಾರತದಲ್ಲಿರುವ ಖನಿಜಜಲದ ಬಗ್ಗೆಗಳ ವಾಣಿಜ್ಯ ಸಾಧನೆಗಳು ೧೨೨
೧೦೩ ಭಾರತದಲ್ಲಿ ಜಲವಿದ್ಯುತ್ ಉತ್ಪಾದನೆಯ ಸಾಧ್ಯತೆಗಳ ಸರ್ವೇಕ್ಷಣ ೧೨೨
೧೦೪ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನದಲ್ಲಿ
ಕೆಲವು ವಿವರಗಳನ್ನು ಸೇರಿಸುವ ಬಗೆಗೆ ೧೨೪
೧೦೫ ಬಲೂಚಿಸ್ತಾನದಲ್ಲಿ ಪಡೆದ ಗಂಧಕವನ್ನು, ಗಂಧಕಾಮ್ಲ ತಯಾರಿಸುವ ಉದ್ದಿಮೆಗಳಿಗೆ
ಸರಬರಾಜು ಮಾಡಿದ ಬಗೆಗೆ ೧೨೪
೧೦೬ ಉದಯಪುರ ರಾಜ್ಯದ ಜವಾಹರ್‌ನಲ್ಲಿ ಸೀಸದ ಗಣಿ ೧೨೬
೧೦೭ ಬಂಗಾಳ ಜಿಲ್ಲೆಯಲ್ಲಿ ಟಂಗ್‌ಸ್ಟನ್ ನಿಕ್ಷೇಪದ ಶೋಧನೆ ೧೨೭
೧೦೮ ಕಾರ್ಮಿಕ ಕಲ್ಯಾಣ ಸಲಹೆಗಾರರು ಹಾಗೂ ಕಾರ್ಮಿಕ ಸಲಹೆಗಾರರ ಕರ್ತವ್ಯಗಳು ೧೨೭

೧೦೯ ಕೈಗಾರಿಕಾ ವಿವಾದಗಳ ತಕ್ಷಣದ ಕಾರಣಗಳನ್ನು ನಿವಾರಿಸಲು ಕಾರ್ಯಕ್ರಮ ೧೨೮

೧೧೦ ನವದೆಹಲಿಯ ಅಶೋಕ ರಸ್ತೆಯಲ್ಲಿ ಮಸೀದಿಯೊಂದನ್ನು ನೆಲಸಮ ಮಾಡುವ ಬಗೆಗೆ ೧೨೯

೧೧೧ ನವದೆಹಲಿಯ ಅಶೋಕರಸ್ತೆಯಲ್ಲಿ ಮಸೀದಿಯೊಂದು ನೆಲಸಮವಾಗಿರುವ ಬಗೆಗೆ ೧೩೦

೧೧೨ ಭಾರತೀಯ ಕಾರ್ಮಿಕ ಸಂಘಗಳು (ತಿದ್ದುಪಡಿ) ಮಸೂದೆ ೧೩೩

೧೧೩ ಭಾರತೀಯ ಯುದ್ಧ ಗಾಯಗಳ ಪರಿಹಾರ ಯೋಜನೆಯನ್ವಯ ಪುರುಷರು
ಹಾಗೂ ಸ್ತ್ರೀಯರಿಗೆ ನೀಡುವ ಭತ್ಯದ ದರದಲ್ಲಿ ಸಮಾನತೆ ೧೩೩

೧೧೪ ಕಾರ್ಮಿಕರ ಸ್ಥಿತಿ ಸುಧಾರಣೆಗಾಗಿ ಸರ್ಕಾರಿ ಒಪ್ಪಂದಗಳಲ್ಲಿ ಒಳಅಡಕಗಳು ೧೩೪

೧೧೫ ನವದೆಹಲಿಯಲ್ಲಿ ಆಯಾ ವರ್ಗಗಳ ಅರ್ಹತೆ ಪಡೆಯದವರಿಗೆ
ಮನೆ ನೀಡುವ ಬಗ್ಗೆ ನಿಯಮಗಳು ೧೩೫

೧೧೬ ಬಂಗಾಳದ ಕಾರ್ಮಿಕ ಇಲಾಖೆಯ ಉದ್ಯೋಗಿಗಳಿಗೆ ಕಡಿಮೆ ದರದಲ್ಲಿ
ಆಹಾರಧಾನ್ಯಗಳನ್ನು ಸರಬರಾಜು ಮಾಡುವ ಬಗೆಗೆ ೧೩೬

೧೧೭ ವೇತನ ವಿತರಣಾ ಕಾಯಿದೆಯ ಕಾರ್ಯಪಾಲನೆಯಲ್ಲಿ ಇರುವ ಕೆಲವು ಅಕ್ರಮಗಳು ೧೩೭

೧೧೮ ರೈಲ್ವೆಗಳ ಸಂಧಾನಾಧಿಕಾರಿಗಳ ಚಟುವಟಿಕೆಗಳು ೧೩೮

೧೧೯ ಇಂಜಿನಿಯರುಗಳ ಸಂಸ್ಥೆ ೧೩೯

೧೨೦ ನವದೆಹಲಿಯಲ್ಲಿ ಭಾರತೀಯ ಗುಮಾಸ್ತರುಗಳಿಗೆ ಒಂದು
ದೊಡ್ಡ ಹೋಟೆಲ್ಲನ್ನು ನಿರ್ಮಾಣ ಮಾಡುವ ಬಗೆಗೆ ೧೪೦

೧೨೧ ನವದೆಹಲಿಯ ಮಿಂಟೊ ರಸ್ತೆ ಹಾಗೂ ಹ್ಯಾವ್‌ಲಾಕ್ ಸ್ಕ್ವೇರ್‌ರ ವಿಂಟೇಜ್
ಕಛೇರಿಗಳಿಗೆ ನೀಡಿದ ದೂರುಗಳನ್ನು ಪರಿಶೀಲಿಸುವುದರಲ್ಲಿ ಆಗಿರುವ ವಿಳಂಬದ ಬಗೆಗೆ ೧೪೧

೧೨೨ ನವದೆಹಲಿಯ ಬೇರ್ಯ್ಡ್ ಸ್ಕ್ವೇರ್, ಈಸ್ಟ್ ಹಾಗೂ ಇರ್ವಿನ್ ರಸ್ತೆಯ ನಡುವೆ
ಇರುವ ಬಯಲು ಜಾಗದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಸಾಂಪ್ರದಾಯಿಕ
'ಇ' ಮಾದರಿ ವಸತಿ ಮನೆಗಳು ೧೪೨

೧೨೩ ನವದೆಹಲಿಯ ಹ್ಯಾವ್‌ಲಾಕ್ ಮತ್ತು ಬೇರ್ಯ್ಡ್ ಸ್ಕ್ವೇರ್‌ಗಳಲ್ಲಿ
ಕೆಲವು ರಸ್ತೆಗಳನ್ನು ಮುಚ್ಚುವ ಬಗೆಗೆ ೧೪೩

೧೨೪ ನವದೆಹಲಿ ಸಾಂಪ್ರದಾಯಿಕ ಮಾದರಿಯ ವಸತಿಮನೆಗಳಲ್ಲಿ
ಹೆಚ್ಚು ಹೆಚ್ಚು ತರಕಾರಿ ಬೆಳೆಯುವುದರ ಬಗೆಗೆ ೧೪೪

೧೨೫ ಸಂಯುಕ್ತ ಪ್ರಾಂತ್ಯಗಳಲ್ಲಿರುವ 'ಸಿವಿಲ್ ಪಯನಿಯರ್ ಫೋರ್ಸ್'ನಲ್ಲಿ
ನಿಯೋಜಿತವಾಗಿರುವ ಅಧಿಕಾರಿಗಳು ೧೪೫

೧೨೬ 'ಸಿವಿಲ್ ಪಯೊನಿಯರ್ ಫೋರ್ಸ್‌ನಲ್ಲಿ ನಿಯೋಜಿತ ಅಧಿಕಾರಿಗಳು
ಸಲ್ಲಿಸಿರುವ ಸೇವೆಯನ್ನು ಯುದ್ಧಕಾಲದ ಸೇವೆ ಎಂದು ಗಣನೆ ಮಾಡುವ ಬಗೆಗೆ ೧೪೬

೧೨೭ ಸಮರೋತ್ತರ ಸಾಮಾಜಿಕ ಭದ್ರತೆಯ ಕುರಿತು ಬೆವರಿಡ್ಜ್ ವರದಿ ೧೪೭

೧೨೮ ನವದೆಹಲಿಯ ಡಿ.ಐ.ಜಡ್. ಪ್ರದೇಶದಲ್ಲಿ ಗುಮಾಸ್ತರ ಸಾಂಪ್ರದಾಯಿಕ
ಮಾದರಿ ವಸತಿ ಮನೆಗಳ ಮುಂದೆ ಹಸಿರು ಹುಲ್ಲಿನ ಹಾಸನ್ನು ಕಡೆಗಣಿಸಿರುವ ಬಗೆಗೆ ೧೪೮

೧೨೯ ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ ೧೪೯

೧೩೦ ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ ೧೫೦

೧೩೧ ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ ೧೫೧

೧೩೨ ಕಾರ್ಮಿಕರಿಗೆ ಯುದ್ಧ ಬೋನಸ್ಸನ್ನು ನೀಡುವ ಬಗೆಗೆ ಶ್ರೀ ವಿ.ಜಿ. ಬಲ್ವೇಕ್ ಅವರ ಮನವಿ ೧೫೧

೧೩೩ ಧನ್‌ಬಾದ್ ಗಣಿಗಳ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿದ ಬಗೆಗೆ ೧೫೩

೧೩೪ ಕಲ್ಲಿದ್ದಲಿನ ಉತ್ಪಾದನೆಯಲ್ಲಿನ ಇಳಿತ ೧೫೪

೧೩೫ ದೆಹಲಿಯಲ್ಲಿ ಕಲ್ಲಿದ್ದಲು ವ್ಯಾಪಾರದ ಪ್ರತಿನಿಧಿಗಳ ಸಮಾವೇಶ ೧೫೬

೧೩೬ ನವದೆಹಲಿ ಹಾಗೂ ಕಲ್ಕತ್ತೆಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಮ್ಯಾನೇಜರುಗಳನ್ನು ನೇಮಕ ಮಾಡುವುದರ ಬಗೆಗೆ ೧೫೮

೧೩೭ ಸರ್ಕಾರಿ ಪ್ರಕಟಣೆ ಇತ್ಯಾದಿಗಳನ್ನು ಕಾರ್ಮಿಕ ಸಂಘಗಳಿಗೆ ನೀಡುವ ಬಗೆಗೆ ೧೬೦

೧೩೮ ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿ ಕೋಮುವಾರು ಸಂಯೋಜನೆ ೧೬೩

೧೩೯ ರೈಲ್ವೆ ಕಾರ್ಮಿಕ ಇಲಾಖೆಯಲ್ಲಿ ಮುಸ್ಲಿಂ ಇನ್‌ಸ್ಪೆಕ್ಟರ್‌ಗಳು ೧೬೪

೧೪೦ ರೈಲ್ವೆ ಕಾರ್ಮಿಕ ವಿಭಾಗದಲ್ಲಿ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿಗಳು ೧೬೪

೧೪೧ ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ ೧೬೫

೧೪೨ ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ ೧೬೫

೧೪೩ ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ ೧೬೬

೧೪೪ ರೈಲ್ವೆ ಕಾರ್ಮಿಕ ಇಲಾಖೆಯಲ್ಲಿ ದಲಿತ ವರ್ಗದ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ೧೬೭

೧೪೫ ಸಂಧಾನಾಧಿಕಾರಿ (ರೈಲ್ವೆ) ಮತ್ತು ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿರುವ ಬೆಂಗಾಲಿ ಇನ್‌ಸ್ಪೆಕ್ಟರ್‌ಗಳು ೧೬೭

೧೪೬ ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರಾದ ಶ್ರೀ ಡಿ.ಜಿ. ಜಾಧವ್ ಅವರ ಅರ್ಹತೆಗಳು ೧೬೮

೧೪೭ ಸಂಧಾನಾಧಿಕಾರಿಗಳು (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರು ೧೬೯

೧೪೮ ಬ್ರಿಟಿಷ್ ಭಾರತ ಮತ್ತು ರಾಜ್ಯಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆ ಇತ್ಯಾದಿ ೧೬೯

೧೪೯ ಕಲ್ಲಿದ್ದಲಿನ ಪರಿಸ್ಥಿತಿ ೧೭೦

೧೫೦ ಕಲ್ಲಿದ್ದಲು ಗಣಿಗಳ ಸುರಕ್ಷತಾ (ಅಡಕು) (Stowing) ತಿದ್ದುಪಡಿ ಮಸೂದೆ ೧೭೧

೧೫೧ ಕಲ್ಲಿದ್ದಲು ಗಣಿಗಳ ಒಳಭಾಗದ ಕೆಲಸಕ್ಕೆ ಮಹಿಳೆಯರ ನೇಮಕಾತಿಗೆ ಇದ್ದ ನಿಷೇಧ ರದ್ದು ೧೭೨

೧೫೨ ಭಾರತದಲ್ಲಿ ಕಲ್ಲಿದ್ದಲಿನ ಸಂರಕ್ಷಣೆ ೧೭೩

೧೫೩ ಕಲ್ಲಿದ್ದಲು ಪರಿಸ್ಥಿತಿ ೧೭೫

೧೫೪ ರೈಲ್ವೆ ಕಾರ್ಮಿಕರಿಗೆ ಸಂಬಂಧಿಸಿದ ಕೆಲವು ವಾರ್ಷಿಕ ವರದಿಗಳ ಪ್ರಕಟನೆ ೧೮೦

೧೫೫ ಕಲ್ಲಿದ್ದಲು ಗಣಿ ಸುರಕ್ಷತಾ (ಅಡಕುವ) (Stowing) ತಿದ್ದುಪಡಿ ಮಸೂದೆ ೧೮೦

೧೫೬ ಪ್ರಾಂತ್ಯಗಳಲ್ಲಿ ಆಡಳಿತಾಧಿಕಾರಿಗಳಿಗೆ ನಾಗರಿಕ ಪ್ರವರ್ತಕ ತಂಡದಲ್ಲಿ ನಿಯೋಜಿತ ಅಧಿಕಾರಿಗಳಾಗಿ ಪದೋನ್ನತಿ ೧೮೧

೧೫೭ ಮಹಿಳಾ ಸರ್ಕಾರಿ ನೌಕರರಿಗೆ ವಸತಿ ಸೌಲಭ್ಯ ೧೮೫

೧೫೮ ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರ ನೇಮಕಾತಿ ೧೮೬

೧೫೯ ಯುದ್ಧತಂತ್ರಜ್ಞರ ತರಬೇತಿಗಾಗಿ ಕೇಂದ್ರಗಳು ೧೮೯
೧೬೦ ಉಪ ನಿರ್ದೇಶಕರುಗಳು, ಹಿರಿಯ ಪ್ರಾಂತೀಯ ಇನ್‌ಸ್ಪೆಕ್ಟರುಗಳು
ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು ಮತ್ತು ತಾಂತ್ರಿಕ ಇನ್‌ಸ್ಪೆಕ್ಟರುಗಳು ೧೯೦
೧೬೧ ಇಂಗ್ಲೆಂಡಿಗೆ ತರಬೇತಿಗೆ ಕಳುಹಿಸಿದ ಬೆವಿನ್ ಹುಡುಗರು
(Bevin Boys) ೧೯೦
೧೬೨ ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಮಂಡಲಿಗಳ ಅಧ್ಯಕ್ಷರುಗಳು ೧೯೧
೧೬೩ ಕಲ್ಲಿದ್ದಲು ಆಯುಕ್ತರ ಅರ್ಹತೆಗಳು ಮತ್ತು ಕರ್ತವ್ಯಗಳು ೧೯೧
೧೬೪ ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳು ೧೯೨
೧೬೫ ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ೧೯೩
೧೬೬ ಅನುಸೂಚಿತ ಜಾತಿಯವರನ್ನು ಬಲತ್ಕಾರದ ದುಡಿಮೆಗೆ
ಒಳಪಡಿಸುವುದು ಮತ್ತು "ಬೇಗಾರ್" ೧೯೪
೧೬೭ ಸಂಧಾನಾಧಿಕಾರಿ (ರೈಲ್ವೆ) ಮತ್ತು ಕಾಮಗಾರಿಯ
ಮೇಲ್ವಿಚಾರಕರ ಕಾರ್ಯ ಚಟುವಟಿಕೆಗಳ ವಿಸ್ತರಣೆ ೧೯೫
೧೬೮ ಸಂಯುಕ್ತ ಪ್ರಾಂತ್ಯಗಳ ನಾಗರಿಕ ಪ್ರವರ್ತಕ ಪಡೆಯಲ್ಲಿರುವ
ಅನುಸೂಚಿತ ಜಾತಿಯ ನಿಯೋಜಿತ ಅಧಿಕಾರಿಗಳು ೧೯೬
೧೬೯ ನಾಗರಿಕ ಪ್ರವರ್ತಕ ಪಡೆಯ ಕಾರಕೂನರ
ಕೋಮುವಾರು ಸಂಯೋಜನೆ ೧೯೭
೧೭೦ ನವದೆಹಲಿಯ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳಲ್ಲಿರುವ
ತಾರತಮ್ಯ ೧೯೭
೧೭೧ ಅರ್ಹತೆಯಿರುವ ನಕಲು ಮಾಡುವವರಿಗೆ (Copy - Holder) ಮತ್ತು
ಪರಿಷ್ಕರಿಸುವವರಿಗೆ (Revisers) ಹಸ್ತಪ್ರತಿ ಪರಿಶೀಲಕರಾಗಿ (Readers) ಪದೋನ್ನತಿ ೨೦೦
೧೭೨ ಉಪ ಭೂಗರ್ಭಶಾಸ್ತ್ರಜ್ಞರಾಗಿ ಬಿಹಾರಿಗಳು ೨೦೧
೧೭೩ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಅರ್ಹತೆ ಇರುವ ನಕಲು ಮಾಡುವವರಿಗೆ
ಮತ್ತು ಪರಿಷ್ಕರಿಸುವವರಿಗೆ ಹಸ್ತಪ್ರತಿ ಪರಿಶೀಲಕರಾಗಿ ಪದೋನ್ನತಿ ೨೦೧
೧೭೪ ಸಾರ್ವಜನಿಕ ಮಾಹಿತಿ ಕೇಂದ್ರದ ಭಾಷೆಗಳ ವಿಭಾಗವನ್ನು ಲಾಹೋರಿಗೆ
ವರ್ಗಾಯಿಸುವುದು ೨೦೨
೧೭೫ ದೆಹಲಿಯ ಪ್ರಕಟನಾ ವಿಭಾಗದ ಕಾರ್ಯನಿರ್ವಾಹಕರ
ಮಾರಾಟ ಕಛೇರಿಯಲ್ಲಿ ವಿಳಂಬ ೨೦೩
೧೭೬ ಕಾರ್ಮಿಕ ಇಲಾಖೆಯ ಸ್ಥಾಯಿ ಸಮಿತಿಗೆ ಸದಸ್ಯರ ಚುನಾವಣೆ ೨೦೩
೧೭೭ ಕಲ್ಲಿದ್ದಲಿನ ಬೆಲೆ ನಿಯಂತ್ರಣ ಮತ್ತು ಹಂಚಿಕೆ ಇತ್ಯಾದಿ ಯೋಜನೆ ೨೦೪
೧೭೮ ಬೋನಸ್ ನಿಧಿಗಾಗಿ ಕಲ್ಲಿದ್ದಲಿನ ಮೇಲೆ ಉಪಕರ (Cess) ವಿಧಿಸುವಿಕೆ ೨೦೫
೧೭೯ ಭಾರತ ಸರ್ಕಾರದ ಹೊಸದೆಹಲಿಯ ಮುದ್ರಣಾಲಯದ ಮುಸ್ಲಿಂ ನೌಕರರ
ಕಾಲಮೀರಿ ದುಡಿಮೆ ವೇಳೆಯಿಂದ (O.T.) ಶುಕ್ರವಾರ ಪ್ರಾರ್ಥನೆಯ ಬಿಡುವಿಗಾಗಿ ಕಡಿತ ೨೦೬
೧೮೦ ನವ ದೆಹಲಿಯ ಭಾರತ ಸರ್ಕಾರದ ಮುದ್ರಣಾಲಯದಲ್ಲಿ
ಭಾನುವಾರ ಮತ್ತು ಇತರ ರಜಾದಿನಗಳ ಕೆಲಸಕ್ಕೆ ಮಜೂರಿ ೨೦೭

೧೮೧ ಪಂಕ್ತಿ ಎರಕ ಯಂತ್ರ (Lino-machine)ದ ಕೂಲಿಗಳಿಗೆ ಆಸನಗಳನ್ನು ಪೂರೈಸದಿರುವಿಕೆ ೨೦೮

೧೮೨ ಕಾರ್ಮಿಕ ಇಲಾಖೆಗೆ ಕಾರ್ಮಿಕ ಸಲಹೆಗಾರರು ೨೦೮

೧೮೩ ಉತ್ತರ ವಿಭಾಗದ ಕಾರಕೂನರ ಕೆಲವು ವಸತಿಗಳಲ್ಲಿನ ಬಚ್ಚಲು ಮನೆಗಳಲ್ಲಿ ದೀಪದ ಕೊರತೆ ೨೦೯

೧೮೪ ನವದೆಹಲಿಯ ಡಿ.ಐ.ಜಡ್. ಪ್ರದೇಶದ ಕಾರಕೂನರ ಸಾಂಪ್ರದಾಯಿಕ ನಿವಾಸಗಳ ಮುಂದಿನ ಹಸಿರುಹಾಸು (Lawns) ೨೧೧

೧೮೫ ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯದ ರೀಡರ್ಸ್ ಪರೀಕ್ಷೆಗಳನ್ನು ಪಾಸುಮಾಡಿದ ನಕಲು ಮಾಡುವವರು (Copy-holders) ಮತ್ತು ಪರಿಷ್ಕರಿಸುವವರು (Revisers) ೨೧೨

೧೮೬ ದೆಹಲಿಯಲ್ಲಿ ಭೂಮಾಲೀಕರ ಸ್ವೇಚ್ಛಾಚಾರ ೨೧೩

೧೮೭ ಆಹಾರ ಇಲಾಖೆಯಲ್ಲಿ ಅನುಸೂಚಿತ ಜಾತಿಗಳವರ ಪ್ರಾತಿನಿಧ್ಯ ೨೧೪

೧೮೮ ಹಳೆ ದೆಹಲಿಯ ಮತ್ತು ಷಹದಾರಾದಲ್ಲಿರುವ ಬಾಡಿಗೆದಾರರು ಅನುಭವಿಸಿದ ಸಂಕಷ್ಟಗಳು ೨೧೫

೧೮೯ ಪೂರ್ವಭಾರತೀಯ ರೈಲ್ವೆಯಲ್ಲಿ ಮಜೂರಿ ಪಾವತಿ ಅಧಿನಿಯಮದ ವ್ಯಾಪ್ತಿಯಲ್ಲಿ ವರದಿಯಾದ ಅಕ್ರಮಗಳು ೨೧೬

೧೯೦ ಯುದ್ಧತಂತ್ರಜ್ಞರಿಗೆ ತರಬೇತಿ ಕೊಡಲು ತಾಂತ್ರಿಕ ಪ್ರವೀಣರ ನೇಮಕಾತಿ ೨೧೭

೧೯೧ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಮುಷ್ಕರ ೨೧೮

೧೯೨ ಅರ್ಹತೆಯಿರುವ ನಕಲು ಮಾಡುವವರಿಗೆ ಮತ್ತು ಪರಿಷ್ಕರಿಸುವವರಿಗೆ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಹಸ್ತಪ್ರತಿ ಪರಿಶೀಲಕರಾಗಿ ಪದೋನ್ನತಿ ೨೧೯

೧೯೩ ನವದೆಹಲಿಯ ಬಾಡಿಗೆ ನಿಯಂತ್ರಣ ಆದೇಶಕ್ಕೆ ತಿದ್ದುಪಡಿ ೨೨೧

೧೯೪ ಕಲ್ಲಿದ್ದಲು ಗಣಿಗಳ ಆಳದಲ್ಲಿ ದುಡಿಯಲು ಮಹಿಳಾ ಕಾರ್ಮಿಕರ ನೇಮಕ ೨೨೪

೧೯೫ ಕಲ್ಲಿದ್ದಲು ಗಣಿಗಳ ಆಳದಲ್ಲಿ ಹೆಣ್ಣಾಳುಗಳ ನೇಮಕಾತಿ ೨೨೫

೧೯೬ ನವದೆಹಲಿಯ ಡಿ.ಐ.ಜಡ್. ಪ್ರದೇಶದ ಚೌಕಗಳ ದ್ವಾರಗಳನ್ನು ಬಂದ್ ಮಾಡಿರುವಿಕೆ ೨೨೬

೧೯೭ ಕರಾಚಿ ಬಂದರು ಟ್ರಸ್ಟಿನಲ್ಲಿ ಕಾರ್ಮಿಕರ ಅಶಾಂತಿ ೨೨೬

೧೯೮ ನಾಗರಿಕ ಪ್ರವರ್ತಕ ಪಡೆಗಳನ್ನು ಪೂರಕ ಪ್ರವರ್ತಕ ಪಡೆಗಳಾಗಿ ಪರಿವರ್ತಿಸಲು ಯೋಜನೆ ೨೨೭

೧೯೯ ನಾಗರಿಕ ಪ್ರವರ್ತಕ ಪಡೆಗಳಲ್ಲಿರುವ ಮೂಲಪ್ರವರ್ತಕರಿಗೆ ವೇತನ ೨೨೭

೨೦೦ ನಾಗರಿಕ ಪ್ರವರ್ತಕಪಡೆಯಲ್ಲಿರುವ ದರ್ಜಿಗಳಿಗೆ ಭತ್ಯೆ ಪಾವತಿಯಾಗದಿರುವಿಕೆ ೨೨೮

೨೦೧ ರೈಲ್ವೆ ಆಡಳಿತದ ಕಾನೂನುಬಾಹಿರ ಕಡಿತ ಇತ್ಯಾದಿ, ವಿರುದ್ಧ ಮಜೂರಿ ಪಾವತಿ ಅಧಿನಿಯಮವನ್ನು ಆಧರಿಸಿ ಬಂದಿರುವ ಅರ್ಜಿಗಳು ೨೨೯

೨೦೨ ಕಾರ್ಖಾನೆಗಳ ಅಧಿನಿಯಮಕ್ಕೆ ಒಳಪಡುವ ರೈಲ್ವೆ ಕಾರ್ಮಿಕರ ದುಡಿಮೆಯ ಅವಧಿ (ವಿಧಿ) ಉಲ್ಲಂಘನೆಯ ಪ್ರಕರಣಗಳು ೨೨೯

೨೦೩ ಕೇಂದ್ರ ವಿದ್ಯುತ್ ಮಂಡಲಿಯ ಕಾರ್ಯ ಮತ್ತು ಕರ್ತವ್ಯ ಇತ್ಯಾದಿ ೨೩೦

೨೦೪ ದೆಹಲಿಯ ಷಹದಾರಾದ ಬಳಕೆದಾರರು ಪಾವತಿ ಮಾಡಿದ ವಿದ್ಯುತ್ ದರ ೨೩೧

೨೦೫ ದೆಹಲಿಯ ಷಹದಾರಾ ಪಟ್ಟಣದ ಬಳಕೆದಾರರು ಪಾವತಿ ಮಾಡಿದ ವಿದ್ಯುತ್ತಿನ ದರ ೨೩೨

೨೦೬ ಕಾರ್ಖಾನೆಗಳ (ಎರಡನೆಯ ತಿದ್ದುಪಡಿ) ಮಸೂದೆ ೨೩೩

೨೦೭ ನವದೆಹಲಿಯ ಇರ್ವಿನ್ ರಸ್ತೆಯಲ್ಲಿರುವ ನಿವಾಸಗಳ ಮಧ್ಯದ ಕಮಾನುಗಳ ಮುಚ್ಚುವಿಕೆ ೨೩೩

೨೦೮ ಕೇಂದ್ರ ಲೇಖನಸಾಮಗ್ರಿ ಕಛೇರಿಯಲ್ಲಿ ಮುಸ್ಲಿಮ್ ಅಧಿಕಾರಿಗಳ ಅನುಪಸ್ಥಿತಿ ೨೩೪

೨೦೯ ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಕರ ಕಛೇರಿಗೆ
ತಾಂತ್ರಿಕ ಅಧಿಕಾರಿಯ ನಿಯುಕ್ತಿಯ ಅಪೇಕ್ಷಣೀಯತೆ ೨೩೪

೨೧೦ ಭಾರತ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಸಹಾಯಧನ ೨೩೫

೨೧೧ ದೆಹಲಿಯ ನ್ಯಾಯಾಲಯಗಳಲ್ಲಿ ಮನೆಗಳನ್ನು ತೆರವು ಮಾಡಿಸುವ ಪ್ರಕರಣಗಳು ೨೩೭

೨೧೨ ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಯ ಪ್ರಕಟಣೆ ೨೩೮

೨೧೩ ದೆಹಲಿಯ ಷಹದಾರಾ ಪಟ್ಟಣದ ವ್ಯಾಪ್ತಿಯಲ್ಲಿ ರಸ್ತೆಗಳ ಪಾಲನೆ ೨೩೮

೨೧೪ ಪೂರ್ವ ರೈಲ್ವೆ ಮತ್ತು ವಾಯುವ್ಯ ರೈಲ್ವೆಗಳ ಕಾನೂನುಬಾಹಿರ ಕಡಿತ ಇತ್ಯಾದಿಗಳ
ವಿರುದ್ಧ ವೇತನ ಪಾವತಿ ಅಧಿನಿಯಮದ ಅನ್ವಯ ಬಂದಿರುವ ಅರ್ಜಿಗಳು ೨೩೯

೨೧೫ ಭಾರತ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರಿ ಅನುದಾನ ೨೩೯

೨೧೬ ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಕೊಡುಗೆ ೨೪೩

೨೧೭ ನವದೆಹಲಿಯಲ್ಲಿ ಕಟ್ಟಿದ ತಾತ್ಕಾಲಿಕ ಕಟ್ಟಡಗಳನ್ನು ಯುದ್ಧಾನಂತರ ಕೆಡವುವುದು ೨೪೫

೨೧೮ ಭಾರತೀಯ ಕಾರ್ಮಿಕ ಒಕ್ಕೂಟವನ್ನು ಹೊರತುಪಡಿಸಿ ಇತರ ಸಂಘಗಳಿಗೆ ಅನುದಾನ ೨೪೭

೨೧೯ ಷಹದಾರಾ (ದೆಹಲಿ) ಸಹರಣಪುರ ಲಘು ರೈಲ್ವೆ ಮತ್ತು ಅದರ ನೌಕರರ
ನಡುವಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ತೀರ್ಪುಗಾರರನ್ನು ಸರ್ಕಾರ ನೇಮಿಸಿರುವ
ಸಂವಿಧಾನಬಾಹಿರ ಕೃತ್ಯ ಇತ್ಯಾದಿ ೨೪೭

೨೨೦ ದೆಹಲಿಯ ಕಟ್ಟಡಗಳ ಮೇಲಿನ ಖರ್ಚು ೨೪೯

೨೨೧ ತಾತ್ಕಾಲಿಕ ಕಟ್ಟಡಗಳ ಕೆಡವುವಿಕೆ ೨೪೯

೨೨೨ ದೆಹಲಿ ಮತ್ತು ನವದೆಹಲಿಯಲ್ಲಿ ವಸತಿಗಳ ನಿರ್ಮಾಣ ೨೫೦

೨೨೩ ಕೇಂದ್ರೀಯ ತಾಂತ್ರಿಕ ವಿದ್ಯುತ್ ಮಂಡಲಿಯ ರಚನೆ ೨೫೨

೨೨೪ ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಅನುದಾನ ೨೫೩

೨೨೫ ಕೇಂದ್ರ ಲೋಕೋಪಯೋಗಿ ಇಲಾಖೆಯ ಪೂರ್ವವಲಯದಲ್ಲಿ ಮುಸ್ಲಿಮರ ಅನುಪಸ್ಥಿತಿ ೨೫೫

೨೨೬ ಸಾರ್ವಜನಿಕ ವಾರ್ತಾ ಕೇಂದ್ರಕ್ಕೆ ವಾರ್ಷಿಕವಾಗಿ
ಸರಬರಾಜಾದ ಕಾಗದದ ಪ್ರಮಾಣ ೨೫೬

೨೨೭ ನಿರುದ್ಯೋಗಿ ಕಾರ್ಮಿಕರ ಬಗ್ಗೆ ಅಂಕಿಅಂಶಗಳು ೨೫೭

೨೨೮ ಗಣಿಯ ಆಳದಲ್ಲಿನ ಕೆಲಸಗಳಿಗೆ ಮಹಿಳೆಯರ ನೇಮಕಾತಿ ೨೫೮

೨೨೯ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಅಭಾವ ೨೬೨

೨೩೦ ಮೂಲಭೂತವಾದಿ ಪ್ರಜಾಪ್ರಭುತ್ವ ಪಕ್ಷ ಮತ್ತು ಭಾರತೀಯ ಕಾರ್ಮಿಕ
ಒಕ್ಕೂಟಕ್ಕೆ ಪ್ರಾಂತೀಯ ಸರ್ಕಾರಗಳಿಂದ ಅನುದಾನ ೨೬೪

೨೩೧ ಬ್ರಿಟಿಷ್ ಮತ್ತು ಅಮೆರಿಕದ ಸಂಸ್ಥೆಗಳಿಗೆ, ಅಂತಸ್ಥ ತೈಲ ಸಂಪನ್ಮೂಲಗಳನ್ನು
ಅನ್ವೇಷಿಸಲು ಮತ್ತು ಅಭಿವೃದ್ಧಿಪಡಿಸಲು ಪರವಾನಗಿ ೨೬೫

೨೩೨ ಭಾರತೀಯ ವಾಣಿಜ್ಯ ಸಂಘಗಳ (ತಿದ್ದುಪಡಿ) ಮಸೂದೆ ೨೬೫

೨೩೩ ದೆಹಲಿಯ ವಿದ್ಯುತ್ ಪೂರೈಕೆ ಮತ್ತು ಟ್ರಾಕ್ಷನ್ ಸಂಸ್ಥೆ ೨೬೬

೨೩೪ ಕಲ್ಲಿದ್ದಲು ಗಣಿಗಳ ಮಹಿಳಾ ಕಾರ್ಮಿಕರ ಸ್ಥಿತಿಗತಿಯ ಅಧ್ಯಯನಕ್ಕಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಸೌಲಭ್ಯ ಒದಗಿಸಲು ನಿರಾಕರಣೆ ೨೭೦

೨೩೫ ಮಲೇರಿಯಾ ದೆಸೆಯಿಂದಾಗಿ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಕೊರತೆ ೨೭೧

೨೩೬ ಗಣಿಗಳ ಆಳದಲ್ಲಿನ ಕೆಲಸಕ್ಕೆ ಮಕ್ಕಳ ನೇಮಕಾತಿ ವಿದ್ಯಮಾನಗಳು ೨೭೩

೨೩೭ ಗಣಿಗಳ ಆಳದಲ್ಲಿ ಗರ್ಭಿಣಿ ಸ್ತ್ರೀಯರಿಂದ ಕೆಲಸ ೨೭೪

೨೩೮ ಕಲ್ಲಿದ್ದಲು ಗಣಿಗಳ ಆಳದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಬಗೆಗಿನ ನಿಷೇಧದ ಪುನಸ್ಸ್ಥಾಪನೆ ೨೭೫

೨೩೯ ಭಾರತ ಸರ್ಕಾರದ ಮುದ್ರಣಾಲಯಗಳಿಗೆ ಕಾರ್ಮಿಕ ಕಲ್ಯಾಣಾಧಿಕಾರಿ ಹುದ್ದೆ ೨೭೭

೨೪೦ ಖಾಸಗಿ ವೃತ್ತಪತ್ರಿಕಾ ಧಣಿಗಳ ಮತ್ತು ಅವರ ನೌಕರರ ಬಗೆಗಿನ ಅಂಕಿ ಅಂಶಗಳು ೨೭೮

೨೪೧ ಅಲಿಘರದ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಸೇವಾ ವಿಸ್ತರಣೆಗಳು ೨೭೯

೨೪೨ ನವದೆಹಲಿಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಮಳಿಗೆ ಕೆಲಸಗಾರರ ಹಾಗೂ ರಟ್ಟುಕಟ್ಟುವವರ (ಬೈಂಡರ್ಸ್) ಸಂಬಳದ ಕಾಲನಿಗದಿತ ಶ್ರೇಣಿ ೨೮೧

೨೪೩ ಒರಿಸ್ಸಾದ ಮಹಾನದಿ ಯೋಜನೆಗಳ ಅಭಿವೃದ್ಧಿ ೨೮೨

೨೪೪ ಬಿಹಾರದ ಕಲ್ಲಿದ್ದಲು ಗಣಿಗಳ ಕಾರ್ಮಿಕರಿಗೆ ಅಕ್ಕಿ ಸರಬರಾಜಿನ ವ್ಯವಸ್ಥೆಗಳು ೨೮೩

೨೪೫ ದೆಹಲಿಯ ಲೋದಿ ರಸ್ತೆಯಲ್ಲಿನ ಗುಮಾಸ್ತರ ನಿವಾಸ ನಿರ್ಮಾಣದ ಗುತ್ತಿಗೆ ೨೮೪

೨೪೬ ದೆಹಲಿ ಬಾಡಿಗೆ ನಿಯಂತ್ರಣ ಶಾಸನದನ್ವಯ ಬಾಡಿಗೆ ರಶೀದಿಯ ಸಿದ್ಧ ನಮೂನೆಯನ್ನು ವಿಧಿಸುವುದು ೨೮೫

೨೪೭ ಕೆಲವು ನಗರಗಳಲ್ಲಿ ಜೀವನ ವೆಚ್ಚದ ಹೆಚ್ಚಳ ೨೮೫

೨೪೮ ರೈಲ್ವೆ ಉದ್ಯೋಗ ವಿವಾದಗಳ ತೀರ್ಮಾನಕ್ಕೆ ವಿನಂತಿಗಳು ೨೮೬

೨೪೯ ಉದ್ಯೋಗ ವಿವಾದಗಳ ತೀರ್ಪುಗಾರನ ನೇಮಕಾತಿಯ ವಿಧಾನ ೨೮೭

೨೫೦ ಭಾರತೀಯ ಕಾರ್ಮಿಕ ಸಂಯುಕ್ತ ಸಂಘದ ಪ್ರಚಾರ ಫಲಿತಾಂಶಗಳು ೨೮೮

೨೫೧ ಭಾರತೀಯ ಅಭ್ರಕ ಕೈಗಾರಿಕೆಗೆ ತನಿಖಾ ಸಮಿತಿ ನೇಮಕ ೨೮೮

೨೫೨ ಐದನೆಯ ಕಾರ್ಮಿಕ ಸಮ್ಮೇಳನದ ನಡೆವಳಿಗಳ ಸಾರಾಂಶ ಮತ್ತು ಕಾರ್ಮಿಕ ಸ್ಥಾಯಿ ಸಮಿತಿಯ ನಾಲ್ಕನೆಯ ಸಭೆ ೨೮೯

೨೫೩ ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಕೊಡುಗೆ ೨೮೯

೨೫೪ ಗಣಿಗಳ ನೆಲದಡಿಯಲ್ಲಿ ಕೆಲಸ ಮಾಡುವ ಮಹಿಳೆಯರ ಮೇಲೆ ನಿಷೇಧದ ಮರು ಹೇರಿಕೆ ೨೯೨

೨೫೫ ಕಲ್ಲಿದ್ದಲು ಗಣಿಗಳಲ್ಲಿ ದುರಂತಗಳು ೨೯೩

೨೫೬ ದಕ್ಷಿಣ ಭಾರತದಲ್ಲಿ ಖನಿಜ ನಿಕ್ಷೇಪಗಳು ೨೯೪

೨೫೭ ದಾಮೋದರ್ ಕಾಲುವೆ ಮತ್ತು ಪೋಲಾವರಂ ಯೋಜನೆಗಳು ೨೯೬

೨೫೮ ಬಿಹಾರ ಕಲ್ಲಿದ್ದಲು ಗಣಿಗಳಲ್ಲಿ ಅಕ್ಕಿಗೆ ದುಬಾರಿ ಬೆಲೆ ೨೯೭
೨೫೯ ದೆಹಲಿಯ ವಿದ್ಯುತ್ ವಸ್ತುಗಳ ದಾಸ್ತಾನು ಮತ್ತು ಕರ್ಷಕ ಕಂಪನಿಯ ಖರೀದಿ ೨೯೮
೨೬೦ ಇತ್ತೀಚೆಗೆ ವಾಸದ ಮನೆಗಳ ಹಂಚಿಕೆಯಲ್ಲಿ ಕಾರ್ಮಿಕ ಇಲಾಖೆ ಅನುಸರಿಸುತ್ತಿರುವ ಜನಾಂಗೀಯ ಮತ್ತು ಧಾರ್ಮಿಕ ಭೇದಗಣನೆ ೨೯೯
೨೬೧ ಪಶ್ಚಿಮ ಅಂಗಣದ ಕೊಠಡಿಗಳಲ್ಲಿ ಕೇಂದ್ರ ಶಾಸನಸಭಾ ಸದಸ್ಯರಿಗೆ ವಸತಿ ಸೌಕರ್ಯ ನೀಡಲು ತೋರಿರುವ ಅಲಕ್ಷ್ಯ ೩೦೦
೨೬೨ ಮುಕ್ತೇಶ್ವರದ ಬಳಿ ಸಾಮ್ರಾಜ್ಯ ಸಂಶೋಧನಾ ಸಂಸ್ಥೆಗೆ ರಸ್ತೆ ನಿರ್ಮಾಣ ೩೦೧
೨೬೩ ಭಾರತೀಯ ಚಿಲುಮೆ ನೀರಿನ ವಾಣಿಜ್ಯ ದೃಷ್ಟಿಯ ಪರಿಶೀಲನೆ ೩೦೧
೨೬೪ ಬಂಗಾಳದ ಕಲ್ಲಿದ್ದಲು ಸಾಗಣೆಗೆ ದಾಮೋದರ್ ನದಿ ಸಾರಿಗೆ ೩೦೨
೨೬೫ ರಾವಲ್‌ಪಿಂಡಿಯ ಬಳಿ ಖನಿಜತೈಲದ (ಪೆಟ್ರೋಲಿಯಂ) ಶೋಧನೆ ೩೦೨
೨೬೬ ದೆಹಲಿ ಪ್ರಾಂತ್ಯದ ಬಟ್ಟೆಗಿರಣಿ ಮತ್ತು ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು ೩೦೩
೨೬೭ ದೆಹಲಿಯ ವಿದ್ಯುತ್ ವಸ್ತುಗಳ ಸರಬರಾಜು ಮತ್ತು ಕರ್ಷಕ ಕಂಪನಿ ೩೦೩
೨೬೮ ಭಾರತೀಯ ಕಾರ್ಮಿಕ ಸಂಯುಕ್ತ ಸಂಘಕ್ಕೆ ಸರ್ಕಾರದ ಕೊಡುಗೆ ೩೦೪
೨೬೯ ಕಾರ್ಮಿಕ ವಿನಿಮಯ ಕಛೇರಿಗಳು ೩೦೬
೨೭೦ ಗಣಿಗಳ ಮಹಿಳಾ ಕಾರ್ಮಿಕರ ಮಕ್ಕಳ ಕ್ಷೇಮಕ್ಕಾಗಿ ಏರ್ಪಾಡು ೩೦೭
೨೭೧ ಗಣಿ ಪ್ರದೇಶಗಳಲ್ಲಿ "ಮಾತೃತ್ವ ಸೌಲಭ್ಯ ಶಾಸನ" ಅನುಷ್ಠಾನಕ್ಕೆ ಕ್ರಮ ೩೦೯
೨೭೨ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ಭೇದ ರದ್ದು ೩೧೧
೧೭೩ ಗಣಿಗಳಲ್ಲಿ ಮಹಿಳಾ ಕಾರ್ಮಿಕರ ಸಾವು ೩೧೨
೨೭೪ ಗಣಿಗಳ ನೆಲತಳದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ೩೧೪
೨೭೫ ಕಲ್ಲಿದ್ದಲು ಗಣಿಗಳಲ್ಲಿನ ಉದ್ಯೋಗಕ್ಕಾಗಿ ಗೋರಖ್‌ಪುರ ಕಾರ್ಮಿಕರ ನೇಮಕಾತಿಗೆ ಯೋಜನೆ ೩೧೫
೨೭೬ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳ ಚರ್ಚೆಗಳ (೧೯೪೪ರ ಶರತ್ಕಾಲದ ಅಧಿವೇಶನ) ವಿಳಂಬ ಪ್ರಕಟಣೆಯಲ್ಲಿ ವಿಳಂಬ ೩೧೮
೨೭೭ ಕಲ್ಕತ್ತದ ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಗಳು ೩೧೯
೨೭೮ ತ್ರಿಪಕ್ಷೀಯ (ಕಾರ್ಮಿಕ) ಸಮ್ಮೇಳನಗಳಿಗೆ ಉದ್ಯೋಗಿಗಳ ನಿಯೋಗ ರಚನೆ ೩೨೦
೨೭೯ ಜಲವಿದ್ಯುತ್ ಯೋಜನೆಗಳು ೩೨೧
೨೮೦ ಜಲವಿದ್ಯುತ್ ಯೋಜನೆಗಳು ೩೨೧
೨೮೧ ವಿದ್ಯುತ್ ಆಯುಕ್ತರ ವರದಿ ೩೨೩
೨೮೨ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಉದ್ಯೋಗಿಗಳು ೩೨೩
೨೮೪ ಕಲ್ಲಿದ್ದಲು ಗಣಿಗಳ ಮೇಲೆ ಉತ್ಪನ್ನದ ತೆರಿಗೆ ೩೨೬
೨೮೫ ಕಲ್ಲಿದ್ದಲು ಗಣಿಯ ಕಾರ್ಮಿಕರ ಶಿಬಿರಗಳಲ್ಲಿ ವೈದ್ಯಕೀಯ ನೆರವು ೩೨೭
೨೮೭ ಕಲ್ಲಿದ್ದಲು ಗಣಿಗಳ ಕಾರ್ಮಿಕ ಶಿಬಿರಗಳಲ್ಲಿ ದೈಹಿಕ ದಂಡನೆ ೩೨೯

೨೮೮ ಅಭ್ರಕ ಆಯೋಗ ೩೩೦
೨೮೯ ಸಾಂಪ್ರದಾಯಕ ಮತ್ತು ಅಸಾಂಪ್ರದಾಯಕ ನಿವಾಸಗಳ ವ್ಯತ್ಯಾಸ ರದ್ದು ೩೩೨
೨೯೦ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ವ್ಯತ್ಯಾಸ ರದ್ದು ೩೩೨
೨೯೧ ಅಹಮದಾಬಾದಿನ ವಾಣಿಜ್ಯ ವಿವಾದಗಳ ಪಂಚಾಯಿತಿ ವ್ಯವಸ್ಥೆಯ ವಿಫಲ ೩೩೩
೨೯೨ ಕಾರ್ಮಿಕ ಇಲಾಖೆಯಲ್ಲಿ ಕೆಲವು ಸಿಬ್ಬಂದಿಯ ಕೋಮುವಾರು ರಚನೆ ೩೩೪
೨೯೩ ದೆಹಲಿಯ ಗೃಹಸ್ವತ್ತಿನ ವ್ಯವಹಾರಗಳಲ್ಲಿ ಲಾಭ ಸಂಪಾದನೆ ೩೩೪
೨೯೪ ಬ್ರಿಟನ್ನಿನಲ್ಲಿ ಕಾರ್ಮಿಕಾಧಿಕಾರಿಗಳ ತರಬೇತಿ ೩೩೫
೨೯೫ ಗಣಿಗಳ ಮಾತೃತ್ವ ಸೌಲಭ್ಯ (ತಿದ್ದುಪಡಿ) ಮಸೂದೆ ೩೩೬
೨೯೬ ಕಾರ್ಖಾನೆಗಳ (ದ್ವಿತೀಯ ತಿದ್ದುಪಡಿ) ಮಸೂದೆ ೩೩೭
೨೯೭ ಸಾಮಾನ್ಯ ಅಂದಾಜು ಮುಂಗಡಪತ್ರ ಬೇಡಿಕೆಗಳ – ಪಟ್ಟಿ – ಮುಂದುವರಿಕೆ ೩೩೭
೨೯೮ ನೋಂದಾವಣೆಗೊಂಡ ಕಾರ್ಮಿಕ ಸಂಘಗಳು ೩೩೮
೨೯೯ ಯುದ್ಧೋಪಕರಣ ಕಾರ್ಖಾನೆಗಳ ಕೆಲಸಗಾರರ ಕೆಲಸದ ವೇಳೆ, ಸಂಬಳ ಇತ್ಯಾದಿ ೩೩೯
೩೦೦ ಕಾರ್ಮಿಕರಿಗೆ ಕನಿಷ್ಠ ಜೀವನೋಪಾಯ ವೇತನನಿಗದಿ ೩೪೧
೩೦೧ ಗಣಿಗಳಲ್ಲಿ ಮಹಿಳಾ ಕಾರ್ಮಿಕರು ೩೪೨
೩೦೨ ಕಾರ್ಮಿಕಕಲ್ಯಾಣದ ಬಗೆಗೆ ಭಾರತೀಯರಿಗೆ ಬ್ರಿಟನ್ನಿನಲ್ಲಿ ತರಬೇತಿ ೩೪೫
೩೦೩ ದೆಹಲಿ ಪ್ರಾಂತ್ಯದ ಕಾರ್ಖಾನೆ ಪರಿಶೀಲಕರು ಮತ್ತು ಕಾರ್ಮಿಕ ಕಲ್ಯಾಣಾಧಿಕಾರಿಗಳು ೩೪೫
೩೦೪ ದೆಹಲಿ ಕಾರ್ಖಾನೆಗಳಲ್ಲಿ ಕಾರ್ಮಿಕರ ನೇಮಕಾತಿಗಾಗಿ ಗುತ್ತಿಗೆ ವ್ಯವಸ್ಥೆ ೩೪೬
೩೦೫ ದೆಹಲಿ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸರಾಸರಿ ಕೂಲಿ ೩೪೮
೩೦೬ ಒಬ್ಬ ಸರ್ಕಾರಿ ನೌಕರನು ಶಿಕ್ಷೆಗೆ ಗುರಿಯಾದ ನಂತರ
ಅವನನ್ನು ಪುನಃ ನೇಮಕಮಾಡಿಕೊಳ್ಳುವ ಬಗ್ಗೆ ೩೫೧
೩೦೭ ಕಾರ್ಮಿಕರ ಸ್ಥಿತಿಗಳನ್ನು ಸುಧಾರಿಸುವ ಯುದ್ಧೇತರ ಯೋಜನೆಗಳು ೩೫೨
೩೦೮ ಗಣಿ ಕಾರ್ಮಿಕರ ವಸತಿಸೌಕರ್ಯ ೩೫೩
೩೦೯ ಭೂಮಿಯ ಅಡಿಯ ಗಣಿಗಳಲ್ಲಿ ಮಹಿಳೆಯರು ಕೆಲಸ
ಮಾಡುವುದನ್ನು ಪುನಃ ನಿಷೇಧಿಸುವ ಬಗ್ಗೆ ೩೫೪
೩೧೦ ಭಾರತದ ಖನಿಜ ಸಂಪತ್ತು ಡಾ॥ ಕೃಷ್ಣನ್‌ರ ಸಲಹೆಗಳು ೩೫೬
೩೧೧ ಗಣಿ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಏರ್ಪಾಟುಗಳು ೩೫೮
೩೧೨ ಅಸ್ಸಾಮ್ ಯೋಜನೆಗಾಗಿ ಕಳಿಸಿದ ಚಹಾತೋಟದ ಕಾರ್ಮಿಕರು ೩೭೦
೩೧೩ ಅಸ್ಸಾಮ್ ಯೋಜನೆಯಿಂದ ಹಿಂದಿರುಗಿದ ಕಾರ್ಮಿಕರ ಅನಾರೋಗ್ಯ ೩೬೨
೩೧೪ ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕಾರ್ಮಿಕರ ಸಂಕಷ್ಟಗಳು ೩೬೩
೩೧೫ ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕಾರ್ಮಿಕರು
ಕೆಲಸ ಮಾಡುವ ಅವಧಿ ೩೬೪
೩೧೬ ಕಲ್ಕತ್ತೆಯ ಭಾರತೀಯ ಮುದ್ರಣಾಲಯದ ಕೆಲಸಗಾರರ ವೇತನ
ಶ್ರೇಣಿಯನ್ನು ಪರಿಷ್ಕರಿಸುವುದು ೩೬೪

೩೧೭ ಕಲ್ಕತ್ತೆಯ ಭಾರತೀಯ ಸರ್ಕಾರದ ಮುದ್ರಣಾಲಯದ
ತುಂಡು ಕೆಲಸಗಾರ ರಜೆಯ ಸೌಲಭ್ಯ ೩೬೫

೩೧೮ ಕಲ್ಕತ್ತಾದಲ್ಲಿರುವ ಭಾರತಯ ಸರ್ಕಾರದ ಕೆಳಮಟ್ಟದ ಕೆಲಸಗಾರರಿಗೆ ಕೆಲವು
ನಿರ್ದಿಷ್ಟ ಸೌಲಭ್ಯಗಳನ್ನು ಕೊಡುವ ಬಗ್ಗೆ ೩೬೬

೩೧೯ ವಿದೇಶಗಳಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಯೋಜನೆಗಳು ೩೬೭

೩೨೦ ಗೂಡೂರ ವಿಭಾಗದಲ್ಲಿಯ ಅಭ್ರಕದ ಗಣಿಗಳ ಕೆಲಸಗಾರರು ೩೬೮

೩೨೧ ಗೂಡೂರು ವಿಭಾಗದ ಅಭ್ರಕವನ್ನು ಒಡೆಯುವ ಕಾರ್ಖಾನೆಗಳಿಗೆ
ಕಾರ್ಖಾನೆ ಅಧಿನಿಯಮವನ್ನು ಅನ್ವಯಿಸುವುದು, ಇತ್ಯಾದಿ ೩೬೯

೩೨೨ ಕೇಂದ್ರ ಸರ್ಕಾರದ ಮುದ್ರಣಾಲಯದಲ್ಲಿ ಅರ್ಹತೆಯುಳ್ಳ
ನಕಲು ಮಾಡುವವರ ಮತ್ತು ಪರಿಷ್ಕರಿಸುವವರನ್ನು ಕಿರಿಯ ಹಸ್ತಪ್ರತಿ
ವಾಚಕರೆಂದು ನೇಮಿಸುವ ಬಗ್ಗೆ ನಿಯಮ ೩೭೦

೩೨೩ ಸಿ.ಪಿ.ಡಬ್ಲು.ಡಿ.ಯ ಕೆಲವು ಕೇಂದ್ರ ಶಾಖೆಗಳಲ್ಲಿ ಅಕ್ರಮ ನೇಮಕಗಳು ೩೭೧

೩೨೪ ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆಯ ಸವಲತ್ತುಗಳನ್ನು ಒದಗಿಸುವುದು ೩೭೨

೩೨೫ ತಾಂತ್ರಿಕ ಕೈಗಾರಿಕೆಗಳಲ್ಲಿರುವವರನ್ನು ವಿದೇಶಗಳಲ್ಲಿ
ತರಬೇತಿಗಾಗಿ ಕಳುಹಿಸುವ ಯೋಜನೆ ೩೭೩

೩೨೬ ಮೃದು ಕಲ್ಲಿದ್ದಲು ಕಿಟ್ಟದ ಮೇಲಿನ ಹಡಗು ಸುಂಕದ ಉಪಕರ ೩೭೩

೩೨೭ ವಿವಿಧ ಖಾತೆಗಳು ೩೭೪

೩೨೮ ಧನಬಾದ್ ಉಪವಿಭಾಗದಲ್ಲಿ ಅಕ್ಕಿ ನಿಯಂತ್ರಿತ ಬೆಲೆಗಳ ಪ್ರಮಾಣ ೩೭೫

೩೨೯ ಬಲೂಚಿಸ್ತಾನದಲ್ಲಿ ನೀರಾವರಿಯ ಕ್ಷೇತ್ರ ೩೭೭

೩೩೦ ರೇಲ್ವೆ ಕಲ್ಲಿದ್ದಲು ಗಣಿಗಳ ಸಮೀಪದಲ್ಲಿರುವ ಮದ್ಯದಂಗಡಿಗಳು ೩೭೭

೩೩೧ ರೇಲ್ವೆ ಕಲ್ಲಿದ್ದಲು ಗಣಿ ಕಾರ್ಮಿಕರ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಗಳು ೩೭೯

೩೩೨ ಅತ್ಯಾವಶ್ಯಕ ಸೇವೆಗಳ ಅಧ್ಯಾದೇಶವನ್ನು ಸರ್ಕಾರದ ನೌಕರರಿಗೆ ಅನ್ವಯಿಸುವುದು ೩೮೦

೩೩೩ ದೆಹಲಿ ಕರೋಲ್ ಭಾಗ್‌ದಲ್ಲಿ ಮಸೀದಿಯ ಸುತ್ತಲೂ ಗೋಡೆಯನ್ನು ಕಟ್ಟುವುದು ೩೮೧

೩೩೪ ಸಾರ್ವಜನಿಕ ಉಪಯೋಗಿ ಸಂಸ್ಥೆಗಳು ಭಾರತೀಯರಲ್ಲದವರ ಹಿತಾಸಕ್ತಿಗಳಿಗೆ ೩೮೩

೩೩೪ ಸಾರ್ವಜನಿಕ ಉಪಯೋಗಿ ಸಂಸ್ಥೆಗಳು ಭಾರತೀಯರಲ್ಲದವರ ಹಿತಾಸಕ್ತಿಗಳಿಗೆ ೩೮೩

೩೩೫ ಭಾರತ ಸರ್ಕಾರದ ಮುದ್ರಣಾಲಯಗಳ ಲೆಕ್ಕ ಪತ್ರಗಳ ಪರಿಶೋಧನೆ ೩೮೪

೩೩೬ ಕೇಂದ್ರ ಸರ್ಕಾರದ ನೌಕರರಿಗೆ ಮನೆಗಳನ್ನು ಒದಗಿಸಿಲ್ಲ ೩೮೫

೩೩೭ ನವದೆಹಲಿಯಲ್ಲಿ ಒಂದು ಕಚೇರಿಯಿಂದ ಇನ್ನೊಂದಕ್ಕೆ ವರ್ಗವಾಗಿ ವಸತಿ
ಸೌಕರ್ಯದಿಂದ ವಂಚಿತರಾದ ಕೇಂದ್ರ ಸರ್ಕಾರದ ನೌಕರರ ಸಂಕಷ್ಟಗಳು ೩೮೬

೩೩೮ ದೆಹಲಿ ಮತ್ತು ನವದೆಹಲಿಗಳಲ್ಲಿ ಸರ್ಕಾರದ ಮನೆಗಳಲ್ಲಿ ವಾಸಿಸುವವರಿಗೆ
ಖಸ್‌ಖಸ್ ಹುಲ್ಲು ಚಾಪೆಗಳನ್ನು ಪೂರೈಸಲು ಅರ್ಜಿಗಳು ೩೮೭

೩೩೯ ಕಾರ್ಮಿಕ ಇಲಾಖೆಯಿಂದ ತೆರೆಯಲಾದ ತಾಂತ್ರಿಕ ಕೇಂದ್ರಗಳು ೩೮೭

೩೪೦ ಯುದ್ಧ ತಂತ್ರಜ್ಞರ ತರಬೇತಿಕೇಂದ್ರ ಅಥವಾ ಸ್ವಾಗತ ಕೇಂದ್ರ ತೆಗೆಯುವುದು ೩೮೯

| | | |
|---|---|---|
| ೩೪೧ | ಉತ್ತರ ಪ್ರದೇಶದ ತಾಂತ್ರಿಕ ಕೇಂದ್ರಗಳನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿಗೊಳಿಸುವುದು | ೩೯೦ |
| ೩೪೨ | ಔದ್ಯಮಿಕ ಸ್ಥಾವರಗಳಲ್ಲಿ ಉಪಾಹಾರ ಗೃಹಗಳನ್ನು ಹಾಗೂ ಕೆಫೆಟೇರಿಯಾಗಳನ್ನು ಪ್ರಾರಂಭಿಸುವುದು | ೩೯೧ |
| ೩೪೩ | ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಕೆಲಸಗಾರರಿಗೆ ತುಟ್ಟಿಭತ್ಯೆ ಮತ್ತು ವೇತನ ಶ್ರೇಣಿಗಳನ್ನು ಹೆಚ್ಚಿಸುವುದು | ೩೯೨ |
| ೩೪೪ | ಅಭ್ರಕದ ಗಣಿಗಳಲ್ಲಿ ಭಾರತೀಯರ ಹಿತಾಸಕ್ತಿಯನ್ನು ಕಾಪಾಡುವುದು | ೩೯೩ |
| ೩೪೫ | ದೆಹಲಿ ತಿಮರ್‌ಪುರ್ ಮನೆಗಳ ದುಃಸ್ಥಿತಿ | ೩೯೪ |
| ೩೪೬ | ನವದೆಹಲಿಯಲ್ಲಿ ಖಾಯಂ ಆಗಿ ನೆಲೆಸಿರುವ ಸಿಮ್ಲಾ ಸಿಬ್ಬಂದಿಗೆ ಪುನಃ ವಸತಿ ಕಲ್ಪಿಸಲು ಇರುವ ತೊಂದರೆ | ೩೯೬ |
| ೩೪೭ | ಭಾರತೀಯ ಕಾರ್ಮಿಕ ಫೆಡರೇಶನ್ನಿಗೆ ಸರ್ಕಾರದ ಕೊಡುಗೆ | ೩೯೬ |
| ೩೪೮ | ಅಭ್ರಕ ವಿಚಾರಣೆ ಸಮಿತಿ ನೇಮಿಸಲು ಅಧಿಕಾರ | ೩೯೮ |
| ೩೪೯ | ಬಿಟಿಷ–ಅಮೇರಿಕ ಅಭ್ರಕ (ಕಾಗೆ ಬಂಗಾರ) ನಿಯೋಗ | ೩೯೯ |
| ೩೫೦ | ಹಿಂದುಳಿದ ವರ್ಗಗಳ ಹಿಂದೂ ಅಭ್ಯರ್ಥಿಗಳನ್ನು ಕಾರ್ಮಿಕ ಅಧಿಕಾರಿಗಳು ಮುಂತಾಗಿ ನೇಮಕಾತಿ ಮಾಡಿದ್ದು | ೪೦೦ |
| ೩೫೧ | ಹಿಂದುಳಿದ ಹಿಂದೂ ವರ್ಗಗಳಿಂದ ಬಂದ ಅಭ್ಯರ್ಥಿಗಳಿಗೆ ಬೆವಿನ್ ಮತ್ತು ಉಳಿದ ತಾಂತ್ರಿಕ ಯೋಜನೆಗಳಲ್ಲಿ ಅನುಕೂಲತೆಗಳು | ೪೦೦ |
| ೩೫೨ | ಪ್ರಾಂತೀಯ ರಾಷ್ಟ್ರೀಯ ಕಾರ್ಮಿಕರ ಸೇವೆಯ ಪ್ರಾಂತೀಯ ನ್ಯಾಯಾಧೀಕರಣದಲ್ಲಿ ಹಿಂದುಳಿದ ಹಿಂದೂ ವರ್ಗಗಳ ಪ್ರತಿನಿಧಿ | ೪೦೧ |
| ೩೫೩ | ೫ನೆಯ ಕಾರ್ಮಿಕರ ಸ್ಥಾಯಿ ಸಮಿತಿಯ ನಡವಳಿಗಳ ಸಾರಾಂಶ | ೪೦೧ |
| ೩೫೪ | ೬ನೆಯ ಕಾರ್ಮಿಕರ ಸಮ್ಮೇಳನದ ನಡವಳಿಗಳ ಸಾರಾಂಶ | ೪೦೨ |
| ೩೫೫ | ಆರನೆಯ ಕಾರ್ಮಿಕರ ಸ್ಥಾಯಿ ಸಮಿತಿಯ ನಡವಳಿಗಳ ಸಾರಾಂಶ | ೪೦೨ |
| ೩೫೬ | ಭಾರತೀಯ ಗಣಿಗಳ (ತಿದ್ದುಪಡಿ) ಮಸೂದೆ | ೪೦೨ |
| ೩೫೭ | ಸರ್ಕಾರಿ ನೌಕರರಿಗೆ ಸಾಕಷ್ಟು ವಸತಿಸೌಕರ್ಯ | ೪೦೩ |
| ೩೫೮ | ದೆಹಲಿಯಲ್ಲಿ ಹೆಚ್ಚುವರಿ ಸರ್ಕಾರಿ ಕಟ್ಟಡಗಳು | ೪೦೪ |
| ೩೫೯ | ಮಿ. ಹಾರ್ಕ್‌ನೆಸ್‌ರವರನ್ನು ದೆಹಲಿ ಮತ್ತು ನವದೆಹಲಿಯ ನಗರ ಯೋಜನಾ ಅಧಿಕಾರಿಯೆಂದು ನೇಮಿಸುವುದು | ೪೦೬ |
| ೩೬೦ | ವಿಧಾನಸಭೆ ಸದಸ್ಯರಿಗೆ ಕೈಯಿಂದ ಮಾಡಿದ ಕಾಗದ | ೪೦೭ |
| ೩೬೧ | ಶಾಸನಸಭಾ ಸದಸ್ಯರಿಗೆ ಬಾವಿ ಮತ್ತು ಹೆಚ್ಚಿನ ವಸತಿ ಸೌಕರ್ಯ | ೪೦೭ |
| ೩೬೨ | ಭಾರತ ಸರ್ಕಾರದ ಭೂಗರ್ಭ ಸರ್ವೇಕ್ಷಣ ಇಲಾಖೆಯನ್ನು ಪುನರ್ ಸಂಯೋಜಿಸುವುದು | ೪೦೮ |
| ೩೬೩ | ಭಾರತ ಸರ್ಕಾರ ಭೂಗರ್ಭ ಸಮೀಕ್ಷೆಯ ಬಳಕೆಯ ಶಾಖೆಯನ್ನು ರದ್ದುಪಡಿಸುವುದು | ೪೦೮ |
| ೩೬೪ | ಭಾರತೀಯ ಬೆವಿನ್ ಹುಡುಗರು | ೪೦೯ |
| ೩೬೫ | ದಾಮೋದರ ಯೋಜನೆಯನ್ನು ಮುಂದುವರಿಸುವುದಕ್ಕಾಗಿ ಹಳ್ಳಿಗಳನ್ನು ಖಾಲಿ ಮಾಡಿಸುವ ಉದ್ದೇಶ | ೪೧೧ |

೩೬೬ ವಿದ್ಯುಚ್ಛಕ್ತಿ (ಸರಬರಾಜು) ಮಸೂದೆ ೪೧೨
೩೬೭ ಭಾರತ ಸರ್ಕಾರವು ತಾತ್ಪೂರ್ತಿಕ ಕಟ್ಟಡಗಳನ್ನು ಕೊಳ್ಳುವ ಬಗ್ಗೆ ೪೧೨
೩೬೮ ದೆಹಲಿ ಮತ್ತು ನವದೆಹಲಿಯಲ್ಲಿ ವಸತಿಗಳ ಕೊರತೆ ೪೧೫
೩೬೯ ಬ್ರಿಟಿಷರ ಮತ್ತು ಭಾರತೀಯರಲ್ಲದವರ ಸಾರ್ವಜನಿಕ ಉಪಯುಕ್ತತೆ ಸಂಸ್ಥೆಗಳು ೪೧೫
೩೭೦ ತಂತ್ರಜ್ಞರಿಗೆ ಪರದೇಶದಲ್ಲಿ ತರಬೇತಿ ಕೊಡುವ ಯೋಜನೆಯನ್ನು
ಕಾರ್ಯಗತಗೊಳಿಸುವುದು ೪೧೬
೩೭೧ ಗೋರಖಪುರದ ಕಲ್ಲಿದ್ದಲು ಗಣಿಗಳ ಕಾರ್ಮಿಕರ ನೇಮಕಾತಿಯ ಖರ್ಚುಗಳ
ಲೆಕ್ಕಪತ್ರ ಕೊಡುವ ಕುರಿತು ೪೧೭
೩೭೨ ಗೋರಖಪುರ ಕಲ್ಲಿದ್ದಲು ಗಣಿಗಳಲ್ಲಿನ ಕಾರ್ಮಿಕರ ಮೇಲೆ ಖರ್ಚು ೪೧೮
೩೭೩ ಸಿ.ಪಿ.ಡಬ್ಲು.ಡಿ. ಅಧಿಕಾರಿಗಳ ಸೇವಾ ವಿಸ್ತರಣೆ ೪೨೧
೩೭೪ ಅಂತರರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ಅಂಗರಚನೆಯ ತಿದ್ದುಪಡಿಗಾಗಿ ದಸ್ತಾವೇಜು ೪೨೨
೩೭೫ ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ ೪೨೩
೩೭೬ ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರು ಕೆಲಸ ಮಾಡುವುದನ್ನು ನಿಲ್ಲಿಸುವುದು ೪೨೩
೩೭೭ ಭಾರತೀಯ ಕಾರ್ಮಿಕರ ಸಮ್ಮೇಳನದ ಶಿಫಾರಸುಗಳು ೪೨೪
೩೭೮ ದೊಡ್ಡ ನಗರಗಳಲ್ಲಿ ಸರ್ಕಾರವು ಮನೆಗಳನ್ನು ಕಟ್ಟುವ ಕಾರ್ಯಕ್ರಮ ೪೨೪
೩೭೯ ಯುದ್ಧಕಾಲದ ತಾತ್ಪೂರ್ತಿಕ ಕಟ್ಟಡಗಳನ್ನು ವಾಸಕ್ಕಾಗಿ
ಉಪಯೋಗಿಸುವ ಸರ್ಕಾರದ ಕಾರ್ಯನೀತಿ ೪೨೬
೩೮೦ ಭಾರತದಲ್ಲಿ ಕಾರ್ಖಾನೆಯ ಕೆಲಸಗಾರರ ಕೆಲಸದ ವೇಳೆ ೪೨೭
೩೮೧ ನವದೆಹಲಿಯಲ್ಲಿಯ ತಾತ್ಪೂರ್ತಿಕ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವುದು ೪೨೯
೩೮೨ ಅಭ್ರಕ ವ್ಯಾಪಾರದ ಬಗ್ಗೆ ಸರ್ಕಾರದ ಕಾರ್ಯನೀತಿ ೪೩೦
೩೮೩ ಅಭ್ರಕ ನಿಯಂತ್ರಣ ಆದೇಶದಿಂದ ನಿರುದ್ಯೋಗ ೪೩೧
೩೮೪ ಮುಖ್ಯ ಕಾರ್ಯಾಲಯದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರರು ೪೩೧
೩೮೫ ಕಾರ್ಮಿಕ ವಿಭಾಗ ಸಚಿವಾಲಯದಲ್ಲಿ ಗೆಜ್ಞೆಟೆಡ್ ಮುಸಲ್ಮಾನ ಅಧಿಕಾರಿಗಳು ೪೩೩
೩೮೬ ಕೇಂದ್ರ ಪಿ.ಡಬ್ಲ್ಯೂ.ಡಿ.ಯಲ್ಲಿ ಮುಸಲ್ಮಾನ ಆಡಳಿತಾತ್ಮಕ ಅಧಿಕಾರಿಗಳು ೪೩೩
೩೮೭ ಭಾರತದಲ್ಲಿ ಕಾರ್ಮಿಕ ಸಂಘಗಳು ೪೩೪
೩೮೮ ಭಾರದಲ್ಲಿ ಕೈಗಾರಿಕಾ ಉದ್ಯಮಗಳಲ್ಲಿ ಇರುವ ಕೆಲಸಗಾರರು ೪೩೫
೩೮೯ ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿ ಮುಸಲ್ಮಾನ ಆಡಳಿತಾತ್ಮಕ ಅಧಿಕಾರಿ ೪೩೬
೩೯೦ ಕಾರ್ಮಿಕ ವಿಭಾಗದಲ್ಲಿ ಕೋಮು ಪ್ರಾತಿನಿಧ್ಯ ೪೩೮
೩೯೧ ದೆಹಲಿ ಸಾಮಗ್ರಿ ಮಳಿಗೆಯ (ಸ್ಟೋರ್ಸ್) ಉಪ ವಿಭಾಗದಲ್ಲಿ ಸಾರ್ವಜನಿಕ ಹಣದ
ದುರುಪಯೋಗದ ಪ್ರಕರಣ ೪೪೧
೩೯೨ ಸೂಪರಿಂಟೆಂಡಿಂಗ್ ಇಂಜಿನಿಯರರ ನೇಮಕರ ಬಗೆಗೆ ಮುಸಲ್ಮಾನರ ಅಸಮಾಧಾನ ೪೪೨
೩೯೩ ಬಿಹಾರದಲ್ಲಿ ಕೋಸಿ ನದಿಯ ಪ್ರವಾಹ ಕುಗ್ಗಿಸಲು ಹಣ ಮಂಜೂರು ೪೪೩
೩೯೪ ಸರ್ಕಾರಿ ಮುದ್ರಣಾಲಯ, ನವದೆಹಲಿ ಇದರ ಜ್ಯೂನಿಯರ್
ನಕಲು ಮಾಡುವವರಿಗೆ ನಷ್ಟ ೪೪೪

೩೯೫ ಎಸ್ಟೇಟ್ ಕಛೇರಿಯಲ್ಲಿ ಮುಸಲ್ಮಾನ್ ಪತ್ರಾಂಕಿತ ಅಧಿಕಾರಿಗಳು ೪೪೫

೩೯೬ ಕಡ್ಡಾಯದ ದುಡಿಮೆಗಾಗಿ ಕಾರ್ಮಿಕರ ನಿಯೋಜನೆಯನ್ನು ನಿಲ್ಲಿಸುವುದು ೪೪೬

೩೯೭ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಮುಸ್ಲಿಮರ ಪ್ರತಿನಿಯೋಜನೆ ೪೪೭

೩೯೮ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತಾಧಿಕಾರಿಯ ಹುದ್ದೆಗೆ ನೇಮಕಾತಿಗಳ ೪೪೮

೩೯೯ ಜೋಧಪುರ ರೈಲ್ವೆಗೆ ಮಜೂರಿ ಅಧಿನಿಯಮವನ್ನು ಅನ್ವಯಿಸುವ ವಿಚಾರ ೪೪೯

೪೦೦ ನವದೆಹಲಿಯಲ್ಲಿರುವ ಅಮೇರಿಕದ ಸೇನಾ ಚ್ಯಾಪೆಲ್‌ನ ವಿಲೇವಾರಿ ೪೫೧

೪೦೧ ಸರ್ಕಾರಿ ಇಲಾಖೆಗಳಿಂದ ನೌಕರ ವರ್ಗದ ಬಿಡುಗಡೆ ೪೫೧

೪೦೨ ವೈಸ್‌ರೀಗಲ್ ಎಸ್ಟೇಟ್ ಡಿವಿಜನ್ನಿನಲ್ಲಿನ ಸಿಬ್ಬಂದಿ ವರ್ಗದ ಸೇವಾ ಷರತ್ತುಗಳು ೪೫೩

೪೦೩ ಜೋಧಪುರ್ ರೈಲ್ವೆಗೆ ಕೆಲಸದ ಸಮಯದ ನಿಬಂಧನೆಗಳನ್ನು ಅನ್ವಯಿಸುವ ವಿಚಾರ ೪೫೫

೪೦೪ ರೈಲ್ವೆ ಗುತ್ತಿಗೆದಾರರ ಕಾರ್ಮಿಕರ ಮೇಲ್ವಿಚಾರಣೆಗೆ ಸಂಬಂಧಿಸಿದ ಶಾಸನಬದ್ಧ ನಿಯಮಗಳು ೪೫೬

೪೦೫ ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ವಿಚಾರಣಾ ಸಮಿತಿಯ ವರದಿಯ ಮಂಡನೆ ೪೫೭

೪೦೬ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ನಿಯೋಜಿತರಾದ ಮತ್ತು ನವದೆಹಲಿಯ ಕಟ್ಟಡ ಕಂಟ್ರಾಕ್ಟರ್‌ಗಳಿಂದ ನೇಮಕಗೊಂಡಿರುವ ಕಾರ್ಮಿಕರ ವಸತಿ ಪರಿಸ್ಥಿತಿಗಳು ೪೫೭

೪೦೭ "ಅಭ್ರಕ"ವನ್ನು ಕೇಂದ್ರೀಯ ವಿಷಯವನ್ನಾಗಿ ಮಾಡುವುದು ೪೫೮

೪೦೮ ಅಲಿಗಡ್‌ನಲ್ಲಿರುವ ಸರ್ಕಾರಿ ಮುದ್ರಣಾಲಯದ ನೌಕರರ ಕುಂದುಕೊರತೆಗಳು ೪೫೯

೪೦೯ ಭಾರತ ಸರ್ಕಾರ ಮುದ್ರಣಾಲಯಗಳಲ್ಲಿ ಕೆಲವು ಜ್ಯೂನಿಯರ್ ರೀಡರ್‌ಗಳ ಪದೋನ್ನತಿಗಳು ೪೬೦

೪೧೦ ನವದೆಹಲಿಯಲ್ಲಿರುವ ಸರ್ಕಾರಿ ಮುದ್ರಣಾಲಯದಲ್ಲಿ ಮುಸ್ಲಿಮ್ ಸೆಕ್ಷನ್ ಹೋಲ್ಡರ್‌ಗಳು ಮತ್ತು ಓವರ್‌ಸೀಯರ್‌ಗಳು ೪೬೧

೪೧೧ ಅಫಿಷಿಯೇಟಿಂಗ್ ಸೂಪರಿಂಟೆಂಡೆಂಟ್ ಇಂಜಿನಿಯರ್‌ರಾಗಿ ರಾಯ್‌ಸಾಹೆಬ್ ಸಿ.ಪಿ. ಮಲ್ಲಿಕ್ ಅವರ ಪದೋನ್ನತಿ ೪೬೨

೪೧೨ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತ ವಿಭಾಗದ ಕೆಲವು ಹುದ್ದೆಗಳನ್ನು ತುಂಬಲು ಮುಸ್ಲಿಮರನ್ನು ಹುಡುಕುವ ಪ್ರಯತ್ನಗಳು ೪೬೩

೪೧೩ ನಿರುದ್ಯೋಗಿ ಮಹಿಳೆಯರನ್ನು ಕಲ್ಲಿದ್ದಲು ಗಣಿಗಳಲ್ಲಿ ನಿಯೋಜಿಸುವುದು ೪೬೪

೪೧೪ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಅಣೆಕಟ್ಟು ವಿಚಾರ ೪೬೬

೪೧೫ ಉದ್ಯೋಗ ಮತ್ತು ಪುನರ್ವಸತಿ ನಿರ್ದೇಶನಾಯಕ್ಕೆ ವೆಚ್ಚದ ಹಂಚಿಕೆ ೪೬೭

೪೧೬ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಿಂದ ಮುಸ್ಲಿಮರು ಮತ್ತು ಮುಸ್ಲಿಮೇತರರಿಗೆ ಗುತ್ತಿಗೆ ಕಾಮಗಾರಿಗಳು ೪೬೮

೪೧೭ ಭಾರತ ಸರ್ಕಾರದಿಂದ ನವದೆಹಲಿಯಲ್ಲಿರುವ ಈಸ್ಟರ್ನ್ ಮತ್ತು ವೆಸ್ಟರ್ನ್ ಹೌಸ್‌ಗಳ ಮಾರಾಟ ೪೬೯

೪೧೮ ಸರ್ಕಾರಿ ಮುದ್ರಣಾಲಯ, ಅಲಿಗಢ್‌ನಲ್ಲಿ ಮುಷ್ಕರದ ಬೆದರಿಕೆ ೪೭೦

೪೧೯ ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರಿಗೆ ಭೂಮಿಯ ಮೇಲ್ಭಾಗದಲ್ಲಿ ಕೆಲಸ ೪೭೨

೪೨೦ ಕೇಂದ್ರ ಲೋಕೋಪಯೋಗಿ ಇಲಾಖೆಯ ಕಛೇರಿಗಳಲ್ಲಿ ಗುತ್ತಿಗೆದಾರರಿಗೆ ನಿಷೇಧ ೪೭೪

೪೨೧ ಕುಟುಂಬ ಆಯವ್ಯಯ ಅಂದಾಜುಪಟ್ಟಿಯ ವಿಚಾರಣೆಗಳ ವರದಿ ೪೭೫

೪೨೨ ಮಹತ್ವವಿಲ್ಲದ ಚಿಲ್ಲರೆ ದರಸೂಚ್ಯಂಕದ ಸಂಖ್ಯೆಗಳ ಸಂಕಲನ ೪೭೮

೪೨೩ ಈ ಹಿಂದೆ ಗಣಿಗಳ ಆಳತಳದಲ್ಲಿ ಕೆಲಸ ಮಾಡುತ್ತಿದ್ದ
ಮಹಿಳೆಯರಿಗೆ ಪರ್ಯಾಯ ಉದ್ಯೋಗ ೪೮೩

೪೨೪ ದೆಹಲಿಯಲ್ಲಿ ಬಾಡಿಗೆ ನಿಯಂತ್ರಣ ಆಜ್ಞೆಗಳಲ್ಲಿ ತಿದ್ದುಪಡಿ ೪೮೪

೪೨೫ ದಿಲ್ಲಿಯಲ್ಲಿ ನಿಯಂತ್ರಣ ಆಜ್ಞೆಯ ರದ್ದು ೪೮೬

೪೨೬ ದೆಹಲಿಯ ಕರೋಲ್‌ಭಾಗ್‌ನಲ್ಲಿ ತೆಗೆದುಕೊಂಡ ಮನೆಗಳು ೪೮೭

೪೨೭ ದೆಹಲಿಯ ಕರೋಲ್‌ಬಾಗ್‌ನಲ್ಲಿ ಕಡ್ಡಾಯವಾಗಿ ಗುತ್ತಿಗೆಗೆ ಪಡೆದುಕೊಂಡ
ತೆಗೆದುಕೊಳ್ಳಲಾದ ಮನೆಗಳು ೪೯೧

೪೨೮ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ ೪೯೨

೪೨೯ ಯುನೈಟೆಡ್ ಸ್ಟೇಟ್ಸ್ ಆರ್ಮಿ ಚಾಪೆಲ್, ನವದೆಹಲಿ ೪೯೩

೪೩೦ ಭಾರತದಲ್ಲಿ ಥೋರಿಯಂ ಮತ್ತು ಯುರೇನಿಯಂ ನಿಕ್ಷೇಪಗಳು ೪೯೪

೪೩೧ ಟೈಪ್‌ರೈಟರುಗಳ ಆಮದು ೪೯೪

೪೩೨ ನವದೆಹಲಿಯ ಕೇಂದ್ರೀಯ ಲೋಕೋಪಯೋಗಿ ತೋಟಗಾರಿಕೆಯ
ವಿಭಾಗದವರು ನೀಡಿದ ಕರಾರು ಕಾಮಗಾರಿಗಳು ೪೯೬

೪೩೩ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸ್ಲಿಮ್ ತೋಟಗಾರಿಕೆ ಸಹಾಯಕರು ೪೯೭

೪೩೪ ತೋಟಗಾರಿಕೆ ವಿಭಾಗದಲ್ಲಿನ ಚೌಧರಿಗಳ ಮತ್ತು ಸಹಾಯ
ಚೌಧರಿಗಳ ವೇತನ ಶ್ರೇಣಿಗಳು ಹಾಗೂ ಬಡ್ತಿ ದರಗಳು ೪೯೭

೪೩೫ ಕೇಂದ್ರಿಯ ಲೋಕೋಪಯೋಗಿ ಇಲಾಖೆಯ
ತೋಟಗಾರಿಕೆ ವಿಭಾಗದ ಅಧೀಕ್ಷಕರು ಮಾಡಿದ ನೇಮಕಾತಿಗಳು ೪೯೮

೪೩೬ ಕಾರ್ಮಿಕ ಇಲಾಖೆಯಲ್ಲಿ ಮುಸ್ಲಿಮ್ ಅಧಿಕಾರಿಗಳು ೪೯೯

೪೩೭ ಸರ್ಕಾರಿ ವಾಸಗೃಹಗಳ ಹಂಚಿಕೆ ಪಡೆಯುವ ಉದ್ದೇಶಕ್ಕಾಗಿ
ಕೆಲವು ಅಧಿಕಾರಿಗಳ ಸೀನಿಯಾರಿಟಿ ೫೦೦

೪೩೮ ನವದೆಹಲಿಯಲ್ಲಿ ಮನೆಗಳನ್ನು ಕಟ್ಟಲು ಸರ್ದಾರ್ ಶೋಭಾಸಿಂಗ್
ಅವರಿಗೆ ಸಾಮಗ್ರಿಗಳ ಸರಬರಾಜು ೫೦೨

೪೩೯ ಹಜಾರಿಬಾಗ್‌ನಲ್ಲಿ ಮೈಕಾ ಗಣಿಗಳ ಕಾರ್ಮಿಕರಿಗೆ ಅಗತ್ಯ ವಸ್ತುಗಳ
ಮತ್ತು ಇತರ ಸೌಲಭ್ಯಗಳ ಪೂರೈಕೆ ೫೦೩

೪೪೦ ಹಜಾರಿಬಾಗ್‌ನಲ್ಲಿರುವ ಅಭ್ರಕದ ಗಣಿಗಳ ಕಾರ್ಮಿಕರ ಕುಂದುಕೊರತೆಗಳು ೫೦೪

೪೪೧ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ನಿಯೋಜಕರಿಗೆ ಸಂಬಂಧಿಸಿದ
ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೊಡುವುದರ ಮೇಲೆ ನಿಷೇಧ ೫೦೫

೪೪೨ ಸರ್ಕಾರಿ ವಾಸಗೃಹಗಳ ಹಂಚಿಕೆ ನಿಯಮಗಳ ಪರಿಷ್ಕರಣ ೫೦೬

೪೪೩ ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳಿಗೆ ಕೆಳವರ್ಗದ ಮನೆಗಳನ್ನು ಹಂಚಿಕೆ
ಮಾಡಿದ ಕಾರಣ ಆದಾಯ ನಷ್ಟ ೫೦೭

| | | |
|---|---|---|
| ೪೪೪ | ನವದೆಹಲಿಯಲ್ಲಿ ಡಿ.ಐ.ಝಡ್.ನಲ್ಲಿ ಮತ್ತು ಮಿಂಟೋ ರಸ್ತೆಯಲ್ಲಿ ಇರುವ ಮನೆಗಳಲ್ಲಿ ಫಿಲ್ಟರ್ ಮಾಡದಿರುವ ನೀರಿನ ಸರಬರಾಜು* | ೫೦೮ |
| ೪೪೫ | ಸಬ್ ಡಿವಿಜನ್‌ನಲ್ ಆಫೀಸರ್‌ಗಳಾಗಿ ಮತ್ತು ಓವರ್ ಸೀಯರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವರು ಅರ್ಹ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾಗಿ ಪದೋನ್ನತಿ ನೀಡದಿರುವ ವಿಚಾರ | ೫೦೯ |
| ೪೪೬ | ಸಬ್ ಡಿವಿಜನಲ್ ಆಫೀಸರ್‌ಗಳಾಗಿ ಮತ್ತು ಓವರಿಸೀಯರ್‌ಗಳಾಗಿ ಕೆಲಸ ಮಾಡುತ್ತಿರುವ ಕೆಲವರು ಅರ್ಹ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಪದೋನ್ನತಿ ನೀಡದಿರುವ ವಿಚಾರ | ೫೧೦ |
| ೪೪೭ | ವೈಸ್ ರೀಗಲ್ ಎಸ್ಟೇಟಿನ ಸೂಪರಿಂಡೆಂಟ್ ಅವರು ನೇಮಿಸಿದ ಲಿಪಿಕ ಸಿಬ್ಬಂದಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು | ೫೧೪ |
| ೪೪೮ | ಸರ್ಕಾರಿ ನಿವಾಸಗಳ ಹಂಚಿಕೆ ನಿಯಮಗಳ ಪರಿಷ್ಕರಣ | ೫೧೪ |
| ೪೪೯ | ಮುಂಬಯಿ ಪ್ರಾಂತದ ನಾಲಾ ನೀರಾವರಿಯಾಗುವ ಡೆಕ್ಕನ್ ಪ್ರದೇಶದ ಕೆಲವು ಭಾಗಗಳಲ್ಲಿ ಇನ್ನಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ | ೫೧೫ |
| ೪೫೦ | ಸಿಮ್ಲಾದಲ್ಲಿನ ವೈಸ್‌ರೀಗಲ್ ಎಸ್ಟೇಟ್‌ಗಳ ಸಿಬ್ಬಂದಿ ವರ್ಗವು ಅನುಭವಿಸುತ್ತಿರುವ ರಿಯಾಯಿತಿಗಳನ್ನು ಕೇಂದ್ರೀಯ ಪಿ.ಡಬ್ಲ್ಯೂ.ಡಿ.ಯ ಸಿಮ್ಲಾ ಕೇಂದ್ರೀಯ ವಿಭಾಗದ ಸಿಬ್ಬಂದಿ ವರ್ಗಕ್ಕೂ ನೀಡುವುದು | ೫೧೬ |
| ೪೫೧ | ದಾಮೋದರ ಕಣಿವೆ ಅಭಿವೃದ್ಧಿ ಯೋಜನೆ | ೫೧೭ |
| ೪೫೨ | ಧನಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ | ೫೧೯ |
| ೪೫೩ | ಇಂಟರ್‌ನ್ಯಾಷನಲ್ ಲೇಬರ್ ಆಫೀಸಿನಲ್ಲಿ ನಿಯೋಜಿತರಾದ ಭಾರತೀಯರ ಸಂಖ್ಯೆ | ೫೨೦ |
| ೪೫೪ | ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳ ಮುದ್ರಣಾಲಯಗಳಲ್ಲಿ ಮುಷ್ಕರಗಳು | ೫೨೩ |
| ೪೫೫ | ನವದೆಹಲಿಯಲ್ಲಿ ನಿವಾಸದ ಆಸ್ತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು | ೫೨೫ |
| ೪೫೬ | ಅಭ್ರಕದ ಮೈನ್ಸ್ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ | ೫೨೬ |
| ೪೫೭ | ಕಾರ್ಖಾನೆಗಳ (ತಿದ್ದುಪಡಿ) ಮಸೂದೆ | ೫೨೭ |
| ೪೫೮ | ಇಂಡಿಯನ್ ಭಾರತೀಯ ಕಾರ್ಮಿಕರ ಒಕ್ಕೂಟಕ್ಕೆ ಮಾಹೆಯಾನ ಅನುದಾನ | ೫೨೮ |
| ೪೫೯ | ಗವರ್ನಮೆಂಟ್ ಪ್ರೆಸ್‌ನಲ್ಲಿ ಜ್ಯೂನಿಯರ್ ರೀಡರ್‌ಗಳು | ೫೩೩ |
| ೪೬೦ | ಥೋರಿಯಂನ ಬಳಕೆ | ೫೩೫ |
| ೪೬೧ | ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸ್ಲಿಮರು | ೫೩೬ |
| ೪೬೨ | ಕೈಗಾರಿಕಾ ನಿಯೋಜನೆಯ (ಸ್ಥಾಯಿ ಆದೇಶಗಳು) ವಿಧೇಯಕ | ೫೩೯ |
| ೪೬೩ | ಕಾರ್ಮಿಕ ತನಿಖಾ ಸಮಿತಿಯ ವರದಿಗಳು ಸದನದ ಮುಂದೆ ಇಡಲಾದ ಕಾಗದ ಪತ್ರಗಳು | ೫೪೦ |
| ೪೬೪ | ಕನಿಷ್ಠ ಮಜೂರಿ ವಿಧೇಯಕ | ೫೪೧ |
| ೪೬೫ | ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ವಿಧೇಯಕ ವಿಚಾರಣಾ ಸಮಿತಿಯ ವರದಿಯನ್ನು ಸಾದರಪಡಿಸುವುದು | ೫೪೨ |

೪೬೬ ಥೋರಿಯಂ ನಿಕ್ಷೇಪಗಳು ೫೪೨
೪೬೭ ನವದೆಹಲಿಯ ಹನುಮಾನ್ ಲೇನ್‌ನಲ್ಲಿರುವ ನಂ. ೪೨–ಬಿ
ಮನೆಯನ್ನು ಕಡ್ಡಾಯ ಸ್ವಾಧೀನ ತೆಗೆದುಕೊಳ್ಳುವ ವಿಚಾರ ೫೪೪
೪೬೮ ಮರ್ಚೆಂಟ್ ನೇವಿಯ ಆಫೀಸರುಗಳಿಗೆ ರಾಷ್ಟ್ರೀಯ ಕಾರ್ಮಿಕ ನ್ಯಾಯ
ಮಂಡಳಿಯ ಅಧ್ಯಾದೇಶವನ್ನು ಅನ್ವಯಿಸುವುದು ೫೪೫
೪೬೯ ನವದೆಹಲಿ ಮುಂಬಯಿ ಮತ್ತು ಕಲ್ಕತ್ತೆಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ದರಗಳು ೫೪೬
೪೭೦ ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ರಚನೆ ೫೪೭
೪೭೧ ಭಾರತದ ಖನಿಜ ಸಂಪನ್ಮೂಲಗಳನ್ನು ಕುರಿತು ಡಾ॥ ಕೃಷ್ಣನ್ ಅವರ ಸಲಹೆಗಳು ೫೪೮
೪೭೨ ನಾಗರಿಕ ಸೇವೆಯಲ್ಲಿ ವಿಸರ್ಜಿತ ಮಿಲಿಟರಿ ಅಧಿಕಾರಿಗಳು ೫೫೧

**ವಿಷಯಸೂಚಿ** ೫೫೩

# ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್
# ಬರೆಹಗಳು ಮತ್ತು ಭಾಷಣಗಳು

**ರಾಷ್ಟ್ರೀಯತೆ, ಒಂದು ಗುರಿಗೆ ಸಾಧನ**

ಅಂತರರಾಷ್ಟ್ರೀಯ ಕಾರ್ಮಿಕನ ಮತ ಅಥವಾ ನಂಬುಗೆ, ಕಾರ್ಮಿಕ ರಾಷ್ಟ್ರೀಯತೆಯಲ್ಲಿ ಏಕೆ ನಂಬುಗೆ ಹೊಂದಿದ್ದಾನೆಂದರೆ, ಅದು ಪ್ರಜಾಪ್ರಭುತ್ವದ ಚಕ್ರಗಳಾದ ಪ್ರಾತಿನಿಧಿಕ ಸಂಸತ್ತು, ಜವಾಬ್ದಾರಿ ಕಾರ್ಯಾಂಗ, ಸಂವಿಧಾನಾತ್ಮಕ ರೂಢಿನಿಯಮ ಮುಂತಾದ ರಾಷ್ಟ್ರೀಯ ಭಾವನೆಗಳಿಂದ ಒಂದುಗೂಡಿದ ಸಮುದಾಯದಲ್ಲಿ ಚೆನ್ನಾಗಿ ಕೆಲಸ ಮಾಡುತ್ತವೆ. ಕಾರ್ಮಿಕನಿಗೆ ರಾಷ್ಟ್ರೀಯತೆ ಒಂದು ಗುರಿಮುಟ್ಟುವ ಸಾಧನ ಅಥವಾ ಮಾರ್ಗವಾಗಿದೆ. ಅದೇ ಗುರಿಯಾಗಿರುವುದಿಲ್ಲ. ಇದಕ್ಕಾಗಿ ಕಾರ್ಮಿಕ ನಂಬಿರುವ ತನ್ನ ಜೀವನದ ಅತ್ಯವಶ್ಯಕವಾದ ಮೂಲತತ್ವಗಳನ್ನು ಬಲಿಕೊಡಲು ಒಪ್ಪಲಾರ.

**ಡಾ॥ ಬಿ. ಆರ್. ಅಂಬೇಡ್ಕರ್**

ಡಿಸೆಂಬರ್ ೧೯೪೨ರಲ್ಲಿ ಮುಂಬಯಿಯ
ಆಲ್ ಇಂಡಿಯಾ ರೇಡಿಯೊ ಕೇಂದ್ರದಿಂದ
ಪ್ರಸಾರಮಾಡಿದ ಭಾಷಣದಿಂದ

# ಪ್ರಶ್ನೋತ್ತರಗಳು

ರ್೪ನೇ ಸೆಪ್ಟೆಂಬರ್ ೧೯೪೨ರಿಂದ
೧೨ನೇ ಏಪ್ರಿಲ್ ೧೯೪೬ರ ವರೆಗೆ

# ೧
# ಕೈಗಾರಿಕಾ ಉದ್ಯಮಗಳಲ್ಲಿ ಇತ್ತೀಚೆಗೆ ನಡೆದ ಕಾರ್ಮಿಕ ಮುಷ್ಕರ*

**೧೬. ಶ್ರೀ ಕೆ.ಸಿ. ನಿಯೋಗಿ :** ಅ) ಕಲ್ಲಿದ್ದಲು, ಕಬ್ಬಿಣ ಮತ್ತು ಜವಳಿ ಉದ್ದಿಮೆಗಳಲ್ಲಿ ಕಾರ್ಮಿಕ ವರ್ಗದವರಿಂದ ಇತ್ತೀಚಿನ ವಾರಗಳಲ್ಲಿ ನಡೆದ ಮುಷ್ಕರ ಕುರಿತು ಮಾನ್ಯ ಕಾರ್ಮಿಕ ಸದಸ್ಯರು ವಿವರಿಸುವರೇ?

ಆ) ಅಂತೆಯೇ ಈ ಮುಷ್ಕರಗಳ ಮೂಲ ಕಾರಣಗಳೇನು ಹಾಗೂ ಯಾವ ಕಾರಣಗಳಿಗಾಗಿ ಮುಷ್ಕರ ಹೂಡಲಾಯಿತು? ಮುಷ್ಕರದಲ್ಲಿ ತೊಡಗಿದವರ ಬಗ್ಗೆ ಅಂಕಿ–ಸಂಖ್ಯೆ ಹಾಗೂ ಮುಷ್ಕರ ಜರುಗಿದ ಅವಧಿಯ ಬಗ್ಗೆ ಸ್ಪಷ್ಟೀಕರಣ ನೀಡಬಲ್ಲರೇ?

**ಗೌರವಾನ್ವಿತ ಡಾ॥ ಅಂಬೇಡ್ಕರ್ :** ಅ) ಕಳೆದ ಐದು ವಾರಗಳಿಂದ ಹಲವಾರು ಪ್ರಮುಖ ಉದ್ದಿಮೆಗಳು ಕೆಲವು ಕಾರಣಗಳಿಂದ ಕಾರ್ಯ ಮಾಡುತ್ತಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಅವುಗಳ ಹೆಸರುಗಳನ್ನು ಹೇಳುವುದು ಉಚಿತವಲ್ಲ.

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಯುದ್ಧೋಪಕರಣಗಳನ್ನು ತಯಾರಿಸುತ್ತಿರುವ ಆ ಉದ್ದಿಮೆಗಳ ಹೆಸರುಗಳನ್ನು ಬಹಿರಂಗಗೊಳಿಸುವುದು ಉಚಿತವಲ್ಲ.

೧) ಆರ್ಥಿಕ ಕುಂದುಕೊರತೆಗಳ ಕಾರಣದಿಂದ ಕಾರ್ಯಸ್ಥಗಿತಗೊಂಡಿರದೆ ಕೇವಲ ಹೆಚ್ಚಿನ ತುಟ್ಟಿಭತ್ಯೆ ಹಾಗೂ ವೇತನ ಬೇಡಿಕೆಗಳೇ ಮುಷ್ಕರಕ್ಕೆ ಕಾರಣವಾಗಿವೆ.

೨) ಹಲವು ಪ್ರಕರಣಗಳಲ್ಲಿ, ಕಾರ್ಖಾನೆಗಳು ಮುಚ್ಚಿರುವ ಹಕ್ಕೂ ಆರ್ಥಿಕ ಪರಿಸ್ಥಿತಿಗೂ ಯಾವುದೇ ಸಂಬಂಧವೂ ಕಾಣಬರುವುದಿಲ್ಲ. ಉಳಿದಂತೆ, ಕಾರ್ಯಸ್ಥಗಿತವು ಸಾಮಾನ್ಯ ಕಾರಣದಿಂದಾಗಿದ್ದವು ಆ ಕಾರಣಗಳಲ್ಲಿ ವೇತನ ಹಾಗೂ ತುಟ್ಟಿಭತ್ಯೆಗಳ ಬೇಡಿಕೆಗಳೂ ಇದ್ದವು.

೩) ಅಹಮದಾಬಾದ್ ನಗರದಲ್ಲಿ ಮಾತ್ರ ಅನೇಕ ಉದ್ದಿಮೆಗಳಲ್ಲಿ ಕಾರ್ಯಸ್ಥಗಿತಗೊಂಡಿದೆ. ಆದರೆ ಆರ್ಥಿಕ ಕೊರತೆಯಿಂದಲ್ಲ. ಕಾರ್ಖಾನೆಗಳು ಇನ್ನೂ ತೆರೆದಿಲ್ಲ. ಬೊಂಬಾಯಿಯಲ್ಲಿಯ ಎಲ್ಲಾ ಕಾರ್ಖಾನೆಗಳು. ಹೀಗಾಗಿ ಈ ಮಿಲ್ಲುಗಳಲ್ಲಿಯೂ ಕಾರ್ಯಸ್ಥಗಿತಗೊಂಡಿದೆ. ಆದರೆ ಆರ್ಥಿಕ ಕೊರತೆಯಿಂದಲ್ಲ ಹಾಗೂ ಈ ದಿಶೆಯಲ್ಲಿ ಯಾವ ಬೇಡಿಕೆಯೂ ಬಂದಿಲ್ಲ. ಕೊಯಂಬತ್ತೂರಿನಲ್ಲಿ ಕಾರ್ಖಾನೆಗಳನ್ನು ಮತ್ತೆ ತೆಗೆಯಲಾಗಿತ್ತು. ಆದರೆ ಆರ್ಥಿಕ ತೊಂದರೆಗಳಿಂದಾಗಿ ಅದನ್ನು ಪುನಃ ಮುಚ್ಚಲಾಗಿದೆ.

೪) ಬೊಂಬಾಯಿ, ಅಹಮದಾಬಾದ್, ಕೊಯಂಬತ್ತೂರು ಜವಳಿ ಕಾರ್ಖಾನೆಗಳಲ್ಲಿ ಅಲ್ಲದೆ ಅನೇಕ ಔದ್ಯೋಗಿಕ ಉದ್ದಿಮೆಗಳಲ್ಲಿ ಅಂದರೆ ಒಂದು ಸಾವಿರಕ್ಕೂ ಮೀರಿದ ಕಾರ್ಮಿಕರನ್ನು ಹೊಂದಿದವುಗಳಲ್ಲಿ ಸುಮಾರು ಕಾಲದಿಂದ ಕಾರ್ಯಸ್ಥಗಿತಗೊಂಡಿದೆ. ಆದರೆ ಆರ್ಥಿಕ ಕೊರತೆಯೊಂದೇ ಈ ವಿಧವಾದ ಬಂದ್‌ಗೆ ಕಾರಣವಾಗಿಲ್ಲ. ಇಂತಹ ಉದ್ದಿಮೆಗಳು ೧೨ ಇರಬಹುದು. ಮುಂದುವರಿದು ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು

---

*ಸಂ ೩, ೧೯೪೨, ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ೧೫ ಸೆಪ್ಟೆಂಬರ್ ೧೯೪೨, ಪು. ೮೭–೯೦.

ಹೊಂದಿರಬಹುದಾದ ೨೦ಕ್ಕಿಂತ ಕಡಿಮೆ ಕಾರ್ಖಾನೆಗಳಲ್ಲಿ ರಾಜಕೀಯೇತರ ಕಾರಣಗಳಿಗಾಗಿ ಆಗಸ್ಟ್ ೯ರಿಂದ ಕಾರ್ಯಸ್ಥಗಿತಗೊಂಡಿದೆ.

೫) ಬೊಂಬಾಯಿ ಹಾಗೂ ಬಂಗಾಳ ಪ್ರಾಂತ್ಯಗಳಲ್ಲಿ ಅಧಿಕ ಉದ್ದಿಮೆಗಳಲ್ಲಿ ಕಾರ್ಯ ಸ್ಥಗಿತಗೊಂಡಿದೆ. ಬೇರೆಡೆಯಲ್ಲಿ ಕೇವಲ ಅರ್ಧಡಜನ್ ಉದ್ದಿಮೆಗಳಲ್ಲಿ ಕಾರ್ಯ ಸ್ಥಗಿತಗೊಂಡಿದೆ.

೬) ಆದರೆ ಯಾವ ಉದ್ದಿಮೆಯಲ್ಲಿಯೂ, ಮುಷ್ಕರದಿಂದ, ವಿಧ್ವಂಸ ಕಾರ್ಯ ನಡೆದ ಬಗೆಗೆ ಸರ್ಕಾರಕ್ಕೆ ಮಾಹಿತಿ ದೊರೆತಿಲ್ಲ.

೭) ಆಗಸ್ಟ್ ೨ನೇ ವಾರದಲ್ಲಿ ಕೇವಲ ಆರ್ಥಿಕ ಕಾರಣಕ್ಕೆಂದೇ ಮುಷ್ಕರ ಹೂಡಿರುವ ಕಾರ್ಖಾನೆಗಳ ಸಂಖ್ಯೆ ೨೪ ಇರಬಹುದು. ಈ ದಿಶೆಯಲ್ಲಿ ಕೇವಲ ೧೦ ಉದ್ದಿಮೆಗಳಲ್ಲಿ ಮಾತ್ರ ಒಂದು ಸಾವಿರಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದಾರೆ.

**ಡಾ॥ ಜಿಯಾಉದ್ದೀನ್ ಅಹಮದ್ :** ನನಗೆ ದೊರೆತ ಮಾಹಿತಿಯಂತೆ ಹಲವು ಕಾರ್ಖಾನೆಗಳಲ್ಲಿ ಬಂದ್ ಆಚರಿಸಿದಾಗ ಅಲ್ಲಿಯ ಕಾರ್ಮಿಕರಿಗೆ ಆ ದಿನದ ವೇತನವನ್ನು ನೀಡಿ (ಆ ದಿನದ)ದ್ದಾರೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗಾಗಲೇ ಮೇಲೆ ಹೇಳಿದ ವಿವರಣೆಗಿಂತ ಹೆಚ್ಚಿನ ಮಾಹಿತಿ ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ನನ್ನ ಮಾನ್ಯಮಿತ್ರರು ಹೇಳಿದಂತಹ ಸಂಗತಿಗಳು ಜರುಗಿರುವುದರ ಸುಳಿವು ಹಲವೆಡೆ ದೊರೆಯಬಹುದು ಅಥವಾ ಜರುಗಿರಲೂಬಹುದು.

**ಶ್ರೀ ಲಾಲ್‌ಚಾಂದ್ ನವಲ್‌ರಾಯ್ :** ಈ ಮುಷ್ಕರಗಳನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ನಿಲ್ಲಿಸಲಾಗಿದೆಯೇ ಅಥವಾ ಕಾರ್ಮಿಕರು ತಾವೇ ನಿಲ್ಲಿಸಿದ್ದಾರೆಯೇ, ಅಥವಾ ಕೆಲವು ನಿಬಂಧನೆಗಳ ಮೇಲೆ ಸರ್ಕಾರದ ಸಹಾಯದಿಂದ ನಿಲ್ಲಿಸಲಾಯಿತೇ ಎಂಬುದನ್ನು ಗೌರವಾನ್ವಿತ ಸದಸ್ಯರಿಂದ ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಪ್ರಶ್ನೆಯ ಜಾಡೇ ಅರಿಯದಂತಾಗಿದೆ.

**ಶ್ರೀ ಲಾಲ್‌ಚಾಂದ್ ನವಲ್‌ರಾಯ್ :** ಮಾನ್ಯ ಸದಸ್ಯರು ಈಗಾಗಲೇ ಹೇಳಿದಂತೆ ಹಲವಾರು ಉದ್ದಿಮೆಗಳಲ್ಲಿ ಮುಷ್ಕರ ಮುಕ್ತಾಯಗೊಂಡಿದೆ. ಈಗ ನಾನು ಕೇಳಬಯಸಿದ್ದೇನೆಂದರೆ ಈ ವಿಧವಾದ ಮುಕ್ತಾಯ ಸರ್ಕಾರದ ಹಲವಾರು ಕರಾರುಗಳಿಂದ ಮುಕ್ತಾಯಗೊಂಡಿತೋ ಅಥವಾ ಕಾರ್ಮಿಕರ ಸ್ವಯಂ ಪ್ರೇರಣೆಯಿಂದಲೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಲವು ಪ್ರಕರಣಗಳಲ್ಲಿ ಸ್ವಯಂ ಪ್ರೇರಣೆಯಿಂದಲೇ ಮುಕ್ತಾಯ ಹೊಂದಿದೆ.

**ಶ್ರೀ ಲಾಲ್‌ಚಾಂದ್ ನವಲ್‌ರಾಯ್ :** ಹಾಗಾದರೆ, ಮಿಕ್ಕ ಉದ್ದಿಮೆಗಳ ಬಗೆಗೆ ಸರ್ಕಾರದ ಕರಾರುಗಳೇನಿದ್ದವು ಎಂಬುದನ್ನು ಮಾನ್ಯ ಸದಸ್ಯರು ತಿಳಿಸಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಸರ್ಕಾರ, ಕಾರ್ಮಿಕರ ಕಾರ್ಯಾಚರಣೆಗೆ ಸೇರಿದಂತೆ ಯಾವ ಕರಾರುಗಳನ್ನೂ ಹಾಕಿಲ್ಲ ಎಂದು ಹೇಳಬಯಸುತ್ತೇನೆ.

**ಶ್ರೀ ಎನ್.ಎಂ. ಜೋಷಿ :** ಬೊಂಬಾಯಿ ಕಾರ್ಮಿಕರ ಬೇಡಿಕೆಗಳನ್ನು ಸರ್ಕಾರದ ಮುಂದೆ ತರಲಾಗಿತ್ತೇ? ಮುಂದುವರಿದು ಬೊಂಬಾಯಿ ಗಿರಣಿ ಕಾಮಗಾರಿ ಸಂಘವು ಒಂದು ತಿಂಗಳ ಮುಂಚೆಯೇ ಬೊಂಬಾಯಿ ಸರ್ಕಾರಕ್ಕೆ ತಮ್ಮ ಬೇಡಿಕೆಗಳ ಬಗೆಗೆ ಹೇಳಿಕೆಯನ್ನು ನೀಡಿ ಕೋರಿದ್ದ ಸಂಗತಿ ಮಾನ್ಯ ಸದಸ್ಯರು

ಬಲ್ಲರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಲವು ಬೇಡಿಕೆಗಳನ್ನು ಮುಂದಿರಿಸಿದ್ದು ನಿಜ. ಆದರೆ ಈಗ ನಾನು ಆಗ್ರಹಿಸುವುದೇನೆಂದರೆ, ಕಾರ್ಯಸ್ಥಗಿತಗೊಳಿಸಿರುವುದು ಕುಂದು ಕೊರತೆಗಳ ಕಾರಣದಿಂದಲ್ಲ ಎಂದೇ ನನ್ನ ಭಾವನೆ ಆಗಿದೆ.

**ಶ್ರೀ ಎನ್.ಎಂ. ಜೋಷಿ :** ಮಾನ್ಯ ಸದಸ್ಯರ ಹೇಳಿಕೆಯಂತೆ ಗಿರಣಿ ಕಾರ್ಮಿಕರ ಸಂಘವು ತನ್ನ ಬೇಡಿಕೆಗಳನ್ನು ಬೊಂಬಾಯಿ ಸರ್ಕಾರದ ಅವಗಾಹನೆಗೆ ತಂದಿದ್ದು ಆನಂತರ ಮುಷ್ಕರಗಳು ನಡೆದಿರುವುದರಿಂದ, ಆರ್ಥಿಕ ಕೋರಿಕೆಗಳಿಲ್ಲ ಹಾಗೂ ಆರ್ಥಿಕ ಕೋರಿಕೆಗಳು ಮುಷ್ಕರಕ್ಕೆ ಕಾರಣವಲ್ಲವೆಂದು ಹೇಳುವುದು ಸಮಂಜಸವೇ? ಅಲ್ಲದೆ ಈ ಒಂದು ನಿರ್ಣಯಕ್ಕೆ ತಾವು ಹೇಗೆ ಬಂದಿರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಬೊಂಬಾಯಿ ಸರ್ಕಾರದ ಯಾವ ವಿಧವಾದ ಮಾಹಿತಿ ಇಲ್ಲ. ಆದರೆ ಮಾನ್ಯ ಸದಸ್ಯರು ಕೇಳಿದ ಬಗೆಗೆ ಪತ್ರಿಕೆಗಳಿಂದ ದೊರೆತ ಮಾಹಿತಿಯನ್ನು ಪ್ರಸ್ತಾಪಿಸಿರುವೆ.

**ಶ್ರೀ ಎನ್.ಎಂ. ಜೋಷಿ :** ಹಾಗಿದ್ದಲ್ಲಿ ಬೊಂಬಾಯಿ ಸರ್ಕಾರದವರು ಬೊಂಬಾಯಿ ಜವಳಿ ಉದ್ದಿಮೆ ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಕೈಕೊಂಡ ಕ್ರಮಗಳೇನು? ಅಲ್ಲದೆ ಬೊಂಬಾಯಿ ಗಿರಣಿ ಕಾಮಗಾರರ ಸಂಘದ ಬೇಡಿಕೆಗಳ ನಿವಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ಆ ಸರ್ಕಾರದಿಂದ ಅರಿತುಕೊಳ್ಳುವರೇ?

**ಸರ್ ಕವಾಸ್ಜಿ ಜಹಂಗೀರ್ :** ಆಗಸ್ಟ್ ೮ ಹಾಗೂ ೯ರ ನಂತರ ಬೊಂಬಾಯಿ ಜವಳಿ ಉದ್ದಿಮೆಗಳಲ್ಲಿ ನಡೆದಿರುವ ಮುಷ್ಕರಗಳೆಷ್ಟು ಎಂದು ಮಾನ್ಯ ಸದಸ್ಯರು ಹೇಳಬಲ್ಲರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೇವಲ ಕೆಲವು ಮಾತ್ರ.

**ಮಿ. ಮಹಮದ್ ನೌಮಾನ್ :** ಗೌರವಾನ್ವಿತ ಸದಸ್ಯರು ಟಾಟಾ ಉಕ್ಕು ಹಾಗೂ ಕಬ್ಬಿಣ ಕಂಪನಿಯ ಕಾರ್ಮಿಕರ ವೇತನವೇನು ಎಂಬುದನ್ನು ತಿಳಿಸಬಲ್ಲರೇ? ಅವರು ನಿರ್ದಿಷ್ಟ ಬೇಡಿಕೆಗಳನ್ನೇನಾದರೂ ಸರ್ಕಾರಕ್ಕೆ ಕಳಿಸಿದ್ದರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಾರ್ವಜನಿಕ ಹಿತದೃಷ್ಟಿಯಿಂದ ಈ ಮಾಹಿತಿಯನ್ನು ನೀಡಲಾಗದು.

**ಶ್ರೀ ಕೆ.ಸಿ. ನಿಯೋಗಿ :** ಮಾನ್ಯ ಸದಸ್ಯರಿಗೆ, ಈ ವಿಷಯ ಪತ್ರಿಕೆಗಳಲ್ಲಿ ಪ್ರಚಾರವಾದುದರ ಬಗೆಗೆ ತಿಳಿದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇರಬಹುದು. ಆದರೆ ಈ ವಿಷಯದಲ್ಲಿ ಸರ್ಕಾರ ಯಾವ ಜವಾಬ್ದಾರಿಯನ್ನೂ ಹೊರಲಾರದು.

**ಶ್ರೀ ಕೆ.ಸಿ. ನಿಯೋಗಿ :** ಅಸೋಸಿಯೇಟೆಡ್ ಪ್ರೆಸ್ ಅವರ ಅಧಿಕೃತ ವರದಿಯಂತೆ ಭಾರತಕ್ಕೆ ರಾಷ್ಟ್ರೀಯ ಸರ್ಕಾರ ಬೇಕೆಂಬ ವಿಷಯದಲ್ಲಿ ಅವರು ಮುಷ್ಕರ ಹೂಡಿದ್ದರೆಂದು ತಿಳಿಸಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರ ಹೇಳಿಕೆಯಂತೆ ಅಸೋಸಿಯೇಟೆಡ್ ಪ್ರೆಸ್ ಏಜೆನ್ಸಿಯವರೇ ಈ ಸುದ್ದಿಯ ಕರ್ತೃಗಳು ಎಂದ ಮೇಲೆ ಅವರ ಅರ್ಥವೇನೋ ನಾನು ಅರಿಯೆ.

**ಕೆ.ಸಿ. ನಿಯೋಗಿ :** ಮಾನ್ಯ ಸದಸ್ಯರು ಸರ್ಕಾರದ ಹೇಳಿಕೆಯನ್ನು ಅರಿಯುವ ಗೋಜಿಗೆ ಹೋಗದೆ ಇರುವುದು ಖೇದನೀಯ.

**ಸರದಾರ ಸಂತ್‌ಸಿಂಗ್ :** ಮಹಾತ್ಮಾಗಾಂಧಿ ಹಾಗೂ ಅವರ ಕಾರ್ಯಕರ್ತರುಗಳ ಬಂಧನದ ನಂತರ ಮುಷ್ಕರಗಳು ನಡೆದಿರುವುದು ಸತ್ಯವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಯಾವ ಮಾಹಿತಿಯನ್ನೂ ನೀಡಲಾರೆ. ಆದರೆ ಮುಷ್ಕರಗಳು ಸ್ವಯಂಪ್ರೇರಿತವಾಗಿದ್ದವು.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಮಾನ್ಯ ಸದಸ್ಯರು ಯಾವ ದಿನಗಳಂದು ಮುಷ್ಕರಗಳು ಜರುಗಿದವೆಂಬುದನ್ನು ದಯಮಾಡಿ ತಿಳಿಸುವರೇ? ಇದರಿಂದ ನಾವು ನಮ್ಮದೇ ಆದ ಕೆಲವು ತೀರ್ಮಾನಕ್ಕೆ ಬರಬಹುದಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಎಲ್ಲಿ ಯಾವ ಸ್ಥಳದಲ್ಲಿ?

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಟಾಟಾರವರಲ್ಲಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದಂತೆ ಸಾರ್ವಜನಿಕ ಹಿತದೃಷ್ಟಿಯಿಂದ ನಾನು ಏನೂ ಹೇಳಲಾರೆ.

**ಸರದಾರ ಸಂತ್‌ಸಿಂಗ್ :** ಮಹಾತ್ಮಾಗಾಂಧೀಜಿಯವರ ದಸ್ತಗಿರಿಯ ನಂತರ ಮುಷ್ಕರವು ನಡೆದಿದೆಯೋ ಅಥವಾ ಇಲ್ಲವೋ ಆದರೆ ಈ ಮುಷ್ಕರಗಳು, ಮಹಾತ್ಮಗಾಂಧೀಜಿಯವರು, ಈ ದೇಶದಲ್ಲಿ ಹೊಂದಿರುವ ಜನಬೆಂಬಲವನ್ನು ಎತ್ತಿ ತೋರಿಸುವಲ್ಲಿ ಸಂದೇಹವಿಲ್ಲವಲ್ಲವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಪ್ರಶ್ನೆ ಅಲ್ಲ. ಕೇವಲ ವಾದವಾಗಿದೆ.

**ಶ್ರೀ ಎನ್.ಎಂ. ಜೋಷಿ :** ಜಮ್‌ಷೆಡ್‌ಪುರದಲ್ಲಿಯ ಮುಷ್ಕರವು ಮುಕ್ತಾಯವಾಗಿದೆ ಎಂಬುದನ್ನು ತಿಳಿಯಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ನಂಬಿಕೆಯಂತೆ ಅದು ಮುಕ್ತಾಯಗೊಂಡಿದೆ.

**ಮಾನ್ಯ ಅಧ್ಯಕ್ಷರು :** ಮುಂದಿನ ಪ್ರಶ್ನೆ (ಗೌರವಾನ್ವಿತ ಅಬ್ದುಲ್ ರಹೀಮ್).

# ೨
# ಭಾರತದ ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ವಿಭಾಗದ ಚಟುವಟಿಕೆಗಳ ಕಾರ್ಯಕ್ರಮ*

**ಶ್ರೀ ಕೆ.ಸಿ. ನಿಯೋಗಿ :** ಅ) ಭಾರತದ ಭೂಗರ್ಭ ಸರ್ವೇಕ್ಷಣ ಕಾನೂನಿಗೆ ನೂತನವಾಗಿ ಸೇರ್ಪಡೆಯಾದ ಬಳಕೆ ಚಟುವಟಿಕೆ ಯೋಜನೆಯ ಬಗೆಗೆ ಮಾನ್ಯ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ವಿವರಣೆ ನೀಡಬಲ್ಲಿರಾ?

ಆ) ಈ ನೂತನ ಯೋಜನೆಯ ಅಡಿಯಲ್ಲಿ ಸೇರಿಸಬಹುದಾದ ಲೋಹಗಳು ಯಾವುವು?

ಇ) ಆರಂಭದ ದೆಶೆಯಲ್ಲಿ ಈ ವಿಭಾಗದಡಿಯಲ್ಲಿ ಪರಿಣತರ ಸಲಹೆಯಂತೆ ಕೇವಲ ಕೆಲವೇ ಲೋಹಗಳನ್ನು ಪರಿಶೋಧಿಸಲು ವಾಣಿಜ್ಯೋದ್ಯಮಗಳಿಗೆ ವಹಿಸಿಕೊಡಲಾಗುವುದೇ

ಈ) ಈ ವಿಭಾಗದಡಿಯಲ್ಲಿ ಪೆಟ್ರೋಲಿಯಂ ಸೇರಿಸಲಾಗಿದೆಯೇ?

ಉ) ಈ ವಿಭಾಗಕ್ಕೆ ಅನ್ವಯಿಸಿದಂತೆ ಯಾವ ಪ್ರೋತ್ಸಾಹಕಾರಿ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ? ಯಾವ ಲೋಹಗಳಿಗೆ ಪರಿಣತರು ತಮ್ಮ ಸಲಹೆಗಳನ್ನು ಸೂಚಿಸಿದ್ದಾರೆ? ಈ ಎಲ್ಲಾ ಸಂಗತಿಗಳ ಬಗೆಗೆ ತೆಗೆದುಕೊಂಡಿರಬಹುದಾದ ಕ್ರಮಗಳೇನು?

ಊ) ಈ ವಿಭಾಗದ ಸಮಗ್ರ ಉಪಯೋಗದ ಕಾರ್ಯಕ್ರಮಗಳು ವೈಜ್ಞಾನಿಕ–ಔದ್ಯೋಗಿಕ ಸಂಶೋಧನಾ ಸಂಘಟನೆಗಳೊಂದಿಗೆ (ವಾಣಿಜ್ಯ ಇಲಾಖೆ ಅಡಿಯಲ್ಲಿರುವ) ಸಮನ್ವಯತೆಯನ್ನು ಹೊಂದಿದೆಯೇ?

**ಡಾ॥ ಬಿ.ಆರ್. ಅಂಬೇಡ್ಕರ್ :** ೧) ಕಾರ್ಯಕ್ರಮವನ್ನು ಯೋಜಿಸಿದೆ. ಆದರೆ ಅದು ಕೆಲವು ತುರ್ತು ಲೋಹಗಳಿಗೆ ಸಂಬಂಧಿಸಿದಂತೆ ಅವು ಬದಲಾಗಲೂಬಹುದು.

ಆ) ಯುದ್ಧಕ್ಕೆ ಬೇಕಾದ ಲೋಹಗಳು ಹಾಗೂ ಭಾರತದಲ್ಲಿ ಕಾರ್ಯಾಚರಣೆಗೆ ಬೇಕಾದ ಲೋಹಗಳೆಂದರೆ ಸಲ್ಫರ್, ಮೈಕಾ, ಟಂಗ್‌ಸ್ಟನ್ ಅಥವಾ ವುಲ್‌ಫ್ರಮ್ ಹಾಗೂ ಕಬ್ಬಿಣೇತರ ಖನಿಜಗಳಾದ ಸೀಸ, ಸತು, ತಾಮ್ರ ಹಾಗೂ ತವರ ಒಳಗೊಂಡಿವೆ.

ಇ) ಈ ಬಗ್ಗೆ ಸಂಬಂಧಿಸಿದ ಶಾಖೆಯು ಪರಿಣತರ ಸಲಹೆಯ ಆಧಾರದ ಮೇಲೆ ಖನಿಜ ಸಂಗ್ರಹವನ್ನು ಪತ್ತೆಮಾಡಿ ಚಿಕ್ಕ ಪ್ರಮಾಣದ ಅದಿರು ತೆಗೆಯುವ ಹಾಗೂ ಅವನ್ನು ಕರಗಿಸುವ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು. ಈ ಒಂದು ಹಂತದಲ್ಲಿ ವಾಣಿಜ್ಯೋದ್ಯಮದ ದೃಷ್ಟಿಯಿಂದ ಫಲಪ್ರದವೆನಿಸಿದಲ್ಲಿ (ಯುದ್ಧಕ್ಕೆ ಅಗತ್ಯವಾದ ಲೋಹಗಳನ್ನು ಹೊರತುಪಡಿಸಿ) ವಾಣಿಜ್ಯೋದ್ಯಮಕ್ಕೆ ಪ್ರೋತ್ಸಾಹಿಸಲಾಗುವುದು.

ಈ) ಸದ್ಯದ ಕಾರ್ಯಕ್ರಮದಂತೆ – ಇಲ್ಲ.

ಉ) ಬಳಕೆ ಇಲಾಖೆಯು ಈಗಾಗಲೇ ಸೀಸ ಮತ್ತು ಸತುಗಳ ಉತ್ಪಾದನೆ ದಿಶೆಯಲ್ಲಿ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ಉದಯಪುರ ರಾಜ್ಯದಲ್ಲಿಯ ಝುವಾರದಲ್ಲಿಯ ಗಣಿಗಳು ಸೀಸ–ಸತುವಿನ ಉದ್ದಿಮೆಗೆ ಭಾರತದಲ್ಲಿಯೇ ಹೆಚ್ಚು ಪ್ರೋತ್ಸಾಹದಾಯಕವಾಗಿವೆ. ಭಾರತ ಸರ್ಕಾರವು, ಡಬ್ಲ್ಯೂ.ವಿ.ಕೌವೆನ್ ಅವರ ಮುಖಾಂತರ ಮಾಫ್ಚಿ ಗಣಿಯ ಸಂಚಾಲಕರೊಂದಿಗೆ (ಅಂದರೆ

---

*ಲೆಜಿಸ್ಲೇಟಿವ್ ಮತ್ತು ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧–೯–೧೯೪೨, ಪು.೯೦–೯೩

ಬರ್ಮಾದಲ್ಲಿರುವ) ಸಂಪರ್ಕ ಹೊಂದುವ ದಿಶೆಯಲ್ಲಿ ಮೇವಾರ ಸರ್ಕಾರದೊಂದಿಗೆ ಸಂಪರ್ಕ ನಡೆಸಿದೆ. ಈ ಗಣಿಯ ಗುತ್ತಿಗೆಯನ್ನು ಈ ಹಿಂದೆ ನೀಡಲಾಗಿದ್ದ ಪರಿಹಾರ ಹಣಕ್ಕೆ ರಿಯಾಯಿತಿ ನೀಡಿ ಮೇವಾರ್ ಸರ್ಕಾರಕ್ಕೆ ಪರವಾನಗಿಯನ್ನು ನೀಡಲಾಗಿದೆ. ಅಲ್ಲದೆ ಮೇ ೧೯೪೨ರ ಅಂತ್ಯದಲ್ಲಿಯೇ ಶ್ರೀ ಕೌವೆನ್ ಅವರಿಗೆ ಆದೇಶ ನೀಡಿದ್ದು ಕಾರ್ಯಾಚರಣೆ ಆರಂಭವಾಗಿದೆ. ಕಾರ್ಯಾಚರಣೆ ಎರಡು ಹಂತಗಳಿಂದ ಕೂಡಿದ್ದು ೧) ದೀರ್ಘ ಹಾಗೂ ಆಳವಾಗಿ ಕೊರೆಯುವ ಕಾರ್ಯದ ಸರ್ವೇಕ್ಷಣೆ; ಮತ್ತು ೨) ಖನಿಜ ಶುದ್ಧೀಕರಿಸುವ ಪೈಲೆಟ್ ಕಾರ್ಯಾಚರಣೆಯ ನಂತರ ಶುದ್ಧೀಕರಿಸಿದ ಖನಿಜವನ್ನು ಕಾಯಿಸುವ – ಸರ್ವೇಕ್ಷಣದ ಕಾರ್ಯ ಮುಗಿದ ನಂತರ, ಎಷ್ಟು ಅದಿರು ದೊರಕಬಹುದು ಮುಂತಾದ ವಿಚಾರಗಳ ಬಗೆಗೆ ತಿಳಿಸಬಹುದು. ಈ ದಿಶೆಯಲ್ಲಿ ಬೇಕಾದ ಯಂತ್ರೋಪಕರಣಗಳು ಈಗಾಗಲೇ ಶ್ರೀ ಕೌವೆನ್‌ರ ಕೈಸೇರಿದ್ದು ಅವರು ಬೇರೆ ಇಬ್ಬರು ಇಂಜಿನಿಯರುಗಳೊಂದಿಗೆ ಕಾರ್ಯಕ್ಷೇತ್ರಕ್ಕೆ ಬಂದಿದ್ದಾರೆ.

ಗಂಧಕದ ನಿಕ್ಷೇಪಗಳು, 'ಕೋಹಿ–ಈ–ಸುಲ್ತಾನಾ' ಎಂಬ ಮೃತ ಜ್ವಾಲಾಮುಖಿಯ ಪ್ರದೇಶದಲ್ಲಿ ದೊರೆತಿದ್ದು ಬಳಕೆ ಇಲಾಖೆಯನ್ನು ಭಾರತ ಗಣಿಶಾಖೆಯ ಪ್ರಮುಖರ ಕೈಗೆ ಕಾರ್ಯಾಚರಣೆಗಾಗಿ ನೀಡಲಾಗಿದೆ.

ಈ ಇಲಾಖೆಯು 'ಮೈಕಾ' ಉತ್ಪಾದನೆಗಳನ್ನು ಪ್ರೋತ್ಸಾಹಿಸುವಲ್ಲಿ ಸಹಕಾರಿಯಾಗಿದೆ. ಭೂಗರ್ಭ ಶಾಸ್ತ್ರದ ಹಿರಿಯ ಅಧಿಕಾರಿಯೊಬ್ಬರು ಇದರ ಮೇಲ್ವಿಚಾರಕರಾಗಿದ್ದಾರೆ. ಅವರು ಭಾರತದ ಭೂಗರ್ಭ ಸರ್ವೇಕ್ಷಣೆ ಇಲಾಖೆಗೆ ಸೇರಿದವರಾಗಿದ್ದಾರೆ. ಅವರಿಗೆ ಈ ನೂತನ ಅಭ್ರಕರ ಉತ್ಪಾದನೆಯ ಕಾರ್ಯವನ್ನು ವಹಿಸಲಾಗಿದೆ. ಅಭ್ರಕರ ಉತ್ಪಾದನೆಗೆ ಆವಶ್ಯಕವಾದ ಎಲ್ಲಾ ಸಹಾಯವನ್ನೂ ನೀಡುವಂತೆ ಈ ಶಾಖೆಗೆ ಆದೇಶಿಸಲಾಗಿದೆ.

ಈ ಶಾಖೆಯಿಂದ ತಾಮ್ರ, ವುಲ್‌ಫ್ರಮ್ ಮುಂತಾದ ಲೋಹಗಳ ಪರಿಶೋಧನೆಯ ಕಾರ್ಯ ತೀವ್ರವಾಗಿ ಕೈಗೆತ್ತಿಕೊಂಡಿದೆ.

ಈ ಕಾರ್ಯಾಚರಣೆಯ ಏಕೈಕ ಉದ್ದೇಶವೆಂದರೆ, ಯುದ್ಧದ ಅಗತ್ಯಗಳ ವಿಷಯದಲ್ಲಿ ಭಾರತವನ್ನು ಲೋಹಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯನ್ನಾಗಿ ಮಾಡುವುದಾಗಿದೆ.

ಊ) ಹೌದು; ವಿಜ್ಞಾನ – ಔದ್ಯೋಗಿಕ ಪರಿಶೋಧನೆಯ ವಾಣಿಜ್ಯೋದ್ಯಮದ ಹಿರಿಯ ಅಧಿಕಾರಿಗಳು ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಬರ್ಮಾ ಪ್ರಾಂತದಿಂದ ಹಲವು ನಿರಾಶ್ರಿತ ಬ್ರಿಟಿಷ್ ತಂತ್ರಜ್ಞಾನಿಗಳನ್ನು ಸ್ಥಳಾಂತರಿಸಲಾಯಿತೆಂದು ಮಾನ್ಯ ಸದಸ್ಯರು ಹೇಳಿದ್ದು ಅವರನ್ನು ಯಾವಾಗ ಸ್ಥಳಾಂತರಿಸಿದರು ಎಂಬುದನ್ನು ತಿಳಿಯಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ನನ್ನ ಉತ್ತರದಲ್ಲಿ ಇಬ್ಬರು ಇಂಜಿನಿಯರುಗಳ ಬಗೆಗೆ ಪ್ರಸ್ತಾಪಿಸಿರುವೆ. ಅವರು ಗಣಿ ಇಂಜಿನಿಯರುಗಳಾದ ಸರ್ವಶ್ರೀ ಸ್ಮಿಥ್ ಮತ್ತು ರೊಬಾಟ್ಸ್‌ರವರು. ಅವರುಗಳು ಗಣಿ ಇಲಾಖೆಯಲ್ಲಿ ಕಾರ್ಯಮಾಡುತ್ತಿದ್ದಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಅವರೆಲ್ಲರೂ ಬರ್ಮಾದಿಂದ ಬಂದವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಅವರೆಲ್ಲ ಬರ್ಮಾದಿಂದ ಹೊರಹಾಕಲ್ಪಟ್ಟವರು,

ಅವರಲ್ಲಿ ಈರ್ವರು ಇನ್ನೂ ತರಬೇತಿ ಹೊಂದುತ್ತಿರುವ ಇಂಡಿಯನ್ನರು. ಆಗ ತಾಂತ್ರಿಕ ಇಂಜಿನಿಯರಾಗಿದ್ದ ಶ್ರೀ ಸಯಮ್ಸರು ನಿರಾಶ್ರಿತರಾಗಿದ್ದರು. ಇಬ್ಬರು ಲೋಹದ ಇಂಜಿನಿಯರುಗಳಲ್ಲಿ ಒಬ್ಬರು ಭಾರತೀಯರು. ಅವರ ಹೆಸರು ನಾರಾಯಣ, ಮತ್ತೊಬ್ಬರ ಹೆಸರು ಫ್ಲೆಮಿಂಗ್. ಗಂಧಕಕ್ಕೆ ಸೇರಿದಂತೆ ಮೂರು ಜನ ಸರ್ವೇಯರುಗಳಿದ್ದು ಅವರೆಲ್ಲರೂ ಭಾರತೀಯರಾಗಿದ್ದಾರೆ. ಈ ದಿಶೆಯಲ್ಲಿ ನಾನು ಹೇಳಬಹುದಾದರೆ, ಈ ಬರ್ಮಾದ ನಿರಾಶ್ರಿತರಿಗೆ ಸೀಸ ಹಾಗೂ ಸತು ಲೋಹಗಳ ಮಾಹಿತಿ ವಿಶೇಷವಾಗಿದ್ದುದರಿಂದ ಅವರನ್ನು ನೇಮಿಸಿಕೊಳ್ಳಲಾಗಿದೆ. ಇವರೆಲ್ಲರೂ ಬರ್ಮಾದಲ್ಲಿಯ ಮಾಪ್ಚಿ ಗಣಿಗಳಿಗೆ ಸೇರಿದವರಾಗಿದ್ದಾರೆ. ಈ ಗಣಿಯು ಕೇವಲ ಸೀಸ ಹಾಗೂ ಸತು ಲೋಹದ ಗಣಿಗಳಾಗಿವೆ ಎಂಬುದು ಸ್ಮರಿಸಬೇಕಾದ ಸಂಗತಿ. ಬೇರೆ ಎಡೆಯಲ್ಲಿ ಪರಿಣಿತರು ದೊರೆಯದೇ ಹೋದ ಕಾರಣದಿಂದ ಇವರನ್ನೇ ಆಯ್ಕೆ ಮಾಡಲಾಗಿದೆ. ಈ ದಿಶೆಯಲ್ಲಿ ಇಲಾಖೆಯ ಧೋರಣೆ ಏನೆಂದರೆ, ಮೊದಲನೆಯದಾಗಿ ಅನುಭವಿ ಯುರೋಪಿಯನ್ನರನ್ನು ನೇಮಿಸಿಕೊಳ್ಳುವುದು ಅನಿವಾರ್ಯವಾಗಿದೆ; ಏಕೆಂದರೆ ಅವರಿಗೆ ಜಿಂಕ್ ಹಾಗೂ ಸೀಸ ಲೋಹಗಳ ಗಣಿಗಳ ಕ್ಷೇತ್ರದ ಜ್ಞಾನವಿದೆ. ಆದರೆ ಇಲಾಖೆಯು ಪ್ರತಿಯೋರ್ವ ಯುರೋಪಿಯನ್‌ನ ಅಡಿಯಲ್ಲಿ ಭಾರತೀಯರೊಬ್ಬರನ್ನು ನೇಮಿಸಿದ್ದು ಅವರು ಯುರೋಪಿಯನ್ನರಿಂದ ತಂತ್ರಜ್ಞಾನ ತಿಳಿದುಕೊಳ್ಳುವಂತೆ ಅನುಕೂಲ ಮಾಡಿದೆ. ಯುರೋಪಿಯನ್ನರ ಸ್ಥಾನ ತೆರವು ಮಾಡಿದಾಗ ಭಾರತೀಯರಿಂದ ಆ ಸ್ಥಾನವನ್ನು ತುಂಬಲಾಗುವುದು.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಮಾನ್ಯ ಸದಸ್ಯರು ಹೇಳಿದಂತೆ ಶ್ರೀ ಕೌವೆನ್ ಅವರನ್ನು ಮೇ ೧೯೪೨ರ ಅಂತ್ಯದಲ್ಲಿಯೇ ನೇಮಿಸಿಕೊಳ್ಳಲಾಗಿದೆ. ಆದರೆ ಈ ಬ್ರಿಟಿಷ್ ಅಧಿಕಾರಿಗಳನ್ನೇ ನೇಮಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಅರಿವಾದುದು ಯಾವಾಗ? ಅದು ಅವರು ಯುದ್ಧಭೂಮಿಯಿಂದ ಮರಳಿ ಬಂದ ಮೇಲೆಯೇ? ಅಥವಾ ಅವರು ನಿರುದ್ಯೋಗಿಗಳು ಎಂದು ಅವಕಾಶ ಮಾಡಿಕೊಡಲಾಯಿತೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ನಾನು ಉತ್ತರಿಸಲಾರೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಸರ್ಕಾರದ ದೃಷ್ಟಿಯಲ್ಲಿ ಈ ವಿಚಾರ ಎಂದು ಹೊಳೆಯಿತು? ಈ ಮುಂಚೆ ಅವರೆಲ್ಲಾ ಏನು ಮಾಡುತ್ತಿದ್ದರು?

**ಗೌರವಾನ್ವಿತ ಡಾ॥ ಬಿ.ಆರ್.ಅಂಬೇಡ್ಕರ್ :** ಬಹುಶಃ ಯಾವ ಬಾಹ್ಯ ಸಂಪರ್ಕವಿಲ್ಲದೆ ಆರಾಮಾಗಿದ್ದರೆಂದು ತೋರುತ್ತದೆ.

**ಸರದಾರ ಸಂತ್‌ಸಿಂಗ್ :** ಈ ವ್ಯಕ್ತಿಗಳನ್ನು ಗಣಿ ಕಾರ್ಯಗಳಲ್ಲಿ ಕೇವಲ ನಿರಾಶ್ರಿತರೆಂದು ತೆಗೆದುಕೊಳ್ಳಲಾಯಿತೇ ಅಥವಾ ಯುದ್ಧದ ಕಾರ್ಯಗಳಿಗೆ ಸಹಕರಿಸಲೆಂದು ತೆಗೆದುಕೊಳ್ಳಲಾಯಿತೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಖಂಡಿತ ಅಲ್ಲ. ಅವರಿಗೆ ಗಣಿಗಳ ಜ್ಞಾನವಿದ್ದು, ಭಾರತ ಸರ್ಕಾರಕ್ಕೆ ಅದರ ಆವಶ್ಯಕತೆ ಇದ್ದುದರಿಂದಲೇ ತೆಗೆದುಕೊಳ್ಳಲಾಯಿತು.

**ಶ್ರೀ ಕೆ.ಸಿ. ನಿಯೋಗಿ :** ಪ್ರಶ್ನೆಯ ವಿಧಿ (ಡಿ) ಬಗೆಗೆ ಮಾನ್ಯ ಸದಸ್ಯರು ಹೇಳಿದಂತೆ ಪೆಟ್ರೋಲಿಯಂ ಖನಿಜವನ್ನು ಕೈಬಿಡಲಾಗಿದೆ. ಆದರೆ ಈ ಕಾರ್ಯವನ್ನು ಇಲಾಖೆಯಿಂದ ಬೇರ್ಪಡಿಸಿ ಬೇರೆ ಯಾವುದಾದರೂ ಕಂಪನಿಗೆ ಈ ಪೆಟ್ರೋಲಿಯಂ ಅಭಿವೃದ್ಧಿ ಕಾರ್ಯವನ್ನು ನೀಡಲಾಗಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಖಂಡಿತವಾಗಿಯೂ ಇಲ್ಲ. ಸದ್ಯಕ್ಕೆ ಅದರ ಬಗೆಗೆ ನನ್ನ ಉತ್ತರವೆಂದರೆ ಪೆಟ್ರೋಲಿಯಂ ಸೇರ್ಪಡೆ ಆಗಿಲ್ಲ. ಅಂದಮಾತ್ರಕ್ಕೆ ಅದನ್ನು ಕಾರ್ಯಕ್ರಮದಿಂದ ಕೈಬಿಡಲಾಗಿದೆ ಎಂಬುದು ಸರಿಯಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಡಾ॥ ಫಾಕ್ಸ್ ಅವರು ಜುಲೈ ೬ರಂದೇ ಈ ಬಗ್ಗೆ ಹೇಳಿಕೆ ನೀಡಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ಮಾನ್ಯ ಮಿತ್ರರಿಗೆ ಹೇಳಬಯಸುವುದೇನೆಂದರೆ, ಡಾ॥ ಫಾಕ್ಸ್ ಅವರು ಭಾರತ ಸರ್ಕಾರದ ಧೋರಣೆಗಳನ್ನು ತೀರ್ಮಾನಿಸುವುದಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಆದರೆ ಡಾ॥ ಫಾಕ್ಸ್ ಅವರು ಸತ್ಯವನ್ನೇ ನುಡಿದಿರಬಹುದಲ್ಲವೇ? ಏನೇ ಇರಲಿ ನಾನು ಇನ್ನೊಂದು ಚಿಕ್ಕ ಪ್ರಶ್ನೆಯನ್ನು ಕೇಳಬಹುದೇ? ನಾನು ಮಾನ್ಯ ಮಿತ್ರರು ಹೇಳಿದಂತೆ ಉದಯಪುರ ದರ್ಬಾರನ್ನು, ತನ್ನ ರಾಜ್ಯದಲ್ಲಿಯ ಸತು ಹಾಗೂ ಸೀಸ ಗಣಿಗಳ ಬಗೆಗೆ ಇದ್ದ ಒಪ್ಪಂದವನ್ನು ರದ್ದುಗೊಳಿಸುವಂತೆ ಒತ್ತಾಯಿಸಲಾಯಿತು. ಈ ಕ್ರಮವು ಅಂದರೆ ಖಾಸಗಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ರದ್ದುಪಡಿಸಿ ಇಲಾಖೆಯ ಕಾರ್ಯಚಟುವಟಿಕೆಗೆ ಆಸ್ಪದನೀಡಿದ್ದು ಸೂಕ್ತವೇ? ರದ್ದುಪಡಿಸುವ ಮುನ್ನ ವಿವರಗಳನ್ನು ಪರಿಶೀಲಿಸಲಾಯಿತೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಈ ಪ್ರಶ್ನೆಗೆ ಉತ್ತರ ನೀಡಲು ಸಮಯ ಬೇಕು.

# ೩
# ಭಾರತಕ್ಕೆ ಮರಳಿದ "ಬೆವಿನ್ ಬಾಲಕರು" ಮತ್ತು ಅವರ ಉದ್ಯೋಗ *

೨೩. **ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಮಾನ್ಯ ಕಾರ್ಮಿಕ ಸದಸ್ಯರು; ಎಷ್ಟು "ಬೆವಿನ್ ಬಾಲಕರು" ಭಾರತಕ್ಕೆ ಬಂದಿದ್ದಾರೆ? ಹಾಗೂ ಅವರೆಲ್ಲರಿಗೂ ಉದ್ಯೋಗ ನೀಡಲಾಗಿದೆಯೇ? ಎಂಬುದನ್ನು ಹೇಳಬಲ್ಲರೇ? ಒಂದು ವೇಳೆ ಅವರಿಗೆ ಉದ್ಯೋಗ ನೀಡದೆ ಇದ್ದಲ್ಲಿ ಅದಕ್ಕೆ ಕಾರಣಗಳೇನು? ಅವರು ಕಾರ್ಮಿಕ ಸಂಘಗಳ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿರುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ೧೪೯ 'ಬೆವಿನ್ ಬಾಲಕರು' ಭಾರತಕ್ಕೆ ಮರಳಿದ್ದಾರೆ. ಅವರಲ್ಲಿ ೨೬ ಬಾಲಕರು ಸೆಪ್ಟೆಂಬರ್ ೫ರಂದು ಬಂದಿದ್ದು ಅವರನ್ನು ಪರೀಕ್ಷಾ ಮಂಡಳಿಯು ಪರೀಕ್ಷಿಸುತ್ತಿದೆ. ಮಿಕ್ಕ ೧೨೩ರಲ್ಲಿ ೧೦೫ ಬಾಲಕರಿಗೆ ಶೇಕಡಾ ೧೪೫ ಹೆಚ್ಚುವರಿ ವೇತನ ವಿರುವ ಹುದ್ದೆ ನೀಡಲಾಗಿದೆ. ಮಿಕ್ಕ ೧೮ರಲ್ಲಿ ೯ ಜನರಿಗೆ ಜುಲೈ ಅಂತ್ಯದೊಳಗೆ ಹುದ್ದೆಗಳನ್ನು ನೀಡಲಾಗುವುದು. ಇಬ್ಬರು ಕಾರ್ಖಾನೆಯಲ್ಲಿ ಕಾರ್ಯ ಮಾಡಲು ಸಿದ್ದರಿಲ್ಲ. ಹೀಗಾಗಿ ಅವರಿಗೆ ತುರ್ತು ಆಯೋಗದಡಿಯಲ್ಲಿ–ಒಬ್ಬರಿಗೆ ಭಾರತದ ನೌಕಾಪಡೆಯಲ್ಲಿ ಮತ್ತೊಬ್ಬರಿಗೆ ವಾಯುಪಡೆಯಲ್ಲಿ ನೌಕರಿ ನೀಡಲಾಗುವುದು. ೩ ಜನರು ತಮಗೆ ನೀಡಿದ್ದ ನೌಕರಿಯನ್ನು ತಿರಸ್ಕರಿಸಿರುವುದರಿಂದ ಅವರಿಗೆ ಬೇರೆ ಸೂಕ್ತ ಹುದ್ದೆಗಳನ್ನು ನೀಡುವ ಪ್ರಯತ್ನ ನಡೆಯುತ್ತಿದೆ.

ಒಬ್ಬರಿಗೆ ಹೆಚ್ಚುವರಿ ವೇತನ ನೀಡಿ ಅವರ ಮೂಲ ಹುದ್ದೆಗೇ ಮರಳಿ ಹೋಗುವಂತೆ ಹೇಳಲಾಗಿದೆ. ಇನ್ನೊಬ್ಬರನ್ನು ತರಬೇತಿ ಕೇಂದ್ರವೊಂದರಲ್ಲಿ ಬೆಸುಗೆ ಹಾಕುವ ಉದ್ಯೋಗವನ್ನು ನೀಡುವ ಬಗ್ಗೆ ಪರೀಕ್ಷಿಸಲಾಗುತ್ತಿದೆ ಮತ್ತೊಬ್ಬರು ತಮ್ಮ ಅವಧಿಯನ್ನು ಸರಿಯಾಗಿ ಮುಗಿಸದೇ ಇಂಗ್ಲೆಂಡಿನಿಂದ ಮರಳಿ ಬಂದಿರುವ ದುರ್ನಡತೆಗೆ ಗುರಿಯಾಗಿರುವುದರಿಂದ ಸದ್ಯ ಅವರ ಬಗೆಗೆ ಏನೂ ಹೇಳುವಂತಿಲ್ಲ.

ಕಾರ್ಮಿಕ ಸಂಘದ ಕಾರ್ಯಚಟುವಟಿಕೆಗಳಲ್ಲಿ ಅವರು ಭಾಗವಹಿಸುವರೇ ಎಂಬುದನ್ನು ಹೇಳಲು ಸಮಯ ಬೇಕು.

**ಶ್ರೀ ಗೋವಿಂದ ವಿ. ದೇಶಮುಖ್ :** ಅವರ ನಿರುದ್ಯೋಗವು ಅವರು ಕಾರ್ಮಿಕ ಸಂಘಗಳ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪರಿಣಾಮವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ತಾವು ಹಾಗೆ ಭಾವಿಸಬಹುದು. ಆದರೆ ಅದಕ್ಕೆ ಯಾವ ರುಜುವಾತುಗಳಿಲ್ಲ.

**ಶ್ರೀ ಗೋವಿಂದ ವಿ. ದೇಶ್‌ಮುಖ್ :** "ಬೆವಿನ್ ಬಾಲಕ"ರೆಲ್ಲರಿಗೂ ಉದ್ಯೋಗ ದೊರಕಿದ್ದರೆ, ಹಾಗೂ ಮರಳಿ ಬಂದ ಬೆವಿನ್ ಬಾಲಕರಲ್ಲಿ ಕೆಲವರಿಗೆ ಉದ್ಯೋಗ ದೊರಕಿದ್ದು ಕೆಲವರನ್ನು ಪರೀಕ್ಷೆಗೆ ಗುರಿಮಾಡಿರುವುದರಿಂದ, ಅವರು ಕಾರ್ಮಿಕ ಸಂಘದ ಕಾರ್ಯಾಚರಣೆಯಲ್ಲಿ ಆಸಕ್ತಿ ಹೊಂದಿದ್ದರು ಎಂದು ಹೇಳಬಹುದಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿಯೂ ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩ ೧೫–೯–೧೯೪೨, ಪು. ೧೧೨–೧೧೩

**ಶ್ರೀ ಗೋವಿಂದ ವಿ. ದೇಶ್‌ಮುಖ್ :** ಒಬ್ಬ 'ಬೆವಿನ್ ಬಾಲಕ'ನ ನಡತೆಯ ಬಗೆಗೆ ಬಂದಿರುವ ವರದಿ ಏನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸದ್ಯ ನನ್ನಲ್ಲಿ ಆ ಬಗೆಗೆ ಏನೂ ಮಾಹಿತಿ ಇಲ್ಲ. ಕಾಲಾವಕಾಶ ಬೇಕು.

**ಶ್ರೀ ಗೋವಿಂದ ವಿ. ದೇಶ್‌ಮುಖ್ :** ಕಾರ್ಮಿಕ ಸಂಘದ ಕಾರ್ಯಾಚರಣೆಯ ಕಾರಣವಿರಬಹುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಯುವಕನ ನಡತೆಯ ಬಗೆಗೆ ಪ್ರಸ್ತಾಪಿಸಿ ಅವನಿಗೆ ಇರಬಹುದಾದ ಅವಕಾಶವನ್ನು ಹಾಳುಮಾಡಬಾರದೆಂದೇ ನನ್ನ ಸಲಹೆ.

**ಶ್ರೀ ಗೋವಿಂದ ವಿ. ದೇಶ್‌ಮುಖ್ :** ಅವನ ದುರ್ನಡತೆಯ ಬಗೆಗೆ ಸರಕಾರಕ್ಕೆ ಬಂದಿರುವ ವರದಿಯ ವಿವರಗಳೇನು? ಅಲ್ಲದೇ ತಮ್ಮ ಸಲಹೆಯ ಹಿನ್ನೆಲೆ ಏನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸರಕಾರಕ್ಕೆ ವರದಿಗಳು ಬಂದಿರಬಹುದು, ಆದರೆ ಅವುಗಳ ವಿವರಗಳು ನನ್ನಲ್ಲಿಲ್ಲ. ಹೀಗಾಗಿ ಸಮಯಾವಕಾಶ ನೀಡಿದಲ್ಲಿ ಅರಿಯಬಹುದು.

**ಡಾ॥ ಸರ್ ಜಿಯಾಉದ್ದೀನ್ ಅಹಮದ್ :** ಈ 'ಬೆವಿನ್ ಬಾಲಕರು' ಕಾರ್ಮಿಕ ಹಿನ್ನೆಲೆಯ ಕುಟುಂಬದವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲಾಖೆಯು ಇದನ್ನು ಪರಿಶೀಲಿಸುತ್ತಿದೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** 'ಬೆವಿನ್ ಬಾಲಕರು' ಇಂಗ್ಲೆಂಡಿನಲ್ಲಿ ತರಬೇತಿ ಪಡೆದು ಬಂದಿರುವುದರಿಂದ ಅವರನ್ನು ಪರೀಕ್ಷೆಗೆ ಗುರಿ ಮಾಡುವ ಕಾರಣವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನೌಕರಿ ನೀಡುವ ಅನೇಕರು ಭಾರತ ಸರಕಾರದ ಪರವಾಗಿ ತರಬೇತಿ ಹೊಂದಿರುವ ಸಂಗತಿಯನ್ನು ಮೆಚ್ಚದೇ ಹೋಗಿರುವುದರಿಂದ ಹಾಗೂ ಹುದ್ದೆ ನೀಡುವ ಮುನ್ನ ಸಂಗತಿಯನ್ನು ಮೆಚ್ಚದೇ ಹೋಗಿರುವುದರಿಂದ ಹಾಗೂ ಹುದ್ದೆ ನೀಡುವ ಮುನ್ನ ತರಬೇತಿಯನ್ನು ಸರಿಯಾಗಿ ಪಡೆದಿದ್ದಾರೆಯೇ ಎಂಬುದನ್ನು ಮಾಲೀಕರು ಪರಿಶೀಲಿಸಬಹುದಲ್ಲವೇ? ಈ ದಿಶೆಯಲ್ಲಿ ಮಾಲೀಕರ ಮೇಲೆ ನಿರ್ಬಂಧ ಹೇರುವುದು ಉಚಿತವಲ್ಲ.

# ೪
# ಕಾರ್ಮಿಕರ ಕೂಲಿಯಲ್ಲಿ ಇಳಿತ*

**೨೭. ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಅ) ಮಾನ್ಯ ಸದಸ್ಯರು, ಆಹಾರ ದಿನಸಿ ಹಾಗೂ ಜವಳಿ ವಸ್ತುಗಳ ಬೆಲೆ ಏರಿಕೆಯಿಂದಾಗಿ, ಜೀವನದ ವೆಚ್ಚ ಏರಿದ ಈ ಹಿನ್ನೆಲೆಯಲ್ಲಿ ಕೂಲಿಕಾರರ ಕೂಲಿಯಲ್ಲಿ ಆಗಿರಬಹುದಾದ ಇಳಿತವನ್ನು ತಿಳಿದುಕೊಂಡಿದ್ದರೆ, ಮತ್ತು ಜೀವನ ವೆಚ್ಚದ ಮಟ್ಟವನ್ನು ತಿಳಿಸುವಿರಾ?

ಆ) ರೈಲ್ವೆ ಕಾರ್ಮಿಕರಿಗೆ ನೀಡಿರಬಹುದಾದ ತುಟ್ಟಿಭತ್ಯೆ ಹಾಗೂ ಯುದ್ಧ ಬೋನಸ್‌ಗಳು, ಕೂಲಿಯಲ್ಲಿ ಆಗಿರಬಹುದಾದ ಇಳಿತದಿಂದಾಗಿ ಸರಿದೂಗುತ್ತಿಲ್ಲ.

ಇ) ನಾನು ಮೇಲೆ ಕೇಳಿರುವ ಪ್ರಶ್ನೆಗೆ ಉತ್ತರ ಹೌದು ಎಂದಾದರೆ ಮಾನ್ಯ ಸದಸ್ಯರು, ರೈಲ್ವೇ ಕಾರ್ಮಿಕರ ಕೂಲಿಯನ್ನು ಮರು ಪರಿಶೀಲಿಸುವರೆ?

ಈ) ಯುದ್ಧ ಸಮಯದಲ್ಲಿ, ಸರ್ಕಾರದವರು ಕೈಗೆತ್ತಿಕೊಂಡಿದ್ದ, ಆಹಾರ ಹಾಗೂ ಬಟ್ಟೆಗಳನ್ನು, ರೈಲ್ವೆ ಕೂಲಿಯವರ ಆದಾಯಕ್ಕೆ ಅನುಗುಣವಾಗಿ ಸರಬರಾಜು ಮಾಡುವ ಕ್ರಮವನ್ನು ಅದು ತೃಪ್ತಿಕರವಾಗಿ ಸಾಗಿದ್ದಲ್ಲಿ, ಮುಂದುವರಿಸುವರೆ?

ಉ) ಮಾನ್ಯ ಸದಸ್ಯರು ಸರ್ಕಾರದ ಅಧೀನದಲ್ಲಿರುವ ರೈಲ್ವೇ ಹಾಗೂ ಖಾಸಗಿ ಒಡೆತನದಲ್ಲಿರುವ ರೈಲ್ವೇ ಕರ್ಮಚಾರಿಗಳ ಕೂಲಿ, ಜವಳಿ ಗಿರಣಿಗಳ ಕರ್ಮಚಾರಿಗಳ ಕೂಲಿ, ಸೆಣಬು ಮಿಲ್ ಕಾರ್ಮಿಕರ ಹಾಗೂ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳ ಮಜದೂರರ ಕೂಲಿ ಹಾಗೂ ವಾರದಲ್ಲಿ ಅವರು ಎಷ್ಟು ಗಂಟೆಗಳು ದುಡಿಯುತ್ತಾರೆ ಎಂಬ ಸಂಗತಿಯ ಬಗೆಗೆ ಸ್ಥೂಲ ತುಲನಾತ್ಮಕ ವಿವರಣೆಯನ್ನು ನೀಡುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಭಾರತಾದ್ಯಂತ ಜೀವನಮಟ್ಟದ ಬೆಲೆಯಲ್ಲಿ ಏರಿಕೆಯಾಗಿಲ್ಲ. ಕೆಲವು ಮಹಾನಗರಗಳಲ್ಲಿ ಮಾತ್ರ ಬೆಲೆ ಏರಿಕೆಯಾಗಿದೆ. ಒಂದೇ ಕೇಂದ್ರದಲ್ಲಿಯ ವಿವಿಧ ವರ್ಗಗಳ ನೌಕರಿದಾರರ ವೇತನಗಳು ಇರುವುದರಿಂದ ಬೇರೆ ಬೇರೆ ಸ್ಥಳಗಳಲ್ಲಿಯ ವಿವಿಧ ನೌಕರಿದಾರರ ವೇತನಗಳಲ್ಲಿ ಆಗಿರಬಹುದಾದ ಇಳಿಕೆಯನ್ನು ತಿಳಿಸುವುದು ತುಂಬಾ ಕಠಿಣವಾದ ಕಾರ್ಯವಾಗಿದ್ದು ಉತ್ತರ ನೀಡುವುದು ಸಾಧ್ಯವಾಗದೇ ಹೋಗಬಹುದು. ಆದರೆ ಮಾನ್ಯ ಸದಸ್ಯರು ಕೇಳಿದ ಬಗೆಗೆ ಅಂಕಿ ಅಂಶಗಳೇನಾದರೂ ದೊರೆಯುವಂತಿದ್ದರೆ ಖಂಡಿತ ಪ್ರಯತ್ನಿಸುವೆ.

ಆ) ಇಲ್ಲ, ನನಗೆ ತಿಳಿದಿರುವಂತೆ ಕಡಿಮೆ ವೇತನದವರಿಗೆ ದೊರೆಯುವ ತುಟ್ಟಿಭತ್ಯೆಯು, ಅಧಿಕ ಜೀವನಮಟ್ಟದಲ್ಲಿ ಉಂಟಾಗಿರುವ ಬೆಲೆ ಏರಿಕೆಗೆ ಸರಿದೂಗುತ್ತದೆ. ಆದರೆ ಅಧಿಕ ವೇತನದವರಿಗೆ ಇದು ಅನ್ವಯಿಸದೇ ಹೋಗಬಹುದು.

ಇ) ನನಗೆ ತಿಳಿದಿರುವ ತುಟ್ಟಿಭತ್ಯೆಯನ್ನು ಈಚೆಗೆ ಅಧಿಕಗೊಳಿಸಿರುವುದರಿಂದ ಅಖಿಲ ಭಾರತ ರೈಲ್ವೆ ಕಾರ್ಮಿಕರಿಗೆಂದೇ ಅದನ್ನು ಪರಿಷ್ಕರಿಸುವುದು ಸಮಂಜಸವಾಗಲಾರದು.

ಈ) ಧಾನ್ಯದ ವಿತರಣೆಗೆಂದೇ ಅಂಗಡಿಗಳನ್ನು ತೆರೆಯಲಾಗಿದೆ ಮತ್ತು ತೆರೆಯಲಾಗುವುದು.

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೫ ಸೆಪ್ಟೆಂಬರ್ ೧೯೪೨, ಪು. ೧೧೫-೧೧೭.

ಹೀಗಾಗಿ ರೈಲ್ವೇ ಕರ್ಮಚಾರಿಗಳಿಗೆಂದೇ ಆಡಳಿತವು, ಹೆಚ್ಚು ಅಂಗಡಿಗಳನ್ನು ತೆರೆಯಬಹುದು. ಈ ಅಂಗಡಿಗಳಲ್ಲಿ ವಸ್ತುಗಳನ್ನು ಪ್ರಾಂತೀಯ ಸರ್ಕಾರಗಳು ನಿಗದಿಪಡಿಸಿದ ನಿಯಂತ್ರಿತ ಬೆಲೆಯಲ್ಲಿ ಮಾರಲಾಗುವುದು. ಯುದ್ಧದ ಸಮಯ ಮುಗಿಯುವವರೆಗೂ ಈ ವಿಧವಾದ ಅಂಗಡಿಗಳನ್ನು ನಡೆಸಲಾಗುವುದು. ರೈಲ್ವೆ ಕಾರ್ಮಿಕರಿಗೆಂದೇ ಬಟ್ಟೆಯ ಅಥವಾ ವಸ್ತ್ರಾಲಯಗಳನ್ನು ತೆರೆದಿಲ್ಲ.

ಉ) ವಿಶಾಲ ತುಲನಾತ್ಮಕ ವಿಧಾನವನ್ನು ವಿಶಿಷ್ಟ ವರ್ಗದ ನೌಕರಿದಾರರ ಬಗೆಗೆ ಅನುಸರಿಸುವುದು ಸುಲಭವಲ್ಲ.

**ಶ್ರೀ ಮಹಮದ್ ನೌಮಾನ್ :** ೧೯೩೯ರಿಂದ ಬೆಲೆ ಏರಿಕೆಯಾಗಿಲ್ಲ ಎಂಬ ಸರ್ಕಾರದ ವಾದವು ಸರಿ ಎಂದು ಸದಸ್ಯರು ಹೇಳುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದು ಸರ್ಕಾರದ ನಿಲುವಾಗಿಲ್ಲ. ಸರ್ಕಾರ ಹೇಳುವುದೇನೆಂದರೆ ಒಂದೇ ರೀತಿಯಲ್ಲಿ ಬೆಲೆ ಏರಿಕೆ ಆಗಿಲ್ಲ ಎಂದು.

**ಮಹಮದ್ ನೌಮಾನ್ :** ಬೆಲೆ ಏರಿಕೆಯ ಬಗೆಗೆ ಒಂದು ಸಮಾಲೋಚನೆ ಬೇಕು. ಈ ದಿಶೆಯಲ್ಲಿ ಸರ್ಕಾರದವರು, ಎಲ್ಲಾ ವಸ್ತುಗಳ ಬೆಲೆ ಏರಿಕೆಯ ೫೦% ಆದರೂ ಆಗಿದೆ ಎಂಬುದನ್ನು ಒಪ್ಪುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಬೆಲೆ ಏರಿಕೆಯಾಗಿದೆ ಎಂದು ಹೇಳುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ೫೦% ಎಂದು ಹೇಳಲಾರೆ.

**ಮಹಮದ್ ನೌಮಾನ್ :** ಸರ್ಕಾರವು ದೂರುಗಳ ಬಗೆಗೆ ವಿಚಾರಣೆ ನಡೆಸಬಲ್ಲದೇ? ಹಾಗೂ ದೂರುಗಳು ನಿಜವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಚಾರಣೆ ಬಗೆಗೆ ನಾನು ಬದ್ಧನಲ್ಲ. ಏಕೆಂದರೆ ಅದಕ್ಕೆ ಹೆಚ್ಚುವರಿ ಸಮಯ ಹಾಗೂ ಸಿಬ್ಬಂದಿ ಬೇಕಾಗುವುದರಿಂದ ಸರ್ಕಾರ ಒಪ್ಪದೇ ಇರಬಹುದು.

**ಮಹಮದ್ ನೌಮಾನ್ :** ಈಗಾಗಲೇ ಮೂರು ವರ್ಷಗಳು ಸಂದುಹೋಗಿವೆ. ಇಷ್ಟು ಸಮಯದೊಳಗೆಯೇ ಸರ್ಕಾರಕ್ಕೆ ಸಮಾಚಾರವು ತಿಳಿದಿರಬೇಕಾಗಿತ್ತಲ್ಲವೇ?

**ಮಾನ್ಯ ಅಧ್ಯಕ್ಷ** (ಗೌರವಾನ್ವಿತ ಅಬ್ದುರ್ ರಹೀಮ್) **:** ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ನೀಡುತ್ತಿದ್ದಾರೆ.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಈಗ ನೀಡುತ್ತಿರುವ ತುಟ್ಟಿಭತ್ಯೆಯನ್ನು ಭಾರತ ಸರ್ಕಾರದ ಇತರ ಇಲಾಖೆಗಳಿಗೂ ವಿಸ್ತರಿಸಲಾಗುವುದೇ? ವಿಶೇಷವಾಗಿ ಅಂಚೆ ಇಲಾಖೆಗೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ವಿಷಯದ ಬಗ್ಗೆ ಸಂಬಂಧಿಸಿದ ಇಲಾಖೆಯವರನ್ನು ಕೇಳಬಹುದು.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಈ ಪ್ರಶ್ನೆಯು ರೈಲ್ವೆಗೇ ಸಂಬಂಧಿಸಿದೆ. ಆದರೆ ನನ್ನ ಮಾನ್ಯ ಮಿತ್ರರು ಇದು ಕಾರ್ಮಿಕ ಇಲಾಖೆಗೆ ಸೇರಿದೆ ಎಂದು ಭಾವಿಸಿದ್ದಾರೆ. ರೈಲ್ವೆ ಇಲಾಖೆಯ ಸ್ಥಿತಿಗತಿಗಳು ಬೇರೆ ಇಲಾಖೆಗಳಿಗೂ ಅನ್ವಯಿಸುವುದಿಲ್ಲವೇ ಎಂದು ಅರಿಯಬೇಕೆಂದಿರುವೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಭಾರತ ಸರ್ಕಾರದ ಎಲ್ಲಾ ಕರ್ಮಚಾರಿಗಳಿಗೂ ತುಟ್ಟಿಭತ್ಯೆಯನ್ನು ನೀಡಲಾಗಿದೆ.

**ಮಹಮದ್ ನೌಮಾನ್ :** ಉಪಪ್ರಶ್ನೆ (ಈ) ಸೇರಿದಂತೆ ೧೯೩೯ ಹಾಗೂ ೧೯೪೦ರ ಮಾರಾಟ ಬೆಲೆ ಹಾಗೂ ಇಂದಿನ ಸರಕುಗಳ ಮಾರಾಟ ಬೆಲೆಗಳನ್ನು ಸರ್ಕಾರವು ತುಲನಾತ್ಮಕವಾಗಿ ಪರಿಶೀಲಿಸಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ವಿಧವಾದ ಶೇಕಡಾವಾರು ಪರಿಶೀಲನೆಯು ಅನಾವಶ್ಯಕವೆಂದೇ ನನ್ನ ಭಾವನೆ.

**ಮಹಮದ್ ನೌಮಾನ್ :** ಹಾಗಾದರೆ ಶೇಕಡಾವಾರು ತುಟ್ಟಿಭತ್ಯೆಯನ್ನು ಎಷ್ಟು ನೀಡುವುದು ಎಂಬುದನ್ನು ಹೇಗೆ ತಿಳಿಯಲು ಸಾಧ್ಯ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸರಕಾರಕ್ಕೆ ಬೆಲೆ ಏರಿಕೆ ಆಗಿದೆ ಎಂದು ತಿಳಿದರೆ ಸಾಕು. ಆ ಸಂದರ್ಭಗಳಲ್ಲಿ ತುಟ್ಟಿಭತ್ಯೆ ಹೆಚ್ಚು ನೀಡಬಹುದೇ ಎಂಬುದನ್ನು ನಿರ್ಣಯಿಸಲಾಗುವುದು.

**ಕ್ವಾಜಿ ಮಹಮದ್ ಅಹಮದ್ ಕಾಜ್‌ಮಿ :** ಯಾವ ಪ್ರದೇಶಗಳಲ್ಲಿ ಅತಿ ಕಡಿಮೆ ಬೆಲೆಗಳಿವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದನ್ನು ವಿವರಿಸಲು ಸಮಯಾವಕಾಶಬೇಕು.

## ೫
## ನಾಗರಿಕ ನೇತೃತ್ವ ಘಟಕಗಳಲ್ಲಿ ಪರಿಶಿಷ್ಟ ಜಾತಿಗೆ ಪ್ರಾತಿನಿಧ್ಯ*

**ರಾವ್‌ಬಹದ್ದೂರ್ ಎನ್. ಶಿವರಾಜ :** ಅ) ಮಾನ್ಯ ಕಾರ್ಮಿಕ ಸದಸ್ಯರು, ನಾಗರಿಕ ನೇತೃತ್ವದ ಘಟಕಗಳನ್ನು ವಿವಿಧ ಸ್ಥಳಗಳಲ್ಲಿ ಎಷ್ಟು ಹೆಚ್ಚಿಸಲಾಗಿದೆ ಎಂಬುದನ್ನು ತಿಳಿಸುವಿರಾ?

ಆ) ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗಗಳಲ್ಲಿ ಎಷ್ಟು ಜನ ಪರಿಶಿಷ್ಟಜಾತಿಯವರಿದ್ದಾರೆ?

ಇ) ಪರಿಶಿಷ್ಟಜಾತಿಯವರಿಲ್ಲದಿದ್ದರೆ ಅದಕ್ಕೆ ಕಾರಣಗಳನ್ನು ವಿವರಿಸುವಿರಾ?

ಈ) ಅವರಿಗೆ ಸೂಕ್ತ ಪ್ರಮಾಣದ ಪಾಲನ್ನು ನೀಡುವ ದಿಶೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮೊದಲ ಬಾರಿಗೆ ೧೨ ನಾಗರಿಕ ನೇತೃತ್ವ ಘಟಕಗಳನ್ನು ಸ್ಥಾಪಿಸಿದ ವಿವರಗಳು ಹೀಗಿವೆ :

ಆ) ಬಂಗಾಳ ೨%, ಬೊಂಬಾಯಿ ೧೦.೫%, ಪಂಜಾಬ್ ೨೩%, ಮಧ್ಯ ಪ್ರಾಂತಗಳು ಮತ್ತು ಬಿಹಾರ್ ೨೬%, ಉ. ಪ್ರದೇಶ ೨೦%, ಮದ್ರಾಸ್ ವಿವರ ತಿಳಿದಿಲ್ಲ. ವಾಯುವ್ಯ ಸರಹದ್ದು ಪ್ರಾಂತದಲ್ಲಿ ಎಲ್ಲರೂ ಮುಸ್ಲಿಮರು. ಮುಂದೆ ಭರ್ತಿ ಮಾಡುವುದರಿಂದ ಈ ಸಂಖ್ಯೆಗಳಲ್ಲಿ ಬದಲಾವಣೆ ಆಗಬಹುದು. ಈವರೆಗೆ ದೊರೆತಿರುವ ಮಾಹಿತಿಯಂತೆ ಕೇವಲ ಒಬ್ಬ ಪರಿಶಿಷ್ಟ ಜಾತಿಯ ಮೇಲಧಿಕಾರಿ ಇದ್ದಾರೆ.

ಇ) ೧೯೪೨ರ ೧೦ನೆಯ ಸುಗ್ರೀವಾಜ್ಞೆಯ ಮೇರೆಗೆ ನಾಗರಿಕ ನೇತೃತ್ವದ ಘಟಕಗಳನ್ನು ವಿಸ್ತರಿಸುವ ಅಧಿಕಾರವನ್ನು ಪ್ರಾಂತೀಯ ಸರ್ಕಾರಗಳಿಗೇ ವಹಿಸಿಕೊಡಲಾಗಿದೆ. ಹೀಗಾಗಿ ಅವುಗಳ ರಚನೆಯ ಕಾರ್ಯ ಅವರಿಗೆ ಸೇರಿದೆ.

ಈ) ಭಾರತ ಸರಕಾರವು, ಪ್ರಾಂತೀಯ ಸರ್ಕಾರಗಳೊಂದಿಗೆ ಸಂಪರ್ಕ ಹೊಂದಿದ್ದು, ಆಯಾ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೯೪೨, ಸೆಪ್ಟೆಂಬರ್ ೨೨, ಪು. ೩೮೬–೮೬

ಪ್ರಾಂತಗಳಲ್ಲಿಯ ಪರಿಶಿಷ್ಟ ಜಾತಿಯವರ ಸಂಖ್ಯೆಗಳ ಆಧಾರದ ಮೇಲೆ ನಾಗರಿಕ ನೇತೃತ್ವ ಘಟಕಗಳಲ್ಲಿ ಪ್ರಾತಿನಿಧ್ಯವನ್ನು ನೀಡಬೇಕೆಂದು ತಿಳಿಸಿದೆ. ಶೇಕಡಾವಾರು ಪ್ರಾತಿನಿಧ್ಯ ಕಡಿಮೆ ಇದ್ದಲ್ಲಿ ಅದನ್ನು ಹೆಚ್ಚಿಸಬೇಕೆಂದೂ ತಿಳಿಸಿದೆ.

**ಎನ್.ಎಂ. ಜೋಷಿ :** ನಾಗರಿಕ ನೇತೃತ್ವ ದಳದ ಕಾರ್ಯಗಳೇನು ಎಂದು ತಿಳಿಯಬಹುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ದಳದ ಕಾರ್ಯವು ಅಗ್ನಿಶಾಮಕ ದಳದಂತಿದ್ದು ವಿಮಾನ ದಾಳಿಗಳಾದಾಗ ಹಾಗೂ ನಾಗರಿಕ ಸ್ವತ್ತಿಗೆ ಹಾನಿಯುಂಟಾದ ಸಮಯದಲ್ಲಿ ನಾಗರಿಕ ನೇತೃತ್ವದಳದವರು ರಕ್ಷಣಾ ಕಾರ್ಯಗಳಲ್ಲಿ ನೆರವಾಗುತ್ತಾರೆ.

## ೬
## ಕಾರ್ಮಿಕರ ಕೂಲಿ ಹಾಗೂ ನೇಮಕಾತಿಯ ಬಗೆಗೆ ಸರ್ಕಾರದಿಂದ ಗುತ್ತಿಗೆದಾರರಿಗೆ ವಿಧಿಸಲಾದ ಕರಾರುಗಳು*

**ರಾವ್‌ಬಹದ್ದೂರ್ ಎನ್. ಶಿವರಾಜ :** ಮಾನ್ಯ ಕಾರ್ಮಿಕ ಸದಸ್ಯರಿಗೆ ತಿಳಿದಿರುವಂತೆ ಪಾಶ್ಚಿಮಾತ್ಯ ದೇಶಗಳಲ್ಲಿ ಗುತ್ತಿಗೆದಾರರಿಗೆ ಅನ್ವಯವಾಗುವಂತೆ ಕಾರ್ಮಿಕರ ಕೂಲಿ ಹಾಗೂ ವೇತನದ ಬಗೆಗೆ ಹಲವಾರು ಕರಾರುಗಳನ್ನು ರಚಿಸಲಾಗಿದೆ. ಅದರಂತೆಯೇ ಭಾರತ ಸರ್ಕಾರವೇನಾದರೂ ಕರಾರುಗಳನ್ನು ಗುತ್ತಿಗೆದಾರರಿಗೆ ರಚಿಸಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು. ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಗುತ್ತಿಗೆದಾರರಿಗೆ ಅನ್ವಯವಾಗುವಂತೆ ಕಾರ್ಮಿಕರ ಹಿತಕ್ಕಾಗಿ, ಸಾಮಾನ್ಯವಾಗಿ ನಿಗದಿತ ಗಂಟೆಗಳ ಕಾರ್ಯ ಹಾಗೂ ಕೂಲಿಯ ಬಗೆಗೆ ನಿಯಮಗಳನ್ನು ರಚಿಸಿವೆ. ಭಾರತ ಸರ್ಕಾರವೂ ಕೂಡ ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯ ಗುತ್ತಿಗೆದಾರರು ತಮ್ಮ ಸುತ್ತಮುತ್ತಲಿನ ಕಾರ್ಯಕ್ಷೇತ್ರಗಳಲ್ಲಿ ನೀಡಲಾಗುವ ಕೂಲಿಯನ್ನೇ ನೀಡಬೇಕೆಂದು ನಿಯಮ ರಚಿಸಿದೆ.

**ರಾವ್‌ಬಹದ್ದೂರ್ ಶಿವರಾಜ :** ಸರಕಾರ ನಿಯಮ ರಚಿಸಿರುವುದೇ ಆದರೆ ಗುತ್ತಿಗೆಯ ವಿಧಿ ವಿಧಾನಗಳೇನು ? ಈ ದಿಶೆಯಲ್ಲಿ ಸರಕಾರ ಕೈಕೊಂಡ ಕ್ರಮವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ವಿಚಾರಿಸಿ ಮಾನ್ಯ ಸದಸ್ಯರಿಗೆ ಉತ್ತರ ಹೇಳಬಯಸುತ್ತೇನೆ.

**ಎನ್.ಎಂ. ಜೋಷಿ :** ಈ ನ್ಯಾಯಯುತ ನಿಯಮಗಳು ಭಾರತ ಸರ್ಕಾರದ ಬೇರೆ ಇಲಾಖೆಗಳಿಗೆ ಅದರಲ್ಲಿಯೂ ಸರಬರಾಜು ಇಲಾಖೆಯ ಗುತ್ತಿಗೆದಾರರಿಗೂ ಅನ್ವಯಿಸುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಈ ದಿಶೆಯಲ್ಲಿ ಸೂಚನೆ ನೀಡಿದಲ್ಲಿ ನಾನು ವಿಚಾರಿಸುವೆ.

**ಎನ್. ಎಂ. ಜೋಷಿ :** ಸಾರ್ವಜನಿಕ ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಗುತ್ತಿಗೆದಾರರ ಬಗೆಗೆ ಕೇಳಲಾದ ಪ್ರಶ್ನೆಗೆ ಮಾತ್ರ ಮಾನ್ಯ ಸದಸ್ಯರು ಉತ್ತರಿಸಿದ್ದು ಭಾರತ ಸರ್ಕಾರದ ಬಗೆಗೆ ಉತ್ತರಿಸಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ૩, ೨೨ ಸೆಪ್ಟೆಂಬರ್ ೧೯೪೨, ಪು. ೩೮೬

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸಂಬಂಧಪಟ್ಟ ಇಲಾಖೆಗೆ ಪ್ರಶ್ನೆಗಳನ್ನು ಮಾತ್ರ ಕೇಳಬಹುದು.

**ಎನ್.ಎಂ. ಜೋಷಿ :** ನಾನು ಕೇಳಬಯಸುವುದೇನೆಂದರೆ ಭಾರತ ಕೇಂದ್ರ ಸರ್ಕಾರವಿದೆಯೇ ಅಥವಾ ಕೇವಲ ಹತ್ತಾರು ಸದಸ್ಯರಿಂದ ಕೂಡಿ ಕೇಂದ್ರ ಸರಕಾರವಿದೆಯೇ?

**ಮಾನ್ಯ ಅಧ್ಯಕ್ಷ** (ಗೌರವಾನ್ವಿತ ಅಬ್ದುರ್ ರೆಹಮಾನ್) : ಸಂಬಂಧಿಸಿದ ಇಲಾಖೆಗಳಿಗೆ ಪ್ರಶ್ನೆ ಹಾಕಬಹುದು ಎಂಬ ವಿಷಯ ಮಾನ್ಯ ಸದಸ್ಯರಿಗೆ ತಿಳಿದೇ ಇದೆ.

## ೭

## ಇಂಗ್ಲೆಂಡಿನಲ್ಲಿಯ ತರಬೇತಿಗೆ ಆಯ್ಕೆಯಾದ ಬೆವಿನ್ ಬಾಲಕರು *

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಮಾನ್ಯ ಕಾರ್ಮಿಕ ಸದಸ್ಯರು ಇಂಗ್ಲೆಂಡಿನಲ್ಲಿಯ ತರಬೇತಿಗೆಂದೇ ಆಯ್ಕೆಯಾದ ಬೆವಿನ್ ಬಾಲಕರ ಸಂಖ್ಯೆಯನ್ನು ಸೂಚಿಸುವರೇ? ಅವರಲ್ಲಿ ೧. ಮುಸ್ಲಿಂ ಮತ್ತು ಪರಿಶಿಷ್ಟ ವರ್ಗದವರಿಗೆ ಸೇರಿದವರೆಷ್ಟು? ೨. ಆಯ್ಕೆಗಾಗಿ ಸರಕಾರದವರು ಯಾವ ಅರ್ಹತೆಗಳನ್ನು ನಿರ್ಧರಿಸಿದ್ದರು? ಅವರೆಲ್ಲರೂ ಕಾರ್ಖಾನೆಗೆ ಸೇರಿದ ದಿನಕೂಲಿಗಳೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಬ್ರಿಟನ್‌ನಲ್ಲಿಯ ಬೆವಿನ್ ಶಾಲೆಯಲ್ಲಿ ತರಬೇತಿಗೆಂದೇ ಈವರೆಗೆ ೩೦೪ ಬಾಲಕರನ್ನು ಆಯ್ಕೆ ಮಾಡಲಾಗಿದೆ. ಈವರೆಗೆ ೫ ತಂಡಗಳನ್ನು ಕಳುಹಿಸಲಾಗಿದ್ದು ಒಂದು ೪೪ ರ ತಂಡವಿದ್ದು, ಮಿಕ್ಕ ನಾಲ್ಕು ೫೦ರ ತಂಡಗಳು. ಈ ಮುಂದಿನ ಪಟ್ಟಿಯಲ್ಲಿ ಈಗಾಗಲೇ ಕಳಿಸಿದ ೫ ಹಾಗೂ ಈಗ ಕಳಿಸಲಿರುವ ೬ನೆಯ ತಂಡಗಳ ಜಾತಿವಾರು ವಿವರಗಳಿವೆ. ೩೦೪ರಲ್ಲಿ ೫೦ ಮುಸ್ಲಿಮರನ್ನು ಕಳಿಸಲಾಗಿದೆ.

| | ೧ | ೨ | ೩ | ೪ | ೫ | ೬ | ಒಟ್ಟು |
|---|---|---|---|---|---|---|---|
| ಹಿಂದೂಗಳು | ೨೧ | ೨೫ | ೨೭ | ೨೯ | ೨೬ | ೩೪ | ೧೬೨ |
| ಮುಸ್ಲಿಮರು | ೧೩ | ೯ | ೮ | ೮ | ೮ | ೪ | ೫೦ |
| ಆಂಗ್ಲೋ ಇಂಡಿಯನ್ನರು | ೪ | ೫ | ೪ | ೩ | ೭ | ೩ | ೨೬ |
| ಇಂಡಿಯನ್ ಕ್ರಿಶ್ಚಿಯನ್ನರು | ೪ | ೭ | ೬ | ೮ | ೪ | ೪ | ೩೩ |
| ಪಾರ್ಸಿಗಳು | ೬ | ೩ | ೩ | ೩ | ೧ | ೩ | ೧೯ |
| ಸಿಖ್ಖರು | ೨ | ೧ | ೨ | ೩ | ೪ | ೨ | ೧೪ |
| | ೫೦ | ೫೦ | ೫೦ | ೫೪ | ೫೦ | ೫೦ | ೩೦೪ |

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧೯೪೨ ಸೆಪ್ಟೆಂಬರ್ ೨೩, ಪು. ೪೫೫–೫೬

೫ ತಂಡಗಳಿಗೆ ಸೇರಿದಂತೆ ಪರಿಶಿಷ್ಟ ವರ್ಗದ ತರಬೇತಿ ವಿವರಣೆಗಳು ದೊರೆಯುತ್ತಿಲ್ಲ. ಆರನೇ ತಂಡದ ವಿವರಗಳನ್ನು ಎದುರುನೋಡಲಾಗುತ್ತಿದೆ. ಅ) ಅಭ್ಯರ್ಥಿಗಳು ಕೆಳಗಿನ ಕನಿಷ್ಠ ಅರ್ಹತೆಯನ್ನು ಹೊಂದಿರಬೇಕು.

೧. ೧೮ ವರ್ಷದ ಕೆಳಗೆ ಇರಬಾರದು. ಆರೋಗ್ಯವಂತ ಯುವಕನಾಗಿರಬೇಕು.

೨. ಬರೆಯಲು ಹಾಗೂ ಓದಲು ಬರುವ ಜಾಣನಾಗಿರಬೇಕು. ಇಂಗ್ಲಿಷ್ ಬಲ್ಲವನಾಗಿದ್ದು ಹೇಳಿದ್ದನ್ನು ಅರಿಯುವ ಜ್ಞಾನವಿರಬೇಕು ಹಾಗೂ ಇಂಗ್ಲಿಷ್‌ನಲ್ಲಿ ಮಾತನಾಡಲು ಬರಬೇಕು. ಕೈಕೆಲಸದಲ್ಲಿ ಚುರುಕಾಗಿರಬೇಕು.

೩. ಯಾವುದಾದರೂ ಒಂದು ಯಂತ್ರಜ್ಞಾನದ ಅಂದರೆ ಇಂಜಿನಿಯರಿಂಗ್ ವಿಷಯದ ಕಾರ್ಯಜ್ಞಾನವಿರಬೇಕು. ಫಿಟ್ಟಿಂಗ್, ಟರ್ನಿಂಗ್ ಅಥವಾ ಮ್ಯಾಚಿಂಗ್ ಇದ್ದಲ್ಲಿ ಉತ್ತಮ.

೪. ಕನಿಷ್ಠ ೩ ವರ್ಷ ಕಾರ್ಖಾನೆಯಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಕೆಲಸದಲ್ಲಿ ಜಾಣ್ಮೆ ಹಾಗೂ ಹೊಂದಿಕೊಂಡು ಹೋಗುವ ಬಗೆಗೆ ಸಾಕ್ಷಿ ಒದಗಿಸಬೇಕು.

೫. ಕ್ಷಯರೋಗದಿಂದ ಮುಕ್ತನಾಗಿರಬೇಕು. ಇದಕ್ಕೆ ಆಧಾರವಾಗಿ ವೈದ್ಯಕೀಯ ಪ್ರಮಾಣ ಪತ್ರವಿರಬೇಕು.

ಮೊದಲನೆಯ ಎರಡು ತಂಡಗಳಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಪ್ರವೇಶ ನೀಡಲಾಯಿತು. ನಂತರ ಕೇವಲ ಕಾರ್ಮಿಕ ವರ್ಗದವರಿಗೆ ಮಾತ್ರ ಪ್ರವೇಶ ನೀಡಬೇಕೆಂದು ನಿರ್ಧರಿಸಲಾಯಿತು.

**ಸರ್ ಕಾವಾಸ್ಜಿ ಜಹಂಗೀರ್ :** ಈ ಬಾಲಕರಲ್ಲಿ ಹಲವರಿಗೆ ಉದ್ಯೋಗ ದೊರೆತಿಲ್ಲ ಎಂಬುದು ನಿಜವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಅನೇಕರಿಗೆ ಉದ್ಯೋಗ ದೊರೆತಿದೆ.

**ಬಾಬು ಬೈಜನಾಥ ಬಜೋರಿಯಾ :** ಅವರಲ್ಲಿ ಎಷ್ಟು ಮಂದಿ ವಾಪಸಾಗಿದ್ದಾರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ೧೪೯.

**ಬಾಬು ಬೈಜನಾಥ ಬಜೋರಿಯಾ :** ಮಾನ್ಯ ಸದಸ್ಯರು ಜಾಣ್ಮೆಯ ಪರೀಕ್ಷೆಯ ಬಗೆಗೆ ಪ್ರಸ್ತಾಪಿಸಿದಿರಿ. ಅದು ಏನೆಂದು ವಿವರಿಸುವಿರಾ?

**ಸರ್ ಕಾವಾಸ್ಜಿ ಜಹಂಗೀರ :** ಈ ಬಾಲಕರಲ್ಲಿ ಹಲವರಿಗೆ ಕಡಿಮೆ ವೇತನ ಅಂದರೆ ಅವರು ಬ್ರಿಟನ್‌ಗೆ ಹೋಗುವ ಮುನ್ನ ಇದ್ದಿರಬಹುದಾದ ವೇತನಕ್ಕಿಂತ ಕಡಿಮೆ ನೀಡಲಾಗಿರುವುದು ನಿಜವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಇಲ್ಲ.

**ಸರ್ ಕಾವಾಸ್ಜಿ ಜಹಂಗೀರ್ :** ಮಾನ್ಯ ಸದಸ್ಯರು, ಎಷ್ಟು ಮಂದಿ ನಿರುದ್ಯೋಗದಲ್ಲಿದ್ದಾರೆ ಎಂಬುದನ್ನು ವಿವರಿಸುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಕೇವಲ ಕೆಲವರೇ ನಿರುದ್ಯೋಗಿಗಳಾಗಿದ್ದಾರೆ.

**ಜಮ್ನದಾಸ ಎಂ. ಮೆಹತಾ :** ಅವರಿಗೆ ಉದ್ಯೋಗ ಭರವಸೆ ನೀಡಲಾಗಿತ್ತೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಯುದ್ಧ–ತಂತ್ರಜ್ಞರ ತರಬೇತಿಯನ್ನು ನೀಡುವ ಹುದ್ದೆಗಳನ್ನು ಈ ಬೆವಿನ್ ಬಾಲಕರಿಗೆ ನೀಡುವ ಬಗ್ಗೆ ಸರಕಾರವು ಆಲೋಚಿಸುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನು ಪರಿಶೀಲಿಸಲಾಗುವುದು.

# ೮
# ಬೆವಿನ್ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ವರ್ಗದ ಬಾಲಕರ ಆಯ್ಕೆ*

**ರಾವ್‌ಬಹದ್ದೂರ್ ಶಿವರಾಜ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಬೆವಿನ್ ಅವರ ಯೋಜನೆ ಅಡಿಯಲ್ಲಿ ಎಷ್ಟು ಮಂದಿ ಪರಿಶಿಷ್ಟ ವರ್ಗದ ಬಾಲಕರಿದ್ದಾರೆ ಎಂದು ತಿಳಿಸುವಿರಾ?

ಆ) ಈ ವರ್ಗದವರಿಗೆ ಸರಿಯಾದ ಪ್ರಾತಿನಿಧ್ಯವನ್ನು ನೀಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮೊದಲ ಐದು ತಂಡಗಳಿಗೆ ಸೇರಿದಂತೆ ಯಾವ ವಿವರಣೆಗಳೂ ಇಲ್ಲ. ೬ನೆಯ ತಂಡವು ಸದ್ಯದಲ್ಲಿಯೇ ಸಮುದ್ರಯಾನ ಮಾಡಲಿದ್ದು ಮುಂದಿನ ತಂಡಗಳಿಂದ ಮಾಹಿತಿಯನ್ನು ಸಂಗ್ರಹಿಸುವುದನ್ನು ಮನದಲ್ಲಿರಿಸಿಕೊಳ್ಳಲಾಗಿದೆ.

ಆ) ಈ ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡುವಾಗ ಮಂಡಳಿಯ ಅಧಿಕಾರೇತರ ಪರಿಶಿಷ್ಟ ಹಾಗೂ ಪ್ರಭಾವೀ ಸದಸ್ಯರ ಸಲಹೆ, ಸಹಕಾರಗಳನ್ನು ಪಡೆಯಬೇಕೆಂದು ಈ ಮಂಡಳಿಯ ಅಧ್ಯಕ್ಷರಿಗೆ ರಾಷ್ಟ್ರೀಯ ಸೇವಮಂಡಳಿ ಹಾಗೂ ಸರಕಾರವು ಸೂಚಿಸಿವೆ ಸಾಮಾನ್ಯವಾಗಿ ಈ ಸದಸ್ಯರು ಶಾಸನಸಭೆಯ ಸದಸ್ಯರಾಗಿರುತ್ತಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧೯೪೨ ಸೆಪ್ಟೆಂಬರ್ ೨೩, ಪು. ೪೫೭

## ೯

# ಕೇಂದ್ರ ಕಾಮಗಾರಿ ಇಲಾಖೆಯ ಮನ್ನಣೆ ಪಡೆದ ಗುತ್ತೇದಾರರು*

**ರಾವ್‌ಬಹದ್ದೂರ್ ಎನ್. ಶಿವರಾಜ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಕೇಂದ್ರ ಕಾಮಗಾರಿಕೆ ಇಲಾಖೆಯಲ್ಲಿ ಮನ್ನಣೆ ಪಡೆದ ಗುತ್ತೇದಾರರ ವರ್ಗಗಳ ವಿವರಗಳನ್ನು ನೀಡಬಲ್ಲರೇ? ಆ) ಪರಿಶಿಷ್ಟ ವರ್ಗದವರ ಸಂಖ್ಯೆಯನ್ನು ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮನ್ನಣೆ ಪಡೆದ ಗುತ್ತೇದಾರರ ಒಟ್ಟು ಸಂಖ್ಯೆ ೧,೧೭೧ ಅವರ ವರ್ಗಗಳ ವಿವರ ಹೀಗಿದೆ :

| | |
|---|---|
| ೧. **ಕಟ್ಟಡದ ಗುತ್ತೇದಾರರು** | |
| ವರ್ಗ ೧ (ಪರಿಮಿತಿ ಇಲ್ಲ) | ೧೧೫ |
| ವರ್ಗ ೨ (ರೂ. ೫೦,೦೦೦ ಕೆಳಗೆ) | ೨೩೬ |
| ವರ್ಗ ೩ (ರೂ. ೨೦,೦೦೦ ಕೆಳಗೆ) | ೬೨೦ |
| **ಒಟ್ಟು** | **೯೭೧** |
| ೨. **ವಿದ್ಯುಚ್ಛಕ್ತಿ ಗುತ್ತೇದಾರರು :** | |
| ವರ್ಗ ೧ (ರೂ. ೨೦,೦೦೦ ಮೇಲೆ) | ೨೮ |
| ವರ್ಗ ೨ (ರೂ. ೨೦,೦೦೦ ಕೆಳಗೆ) | ೪೨ |
| **ಒಟ್ಟು** | **೭೦** |
| ಪೀಠೋಪಕರಣ – ಆರೋಗ್ಯ (ವರ್ಗವಿಲ್ಲ) | ೧೩೦ |

ಆ) ಖೇದನೀಯ ಸಂಗತಿ ಎಂದರೆ ಹಿಂದೂಗಳ ಹಾಗೂ ಪರಿಶಿಷ್ಟ ವರ್ಗದವರ ಹೆಸರುಗಳಲ್ಲಿ ಭೇದಗಳೇ ಇಲ್ಲ. ಮುಂದುವರಿದು ಕಾರ್ಮಿಕರ ಕುಲಗೋತ್ರಗಳನ್ನು ವಿಚಾರಿಸುವ ಪರಿಪಾಟ ಗುತ್ತೇದಾರರಿಗಿಲ್ಲ.

**ರಾವ್‌ಬಹುದ್ದೂರ್ ಶಿವರಾಜ :** ಮಾನ್ಯ ಸದಸ್ಯರ ಉತ್ತರದ ಕೊನೆಯ ಅಂಶದ ಬಗೆಗೆ ವಿಚಾರಿಸಿ ವಿಷಯದ ಬಗೆಗೆ ಸೂಕ್ತ ವಿವರಗಳನ್ನು ಪಡೆಯುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪ್ರಯತ್ನಿಸುವೆ.

**ಬಾಬು ಬೈದ್ಯನಾಥ ಬಜೋರಿಯಾ :** ಸರ್ಕಾರವು ಗುತ್ತೇದಾರರನ್ನೂ ಜಾತಿವಾರು ಪದ್ಧತಿಯ ಮೇಲೆ ನೇಮಕ ಮಾಡುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ವಿಚಾರ ತಿಳಿಯಬಯಸಿದ ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡುತ್ತೇನೆ.

**ಬಾಬು ಬೈಜನಾಥ ಬಜೋರಿಯಾ :** ನನಗೆ ನನ್ನ ಪ್ರಶ್ನೆಗೆ ಉತ್ತರ ಬೇಕು. ಸರ್ಕಾರವು ಗುತ್ತೇದಾರರನ್ನು ಜಾತಿವಾರು ಪದ್ಧತಿಯ ಮೇಲೆ ನೇಮಿಸುವುದೇ? ಮುಸ್ಲಿಂ, ಯುರೋಪಿಯನ್ನರು, ಪರಿಶಿಷ್ಟ ಜಾತಿಯವರ ಹಾಗೂ ಮುಂತಾದವರ ವಿವರಗಳೇನು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧೯೪೨, ೨೩ ಸೆಪ್ಟೆಂಬರ್, ಪು. ೪೫೮

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ನಾನು ಕೇವಲ ಮಾಹಿತಿ ಮಾತ್ರ ನೀಡುತ್ತಿರುವೆ.

**ಪಂಡಿತ ಲಕ್ಷ್ಮೀಕಾಂತ ಮೈತ್ರ :** ಕಟ್ಟಡ ಸಾಮಗ್ರಿಗಳನ್ನು ಜಾತಿವಾರು ಆಧಾರದ ಮೇಲೆ ಉತ್ಪಾದಿಸಿ ಮಾರಾಟಮಾಡಲಾಗುವುದೇ?

(ಉತ್ತರ ಇಲ್ಲ)

## ೧೦
## ಫೆಡರಲ್ ರೈಲ್ವೆ ಕಾರ್ಮಿಕರ ಪರವಾಗಿ ಅಥವಾ ಮಜೂರಿ ಕಾಯ್ದೆಯಡಿ ಸಲ್ಲಿಸಲಾಗುವ ಅರ್ಜಿಗಳು*

**೧. ಮಹಮದ್ ಅಜರ್ ಆಲೀ :** ಮಾನ್ಯ ಸದಸ್ಯರು, ಅಧಿಕಾರಿಗಳಿಗೆ ೧೯೩೬ರ ಕಾಯ್ದೆ ಅಡಿಯಲ್ಲಿ ಕೇಂದ್ರ ರೈಲ್ವೆ ಕಾರ್ಮಿಕರ ಪರವಾಗಿ ಸಲ್ಲಿಸಿದ ಅರ್ಜಿಯ ದಾಖಲೆಗಳನ್ನು ಸಭೆಯ ಮುಂದೆ ಮಂಡಿಸುವರೇ? ದಿನಾಂಕ ೧ ಏಪ್ರಿಲ್ ೧೯೩೭ರಿಂದ ೩೧ ಆಗಸ್ಟ್ ೧೯೪೨ರವರೆಗಿನ ಈ ಕೆಳಕಂಡ ವಿಲೇವಾರಿಯಂತೆ ನೀಡುವಿರಾ?

ಅ) ಅರ್ಜಿಯ ನಂಬರ್

ಆ) ಅರ್ಜಿದಾರರ ವಿಳಾಸ, ಹೆಸರು ಮುಂತಾದ ವಿವರ

ಇ) ಅರ್ಜಿಯಲ್ಲಿ ದೂರಲಾದ ವಿಷಯ

ಈ) ಪರಿಹಾರ ಹಣದ ಮೊತ್ತ

ಉ) ಅಧಿಕಾರಿಗಳಿಂದ ಪಡೆದ ವಿವರ ಹಾಗೂ ಅಧಿಕಾರಿಗಳ ಅರ್ಹತೆ

ಊ) ಮೇಲ್ಮನವಿಯನ್ನು ಸಲ್ಲಿಸಿದ್ದರೆ, ಅದರ ಮುಂದಿನ ಹಂತದ ವಿವರಗಳೊಂದಿಗೆ ಅಪೀಲ್ ಕೋರ್ಟಿನ ಸಂಪೂರ್ಣವಿವರಗಳು ಮತ್ತು

ಋ) ಮರು ಪರಿಶೀಲನೆಗೆ ಬೇಡಿಕೆ ಹಾಗೂ ಅದರ ಪರಿಣಾಮಗಳು; ಮರು ಪರಿಶೀಲನೆಯ ಕೋರ್ಟಿನ ವಿವರಗಳೊಂದಿಗೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕೇಳಲಾದ ಪ್ರಶ್ನೆಗೆ ಅಗತ್ಯವಾಗಿರುವ ವಿವರಗಳು ಕೂಡಲೇ ದೊರಕುತ್ತಿಲ್ಲ. ಕಾಲಾವಕಾಶ ಬೇಕು. ಯುದ್ಧದ ಸಮಯವಾದುದರಿಂದ ವಿವರಗಳನ್ನು ಕಲೆಹಾಕುವುದಕ್ಕೆ ಇದು ಸೂಕ್ತವಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧೯೪೨, ೨೪ ಸೆಪ್ಟೆಂಬರ್, ಪು. ೫೦೭

## ೧೧
## ಕೋರ್ಟಿನ ಆದೇಶಗಳ ಶುಲ್ಕ – ದೆಹಲಿ ಪ್ರಾಂತದಲ್ಲಿ ಕಾರ್ಮಿಕರ ವೇತನ ನಿಯಮಗಳು*

**೨. ಮಹಮದ್ ಅಜರ್ ಆಲೀ :** ೧೯೩೮ರ ಕೇಂದ್ರ ರೈಲ್ವೆ ಕೂಲಿ ಪಾವತಿಯ ೧೮ನೆಯ ನಿಯಮ ಮತ್ತು ಸಂಯುಕ್ತ ಪ್ರಾಂತಗಳ ೧೯೩೬ರ ಕಾನೂನಿನ ೨೧ನೆಯ ನಿಯಮ ಹಾಗೂ ದೆಹಲಿ ಕೂಲಿ ಪಾವತಿಯ ೧೯೩೭ರ ಕಾನೂನುಗಳನ್ನು ಪರಾಂಬರಿಸಿ, ದೆಹಲಿ ನ್ಯಾಯಾಲಯ ಹಾಗೂ ಅಧಿಕಾರಿಗಳು ಪ್ರತಿಕಕ್ಷಿಯನ್ನು ಕರೆಸಲು ವಿಧಿಸಿರುವ ಶುಲ್ಕವು ದೆಹಲಿ ಪ್ರಾಂತ್ಯಕ್ಕೆ ನಿಇದಿ ಪಡಿಸಿರುವ ದರಗಳಿಗೆ ಅನುಗುಣವಾಗಿದೆಯೆ ಎಂದು ಮಾನ್ಯ ಕಾರ್ಮಿಕ ಸದಸ್ಯರು, ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿರೋಧಿ ಕಕ್ಷಿದಾರರನ್ನು ಕರೆಯಿಸುವ ಬಗೆಗೆ, ಯಾವ ವಿಧವಾದ ಶುಲ್ಕವನ್ನೂ ವಿಧಿಸಬಾರದೆಂದೇ ಸರ್ಕಾರ ಸಲಹೆ ಮಾಡಿದೆ. ತಾವು ವಿವರಿಸಿದ ಕಾನೂನುಗಳನ್ನು ಅರ್ಥೈಸುವ ಸಂಗತಿ ಬೇರೆ.

## ೧೨
## ಮುದ್ರಣ ಹಾಗೂ ಲೇಖನಸಾಮಗ್ರಿಗಳ ಕಾರ್ಯಾಲಯದಲ್ಲಿ ಮುಸ್ಲಿಮ್ ಗೆಜೆಟೆಡ್ ಅಧಿಕಾರಿಗಳ ಅಭಾವ *

**೨೩. ಅಬ್ದುಲ್ ಹಲೀಮ್ ಘಜನವಿ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಭಾರತ ಸರ್ಕಾರದ ಮುದ್ರಣ ಹಾಗೂ ಲೇಖನಸಾಮಗ್ರಿಗಳ ಕಾರ್ಯಾಲಯದಲ್ಲಿ ಎಷ್ಟು ಜನ ಗೆಜೆಟೆಡ್ ಅಧಿಕಾರಿಗಳಿದ್ದಾರೆ? ಅವರಲ್ಲಿ ಮುಸ್ಲಿಮರು ಇದ್ದಾರೆಯೇ? ಇರದಿದ್ದಲ್ಲಿ ಕಾರಣವೇನು? ಎಂಬುದನ್ನು ತಿಳಿಸಬಲ್ಲಿರಾ?

ಆ) ಕಾರ್ಯಾಲಯದಲ್ಲಿ ಖಾಲಿ ಇದ್ದ ಉಪನಿಯಂತ್ರಣಾಧಿಕಾರಿ ಸ್ಥಾನಕ್ಕೆ ಮುಸ್ಲಿಮ್ ಅಭ್ಯರ್ಥಿಯ ಕಾನೂನುಬದ್ಧ ಕೋರಿಕೆಯನ್ನು ಕಡೆಗಣಿಸಿ, ಬಂಗಾಳದ ಓರ್ವ ಹಿಂದೂ ಸಬ್‌ಡೆಪ್ಯುಟಿ ಕಲೆಕ್ಟರರನ್ನು ನೇಮಿಸಿಕೊಂಡಿರುವುದು ಸತ್ಯವೇ? ಇದು ಸರಕಾರದ ಮುಸ್ಲಿಂ ಜನಾಂಗದ ನೇಮಕಾತಿ ಆಜ್ಞೆಯ ಉಲ್ಲಂಘನೆ ಅಲ್ಲವೆ?

ಇ) ಮುಸ್ಲಿಮ್ ಜನಾಂಗದ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಮುಸ್ಲಿಮ್ ಗೆಜೆಟೆಡ್ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವ ಕ್ರಮವನ್ನು ಸರ್ಕಾರ ಕೈಗೊಂಡಿದೆಯೇ?

ಈ) ಸರ್ಕಾರವು ಕೇಂದ್ರ ಲೇಖನ ಸಾಮಗ್ರಿ ಕಾರ್ಯಾಲಯದಲ್ಲಿ ಒಂದು ಉಪನಿಯಂತ್ರಣಾಧಿಕಾರಿ ಹಾಗೂ ಒಂದು ಮೇಲ್ವಿಚಾರಣಾ ಅಧಿಕಾರಿಗಳ ಸ್ಥಾನಗಳನ್ನು ಕಲ್ಪಿಸಲು ನಿರ್ಣಯಿಸಿದ್ದು ಆ ಸ್ಥಾನಗಳನ್ನು ಮುಸ್ಲಿಮ್ ಜನಾಂಗದವರಿಗೆ ಕಾದಿರಿಸಬಹುದೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೧೯೪೨, ೨೪ ಸೆಪ್ಟೆಂಬರ್, ಪು. ೫೦೭

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ೧೯೪೩ ಸಂ ೩, ೧೧ ಫೆಬ್ರವರಿ ೧೯೪೩, ಪು. ೭೧.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮಾನ್ಯ ಸದಸ್ಯರು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ಸಮಗ್ರ ಕಾರ್ಯಾಲಯದ ಬಗೆಗೆ ಕೇಳಿರುವರೆಂದೇ ಭಾವಿಸಿ ಹೇಳುವುದಾದರೆ, ೨೪ ಗೆಜೆಡೆಟ್ ಅಧಿಕಾರಿಗಳಿದ್ದಾರೆ. ಅವರಲ್ಲಿ ಇಬ್ಬರು ಮುಸ್ಲಿಮರೂ ಇದ್ದಾರೆ. ಹೀಗಾಗಿ ಪ್ರಶ್ನೆಯ ಕೊನೆಯ ಅಂಶ ಉದ್ಭವಿಸಲಾರದು.

ಆ) ಹೌದು, ಪ್ರಶ್ನೆಯ ಎರಡನೆಯ ಅಂಶಕ್ಕೆ ಉತ್ತರ ನಕರಾತ್ಮಕ.

ಇ) ಈ ಇಲಾಖೆಯ ಎಲ್ಲಾ ಹುದ್ದೆಗಳಿಗೂ, ಜಾರಿಯಲ್ಲಿರುವ ನಿಯಮಾವಳಿಯಂತೆ, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಹೀಗಾಗಿ ಮುಸ್ಲಿಮ್ ಜನಾಂಗಕ್ಕೆಂದೇ ಹುದ್ದೆಗಳನ್ನು ಕಾದಿರಿಸುವುದು ನಿಯಮಾವಳಿಗಳಂತೆ ಸೂಕ್ತವಲ್ಲ.

ಈ) ಲೇಖನಸಾಮಗ್ರಿಗಳ ಕಾರ್ಯಾಲಯದಲ್ಲಿ ಯಾವ ಅಧಿಕ ಹುದ್ದೆಗಳನ್ನು ನಿರ್ಮಿಸುವ ಯೋಚನೆಯೂ ಇಲ್ಲ. ತಾತ್ಕಾಲಿಕವಾಗಿ ಒಬ್ಬ ಮೇಲ್ವಿಚಾರಣೆಯ ಅಧಿಕಾರಿ ಸ್ಥಾನವನ್ನು ಕೇವಲ ಮೂರು ತಿಂಗಳಿಗಾಗಿ ನಿರ್ಮಿಸಲಾಗಿದೆ. ಹೀಗಾಗಿ ಜಾತಿವಾರು ಸ್ಥಾನಗಳನ್ನು ಕಾಯ್ದಿರಿಸುವ ಕಾನೂನು ಈ ಪ್ರಕರಣದಲ್ಲಿ ಉದ್ಭವಿಸಲಾರದು. ಆದ್ದರಿಂದ ಮುಸ್ಲಿಮರಿಗೆ ಸ್ಥಾನ ಕಾಯ್ದಿರಿಸುವ ಪ್ರಶ್ನೆಯೇ ಇಲ್ಲ.

**ಲಾಲ್‌ಚಂದ್ ನವಲ್‌ರಾಯ್ :** ಈ ಅಧಿಕಾರಿಗಳನ್ನು ಸಾರ್ವಜನಿಕ ಸೇವಾ ಆಯೋಗ ಆಯ್ಕೆ ಮಾಡುವುದೇ ಅಥವಾ ಇಲಾಖೆಯ ಹಿರಿಯ ಅಧಿಕಾರಿಗಳು ಮಾಡುತ್ತಾರೆಯೇ ಎಂಬ ಸಂಗತಿಯನ್ನು ಮಾನ್ಯ ಸದಸ್ಯರಿಂದ ತಿಳಿಯಬಹುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಕಾಲಾವಕಾಶ ಬೇಕು.

**ಲಾಲ್‌ಚಂದ್ ನವಲರಾಯ್ :** ಒಂದು ವೇಳೆ ನೇಮಕಾತಿಯು ಬಡ್ತಿ ಮೂಲಕವೇ ಆದಲ್ಲಿ, ಅದರಲ್ಲಿ ಜಾತಿವಾರು ಪದ್ಧತಿಯನ್ನು ಅಥವಾ ಬೇರೆ ಕ್ರಮಗಳನ್ನು ಅನುಸರಿಸಲಾಗುವುದೋ ಎಂಬುದನ್ನು ಮಾನ್ಯ ಸದಸ್ಯರು ಹೇಳಬಲ್ಲರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಜಾತಿವಾರು ಕ್ರಮವು ಬಡ್ತಿಯ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ.

**ಲಾಲ್‌ಚಂದ್ ನವಲ್‌ರಾಯ್ :** ಆದುದರಿಂದಲೇ ಈ ಪ್ರಕರಣದಲ್ಲಿ ಅಧಿಕಾರಿಗಳನ್ನು ಬಡ್ತಿಯ ಆಧಾರದ ಮೇಲೆಯೇ ತೆಗೆದುಕೊಳ್ಳಲಾಗಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

# ೧೩
# ಕಲ್ಕತ್ತಾ ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯದಲ್ಲಿ ಮುಸ್ಲಿಮರ ಅಭಾವ, ಇತ್ಯಾದಿ *

**೨೪. ಸರ್ ಅಬ್ದುಲ್ ಹಲೀಮ್ ಘಜನವಿ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಕೇಂದ್ರ ಲೇಖನ ಸಾಮಗ್ರಿ ಕಾರ್ಯಾಲಯದಲ್ಲಿ ಎಷ್ಟು ಮಂದಿ ಮೇಲ್ವಿಚಾರಣಾ ಅಧಿಕಾರಿಗಳ ಮತ್ತು ಮುಖ್ಯ ಸಹಾಯಕ ಅಧಿಕಾರಿಗಳ ಹುದ್ದೆಯಲ್ಲಿದ್ದಾರೆ ; ಕಲ್ಕತ್ತಾ ಮುದ್ರಣಾಲಯ ಹಾಗೂ ಕೇಂದ್ರ ಅರ್ಜಿಗಳ ಉಗ್ರಾಣ ಕಾರ್ಯಾಲಯವನ್ನೂ ಒಳಗೊಂಡಂತೆ ಯಾವ ಪ್ರಮಾಣಾನುಸಾರ ಮುಸ್ಲಿಮ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸುವರೇ?

ಆ) ಕಲ್ಕತ್ತಾ ಮುದ್ರಣಾಲಯ ಹಾಗೂ ಕೇಂದ್ರ ಅರ್ಜಿಗಳ ಉಗ್ರಾಣ ಕೇಂದ್ರ ಲೇಖನಸಾಮಗ್ರಿಗಳ ಕಾರ್ಯಾಲಯಗಳಲ್ಲಿ ಎಷ್ಟು ಮಂದಿ ಸಹಾಯ ಅಧಿಕಾರಿಗಳ ಹಾಗೂ ಗುಮಾಸ್ತರ ಹುದ್ದೆಯಲ್ಲಿದ್ದಾರೆ ಎಂದು ಬೇರೆ ಬೇರೆಯಾಗಿ ತಿಳಿಸುವರೆ?

ಇ) ಈ ಕಾರ್ಯಾಲಯದಲ್ಲಿ ಪ್ರತಿಯೊಂದು ಮಟ್ಟದಲ್ಲಿಯ ಮುಸ್ಲಿಮರ ಪ್ರಮಾಣವನ್ನು ತಿಳಿಸುವರೆ?

ಉ) ಒಂದು ವೇಳೆ ಮುಸ್ಲಿಮರ ನೇಮಕಾತಿ ಸೂಕ್ತವಾದ ಕ್ರಮದಲ್ಲಿ ಇಲ್ಲದೇ ಹೋದಲ್ಲಿ ಅದನ್ನು ಸರ್ಕಾರದವರು ಏಕೆ ಸರಿಪಡಿಸದೆ ಹೋದರು?

ಊ) ಈ ಸಂವತ್ಸರದಲ್ಲಿ, ವಿದ್ಯಾರ್ಹತೆ ಇಲ್ಲದ ಕಿರಿಯ ಕೆಲವು ಹಿಂದೂ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿರುವುದು ಸತ್ಯವೇ? ಇದರಿಂದ ಮುಸ್ಲಿಮ್ ಗುಮಾಸ್ತರನ್ನು ಕಡೆಗಣಿಸಿದಂತಾಗಲಿಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ, ಆ, ಇ. ಹಾಗೂ ಈ.ಗೆ ಸಂಬಂಧಿಸಿದಂತೆ ಕೆಳಗಿನ ಕೋಷ್ಟಕವನ್ನು ಸಭೆಯ ಮುಂದೆ ಇರಿಸಲಾಗಿದೆ.

ಉ) ಸರ್ಕಾರದ ಸುತ್ತೋಲೆಯು ನೇರ ನೇಮಕಾತಿಯ ವಿಷಯಗಳಿಗೆ ಸಂಬಂಧಿಸಿದೆ ಹಾಗೂ ಅದನ್ನು ಪರಿಪಾಲಿಸಲಾಗುತ್ತಿದೆ. ಆದುದರಿಂದ ಅದನ್ನು ಸರಿಪಡಿಸುವ ಅಗತ್ಯವೇ ಇಲ್ಲ.

ಊ) ಇಲ್ಲ. ಸಹಾಯಕರ ಹುದ್ದೆಗಳನ್ನು ಕೇವಲ ಅರ್ಹತೆ ಹಾಗೂ ದಕ್ಷತೆಯ ಆಧಾರದ ಮೇಲೆ ಆಯ್ಕೆ ಮಾಡುವುದರಿಂದ ಯಾರನ್ನೂ ಕಡೆಗಣಿಸುವ ಪ್ರಶ್ನೆಯೇ ಇರಲಾರದು.

**ಕ್ರಮವಾಗಿ ಸಹಾಯಕರ ಹುದ್ದೆ ಹಾಗೂ ಗುಮಾಸ್ತರ ನೇಮಕಾತಿ ಮತ್ತು ಮುಸ್ಲಿಮರ ದಾಮಾಂಶ ಮತ್ತು ಸಹಾಯಕರ ಹುದ್ದೆಗಳ ಸಂಖ್ಯೆ, ಯುದ್ಧದಿಂದಾಗಿ ಕೇಂದ್ರ ಲೇಖನಸಾಮಗ್ರಿ ಹಾಗೂ ಕೇಂದ್ರ ಅರ್ಜಿಗಳ ಸ್ಟೋರ್ಸ್ ಮತ್ತು ಕಲ್ಕತ್ತಾ ಮುದ್ರಣಾಲಯದ ವಿವರಗಳು.**

ಅ) ಎರಡು ಮೇಲ್ವಿಚಾರಣೆಯ ಅಧಿಕಾರಿಗಳು – ಹತ್ತು ಮುಖ್ಯ ಸಹಾಯಕರು ಇವರಲ್ಲಿ ಮುಸ್ಲಿಮರು ಯಾರೂ ಇಲ್ಲ.

ಆ) ಮತ್ತು ಇ)

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩ – ಫೆಬ್ರವರಿ ೧೧, ಪು. ೭೨.

| **ಸಹಾಯಕರು** | **ಸಂಖ್ಯೆ** | **ಮುಸ್ಲಿಮರ ಶೇಕಡಾವಾರು ದಾಮಾಂಶ** |
|---|---|---|
| ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯ | ೩೧ | ೯.೭ |
| ಕೇಂದ್ರ ಅರ್ಜಿಗಳ ಉಗ್ರಾಣ | ೧೩ | ೭.೭ |
| ಕಲ್ಕತ್ತಾ ಮುದ್ರಣಾಲಯ | ೫ | ಇಲ್ಲ |
| ಗುಮಾಸ್ತರು : | | |
| ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯ | ೩೨೯ | ೧೯.೧ |
| ಕೇಂದ್ರ ಅರ್ಜಿಗಳ ಉಗ್ರಾಣ | ೧೬೬ | ೨೧.೧ |
| ಕಲ್ಕತ್ತಾ ಮುದ್ರಣಾಲಯ | ४೯ | ೨೦.೪ |
| ಈ) | ಯುದ್ಧದಿಂದಾಗಿ ಸಹಾಯಕರ ಹುದ್ದೆಗಳ ನಿರ್ಮಾಣ | ಮುಸ್ಲಿಮರ ಸಂಖ್ಯೆ |
| ಕೇಂದ್ರ ಸಾಮಗ್ರಿ ಕಾರ್ಯಾಲಯ | ೧೩ರಲ್ಲಿ ೧೧ ಭರ್ತಿ | ೧ ಮುಸ್ಲಿಮ್ |
| ಕೇಂದ್ರ ಅರ್ಜಿಗಳ ಉಗ್ರಾಣ | ೯ | ಯಾವುದನ್ನೂ ಭರ್ತಿ ಮಾಡಿಲ್ಲ |
| ಕಲ್ಕತ್ತಾ ಮುದ್ರಣಾಲಯ | ಇಲ್ಲ | ಇಲ್ಲ |

**ವಿ.ಸೂ. :** ಕೇಂದ್ರ ಲೇಖನಸಾಮಗ್ರಿಯ ಕಾರ್ಯಾಲಯದ ಅಂಕಿಸಂಖ್ಯೆಗಳು ಲೇಖನಸಾಮಗ್ರಿ ಉಗ್ರಾಣದಲ್ಲಿ ಸಹಾಯಕ ಹಾಗೂ ಗುಮಾಸ್ತರನ್ನು ಒಳಗೊಂಡಿದ್ದು ೧೮ ಜೂನ್ ೧೯೪೨ರ ಜಾತಿವಾರು ನಿಯಮಗಳ ಪ್ರಕಾರ ನೇಮಿಸಿಕೊಂಡಿರುವುವಾಗಿವೆ.

# ೧೪
# ಕೇಂದ್ರ ಲೇಖನಸಾಮಗ್ರಿ ಕಾರ್ಯಾಲಯದ ಕಾರ್ಯ ವೇಳೆ*

**೨೫. ಸರ್ ಅಬ್ದುಲ್ ಹಾಲಿಮ್ ಘಜನವಿ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಕೇಂದ್ರ ಲೇಖನ ಸಾಮಗ್ರಿ ಕಾರ್ಯಾಲಯದ ವೇಳೆಯನ್ನು ಅರ್ಧಗಂಟೆ ಹೆಚ್ಚಿಸಿರುವುದು ಸತ್ಯವೇ ಎಂದು ತಿಳಿಸಬಲ್ಲರೇ?

ಆ) ಕೇಂದ್ರ ಸಾಮಗ್ರಿ ಕಾರ್ಯಾಲಯದಲ್ಲಿ ಕಳೆದ ರಂಜಾನ್ ಹಬ್ಬದ ದಿನಗಳಲ್ಲಿ ಮುಸ್ಲಿಮರಿಗೆ ನೀಡಲಾದ ಅರ್ಧ ಗಂಟೆ ರಿಯಾಯಿತಿಯನ್ನು ರದ್ದುಗೊಳಿಸಿದ್ದು ನಿಜವೇ? ಹಾಗಿದ್ದಲ್ಲಿ ಕಾರಣಗಳೇನು?

ಇ) ಕೇಂದ್ರ ಸಾಮಗ್ರಿ ಕಾರ್ಯಾಲಯದ ಹಲವು ಶಾಖೆಗಳಲ್ಲಿ ವೇಳೆಯನ್ನು ಒಂದು ಗಂಟೆ ಅಧಿಕಗೊಳಿಸಲಾಗಿರುವುದು ನಿಜವೇ? ಹೀಗಿದ್ದಲ್ಲಿ ಆ ಕರ್ಮಚಾರಿಗಳಿಗೆ ಒಂದು ಗಂಟೆಗಾಗಿ ಅಧಿಕ ವೇತನವನ್ನು ನೀಡಲಾಗುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಹೌದು, ಸ್ಥಳೀಯ ಸರ್ಕಾರದ ಆಜ್ಞೆಯ ಮಾದರಿಯ ಮೇಲೆ ರಿಯಾಯಿತಿಯನ್ನು ನೀಡಲಾಗಿತ್ತು. ಆದರೆ ೧೯೪೨ರಲ್ಲಿ ಬಂಗಾಳ ಸರ್ಕಾರವು ಈ ಆಜ್ಞೆಯನ್ನು ವಾಪಸು ಪಡೆದುಕೊಂಡಿದ್ದರಿಂದ, ಮುಂಚೆ ಕಾರ್ಯಮಾಡುತ್ತಿದ್ದ ವೇಳೆಯನ್ನೇ ಜಾರಿ ಮಾಡಲಾಯಿತು.

ಇ) ಹೌದು, ಕೇವಲ ತಾತ್ಕಾಲಿಕ ಅವಧಿಗಾಗಿ ಸಂರಕ್ಷಣ ಇಲಾಖೆಯ ಅಧಿಕವಾಗಿರುವ ಬೇಡಿಕೆಗಳನ್ನು ಪೂರೈಸಲೆಂದೇ ಕೆಲವು ಶಾಖೆಗಳಲ್ಲಿ ಅಧಿಕ ವೇಳೆ ಕಾರ್ಯಮಾಡುತ್ತಿರುವರು. ಆದರೆ ಈ ಅಧಿಕ ವೇಳೆಯ ಕಾರ್ಯಕ್ಕೆ ಯಾವ ವಿಧವಾದ ಹೆಚ್ಚುವರಿ ವೇಳೆ ವೇತನವನ್ನು ನೀಡುವುದು ರೂಢಿಗೆ ವಿರೋಧವಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಫೆಬ್ರವರಿ ೧೧ ಪು. ೭೨–೭೩

# ೧೫
# ಕಾರ್ಮಿಕರಿಗೆ ನೀಡಲಾದ ಅಸಮರ್ಪಕ ತುಟ್ಟಿಭತ್ಯೆಯ ಮರು ಮಂಜೂರಾತಿಯ ಪ್ರಕಟನೆ*

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುಲ್ ರಹೀಮ್) :** ಮುಂದಿನ ಪ್ರಶ್ನೆಯೂ ಜಮ್ನಾದಾಸರ ಹೆಸರಿನಲ್ಲಿದ್ದು, ಅವರು ಸಾರ್ವಜನಿಕ ದೃಷ್ಟಿಯಿಂದ ಅತಿ ಮಹತ್ವದ ಒಂದು ವಿಷಯದ ಬಗೆಗೆ ಚರ್ಚಿಸಬೇಕೆಂದಿದ್ದು, ಆ ವಿಷಯವು ಸುಮಾರು ೩ ಲಕ್ಷ ಕಾರ್ಮಿಕರ ಅತೃಪ್ತಿಯನ್ನು ಕುರಿತದ್ದಾಗಿದೆ. ಭಾರತ ಸರಕಾರದ ಸೇವೆಯಲ್ಲಿಯ ನೌಕರರು ತಮ್ಮ ಸಂಘದವರನ್ನು ಕೇಳದೆ ತಮಗೆ ನೀಡಲಾದ ಕಡಿಮೆ ತುಟ್ಟಿಭತ್ಯೆಯಿಂದ ಅಸಂತುಷ್ಟರಾಗಿದ್ದಾರೆ. ಇದರ ಬಗೆಗೆ ಯಾವಾಗ ಪ್ರಕಟಿಸಲಾಯಿತು?

**ಜಮ್ನಾದಾಸ ಎಂ ಮೆಹ್ತಾ :** ಜನವರಿಯ ೨೩ ದಿನಾಂಕದಂದು.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುಲ್ ರಹೀಮ್)** ಅಂದರೆ ಕಳೆದ ಅಧಿವೇಶನದ ನಂತರ?

**ಜಮ್ನಾದಾಸ ಎಮ್. ಮೆಹ್ತಾ :** ಹೌದು, ಮಾನ್ಯರೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುಲ್ ರಹೀಮ್) :** ಅದರ ಮೇಲ್ವಿಚಾರಣೆ ಯಾವ ಸದಸ್ಯರದು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಾರ್ಮಿಕ ಸಂಘದವರ ಸಲಹೆ ಕೇಳದೇ ಹೋದ ಸಂಗತಿ ಸಾರ್ವಜನಿಕ ಮಹತ್ವ ಸಂಗತಿಯಾಗಲಾರದು ಎಂದು ಭಾವಿಸಿದ್ದೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್) :** ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದು ನಿರ್ದಿಷ್ಟವಾದ ವಿಷಯವಲ್ಲ ಏಕೆಂದರೆ ಯಾರೂ ಸರ್ಕಾರದ ಮೇಲೆ ಯಾವ ಬಾಧ್ಯತೆಯನ್ನೂ ಹೊರಿಸಿಲ್ಲ.

**ಮಾನ್ಯ ಅಧ್ಯಕ್ಷ (ಗೌರವಾನ್ವಿತ ಅಬ್ದುರ್ ರಹೀಮ್) :** ಅದು ಅರ್ಹತೆಗೆ ತಕ್ಕ ಉತ್ತರವಾಗಿರಬಹುದು. ಈ ಪ್ರಕಟನೆಯನ್ನು ೨೩ ಜನವರಿಯಂದೇ ಮಾಡಲಾಗಿರಲಿಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದು ಸರಿ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುಲ್ ರಹೀಮ್) :** ದೂರಲಾದ ಸಂಗತಿ ಎಂದರೆ ಮೂರು ಲಕ್ಷ ಕಾರ್ಮಿಕರಲ್ಲಿ ಅಶಾಂತಿ ತಲೆದೋರಿದೆ. ಹೀಗಾಗಿ ಇದು ಸಾರ್ವಜನಿಕ ಮಹತ್ವದ ಸಂಗತಿಯೇ ಆಗಿರುವುದರಿಂದ ನಾನು ನಿಲುವಳಿ ಆಜ್ಞೆಗೆ ಅಪ್ಪಣೆ ನೀಡಿರುವೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ನಿಲುವಳಿಗೆ ಒಪ್ಪಲಾರೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್)** ನಿಲುವಳಿಗೆ ವಿರೋಧ ವ್ಯಕ್ತಪಡಿಸಿರುವುದರಿಂದ ನಿಲುವಳಿಯ ಪರವಾಗಿರುವವರು ತಮ್ಮ ಸ್ಥಾನದಲ್ಲಿಯೇ ಎದ್ದು ನಿಲ್ಲುವರೇ?

(೨೫ ಸದಸ್ಯರಿಗಿಂತ ಹೆಚ್ಚು ಸದಸ್ಯರು ಎದ್ದು ನಿಂತರು)

೨೫ ಸದಸ್ಯರಿಗಿಂತ ಹೆಚ್ಚು ಸದಸ್ಯರು ಒಪ್ಪಿಗೆ ನೀಡಿರುವುದರಿಂದ ನಿಲುವಳಿ ಸೂಚನೆಯನ್ನು ಸಾಯಂಕಾಲ ೪ ಗಂಟೆಗೆ ಕಾರ್ಯಕಲಾಪಗಳು ಮುಗಿದಲ್ಲಿ, ಕೈಗೆತ್ತಿಕೊಳ್ಳಲಾಗುವುದು. ಈ ಬಗೆಗೆ ನಾನು ಸದನದ ಇಚ್ಛೆಗೆ ಮನ್ನಣೆ ನೀಡಿರುವೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಫೆಬ್ರವರಿ ೧೨ ಪು. ೧೬೯

# ೧೬
# ಕಾರ್ಮಿಕರ ಕೂಲಿ ಮಟ್ಟವನ್ನು ಏರಿಸುವ ಅಪೇಕ್ಷೆ*

**೮೬. ಡಾ|| ಸರ್. ಜಿಯಾ ಉದ್ದೀನ್ ಅಹಮದ್ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಯಾವ ಮಾನದಂಡವನ್ನು ಆಧರಿಸಿ ಕೂಲಿಕಾರರ ವೇತನವನ್ನು ನಿರ್ಧರಿಸಲಾಗುವುದು ಎಂದು ಹೇಳುವರೇ?

ಆ) ರೂಪಾಯಿಯ ಬೆಲೆಯು ೧೬ ಆಣೆಯಿಂದ ೬ ಆಣೆಗೆ ಕುಸಿದು ಹೋಗಿದೆ. ಹೀಗಾಗಿ ಭಾರತ ಸರ್ಕಾರದವರು, ಈ ಹಿನ್ನೆಲೆಯಲ್ಲಿ ಕಾರ್ಮಿಕರ ವೇತನವನ್ನು ಹೆಚ್ಚಿಸುವಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ? ಇಲ್ಲವಾದಲ್ಲಿ ಅದಕ್ಕೆ ಕಾರಣವೇನು?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಕೂಲಿಯ ಪ್ರಶ್ನೆ ಸಾಮಾನ್ಯವಾಗಿ ಮಾಲೀಕರ ಹಾಗೂ ಕೂಲಿಕಾರರ ಮಧ್ಯೆ ಆದ ಒಪ್ಪಂದಕ್ಕೆ ಸೇರಿದ ಸಂಗತಿ ಎಂದು ಹೇಳಬಯಸುವೆ.

ಆ) ಜೀವನಮಟ್ಟದಲ್ಲಿಯ ಏರಿಕೆಯಿಂದಾಗಿ ರೂಪಾಯಿಯ ಬೆಲೆಯಲ್ಲಿ ಕುಸಿತವಾಗಿದೆ. ಅಲ್ಲದೆ ಭಾರತದಾದ್ಯಂತ ಇದು ಒಂದೇ ವಿಧವಾಗಿಲ್ಲ.

ಭಾರತ ಸರ್ಕಾರವು ನಿರ್ದಿಷ್ಟ ತುಟ್ಟಿಭತ್ಯೆಯನ್ನಾಗಲೀ ಅಥವಾ ಕೂಲಿಯ ಏರಿಕೆಯನ್ನಾಗಲೀ ಕೆಳಕಂಡ ಕಾರಣಗಳಿಂದ ಮಾಡಿಲ್ಲ.

೧) ಸರ್ಕಾರವು ಕನಿಷ್ಠ ಕೂಲಿಯ ಧೋರಣೆಯ ಬಗೆಗೆ ಯಾವ ನಿರ್ಧಾರವನ್ನು ಕೈಗೆತ್ತಿಕೊಂಡಿಲ್ಲ. ಅನಿವಾರ್ಯವಾದ ಒತ್ತಡ ಬರುವುದಕ್ಕೆ ಮುನ್ನ ಈ ಸಂಗತಿಯನ್ನು ಪರಿಶೀಲಿಸುವುದು ಸಮಂಜಸ.

೨) ನಿಜವಾದ ಜೀವನಮಟ್ಟವನ್ನು ಅರಿಯಲು ಭಾರತದಾದ್ಯಂತ ಯಾವುದೇ ಒಂದು ಸೂಚ್ಯಾಂಕ ದೊರಯದೇ ಇರುವುದು ಶೋಚನೀಯ, ಹೀಗಾಗಿ ನಿರ್ದಿಷ್ಟ ತುಟ್ಟಿಭತ್ಯೆಯನ್ನು ನಿಗದಿ ಮಾಡಲಾಗದು.

೩) ಜೀವನಮಟ್ಟದ ಬೆಲೆಯ ಏರಿಕೆಯು ದೇಶಾದ್ಯಂತ ಒಂದೇ ವಿಧವಾಗಿರದೇ ಇರುವುದರಿಂದ ಕೇಂದ್ರವು ಎಲ್ಲಾ ಪ್ರಾಂತಗಳಲ್ಲಿಯೂ ಒಂದೇ ಧೋರಣೆಯನ್ನು ಅನುಸರಿಸುವಲ್ಲಿ ತೊಂದರೆ ಇದೆ. ಈ ದಿಶೆಯಲ್ಲಿ ವಿವಿಧ ಪ್ರಾಂತಗಳಲ್ಲಿಯ ಪರಿಸ್ಥಿತಿಗಳೂ ಬೇರೆಯಾಗಿವೆ.

ಕಾರ್ಮಿಕರಿಗೆ ಕೆಲಸಮಾಡಲು ನ್ಯಾಯವಾದ ಪರಿಸ್ಥಿತಿಗಳನ್ನು ಮಾಡಿಕೊಡುವುದಕ್ಕಾಗಿ, ಸರ್ಕಾರ ಕಾರ್ಮಿಕ ಆಯುಕ್ತರುಗಳನ್ನು ನೇಮಕಮಾಡಿ, ವ್ಯಾಜ್ಯ ತಲೆದೋರಿದ ಸಂದರ್ಭದಲ್ಲಿ ಅದನ್ನು ತೀರ್ಮಾನಿಸಲು ಭಾರತ ರಕ್ಷಣಾ ನಿಯಮಗಳ ಕೆಳಗೆ ಉಪಬಂಧಗಳನ್ನು ಕಲ್ಪಿಸಿ ಕ್ರಮತೆಗೆದುಕೊಂಡಿದೆ.

**ಶ್ರೀ ಎನ್.ಎಂ. ಜೋಷಿ :** ಸರ್ಕಾರ, ಕಾರ್ಮಿಕರ ಕನಿಷ್ಠ ವೇತನವನ್ನು ನಿರ್ಧರಿಸುವ ಶಾಸನದ ಬಗೆಗೆ ಏನು ಕ್ರಮಕೈಗೊಂಡಿದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈಗ ಯುದ್ಧದ ಸಮಯವಾದುದರಿಂದ ಅಂತಹ ಯಾವ ಕಾರ್ಯಕ್ರಮವನ್ನೂ ಕೈಗೆತ್ತಿಕೊಳ್ಳಲಾಗದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೧೬, ಫೆಬ್ರವರಿ ೧೯೪೩ ಪು. ೨೬೭–೨೬೮

**ಶ್ರೀ ಎನ್.ಎಂ. ಜೋಷಿ :** ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವಲ್ಲಿ ಯುದ್ಧದಿಂದಾಗಿ ಎದುರಾಗುವ ತೊಂದರೆಗಳೇನು ಎಂದು ತಿಳಿಯಬಹುದೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅದು ತುಂಬಾ ವಿವಾದಾಸ್ಪದವಾದ ಶಾಸನ.

**ಶ್ರೀ ಹುಶೇನಿ ಬಾಯ್ ಎ. ಲಾಲ್‌ಜೀ :** ಜೀವನಮಟ್ಟದ ಏರಿಕೆ ಅಥವಾ ಸೂಚ್ಯಾಂಕಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆಯೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಕೇವಲ ಬೊಂಬಾಯಿ ಮಾತ್ರ ಪ್ರಾಂತದಲ್ಲಿ ಮಾತ್ರ ಸೂಚ್ಯಾಂಕ ದೊರೆತಿದೆ.

**ಶ್ರೀ ಎನ್.ಎಂ. ಜೋಷಿ :** ಮುಷ್ಕರ ಹಾಗೂ ಬಂದ್‌ಗಳನ್ನು ಪ್ರತಿಬಂಧಿಸುವ ಶಾಸನದಿಂದ ತಕರಾರುಗಳಿಗೆ ಆಹ್ವಾನ ನೀಡಿದಂತಾಗುತ್ತದೆ ಎಂಬುದನ್ನು ಸರ್ಕಾರ ಅರಿತಿದೆಯೇ? ಅಲ್ಲದೆ ಯುದ್ಧದ ಸಮಯದಲ್ಲಿ ಈ ವಿಧವಾದ ತಕರಾರು ಯುದ್ಧದ ಹಿತಾಸಕ್ತಿಗೆ ಮಾರಕವಲ್ಲವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನಗೆ ನಿಮ್ಮ ಹೇಳಿಕೆಯು ಸಮಂಜಸವಲ್ಲವೆಂದು ತೋರುತ್ತಿದೆ ಎಂದು ಹೇಳಬಯಸುವೆ.

**ಶ್ರೀ ಎನ್.ಎಂ. ಜೋಷಿ :** ನಾನು ಮತ್ತೊಂದು ಬಾರಿ ಸರ್ಕಾರವು ಆಲೋಚಿಸಲಿದೆಯೇ ಎಂದೇ ಕೇಳಬಯಸುವೆ.

**ಮಾನ್ಯ ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುಲ್ ರಹೀಮ್) ಅದು ಕೇವಲ ವಾದಕ್ಕಿಳಿದಂತಾಗುತ್ತದೆ.

**ಡಾ|| ಸರ್ ಜಿಯಾ ಉದ್ದೀನ್ ಅಹಮದ್ :** ಸರ್ಕಾರವು ಇಪ್ಪತ್ತು ಸಾವಿರಕ್ಕಿಂತ ಅಧಿಕ ಜನಸಂಖ್ಯೆ ಹೊಂದಿದ ಪಟ್ಟಣಗಳಲ್ಲಿಯ ಸೂಚ್ಯಂಕದ ಅಂಕಿಸಂಖ್ಯೆಗಳನ್ನು ಕಲೆಹಾಕಬಹುದೇ? ಈ ವಿಷಯ ಅತಿ ಮಹತ್ವದ್ದಾಗಿದೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ದಿಶೆಯಲ್ಲಿ ಶಾಸನವೇ ಇರದೇ ಹೋದಾಗ ಭಾರತದ ವಿವಿಧ ಪ್ರದೇಶಗಳಲ್ಲಿ ಸೂಚ್ಯಾಂಕವನ್ನು ಕಲೆಹಾಕುವುದು ಸಾಧ್ಯವಾಗುವುದಿಲ್ಲ.

**ಶ್ರೀ ಎನ್.ಎಂ. ಜೋಷಿ :** ಕೇಂದ್ರ ಶಾಸನಸಭೆಯ ಕಾನೂನು ಇದೆ ಎಂದು ಮಾನ್ಯ ಸದಸ್ಯರಿಗೆ ತಿಳಿದಿದೆಯೇ? ಹೀಗಾಗಿ ಸರ್ಕಾರ ಅಂಕಿಸಂಖ್ಯೆಗಳನ್ನು ಸಂಗ್ರಹಿಸಬಹುದಲ್ಲವೇ?

**ಮಾನ್ಯ ಅಧ್ಯಕ್ಷ** (ಸರ್ ಅಬ್ದುಲ್ ರಹೀಮ್) : ಮುಂದಿನ ಪ್ರಶ್ನೆ.

# ೧೭
# ಕಾರ್ಖಾನೆಯ ಕಾರ್ಮಿಕರಲ್ಲಿ ಅಸಂತೃಪ್ತಿ*

**೮೭. ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಅ) ಮಾನ್ಯ ಕಾರ್ಮಿಕ ಸದಸ್ಯರಿಗೆ ಕಾರ್ಮಿಕ ವರ್ಗದಲ್ಲಿರುವ ಅಸಂತೃಪ್ತಿಯ ಬಗೆಗೆ ತಿಳಿದಿದೆಯೇ? ಬಂಡವಾಳಶಾಹಿಗಳು ಅಧಿಕ ಲಾಭಗಳಿಸಿದರೂ ಅದರಲ್ಲಿಯ ಲಾಭಾಂಶದ ಕೊಂಚ ಮಟ್ಟಿನ ಹಣವನ್ನಾದರೂ ಕಾರ್ಮಿಕರಿಗೆ ಹೆಚ್ಚಿನ ಕೂಲಿಯನ್ನು ನೀಡದೇ ಇರುವುದೇ ಅಸಂತೃಪ್ತಿಗೆ ಕಾರಣವಾಗಿದೆ.

ಆ) ಈ ದಿಶೆಯಲ್ಲಿ ಮಾನ್ಯ ಸದಸ್ಯರು ಬಂಡವಾಳಶಾಹಿಗಳ ಲಾಭಾಂಶವನ್ನು ಕಾರ್ಮಿಕರಲ್ಲಿ ಹಂಚುವ ಬಗೆಗೆ ಏನು ಮಾಡಿದ್ದಾರೆ?

ಇ) ಕಾರ್ಖಾನೆಯ ಕಾರ್ಮಿಕರಲ್ಲಿಯ ಅಸಂತುಷ್ಟಿಗೆ ರಾಜಕೀಯ ಕಾರಣಗಳೇನೂ ಇರದೆ, ಕೇವಲ ಆರ್ಥಿಕ ಮುಗ್ಗಟ್ಟೇ ಅದಕ್ಕೆ ಕಾರಣ ಎಂದು ಮಾನ್ಯ ಸದಸ್ಯರು ಬಲ್ಲರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಎಲ್ಲಿ ಬೆಲೆ ಏರಿದೆಯೋ ಅಂತಹ ಸ್ಥಾನದಲ್ಲಿ ಲಾಭಗಳಿಕೆಯೂ ಏರಿದೆ. ಕಾರ್ಮಿಕರು ಈ ಸಂದರ್ಭಗಳಲ್ಲಿ ಹೆಚ್ಚು ವೇತನ ಕೇಳುವುದು ಸಮಂಜಸ. ಅಂತಹ ಬೇಡಿಕೆಗಳನ್ನು ಗಮನಿಸುವಂತೆ ಸರ್ಕಾರವು ಸೂಚಿಸುವುದು.

ಆ) ಉದ್ದಿಮೆಯ ಕೆಲವು ಲಾಭಾಂಶವು ಸರ್ಕಾರದ ಅಬಕಾರಿ ಶುಲ್ಕಕ್ಕೆ ಸಲ್ಲುತ್ತದೆ. ಮಿಕ್ಕ ಲಾಭಾಂಶದಲ್ಲಿ ಅನೇಕ ಉದ್ದಿಮೆಗಳು ತಮ್ಮ ಕಾರ್ಮಿಕರಿಗೆ ಬೋನಸ್ ನೀಡುತ್ತಿವೆ. ಹೀಗಾಗಿ ಸದ್ಯ ಸರ್ಕಾರ ಯಾವ ವಿಧವಾದ ಚರ್ಚೆಯನ್ನೂ ತಾವು ಸೂಚಿಸಿದಂತೆ ತೆಗೆದುಕೊಳ್ಳಲು ಸಿದ್ಧವಿಲ್ಲ.

ಇ) ಪ್ರಶ್ನೆ ಸರಿಯಾಗಿ ಅರ್ಥವಾಗುತ್ತಿಲ್ಲ

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಬೋನಸ್ ನೀಡಿದ ಕಾರ್ಖಾನೆಗಳ ಹೆಸರನ್ನು ಸರ್ಕಾರ ತಿಳಿದುಕೊಂಡಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ನಮಗೆ ತಿಳಿದಿದೆ. ಮಾನ್ಯ ಸದಸ್ಯರಿಗೆ ಬೇಕಾದಲ್ಲಿ ತಿಳಿಸಲಾಗುವುದು.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಈ ಎಲ್ಲಾ ಕಾರ್ಖಾನೆಗಳು ಬೋನಸ್ಸನ್ನು ನೀಡುತ್ತಿವೆಯೇ ಅಥವಾ ಕೇವಲ ಕೆಲವು ಮಾತ್ರವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ನಿರ್ದಿಷ್ಟವಾದ ಪ್ರಶ್ನೆ ಕೇಳಿದಲ್ಲಿ ಉತ್ತರಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೧೯೪೩, ಫೆಬ್ರವರಿ ೧೬, ಪು. ೨೬೮

# ೧೮
# ಒಬ್ಬ ಕಾರ್ಮಿಕ ಸಂಸಾರದ ಮುಂಗಡಪತ್ರ*

**೮೮. ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಅ) ಮಾನ್ಯ ಸದಸ್ಯರು ೧೯೪೩ರ ಕಾರ್ಮಿಕರ ಸಂಸಾರದ ಮುಂಗಡಪತ್ರವನ್ನು ಸಭೆಯ ಮುಂದೆ ಮಂಡಿಸುವರೇ? ಓರ್ವ ಕಾರ್ಮಿಕನ ದಿನಗೂಲಿ ೮ ಆಣೆಗಳಿದ್ದು ಅವನು ಆರು ಜನರಿರುವ ಸಂಸಾರವನ್ನು ಹೇಗೆ ತೂಗಿಸಬಲ್ಲ?

ಆ) ಅವರ ಸಂಸಾರಕ್ಕೆ ಬೇಕಾಗುವ ಧಾನ್ಯ ಎಷ್ಟು ಹಾಗೂ ಅದರ ಬೆಲೆ ಏನು?

ಇ) ಈ ದಿಶೆಯಲ್ಲಿ ಮಾಲಿಕರು ತಮ್ಮ ಕಾರ್ಮಿಕರಿಗೆಂದೇ ಯಾವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತದಾದ್ಯಂತ ಕಾರ್ಮಿಕರ ಸಂಸಾರದ ಏಕರೂಪ ಮುಂಗಡಪತ್ರವೆಂಬುದೇ ಇಲ್ಲ. ಆದುದರಿಂದ ೧೯೪೩ರ ಸಂಸಾರದ ಮುಂಗಡಪತ್ರ ನೀಡಲು ಸಾಧ್ಯವೇ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದಲ್ಲಿ ಬೊಂಬಾಯಿಯಲ್ಲಿಯ ಹಿಂದಿನ ಸಂವತ್ಸರಗಳ ಸಂಸಾರದ ಮುಂಗಡಪತ್ರವನ್ನು ನೀಡಬಹುದು.

ಆ) ಅಂಕಿಸಂಖ್ಯೆಗಳ ಅಭಾವದಿಂದಾಗಿ ಕಾರ್ಮಿಕರ ಸಂಸಾರಕ್ಕೆ ಬೇಕಾದ ದವಸಧಾನ್ಯಗಳ ಮಾಹಿತಿ ನೀಡಲಾಗುವುದಿಲ್ಲ. ಆಹಾರ ಸೇವನೆ ಹಾಗೂ ಬೆಲೆಗಳಲ್ಲಿ ಭೇದವಿರುವುದನ್ನು ಅನೇಕ ಸ್ಥಳಗಳಲ್ಲಿ ಕಾಣಬಹುದಾಗಿದೆ.

ಇ) ಅನೇಕ ಮಾಲೀಕರು ಕಾರ್ಮಿಕರಿಗಾಗಿ ಧಾನ್ಯದ ಅಂಗಡಿಗಳನ್ನು ತೆರೆದಿದ್ದಾರೆ. ಭಾರತ ಸರ್ಕಾರವೂ ಅಖಿಲ ಭಾರತ ಮಾಲೀಕರ ಸಂಘಕ್ಕೆ ಹೆಚ್ಚು ಅಂಗಡಿಗಳನ್ನು ತೆರೆಯುವಂತೆ ಸೂಚಿಸಿದೆ. ಈ ಕೆಳಗೆ ಹೇಳಲಾದ ಹೇಳಿಕೆಯಿಂದ ಸದಸ್ಯರ ಸದ್ಯ ಸರ್ಕಾರದ ಬಳಿ ಇರಬಹುದಾದ ವಿವರಗಳನ್ನು ಅರಿಯಬಹುದು.

### ಹೇಳಿಕೆ

(ಇದರಲ್ಲಿರುವ ಮಾಹಿತಿ ಸಂಗ್ರಹಿಸಿದ್ದೇ ಹೊರತು, ಇಂದಿನವರೆಗಿನದಲ್ಲ.)

**ಮದ್ರಾಸ್ :** ೩೧ ಕಾರ್ಖಾನೆಗಳಲ್ಲಿ ಧಾನ್ಯದ ಅಂಗಡಿಗಳಿವೆ. ೧೩ ಮಾಲೀಕರಿಂದ ೧೮ ಕಾರ್ಮಿಕರ ಸಹಕಾರ ಸಂಘಗಳು ತೆರೆಯಲ್ಪಟ್ಟಿವೆ. ಮಾಲೀಕರ ಸಹಕಾರ ಅನೇಕರಿಗಿದೆ. ೫೦ ಕಾರ್ಖಾನೆಗಳಲ್ಲಿ ತುರ್ತು ಪರಿಸ್ಥಿತಿಗೆಂದೇ ದಾಸ್ತಾನನ್ನು ಸಂಗ್ರಹಿಸಿಡಲಾಗಿದೆ. ೬ ಕಾರ್ಖಾನೆಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಬೇಯಿಸಲಾದ ಆಹಾರವನ್ನೇ ನೀಡಲಾಗುತ್ತಿದೆ.

ಎರಡು ಕಾರ್ಖಾನೆಗಳಲ್ಲಿ ಕಾರ್ಮಿಕರೇ ಫಲಹಾರಕೇಂದ್ರಗಳನ್ನು ತೆರೆದಿದ್ದಾರೆ.

**ಬಂಗಾಳ :** ೧೪೬ ಕಾರ್ಖಾನೆಗಳು ಧಾನ್ಯದ ಅಂಗಡಿ ತೆರೆದಿದ್ದು ತುರ್ತು ಪರಿಸ್ಥಿತಿಗೂ ವ್ಯವಸ್ಥೆ ಮಾಡಲಾಗಿದೆ. ತುರ್ತು ಪರಿಸ್ಥಿತಿ ಅಲ್ಲದೆ ೩೫ ಕಾರ್ಖಾನೆಗಳಲ್ಲಿ ಕಾಳಿನ ದಾಸ್ತಾನು ಇದೆ. ౭೫ ಕಾರ್ಖಾನೆಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ಬೇಯಿಸಿದ ಆಹಾರ ನೀಡುವ ವ್ಯವಸ್ಥೆ ಇದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಫೆಬ್ರವರಿ ೧೬ ಪು. ೨೬೮–೬೯

ಬೊಂಬಾಯಿ, ಪಂಜಾಬಿನ ವಿವರಗಳು ತಿಳಿದಿಲ್ಲ. ಆದರೆ ಅನೇಕರು ವ್ಯವಸ್ಥೆ ಮಾಡಿದ್ದಾರೆ ಮತ್ತು ಧಾನ್ಯದ ಸಂಗ್ರಹವಿದೆ ಎಂದು ತಿಳಿದು ಬಂದಿದೆ.

**ಬಿಹಾರ :** ಏಳು ಮಾಲೀಕರು ಹಾಗೂ ಪ್ರಮುಖ ಮಾಲೀಕರು ತಮ್ಮ ಕಾರ್ಮಿಕರಿಗೆಂದೇ ಅಂಗಡಿಗಳನ್ನು ತೆರೆದಿದ್ದಾರೆ. ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಆಹಾರ ಧಾನ್ಯಗಳ ಸಂಗ್ರಹವಿದೆ. ಒಬ್ಬ ಪ್ರಮುಖ ಮಾಲೀಕನು ಸಹಕಾರ ಸಂಘದವರಿಗೆ ಹಣ ಮುಂಗಡವಾಗಿ ನೀಡಿದ್ದಾನೆ ಹಾಗೂ ಕಡಿಮೆ ಬಾಡಿಗೆಯ ಮೇಲೆ ಕಟ್ಟಡವನ್ನೂ ನೀಡಲಾಗಿದೆ.

**ಸಂಯುಕ್ತ ಪ್ರಾಂತಗಳು :** ಕಾನ್ಪುರದ ಎಲ್ಲಾ ದೊಡ್ಡ ಕಾರ್ಖಾನೆಗಳೂ ತುರ್ತು ಪರಿಸ್ಥಿತಿಗೆಂದೇ ಧಾನ್ಯ ಸಂಗ್ರಹ ಹೊಂದಿದೆ.

**ಮಧ್ಯ ಪ್ರಾಂತ ಹಾಗೂ ಬೀರಾರ್ :** ಮಾಲೀಕರಿಂದ ೧೪ ಅಂಗಡಿಗಳು ತೆರೆಯಲ್ಪಟ್ಟಿವೆ. ಕಾರ್ಮಿಕ ಸಂಘದವರು ಅಂಗಡಿ ತೆರೆಯಲು ಒಬ್ಬ ಮಾಲೀಕರು ಸಹಾಯ ನೀಡಿದ್ದಾರೆ. ಏಳು ಮಾಲೀಕರು ಹಾಗೂ ಒಂದು ಸಹಕಾರ ಸಂಘ ಧಾನ್ಯದ ದಾಸ್ತಾನು ಇಡಲು ಸೂಕ್ತ ಕ್ರಮಕೈಗೊಂಡಿದ್ದಾರೆ.

**ಸಿಂಧ್ :** ಕರಾಚಿ ಹಾಗೂ ಹೈದರಾಬಾದ್ (ಸಿಂಧ್)ಗಳಲ್ಲಿ ಏಳು ಮಾಲೀಕರು ಧಾನ್ಯದ ಅಂಗಡಿ ತೆರೆದಿದ್ದು ಅನೇಕ ಪ್ರಮುಖ ಮಾಲೀಕರು ಈ ದಿಶೆಯಲ್ಲಿ ಮುಂದೆ ಬಂದಿದ್ದಾರೆ. ಕರಾಚಿಯಲ್ಲಿ ಒಂದು ಪ್ರಮುಖ ಉದ್ದಿಮೆಯು ಫಲಹಾರ ಮಂದಿರ ತೆರೆದು, ಕಾರ್ಮಿಕರಿಗೆ ಹಾಲು ಹಾಗೂ ಬೇಯಿಸಿದ ಆಹಾರ ನೀಡುತ್ತಿದೆ.

**ಅಸ್ಸಾಂ :** ಉದ್ದಿಮೆ ಮಾಲೀಕರು ಆಹಾರ ದಾಸ್ತಾನಿಗೆ ಸೂಕ್ತ ವ್ಯವಸ್ಥೆ ಮಾಡಿದ್ದಾರೆ ಹಾಗೂ ಧಾನ್ಯಗಳ ಅಂಗಡಿಗಳನ್ನೂ ತೆರೆದಿದ್ದಾರೆ.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಕಾರ್ಮಿಕ ಇಲಾಖೆಯು ಬಡ ಕಾರ್ಮಿಕರ ಕೂಲಿಯನ್ನು ನಿಗದಿಪಡಿಸಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ.

# ೧೯
# ಕಾರ್ಮಿಕರಿಗೆ ಅವಶ್ಯವಿದ್ದ ಸಾಮಗ್ರಿಗಳನ್ನು ನೀಡುವಲ್ಲಿ ಕೈಗೆತ್ತಿಕೊಂಡ ಕ್ರಮಗಳು*

**೮೯. ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಅ) ಮಾನ್ಯ ಕಾರ್ಮಿಕ ಸದಸ್ಯರೇ, ತಾವು ತಮ್ಮ ಇಲಾಖೆಯ ಕಾರ್ಮಿಕ ಸದಸ್ಯರ ಅನಿವಾರ್ಯ ಆವಶ್ಯಕತೆಗಳಾದ ಆಹಾರ ಸಾಮಗ್ರಿಗಳನ್ನು ಒದಗಿಸುವಲ್ಲಿ ಯಾವ ಕ್ರಮಕೈಗೊಂಡಿರುವಿರಿ. ಇಲ್ಲದೇ ಹೋದಲ್ಲಿ ಅದರ ಕಾರಣಗಳೇನು?

ಆ) ಬಡಜನರು ತಮಗೆ ದೊರೆಯುವ ಕೂಲಿಯಲ್ಲಿಯೇ ಆಹಾರ ಧಾನ್ಯಗಳನ್ನು ಖರೀದಿ ಮಾಡುವ ಬಗೆಗೆ ಏನು ಕ್ರಮಕೈಗೊಂಡಿರುವಿರಿ. ಇಲ್ಲದೇ ಹೋದಲ್ಲಿ ಅದಕ್ಕೆ ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಈ ಪ್ರಶ್ನೆಯು ಹಲವು ಕಾಲದಿಂದ ಸರಕಾರದ ಗಮನವನ್ನು ಸೆಳೆದಿದೆ. ಈಗ ಇದನ್ನು ಆಹಾರ ಇಲಾಖೆಯು ಪರಿಶೀಲಿಸುತ್ತಿದೆ. ಪ್ರಾಂತೀಯ ಸರ್ಕಾರಗಳಿಗೆ ಆಹಾರ ಧಾನ್ಯಗಳಿಗೆ ಮತ್ತು ಅದರ ಸರಬರಾಜಿಗೆ ಆದ್ಯತೆ ನೀಡಬೇಕೆಂದೂ ಸೂಚಿಸಲಾಗಿದೆ.

# ೨೦
# ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಕ್ರಮಗಳು*

**೯೦. ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಅ) ಮಾನ್ಯ ಕಾರ್ಮಿಕ ಸದಸ್ಯರು ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಯಾವ ಕ್ರಮತೆಗೆದುಕೊಂಡಿದ್ದಾರೆ ಎಂದು ತಿಳಿಸುವರೇ?

ಆ) ಯಾವ ವಿಧವಾಗಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವಿರಿ?

ಇ) ಅವರು ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡಿ ಅವುಗಳ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುವ ವ್ಯವಸ್ಥೆ ಮಾಡುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಕಾರ್ಯಾಂಗ ಹಾಗೂ ಶಾಸಕಾಂಗ ರಂಗಗಳಲ್ಲಿ ಸರ್ಕಾರವು ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸಲು ಹೆಣಗಾಡುತ್ತಿದೆ. ಮಾನ್ಯ ಸದಸ್ಯರ ಗಮನಕ್ಕೆ ನಾನು ಪತ್ರಿಕೆಗಳಿಗೆ ಹೇಳಿಕೆ ನೀಡಿದ ಪ್ರತಿಯನ್ನು ಇರಿಸಿದ್ದೇನೆ. ಅದು ತಮಗೆ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯ ಸುಧಾರಣೆಯ ಕಲ್ಪನೆಯನ್ನು ನೀಡುತ್ತದೆ. ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚು ವಿವರಣೆಗಳು ಬೇಕಾದಲ್ಲಿ ಪೂರೈಸಲಾಗುವುದು.

ಆ) ಇದಕ್ಕೆ ಪ್ರಶ್ನೆ (ಅ) ಅಡಿಯಲ್ಲಿ ಉತ್ತರಿಸಲಾಗಿದೆ.

ಇ) ಸರ್ಕಾರವು ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡಬೇಕೆಂದಿಲ್ಲ.

(ಪತ್ರಿಕೆಗಳಿಗೆ ನೀಡಿದ ಹೇಳಿಕೆ)

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೧೬ ಫೆಬ್ರವರಿ ೧೧ ಪು. ೨೬೯.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೬ ಫೆಬ್ರವರಿ ೧೯೪೩ ಪು. ೨೭೦–೨೭೧

**ಯುದ್ಧದ ಸಮಯದಲ್ಲಿ ಭಾರತದಲ್ಲಿ ಕಾರ್ಮಿಕರ ಕಲ್ಯಾಣ ಕಾರ್ಯ :**

ಸದಸ್ಯದಲ್ಲಿಯೇ ಉಪಕಾರ್ಮಿಕ ಕಲ್ಯಾಣಾಧಿಕಾರಿಗಳನ್ನು ನೇಮಕ ಮಾಡಿರುವುದರಿಂದ ಔದ್ಯಮಿಕ ರಂಗದಲ್ಲಿ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಕಾರ್ಯದ ಬಗೆಗೆ, ಯುದ್ಧದ ಸಮಯ ಭಾರತದಲ್ಲಿ ಏನು ಮಾಡಲು ಸಾಧ್ಯ ಎಂದು ತಿಳಿಯಬಹುದಾಗಿದೆ. ಸರಕಾರ ಕೇವಲ ಕಾನೂನು ಮಾಡುವುದು ಹಾಗು ಆಳುವದೊಂದೇ ಎಂಬ ಹಳೆಯ ಕಲ್ಪನೆಯನ್ನು ತೊರೆದು, ಆಡಳಿತ ಹೊಣೆಗಾರಿಕೆ ಹಾಗೂ ಜನತೆಯ ಭೌತಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯನ್ನೇ ನೂತನ ಗುರಿಯಾಗಿರಿಸಿಕೊಳ್ಳಲಾಗಿದೆ. ಭಾರತದಲ್ಲಿ ಕಾರ್ಮಿಕ ವಿಷಯವು ಪ್ರಾಂತಗಳಿಗೆ ಸೇರಿದ ಸಂಗತಿಯಾದುದರಿಂದ, ಕೇಂದ್ರ ಸರ್ಕಾರವು ಎಲ್ಲಾ ಪ್ರಾಂತಗಳಲ್ಲಿಯೂ ಕಾರ್ಮಿಕ ಶಾಸನಗಳು ಒಂದೇ ವಿಧವಾಗಿ ಇರಬೇಕು ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಕಾರ್ಯಕಲಾಪಗಳೇ ಭಾರತದಾದ್ಯಂತ ನಡೆಯಬೇಕೆಂದೇ ಇಚ್ಛಿಸುತ್ತದೆ. ಈ ದಿಶೆಯಲ್ಲಿ ನಮ್ಮ ಶಾಸನಗಳು ಸಮಗ್ರವಾಗಿದ್ದು ಔದ್ಯೋಗಿಕ ಬಾಂಧವ್ಯ ಹಾಗೂ ಸೇವೆಗಳ ಪರಿಸ್ಥಿತಿಗೆ ಸೀಮಿತವಾಗಿದೆಯೇ ಹೊರತು ವೇತನ ಮತ್ತು ಕಲ್ಯಾಣ ಕಾರ್ಯಗಳಿಗಲ್ಲ. ಯುದ್ಧದ ಸಮಯದಲ್ಲಿ ಕಾರ್ಮಿಕರ ಕೆಲವು ಹಕ್ಕುಗಳನ್ನು ಮೊಟಕುಗೊಳಿಸಲಾಗುವುದು. ಈ ರೀತಿ ಮೊಟಕುಗೊಳಿಸುವುದರಿಂದ ಉತ್ಪಾದನೆಯ ಮಟ್ಟವನ್ನು ಕಾಪಾಡಬಹುದು. ಆದರೆ ಈ ವಿಧವಾದ ನಿರ್ಬಂಧಗಳಿಂದ ನಾವು ಕಾರ್ಮಿಕರಿಗೆ ಅಧಿಕ ಅನುಕೂಲಗಳನ್ನು ನಿರ್ಮಿಸಬಹುದು. ಆದುದರಿಂದ ಕಾರ್ಮಿಕರು ಅಗತ್ಯ ಸೇವಾ ನಿರ್ವಹಣೆಯ ಕಾನೂನಿಗೆ ಒಳಪಟ್ಟಿದ್ದು ತಮ್ಮ ಹುದ್ದೆಗಳಿಗೆ ಅಂಟಿಕೊಂಡಿರಬೇಕಾಗುತ್ತದೆ.

ಈ ಕಾನೂನಿನಡಿಯಲ್ಲಿ ಅಗತ್ಯ ಉದ್ದಿಮೆಗಳ ಕಾರ್ಮಿಕರಿಗೆ ಹುದ್ದೆಯ ಭರವಸೆಯನ್ನು ನೀಡಲಾಗುವುದು. ಮುಂದುವರಿದು ತಾಂತ್ರಿಕ ವ್ಯಕ್ತಿಗಳ ಸೇವೆಯನ್ನು ಉತ್ತಮ ವಿಧಾನದಲ್ಲಿ ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಅವರಿಗೆ ಉತ್ತಮ ಸೇವಾ ಸೌಲಭ್ಯಗಳನ್ನೂ ಒದಗಿಸಲಾಗುವುದು. ಆದುದರಿಂದ ಸೂಚನೆ ನೀಡದೇ ಆರಂಭಿಸಿದ ಮುಷ್ಕರಗಳನ್ನು ಕಾನೂನುಬಾಹಿರ ಎಂದೇ ಭಾವಿಸಲಾಗುವುದು. ಈ ದಿಶೆಯಲ್ಲಿ ನ್ಯಾಯ ಪರಿಹಾರಕ್ಕೆ ಸೂಕ್ತ ವ್ಯವಸ್ಥೆಯನ್ನು ಒದಗಿಸಿದ್ದು ಈ ವಿಧವಾದ ನ್ಯಾಯ ಪರಿಹಾರದ ಪರಿಣಾಮಗಳನ್ನು ಜಾರಿಗೊಳಿಸುವ ಅಧಿಕಾರವನ್ನೂ ನೀಡಲಾಗಿದೆ.

ಹೀಗಾಗಿ ಸರ್ಕಾರದಿಂದ ಕಾರ್ಮಿಕರ ಮೇಲೆ ಹಲವು ನಿರ್ಬಂಧಗಳನ್ನು ಹೇರಿರುವುದರಿಂದ ಸರಕಾರದ ಅಧಿಕಾರವು ಹೆಚ್ಚಿ ಹುದ್ದೆಗಳ ಸೇವೆಯನ್ನು ಉತ್ತಮಪಡಿಸಲಾಗಿದೆ. ಅದರ ಪ್ರಭಾವವೂ ಹೆಚ್ಚಿದೆ.

ಯುದ್ಧದಿಂದಾಗಿ ಆದ ಪರಿಣಾಮಕಾರಿ ಅಭಿವೃದ್ಧಿ ಎಂದರೆ, ಕಾರ್ಮಿಕ ಇಲಾಖೆಯ ನೌಕರರಿಗೆ ತರಬೇತಿಯನ್ನು ನೀಡುವುದು ಹಾಗೂ ಕುಶಲಕಾರ್ಮಿಕರನ್ನು ಅಧಿಕ ತರಬೇತಿಗೆಂದೇ ಇಂಗ್ಲೆಂಡಿಗೆ ಕಳಿಸಿಕೊಡುವುದು. ಈ ದಿಶೆಯಲ್ಲಿ ಇಂಗ್ಲೆಂಡಿಗೆ ತೆರಳಿದ್ದ 'ಬೆವಿನ್ ಬಾಲಕರು' ಇಂಗ್ಲೆಂಡಿನ ಕಾರ್ಮಿಕರ ಪರಿಸ್ಥಿತಿಯ ಒಳನೋಟವನ್ನು ಅರಿಯಲು ಸಹಕಾರಿಯಾಗಿದೆ, ಅಲ್ಲದೆ ಅವರು ತಾವು ಮುಂಚೆ ಸಂಪಾದಿಸುತ್ತಿದ್ದ ವೇತನಕ್ಕಿಂತ ಎರಡೂವರೆ ಪಟ್ಟು ಅಧಿಕ ವೇತನ ಸಂಪಾದಿಸುವ ಸ್ಥಿತಿಯಲ್ಲಿದ್ದಾರೆ. ಜೂನ್ ೧೯೪೩ರ ಅವಧಿಯ ಹೊತ್ತಿಗೆ ೭೦,೦೦೦ ಕಾರ್ಮಿಕರಿಗೆ ತರಬೇತಿ ನೀಡುವ ಒಂದು ಯೋಜನೆ ಭಾರತ ಸರ್ಕಾರ ಹೊಂದಿದೆ. ಈ ವಿಧವಾದ ಒಂದು ಯೋಜನೆಯಿಂದ ಯುದ್ಧೋತ್ತರ ಭಾರತದಲ್ಲಿ ಔದ್ಯೋಗಿಕ ಪುನರುತ್ಥಾನದಿಂದ ಕುಶಲ ಕಾರ್ಮಿಕರ ಪಡೆಯೇ ಸಿದ್ಧವಾಗುವುದು.

ಕಾರ್ಮಿಕರ ನೂತನ ಸಂಘಟನೆಯನ್ನು ಕುರಿತು ಹೇಳಬಹುದಾದರೆ ಮಾನ್ಯ ಸದಸ್ಯರು ಹೇಳಿದಂತೆ ಕಾರ್ಮಿಕ ಸಲಹೆಗಾರರಿಂದ ಕಾರ್ಮಿಕ ಇಲಾಖೆಯು ಪಡೆಯಬಹುದಾದ ಸೂಚನೆಗಳಿವೆ. ಮಾನ್ಯರಾದ

ಸರ್ ಫಿರೋಜ್‌ಖಾನ್ ನೂನ್ ಮತ್ತು ಆರ್.ಎಸ್. ನಿಂಬ್ಕರ್ ಅವರು ಜೀವನಪರ್ಯಂತ ಕಾರ್ಮಿಕ ಧುರೀಣರೇ ಆಗಿದ್ದಾರೆ. ಅವರು ಕಾರ್ಮಿಕರ ಹಿತಾಸಕ್ತಿ ಕಾಪಾಡಲೆಂದೇ ಅನೇಕ ಬಾರಿ ಬಂಧನಕ್ಕೆ ಒಳಗಾಗಿ ಸೆರೆಮನೆ ಸೇರಿದ್ದಾರೆ. ನಿಂಬ್ಕರ್ ಅವರು ಭಾರತದ ಹಿರಿಯ ಕಾರ್ಮಿಕ ಸಂಘವಾದ ಬೊಂಬಾಯಿ ಗಿರಣಿ ಕಾಮಗಾರ ಸಂಘದ ರಚನೆಯಲ್ಲಿ ಸಲ್ಲಿಸಿದ ಸೇವೆ ಶ್ಲಾಘನೀಯವಾಗಿದೆ ಹಾಗೂ ಅದು ಅವರ ರಚನಾತ್ಮಕ ಕಾರ್ಯದ ವೈಖರಿಯನ್ನು, ಸಂಘಟನಾ ಚಾತುರ್ಯವನ್ನು ಎತ್ತಿ ತೋರಿಸುತ್ತದೆ. ಅವರು ತಮ್ಮ ಸ್ವಂತ ಊರು ಮತ್ತು ಭಾರತದ ಸೇವೆಯನ್ನು ಮುಂಬೈ ಮಹಾನಗರಗಳ ಪಾಲಿಕೆಯ ಸದಸ್ಯರಾಗಿ ಮತ್ತು ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದಲ್ಲಿ ಸರ್ ಫಿರೋಜ್‌ಖಾನ್ ನೂನ್ ಅವರ ನೇತೃತ್ವದಲ್ಲಿ ಸಲ್ಲಿಸಿರುವುದನ್ನು ಸ್ಮರಿಸಬಹುದಾಗಿದೆ. ಅವರು ಸರ್ಕಾರದ ಕಾರ್ಯಕರ್ತರಾಗಿ ನಮ್ಮ ಮಧ್ಯೆ ಇರುವುದು ನಮ್ಮ ಸೌಭಾಗ್ಯವೆಂದೇ ತಿಳಿಯಬಹುದು. ಅವರ ಸೇವೆಯನ್ನು ಖಚಿತವಾಗಿ ನಾವು ಪಡೆಯಬೇಕು. ಈವರೆಗೆ ಶ್ರೀ ನಿಂಬ್ಕರ್‌ರರಿಗೆ ಸಹಾಯ ಸಲ್ಲಿಸಲೆಂದೇ ನಾವು ಏಳು ಜನ ಸಹಾಯಕ ಅಧಿಕಾರಿಗಳನ್ನು ನೀಡಿದ್ದೇವೆ. ಈ ಕಾರ್ಮಿಕ ಕಲ್ಯಾಣ ಅಧಿಕಾರಿಗಳು ಕಳೆದ ನಾಲ್ಕು ದಿನಗಳಿಂದ ದೆಹಲಿಯಲ್ಲಿಯೇ ಕಾರ್ಯ ಮಾಡುತ್ತಿದ್ದಾರೆ. ಶೀಘ್ರದಲ್ಲಿಯೇ ಅವರನ್ನು (ಮತ್ತು ಅವರೊಡನೆ ಸೇರುವ ಎಂಟನೆ ಅಧಿಕಾರಿಯನ್ನೂ) ವಿವಿಧ ಸ್ಥಳಗಳಿಗೆ ಕಳಿಸಿಕೊಡಲಾಗುವುದು. ಅವರು ಕೇಂದ್ರ ಸರಕಾರದ ಪರವಾಗಿ ಸಂಪರ್ಕವನ್ನು ಕಲ್ಪಿಸಲಿದ್ದಾರೆ. ಈ ದಿಶೆಯಲ್ಲಿ ಅವರ ಕರ್ತವ್ಯಗಳೆಂದರೆ ಕಾರ್ಮಿಕರ ಸಮಸ್ಯೆ ಹಾಗೂ ಅವರ ಸ್ಥಿತಿಗಳನ್ನು ತಿಳಿಸುವುದು. ಅವರು ಎ.ಆರ್.ಪಿ. ಕ್ರಮಗಳನ್ನು ಅತಿ ಹೆಚ್ಚಿನ ದಕ್ಷತೆಯಿಂದ ಕಾರ್ಯಗತಗೊಳಿಸುವಲ್ಲಿಯೂ ಸಹಕರಿಸುತ್ತಾರೆ.

ಈ ಅಧಿಕಾರಿಗಳು ಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರ, ಮಾಲೀಕರು ಹಾಗೂ ಕಾರ್ಮಿಕರ ಮಧ್ಯೆ ತ್ರಿಕೋನ ಸಂಪರ್ಕವನ್ನು ಸಾಧಿಸಿ ಇಲಾಖೆಗೆ ಸಹಕರಿಸುವರೆಂದೂ ಆಶಿಸಲಾಗಿದೆ. ಈ ವಿಧವಾದ ಒಂದು ಸಮ್ಮೇಳನವನ್ನು ನಾವು ಕಳೆದ ಆಗಸ್ಟ್‌ನಲ್ಲಿ ನಡೆಸಿದ್ದು, ಮುಂಬರುವ ಡಿಸೆಂಬರ್‌ನಲ್ಲಿ ಮತ್ತೆ ಸಮಾವೇಶವನ್ನು ಕರೆಯಲಿರುವೆವು. ಈ ವಿಧವಾಗಿ ಈ ಸಮಾವೇಶಗಳನ್ನು ಕರೆಯುವುದರಿಂದ, ಭಾರತದಾದ್ಯಂತ ಕಾರ್ಮಿಕ ಧೋರಣೆಯನ್ನು ನಿರೂಪಿಸುವಲ್ಲಿ ಸಹಕಾರಿಯಾಗುವುದು.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** (ಸಿ)ಗೆ ಸಂಬಂಧಿಸಿದಂತೆ ಸರ್ಕಾರದವರು ಯಾವ ಧೋರಣೆಯನ್ನು ಅನುಸರಿಸುವರೆಂದು ಅರಿಯಬಹುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು ಸ್ವಾಮಿ.

# ೨೧
# ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯ ಇಂಜಿನಿಯರ್ ಸೇವೆಯ ಜಾತಿವಾರು ರಚನೆ *

**೧೦೦. ಮೌಲ್ವಿ ಮಹಮದ್ ಅಬ್ದುಲ್ ಘನಿ :** ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಿಂದ ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ ಪ್ರತಿಯೊಂದು ಪ್ರಾಂತದಿಂದ ಎಷ್ಟು ಜನ ಇಂಜಿನಿಯರುಗಳನ್ನು ನೇಮಿಸಲಾಗಿದೆ?

ಆ) ಅದಕ್ಕೆ ಅನುಸರಿಸಿರಬಹುದಾದ ಮಾನದಂಡಗಳೇನು?

ಇ) ಈ ನೇಮಕಾತಿಯಲ್ಲಿ ೧೯೩೪ರ ಗೃಹ ಇಲಾಖೆಯ ಜಾತಿವಾರು ರಚನೆಯ ನಿರ್ಣಯಗಳನ್ನು ಅನುಸರಿಸಲಾಗಿದೆಯೇ?

ಈ) (ಇ) ಪ್ರಶ್ನೆಗೆ ಸಂಬಂಧಿಸಿದಂತೆ ನಕಾರಾತ್ಮಕ ಉತ್ತರವಿದ್ದರೆ ಅದರ ಬಗೆಗೆ ಸರ್ಕಾರದ ಆಜ್ಞೆ ಅಥವಾ ಅದಕ್ಕೆ ಕಾರಣಗಳೇನು?

ಉ) ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿಯ ಇಂಜಿನಿಯರ್ ವಿಭಾಗದಲ್ಲಿರುವ ಅಧಿಕಾರಿಗಳೆಷ್ಟು ಮತ್ತು ಅವರಲ್ಲಿ ಮುಸ್ಲಿಮ್, ಸಿಖ್ ಅಧಿಕಾರಿಗಳೆಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಈ ಪ್ರಶ್ನೆಗೆ ಸೇರಿದಂತೆ ವಿವರಗಳ ಸಂಗ್ರಹಣೆಗೆ ತುಂಬಾ ಕಾಲಾವಕಾಶ ಅಗತ್ಯವಿರುವುದರಿಂದ ಹಾಗೂ ಶ್ರಮವಹಿಸಬೇಕಾಗುವುದರಿಂದ ಯುದ್ಧದ ಸಮಯದಲ್ಲಿ ಅದು ಸಾಧ್ಯವಾಗದೇ ಹೋಗಬಹುದು. ಆದರೆ ಗೆಜೆಟೆಡ್ ಅಧಿಕಾರಿಗಳ ಸಂಖ್ಯೆ ೮೩ ಇದ್ದು ಅವರ ರಾಷ್ಟ್ರೀಯತೆ ಹೀಗಿದೆ. ೫ ಯುರೋಪಿಯನ್‌ರು, ಮಿಕ್ಕವರು ಭಾರತೀಯರು. ಅವರಲ್ಲಿ ಭಾರತೀಯರ ಸಂಖ್ಯೆ ೮೩–೫=೭೮ ಆಗಬೇಕು ಆದರೆ ಒಟ್ಟು ೮೩ ಆಗುತ್ತಿದೆ. ೬೧ ಹಿಂದೂಗಳು, ೧೦ ಮಂದಿ ಮುಸ್ಲಿಮ್‌ರು, ೨ ಸಿಖ್ಖರು, ಬಾಕಿ ೧೦ ಬೇರೆ ವರ್ಗದವರು.

ಆ) ಮೂರು ಅಧಿಕಾರಿಗಳ ನೇಮಕಾತಿಯನ್ನು ಕೇಂದ್ರ ಸೇವಾ ಸಿಬ್ಬಂದಿ ಆಯೋಗದ ಸಲಹೆ ಹಾಗೂ ೧೯೩೪ರ ಗೃಹಶಾಖೆಯ ಜಾತಿವಾರು ಪದ್ಧತಿ ಸಾರ್ವಜನಿಕ ಸೇವೆಯಂತೆ ಮಾಡಲಾಗಿದೆ. ಬಾಕಿ ನೇಮಕಾತಿಗಳೆಲ್ಲವೂ ತಾತ್ಕಾಲಿಕವಾಗಿರುವುದರಿಂದ ಈ ಅಧಿಕಾರಿಗಳನ್ನು ಪ್ರಾಂತೀಯ ಸೇವೆಗಳಿಂದ ಎರವಲು ಪಡೆಯಲಾಗಿದೆ. ಅವರಿಗೆ ನಿರ್ದಿಷ್ಟ ಕಾರ್ಯಗಳನ್ನು ವಹಿಸಲಾಗಿದೆ. ಈ ಎಲ್ಲಾ ಅಧಿಕಾರಿಗಳ ಆಯ್ಕೆ ಭಾರತ ಸರ್ಕಾರದ ಆವಶ್ಯಕತೆಗಳಂತೆ ಪ್ರಾಂತೀಯ ಸರಕಾರಗಳಿಂದ ಕಾಲಕಾಲಕ್ಕೆ ಎರವಲು ಪಡೆಯಲಾಗಿದೆ.

ಇ) ಇಲ್ಲ. (ಆ) ಗೆ ಸಂಬಂಧಿಸಿದ ಉತ್ತರದಂತೆ ತಾತ್ಕಾಲಿಕ ಅಧಿಕಾರಿಗಳ ಬಗೆಗೆ ಹೌದು, ಖಾಯಂ ಅಧಿಕಾರಿಗಳ ಬಗೆಗೆ ಅಲ್ಲ.

ಉ) ಎರವಲು ಬಂದಿರುವ ಅಧಿಕಾರಿಗಳಿಗೆ ೧೯೩೪ರ ಗೃಹಶಾಖೆಯ ನಿಯಮ ಅನ್ವಯಿಸುವುದಿಲ್ಲ. ಏಕೆಂದರೆ ಅವರನ್ನು ಮೂಲ ಸ್ಥಾನಗಳಿಗೆ ಮರಳಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩,ಪು. ೨೭೯

ಊ) ಗೆಜೆಟೆಡ್ ಅಧಿಕಾರಿಗಳ ಸಂಖ್ಯೆ ೧೭೪ ಅವರಲ್ಲಿ ೧೮ ಮುಸ್ಲಿಮರು, ೮ ಸಿಖ್ಖರು ಇದ್ದಾರೆ. ಗೆಜೆಟೆಡ್ ಅಲ್ಲದ ಅಧಿಕಾರಿಗಳ ಸಂಖ್ಯೆ ಲಭ್ಯವಿಲ್ಲ.

**ಮೌಲ್ವಿ ಮಹಮದ್ ಅಬ್ದುಲ್ ಘನಿ :** ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ ಬಿಹಾರ ಸಾರ್ವಜನಿಕ ಕಾಮಗಾರಿ ಇಲಾಖೆಯಿಂದ ಎಷ್ಟು ಅಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದಕ್ಕೆ ಸೂಚನೆ ನೀಡಬೇಕು.

# ೨೨

# ಅಮೇರಿಕಾದ ಜಂಟಿ ಮೈಕಾ ಮಿಷನ್ ಹಾಗೂ ಲೋಹ ಶೇಖರಣೆ ಕಂಪನಿಗೆ ಮೈಕಾ ರಫ್ತಿನ ಏಕಸ್ವಾಮ್ಯ *

**೧೦೪. ಬಾಬು ಬೈಜನಾಥ ಬಜೋರಿಯಾ :** ಅ) ಮಾನ್ಯ ಕಾರ್ಮಿಕ ಸದಸ್ಯರು, ಅಭ್ರಕದ ಅದಿರಿನ ರಫ್ತು ವ್ಯವಹಾರ ಜಂಟಿ ಮೈಕಾ ಹಾಗೂ ಮೈಕಾ ಮಿಷನ್ ಲೋಹಶೇಖರಣೆ ಕಂಪನಿಗೊಂದಕ್ಕೇ, ಹೊರ ದೇಶಗಳಿಗೆ ರಫ್ತು ಮಾಡುವ ಕಾರ್ಯವನ್ನು ನೀಡಿರುವುದು ಸತ್ಯವೇ? ಭಾರತದಿಂದ ರಫ್ತು ಮಾಡಲು ಬೇರೆ ಯಾವ ಕಂಪನಿಗಳಿಗೂ ಏಕೆ ಅವಕಾಶ ನೀಡಿಲ್ಲ ಎಂದು ತಿಳಿಸುವಿರೋ?

ಆ) ಮೇಲಿನ ಪ್ರಶ್ನೆಗೆ ಸಕಾರಾತ್ಮಕ ಉತ್ತರವಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂದು ತಿಳಿಸಬಲ್ಲಿರಾ? ಕೇವಲ ಮೇಲೆ ತಿಳಿಸಲಾದ ವಿದೇಶಿ ಕಂಪನಿಗೆ ಮಾತ್ರ ಏಕೆ ಈ ಕಾರ್ಯ ನೀಡಲಾಯಿತು?

ಇ) ಸದಸ್ಯರ ಗಮನಕ್ಕೆ ಈ ವಿಷಯ ಬಂದಿವೆಯೇ? ಈ ವಿಧವಾದ ಕಡಿಮೆ ಬೆಲೆ ಗುತ್ತಿಗೆ ನೀಡುವುದರಿಂದ ಭಾರತದ ಅಭ್ರಕವನ್ನು ಕಡಿಮೆ ಬೆಲೆಗೆ ಕೊಂಡು ಅಮೆರಿಕಾ ಹಾಗೂ ಇತರ ಮಾರುಕಟ್ಟೆಗಳಲ್ಲಿ ಮಾರಿ ಅಧಿಕ ಲಾಭ ಪಡೆಯುತ್ತಾರೆ.

ಈ) ಈ ಕಂಪನಿಗಳು ಸರ್ಕಾರದ ಒಡೆತನದಲ್ಲಿವೆಯೇ ಅಥವಾ ಖಾಸಗಿ ಕಂಪನಿಗಳೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಈ ಪಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರದಿಂದ ನಿಗದಿತವಾದ ಬೆಲೆ ಮುಂಚಿತವಾಗಿಯೇ ನಿರ್ಧಾರವಾಗಿದ್ದು ಅದನ್ನೇ ಜಂಟಿ ಮೈಕಾ ಮಿಷನ್ ಅವರು ಪಡೆಯುತ್ತಾರೆ. ಅವರು ನೀಡುತ್ತಿರುವ ಬೆಲೆಯು ಭಾರತ ಸರ್ಕಾರದ ದೃಷ್ಟಿಯಲ್ಲಿ ಸೂಕ್ತವಾಗಿದೆ. ಮಿಷನ್ ಅವರು ನೀಡುತ್ತಿರುವ ಬೆಲೆಗಳು ಹೆಚ್ಚು ಅಥವಾ ಅಧಿಕವಾಗಿ ಇಲ್ಲವೇ ನಿಗದಿತ ಬೆಲೆಗಳಿಗೆ ಸಮಾನವಾಗಿವೆ. ಮುಂದುವರಿದು, ಮಿಷನ್ ದೊರೆಯಬಹುದಾದ ಎಲ್ಲಾ ವಿಧವಾದ ಅಭ್ರಕವನ್ನೂ ಖರೀದಿಸಲು ಸಿದ್ಧವಿದೆ. ಇದು ವಾಸ್ತವಿಕವಾಗಿ ದೊರೆಯಬಹುದಾದ ಎಲ್ಲಾ ಅಭ್ರಕದ ಸಂಗ್ರಹವು ಮಾರುಕಟ್ಟೆಗೆ ಬರುವಲ್ಲಿ ಸಹಕಾರಿಯಾಗುತ್ತದೆ. ಲೋಹಶೇಖರಣೆ ಸಂಸ್ಥೆಯು ಭಾರತದಿಂದ ಅಭ್ರಕವನ್ನು ಖರೀದಿಸುತ್ತಿಲ್ಲ. ೧೯೪೦–೪೨ರಲ್ಲಿ ಅದು ಹಲವು ವಿವಿಧ ಅಭ್ರಕವನ್ನು ಭಾರತ ಸರ್ಕಾರದಿಂದ ಖರೀದಿಸಿತ್ತು. ಅದು ೧೯೪೧ರಲ್ಲಿ ಅಧಿಕ ಉತ್ಪಾದನೆಯ ಫಲಿತಾಂಶವಾಗಿತ್ತು. ಆಗ ಅವರು ನೀಡಿದ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಫೆಬ್ರವರಿ ೧೬ ಪು. ೨೮೧–೮೨

ಬೆಲೆಯು ಸೂಕ್ತ ಹಾಗೂ ಸಮಂಜಸವಾಗಿತ್ತು. ಜಂಟಿ ಮೈಕಾ ಮಿಷನ್ ಕಂಪನಿಯೇ ಆಗಲೀ ಅಥವಾ ಲೋಹಗಳ ಶೇಖರಣೆಯ ಕಂಪನಿಯೇ ಆಗಲೀ ಹೆಚ್ಚು ಲಾಭಗಳಿಸುತ್ತಿಲ್ಲ.

ಈ) ಜಂಟಿ ಮೈಕಾ ಮಿಷನ್ ಸರ್ಕಾರದ ಒಡೆತನಕ್ಕೆ ಸೇರಿದೆ. ಅದು ಬ್ರಿಟಿಷ್ ಹಾಗೂ ಮೂರು ಅಮೆರಿಕಾದ ಸದಸ್ಯರಿಂದ ತಲಾ ಮೂರು ಒಡಗೂಡಿದ್ದು, ಬ್ರಿಟಿಷ್ ಹಾಗೂ ಅಮೆರಿಕಾ ಸರಕಾರಗಳಿಂದ ನೇಮಕ ಹೊಂದಿದ್ದಾರೆ. ಒಬ್ಬ ಬ್ರಿಟಿಷ್ ಸದಸ್ಯರು ಅಧ್ಯಕ್ಷರಾಗಿದ್ದಾರೆ. ಮಿಷನ್ ಅವರು ಬ್ರಿಟಿಷ್ ಸರ್ಕಾರದ ಸರಬರಾಜು ಇಲಾಖೆಯ ಪರವಾಗಿ ಖರೀದಿಸಿದರೆ, ಲೋಹ ಶೇಖರಣೆ ಕಂಪನಿಯು ಆರ್ಥಿಕ ಪುನರ್ ನಿರ್ಮಾಣ ನಿಗಮದಿಂದ ನಿರ್ಮಾಣಗೊಂಡ ಈ ಕಂಪನಿ ಅಮೆರಿಕಾ ಸರಕಾರದ ಪರವಾಗಿ ಖರೀದಿಸುತ್ತಿದೆ. ಈ ಕಂಪನಿಯು ಆರ್ಥಿಕ ಪುನರ್ ನಿರ್ಮಾಣ ನಿಗಮದ ನಿಯಮಾವಳಿ ೫(೧)ರ ಅಡಿಯಲ್ಲಿ ಅಮೆರಿಕಕ್ಕಾಗಿ ಅಭ್ರಕವನ್ನು ಖರೀದಿಸುತ್ತಿದೆ.

**ಬಾಬು ಬೈಜನಾಥ ಬಜೋರಿಯ :** ಆದರೆ ತಾವು ಆಗಲೇ ನನ್ನ (ಅ) ಪ್ರಶ್ನೆಗೆ ಇಲ್ಲ ಎಂದು ಹೇಳಿರುವಿರಲ್ಲಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

**ಬೌಬು ಬೈಜನಾಥ್ ಬಜೋರಿಯಾ :** ಅಂದರೆ ಬೇರೆ ಕಂಪನಿಗಳೂ ಭಾರತದಿಂದ ಮೈಕಾ ಅದಿರನ್ನು ರಫ್ತು ಮಾಡಬಹುದೆಂದಾಯಿತಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದಕ್ಕೆ ಅಡ್ಡಿ ಇಲ್ಲ. ಆದರೆ ಕೆಲವು ಷರತ್ತುಗಳನ್ನು ನಿಗದಿಪಡಿಸಲಾಗಿದೆ.

**ಬಾಬು ಬೈಜನಾಥ ಬಜೋರಿಯಾ :** ಇ)ಗೆ ಸಂಬಂಧಿಸಿದಂತೆ ಜಂಟಿ ಮೈಕಾ ಮಿಷನ್ ಅವರು ಗುಣಮಟ್ಟವನ್ನು ಹೆಚ್ಚಿಸಿರುವುದು ಹಾಗೂ ಬೆಲೆಯನ್ನು ತಗ್ಗಿಸಿರುವುದು ಸದಸ್ಯರ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ. ಈ ಪ್ರಶ್ನೆಗೆ ಉತ್ತರ ಮುಂದಿನ ಪ್ರಶ್ನೆಯಲ್ಲಿ ದೊರೆಯುವುದು.

## ೨೩
## ಭಾರತದ ಕಾರ್ಮಿಕರ ಸಾಮೂಹಿಕ ನಿರುದ್ಯೋಗ ನಿವಾರಣೆಯ ಬಗೆಗೆ ಯೋಜನೆ*

****೧೦೩. ಗೋವಿಂದ ವಿ. ದೇಶಮುಖ್ :** ಮಾನ್ಯ ಸದಸ್ಯರು ಭಾರತದ ಕಾರ್ಮಿಕರ ಸಾಮೂಹಿಕ ನಿರುದ್ಯೋಗ ನಿವಾರಣೆಗೆ ಏನಾದರೂ ಯೋಜನೆ ಸಿದ್ಧಪಡಿಸಿರುವಿರೇ? ಅದರಿಂದಾಗಿ ಅವರು ಜೀವನಕ್ಕೆ ಆವಶ್ಯಕವಾದ ವಸ್ತುಗಳಿಂದ ವಂಚಿತರಾಗದೇ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವೇ? ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಯಾವುದೇ ಸಾಧಾರಣ ಯೋಜನೆಯನ್ನು ಸಾಮೂಹಿಕ ನಿರುದ್ಯೋಗದ ಬಗೆಗೆ ನಿರ್ಮಿಸಲಾಗಿಲ್ಲ.

ಯುದ್ಧದಿಂದಾಗಿ ಉದ್ಯೋಗದ ಅವಕಾಶಗಳು ಅಧಿಕವಾಗಿವೆ. ಯುದ್ಧೋತ್ತರ ಪರಿಸ್ಥಿತಿಗಳನ್ನು ಕುರಿತಂತೆ ವಾಣಿಜ್ಯ ಇಲಾಖೆಯಿಂದ ನೇಮಕ ಹೊಂದಿರುವ ಪುನರ್ ನಿರ್ಮಾಣ ಸಮಿತಿಯು ಈ ವಿಷಯವನ್ನು ಗಮನಿಸುತ್ತದೆ.

## ೨೪
## ಅಮೆರಿಕಾದ ಜಂಟಿ ಮೈಕಾ ಮಿಷನ್ ಹಾಗೂ ಲೋಹಶೇಖರಣೆ ಕಂಪನಿಗಳ ಮೈಕಾ ರಫ್ತಿನ ಬಗೆಗೆ ಹೊಂದಿರುವ ಏಕಸ್ವಾಮ್ಯ*

**೧೦೫. ಬಾಬು ಬೈಜನಾಥ್ ಬಜೋರಿಯಾ :** ಅ) ಜಂಟಿ ಮೈಕಾ ಮಿಷನ್ ಕಂಪನಿಯು ಈ ದೇಶದ ಅಭ್ರಕದ ರಫ್ತಿನ ಮೇಲೆ ಎಂದಿನಿಂದ ನಿಯಂತ್ರಣ ಪಡೆಯಿತು ಎಂದು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸಬಲ್ಲರೇ? ಅಲ್ಲದೆ ಅವರು ಭಾರತ ಸರ್ಕಾರಕ್ಕೆ ಭಾರತದಲ್ಲಿ ಉತ್ಪಾದನೆ ಹೊಂದುವ ಎಲ್ಲಾ ಅಭ್ರಕವನ್ನು ಖರೀದಿಸುವ ಬಗೆಗೆ ಮುಚ್ಚಳಿಕೆ ನೀಡಿದ್ದು ಯಾವಾಗ?

ಆ) ಅ) ಪ್ರಶ್ನೆಗೆ ಉತ್ತರ ಸಕಾರಾತ್ಮಕವಾಗಿದ್ದರೆ, ಈ ದಿಶೆಯಲ್ಲಿ ಸರ್ಕಾರ ಕೈಕೊಂಡ ಕ್ರಮಗಳೇನು?

ಇ) ಮಾನ್ಯ ಸದಸ್ಯರ ಗಮನಕ್ಕೆ ಈ ವಿಷಯಗಳು ಬಂದಿವೆಯೋ?
ಜಂಟಿ ಅಭ್ರಕ ಮಿಷನ್ ಅವರು ಕೇವಲ ನಿರ್ದಿಷ್ಟ ಗುಣಾಂಶ ಹೊಂದಿದ ಅಭ್ರಕದ ಅದಿರನ್ನು ಮಾತ್ರ ಕೊಳ್ಳಲು ಸಿದ್ಧರಿದ್ದು, ಬೇರೆ ವರ್ಗದ ಅಭ್ರಕವನ್ನು ಖರೀದಿಸಲು ನಿರಾಕರಿಸಿದ್ದಾರೆ. ಅವು ಯಾವುವೆಂದರೆ ಕನಿಷ್ಠ ಮಟ್ಟದ ಮುರುಕುಗಳು ಹಾಗೂ ಉಂಡೆಯಾಗಿರುವ ಅಭ್ರಕ, ಮೈಕಾ. ಅನೇಕ ಬಾರಿ ನಿರ್ದಿಷ್ಟ ಗುಣಮಟ್ಟದ ಅಭ್ರಕವನ್ನೂ ಖರೀದಿಸಲೂ ಅದು ನಿರಾಕರಿಸಿದೆ. ಈ ಪರಿಣಾಮದಿಂದಾಗಿ ಭಾರತದ ವರ್ತಕರಲ್ಲಿ ಮಾರಲಾಗದ ಅಭ್ರಕದ ಸಂಗ್ರಹಣೆಯ ಮಟ್ಟ ಹೆಚ್ಚಿದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೧೬ ಫೆಬ್ರವರಿ ಪು. ೨೮೧

** ಈ ಪ್ರಶ್ನೆಯನ್ನು ಕೇಳಿದವರು ಹಾಜರಿಲ್ಲ, ಉತ್ತರವನ್ನು ಸದನದ ಮುಂದೆ ಇರಿಸಿದೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೬, ಫೆಬ್ರವರಿ ೧೯೪೩ ಪು. ೨೮೨–೮೩

ಈ) ಜಂಟಿ ಮೈಕಾ ಮಿಷನ್ ಅವರಿಂದ ಖರೀದಿಸಲಾರದೇ ಉಳಿದುಹೋದ ಸಂಗ್ರಹದ ಬಗೆಗೆ ಸರ್ಕಾರ ಏನು ಕ್ರಮತೆಗೆದುಕೊಂಡಿದೆ?

ಉ) ಈ ವಿಧವಾದ ಸಂಗ್ರಹವನ್ನು ಅಮೆರಿಕ ಹಾಗೂ ಇತರ ದೇಶಗಳಿಗೆ ರಫ್ತುಮಾಡಲು ಬೇರೆ ಖಾಸಗಿ ಕಂಪನಿಗಳಿಗೆ ಪರವಾನಿಗೆ ನೀಡಲು ಸರ್ಕಾರ ಸಿದ್ಧವಿದೆಯೇ?

ಊ) ಸರ್ಕಾರವು ಈ ಸಂಗತಿಯನ್ನು ಗಮನಿಸಿದೆಯೇ? ಜಂಟಿ ಮೈಕಾ ಮಿಷನ್ ಅವರು ಅಭ್ರಕದ ರಫ್ತಿನ ಹಾಗೂ ಖರೀದಿಸುವ ಬಗೆಗೆ ಹೊಂದಿರುವ ನಿಯಂತ್ರಣದಿಂದಾಗಿ ಅಭ್ರಕದ ಉದ್ದಿಮೆಯ ಉತ್ಪಾದನೆ ಇಳಿಮುಖವಾಗಿದ್ದು ಈ ಉದ್ದಿಮೆಗಳು ಮುಚ್ಚಿರುವುದರಿಂದ ಅವುಗಳಲ್ಲಿ ಕಾರ್ಯ ಮಾಡುತ್ತಿರುವ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಅಭ್ರಕವನ್ನು ಮುರಿಯುವ ಕೇಂದ್ರಗಳೂ ಮುಚ್ಚಲ್ಪಟ್ಟಿವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಈ ದೇಶದಿಂದ ಅಭ್ರಕದ ರಫ್ತಿನ ಕಾರ್ಯವನ್ನು ಜಂಟಿ ಮೈಕಾ ಮಿಷನ್ ಅವರು ವಹಿಸಿಕೊಂಡಿಲ್ಲ. ಅದು ಯಾವುದೇ ಶುಚಿಗೊಳಿಸಿದ ಹಾಗೂ ನಿರ್ದಿಷ್ಟ ಮಟ್ಟದ ಹಾಗೂ ವಿವಿಧ ಮಟ್ಟದ, ವ್ಯಾಪಾರ ದೃಷ್ಟಿಯಿಂದ ಮನ್ನಣೆಗೊಳಬಹುದಾದ ಅಭ್ರಕವನ್ನು ಖರೀದಿಸಲು ಸಿದ್ಧರಿದ್ದಾರೆ.

ಆ) ಅವರು ನೀಡಿದ ಮುಚ್ಚಳಿಕೆಯ ಬಗೆಗೆ ಸರ್ಕಾರಕ್ಕೆ ಯಾವ ಸಂದೇಹವೂ ಇಲ್ಲ.

ಇ) ವಿಶ್ವರಾಷ್ಟ್ರ ಸಂಸ್ಥೆಯಲ್ಲಿ ವ್ಯಾಪಾರವಾಗಬಲ್ಲ ನಿರ್ದಿಷ್ಟ ಮಟ್ಟದ ಅಭ್ರಕವನ್ನೇ ಮಿಷನ್ ಅವರು ಖರೀದಿಸುತ್ತಾರೆ. ಸರ್ಕಾರದ ಆಜ್ಞೆಗಳಿಗೆ ವಿರೋಧವಾಗದಂತೆ ನಿರ್ದಿಷ್ಟ ಮಟ್ಟದ ಅಭ್ರಕವನ್ನು ತಟಸ್ಥ ರಾಷ್ಟ್ರಗಳಿಗೆ ಮಾರಾಟ ಮಾಡಬಹುದು. ಆದರೆ ತನ್ನ ಗುಣಮಟ್ಟಕ್ಕೆ ಬಾರದೇ ಹೋದ ಮೈಕಾವನ್ನು ಖರೀದಿಸಲು ಮಿಷನ್ ನಿರಾಕರಿಸುತ್ತದೆ. ಮಾರಾಟವಾಗದೇ ಉಳಿದಿರುವ ಅಭ್ರಕದ ಅಪಾರ ಮೈಕಾ ಸಂಗ್ರಹದ ಬಗೆಗೆ ಸರಕಾರಕ್ಕೆ ಮಾಹಿತಿಯೇ ಇಲ್ಲ.

ಈ) ಮಿಷನ್ನವರಿಂದ ಖರೀದಿ ಮಾಡಲಾಗದ ಗುಣಮಟ್ಟದ ಅಭ್ರಕವು ವಿಶ್ವರಾಷ್ಟ್ರ ಸಂಸ್ಥೆಯ ಮಟ್ಟಗಳಲ್ಲಿ ಮಾರಾಟವಾಗಲಾರದು. ಆದುದರಿಂದಾಗಿ ಸರ್ಕಾರವು ಆ ವಿಧದ ಅಭ್ರಕದ ಮಾರಾಟಕ್ಕೆ ಉದ್ದಿಮೆಗಳಿಗೆ ಸಹಾಯಮಾಡಲಾರದು. ಹಲವು ಬಾರಿ ಆಕಸ್ಮಿಕವಾಗಿ ತಟಸ್ಥ ರಾಷ್ಟ್ರಗಳಲ್ಲಿ ಅದು ಮಾರಾಟವಾಗಲೂಬಹುದು. ಹೀಗಾಗಿ ಸರ್ಕಾರದ ಆಜ್ಞೆಗೆ ವಿರೋಧವಾಗದ ರೀತಿಯಲ್ಲಿ ಆ ವಿಧವಾದ ಮೈಕಾ ಮಾರಾಟಕ್ಕೆ ಪರವಾನಿಗೆ ನೀಡಲು ಸರ್ಕಾರಕ್ಕೆ ಏನೂ ಅಭ್ಯಂತರವಿಲ್ಲ.

ಉ) ಖಾಸಗಿ ಸಂಸ್ಥೆಗಳಿಂದ ಅಭ್ರಕದ ರಫ್ತಿಗೆ ನಿರ್ಬಂಧವಿಲ್ಲ. ವಿಶ್ವರಾಷ್ಟ್ರ ಸಂಸ್ಥೆಯು ಖಾಸಗಿ ಕಂಪನಿಗಳಿಂದ ಅಭ್ರಕವನ್ನು ಆಮದು ಮಾಡಿಕೊಳ್ಳುವುದಿಲ್ಲ. ಅದು ಕೇವಲ ಜಂಟಿ ಮೈಕಾ ಮಿಷನ್‌ನಿಂದ ಮಾತ್ರ ಆಮದು ಮಾಡಿಕೊಳ್ಳುತ್ತದೆ. ಭಾರತದಲ್ಲಿಯ ಗುಣಮಟ್ಟದ ಹಾಗೂ ಮಾರಾಟವಾಗಬಲ್ಲ ಎಲ್ಲಾ ಅಭ್ರಕವನ್ನೂ ಖರೀದಿಸಲು ವಿಶ್ವರಾಷ್ಟ್ರ ಸಂಸ್ಥೆ ಸಿದ್ಧವಿದೆ. ವಿಶ್ವರಾಷ್ಟ್ರ ಸಂಸ್ಥೆಗೆ ಮಾರಾಟವಾಗುವ ಅಭ್ರಕವನ್ನು ಕ್ರಮಬದ್ಧಗೊಳಿಸಲಾಗಿದ್ದು, ಕೇವಲ ಜಂಟಿ ಮೈಕಾ ಮಿಷನ್ ಅವರಿಂದಲೇ ಖರೀದಿಸಿದಲ್ಲಿ ಬೇಕಾಗಿರಬಹುದಾದ ಅಗಾಧ ಮಟ್ಟದ ಅಭ್ರಕದ ಸಾಕಾಣಿಕೆ ತ್ವರಿತದಿಂದ ಆಗುವುದು ಎಂಬ ದೃಷ್ಟಿಯಿಂದ ಈ ವಹಿವಾಟನ್ನು ಒಂದೇ ಕಂಪನಿಗೆ ವಹಿಸಿಕೊಡಲಾಗಿದೆ.

ಊ) ವಿಶ್ವರಾಷ್ಟ್ರ ಸಂಸ್ಥೆಯ ಬಳಿ ಸಾಕಷ್ಟು ಪುಡಿ ಅಭ್ರಕದ ಸಂಗ್ರಹವಿದೆ. ಈಗ ಅವರಿಗೆ ಬೇಕಾದ ಪ್ರಮುಖ ಆವಶ್ಯಕತೆ ಎಂದರೆ ಗುಂಡು ಮೈಕಾ. ಹೀಗಿದ್ದಾಗ್ಯೂ, ಮಿಷನ್ ಅವರು ಗಣಿಗಳಿಂದ ಬಂದ ತುಂಡು ಅಥವಾ ಪುಡಿ ಮೈಕಾವನ್ನು ಖರೀದಿಸಲು ಸಿದ್ಧರಿದ್ದಾರೆ. ಆದರೆ ಹಳೆಯ ರಾಶಿಯಿಂದ ದೊರೆಯುವ ಪುಡಿ ಮೈಕಾವನ್ನು ಖರೀದಿಸಲು ಅವರು ತಯಾರಿಲ್ಲ. ಏಕೆಂದರೆ ಅದು ವಿಶ್ವರಾಷ್ಟ್ರ ಸಂಸ್ಥೆಗಳಲ್ಲಿ ಮಾರಾಟವಾಗದೇ ಹೋಗಬಹುದು. ಆದರೆ ಈ ವಿಧವಾದ ಮೈಕಾವನ್ನು ತಟಸ್ಥ ರಾಷ್ಟ್ರಗಳಿಗೆ ಸರಕಾರದ ಆಜ್ಞೆಗೆ ವಿರೋಧವಾಗದ ಹಾಗೆ ಮಾರಾಟ ಮಾಡಬಹುದು. ಈ ಕಾರಣದಿಂದಾಗಿ ಕಾರ್ಖಾನೆಗಳು ಮುಚ್ಚಿರುವ ಬಗೆಗೆ ಸರ್ಕಾರಕ್ಕೆ ತಿಳುವಳಿಕೆ ಇಲ್ಲ. ಮನೆ ಅಥವಾ ಗೃಹಕೇಂದ್ರಗಳಲ್ಲಿ ಮೈಕಾ ತುಂಡರಿಸುವ ಉದ್ದಿಮೆ ಮುಚ್ಚಿರಲೂಬಹುದು.

**ಬಾಬು ಬೈಜ್‌ನಾಥ ಬಜೋರಿಯಾ :** ಪ್ರಶ್ನೆ ಅ)ಗೆ ಸಂಬಂಧಿಸಿದಂತೆ ಅಮೆರಿಕಾದಲ್ಲಿ ಬೇರೆ ದರ್ಜೆಯ ಅಭ್ರಕಕ್ಕೂ ಬೇಡಿಕೆ ಇದೆ ಎಂದು ಪುನರುಚ್ಚರಿಸುತ್ತೇನೆ. ಇದನ್ನು ರಫ್ತುಮಾಡಲು ಪರವಾನಿಗೆ ನೀಡಲಾಗುತ್ತಿಲ್ಲ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಅದರ ಬಗೆಗೆ ಗೊತ್ತಿಲ್ಲ.

**ಬಾಬು ಬೈಜನಾಥ್ ಬಜೋರಿಯಾ :** ದಯಮಾಡಿ ವಿಚಾರಿಸುವಿರಾ? ಒಂದು ವೇಳೆ, ಮೈಕಾ ಮಿಷನ್ ಅವರು ಖರೀದಿಸಲಾಗದೆ ಇರುವ ಅಭ್ರಕಕ್ಕೆ ಅಮೇರಿಕೆಯಲ್ಲಿ ಬೇಡಿಕೆ ಇದ್ದಲ್ಲಿ ಅದನ್ನು ರಫ್ತು ಮಾಡಲು ಪರವಾನಿಗೆ ನೀಡಲಾಗುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಚಾರಿಸುವೆ.

## ೨೫

## ಜಂಟಿ ಮೈಕಾ ಮಿಷನ್ ಅವರಿಂದ ವಿವಿಧ ದರ್ಜೆಯ ಅಭ್ರಕದ ಬೆಲೆ ನಿರ್ಣಯ*

**೧೦೬. ಬಾಬು ಬೈಜನಾಥ ಬಜೋರಿಯಾ :** ಅ) ಉದ್ದಿಮೆಯ ಪ್ರತಿನಿಧಿಗಳೊಂದಿಗೆ ಸಮಾಲೋಚಿಸದೇ, ಜಂಟಿ ಮೈಕಾ ಮಿಷನ್, ವಿವಿಧ ದರ್ಜೆಯ ಅಭ್ರಕದ ಬೆಲೆಗಳನ್ನು ನಿರ್ಧರಿಸುವ ಸಂಗತಿ ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ?

ಆ) ಜಂಟಿ ಮೈಕಾ ಮಿಷನ್ ಅವರು, ಲೋಹ ಶೇಖರಣೆ ಕಂಪನಿಯವರು ಭಾರತದ ಭೂಗರ್ಭ ಸರ್ವೇಕ್ಷಣೆಯ ನಿರ್ದೇಶಕರಿಂದ ಮನ್ನಣೆ ಪಡೆದ ಅಭ್ರಕದ ದರ್ಜೆಗಿಂತ ತಮ್ಮ ಅಭ್ರಕದ ದರ್ಜೆಯನ್ನು ಹೆಚ್ಚಿಸಿರುವ ವಿಷಯ ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ?

ಇ) ಜಂಟಿ ಮೈಕಾ ಮಿಷನ್ ಅವರು ಖರೀದಿ ಮಾಡುವ ಬೆಲೆಯನ್ನು ಶೇಕಡಾ ೧೦ರಿಂದ ೩೦ರವರೆಗೆ ತಗ್ಗಿಸಿದ್ದು, ಕಾರ್ಖಾನೆಯವರು ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟಮಾಡಬೇಕಾದ ಪರಿಸ್ಥಿತಿ ಒದಗಿದೆ. ಅವರಿಗೆ ಅನ್ಯ ಮಾರ್ಗವೇ ಇಲ್ಲವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೬, ಫೆಬ್ರವರಿ ೧೯೪೩. ಪು. ೨೮೩

ಈ) ಇ ಯಲ್ಲಿ ಹೇಳಿದ ಬೆಲೆಯನ್ನು ಭಾರತ ಸರ್ಕಾರ ಒಪ್ಪಿರುವುದು ಸತ್ಯವೇ?

ಉ) ಬೆಲೆ ಹಾಗೂ ಗುಣಮಟ್ಟದ ಬಗೆಗೆ ಜಂಟಿ ಅಭ್ರಕದ ಕಂಪನಿಯವರಿಗೆ ಸಲಹೆ ನೀಡಲು, ಗಣಿ ಮಾಲೀಕರ ಹಾಗೂ ಕಾರ್ಖಾನೆ ಒಡೆಯರ ಒಂದು ಸಮಿತಿಯನ್ನು ಸರಕಾರ ರಚಿಸಬಲ್ಲದೆ? ಇಲ್ಲದಿದ್ದಲ್ಲಿ ಕಾರಣವೇನು?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ವಿವಿಧ ದರ್ಜೆಯ ಅಭ್ರಕದ ಬೆಲೆಯನ್ನು ನಿರ್ಣಯಿಸುವ ಮುಂಚೆಯೇ ಜಂಟಿ ಮೈಕಾ ಮಿಷನ್ ಅವರು ಬಿಹಾರ್ ಹಾಗೂ ಮದ್ರಾಸಿನ ಉದ್ದಿಮೆಯ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿದ್ದಾರೆ.

ಆ) ಜಂಟಿ ಮೈಕಾ ಮಿಷನ್ ಅವರು ದರ್ಜೆಯ ಗುಣಮಟ್ಟವನ್ನು ಅತಿಯಾಗಿ ಏರಿಸದೇ ಹೋದರೂ ಹಲವು ನಿರ್ದಿಷ್ಟ ದರ್ಜೆಯಲ್ಲಿ ಏರಿಸಲಾಗಿದೆ. ಆದರೆ ಚೂರು ಮತ್ತು ಫಿಲಿಂ ದರ್ಜೆಗಳಲ್ಲಿ ಯಾವ ಬದಲಾವಣೆಯೂ ಇಲ್ಲ.

ಇ) ತಾವು ಹೇಳಿದಂತೆ ಜಂಟಿ ಮೈಕಾ ಮಿಷನ್ ಅವರು ಶೇಕಡಾ ೧೦ ರಿಂದ ೩೦ರ ಬೆಲೆ ಕಡಿತ ಮಾಡಿಲ್ಲ.

ಉ) ಉದ್ಭವಿಸಲಾರದು.

ಊ) ಇಲ್ಲ. ಮಿಷನ್ ಅವರು ಬೆಲೆಯನ್ನು ಮೈಕಾ ಉದ್ದಿಮೆಯ ವಿವಿಧ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿಯೇ ನಿರ್ಣಯಿಸಿದ್ದಾರೆ. ಅದಕ್ಕೆ ಭಾರತ ಸರ್ಕಾರದ ಒಪ್ಪಿಗೆಯೂ ಇದೆ. ಬೆಲೆಗಳು ಸಮಂಜಸವಾಗಿವೆ ಎಂದೇ ಭಾರತ ಸರ್ಕಾರದ ಅಭಿಪ್ರಾಯವಾಗಿರುವುದರಿಂದ ಸಲಹಾ ಸಮಿತಿಯ ನೇಮಕ ಮಾಡಲಾಗುವುದಿಲ್ಲ.

**ಬಾಬು ಬೈಜನಾಥ ಬಜೋರಿಯಾ :** ಗಣಿ ಮಾಲೀಕರ ಹಾಗೂ ಕಾರ್ಖಾನೆ ಒಡೆಯರ ಪ್ರತಿನಿಧಿಗಳ ಸಲಹಾ ಸಮಿತಿಯನ್ನು ರಚಿಸುವಲ್ಲಿ ಇರುವ ತೊಡಕೇನು? ಈ ವಿಧವಾದ ಸಮಿತಿಯನ್ನು ರಚಿಸುವುದರಿಂದ ಸರಕಾರದ ಕೈಗಳನ್ನು ಬಲಪಡಿಸಿದಂತಾಗುವುದಲ್ಲವೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ (ಇ) ಅಡಿಯಲ್ಲಿ ಉತ್ತರ ನೀಡಿದೆ. ಅಭ್ರಕದ ಉದ್ದಿಮೆಯ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿಯೇ ಬೆಲೆಗಳನ್ನು ನಿರ್ಣಯಿಸಲಾಗಿದೆ.

**ಬಾಬು ಬೈಜನಾಥ್ ಬಜೋರಿಯಾ :** ತಮ್ಮ ಹೇಳಿಕೆಯು ಸರಿಯಾಗಿಲ್ಲ.

## ೨೬
## ರೈಲ್ವೇ ಸಿಬ್ಬಂದಿಗೆ ನೀಡಿದ ವೇತನದಲ್ಲಿಯ ಅಕ್ರಮಗಳು *

೧೮೯. **ಲಾಲ್‌ಚಂದ್ ನವಲ್‌ರಾಯ್ :** ಅ) ಭಾರತದ ರೈಲ್ವೇ ಇಲಾಖೆಗೆ ೧೯೩೬ರ ವೇತನ ಸಂದಾಯ ಕಾನೂನಿನ IV ಆಕ್ಟ್‌ನ್ನು ಎಂದಿನಿಂದ ಜಾರಿಗೊಳಿಸಲಾಗಿದೆ ಎಂದು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವಿತ್ತಾರೆಯೆ?

ಆ) ರೈಲ್ವೆ ಸಿಬ್ಬಂದಿಗೆ ವೇತನ ನೀಡುವಲ್ಲಿ ಹಲವಾರು ಅಕ್ರಮಗಳು ಜರುಗಿರುವುದು ಕಾರ್ಮಿಕ ಅಧಿಕಾರಿಗಳ ಗಮನಕ್ಕೆ ಬಂದಿದೆ ಎಂಬುದು ಸತ್ಯವೇ?

ಇ) ಹೊಂದಾಣಿಕೆ ಅಧಿಕಾರಿ (ರೈಲ್ವೆ) ಹಾಗೂ ಕಾನೂನಿನಡಿಯ ರೈಲ್ವೆ ಮೇಲ್ವಿಚಾರಣೆಯ ಅಧಿಕಾರಿಯು ಸಾಮಾನ್ಯವಾಗಿ ಈ ವಿಧವಾದ ಅಕ್ರಮಗಳನ್ನು ಮೇಲಧಿಕಾರಿಗಳ ಗಮನಕ್ಕೆ ಪರಿಹಾರಕ್ಕೆಂದು ಸೂಚಿಸುತ್ತಾರೆ. ಅಂತಹ ವರದಿಗಳೇನಾದರೂ ಇದ್ದಲ್ಲಿ ದಯಮಾಡಿ ತಿಳಿಸುವಿರಾ?

ಈ) ಕಾನೂನಿನ ನಿಯಮಾವಳಿಯನ್ನು ಉಲ್ಲಂಘಿಸಿ, ಅನೇಕ ನೌಕರರಿಗೆ ಸಂದಾಯವಾಗಬೇಕಾದ ವೇತನ ನೀಡುವಲ್ಲಿ ಅಕ್ರಮಗಳು ಜರುಗಿದಲ್ಲಿ ಪರಿಹಾರ ಒದಗಿಸಬೇಕಲ್ಲವೇ? ಈ ದಿಶೆಯಲ್ಲಿ ದಂಡನೆಗೆ ಗುರಿಮಾಡಬೇಕಾದ ಕ್ರಮಗಳೇನಾದರೂ ಜರುಗಿವೆಯೇ? ಇಲ್ಲವಾದಲ್ಲಿ ಕಾರಣಗಳೇನು?

ಉ) ಈ ದಿಶೆಯಲ್ಲಿ ರೈಲ್ವೇ ವೇತನ ಸಂದಾಯ ಅಧಿಕಾರಿಗಳ ವಿರುದ್ಧವಾಗಲೀ ಅಥವಾ ಆಡಳಿತದ ವಿರುದ್ಧವಾಗಲೀ ತೆಗೆದುಕೊಂಡ ಕ್ರಮಗಳೇನು?
ಅದರ ವಿವರಗಳನ್ನು ಸಭೆಯ ಮುಂದೆ ತರುವಿರಾ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮಾರ್ಚ್ ೨೮, ೧೯೩೭.

ಆ) ಹೌದು.

ಇ) ಕಂಡುಹಿಡಿಯಲಾದ ಅಕ್ರಮಗಳನ್ನು, ತಿದ್ದಿಕೊಳ್ಳಲು, ರೈಲ್ವೇ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

ಈ) ಕಾನೂನಿನ ೧೫(೩)ರ ಅಡಿಯಲ್ಲಿ ಪರಿಹಾರ ನೀಡಬಹುದು. ಆದರೆ ಆಡಳಿತ ಕಾರ್ಯಾಚರಣೆಯಲ್ಲಿ ಕಂಡುಹಿಡಿಯಲಾದ ಲೋಪದೋಷಗಳ ಬಗೆಗೆ ಯಾರ ವಿರುದ್ಧವೂ ಕ್ರಮ ಜರುಗಿಸಿಲ್ಲ.

ಉ) ಯಾವ ಶಿಕ್ಷೆಯ ಕ್ರಮವನ್ನು ತೆಗೆದುಕೊಂಡಿಲ್ಲ.

**ಲಾಲ್‌ಚಂದ್ ನವಲ್ ರಾಯ್ :** ವೇತನ ಸಂದಾಯದ ವಿಳಂಬಕ್ಕೆ ಏನು ಕಾರಣ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಶಾಲವಾದ ಆಡಳಿತೆಯಲ್ಲಿ ಈ ವಿಧವಾದ ವಿಳಂಬ ಇದ್ದೇ ಇರುತ್ತದೆ.

**ಲಾಲ್‌ಚಂದ್ ನವಲ್ ರಾಯ್ :** ತಡವಾಗಿ ಸಂದಾಯವಾಗಿರುವ ಪ್ರಕರಣಗಳಲ್ಲಿ ಕೈಕೊಂಡ ಕ್ರಮಗಳೇನು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೬, ಫೆಬ್ರವರಿ ೧೯೪೩. ಪು. ೨೮೫

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ವೇತನ ಸಂದಾಯ ಮಾಡಲಾಗುವುದು.

**ಲಾಲ್‌ಚಂದ್ ನವಲ್ ರಾಯ್ :** ಕೇವಲ ಸಂದಾಯ ಮಾಡುವರೇ ಅಥವಾ ಬೇರೆ ಏನಾದರೂ ಮಾಡುವರೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಸರ್ಕಾರ ಏನು ಮಾಡಬೇಕೆಂದು ಮಾನ್ಯ ಸದಸ್ಯರು ಬಯಸುತ್ತಾರೆ?

**ಲಾಲ್‌ಚಂದ್ ನವಲ್ ರಾಯ್ :** ಈ ವಿಧವಾದ ಘಟನೆಗಳು ಪುನರಾವೃತ್ತಿಯಾಗದಂತೆ ಸರಕಾರ ಕ್ರಮಕೈಗೊಳ್ಳುವುದೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಈ ವಿಧವಾದ ವಿಳಂಬವನ್ನು ತಡೆಯಲು ಕ್ರಮ ತೆಗೆದುಕೊಳ್ಳುವಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

**ಲಾಲ್‌ಚಂದ್ ನವಲ್ ರಾಯ್ :** ಆದರೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಉತ್ತರ ಬಯಸಿದಲ್ಲಿ ಸರಿಯಾದ ಪ್ರಶ್ನೆಯನ್ನೇ ಕೇಳಬೇಕು?

**ಲಾಲ್ ಚಂದ್ರ್ ನವಲ್ ರಾಯ್ :** ಮಾನ್ಯ ಸದಸ್ಯರು ಆಡಳಿತಕ್ಕೆ ಈ ವಿಧವಾದ ಘಟನೆಗಳು ಪುನರಾವೃತ್ತಿಯಾಗದಂತೆ ಎಚ್ಚರಿಸುವಿರಾ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿ.

# ೨೭
# ಗಯಾ ನವಾಡಿಯಾದಲ್ಲಿ ನಿರ್ಮಿಸಲಾಗುವ ವಿಮಾನ ನಿಲ್ದಾಣ ಕಾರ್ಯಕ್ಕೆ ನೀಡಿರುವ ಅಧಿಕ ಬೆಲೆ *

** **೧೪೩. ಕೆ.ಸಿ. ನಿಯೋಗಿ :** ಅ) ಮಾನ್ಯ ಕಾರ್ಮಿಕ ಸದಸ್ಯರೇ, ಈ ಕೆಳಗಿನ ಸಂಗತಿಯು ಸತ್ಯವೇ? ಕೇಂದ್ರ ಸಾರ್ವಜನಿಕ ಕಾಮಗಾರಿ ಇಲಾಖೆಯಿಂದ ಕೆಲವು ವಿಮಾನ ನಿಲ್ದಾಣಗಳ ನಿರ್ಮಾಣ ಕಾರ್ಯವನ್ನು ಅಧಿಕ ಬೆಲೆಯಲ್ಲಿ ಗುತ್ತಿಗೆಗೆ ನೀಡಿದುದರಿಂದ, ಪ್ರಾಂತೀಯ ಸಾರ್ವಜನಿಕ ಕಾಮಗಾರಿ ಇಲಾಖೆ ಅನಿವಾರ್ಯವಾಗಿ ವಿರೋಧವನ್ನು ವ್ಯಕ್ತಪಡಿಸಿದೆಯೇ?

ಆ) ಈ ವಿರೋಧವನ್ನು ಪರಿಗಣಿಸಿ, ದರಗಳನ್ನು ಪರಿಷ್ಕರಿಸಲೆಂದೇ ಒಂದು ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ಚೀಫ್ ಇಂಜಿನಿಯರ್ ನೀಡಿದ ಬೆಲೆಯಲ್ಲಿ ೧/೩ ಅಂಶ ಕಡಿತ ಮಾಡಿದುದು ಸತ್ಯವೇ?

ಇ) ಗುತ್ತಿಗೆದಾರರೂ ಬೆಲೆಯಲ್ಲಿ ಸೂಚಿಸಲಾದ ಕಡಿತವನ್ನು ಒಪ್ಪಿಕೊಂಡಿದ್ದು ಮೊದಲು ನೀಡಿದ ಬೆಲೆಗಳು ತುಂಬಾ ಅಧಿಕವಾದುದು ಎಂದು ಹೇಳಿರುವುದೇ ಸತ್ಯವೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯, ಫೆಬ್ರವರಿ ೧೯೪೩ ಪು. ೪೧೭–೧೮

** ಈ ಪ್ರಶ್ನೆಯ ಉತ್ತರವನ್ನು ಸದಸ್ಯರ ಗೈರುಹಾಜರಿಯಿಂದಾಗಿ ಸದನದ ಮುಂದೆ ಇರಿಸಲಾಗಿದೆ.

ಈ) ಇ) ಗೆ ಸಂಬಂಧಿಸಿದ ಉತ್ತರವು ಸರಿ ಎಂದರೆ ಚೀಫ್ ಇಂಜಿನಿಯರ್ ಅವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ವಿಮಾನ ನಿಲ್ದಾಣ ನಿರ್ಮಾಣದ ದರಗಳು ಇಲಾಖೆಯ ಆಡಳಿತ ಹಾಗೂ ಸೂಪರಿಂಟೆಂಡೆಂಟ್ ಇಂಜಿನಿಯರುಗಳಿಂದ ಶಿಫಾರಸ್ಸು ಪಡೆದು ಇಲಾಖೆಯ ಕ್ರಮದಂತೆ ಮುಖ್ಯ ಇಂಜಿನಿಯರು ನಿರ್ಣಯಿಸಿದ್ದಾರೆ. ವಿಮಾನ ನಿಲ್ದಾಣ ಕಾರ್ಯ ಆರಂಭಗೊಂಡಾಗ ನಂಬಿಕೆಯ ಗುತ್ತೇದಾರರು ಕಡಿಮೆ ಬೆಲೆಗೆ ಕಾರ್ಯ ಮಾಡಲು ಸಿದ್ಧರಿರಲಿಲ್ಲ. ಹೀಗಾಗಿ ಹೆಚ್ಚಿನ ಬೆಲೆ ನೀಡುವುದು ಅನಿವಾರ್ಯವಾಗಿತ್ತು. ವಿಭಾಗೀಯ ಆಯುಕ್ತರು ಈ ವಿಧವಾದ ಹೆಚ್ಚಿನ ಬೆಲೆಯ ಬಗೆಗೆ ದೂರು ನೀಡಿದ್ದು ಸತ್ಯ.

ಆ) ಮತ್ತು ಇ) ಈ ವಿಧವಾದ ವಿರೋಧಗಳು ಬರುವ ಒಂದು ತಿಂಗಳ ಮುಂಚೆಯೇ ಚೀಫ್ ಇಂಜಿನಿಯರು, ಸೂಪರಿಂಟೆಂಡೆಂಟ್ ಇಂಜಿನಿಯರಿಗೆ ವಿಚಾರಣೆ ನಡೆಸುವಂತೆ ಹೇಳಿ ತಮ್ಮ ಆಪ್ತ ಕಾರ್ಯದರ್ಶಿ ಹಾಗೂ ಹಣಕಾಸಿನ ಸಲಹೆಗಾರರನ್ನೂ ಕಳಿಸಿಕೊಟ್ಟರು. ಆ ಹೊತ್ತಿಗೆ ಪರಿಸ್ಥಿತಿಯಲ್ಲಿ ಬಿಗುವು ಕಡಿಮೆಯಾದುದರಿಂದ, ದರಗಳನ್ನು ತಗ್ಗಿಸಲು ಸುಲಭವಾಯಿತು. ಇದರಿಂದ ದರ ತಗ್ಗಿಸಲಾದರೂ ಬೆಲೆಯನ್ನು ೧/೩ ರಷ್ಟು ತಗ್ಗಿಸಲಾಗಿಲ್ಲ. ಗುತ್ತಿಗೆದಾರರು ಈ ಕೆಳಕಂಡ ಕ್ರಮದಲ್ಲಿ ಕಡಿಮೆ ಬೆಲೆ ಸ್ವೀಕರಿಸಿದ್ದಾರೆ. ವಿಮಾನದ ರನ್‌ವೇ (ಚಲಿಸುವ ರಸ್ತೆ) ನಿರ್ಮಾಣದಲ್ಲಿ ಶೇಕಡಾ ೧೫%, ಸಾಮಾನ್ಯ ಕಟ್ಟಡ ಕಾರ್ಯದಲ್ಲಿ ೫೦%, ವಿಶೇಷ ಕಟ್ಟಡ ನಿರ್ಮಾಣದಲ್ಲಿ ಸುಮಾರು ೩೦%ರಿಂದ ೬೦% ಆದರೆ ವಸತಿಗೃಹ ಕಾರ್ಯದಲ್ಲಿ ಗುತ್ತೆದಾರರು ಕಡಿಮೆ ಬೆಲೆ ನಿರಾಕರಿಸಿದ್ದಾರೆ. ಇದರಿಂದಾಗಿ ತಗ್ಗಿದ ದರದಲ್ಲಿ ಬೇರೆ ಗುತ್ತಿಗೆದಾರರಿಗೆ ಕಟ್ಟಡದ ಕಾರ್ಯವನ್ನು ನೀಡಲಾಗಿದೆ.

ಈ) ಚೀಫ್ ಇಂಜಿನಿಯರ್ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಬೇಕಾದ ಪ್ರಸಂಗವೇ ಇಲ್ಲ.

## ೨೮
## ನೂತನ ದೆಹಲಿ ದಂಡು ಪ್ರದೇಶದಲ್ಲಿ ವಿಮಾನ ಇಳಿಯುವ ಕಾರ್ಯ ನಿರ್ಮಾಣಕ್ಕೆ ಹೆಚ್ಚಿನ ದರ ನೀಡಿದ್ದರ ಬಗೆಗೆ *

** **೧೪೪. ಕೆ.ಸಿ. ನಿಯೋಗಿ :** ಅ) ಮಾನ್ಯ ಸದಸ್ಯರೇ, ನವದೆಹಲಿಯ ದಂಡು ಪ್ರದೇಶದ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯುವ ಮೈದಾನದ ಕಾರ್ಯವನ್ನು ಮೂಲತಃವಾಗಿ ಹೆಚ್ಚಿನ ದರದಲ್ಲಿ ಗುತ್ತಿಗೆದಾರರಿಗೆ ನೀಡಲಾಗಿದ್ದು, ನಂತರ ಕಡಿಮೆ ದರದಲ್ಲಿ ಗುತ್ತಿಗೆದಾರರು ಕಾರ್ಯ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇದು ಸತ್ಯವೇ?

ಆ) ಅ) ಉತ್ತರವು ಸರಿ ಎಂದು ಇದ್ದಲ್ಲಿ ಹೆಚ್ಚಿನ ದರಗಳನ್ನು ಏಕೆ ನೀಡಲಾಯಿತು ಹಾಗೂ ಯಾವ ಅಧಿಕಾರಿ ನೀಡಿದರೆಂದು ಹೇಳಬಲ್ಲಿರಾ?

ಇ) ಈ ವಿಧವಾದ ಅವ್ಯವಹಾರಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಈ) ಈ ವಿಧವಾದ ವ್ಯವಹಾರ ಜರುಗದಂತೆ ಭಾರತ ಸರ್ಕಾರವು ಕಟ್ಟುನಿಟ್ಟಿನ ಆರ್ಥಿಕ ಶಿಸ್ತು ಹಾಗೂ ಕಾರ್ಯಾಚರಣೆಯ ಬಗೆಗೆ ಕೈಗೊಂಡಿರುವ ಕ್ರಮಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಮತ್ತು (ಆ) ಮೂರು ಕಾರ್ಯಗಳಾವುವು ಎಂದರೆ ೧) ವಿಮಾನಗಳು ಇಳಿಯುವ ಮೈದಾನ ೨) ವಸತಿಗೃಹಗಳು ೩) ತಾಂತ್ರಿಕ ಕಟ್ಟಡಗಳ ಕಾರ್ಯಾಚರಣೆ– ಇವುಗಳನ್ನು ನವದೆಹಲಿಯ ಕಂಟೋನ್‌ಮೆಂಟಿನ ವಿಮಾನನಿಲ್ದಾಣದಲ್ಲಿ ಕೈಗೊಳ್ಳಲಾಗಿದೆ. (೧) ಮತ್ತು (೨) ನಕಾರಾತ್ಮಕ ಉತ್ತರ.

(೩) ಕ್ಕೆ ಸೇರಿದಂತೆ ವಿನ್ಯಾಸ ಬದಲಾವಣೆಯಿಂದಾಗಿ ದರಗಳಲ್ಲಿ ಬದಲಾವಣೆ ಮಾಡಲಾಗಿದೆ.

(ಇ) ಮತ್ತು (ಈ) ಉದ್ಭವಿಸಲಾರದು.

## ೨೯
## ಭಾರತೀಯ ರೈಲ್ವೆ ಕಾಯ್ದೆಯ VI-A ಪರಿಚ್ಛೇದ ಅನ್ವಯಿಸುವಲ್ಲಿ ಅಕ್ರಮಗಳು *

**೧೪೬. ಎನ್.ಎಂ. ಜೋಷಿ (ಲಾಲ್‌ಚಂದ್ ನವಲ್ ರಾಯ್ ಪರವಾಗಿ) :** ಅ) ಮಾನ್ಯ ಕಾರ್ಮಿಕ ಸದಸ್ಯರು, ಭಾರತೀಯ ರೈಲ್ವೆಯ (ತಿದ್ದುಪಡಿ) ಕಾಯ್ದೆ ೧೯೩೦, XIV ಎಂದಿನಿಂದ ಜಾರಿಗೊಳಿಸಲಾಯಿತು ಎಂದು ತಿಳಿಸುವಿರಾ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯, ಫೆಬ್ರವರಿ ೧೯೪೩ ಪು. ೧೧೮

** ಸದಸ್ಯರ ಗೈರು ಹಾಜರಿಯಿಂದಾಗಿ ಉತ್ತರವನ್ನು ಸದನದ ಮುಂದೆ ಇರಿಸಿದೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯, ಫೆಬ್ರವರಿ ೧೯೪೩ ಪು. ೧೧೮

ಆ) ಭಾರತೀಯ ರೈಲ್ವೇ ಮಸೂದೆಯ ಪರಿಚ್ಛೇದ VI ಎ ಅನುಕರಣೆಯಲ್ಲಿ ಹಲವಾರು ಅಕ್ರಮಗಳು ಜರುಗಿರುವುದು ರೈಲ್ವೆ ಹೊಂದಾಣಿಕೆಯ ಅಧಿಕಾರಿಯು ಕಾಯ್ದೆಯ ಅಡಿಯಲ್ಲಿ ವೀಕ್ಷಣಾಧಿಕಾರಿಯವರ ಗಮನಕ್ಕೆ ವಾರ್ಷಿಕ ವರದಿಯಲ್ಲಿ ಬಂದಿರುವುದು ನಿಜವೇ?

ಇ) (ಆ) ಪ್ರಶ್ನೆಗೆ ಉತ್ತರವು ಸಕಾರಾತ್ಮಕವಾಗಿದ್ದರೆ ರೈಲ್ವೆ ಹೊಂದಾಣಿಕೆಯ ಮತ್ತು ಮೇಲ್ವಿಚಾರಣೆಯ ಅಧಿಕಾರಿಗಳು, ಈ ಅಕ್ರಮಗಳನ್ನು ತಡೆಗಟ್ಟಲು ೧೯೩೦ ರೈಲ್ವೆ ಕಾಯ್ದೆಯ (ತಿದ್ದುಪಡಿ) ಅಡಿಯಲ್ಲಿ ದಂಡಹಾಕುವ ಕ್ರಮಗಳನ್ನು ಕೈಕೊಂಡಿದ್ದಾರೆಯೇ? ಹಾಗಿದ್ದಲ್ಲಿ ಮಾನ್ಯ ಸದಸ್ಯರು ಅದನ್ನು ವಿವರವಾಗಿ ಸದನದ ಮುಂದೆ ಇಡಬಲ್ಲರೇ?

ಉ) ಇ) ಪ್ರಶ್ನೆಯ ಮೊದಲಿನ ಭಾಗಕ್ಕೆ ಉತ್ತರ ನಕಾರಾತ್ಮಕವಿದ್ದಲ್ಲಿ ಅದರ ಕಾರಣಗಳೇನು ಮತ್ತು ಕಾನೂನಿನ ವಿಧಿಗಳಡಿಯಲ್ಲಿರಬಹುದಾದ ಅಡಚಣೆ ಯಾವುವು ಎಂದು ತಿಳಿಸಬಲ್ಲರೇ?

ಇ) ಈ ದಿಶೆಯಲ್ಲಿ ಕೈಗೊಳ್ಳಬೇಕೆಂದಿರುವ ಕ್ರಮಗಳೇನು? ಇಲ್ಲದಿದ್ದರೆ ಅದರ ಕಾರಣಗಳೇನು?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಅನುಚ್ಛೇದ ೧, ೧೯೩೦ರ ಭಾರತೀಯ ರೈಲ್ವೇ ಕಾನೂನಿನ ತಿದ್ದುಪಡಿ ಮಾರ್ಚ್ ೨೬, ೧೯೩೦ರಂದು ಜಾರಿಗೆ ಬಂದಿದೆ. ಅನುಚ್ಛೇದ ೨ ವಿವಿಧ ರೈಲ್ವೆಗಳಲ್ಲಿ ಜಾರಿಗೆ ಬಂದ ವಿವರಗಳು ಹೀಗಿವೆ :

ವಾಯುವ್ಯ ಮತ್ತು ಪೂರ್ವ ರೈಲ್ವೆ : ೧, ಏಪ್ರಿಲ್ ೧೯೩೧.

ಭಾರತೀಯ ಮಹಾದ್ವೀಪಕಲ್ಪ – ಪೂರ್ವ ಬಂಗಾಳ (ಈಗ ಬೆಂಗಾಳ – ಅಸ್ಸಾಂ) ರೈಲ್ವೆ: ೧, ಏಪ್ರಿಲ್ ೧೯೩೨.

ಬೊಂಬಾಯಿ, ಬರೋಡಾ, ಮಧ್ಯ ಭಾರತ ಮತ್ತು ಮದ್ರಾಸ್ ಹಾಗೂ ದಕ್ಷಿಣ ಮಹಾರಾಷ್ಟ್ರ ರೈಲು ೧, ಅಕ್ಟೋಬರ್ ೧೯೩೭.

ದಕ್ಷಿಣ ಭಾರತ – ರೊಹಿಕುಂಡ – ಕುಮಾನ್ (ಈಗ ತಿರುಹಟ್ ಹಾಗೂ ಔಧ್) ರೈಲ್ವೆ : ೧, ಏಪ್ರಿಲ್ ೧೯೪೦.

ಬೆಂಗಾಲ, ನಾಗಪುರ, ಅಸ್ಸಾಂ ಬೆಂಗಾಲ (ಈಗ ಬಂಗಾಳ ಅಸ್ಸಾಂಗಳ ಭಾಗ) ರೈಲ್ವೆ : ೧ ಜನವರಿ ೧೯೪೧.

ಆ) ಹೌದು ಇ) ಇಲ್ಲ ಈ) ಮತ್ತು ಇ) ದಂಡಹಾಕುವ ಆವಶ್ಯಕತೆ ಇಲ್ಲ. ಏಕೆಂದರೆ ಕಾನೂನಿನ ಅಡಿಯಲ್ಲಿ ಆಡಳಿತಾತ್ಮಕ ಕಾರ್ಯಾಚರಣೆಯಿಂದ ಅಕ್ರಮಗಳನ್ನು ಸರಿಪಡಿಸಬಹುದು.

# ೩೦
# ರೈಲ್ವೇ ಸಮನ್ವಯಾಧಿಕಾರಿಯ ಕಾರ್ಯಕ್ಷೇತ್ರ *

**೧೪೭ ಎನ್.ಎಂ. ಜೋಷಿ** (ಲಾಲ್ ಚಂದ್ ನವಲ್‌ರಾಯ್ ಪರವಾಗಿ) : ಅ) ರೈಲ್ವೆ ಸಮನ್ವಯಾಧಿಕಾರಿಯ ಸ್ಥಾನವನ್ನು ನಿರ್ಮಿಸಿ ಅವರನ್ನು ಕಲ್ಕತ್ತಾಕ್ಕೆ ವರ್ಗಾಯಿಸಿರುವುದು ನಿಜವೇ? ಅವರು ಸಮನ್ವಯ ಕಾರ್ಯಗಳನ್ನು ಕಲ್ಕತ್ತಾದಿಂದ ಅಲ್ಲಿಯ ವಿವಿಧ ತಂಡಗಳ ರೈಲ್ವೆಗಳಲ್ಲಿ ಸಮನ್ವಯವನ್ನು ಸಾಧಿಸಲೆಂದೇ ಕಳುಹಿಸಲಾಗಿದೆಯೇ?

ಆ) ಈಗ ರೈಲ್ವೆ ಸಮನ್ವಯಾಧಿಕಾರಿ ಹಾಗೂ ಮೇಲ್ವಿಚಾರಣೆಯ ಅಧಿಕಾರಿಗಳನ್ನು ಲಾಹೋರಿಗೆ ವರ್ಗಾಯಿಸಲಾಗಿದೆಯೇ? ಆದುದರಿಂದ ಅವರ ಕಾರ್ಯಕ್ಷೇತ್ರವು ಕಲ್ಕತ್ತಾ ಅಥವಾ ವಾಯವ್ಯ ರೈಲ್ವೆಯ ಲಾಹೋರೋ ಅಥವಾ ಎರಡೂ ಸ್ಥಾನಗಳೋ ಎಂದು ತಿಳಿಸುವಿರಾ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ರೈಲ್ವೆ ಸಮನ್ವಯಾಧಿಕಾರಿಯ ಮುಖ್ಯ ಕೇಂದ್ರಸ್ಥಾನವನ್ನು ತಾತ್ಕಾಲಿಕವಾಗಿ ಲಾಹೋರಿಗೆ ವರ್ಗಾಯಿಸಲಾಗಿತ್ತು. ಆ ಸ್ಥಾನಕ್ಕೆ ಬೇರೆ ಒಬ್ಬರನ್ನು ನೇಮಿಸಿದ್ದು ಲಾಹೋರಿನ ಮೇಲ್ವಿಚಾರಣೆಯ ಅಧಿಕಾರಿಗಳು ಅವರ ಪರವಾಗಿ ಕಾರ್ಯ ಮಾಡುತ್ತಿದ್ದರು. ಆದರೆ ಈಗ ಸಮನ್ವಯಾಧಿಕಾರಿಗಳ ಕೇಂದ್ರಸ್ಥಾನವನ್ನು ಮರಳಿ ಕಲ್ಕತ್ತಾಗೆ ವರ್ಗಾಯಿಸಲಾಗಿದೆ.

**ಎನ್.ಎಂ. ಜೋಷಿ :** ಕಲ್ಕತ್ತಾ ಕೇಂದ್ರಸ್ಥಾನದಲ್ಲಿಯ ಸಮನ್ವಯಾಧಿಕಾರಿಯ ಕಾರ್ಯಚಟುವಟಿಕೆಗಳನ್ನು ಇತರ ಪ್ರದೇಶಗಳಿಗೂ ವಿಸ್ತರಿಸಲಾಗುವುದೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಹೌದು, ಅದರ ಬಗೆಗೆ ಆಲೋಚಿಸುವೆ.

**ಮಾನ್ಯ ಅಧ್ಯಕ್ಷರು** (ಸರ್ ಅಬ್ದುರ್ ರಹೀಮ್) : ನಾನು ಶ್ರೀ ಎನ್.ಎಂ. ಜೋಷಿ ಅವರಿಗೆ ಲಾಲ್‌ಚಂದ್ ನವಲ್‌ರಾಯ್ ಅವರು ಅಧಿಕಾರ ನೀಡದೇ ಹೋದರೂ ಅವರ ಪರವಾಗಿ ಪ್ರಶ್ನೆ ಕೇಳಲು ಅವಕಾಶ ನೀಡಿರುವೆ. ಆದುದರಿಂದ ಉಪ ಪ್ರಶ್ನೆಗಳನ್ನು ಅವರು ಕೇಳುವುದು ಸೂಕ್ತವಲ್ಲ. ನಾನು ಅವರಿಗೆ ವಿಶೇಷ ಸಂದರ್ಭದಲ್ಲಿ ಮಾತ್ರ ಈ ಅವಕಾಶ ನೀಡಿರುವೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೧೯ ಫೆಬ್ರವರಿ ಪು. ೪೨೧

# ೩೧
# ವೈರಿಗಳಿಂದ ವಾಯುದಾಳಿಗೆ ಈಡಾದ ಸಂತ್ರಸ್ತರ ಅವಲಂಬಿತರಿಗೆ ಪರಿಹಾರ *

**೧೯೮. ಎಚ್.ಎ. ಸತ್ತಾರ್ ಎಚ್. ಇಸಾಕ್ ಸೇಟ್ :**

ಅ) ವೈರಿಗಳ ಬಾಂಬ್ ದಾಳಿಯಿಂದಾಗಿ (ಭಾರತದಲ್ಲಿ) ವಾರಸುದಾರರಿಗೆ. ಗಾಯಗೊಂಡವರಿಗೆ ಹಾಗೂ ಮರಣ ಹೊಂದಿದವರ ವಾರಸುದಾರಿಗೆ ಯಾವ ಸಹಾಯ ಮಾಡಲಾಗಿದೆ?

ಆ) ಅವರಿಗೆ ನೀಡಬಹುದಾದ ಸಹಾಯ ಶೀಘ್ರವಾಗಿ ನೀಡಲಾಗುವುದೇ ಅಥವಾ ಅದಕ್ಕೂ ನಿಯಮಬದ್ಧವಾಗಿ ಅರ್ಜಿ, ವಿಚಾರಣೆ ಮುಂತಾದ ಕ್ರಮಗಳನ್ನು ನಿರ್ಣಯಿಸಿದ್ದೀರಾ?

ಇ) ನಾಗರಿಕರಿಗೆ ಈ ದಿಶೆಯಲ್ಲಿ ನೀಡಿರಬಹುದಾದ, ಅದರಲ್ಲಿಯೂ ಕಲ್ಕತ್ತಾ ಹಾಗೂ ಭಾರತದ ಇತರ ಭಾಗಗಳಲ್ಲಿಯ ಬಡವರಿಗೆ ಬಾಂಬ್ ದಾಳಿಯಿಂದ ಹಾನಿಗೊಳಗಾಗಿರುವವರಿಗೆ ನೀಡಿದ ಸಹಾಯ ವಿವರ

೧) ಮೃತ ದೇಹಗಳ ಸಾಗಿಸುವಿಕೆ

೨) ಗಾಯಗೊಂಡವರ ಚಿಕಿತ್ಸೆ

೩) ಅವರ ಜೀವನಾಧಾರದ ಬಗೆಗೆ

೪) ಸಾಮಾನ್ಯವಾಗಿ ಅವರ ಪುನರ್ವಸತಿಯ ಬಗ್ಗೆ ಮಾನ್ಯ ಸದಸ್ಯರು ತಿಳಿಸುವರೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಸುಗ್ರೀವಾಜ್ಞೆಯ ಅಡಿಯಲ್ಲಿ, ಯುದ್ಧದಲ್ಲಿ ಗಾಯಗೊಂಡಿರುವ ವೈರಿಗಳ ಬಾಂಬ್ ದಾಳಿಗೆ ಈಡಾದವರಿಗೆ ಸಹಾಯದ ಅವಕಾಶವನ್ನು ಕಲ್ಪಿಸಲಾಗಿದೆ. ಸಹಾಯಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಆದರೆ ಕ್ರಮಗಳನ್ನು ಸುಲಭಗೊಳಿಸಲಾಗಿದೆ. ಯಾರಿಗಾದರೂ ಅರ್ಜಿಯನ್ನು ಖುದ್ದಾಗಿ ಸಲ್ಲಿಸಲು ಆಗದೇ ಹೋದ ಸಮಯದಲ್ಲಿ ಅವರ ಪರವಾಗಿ ಅರ್ಜಿ ಸಲ್ಲಿಸುವ ಅವಕಾಶವನ್ನೂ ನೀಡಲಾಗಿದೆ.

ಮರಣ ಹಾಗೂ ಗಾಯಾಳುಗಳಿಗೆ ರೂ. ೫೦/– ಮುಂಗಡವಾಗಿ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ.

ಪುಸ್ತಕ ಭಂಡಾರದಲ್ಲಿ ಯುದ್ಧದ ಗಾಯಾಳುಗಳಿಗೆಂದೇ ಹೊರಡಿಸಿದ ಆಜ್ಞೆಯ ಯೋಜನೆ ಹಾಗೂ ನಿಯಮಾವಳಿಯ ಕರಪತ್ರಗಳನ್ನು ಇರಿಸಲಾಗಿದೆ.

ಇ) ೧) ಮತ್ತು ೨) ಇವು ಪ್ರಾಂತೀಯ ಸರ್ಕಾರಗಳಿಗೆ ಸೇರಿದ ವಿಷಯವಾದುದರಿಂದ ಭಾರತ ಸರ್ಕಾರದ ಬಳಿ ವಿವರಗಳಿಲ್ಲ. ಆದರೆ ಭಾರತ ಸರ್ಕಾರದಿಂದ ಮೃತರ ದೇಹಗಳ ಸಾಗಾಣಿಕೆ ಹಾಗೂ ಗಾಯಾಳುಗಳಿಗೆ ಸಹಾಯ ಕಲ್ಪಿಸುವ ಬಗೆಗೆ ವಿವರವಾಗಿ ಆದೇಶ ನೀಡಲಾಗಿದ್ದು ಅದರ ಕಾರ್ಯಾಚರಣೆ ನಡೆದಿದೆ. ಭಾರತ ಸರ್ಕಾರಕ್ಕೆ ಈ ಕಾರ್ಯಾಚರಣೆ ಕುರಿತಂತೆ ಇಲ್ಲಿಯವರೆಗೂ ಯಾವ ದೂರುಗಳೂ ಬಂದಿಲ್ಲ.

೩) ಮತ್ತು ೪) ಈ ಅಂಶಗಳ ಬಗೆಗೆ ಭಾರತ ಸರ್ಕಾರದ ಬಳಿ ಹೆಚ್ಚು ವಿವರಗಳಿಲ್ಲ. ವಾಯುದಾಳಿ ಸಾಧಾರಣವಾಗಿದ್ದು, ಭಾರತ ಸರ್ಕಾರಕ್ಕೆ ತಿಳಿದಂತೆ ಬಾಂಬ್‌ದಾಳಿಗೆ ಈಡಾಗಬಹುದಾದ ಪ್ರದೇಶಗಳಲ್ಲಿಯ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩ ೨೪ ಫೆಬ್ರವರಿ ಪು. ೫೫೬

ಸಮಸ್ಯೆ ಭೀಕರವಾಗಿರಲಾರದು. ಮುಂದುವರಿದು ಯುದ್ಧ ಗಾಯಾಳುಗಳ ಯೋಜನೆಯ ಅಡಿಯಲ್ಲಿ ಅನೇಕರಿಗೆ ಸಹಾಯ ನೀಡಲಾಗಿದ್ದು ಇನ್ನೂ ಹಲವಾರು ಪ್ರಕರಣಗಳನ್ನು ಪರಿಶೀಲಿಸಲಾಗುವುದು.

**ಎಚ್.ಎ. ಸತ್ತಾರ್ ಎಚ್. ಇಸಾಕ್ ಸೇಟ್ :** (ಆ) ಗೆ ಸಂಬಂಧಿಸಿದಂತೆ ಯಾವ ದೂರುಗಳೂ ಇಲ್ಲ ಅಥವಾ ವಿಳಂಬವಾಗಿಲ್ಲ ಎಂಬುದರ ಬಗೆಗೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಯಾವ ದೂರುಗಳೂ ಇಲ್ಲ.

## ೩೨
## ನಾಲ್ಕನೆಯ ಕಾರ್ಮಿಕರ ಸಮ್ಮೇಳನ ಹಾಗೂ ಸ್ಥಾಯಿ ಕಾರ್ಮಿಕ ಸಮಿತಿಯ ನಡವಳಿಕೆ (ಸಾರಾಂಶ)*

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಸರ್, ನಾನು ಸದನದ ಮುಂದೆ ಕೆಳಕಂಡ ಪ್ರತಿಗಳನ್ನು ಸಲ್ಲಿಸುತ್ತಿದ್ದೇನೆ.

೧) ದಿನಾಂಕ ೭ ಆಗಸ್ಟ್ ೧೯೪೨ರಂದು ಜರುಗಿದ ನಾಲ್ಕನೆಯ ಕಾರ್ಮಿಕ ಸಮ್ಮೇಳನದ ನಡವಳಿಕೆಯ ಸಾರಾಂಶ.

೨) ದಿನಾಂಕ ೩೦ ನವೆಂಬರ್ ಹಾಗೂ ೧ ಡಿಸೆಂಬರ್ ೧೯೪೨ರಂದು ಜರುಗಿದ ಮೊದಲನೆಯ ಸ್ಥಾಯಿ ಸಮಿತಿಯ ನಡವಳಿಕೆ.

೩) ೨೫ ಜನವರಿ ೧೯೪೩ರಂದು ಜರುಗಿದ ಎರಡನೆಯ ಸ್ಥಾಯಿ ಸಮಿತಿಯ ಕಾರ್ಯ ಕಲಾಪಗಳ ಸಾರಾಂಶ.

## ೩೩
## ಷಹದಾರ ಹಾಗೂ ದೆಹಲಿ ಘೋಷಿತ ಪ್ರದೇಶಗಳಲ್ಲಿ ಬಾಡಿಗೆ ನಿಯಂತ್ರಣ ಮಸೂದೆಯನ್ನು ಜಾರಿಗೊಳಿಸುವ ಆವಶ್ಯಕತೆ*

**೨೧೧. ಮಹಮದ್ ಅಜರ್ ಆಲೀ :** ಈ ಕೆಳಕಂಡ ವಿವರಗಳ ಕುರಿತು ಮಾನ್ಯ ಸದಸ್ಯರು ವಿವರಗಳನ್ನು ನೀಡಬಲ್ಲರಾ?

ಅ) ಷಹದಾರ ಹಾಗೂ ದೆಹಲಿಯ ಘೋಷಿತ ಪ್ರದೇಶಗಳಲ್ಲಿಯೇ ಉದ್ದಿಮೆಯ, ವಾಣಿಜ್ಯದ ಹಾಗೂ ಸರ್ಕಾರಿ ನೌಕರರು ವಾಸಿಸುತ್ತಿರುವುದು ನಿಜವೇ?

ಆ) ಇದು ನಿಜವಿದ್ದರೆ ಈ ನೌಕರರು ಕಡಿಮೆ ವೇತನ ಪಡೆಯುವ ವರ್ಗಕ್ಕೆ ಸೇರಿದ ಬಹುಸಂಖ್ಯಾತರು ಇರುವ ಅಂದರೆ ಈಗಾಗಲೇ ಘೋಷಿತ ಪ್ರದೇಶಗಳಾದ ನಾಗರಿಕ ಏರಿಯಾ, ದೆಹಲಿ ಹಾಗೂ ನೂತನವಾಗಿ ವಿಸ್ತರಿಸಿದ ಪ್ರದೇಶಗಳಾದ ದರಿಯಾಗಂಜ್,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨೫ ಫೆಬ್ರವರಿ ಪು. ೬೦೩

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨ ಫೆಬ್ರವರಿ ಪು. ೬೫೩

ಕರೋಲ್ ಬಾಗ್ ಪ್ರದೇಶಗಳಲ್ಲಿ ಬಾಡಿಗೆ ನಿಯಂತ್ರಣ ಮಸೂದೆ ಜಾರಿಯಲ್ಲಿರುವುದೇ?

ಇ) ಷಹದಾರ ದೆಹಲಿ ಪ್ರದೇಶಕ್ಕೆ ಬಾಡಿಗೆ ನಿಯಂತ್ರಣ ಕಾನೂನನ್ನು ಅನ್ವಯಿಸದಿರಲು ಕಾರಣಗಳೇನು?

ಈ) ಘೋಷಿತ ಪ್ರದೇಶಗಳಾದ ಷಹದಾರ ಮತ್ತು ದೆಹಲಿ ಪ್ರದೇಶಗಳಲ್ಲಿ ಬಾಡಿಗೆ ನಿಯಂತ್ರಣ ಕಾನೂನನ್ನು ವಸತಿಗೃಹಗಳ ಬಗೆಗೆ ಜಾರಿಗೊಳಿಸಲು ಉದ್ದೇಶಿಸಿದೆಯೇ? ಇಲ್ಲವಾದಲ್ಲಿ ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಮಾನ್ಯ ಸದಸ್ಯರು ಹೇಳಿದ ವಿವರ ಒಪ್ಪಲಾರೆ.

ಇ) ಮತ್ತು ಉ) ೧೯೩೯ರ ಬಾಡಿಗೆ ನಿಯಂತ್ರಣ ಕಾನೂನನ್ನು ದೆಹಲಿಯಲ್ಲಿ ಜಾರಿಗೊಳಿಸಲಾಗದು. ಆದರೆ ಪಂಜಾಬಿನ ಗ್ರಾಮಾಂತರ ಬಾಡಿಗೆ ನಿಯಂತ್ರಣ ಮಸೂದೆಯನ್ನು ಈ ಪ್ರದೇಶಗಳಿಗೆ ವಿಸ್ತರಿಸಲಾಗಿದೆ.

**ಲಾಲ್‌ಚಂದ್ ನವಲ್ ರಾಯ್ :** ೧೯೩೯ರ ಬಾಡಿಗೆ ನಿಯಂತ್ರಣ ಮಸೂದೆಯನ್ನು ದೆಹಲಿ ಪ್ರದೇಶಗಳಿಗೆ ವಿಸ್ತರಿಸಲಾಗದಿರುವ ಕಾರಣಗಳೇನು?

**ಮಾನ್ಯ ಡಾ॥ ಬಿ. ಆರ್. ಅಂಬೇಡ್ಕರ್ :** ಏಕೆಂದರೆ ಪಂಜಾಬಿನ ಮಸೂದೆಯನ್ನು ಶೀಘ್ರವಾಗಿ ಜಾರಿಗೊಳಿಸಬಹುದು.

## ೩೪
## ನವದೆಹಲಿಯ ಮನೆಬಾಡಿಗೆ ನಿಯಂತ್ರಣ ಪ್ರಕರಣಗಳು*

** ***೨೨೮. ಖಾನ್ ಬಹದ್ದೂರ್ ಶೇಖ್–ಫ಼ಜ಼್–ಇ–ಹಕ್ ಪಿರಾಚ :*** ಗೌರವಾನ್ವಿತ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳು, ಇದರ ಬಗ್ಗೆ ಹೇಳುವರೆ?

ಅ) ನವದೆಹಲಿಯ ಬಾಡಿಗೆ ನಿಯಂತ್ರಣ ಇಲಾಖೆಯು ಎಷ್ಟು ಮೊಕದ್ದಮೆಗಳನ್ನು ತೀರ್ಮಾನ ಮಾಡಿದೆ, ೧೯೪೨ರಲ್ಲಿ.

ಆ) ಮನೆ ಮಾಲೀಕರು ತಮ್ಮ ವಾಸಕ್ಕೇ ಮನೆ ಬೇಕಾಗಿದೆಯೆಂದು ಮನವಿ ಮಾಡಿದ ಖಟ್ಲೆಗಳಿದ್ದುವೆ?

ಇ) ಈ ಎರಡನೆ ಪ್ರಶ್ನೆಗೆ ಉತ್ತರವು ಹೌದು ಎಂದಾದರೆ ಮನೆ ಮಾಲೀಕರ ಎಷ್ಟು ಅರ್ಜಿಗಳು ವಜಾಮಾಡಲ್ಪಟ್ಟವು ಹಾಗೂ ಇನ್ನೆಷ್ಟು ಸ್ವೀಕೃತವಾದವು; ಅಲ್ಲದೆ,

ಈ) ಈ ರೀತಿಯಾಗಿ ತಿರಸ್ಕರಿಸಲ್ಪಟ್ಟ ಅರ್ಜಿಗಳಿಂದ ಮನೆಮಾಲೀಕರು ಭಾರಿ ನಷ್ಟ ಅನುಭವಿಸಬೇಕಾಯಿತೆ? ಹಾಗೂ, ಈ ಕ್ರಮ ಬಾಡಿಗೆ ನಿಯಂತ್ರಣ ಕಾಯಿದೆಯ ಉದ್ದೇಶಕ್ಕೆ ವಿರೋಧವಾಗಿದೆಯೇ? ಹಾಗೆ ಆಗಿರುವ ಪಕ್ಷದಲ್ಲಿ ಇಂಥ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶ ಗೌರವಾನ್ವಿತ ಕಾರ್ಮಿಕ ಸದಸ್ಯರಿಗೆ ಇದೆಯೇ? ಹಾಗೂ, ಅವರು ಬಾಡಿಗೆ ನಿಯಂತ್ರಣಾಧಿಕಾರಿಯವರ ತೀರ್ಮಾನಗಳನ್ನು ಪುನರ್‌ಪರಿಶೀಲಿಸಲು ಕಾರ್ಯಪ್ರವೃತ್ತರಾಗುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಮಾರ್ಚ್ ೧೯೪೩, ಪು. ೬೬೦–೬೧

** ಈ ಪ್ರಶ್ನೆಗೆ ಉತ್ತರ ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಿದ್ದರು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸದ್ಯದಲ್ಲಿ ಕೇಳಿರುವ ಮಾಹಿತಿಯನ್ನು ತತ್‌ಕ್ಷಣದಲ್ಲಿ ಒದಗಿಸಲು ಸಾಧ್ಯವಿಲ್ಲ; ಅಲ್ಲದೆ ಯುದ್ಧಕಾಲ ಇದಾದ್ದರಿಂದ ಬೇಕಾದ ಮಾಹಿತಿಯನ್ನು ಸಂಗ್ರಹಿಸಲು ಸಾಕಷ್ಟು ಸಮಯ ಹಾಗೂ ಶ್ರಮಹಿಡಿಯುವ ಕಾರಣ ಈ ಕೂಡಲೇ ಇದನ್ನು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತೇನೆ.

## ೩೫
## ನವದೆಹಲಿಯ ಮನೆ ಬಾಡಿಗೆ ನಿಯಂತ್ರಣ ಖಟ್ಲೆಗಳು *

** **೨೨೯. ಖಾನ್ ಬಹಾದೂರ್ ಶೇಖ್ ಫಜ್ಲ್–ಇ–ಹಕ್ ಪಿರಾಚ :** ದಯಮಾಡಿ ಗೌರವಾನ್ವಿತ ಕಾರ್ಮಿಕ ಸದಸ್ಯರು ಈ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ೧೯೪೨ರಲ್ಲಿ ನವದೆಹಲಿಯಲ್ಲಿ ಬಾಡಿಗೆ ನಿಯಂತ್ರಣಾಧಿಕಾರಿಯವರಿಂದ ತೀರ್ಮಾನಗೊಂಡ ಬಾಡಿಗೆ ನಿಗದಿ ಸಂಬಂಧ ಖಟ್ಲೆಗಳ ಸಂಖ್ಯೆ ಎಷ್ಟು?

ಆ) ತಮ್ಮ ತಗಾದೆಯೇನಾದರೂ ಇದ್ದರೆ ಅದನ್ನು ಸಲ್ಲಿಸಬೇಕೆಂದು ಎಷ್ಟು ಖಟ್ಲೆಗಳಲ್ಲಿ ಮನೆಮಾಲೀಕರನ್ನು ಕೇಳಲಾಯಿತು?

ಇ) ಉಳಿದ ಖಟ್ಲೆಗಳಲ್ಲಿ ಮನೆಮಾಲೀಕರನ್ನು ಏಕೆ ಹಾಜರಾಗುವಂತೆ ಕರೆಯಲಿಲ್ಲ; ಹಾಗೂ,

ಈ) ಇ) ಅಂಶದಲ್ಲಿ ಸೂಚಿಸಲ್ಪಟ್ಟ ಮನೆಮಾಲೀಕರನ್ನು ಹಾಜರುಪಡಿಸುವಂತೆ ಬಾಡಿಗೆ ನಿಯಂತ್ರಣಾಧಿಕಾರಿಗಳಿಗೆ ತಿಳಿಸುವ ಉದ್ದೇಶ ಮಾನ್ಯ ಕಾರ್ಮಿಕ ಸದಸ್ಯರಿಗೆ ಇದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ೫೩೪. ಪ್ರಶ್ನೆಗಳ (ಆ)ರಿಂದ (ಇ)ವರೆಗೆ ಈ ಸಂಬಂಧವಾಗಿ ಕೇಳಿದ ಮಾಹಿತಿ ತತ್‌ಕ್ಷಣಕ್ಕೆ ಸಿಕ್ಕುವುದಿಲ್ಲ. ಇದರ ಸಂಗ್ರಹಕ್ಕೆ ಸಾಕಷ್ಟು ಸಮಯ ಮತ್ತು ಶ್ರಮ ಅಗತ್ಯವಾದ ಕಾರಣ ಸಮರ ಕಾಲದಲ್ಲಿ ಇದು ಸಾಧ್ಯವಾಗುವುದಿಲ್ಲ.

ಈ) ಯಾವ ಯಾವ ಖಟ್ಲೆಗಳಿಗೆ ಮನೆಮಾಲೀಕರನ್ನು ಕರೆಸುವುದು ಅಗತ್ಯವೆಂದು ತೋರುವುದೋ ಅಂಥ ಸಂದರ್ಭಗಳಲ್ಲಿ ನಿಯಂತ್ರಣಾಧಿಕಾರಿಗಳು ಮಾಲೀಕರನ್ನು ಕರೆಸುತ್ತಾರೆ, ಇದಕ್ಕೆ ವಿಶೇಷವಾದ ಸೂಚನೆಯ ಅಗತ್ಯ ಕಂಡುಬರುವುದಿಲ್ಲ.

## ೩೬
## ನವದೆಹಲಿಯಲ್ಲಿ ಮನೆ ಬಾಡಿಗೆ ನಿಯಂತ್ರಣ ಖಟ್ಲೆಗಳು*

** **ಖಾನ್ ಬಹಾದೂರ್ ಶೇಖ್ ಫಜ್ಲ್–ಇ–ಹಕ್ ಪಿರಾಚ :** ದಯಮಾಡಿ ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ನವದೆಹಲಿಯಲ್ಲಿ ೧೯೪೨ರಲ್ಲಿ ಬಾಡಿಗೆದಾರರಾಗಿ ಮುಂದುವರಿಯಬೇಕೆಂದು ಸಲ್ಲಿಸಿದ ಖಟ್ಲೆಗಳನ್ನು ಹಿಂದಿನ ಬಾಡಿಗೆ ನಿಯಂತ್ರಣಾಧಿಕಾರಿ ದಿವಂಗತ ಶ್ರೀ ಜೋನ್ಸ್‌ರವರು ಪರಿಗಣಿಸಿದರೆ? ಅವರ ನಂತರ ಬಂದ ಅಧಿಕಾರಿಗಳು ಆದರೆ ಸಂಬಂಧಪಟ್ಟವರ ಹೇಳಿಕೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨ನೇ ಮಾರ್ಚ್ ೧೯೪೩, ಪು. ೬೬೦–೬೬೧

** ಈ ಪ್ರಶ್ನೆಗೆ ಉತ್ತರ ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಿದ್ದರು.

ತೆಗೆದುಕೊಳ್ಳದೆಯೇ ತೀರ್ಪು ಕೊಟ್ಟಿದ್ದಾರಲ್ಲವೆ? ಜೋನ್ಸ್‌ರವರೇ ವಿಚಾರಣೆ ನಡೆಸಿದ್ದಾರೆ ಎಂಬ ಪಕ್ಷದಲ್ಲಿ ಅಂಥ ಖಟ್ಲೆಗಳ ಸಂಖ್ಯೆ ಎಷ್ಟು? ಅಲ್ಲದೆ,

ಆ) ಅಂಥ ಖಟ್ಲೆಗಳನ್ನು ಪುನರ್‌ಪರಿಶೀಲಿಸುವ ಸಲುವಾಗಿ ಬೇರೊಬ್ಬ ಅಧಿಕಾರಿಯನ್ನು ನೇಮಿಸುವ ಉದ್ದೇಶವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

## ೩೭
## ದೆಹಲಿ ಪ್ರಾಂತ್ಯಕ್ಕೆ ಸಾರಾಸಗಟಾಗಿ ಪಂಜಾಬು ಬಾಡಿಗೆ ನಿಯಂತ್ರಣ ಕಾಯಿದೆಯನ್ನು ವಿಸ್ತರಿಸುವ ಆವಶ್ಯಕತೆ ಕುರಿತು*

**೨೫೧. ಖಾನ್ ಬಹಾದೂರ್ ಶೇಖ್ ಫ಼ಜ಼್–ಇ–ಹಕ್ ಪಿರಾಚ :** ಮಾನ್ಯ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ದೆಹಲಿ ಪ್ರಾಂತ್ಯದ ಕೆಲವು ಭಾಗಗಳಿಗೆ ಪಂಜಾಬು ಮನೆ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಅನ್ವಯಿಸಲಾಗಿದೆಯೆ?

ಆ) ಬಾಡಿಗೆ ನಿಯಂತ್ರಣ ಆದೇಶವು ಅನ್ವಯವಾಗುವ ವಲಯಗಳು ಆ ಕಾಯಿದೆಯ ಅನುಷ್ಠಾನದ ಹೊರಗೆ ಉಳಿದಿರುವುದೆ? ಹಾಗೂ,

ಇ) ಮಾನ್ಯ ಸದಸ್ಯರು ಬಾಡಿಗೆ ನಿಯಂತ್ರಣ ಆದೇಶವನ್ನು ವಾಪಸ್ಸು ಪಡೆಯಲು ಉದ್ದೇಶಸಿರುವರೆ? ಮೇಲೆ ಹೇಳಿದ ಕಾಯಿದೆಗಳನ್ನು ಅಂಥ ವಲಯಗಳಿಗೆ ವಿಸ್ತರಿಸಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುವರೆ? ಇಲ್ಲದಿದ್ದಲ್ಲಿ, ಹಾಗೆ ಮಾಡದಿರುವುದಕ್ಕೆ ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಹೌದು.

ಇ) ಇಲ್ಲ. ಬಾಡಿಗೆ ನಿಯಂತ್ರಣಾದೇಶದ ಸಹಾಯದಿಂದ ಶೀಘ್ರವಾಗಿ ಒಂದು ಮನೆಯ ಬಾಡಿಗೆಯನ್ನು ನಿಗದಿಪಡಿಸಬಹುದಾದ ಅನುಕೂಲತೆ ಇದೆ. ಪಂಜಾಬು ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿ ಈ ಸೌಲಭ್ಯವಿಲ್ಲ ; ಆ ಕಾರಣದಿಂದ ಸದರಿ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಬೇಕಾದ ಪ್ರಮೇಯವಿಲ್ಲ.

### ಸಿಮ್ಲಾದಲ್ಲಿ ಮನೆಬಾಡಿಗೆ ನಿಯಂತ್ರಣ ***

**** **೨೫೨. ಖಾನ್ ಬಹಾದೂರ್ ಶೇಖ್ ಫಜ್ಲ್–ಇ–ಹಕ್ ಪಿರಾಚ :** (ಅ) ದೆಹಲಿಯಲ್ಲೇ ಸಿವಿಲ್ ಇಲಾಖೆಗಳನ್ನು ಉಳಿಸಿಕೊಂಡ ಕಾರಣದಿಂದಾಗಿ ೧೯೪೦ರಲ್ಲಿ ಸಿಮ್ಲಾದಲ್ಲಿ ಖಾಸಗಿ ಆಸ್ತಿಗಳ ಬಾಡಿಗೆ ಬಹಳ ಕಡಿಮೆಯಾದ ಸಂಗತಿಯನ್ನು ಮಾನ್ಯ ಸದಸ್ಯರು ಗಮನಿಸಿರುವರೆ? ಅದೇ ವರ್ಷ ಈ ಮೇಲೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨ನೇ ಮಾರ್ಚ್ ೧೯೪೩, ಪು. ೬೬೧

** ಈ ಪ್ರಶ್ನೆಗೆ ಉತ್ತರ ನೀಡಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಿದ್ದರು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨ನೇ ಮಾರ್ಚ್, ಪು. ೬೬೧

** ಈ ಪ್ರಶ್ನೆಗೆ ಉತ್ತರ ನೀಡಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

ತಿಳಿಸಿದ ಕಾರಣದಿಂದ ಅನೇಕ ಮನೆಗಳು ಖಾಲಿ ಬೀಳುವ ಪ್ರಸಂಗವೇರ್ಪಟ್ಟು ಮನೆ ಮಾಲೀಕರು ತುಂಬಾ ಅಗ್ಗದ ದರದಲ್ಲಿ ಬಾಡಿಗೆ ನೀಡಿದುದೂ ನಿಜವೆ? ವಸ್ತುಸ್ಥಿತಿ ಹೀಗಿರುವುದರಿಂದ ಆ ವರ್ಷಕ್ಕೆ ಬಾಡಿಗೆ ನಿಗದಿ ಮಾಡಿ ಬಾಡಿಗೆ ನಿಯಂತ್ರಣ ಆದೇಶದ ಅಡಿಯಲ್ಲಿ ಕನಿಷ್ಠ ಬಾಡಿಗೆಯೆಂದು ಪರಿಗಣಿಸುವ ಯೋಜನೆಯನ್ನು ಸರ್ಕಾರ ಹೊಂದಿದೆಯೇ?

ಆ) ದುರಸ್ತಿಯ ಖರ್ಚು ದುಬಾರಿಯಾಗಿರುವ ಸಂಗತಿ ಮಾನ್ಯ ಸದಸ್ಯರಿಗೆ ತಿಳಿದಿದೆಯೇ? ಹಾಗೆಯೇ ಹೊಸ ಕಾಯಿದೆಯನ್ವಯ ಪಂಜಾಬ್ ಸರ್ಕಾರ ಆಸ್ತಿಯ ಮೇಲೆ ಶೇಕಡಾ ೭.೫ ರಂತೆ ತೆರಿಗೆ ವಿಧಿಸಿರುವುದು ಗಮನಕ್ಕೆ ಬಂದಿದೆಯೇ?

ಇ) ಒಂದಲ್ಲ ಒಂದು ರೀತಿ ನಿಯಂತ್ರಣ ಒಡ್ಡಿರುವ ಸರ್ಕಾರದ ರೀತಿಯಿಂದಾಗಿ ಮನೆ ಮಾಲೀಕರು ಬಹಳ ತೊಂದರೆ ಅನುಭವಿಸುತ್ತಿರುವ ವಿಷಯ ಮಾನ್ಯ ಸದಸ್ಯರಿಗೆ ತಿಳಿದಿದೆಯೇ?

ಈ) ಸಿಮ್ಲಾದ ಮನೆ ಬಾಡಿಗೆ ನಿಯಂತ್ರಣ ಆದೇಶವನ್ನು ತಿದ್ದುಪಡಿ ಮಾಡಿ ೧೯೩೯ನೇ ಇಸವಿಯ ಮನೆ ಬಾಡಿಗೆಯನ್ನು ನಿಗದಿಪಡಿಸಿ ಆ ಮೊತ್ತಕ್ಕೆ ಶೇಕಡಾ ೨೫ ಭಾಗವನ್ನು ಸೇರಿಸಿ ಹೆಚ್ಚಿರುವ ದುರಸ್ತಿ ಖರ್ಚನ್ನು ಸರಿದೂಗಿಸುವ ಏರ್ಪಾಡನ್ನು ಮಾನ್ಯ ಸದಸ್ಯರು ಮಾಡಿರುವರೆ? ಇದಕ್ಕೆ ಬದಲಾಗಿ, ಬಾಡಿಗೆ ನಿಯಂತ್ರಣ ಆದೇಶವನ್ನು ವಾಪಸ್ಸು ಪಡೆದು ಪಂಜಾಬ್ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಅನ್ವಯ ಮಾಡುವರೆ? ಇಲ್ಲದಿದ್ದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ೧೯೪೦ರ ಆದಿಭಾಗದಲ್ಲಿದ್ದ ಬಾಡಿಗೆ ದರಗಳು ೧೯೩೯ರ ದರಗಳಿಗಿಂತ ಕಡಿಮೆಯಾಗಿಯೇ ಇದ್ದವು. ನಂತರ ಮನೆಮಾಲಿಕರು ಬಾಡಿಗೆ ದರಗಳನ್ನು ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಏರಿಸಿದರು. ೧೯೪೦ರ ಬಾಡಿಗೆ ಕೂಡ ಕನಿಷ್ಠವೆನ್ನುವ ಹಾಗೆ ಇರಲಿಲ್ಲ. ೧೯೪೦ರ ಬಾಡಿಗೆಯು ಸೂಕ್ತವೆಂದು ಕಂಡುಬಂದ ಕಾರಣ ಬಾಡಿಗೆ ನಿಯಂತ್ರಣ ಆದೇಶದ ಅನ್ವಯ ಇದನ್ನೇ ಮೂಲ ಬಾಡಿಗೆಯೆಂದು ಪರಿಗಣಿಸಬಹುದೆಂದು ಸರ್ಕಾರ ತೀರ್ಮಾನಿಸಿತು.

ಆ) ಹೌದು.

ಇ) ಸರ್ಕಾರ ನಿರ್ಬಂಧ ತಂದ ಪರಿಣಾಮವಾಗಿ ಮನೆ ಮಾಲೀಕರು ಕಷ್ಟ–ನಷ್ಟ ಅನುಭವಿಸಬೇಕಾದ ಪ್ರಸಂಗವೇನೂ ಏರ್ಪಟ್ಟಿಲ್ಲ, ಆದರೆ ತಮ್ಮ ಆಸ್ತಿಯ ಮೇಲೆ ಅವರು ವಿಪರೀತವಾದ ಲಾಭ ಗಳಿಸುವುದಕ್ಕೆ ಕಡಿವಾಣ ಬಿದ್ದಿರುವುದು ನಿಜ.

ಈ) ಇಲ್ಲ; ಮನೆಬಾಡಿಗೆಯನ್ನು ನಿಗದಿಪಡಿಸುವಲ್ಲಿ ಶೀಘ್ರವಾಗಿ ತೀರ್ಮಾನ ಕೈಗೊಳ್ಳುವ ಸಲುವಾಗಿ ರೂಪುಗೊಂಡ ತುರ್ತು ಕಾರ್ಯಕ್ರಮವೇ ಈ ಬಾಡಿಗೆ ನಿಯಂತ್ರಣ ಆದೇಶ; ಇದಕ್ಕೆ ಬದಲಾಗಿ ಪಂಜಾಬ್ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಅನ್ವಯಗೊಳಿಸುವುದಾದರೆ ಬಾಡಿಗೆದಾರರು ಸಿವಿಲ್ ಕೋರ್ಟ್‌ಗಳಲ್ಲಿ ತಮ್ಮ ಕಷ್ಟಗಳಿಗೆ ಪರಿಹಾರ ನಿರೀಕ್ಷಿಸಬೇಕಾಗುವುದರಿಂದ ಖರ್ಚು ವಿಪರೀತವಾಗಿ ಇದರಿಂದ ಅವರು ಹೆಚ್ಚಿನ ತೊಂದರೆಗೊಳಗಾಗುವರು, ಜೊತೆಗೆ, ಕೋರ್ಟುಗಳಲ್ಲಿ ಅವರಿಗೆ ಶೀಘ್ರವಾಗಿ ನ್ಯಾಯ ದೊರಕುವ ಸಂಭವವೂ ಕಡಿಮೆ.

---

*** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ೨ನೇ ಮಾರ್ಚ್, ಪು. ೬೬೧

**** ಈ ಪ್ರಶ್ನೆಗೆ ಉತ್ತರ ನೀಡಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

## ೩೮
## ಸ್ಥಳೀಯ ಶಾಲೆ ಇತ್ಯಾದಿ ಸಿಬ್ಬಂದಿಗೆ ಕೇಂದ್ರ ಸರ್ಕಾರಿ ನೌಕರರ ವಸತಿಗೃಹಗಳನ್ನು ಹಂಚಿಕೊಡುವ ಬಗ್ಗೆ*

**೨೩೪. ಶ್ರೀ ಮುಹಮ್ಮದ್ ಅಜರ್ ಆಲಿ :** ಅ) ಕೇಂದ್ರ ಸರ್ಕಾರದ ನೌಕರರಿಗೆ ವಸತಿಮನೆಗಳನ್ನು ಹಂಚಿಕೊಡುವ ಬದಲು ಅವರಿಗೆಂದೇ ನಿರ್ಮಾಣವಾದ ಲೋಕೋಪಯೋಗಿ ವಸತಿಮನೆಗಳನ್ನು ಸ್ಥಳೀಯ ಶಾಲೆ ಹಾಗೂ ಕೋರ್ಟಿನ ಸಿಬ್ಬಂದಿಗಳಿಗೆ ಹಂಚಿಕೊಟ್ಟಿರುವ ಸಂಗತಿ ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೇ?

ಆ) ಕೆಲವು ಕಛೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹಂಗಾಮಿ ನೌಕರರಿಗೆ ಆದ್ಯತೆ ನೀಡಿ ಹೆಚ್ಚಿನ ಸಂಬಳ ಪಡೆಯುತ್ತಿರುವ ಖಾಯಂ ನೌಕರರನ್ನು ಕೈಬಿಟ್ಟಿರುವ ಸಂಗತಿ ತಿಳಿದಿದೆಯೇ?

ಇ) ಒಂದೇ ಇಲಾಖೆಯ ಬೇರೆ ಬೇರೆ ಕಛೇರಿಗಳನ್ನು ವಿಭಿನ್ನವಾಗಿ ಪರಿಗಣಿಸುತ್ತಿರುವುದು ನಿಜವೇ?

ಈ) ರೈಲ್ವೆ ಕ್ಲಿಯರಿಂಗ್ ಅಕೌಂಟ್ಸ್ ಆಫೀಸನ್ನು ನಾನ್–ಎಂಟೈಟಲ್ಡ್ ಕಛೇರಿಯೆಂದು ಪರಿಗಣಿಸಿದ್ದು ಇತ್ತೀಚೆಗೆ ಆ ಸಂಬಂಧವಾದ ಆದೇಶ ಬದಲಾಯಿಸಿರುವುದು ನಿಜವೇ?

ಉ) ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಎಲ್ಲಾ ಕೇಂದ್ರ ಸರ್ಕಾರಿ ಕಛೇರಿಗಳನ್ನು ಒಂದೇ ರೀತಿಯಲ್ಲಿ ಪರಿಗಣಿಸುವ ದಿಶೆಯತ್ತ ಮಾನ್ಯ ಸದಸ್ಯರು ಚಿಂತನೆ ನಡೆಸಿರುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಈ ವಸತಿಮನೆಗಳನ್ನು ಕೇಂದ್ರ ಸರ್ಕಾರದ ನೌಕರರಿಗೆ ಹಾಗೂ ದೆಹಲಿಯ ಆಡಳಿತದ ಸ್ಥಳೀಯ ಕಛೇರಿಗಳ ನೌಕರರಿಗೆ ಹಂಚಿಕೊಡಬಹುದಾಗಿದೆ. ಹಾಗಾಗಿ ಶಾಲೆಗಳಲ್ಲಿ ಮತ್ತು ಕೋರ್ಟುಗಳಲ್ಲಿ ಸೇವೆಸಲ್ಲಿಸುತ್ತಿರುವ ನೌಕರರಿಗೆ ಹಂಚಿಕೊಡಲು ಸಾಧ್ಯವಿಲ್ಲ.

ಆ) ನಿಯಮಗಳ ಅನುಷ್ಠಾನ ಸೂಚನೆಗಳ ನಿಮಿತ್ತ ಮಾನ್ಯ ಸದಸ್ಯರು ತಿಳಿಸಿದ ರೀತಿ ನಡೆದಿರಬಹುದೆಂದು ನಾನು ತಿಳಿಯುವೆ.

ಇ) ಇಂಥ ಕಛೇರಿಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಹೆಚ್ಚಿನ ರೀತಿಯಲ್ಲಿ ಉದಾರವಾದ ವ್ಯಾಖ್ಯಾನ ಮಾಡಲಾಗಿದ್ದು ಇದರ ಅನುಷ್ಠಾನದಲ್ಲಿ ಸ್ವಲ್ಪ ಏರುಪೇರಾಗಿರುವ ಸಂಭವವಿದೆ.

ಈ) ಹೌದು.

ಉ) ನನ್ನ ಗಮನಕ್ಕೆ ತಂದ ಯಾವುದೇ ಕಛೇರಿಯ ಸಂಬಂಧವಾಗಿ ಸಂಗತಿಗಳನ್ನು ಪರಿಶೀಲಿಸಲು ನಾನು ಸಿದ್ಧ, ಆದರೆ ಎಲ್ಲವನ್ನೂ ಪುನರ್ ಪರಿಶೀಲನೆ ಮಾಡಲು ಹೋಗಬೇಡಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೯೪೩, ಮಾರ್ಚ್ ೭, ೧೯೪೩ ಪು. ೬೬೩

# ೩೯
# ದೆಹಲಿಯಲ್ಲಿ ಸರ್ಕಾರ ಖಾಸಗಿ ಮನೆಗಳನ್ನು ಭೋಗ್ಯಕ್ಕೆ ತೆಗೆದುಕೊಂಡ ಬಗ್ಗೆ *

***೨೫೨. ಸರ್ದಾರ್ ಸಂತ್ ಸಿಂಗ್ :*** (ಅ) ದೆಹಲಿಯ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರವು ಗುತ್ತಿಗೆಗೆ ತೆಗೆದುಕೊಂಡ ಖಾಸಗಿ ಮನೆಗಳ ಸಂಖ್ಯೆ ಎಷ್ಟೆಂದು ಉದಾಹರಣೆ, ನವದೆಹಲಿಯ Notified area, ಕರೋಲ್‌ಬಾಗ್, ದರ್ಯಾಗಂಜ್, ಇತ್ಯಾದಿ ಪ್ರತ್ಯೇಕವಾಗಿ ಗೌರವಾನ್ವಿತ ಸದಸ್ಯರು ತಿಳಿಸುವರೆ?

ಆ) ಪ್ರತಿಯೊಂದು ಭಾಗದಲ್ಲಿ ಮೊದಲನೆಯ ಹಾಗೂ ಕಡೆಯ ಮನೆಗಳನ್ನು ಯಾವಾಗ ಗುತ್ತಿಗೆಗೆ ತೆಗೆದುಕೊಳ್ಳಲಾಯಿತು.

ಇ) ಚಳಿಗಾಲ ಪ್ರಾರಂಭವಾಗುವುದಕ್ಕೆ ಮೊದಲು ಎಲ್ಲಾ ಮನೆಗಳನ್ನು ಗುತ್ತಿಗೆಗೆ ತೆಗೆದುಕೊಳ್ಳಲಾಯಿತು ಎಂಬುದು ನಿಜವೆ? ಹಾಗಲ್ಲದಿದ್ದಲ್ಲಿ, ಚಳಿಗಾಲ ಪ್ರಾರಂಭವಾದ ನಂತರ ಎಷ್ಟು ಮನೆಗಳನ್ನು ಗುತ್ತಿಗೆಗೆ ತೆಗೆದುಕೊಳ್ಳಲಾಯಿತು?

ಈ) ಸರ್ಕಾರ ಯಾವುದನ್ನು ಆಧಾರವಾಗಿಟ್ಟುಕೊಂಡು ಮನೆಮಾಲೀಕರಿಗೆ ಬಾಡಿಗೆಯನ್ನು ಕೊಡುತ್ತಿದೆ. ಹಂಚುವ ಉದ್ದೇಶಕ್ಕಾಗಿ ಮನೆಗಳನ್ನು ವರ್ಗೀಕರಿಸಿದ ಬಗೆ ಹೇಗೆ? ಆ ವರ್ಗೀಕರಣದನ್ವಯ ಮನೆಗಳನ್ನು ಹೇಗೆ ಹಂಚಲಾಗಿದೆ?

ಉ) ಎಷ್ಟು ಕೇಸುಗಳಲ್ಲಿ ಕಡಿಮೆ ಮಾದರಿಯ ಮನೆಗಳಿಗೆ ಅರ್ಹತೆ ಇದ್ದವರಿಗೆ ಮೇಲು ಮಟ್ಟದ ಮಾದರಿ ಮನೆಗಳನ್ನು ಹಂಚಲಾಗಿದೆ ಮತ್ತು ಏಕೆ?

ಊ) ಹಂಚಿಕೊಟ್ಟವರಿಗೆ ಯಾವ ದರದಲ್ಲಿ ಬಾಡಿಗೆಯನ್ನು ವಿಧಿಸಲಾಗಿದೆ?

ಋ) ಅವರ ವೇತನದಲ್ಲಿ ಶೇಕಡಾ ೧೦ ಭಾಗಕ್ಕಿಂತ ಬಾಡಿಗೆ ಹೆಚ್ಚಾಗಲು ಸಾಧ್ಯವಿಲ್ಲವೆಂಬುದು ನಿಜವೆ?

ೠ) ೧೯೪೨–೪೩ರಲ್ಲಿ ಮೊದಲು ಮತ್ತು ಕಡೆಯ ಮನೆಯನ್ನು ಯಾವಾಗ ಪ್ರವೇಶ ಮಾಡಲಾಯಿತು?

ಎ) ಅನೇಕ ಮನೆಗಳು ಇನ್ನೂ ಖಾಲಿ ಇರುವುದು ನಿಜವೆ?

ಏ) ಬಾಡಿಗೆದಾರರಿಂದ ವಸೂಲಾದ ಬಾಡಿಗೆ ಹಾಗೂ ಸರ್ಕಾರ ಮನೆ ಮಾಲೀಕರಿಗೆ ಕೊಡುತ್ತಿರುವ ಹಣದ ವ್ಯತ್ಯಾಸದ ಕಾರಣದಿಂದ ಇದುವರೆಗೆ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ?

ಐ) ಅನೇಕ ತಿಂಗಳುಗಳಿಂದ ಖಾಲಿಯಿರುವ ಮನೆಗಳಿಂದಾಗಿ ಸರ್ಕಾರಕ್ಕೆ ಆಗಿರುವ ನಷ್ಟದ ಪ್ರಮಾಣವೇನು?

ಒ) ಅಗತ್ಯವಿರುವ ಬೇಡಿಕೆಯ ಬಗ್ಗೆ ಸರ್ಕಾರಕ್ಕೆ ತಿಳಿವಳಿಕೆ ಇರಲಿಲ್ಲವೆ?

ಓ) ಕೆಲವು ಸನ್ನಿವೇಶದಲ್ಲಿ ಸರ್ಕಾರಕ್ಕೆ ಮಾಲೀಕರು ಗುತ್ತಿಗೆಗೆ ಕೊಡುವ ಮೊದಲು ಮನೆಗಳಿಂದ ಪಡೆದ ಹಣಕ್ಕಿಂತ ಹೆಚ್ಚಿನ ಪ್ರಮಾಣದ ಹಣವನ್ನು ಗುತ್ತಿಗೆಗೆ ಕೊಟ್ಟ ನಂತರ ಮಾಲೀಕರಿಗೆ ಸರ್ಕಾರ ನೀಡಿದೆ ಎಂಬ ಸುದ್ದಿಯಲ್ಲಿ ಸತ್ಯಾಂಶವಿದೆಯೇ? ಹಾಗಿದ್ದಲ್ಲಿ, ಏಕೆ ಹೀಗಾಯಿತು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೮ನೇ ಮಾರ್ಚ್ ೧೯೪೩, ಪು. ೮೧೧–೧೨

ಸರ್ಕಾರಕ್ಕೆ ಆಗಿರುವ ಈ ನಷ್ಟಕ್ಕೆ ಯಾರು ಹೊಣೆ? ಹೊಣೆಗಾರರಾಗಿರುವ ಅಧಿಕಾರಿಗಳಿಗೆ ದಂಡ ವಿಧಿಸಲು ಸರ್ಕಾರ ಆಲೋಚಿಸುತ್ತಿದೆಯೇ?

ಔ) ಮುಂದಿನ ವರ್ಷಕ್ಕೆ ಸರ್ಕಾರ ಏನು ಯೋಜನೆ ಹಾಕಿಕೊಂಡಿದೆ?

ಅಂ) ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಗುತ್ತಿಗೆಗೆ ತೆಗೆದುಕೊಳ್ಳುವ ಉದ್ದೇಶವಿದೆಯೇ, ಅಥವಾ ಈಗಾಗಲೇ ಭೋಗ್ಯಕ್ಕೆ ತೆಗೆದುಕೊಂಡಿರುವ ಮನೆಗಳಲ್ಲಿ ಕೆಲವನ್ನು ಬಿಡುವ ಇರಾದೆ ಇದೆಯೆ?

ಅಃ) ಈಗಾಗಲೇ ಆಗಿ ಹೋಗಿರುವ ಗುತ್ತಿಗೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ವಿಚಾರಣಾ ಸಮಿತಿಯನ್ನು ನೇಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಏಕೆಂದರೆ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಸರಿಯಾದ ರೀತಿಯಲ್ಲಿ ಮಾಹಿತಿ ಸಂಗ್ರಹ ಮಾಡದೆ ಸರ್ಕಾರಕ್ಕೆ ಅನಗತ್ಯವಾಗಿ ನಷ್ಟವಾಗುವ ದಿಗಿಲು ಜನಸಾಮಾನ್ಯರಿಗಿರುವುದರಿಂದ ಈ ವಿಚಾರಣೆ ಆವಶ್ಯಕವೆನಿಸಿದೆ. ಆ ಬಗ್ಗೆ ಸರ್ಕಾರ ಕಾರ್ಯಪ್ರವೃತ್ತವಾಗಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಮತ್ತು ಆ) ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡ ವಿವರಣೆಯನ್ನು ಈಗಾಗಲೇ ಸದನದಲ್ಲಿ ಇರಿಸಲಾಗಿದೆ.

ಇ) ಇಲ್ಲ. ಚಳಿಗಾಲ ಪ್ರಾರಂಭವಾದ ನಂತರ ನಲವತ್ತಾರು ಮನೆಗಳನ್ನು ಭೋಗ್ಯಕ್ಕೆ ತೆಗೆದುಕೊಳ್ಳಲಾಯಿತು.

ಈ) ೧೯೩೯ರ ನವದೆಹಲಿ ಬಾಡಿಗೆ ನಿಯಂತ್ರಣ ಆದೇಶದ ಅನ್ವಯ ಸೂಕ್ತ ಬಾಡಿಗೆಯನ್ನೇ ಸರ್ಕಾರ ನೀಡಿದೆ.

ಅಧಿಕಾರಿಗಳಿಗೆ ಸೂಕ್ತವೆಂದು ಕಂಡುಬಂದ ಮನೆಗಳನ್ನು ಅಧಿಕಾರಿಗಳಿಗೆ ಹಂಚಿಕೊಡಲಾಗಿದೆ. ಅದರಲ್ಲೂ ಮಡದಿ ಮತ್ತು ಮಕ್ಕಳನ್ನು ಹೊಂದಿದ ಅಧಿಕಾರಿಗಳಿಗೆ ಕೆಲವು ಮನೆಗಳನ್ನು, ಮಡದಿ ಮಾತ್ರ ಇರುವ ಅಧಿಕಾರಿಗಳಿಗೆ ಸೂಕ್ತರೀತಿಯ ಮನೆಗಳನ್ನು ಹಂಚಿಕೊಡಲಾಗಿದೆ. ಅಧಿಕಾರಿಗಳು ಹೆಚ್ಚಿನ ಸಂಬಳ ಪಡೆಯುವರಾಗಿದ್ದರೆ ಅವರ ಸಂಬಳದನ್ವಯ ದೊಡ್ಡ ಮನೆಗಳನ್ನು ಹಂಚಲಾಗಿದೆ. ಗುಮಾಸ್ತರಿಗೆ ಸೂಕ್ತವಾದ ಮನೆಗಳನ್ನು ವರ್ಗೀಕರಣ ಮಾಡಿಲ್ಲ. ಅವರಿಗೂ ಸಹಾ ನಿಯಮದ ಪ್ರಕಾರವೇ ಮನೆಗಳನ್ನು ಹಂಚಿಕೊಡಲಾಗಿದೆ.

ಉ) ಇಲ್ಲ. ಮಾದರಿಗಳ ರೀತಿಯಲ್ಲಿ ಮನೆಗಳನ್ನು ವಿಂಗಡಿಸುವ ಪ್ರಮೇಯ ಉಂಟಾಗಲಿಲ್ಲ. "ಹೆಚ್ಚಿನ ಸಂಬಳದ ಅಧಿಕಾರಿಗಳಿಗೆ ಹೆಚ್ಚಿನ ಬಾಡಿಗೆ ಮನೆಗಳು" ಎಂಬ ತತ್ವವನ್ನು ಮಾತ್ರ ಯಾವಾಗಲೂ ಅನ್ವಯಮಾಡಿಕೊಂಡು ಬಂದಿದೆ.

ಊ) ಬಾಡಿಗೆ ಅಥವಾ ಸಂಬಳದಲ್ಲಿ ಶೇಕಡಾ ೧೦ ಭಾಗ ಇವೆರಡರಲ್ಲಿ ಕಡಿಮೆಯಾಗಿರುವುದನ್ನು ಪರಿಗಣಿಸಲಾಗುತ್ತಿದೆ.

ಋ) ಹೌದು; ಒಟ್ಟು ಸಂಬಳದಲ್ಲಿ ಶೇಕಡ ೧೦ – ವೇತನದಮೇಲಲ್ಲ.

ೠ) ಎ) ಮತ್ತು ಏ) ಈ ಸಂಗತಿಗಳಿಗೆ ಸಂಬಂಧಿಸಿದಂಥ ಮಾಹಿತಿಯನ್ನು ತಕ್ಷಣಕ್ಕೆ ಒದಗಿಸುವುದು ಕಷ್ಟ. ಈ ಮಾಹಿತಿ ಸಂಗ್ರಹಕ್ಕೆ ಹೆಚ್ಚು ಸಮಯ ಹಾಗೂ ಶ್ರಮ ಅಗತ್ಯವಿರುವುದರಿಂದ ಯುದ್ಧದ ಸಮಯದಲ್ಲಿ ಇವನ್ನು ಒದಗಿಸಲು ಸಾಧ್ಯವಿಲ್ಲ. ಈ ಪ್ರಮಾಣದಲ್ಲಿ ವಸತಿ ಕಲ್ಪಿಸಬೇಕಾಗಿರುವಾಗ ಎಲ್ಲಾ ವಸತಿಮನೆಗಳು ಯಾವಾಗಲೂ ತುಂಬಿರುತ್ತವೆಯೆಂದು

ತಿಳಿಯುವುದು ಕಷ್ಟ. ಕೆಲವು ಸಾರಿ ಮನೆಗಳು ಖಾಲಿ ಬೀಳುವ ಸಂಭವವಿರುವುದರಿಂದ ಹಾಗೂ ಸಂಬಳದಲ್ಲಿ ಶೇಕಡಾ ೧೦ ಎಂಬ ನಿಯಮದ ರೀತ್ಯಾ ಸ್ವಲ್ಪ ನಷ್ಟವುಂಟಾಗುವುದು ಅನಿವಾರ್ಯವಾಗಿರುತ್ತದೆ.

ಐ) ನವದೆಹಲಿ ಹಾಗೂ ದರ್ರ್ಯಾಗಂಜ್ ಭಾಗಗಳಲ್ಲಿ ಯಾವುದೇ ಮನೆ ಖಾಲಿ ಇರುವುದಿಲ್ಲ. ಕರೋಲ್‌ಬಾಗ್‌ನಲ್ಲಿ ಮಾತ್ರ ಅಧಿಕಾರಿಗಳು ಇರಬಹುದಾದಂಥ ನಾಲ್ಕು ಮನೆಗಳು ಹಾಗೂ ಗುಮಾಸ್ತರಿರಬಹುದಾದ ಮೂರು ಮನೆಗಳು ಖಾಲಿ ಇವೆ.

ಒ) ಸರ್ಕಾರದ ಗಮನಕ್ಕೆ ಬಂದಿತ್ತು.

ಓ) ಬಾಡಿಗೆ ನಿಯಂತ್ರಣಾಧಿಕಾರಿಯು ನಿಗದಿಪಡಿಸಿದಂಥ ಬಾಡಿಗೆಯನ್ನು ಪಾವತಿ ಮಾಡಿದೆ. ಗುತ್ತಿಗೆಗೆ ತೆಗೆದುಕೊಂಡ ಮನೆಗಳ ವಿಚಾರದಲ್ಲಿ ಹೇಳುವುದಾದರೆ ಆ ಮೊದಲು ಆ ಮನೆಗಳಿಗೆ ದೊರೆಯುತ್ತಿದ್ದ ಬಾಡಿಗೆಗಿಂತ ಹೆಚ್ಚಿನ ಪ್ರಮಾಣದಲ್ಲೇನೂ ಹಣ ನೀಡಿಲ್ಲ. ಪ್ರಶ್ನೆಯ ಉತ್ತರಾರ್ಧಕ್ಕೆ ಉತ್ತರದ ಅಗತ್ಯವಿಲ್ಲ.

ಔ) ಮತ್ತು (ಅಂ) ನಿಖರವಾದ ಉತ್ತರ ನೀಡಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಪ್ರಾಯಶಃ ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದ ಮನೆಗಳ ವಿಚಾರದಲ್ಲಿ ಹೇಳುವುದಾದರೆ ಆ ಮೊದಲು ಆ ಮನೆಗಳಿಗೆ ದೊರೆಯುತ್ತಿದ್ದ ಬಾಡಿಗೆಗಿಂತ ಹೆಚ್ಚಿನ ಪ್ರಮಾಣದಲ್ಲೇನೂ ಹಣ ನೀಡಿಲ್ಲ. ಪ್ರಶ್ನೆಯ ಉತ್ತರಾರ್ಧಕ್ಕೆ ಉತ್ತರದ ಅಗತ್ಯವಿಲ್ಲ.

ಅಃ) ಇಲ್ಲ. ನಾನು ಈಗಾಗಲೇ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆಯ ಉಳಿದ ಭಾಗಗಳಿಗೆ ಉತ್ತರಿಸಬೇಕಾದ ಅಗತ್ಯ ಇರುವ ಹಾಗೆ ತೋರುವುದಿಲ್ಲ.

**ವಿವರ**

| | | | |
|---|---|---|---|
| ಅ) | ನವದೆಹಲಿ ವಲಯ | ೧೨೨ ಬಂಗಾಲೆಗಳು ಹಾಗೂ ಫ್ಲಾಟುಗಳು | |
| | ಅನುಸೂಚಿತ ಪ್ರದೇಶ | ೮ ಬಂಗಲೆಗಳು | |
| | ಕರೋಲ್ ಬಾಗ್ | ೧೪೩ ಫ್ಲಾಟುಗಳು (ಗುಮಾಸ್ತರಿಗೆ ಸೂಕ್ತವಾದ ನಿವಾಸಗಳೂ ಸೇರಿ) | |
| | ದರ್ರ್ಯಾಗಂಜ್ | ೩೪ ಫ್ಲಾಟುಗಳು (ಗುಮಾಸ್ತರಿಗೆ ಮಾತ್ರ ಸೂಕ್ತವಾದವು) | |
| | | ಮೊದಲನೆ ಮನೆ | ಕೊನೆಯ ಮನೆಯನ್ನು ಹಂಚಲಾದ ದಿನಾಂಕ |
| ಆ) | ನವದೆಹಲಿ | ೧–೩–೪೧ | ೨–೨–೪೩ |
| | ಅನುಸೂಚಿತ ಪ್ರದೇಶ | ೧–೬–೪೧ | ೩೧–೧೨–೪೨ |
| | ಕರೋಲ್‌ಬಾಗ್ | ೭–೭–೪೨ | ೧೫–೧–೪೩ |
| | ದರ್ರ್ಯಾಗಂಜ್ | ೧೫–೮–೪೨ | ೨೫–೧೦–೪೨ |

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಕೆಲವು ಮನೆಗಳು ಇನ್ನೂ ಖಾಲಿಯಿರುವ ಕಾರಣವೇನು; ಅಧಿಕಾರಿಗಳು ಹಾಗೂ ಗುಮಾಸ್ತರಿಗೆ ಇವುಗಳ ಅಗತ್ಯವಿಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದಕ್ಕೇನೋ ಕೆಲವು ತಾತ್ಕಾಲಿಕ ಕಾರಣಗಳಿರಬೇಕು, ಅದೇನೆಂದು ನನಗೆ ಸದ್ಯಕ್ಕೆ ಗೊತ್ತಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಗುಮಾಸ್ತರು ಹಾಗೂ ಅಧಿಕಾರಿಗಳ ನಿವಾಸಕ್ಕೆ ಹೆಚ್ಚಿನ ಬೇಡಿಕೆ ಇದೆಯೋ, ಇಲ್ಲವೋ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಕಾಲಾವಕಾಶಬೇಕು.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಸರ್ಕಾರದ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ವಸತಿಗಳನ್ನು ಒದಗಿಸಲು ಡೇರೆಗಳನ್ನು ನೀಡಬೇಕಾಯಿತೆನ್ನುವುದು ನಿಜ ಸಂಗತಿಯಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದು ನಿಜ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಸಾಕಷ್ಟು ಪ್ರಮಾಣದಲ್ಲಿ ವಸತಿ ಇಲ್ಲದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

# ೪೦
# ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿಮನೆಗಳ ಉತ್ತಮಿಕೆ ಬಗ್ಗೆ *

**೨೭೯. ಸರ್‌ದಾರ್ ಸಂತ್ ಸಿಂಗ್ :** (ಅ) ೧೯ನೇ ಮಾರ್ಚ್, ೧೯೪೦ರಂದು ಕೇಳಲಾದ ಪ್ರಶ್ನೆ ಸಂಖ್ಯೆ ೪೩೭ರ (ಊ) ಭಾಗಕ್ಕೆ ಸಂಬಂಧಿಸಿದಂತೆ 'ಬಾಡಿಗೆದಾರರ ಸಂಘ' ಅಥವಾ ಅಂತಹ ನಿವಾಸಗಳಲ್ಲಿ ವಾಸಮಾಡುತ್ತಿರುವ ನಿವಾಸಿಗಳ ವೈಯಕ್ತಿಕ ಅರ್ಜಿಗಳಲ್ಲಿ ನವದೆಹಲಿಯ 'ಸಿ' ಮಾದರಿಯ ಸಂಯುಕ್ತ ನಿವಾಸಗಳಲ್ಲಿ ಯಾವ ಬಗೆಯಾದ ಉತ್ತಮಿಕೆಯನ್ನು ನಿಗದಿಗೊಳಸಲಾಗಿದೆಯೆಂದು ಮಾನ್ಯ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಪ್ರತಿಯೊಂದು ನಿವಾಸದಲ್ಲೂ ದುರಸ್ತಿ ಹಾಗೂ ಹೊಸದಾಗಿ ಸೇರಿಸುವ ಕಾರ್ಯವನ್ನು ಕೈಗೊಂಡರೆ ತಗಲುವ ಖರ್ಚಿನ ಪ್ರಮಾಣವೇನು?

ಇ) ೧೮ನೇ ಮಾರ್ಚ್, ೧೯೪೦ರಿಂದೀಚೆಗೆ ನವದೆಹಲಿಯಲ್ಲಿ ಯಾವುದದಾರೂ ಅಧಿಕಾರಿ ಅಥವಾ ಗುಮಾಸ್ತರ ವಸತಿ ಮನೆಗಳಲ್ಲಿ ರಿಪೇರಿ ಅಥವಾ ಸೇರ್ಪಡೆ ಕಾರ‍್ಯ ಆಗಿದೆಯೇ? ಹಾಗಿದ್ದರೆ, ಯಾವ ಯಾವ ದರ್ಜೆ ವಸತಿಮನೆಗಳಿಗೆ ಈ ರೀತಿಯಾದ ದುರಸ್ತಿ ಹಾಗೂ ಪರಿವರ್ತನೆ ಕಾರ‍್ಯಗಳನ್ನು ಮಾಡಲಾಗಿದೆ?

ಈ) ಈ ರೀತಿಯಾಗಿ ದುರಸ್ತಿ ಅಥವಾ ಪರಿವರ್ತನೆ ಮಾಡಿದ ಪ್ರತಿಯೊಂದು ವಸತಿಮನೆಗೆ ತಗುಲಿದ ಖರ್ಚೆಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡ ವಿವರಣಾಪಟ್ಟಿಯನ್ನು ಸದನದಲ್ಲಿ ಇರಿಸಲಾಗಿದೆ.

ಆ) ಮತ್ತು ಈ) ವಿಷಯವಾಗಿ ಕೇಳಲಾದ ಮಾಹಿತಿಯನ್ನು ಸಂಗ್ರಹಿಸಲು ಸಾಕಷ್ಟು ಸಮಯ ಹಾಗೂ ಶ್ರಮದ ಅಗತ್ಯವಿರುವುದರಿಂದ ಸಮರಕಾಲದಲ್ಲಿ ಇದು ಸಾಧ್ಯವಾಗದೆಂದು ತಿಳಿಸಬಯಸುತ್ತೇವೆ.

ಇ) ಹೌದು. 'ಎ', 'ಬಿ', 'ಸಿ', 'ಡಿ' ಮತ್ತು 'ಇ' ಮಾದರಿ ವಸತಿಮನೆಗಳಿಗೆ ಮಾತ್ರ ದುರಸ್ತಿ, ಬದಲಾವಣೆ ಮಾಡಲಾಗಿದೆ.

**ವಿವರ**

೧) ಈಗಿರುವ ಸ್ಥಳದಲ್ಲಿನ ಅಡುಗೆಮನೆ, ಬಚ್ಚಲುಮನೆ ಹಾಗೂ ಉಗ್ರಾಣದ ಮನೆಗಳನ್ನು ಕೆಡವಿ ಖಾಲಿ ಜಾಗದಲ್ಲಿ – ಅಂಗಳ ಮತ್ತು ಶೌಚಾಲಯದ ನಡುವಿನ ಜಾಗ ಹೊಸ ಕೊಠಡಿಗಳನ್ನು ನಿರ್ಮಿಸುವುದು; ಜೊತೆಗೆ ಈ ಮೂರೂ ಕೊಠಡಿಗಳ – ಮುಂಭಾಗದಲ್ಲಿ ಒಂದು ಉದ್ದನೆಯ ವೆರಾಂಡಾವನ್ನು ನಿರ್ಮಿಸುವುದು.

೨) ಶುದ್ಧಗಾಳಿ ಸಂಚಾರವಾಗಲು ಅನುಕೂಲವಾಗುವಂತೆ ಪ್ರತಿಯೊಂದು ಕೊಠಡಿಗೂ ಒಂದು ಕಿಟಕಿಯನ್ನು ಹಾಕುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೧, ೧೧ನೇ ಮಾರ್ಚ್೧೯೪೩, ಪು. ೯೬೯.

೩) ಮೊದಲನೆಯ ಕೊಠಡಿಗೆ ಸೇರಿದ ಪ್ರವೇಶದ ಜಾಗದಲ್ಲಿ ಒಂದು ಕಿಟಕಿಯನ್ನು ಅಳವಡಿಸುವುದು.

೪) ವೆರಾಂಡಾದ ಹೊರಗಿನಿಂದ ಒಂದು ಹೊಸದಾಗಿ ಬಾಗಿಲನ್ನು ಅಳವಡಿಸುವುದು.

೫) ಇನ್ನೊಂದು ನಳದ ವ್ಯವಸ್ಥೆ ಮಾಡುವುದು

೬) ಸೇವಕರ ಕೊಠಡಿಯೊಂದನ್ನು ನಿರ್ಮಿಸುವುದು

೭) ಕಿಟಕಿಯುಳ್ಳ ಒಂದು ಹೆಚ್ಚುವರಿ ಬಚ್ಚಲುಮನೆಯನ್ನು ನಿರ್ಮಿಸುವುದು

೮) ಎಲ್ಲಾ ಕೊಠಡಿಗಳ ಛಾವಣಿಯಲ್ಲಿನ ರಂಧ್ರಗಳನ್ನು ಮುಚ್ಚಿ ಗವಾಕ್ಷಿಗಳನ್ನು ನಿರ್ಮಿಸುವುದು.

೯) ಬೆಂಕಿಗೂಡುಗಳಿಲ್ಲದ ಎಲ್ಲಾ ಕೋಣೆಗಳಲ್ಲಿ ಮರದ ಬಡುಗಳನ್ನು (mantels) ನಿರ್ಮಿಸಬೇಕು.

೧೦) ಎಲ್ಲಾ ಕೊಠಡಿಗಳಲ್ಲಿ ಗೋಡೆಗಂಟಿದ ಹಾಗೆ ಆಲ್ಮೆರಾಗಳು ಇರಬೇಕು.

೧೧) ವೆರಾಂಡಾದ ಒಳವಿಸ್ತಾರವನ್ನು ಹೆಚ್ಚಿಸುವುದು, ಇತ್ಯಾದಿ.

## ೪೧
## ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿಮನೆಗಳನ್ನು ಉತ್ತಮಪಡಿಸುವುದರ ಬಗ್ಗೆ *

**೨೮೦. ಸರ್ದಾರ್ ಸಂತ್ ಸಿಂಗ್ :** ನವದೆಹಲಿಯಲ್ಲಿ ಸಾಂಪ್ರದಾಯಿಕ 'ಸಿ' ಮಾದರಿಯ ಸಂಯುಕ್ತ ವಸತಿಮನೆಗಳಿಗೆ ಈ ಕೆಳಕಾಣಿಸಿದಂತೆ ಬದಲಾವಣೆ ಮಾಡಲು ಪ್ರತಿಯೊಂದು ಮನೆಗೆ ವೆಚ್ಚವೆಷ್ಟೆಂದು ಮಾನ್ಯ ಸದಸ್ಯರು ತಿಳಿಸುತ್ತಾರೆಯೇ? :

೧) ಮುಂಭಾಗದ ಕೊಠಡಿಗೆ ಕಿಟಕಿಯನ್ನು ಜೋಡಿಸಲು;

೨) ಮೂರೂ ಕೊಠಡಿಗಳಿಗೆ, ಬೇರೆ ಮಾದರಿಯ ವಸತಿಮನೆಗಳಲ್ಲಿ ಜೋಡಿಸಿರುವಂತೆ ಸೂಕ್ತವಾದ ಗವಾಕ್ಷಿಗಳನ್ನು ಹಾಕಲು;

೩) ಅಂಗಳಕ್ಕೆ ಸಮರ್ಪಕವಾದ ನೆಲವನ್ನು ನಿರ್ಮಿಸಲು; ಹಾಗೂ

೪) ಅಡುಗೆಮನೆಗೆ ಇನ್ನೊಂದು ಕಿಟಕಿಯನ್ನಿಡಲು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ರೂ. ೪೧೫, ಒಂದು ವಸತಿಮನೆಗೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ಮಾರ್ಚ್ ೧೧, ೧೯೪೩, ಪು. ೯೬೯–೭೦

## ೪೨
## ನವದೆಹಲಿಯಲ್ಲಿ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳನ್ನು ಉತ್ತಮಗೊಳಿಸುವ ಬಗೆಗೆ **

**೨೮೧. ಸರ್ದಾರ್ ಸಂತ್ ಸಿಂಗ್ :** ಅ) ೧೯೪೦ ಅಥವಾ ೧೯೪೧ರಲ್ಲಿ ದೆಹಲಿಯ ಎಲ್ಲಾ ಡಿ.ಐ.ಜಡ್ ವಲಯದ 'ಡಿ' ಮಾದರಿ ಮನೆಗಳ ಅಂಗಳಕ್ಕೆ ಪಕ್ಕಾ ನೆಲವನ್ನು ನಿರ್ಮಿಸಿದುದು ವಾಸ್ತವವೆಂದು ಮಾನ್ಯ ಸದಸ್ಯರು ತಿಳಿಸುತ್ತಾರೆಯೇ?

ಆ) ಆ ರೀತಿ ಪರಿವರ್ತನೆ ಮಾಡಿದಂಥ ವಸತಿಮನೆಗಳ ಸಂಖ್ಯೆಯೆಷ್ಟು?

ಇ) 'ಡಿ' ಮಾದರಿ ವಸತಿಮನೆಗಳ ನಡುವೆ ಗುರುತಿಸಲ್ಪಟ್ಟ 'ಸಿ' ಮಾದರಿ ವಸತಿಮನೆಗಳ ಒಟ್ಟು ಸಂಖ್ಯೆಯೆಷ್ಟು?

ಈ) ಸಂಯುಕ್ತ 'ಸಿ' ಮಾದರಿ ವಸತಿಮನೆಗಳಿಗೆಲ್ಲ ಪಕ್ಕಾ ನೆಲವನ್ನು ಮಾಡಿದ್ದರೆ ತಗಲಬಹುದಾಗಿದ್ದ ಒಟ್ಟು ಖರ್ಚೆಷ್ಟು?

ಉ) ಈ ರೀತಿ ಪರಿವರ್ತನೆ ಮಾಡಿದಂಥ ಎಲ್ಲಾ 'ಡಿ' ಮಾದರಿ ವಸತಿಮನೆಗಳಿಗೆ ತಗಲಿದ ಖರ್ಚೆಷ್ಟು?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** (ಅ) ಹೌದು

ಆ) ೧೦೭೯.

ಇ) ೬೦.

ಈ) ಇಂದಿನ ಬೆಲೆಗಳ ಪ್ರಕಾರ ರೂ. ೧೩,೫೦೦.

ಉ) ರೂ. ೨೯,೪೧೫.

## ೪೩
## ನವದೆಹಲಿಯ "ಸಿ" ಮಾದರಿ ಸಂಯುಕ್ತ ವಸತಿಮನೆಗಳ ಪರಿಶೀಲನೆ*

**೨೮೨. ಸರ್ದಾರ್ ಸಂತ್‌ಸಿಂಗ್ :** ಪ್ರಶ್ನೆ ಸಂಖ್ಯೆ ೪೩೮– ಇದಕ್ಕೆ ಉತ್ತರವನ್ನು ೧೮ನೇ ಮಾರ್ಚ್, ೧೯೪೦ರಂದು ನೀಡಲಾಗಿದ್ದು ಇದಕ್ಕೆ (ಈ ಪ್ರಶ್ನೆಗೆ) ಪೂರಕವಾಗಿ ಕೇಳಲಾದ ಎರಡು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಗಮನಿಸುವರೆ? ಮಾನ್ಯ ಕಾರ್ಮಿಕ ಸದಸ್ಯರಾಗಿದ್ದವರು ನವದೆಹಲಿಯ 'ಸಿ' ಮಾದರಿ ವಸತಿ ನಿಲಯಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದ್ದರು. ವಾಸ್ತವವಾಗಿ ಮಾನ್ಯ ಸದಸ್ಯರು ಪರಿಶೀಲನೆ ನಡೆಸಿದರೆ ಎಂಬುದನ್ನು ತಿಳಿಸಬೇಕು. ಪರಿಶೀಲಿಸಿರುವುದು ನಿಜವಾಗಿರುವುದಾದರೆ ಅವರ ವರದಿಯ ಪ್ರತಿಯೊಂದನ್ನು ಸದನದಲ್ಲಿ ಮಂಡಿಸಲು ತಮಗೆ ಸಾಧ್ಯವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಇಲ್ಲ. ಪ್ರಶ್ನೆಯ ಎರಡನೆಯ ಭಾಗ ಉದ್ಭವವಾಗುವ ಪ್ರಮೇಯವಿಲ್ಲ.

---

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ಮಾರ್ಚ್ ೧೧, ೧೯೪೩, ಪು. ೯೬೯–೭೦

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೨, ೧೧ನೇ ಮಾರ್ಚ್ ೧೯೪೩, ಪು. ೯೭೦

# ೪೪
# ನವದೆಹಲಿಯಲ್ಲಿ ಸಾಂಪ್ರದಾಯಿಕ "ಡಿ" ಮಾದರಿ ವಸತಿಮನೆಗಳನ್ನು ಉತ್ತಮಪಡಿಸುವ ಬಗೆಗೆ*

**೨೮೩. ಸರ್ದಾರ್ ಸಂತ್ ಸಿಂಗ್ :** (ಅ) ೧೯೪೦ರಲ್ಲಿ 'ಡಿ' ಮಾದರಿ ವಸತಿಮನೆಗಳ ಗ್ಯಾಲರಿಯನ್ನು ಮುಚ್ಚಿದಾಗ, ಗ್ಯಾಲರಿಯ ಎರಡೂ ಬಾಜುಗಳಲ್ಲಿನ ಎರಡು ಕೊಠಡಿಗಳ ಗೋಡೆಗಳಿಗೆ ಗವಾಕ್ಷಿಗಳನ್ನು ನೀಡಬೇಕೆಂಬ ಸಲಹೆಯನ್ನು ಕೊಡಲಾಗಿತ್ತು. ಹಾಗೆಯೇ ಈ ಗವಾಕ್ಷಿಗಳು ಗಾಜಿನ ಕೇಸುಗಳಾಗಿದ್ದೂ ಮುಚ್ಚಲು ಅನುಕೂಲವಾಗುವಂತಿರಬೇಕೆಂದೂ ಸಹ ತಿಳಿಸಲಾಗಿತ್ತು; ಇದು ನಿಜವೇ ಎಂದು ಮಾನ್ಯ ಸದಸ್ಯರು ಸ್ಪಷ್ಟಪಡಿಸುತ್ತಾರೆಯೇ?

ಆ) ಗಾಜಿನ – ಕೇಸಿನಿಂದ ಮಾಡಿದ ಗವಾಕ್ಷಿಗಳು, ಆರೋಗ್ಯದ ದೃಷ್ಟಿಯಿಂದ ಸಲ್ಲದೆಂದು ನವದೆಹಲಿಯ ಆರೋಗ್ಯಾಧಿಕಾರಿಗಳು ತಿಳಿಸಿದ ಕಾರಣದಿಂದ ಇದಕ್ಕೆ ಭಿನ್ನವಾದ ತಂತಿಯಿಂದ ಮಾಡಿದ ದೊಡ್ಡ ರಂಧ್ರವುಳ್ಳ ಗವಾಕ್ಷಿಗಳನ್ನು ಉಪಯೋಗಿಸಿದುದು ನಿಜವೇ?

ಇ) ಇಂಧನ ಇತ್ಯಾದಿಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ಬಚ್ಚಲು ಮನೆ ಮತ್ತು ಶೌಚಾಲಯದ ನಡುವಿನ ಖಾಲಿಜಾಗದಲ್ಲಿ ಕೊಠಡಿಯೊಂದನ್ನು ಕಟ್ಟಲು ಉದ್ದೇಶಿಸಿರುವುದು ನಿಜವೇ?

ಈ) ಈ ರೀತಿಯಾಗಿ ಖಾಲಿಜಾಗವನ್ನು ಉಪಯೋಗಿಸಿಕೊಂಡು ಗೋಡೆ ಕಟ್ಟುವುದಕ್ಕೂ ಸಹ ನವದೆಹಲಿಯ ಆರೋಗ್ಯಾಧಿಕಾರಿಗಳು ತಕರಾರು ತೆಗೆದದ್ದು ನಿಜವೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಇಲ್ಲ.

ಇ) ಹೌದು.

ಈ) ಇಲ್ಲ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಸರದಾರ್ ಸಂತ್ ಸಿಂಗ್‌ರ ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಸದನಕ್ಕೆ ಒದಗಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೧ನೇ ಮಾರ್ಚ್ ೧೯೪೩, ಪು. ೬೭೦

# ೪೫
# ನವದೆಹಲಿಯ "ಸಿ" ಮಾದರಿ ಸಂಯುಕ್ತ ವಸತಿ ಮನೆಗಳ ಪರಿಶೀಲನೆ*

****೨೮೪ ಸರ್‌ದಾರ್ ಸಿಂತ್ ಸಿಂಗ್ :** ಅ) ವಾಸಿಸಲು ಗೊತ್ತಾದ ವಸತಿ ಸಮರ್ಪಕವಾದ ರೀತಿಯಲ್ಲಿ ಗವಾಕ್ಷಿಗಳನ್ನು ಹೊಂದಿರುವುದೇ ಎಂಬುದನ್ನು ನಿರೀಕ್ಷಿಸಲು ಯಾವಾಗಲಾದರೂ ನವದೆಹಲಿಯ ಆರೋಗ್ಯಾಧಿಕಾರಿಗಳು ಆಹ್ವಾನಿತರಾಗಿರುವರೇ ಎಂಬ ಸಂಗತಿಯನ್ನು ಶಿಕ್ಷಣ ಕಾರ್ಯದರ್ಶಿಗಳು ದಯಮಾಡಿ ತಿಳಿಸಬೇಕಾಗಿದೆ.

ಆ) ಪ್ರಶ್ನೆ (ಅ)ಗೆ ಉತ್ತರ ಹೌದು ಎಂದಾದರೆ ನವದೆಹಲಿಯ ಡಿ.ಐ.ಜಡ್ ವಲಯದ 'ಸಿ' ಮಾದರಿ ಸಂಯುಕ್ತ ವಸತಿನಿಲಯಗಳನ್ನು ಈ ಅಧಿಕಾರಿ ಎಂದಾದರೂ ಪರಿಶೀಲಿಸಿರುವರೇ?

ಇ) ಪ್ರಶ್ನೆ (ಆ)ಗೆ ಉತ್ತರ ಹೌದು ಎಂದಾದರೆ, ವಸತಿಮನೆಗಳ ಕೊಠಡಿಗಳನ್ನು ಮಲಗುವ ಕೋಣೆಯಾಗಿ ಉಪಯೋಗಿಸಲು ಸಮರ್ಪಕವಾಗಿರುವುದೇ ಇಲ್ಲವೇ ಎಂಬುದನ್ನು ನವದೆಹಲಿಯ ಪುರಸಭಾ ಸಮಿತಿ ಅಥವಾ ಭಾರತ ಸರ್ಕಾರಕ್ಕೆ ಸದರಿ ಅಧಿಕಾರಿಯು ಏನಾದರೂ ವರದಿಯನ್ನು ಸಲ್ಲಿಸಿರುವರೇ?

ಈ) ಆರೋಗ್ಯಾಧಿಕಾರಿಗಳನ್ನು ಈ ವಸತಿಮನೆಗಳ ಪರಶೀಲನೆಗೆ ಆಹ್ವಾನಿಸದಿದ್ದ ಪಕ್ಷದಲ್ಲಿ ಏಕೆ ಹಾಗೆ ಮಾಡಲಿಲ್ಲವೆಂದು ಕಾರಣ ನೀಡಿರುವರೆ? ಈ ವಸತಿನಿಲಯಗಳ ಪರಿಶೀಲನೆಯು ಆ ಮೊದಲೇ ನಡೆದಿರುವುದಾಗಿ ಸದರಿ ಅಧಿಕಾರಿಗಳು ಸೂಚನೆ ನೀಡಲು ಸಿದ್ಧರಿರುವರೆ? ಹಾಗಿಲ್ಲದಿದ್ದರೆ ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಮತ್ತು ಇ) ಇದು ಉದ್ಭವವಾಗುವುದೇ ಇಲ್ಲ.

ಈ) ಈ ವಸತಿನಿಲಯಗಳು ನಿರ್ಮಾಣವಾಗುವುದಕ್ಕೆ ಮೊದಲೇ ಪುರಸಭಾ ಸಮಿತಿಯಿಂದ ಒಪ್ಪಿಗೆ ಪಡೆದವಾಗಿದ್ದವು; ಹಾಗಾಗಿ ಆರೋಗ್ಯಾಧಿಕಾರಿಗಳಿಂದ ಪರಿಶೀಲನೆ ನಡೆಸಬೇಕಾದ ಪ್ರಮೇಯವಿದೆಯೆಂದು ಸರ್ಕಾರಕ್ಕೆ ಅನ್ನಿಸಲಿಲ್ಲ. ಆದಾಗ್ಯೂ ನಾನು ಆರೋಗ್ಯಾಧಿಕಾರಿಗಳಿಂದ ಈ ವಸತಿಮನೆಗಳನ್ನು ಪರಿಶೀಲಿಸಲು ಏರ್ಪಾಟು ಮಾಡುತ್ತಿದ್ದೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೧ನೇ ಮಾರ್ಚ ೧೯೪೩, ಪು. ೯೭೦–೯೭೧

** ಪ್ರಶ್ನೆ ಕೇಳಿದವರು ತಮ್ಮ ಕೋಟಾವನ್ನು ಮುಗಿಸಿದ್ದರಿಂದ, ಈ ಪ್ರಶ್ನೆಗೆ ನೀಡಿದ ಉತ್ತರವನ್ನು ಸದನದ ಮುಂದೆ ಮೂಂಡಿಸಲಾಯಿತು.

# ೪೬
# ನವದೆಹಲಿಯ "ಸಿ" ಮಾದರಿ ವಸತಿಮನೆಗಳನ್ನು ಹಂಚಿಕೆದಾರರಿಗೆ ಅವರ ಸ್ವಾಧೀನಕ್ಕೆ ವರ್ಗಾಯಿಸುವ ಬಗೆಗೆ*

** **ಸರ್ದಾರ್ ಸಂತ್ ಸಿಂಗ್ :** ಅ) ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ: ನವದೆಹಲಿಯ ಮಾಡ್, ಇಬೆಟ್ಸನ್ ಹಾಗೂ ರೀಡಿಂಗ್ ರಸ್ತೆಯಲ್ಲಿನ ಸಂಯುಕ್ತ 'ಸಿ' ಮಾದರಿ ಮನೆಗಳಿಗೆ ಬದಲಾಗಿ ಹ್ಯಾವ್‌ಲಾಕ್ ಚೌಕ, ಬೇರ್ಡ್ ರಸ್ತೆ, ಮಾರುಕಟ್ಟೆ ರಸ್ತೆ, ಇರ್ವಿನ್ ರಸ್ತೆ ಇತ್ಯಾದಿಗಳಲ್ಲಿನ ರೆಗ್ಯುಲರ್ 'ಸಿ' ವಸತಿಮನೆಗಳನ್ನು ಕಳೆದ ವರ್ಷ ನೀಡಿರುವುದು ನಿಜವೇ?

ಆ) 'ಸಿ' ಮಾದರಿ ಸಂಯುಕ್ತ ಮನೆಗಳು ತಮಗೆ ಹಂಚಿಕೆಯಾದ ಕೂಡಲೇ ರೆಗ್ಯುಲರ್ 'ಸಿ' ಮಾದರಿ ಮನೆಗಳನ್ನು – ಅವು ಖಾಲಿಯಾದ ಹಾಗೆಲ್ಲ – ಹಂಚಿಕೊಡಬೇಕೆಂದು ಅರ್ಜಿ ಹಾಕಿದ ಎಷ್ಟು ಸಮಯದ ಒಳಗೆ ಅವರ ಬೇಡಿಕೆಯು ಈಡೇರಿತು?

ಇ) ಸಂಯುಕ್ತ ಮಾದರಿ ವಸತಿಮನೆಗಳನ್ನು ಹೊಂದಿರುವವರು ಸ್ವಾಧೀನಾಧಿಕಾರವನ್ನು ಇಟ್ಟುಕೊಂಡು ರೆಗ್ಯುಲರ್ ಮಾದರಿ ಮನೆಗಳಿಗೆ ಅರ್ಜಿ ಹಾಕಿಕೊಂಡರೆ ಅದು ಅವರಿಗೆ ದಕ್ಕುವುದೆ? ಇಲ್ಲವಾದರೆ, ಯಾಕಿಲ್ಲ?

ಈ) (ಅ) ಅಂಶದಲ್ಲಿ ಕಾಣಿಸಿರುವಂಥ ರಸ್ತೆಗಳಲ್ಲಿ ಮತ್ತು ಮೊಹಲ್ಲಾಗಳಲ್ಲಿ ಈ ವರ್ಷ ಖಾಲಿಯಾಗಲಿರುವ – ನಿವಾಸಿಗಳ ನಿವೃತ್ತಿಯಿಂದ ಅಥವಾ ಅವರಿಗೆ ಉನ್ನತ ಮಾದರಿ ಮನೆಗಳು ಹಂಚಿಕೆಯಾಗುವುದರಿಂದ – ರೆಗ್ಯುಲರ್ 'ಸಿ' ಮಾದರಿ ಮನೆಗಳ ಸಂಖ್ಯೆಯೆಷ್ಟು?

ಉ) 'ಸಿ' ಮಾದರಿ ಸಂಯುಕ್ತ ಮನೆಗಳ ನಿವಾಸಿಗಳು ಸ್ವಾಧೀನಾಧಿಕಾರವನ್ನು ಇಟ್ಟುಕೊಂಡು ಇತರ ಮನೆಗಳಿಗೆ ಬದಲಾಯಿಸಿಕೊಳ್ಳಲು ಕೋರಿದರೆ ಅದನ್ನು ನೆರವೇರಿಸುವ ಯೋಜನೆ ಮಾನ್ಯ ಸದಸ್ಯರಿಗಿದೆಯೇ? ಇಲ್ಲವಾದರೆ, ಯಾಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಸದ್ಯ ಕೇಳಿರುವ ಮಾಹಿತಿಯನ್ನು ಒದಗಿಸಲು ಸಾಕಷ್ಟು ಸಮಯ ಹಾಗೂ ಶ್ರಮದ ಅಗತ್ಯ ಕಾಣುವುದರಿಂದ ಸಮರ ಕಾಲದಲ್ಲಿ ಇದನ್ನು ಪೂರೈಸುವುದು ಸಾಧ್ಯವಿಲ್ಲವೆಂದು ತಿಳಿಸುತ್ತೇವೆ.

ಇ) ಮತ್ತು ಉ) ಹೌದು. ಪರಿಷ್ಕೃತ ಕಾನೂನುಗಳನ್ನು ಬದಲಾಯಿಸಿ ಆದಷ್ಟು ಶೀಘ್ರವಾಗಿ ಇದನ್ನು ಪೂರೈಸಲಾಗುವುದು.

ಈ) ಮುಂದಿನ ಬೇಸಿಗೆ ಹಾಗೂ ಚಳಿಗಾಲದ ಅರ್ಜಿಗಳನ್ನು ಸ್ವೀಕರಿಸದ ಹೊರತು ಈ ಸಂಬಂಧವಾದ ಮಾಹಿತಿಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೧ನೇ ಮಾರ್ಚ್ ೧೯೪೩, ಪು. ೯೭೦–೯೭೧

** ಪ್ರಶ್ನೆ ಮಾಡುವವರು ತಮ್ಮ ಕೋಟಾವನ್ನು ಮುಗಿಸಿದ್ದರು, ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿತ್ತು.

## ೪೭
## ಸಮರ ಕಾಲದ ಗಾಯಗಳ ಮಸೂದೆ (ಪರಿಹಾರ ವಿಮೆ)*

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಮಾನ್ಯರೆ, ಯುದ್ಧ ಕಾಲದಲ್ಲಿ ಕಾರ್ಮಿಕರು ಗಾಯಗೊಂಡರೆ ಅದರ ಪರಿಹಾರದ ಖರ್ಚನ್ನು ಮಾಲೀಕರು ಭರಿಸಬೇಕು ಹಾಗೂ ಅಂಥ ಮಾಲೀಕರಿಗೆ ವಿಮಾ ಸೌಲಭ್ಯವನ್ನು ಕಲ್ಪಿಸುವ ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** ಪ್ರಶ್ನೆಯೆಂದರೆ : "ಸಮರ ಕಾಲದಲ್ಲಿ ಕಾರ್ಮಿಕರಿಗೆ ಆಗಬಹುದಾದ ಗಾಯಗಳಿಗೆ ಪರಿಹಾರವನ್ನು ಮಾಲೀಕರು ಒದಗಿಸಬೇಕಾಗಿದ್ದು, ಆ ಮಾಲೀಕರಿಗೆ ವಿಮಾ ಸೌಲಭ್ಯ ಕಲ್ಪಿಸುವ ಮಸೂದೆಯನ್ನು ಮಂಡಿಸಲು ಅನುಮತಿ ನೀಡಲಾಗಿದೆ".

ಮಸೂದೆಯನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೪೮
## ದೆಹಲಿ ಪಾಲಿಟೆಕ್ನಿಕ್ ತಾಂತ್ರಿಕ ತರಬೇತಿ ಕೇಂದ್ರದಲ್ಲಿ ತರಬೇತುದಾರರನ್ನು ವಜಾಮಾಡುವ ಬಗೆಗೆ*

**೩೧೧. ಮೌಲ್ವಿ ಸಯ್ಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ೧೯೪೨ರ ಮಾರ್ಚ್ ೨೫ರಂದು ೨೫ನೇ ಸಂಖ್ಯೆಯ ಪ್ರಶ್ನೆಯ ಕೇಳಲಾದ ಕೆಲವು (ಇ) ಭಾಗಕ್ಕೆ ನೀಡಿದ ಉತ್ತರವನ್ನು ಮಾನ್ಯ ಕಾರ್ಮಿಕ ಸದಸ್ಯರು ಗಮನಿಸಿ ದೆಹಲಿಯ ಪಾಲಿಟೆಕ್ನಿಕ್ ತಾಂತ್ರಿಕ ತರಬೇತಿ ಕೇಂದ್ರದಲ್ಲಿನ ತರಬೇತುದಾರರು ಹಾಗೂ ಸಹಾಯಕ ತರಬೇತುದಾರರನ್ನು ಮೇಲಿಂದ ಮೇಲೆ ವಜಾ ಮಾಡಿದ ಕಾರಣವನ್ನು ತಿಳಿಸುವರೆ? ಕುಶಲಕರ್ಮಿಗಳ ಸಂಖ್ಯೆ ತೀರಾ ಕಡಿಮೆಯಿದ್ದು ಅವರ ಅಗತ್ಯವಿರುವ ಪ್ರಸ್ತುತ ಸಂದರ್ಭದಲ್ಲಿ ಈ ಪ್ರಶ್ನೆ ಬಹಳ ಪ್ರಾಮುಖ್ಯವನ್ನು ಪಡೆಯುತ್ತದೆ.

ಆ) ಯಾವುದೇ ಕಾರಣಗಳನ್ನು ನೀಡದೆ ಕೆಲವು ಮುಸಲ್ಮಾನರನ್ನು ವಜಾ ಮಾಡಿರುವ ಸುದ್ಧಿಯಲ್ಲಿ ನಿಜಾಂಶವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಏಪ್ರಿಲ್ ೧, ೧೯೪೨ರಿಂದ ಈಚೆಗೆ ಒಟ್ಟು ಹದಿನಾಲ್ಕು ಮಂದಿ ತರಬೇತುದಾರರನ್ನು ವಜಾ ಮಾಡಲಾಗಿದೆ, ಅದಕ್ಷತೆಯ ಕಾರಣದಿಂದ ೧೩ ಮಂದಿಯನ್ನೂ, ರಾಜಕೀಯ ಚಟುವಟಿಕೆಯಲ್ಲಿ ತೊಡಗಿದ್ದಕ್ಕೆ ಒಬ್ಬರನ್ನು ತೆಗೆದುಹಾಕಲಾಗಿದೆ.

ಆ) ನನಗೆ ಬಂದಿರುವ ಮಾಹಿತಿ ಪ್ರಕಾರ, ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೧ನೇ ಮಾರ್ಚ್ ೧೯೪೩, ಪು. ೯೭೬.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೬ನೇ ಮಾರ್ಚ್ ೧೯೪೩, ಪು. ೧೧೨೦

# ೪೯
# ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್ ವಿಭಾಗದ ನೌಕರರ ಸಮಸ್ಯೆಗಳ ಬಗೆಗೆ*

**೩೧೨. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ೧೯೪೨ನೇ ಡಿಸೆಂಬರ್ ೧ ಮತ್ತು ೨ನೇ ದಿನಾಂಕಗಳಂದು ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಎಲ್ಲಾ ನೌಕರರು ಮುಷ್ಕರ ಹೂಡಿದ್ದು ನಿಜ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? ೧೯೪೨, ಡಿಸೆಂಬರ್ ೨ನೇ ತಾರೀಖು ಕಾರ್ಮಿಕ ಕಾರ್ಯದರ್ಶಿಯವರು ಮುಷ್ಕರನಿರತ ನೌಕರರ ಬಳಿ ಹೋದಾಗ ಆರು ಬೇಡಿಕೆಗಳ ಅಹವಾಲನ್ನು ಅವರಿಗೆ ಸಲ್ಲಿಸಲಾಯಿತಂತೆ. ಅದರಲ್ಲಿನ ಒಂದು ಬೇಡಿಕೆ ಬೈಂಡಿಂಗ್ ವಿಭಾಗದ ನೌಕರರ ಆರಂಭಿಕ ಸಂಬಳ ಮಾಹೆಯಾನ ರೂ. ೩೦ರಿಂದ ನೌಕರ ಸಲ್ಲಿಸುವ ೨೦ ವರ್ಷಗಳ ಸೇವಾವಧಿಯಲ್ಲಿ ಗರಿಷ್ಠ ಪ್ರಮಾಣ ಮಾಹೆಯಾನ ರೂ. ೭೫ಕ್ಕೆ ಏರಬೇಕೆಂಬ ವಿಷಯಕ್ಕೆ ಸಂಬಧಿಸಿದ್ದು.

ಆ) ೧೯೨೭ರಿಂದಲೂ ಬೈಂಡಿಂಗ್ ವಿಭಾಗವು ವಾರ್ಷಿಕ ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಸಮಿತಿಗೆ ಪ್ರಶ್ನೆಗಳು ಹಾಗೂ ಜ್ಞಾಪನಾಪತ್ರಗಳನ್ನು ಸಲ್ಲಿಸುತ್ತಿರುವುದು ನಿಜವೋ, ಅಲ್ಲವೋ? ಇದೇ ಪ್ರಶ್ನೆಗಳನ್ನು ಶಾಸನಸಭೆಯಲ್ಲೂ ಕೇಳಲಾಗುತ್ತಿದೆ, ಹಾಗೂ ಮುದ್ರಣಾಲಯ ಸಂಘವೂ ಜ್ಞಾಪನಾಪತ್ರ ಸಲ್ಲಿಸುತ್ತಿದೆ.

ಇ) ಕಳೆದ ೧೫/೨೦ ವರ್ಷಗಳಿಂದ ಮಂದಿ ತಾವು ಪಡೆಯುತ್ತಿರುವ ಸಂಬಳದ ಹಣದಿಂದಲೇ ನಿಧಿ, ಸೊಸೈಟಿ, ನೀರು, ವಸತಿ ಬಾಡಿಗೆ, ಇತ್ಯಾದಿಗಳಿಗೆ ಕಟ್ಟುತ್ತಾ ಬಂದಿದ್ದಾರೆ. ಇದಕ್ಕೆಲ್ಲಾ ಹಣವನ್ನು ಕಟ್ಟಿ ಕಡೆಗೆ ಅವರ ಕೈಯ್ಯಲ್ಲಿ ಉಳಿಯುವುದು ಕೇವಲ ೧೦/೧೨ ರೂಪಾಯಿಗಳು. ಈ ಹಣದಿಂದ ಅವರು ಸಂಸಾರವನ್ನು ಸಾಗಿಸುವುದು ದುಸ್ತರವಾಗಿರುವುದು ಸ್ಪಷ್ಟವಾಗಿದೆಯಲ್ಲವೆ?

ಈ) ನವೆಂಬರ್ ೧೯೪೨ರಲ್ಲಿ ಬೈಂಡಿಂಗ್ ವಿಭಾಗದ ಸಂಘವು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರಿಗೆ ಕೋರಿಕೆಯನ್ನು ಸಲ್ಲಿಸಿದ್ದು ಅದರಲ್ಲಿ ಅವರು ವಾರ್ಷಿಕ ವೇತನದಲ್ಲಿ ಹೆಚ್ಚಳವನ್ನು ನೀಡುವ ತನಕ ಅಥವಾ ನೌಕರರನ್ನು ೨೫ ವರ್ಷ ಸೇವಾವಧಿ ಪೂರೈಸುವುದಕ್ಕೆ ಮೊದಲು ನಿವೃತ್ತಿಗೊಳಿಸಬಾರದೆಂದು ತಿಳಿಸಿರುವರು. ೨೫ ವರ್ಷ ಪೂರೈಸುವುದಕ್ಕೆ ಅವಕಾಶ ನೀಡಿದರೆ ವಾರ್ಷಿಕ ಹೆಚ್ಚಳದಲ್ಲಿ ಆದ ವಿಳಂಬಕ್ಕೆ ಬೇರೊಂದು ರೀತಿಯಲ್ಲಿ ಪರಿಹಾರ ನೀಡಿದ ಹಾಗಾಗುತ್ತದೆ.

ಉ) ಬೈಂಡಿಂಗ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ೨೫ ವರ್ಷಗಳ ಸೇವೆಯನ್ನು ಪೂರೈಸುವ ತನಕ ಸರ್ಕಾರ ಅವರನ್ನು ಉಳಿಸಿಕೊಳ್ಳಲು ಸಿದ್ಧವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು, ಮೇಲ್ವಿಚಾರಣೆ ಸಿಬ್ಬಂದಿ ಹಾಗೂ ಒಬ್ಬರಿಬ್ಬರು ಇತರೆ ನೌಕರರನ್ನು ಹೊರತುಪಡಿಸಿ, ಬೈಂಡಿಂಗ್ ವಿಭಾಗದ ನೌಕರರಿಗೆ ಕಾಲಶ್ರೇಣಿ ವೇತನವನ್ನು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೬ನೇ ಮಾರ್ಚ್ ೧೯೪೩, ಪು. ೧೧೨೧

ಜಾರಿಗೊಳಿಸುವತ್ತ ಗಮನಹರಿಸಲಾಗುತ್ತಿದೆ.

ಆ) ಹೌದು.

ಇ) ಇಲ್ಲ.

ಈ) ಇಲ್ಲ. ನವೆಂಬರ್, ೧೯೪೨ರಲ್ಲಿ ಮುದ್ರಣಾಲಯ ನೌಕರರ ಸಂಘ ಒಂದು ಕೋರಿಕೆ ಸಲ್ಲಿಸಿತ್ತಾದರೂ ಈಗ ಪ್ರಸ್ತಾಪ ಮಾಡಿದ ಬೇಡಿಕೆ ಅದರಲ್ಲಿ ಇರಲಿಲ್ಲ.

ಉ) ಇಲ್ಲ. ೫೫ ವರ್ಷ ವಯಸ್ಸು ತುಂಬುವುದಕ್ಕೆ ಮೊದಲು ಸಾಮಾನ್ಯವಾಗಿ ಯಾವುದೇ ಉದ್ಯೋಗಿಯನ್ನು ಸೇವೆಯಿಂದ ನಿವೃತ್ತಿಗೊಳಿಸುವುದಿಲ್ಲ.

## ೫೦

## ನವದೆಹಲಿ, ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್ ವಿಭಾಗದ ನೌಕರರ ಕುಂದುಕೊರತೆಗಳು *

****೩೧೩. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ನವದೆಹಲಿ, ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್ ವಿಭಾಗದಲ್ಲಿ ಕೆಲವು ಮಂದಿ ಮಾಹೆಯಾನ ರೂ. ೩೦ ಪಡೆಯುತ್ತಿರುವುದು ನಿಜವೇ ಎಂದು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಇದುವರೆಗೆ ಕೆಲವರ ಸೇವೆಯನ್ನು ಕಡಿತಗೊಳಿಸಿದ್ದು, ಕಡಿತಗೊಂಡ ಸೇವೆಯನ್ನು ಇದುವರೆಗೆ ಗಣನೆಗೆ ತೆಗೆದುಕೊಳ್ಳದ ಪರಿಣಾಮವಾಗಿ ಇನ್ನೂ ಸಹ ಅಂತಹ ನೌಕರರು ಮಾಹೆಯಾನ ರೂ. ೩೦ ಪಡೆಯುತ್ತಿರುವುದು ನಿಜವೇ?ಅವರ ನಂತರ ಸೇವೆಗೆ ಸೇರಿದವರು ಮೊದಲು ಮಾಹೆಯಾನ ರೂ. ೨೨ ಹಾಗೂ ರೂ. ೨೫ ಪಡೆಯುತ್ತಿದ್ದವರು ಪ್ರಸ್ತುತ ರೂ. ೪೦ ಹಾಗೂ ರೂ. ೪೫ ಪಡೆಯುತ್ತಿದ್ದಾರೆ.

ಇ) ತಮ್ಮ ಸೇವೆಯಲ್ಲಿ ಕಡಿತವುಂಟಾಗಿದ್ದ ನೌಕರರು ಕಂಟ್ರೋಲರ್‌ರವರಿಗೆ ಮನವಿ ಸಲ್ಲಿಸಿ ತಮ್ಮ ವರ್ತಮಾನದ ಸೇವೆಯೊಂದಿಗೆ ಹಳೆಯ ಸೇವೆಯನ್ನೂ ಹೊಂದಿಸಿಕೊಳ್ಳುವಂತೆ ಕೇಳಿದ್ದುದು ನಿಜವೇ?

ಈ) ವಜಾ ಆದ ಸೇವೆಯನ್ನು ಸರ್ಕಾರ ಪರಿಗಣಿಸುವ ಯೋಜನೆಯನ್ನೇನಾದರೂ ಹೊಂದಿದೆಯೇ? ಹಾಗಿದ್ದ ಪಕ್ಷದಲ್ಲಿ ಅಂತಹವರನ್ನು ಹಿಂದೆ ಹಾಕಿ ಮೇಲೆ ಹೋದ ನೌಕರರಿಗಿಂತ ಇವರಿಗೆ ಸೇವೆಯಲ್ಲಿ ಹಿರಿತನ ಕೊಡುವುದು ಸಾಧ್ಯವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಸೇವಾಭಂಗದ ಅನಂತರ ಪಡೆಯಬಹುದಾದ ವೇತನವನ್ನು ನಿರ್ಧರಿಸುವಾಗ ಸೇವಾಭಂಗದ ಹಿಂದಿನ ಅವಧಿಯನ್ನು ಸೇವಾ ಅವಧಿ ಎಂಬುದಾಗಿ ಪರಿಗಣಿಸಬೇಕೆಂಬುದು ವಿನಾಯಿತಿಯ ಅರ್ಥವಲ್ಲ; ಈ ವಿಷಯದಲ್ಲಿ ತಪ್ಪು ತಿಳಿವಳಿಕೆಯ ಆಗದಿರಲಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೬ನೇ ಮಾರ್ಚ್ ೧೯೪೩, ಪು. ೧೧೨೧

** ಪ್ರಶ್ನೆ ಕೇಳಿದವರು ಗೈರುಹಾಜರು. ಪ್ರಶ್ನೆಗಳಿಗೆ ಉತ್ತರವನ್ನು ಸದನಕ್ಕೆ ಒದಗಿಸಲಾಯಿತು.

ಇ) ಇಲ್ಲ.

ಈ) ಈ ಪ್ರಶ್ನೆ ಏಳುವುದಿಲ್ಲ.

## ೫೧
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸಲ್ಮಾನ ಇಂಜಿನಿಯರುಗಳ ಸಂಖ್ಯೆ ಕಡಿಮೆಯಾಗಿರುವುದರ ಬಗೆಗೆ*

**೩೧೯. ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಅ) ಕೋಮುಗಳ ಆಧಾರದ ಮೇಲೆ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ವಿಮಾನಯಾನ ಮತ್ತು ಪ್ರವೇಶ ರಸ್ತೆಯೂ ಸಹ ಸೇರಿದಂತೆ ಕಾಮಗಾರಿಯಲ್ಲಿ ಸೇವಾನಿರತ ಸೂಪರಿಂಟೆಂಡಿಂಗ್ ಇಂಜಿನಿಯರುಗಳು, ಕಾರ್ಯಪಾಲಕ ಇಂಜಿನಿಯರರು, ಹಾಗೂ ಉಪ ವಿಭಾಗೀಯ ಅಧಿಕಾರಿಗಳು (ಗೆಜೆಟೆಡ್ ಹಾಗೂ ನಾನ್–ಗೆಜೆಟೆಡ್) ಇವರ ಸಂಖ್ಯೆಯೆಷ್ಟು?

ಆ) ಈ ಮೇಲೆ ಕಾಣಿಸಿದ ಅಧಿಕಾರ ವಲಯಗಳಲ್ಲಿ ಮುಸಲ್ಮಾನ ಕೋಮಿಗೆ ಸೇರಿದವರ ಸಂಖ್ಯೆ ಕಡಿಮೆ ಇರುವುದು ವಾಸ್ತವವೆ? ಹಾಗಿದ್ದ ಪಕ್ಷದಲ್ಲಿ ಈ ಸಂಖ್ಯೆಯನ್ನು ಸರಿದೂಗಿಸಲು ಸರ್ಕಾರ ಏನಾದರೂ ಯೋಜನೆಯನ್ನು ಹಾಕಿಕೊಂಡಿರುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇದಕ್ಕೆ ಸಂಬಂಧಿಸಿದ ವಿವರವನ್ನು ಸದನದಲ್ಲಿ ಇಡಲಾಗಿದೆ.

ಆ) ಹೌದು. ಮುಸಲ್ಮಾನ ಅಧಿಕಾರಿಗಳ ಸಂಖ್ಯೆ ಕಡಿಮೆ ಇರುವುದು ನಿಜ, ಇದಕ್ಕೆ ಕಾರಣವೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ವಿಮಾನಯಾನ ಕೆಲಸಗಳ ಅನುಭವ ಹಾಗೂ ವಿದ್ಯಾರ್ಹತೆಯುಳ್ಳ ಉದ್ಯೋಗಿಗಳನ್ನು ತೆಗೆದುಕೊಳ್ಳಬೇಕಾಯಿತು–ಇದು ತುರ್ತಾಗಿ ಆಗಬೇಕಾಗಿದ್ದ ನೇಮಕ. ಜಪಾನು ದೇಶದಿಂದ ಭಾರತಕ್ಕೆ ಗಂಡಾಂತರ ಒದಗುವ ಸನ್ನಿವೇಶದ ಹಿನ್ನೆಲೆಯಲ್ಲಿ ಈ ಅಧಿಕಾರಿಗಳನ್ನು ತುರ್ತಾಗಿ ನೇಮಕ ಮಾಡಿಕೊಳ್ಳಬೇಕಾಗಿತ್ತು. ಕೋಮು ಆಧಾರದ ಮೇಲೆಯೇ ನೇಮಕಾತಿ ಮಾಡಿಕೊಳ್ಳಲು ಯೋಜಿಸಿದ್ದ ಪಕ್ಷದಲ್ಲಿ ರಾಷ್ಟ್ರದ ರಕ್ಷಣೆಗೆ ಆಪತ್ತು ಸಂಭವಿಸುತ್ತಿದ್ದುದು ಖಂಡಿತ. ಕೋಮುವಾರು ನಿಯಮಗಳನ್ನು ಪರಿಪಾಲಿಸದೇ ಮಾಡಿಕೊಂಡಿರುವ ಎಲ್ಲ ನೇಮಕಾತಿಗಳೂ ತಾತ್ಕಾಲಿಕವಾಗಿದ್ದು, ಪ್ರಸ್ತುತ ತುರ್ತು ಸನ್ನಿವೇಶವು ತಿಳಿಯಾದ ಕೂಡಲೇ ಎಲ್ಲ ರೀತಿಯ ಅಸಮರ್ಪಕತೆಯನ್ನು ಸರಿಪಡಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೬ನೇ ಮಾರ್ಚ್ ೧೯೪೩, ಪು. ೧೧೨೪–೨೫

**ವಿವರ**

| ಅಧಿಕಾರಿಗಳ ಹುದ್ದೆ | ಯೂರೋಪಿಯನ್ನರು | ಆಂಗ್ಲೋ ಇಂಡಿಯನ್ನರು | ಹಿಂದೂಗಳು | ಮುಸಲ್ಮಾನರು | ಸಿಖ್ಖರು | ಭಾರತೀಯ ಕ್ರಿಶ್ಚಿಯನ್ನರು | ಪಾರಸಿಗಳು | ಒಟ್ಟು |
|---|---|---|---|---|---|---|---|---|
| ೧. ಸೂಪರಿಂಟೆಂಡಿಂಗ್ ಇಂಜಿನಿಯರುಗಳು | ೫ | – | ೩ | – | ೨ | – | – | ೧೦ |
| ೨. ಕಾರ್ಯಪಾಲಕ ಇಂಜಿನಿಯರರು | ೧೨ | ೪ | ೩೫ | ೫ | ೧ | ೫ | – | ೬೨ |
| ೩. ಉಪ–ವಿಭಾಗೀಯ ಅಧಿಕಾರಿಗಳು ಗೆಜೆಟೆಡ್ (ಸಹಾಯಕ ಕಾರ್ಯಪಾಲಕ ಇಂಜಿನಿಯರರು) | ೧ | ೫ | ೨೫ | ೬ | ೨ | ೪ | – | ೪೩ |
| ೪. ಉಪ–ವಿಭಾಗೀಯ ಅಧಿಕಾರಿಗಳು ಗೆಜೆಟೆಡ್ (ತಾತ್ಕಾಲಿಕ ಅಧಿಕಾರಿಗಳು) | – | ೪ | ೪೩ | ೪ | ೩ | – | ೧ | ೫೫ |
| ೫. ಉಪ–ವಿಭಾಗೀಯ ಅಧಿಕಾರಿಗಳು (ನಾನ್ – ಗೆಜೆಟೆಡ್) | – | ೩ | ೧೨೪ | ೨೩ | ೨೨ | ೧ | – | ೧೭೩ |

**ಮೌಲ್ವಿ ಸಯ್ಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ತುರ್ತು ನೇಮಕಾತಿಗಳಾದಾಗೆಲ್ಲಾ ದುರ್ದೈವಿ ಮುಸಲ್ಮಾನ ಕೋಮು ಮಾತ್ರ ತೊಂದರೆಗೊಳಗಾಗಬೇಕು ಎಂದು ನಾವು ತಿಳಿಯಬೇಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕೇವಲ ಅದೊಂದೇ ದುರ್ದೈವಿ ಕೋಮು ಆಗಿಲ್ಲ; ಇತರೆ ಕೋಮುಗಳೂ ಸಹ ಇದರಿಂದ ತೊಂದರೆಗೊಳಗಾಗಿವೆ.

**ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ :** ಪ್ರಾಂತ್ಯಗಳಲ್ಲಿರುವಂಥ ಮುಸಲ್ಮಾನ ಅಧಿಕಾರಿಗಳು, ಅವರು ಸಮರ್ಥರೆಂದು ಕಂಡು ಬಂದರೆ, ಸರ್ಕಾರ ಅವರನ್ನು ನೇಮಕಮಾಡಿಕೊಳ್ಳುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

**ಶ್ರೀ ಜಮ್ನಾದಾಸ್ ಎಂ. ಮೆಹ್ತಾ :** ಕೋಮುವಾರು ರೀತಿಯಲ್ಲಿ ನೇಮಕಮಾಡುವುದಾದರೇ ಈಗಾಗಲೇ ನೇಮಕವಾಗಿರುವವರು ವಜಾ ಆಗುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅವರುಗಳದೆಲ್ಲಾ ತಾತ್ಕಾಲಿಕ ನೇಮಕಾತಿ.

**ಶ್ರೀ ಜಮ್ನಾದಾಸ್ ಎಂ. ಮೆಹ್ತಾ :** ಹಾಗಿದ್ದ ಮೇಲೆ ಅವರ ವಜಾ ಆಗುತ್ತದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅವರು ತಾತ್ಕಾಲಿಕವಾಗಿ ನೇಮಕರಾದವರು. ವಜಾಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಮ್ನಾದಾಸ್ ಎಂ. ಮೆಹ್ತಾರವರು ಪ್ರಶ್ನೆ ಹಾಕಿದ ನಂತರವೂ ನಿಂತೇ ಇದ್ದರು.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಗೌರವಾನ್ವಿತ ಸದಸ್ಯರು ಪ್ರಶ್ನೆ ಕೇಳಿಯಾದ ನಂತರ ತಮ್ಮ ಜಾಗದಲ್ಲಿ ಕುಳಿತುಕೊಳ್ಳುವುದು ಉಚಿತ.

**ಶ್ರೀ ಜಮ್ನಾದಾಸ್ ಎಂ. ಮೆಹ್ತಾ :** ಸರ್, ನಾನು ಇನ್ನೊಂದು ಪ್ರಶ್ನೆ ಕೇಳಬೇಕಾಗಿದೆ. ಅಂದರೆ ಸಂದಿಗ್ಧ ಕಾಲದಲ್ಲಿ ನಿಮ್ಮ ಕಷ್ಟಕ್ಕೆ ಆದವರನ್ನು ನೀವು ಕೊಕ್ ಕೊಡುತ್ತೀರಿ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನೇಮಕ ತಾತ್ಕಾಲಿಕವೆನ್ನುವುದು ನಿಜವಾದರೂ ವಜಾ ಮಾಡುವ ಪ್ರಮೇಯವಂತೂ ಉದ್ಭವವಾಗದು.

**ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಈ ತಾತ್ಕಾಲಿಕ ನೇಮಕಾತಿಗಳ ಅವಧಿಯೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನು ಹೇಳುವುದು ಪ್ರಾಯಶಃ ಸಾಧ್ಯವಿಲ್ಲ.

**ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಸರ್ಕಾರ ಮಾಡಿರುವ ನಿಯಮಗಳಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಮೂರು ತಿಂಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಮಾಡುವ ಯಾವುದೇ ನೇಮಕಾತಿಯನ್ನು ಬೇರೆ ಬೇರೆ ಕೋಮುಗಳ ಆಧಾರದ ಮೇಲೆಯೇ ಮಾಡಬೇಕಾಗಿದೆಯಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ತುರ್ತು ಪರಿಸ್ಥಿತಿಗನುಗುಣವಾಗಿ ಇದಕ್ಕೆಲ್ಲಾ ಬದ್ಧವಾಗಿರಬೇಕಾಗಿರುತ್ತದೆ.

## ೫೨
## ಹೊಸ ಸಹಾಯಕ ಎಸ್ಟೇಟ್ ಅಧಿಕಾರಿಗಳು ಹಾಗೂ ಎಸ್ಟೇಟ್ ಅಧಿಕಾರಿಗಳ ಸಹಾಯಕರು *

**೩೨೦. ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಅ) ಕಳೆದ ಎರಡು ವರ್ಷಗಳಲ್ಲಿ ಭರ್ತಿಮಾಡಲಾದ ಸಹಾಯಕ ಎಸ್ಟೇಟ್ ಅಧಿಕಾರಿಗಳು ಹಾಗೂ ಎಸ್ಟೇಟ್ ಅಧಿಕಾರಿಗಳ ಸಹಾಯಕರ ಹೊಸ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಮಾನ್ಯ ಸದಸ್ಯರು ತಿಳಿಸುವರೆ?

ಆ) ಈ ಮೇಲಿನ ಯಾವುದಾದರೂ ಹುದ್ದೆಯನ್ನು ಮುಸಲ್ಮಾನ ಕೋಮಿನವರಿಗೆ ನೀಡಲಾಗಿದೆಯೇ? ಇಲ್ಲವಾದರೆ, ಯಾಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಸಹಾಯಕ ಎಸ್ಟೇಟ್ ಅಧಿಕಾರಿಗಳ ಸಂಖ್ಯೆ – ಮೂರು ; ಎಸ್ಟೇಟ್ ಅಧಿಕಾರಿಯ ಸಹಾಯಕರ ಸಂಖ್ಯೆ – ಒಂದು.

ಆ) ಇಲ್ಲ.

ಮುಖ್ಯ ಇಂಜಿನಿಯರ್‌ರವರ ಕಚೇರಿಯಲ್ಲಿನ ಸೂಪರಿಂಟೆಂಡೆಂಟ್‌ರುಗಳ ಪೈಕಿ ಆಯ್ಕೆ ಮೂಲಕ ಬಡ್ತಿ ನೀಡಿ ಮೂರು ಹುದ್ದೆಗಳನ್ನು ತುಂಬಲಾಗಿದೆ. ಈ ಹುದ್ದೆಗಳನ್ನು ತುಂಬಲು ಅನುಸರಿಸುವ ಮಾಮೂಲಿ ವಿಧಾನ ಇದು. ಸೂಕ್ತವಾದ ಮುಸ್ಲಿಮ್ ಜನಾಂಗದ ಸೂಪರಿಂಟೆಂಡೆಂಟ್ ದೊರೆಯಲಿಲ್ಲ. ಬರ್ಮಾ ಲೋಕೋಪಯೋಗಿ ಇಲಾಖೆಯ ಅಧಿಕಾರಿಯೊಬ್ಬರನ್ನು ನಾಲ್ಕನೆಯ ಅಧಿಕಾರಿಯಾಗಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೬ನೇ ಮಾರ್ಚ್ ೧೯೪೩, ಪು. ೧೦೨೫

ನೇಮಿಸಲಾಯಿತು.

**ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಈ ಹುದ್ದೆಗಳನ್ನು ತುಂಬುವ ಕಾಲಕ್ಕೆ ಶ್ರೀ ಕರೀಂ ಬಕ್ಷರು ಅತ್ಯಂತ ಹಿರಿಯ ಸೂಪರಿಂಟೆಂಡೆಂಟ್‌ರಾಗಿದ್ದರೆಂಬುದು ನಿಜಸಂಗತಿಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಉತ್ತರಿಸಲು ನನಗೆ ಸಮಯಬೇಕು.

**ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಶ್ರೀ ಬ್ರೌನ್, ಶ್ರೀ ಗ್ರಾಂಟ್, ಶ್ರೀ ಎಲ್ಲಿಸ್, ಹಾಗೂ ಶ್ರೀ ಬ್ರಾಂಕ್ ಹರ್ಸ್ಟ್‌ರವರು ಸೂಪರಿಂಟೆಂಡೆಂಟ್ ಹುದ್ದೆಗಳಲ್ಲಿದ್ದದ್ದು ವಾಸ್ತವವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಉತ್ತರಿಸಲು ನನಗೆ ಸಮಯ ಬೇಕಾಗಿದೆ.

**ಶ್ರೀ ಮುಹಮ್ಮದ್ ನೌಮನ್ :** ಎಲ್ಲಾ ಮೂಲದಿಂದಲೂ ವಿಷಯ ಸಂಗ್ರಹವಾಗಿದೆಯೇ, ಬೇರೆಯವರು ದಕ್ಷರೆ ಇಲ್ಲವೇ ಎನ್ನುವ ಬಗ್ಗೆ, ಮಾನ್ಯ ಸದಸ್ಯರು ಪ್ರತಿಯೊಂದಕ್ಕೂ ಸಮಯ ಕೇಳುವುದಾದರೆ, ಯಾವುದೇ ಮುಸಲ್ಮಾನರು ಈ ಹುದ್ದೆಗಳಿಗೆ ಅರ್ಹರಲ್ಲವೆಂದು ಸ್ಪಷ್ಟವಾಗಿ ಅವರು ತಿಳಿದುಕೊಂಡು ಉತ್ತರಿಸಲು ಬಂದಂತೆ ತೋರುತ್ತದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ವಿಷಯವಾಗಿ ಸಮರ್ಪಕವಾದ ರೀತಿಯಲ್ಲಿ ಶೋಧನೆ ನಡೆಸಿರುವುದರಲ್ಲಿ ನನಗೆ ಅನುಮಾನವಿಲ್ಲ.

**ಶ್ರೀ ಮುಹಮ್ಮದ್ ನೌಮನ್ :** ಅದರ ಬಗ್ಗೆಯೂ ಕೂಡ ಗೌರವಾನ್ವಿತ ಸದಸ್ಯರ ಬಳಿ ಮಾಹಿತಿ ಇಲ್ಲವಾಗಿದೆ.

**ಅಧ್ಯಕ್ಷರು** (ಮಾನ್ಯ ಸರ್ ಅಬ್ದುರ್ ರಹೀಮ್) : ಅದು ಪ್ರಶ್ನೆಯಲ್ಲ. ಮುಂದಿನ ಪ್ರಶ್ನೆ.

## ೫೩
## ವಿಮಾನ ಸಂಚಾರ ಕೆಲಸಗಳಲ್ಲಿ ಒಪ್ಪಂದಗಳು*

**೩.೨೧. ಖಾನ್ ಬಹಾದೂರ್ ಶೇಕ್ ಫಜ್ಲ್–ಇ–ಹಕ್ ಪಿರಾಚ :** ಅ) ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ : ವಿಮಾನ ಸಂಚಾರ ಕೆಲಸಗಳನ್ನು – ತುರ್ತು ಕೆಲಸಗಳನ್ನು – ಒಪ್ಪಂದ ಮೇಲೆ ವಹಿಸುವಾಗ ಖಾಸಗಿ ಮಾತುಕತೆಯಿಂದ ನಿಗದಿಪಡಿಸುವುದಲ್ಲದೆ ಅವುಗಳಿಗೆ ಟೆಂಡರುಗಳನ್ನು ಮೂಲಕ ಕರೆಯುವ ರೂಢಿಯಿಲ್ಲದಿರುವುದು ನಿಜ ಸಂಗತಿಯೇ?

ಆ) ೧೯೪೨ರ ಒಂದು ವರ್ಷದ ಅವಧಿಯಲ್ಲಿ ಖಾಸಗಿ ಮಾತುಕತೆಯ ಮೂಲಕ ನೀಡಿರುವ ಒಟ್ಟು ಒಪ್ಪಂದದ ಮೊತ್ತವೇನು?

ಇ) ಮುಸ್ಲಿಮ್ ಕಂಟ್ರಾಕ್ಟರುಗಳಿಗೆ ಅಂಥ ಮಾತುಕತೆಯ ಮೂಲಕ ನೀಡಿರುವ ಒಪ್ಪಂದದ ಒಟ್ಟು ಮೊತ್ತವೆಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಕೇಳಿರುವ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು ಇಷ್ಟರಲ್ಲೇ ಸದನಕ್ಕೆ ಒದಗಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೧೯ನೇ ಮಾರ್ಚ್ ೧೯೪೩, ಪು. ೧೧೨೫

# ೫೪
# ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್ ವಿಭಾಗದ ಸಿಬ್ಬಂದಿ ವರ್ಗದವರ ಕುಂದುಕೊರತೆಗಳು *

**೩೩೮. ಖಾಜಿ ಮಹಮ್ಮದ್ ಅಹ್ಮದ್ ಕಜ್ಮಿ :** ಅ) ಭಾರತ ಸರ್ಕಾರ ಮುದ್ರಣಾಲಯ, ನವದೆಹಲಿ, ಇಲ್ಲಿನ ಬೈಂಡಿಂಗ್ ವಿಭಾಗದ ನೌಕರರಿಗೆ ವಾರ್ಷಿಕ ವೇತನದಲ್ಲಿ ಹೆಚ್ಚಳವನ್ನು ನೀಡದ ಕಾರಣದಿಂದ ಬೇರೆ ವಿಭಾಗಗಳ ಹುದ್ದೆಗಳು ಖಾಲಿ ಬಿದ್ದಾಗ ತಾವು ಅಲ್ಲಿಗೆ ವರ್ಗವಾಗಿ ಹೋಗಲು ಬಯಸಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸದೆ ಮುಂದೂಡಿರುವುದು ವಾಸ್ತವಾಂಶವೇ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಕೆಲವರಿಗೆ ಬೇರೆ ವಿಭಾಗಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು ಅವರು ವಹಿಸಿದ ಕೆಲಸಗಳನ್ನು ಸಮರ್ಪಕವಾಗಿ ಮಾಡಿರುವರಾದರೂ ಖಾಯಂ ಆಗಿ ಅವರಿಗೆ ಇದುವರೆಗೆ ಹುದ್ದೆಗಳನ್ನು ನೀಡದಿರುವುದು ನಿಜವೇ?

ಇ) ಬೈಂಡಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರಿಗೆ ವಾರ್ಷಿಕ ವೇತನಬಡ್ತಿಯನ್ನು ನೀಡುವತನಕ ಅಂಥವರಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟು ಹೊರಗಿನವರನ್ನು ಪರಿಗಣಿಸಬಾರದೆಂದು ಮ್ಯಾನೇಜರ್‌ರವರಿಗೆ ಅನೇಕ ಬಾರಿ ಸೂಚನೆ ನೀಡಿತ್ತಾದರೂ ಮ್ಯಾನೇಜರ್‌ರವರು ಆ ಸೂಚನೆಯನ್ನು ಪುರಸ್ಕರಿಸಿಲ್ಲ.

ಈ) 'ವಿತರಣಾ' ವಿಭಾಗದಲ್ಲಿ ಯಶಸ್ವೀ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿದರೆ ಕಿರುಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು ತೊಂದರೆಗೊಳಗಾಗುವುದು ತಪ್ಪುತ್ತದೆಯಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ. ೧೯೪೦ರ 'ರಾಷ್ಟ್ರೀಯ ಸೇವಾ (ತಾಂತ್ರಿಕ ಸಿಬ್ಬಂದಿವರ್ಗ) ನಿಯಮ'ದ ಪ್ರಕಾರ ಕೈಗಾರಿಕಾ ಉದ್ಯೋಗಿಗಳನ್ನು ಹಾಗೆ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ವರ್ಗಾಯಿಸಲು ಬರುವುದಿಲ್ಲ.

ವಿಮಾನ ದಳದಲ್ಲಿ ಸೇವೆ ಸಲ್ಲಿಸಲು ಅನುಮತಿಯನ್ನು ಕೋರಿ ಮಳಿಗೆ ಸೇವೆಯಲ್ಲಿದ್ದ ವ್ಯಕ್ತಿಯೊಬ್ಬರು ಕಳೆದ ಜನವರಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಮುಂದಕ್ಕೆ ಕಳುಹಿಸಲಾಗಿದೆ.

ಆ) ೧೯೪೧ರಲ್ಲಿ ನಡೆದ ಕಿರುಪರೀಕ್ಷೆಯಲ್ಲಿ ತೇರ್ಗಡೆಯಾಗಿ ಒಬ್ಬರು ಮಳಿಗೆ ಕಾರ್ಯದಲ್ಲಿ ವಿತರಕರಾಗಿ ಸೇವೆಸಲ್ಲಿಸಲು ಅರ್ಹತೆ ಗಳಿಸಿದ್ದಾರೆ. ಆ ಮೊದಲೇ ವಿದ್ಯಾರ್ಹತೆಯನ್ನು ಗಳಿಸಿದ ಅಭ್ಯರ್ಥಿಗಳು ಇದ್ದುದರಿಂದಲೂ ಹಾಗೂ ಮಳಿಗೆ ಕಾರ್ಯಗಳಲ್ಲಿ ವಿತರಕರಾಗಿ ಬಡ್ತಿ ನೀಡುವ ಅವಕಾಶವಿಲ್ಲದ ಕಾರಣದಿಂದಲೂ ಖಾಲಿಬಿದ್ದ ಜಾಗಗಳಲ್ಲಿ ಮಳಿಗೆ ಕಾರ್ಯಕರ್ತರನ್ನು ತುಂಬಲಾಗಲಿಲ್ಲ.

ಇ) ಮೊದಲನೇ ಭಾಗಕ್ಕೆ ಉತ್ತರ ನಕಾರಾತ್ಮಕವಾದದ್ದು. ಎರಡನೇ ಭಾಗ ಉದ್ಭವವಾಗುವುದೇ ಇಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ೨ನೇ ಸಂಪುಟ, ೨೦ನೇ ಮಾರ್ಚ್ ೧೯೪೩, ಪು. ೧೨೬೯

ಈ) ನಿಯಮದ ಪ್ರಕಾರ ಯಶಸ್ವಿಯಾದ ಅಭ್ಯರ್ಥಿಗಳನ್ನು ವಿತರಕರ ಹುದ್ದೆಗಳಿಗೆ ಪರಿಗಣಿಸಲಾಗುವುದು.

**ಖಾಜಿ ಮಹಮ್ಮದ್ ಅಹ್ಮದ್ ಕಜ್ಮಿ :** ಈ) ಭಾಗದ ಉತ್ತರಕ್ಕೆ ಸಂಬಂಧಿಸಿದಂತೆ ಅವಕಾಶ ಕೊಟ್ಟಾಗ ಯಶಸ್ವಿಗಳಾದವರ ಭವಿಷ್ಯ ಸದ್ಯದ ಪರಿಸ್ಥಿತಿಯಲ್ಲಿ ಹೇಗಿದೆಯೆಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ತಿಳಿಸಿದಂತೆ, ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಆ ಮೊದಲೇ ಇದ್ದರು.

**ಖಾಜಿ ಮಹಮ್ಮದ್ ಅಹ್ಮದ್ ಕಜ್ಮಿ :** ಯಶಸ್ವಿಯಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅವರ ಅರ್ಹತೆಯನ್ನು ಪರಿಗಣಿಸಲಾಗುತ್ತದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿ.

## ೫೫
## ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಬೈಂಡಿಂಗ್ ವಿಭಾಗದಲ್ಲಿ ಆಯ್ಕೆ ಮಟ್ಟದ ಹುದ್ದೆಗಳು*

**೩೩೯. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ಭಾರತ ಸರ್ಕಾರ ಮುದ್ರಣಾಲಯದ ಎಲ್ಲಾ ವಿಭಾಗಗಳಲ್ಲೂ ಆಯ್ಕೆ ಮಟ್ಟದ ಹುದ್ದೆಗಳನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಬೈಂಡಿಂಗ್ ವಿಭಾಗದ ಆಯ್ಕೆ ಮಟ್ಟದ ಹುದ್ದೆಗಳನ್ನು ಏಕೆ ಪ್ರಕಟಿಸಿಲ್ಲ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಬೈಂಡಿಂಗ್ ವಿಭಾಗದಲ್ಲಿ ೫೦/೬೦ ಮಂದಿ ಕೆಲಸಗಾರರಿದ್ದಾಗ ಮೇಲ್ವಿಚಾರಣಾ ಹುದ್ದೆಗಳಾಗಿ ಒಬ್ಬ ಫೋರ್‌ಮನ್, ಒಬ್ಬ ಜಮಾದಾರ್ ಮತ್ತು ಒಬ್ಬ ಬೈಂಡಿಂಗ್ ಪರೀಕ್ಷಕರು ನೇಮಕರಾಗಿದ್ದರು; ಆದರೆ ಈಗ ಈ ವಿಭಾಗದ ಕೆಲಸಗಾರರ ಸಂಖ್ಯೆ ೧೩೫ಕ್ಕೆ ಏರಿದೆಯಾಗಿ ಮೇಲ್ವಿಚಾರಣಾ ಹುದ್ದೆಗಳು ಮೂರಕ್ಕೇ ಸೀಮಿತವಾಗಬೇಕೆ?

ಇ) ಬೈಂಡಿಂಗ್ ವಿಭಾಗವನ್ನು ಎರಡು ಭಾಗವಾಗಿ ವಿಂಗಡಿಸಿ ಫೋರ್‌ಮನ್, ಜಮಾದಾರ್ ಹಾಗೂ ಪರೀಕ್ಷಕರ ಹುದ್ದೆಗಳನ್ನು ಇನ್ನೊಂದು ಹೆಚ್ಚಿಗೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮುದ್ರಣಾಲಯದ ಬೈಂಡರಿ ವಿಭಾಗದಲ್ಲಿ ಬೈಂಡರಿ ಹಾಗೂ ಉಗ್ರಾಣದ ಫೋರ್‌ಮನ್‌ರ ಒಂದೊಂದು ಆಯ್ಕೆ ಹುದ್ದೆಗಳಿವೆ.

ಆ) ಹಿಂದಿನ ಸಿಬ್ಬಂದಿ ಸಂಖ್ಯೆ ಅರವತ್ತು ಇದ್ದು ಬೈಂಡರಿ ಉಗ್ರಾಣ ಫೋರ್‌ಮನ್‌ನ ಒಂದು ಮೇಲ್ವಿಚಾರಕ ಹುದ್ದೆ ಇತ್ತು. ಯುದ್ಧ ಕಾಲದ ೨೦ ಹುದ್ದೆಗಳೂ ಸೇರಿದಂತೆ ಪ್ರಸ್ತುತ ೧೦೭ ಹುದ್ದೆಗಳು ಬೈಂಡರಿಯಲ್ಲಿವೆ; ಈಗ ಮೇಲ್ವಿಚಾರಕ ಹುದ್ದೆಗಳಲ್ಲಿ ಮೂರು ಮಂದಿ ಸೇವೆ ಸಲ್ಲಿಸುತ್ತಿದ್ದಾರೆ.

ಇ) ಇಲ್ಲ

**ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಮಾನ್ಯ ಸದಸ್ಯರ ಉತ್ತರ ನನಗೆ ಸರಿಯಾಗಿ ಅರ್ಥವಾಗಲಿಲ್ಲ. ನಾನು ನೀಡಿರುವಂಥ ಹೆಚ್ಚುವರಿ ಸಂಖ್ಯೆ ವಾಸ್ತವವೆಂದು ಅವರು ಸ್ವೀಕರಿಸುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೨೭೯–೮೦

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು, ಪ್ರಸ್ತುತ ಬೈಂಡರಿ ನೌಕರರ ಸಂಖ್ಯೆ ೧೦೭ ಎಂದು ತಿಳಿಸಿದ್ದೇನೆ.

**ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಕಡಿಮೆ ಸಂಬಳ ಪಡೆಯುವವರ ಸಂಖ್ಯೆಯಲ್ಲಿ ಹೆಚ್ಚಳವಾದ ನಿಮಿತ್ತ ಮೇಲ್ವಿಚಾರಕ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದುದು ಸೂಕ್ತವೆಂದು ಮಾನ್ಯ ಸದಸ್ಯರು ತಿಳಿಯುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದನ್ನು ಪರಿಗಣಿಸುತ್ತೇನೆ.

## ೫೬

## ನವದೆಹಲಿಯ ಭಾರತ ಸರ್ಕಾರ ಮುದ್ರಣಾಲಯದ ಯಂತ್ರ ವಿಭಾಗದ ತುಂಡು ಕಾಮಗಾರಿ ಕೆಲಸಗಾರರ ಕುಂದುಕೊರತೆಗಳು*

**೩೪೦. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ನವದೆಹಲಿಯಲ್ಲಿನ ಭಾರತ ಸರ್ಕಾರದ ಮುದ್ರಣಾಲಯದ ಯಂತ್ರ ವಿಭಾಗದಲ್ಲಿ ಅನೇಕರು ತುಂಡು ಕಾಮಗಾರಿ ಕೆಲಸಕ್ಕೆ ಅನೇಕರು ಸಂಬಳದ ಆಧಾರದ ಮೇಲೂ ನೇಮಕರಾಗಿರುವ ಸಂಗತಿ ನಿಜವೇ, ಇಲ್ಲವೇ ಎಂದು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಎಲ್ಲಾ ತುಂಡು ಕಾಮಗಾರಿ ಕೆಲಸಗಾರರಿಗೂ ಸಮನಾದ ಕೆಲಸ ಕೊಡದ ಪರಿಣಾಮವಾಗಿ ಕೆಲವರು ಹೆಚ್ಚು ವೇತನ ಪಡೆದಿರುವುದು ನಿಜವೇ?

ಇ) ಕೆಲಸ ಹಂಚುವಾಗ ಅಧಿಕಾರಿಗಳು ತಾರತಮ್ಯ ತೋರಿರುವ ಪರಿಣಾಮವಾಗಿ ಕೆಲವರು ಇತರರಿಗಿಂತ ಹೆಚ್ಚು ಕೆಲಸ ಗಿಟ್ಟಿಸಿಕೊಂಡಿರುತ್ತಾರೆ. ಇದರಿಂದ ಹೆಚ್ಚಿನ ಸಂಖ್ಯೆಯ ಕೆಲಸಗಾರರ ದಿನಗೂಲಿ ಅತ್ಯಲ್ಪವಾಗಿದ್ದು ಅವರ ಸಂಸಾರ ಸರಿದೂಗಿಸಲು ಇದರಿಂದ ತುಂಬಾ ದುಸ್ತರವಾಗಿರುವುದು ನಿಜವಲ್ಲವೇ?

ಈ) ಎಲ್ಲರಿಗೂ ಒಂದೇ ಪ್ರಮಾಣದ ಕೆಲಸವನ್ನು ವಹಿಸಿಕೊಡುವುದರಿಂದ ತಿಂಗಳ ಕೊನೆಯಲ್ಲಿ ಎಲ್ಲರೂ ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ಪ್ರಮಾಣದ ವೇತನವನ್ನು ಪಡೆಯುವ ಹಾಗಾಗುತ್ತದೆ. ಇದನ್ನು ಚಾಲ್ತಿಗೆ ತರಲು ಸರ್ಕಾರ ಯೋಜನೆ ಹಾಕಿಕೊಂಡಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು

ಆ) ಮೊದಲನೇ ಭಾಗಕ್ಕೆ ಉತ್ತರ ನಕಾರಾತ್ಮಕವಾದದ್ದು. ಎರಡನೇ ಭಾಗ ಉದ್ಭವವಾಗುವುದೇ ಇಲ್ಲ.

ಇ) ಇಲ್ಲ.

ಈ) ಇದೇ ಪ್ರಕಾರವಾಗಿ ಮಾಡಿದೆ, ಆದರೆ ಒಂದೇ ಪ್ರಮಾಣದ ಕೆಲಸಕ್ಕೆ ಒಂದೇ ಪ್ರಮಾಣದ ವೇತನವನ್ನು ನೀಡುವುದಿಲ್ಲ. ೧೭ನೇ ಫೆಬ್ರವರಿ ೧೯೪೧ರಲ್ಲಿ ಈ ಸದನದಲ್ಲಿ ಪ್ರಶ್ನೆ ಸಂಖ್ಯೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ३, ೨೦ನೇ ಮಾರ್ಚ್ ೧೯೪३, ಪು. ೧೨೭೦

೮೫೮ (ಇ) ಭಾಗಕ್ಕೆ ನೀಡಿದ ಉತ್ತರವನ್ನು ಗಮನಿಸಬೇಕೆಂದು ಗೌರವಾನ್ವಿತ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಸದ್ಯದಲ್ಲಿ ಒಂದೇ ಪ್ರಮಾಣದ ವೇತನ ಉದ್ಯೋಗಿಗಳಿಗೆ ದೊರೆಯುತ್ತಿಲ್ಲವೆಂಬ ಅಂಶವು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಚಾರಣೆಯ ನಂತರ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಾಗುವುದು.

## ೫೭
## ನವದೆಹಲಿಯ ಭಾರತ ಸರ್ಕಾರದ ಮುದ್ರಣಾಲಯದಲ್ಲಿನ 'ವರ್ಕ್ಸ್ ಕಮಿಟಿ'ಯ ವಾರ್ಷಿಕ ಚುನಾವಣೆ*

**೩೪೧. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ಏಪ್ರಿಲ್ ೮ರಂದು ನಡೆದ ಭಾರತ ಸರ್ಕಾರದ ಮುದ್ರಣಾಲಯದ 'ವರ್ಕ್ಸ್ ಕಮಿಟಿ' ವಾರ್ಷಿಕ ಚುನಾವಣೆಯು ಉಚಿತ ರೀತಿಯಲ್ಲಿ ನಡೆಯಲಿಲ್ಲವೆಂಬುದು ನಿಜವೇ ಎಂದು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಮತದಾರರನ್ನು ಒಬ್ಬೊಬ್ಬರನ್ನಾಗಿ ಕರೆಯದೇ ಎಲ್ಲಾ ಮತದಾರರನ್ನು ಒಂದೇ ಕೊಠಡಿಯಲ್ಲಿ ಸೇರಿಸಿ ಮತ ಪಡೆದದ್ದು ನಿಜವೇ, ಅಲ್ಲವೇ?

ಇ) ಮತಹಾಕುವ ಸಂದರ್ಭದಲ್ಲಿ ಒಬ್ಬೊಬ್ಬರನ್ನಾಗಿ ಕರೆದು ಮತಹಾಕಿಸುವ ಏರ್ಪಾಟು ಮಾಡಲು ಸರ್ಕಾರ ಸಿದ್ಧವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಇಲ್ಲ.

**ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಮತದಾನದ ಸಂದರ್ಭದಲ್ಲಿ ಮತದಾರರು ಎದುರಿಸಿದ ಸಮಸ್ಯೆಗಳನ್ನು ಕುರಿತು ಮಾನ್ಯ ಸದಸ್ಯರು ವಿಚಾರಣೆ ನಡೆಸಿರುವರೆ? ನನ್ನ ಪ್ರಶ್ನೆಯಲ್ಲಿ ಪ್ರಸ್ತಾಪವಾಗಿರುವ ಸಮಸ್ಯೆಗಳು ನಿಜವೆಂದು ಅವರ ಗಮನಕ್ಕೆ ಬಂದಿರುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ. ಅಗತ್ಯ ಬಿದ್ದರೆ ನಾನು ವಿಚಾರಿಸುತ್ತೇನೆ.

**ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ನಾನು ಈಗ ಪ್ರಶ್ನೆ ಕೇಳಿರುವುದರಿಂದ ಮತದಾನದ ಸಂದರ್ಭದಲ್ಲಿ ಬಂದ ದೂರುಗಳು ಸರಿಯಾಗಿರುವುದೆಂದು ಗೌರವಾನ್ವಿತ ಸದಸ್ಯರು ಖಾತ್ರಿಪಡಿಸಿಕೊಳ್ಳುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆಗಲಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೨೭೦–೭೧

# ೫೮
# ಬಂಗಾಳ ಹಾಗೂ ಬಿಹಾರದ ಗಣಿಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆ ಕಡಿಮೆಯಾದ ಬಗೆಗೆ*

**೩೪೯. ಶ್ರೀ ಕೆ.ಸಿ. ನಿಯೋಗಿ :** ೧೯೪೨ರಲ್ಲಿ ಬಂಗಾಳ ಹಾಗೂ ಬಿಹಾರದ ಗಣಿಗಳಲ್ಲಿ ಉತ್ಪಾದನೆಯಾದ ಕಲ್ಲಿದ್ದಲಿನ ಪ್ರಮಾಣ ಹಿಂದಿನ ವರ್ಷಗಳ ಉತ್ಪಾದನೆಗಿಂತ ಕಡಿಮೆಯಾಗಿತ್ತೆಂಬುದನ್ನು ಮಾನ್ಯ ಸದಸ್ಯರು ಖಾತ್ರಿಪಡಿಸುವರೆ? ಹಾಗಿದ್ದ ಪಕ್ಷದಲ್ಲಿ ೧೯೩೯, ೧೯೪೦ ಹಾಗೂ ೧೯೪೧ನೇ ಇಸವಿಗಳಲ್ಲಿ ಇಳಿಮುಖವಾದ ಉತ್ಪಾದನೆಯ ಪ್ರಮಾಣದ ಶೇಕಡಾವಾರು ಅಂದಾಜು ಏನು? ಉತ್ಪಾದನೆಯ ಈ ಇಳಿಮುಖತೆಗೆ ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ. ೧೯೩೯ಕ್ಕಿಂತ ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲಿನ ಗಣಿಗಳಲ್ಲಿ ಉತ್ಪಾದನೆ ೧೯೪೨ರಲ್ಲಿ ಗಣನೀಯವಾಗಿ ಹೆಚ್ಚಿಗೆ ಇದ್ದಿತು. ೧೯೪೦ರಲ್ಲಿ ಅತಿ ಹೆಚ್ಚು ಕಲ್ಲಿದ್ದಲು ತಯಾರಾಗಿದ್ದಿತು. ೧೯೪೦ಕ್ಕೆ ಹೋಲಿಸಿಕೊಂಡರೆ ೧೯೪೧ರಲ್ಲಿ ಕೊಂಚ ಕಡಿಮೆಯಾಗಿತ್ತು. ೧೯೪೨ರಲ್ಲಿ ಉತ್ಪಾದನೆ ಅದಕ್ಕಿಂತ ಕೊಂಚ ಕಡಿಮೆಯಾಗಿದ್ದದ್ದು ನಿಜ. ೧೯೪೦ರ ಉತ್ಪಾದನೆಗೆ ಹೋಲಿಕೆ ಮಾಡಿ ಹೇಳುವುದಾದರೆ ಇಳಿಮುಖವಾದ ಕಲ್ಲಿದ್ದಲಿನ ಪ್ರಮಾಣ ಶೇಕಡಾ ಒಂದಕ್ಕಿಂತ ಕೊಂಚ ಕಡಿಮೆ ಎನ್ನಬಹುದು.

ಉತ್ಪಾದನೆಯಲ್ಲಿ ಕಡಿಮೆ ಆದ ಪ್ರಮಾಣ ಬಹಳಷ್ಟು ಕಡಿಮೆ ಇದ್ದುದರಿಂದ ಅದಕ್ಕೆ ಕಾರಣವೇನೆಂದು ತಿಳಿಯುವ ಗೋಜಿಗೆ ಹೋಗಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಭಾರತ ಸರ್ಕಾರಕ್ಕೆ ಕಾರ್ಮಿಕ ಸಂಘಗಳು ಏನಾದರೂ ಅಹವಾಲು ಸಲ್ಲಿಸಿರುವುವೇ? ಅವರ ಸಮಸ್ಯೆಯ ನಿಮಿತ್ತ ಏನಾದರೂ ಈ ಉತ್ಪಾದನೆಯ ಇಳಿಮುಖವಾಗಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದುವರೆಗೆ ನನಗೆ ಯಾವ ಮಾಹಿತಿಯೂ ಬಂದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೨೭೬

## ೫೯
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಕಂಟ್ರಾಕ್ಟರುಗಳನ್ನು ನೇಮಕ ಮಾಡುವಲ್ಲಿನ ಕುಂದುಕೊರತೆಗಳು*

**೪೧೭. ಶ್ರೀ ಅನಂಗ್ ಮೋಹನ್‌ದಾಮ್ :** ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಕಂಟ್ರಾಕ್ಟರುಗಳನ್ನು ನೇಮಕ ಮಾಡುವಾಗ ಯಾವ ಮಾನದಂಡಗಳನ್ನು ಉಪಯೋಗಿಸಲಾಗುತ್ತದೆಯೆಂದು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುತ್ತಾರೆಯೇ? ಈ ನೇಮಕಕ್ಕೆ ಶುಲ್ಕವೇನಾದರೂ ಇರುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅವರ ಆರ್ಥಿಕ ಸ್ಥಿತಿಗತಿ ಹಾಗೂ ಆ ಮೊದಲು ಅವರು ಪೂರೈಸಿರುವ ಕೆಲಸಗಳ ಗುಣಮಟ್ಟ ಮತ್ತು ಅವರ ಅನುಭವದ ಆಧಾರದ ಮೇಲೆ ಈ ಕಂಟ್ರಾಕ್ಟರುಗಳ ನೇಮಕವಾಗುತ್ತದೆ. ವಾಣಿಜ್ಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ೧೯೩೨ರ ಭಾರತೀಯ ಪಾಲುಗಾರಿಕೆ ಕಾಯಿದೆಯನ್ವಯ ನೊಂದಾವಣೆಯನ್ನು ಒಂದು ಮುಖ್ಯ ಷರತ್ತಾಗಿ ವಿಧಿಸಲಾಗುವುದು. ಇದಕ್ಕೆ ಯಾವ ಶುಲ್ಕವನ್ನೂ ವಿಧಿಸುವುದಿಲ್ಲ.

## ೬೦
## ಕೇಂದ್ರೀಯ ಲೋಕೋಪಯೋಗಿ ಇಲಾಖೆ ಕಛೇರಿಗಳಲ್ಲಿ ಹಾಗೂ ಅಧೀನ ಎಂಜಿನಿಯರಿಂಗ್ ಸೇವೆಗಳಲ್ಲಿ ಮುಸ್ಲಿಮ್ ಕೋಮಿನವರ ಸಂಖ್ಯೆ*

**೪೧೮. ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಕೆಳಗಿನ ವಿಷಯಗಳ ಬಗ್ಗೆ ತಿಳಿಸುವರೆ:

ಅ) ೧ನೇ ಹಾಗೂ ೨ನೇ ದರ್ಜೆಯ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಅಧೀನ ಎಂಜಿನಿಯರಿಂಗ್ ಸೇವೆಗಳಲ್ಲಿನ ಅಧಿಕಾರಿಗಳ ಒಟ್ಟು ಸಂಖ್ಯೆಯೆಷ್ಟು?

ಆ) ಅ) ಭಾಗದಲ್ಲಿ ಕಾಣಿಸಿರುವ ಪ್ರತಿಯೊಂದು ವರ್ಗದಲ್ಲಿರುವ ಮುಸ್ಲಿಮ್ ಅಧಿಕಾರಿಗಳ ಸಂಖ್ಯೆಯೆಷ್ಟು? ಹಾಗೂ

ಇ) ವರ್ಗಗಳಲ್ಲಿ ಮುಸ್ಲಿಮ್ ಅಧಿಕಾರಿಗಳ ಸಂಖ್ಯೆ ಕಡಿಮೆಯಿದ್ದ ಪಕ್ಷದಲ್ಲಿ ಅದನ್ನು ಸರಿದೂಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ದರ್ಜೆ ೧ ೧೨೨, ದರ್ಜೆ ೨ ೪೩ ಅಧೀನ ಎಂಜಿನಿಯರಿಂಗ್ ಸೇವೆಗಳು: ೧೧೭೯.

ಆ) ದರ್ಜೆ ೧: ೧೪
ದರ್ಜೆ ೨: ೪

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೫೮೨
* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೫೮೨

ಇ) ೧೯೪೩ರ ಮಾರ್ಚ್ ೧೬ರ ೩೧೬ನೆಯ ಸಂಖ್ಯೆಯ ಪ್ರಶ್ನೆಗೆ ನೀಡಿರುವ ಉತ್ತರದ (ಆ) ಭಾಗಕ್ಕೆ ಗೌರವಾನ್ವಿತ ಸದಸ್ಯರ ಗಮನ ಸೆಳೆಯಲಾಗಿದೆ.

## ೬೧
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಸಿಬ್ಬಂದಿಯನ್ನು ಸೇವೆಯಿಂದ ತೆಗೆಯುವ ಬಗೆಗೆ*

**೪೧೯. ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ :** ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಸಿಬ್ಬಂದಿಯನ್ನು ಸೇವೆಯಿಂದ ನಿವೃತ್ತಿಗೊಳಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೆಂಬ ಸುದ್ದಿ ವಾಸ್ತವವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಾದಲ್ಲಿ ಒಟ್ಟು ಸಂಖ್ಯೆಯಲ್ಲಿ ಮುಸ್ಲಿಮರ ಸಂಖ್ಯೆ ಶೇಕಡಾ ೨೫ಕ್ಕಿಂತ ಕಡಿಮೆಯಿರುವ ಸನ್ನಿವೇಶದಲ್ಲೂ ಅವರಿಗೆ ಈ ಯೋಜನೆಯಿಂದ ತೊಂದರೆಯಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದ್ಯಕ್ಕಿಲ್ಲ, ಪ್ರಶ್ನೆಯ ಉತ್ತರಾರ್ಧ ಉದ್ಭವವಾಗುವುದೇ ಇಲ್ಲ.

## ೬೨
## ಕಲ್ಕತ್ತೆಯಲ್ಲಿರುವ ಭಾರತರ ಸರ್ಕಾರ ಮುದ್ರಣಾಲಯದಲ್ಲಿ ಮುಸ್ಲಿಮ್ ಲಿನೊ ಆಪರೇಟರುಗಳು ಹಾಗೂ ಮಾನೊ ಆಪರೇಟರುಗಳು*

**೪೨೦. ಹಾಜಿ ಚೌಧುರಿ ಮುಹಮ್ಮದ್ ಇಸ್ಮಾಯಿಲ್ ಖಾನ್ :** ಅ) ಕಲ್ಕತ್ತೆಯ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಲಿನೊ ಆಪರೇಟರುಗಳು, ಮಾನೊ ಆಪರೇಟರುಗಳು ಹಾಗೂ ಮಾನೊ ಕ್ಯಾಸ್ಟರುಗಳ ಸಂಖ್ಯೆಯೆಷ್ಟು? ಅಲ್ಲದೆ ಇವರಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟು?

ಆ) ಈ ಮೇಲಿನ ವಿವಿಧ ದರ್ಜೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ನೇಮಕರಾದ ಉದ್ಯೋಗಿಗಳ ಸಂಖ್ಯೆಯಷ್ಟು? ಮತ್ತು ಇವರಲ್ಲಿ ಮುಸ್ಲಿಮರ ಪ್ರಮಾಣವೇನು?

ಇ) ಈ ಹುದ್ದೆಗಳಿಗೆ ಮುಸ್ಲಿಮರನ್ನು ನೇಮಕಮಾಡಿಕೊಳ್ಳುವ ದಿಶೆಯಲ್ಲಿ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಈ) ಕಲ್ಕತ್ತೆಯಲ್ಲಿನ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಗುಮಾಸ್ತರು ಹಾಗೂ ಕರಡು ಬರಹಗಾರರ ಹುದ್ದೆಗಳಿಗೆ ತಾತ್ಕಾಲಿಕ ಹಾಗೂ ಖಾಯಂ ಆಧಾರದ ಮೇಲೆ ನೇಮಕರಾದ ಉದ್ಯೋಗಿಗಳ ಕೋಮುವಾರು ಮಾಹಿತಿಯನ್ನು ಗೌರವಾನ್ವಿತ ಸದಸ್ಯರು ಸದನಕ್ಕೆ ಒದಗಿಸಲು ಆಗುವುದೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ૩, ೨೦ನೇ ಮಾರ್ಚ್ ೧೯೪૩, ಪು. ೧೫೮೨

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪૩, ಪು. ೧೫೮೨

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ), ಆ) ಮತ್ತು ಈ) ಇವುಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸಲಾಗಿದೆ.

ಇ) ಸೇವೆಗಳಲ್ಲಿ ಕೋಮುವಾರು ಪ್ರಾತಿನಿಧ್ಯವಿರಬೇಕೆಂಬ ಭಾರತ ಸರ್ಕಾರದ ಮುದ್ರಣಾಲಯದ ಆದೇಶವನ್ನು ಪಾಲಿಸಲಾಗಿದೆ.

**ವಿವರ**

| **ಹುದ್ದೆ (ಖಾಯಂ)** | **ಸಂಖ್ಯೆ** | **ಮುಸ್ಲಿಮರ ಸಂಖ್ಯೆ** |
|---|---|---|
| ಲಿನೊ ಆಪರೇಟರ್‌ಗಳು | ೬ | ೨ |
| ಮಾನೊ ಆಪರೇಟರ್‌ಗಳು | ೬ | ೧ |
| ಮಾನೊ ಕ್ಯಾಸ್ಟರುಗಳು | ೧೦ | ಇಲ್ಲ |
| ಮೊಳೆಗಳನ್ನು ಜೋಡಿಸುವವರು | | |
| ಖಾಯಂ | ೧೨ | ಇಲ್ಲ |
| ತಾತ್ಕಾಲಿಕ | ೧೦ | ಇಲ್ಲ |

೧೯೪೦, ೧೯೪೧ ಹಾಗೂ ೧೯೪೨ರಲ್ಲಿ ಕಲ್ಕತ್ತೆಯಲ್ಲಿನ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಲಿನೊ ಆಪರೇಟರುಗಳು, ಮಾನೊ ಆಪರೇಟರುಗಳು, ಮಾನೊ ಕ್ಯಾಸ್ಟರುಗಳು ಹಾಗೂ ಮೊಳೆಗಳನ್ನು ಜೋಡಿಸಿರುವವರ ಹುದ್ದೆಗಳಿಗೆ ನೇಮಕರಾದವರನ್ನು ಸೂಚಿಸುವ ಪಟ್ಟಿ :

| ಹುದ್ದೆ (ಖಾಯಂ) | ನೇಮಕ ಮಾಡಿದ ಇಸವಿ | | |
|---|---|---|---|
| | ೧೯೪೦ | ೧೯೪೧ | ೧೯೪೨ |
| ಲಿನೊ ಆಪರೇಟರುಗಳು | ಇಲ್ಲ | ಇಲ್ಲ | ಇಲ್ಲ |
| ಮಾನೊ ಆಪರೇಟರ್‌ಗಳು | ಇಲ್ಲ | ಇಲ್ಲ | ಇಲ್ಲ |
| ಮಾನೊ ಕ್ಯಾಸ್ಟರುಗಳು | ಇಲ್ಲ | ೧(ಹಿಂದು) | ಇಲ್ಲ |
| ಫೋರ್ಮ್ ಕ್ಯಾರಿಯರುಗಳು | ಇಲ್ಲ | ಇಲ್ಲ | ಇಲ್ಲ |
| (ಖಾಯಂ ಹಾಗೂ ತಾತ್ಕಾಲಿಕ) | | | |

ಭಾರತ ಸರ್ಕಾರದ ಮುದ್ರಣಾಲಯ, ಕಲ್ಕತ್ತ, ಇಲ್ಲಿ ಗುಮಾಸ್ತರು ಹಾಗೂ ಕರಡು ಬರಹಗಾರರ ಹುದ್ದೆಗಳಲ್ಲಿ (ಖಾಯಂ ಮತ್ತು ತಾತ್ಕಾಲಿಕ) ಕೋಮುವಾರು ಸಂಖ್ಯೆಯನ್ನು ತೋರಿಸುವ ಪಟ್ಟಿ.

| | ಒಟ್ಟು ಸಂಖ್ಯೆ | ಹಿಂದೂಗಳು | | ಮುಸ್ಲಿಮರು | ಆಂಗ್ಲೋ ಇಂಡಿಯನ್ನರು | ಭಾರತೀಯ ಕ್ರಿಶ್ಚಿಯನ್ನರು |
|---|---|---|---|---|---|---|
| | | ಪರಿಶಿಷ್ಟರಲ್ಲದವರು | ಪರಿಶಿಷ್ಟರು | | | |
| ಗುಮಾಸ್ತರು (ಲೆಕ್ಕಿಗರನ್ನು ಮತ್ತು ಟೈಮ್ ಕೀಪರುಗಳನ್ನು ಬಿಟ್ಟು) | | | | | | |
| ಖಾಯಂ | ೪೩ | ೩೧ | ೧ | ೧೦ | ೧ | ಇಲ್ಲ |
| ತಾತ್ಕಾಲಿಕ | ೭ | ೫ | ಇಲ್ಲ | ೧ | ಇಲ್ಲ | ೧ |
| ಕಾಪಿ – ಹೋಲ್ಡರುಗಳು | | | | | | |
| ಬಾಯಂ | ೩೪ | ೨೩ | ಇಲ್ಲ | ೫ | ೨ | ಇಲ್ಲ |
| ತಾತ್ಕಾಲಿಕ (ರೆಗ್ಯುಲರ್) | ೪ | ೩ | ಇಲ್ಲ | ೧ | ಇಲ್ಲ | ಇಲ್ಲ |
| ತಾತ್ಕಾಲಿಕ (ಕಡಿಮೆ ಅವಧಿಗಾಗಿ) | ೫ | ೨ | ಇಲ್ಲ | ೨ | ಇಲ್ಲ | ೧ |

## ೬೩
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸಲ್ಮಾನ ಕಾರ್ಯಪಾಲಕ ಇಂಜಿನಿಯರರು*

**೪೨೧. ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ :** ಬೇರೆ ಬೇರೆ ಪ್ರಾಂತ್ಯಗಳಿಂದ ಕೇಂದ್ರೀಯ ಲೋಕೋಪಯೋಗಿ ಇಲಾಖೆಗೆ ನೇಮಕರಾಗಿರುವ ಕಾರ್ಯಪಾಲಕ ಇಂಜಿನಿಯರರ ಸಂಖ್ಯೆಯೆಷ್ಟು ಹಾಗೂ ಇವರ ಪೈಕಿ ಮುಸ್ಲಿಮರ ಸಂಖ್ಯೆಯಷ್ಟು ಎಂದು ಮಾನ್ಯ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಪ್ಪತ್ತೆರಡು, ಅದರಲ್ಲಿ ಇಬ್ಬರು ಮುಸ್ಲಿಮರು. ಒಬ್ಬರು ಮುಸ್ಲಿಮರೂ ಸೇರಿದಂತೆ ಒಟ್ಟು ಮೂರು ಮಂದಿಗೆ ಹಿಂಬಡ್ತಿ ನೀಡಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೩

# ೬೪
# ನವದೆಹಲಿಯಲ್ಲಿನ ತಾತ್ಕಾಲಿಕ ಕಟ್ಟಡಗಳು*

**೪೨೨. ಸರ್ ಎಫ್. ಇ–ಜೇಮ್ಸ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ಕೂನ್ನಾಟ್ ಪ್ಲೇಸ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಕೆಲವು ಕಟ್ಟಡಗಳನ್ನು ಯುದ್ಧದ ನೆಲಸಮ ಮಾಡಲಾಗುವುದೆಂಬ ಸೂಚನೆಯು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ, ಹಾಗೂ,

ಆ) ಕ್ವೀನ್ಸ್ ರಸ್ತೆಯಲ್ಲಿ ಒಂದಿರುವ ತಾತ್ಕಾಲಿಕ ಕಟ್ಟಡಗಳಿಗೂ ಸಹ ಇದೇ ಷರತ್ತು ಅನ್ವಯವಾಗುವುದೋ ಹೇಗೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ತಾತ್ಕಾಲಿಕ ಕಟ್ಟಡಗಳೆಂದೇ ಎಲ್ಲಾ ಕಟ್ಟಡಗಳು ನಿರ್ಮಾಣವಾಗಿರುವುದು. ಸಮರದ ನಂತರ ಅವುಗಳನ್ನು ನೆಲಸಮ ಮಾಡಬೇಕೆಂಬುದೇ ನಮ್ಮ ಉದ್ದೇಶ; ಆದಾಗ್ಯೂ ಈ ವಿಷಯದಲ್ಲಿ ಅಂತಿಮ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲ.

**ಸರ್ ಎಫ್.ಇ. ಜೇಮ್ಸ್ :** 'ಸಮರದ ನಂತರ' ಹಾಗೂ 'ಆದಷ್ಟು ಶೀಘ್ರವಾಗಿ' ಎಂಬ ನುಡಿಗಟ್ಟುಗಳ ಅರ್ಥವನ್ನು ಮಾನ್ಯ ಸದಸ್ಯರು ತಿಳಿಸುವರೆ? ಕಾರಣ ಕೂನ್ನಾಟ್ ಪ್ಲೇಸ್‌ನ ಕೆಲವು ಕಟ್ಟಡಗಳ ಮೇಲೆ 'ಯುದ್ಧ ಮುಗಿದ ತಕ್ಷಣವೇ ಇವುಗಳನ್ನು ನೆಲಸಮ ಮಾಡಲಾಗುತ್ತದೆ' ಎಂಬ ಫಲಕವನ್ನು ಹಾಕಲಾಗಿದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾಮಫಲಕದಿಂದ ಬಹಳ ವ್ಯತ್ಯಾಸವಾಗುವುದೆಂದು ನನಗನ್ನಿಸುವುದಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅವುಗಳನ್ನು ನೆಲಸಮ ಮಾಡದೆ ಬೇರೆ ಉದ್ದೇಶಗಳಿಗೆ ಬಳಸುವುದರಲ್ಲಿ ತಪ್ಪೇನಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಮೊದಲೇ ತಿಳಿಸಿದ ಹಾಗೆ ಈ ವಿಷಯದಲ್ಲಿ ಅಂತಿಮ ನಿರ್ಧಾರವನ್ನು ಇನ್ನೂ ತೆಗೆದುಕೊಂಡಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೩

# ೬೫
# ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಮತ್ತು ಕಾಗದದ ಇಲಾಖೆಯಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ*

**೪೨೩. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಕೆಳಗೆ ಕಾಣಿಸಿರುವ ಅಧಿಕಾರಿಗಳು ಮುಸ್ಲಿಮರು ಅಥವಾ ಮುಸ್ಲಿಮೇತರರು ಎಂದು ತಿಳಿಸುವರೆ?

ಮುದ್ರಣ ಮತ್ತು ಲೇಖನ ಸಾಮಗ್ರಿ ನಿಯಂತ್ರಣಾಧಿಕಾರಿ

ಲೇಖನ ಸಾಮಗ್ರಿ ಉಪನಿಯಂತ್ರಣಾಧಿಕಾರಿ

ಮುದ್ರಣ ವಿಭಾಗ, ಸಹಾಯಕ ನಿಯಂತ್ರಣಾಧಿಕಾರಿ

ಲೇಖನ ಸಾಮಗ್ರಿ ವಿಭಾಗ, ಸಹಾಯಕ ನಿಯಂತ್ರಣಾಧಿಕಾರಿ

ಮುದ್ರಣ ಶಾಖೆಯ ಸಹಾಯಕ ಕಾರ್ಯದರ್ಶಿ ಹಾಗೂ ಸೂಪರಿಂಟೆಂಡೆಂಟ್‌ರು

ಒಂದು ವೇಳೆ ಇವರೆಲ್ಲ ಮುಸ್ಲಿಮ್ಮೇತರರಾಗಿದ್ದರೆ, ಮುಸ್ಲಿಮ್ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕೊಡಲು ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪ್ರಶ್ನೆಯ ಪೂರ್ವಾರ್ಧಕ್ಕೆ 'ಹೌದು' ಎಂಬುದೇ ಉತ್ತರ. ಆದಾಗ್ಯೂ, ಕಾರ್ಮಿಕ ವಿಭಾಗದ ಸ್ಟೇಷನರಿ ಹಾಗೂ ಮುದ್ರಣ ಶಾಖೆಯ ಈಗಿನ ಸೂಪರಿಂಟೆಂಡೆಂಟರು ಮುಸಲ್ಮಾನರೆಂದು ತಿಳಿಸಬಯಸುತ್ತೇವೆ.

ಆಯ್ಕೆ ಹುದ್ದೆಗಳಿಗೆ ಕೋಮುವಾರು ಪ್ರಾತಿನಿಧ್ಯದ ಆಧಾರದ ಮೇಲೆ ಭರ್ತಿ ಮಾಡಲು ಬರುವುದಿಲ್ಲ. ಜೊತೆಗೆ ಮೇಲೆ ಹೆಸರಿಸಿದ ಎಲ್ಲಾ ಹುದ್ದೆಗಳನ್ನು ಅರ್ಹತಾ ಆಧಾರದ ಮೇಲೆ ಬಡ್ತಿ ನೀಡಿ ಭರ್ತಿ ಮಾಡಲಾಗುವುದು. ಕೋಮುವಾರು ಆಧಾರದ ಮೇಲೆ ನೇಮಕಮಾಡುವಂಥ ಹುದ್ದೆಗಳ ಸಂದರ್ಭದಲ್ಲಿ ನಿಯಮಗಳು ಇವೆ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆ. ಬೇರೆ ಯಾವ ಕ್ರಮದ ಅಗತ್ಯವೂ ಸರ್ಕಾರಕ್ಕೆ ಕಾಣದು.

**ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಒಂದೇ ಬಗೆಯ ವಿದ್ಯಾರ್ಹತೆಯನ್ನುಳ್ಳ ಇಬ್ಬರು ಇಲಾಖಾ ಅಭ್ಯರ್ಥಿಗಳು ಈ ಹುದ್ದೆಗಳನ್ನು ಪಡೆಯುವಾಗ ಮುಸ್ಲಿಮ್ ಜನಾಂಗಕ್ಕೆ ಸೇರಿದವರ ವೇತನವು ರೂ. ೫೦ ಆಗಿ ಮುಸ್ಲಿಮೇತರರ ವೇತನವು ರೂ. ೨೦೦ ಆದದ್ದು ಏಕೆ ಎಂದು ಗೌರವಾನ್ವಿತ ಸದಸ್ಯರು ತಿಳಿಸುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದಕ್ಕೆ ನನ್ನ ಬಳಿ ಮಾಹಿತಿಯಿಲ್ಲ.

**ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ದಯಮಾಡಿ ಇದರ ಬಗ್ಗೆ ವಿಚಾರಿಸುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಚಾರಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೩

# ೬೬
# ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಹಾಗೂ ಲೇಖನ ಸಾಮಗ್ರಿ ವಿಭಾಗದಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ*

**೪೮೪. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ಭಾರತ ಸರ್ಕಾರದ ಬೇರೆಬೇರೆ ಮುದ್ರಣಾಲಯಗಳಲ್ಲಿ ಈ ಕೆಳಗೆ ಕಾಣಿಸಿರುವ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಸಲ್ಮಾನ ಕೋಮಿನ ಗೆಜೆಟೆಡ್ ಅಧಿಕಾರಿಗಳ ಸಂಖ್ಯೆಯೆಷ್ಟೆಂದು ಮಾನ್ಯ ಸದಸ್ಯರು ತಿಳಿಸುತ್ತಾರೆಯೇ?

ಮುದ್ರಣ ಹಾಗೂ ಲೇಖನಸಾಮಗ್ರಿ ವಿಭಾಗದ ನಿಯಂತ್ರಣಾಧಿಕಾರಿಗಳ ಕಛೇರಿ

ಕಲ್ಕತ್ತೆಯ ಕೇಂದ್ರ ಲೇಖನಸಾಮಗ್ರಿ ಕಛೇರಿ

ಕೇಂದ್ರೀಯ ಪ್ರಸಾರಾಂಗ ಶಾಖೆ.

ಆ) ಮುದ್ರಣ ಹಾಗೂ ಲೇಖನಸಾಮಗ್ರಿ ನಿಯಂತ್ರಣಾಧಿಕಾರಿಗಳವರ ಕಛೇರಿಯಲ್ಲಿ ಸಹಾಯಕ ನಿಯಂತ್ರಣಾಧಿಕಾರಿಯ ಹುದ್ದೆ ಅಸ್ತಿತ್ವಕ್ಕೆ ಬಂದ ಲಾಗಾಯ್ತಿನಿಂದ ಬಂಗಾಳದ ಹಿಂದೂಗಳು ಅಥವಾ ಕ್ರಿಶ್ಚಿಯನ್ನರ ಪಾಲಾಗಿದೆಯೇ ವಿನಾ ಮುಸಲ್ಮಾನರು ಯಾರೂ ಈ ಹುದ್ದೆಯನ್ನು ಅಲಂಕರಿಸಿಲ್ಲ ಎಂಬುದು ವಾಸ್ತವವೇ? ಇದು ನಿಜವಿದ್ದ ಪಕ್ಷದಲ್ಲಿ ಏಕೆ ಹೀಗಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಎರಡು. ಫಾರ್ಮ್ಸ್ ಪ್ರೆಸ್ ಕಲ್ಕತ್ತೆಯಲ್ಲಿ ಒಂದು, ಇನ್ನೊಂದು ಭಾರತ ಸರ್ಕಾರದ ಮುದ್ರಣಾಲಯ, ನವದೆಹಲಿಯಲ್ಲಿ.

ಆ) ಮೊದಲನೆಯ ಭಾಗದ ಪ್ರಶ್ನೆಗೆ ಉತ್ತರ ನಕಾರಾತ್ಮಕವಾಗಿದೆ. ಎರಡನೆಯ ಭಾಗಕ್ಕೆ ಉತ್ತರಿಸುವುದಾದರೆ ಈ ಹುದ್ದೆಯನ್ನು ಬಡ್ತಿ ಮೂಲಕ ತುಂಬಲಾಗುತ್ತದೆಯೆ ಹೊರತು ನೇರವಾದ ನೇಮಕಾತಿಯಿಂದ ಅಲ್ಲ. ಮುಸಲ್ಮಾನರ ಪೈಕಿ ಪರಿಗಣಿಸುವಂಥ ಹಿರಿತನ ಯಾರಿಗೂ ಇಲ್ಲ.

**ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಈ ಸಂದರ್ಭದಲ್ಲಿ ಮಾನ್ಯ ಸದಸ್ಯರನ್ನು ನಾನು ಇದು ವಾಸ್ತವ ಸಂಗತಿಯೇ ಎಂದು ಕೇಳಲೆ? ರೂ ೫೦ರ ವೇತನಕ್ಕೆ ಸೇರಿಕೊಂಡ ಮುಸ್ಲಿಮ್ ವ್ಯಕ್ತಿಯೊಬ್ಬ ತನ್ನ ಕೆಲಸದಲ್ಲಿ ಹೆಚ್ಚಿನ ಭವಿಷ್ಯ ಕಾಣದ ಕಾರಣ ಬಂಗಾಳಕ್ಕೆ ವರ್ಗಮಾಡಿಸಿಕೊಂಡ, ಅಲ್ಲಿ ರೂ. ೨೨೫ ಪಡೆಯುತ್ತಿದ್ದಾನೆ. ಹಾಗೆಯೇ ೨೦೦ ರೂಪಾಯಿಗಳ ವೇತನಕ್ಕೆ ಸೇರಿಕೊಂಡ ವ್ಯಕ್ತಿ ಈಗ ೨೫೦ ರೂಪಾಯಿ ಪಡೆಯುತ್ತಿದ್ದಾರೆ. ಆಗಲೇ ರೂ. ೨೫೦ ರೂಪಾಯಿ ಪಡೆಯುತ್ತಿದ್ದ ಸೇವಾ ಹಿರಿತನದ ಮುಸ್ಲಿಮ್ ಒಬ್ಬನನ್ನು ಕಡೆಗಣಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ, ಆದರೆ ನನ್ನ ಮಾನ್ಯ ಮಿತ್ರರು ಅಪೇಕ್ಷೆಪಟ್ಟಲ್ಲಿ ವಿಚಾರಿಸಿ ತಿಳಿಸಬಹುದು.

**ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ದಯಮಾಡಿ ವಿಚಾರಿಸಿರಿ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆಗಲಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೦ನೇ ಮಾರ್ಚ್ ೧೯೪೩, ಪು. ೧೫೮೪

# ೬೭
# ಕಾರ್ಮಿಕ ಇಲಾಖೆಯ ಅಧೀನದಲ್ಲಿರುವ ಮುದ್ರಣ ಹಾಗೂ ಲೇಖನಸಾಮಗ್ರಿ ವಿಭಾಗದಲ್ಲಿ ಮುಸ್ಲಿಮ್ ಅಧಿಕಾರಿಗಳ ಕೊರತೆ*

**೪೨೫. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ :

ಅ) ಭಾರತ ಸರ್ಕಾರ, ಬೇರೆ ಬೇರೆ ಮುದ್ರಣಾಲಯಗಳಲ್ಲಿ ಇರುವ ಒಟ್ಟು ಸಹಾಯಕ ಮ್ಯಾನೇಜರ್‌ರವರ ಸಂಖ್ಯೆಯೆಷ್ಟು? ಅವರಲ್ಲಿ ಮುಸ್ಲಿಮರ ಸಂಖ್ಯೆಯೆಷ್ಟು?

ಆ) ಕಾರ್ಮಿಕ ಇಲಾಖೆಯ ಮುದ್ರಣ ವಿಭಾಗದಲ್ಲಿ ಹಾಗೂ ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಣಾಧಿಕಾರಿಯವರ ಕಛೇರಿಯ ಆಡಳಿತ ಶಾಖೆಯಲ್ಲಿ ಪ್ರತ್ಯೇಕವಾಗಿ ಇರುವ ಮುಸಲ್ಮಾನ ಸಹಾಯಕರು ಹಾಗೂ ಗುಮಾಸ್ತರುಗಳ ಸಂಖ್ಯೆಯೆಷ್ಟು? ಹಾಗೂ,

ಇ) ಮುದ್ರಣ ಹಾಗೂ ಲೇಖನಸಾಮಗ್ರಿ ನಿಯಂತ್ರಣಾಧಿಕಾರಿಯವರ ಕಛೇರಿಯಲ್ಲಿ ಮತ್ತು ಪ್ರಸಾರಾಂಗ ಶಾಖೆಯಲ್ಲಿರುವ ಮುಸ್ಲಿಮ್ ಸೂಪರಿಂಟೆಂಡೆಂಟರುಗಳ ಸಂಖ್ಯೆಯೆಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಮೂರು, ಅವರಲ್ಲೊಬ್ಬರು ಮುಸ್ಲಿಮರು.

ಆ) ಮುದ್ರಣ ಹಾಗೂ ಲೇಖನಸಾಮಗ್ರಿ ವಿಭಾಗದಲ್ಲಿ ಒಬ್ಬರು ಮುಸ್ಲಿಮ್ ಸಹಾಯಕರಿದ್ದಾರೆ. ನಿಯಂತ್ರಣಾಧಿಕಾರಿಯವರ ಕಛೇರಿಯ ಆಡಳಿತ ಹಾಗೂ ಹಣಕಾಸು ಶಾಖೆಯಲ್ಲಿ ಒಬ್ಬರು ಸಹಾಯಕರು ಹಾಗೂ ಒಬ್ಬರು ಗುಮಾಸ್ತರು ಇದ್ದಾರೆ.

ಇ) ಯಾರೂ ಇಲ್ಲ.

# ೬೮
# ಮುದ್ರಣ ಹಾಗೂ ಲೇಖನಸಾಮಗ್ರಿ ಇಲಾಖೆಯಲ್ಲಿ ಮುಸ್ಲಿಮ್ ಹಾಗೂ ಮುಸ್ಲಿಮೇತರ ತರಬೇತುದಾರರ ನಡುವೆ ತಾರತಮ್ಯ*

**೪೨೬. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ಭಾರತ ಸರ್ಕಾರದ ಮುದ್ರಣ ಹಾಗೂ ಲೇಖನಸಾಮಗ್ರಿ ಇಲಾಖೆಯಲ್ಲಿ ಸೂಕ್ತವಾದ ಜನರಿಗೆ ತರಬೇತಿ ನೀಡಲಾಗುತ್ತಿದೆಯೇ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಬೇರೆ ಬೇರೆ ಮುದ್ರಣಾಲಯಗಳಲ್ಲಿ ಉನ್ನತ ಹುದ್ದೆಗಳಿಗೆ ನೇಮಕರಾಗಲು ಈ ವ್ಯಕ್ತಿಗಳು ಅರ್ಹರಾಗುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೫

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೫

ಇ) ಭಾರತ ಸರ್ಕಾರ ಮುದ್ರಣಾಲಯ, ನವದೆಹಲಿ, ಇಲ್ಲಿ ಮಾಹೆಯಾನ ರೂ. ೨೦೦ ವೇತನದಂತೆ ಅಂಥ ತರಬೇತುದಾರರೊಬ್ಬರಾದ ಶ್ರೀ ಬಿ.ಸಿ. ಸೇನ್ ಗುಪ್ತಾ ಎಂಬುವವರು ನೌಕರಿ ಪಡೆದರು ; ಆದರೆ ಅದೇ ತರಹ ತರಬೇತು ಪಡೆದ ಮುಸ್ಲಿಮರೊಬ್ಬರಿಗೆ ಯಾವುದೇ ಉದ್ಯೋಗ ಲಭ್ಯವಾಗದೆ ಅವರು ಕಲ್ಕತ್ತಾದಲ್ಲಿರುವ ಭಾರತಕ್ಕೆ ಸರ್ಕಾರ ಮುದ್ರಣಾಲಯ, ಕಲ್ಕತ್ತಾ ಇಲ್ಲಿಗೆ ಸಹಾಯಕ ಮ್ಯಾನೇಜರಾಗಿ ವರ್ಗಾವಣೆ ಪಡೆದುಕೊಳ್ಳಲಾಯಿತು. ಇದು ನಿಜವೆಂದು ತಿಳಿಸುವಿರಾ?

ಈ) (ಇ) ಭಾಗಕ್ಕೆ ಉತ್ತರ ಸಕಾರಾತ್ಮಕವಾದರೆ, ಈ ರೀತಿ ತಾರತಮ್ಯ ತೋರಲು ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಹೌದು, ಅವರಿಗೆ ಅರ್ಹತೆ ಇದೆ, ಆದರೆ ಅದಕ್ಕಾಗಿ ಬೇಡಿಕೆ ಇರಲಿಲ್ಲ.

(ಇ) ಅಜಾಗರೂಕತೆಯಿಂದ ಶ್ರೀ ಸೇನ್‌ಗುಪ್ತಾ ಅವರನ್ನು ಹಳೆಯ ವೇತನ ಶ್ರೇಣಿ ರೂ. ೨೦೦–೧೦–೨೫೦ರ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಯಿತು. ತಪ್ಪು ಅರಿವಾದ ನಂತರ ಮತ್ತೆ ಅವರನ್ನು ಹಳೆ ವೇತನ ಶ್ರೇಣಿಗೆ ಹಾಕಿ ರೂ. ೧೦೦ರಿಂದ ಪ್ರಾರಂಭಿಸುವಂತೆ ಮಾಡಲಾಯಿತು.

ಮುಸ್ಲಿಮ್ ಒಬ್ಬರನ್ನು ಸಹ ರೂ. ೧೦೦ರ ವೇತನ ಶ್ರೇಣಿಯಿಂದ ಪ್ರಾರಂಭಮಾಡುವಂತೆ ಮಾಡಲಾಯಿತು.

ಅಲ್ಲಿಂದೀಚೆಗೆ ಇಬ್ಬರಿಗೂ ಬಡ್ತಿ ನೀಡಲಾಗಿದೆ.

(ಈ) ಇದು ಉದ್ಭವವಾಗುವುದಿಲ್ಲ.

**ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅವರಿಬ್ಬರೂ ಒಂದೇ ವೇತನಶ್ರೇಣಿಗೆ ಬಡ್ತಿ ಹೊಂದಿದ್ದಾರೆ ಎಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಹಾಗಂತ ತಿಳಿದಿದ್ದೇನೆ.

## ೬೯
## ನವದೆಹಲಿಯಲ್ಲಿನ ಭಾರತ ಸರ್ಕಾರದ ಮುದ್ರಣಾಲಯದ ಯಂತ್ರಗಳ ದುರಸ್ತಿ*

**೪೨೭. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ನವದೆಹಲಿಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಯಂತ್ರಗಳ ಸ್ಥಾನಿಕ ದುರಸ್ತಿಗಾಗಿ ತಗುಲಿದ ಖರ್ಚೆಷ್ಟು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

(ಆ) ಸದರಿ ಮುದ್ರಣಾಲಯದಲ್ಲಿ ಯಂತ್ರಗಳ ದುರಸ್ತಿ ವಿಭಾಗವೊಂದು ಇದೆ ಎಂಬುದು ನಿಜವೆ? ಹಾಗಿದ್ದಲ್ಲಿ ದುರಸ್ತಿಯನ್ನು ಅಲ್ಲಿಯೇ ಏಕೆ ನಡೆಸಲಿಲ್ಲ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೫–೮೬

(ಇ) ನಗರದಲ್ಲಿ ಹೆಡ್ ಮೆಕ್ಯಾನಿಕ್ ಖುದ್ದು ಹೋಗಿ ಯಂತ್ರಗಳನ್ನು ದುರಸ್ತಿ ಮಾಡಿಸುವುದು ನಿಜವೆ? ಯಾವ ಸಂಸ್ಥೆಗೆ ದುರಸ್ತಿ ಕಾರ್ಯವನ್ನು ವಹಿಸುತ್ತಾರೋ ಅಲ್ಲಿಗೆ ಬರೆದ ಪತ್ರದಲ್ಲಿ ಮಾಡಬೇಕಾದ ದುರಸ್ತಿಯೇನು ಎಂದು ಸೂಚನೆ ನೀಡದೆ ಹೆಡ್ ಮೆಕ್ಯಾನಿಕ್ ಎಲ್ಲವನ್ನೂ ವಿವರಿಸುತ್ತಾನೆ ಎಂದು ಬರೆಯಲಾಗುತ್ತದೆ. ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುವ ಸಂಸ್ಥೆಗಳಿಗೆ ದುರಸ್ತಿಯ ಬಗ್ಗೆ ವಿವರವಾಗಿ ಏಕೆ ತಿಳಿಸುವುದಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಸ್ಥಾವರಕ್ಕೆ ಬೇಕಾದ ಸ್ಥಾನೀಯ ದುರಸ್ತಿಗೆ ೧೯೪೨–೪೩ರಲ್ಲಿ ತಗುಲಿದ ಒಟ್ಟು ಖರ್ಚು, ರೂ ೧,೧೭೭–೨–೦

(ಆ) ಮೊದಲನೇ ಭಾಗಕ್ಕೆ ಉತ್ತರ ಸಕಾರಾತ್ಮಕವಾಗಿದೆ. ಎರಡನೇ ಭಾಗಕ್ಕೆ ಸಂಬಂಧಿಸಿದಂತೆ, ಮುದ್ರಣಾಲಯದಲ್ಲಿ ಆಗದಂಥ ದುರಸ್ತಿ ಕೆಲಸಗಳನ್ನು ಮಾತ್ರ ಹೊರಗಿನ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ.

(ಇ) ಇಲ್ಲ.

## ೭೦
## ಅಲಿಗಢದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಹೆಚ್ಚುವರಿ ಸಿಬ್ಬಂದಿ*

****೪೨೮. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ಗೌರವಾನ್ವಿತ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ದಯಮಾಡಿ ತಿಳಿಸುವರೆ : ಅಲಿಗಡದ ಮುದ್ರಣಾಲಯವು ಕಲ್ಕತ್ತೆಯ ಫಾರ್ಮ್ಸ್ ಮುದ್ರಣಾಲಯದಷ್ಟು ಪ್ರಮಾಣದ ಹೆಚ್ಚುವರಿ ಕೆಲಸವನ್ನು ಒಪ್ಪಿಕೊಂಡಿದೆ – ಫಾರ್ಮುಗಳ ದಾಸ್ತಾನು ಮುಗಿಸುವ ದಿಶೆಯಲ್ಲಿ ಹಾಗೂ ಈ ಸಂಬಂಧವಾಗಿ ಅಲಿಗಢ ಭಾರತ ಸರ್ಕಾರ ಮುದ್ರಣಾಲಯದ ಮ್ಯಾನೇಜರ್‌ಗಳು ಎಷ್ಟು ಮಂದಿ ಹೆಚ್ಚುವರಿ ಸಿಬ್ಬಂದಿಯನ್ನು ನೇಮಕಮಾಡಿಕೊಂಡರು?

ಆ) ಒಪ್ಪಿಕೊಂಡ ಕೆಲಸಕ್ಕೂ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗೂ ತಾಳೆ ಸರಿಯಾಗುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ೧೬ನೇ ಮಾರ್ಚ್ ೧೯೪೩ರ ತನಕ ಸ್ವೀಕರಿಸಿದ ಕೆಲಸ ಹಾಗೂ ನೇಮಕ ಮಾಡಿಕೊಂಡ ಸಿಬ್ಬಂದಿ ಕುರಿತಾದ ಪಟ್ಟಿಯನ್ನು ಸದನಕ್ಕೆ ಒದಗಿಸಿದೆ.

ಆ) ಉತ್ತರ ಸಕಾರಾತ್ಮಕವಾದದ್ದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೫–೮೬

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತು, ಪ್ರಶ್ನೆ ಕೇಳುವವರು ತಮ್ಮ ಕೋಟಾವನ್ನು ಮುಗಿಸಿದ್ದರು.

**ವಿವರಗಳ ಪಟ್ಟಿ**

| **ಕ್ರಮ ಸಂಖ್ಯೆಸಂಖ್ಯೆ** | | **ಫಾರ್ಮ್ ಸಂಖ್ಯೆ** | **ಬೇಕಾದ ಪ್ರತಿಗಳ** | |
|---|---|---|---|---|
| ೧. | ಐ.ಎ.ಎಫ್.ಎ | ೧೭೬ | ೧೩,೦೦೦ | ಪುಸ್ತಕಗಳು |
| ೨. | ಐ.ಎ.ಎಫ್.ಒ | ೧೨೮೭ | ೩,೦೦,೦೦೦ | |
| ೩. | ಐ.ಎ.ಎಫ್.ಒ | ೧೪೩೫ | ೧.೪೦೦ | ಪುಸ್ತಕಗಳು |
| ೪. | ಐ.ಎ.ಎಫ್.ಎಮ್ | ೧೨೧೩ | ೧,೦೦೦ | ಪುಸ್ತಕಗಳು |
| ೫. | ಐ.ಎ.ಎಫ್.ಜಡ್ | ೨೧೮೭ಎ | ೩೦,೦೦೦ | |
| ೬. | ಐ.ಎ.ಎಫ್.ಜಡ್ | ೨೧೯೭ | ೩೫,೦೦೦ | |
| ೭. | ಐ.ಎ.ಎಫ್.ಜಡ್ | ೨೦೧೧* | ೫೦,೦೦೦ | |
| ೮. | ಐ.ಎ.ಎಫ್.ಜಡ್ | ೨೦೧೧** | ೪೦,೦೦೦ | |
| ೯. | ಐ.ಎ.ಎಫ್.ಜಡ್ | ೨೧೫೭ | ೨,೫೦೦ | |
| ೧೦. | ಐ.ಎ.ಎಫ್.ಎ | ೧೭೫ | ೭೦೦೦ | |
| ೧೧. | ಐ.ಎ.ಎಫ್.ಎ.–೨ | (ದೊಡ್ಡದು) | ೩೭,೦೦೦ | ಪುಸ್ತಕಗಳು |
| ೧೨. | ಐ.ಎ.ಎಫ್.ಎಫ್ | ೧೦೬೮ | ೪೩,೦೦೦ | ಪುಸ್ತಕಗಳು |
| ೧೩. | ಐ.ಎ.ಎಫ್.ಓ. | ೧೩೬೭–ಎ | ೧,೫೦,೦೦೦ | |
| ೧೪. | ಎ.ಎಫ್.ಒ. – | ೧೮೧೦ಎ | ೭,೫೦೦ | ಪುಸ್ತಕಗಳು |
| ೧೫. | ಎ.ಎಫ್.ಡಬ್ಲ್ಯೂ | ೩೦೧೦ | ೯,೦೦೦ | ಪುಸ್ತಕಗಳು |
| ೧೬. | ಐ.ಎ.ಎಫ್.ಜಡ್ | ೨೧೩೫ | ೬,೦೦೦ | |
| ೧೭. | ಎಸ್. | ೯೦–ಎ | ೧,೦೦,೦೦೦ | |
| ೧೮. | ಎಸ್. | ೯೦–ಬಿ | ೫೦,೦೦೦ | |
| ೧೯. | ಎಸ್. | ೯೭–ಎ | ೪,೦೦,೦೦೦ | |

ಮೂಲ ಫಾರ್ಮ್ ಇತ್ಯಾದಿಗಳನ್ನು ಫಾರ್ಮ್ಸ್ ಪ್ರೆಸ್, ಕಲ್ಕತ್ತೆಯಿಂದ ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಮಾಡಿದ ನೇಮಕಾತಿಯ ಒಂದು ಪಟ್ಟಿ.

೩ ಮೊಳೆಜೋಡಿಸುವವರು ರೂ. ೨೫ರಂತೆ

೧ ತಿದ್ದುವವರು ರೂ. ೯೦–೪–೧೧೦ರ ಶ್ರೇಣಿಯಲ್ಲಿ

---

* ಚಿಕ್ಕದು

** ದೊಡ್ಡದು

೧ ಕಾಪಿಹೋಲ್ಡರ್ ರೂ. ೨೮–೨–೩೮ರ ಶ್ರೇಣಿಯಲ್ಲಿ
೩ ಸ್ಟೀರಿಯೋಟೈಪರುಗಳು ರೂ. ೨೦ರಂತೆ
೧ ಟೈಪ್ ಸಪ್ಲೈಯರ್ ರೂ. ೨೦ರಂತೆ
೨ ಪೇಪರ್‌ಕೊಡುವವರು ರೂ. ೨೦ರಂತೆ
೩ ಶ್ರೇಣಿ ರೂ. ೩೫–೨–೭೫ರ ಶ್ರೇಣಿಯ ಕಂಪ್ಯೂಟರ್‌ಗಳು
೨ ಗುಮಾಸ್ತರು ರೂ. ೩೫–೨–೭೫ರ ಶ್ರೇಣಿಯಲ್ಲಿ
೧ ಜನರಲ್ ಫೋರ್‌ಮನ್ ರೂ. ೧೨೫–೫–೧೫೦ರ ಗ್ರೇಡಿನಲ್ಲಿ
೧ ಸಹಾಯಕ ಫೋರ್‌ಮನ್ ಪ್ರಿಂಟರ್ ರೂ. ೫೫–೩–೭೦ರ ಶ್ರೇಣಿ
೧ ಸಹಾಯಕ ಫೋರ್‌ಮನ್ ಕಾಂಪೊಸಿಟರ್ ರೂ.೫೦–೩–೬೫ರ ಶ್ರೇಣಿ
೧ ಹೆಡ್ ಕಂಪ್ಯೂಟರ್ ರೂ. ೭೦–೩–೧೦೦ರ ಶ್ರೇಣಿ
೧ (ಗುಮಾಸ್ತರು) ಸಹಾಯಕ ಲೇಖನ ಸಾಮಗ್ರಿ ಸಿಬ್ಬಂದಿ ಹಾಗೂ ಸ್ಟೋರ್ ಕೀಪರ್, ರೂ. ೮೦–೪–೧೦೦ರ ಶ್ರೇಣಿ.

## ೭೧
## ಅಲಿಗಡದಲ್ಲಿನ ಭಾರತ ಸರ್ಕಾರದ ಮುದ್ರಣಾಲಯದ ಮ್ಯಾನೇಜರ್ ವಿರುದ್ಧ ದೂರು*

**೪೨೯. ಮೌಲ್ವಿ ಸಯದ್ ಮುರ್ತುಜಾ ಸಾಹಿಬ್ ಬಹಾದೂರ್ :** ಅ) ಕಳೆದ ಒಂದು ವರ್ಷದಲ್ಲಿ ಆಲಿಘದಲ್ಲಿರುವ ಭಾರತದ ಸರ್ಕಾರ ಮುದ್ರಣಾಲಯದಲ್ಲಿ ಎಷ್ಟು ಜನ ಲಕೋಟೆ ತಯಾರಿಸುವವರನ್ನು ನೇಮಿಸಿಕೊಳ್ಳಲಾಗಿದೆ ಮತ್ತು ಇವರ ಪೈಕಿ ಬೇರೆ ಬೇರೆ ಕೋಮಿಗೆ ಸೇರಿದವರ ಪ್ರಮಾಣವೇನು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಮುದ್ರಣಾಲಯದಲ್ಲಿನ ಮ್ಯಾನೇಜರ್‌ರವರು ಬೇರೆ ವಿಚಾರಮಾಡದೆ ಇವರನ್ನು ನೇಮಕಮಾಡಿಕೊಂಡ ಕಾರಣ ಬಹುತೇಕರು ಮುಸ್ಲಿಮೇತರರಾಗಿದ್ದಾರೆ ಎಂಬ ಅಂಶ ನಿಜವೆ?

ಇ) ಈ ಮುದ್ರಣಾಲಯದ ಮ್ಯಾನೇಜರ್ ಪ್ರಾಯೋಗಿಕ ಪರೀಕ್ಷೆ ನೀಡದೆ, ತಾಂತ್ರಿಕ ಸಿಬ್ಬಂದಿಯನ್ನು ನೇಮಕ ಮಾಡಿರುವುದು ನಿಜವೆ? ಮೀಸಲಾಗಿರದ ಹುದ್ದೆಗಳನ್ನು, ಕೆಲವು ವೇಳೆ ಮೀಸಲಿರಿಸಿದ್ದ ಹುದ್ದೆಗಳನ್ನು ಮುಸ್ಲಿಮೇತರರಿಗೆ ನೀಡಿರುವುದೂ ನಿಜವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** (ಅ) ೧೯೪೨ ನೇಮಕಮಾಡಿಕೊಂಡ ಲಕೋಟೆ ತಯಾರಿಸುವವರ ಪೈಕಿ ೨೯ ಮಂದಿ ಹಿಂದೂಗಳು, ೧೧ಜನ ಮುಸ್ಲಿಮರು ಹಾಗೂ ಉಳಿದ ೩ಜನ ಇತರೆ ಅಲ್ಪಸಂಖ್ಯಾತ ಕೋಮಿಗೆ ಸೇರಿದವರು.

ಆ) ಇಲ್ಲ.

ಇ) ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೬

# ೭೨

# ನವದೆಹಲಿಯ ಸಚಿವಾಲಯದ ಉತ್ತರ ಹಾಗೂ ದಕ್ಷಿಣ ಕಟ್ಟಡಗಳಲ್ಲಿ ತಾತ್ಕಾಲಿಕ ಕೊಠಡಿಗಳು, ಇತ್ಯಾದಿಗಳ ಬಗೆಗೆ*

**೪೩೧. ಭಾಯ್ ಪರ್ಮಾನಂದ್** : ನವದೆಹಲಿಯ ಭಾರತ ಸರ್ಕಾರದ ಬೇರೆ ಬೇರೆ ಕಛೇರಿಯ ಸಿಬ್ಬಂದಿಗಳು ಸಚಿವಾಲಯದ ಉತ್ತರ ಹಾಗೂ ದಕ್ಷಿಣ ಬ್ಲಾಕುಗಳ ಮೊಗಸಾಲೆಗಳು ಅಥವಾ ವೆರಾಂಡಾಗಳನ್ನು ಕೊಠಡಿಗಳಾಗಿ ಪರಿವರ್ತಿಸಿ ಉಪಯೋಗಿಸುತ್ತಿರುವುದು ನಿಜವೇ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುತ್ತಾರೆಯೇ?

ಆ) ಹೀಗೆ ಪರಿವರ್ತಿತವಾದ ಕೆಲವು ಕೊಠಡಿಗಳು ದಿನಪೂರ್ತಿ ಬಿಸಿಲಿಗೆ ಸಿಕ್ಕಿರುವುದು ನಿಜವೆ?

ಇ) (ಆ) ಭಾಗದಲ್ಲಿ ಸೂಚಿತವಾದ ಕೊಠಡಿಗಳಿಗೆ ಬಿಸಿಲುಬೀಳದಂತೆ ಮಾಡಲು ಕೇವಲ ಸಾಮಾನ್ಯ ದರ್ಜೆಯ ಗಾಜುಗಳನ್ನು ಕಿಟಕಿಗಳಿಗೆ ಹಾಕಿರುವುದು ನಿಜವೆ?

ಈ) ಇವುಗಳಲ್ಲಿ ಕೆಲವು ಕೊಠಡಿಗಳು ಕಿರಿದಾಗಿರುವುದು ನಿಜವೆ?

ಉ) ಹೆಚ್ಚು ಕಡಿಮೆ ಇಡೀ ದಿನ ಬಿಸಿಲಿಗೆ ಒಡ್ಡಿದಂಥ ಅಂಥ ಕೊಠಡಿಗಳಲ್ಲಿ ಅತ್ಯಂತ ಚಿಕ್ಕದಾದ ಕೊಠಡಿಯ ಅಳತೆಯೇನು? ಅಂಥ ಎಷ್ಟು ಕೊಠಡಿಗಳಿವೆ?

ಊ) ಇಂಥ ಕೊಠಡಿಗಳಲ್ಲಿ ಉಷ್ಣಾಂಶ ಎಷ್ಟಿರುತ್ತಿತ್ತು; ಉದಾಹರಣೆಗೆ ಫೆಬ್ರವರಿ ತಿಂಗಳ ೩–೪ನೇ ವಾರಗಳಲ್ಲಿ ಹಾಗೂ ಮಾರ್ಚಿಯ ಮೊದಲೆರಡು ವಾರಗಳಲ್ಲಿ?
(೧೯೪೨ರ ಏಪ್ರಿಲ್, ಮೇ, ಜೂನ್, ಜುಲೈ ಹಾಗೂ ಅಕ್ಟೋಬರ್ ಮಾಹೆಯಲ್ಲಿ) ಬಿಸಿಲಿಗೆ ಮುಖ ಮಾಡಿದ ಈ ಪರಿವರ್ತಿತವಾದ ಕೊಠಡಿಗಳಲ್ಲಿನ ಉಷ್ಣಾಂಶವೇಷ್ಟಿತ್ತು?

ಋ) ಇಡೀ ದಿನ ಆವುಗೆಯಲ್ಲಿ ಬೇಯುವಂಥ ಅನುಭವವಾಗುತ್ತದೆಯೆಂದು ಸಿಬ್ಬಂದಿ ದೂರುವುದರಲ್ಲಿ ನಿಜಾಂಶವಿದೆಯೇ?

ೠ) ಬೇಸಗೆ ಕಾಲದಲ್ಲಿ ಇಲ್ಲಿ ಕೆಲಸ ಮಾಡಲು ಸೂಕ್ತವಾಗಿದೆಯೆ ಎಂದು ತಿಳಿಯಲು ಯಾವಾಗಲಾದರೊಮ್ಮೆ ಆರೋಗ್ಯಾಧಿಕಾರಿಗಳು ಪರೀಕ್ಷಿಸಿರುವರೆ? ಹಾಗೆ ಇವು ಬೇಸಗೆಕಾಲದಲ್ಲಿ ಕೆಲಸ ಮಾಡಲು ಯೋಗ್ಯವೆಂದು ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆಯೇ?

ಎ) (ೠ) ಪ್ರಶ್ನೆಯ ಉತ್ತರಾರ್ಧಕ್ಕೆ ಉತ್ತರ 'ಹೌದು' ಎಂದಾದರೆ ಬೇರೆ ಬೇರೆ ಕಛೇರಿಗಳ ಗೆಜೆಟೆಡ್ ಅಧಿಕಾರಿಗಳನ್ನ ಈ ಕೊಠಡಿಗಳಿಗೆ ಸ್ಥಳಾಂತರಿಸಿ ಪ್ರಸ್ತುತ ಇಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಅವರಿಗಾಗಿ ಈ ಮೊದಲೇ ಕಟ್ಟಿರುವ ಕೊಠಡಿಗಳಲ್ಲಿ ಕೆಲಸ ಮಾಡಲು ಏರ್ಪಾಟು ಮಾಡುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು

ಆ) ದಕ್ಷಿಣಕ್ಕೆ ಮುಖಮಾಡಿರುವ ಕೆಲವು ಪರಿವರ್ತಿತ ಕೊಠಡಿಗಳಿಗೆ ಮಧ್ಯಾಹ್ನದ ವೇಳೆ ಬಿಸಿಲು ಬೀಳುವುದು ನಿಜ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೩೮೬

ಇ) ಇಲ್ಲ. ಗಾಜಿನ ಕಿಟಕಿ ಹಾಕಿರುವುದರ ಜೊತೆಗೆ ಪರದೆಗಳ ಅನುಕೂಲ ಮಾಡಿಕೊಡಲಾಗಿದೆ.

ಈ) ಇಲ್ಲ.

ಉ) ಪರಿವರ್ತಿತವಾದ ಈ ಕೊಠಡಿಗಳ ಪೈಕಿ ಅತ್ಯಂತ ಕಿರಿದಾದುವೆಂದರೆ, ೮ ಅಡಿ ೨ ಅಂಗುಲ ಅಗಲವಿರುವಂಥದು. ಅಂಥ ಕೊಠಡಿಗಳ ಸಂಖ್ಯೆ ೩.

ಊ) ಈ ಸಂಬಂಧವಾದ ಮಾಹಿತಿಯನ್ನು ಈಗಾಗಲೇ ಸದನಕ್ಕೆ ಒದಗಿಸಲಾಗಿದೆ.

ಋ) ಇಲ್ಲ.

ೠ) ಹೌದು; ಆರೋಗ್ಯ ಇಲಾಖೆಯ ಅಧಿಕಾರಿಗಳು ಈ ಕೊಠಡಿಗಳನ್ನು ಪರೀಕ್ಷಿಸಿರುವರಾದರೂ ಯಾವ ದೋಷವೂ ಕಂಡುಬಂದಿಲ್ಲ.

ಎ) ಪರಿವರ್ತಿತವಾದ ಕೆಲವು ಕೊಠಡಿಗಳಲ್ಲಿ ಕಳೆದ ಬೇಸಗೆ ಕಾಲದಲ್ಲಿ ಗೆಜೆಟೆಡ್ ಅಧಿಕಾರಿಗಳನ್ನು ಇರಿಸಲಾಗಿತ್ತು.

**ವಿವರ**

| | |
|---|---|
| ಫೆಬ್ರವರಿಯ ಕಡೆಯ ಎರಡು ವಾರಗಳು | ೬೦° ಫ್ಯಾ |
| ಮಾರ್ಚಿ ತಿಂಗಳ ಮೊದಲೆರಡು ವಾರಗಳು | ೭೫° ಫ್ಯಾ |
| ಏಪ್ರಿಲ್ ೧೯೪೨ | ೯೮° ಫ್ಯಾ |
| ಮೇ ೧೯೪೨ | ೧೦೪° ಫ್ಯಾ |
| ಜೂನ್ ೧೯೪೨ | ೧೦೬° ಫ್ಯಾ |
| ಜುಲೈ ೧೯೪೨ | ೯೬° ಫ್ಯಾ |
| ಅಕ್ಟೋಬರ್ ೧೯೪೨ | ೯೦° ಫ್ಯಾ |

## ೭೩
## ನವದೆಹಲಿಯ, ಉತ್ತರ ಬ್ಲಾಕ್ ಸಚಿವಾಲಯದ, ಗುಮಾಸ್ತರ ಶೌಚಾಲಯ ಇತ್ಯಾದಿಗಳಲ್ಲಿ ಬೆಳಕಿನ ಕೊರತೆ*

** **೪೩೨. ಭಾಯ್ ಪರ್ಮಾನಂದ್** : ಅ) ನವದೆಹಲಿಯ ಸಚಿವಾಲಯದ ಉತ್ತರ ಬ್ಲಾಕ್, ಗುಮಾಸ್ತರ ಶೌಚಾಲಯದಲ್ಲಿ, ಅದರಲ್ಲೂ ಮೊದಲನೆಯ ಮಹಡಿಯಲ್ಲಿನ ಶೌಚಾಲಯಗಳಲ್ಲಿ ವಿದ್ಯುತ್ ದೀಪಗಳ ಜೋಡಣೆ ಆಗಿಲ್ಲವೆ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಆ ಕಟ್ಟಡದ ಎಲ್ಲಾ ಅಧಿಕಾರಿಗಳ ಶೌಚಾಲಯಗಳಿಗೆ ವಿದ್ಯುತ್ ದೀಪದ ಏರ್ಪಾಟಾಗಿರುವುದು ನಿಜವೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೮೫–೮೮

** ಈ ಪ್ರಶ್ನೆಗೆ ಉತ್ತರ ಒದಗಿಸಲಾಗಿತ್ತು, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

ಇ) ಕೆಲವು ಗುಮಾಸ್ತರುಗಳು ರಾತ್ರಿ ಬಹಳ ಹೊತ್ತಿನವರೆಗೆ ಕೆಲಸ ಮಾಡುವುದು ನಿಜವೇ?

ಈ) ಕತ್ತಲೆಯಲ್ಲಿ ಈ ಮಂದಿ ಶೌಚಾಲಯಗಳನ್ನು ಉಪಯೋಗಿಸಲಿ ಒಂದು ಅಥವಾ ಕತ್ತಲೆಯಾದ ನಂತರ ಅವರು ಶೌಚಾಲಯಗಳನ್ನೇ ಉಪಯೋಗಿಸಬಾರದು ಎಂಬುದು ಸರ್ಕಾರದ ಉದ್ದೇಶವೋ?

ಉ) ಗುಮಾಸ್ತರುಗಳ ಶೌಚಾಲಯಕ್ಕೆ ಮಾತ್ರ ದೀಪದ ವ್ಯವಸ್ಥೆ ಮಾಡದಿರುವುದಕ್ಕೆ ಕಾರಣವೇನು?

ಊ) ಕೆಲವು ಮಹಡಿಗಳಿಗೆ ಸಾಕಷ್ಟು ಬೆಳಕಿಲ್ಲದಿರುವುದು ನಿಜವೇ? ಕತ್ತಲೆಯಾದ ಬಳಿಕ ಅವುಗಳನ್ನು ಉಪಯೋಗಿಸುವುದಿಲ್ಲವೆ?

ಋ) ಸಚಿವಾಲಯದ ಕಟ್ಟಡಗಳ ಆಸುಪಾಸಿನ ಪ್ರದೇಶವೆಲ್ಲಾ ಪ್ರತಿರಾತ್ರಿ ಹೆಚ್ಚಿನ ದೀಪಗಳಿಂದ ಬೆಳಗುವುದು ವಾಸ್ತವವೆ?

ೠ) (ಋ) ಪ್ರಶ್ನೆಗೆ ಉತ್ತರ ಸಕಾರಾತ್ಮಕವಾಗಿರುವುದಾದರೆ, ಮೇಲೆ ಕಾಣಿಸಿದ ಕಟ್ಟಡಗಳ ಒಳಗೆ, ಮುಖ್ಯ ಮಹಡಿಗಳಲ್ಲಾದರೂ ವಿದ್ಯುದ್ದೀಪಗಳಿಂದ ಬೆಳಕು ಕಾಣಿಸುವುದಿಲ್ಲವೇಕೆ?

ಎ) ಈ ಮಹಡಿಗಳಿಗೆ ಬೆಳಕು ಮೂಡುವುದು ಸಾಧ್ಯವಾಗದ ಪಕ್ಷದಲ್ಲಿ, ಕಛೇರಿಗಳಿಗೆ ಆದೇಶ ನೀಡಿ ಇಲ್ಲಿನ ಸಿಬ್ಬಂದಿಗಳು ಕತ್ತಲಾದ ಮೇಲೆ ಇರಬಾರದೆಂದು ತಿಳಿಸಿದರೆ, ಆಗಲಾದರೂ ಸಿಬ್ಬಂದಿ ವರ್ಗದವರು ಕತ್ತಲಲ್ಲಿ ತಡಕಾಡಿ ಇಳಿಯುವ ಗೋಜು ತಪ್ಪುತ್ತದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಒಂದಷ್ಟು ಬಲ್ಬುಗಳು ಉರಿದುಹೋದದ್ದು ನಿಜವೇ: ಬಲ್ಬುಗಳ ಕೊರತೆಯಿದ್ದದ್ದರಿಂದ ತಕ್ಷಣ ಖಾಲಿ ಜಾಗಕ್ಕೆ ಬಲ್ಬುಗಳನ್ನು ಹಾಕಲಾಗಲಿಲ್ಲ.

(ಆ) ಹೌದು ; ಕೇವಲ ಅಧಿಕಾರಿಗಳ ಶೌಚಾಲಯದಷ್ಟೇ ಅಲ್ಲ, ಎಲ್ಲಾ ಶೌಚಾಲಯಗಳಲ್ಲಿ ವಿದ್ಯುದ್ದೀಪ ಹಾಕಲಾಗಿದೆ.

ಇ) ಹೌದು.

ಈ) ಇಲ್ಲ.

ಉ) ಕೆಲವು ಶೌಚಾಲಯಗಳಿಗೆ ಮಾತ್ರ ವಿದ್ಯುತ್ ಬಲ್ಬುಗಳನ್ನು ಜೋಡಿಸಿದ ಕಾರಣ ಬಲ್ಬುಗಳ ಕೊರತೆಯೇ ಹೊರತು ಬೇರೇನಿಲ್ಲ. ಬಲ್ಬುಗಳನ್ನು Consignment ಇತ್ತೀಚೆಗೆ ಸ್ವೀಕರಿಸಲಾಗಿದ್ದು ಇಷ್ಟರಲ್ಲೇ ಫ್ಯೂಸಾದ ಬಲ್ಬುಗಳನ್ನು ತೆಗೆದುಹಾಕಿ ಹೊಸವನ್ನು ಜೋಡಿಸಲಾಗುವುದು.

ಊ) ವಿದ್ಯುತ್ ಕೊರತೆಯಿದ್ದ ಕಾರಣ ಮಹಡಿ ಮೆಟ್ಟಿಲುಗಳ ವಿದ್ಯುದ್ದೀಪವನ್ನು ಕಡಿಮೆ ಮಾಡಬೇಕಾಯಿತು. ಹಾಗಾಗಿ ಸ್ವಲ್ಪ ಕಡಿಮೆ ದೀಪಗಳನ್ನು ಅಲ್ಲಿ ಬಳಸಲಾಗಿದೆ.

ಋ) ಗೌರವಾನ್ವಿತ ಸದಸ್ಯರು ರಸ್ತೆ ದೀಪಕ್ಕೆ ಸಂಬಂಧಿಸಿದಂತೆ ತಿಳಿಸಿರುವುದೆಂದು ನಾನು ಭಾವಿಸುವೆ. ವಾಹನಗಳ ಪ್ರಮಾಣವನ್ನು ಪರಿಗಣಿಸಿ ಇದಕ್ಕೆ ಸಾಕಷ್ಟು ಬೆಳಕನ್ನು ಒದಗಿಸಲಾಗಿದೆ.

ೠ) ವಿದ್ಯುತ್ತಿನ ಪರಿಸ್ಥಿತಿ ಉತ್ತಮವಾದ ಕೂಡಲೇ ವಿದ್ಯುದ್ದೀಪದ ಪ್ರಮಾಣದಲ್ಲಿ ಹೆಚ್ಚಳವನ್ನು ಮಾಡಲಾಗುವುದು.

ಎ) ಮಹಡಿ ಮೆಟ್ಟಿಲುಗಳಿಗೆ ಸಾಕಷ್ಟು ಬೆಳಕು ನೀಡಲಾಗುವುದರಿಂದ ಇದರ ಪ್ರಮೇಯವುಂಟಾಗದು. ದೊರಕುವ ವಿದ್ಯುತ್ತಿನ ಪ್ರಮಾಣವನ್ನುವಲಂಬಿಸಿ, ಅಗತ್ಯವಿರುವೆಡೆಗಳಲ್ಲೆಲ್ಲ. ಹೆಚ್ಚು ಬೆಳಕು ಇರುವಂತೆ ಮಾಡಲು ಪ್ರಯತ್ನಿಸುತ್ತೇನೆ.

# ೭೪
# ದೆಹಲಿ ಬಾಡಿಗೆ ನಿಯಂತ್ರಣ ಆದೇಶದಲ್ಲಿ ಕಷ್ಟಗಳು *

**೪೭೬. ಸರ್‌ದಾರ್ ಸಂತ್ ಸಿಂಗ್ :** ಅ) 'ಬಾಡಿಗೆ ನಿಯಂತ್ರಣ ಆದೇಶದ' ವಿರುದ್ಧ ದೆಹಲಿ ಮನೆ ಮಾಲೀಕರು ಹಾಗೂ (ಗುತ್ತಿಗೆದಾರರುಗಳ ಅಸೋಸಿಯೇಷನ್) Lessees Associationನವರು ಡಿಸೆಂಬರ್ ತಿಂಗಳಿನಲ್ಲಿ ಕಾರ್ಮಿಕ ಇಲಾಖೆಗೆ ಮನವಿಯೊಂದನ್ನು ಕಳುಹಿಸಿದ್ದುದು ನಿಜವೇ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಿದ್ದಲ್ಲಿ, ಇಲಾಖೆಯವರು ಮನವಿಯನ್ನು ಪರಿಶೀಲಿಸಿರುವರೆ? ಪರಿಶೀಲಿಸಿದ್ದಲ್ಲಿ ಯಾವ ತೀರ್ಮಾನ ತೆಗೆದುಕೊಂಡಿರುತ್ತಾರೆ?

ಆ) 'ಬಾಡಿಗೆ ನಿಯಂತ್ರಣ ಆದೇಶ'ದಿಂದ ಬಹಳ ತೊಂದರೆಯಾಗಿರುವುದು ಗೌರವಾನ್ವಿತ ಸದಸ್ಯರ ಗಮನಕ್ಕೆ ಬಂದಿರುವುದೇ? ಹಾಗಿದ್ದಲ್ಲಿ ಜಾರಿಯಲ್ಲಿರುವ ೧೯೪೧ರ ಪಂಜಾಬ್ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಹಳೆದೆಹಲಿಯಲ್ಲಿ ಅಳವಡಿಸಲು ಸರ್ಕಾರ ಸಿದ್ಧವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು. ಮನವಿಯನ್ನು ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ. ಉತ್ತರಾರ್ಧ ಉದ್ಭವವಾಗುವುದಿಲ್ಲ, ಆದರೂ ಪ್ರಶ್ನೆ ಸಂಖ್ಯೆ ೨೩೧ಕ್ಕೆ ನೀಡಿದ ಉತ್ತರದ (ಇ) ಭಾಗವನ್ನು ಗೌರವಾನ್ವಿತ ಸದಸ್ಯರು ಗಮನಿಸಬೇಕೆಂದು ತಿಳಿಸುತ್ತೇನೆ.

**ಸರ್‌ದಾರ್ ಸಂತ್ ಸಿಂಗ್ :** ಗೌರವಾನ್ವಿತ ಮುಖ್ಯ ಆಯುಕ್ತರು, ದೆಹಲಿ ಇವರು ಇತ್ತೀಚೆಗೆ ಹೊರಡಿಸಿರುವ ತೀರ್ಪನ್ನು ಮಾನ್ಯ ಸದಸ್ಯರು ಗಮನಿಸಿರುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗಮನಿಸಿದ್ದೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೯೦.

# ೭೫
# ಸಂಭಾವ್ಯ ತೈಲಮೂಲಗಳ ಶೋಧನೆ ಹಾಗೂ ವೈಜ್ಞಾನಿಕ ಅನ್ವೇಷಣೆಗೆ ಪರವಾನಗಿ *

**೪೪೧. ಶ್ರೀ ಕೆ.ಸಿ. ನಿಯೋಗಿ :** ಭಾರತದಲ್ಲಿ ತೈಲಮೂಲಗಳ ಶೋಧನೆ ಹಾಗೂ ವೈಜ್ಞಾನಿಕ ಅನ್ವೇಷಣೆಗಾಗಿ ಕೆಲವು ಬ್ರಿಟಿಷ್ ಹಾಗೂ ಅಮೆರಿಕದ ಕಂಪನಿಗಳಿಗೆ ರಹದಾರಿ ನೀಡಿರುವುದು ನಿಜವೆಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಿದ್ದ ಪಕ್ಷದಲ್ಲಿ ಯಾವ ಕಂಪನಿಯವರಿಗೆ ಈ ರೀತಿ ರಹದಾರಿ ನೀಡಲಾಗಿದೆ, ಹಾಗೂ ವಿಧಿಸಿರುವ ಷರತ್ತುಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕೇಂದ್ರೀಯ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳನ್ನುಳಿದು ಮೇಲೆ ಹೆಸರಿಸಿದ ರಹದಾರಿಗಳನ್ನು ಪ್ರಾದೇಶಿಕ ಸರ್ಕಾರಗಳೇ ನೀಡಿವೆ. ಪ್ರಾದೇಶಿಕ ಸರ್ಕಾರಗಳು ರಹದಾರಿಗಳನ್ನು ನೀಡಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯಾವುದೇ ಬಗೆಯ ಮಾಹಿತಿ ಇಲ್ಲ. ಕೇಂದ್ರೀಯ ಆಡಳಿತ ಪ್ರದೇಶಗಳಲ್ಲಿ ಆ ತರಹದ ಯಾವುದೇ ರಹದಾರಿಯನ್ನು ನೀಡಿಲ್ಲ.

ಈ ಕಾರಣದಿಂದ ಪ್ರಶ್ನೆಯ ಎರಡನೆಯ ಭಾಗ ಉದ್ಭವವಾಗುವುದೇ ಇಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಭೂಗರ್ಭ ಸರ್ವೇಕ್ಷಣ ಇಲಾಖೆಯು ಇತ್ತೀಚೆಗೆ ಬಳಕೆ ಉಸ್ತುವಾರಿ ಶಾಖೆಯನ್ನು ತೆರೆದಿರುವ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಖನಿಜಗಳ ಶೋಧನೆಯ ಬಗ್ಗೆ ಪ್ರಾದೇಶಿಕ ಸರ್ಕಾರಗಳು ರಹದಾರಿ ನೀಡುವ ವಿಷಯದಬಗ್ಗೆ ಭಾರತ ಸರ್ಕಾರವು ಮಾಹಿತಿಯನ್ನು ಪಡೆಯುವುಯ ಸೂಕ್ತವೆಂದು ತೋರುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿ.

**ಶ್ರೀ ಕೆ.ಸಿ. ನಿಯೋಗಿ :** ಭಾರತ ಸರ್ಕಾರಕ್ಕೆ ಲಭ್ಯವಾದ ಮಾಹಿತಿಯ ಪ್ರಕಾರ, ಅದರಲ್ಲೂ ಭೂಗರ್ಭ ಸರ್ವೇಕ್ಷಣ ಇಲಾಖೆಯಿಂದ ಬಂದಿರುವ ಮಾಹಿತಿಯ ಪ್ರಕಾರ ಯಾವುದೇ ರಹದಾರಿಯನ್ನು ಪ್ರಾದೇಶಿಕ ಸರ್ಕಾರ ನೀಡಿಲ್ಲವೆಂದು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸದ್ಯಕ್ಕೆ ನಮ್ಮಲ್ಲಿ ಯಾವುದೇ ಮಾಹಿತಿ ಇಲ್ಲ. ನಮ್ಮ ಗೌರವಾನ್ವಿತ ಸ್ನೇಹಿತರು ಬಯಸುವುದಾದರೆ ಅದನ್ನು ನಾನು ಕೊಡಬಲ್ಲೆ.

**ಶ್ರೀ ಕೆ.ಸಿ. ನಿಯೋಗಿ :** ವಿಜ್ಞಾನದ ನಿಯತಕಾಲಿಕೆಯೊಂದರ ಪ್ರಕಾರ ಖನಿಜಗಳಿಗೆ ಸಂಬಂಧಿಸಿದಂತೆ ಬ್ರಿಟಿಷ್ ಹಾಗೂ ಅಮೆರಿಕದ ಕಂಪನಿಗಳಿಗೆ ರಹದಾರಿ ನೀಡಲಾಗಿದೆಯೆಂದು ನನಗೆ ತಿಳಿದು ಬಂದಿದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಮ್ಮ ಗೌರವಾನ್ವಿತ ಮಿತ್ರರು ಮಾಹಿತಿಯನ್ನು ಅಪೇಕ್ಷಿಸಿದರೆ ಸಂಗ್ರಹಿಸಿ ನಾನು ಕೊಡಬಲ್ಲೆ.

**ಶ್ರೀ ಕೆ.ಸಿ. ನಿಯೋಗಿ :** ವಂದನೆಗಳು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೯೦.

## ೭೬
## ನವದೆಹಲಿಯಲ್ಲಿ ಸಾಂಪ್ರದಾಯಿಕ ವಸತಿಗೃಹಗಳ ಎದುರಿಗೆ 'ಹೆಚ್ಚು ಆಹಾರ ಬೆಳೆಯಿರಿ' ಚಳವಳಿಗೆ ಅನುಗುಣವಾಗಿ ಸಾಂಪ್ರದಾಯಿಕ ವಸತಿ ನಿಲಯಗಳ ಕಾಂಪೌಂಡುಗಳ ಮಧ್ಯೆ ಗೋಡೆ ಹಾಕುವ ಅಗತ್ಯತೆಯ ಬಗೆಗೆ*

**೪೪೪. ಹಾಜಿ ಚೌಧುರಿ ಮುಹಮ್ಮದ್ ಇಸ್ಮಾಯಿಲ್ ಖಾನ್ :** ಹೆಚ್ಚು ಆಹಾರ ಬೆಳೆಯಿರೆಂದು ಸರ್ಕಾರ ಮಾಡಿರುವ ಪ್ರಚಾರದ ಹಿನ್ನೆಲೆಯಲ್ಲಿ ದೆಹಲಿಯಲ್ಲಿನ ಎ ಹಾಗೂ ಸಿ ಮಾದರಿಯ ಸಾಂಪ್ರದಾಯಿಕ ವಸತಿಮನೆಗಳ ಮಧ್ಯೆ ಬೇಲಿ ಹಾಕಬೇಕಾದ ಅಗತ್ಯತೆಯನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ಮನಗಂಡಿರುವರೆ? ಇಲ್ಲವಾದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಸತಿಮನೆಗಳಲ್ಲಿ ವಾಸಮಾಡುತ್ತಿರುವವರು ಇದುವರೆಗೆ ಸಾಮಾನ್ಯ ಬೇಡಿಕೆಯನ್ನೇನೂ ಸಲ್ಲಿಸಿಲ್ಲ, ಈ ಬಾಡಿಗೆದಾರರು ಸ್ಪಷ್ಟವಾದ ಸಲಹೆಗಳನ್ನು ಮುಂದಿಡುವುದಾದರೆ ನಾನು ಅವನ್ನು ಪರಿಗಣಿಸುವುದಕ್ಕೆ ಸಿದ್ಧನಿದ್ದೇನೆ.

## ೭೭
## ಹೊಸ ಪ್ರದೇಶದಲ್ಲಿರುವ ಸರ್ಕಾರಿ ಸೇವಕರು ನವದೆಹಲಿಯ ಹಳೆಯ ಪ್ರದೇಶದಲ್ಲಿ ವಸತಿಮನೆಗಳಿಗಾಗಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡುವ ಅಗತ್ಯತೆ **

**೮೯. ಶ್ರೀ ಅಮರೇಂದ್ರನಾಥ್ ಚಟ್ಟೋಪಾಧ್ಯಾಯ :** ಅ) ಗೌರವಾನ್ವಿತ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳನ್ನು ಗಮನಿಸಿರುವರೆ :

i) ವರ್ಗೀಕರಣ ನಿಯಮದ ಪ್ರಕಾರ ಭಾರತ ಸರ್ಕಾರದ ಕಛೇರಿ ಸಿಬ್ಬಂದಿಗಳಿಗೆ ನೀಡುವ ನವದೆಹಲಿಯ ವಸತಿಮನೆಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

(ಎ) ಹಳೆ ಪ್ರದೇಶ (ಸಚಿವಾಲಯದ ಹತ್ತಿರ) ಹಾಗೂ (ಬಿ) ಹೊಸ ಪ್ರದೇಶ (ಮಿಂಟೊ ರಸ್ತೆಯ ಬಾಜು);

(ii) ಯಾವುದೇ ಒಂದು ವರ್ಗಕ್ಕೆ ಸೇರಿದ ವಸತಿಮನೆಗಳನ್ನು ಖಾಲಿಮಾಡಿ ಅದಕ್ಕಿಂತ ಉತ್ತಮವರ್ಗಕ್ಕೆ ಸೇರಿದ ವಸತಿ ಮನೆಗೆ ಸಿಬ್ಬಂದಿ ಹೋಗುವ ಸಂದರ್ಭದಲ್ಲಿ ಅವರು ಕಡೆಯ ಪಕ್ಷ ಒಂದು ವರ್ಷಕಾಲವಾದರೂ ಹೊಸ ಪ್ರದೇಶದಲ್ಲಿ ವಾಸ ಮಾಡಿದ ನಂತರವೇ ಹಳೇ ಪ್ರದೇಶದಲ್ಲಿ ಅವರಿಗೆ ವಸತಿಮನೆ ಹಂಚಿಕೆಯಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೫೫

** ಅದೇ.

(iii) ಭಾರತ ಸರ್ಕಾರ ಇತ್ತೀಚೆಗೆ ಕಾನೂನು ಹೊರಡಿಸಿ ಸ್ವಾಧೀನಾಧಿಕಾರವನ್ನು ಹೊಂದಿರುವ ವ್ಯಕ್ತಿಗಳು ಅದೇ ವರ್ಗದ ಮನೆಗಳನ್ನು ಕೋರುವುದನ್ನು ನಿರಾಕರಿಸಿದೆ;

(iv) ಈ ಮೇಲೆ ಕಾಣಿಸಿದ ಹೊಸ ಕಾನೂನಿನ ಪ್ರಕಾರ ಹೊಸದಾಗಿ ಅರ್ಜಿ ಸಲ್ಲಿಸುವವರು ಹಳೆ ಪ್ರದೇಶದಲ್ಲಿ ವಸತಿಮನೆಗಳನ್ನು ಹೊಂದಲು ಅರ್ಹರಾಗುತ್ತಾರೆ. ಆದರೆ ಬಹಳ ಕಾಲದಿಂದ ಹೊಸ ಪ್ರದೇಶದಲ್ಲಿ ವಾಸಮಾಡುತ್ತಿರುವವರು ಹಾಗೂ ನಿರೀಕ್ಷಣಾಯಾದಿಯಲ್ಲಿ ಆಗಲೇ ಹೆಸರು ನೋಂದಾಯಿಸಿರುವವರು ಈ ಅವಕಾಶದಿಂದ ವಂಚಿತರಾಗಿದ್ದಾರೆ;

(v) ಇಂಪೀರಿಯಲ್ ಸೆಕ್ರೆಟೇರಿಯಲ್ ಸಂಘ, ಅಟ್ಯಾಚ್ಡ್ ಆಫೀಸಸ್ ಸಂಘ, ಹಾಗೂ ಸಾಮಾನ್ಯ ಕೇಂದ್ರ ಕಛೇರಿ ಸಂಘ – ಈ ಯಾವ ಸಂಘದೊಡನೆಯೂ ಚರ್ಚಿಸದೆ ಭಾರತ ಸರ್ಕಾರ ಹೊಸ ಕಾನೂನುಗಳನ್ನು ರಚಿಸಿರುವುದು ಚೋದ್ಯವಾಗಿದೆ;

(vi) ಹೊಸ ಪ್ರದೇಶದಲ್ಲಿ ವಾಸಮಾಡುತ್ತಿರುವ ಮಂದಿ ಕಛೇರಿಗೆ ಬರುವಾಗ ಮತ್ತು ವಾಪಸ್ಸು ಹೋಗುವಾಗ ಬಸ್ಸು ಅಥವಾ ಜಟಕಾಗಾಡಿಗೆ ಒಬ್ಬರಿಗೆ ಕಡೆಯ ಪಕ್ಷ ಆರು ಆಣೆಯನ್ನಾದರೂ ಚಾರ್ಜಿನ ರೂಪದಲ್ಲಿ ತೆರಬೇಕಾಗುತ್ತದೆ; ಹಾಗೂ

(vii) ಹೊಸ ಪ್ರದೇಶದಲ್ಲಿ ವಾಸಮಾಡುತ್ತಿರುವ ಸಿಬ್ಬಂದಿಯವರು ಸಾರಿಗೆ ಭತ್ಯವಾಗಿ ಏನನ್ನೂ ಪಡೆಯುತ್ತಿಲ್ಲ.

(ಆ) (ಅ) ಯಿಂದ (vii)ರ ತನಕ ಉತ್ತರ ಸಕಾರಾತ್ಮಕವಾದರೆ, ಈ ತೊಂದರೆಯನ್ನು ನಿವಾರಿಸಿ ಹೊಸ ಪ್ರದೇಶ (ಮಿಂಟೋ ರಸ್ತೆವಲಯ)ದಲ್ಲಿ ವಾಸಮಾಡುತ್ತಿರುವವರು ಹಳೆ ಪ್ರದೇಶದ ಮನೆಗಳಿಗಾಗಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) (i) ಮತ್ತು (ii) ಇಲ್ಲ.

(iii) ಹೌದು.

(iv) ಸಾಂಪ್ರದಾಯಕ 'ಸಿ' ಮಾದರಿ ಸಂಯುಕ್ತ ವಸತಿಮನೆಗಳ ವಿಚಾರದಲ್ಲಿ ಮಾತ್ರ ಬದಲಾವಣೆಗೆ ಅವಕಾಶವಿದೆಯೇ ಹೊರತು ಹೊಸ ಕಾನೂನಿನ ರೀತ್ಯಾ ವಸತಿ ಮನೆ ಬದಲಾಯಿಸಲು ಅವಕಾಶವಿಲ್ಲ; ಆದರೆ,

(ಅ) (i) ಗೆ ನೀಡಿದ ಉತ್ತರದಲ್ಲಿ ಸ್ಪಷ್ಟಪಡಿಸಿರುವಂತೆ ವಸತಿ ಮನೆಗಳನ್ನು ಪ್ರದೇಶವಾರು ವಿಂಗಡಣೆ ಮಾಡಿಲ್ಲ.

(v) ಹೌದು.

(vi) ಮಾನ್ಯ ಸದಸ್ಯರಿಂದ ನಾನು ಈ ಅಂಶವನ್ನು ಸ್ವೀಕರಿಸಬಲ್ಲೆ.

(vii) ಯಾವುದೇ ವಸತಿಮನೆಗಳ ಬಾಡಿಗೆದಾರರಿಗೆ ಯಾವುದೇ ರೀತಿಯ ಸಾರಿಗೆ ಭತ್ಯವನ್ನು ನೀಡಲಾಗದು.

(ಆ) ಈ ವಿಷಯವನ್ನು ಪರಿಗಣಿಸಲು ನಾನು ಸಿದ್ಧಸಿದ್ದೇನೆ.

# ೭೮
# ಕೆಲವು ಖನಿಜಗಳ ವಿಚಾರದಲ್ಲಿ ಭಾರತ ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ವಿಧಾನ ಶಾಖೆಯ ಕಾರ್ಯಭಾರ ಕುರಿತು*

೯೨. **ಶ್ರೀ ಕೆ.ಸಿ. ನಿಯೋಗಿ :** ಸೀಸ, ಗಂಧಕ, ಟಂಗ್‌ಸ್ಟನ್ ದೊರೆಯುವ ತವರ, ತಗಡು, ತಾಮ್ರ ಹಾಗೂ ಖನಿಜ ಜಲದ ವಿಷಯದಲ್ಲಿ ಭಾರತ ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ಶಾಖೆಯು ಕಾರ್ಯಪ್ರವೃತ್ತವಾಗಿದ್ದು ಅದರ ಪ್ರಗತಿಯನ್ನು ತೋರಿಸುವ ವಿವರವನ್ನು ಗೌರವಾನ್ವಿತ ಸದಸ್ಯರು ನೀಡುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದಕ್ಕೆ ಸಂಬಂಧಿಸಿದ ವಿವರವನ್ನು ಈಗಾಗಲೇ ನೀಡಲಾಗಿದೆ.

**ಹೇಳಿಕೆ**

೧. **ಸೀಸ** – ೧೯೪೧–೪೨ರಲ್ಲಿ ಭೂಗರ್ಭ ಸರ್ವೇಕ್ಷಣ ಇಲಾಖೆಯು ರಾಜಪುಟಾಣದಲ್ಲಿ ಬಹಳ ಕಾಲದಿಂದ ಕೊಳೆಬಿಟ್ಟಿದ್ದ (ಅಲಕ್ಷಿಸಿದ್ದ) ಸೀಸ–ಸತು ಅದಿರುಗಣಿಗಳ ಸೂಕ್ಷ್ಮಪರೀಕ್ಷೆಯನ್ನು ನಡೆಸಿತು. ಉದಯಪುರ ರಾಜ್ಯದಲ್ಲಿನ ಜವರ್ ಎಂಬಲ್ಲಿನ ಗಣಿಗಳಲ್ಲಿ ಸೀಸ–ಸತುವಿನ ಪ್ರಮಾಣ ಅತಿ ಹೆಚ್ಚು ಇತ್ತೆಂದು ತಿಳಿದುಬರುವುದಾದರೂ ಸುಮಾರು ೧೦೦ ವರ್ಷಗಳಿಂದ ಅಲ್ಲಿ ಕೆಲಸ ನಿಂತುಹೋಗಿದೆ, ಗಣಿಗಳು ಮೂಲೆಗುಂಪಾಗಿವೆ. ವಾಣಿಜ್ಯ ಕಂಪನಿಯೊಂದಕ್ಕೆ ಮೇವಾರ್ ರಾಜ್ಯವು ಇವುಗಳನ್ನು ಗುತ್ತಿಗೆಗೆ ಕೊಟ್ಟಿದ್ದರಿಂದ ಈ ರಾಜ್ಯಕ್ಕೆ ಖನಿಜ ಹಕ್ಕು ಸೇರತಕ್ಕದ್ದು. ತನ್ನ ಗುತ್ತಿಗೆಯವಧಿಯಲ್ಲಿ ಈ ಕಂಪನಿ ಶೀಘ್ರವಾಗಿ ಅನುಕೂಲ ಪಡೆದುಕೊಳ್ಳಲು ಸಮರ್ಥವಾಗದ ಕಾರಣ (ಸಮರ ಕಾಲದ ಪ್ರಯತ್ನಗಳಿಗೆ ಸಹಾಯಮಾಡಲು ಶೀಘ್ರವಾಗಿ ಪರಿಶೋಧನೆ ನಡೆಸಬೇಕಾದದ್ದು ಅತ್ಯಗತ್ಯವಾಗಿದೆ) ಅವರ ಹಕ್ಕುಗಳನ್ನು ಸರ್ಕಾರವೇ ಕೊಂಡುಕೊಳ್ಳಲು ತೀರ್ಮಾನಿಸಿತು; ಅವರು ರಾಜ್ಯ ಸರ್ಕಾರದಿಂದ ಗುತ್ತಿಗೆ ಪಡೆಯಲು ಅವಕಾಶ ಮಾಡಿಕೊಳ್ಳಲಾಯಿತು. (ವಾಣಿಜ್ಯ ಕಂಪನಿಗೆ ಸೂಕ್ತವಾದ ಪರಿಹಾರವನ್ನು ನೀಡಿ) ಸರ್ಕಾರವು ಮೇವಾರ ರಾಜ್ಯದಿಂದ ದಕ್ಕಿದ ಗುತ್ತಿಗೆಯ ಸಹಾಯದಿಂದ ಶೋಧನೆಯನ್ನು ಪ್ರಾರಂಭಮಾಡಿ ಮುಂದುವರಿಸುತ್ತಿದೆ. ೧೯೪೨ರ ಮೇ ತಿಂಗಳ ಕೊನೆಯ ಭಾಗದಲ್ಲಿ ಕಾರ್ಯ ಪ್ರಾರಂಭವಾಗಿದೆ. ಎರಡು ಹಂತಗಳಲ್ಲಿ ಯೋಜನೆಯನ್ನು ಹಾಕಿಕೊಳ್ಳಲಾಗಿದೆ – (೧) ವಿವರವಾದ ಮೋಜಿಣಿ ಸಲಕರಣೆಯ ಮೂಲಕ ವಿವರವಾದ ಸರ್ವೇಕ್ಷಣ, ಅದರ ನಂತರ ೨) ನಿಕ್ಷೇಪಗಳನ್ನು ಪತ್ತೆ ಹಚ್ಚಿ ಅದಿರನ್ನು ಸಂಸ್ಕರಿಸುವುದಕ್ಕಾಗಿ ನಡೆಸಲಾದ ಗಣಿ ಕೊರೆಯುವ ಕೆಲಸ ಮುಗಿದ ಮೇಲೆ ಲೋಹದ ಅದಿರಿನ ಎಳೆಗಳ ಕಾರ್ಯಕ್ಷಮತೆಯನ್ನು ಹಿಂದೆ ಕೆಲಸ ನಡೆಯುತ್ತಿದ್ದ ಗಣಿಗಳಿಗೆ ನಾಲ್ಕು ಹಾದಿಗಳನ್ನು ಕೊರೆಯಲಾಗುತ್ತಿದೆ. ಇಂತಹ ಒಂದು ಕೊರತದಿಂದಾಗಿ ಸೀಸ–ಸತುಗಳ ಅದುರಿನ ಎಳೆಗಳು ಕಂಡುಬಂದಿವೆ ಆದರೆ ಈ ಲೋಗಳು ಅಪೇಕ್ಷಿತ ಪ್ರಮಾಣದಲ್ಲಿರಲಾದೆಂಬ ಅನುಮಾನವಿದೆ. ಇನ್ನೊಂದು ಕೊರೆತದಿಂದ ಸಮೃದ್ಧವಾದ ಅದಿರು ದೊರಕುವ ಸೂಚನೆಗಳು ದೊರೆಯುತ್ತವೆ. ಇನ್ನೆರಡು ಕೊರೆತಗಳಿಗೆ ಇನ್ನು ದಾರಿ ಸಿಕ್ಕಬೇಕಾಗಿದೆ. ಯಂತ್ರಗಳು ಅಲಭ್ಯವಾದದ್ದನ್ನು ಗಮನಿಸಿದರೆ ಈಗ ಸಾಧಿಸಿರುವ ಪ್ರಗತಿ ತೃಪ್ತಿಕರವಾದದ್ದೆಂದೇ ಹೇಳಬೇಕು. ಪ್ರಸ್ತುತ ನಾಲ್ಕು ಕೊರೆತಗಳಲ್ಲಿ ಸಮೃದ್ಧವಾದ ಸೀಸದ ಅದಿರು ಇದೆಯೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಆರಂಭಿಕ ಪ್ರಯೋಗಗಳು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೦ನೇ ಮಾರ್ಚ್ ೧೯೪೩, ಪು. ೧೫೯೬–೯೮.

ಇವಾಗಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯ ಪ್ರವೃತ್ತವಾಗದ ಹೊರತು ಲಭ್ಯವಿರುವ ಅದಿರಿನ ಪ್ರಮಾಣವೇನೆಂದು ಈಗಲೇ ಹೇಳುವುದು ಕಷ್ಟವಾಗುತ್ತದೆ. ಶಾಂತಿಕಾಲದ ಪರಿಸ್ಥಿತಿಗನುಗುಣವಾಗಿ ವರ್ತಮಾನದ ಪ್ರಗತಿಯನ್ನು ಅವಲಂಬಿಸಿ ಹೇಳುವುದಾದರೆ ಇನ್ನೆರಡು ವರ್ಷಗಳ ಬೆಳವಣಿಗೆಯನ್ನು ಗಮನಿಸಿ ನಂತರ ಅಗತ್ಯವಾದ ಸ್ಥಾವರದ ಬಗ್ಗೆ ತೀರ್ಮಾನ ಕೈಗೊಳ್ಳಬಹುದು. ಸಮರಕಾಲದ ಪ್ರಯತ್ನಗಳಿಗೆ ಅನುಗುಣವಾಗಿ ಭಾರತ ಸರ್ಕಾರವು ಅತಿ ಶೀಘ್ರವಾಗಿ ಉತ್ಪಾದನೆ ಕೈಗೊಳ್ಳಲು ಕಾತರವಾಗಿದೆ. ಅದಿರಿನ ಗುಣವನ್ನು ಇನ್ನೊಂದು ಮೂರು ತಿಂಗಳ ಅವಧಿಯಲ್ಲಿ ಅಂದಾಜು ಮಾಡಲು ಸಾಧ್ಯವಾಗಬಹುದೆಂದು ಲೆಕ್ಕಹಾಕಲಾಗಿದೆ. ಈ ಅವಧಿಯ ಕೊನೆಯ ವೇಳೆಗೆ ಲಾಭದಾಯಕವಾಗಿ ಅದಿರಿನ ಪತ್ತೆಯಾದ ಪಕ್ಷದಲ್ಲಿ ಪರಿಷ್ಕರಣ ಯಂತ್ರವನ್ನು ಪಡೆದು ಸ್ಥಾಪಿಸಲು ಸರ್ಕಾರವು ಕ್ರಮಕೈಗೊಳ್ಳುವುದು.

**೨. ಗಂಧಕ :** ಯುದ್ಧ ಪ್ರಾರಂಭವಾಗುತ್ತಿದ್ದ ಹಾಗೆಯೇ ಭಾರತ ಭೂಗರ್ಭ ಸರ್ವೇಕ್ಷಣ ಇಲಾಖೆಯು ಸಮರದ ಉದ್ದೇಶಗಳಿಗೆ ಅಗತ್ಯವಾದ ಖನಿಜಗಳನ್ನು ಅದರಲ್ಲೂ ಗಂಧಕವನ್ನು ಶೋಧಿಸುವ ಕಾರ್ಯಕ್ಕೆ ಹೆಚ್ಚಿನ ಗಮನಕೊಡಲುತೊಡಗಿತು. ಬೆಲೂಚಿಸ್ತಾನದ ಕೊಹ್–ಇ–ಸುಲ್ತಾನ್ ಎಂಬಲ್ಲಿನ ಒಂದು ನಿರ್ಜೀವ ಅಗ್ನಿಪರ್ವತದ ಬಾಯಿಯಲ್ಲಿ ಗಂಧಕ ಹೆಚ್ಚಿನ ಪ್ರಮಾಣದಲ್ಲಿರುವುದಾಗಿ ತಿಳಿದುಬಂದಿದೆ. ಸರಬರಾಜು ಇಲಾಖೆಯ ಆಡಳಿತಕ್ಕೆ ಒಳಪಡಿಸಿ ಆಯ್ದ ಸ್ಥಳಗಳ ಮತ್ತು ನಿಕ್ಷೇಪದ ಪರೀಕ್ಷೆಯನ್ನು ನಡೆಸಲಾಗಿದ್ದು ಸದರಿ ಇಲಾಖೆಯು ವಿಶೇಷ ಅಧಿಕಾರಿಗಳೊಬ್ಬರ ನೇತೃತ್ವದಲ್ಲಿ ಒಂದು ಸಣ್ಣ ವಿಭಾಗವನ್ನು ತೆರೆಯಲಾಗಿದೆ. ಮೊದಲು ಯೋಜಿಸಿದ್ದಕ್ಕೆ ಬದಲಾಗಿ ಹೆಚ್ಚಿನ ತಾಂತ್ರಿಕ ಯೋಜನೆಯ ಆಧಾರದ ಮೇಲೆ ಗಣಿಗಾರಿಕೆಯನ್ನು ನಡೆಸಬೇಕೆಂದು ತಿಳಿಸಲಾಯಿತು; ಭೂಗರ್ಭ ಸರ್ವೇಕ್ಷಣ ಇಲಾಖೆಯ ಬಳಕೆ ಶಾಖೆಯು ಅಸ್ತಿತ್ವಕ್ಕೆ ಬಂದ ಕಾರಣದಿಂದ ಗಣಿಗಾರಿಕೆಯನ್ನು ಅದಕ್ಕೆ ವಹಿಸುವುದು ಸೂಕ್ತವೆಂದು ಕಂಡುಬಂದಿತು, ಹಾಗಾಗಿ ಆ ಕೆಲಸವನ್ನು ಆ ಶಾಖೆಗೇ ವಹಿಸಿಕೊಡಲಾಗಿದೆ. ಕೋಹ್–ಇ–ಸುಲ್ತಾನ್‌ನಲ್ಲಿ ಎರಡು ಕಾರ್ಯಪ್ರವೃತ್ತವಾಗಬಹುದಾದ ಕ್ಷೇತ್ರಗಳಿವೆ– (i) ಮಿರಿ–ಇದು ಎತ್ತರದಲ್ಲಿರುವ ಕಾರಣ ಏರುವುದು ಕಷ್ಟವಾಗಿದೆ, ಹಾಗಾಗಿ ಇನ್ನೂ ಇಲ್ಲಿ ಕೆಲಸ ಆರಂಭವಾಗಿಲ್ಲ; ಹಾಗೂ (ii)) ಬಟಾಲ್ – ಈಗ ಕಾರ್ಯಾರಂಭ ಮಾಡಿರುವ ನಿಕ್ಷೇಪ +೫೦ ಪ್ರತಿಶತ ಅಂದಾಜನ್ನು ಗಮನಿಸಿ ಭಾರತ ಉದ್ದಿಮೆಗಳಿಗೆ ಗಂಧಕದ ಅದಿರನ್ನು ಸರಬರಾಜು ಮಾಡಲಾಗಿದೆ. +೫೦ ಅದಿರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಬಟಾಲದ ನಿಕ್ಷೇಪ ಬರಿದಾಗುತ್ತಿರುವಂತೆ ತೋರುತ್ತದೆ, ಕಡಿಮೆ ಗುಣಮಟ್ಟದ ಅದಿರು ಅಲ್ಪ ಸ್ವಲ್ಪ ಇದೆಯಾದರೂ ಬಳಕೆ ಶಾಖೆಯವರು ಮಿರಿ ನಿಕ್ಷೇಪವನ್ನು ತೆರೆಯುವ ಬಗೆಗೆ ಪರಿಶೀಲನೆ ನಡೆಸುತ್ತಿದ್ದಾರೆ. ಬಟಲಾಕ್ಕಿಂತ ಮಿರಿಯಲ್ಲಿನ ಅದಿರಿನ ಪ್ರಮಾಣ ಹೆಚ್ಚು ಸಮೃದ್ಧವಿರುವ ಸಾಧ್ಯತೆ ಇದೆಯಾದರೂ ಅಲ್ಲಿಂದ ಅದಿರನ್ನು ಸಾಗಿಸುವುದರಲ್ಲಿ ತುಂಬಾ ತೊಡಕಿರುವುದು ಗಮನಕ್ಕೆ ಬಂದಿದೆ. ಕೋಹ್–ಇ–ಸುಲ್ತಾನದ, ಅದರಲ್ಲೂ ವಿಶೇಷವಾಗಿ ಮಿರಿ ಹತ್ತಿರದ ಹವಾಗುಣ ತೀರಾ ದುಸ್ತರವಾಗಿರುತ್ತದೆ; ಚಳಿಗಾಲ ಅತಿಯಾದ ಚಳಿ ಹಾಗೆಯೇ ಬೇಸಗೆಯಲ್ಲಿ ಅತಿಯಾದ ಉಷ್ಣತೆ ಇದ್ದು ಹಾಗೂ ರಭಸದ ಗಾಳಿ ಬೀಸುತ್ತಿರುತ್ತದೆ. ಇದೇ ಕಾರಣಕ್ಕಾಗಿ ಕೆಲಸಗಾರರು ಸಿಕ್ಕುವುದು ದುರ್ಲಭವಾಗುತ್ತದೆ. ಮಿರಿ ಎತ್ತರದಲ್ಲಿರುವ ಕಾರಣ ಅಲ್ಲಿಂದ ಕೆಳಕ್ಕೆ ಅದಿರನ್ನು ಸಾಗಿಸುವುದು ಕಷ್ಟದ ಕೆಲಸವಾದರೂ, ಈ ಸಮಸ್ಯೆಯನ್ನು ಬಗೆಹರಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಇಲ್ಲಿಯತನಕ +೫೦ ಪ್ರತಿಶತ, ಗಂಧಕ ಅದಿರನ್ನು ತೆಗೆಯಲಾಗುತ್ತಿದೆ. ಬಳಕೆ ಶಾಖೆಯವರು ಕಡಿಮೆ ಗುಣಮಟ್ಟದ ಅದಿರನ್ನು ತೆಗೆಯುವ ಸಾಧ್ಯತೆಯನ್ನು ಪರಿಶೀಲಿಸುತ್ತಿದ್ದು ಕೋಹ್–ಇ–ಸುಲ್ತಾನ್ ಬಳಿ ಅದನ್ನು ತೊಳೆದು ಗುಣಮಟ್ಟವನ್ನು ಉತ್ತಮಪಡಿಸುವ ಯೋಜನೆಯ ಹಾಕಿಕೊಳ್ಳುತ್ತಿದ್ದಾರೆ.

ಕಲತ್ ರಾಜ್ಯದ ಸನ್ನಿ ಸಮೀಪ ಕೆಲವು ಹಳೆಯ ಗಂಧಕದ ಗಣಿಗಳನ್ನು ತೆರೆಯುವಲ್ಲಿ ಸಹ ಬಳಕೆ ಶಾಖೆಯವರು ಪ್ರಯತ್ನ ನಡೆಸುತ್ತಿದ್ದಾರೆ. ಪ್ರಸ್ತುತ ರಂಧ್ರ ಕೊರೆಯುವ ಕೆಲಸ ಪ್ರಾರಂಭಿಸಲಾಗಿದೆ.

**೩. ವೋಲ್‌ಫಾರ್ಮ್ (ಟಂಗ್‌ಸ್ಟನ್) :** ಎರಡು ನಿಕ್ಷೇಪಗಳನ್ನು ಬಳಕೆ ಶಾಖೆಯು ಶೋಧಿಸುತ್ತಿದೆ. ಒಂದು ಬಂಗಾಳದ ಬಂಕೂರ ಜಿಲ್ಲೆಯಲ್ಲಿ, ಇನ್ನೊಂದು ವೋಲ್‌ಫಾರ್ಮ್ ನಾಗಪುರ್ ಜಿಲ್ಲೆಯಲ್ಲಿ. ಮೊದಲಿನ ನಿಕ್ಷೇಪದಿಂದ ಸ್ವಲ್ಪ ಪ್ರಮಾಣದ ವೋಲ್‌ಫಾರ್ಮ್‌ನ್ನು ಹೊರತೆಗೆದು ಸರಬರಾಜು ಇಲಾಖೆಗೆ ಕಳುಹಿಸಿಕೊಡಲಾಗಿದೆ. ಸಾಮಾನ್ಯವಾಗಿ ಬಂಡೆಯ ಪದರದಲ್ಲಿ ಕಂಡುಬರುವುದರಿಂದ ಈ ನಿಕ್ಷೇಪದಿಂದ ತೆಗೆದ ಅದಿರು ವಿಶೇಷವಾಗಿ ಆಕರ್ಷಣೀಯವಾಗಿರುವುದಿಲ್ಲ. ಹಳೆಯ ಕಡಿಮೆ ಗುಣಮಟ್ಟದ ಅದಿರು ಅಲ್ಲಿ ಇಲ್ಲಿ ಹುರಿದಂತೆ, ಆದರೆ ಸಾಕಷ್ಟು ಪ್ರಮಾಣದಲ್ಲಿ ದೊರೆತಿರುವ ಕಾರಣ ಯಂತ್ರವನ್ನು ಸ್ಥಾಪಿಸುವ ಅಗತ್ಯತೆಯನ್ನು ಈಗ ಪರಿಗಣಿಸಲಾಗುತ್ತಿದೆ. ಬಂಗಾಳದಲ್ಲಿರುವುದಕ್ಕಿಂತ ಕಡಿಮೆ ಪ್ರಮಾಣದ ನಿಕ್ಷೇಪವನ್ನು ನಾವು ಕೇಂದ್ರೀಯ ಪ್ರಾಂತ್ಯಗಳಲ್ಲಿ ಕಾಣಬಹುದಾಗಿದೆ. ಯುದ್ಧೋದ್ದೇಶಗಳಿಗೆ ವೋಲ್‌ಫಾರ್ಮ್‌ನ ಅಗತ್ಯ ಹೆಚ್ಚಿಗೆ ಇರುವ ಕಾರಣ ಈ ನಿಕ್ಷೇಪಗಳನ್ನು ಪರಿಶೋಧಿಸಿ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಹೊರತೆಗೆಯುವ ಭರವಸೆಯಿದೆ. ಈ ಅದಿರು ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದು ಜೋಧ್‌ಪುರ್ ರಾಜ್ಯದಲ್ಲಿ, ಹಾಗಾಗಿ ಜೋಧ್‌ಪುರ್ ಸರ್ಕಾರ ಈ ಗಣಿಗಳಲ್ಲಿ ಕಾರ್ಯೋನ್ಮುಖವಾಗಿದೆ. ಯಂತ್ರಗಳ ಸರಬರಾಜು ಹಾಗೂ ತಾಂತ್ರಿಕ ಸಲಹೆ ಇತ್ಯಾದಿ ವಲಯಗಳಲ್ಲಿ ರಾಜ್ಯ ಸರ್ಕಾರವು ಸಹಾಯವನ್ನು ಬೇಡಿದಾಗಲೆಲ್ಲಾ ಅದನ್ನು ಪೂರೈಸಲು ಬಳಕೆ ಶಾಖೆಯು ಸಹಾಯವನ್ನು ನೀಡುತ್ತಿದೆ.

**೪. ತವರ –** ಬಿಹಾರಿನ ಹಜಾರಿಬಾಗ್ ಜಿಲ್ಲೆಯಲ್ಲಿ ತವರದ ಅದಿರು ಸಾಕಷ್ಟು ಪ್ರಮಾಣದಲ್ಲಿರಬೇಕೆಂದು ಅಭಿಪ್ರಾಯ ಹೊಂದಿ ಅದನ್ನು ಪಡೆಯುವ ದಿಶೆಯಲ್ಲಿ ಬಳಕೆ ಶಾಖೆ ಗಮನಹರಿಸುತ್ತಿದೆ. ಅಲ್ಲಿದ್ದ ಅದಿರಿನ ರಾಶಿಯನ್ನು ಪರೀಕ್ಷಿಸಿ ನೋಡಲಾಗಿ ತವರದ ಅದಿರನ್ನು ಈ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈಗಾಗಲೇ ತೆಗೆದಿರುವುದು ಕಂಡುಬಂದಿತು. ಹಳೆಯ ಗಣಿಗಳು ಬಹಳ ಆಳದವರೆಗೆ ಕೊರೆದಿದ್ದು ಅವು ಈಗ ನೀರಿನಿಂದ ತುಂಬಿಹೋಗಿವೆ, ಇವುಗಳನ್ನು ಪುನಃ ತೆಗೆಯುವ ದಿಶೆಯಲ್ಲಿ ಪ್ರಯತ್ನಗಳು ನಡೆಸುತ್ತಿವೆ. ನೀರೆತ್ತುವ ಕಾರ್ಯ ಪ್ರಾರಂಭವಾಗಿದೆ; ಈ ಉದ್ದೇಶಕ್ಕೆ ಅಗತ್ಯವಾದ ಯಂತ್ರಗಳನ್ನು ಪಡೆದುಕೊಳ್ಳಲೂ ಸಹ ಪ್ರಯತ್ನಗಳು ನಡೆಯುತ್ತಿವೆ.

**೫. ತಾಮ್ರ –** ಈ ಹಿಂದೆ ಅದಿರನ್ನು ತೆಗೆಯುವ ಕಾರ್ಯವನ್ನು ನಿಲ್ಲಿಸಿದ್ದ ಬಿಹಾರದ ಒಂದು ತಾಮ್ರದ ಗಣಿಯನ್ನು ಮತ್ತೆ ತೆರೆಯುವ ದಿಶೆಯಲ್ಲಿ ಬಳಕೆ ಶಾಖೆಯು ಪರಿಶೀಲನೆ ನಡೆಸುತ್ತಿದೆ. ಈ ಗಣಿಗಳಲ್ಲೂ ನೀರು ತೆಗೆಯುವ ಕಾರ್ಯ ಆಗಬೇಕು, ಇಲ್ಲಿ ವಿಸ್ತೃತವಾದ ಭೂಗರ್ಭ ಸರ್ವೇಕ್ಷಣೆಯಾದ ನಂತರವೇ ಅವು ಗಣಿಗಾರಿಕೆ ಸೂಕ್ತವೇ ಎಂಬುದನ್ನು ನಿರ್ಧರಿಸಲಾಗುವುದು. ಇನ್ನೊಂದು ಅಥವಾ ಎರಡು ತಾಮ್ರದ ನಿಕ್ಷೇಪದ ಬಗ್ಗೆಯೂ ಪರೀಕ್ಷೆ ಮುಂದುವರೆದಿದೆ. ಇವು ಅಷ್ಟು ಆಶಾದಾಯಕವಾಗಿಲ್ಲವಾದರೂ ಒಂದು ವೇಳೆ ಶೋಧನೆಯಲ್ಲಿ ಫಲಿತಾಂಶ ಆಶಾದಾಯಕವೆನಿಸಿದರೆ, ಮುಂದಿನ ಹೆಜ್ಜೆ ಇಡಲು ಉತ್ತೇಜನ ದೊರೆತಂತಾಗುವುದು.

**೬. ಖನಿಜ ಜಲ –** ಭಾರತದ ಖನಿಜ ಬುಗ್ಗೆಗಳ ಬಗ್ಗೆ ಭೂಗರ್ಭ ಸರ್ವೇಕ್ಷಣೆ ಇಲಾಖೆಯು ವಿಸ್ತೃತವಾದ ಪರೀಕ್ಷೆ ನಡೆಸಿದ್ದು ಕಳೆದ ೧೮ ತಿಂಗಳಿನಿಂದ 'ಭಾರತೀಯ ಬುಗ್ಗೆ' ಜಲಗಳ ಆರು ಮಾದರಿಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಲಾಗಿದೆ ಅವುಗಳನ್ನು ಈ ರೀತಿಯಾಗಿ ಹೆಸರಿಸಲಾಗಿದೆ: ಕೆಂಪುಲೇಬಲ್ (ಆಮ್ಲ), ಬಿಳಿ ಲೇಬಲ್ (ತಟಸ್ಥ), ಹಸಿರು ಲೇಬಲ್ (ತಟಸ್ಥ), ನೀಲಿ ಲೇಬಲ್ (ಗ್ಯಾಸ್ಪೀನ್), ನೀಲಿ

(Axis-les-Bains) ಹಾಗೂ ಹಳದಿ ಲೇಬಲ್ (Vichy) ಮಾದರಿಗಳು. ಕೆಂಪು, ಬಿಳಿ ಹಾಗೂ ನೀಲಿ (ಗ್ಯಾಸ್ಪೀನ್) ಖನಿಜ ಜಲಗಳು ತುಂಬಾ ಉಪಯುಕ್ತವೆಂದು ಕಂಡುಬಂದಿದೆಯಾಗಿ ಅವುಗಳನ್ನು ಅಧಿಕ ಪ್ರಮಾಣದಲ್ಲಿ ಸೀಸೆಗಳಲ್ಲಿ ತುಂಬಿ ಪ್ರಾಯೋಗಿಕವಾಗಿ ಕಳಿಸುವ ಏರ್ಪಾಟಿದೆಯಾದರೂ ಮಾಲೀಕರ ಜೊತೆ ಮಾತುಕತೆ ಇನ್ನೂ ನಡೆದಿಲ್ಲ. ಈ ಖನಿಜ ಜಲಗಳ ವಾಣಿಜ್ಯ ಸಾಧ್ಯತೆಯು ಪರಿಶೀಲನೆಯಲ್ಲಿದ್ದು ಅವುಗಳ ಔಷಧೀಯ ಗುಣದ ಬಗ್ಗೆಯೂ ಪರಿಗಣಿಸಲಾಗುತ್ತಿದೆ.

## ೭೯
## ನವದೆಹಲಿಯಲ್ಲಿರುವ ಸಾಂಪ್ರದಾಯಿಕ ವಸತಿಮನೆಗಳಲ್ಲಿ ಶೋಧಿಸದ ನೀರಿಗೆ ನಳವನ್ನು ಜೋಡಿಸುವ ಬಗೆಗೆ *

**೪೬೮. ಶ್ರೀ ಮುಹಮ್ಮದ್ ಅಜರ್ ಆಲಿ :** (ಅ) ಗೌರವಾನ್ವಿತ ಕಾರ್ಮಿಕ ಸದಸ್ಯರಿಗೆ ಕೆಳಗಿನ ವಿಷಯಗಳು ತಿಳಿದಿದೆಯೇ?

i) ತಮ್ಮ ಸ್ಥಾನದಲ್ಲಿ ಮೊದಲಿದ್ದ ಸದಸ್ಯರು ನವದೆಹಲಿ ಸಾಂಪ್ರದಾಯಿಕ ವಸತಿಮನೆಗಳಲ್ಲಿ (ಗುಮಾಸ್ತರ ಮನೆಗಳಲ್ಲಿ) ಶೋಧಿಸದೇ ಬರುವ ನೀರಿಗೆ ನಳವನ್ನು ಜೋಡಿಸುವ ವ್ಯವಸ್ಥೆ ಮಾಡುವದಾಗಿ ಭರವಸೆ ನೀಡಿದ್ದರು; ಆದರೆ ತರುವಾಯದಲ್ಲಿ ವಸತಿಮನೆಗಳ ಹೊರಗೆ ಹಾಕಲಾಗಿದ್ದ ನಲ್ಲಿಗಳನ್ನು ಕಳೆದ ಬೇಸಗೆ ತಿಂಗಳುಗಳಲ್ಲಿ ಹಾಗೆಯೇ ತೆರೆದಿಟ್ಟರು; ಕನೆಕ್ಷನ್ ಬೀಗಗಳು ಕಳವಾದ ಕಾರಣದಿಂದ ಈ ಸಲಕರಣೆಯನ್ನು ಹಿಂದಕ್ಕೆ ಪಡೆಯಲಾಯಿತು;

ii) ಈ ರೀತಿ ವ್ಯವಸ್ಥೆಯಿಂದ ಜನರಿಗೆ ಬಹಳ ತೊಂದರೆಯಾಗಿದೆ; ಅದರಲ್ಲೂ ಹೆಂಗಸರು ಹಾಗೂ ಪುಟ್ಟ ಮಕ್ಕಳು ಬಹಳ ದೂರದಿಂದ ಬೇಸಗೆ ಕಾಲದ ಉರಿಯುವ ಬಿಸಿಲಿನಲ್ಲಿ ನೀರು ಹೊತ್ತುತರಬೇಕಾದ ಪರಿಸ್ಥಿತಿ ಉದ್ಭವವಾಗಿದೆ; ಹಾಗೂ

iii) ವಸತಿನಿಲಯಗಳ ಕಾಂಪೌಂಡುಗಳು ಬಹಳ ವಿಶಾಲವಾಗಿರುವುದರಿಂದ ಹೆಚ್ಚು ಹೆಚ್ಚು ತರಕಾರಿ ಬೆಳೆಯುವಂತೆ ಸರ್ಕಾರ ಪ್ರಚಾರ ಮಾಡುತ್ತಿರುವುದಕ್ಕೆ ಅನುಗುಣವಾಗಿ ಬಾಡಿಗೆದಾರರು ಹೆಚ್ಚು ತರಕಾರಿ ಇತ್ಯಾದಿಗಳನ್ನು ಬೆಳೆಯುವ ಅವಕಾಶಗಳಿವೆ.

ಆ) ಅಸಾಂಪ್ರದಾಯಿಕ ವಸತಿಮನೆಗಳಿಗೆ ಅಳವಡಿಸಿರುವಂತೆ ಸಾಂಪ್ರದಾಯಿಕ ಮನೆಗಳ ಅಂಗಳದಲ್ಲಿ ಶೋಧಿಸದ ನೀರನ್ನು ಉಪಯೋಗಿಸಲು ನಲ್ಲಿಯನ್ನು ಹಾಕಲು ಗೌರವಾನ್ವಿತ ಸದಸ್ಯರು ಪರಿಗಣಿಸುವರೆ? ಇಲ್ಲವಾದರೆ, ಯಾಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) i) ಭಾಯ್ ಪರ್ಮಾನಂದ್‌ರವರು ೧೯೪೦ ಫೆಬ್ರವರಿ ೨೮ರಂದು ಕೇಳಿದ ೨೩೦ನೇ ಸಂಖ್ಯೆಯ ಪ್ರಶ್ನೆಗೆ ನನಗಿಂತ ಮೊದಲಿದ್ದ ಸದಸ್ಯರು ನೀಡಿದ ಉತ್ತರವನ್ನು ಮಾನ್ಯ ಸದಸ್ಯರು ಉಲ್ಲೇಖಿಸುತ್ತಿರಬಹುದೆಂದು ಊಹಿಸುವೆ. ನನ್ನ ಪೂರ್ವಾಧಿಕಾರಿಗಳು ಗುಮಾಸ್ತರ ಸಾಂಪ್ರದಾಯಿಕ ವಸತಿಮನೆಗಳಿಗೆ (ನವದೆಹಲಿ) ಶೋಧಿಸದ ನೀರಿಗೆ ನಳವನ್ನು ಜೋಡಿಸಿಕೊಡುವುದಾಗಿ ಭರವಸೆ ನೀಡಿರಲಿಲ್ಲ, ಅದರ ಅಗತ್ಯತೆಯನ್ನು ಪರಿಶೀಲಿಸುವುದಾಗಿ ಅವರು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨ ಏಪ್ರಿಲ್ ೧೯೪೩, ಪು. ೧೭೩೩–೩೪

ತಿಳಿಸಿದ್ದರು. ಬೇಸಗೆ ತಿಂಗಳುಗಳಲ್ಲಿ ಹೈಡ್ರೆಂಟ್‌ಗಳನ್ನು ಈ ವಸತಿಮನೆಗಳ ಮುಂದುಗಡೆ ತೆರೆದಿಡುವಂತೆ (ನಲ್ಲಿಗಳನ್ನಲ್ಲ) ತೀರ್ಮಾನಿಸಲಾಯಿತು; ಜೋಡಣೆ ಜಕಂ ಆದ ಇಲ್ಲವೇ ಕಳವಾದ ಕಡೆ ಬಿಟ್ಟು ಉಳಿದ ಕಡೆಗಳಲ್ಲಿ ಕಳೆದ ಬೇಸಗೆ ಕಾಲದಲ್ಲೂ ಈ ಏರ್ಪಾಟನ್ನೇ ಮುಂದುವರಿಸಲಾಯಿತು.

ii) ಈ ಏರ್ಪಾಟಿನಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆಯೆಂದು ನಾನು ಹೇಳಲಾರೆ.

iii) ಹೌದು.

ಆ) ಇಲ್ಲ. ಹಣಕಾಸಿನ ಮುಗ್ಗಟ್ಟಿನ ಜೊತೆಗೆ ಪದಾರ್ಥಗಳು ಲಭ್ಯವಿಲ್ಲದ ಕಾರಣ ಶೋಧಿಸದ ನೀರಿಗೆ ನಳವನ್ನು ಜೋಡಿಸುವ ಕಾರ್ಯವನ್ನು ಸದ್ಯದಲ್ಲಿ ಕೈಗೆತ್ತಿಕೊಳ್ಳಲಾಗದು; ಪರಿಸ್ಥಿತಿ ಸುಧಾರಿಸಿದ ಬಳಿಕ ಪರಿಗಣಿಸಲಾಗುವುದು. ಗುಮಾಸ್ತರ ಅಸಾಂಪ್ರದಾಯಿಕ ವಸತಿಮನೆಗಳ ಅಂಗಳದಲ್ಲಿ ನಲ್ಲಿಯನ್ನು ಜೋಡಿಸಿರುವುದಿಲ್ಲ. ಸಾಂಪ್ರದಾಯಿಕ ವಸತಿಮನೆಗಳ ಮುಂದೆ ನೀರು ತುಂಬುವ ನಲ್ಲಿಗಳಿಗೆ (Hydrant) ಜೋಡಿಸಿರುವ ಯಾಂತ್ರಿಕ ಉಪಕರಣವನ್ನೇ ಅಸಾಂಪ್ರದಾಯಿಕ ಮನೆಗಳ ಮುಂದೂ ಜೋಡಿಸಲಾಗಿದೆ ಎಂಬುದನ್ನು ಗೌರವಾನ್ವಿತ ಸದಸ್ಯರಿಗೆ ನಾನು ತಿಳಿಸಬಯಸುತ್ತೇನೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈ ಸಾಂಪ್ರದಾಯಿಕ ವಸತಿಮನೆಗಳಿಗೆ ಯಾವ ಪ್ರಮಾಣದಲ್ಲಿ ನೀರನ್ನು ಪುಕ್ಕಟೆಯಾಗಿ ಸರಬರಾಜು ಮಾಡಲಾಗುವುದೆಂದು ನಾನು ಮಾನ್ಯ ಸದಸ್ಯರನ್ನು ಕೇಳಲೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಕಾಲಾವಕಾಶಬೇಕು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಶೋಧಿಸದ ನೀರನ್ನು ಅವರಿಗೆ ಸದ್ಯದಲ್ಲಿ ಸರ್ಕಾರ ಕೊಡುವ ಸ್ಥಿತಿಯಲ್ಲಿರದ ಕಾರಣ ಮಾನ್ಯ ಸದಸ್ಯರು ಶೋಧಿಸಿದ ನೀರಿನ ಪ್ರಮಾಣವನ್ನು ೧೦,೦೦೦ ಗ್ಯಾಲನ್ನುಗಳಿಗೆ ಹೆಚ್ಚಿಸುವ ಸಾಧ್ಯತೆಯನ್ನು ಪರಿಗಣಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನು ಪರಿಗಣಿಸುತ್ತೇನೆ.

# ೮೦
# ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಉದ್ದಿಮೆಯ ನಿಯೋಗದ ವಿಷಯ*

**ಶ್ರೀ ಕೆ.ಸಿ. ನಿಯೋಗಿ :** ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಉದ್ದಿಮೆಯನ್ನು ಪ್ರತಿನಿಧಿಸುವ ಬೇರೆ ಬೇರೆ ಸಂಘಟನೆಗಳ ನಿಯೋಗವನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ಕಳೆದ ಮಾರ್ಚ್ ೨೫ರಂದು ಭೇಟಿಯಾಗಿದ್ದರೇನು? ಹಾಗಿದ್ದಲ್ಲಿ, ಆ ಮನವಿಯ ವಿಷಯವೇನು ಹಾಗೂ ಆ ಸಂಬಂಧವಾಗಿ ಸರ್ಕಾರ ಏನು ಕ್ರಮ ಕೈಗೊಳ್ಳಲು ಯೋಜಿಸುತ್ತಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗೌರವಾನ್ವಿತ ಸದಸ್ಯರು ತಿಳಿಸಿದ ರೀತಿ ಮಾರ್ಚ್ ೨೫ರಂದು ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಉದ್ದಿಮೆಯನ್ನು ಪ್ರತಿನಿಧಿಸುವ ಬೇರೆ ಬೇರೆ ಸಂಘಟನೆಗಳ ಒಂದು ನಿಯೋಗವನ್ನು ನಾನು ಭೇಟಿಯಾಗಿದ್ದದ್ದು ನಿಜ.

ಸದ್ಯ ಇರುವ ಅಕ್ಕಿ ದಾಸ್ತಾನನ್ನು ಹೆಚ್ಚಿಸುವ ನಿಯೋಗದ ಸೇರಿಸುವ ವಿಷಯದಲ್ಲಿ ಅವರಿಗಿರುವ ಆತಂಕವನ್ನು ಕುರಿತು ಚರ್ಚಿಸುವುದೆ ವಿಷಯವಾಗಿತ್ತು. ಈ ವಿಷಯದಲ್ಲಿ ಸಂಬಂಧಪಟ್ಟ ಪ್ರಾಂತೀಯ ಸರ್ಕಾರಗಳು ಸಾಧ್ಯವಿದ್ದಷ್ಟು ಸಹಾಯ ಮಾಡುತ್ತವೆ ಎಂದಾಗ ಸರಬರಾಜು ನಿರಾಂತಕವಾಗಿ ನಡೆಯುವುವ ಬಗ್ಗೆ ಸಂಘಟನೆಗಳಿಗೆ ಅನುಮಾನವುಂಟಾದ ಕಾರಣ ದಾಸ್ತಾನನ್ನು ಕಾಪಾಡಿಕೊಳ್ಳಲು ತಮಗೆ ಕಷ್ಟವಾಗುವುದೆಂದು ನಿಯೋಗ ತಿಳಿಸಿತು. ಸಂಯುಕ್ತ ವಿತರಣಾ ಯೋಜನೆಯ ಬಗ್ಗೆ ತಾನು ಮಾಡಿದ್ದ ವಿಚಾರವನ್ನು ಕೇಂದ್ರ ಸರ್ಕಾರ ನಿಯೋಗದ ಗಮನಕ್ಕೆ ತಂದಿತು. ಸಾಕಷ್ಟು ಪ್ರಮಾಣದಲ್ಲಿ ಬಂಗಾಳಕ್ಕಾಗಿ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿತು. ಜೊತೆಗೆ ಒಂದು ವೇಳೆ ಪ್ರಾಂತೀಯ ಸರ್ಕಾರ ಈ ವಿಷಯದಲ್ಲಿ ಅಸಮರ್ಥವಾದರೆ ತಾನು ಸಹಾಯ ಮಾಡುವುದಾಗಿ ಭರವಸೆ ನೀಡಿತು. ತರುವಾಯದಲ್ಲಿ ಕಲ್ಕತ್ತಾದಲ್ಲಿರುವ ಆಹಾರ ಇಲಾಖೆ ಸಂಘಟನೆಗಳ ಪ್ರತಿನಿಧಿಗಳು ಭೇಟಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಸಹಾಯದಿಂದ ಕಲ್ಲಿದ್ದಲು ಗಣಿ ಕೆಲಸಗಾರರ ಆಹಾರದ ಪರಿಸ್ಥಿತಿಯನ್ನು ಮುಂದಿನ ಸ್ವಲ್ಪ ಅವಧಿಯವರೆಗೆ ಸುಭದ್ರಗೊಳಿಸಲಾಗಿದೆ.

**ಶ್ರೀ ಕೆ.ಸಿ. ನಿಯೋಗಿ :** ಗೌರವಾನ್ವಿತ ಸದಸ್ಯರು ಈಗ ಇರುವ ಅಕ್ಕಿಯ ದಾಸ್ತಾನರು ಹೆಚ್ಚಿಸುವ ಬಗ್ಗೆ ಉಲ್ಲೇಖಿಸಿದರು. ಬೇರೆ ಬೇರೆ ಗಣಿಗಳಿಗೆ ಸದ್ಯಕ್ಕೆ ಲಭ್ಯವಿರುವ ಅಕ್ಕಿಯ ಪ್ರಮಾಣವೆಷ್ಟೆಂದು ಗೌರವಾನ್ವಿತ ಸದಸ್ಯರು ತಿಳಿಸುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕೇಂದ್ರ ಸರ್ಕಾರದ ಸರಬರಾಜಿನ ಆಧಾರದ ಮೇಲೆ ಗಣಿ ಕೆಲಸಗಾರರಿಗೆ ಮುಂದಿನ ಸ್ವಲ್ಪ ಅವಧಿಗೆ ಅಗತ್ಯವಾದ ಆಹಾರವನ್ನು ಪೂರೈಸಲು ಏರ್ಪಾಟು ಮಾಡಿರುವುದನ್ನು ನಾನು ಈಗಾಗಲೇ ಪ್ರಸ್ತಾಪಿಸಿದ್ದೇನೆ.

**ಶ್ರೀ ಕೆ.ಸಿ. ನಿಯೋಗಿ :** ಸದ್ಯ ಇರುವ ಅಕ್ಕಿ ದಾಸ್ತಾನಿನ ಬಗ್ಗೆ ನಾನು ಮಾತನಾಡಿದೆ. ಈ ಅಕ್ಕಿ ದಾಸ್ತಾನಿನ ಪ್ರಮಾಣವೇನೆಂದು ತಿಳಿಸುವಿರಾ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨ ಏಪ್ರಿಲ್ ೧೯೪೩, ಪು. ೧೭೩೪–೩೫

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಬಂಗಾಳ ಹಾಗೂ ಬಿಹಾರದ ಪರಿಸ್ಥಿತಿ ಭಿನ್ನವಾಗಿದೆ. ನಿಯೋಗ ಹೇಳಿದುದು ನನಗೆ ಸರಿಯಾಗಿ ನೆನಪಿರುವ ಪಕ್ಷದಲ್ಲಿ ಅವರ ಬಳಿ ಇರುವ ದಾಸ್ತಾನು ಇನ್ನು ನಾಲ್ಕು ಅಥವಾ ಐದು ವಾರಗಳವರೆಗೆ ಸಾಕಾಗಬಹುದು.

## ೮೧
## ಬಂಗಾಳ ಹಾಗೂ ಬಿಹಾರದ ಕಲ್ಲಿದ್ದಲು ಗಣಿ ಕೆಲಸಗಾರರಿಗೆ ಅಗ್ಗದ ಬೆಲೆ ಧಾನ್ಯ ಅಂಗಡಿಗಳ ಯೋಜನೆ *

**ಶ್ರೀ ಕೆ.ಸಿ. ನಿಯೋಗಿ :** ಅ) ಬಂಗಾಳ ಹಾಗೂ ಬಿಹಾರಕ್ಕೆ ಕಳುಹಿಸಿರುವ ಪತ್ರದಲ್ಲಿ ಭಾರತ ಸರ್ಕಾರದ ಕಾರ್ಮಿಕ ಇಲಾಖೆ ಕಲ್ಲಿದ್ದಲು ಗಣಿಕೆಲಸಗಾರರ ಅನುಕೂಲಕ್ಕಾಗಿ ೧೯೪೨ರ ಏಪ್ರಿಲ್‌ನಲ್ಲಿ ಅಗ್ಗದ ಧಾನ್ಯದ ಅಂಗಡಿಗಳನ್ನು ತೆರೆಯುವ ಯೋಜನೆಯ ಬಗ್ಗೆ ತಿಳಿಸಿರುವುದು ವಾಸ್ತವವೆ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಈ ಯೋಜನೆಯ ಬಗ್ಗೆ ಈ ಎರಡು ಪ್ರಾಂತೀಯ ಸರ್ಕಾರಗಳು ಹಾಗೂ ಕಲ್ಲಿದ್ದಲು ಉದ್ದಿಮೆಯ ಸಂಘಟನೆಗಳು ಯಾವ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದವು?

ಆ) ಈ ಎರಡು ಪ್ರಾಂತೀಯ ಸರ್ಕಾರಗಳಲ್ಲಿ ಯಾವುದಾದರೂ ಕಲ್ಲಿದ್ದಲು ಗಣಿ ಕೆಲಸಗಾರರಿಗೆ, ಅಗ್ಗದ ದರದಲ್ಲಿ ಧಾನ್ಯ ಸರಬರಾಜು ಮಾಡಲು ಅನುಕೂಲವಾಗುವಂತೆ ಬೇರೆ ಏನಾದರೂ ಪರ್ಯಾಯ ಯೋಜನೆಯನ್ನು ಹಾಕಿಕೊಂಡಿದೆಯೇ? ಹಾಗಿದ್ದರೆ, ಯಾವ ಮಾದರಿಯಲ್ಲಿ ಹಾಗೂ ಯಾವಾಗ?

ಇ) ಕಾರ್ಮಿಕರಿಗೆ ಅಗ್ಗದ ದರದಲ್ಲಿ ಆಹಾರಧಾನ್ಯ ಒದಗಿಸಲು ಕಲ್ಲಿದ್ದಲು ಗಣಿ ಉದ್ದಿಮೆ ಸಂಘಟನೆಗಳು ಅಥವಾ ಪ್ರತ್ಯೇಕವಾದ ಗಣಿಗಳು ಯಾವ ಕ್ರಮಕೈಗೊಂಡಿವೆ? ಹಾಗೆಯೇ ಈ ವಿಷಯವಾಗಿ ಮೇಲೆ ಹೆಸರಿಸಿದ ಎರಡು ಪ್ರಾಂತೀಯ ಸರ್ಕಾರಗಳಲ್ಲಿ ಯಾವುದಾದರೊಂದು ಈ ಸಂಘಟನೆಗಳಿಗೆ ಯಾವ ರೀತಿಯಲ್ಲಾದರೂ ಸಹಾಯ ನೀಡಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು. ಈ ಸಮಸ್ಯೆಯನ್ನು ಬೇರೆ ರೀತಿಯಲ್ಲಿ ಪರಿಹರಿಸುವ ವಿಧಾನಗಳನ್ನು ಪರಿಗಣಿಸಬೇಕೆಂದು ಬಿಹಾರ ಸರ್ಕಾರವು ಇಚ್ಛೆಪಟ್ಟಿತು. ಬಂಗಾಳ ಸರ್ಕಾರದಿಂದ ಮಾತ್ರ ಯಾವ ಉತ್ತರವೂ ಬಂದಿಲ್ಲ.

ಆ) ಕೇಂದ್ರ ಸರ್ಕಾರಕ್ಕೆ ಬಂದಿರುವ ಮಾಹಿತಿಯ ಪ್ರಕಾರ ಕಲ್ಲಿದ್ದಲು ಗಣಿ ಕೆಲಸಗಾರರಿಗೆ ಬೆಲೆಯಲ್ಲಿ ಆಹಾರ ಧಾನ್ಯ ಒದಗಿಸಲು ಅಗ್ಗದ ಅಧಿಕಾರಿಗಳ ಮೂಲಕ ಎರಡೂ ಪ್ರಾಂತೀಯ ಸರ್ಕಾರಗಳು ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿದು ಬಂದಿದೆ.

ಇ) ಅಗ್ಗದ ಆಹಾರ ಧಾನ್ಯವೆಂದು ಯಾವುದನ್ನು ಮಾನ್ಯ ಸದಸ್ಯರು ಪರಿಗಣಿಸುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಪ್ರಮುಖವಾದ ಮಾಲೀಕರ ಸಂಘಟನೆಗಳು ತಮ್ಮ ಕಾರ್ಮಿಕರಿಗೆ ಸುಲಭ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ಏರ್ಪಾಟು ಮಾಡಿವೆ. ಇವು ಆಹಾರ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨ ಏಪ್ರಿಲ್ ೧೯೪೩, ಪು. ೧೭೨೫

ಧಾನ್ಯಗಳನ್ನು ಸಂಗ್ರಹಿಸುವಲ್ಲಿ ಪ್ರಾಂತೀಯ ಸರ್ಕಾರಗಳು ಸಹಾಯ ಮಾಡಿವೆ.

**ಶ್ರೀ ಕೆ.ಸಿ. ನಿಯೋಗಿ :** ನನ್ನ ಪ್ರಶ್ನೆಯ ಆ) ಭಾಗಕ್ಕೆ ನನಗೆ ಸಮರ್ಪಕವಾದ ಉತ್ತರ ದೊರೆಯಲಿಲ್ಲವೆಂದು ತಿಳಿಯುವೆ. ನಾನು ಕೇಳಿದ್ದು : "ಎರಡು ಪ್ರಾಂತೀಯ ಸರ್ಕಾರಗಳಲ್ಲಿ ಯಾವುದಾದರೂ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಂಡಿರುವುದೆ? ಹಾಗಿದ್ದಲ್ಲಿ ಯಾವ ಮಾದರಿಯಲ್ಲಿ?"

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಮೊದಲೇ ತಿಳಿಸಿದಂತೆ, ಆಹಾರ ಧಾನ್ಯಗಳನ್ನು ಸಂಗ್ರಹಿಸುವುದರಲ್ಲಿ ಅವರು ಸಹಾಯ ಮಾಡಿದರು.

**ಶ್ರೀ ಕೆ.ಸಿ. ನಿಯೋಗಿ :** ಯಾವ ಮಾದರಿಯಲ್ಲಿವೆಯೆಂಬುದನ್ನು ತಿಳಿಸಿ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆಹಾರ ಧಾನ್ಯ ಸಂಗ್ರಹದಲ್ಲಿ ಅವರು ಸಹಾಯ ಮಾಡಿದರು.

**ಶ್ರೀ ಕೆ.ಸಿ. ನಿಯೋಗಿ :** ಯಾವ ವಿಧಾನದಲ್ಲಿ ಈ ರೀತಿ ಸಹಾಯ ಮಾಡಲಾಯಿತು; ಏಕೆಂದರೆ ವಾಸ್ತವವಾಗಿ ಪ್ರಾಂತೀಯ ಸರ್ಕಾರಗಳಿಂದಲೇ ಅಡ್ಡಿಯಾಯಿತೆಂದು ಕೇಳಿಬಂದಿದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ತಮ್ಮ ಕಾರ್ಮಿಕರಿಗೆ ಆಹಾರಧಾನ್ಯ ಸರಬರಾಜು ಮಾಡಲು ಗಣಿ ಮಾಲೀಕರು ಕೈಕೊಂಡ ಕ್ರಮಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಮೊದಲೇ ಹೇಳಿದ ಹಾಗೆ ದಾಸ್ತಾನನ್ನು ಅವರು ಕಾಯ್ದುಕೊಂಡರು. ಹಾಗೆಯೇ ದಾಸ್ತಾನು ಕಾಯ್ದುಕೊಳ್ಳಲು ಪ್ರಾಂತೀಯ ಸರ್ಕಾರಗಳೂ ಸಹಾಯ ಮಾಡಿದವು.

**ಶ್ರೀ ಕೆ.ಸಿ. ನಿಯೋಗಿ :** ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಕೆಲವು ಗಣಿ ಮಾಲೀಕರು ಒಂದು ಪ್ರಮಾಣದ ಅಕ್ಕಿ ದಾಸ್ತಾನನ್ನು ಸ್ವೀಕರಿಸಿದ್ದರಾದರೂ ಆ ವಿಷಯವಾಗಿ ಅವರೇ ಪ್ರಾಂತೀಯ ಸರ್ಕಾರಗಳಿಗೆ ಹಾಗೂ ಇಲ್ಲಿಗೆ ದೂರು ನೀಡಿರುವ ವಿಷಯ ಗೌರವಾನ್ವಿತ ಸದಸ್ಯರ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಅಂಥ ಮಾಹಿತಿ ಯಾವುದೂ ಬಂದಿಲ್ಲ.

# ೮೨
# ಯುದ್ಧದಲ್ಲಿನ ಗಾಯಗಳಿಗೆ (ಪರಿಹಾರ ವಿಮೆ) ಮಸೂದೆ ಆಯ್ಕೆಸಮಿತಿಯ ವರದಿಯ ಮಂಡನೆ *

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಸಮರ ಕಾಲದಲ್ಲಿ ಕಾರ್ಮಿಕರು ಅನುಭವಿಸುವ ಗಾಯಗಳಿಗೆ ಪರಿಹಾರವನ್ನು ಮಾಲೀಕರು ನೀಡಬೇಕೆಂಬುದರ ಬಗ್ಗೆ ಆಯ್ಕೆ ಸಮಿತಿಯ ವರದಿಯನ್ನು ನಾನು ಮಂಡಿಸುತ್ತಿದ್ದೇನೆ; ಹಾಗೆಯೇ ಆ ಜವಾಬ್ದಾರಿಯನ್ನು ನಿಭಾಯಿಸಲು ಮಾಲೀಕರಿಗೆ ವಿಮಾ ವ್ಯವಸ್ಥೆಯನ್ನು ನೀಡಬೇಕಾಗುವುದು.

# ೮೩
# ಭಾರತೀಯ ಬಾಯ್ಲರುಗಳ (ತಿದ್ದುಪಡಿ) ಮಸೂದೆ **

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೆ, ೧೯೨೩ ಭಾರತೀಯ ಬಾಯ್ಲರುಗಳ ಕಾಯಿದೆಯನ್ನು ತಿದ್ದುಪಡಿ ಮಾಡುವ ದಿಶೆಯಲ್ಲಿ ಒಂದು ಮಸೂದೆಯನ್ನು ಮಂಡಿಸಲು ನಾನು ಅನುಮತಿ ಬೇಡುತ್ತೇನೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ವಿಷಯವೆಂದರೆ : ಭಾರತೀಯ ಬಾಯ್ಲರುಗಳ ಕಾಯಿದೆ, ೧೯೨೩ನ್ನು ತಿದ್ದುಪಡಿ ಮಾಡಲು ಮಸೂದೆಯನ್ನು ಮಂಡಿಸುವುದು.

ಈ ಮಂಡನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೇ ನಾನು ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ३, ೨೬ ಜುಲೈ ೧೯೪३, ಪು. ೪೨–೪३.

** ಅದೇ, ಪು. ೪३.

## ೮೪
## ಮಹಿಳಾ ಗಣಿಕೆಲಸಗಾರರ ತಾಯ್ತನ ಸೌಲಭ್ಯ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೆ, ೧೯೪೧ರ ಮಾಹಿಳಾ ಗಣಿಕೆಲಸಗಾರರ ತಾಯ್ತನ ಸೌಲಭ್ಯ ಕಾಯಿದೆಗೆ ೧೯೪೧ಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ವಿಷಯ: "೧೬೪೧ರ ಗಣಿ ಕೆಲಸಗಾರರ ತಾಯ್ತನ ಸೌಲಭ್ಯ ಕಾಯಿದೆಗೆ ಇದನ್ನು ತಿದ್ದುಪಡಿ ಮಾಡಲು ಮಸೂದೆ ಜಾರಿಗೊಳಿಸಲು ಅನುಮತಿ ನೀಡಿದೆ"

ಈ ಮಂಡನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೮೫
## ಮೋಟಾರು ವಾಹನಗಳ (ಚಾಲಕರು) ತಿದ್ದುಪಡಿ ಮಸೂದೆ **

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) : ಮಾನ್ಯರೆ, ೧೯೪೨ರ ಮೋಟಾರು ವಾಹನಗಳ (ಚಾಲಕರು) ಸುಗ್ರೀವಾಜ್ಞೆಯ ತಿದ್ದುಪಡಿಗಾಗಿ ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ವಿಷಯ : "೧೯೪೨ರ ಮೋಟಾರು ವಾಹನಗಳ (ಚಾಲಕರು) ಸುಗ್ರೀವಾಜ್ಞೆಯ ಸಂಬಂಧ ತಿದ್ದುಪಡಿ ಮಾಡಲು ಮಸೂದೆ ಮಂಡಿಸಲು ಅನುಮತಿ ನೀಡುವುದರ ಬಗ್ಗೆ"

ಮಂಡನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೨೬ ಜುಲೈ ೧೯೪೩, ಪು. ೪೩.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೩, ೨೮ ಜುಲೈ ೧೯೪೩, ಪು. ೪೩.

## ೮೬
## ಸಿಮ್ಲಾದಲ್ಲಿ ಶಾಸನಸಭೆ ವಾಸ್ತವ್ಯದ ಏರ್ಪಾಟು ಅಸಮರ್ಪಕವಾಗಿದ್ದುದರ ಬಗೆಗೆ*

**೬೧. ಶ್ರೀ ಅಮರೇಂದ್ರನಾಥ್ ಚಟ್ಟೋಪಾಧ್ಯಾಯ :** ಅ) ಶಾಸನಸಭೆಯ ಸದಸ್ಯರು ಸಮಿತಿ ಸಭೆಗಳಿಗಾಗಿ ಸಿಮ್ಲಾದಲ್ಲಿ ತಾತ್ಕಾಲಿಕವಾಗಿ ಇರುವ ಕಾಲದಲ್ಲಿ, ಅವರಿಗೆ ವಸತಿಯನ್ನು ಏರ್ಪಡಿಸಬೇಕಾದದ್ದು ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಎಸ್ಟೇಟ್ ಅಧಿಕಾರಿಗಳ ಕರ್ತವ್ಯವೆಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುತ್ತಾರೆಯೇ?

ಆ) ವಸತಿ ವಿಷಯದಲ್ಲಿ ಸಮರ್ಪಕವಾಗಿ ಏರ್ಪಾಟು ಮಾಡದಿದ್ದರೆ ಸದಸ್ಯರು ತೊಂದರೆಗೊಳಗಾಗುವರೆಂದು ಅಧಿಕಾರಿಗಳು ತಿಳಿದಿರಬೇಕಾದದ್ದು ಅಗತ್ಯವಲ್ಲವೆ?

ಇ) ಹಿಂದೂ ಕಾನೂನು ಸಮಿತಿ ಸಭೆಗಳನ್ನು ನಡೆಸಿದ ಸಂದರ್ಭದಲ್ಲಿ ೨, ೩ ಹಾಗೂ ೧೧ನೇ ಸಂಖ್ಯೆಯ ಕಾರ್ಟ್ ರಸ್ತೆಯಲ್ಲಿ ವಸತಿಮನೆಗಳನ್ನು ನೀಡಿ ಸಮರ್ಪಕವಾಗಿ ಕಲ್ಪಿಸಲಾಗಿತ್ತು, ಇದಕ್ಕೆ ಹೋಲಿಸಿದರೆ ೨೦ನೇ ಸಂಖ್ಯೆಯ ವಸತಿಯ ಏರ್ಪಾಟು ಏನೇನೂ ಸಾಲದು. ಮೇ ಹಾಗೂ ಜೂನ್ ತಿಂಗಳುಗಳಲ್ಲಿ ನಡೆದ ಸಮಿತಿ ಸಭೆಗಳಿಗಾಗಿ ಶಾಸನಸಭಾ ಸದಸ್ಯರಿಗೆ ಎಸ್ಟೇಟ್ ಅಧಿಕಾರಿ ಆಯ್ಕೆ ಮಾಡಿದ ವಸತಿಮನೆಗಳು ಅಸಮರ್ಪಕವಾಗಿತ್ತು. ಆ ಬಗ್ಗೆ ಮಾನ್ಯ ಸದಸ್ಯರು ವಿಚಾರಣೆ ನಡೆಸುವರೆ?

ಈ) ಸರಿಯಾಗಿ ವಿಚಾರಣೆ ನಡೆಸಿ, ಇನ್ನು ಮುಂದೆ ಈ ವಸತಿಮನೆಗಳನ್ನು ಶಾಸನಸಭಾ ಸದಸ್ಯರಿಗೆ ಮಾನ್ಯ ಸದಸ್ಯರು ಪರಿಗಣಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಸದನ ಸಮಿತಿಯೊಡನೆ ಸಮಾಲೋಚಿಸಿ ಸರ್ಕಾರವು ಕೇಂದ್ರೀಯ ಶಾಸನಸಭಾ ಸದಸ್ಯರಿಗೆ ಯಾವ ರೀತಿ ವಸತಿಮನೆಗಳನ್ನು ನೀಡುವುದು ಸೂಕ್ತವೆಂದು ನಿರ್ಧರಿಸಿದ ಅದೇ ಮಾದರಿಯ ಮನೆಗಳನ್ನು ವ್ಯವಸ್ಥೆ ಮಾಡುವುದು ಎಸ್ಟೇಟ್ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

ಆ) ಸದಸ್ಯರಿಗೆ ಯಾವುದೇ ರೀತಿಯ ತೊಂದರೆಯುಂಟಾಗದ ರೀತಿಯಲ್ಲೇ ಸಾಮಾನ್ಯವಾಗಿ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಇ) ಕಾರ್ಟ್ ರಸ್ತೆಯಲ್ಲಿರುವ ವಸತಿಮನೆಗಳನ್ನು ಒಪ್ಪಿತ ಯೋಜನೆಯನ್ವಯವೇ ನಿರ್ಮಾಣ ಮಾಡಲಾಗಿದೆ. ೨ ಹಾಗೂ ೩ನೇ ಸಂಖ್ಯೆಯ ವಸತಿಮನೆಗಳು ಎತ್ತರದಲ್ಲಿ ಕಟ್ಟಲ್ಪಟ್ಟಿವೆ. ಸದನ ಸಮಿತಿಯೊಡನೆ ಸಮಾಲೋಚನೆ ನಡೆಸಿ ಸದಸ್ಯರಿಗಾಗಿ ಈ ನಿವಾಸಗಳನ್ನು ಕಾಯ್ದಿರಿಸಲಾಗಿತ್ತು. ೨ ಹಾಗೂ ೩ನೇ ಸಂಖ್ಯೆಯ ಕೊಠಡಿಗಳ ಏರ್ಪಾಟು ೨೦ನೇ ನಂ. ಕೊಠಡಿಯ ಏರ್ಪಾಟಿಗಿಂತ ಕೊಂಚ ಭಿನ್ನವಾಗಿದೆ. ಕೆಲವು ಸದಸ್ಯರು ಮನೆಯ ಮಟ್ಟವನ್ನು ಹೆಚ್ಚು ಗಣನೆಗೆ ತೆಗೆದುಕೊಳ್ಳದೆ ಒಂದು ಬಗೆಯ ಏರ್ಪಾಟನ್ನು ಮಾತ್ರ ಇಷ್ಟಪಡುತ್ತಾರೆ, ಇನ್ನು ಕೆಲವು ಸದಸ್ಯರು ಕೊಠಡಿಗಳ ಏರ್ಪಾಟು ಹೇಗೇ ಇರಲಿ ನಿವಾಸ ಎತ್ತರದಲ್ಲಿಯೇ ಎಂಬುದನ್ನು ಗಮನಿಸುತ್ತಾರೆ. ಹಾಗಾಗಿ, ೨ ಹಾಗೂ ೩ನೇ ಸಂಖ್ಯೆಯ ನಿವಾಸಗಳು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೮ ಜುಲೈ ೧೯೪೩, ಪು. ೧೨೯

೨೦ನೇ ಸಂಖ್ಯೆಯ ನಿವಾಸಕ್ಕಿಂತ ಅನುಕೂಲಕರವಾಗಿ ಏರ್ಪಾಟಾಗಿವೆಯೆಂದು ತಿಳಿಯಬಾರದು. ೧೧ನೇ ಸಂಖ್ಯೆಯ ನಿವಾಸಕ್ಕೆ ಬದಲು ೨೦ನೇ ನಿವಾಸವನ್ನು ಸದಸ್ಯರು ಪಡೆದ ಕಾರಣ ೧೧ನೇ ಸಂಖ್ಯೆಯ ನಿವಾಸವು ಖಾಲಿಯಾಗಿಯೇ ಉಳಿದಿದೆ ಪರಿಸ್ಥಿತಿಯ ವಿವರಗಳು ಹೀಗಿರುವಾಗ ವಿಶೇಷವಾದ ಯಾವ ವಿಚಾರಣೆಯ ಅಗತ್ಯವೂ ಇರುವುದಿಲ್ಲ.

ಈ) ಶಾಸನಸಭೆಯ ಸದಸ್ಯರಿಗೆ ನಿವಾಸವನ್ನು ಸದನ ಸಮಿತಿಯೊಡನೆ ಸಮಾಲೋಚಿಸಿದ ನಂತರ ಕಾಯ್ದಿರಿಸಲಾಯಿತು. ಸದನ ಸಮಿತಿ ಅಗತ್ಯವೆಂದು ಕಾಣದ ಪಕ್ಷದಲ್ಲಿ ಯಾವ ಬದಲಾವಣೆಯ ಆವಶ್ಯಕತೆಯೂ ಇರುವುದಿಲ್ಲ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಸಿಮ್ಲಾದಲ್ಲಿ ನಡೆದ ಉಪ ಸಮಿತಿ ಸಭೆಗಳಲ್ಲಿ ಭಾಗವಹಿಸಿದ್ದ ಸದಸ್ಯರು ತಲಾ ರೂ. ೭೫ ರೂಪಾಯಿ ಠೇವಣಿಯಿಟ್ಟ ನಂತರವೇ ಅವರಿಗೆ ವಿದ್ಯುತ್ತು ಹಾಗೂ ನೀರು ಸರಬರಾಜು ಮಾಡಲಾಯಿತೆಂಬುದರಲ್ಲಿ ನಿಜಾಂಶವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಸಮಯಬೇಕು.

**ಸರ್ ಮುಹಮ್ಮದ್ ಯಾಮೀನ್ ಖಾನ್ :** ದೆಹಲಿಯಲ್ಲೂ ಸಹ ಸದಸ್ಯರು ಹಣವನ್ನು ಠೇವಣಿ ಇಡಬೇಕೆಂಬುದು ನಿಜವೇ ಎಂದು ಗೌರವಾನ್ವಿತ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಿಳಿಯದು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಹಾಗಿದ್ದ ಬಳಿಕ ಗೌರವಾನ್ವಿತ ಸದಸ್ಯರು ಯಾರಾದರೂ ಅಧಿಕಾರಿಗಳನ್ನು ನೇಮಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ವಿಷಯವಾಗಿ ವಿಚಾರಣೆ ನಡೆಸುತ್ತೇನೆ.

**ಡಾ॥ ಪಿ.ಎನ್. ಬ್ಯಾನರ್ಜಿ :** ಪ್ರತಿಯೊಂದು ಅಧಿವೇಶನದಲ್ಲೂ ಎಷ್ಟು ಸದನ ಸಮಿತಿಯ ಸಭೆಗಳು ನಡೆಯುತ್ತವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಎಷ್ಟು ಬಾರಿ ತಾವು ಸಭೆ ಸೇರಬೇಕೆಂಬುದು ಸಮಿತಿಯವರೇ ನಿರ್ಧರಿಸಬೇಕಾದ ವಿಷಯ.

**ಡಾ॥ ಪಿ.ಎನ್.ಬ್ಯಾನರ್ಜಿ :** ಈ ವಿಷಯವಾಗಿ ನಿಮ್ಮ ಬಳಿ ಏನಾದರೂ ಮಾಹಿತಿ ಇದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಳೆದ ಅಧಿವೇಶನದ ಕಾಲದಲ್ಲಿ ಸದನ ಸಮಿತಿಯ ಒಂದು ಸಭೆ ನಡೆದದ್ದು ನನಗೆ ನೆನಪಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಸದನ ಸಮಿತಿಯ ಸದಸ್ಯರುಯಾದರೂ ನಿಧನರಾಗಿದ್ದು ಅವರ ಸ್ಥಾನವನ್ನು ಇತರ ಸದಸ್ಯರು ಈಗಾಗಲೇ ತುಂಬಿರುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಸಂಗತಿಯನ್ನು ಕೇಳಿ ನನಗೆ ವಿಷಾದವೆನಿಸಿದೆ, ತೆರವಾದ ಸ್ಥಾನವನ್ನು ತುಂಬಲು ಸದನವು ಎಲ್ಲ ಕ್ರಮಕೈಗೊಳ್ಳುವುದೆಂದು ನನಗೆ ಭರವಸೆಯಿದೆ.

# ೮೭
# ಸಿಮ್ಲಾ ಕಾರ್ಟ್‌ರಸ್ತೆ ವಸತಿ ನಿಲಯಗಳ ಬಳಿ ಒಂದು ರಿಕ್ಷಾ ನಿಲ್ದಾಣವನ್ನು ಮಂಜೂರು ಮಾಡುವ ಬಗ್ಗೆ *

**೬೨. ಶ್ರೀ ಅಮರೇಂದ್ರನಾಥ್ ಚಟ್ಟೋಪಾಧ್ಯಾಯ :** ಸಿಮ್ಲಾದ ಕಾರ್ಟ್ ರಸ್ತೆಯ ವಸತಿಮನೆಗಳನ್ನು ಕೇಂದ್ರೀಯ ಶಾಸನಸಭೆಯ ಸದಸ್ಯರಿಗಾಗಿ ಕಾಯ್ದಿರಿಸಲ್ಪಟ್ಟಿದೆಯೇ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಿದ್ದಲ್ಲಿ ಸಿಮ್ಲಾದ ಪುರಸಭಾ ಸಮಿತಿಯನ್ನು ಕೆಳಕಂಡ ವಿಷಯಗಳ ಬಗ್ಗೆ ಕೇಳಲು ನಿಯೋಜಿಸಿರುವರೆ :

i) ಸದಸ್ಯರು ಅನುಕೂಲಕ್ಕಾಗಿ ವಸತಿಮನೆಗಳ ಸಮೀಪ ಒಂದು ರಿಕ್ಷಾ ನಿಲ್ದಾಣವನ್ನು ರೂಪಿಸುವುದು; ಹಾಗೂ

ii) ಶಾಸನಸಭಾ ಸದಸ್ಯರು ತಾತ್ಕಾಲಿಕವಾಗಿ ವಸತಿಮನೆಗಳನ್ನು ಪಡೆಯುವಾಗ ವಿದ್ಯುದ್ದೀಪಕ್ಕಾಗಿ ಅವರಿಂದ ಭದ್ರತಾ ಠೇವಣಿಯನ್ನು ಸ್ವೀಕರಿಸದಿರುವುದು.

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಸದಸ್ಯರು ಕಾರ್ಟ್ ರಸ್ತೆಯ ವಸತಿಮನೆಗಳನ್ನು ತಾತ್ಕಾಲಿಕ ಅವಧಿಗೆ. ಮಾತ್ರ ಪಡೆಯುವ ನಿಮಿತ್ತ ರಿಕ್ಷಾ ನಿಲ್ದಾಣದ ಏರ್ಪಾಟಿಗಾಗಿ ಸರ್ಕಾರವು ಸಿಮ್ಲಾ ಪುರಸಭಾ ಸಮಿತಿಯನ್ನು ಕೇಳಬೇಕಾದ ಅಗತ್ಯವಿರುವುದಿಲ್ಲ. ಸಿಮ್ಲಾದಲ್ಲಿ ವಿದ್ಯುತ್ತನ್ನು ಸರಬರಾಜು ಮಾಡಬೇಕಾದ ಕರ್ತವ್ಯ ಸಿಮ್ಲಾ ಪುರಸಭಾ ಸಮಿತಿಯವರದ್ದಾದ್ದರಿಂದ ಪುರಸಭೆಯವರು ಮಾಡುವ ಏರ್ಪಾಟಿನಲ್ಲಿ ಸರ್ಕಾರವು ಹಸ್ತಕ್ಷೇಪ ಮಾಡಲು ಬರುವುದಿಲ್ಲವೆಂದು ವಿಷಾದದಿಂದ ತಿಳಿಸುತ್ತಿದ್ದೇನೆ.

# ೮೮
# ದೆಹಲಿ ಹಾಗೂ ನವದೆಹಲಿಯಲ್ಲಿ ನೀರು ಸರಬರಾಜು *

**೬೬. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅ) ನವದೆಹಲಿ ಹಾಗೂ ದೆಹಲಿಯಲ್ಲಿ ಸಾಕಷ್ಟು ಪ್ರಮಾಣದ ನೀರು ಸರಬರಾಜಿಗೆ ಏರ್ಪಾಟು ಮಾಡಿದೆಯೆ ಎಂಬುದನ್ನು ಗೌರವಾನ್ವಿತ ಸದಸ್ಯರು ತಿಳಿಸುವರೆ? ಈ ಬೇಸಗೆಯ ದಿನಗಳಲ್ಲಿ ನೀರಿನ ಬರವನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವರೆ?

ಅ) ಪಂಪುಗಳಿಗೆ ನೀರನ್ನು ಪಡೆಯಲು ಜಮುನಾ ನದಿ ತಳವನ್ನು ಮಟ್ಟ ಮಾಡುತ್ತಿರುವ ಸುದ್ದಿ ನಿಜವೇ? ಹಾಗಿದ್ದರೆ, ಆ ಕಾರ್ಯ ಎಷ್ಟು ಪ್ರಗತಿ ಹೊಂದಿದೆ? ಆ ಮೂಲಕ ಪಡೆದ ನೀರಿನಿಂದ ದೆಹಲಿ ಹಾಗೂ ನವದೆಹಲಿಯಲ್ಲಿನ ಎಲ್ಲಾ ಉದ್ದೇಶಗಳಿಗಾಗಿ ನೀರು ಸಾಕಾಗುವುದೇ?

ಇ) ಬೇಸಗೆ ದಿನಗಳಲ್ಲಿ ಪೈಪುಗಳಲ್ಲಿನ ನೀರು ಬಹಳ ಬೇಗ ಕಾಯ್ದುಬಿಡುವುದರಿಂದ ನೀರನ್ನು ತಣ್ಣಗಿಟ್ಟಿರಲು ಯಾವ ಕ್ರಮಕೈಗೊಳ್ಳಲಾಗಿದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೮ ಜುಲೈ ೧೯೪೩, ಪು. ೧೩೦

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೮ ಜುಲೈ ೧೯೪೩, ಪು. ೧೩೪–೩೫

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಶೋಧಿಸಿದ ನೀರಿನ ಸರಬರಾಜನ್ನು ಅಧಿಕಗೊಳಿಸುವ ದೃಷ್ಟಿಯಿಂದ ಈ ಬೇಸಗೆ ಕಾಲದಲ್ಲಿ ಐದು ಶೋಧಕಗಳನ್ನು ಸ್ಥಾಪಿಸಲಾಗಿದೆ, ಅಲ್ಲದೆ ಎರಡು ದೊಡ್ಡ ನೀರೆತ್ತುವ ಸಲಕರಣೆಗಳನ್ನು ಇಂಗ್ಲೆಂಡಿನಿಂದ ತರಿಸಲು ವ್ಯವಸ್ಥೆಮಾಡಿದೆ, ಅಕ್ಟೋಬರ್ ವೇಳೆಗೆ ಅವು ಭಾರತವನ್ನು ತಲುಪುವ ನಿರೀಕ್ಷೆಯಿದೆ. ಶೋಧಿಸದ ನೀರಿನ ಕೊರತೆಗೆ ಮುಖ್ಯ ಕಾರಣ ಜಮುನಾ ನದಿ ನೀರಿನಮಟ್ಟ ಅನಿರೀಕ್ಷಿತವಾಗಿ ಕಡಿಮೆಯಾದದ್ದು. ನೀರಿನ ಮಟ್ಟವನ್ನು ಹೆಚ್ಚಿಸಲು ಕಾಲುವೆಗೆ ಅಡ್ಡಲಾಗಿ ಅನೇಕ ಏರಿಗಳನ್ನು ಹಾಕಲಾಯಿತು. ಅಲ್ಲಿಂದೀಚೆಗೆ ಪರಿಸ್ಥಿತಿ ಉತ್ತಮವಾಗಿದೆಯಲ್ಲದೆ ಈಗ ನೀರಿನ ಕೊರತೆ ಇಲ್ಲವಾಗಿದೆ.

ಆ) ಬೇಸಗೆ ಕಾಲದ ಕಾಲುವೆಯನ್ನು ಬಲದಂಡೆಯ ಉದ್ದಕ್ಕೂ ತಿರುಗಿಸಿದರೆ ಅಲ್ಲೇ ಪಂಪಿಂಗ್ ಸ್ಟೇಷನ್ ನಿರ್ಮಾಣವಾಗಿರುವುದರಿಂದ ಪೂನಾದ ಹೈಡ್ರೊ–ಡೈನಾಮಿಕ್ ಸಂಶೋಧನಾ ಸ್ಟೇಷನ್‌ನಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಈ ವಿಷಯವನ್ನು ಕುರಿತು ತಪಾಸಣೆ ನಡೆಸಲು ನೇಮಕವಾಗಿದ್ದ ತಜ್ಞರ ಸಮಿತಿಯು ತನ್ನ ವರದಿಯನ್ನು ಈಗಾಗಲೇ ನೀಡಿದ್ದು ಅದರ ಅಧ್ಯಯನ ಈಗ ನಡೆಯುತ್ತಿದೆ.

ಇ) ನೀರನ್ನು ತಂಪಾಗಿಡುವಂಥ ವ್ಯವಸ್ಥೆಯೇನೂ ಸದ್ಯಕ್ಕೆ ಲಭ್ಯವಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಯಾಕೆ ಸಾಧ್ಯವಿಲ್ಲ? ಇಲ್ಲಿ ತುಂಬಾ ಚಳಿ ಇರುವ ಕಾರಣದಿಂದಲೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗೌರವಾನ್ವಿತ ಸದಸ್ಯರು ತಮ್ಮದೇ ತೀರ್ಮಾನಕ್ಕೆ ಬರಲು ಸ್ವತಂತ್ರರು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಇಲ್ಲಿ ವಿಪರೀತ ಚಳಿ ಇರುತ್ತದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗೌರವಾನ್ವಿತ ನನ್ನ ಮಿತ್ರರು ತಮ್ಮದೇ ತೀರ್ಮಾನಕ್ಕೆ ಬರಲು ಬಿಟ್ಟುಬಿಡುತ್ತೇನೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** ಈ ಉದ್ದೇಶಕ್ಕಾಗಿ ತಾವು 'ಭಾರತ ರಕ್ಷಣಾ ಕಾಯಿದೆ'ಯನ್ನು ಏಕೆ ಉಪಯೋಗಿಸಿಕೊಳ್ಳಬಾರದು?

## ೮೯

## ಕೇಂದ್ರಿಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸಲ್ಮಾನ ಸಹಾಯಕ ಎಸ್ಟೇಟ್ ಅಧಿಕಾರಿಗಳು*

**೭೧. ಶ್ರೀ ನಬಿ ಬಿಕ್ಷ್ ಇಲಾಹಿ ಬಕ್ಷ್ ಭುಟ್ಟೋ :** ಅ) ಗೌರವಾನ್ವಿತ ಕಾರ್ಮಿಕ ಸದಸ್ಯರು ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿನ ಒಟ್ಟು ಸಹಾಯಕ ಎಸ್ಟೇಟ್ ಅಧಿಕಾರಿಗಳ ಸಂಖ್ಯೆಯೆಷ್ಟೆಂದು ತಿಳಿಸುವರೆ?

ಆ) ಅವರ ಪೈಕಿ ಮುಸಲ್ಮಾನರ ಸಂಖ್ಯೆಯೆಷ್ಟು?

ಇ) ಮುಸ್ಲಿಮರ ಅನುಪಾತವನ್ನು ಕಾಪಾಡಿರುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೮ ಜುಲೈ ೧೯೪೩, ಪು. ೧೩೯

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ನಾಲ್ಕು; ಒಂದು ಹುದ್ದೆ ಸದ್ಯಕ್ಕೆ ಖಾಲಿಯಿದೆ.

ಆ) ಯಾರೂ ಇಲ್ಲ.

ಇ) ಸದ್ಯಕ್ಕೆ ಅನುಪಾತ ಕಾಪಾಡಿಲ್ಲ, ಆದರೆ ಫೆಡರಲ್ ಲೋಕಸೇವಾ ಆಯೋಗವನ್ನು ಖಾಲಿಯಾಗಿರುವ ಹುದ್ದೆಗೆ ಮುಸ್ಲಿಮ್‌ರನ್ನು ನೇಮಕ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಸದ್ಯದಲ್ಲಿಯೇ ಮುಸ್ಲಿಮ್ ಅನುಪಾತವನ್ನು ಸರಿಪಡಿಸಲಾಗುವುದು.

## ೯೦
## ಗಜಿಯಾಬಾದ್ ಹೊಸ ಕಟ್ಟಡಗಳ ನಿರ್ಮಾಣ *

**೭೨. ಸರ್‌ದಾರ್ ಸಂತ್ ಸಿಂಗ್ :** ಅ) ೨೯ನೇ ಜೂನ್, ೧೯೪೩ರ 'ಡಾನ್' ಪತ್ರಿಕೆಯಲ್ಲಿ 'ಥಿಕ್ ವೇಸ್ಟ್' ಎಂಬ ಶಿರೋನಾಮೆಯಡಿಯಲ್ಲಿ ಪ್ರಕಟವಾದ ಮುಖ್ಯ ಲೇಖನವು ಗೌರವಾನ್ವಿತ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ನವದೆಹಲಿಯ ಆಸುಪಾಸನ್ನು ಬಿಟ್ಟು ಗಜಿಯಾಬಾದ್‌ನಲ್ಲಿ ಈ ಕಟ್ಟಡಗಳನ್ನು ಕಟ್ಟಲು ಕಾರಣಗಳೇನು?

ಆ) ಸಮರ ಕಾಲದಲ್ಲಿ ಮಾತ್ರ ಉಪಯೋಗಿಸಲ್ಪಡುವಂಥ ಕೇವಲ ತಾತ್ಕಾಲಿಕವಾದ ಕಟ್ಟಡಗಳು ಇವು ಎಂಬುದು ನಿಜವೇ? ಹಾಗಿದ್ದಲ್ಲಿ, ನವದೆಹಲಿಯಲ್ಲಿ ಗೆಜೆಟೆಡ್ ಸಿಬ್ಬಂದಿಗಳಿಗೆ ವಸತಿ ಸೌಕರ್ಯ ಬಹಳ ಕಡಿಮೆ ಇರುವುದೆಂದು ಮಾನ್ಯ ಸದಸ್ಯರಿಗೆ ತಿಳಿದಿದೆಯೇ? ಹಾಗಿದ್ದಲ್ಲಿ, ಯುದ್ಧದ ನಂತರ ಗೆಜೆಟೆಡ್ ಅಧಿಕಾರಿಗಳ ವಸತಿಗೋಸ್ಕರ ಮನೆಗಳನ್ನು ನಿರ್ಮಿಸುವ ದಿಶೆಯಲ್ಲಿ ಸರ್ಕಾರ ಕ್ರಮಕೈಗೊಂಡಿಲ್ಲವೇಕೆ?

ಇ) ಯುದ್ಧದ ನಂತರ ರಕ್ಷಣಾ ಇಲಾಖೆ ಗಜಿಯಾಬಾದ್‌ನಲ್ಲಿ ನಿರ್ಮಿಸಲಾಗಿರುವ ಮನೆಗಳನ್ನು ಉಪಯೋಗಿಸದ ಪಕ್ಷದಲ್ಲಿ ಅವುಗಳನ್ನು ನಿರ್ಮಿಸಿ ಏನು ಉಪಯೋಗವಾಯಿತು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು. ಆದರೆ ಲೇಖನದಲ್ಲಿ ಹೇಳಿರುವಂಥ ಸಂಗತಿಗಳಲ್ಲಿ ಎಲ್ಲವೂ ನಿಜವಲ್ಲ.

ಆ) ಮತ್ತು ಇ) ಈ ವಿಷಯವನ್ನು ಪರಿಗಣಿಸಲಾಗುತ್ತಿದೆ, ಸ್ಪಷ್ಟವಾದ ನಿರ್ಧಾರವನ್ನು ಇನ್ನೂ ಕೈಗೊಂಡಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೧೩೯

# ೯೧
# ಕೈಗಾರಿಕಾ ಕಾರ್ಮಿಕರಿಗೆ ಆರೋಗ್ಯ ವಿಮೆಯ ಯೋಜನೆ*

**೧೨೭. ಶ್ರೀ ನಬಿ ನಕ್ಷ್ ಇಲಾಹಿ ಬಕ್ಷ್ ಭುಟ್ಟೋ :** ಅ) ಕೈಗಾರಿಕಾ ಕಾರ್ಮಿಕರಿಗಾಗಿ ಆರೋಗ್ಯ ವಿಮಾ ಯೋಜನೆ ಪೂರ್ಣಗೊಂಡಿರುವುದೇ ಎಂಬುದಾಗಿ ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಈ ಯೋಜನೆಯು ಯಾವಾಗ ಚಾಲ್ತಿಗೆ ಬರುವ ನಿರೀಕ್ಷೆಯಿದೆ?

ಇ) ಈ ಯೋಜನೆಯ ಒಂದು ಪ್ರತಿಯನ್ನು ಸದನಕ್ಕೆ ಒದಗಿಸಲು ಗೌರವಾನ್ವಿತ ಸದಸ್ಯರು ಉದ್ದೇಶಿಸಿರುವರೆ?

ಈ) ಈ ಯೋಜನೆಯ ಕುರಿತು ಪ್ರಾಂತೀಯ ಸರ್ಕಾರಗಳು ಹೊಂದಿರುವ ಅಭಿಪ್ರಾಯವನ್ನೂ ಸಹ ಅವರು ಸದನಕ್ಕೆ ಒದಗಿಸಲು ಉದ್ದೇಶಿಸಿರುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಆಯ್ದ ಉದ್ದಿಮೆಗಳಲ್ಲಿನ ಕಾರ್ಮಿಕರ ಆರೋಗ್ಯ ವಿಮೆಯ ಒಂದು ಕರಡು ಯೋಜನೆಯನ್ನು ತಯಾರಿಸುವ ಸಲುವಾಗಿ ಭಾರತ ಸರ್ಕಾರ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿದೆ. ಯೋಜನೆಯು ಈಗ ಸಿದ್ಧವಾಗುತ್ತಿದ್ದು, ಅದು ಯಾವಾಗ ಚಾಲ್ತಿಗೆ ಬರುತ್ತದೆ ಎಂದು ಹೇಳುವುದು ಈ ಸಂದರ್ಭದಲ್ಲಿ ಸಾಧ್ಯವಿಲ್ಲ.

ಇ) ಮತ್ತು ಈ) ಈ ಅಂಶಗಳನ್ನು ತರುವಾಯ ಪರಿಗಣಿಸಲಾಗುವುದು. ಈ ಸಂಬಂಧ ಶಾಸನ ಮಾಡಬೇಕಾದ ಅಗತ್ಯವಿದೆ, ಅಲ್ಲದೆ ಈ ಯೋಜನೆಯ ವಿವರಗಳನ್ನು ಸದನಕ್ಕೆ ತಿಳಿಸಲಾಗುವುದು.

**ಶ್ರೀ ಲಾಲ್ ಚಂದ್ ನವಲ್‌ರಾಯ್ :** ಈ ಯೋಜನೆ ತಯಾರಿಕೆ ಎಷ್ಟರ ತನಕ ಸಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪ್ರಾಥಮಿಕ ವರದಿಯನ್ನು ಈಗ ಸ್ವೀಕರಿಸಿದ್ದೇನೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಯಾವಾಗ ಈ ಯೋಜನೆ ಅಂದಾಜು ಸಿದ್ಧಗೊಳ್ಳುವ ನಿರೀಕ್ಷೆಯಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದರ ಬಗ್ಗೆ ಈಗ ನಾನೇನೂ ಹೇಳಲಾರೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಎರಡು ವರ್ಷ ಅಥವಾ ಒಂದು ವರ್ಷ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಎರಡು ತಿಂಗಳೊಳಗೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ವಂದನೆಗಳು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೬೮.

# ೯೨
# ಬಾಬರ್ ರಸ್ತೆ ಪ್ರದೇಶದಲ್ಲಿ ಯುದ್ಧಪೂರ್ವ ಬಾಡಿಗೆಗಿಂತ ಕಡಿಮೆ ಬಾಡಿಗೆಗಳನ್ನು ನಿಗದಿಪಡಿಸುವ ಬಗೆಗೆ*

**೧೩.೨. ಸರ್‌ದಾರ್ ಸಂತ್ ಸಿಂಗ್ :** ಅ) ಗೌರವಾನ್ವಿತ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

i) ೧ನೇ ಜುಲೈ ೧೯೪೨ರಿಂದ ಬಾಡಿಗೆ ನಿಯಂತ್ರಣಾಧಿಕಾರಿಯವರು ಬಾಬರ್ ರಸ್ತೆ ಪ್ರದೇಶದ ಮಧ್ಯಮವರ್ಗದ ಸಣ್ಣ ಮನೆಗಳಿಗೆ ಮಾಹೆಯಾನ ರೂ. ೪೨–೮–೦ ಅನ್ನು ನಿಗದಿಗೊಳಿಸಿರುವದು ಹಾಗೂ

ii) ೧೯೩೮–೩೯ರಲ್ಲೇ ನವದೆಹಲಿ ಪುರಸಭಾ ಸಮಿತಿಯವರು ಲೆಕ್ಕಹಾಕಿ ಬಾಡಿಗೆ ಮೌಲ್ಯ ಈ ಪ್ರದೇಶದಲ್ಲಿ ವಾರ್ಷಿಕ ರೂ. ೫೬೦ ಇರಬೇಕೆಂದು ತಿಳಿಸಿರುವಾಗ ಈಗ ನಿಗದಿಗೊಳಿಸಿರುವ ಬಾಡಿಗೆ ಇದಕ್ಕಿಂತ ಕಡಿಮೆಯಾಗಿರುವುದು.

ಆ) ೧೯೩೮ – ೩೯ರಲ್ಲಿ ನವದೆಹಲಿಯಲ್ಲಿ ಪುರಸಭಾ ಸಮಿತಿಯು ನಿಗದಿಗೊಳಿಸಿದ ಬಾಡಿಗೆಗಿಂತಲೂ ಈ ಬಾಡಿಗೆ ಕಡಿಮೆಯಾಗಿರಲು ಏನು ಆಧಾರ?

ಇ) ಇಷ್ಟು ವರ್ಷಗಳ ತನಕ ಹೆಚ್ಚಿನ ಪ್ರಮಾಣದ ಮನೆಗಂದಾಯವನ್ನು ಸರ್ಕಾರ ವಸೂಲು ಮಾಡಿರುವುದನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ?

ಈ) ನಿರ್ಣಯಿಸಿದ ಕಂದಾಯವು ಅತಿಯೆನಿಸದಿದ್ದರೆ ಬಾಡಿಗೆ ನಿಯಂತ್ರಣಾಧಿಕಾರಿಯವರ ಆದೇಶವನ್ನು ಸರ್ಕಾರ ಹೇಗೆ ಸಮರ್ಥಿಸಿಕೊಳ್ಳುತ್ತದೆ?

ಉ) ನ್ಯಾಯಸಮ್ಮತವಲ್ಲದ ಬಾಡಿಗೆ ನಿಯಂತ್ರಣಾಧಿಕಾರಿಯವರ ತೀರ್ಮಾನದಿಂದ ಸಾಮಾನ್ಯವಾಗಿ ಮಧ್ಯಮ ವರ್ಗಕ್ಕೆ ಸೇರಿದ ಈ ಪ್ರದೇಶದ ಮನೆಮಾಲೀಕರು ತುಂಬಾ ತೊಂದರೆಗೊಳಗಾಗಿರುವ ಸಂಗತಿ ಇವರ ಗಮನಕ್ಕೆ ಬಂದಿದೆಯೇ?

ಊ) ಕರೋಲ್‌ಬಾಗ್‌ನ ಪ್ರದೇಶದ ಪೂಸಾ ರಸ್ತೆ ಅಥವಾ ನವದೆಹಲಿಯ ಬೇರೆ ಯಾವುದೇ ಆದ ಸಂಯುಕ್ತ ಪ್ರದೇಶದಲ್ಲಿನ ಇಷ್ಟೇ ವಿಸ್ತೀರ್ಣದ ಮನೆಗಳಿಗೆ ಬಾಡಿಗೆ ನಿಯಂತ್ರಣಾಧಿಕಾರಿಗಳು ಎಷ್ಟು ಬಾಡಿಗೆಯನ್ನು ನಿಗದಿಮಾಡಿರುವರು?

ಋ) ೧೯೪೧ರಲ್ಲಿರುವ ಬಾಡಿಗೆಗಿಂತ ಶೇಕಡಾ ಹತ್ತರಷ್ಟನ್ನು ಸೇರಿಸಿ ಕಲ್ಕತ್ತೆಯ ಮನೆಗಳ ಬಾಡಿಗೆಯನ್ನು ನಿಯಂತ್ರಿಸಿ ಬಂಗಾಳದ ಸರ್ಕಾರ ನಿಗದಿಮಾಡಿರುವ ಸಂಗತಿ ಮಾನ್ಯ ಸದಸ್ಯರಿಗೆ ತಿಳಿದಿದೆಯೇ?

ೠ) ನವದೆಹಲಿಯಲ್ಲೂ ಸಹ ಇದೇ ಬಗೆಯಲ್ಲಿ ಬಾಡಿಗೆಯನ್ನು ಹೆಚ್ಚಿಸಲು ಅವಕಾಶ ಕೊಡುವ ಪ್ರಸ್ತಾವವಿದೆಯೇ? ಇಲ್ಲವಾದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) i) ಬಾಬರ್ ರಸ್ತೆ ಪ್ರದೇಶದಲ್ಲಿ ಬೇರೆ ಬೇರೆ ಬಾಡಿಗೆಯ ವಿಭಿನ್ನ ರೀತಿಯ ವಾಸದ ಮನೆಗಳಿವೆ. ರೂ. ೪೨–೮–೦ರ ಬಾಡಿಗೆ ಕೇವಲ ಒಂದು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೭೧

ವರ್ಗದ ಮನೆಗಳಿಗೆ ಮಾತ್ರ. ii) ಹೌದು.

ಆ) ದೆಹಲಿ ಮನೆಬಾಡಿಗೆ ನಿಯಂತ್ರಣ ಆದೇಶ, ೧೯೩೯ರ ಪ್ರಕಾರ ಅಧಿನಿಯಮ ೮ರಲ್ಲಿ ನಿಗದಿಪಡಿಸಿರುವಂತೆಯೇ ಬಾಡಿಗೆ ನಿಗದಿಯಾಗುವುದು, ಇದರ ಪ್ರಕಾರ ಬಾಡಿಗೆ ನಿಯಂತ್ರಣಾಧಿಕಾರಿ ಬಾಡಿಗೆಯನ್ನು ನಿಗದಿಪಡಿಸಬೇಕಾಗುತ್ತದೆ. ೧ನೇ ಸೆಪ್ಟೆಂಬರ್ ೧೯೩೯ರ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಅದೇ ಪರಿಸರದಲ್ಲಿ ಅದೇ ವಿಸ್ತೀರ್ಣದ ಮನೆಗೆ ದೊರಕುತ್ತಿದ್ದ ಬಾಡಿಗೆಯೇ ಎಲ್ಲ ಕಡೆಗೂ ಅನ್ವಯವಾಗುತ್ತದೆ.

ಇ) ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಷಯವಲ್ಲ.

ಈ) ಮೇಲಿನ ಆ) ಭಾಗದ ಪ್ರಶ್ನೆಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಇದು ಉದ್ಭವವಾಗುವುದೇ ಇಲ್ಲ.

ಉ) ಹೌದು, ಆದರೆ ಮನೆ ಮಾಲೀಕರು ಬಹಳ ತೊಂದರೆಗೊಳಗಾಗಿದ್ದಾರೆ ಎಂಬುದನ್ನು ಸರಕಾರವು ನಂಬುವುದಿಲ್ಲ.

ಊ) ಇದೇ ವಿಸ್ತೀರ್ಣದ ಮನೆಗಳು ಕರೋಲ್ ಬಾಗ್‌ನಲ್ಲಿ ಇಲ್ಲ.

ಋ) ಈ ವಿಷಯದಲ್ಲಿ ಅಧಿಕೃತವಾದ ಮಾಹಿತಿ ನನ್ನ ಬಳಿ ಇಲ್ಲ.

ೠ) ಇಲ್ಲ, ಸರ್ಕಾರಕ್ಕೆ ಇದನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ.

**ಸರ್‌ದಾರ್ ಸಂತ್ ಸಿಂಗ್ :** ನವದೆಹಲಿಯ ಪುರಸಭಾ ಸಮಿತಿ ಮಾಡಿದ ಬಾಡಿಗೆ ಅಂದಾಜಿನಲ್ಲಿರುವ ವ್ಯತ್ಯಾಸದ ಬಗ್ಗೆ ವಿಚಾರಣೆ ನಡೆಸಿ ಮನೆ ಮಾಲೀಕರಿಗೆ ನ್ಯಾಯ ದೊರಕಿಸಿ ಕೊಡುವಲ್ಲಿ ಸ್ವಲ್ಪ ಬಾಡಿಗೆ ಹೆಚ್ಚಿಸುವತ್ತ ಗೌರವಾನ್ವಿತ ಸದಸ್ಯರು ಗಮನಹರಿಸುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ನಾನದನ್ನು ಮಾಡಲಾರೆ. ಕಾರಣ, ಸರಿಯಾದ ಬಾಡಿಗೆಯನ್ನು ನಿಗದಿಮಾಡುವವರು ಅಧಿಕಾರಿಗಳು. ಅವರ ತೀರ್ಮಾನವನ್ನು ಬೇರೊಬ್ಬರು ತಪ್ಪಾಗಿ ಅನುಷ್ಠಾನಗೊಳಿಸಿರುವರೆಂಬುದನ್ನು ನಂಬಲಾಗುವುದಿಲ್ಲ.

## ೯೩
## ಉಕ್ಕು, ಸಿಮೆಂಟು ಹಾಗೂ ಮರದ ಉಪಯೋಗವು ಅಗತ್ಯವಾಗಿರುವಂತಹ ನಿರ್ಮಾಣ ಕಾರ್ಯವನ್ನು ನಿಷೇಧಿಸುವುದು *

**೧೩.೫. ಸರ್ ಅಬ್ದುಲ್ ಹಲೀಮ್ ಘಜ್ನವಿ :** ಅ) ಕೆಲವು ಸ್ಥಳಗಳಲ್ಲಿ ಸರ್ಕಾರ ಸಿಮೆಂಟು, ಕಬ್ಬಿಣ ಹಾಗೂ ಮರದ ಉಪಯೋಗವನ್ನು ಒಳಗೊಂಡಂಥ ಬಗೆಯ ನಿರ್ಮಾಣ ಕಾರ್ಯವನ್ನು ರದ್ದುಗೊಳಿಸಬೇಕೆಂದು ಸಾರಿಸಿರುವ ಹಿನ್ನೆಲೆಯಲ್ಲಿ ಈ ಆಜ್ಞೆಯು ಸಿಮೆಂಟು, ಕಬ್ಬಿಣ ಹಾಗೂ ತೇಗದ ಮರವನ್ನು ಬೇಡದಂಥ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿರುವಂಥ ಕಟ್ಟಡಗಳಿಗೂ ಅನ್ವಯವಾಗುತ್ತದೆಯೇ ಎಂಬುದನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುತ್ತಾರೆಯೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೭೩–೭೪

ಆ) ಅ) ಭಾಗಕ್ಕೆ ಉತ್ತರ ನಕಾರಾತ್ಮಕವಾದರೆ, ಈಗಾಗಲೇ ತಮ್ಮ ಮನೆ ನಿರ್ಮಾಣಕ್ಕೆ ಪದಾರ್ಥಗಳನ್ನು ಜಮಾವಣೆ ಮಾಡಿಕೊಂಡಿದ್ದು ಕಿಟಕಿ ಬಾಗಿಲುಗಳಿಗೆ ಮಾವು ಇತ್ಯಾದಿ ಮರಗಳ ಪಟ್ಟಿಯನ್ನು ಉಪಯೋಗಿಸಿಕೊಳ್ಳಲು ಅನುಮತಿ ಕೊಡಲು ಅಧಿಕಾರಿಗಳು ವೀಕ್ಷಣೆ ನಡೆಸುವರೇ?

ಇ) ಆ) ಭಾಗಕ್ಕೆ ಹೌದೆಂದರೆ, ಆ ಸಂಬಂಧವಾಗಿ ಎಲ್ಲಾ ಪ್ರದೇಶಗಳಿಗೂ ಸರ್ಕಾರ ಸೂಚನೆ ಹೊರಡಿಸಲು ಪ್ರಸ್ತಾಪಿಸಿರುವುದೇ? ಹಾಗಿಲ್ಲದಿದ್ದರೆ, ಸಿಮೆಂಟು, ಕಬ್ಬಿಣ ಹಾಗೂ ಮರವನ್ನು ಬೇಡದಂಥ ನಿರ್ಮಾಣ ಕಾರ್ಯಗಳನ್ನೂ ಸದ್ಯಕ್ಕೆ ನಿಲ್ಲಿಸಬೇಕಾದ ಪ್ರಮೇಯವುಂಟಾಗುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಯಿಂದ ಇ) ಕಾರ್ಮಿಕರು ಹಾಗೂ ಪದಾರ್ಥಗಳ ಬೇಡಿಕೆಯನ್ನು ತಗ್ಗಿಸಿ ಬೆಲೆಯೇರಿಕೆ ಗತಿಯನ್ನು ತಡೆಗಟ್ಟಲು ಭಾರತ ಸರ್ಕಾರ ಆದಷ್ಟೂ ಸ್ಥಾನೀಯ ಪ್ರಾಧಿಕಾರ ಹಾಗೂ ಖಾಸಗಿ ವ್ಯಕ್ತಿಗಳು ನಿರ್ಮಾಣ ಮಾಡುವುದಕ್ಕೆ ಪ್ರೋತ್ಸಾಹ ನೀಡಬಾರದೆಂದು ಪ್ರಾಂತೀಯ ಸರ್ಕಾರಗಳಿಗೆ ತಿಳಿಸಿದೆ. ಇವು ಕೇವಲ ಸಾಮಾನ್ಯ ಸೂಚನೆಗಳು, ಹಾಗಾಗಿ, ಆಯಾ ಪ್ರಾಂತ್ಯದಲ್ಲಿ ಪ್ರಚಲಿತವಿರುವ ವಿದ್ಯಮಾನದ ಆಧಾರದ ಮೇಲೆ ಈ ಸೂಚನೆಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಮತ್ತು ಸ್ವಾತಂತ್ರ್ಯವನ್ನು ಆಯಾ ಪ್ರಾಂತ್ಯಕ್ಕೆ ಬಿಡಲಾಗಿದೆ. ಯಾವ ಪ್ರಾಂತ್ಯದ ಆದೇಶಕ್ಕೆ ಸ್ಪಷ್ಟೀಕರಣ ಬೇಕಾಗಿದೆಯೋ ಆ ಪ್ರಾಂತ್ಯದ ಸರ್ಕಾರವನ್ನು ಭೇಟಿ ಮಾಡಲು ಮಾನ್ಯ ಸದಸ್ಯರಿಗೆ ಸೂಚನೆ ನೀಡುತ್ತಿದ್ದೇನೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಯುದ್ಧದ ಉದ್ದೇಶಗಳಿಗೆ ಈ ಪದಾರ್ಥಗಳು ಸರಬರಾಜಾಗುತ್ತಿರುವ ಕಾರಣದಿಂದ ಇವನ್ನು ನಿಷೇಧಿಸಲಾಗಿದೆಯೋ ಅಥವಾ ಬೇರೆ ಏನಾದರೂ ಕಾರಣವಿದೆಯೋ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಯುದ್ಧದ ಉದ್ದೇಶಗಳಿಗಾಗಿ.

**ಸರ್ ಅಬ್ದುಲ್ ಹಲೀಮ್ ಘಜ್ನವಿ :** ಈ ಸದನದ ಗೌರವಾನ್ವಿತ ಸದಸ್ಯರೊಬ್ಬರು ತಮ್ಮ ಮನೆಯನ್ನು ಪೂರ್ಣಗೊಳಿಸಬೇಕೆಂದು ಕೇಳಿಕೊಂಡಾಗಲೂ ಮಥ್ರಾದ ಜಿಲ್ಲಾ ನ್ಯಾಯಾಧೀಶರು ಅನುಮತಿ ನೀಡದೆ ನಿರಾಕರಿಸಿರುವುದನ್ನು ಗೌರವಾನ್ವಿತ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಅವರು ಕೇವಲ ೨೨ ಮಾವಿನ ಮರದ ಪಟ್ಟಿಗಳನ್ನು ಬಾಗಿಲುಗಳಿಗೆ ಉಪಯೋಗಿಸುವುದಾಗಿ ತಿಳಿಸಿದ್ದರು. ಉಳಿದಿದ್ದದ್ದು ಅಷ್ಟೇ ಕೆಲಸ, ಆದರೆ ನ್ಯಾಯಾಧೀಶರು ಅದಕ್ಕೆ ಅನುಮತಿ ನೀಡಲಿಲ್ಲ.

**ಅಧ್ಯಕ್ಷರು** (ಸಯದ್ ಗುಲಾಮ್ ಭಿಕ್ ನೈರಂಗ್) : ಇದು ವಾಸ್ತವಾಂಶಗಳ ವಿವರವಾಯಿತು, ಪ್ರಶ್ನೆಯಲ್ಲ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಮಾಹಿತಿ ನನಗೆ ಸಿಕ್ಕಿದ್ದರಿಂದ ನನಗೆ ಸಂತೋಷವಾಗಿದೆ.

**ಸರ್ ಅಬ್ದುಲ್ ಹಲೀಮ್ ಘಜ್ನವಿ :** ಈ ಸಂಬಂಧವಾಗಿ ಸಂಬಂಧಪಟ್ಟ ವ್ಯಕ್ತಿಯು ಆಗ್ರಾ ವಿಭಾಗದ ಆಯುಕ್ತರನ್ನು ಭೇಟಿ ಮಾಡಿದುದು ನಿಜವೇ? ಭೇಟಿಯಾದ ಸಂದರ್ಭದಲ್ಲಿ ಆಯುಕ್ತರು ಜಿಲ್ಲಾ ನ್ಯಾಯಾಧೀಶರಿಗೆ ಮನದಟ್ಟು ಮಾಡಿ ಮನೆ ನಿರ್ಮಾಣ ಪೂರ್ಣಗೊಳಿಸಲು ಅಗತ್ಯವಾದ ಮರಮುಟ್ಟು ಈಗಾಗಲೇ ತಮ್ಮ ಬಳಿಯಿದೆಯೆಂದು ತಿಳಿಸಿ ಒಪ್ಪಿಗೆ ಪಡೆದರೆ ಮಂಜೂರಾತಿ ನೀಡುವುದಾಗಿ ಆ ವ್ಯಕ್ತಿಗೆ ತಿಳಿಸಿದರಂತೆ. ಅಗತ್ಯವಾದಷ್ಟು ಮರಮುಟ್ಟು ತಮ್ಮ ವಶದಲ್ಲಿರುವುದಾಗಿ ಜಿಲ್ಲಾ ನ್ಯಾಯಾಧೀಶರಿಗೆ ಸದರಿ ವ್ಯಕ್ತಿ ಮನದಟ್ಟು ಮಾಡಿದಾಗ್ಯೂ ಜಿಲ್ಲಾ ನ್ಯಾಯಾಧೀಶರು ಅನುಮತಿ ನೀಡದೆ ನಿರಾಕರಿಸಿದ್ದಾರೆ.

**ಅಧ್ಯಕ್ಷರು** (ಸಯದ್ ಗುಲಾಮ್ ಭಿಕ್ ನೈರಾಂಗ್) : ಮತ್ತೆ ಇದು ವಿವರವಾಯಿತೇ ಹೊರತು ಪ್ರಶ್ನೆಯಲ್ಲ.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ಅರ್ಧ ಮುಗಿದ ಅಥವಾ ಮುಕ್ಕಾಲು ಭಾಗ ನಿರ್ಮಾಣಕಾರ್ಯ

ಪೂರ್ಣಗೊಂಡ ಮನೆಗಳಿಗೂ ಸಹ ತಡೆಯೊಡ್ಡಲಾಗಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಬಗ್ಗೆ ಮೇಲೆ ನನ್ನಲ್ಲಿ ಮಾಹಿತಿಯಲ್ಲ.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ಈ ವಿಷಯದಲ್ಲಿ ಯಾರಿಗಾದರೂ ರಿಯಾಯಿತಿ ಸಿಕ್ಕಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪ್ರಾಂತ್ಯಗಳಿಗೆ ಸಾಮಾನ್ಯ ಸೂಚನೆಯನ್ನು ನಾವು ನೀಡಿದ್ದೇವೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ವಿವೇಚನಾಧಿಕಾರವನ್ನು ಅವುಗಳಿಗೆ ನೀಡಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿವೇಚನಾಧಿಕಾರವನ್ನು ಬಹಳ ಎಚ್ಚರಿಕೆಯಿಂದ ಅವರು ಉಪಯೋಗಿಸುವರೆಂದು ನನಗೆ ಭರವಸೆಯಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಹಾಗಾದರೆ ಕೇಂದ್ರ ಸರ್ಕಾರ ಇದುವರೆಗೆ ಯಾವುದೇ ಸೂಚನೆಯನ್ನು ನೀಡಿಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಘಟ್ಟದಲ್ಲಿ ನಾನದನ್ನು ಹೇಳಲಾರೆ.

## ೯೪
## ಯುದ್ಧ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನವದೆಹಲಿ ಹಾಗೂ ಸಿಮ್ಲಾದಲ್ಲಿ ಕಟ್ಟಡಗಳ ನಿರ್ಮಾಣದ ವೆಚ್ಚ *

**೧೪೪. ಸರ್‌ದಾರ್ ಸಂತ್‌ಸಿಂಗ್ :** ಸೆಪ್ಟೆಂಬರ್ ೧೯೩೯ರಿಂದ ಇಲ್ಲಿಯವರೆಗೆ ಯುದ್ಧದ ಚಟುವಟಿಕೆಗಳ ಕಾರಣ ಭಾರತ ಸರ್ಕಾರವು ನವದೆಹಲಿ ಹಾಗೂ ಸಿಮ್ಲಾದಲ್ಲಿ ನಿರ್ಮಿಸಿರುವ ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಮಾಡಿರುವ ಖರ್ಚೆಷ್ಟು ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಅಮೆರಿಕನ್ನರ ಕಾರಣದಿಂದ ಏನಾದರೂ ಖರ್ಚು ತಗುಲಿರಬಹುದೆ? ಹಾಗಿದ್ದರೆ ಎಷ್ಟು ಮತ್ತು ಆ ಖರ್ಚನ್ನು ಯಾರು ಭರಿಸಿರುವರು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾರ್ಚ್ ೧೯೪೩ರ ಕೊನೆಯತನಕ ಆಗಿರುವ ಖರ್ಚು ಈ ರೀತಿಯಿದೆ :

i) ನವದೆಹಲಿ – ರೂ. ೧,೫೫,೧೪,೬೨೯

ii) ಸಿಮ್ಲಾ – ರೂ. ೨೪,೬೫,೧೩೭

iii) ಅಮೆರಿಕನ್ನರ ಪರವಾಗಿ – ರೂ. ૩೮,೪೭,೯೧೬

(ಪರಸ್ಪರ ಗುತ್ತಿಗೆ/ಸಾಲ ಗೊತ್ತುವಳಿ ಮೇರೆಗೆ, ಈ ಖರ್ಚನ್ನು ರಕ್ಷಣಾ ಶಾಖೆಯ, ಭರಿಸಿದೆ.

**ಮೌಲಾನಾ ಜಫರ್ ಆಲಿಖಾನ್ :** ಯುದ್ಧದ ನಂತರ ಈ ಎಲ್ಲಾ ತಾತ್ಕಾಲಿಕ ಕಟ್ಟಡಗಳನ್ನು ನೆಲಸಮ ಮಾಡುವಿರಿ ಎಂದು ತಿಳಿಯಬಹುದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ૩, ೨ನೇ ಆಗಸ್ಟ್ ೧೯೪૩, ಪು. ೨೮೨

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

**ಸರ್‌ದಾರ್ ಸಂತ್‌ಸಿಂಗ್ :** ಅಮೆರಿಕನ್ನರ ಮೇಲೆ ಮಾಡಿರುವ ರೂ. ೩೮,೪೭,೯೧೬ರ ವೆಚ್ಚವನ್ನು ಯಾವ ಸರ್ಕಾರ ಭರಿಸುತ್ತದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪರಸ್ಪರ ಗುತ್ತಿಗೆ/ಸಾಲದ ಏರ್ಪಾಟಿನ ರೀತಿ ಭಾರತ ಸರ್ಕಾರವೇ ಭರಿಸುತ್ತದೆ.

**ಸರ್‌ದಾರ್ ಸಂತ್‌ಸಿಂಗ್ :** ಭಾರತದ ತೆರಿಗೆದಾರರ ಮೇಲೆ ಬೀಳುವ ಈ ಖರ್ಚನ್ನು ನಂತರ ಕಳೆಯಲಾಗುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಿರೀಕ್ಷಿಸಿರಿ.

## ೯೫
## ಮೊದಲಿನ ಸ್ಟಾಂಡರ್ಡ್ ಕಾಲಮಾನದಿಂದಾಗಿ ತೊಂದರೆಗೆ ಒಳಗಾದ ಕಾರ್ಖಾನೆಗಳು *

**೧೫೧. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ಯಾವಯಾವ ಕಾರ್ಖಾನೆಗಳು (ಯಾವ ಯಾವ ಪ್ರದೇಶಗಳಲ್ಲಿ) ಮೊದಲಿನ ಪ್ರಮಾಣೀಕೃತ ಕಾಲಮಾನದ ಏರ್ಪಾಟಿನಿಂದ ತೊಂದರೆ ಅನುಭವಿಸಬೇಕಾಯಿತು.

ಆ) ಅಂತಹ ಕಾರ್ಖಾನೆಗಳ ಸಂಖ್ಯೆಯೆಷ್ಟು, ಹಾಗೂ ಸ್ಟಾಂಡರ್ಡ್ ಕಾಲಮಾನ ಅನುಸರಿಸಿದ ಕಾರಣ ಅವುಗಳು ಅನುಭವಿಸಿದ ನಷ್ಟದ ಪ್ರಮಾಣವೇನು?

ಇ) ಮೊದಲಿನ ಸ್ಟಾಂಡರ್ಡ್ ಕಾಲಮಾನವನ್ನು ಮತ್ತೆ ಜಾರಿಗೆ ತರುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೇ? ಇಲ್ಲದಿದ್ದರೆ, ಅದಕ್ಕೆ ಕಾರಣವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮೊದಲಿನ ಸ್ಟಾಂಡರ್ಡ್ ಕಾಲಮಾನದ ಪಾಲನೆಯಿಂದ ದೇಶದ ಯಾವುದೇ ಭಾಗದ ಕಾರ್ಖಾನೆಗಳು ನಷ್ಟ ಅನುಭವಿಸಿದ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರು ಬಂದಿಲ್ಲ.

ಆ) ಇದು ಉದ್ಭವವಾಗುವುದಿಲ್ಲ.

ಇ) ಮೊದಲನೇ ಭಾಗಕ್ಕೆ ಉತ್ತರ ನಕಾರಾತ್ಮಕವಾದದ್ದು. ಕಾಲವನ್ನು ಮುಂದೂಡಿದುದಕ್ಕೆ ಕಾರಣವನ್ನು ಈಗಾಗಲೇ ಸರ್ಕಾರವು ಪತ್ರಿಕೆಗಳ ಮೂಲಕ ತಿಳಿಸಿದೆ, ಆ ಸಂಬಂಧವಾದ ಮಾಹಿತಿ ಪಟ್ಟಿಯೊಂದನ್ನು ಸದನದಲ್ಲಿ ಇಡಲಾಗಿದೆ. ಹಳೆಯ ಸ್ಟಾಂಡರ್ಡ್ ಕಾಲಮಾನವನ್ನು ಮತ್ತೆ ಅಳವಡಿಸಿಕೊಳ್ಳುವುದಕ್ಕೆ ಯಾವ ಆಧಾರವನ್ನು ಅಲ್ಲಿ ತೋರಿಸಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೮೫

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

## ಪತ್ರಿಕಾ ಹೇಳಿಕೆ

ಎರಡು ಸ್ಟಾಂಡರ್ಡ್ ಕಾಲಮಾನಗಳ ಅಗತ್ಯತೆ ಕಂಡುಬಂದದ್ದು ಯುದ್ಧ ಕಾಲದಲ್ಲಿ ಮಾತ್ರ. ಹಾಗಾಗಿ, ಈ ವರ್ಷದ ಮೇ ೧೫ರಿಂದ ದೇಶದಾದ್ಯಂತ ಸಾರ್ವತ್ರಿಕವಾದ ಸ್ಟಾಂಡರ್ಡ್ ಕಾಲಮಾನವನ್ನು ನಿಗದಿಮಾಡಲಾಗಿದೆ. ಆ ಸ್ಟಾಂಡರ್ಡ್ ಕಾಲಮಾನವನ್ನು ನಿರ್ಧರಿಸುವಾಗ ಸರ್ಕಾರವು ಕೆಲವು ಅಂಶಗಳನ್ನು ಗಮನಿಸಬೇಕಾಯಿತು. ಉದಾಹರಣೆಗೆ, ಭೂಗೋಳ ಮಧ್ಯಾಹ್ನ ರೇಖೆಯ ಪಶ್ಚಿಮಕ್ಕೆ, ೮೨.೫° ಇರುವ ಪ್ರದೇಶಗಳಿಗೆ ಸಾಕಷ್ಟು ಹಗಲಿನ ಬೆಳಕು ದೊರೆಯುತ್ತದೆ ಹಾಗೆಯೇ ಪೂರ್ವದ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಬಳಕೆಯ ಮೇಲಿನ ಒತ್ತಡವನ್ನು ತಪ್ಪಿಸಬೇಕಾಗುವುದು, ಕಾರಣ, ಗೃಹಕೃತ್ಯ, ಕಛೇರಿಗಳು ಹಾಗೂ ಬೀದಿ ದೀಪಗಳ ಬಳಕೆ ಆ ಸಮಯದಲ್ಲೇ ಅಧಿಕವಾಗಿರುತ್ತದೆ. ಪೂರ್ವದ ಪ್ರಾಂತ್ಯಗಳಲ್ಲಿ ಬೇಸಿಗೆ ಕಾಲದಲ್ಲಿ ಹಗಲು ಬೆಳಕು ಸಾಕಷ್ಟು ದೊರೆಯುವುದರಿಂದ ಕಛೇರಿಗಳು ಹಾಗೂ ಕಾರ್ಖಾನೆಗಳು ಸಮಯವನ್ನು ಸರಿ ಹೊಂದಿಸಿ ಭಾರತಾದ್ಯಂತ ಗ್ರೀನ್‌ವಿಚ್ ಮೀನ್ ಟೈಮ್‌ಗಿಂತ ೫.೫ ಗಂಟೆಯಷ್ಟು ಕಾಲವನ್ನು ಮುಂದೆ ಹಾಕಿ ನಂತರ ಮೇ ೧೫ರಿಂದ ಏಕರೂಪದ ಸಮಯವನ್ನು ಮತ್ತೆ ಬದಲಾವಣೆ ಮಾಡಬೇಕಾದ ಸಾಧ್ಯತೆಯನ್ನು ಕುರಿತು ಭಾರತ ಸರ್ಕಾರ ಆಲೋಚಿಸಿತು. ಪೂರ್ವ ಪ್ರಾಂತ್ಯಗಳಲ್ಲಿ ಹಗಲು ಬೆಳಕಿನ ಮುಂದುವರಿಕೆಯನ್ನು ಗ್ಯಾರಂಟಿ ಮಾಡಿಕೊಳ್ಳುವ ಸಲುವಾಗಿ ನಿಕಟ ಭವಿಷ್ಯದಲ್ಲಿ ಬದಲಾವಣೆ ಮಾಡಿಕೊಂಡು ಭಾರತ ಪ್ರಮಾಣೀಕೃತ ಕಾಲಮಾನವನ್ನು ಗ್ರೀನ್‌ವಿಚ್ ಮೆರಿಡಿಯನ್ ಸಮಯಕ್ಕಿಂತ ೬.೫ ಗಂಟೆ ಮುಂದಕ್ಕೆ ಹಾಕಬೇಕಾಗುತ್ತದೆ. ಬದಲಾವಣೆ ಆಗಸ್ಟ್ ೩೧ – ಸೆಪ್ಟೆಂಬರ್ ೧ರ ಮಧ್ಯರಾತ್ರಿಯಿಂದ ಜಾರಿಗೆ ಬರುವುದು, ಆ ಸಮಯದಿಂದ ದಿನಾಂಕದ ಗಡಿಯಾರವನ್ನು ಒಂದು ಗಂಟೆ ಹಿಂದಕ್ಕೆ ಹಾಕಲಾಗುವುದು. ಗಡಿಯಾರಗಳಲ್ಲಿ ಒಂದು ಗಂಟೆ ಹಿಂದಕ್ಕೆ ಹಾಕುವ ಕಾರಣ ಭೂ–ಮಧ್ಯಾಹ್ನ ರೇಖೆಯಿಂದ ಪಶ್ಚಿಮಕ್ಕೆ ೮೨.೫ರಲ್ಲಿನ ಪ್ರಾಂತ್ಯದ ಜನರು ಸ್ವಲ್ಪ ತೊಂದರೆಯನ್ನು ಅನುಭವಿಸಬೇಕಾಗಬಹುದು, ಆದರೆ ಕೆಲಸದ ವೇಳೆಯನ್ನು ಸರಿಹೊಂದಿಸಿಕೊಳ್ಳುವುದರಿಂದ ಸಾರ್ವಜನಿಕರು ಬದಲಾದ ಸಮಯಕ್ಕೆ ಒಮ್ಮೆ ಹೊಂದಿಕೊಂಡುಬಿಟ್ಟರೆ ನಂತರ ಅವರಿಗೆ ಅದು ಕಷ್ಟವೆನಿಸುವುದಿಲ್ಲ.

# ೯೭
# ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಕುಸಿತ *

**೨೮. ಶ್ರೀ ಕೆ.ಸಿ. ನಿಯೋಗಿ :** ಅ) ಜನವರಿ, ೧೯೪೩ರಿಂದ ಬ್ರಿಟಿಷ್ ಭಾರತದಲ್ಲಿ ಕಲ್ಲಿದ್ದಲಿನಲ್ಲಿ ಉತ್ಪಾದನಾ ಪ್ರಮಾಣ ತಗ್ಗಿದೆಯೆ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ? ಹಾಗಿದ್ದಲ್ಲಿ ಉತ್ಪಾದನೆಯಲ್ಲಾದ ಈ ಕುಸಿತದ ಕಾರಣಗಳನ್ನು ಕಂಡುಹಿಡಿಯಲು ಸರ್ಕಾರ ಪ್ರಯತ್ನಿಸಿರುವುದೆ, ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ತರಲು ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಆ) ಬ್ರಿಟಿಷ್ ಭಾರತದಲ್ಲಿನ ಕಲ್ಲಿದ್ದಲಿನ ದಾಸ್ತಾನಿನ ಪ್ರಮಾಣವು ೧೯೪೨ರ ಡಿಸೆಂಬರ್ ೩೧ ರಂದು ಇದ್ದ ಪ್ರಮಾಣಕ್ಕಿಂತ ೧೯೪೩ರ ಮೇ ೩೧ರಂದು ಇದ್ದ ಪ್ರಮಾಣ ಕಡಿಮೆಯಾಗಿದ್ದುದು ನಿಜವೇ? ಹಾಗಿದ್ದಲ್ಲಿ ಈ ರೀತಿ ಕಲ್ಲಿದ್ದಲಿನ ಪ್ರಮಾಣ ಕಡಿಮೆಯಾಗಲು ಕಾರಣವೇನು?

ಇ) ೧೯೪೩ರ ಜನವರಿ ೧ರಿಂದ ೧೯೪೩ರ ಮೇಖಾರವರೆಗಿನ ಅವಧಿಯಲ್ಲಿ ಸಿಕ್ಕಿದ ಹೆಚ್ಚುವರಿ ಕಲ್ಲಿದ್ದಲನ್ನು ಸಾಗಿಸಲು ಸಾಕಷ್ಟು ಪ್ರಮಾಣದಲ್ಲಿ ವ್ಯಾಗನ್‌ಗಳು ದೊರೆಯಲಿಲ್ಲವೆಂಬುದು ನಿಜವೇ? ಹಾಗಿಲ್ಲದಿದ್ದಲ್ಲಿ ದಾಸ್ತಾನಿನಲ್ಲಿ ಕಡಿತವುಂಟಾಗಲು ಕಾರಣವೇನು?

ಈ) ಬಂಗಾಳ ಪ್ರಾಂತ್ಯದ ಕಜೋರಾ ಫೀಲ್ಡ್‌ನಲ್ಲಿ ಸುಮಾರು ೩೦ ಗಣಿಗಳಲ್ಲಿ ವಾರ್ಷಿಕ ಸರಾಸರಿ ಹತ್ತು ಲಕ್ಷ ಟನ್‌ನಷ್ಟು ಕಲ್ಲಿದ್ದಲು ಉತ್ಪತ್ತಿಯಾಗುತ್ತಿದ್ದು ಈ ಕಲ್ಲಿದ್ದಲನ್ನು ಸಾಗಣೆ ಮಾಡಲು ಉಪಯೋಗಿಸುತ್ತಿದ್ದ ವ್ಯಾಗನ್‌ಗಳನ್ನು ಮಿಲಿಟರಿ ಅಧಿಕಾರಿಗಳು ಉಪಯೋಗಿಸುತ್ತಿರುವ ಕಾರಣ ಕಲ್ಲಿದ್ದಲು ಉತ್ಪಾದನೆಯನ್ನು ನಿಲ್ಲಿಸುವ ಪ್ರಮೇಯವುಂಟಾಗಿರುವುದೇ? ಓಂಡಾಲ್ ಜಂಕ್ಷನ್‌ನಿಂದ ಮಿಲಿಟರಿ ಲಾರಿಗಳಿಂದಲೇ ಮಿಲಿಟರಿ ಪದಾರ್ಥಗಳನ್ನು ಸಾಗಿಸಬಹುದಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ. ಪ್ರಶ್ನೆಯ ಎರಡನೇ ಭಾಗ ಉದ್ಭವಿಸುವುದಿಲ್ಲ.

ಆ) ೧೯೪೨ರ ಡಿಸೆಂಬರ್ ೩೧ರಂದು ಇದ್ದುದೆಂದು ಹೇಳಲಾದ ದಾಸ್ತಾನಿನ ಲೆಕ್ಕಾಚಾರ ನಂಬಲರ್ಹವಾದುದಲ್ಲ. ದಾಸ್ತಾನಿನ ಪ್ರಮಾಣವನ್ನು ನಿಖರವಾಗಿ ತಿಳಿಯಲು ಬೇರೆ ಮುಂದುವರಿದ ವಿಧಾನಗಳನ್ನು ಈಗ ಅಳವಡಿಸಲಾಗಿದೆ. ೧೯೪೨ರ ಡಿಸೆಂಬರ್ ೩೧ ಅವಧಿಯಲ್ಲಿ ದಾಸ್ತಾನು ಕಡಿಮೆಯಾಗಿಲ್ಲ, ಬದಲಿಗೆ ಹೆಚ್ಚಾಗಿದೆ ಎಂಬುದನ್ನು ದೃಢಪಡಿಸಲು ಅಂಕಿ ಅಂಶವಿದೆ.

ಇ) ಮೊದಲನೆಯ ಭಾಗಕ್ಕೆ ಉತ್ತರ ಸಕಾರಾತ್ಮಕವಾಗಿದೆ, ಎರಡನೆಯ ಭಾಗಕ್ಕೆ ನಕಾರಾತ್ಮಕವಾಗಿದೆ.

ಈ) ಇಲ್ಲ. ಕಜೋರಾ ಗಣಿಗಳಲ್ಲಿ ಹಲವು ಪ್ರಾಯೋಗಿಕ ಯೋಜನೆಗಳು ನಡೆಯುತ್ತಿದೆ. ಒಕ್ರಾ ಸಂಖ್ಯೆ ೧ ಹಾಗೂ ೨ ಪ್ರಾಯೋಗಿಕ ಯೋಜನೆಗಳ ಪ್ರದೇಶಗಳಿಗೆ ಈ ಪ್ರಶ್ನೆ ಸಂಬಂಧಿಸಿದ್ದೆಂದು ತಿಳಿಯುವೆ. ಅಂದಾಜು ೩೦ ಗಣಿಗಳಲ್ಲಿ ಈ ಎರಡು ಪ್ರಾಯೋಗಿಕ ಯೋಜನೆಗಳ ಕೆಲಸ ನಡೆಯುತ್ತಿದೆ. ಇವೆರಡರ ಸಾಮರ್ಥ್ಯ ೧೦೦ ವ್ಯಾಗನ್ ಕಲ್ಲಿದ್ದಲಾಗಬಹುದು; ಅಂದರೆ ಒಂದು ದಿನಕ್ಕೆ ೨,೦೦೦ ಟನ್ನುಗಳು ಅಥವಾ ವರ್ಷಕ್ಕೆ ೭,೨೦,೦೦೦ ಟನ್ನುಗಳಾಗುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೮೬

'ಬಿ' ಹಾಗೂ 'ಎ' ರೈಲ್ವೆಯಿಂದ ಹೆಚ್ಚಿನ ಬೇಡಿಕೆ ಬಂದಿರುವುದರಿಂದ ವ್ಯಾಗನ್‌ಗಳ ಸರಬರಾಜಿನಲ್ಲಿ ಈ ಎರಡೂ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಬಂಗಾಳ ಹಾಗೂ ಬಿಹಾರದಲ್ಲಿ ಈಗ ಇರುವ ವ್ಯಾಗನ್‌ಗಳ ಪರಿಸ್ಥಿತಿಯನ್ನು ಗಮನಿಸಿದರೆ ಈ ಯೋಜನೆಗಳ ಸಾಮರ್ಥ್ಯವನ್ನು ಅಧಿಕಗೊಳಿಸಿದರೂ ಕೂಡ ದಿನಕ್ಕೆ ೧೦೦ ವ್ಯಾಗನ್‌ಗಳಿಗಿಂತ ಹೆಚ್ಚು ಲಭ್ಯವಾಗದೆಂದು ನನ್ನ ತಿಳಿವಳಿಕೆ. ಒಕ್ರಾ ೨ನೇ ಯೋಜನೆಯ ಸಾಮರ್ಥ್ಯದ ೨೦ ವ್ಯಾಗನ್‌ಗಳನ್ನು ಮಿಲಿಟರಿ ಡಿಪೊಗಳಿಗೆ ಕೊಡಲಾಗಿದೆ, ಆದರೆ ಮೇಲೆ ತಿಳಿಸಿದಂತೆ ಈ ಏರ್ಪಾಟಿನಿಂದ ಗಣಿಗಳ ಕಾರ್ಯವನ್ನು ನಿಲ್ಲಿಸುವ ಪ್ರಮೇಯವುಂಟಾಗದೆಂದು ಮಾತ್ರ ಹೇಳಬಹುದು. ಮಿಲಿಟರಿ ಲಾರಿಗಳಿಂದ ಓಂಡಾಲ್ ಜಂಕ್ಷನ್‌ನಿಂದ ಪದಾರ್ಥಗಳನ್ನು ಸಾಗಿಸಬಹುದೇ ಎಂಬುದರ ಕಡೆ ಭಾರತ ಸರ್ಕಾರ ಗಮನ ಹರಿಸಿಲ್ಲ.

## ೯೭
## ಬ್ರಿಟಿಷ್ ಭಾರತದಲ್ಲಿ ಬ್ರಿಟಿಷ್ ಅಥವಾ ಅಮೆರಿಕದ ಕಂಪನಿಗಳಿಗೆ ತೈಲಸಂಪನ್ಮೂಲಗಳಿಗೆ ರಿಯಾಯಿತಿ*

**೩೦. ಶ್ರೀ. ಕೆ.ಸಿ. ನಿಯೋಗಿ :** ೧೯೪೩ ಮಾರ್ಚ್ ೩೦ರಂದು ಕೇಳಿದ ೪೪೨ನೆಯ ಪ್ರಶ್ನೆಗೆ ಗಮನ ಹರಿಸಿ, ಗೌರವಾನ್ವಿತ ಕಾರ್ಮಿಕ ಸದಸ್ಯರು ಬ್ರಿಟಿಷ್ ಅಥವಾ ಅಮೆರಿಕನ್ ಕಂಪನಿಗಳಿಗೆ (ಶೋಧನೆ ರಹದಾರಿಗೆ ಸಂಬಂಧಿಸಿದಂತೆ) ಸಂಭವನೀಯ ತೈಲಮೂಲಗಳ ವಿಚಾರದಲ್ಲಿ ನೀಡಿರುವ ರಿಯಾಯ್ತಿಯನ್ನು ತೋರಿಸುವ ವಿವರವನ್ನು ಒದಗಿಸುವರೆ? ಹಾಗೆಯೇ ಆ ಸಂಬಂಧವಾಗಿ ವಿಧಿಸಲಾಗಿದ್ದ ಮುಖ್ಯವಾದ ಷರತ್ತುಗಳ ಒಂದು ಪ್ರತಿಯನ್ನು ಒದಗಿಸುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ೧೯೪೩ರ ಮಾರ್ಚ್ ೩೦ನೆಯ ತಾರೀಖಿನಂದು ಕೇಳಲಾದ ೪೪೧ನೆಯ ಪ್ರಶ್ನೆಗೆ ನೀಡಿದ ಉತ್ತರವನ್ನು ಈಗಾಗಲೇ ಸದನಕ್ಕೆ ಒದಗಿಸಿದ್ದು ಗೌರವಾನ್ವಿತ ಸದಸ್ಯರ ಗಮನವನ್ನು ಅದರತ್ತ ಸೆಳೆಯಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೮೭

## ೯೮
## ಕಾರ್ಮಿಕ ಸ್ಥಾಯೀ ಸಮಿತಿಯ ಮೂರನೇ ಸಭೆಯ ಕಲಾಪಗಳ ಸಾರಾಂಶ *

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಮಾರ್ಚ್ ತಿಂಗಳು ೭ ಹಾಗೂ ೮ನೇ ತಾರೀಖು ೧೯೪೩ರಂದು ನಡೆದ ಕಾರ್ಮಿಕ ಸ್ಥಾಯೀ ಸಮಿತಿಯ ಸಭೆಯ ಕಲಾಪಗಳ ಸಾರಾಂಶದ ಪ್ರತಿಯೊಂದನ್ನು ಸದನಕ್ಕೆ ** ಒದಗಿಸುತ್ತಿದ್ದೇನೆ.

## ೯೯
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚು ಸಂಬಳದ ಹುದ್ದೆಗಳಲ್ಲಿರುವ ಸಿಖ್ ಧರ್ಮೀಯರು ***

**೨೦೯. ಸರ್‌ದಾರ್ ಸಂತ್ ಸಿಂಗ್ :** ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇತರ ವಿಭಾಗಗಳಲ್ಲಿ ತಿಂಗಳಿಗೆ ರೂ. ೪೦೦ರ ಸಂಬಳದ ಎಷ್ಟು ಹುದ್ದೆಗಳಿವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ? ಇಂಥ ಹುದ್ದೆಗಳಲ್ಲಿ ಎಷ್ಟು ಮಂದಿ ಸಿಖ್ಖರು ಸೇವೆ ಸಲ್ಲಿಸುತ್ತಿದ್ದಾರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ರೂ. ೪೦೦ ಸಂಬಳದವರೆಗೆ ೬೦ ಹುದ್ದೆಗಳು, ರೂ. ೪೦೦ಕ್ಕಿಂತ ಮೇಲ್ಪಟ್ಟು ಸಂಬಳದ ೮೨ ಹುದ್ದೆಗಳೂ ಇವೆ. ಒಟ್ಟು ಇರುವ ೧೪೨ ಹುದ್ದೆಗಳಲ್ಲಿ ೬ ಮಂದಿ ಸಿಖ್ಖರು ಇರುತ್ತಾರೆ.

ಇತರ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆಯೆಷ್ಟು ಎಂದು ಸದಸ್ಯರು ಕೇಳಿದ ಪ್ರಶ್ನೆ ನನಗೆ ಸ್ಪಷ್ಟವಾಗಲಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೨೯೨

* ಈ ಚರ್ಚೆಯಲ್ಲಿ ಸೇರಿಸಿಲ್ಲ; ಆದರೆ ಇದರ ಪ್ರತಿಯನ್ನು ಸದನದ ಪುಸ್ತಕ ಭಂಡಾರದಲ್ಲಿ ಇರಿಸಲಾಗಿದೆ.

*** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೫ನೇ ಆಗಸ್ಟ್ ೧೯೪೩, ಪು. ೯೪೨೬

# ೧೦೦
# ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ರವರ ಕಛೇರಿಯ ಶಾಖೆಯನ್ನು ಸ್ಥಾಪಿಸುವುದು*

**೨೧೦**ಸರ್‌ದಾರ್ ಸಂತ್ ಸಿಂಗ್ :** (ಅ) ಕೇಂದ್ರೀಯ ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರ್‌ರವರ ಕಛೇರಿಯಲ್ಲಿ ಆಯ್ಕೆ ಮಂಡಳಿಯ ಕಲಾಪಗಳನ್ನು ಸುಲಲಿತಗೊಳಿಸುವ ಸಲುವಾಗಿ ಸಿಬ್ಬಂದಿ ವಿಷಯಗಳ ಬಗ್ಗೆ ಇತ್ತೀಚೆಗೆ ಒಂದು ಪ್ರತ್ಯೇಕ ಶಾಖೆಯನ್ನು ತೆರೆದಿರುವುದು ನಿಜವೇ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಈ ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವವರ ಒಟ್ಟು ಸಂಖ್ಯೆಯೆಷ್ಟು ಹಾಗೂ ಅವರಲ್ಲಿ, ಹಿಂದುಗಳು, ಸಿಖ್ಖರು ಹಾಗೂ ಮುಸ್ಲಿಮರ ಸಂಖ್ಯೆಯೆಷ್ಟು?

ಇ) ಸೂಪರಿಂಟೆಂಡೆಂಟ್‌ರವರೂ ಸೇರಿದಂತೆ ಇಲ್ಲಿ ಯಾರಿಗೂ ಸಿಬ್ಬಂದಿ ವಿಷಯಗಳಲ್ಲಿ ಅನುಭವವಿಲ್ಲವೆಂಬುದು ನಿಜ ಸಂಗತಿಯೆ?

ಈ) ಸಿಬ್ಬಂದಿ ಶಾಖೆಯಲ್ಲಿ ಈಗಾಗಲೇ ಕೆಲಸ ಮಾಡಿರುವ ಮಂದಿಯನ್ನು ಈ ಶಾಖೆಯಲ್ಲಿ ಏಕೆ ನೇಮಕ ಮಾಡಲಿಲ್ಲ?

ಉ) ಮುಸಲ್ಮಾನ ಜನಾಂಗಕ್ಕೆ ಸೇರಿದವರ ಸಮಸ್ಯೆಗಳನ್ನು ಬೇಗ ಇತ್ಯರ್ಥಮಾಡುತ್ತಿದ್ದು ಇತರೆ ಜನಾಂಗದವರ ಕಡತಗಳು ದೀರ್ಘಕಾಲದವರೆಗೆ ಇಲ್ಲಿ ಕಡೆಗಣಿಸಲ್ಪಡುತ್ತಿರುವುದು ನಿಜವೆ?

ಊ) ಈ ಶಾಖೆಯಲ್ಲಿ ಕೋಮು ಭಾವನೆಯಿಂದ ಕೆಲಸ ನಡೆಯುತ್ತಿರುವುದರ ಬಗ್ಗೆ ಸರ್ಕಾರ ವಿಚಾರಣೆ ನಡೆಸುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು

| | | |
|---|---|---|
| ಆ) | ಒಟ್ಟು ಸಿಬ್ಬಂದಿ ಸಂಖ್ಯೆ | ೧೨ |
| | ಹಿಂದೂಗಳು | ೫ |
| | ಮುಸ್ಲಿಮರು | ೬ |
| | ಸಿಖ್ಖರು | ಇಲ್ಲ |
| | ಭಾರತೀಯ ಕ್ರಿಶ್ಚಿಯನ್ನರು | ೧ |

ಇ) ಇಲ್ಲ ; ಸಿಬ್ಬಂದಿ ಶಾಖೆಗಳಿಂದ ಇಬ್ಬರು ಸಹಾಯಕರು ಹಾಗೂ ಮೂರು ಮಂದಿ ಗುಮಾಸ್ತರನ್ನು ತೆಗೆದುಕೊಂಡಿದೆ.

ಈ) ಅಲ್ಲಿ ಕೆಲಸಕ್ಕೆ ಅಡ್ಡಿಯಾಗುವ ನಿಮಿತ್ತ ಇದಕ್ಕಿಂತ ಹೆಚ್ಚು ಸಿಬ್ಬಂದಿಯನ್ನು, ಸಿಬ್ಬಂದಿ ಶಾಖೆಯಿಂದ ಪಡೆದುಕೊಳ್ಳಲಾಗಲಿಲ್ಲ.

ಉ) ಇಲ್ಲ.

ಊ) ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೯೪೩, ೫ನೇ ಆಗಸ್ಟ್ ೧೯೪೩, ಪು. ೪೨೬

** ಈ ಪ್ರಶ್ನೆಗೆ ಉತ್ತರ ನೀಡಲಾಯಿತು, ಪ್ರಶ್ನೆ ಕೇಳಿದವರು ತಮಗೆ ನೀಡಿದ್ದ ಕೋಟಾ ಮುಗಿಸಿದ್ದರು.

# ೧೦೧
# ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಶ್ರೀ ಬಕ್ಷಿ ಮದನ್‌ಸಿಂಗ್ ಎಂಬುವವರ ನೇಮಕಾತಿಯ ವಿರುದ್ಧ ನೀಡಿದ ದೂರು*

****೨೧೧. ಸರ್ದಾರ್ ಸಂತ್ ಸಿಂಗ್ :** ಅ) ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಕಾರ್ಯವಿಭಾಗದಲ್ಲಿ ಇತರೆ ಅಲ್ಪಸಂಖ್ಯಾತರಿಗಾಗಿ ಮೀಸಲಿದ್ದ ಸ್ಥಾನಕ್ಕೆ ಬಕ್ಷಿ ಮದನ್ ಸಿಂಗ್ ಎಂಬುವವರನ್ನು ಸಹಾಯಕ ಹುದ್ದೆಗೆ ನೇಮಕ ಮಾಡಿರುವುದು ನಿಜವೇ ಎಂದು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ರಕ್ಷಣಾ ಇಲಾಖೆಯ ನಿಬಂಧನೆಗನುಗುಣವಾಗಿ ಅವರ ನೇಮಕದ ಸಂದರ್ಭದಲ್ಲಿ ಅವರು ಸಿಖ್ ಜನಾಂಗದವರು ಎಂದು ಸಾಬೀತುಪಡಿಸುವಂಥ ಸೂಕ್ತ ಪ್ರಮಾಣಪತ್ರವನ್ನು ಕೇಳಲಾಯಿತೆ? ಇಲ್ಲವಾದರೆ, ಯಾಕಿಲ್ಲ?

ಇ) ಈ ಸೇವೆಗೆ ಸೇರುವ ಮೊದಲು ೩ ಅಥವಾ ೪ ಬಾರಿ ಶ್ರೀ ಬಕ್ಷಿ ಮದನ್ ಸಿಂಗ್ ಅವರು ಸಣ್ಣ ನೌಕರರಾಗಿದ್ದರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆಯೇ ಸಿಖ್ಖರಿಗೆ ಮೀಸಲಾಗಿದ್ದ ಹುದ್ದೆಯನ್ನು ಪಡೆದುಕೊಳ್ಳುವುದರಲ್ಲಿ ಇವರು ಸರ್ಕಾರಕ್ಕೆ ಮೋಸಮಾಡಿರುವುದು ಸ್ಪಷ್ಟವಾಗಿದೆಯಲ್ಲವೆ?

ಈ) ಸ್ಥಳೀಯ ಸಿಖ್ ಸಂಘಟನೆಗಳು ಈ ಸಂಬಂಧ ಹೆಚ್ಚುವರಿ ಮುಖ್ಯ ಇಂಜಿನಿಯರ್ ಹಾಗೂ ಆಡಳಿತಾಧಿಕಾರಿಗಳಿಗೆ ನೀಡಿರುವ ಅನೇಕ ದೂರುಗಳಲ್ಲಿ ಯಾವ ಒಂದನ್ನೂ ಅವರು ಪರಿಗಣಿಸದಿರುವುದು ನಿಜವೆ?

ಉ) ಈ ವ್ಯಕ್ತಿಯನ್ನು ತೆಗೆದುಹಾಕಿ ನಿಜವಾದ ಸಿಖ್ ಒಬ್ಬರನ್ನು ಆ ಜಾಗಕ್ಕೆ ನೇಮಕ ಮಾಡಲು ಸರ್ಕಾರಕ್ಕೆ ಮನಸ್ಸಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಇಲ್ಲ. ಆತನ ನೇಮಕಾತಿಯ ಕಾಲದಲ್ಲಿ ಸರ್ಕಾರ ಆತನ ಅರ್ಹತೆಯ ಬಗ್ಗೆ ದೃಢಪಡಿಸಿಕೊಂಡಿತ್ತು.

ಇ) ಇಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಯಾವ ಮಾಹಿತಿಯೂ ಇರಲಿಲ್ಲ.

ಈ) ಹೌದು. ಅವುಗಳನ್ನು ಒಪ್ಪಿಕೊಳ್ಳಲಾಗುತ್ತಿದೆ.

ಉ) ತಾನು ಅರ್ಜಿ ಹಾಕಿದ ಒಂದು ವರ್ಷದ ಒಳಗಾಗಿ ಈತ ಸಿಖ್ ಧರ್ಮವನ್ನು ಅವಲಂಬಿಸಿದನೆಂದೂ ಅಥವಾ ಕೇಶಧಾರಿಯಾದವನು 'ಪತಿತ'ನಾದ ಎಂದು ಸಾಬೀತಾದಾಗ ಮಾತ್ರ ಇದು ಸಾಧ್ಯವಾಗುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨ನೇ ಆಗಸ್ಟ್ ೧೯೪೩, ಪು. ೪೨೬–೨೭.

** ಪ್ರಶ್ನೆ ಕೇಳಿದವರು ತಮಗೆ ನೀಡಿದ್ದ ಪ್ರಶ್ನೆಗಳ ಕೋಟಾವನ್ನು ಮುಗಿಸಿದ್ದರು, ಆದ್ದರಿಂದ ಈ ಪ್ರಶ್ನೆಗೆ ಉತ್ತರವನ್ನು ನೀಡಲಾಯಿತು.

# ೧೦೨
# ಭಾರತದಲ್ಲಿರುವ ಖನಿಜಜಲದ ಬಗ್ಗೆಗಳ ವಾಣಿಜ್ಯ ಸಾಧನೆಗಳು *

**೫೦. ಶ್ರೀ ಕೆ.ಸಿ. ನಿಯೋಗಿ :** ೧೯೪೩ರ ಮಾರ್ಚ್ ೩೦ನೇ ದಿನಾಂಕದ ೭೨ನೇ ಸಂಖ್ಯೆಯ ಪ್ರಶ್ನೆಯ ಕಡೆ ಗಮನ ಹರಿಸಿ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ :

ಅ) ಭಾರತೀಯ ಖನಿಜ ಜಲದ ವಾಣಿಜ್ಯ ಸಾಧ್ಯತೆಗಳ ಬಗ್ಗೆ ಪರೀಕ್ಷೆ ನಡೆಸಿರುವರೆ, ಹಾಗೂ ಮೊದಲ ಅಜಮಾಯಿಶಿಗಾಗಿ ನೀರನ್ನು ಶೀಶೆಗಳಲ್ಲಿ ತುಂಬುವ ಕಾರ್ಯ ಈಗ ಪೂರ್ಣಗೊಂಡಿರುವುದೆ; ಮತ್ತು

ಆ) ಇದುವರೆಗೆ ಪತ್ತೆ ಮಾಡಿ ತೃಪ್ತಿಕರವೆಂದು ಕಂಡುಬಂದಿರುವಂಥ ನೀರ ಬುಗ್ಗೆಗಳು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಭಾರತೀಯ ಖನಿಜ ಜಲದ ವಾಣಿಜ್ಯ ಸಾಧ್ಯತೆಗಳನ್ನು ಪರೀಕ್ಷಿಸಲಾಗುತ್ತಿದೆ. ಮೊದಲ ಅಜಮಾಯಿಶಿಗಾಗಿ ನೀರನ್ನು ಶೀಶೆಗಳಿಗೆ ತುಂಬುವ ಕಾರ್ಯ ಈಗ ಮುಗಿದಿದೆ.

ಆ) ಈ ನೀರಿನ ಬುಗ್ಗೆಗಳು ಇರುವುದು ಖಾಸಗಿಯವರ ಜಮೀನಿನಲ್ಲಿ, ಭೂಮಾಲೀಕನ ಜೊತೆ ಇನ್ನೂ ಮಾತುಕತೆ ವಡೆಯುತ್ತಿದೆ, ಈ ಘಟ್ಟದಲ್ಲಿ ಅವು ಎಲ್ಲಿವೆ ಎಂದು ತಿಳಿಸುವುದು ಉಚಿತವಲ್ಲವೆಂದು ತೋರುತ್ತದೆ.

# ೧೦೩
# ಭಾರತದಲ್ಲಿ ಜಲವಿದ್ಯುತ್ ಉತ್ಪಾದನೆಯ ಸಾಧ್ಯತೆಗಳ ಸರ್ವೇಕ್ಷಣ *

**೨೭೪. ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಶ್ರೀ ಆರ್. ಆರ್. ಗುಪ್ತಾರವರ ಪರವಾಗಿ) ಅ) ನಮ್ಮ ದೇಶದಲ್ಲಿ ಜಲವಿದ್ಯುತ್ತಿನ ಸಾಧ್ಯತೆಯ ಬಗ್ಗೆ ಒಂದು ಸರ್ವೇಕ್ಷಣೆ ನಡೆಸಲು ಸರ್ಕಾರ ನಿರ್ದೇಶನ ನೀಡಿದೆಯೇ? ಹಾಗಿದ್ದಲ್ಲಿ ಇತ್ತೀಚಿನ ಸರ್ವೇಕ್ಷಣೆಯನ್ನು ಯಾವಾಗ ಮಾಡಲಾಯಿತು ಹಾಗೂ ಯಾರು ಮಾಡಿದರು?

ಆ) ಉತ್ತಮ ವರ್ಗದ ಕಲ್ಲಿದ್ದಲಿನ ಮೂಲಗಳನ್ನು ಸಂರಕ್ಷಿಸುವ ಭಾರತದ ಒಪ್ಪಿತ ನೀತಿಯನ್ನು ಗಮನದಲ್ಲಿಟ್ಟುಕೊಂಡು ಜಲ ವಿದ್ಯುತ್ ಅಭಿವೃದ್ಧಿಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸಬೇಕಾಗಿರುವುದು ಕರ್ತವ್ಯವಲ್ಲವೆ? ಭಾರತದ ಕಲ್ಲಿದ್ದಲು ಸರಬರಾಜು ಮೂಲಗಳಿಂದ ದೂರವಾಗಿರುವ ಕಾರಣ ವಿಶೇಷವಾಗಿ ಸಂಯುಕ್ತ ಪ್ರಾಂತ್ಯಗಳು, ಪಂಜಾಬ್ ಹಾಗೂ ಮಧ್ಯಭಾರತದ ರಾಜ್ಯಗಳ ಕಡೆ ಗಮನ ಹರಿಸಬೇಕಲ್ಲವೆ? ಹಾಗಿದ್ದಲ್ಲಿ, ಯಾವ ರೂಪದಲ್ಲಿ ಸರ್ಕಾರವು ಇಲ ವಿದ್ಯುತ್ ಯೋಜನೆಗಳಿಗೆ ಪ್ರೋತ್ಸಾಹ ನೀಡಲು ಪ್ರಸ್ತಾವಿಸಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೯೪೩, ೫ನೇ ಆಗಸ್ಟ್, ೧೯೪೩, ಪು. ೪೩೪

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೫ನೇ ಆಗಸ್ಟ್ ೧೯೪೩, ಪು. ೪೩೪

ಇ) ಸಂಯುಕ್ತ ಪ್ರಾಂತ್ಯಗಳ, ಪಂಜಾಬ್ ಸರ್ಕಾರಗಳ, ಹಾಗೆಯೇ ದೇಶೀಯ ಸಂಸ್ಥಾನಗಳಾದ ಮೈಸೂರು ಮತ್ತು ತಿರುವಾಂಕೂರುಗಳ ಹಾಗೂ ಬೊಂಬಾಯಿಯ ಟಾಟಾ ಕಂಪನಿಯವರ ಸಂಸ್ಥೆಗಳ ಜಲವಿದ್ಯುತ್ ಸ್ಥಾವರಗಳಿಂದ ಉತ್ಪಾದನಾಸಾಮರ್ಥ್ಯ ಎಷ್ಟು? ಪ್ರಸ್ತುತ ಯಾವಪ್ರಮಾಣದಲ್ಲಿ ಹೆಚ್ಚುವರಿ ಶಕ್ತಿ ಇವುಗಳಿಂದ ಲಭ್ಯವಿದೆ.

ಈ) ಹೊಸದಾಗಿ ಜಲ–ವಿದ್ಯುತ್ ಉತ್ಪಾದನೆ ಮಾಡಲು ಗುರುತು ಮಾಡಿರುವ ಸ್ಥಳಗಳ ಬಗ್ಗೆ ವಿವರ ನೀಡಲು ಗೌರವಾನ್ವಿತ ಸದಸ್ಯರಿಗೆ ಸಾಧ್ಯವಾಗುವುದೆ? ಈ ರೀತಿಯಾಗಿ ಗುರುತು ಮಾಡಿದ ಸ್ಥಳಗಳಿಂದ ಉತ್ಪತ್ತಿ ಮಾಡುವ ಜಲ–ವಿದ್ಯುತ್ತಿನ ಪ್ರಮಾಣ ಬೇರೆ ಬೇರೆ ಸ್ಥಳಗಳಲ್ಲಿ ಎಷ್ಟಿರುತ್ತದೆ?

ಉ) ಅಗ್ಗದಲ್ಲಿ ವಿದ್ಯುಚ್ಛಕ್ತಿ ಲಭ್ಯವಾಗುವ ಕಡೆ ರೈಲ್ವೆಯನ್ನು ವಿದ್ಯುದೀಕರಣಗೊಳಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಭಾರತ ಸರ್ಕಾರದ ವಿದ್ಯುತ್ ಆಯುಕ್ತರು ೧೯೪೧ರ ಕೊನೆಯ ವೇಳೆಯಲ್ಲಿ ಭಾರತಾದ್ಯಂತ ಒಂದು ಬೃಹತ್ ಪ್ರಮಾಣದ ಸರ್ವೇಕ್ಷಣ ಕೈಗೊಂಡು ಜಲವಿದ್ಯುತ್ ಸಾಧ್ಯತೆಗಳನ್ನು ಗಮನಿಸಿದ್ದಾರೆ.

ಆ) ಜಲವಿದ್ಯುತ್ ಯೋಜನೆಗಳನ್ನು ಉತ್ತೇಜಿಸುವುದು ಮೂಲತಃ ಪ್ರಾಂತೀಯ ಹಾಗೂ ರಾಜ್ಯ ಸರ್ಕಾರಗಳ ಕೆಲಸವಾಗಿದೆ. ಆದಾಗ್ಯೂ ಕೇಂದ್ರ ಸರ್ಕಾರ ಜಲವಿದ್ಯುತ್ ಅಭಿವೃದ್ಧಿಯ ಬಗ್ಗೆ ತೀವ್ರ ಗಮನ ಹರಿಸುತ್ತಿದೆ. ಸಮರೋತ್ತರ ಸಂಘಟನೆ ವಿದ್ಯುತ್ ಸರಬರಾಜು ಉದ್ದಿಮೆ – ಜಲವಿದ್ಯುತ್ ಅಭಿವೃದ್ಧಿಯೂ ಸೇರಿದಂತೆ – ಮಂಡಳಿಯ ಪುನಾರಚನಾ ಸಮಿತಿಯ ಗಮನವನ್ನು ಸೆಳೆದಿದೆ.

ಇ) ಮತ್ತು ಈ) ಇಲ್ಲಿ ಕೇಳಿರುವ ಮಾಹಿತಿಯನ್ನು ಯುದ್ಧ ಕಾಲದಲ್ಲಿ ಒದಗಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಉಚಿತವಾಗಲಾರದು. ಈಗಾಗಲೇ ತಿಳಿಸಿದಂತೆ ಜಲವಿದ್ಯುತ್ ಯೋಜನೆಗಳನ್ನು ಉತ್ತೇಜಿಸುವುದು ಮೂಲತಃ ಪ್ರಾಂತೀಯ ಹಾಗೂ ರಾಜ್ಯಗಳ ಕರ್ತವ್ಯವಾಗಿದೆ.

ಉ) ಹೌದು, ಈ ವಿಷಯವನ್ನು ಗಮನದಲ್ಲಿರಿಸಿಕೊಂಡು ರೈಲ್ವೆಯ ವಿದ್ಯುವೀಕರಣದ ಸಂದರ್ಭದಲ್ಲಿ ಪ್ರತಿ ಬಾರಿಯೂ ವಿಚಾರಮಾಡಲಾಗುತ್ತಿದೆ. ಯಾವುದೇ ಒಂದು ವಿಭಾಗವನ್ನು ವಿದ್ಯುದ್ದೀಕರಣಗೊಳಿಸುವಾಗ ಅಗ್ಗದ ಬೆಲೆಯಲ್ಲಿ ವಿದ್ಯುತ್ತು ಸಿಕ್ಕುತ್ತದೆಯೇ ಎಂದು ನೋಡುವುದು ಮುಖ್ಯವಾದ ಅಂಶಗಳಲ್ಲಿ ಒಂದಾಗುತ್ತದೆ.

## ೧೦೪
## ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನದಲ್ಲಿ ಕೆಲವು ವಿವರಗಳನ್ನು ಸೇರಿಸುವ ಬಗೆಗೆ *

**೨೮೯. ಶ್ರೀ ಮುಹಮ್ಮದ್ ಅಜರ್ ಆಲಿ :** ದಯಮಾಡಿ ಗೌರವಾನ್ವಿತ ಕಾರ್ಮಿಕ ಸದಸ್ಯರು ಈ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ : ಅ) ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನದ ಬಗ್ಗೆ ಬಂದಿರುವ ವರದಿಯು ವೇತನ ವಿತರಣಾ ಕಾಯಿದೆಯಡಿಯಲ್ಲಿ ನೇಮಕರಾದ ಅಧಿಕಾರಿಗಳಿಂದ ತಮಗೆ ಅರ್ಜಿಗಳು ಬಂದ ದಿನ ಹಾಗೂ ತಾವು ಆ ಬಗ್ಗೆ ಕ್ರಮಕೈಗೊಂಡ ಬಗ್ಗೆ ಯಾವುದೇ ವಿವರಗಳು ಇಲ್ಲ ಅಲ್ಲವೆ?

ಆ) ಅ) ಭಾಗಕ್ಕೆ ಉತ್ತರ ಹೌದೆಂದಾದರೆ ಮುಂದಿನ ವರದಿಗಳಲ್ಲಿ, ಅರ್ಜಿಗಳಿಗೆ ಸಂಬಂಧಿಸಿದ ಬಗ್ಗೆ ವರದಿ ನೀಡುವುದನ್ನು ಪರಿಗಣಿಸುವರೆ? ಇಲ್ಲದಿದ್ದರೆ, ಯಾಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಗೌರವಾನ್ವಿತ ಸದಸ್ಯರು ಸೂಚಿಸಿರುವುದು ಪ್ರಸ್ತುತ ನಿಜವಾಗಿದೆ.

ಆ) ಈ ಸಲಹೆಯನ್ನು ನಾನು ಪರಿಗಣಿಸುತ್ತೇನೆ.

## ೧೦೫
## ಬಲೂಚಿಸ್ತಾನದಲ್ಲಿ ಪಡೆದ ಗಂಧಕವನ್ನು, ಗಂಧಕಾಮ್ಲ ತಯಾರಿಸುವ ಉದ್ದಿಮೆಗಳಿಗೆ ಸರಬರಾಜು ಮಾಡಿದ ಬಗೆಗೆ **

**೨೯೦. ಶ್ರೀ ಟಿ.ಟಿ ಕೃಷ್ಣಮಾಚಾರಿ** (ಶ್ರೀ ಆರ್.ಆರ್. ಗುಪ್ತಾ ಅವರ ಪರವಾಗಿ) :

ಅ) ಭಾರತೀಯ ಭೂಗರ್ಭ ಇಲಾಖೆಯ ಬಳಕೆ ಶಾಖೆಯು ಬಲೂಚಿಸ್ತಾನದಲಿ ಇಲ್ಲಿಯವರೆಗೆ ಎಷ್ಟು ಪ್ರಮಾಣದ ಗಂಧಕವನ್ನು ಹೊರತೆಗೆದಿದೆ? ಈ ಗಣಿಗಾರಿಕೆಗೆ ಇದುವರೆಗೆ ಖರ್ಚಾಗಿರುವ ಹಣವೆಷ್ಟು?

ಆ) ಬಲೂಚಿಸ್ತಾನದಲ್ಲಿ ಪ್ರಸ್ತುತ ಗಂಧಕದ ಗಣಿಗಾರಿಕೆ ನಡೆಸುತ್ತಿರುವ ಪ್ರದೇಶದಲ್ಲಿ ನಿಕ್ಷೇಪದ ಪ್ರಮಾಣ ಕಡಿಮೆ ಇರುವುದು ವಾಸ್ತವ ಸಂಗತಿಯೇ? ಈಗ ಉಳಿದಿರುವ ನಿಕ್ಷೇಪದ ಪ್ರಮಾಣವನ್ನು ಟನ್ನೇಜಿನಲ್ಲಿ ಎಷ್ಟು ಎಂದು ಅಂದಾಜು ಮಾಡಲಾಗುತ್ತದೆ?

ಇ) ಸರಬರಾಜು ಇಲಾಖೆಯು ಸಕ್ಕರೆ ಕಾರ್ಖಾನೆಗಳಿಗೆ ಈಗಾಗಲೇ ತಿಳಿಸಿ ಮುಂದಿನ ಅರೆಯುವ ಋತುವಿನಲ್ಲಿ ಕಾರ್ಖಾನೆಗಳಿಗೆ ಗಂಧಕವನ್ನು ಸರಬರಾಜು ಮಾಡಲಾಗುವುದಿಲ್ಲವೆಂದು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೨ನೇ ಆಗಸ್ಟ್ ೧೯೪೩, ಪು. ೬೫೪

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೨ನೇ ಆಗಸ್ಟ್ ೧೯೪೩, ಪು. ೬೫೪–೫೫

ಸ್ಪಷ್ಟಪಡಿಸಿರುವುದು ನಿಜವೇ? ಹಾಗಿದ್ದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಈ ರೀತಿ ಸೂಚನೆ ಕೊಡುವ ಉದ್ದೇಶವೇನು? ಆ ರೀತಿ ಸೂಚನೆ ಕೊಟ್ಟಿಲ್ಲದಿದ್ದರೆ ಕಳೆದೆರಡು ಋತುಗಳಲ್ಲಿ ಗಂಧಕವನ್ನು ಸಕ್ಕರೆ ಕಾರ್ಖಾನೆಗಳು ಪಡೆದುಕೊಂಡದ್ದು ಹೇಗೆ? ಹಾಗೆಯೇ ಈ ಮುಂದಿನ ಋತುವಿನಲ್ಲಿ ಅದನ್ನು ಸರಬರಾಜು ಮಾಡಲು ಯಾವ ಕ್ರಮಕೈಗೊಳ್ಳಲಾಗಿದೆ?

(ಈ) ಭಾರತದಲ್ಲಿ ತಾಮ್ರದ ಅದಿರು ಕರಗಿಸುವ ಕುಲುಮೆಗಳಲ್ಲಿ ಹೆಚ್ಚಿನ ಪ್ರಮಾಣದ ಗಂಧಕದ ಡೈ–ಆಕ್ಸೈಡ್ ($SO_2$) ಅನಿಲವು ಉಪ–ಉತ್ಪನ್ನವಾಗಿ ನಷ್ಟವಾಗುತ್ತಿರುವುದು ನಿಜವೇ? ಹಾಗಿದ್ದಲ್ಲಿ, ನಷ್ಟವಾಗುವ ಆ ಬಗೆಯ ಅನಿಲವನ್ನು ಗಂಧಕಾಮ್ಲವಾಗಿ ಸುಲಭವಾಗಿ ಪರಿವರ್ತಿಸಬಹುದೆಂಬುದು ನಿಜವೇ? ಗಂಧಕಾಮ್ಲವನ್ನು ಆ ಮೂಲದಿಂದ ಪಡೆಯಬಹುದಾದ ಬಗೆಗೆ ಸರ್ಕಾರ ಪರೀಕ್ಷೆ ನಡೆಸಿದೆಯೇ, ನಡೆಸಿದ್ದರೆ ಅದರ ಫಲಿತಾಂಶವೇನು?

(ಉ) ಯುದ್ಧ ಪ್ರಾರಂಭವಾದಾಗಿನಿಂದ ಸರಬರಾಜು ಇಲಾಖೆಯು ಅನೇಕ ಗಂಧಕಾಮ್ಲ ತಯಾರಿಕಾ ಯಂತ್ರೋಪಕರಣಗಳನ್ನು ಆಮದು ಮಾಡಿಕೊಂಡಿರುವುದು ನಿಜವೇ? ಹಾಗಿದ್ದರೆ, ಅಂಥ ಯಂತ್ರಗಳ ಸಂಖ್ಯೆಯೆಷ್ಟು, ಹಾಗೂ ಅವುಗಳನ್ನು ಯಾವ ರೀತಿ ಹಂಚಿಕೆ ಮಾಡಲಾಗಿದೆ? ಈ ಯಂತ್ರೋಪಕರಣಗಳನ್ನು ಯಾವ ಯಾವ ಉದ್ದಿಮೆಗಳಿಗೆ ಸರ್ಕಾರ ಹಂಚಿತೆಂಬುದನ್ನು ತೋರಿಸುವ ವಿವರವನ್ನು ನೀಡಲು ಸಾಧ್ಯವೆ? ಯಾವ ವಿಶೇಷವಾದ ಕಾರಣದಿಂದ ಆಯಾ ಉದ್ದಿಮೆಗಳಿಗೆ ಈ ಯಂತ್ರೋಪಕರಣಗಳನ್ನು ನೀಡಲಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಅಗೆದು ತೆಗೆದಿರುವ ಗಂಧಕದ ಪ್ರಮಾಣವನ್ನು ತಿಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವಾಗಲಾರದು. ಬಲೂಚಿಸ್ತಾನದ ಗಂಧಕ ಗಣಿಗಾರಿಕೆಯಲ್ಲಿ ಇದುವರೆಗೂ ರೂ. ೧೧,೮೫,೦೦೦ ಅನ್ನು ಖರ್ಚು ಮಾಡಲಾಗಿದೆ.

ಆ) ಇಲ್ಲ. ಇನ್ನೂ ಹೊರತೆಗೆಯಲಾಗದ ಗಂಧಕದ ಪ್ರಮಾಣವನ್ನು ತಿಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸಲ್ಲದು.

ಇ) ಇಲ್ಲ. ಸಕ್ಕರೆ ಕಾರ್ಖಾನೆಗಳಿಗೆ ಕಳೆದ ಅರೆಯುವ ಸೀಸನ್‌ನಲ್ಲಿ ಭಾಗಶಃ ಅಮೆರಿಕದಿಂದ ಆಮದು ಮಾಡಿಕೊಂಡ ಗಂಧಕವನ್ನು ಉಪಯೋಗಿಸಿಕೊಳ್ಳಲಾಯಿತು, ಉಳಿದ ಪ್ರಮಾಣವನ್ನು ಕಾದಿರಿಸಲಾಗಿದ್ದ ದಾಸ್ತಾನಿನಿಂದ ಪಡೆಯಲಾಯಿತು. ಸಕ್ಕರೆ ಕಾರ್ಖಾನೆಗಳಿಗೆ ಬಲೂಚಿಸ್ತಾನದಿಂದ ಪಡೆಯಲಾದ ಗಂಧಕದ ಅದಿರನ್ನು ಸರಬರಾಜು ಮಾಡಲಾಗಿದೆ. ಈ ಅದಿರನ್ನು ಸಂಬಂಧಪಟ್ಟ ಕಾರ್ಖಾನೆಗಳು ಪರಿಷ್ಕರಣಗೊಳಿಸಿಕೊಳ್ಳತಕ್ಕದ್ದು, ಅಥವಾ ಇದಕ್ಕೆ ಬದಲಾಗಿ, ಸರ್ಕಾರದಿಂದ ಮಂಜೂರಾದ ಕೇಂದ್ರೀಯ ಸ್ಥಾವರವೊಂದರಲ್ಲಿ ಪರಿಷ್ಕರಿಸಿಕೊಳ್ಳಬಹುದು. ಹೀಗೆ ಪಡೆದ ಶುದ್ಧ ಗಂಧಕವನ್ನು ಅರೆಯುವ ಸೀಸನ್‌ನಲ್ಲಿ ಕಾರ್ಖಾನೆಗಳಲ್ಲಿ ಬಳಸಿಕೊಳ್ಳಲಾಗುವುದು. ಅಂದಾಜು ಮಾಡಿದ ಅಗತ್ಯತೆಯಲ್ಲಿ ಏನಾದರೂ ಕೊರತೆಯುಂಟಾದರೆ ಸರಬರಾಜು ಇಲಾಖೆಯು ಏರ್ಪಾಟು ಮಾಡುವ ಅಮೆರಿಕದ ಆಮದಿನಿಂದ ತುಂಬಿಕೊಳ್ಳಲಾಗುವುದು.

ಈ) ಭಾರತದಲ್ಲಿ ತಾಮ್ರದ ಅದಿರಿನಿಂದ ಲೋಹ ತೆಗೆಯುವ ಸಂದರ್ಭದಲ್ಲಿ ಉಪ–ಉತ್ಪನ್ನವಾಗಿ ಗಂಧಕಾಮ್ಲ ಲಭ್ಯವಾಗುತ್ತದೆ. ತುಂಬಾ ದುರ್ಬಲವಾದ ರೂಪದಲ್ಲಿ ಇದು ಇತರೆ ಅನಿಲಗಳ ಜೊತೆ ದೊರೆಯುವುದರಿಂದ ಗಂಧಕಾಮ್ಲವಾಗಿ ಇದನ್ನು

ಪರಿವರ್ತಿಸುವ ಕಾರ್ಯ ತುಂಬಾ ಕಷ್ಟತರವಾಗಿದೆ. ಗಂಧಕಾಮ್ಲ ಹಾಗೂ ಗಂಧಕವನ್ನು ಈ ಮೂಲಗಳಿಂದ ಪಡೆಯುವ ಸಾಧ್ಯತೆಯ ಬಗ್ಗೆ ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ಆಲೋಚಿಸಲಾಯಿತಾದರೂ, ಈ ಪ್ರಯೋಗಕ್ಕಾಗಿ ತುಂಬಾ ಸಂಕೀರ್ಣವೂ, ದುಬಾರಿಯೂ ಆದ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳುವುದರ ಜೊತೆಗೆ ಅವುಗಳನ್ನು ನಡೆಸುವ ಸಿಬ್ಬಂದಿ ಹಾಗೂ ತಜ್ಞರನ್ನು ಆಹ್ವಾನಿಸಬೇಕಾದ ಪ್ರಮೇಯವುಂಟಾಯಿತು; ಇಷ್ಟಾದರೂ ಈ ಪ್ರಯತ್ನದಿಂದ ಸಾಕಷ್ಟು ಪ್ರಮಾಣದಲ್ಲಿ ಗಂಧಕಾಮ್ಲ ದೊರೆಯುವ ಭರವಸೆ ಇರಲಿಲ್ಲ.

ಉ) ಇಲ್ಲ. ೧೯೪೩ರ ಅಗಸ್ಟ್ ೪ರಂದು ಕೇಲಾದ ೪೭ನೆಯ ಸಂಖ್ಯೆಯ ಪ್ರಶ್ನೆಗೆ ಗೌರವಾನ್ವಿತ ಸರಬರಾಜು ಇಲಾಖೆಯ ಸದಸ್ಯರು ನೀಡಿದ ಉತ್ತರದಲ್ಲಿ ಅಮೆರಿಕದಿಂದ ಆಮದು ಮಾಡಿಕೊಳ್ಳಲು ಪ್ರಸ್ತಾವಿಸಿರುವ ಯಂತ್ರೋಪಕರಣಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಲಾಗಿದೆ.

## ೧೦೬
## ಉದಯಪುರ ರಾಜ್ಯದ ಜವಾಹರ್‌ನಲ್ಲಿ ಸೀಸದ ಗಣಿ *

**೨೯೧. ಶ್ರೀ ಟಿ.ಟಿ. ಕೃಷ್ಣಮಾಚಾರಿ :** (ಶ್ರೀ ಆರ್.ಆರ್. ಗುಪ್ತಾ ಅವರ ಪರವಾಗಿ) : ಅ) ಭಾರತೀಯ ಭೂಗರ್ಭ ಸರ್ವೇಕ್ಷಣ ಇಲಾಖೆಯವರ ಬಳಕೆ ಶಾಖೆಯ ಉದಯಪುರ ರಾಜ್ಯದ ಜವಾಹರ್‌ದಲ್ಲಿ ಸೀಸದ ಗಣಿ ಕಾರ್ಯ ಪ್ರಾರಂಭವಾಗಿರುವುದು ನಿಜವೇ? ಹಾಗಿದ್ದರೆ ಇದುವರೆಗೆ ಈ ಸಂಬಂಧ ಖರ್ಚಾಗಿರುವ ಹಣವೆಷ್ಟು? ಹಾಗೂ ಈ ಗಣಿಯಲ್ಲಿ ತೆಗೆದಿರುವ ಅದಿರಿನಲ್ಲಿ ಸೀಸ ಹಾಗೂ ಸತುವಿನ ಸರಾಸರಿ ಶೇಕಡಾವಾರು ಪ್ರಮಾಣವೇನು ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಭಾರತದ ಬೇರೆ ಯಾವುದಾದರೂ ಭಾಗದಲ್ಲಿ ಸೀಸದ ನಿಕ್ಷೇಪ ಇರುವುದರ ಬಗ್ಗೆ ಸರ್ಕಾರಕ್ಕೆ ಮಾಹಿತಿಯಿದೆಯೇ? ಇಲ್ಲದಿದ್ದರೆ ಭಾರತಕ್ಕೆ ಅಗತ್ಯವಾಗಿರುವ ಒಟ್ಟು ಸೀಸದ ಪ್ರಮಾಣದಲ್ಲಿ ಎಷ್ಟು ಭಾಗವನ್ನು ಜವಾಹರ್ ಗಣಿ ಪೂರೈಸುತ್ತದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು ೧೯೪೩ನೇ ಜೂನ್ ಕೊನೆಯ ಹೊತ್ತಿಗೆ ರೂ. ೬.೫ ಲಕ್ಷದಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇದುವರೆಗೆ ಮಾಡಿರುವ ಗಣಿಗಾರಿಕೆಯಲ್ಲಿ ಲಭಿಸಿರುವ ಪ್ರಮಾಣದಲ್ಲಿ ಸರಾಸರಿ ಶೇಕಡಾ ೨ ಭಾಗ ಸೀಸ ಹಾಗೂ ಶೇಕಡಾ ೮ ಭಾಗ ಸತು.

ಆ) ಹೌದು, ಜೈಪುರ್ ರಾಜ್ಯದ ಚಾತಕಬಾರ್ವಾರಾ ಎಂಬಲ್ಲಿ ಅದಿರು ದೊರೆಯಬಹುದೆಂದು ಈಗ ತಿಳಿದುಬಂದಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ૩, ೧೨ನೇ ಆಗಸ್ಟ್ ೧೯೪૩, ಪು. ೬೫೫

## ೧೦೭
## ಬಂಗಾಳ ಜಿಲ್ಲೆಯಲ್ಲಿ ಟಂಗ್‌ಸ್ಟನ್ ನಿಕ್ಷೇಪದ ಶೋಧನೆ*

**೨೯೨. ಶ್ರೀ ಟಿ.ಟಿ. ಕೃಷ್ಣಮಾಚಾರಿ :** (ಶ್ರೀ ಆರ್.ಆರ್. ಗುಪ್ತಾ ಅವರ ಪರವಾಗಿ) : ಬಂಗಾಳದ ಒಂದು ಜಿಲ್ಲೆಯಲ್ಲಿ ಭೂಗರ್ಭ ಸರ್ವೇಕ್ಷಣ ಇಲಾಖೆಯವರು ಟಂಗ್‌ಸ್ಟನ್ ಅದುರಿನ ನಿಕ್ಷೇಪವನ್ನು ಪತ್ತೆ ಮಾಡಿರುವುದು ನಿಜವೇ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಿದ್ದರೆ, ಎಷ್ಟು ಪ್ರಮಾಣದ ಟಂಗ್‌ಸ್ಟನ್ ಈ ಮೂಲದಿಂದ ಇದುವರೆಗೆ ಲಭ್ಯವಾಗಿದೆ ಹಾಗೂ ಲಭ್ಯವಾದದ್ದನ್ನು ಯಾವ ರೀತಿ ಹಂಚಲಾಗಿದೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಹೌದು. ದಕ್ಕಿರುವ ಟಂಗ್‌ಸ್ಟನ್‌ನ ಪ್ರಮಾಣವೆಷ್ಟೆಂದು ಯುದ್ಧಕಾಲದಲ್ಲಿ ಜಾಹೀರುಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವಲ್ಲ. ಸರಬರಾಜು ಇಲಾಖೆಯ ಮೂಲಕ ಅದಿರನ್ನು ವಿತರಿಸಲಾಗುತ್ತಿದೆ (ಡೈರೆಕ್ಟೊರೇಟ್ – ಜನರಲ್, ಶಸ್ತ್ರಾಸ್ತ್ರ ಉತ್ಪಾದನೆ)

## ೧೦೮
## ಕಾರ್ಮಿಕ ಕಲ್ಯಾಣ ಸಲಹೆಗಾರರು ಹಾಗೂ ಕಾರ್ಮಿಕ ಸಲಹೆಗಾರರ ಕರ್ತವ್ಯಗಳು *

**೨೯೭. ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಅ) ಕಾರ್ಮಿಕ ಇಲಾಖೆಯಲ್ಲಿ ನೇಮಕವಾಗಿರುವ ಕಾರ್ಮಿಕ ಕಲ್ಯಾಣ ಸಲಹೆಗಾರರು ಹಾಗೂ ಕಾರ್ಮಿಕ ಸಲಹೆಗಾರರ ಕರ್ತವ್ಯದ ಬಗೆಗೆ ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಎಷ್ಟು ಮಂದಿ ಆ ತರಹದ ಅಧಿಕಾರಿಗಳು ಇದುವರೆಗೆ ನೇಮಕರಾಗಿದ್ದಾರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಭಾರತದ ಕೈಗಾರಿಕಾ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆಗಳನ್ನು ಕೊಡುವುದು ಕಾರ್ಮಿಕ ಕಲ್ಯಾಣ ಸಲಹೆಗಾರರು ಹಾಗೂ ಉಪ ಮತ್ತು ಸಹಾಯಕ ಸಲಹೆಗಾರರ ಕರ್ತವ್ಯವಾಗಿರುತ್ತದೆ.

ಕಾರ್ಮಿಕರ ಶಾಸನ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲಾ ಮುಖ್ಯವಾದ ವಿಷಯಗಳ ಬಗ್ಗೆ ಸಲಹೆ ಕೊಡುವುದು ಕಾರ್ಮಿಕ ಸಲಹೆಗಾರರ ಕರ್ತವ್ಯವಾಗಿರುತ್ತದೆ; ಅದರಲ್ಲೂ ವಿಶೇಷವಾಗಿ ಈಗಾಗಲೇ ನಡೆದಿರಬಹುದಾದ ವಿಷಯಗಳ ಬಗ್ಗೆ ಮುಂದೆ ಕಂಡುಬರಬಹುದಾದ ವಿಷಯಗಳ ಬಗ್ಗೆ ಹಾಗೂ ವರ್ತಮಾನದಲ್ಲಿ ಇಂಗ್ಲೆಂಡಿನಲ್ಲಿ ಅದಕ್ಕೆ ಯಾವ ರೀತಿ ಪರಿಹಾರ ಹುಡುಕುತ್ತಿದ್ದಾರೆ ಎಂಬುದರ ಬಗ್ಗೆ ಸಲಹೆ ನೀಡುವುದು.

ಆ) ಒಬ್ಬರು ಕಾರ್ಮಿಕ ಕಲ್ಯಾಣ ಸಲಹೆಗಾರರು, ಒಬ್ಬರು ಉಪ ಕಾರ್ಮಿಕ ಕಲ್ಯಾಣ ಸಲಹೆಗಾರರು ಹಾಗೂ ಏಳು ಜನ ಸಹಾಯಕ ಕಾರ್ಮಿಕ ಕಲ್ಯಾಣ ಅಧಿಕಾರಿಗಳು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೨ನೇ ಆಗಸ್ಟ್ ೧೯೪೩, ಪು. ೬೫೫

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೨ನೇ ಆಗಸ್ಟ್ ೧೯೪೩, ಪು. ೬೯೭

ಡಿಸೆಂಬರ್ ೧೯೪೨ರಿಂದ ಜೂನ್ ೧೯೪೩ರವರೆಗೆ ಒಬ್ಬ ಕಾರ್ಮಿಕ ಸಲಹೆಗಾರರನ್ನು ನೇಮಕ ಮಾಡಲಾಗಿತ್ತು.

ಸದ್ಯಕ್ಕೆ ಕಾರ್ಮಿಕ ಸಲಹೆಗಾರರು ಯಾರೂ ಇಲ್ಲ.

**ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ತುಟ್ಟಿಭತ್ಯೆಯ ಬಗ್ಗೆಯೂ ಅವರು ಸಲಹೆ ಕೊಡುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ಇಲ್ಲ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಕಾರ್ಮಿಕ ಕಲ್ಯಾಣ ಸಲಹೆಗಾರರು, ಕಾರ್ಮಿಕ ಸಲಹೆಗಾರರಿಗಿಂತ ಭಿನ್ನವಾಗಿ ನೌಕರರ ಹಿತವನ್ನು ಪ್ರತಿನಿಧಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿಯೂ ಇಲ್ಲ.

## ೧೦೯
## ಕೈಗಾರಿಕಾ ವಿವಾದಗಳ ತಕ್ಷಣದ ಕಾರಣಗಳನ್ನು ನಿವಾರಿಸಲು ಕಾರ್ಯಕ್ರಮ *

**೨೯೮. ಶ್ರೀ ಅಮರೇಂದ್ರನಾಥ್ ಚಟ್ಟೋಪಾಧ್ಯಾಯ :** ಅ) ಕೈಗಾರಿಕಾ ವಿವಾದಗಳಿಗೆ ತಕ್ಷಣದ ಕಾರಣಗಳನ್ನು ನಿವಾರಿಸಲು ಹಾಗೂ ಅನಿರ್ಬಂಧಿತವಾಗಿ ಯುದ್ಧಸಾಮಗ್ರಿಗಳನ್ನು ತಯಾರಿಸಲು ಸರ್ಕಾರಿ ಕಾರ್ಖಾನೆಗಳಲ್ಲಿ ಹಾಗೂ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಪೂರ್ತಿಯಾಗಿ ಅಥವಾ ಭಾಗಶಃ ಕಾರ್ಯಮಾಡುತ್ತಿರುವ ಖಾಸಗಿ ಕಾರ್ಖಾನೆಗಳಲ್ಲಿ ಯಾವ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಕಾರ್ಮಿಕರು ಮುಷ್ಕರ ಹೂಡುವುದಕ್ಕೆ ಮೊದಲು ಎಲ್ಲಾ ವಿವಾದಗಳನ್ನು ನ್ಯಾಯನಿರ್ಣಯಕ್ಕೆ ಬಿಡುವಂಥ ಒಂದು ನೀತಿಯನ್ನು ಅನುಸರಿಸಲು ಸರ್ಕಾರ ತೀರ್ಮಾನಿಸಿದೆಯೇ?

ಇ) ಪ್ರಾಂತೀಯ ಸರ್ಕಾರಗಳೂ ಹೀಗೆಯೇ ಮಾಡಬೇಕೆಂದು ಅವರಿಗೆ ಸಲಹೆ ಕೊಡಲು ಪ್ರಸ್ತಾವಿಸಿರುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಖಾಸಗಿ ಉದ್ಯೋಗವಲಯದಲ್ಲಿ ಹಾಗೂ ತಮ್ಮ ಕಾರ್ಖಾನೆಗಳಲ್ಲಿ ಉದ್ಯೋಗಿಗಳಿಗೆ ಉಚಿತ ವಾತಾವರಣವನ್ನು ಕಲ್ಪಿಸುವ ಸಂಕಲ್ಪ ಸರ್ಕಾರಕ್ಕಿದೆ. ವಿವಾದವುಂಟಾದ ಸಂದರ್ಭದಲ್ಲಿ ಸಂಧಾನ ಹಾಗೂ ನ್ಯಾಯತೀರ್ಮಾನಕ್ಕೆ ಅವಕಾಶವಿರುವುದು.

ಆ) ಮತ್ತು ಇ) ಇಲ್ಲ. ಸಂಧಾನ ಸೋತ ಕಡೆ ನ್ಯಾಯನಿರ್ಣಯದ ಮಾರ್ಗವನ್ನನುಸರಿಸುವುದು ಸರ್ಕಾರದ ಸಾಮಾನ್ಯ ನೀತಿಯಾಗಿದೆ. ಪ್ರಾಂತೀಯ ಸರ್ಕಾರದ ಜೊತೆ ಸಮಾಲೋಚನೆ ನಡೆಸಿ ವಿವಾದಗಳನ್ನು ಪರಿಹರಿಸಲು ಈಗಿನ ಆಡಳಿತ ಯಂತ್ರವನ್ನು ಸಿದ್ಧಪಡಿಸಲಾಗಿದೆ; ಈ ದಿಶೆಯಲ್ಲಿ ಸಾಮಾನ್ಯವಾದ ಏಕರೂಪತೆಯನ್ನು ಈಗಾಗಲೇ ಸಾಧಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೧೨ನೇ ಆಗಸ್ಟ್ ೧೯೪೩, ಪು. ೬೫೭–೬೫೮

# ೧೧೦
# ನವದೆಹಲಿಯ ಅಶೋಕ ರಸ್ತೆಯಲ್ಲಿ ಮಸೀದಿಯೊಂದನ್ನು ನೆಲಸಮ ಮಾಡುವ ಬಗೆಗೆ*

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ನಾನು ಮೌಲ್ವಿ ಅಬ್ದುಲ್ ಘನಿ ಅವರಿಂದ ನಿಲುವಳಿ ಸೂಚನೆಯನ್ನು ಪಡೆದಿರುತ್ತೇನೆ, ನಂ. ೯, ಅಶೋಕ ರಸ್ತೆಯ ಆಸುಪಾಸಿನಲ್ಲಿರುವ ಒಂದು ಮಸೀದಿಯನ್ನು ನೆಲಸಮ ಮಾಡುವುದಕ್ಕೆ ಸಂಬಂಧಿಸಿದಂಥ ಸಾರ್ವಜನಿಕರ ದೃಷ್ಟಿಯಲ್ಲಿ ಪ್ರಮುಖವಾದ ವಿಷಯವನ್ನು ಕುರಿತು ಚರ್ಚಿಸುವುದಕ್ಕೆ. ಸರ್ಕಾರಿ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಗಳು ಈ ನೆಲಸಮ ಮಾಡುವ ಕಾರ್ಯದಲ್ಲಿ ತೊಡಗಿರುವರು.

ಇದು ನಡೆದದ್ದು ಯಾವಾಗ?

**ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ** (ತಿರ್‌ಹತ್ ವಿಭಾಗ : ಮಹಮದೀಯರು) : ಸುಮಾರು ಹತ್ತು ದಿನಗಳ ಹಿಂದೆ ಇದು ನಡೆಯಿತು, ಆದರೆ ನನಗೆ ಮಾಹಿತಿ ಸಿಕ್ಕಿದ್ದು ಕಳೆದ ರಾತ್ರಿಯಷ್ಟೆ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಇದು ಕೇವಲ ಗೌರವಾನ್ವಿತ ಸದಸ್ಯರೊಬ್ಬರಿಗೇ ಅನ್ವಯಿಸುವಂಥ ಅಂಶವಲ್ಲ. ಅದು ತುರ್ತು ಸಾರ್ವಜನಿಕ ಸಂಗತಿಯಾದ ಪಕ್ಷದಲ್ಲಿ ತಕ್ಷಣದಲ್ಲೇ ಎಲ್ಲರನ್ನೂ ತಲುಪಬೇಕಾಗಿತ್ತು. ಈ ವೇಳೆಗಾಗಲೇ ಏಕೆ ಇದರ ಬಗ್ಗೆ ಗಮನಹರಿಸಲಿಲ್ಲ?

**ಸರ್ ಮುಹಮ್ಮದ್ ಯಾಮಿನ್ ಖಾನ್** (ಆಗ್ರಾ ವಿಭಾಗ : ಮಹಮದೀಯರು – ಗ್ರಾಮಾಂತರ): ಒಂದು ಸರ್ಕಾರಿ ವಸತಿಮನೆಯಲ್ಲಿ ಅದು ನಡೆದ ಪರಿಣಾಮವಾಗಿ ಇದು ನಿನ್ನೆಯ ತನಕ ಯಾವ ಸದಸ್ಯರ ಗಮನಕ್ಕೂ ಬಾರಲಿಲ್ಲ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸರ್ಕಾರ ಇದರ ಬಗ್ಗೆ ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಮಾನ್ಯರೆ ಈ ಮಂಡನೆಯ ಬಗ್ಗೆ ನನಗೇನೂ ಸೂಚನೆ ಬಂದಿಲ್ಲ. ನನ್ನ ಗೌರವಾನ್ವಿತ ಸ್ನೇಹಿತರು ಪತ್ರ ಬರೆದು ಈ ನಿಲುವಳಿ ಸೂಚನೆಯ ಬಗ್ಗೆ ಶಿಕ್ಷಣ ಇಲಾಖೆ, ಆರೋಗ್ಯ ಹಾಗೂ ಭೂಮಿ ಇತ್ಯಾದಿ ಇಲಾಖೆಗಳಿಗೆ ತಿಳಿಸಿರುತ್ತಾರೆ; ಆ ಪತ್ರದ ಪ್ರತಿಯೊಂದು ಈಗಷ್ಟೇ ನನ್ನ ಕೈ ಸೇರಿದೆ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ನನಗೆ ನಿಜ ಸಂಗತಿಗಳೇನೆಂದು ತಿಳಿಯಬೇಕು.

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ನನ್ನ ಇಲಾಖೆಯಲ್ಲಿ ಈ ವಿಷಯ ಕುರಿತು ನಾನು ಸಾಕಷ್ಟು ವಿಚಾರಿಸಿದೆ, ಆದರೆ ಅವರಿಗೆ ಇದರ ಬಗ್ಗೆ ಏನೂ ತಿಳಿದು ಬಂದಿಲ್ಲ. ನಾನು ಮೊದಲೇ ತಿಳಿಸಿದಂತೆ ಈ ವಿಷಯವನ್ನು ವಿವರವಾಗಿ ಕೇಳಲು ಸಮಯ ಸಾಕಾಗಿಲ್ಲ. ಜೊತೆಗೆ ಆ ಬಗೆಯ ಯಾವುದೇ ನೆಲಸಮ ಕಾರ್ಯ ನಡೆದಿರುವುದನ್ನು ನಂಬಲು ಆಧಾರಗಳಿಲ್ಲ. ಆದಾಗ್ಯೂ, ನನ್ನ ಗೌರವಾನ್ವಿತ ಸ್ನೇಹಿತರಿಗೆ ತುರ್ತಾಗಿ ಉತ್ತರ ಬೇಕೇ ಬೇಕು ಎಂದಾದರೆ ನಾನು ವಿಚಾರಿಸುತ್ತೇನೆ, ಅವರಿಗೆ ಬೇಕಾದ ಮಾಹಿತಿಯನ್ನು ಅವರು ಪಡೆದುಕೊಳ್ಳಲಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೧ನೇ ಆಗಸ್ಟ್ ೧೯೪೩, ಪು. ೮೯೭

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಅದು ಎಲ್ಲರಿಗೂ ಸಮ್ಮತವಾದ ಮಾರ್ಗವೆಂದು ನನಗನ್ನಿಸುತ್ತಿದೆ.

**ಶ್ರೀ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಟ್** (ಪಶ್ಚಿಮ ಕರಾವಳಿ ಹಾಗೂ ನೀಲಗಿರಿ : ಮಹಮದೀಯರು) : ಹಾಗಾದರೆ ಈ ಮಂಡನೆಯನ್ನು ತಡೆಯಬಹುದು.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ತತ್‌ಕ್ಷಣದಲ್ಲಿ ಉತ್ತರ ನೀಡಬೇಕು ಎನ್ನುವ ಪ್ರಶ್ನೆಗಳು ಬಂದರೆ ಅವುಗಳನ್ನು ನಂತರ ಕೈಗೆತ್ತಿಕೊಳ್ಳುತ್ತೇನೆ.

**ಸರ್ ಮುಹಮ್ಮದ್ ಯಾಮೀನ್ ಖಾನ್** : ಏನೇ ಆಗಲಿ, ಈವತ್ತು ತುರ್ತು ಪ್ರಶ್ನೆಯನ್ನು ಕೇಳಲಾಗದು. ಈ ಅಧಿವೇಶನವು ಮಂಗಳವಾರದ ತನಕ ನಡೆಯುವುದಿದ್ದರೆ ಮಾತ್ರ ಆ ದಿನ ಮಾತ್ರ ಕೇಳಲು ಬರುತ್ತದೆ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ತುರ್ತು ಪ್ರಶ್ನೆಯನ್ನು ಕೇಳುವುದು ಒಳ್ಳೆಯದು.

## ೧೧೧
## ನವದೆಹಲಿಯ ಅಶೋಕರಸ್ತೆಯಲ್ಲಿ ಮಸೀದಿಯೊಂದು ನೆಲಸಮವಾಗಿರುವ ಬಗೆಗೆ *

**ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ** : ದಯಮಾಡಿ ಗೌರವಾನ್ವಿತ ಸದಸ್ಯರು ಮುಂದಿನ ವಿಷಯದ ಬಗ್ಗೆ ತಿಳಿಸುವರೆ : ಅ) ಸರ್ಕಾರಿ ವಸತಿ ಮನೆ ಸಂಖ್ಯೆ ೯ರಲ್ಲಿ ಮಸೀದಿಯೊಂದು ಇರುವುದು ಅವರ ಗಮನಕ್ಕೆ ಬಂದಿದೆಯೇ?

ಆ) ಲೋಕೋಪಯೋಗಿ ಇಲಾಖೆಯ ಅಧಿಕಾರಿಯೊಬ್ಬರ ಆಜ್ಞೆಯ ಮೇರೆಗೆ ಲೋಕೋಪಯೋಗಿ ಇಲಾಖೆಯ ಕೆಲಸಗಾರರು ಸದರಿ ಮಸೀದಿಯನ್ನು ಭಾಗಶಃ ನೆಲಸಮ ಮಾಡಿರುವರೆ?

ಇ) ಮುಸ್ಲಿಮರು ಚಳವಳಿ ಹೂಡಿದ ಕಾರಣ ನೆಲಸಮದ ಕಾರ್ಯ ಅರ್ಧಕ್ಕೆ ನಿಲ್ಲುವಂತಾಯಿತೆ?

ಈ) ಈ ನೆಲಸಮ ಕಾರ್ಯವನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿತು, ಹಾಗೂ ತಪ್ಪಿತಸ್ಥರ ವಿರುದ್ಧ ಏನು ಕ್ರಮ ಜರುಗಿಸಿತು; ತೆಗೆದುಕೊಂಡ ಪರಿಣಾಮವೇನು? ಜೊತೆಗೆ

ಉ) ಕಟ್ಟಡಕ್ಕೆ ಈಗಾಗಲೇ ಆಗಿರುವ ಹಾನಿಯನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್** : ಅ) ಹೌದು – ಒಂದು ಹಳೆಯ, ಉಪಯೋಗಿಸದ ಮಸೀದಿಯನ್ನು ಭಾಗಶಃ ನೆಲಸಮ ಮಾಡಿದ್ದಾರೆ.

ಆ) ಇಲ್ಲ. ಮಸೀದಿಯ ಉತ್ತರ ಭಾಗದ ಕಮಾನು ಮಾತ್ರ ಕುಸಿದಿದೆ, ಅದಕ್ಕೆ ಒರಗಿದ ಕೊಂಬೆಯನ್ನು ಕಡಿಯುವಾಗ ಹೀಗಾಯಿತು. ಈಗ ಮನೆಯಲ್ಲಿ ವಾಸವಾಗಿರುವ ಮೇಜರ್ ಅನ್ವರ್‌ರವರು ಮರದ ಮರೆಯ ಕಾರಣ ಮನೆಗೆ ಸಾಕಷ್ಟು ಬೆಳಕು ಬರುತ್ತಿಲ್ಲವೆಂದು ದೂರಿತ್ತ ಕಾರಣ ಮರದ ಉಳಿದ ಭಾಗವನ್ನು ಕಡಿಯಲಾಯಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೩, ೨೫ನೇ ಆಗಸ್ಟ್ ೧೯೪೩, ಪು. ೯೮೦

ಇ) ಇಲ್ಲ.

ಈ) ಕೇಂದ್ರ ಲೋಕೋಪಯೋಗಿ ಇಲಾಖೆಯಿಂದ ನೆಲಸಮ ಕಾರ್ಯ ನಡೆದಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಉ) ಇದು ಹಳೆಯ, ಶಿಥಿಲವಾದ ಕಟ್ಟಡ ಆದರೂ ಮೇಲಿನ ಕಾರ್ಯಾಚರಣೆಯಿಂದ ಅದಕ್ಕೇನೂ ಊನವಾಗಿಲ್ಲ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಮರವನ್ನು ಕತ್ತರಿಸುವಾಗ ಸಾಕಷ್ಟು ಮುನ್ನೆಚ್ಚರಿಕೆ ಏಕೆ ವಹಿಸಲಿಲ್ಲ? ಹಾಗೆ ಮುಂಜಾಗ್ರತೆ ಇದ್ದ ಪಕ್ಷದಲ್ಲಿ ಮರಕ್ಕೆ ಒತ್ತರಿಸಿದ ಕಮಾನನ್ನು ರಕ್ಷಿತ ಸ್ಥಿತಿಯಲ್ಲಿ ಇಡಬಹುದಾಗಿತ್ತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ರೀತಿ ಅಪಘಾತವಾಗುವುದರ ಬಗ್ಗೆ ಅವರು ಎಚ್ಚರಿಕೆ ವಹಿಸಿರಲಿಲ್ಲವೆಂಬುದನ್ನು ನಾನು ನಂಬಲಾರೆ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಲೋಕೋಪಯೋಗಿ ಇಲಾಖೆಯ ನುರಿತ ತಜ್ಞರೂ ಸಹ ಒಂದು ಕಮಾನನ್ನು ರಕ್ಷಿಸದೆ ಹೋದರೆ? ಎಲ್ಲಾ ಮುನ್ನೆಚ್ಚರಿಕೆ ಕ್ರಮ ಅನುಸರಿಸಿಯೂ ಅವರು ಒಂದು ಕಮಾನನ್ನು ರಕ್ಷಿಸದೆ ಹೋದರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮುನ್ನೆಚ್ಚರಿಕೆ, ಮುಂಜಾಗ್ರತೆ ವಹಿಸಿರುವಾಗಲೂ ಅಂಥ ಅವಗಢ ಸಂಭವಿಸಿದರೆ ಆಶ್ಚರ್ಯವಲ್ಲ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಸರ್ಕಾರ ತೆಗೆದುಕೊಂಡಿರುವ ಒಂದು ವಸತಿಮನೆಯಲ್ಲಿ ಮಸೀದಿ ಇರುವಾಗ, ಹಾಗೂ ಸರ್ಕಾರದವರು ತಮ್ಮ ವಸತಿಮನೆಯನ್ನು ಕಟ್ಟುವುದಕ್ಕೆ ಮೊದಲು ಅದು ಸಾರ್ವಜನಿಕರಿಗೆ ತೆರೆದಿರುವಾಗ ಅದನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಮಾಡಿಟ್ಟು ಉತ್ತಮ ಸ್ಥಿತಿಯಲ್ಲಿ ರಕ್ಷಿಸಬೇಕಾದದ್ದು ಸರ್ಕಾರದ ಕರ್ತವ್ಯವಲ್ಲವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಸತಿಮನೆ ಕಟ್ಟುವ ಮೊದಲಾಗಲೀ ನಂತರವಾಗಲೀ ಈ ಮಸೀದಿಯನ್ನು ಉಪಯೋಗಿಸಲಾಗುತ್ತಿತ್ತು ಎಂದು ನಾನು ನಂಬಲಾರೆ.

**ಮೌಲಾನಾ ಜಫರ್ ಆಲಿ ಖಾನ್ :** ನೆಲಸಮವಾದ ಮಸೀದಿಯ ಭಾಗವನ್ನು ಸರ್ಕಾರದವರು ದುರಸ್ತಿ ಮಾಡಿಸಿಕೊಡುವುದಾಗಿ ಸರ್ಕಾರ ನಮಗೆ ಭರವಸೆ ಕೊಡುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಈಗಗಲೇ ತಿಳಿಸಿರುವಂತೆ ಮಸೀದಿಯಾಗಿ ಅದು ಈಗ ಬಳಕೆಯಾಗುತ್ತಿಲ್ಲ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಏಕೆ ಅದು ಮಸೀದಿಯಾಗಿ ಬಳಕೆಯಾಗುತ್ತಿಲ್ಲ ಎಂದು ದಯಮಾಡಿ ತಿಳಿಸುವಿರಾ?

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಗೌರವಾನ್ವಿತ ಸದಸ್ಯರು ವಾದ ಮಾಡುತ್ತಿದ್ದಾರೆ.

**ಸರ್ ಮುಹಮ್ಮದ್ ಯಾಮಿನ್ ಖಾನ್ :** ಸರ್ಕಾರ ಜನರಿಗೆ ಅದು ದಕ್ಕುವಂತೆ ಮಾಡಿ ಮತ್ತೆ ಅದನ್ನು ಮಸೀದಿಯಾಗಿ ಅವರು ಉಪಯೋಗಿಸುವಂತೆ ಮಾಡಲಾಗುವುದೇ ಎಂದು ತಿಳಿಯಲು ನಾನು ಅಪೇಕ್ಷಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತಾ ಎಂದೂ ಅದು ಮಸೀದಿಯಾಗಿ ಉಪಯೋಗವಾಗಿಲ್ಲ.

**ಮೌಲಾನಾ ಜಫರ್ ಆಲಿ ಖಾನ್ :** ದುರಸ್ತಿ ಕೆಲಸವನ್ನು ನನ್ನ ಹಣದಲ್ಲಿ ಒಂದು ವೇಳೆ ನಾನು ಮಾಡಿಸಿದರೆ ಅದಕ್ಕೆ ಸರ್ಕಾರದಿಂದ ಏನಾದರೂ ತಕರಾರು ಇದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗೌರವಾನ್ವಿತ ಸದಸ್ಯರು ಈ ಬಗ್ಗೆ ಒಂದು ಅರ್ಜಿ ಹಾಕಿಕೊಂಡರೆ, ಇಲಾಖೆಯು ಅದನ್ನು ಪರಿಗಣಿಸುವುದು.

**ಸೇಠ್ ಯೂಸುಫ್ ಅಬ್ದುಲಾ ಹರೂನ್ :** ಈ ವಸತಿಮನೆಯಲ್ಲಿ ವಾಸವಾಗಿದ್ದವರು ಮರ ಕಡಿಯುವಾಗ ತಕರಾರು ತೆಗೆದದ್ದು ನಿಜ ತಾನೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಷಯ ತದ್ವಿರುದ್ಧವಾಗಿದೆ ವಾಸ್ತವವಾಗಿ ಮನೆಯಲ್ಲಿ ವಾಸವಾಗಿದ್ದವರೇ ಮರದ ಕೊಂಬೆ ಕಡಿಯಲು ಕೇಳಿಕೊಂಡಿದ್ದರು.

**ಸೇಠ್ ಯೂಸುಫ್ ಅಬ್ದುಲಾ ಹರೂನ್ :** ಆ ಮನೆಯಲ್ಲಿ ವಾಸವಾಗಿದ್ದ ವ್ಯಕ್ತಿ ಯಾರೆಂದು ಗೌರವಾನ್ವಿತ ಸದಸ್ಯರು ಒಮ್ಮೆ ತಿಳಿಸುವರೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ನೀಡಿರುವ ಮಾಹಿತಿ ನಿಜವಲ್ಲವೆಂದು ಹೇಳುವುದಕ್ಕೆ ನನಗೇನೂ ಆಧಾರವಿಲ್ಲ.

**ನವಾಬ್ಜಾದಾ ಮುಹಮ್ಮದ್ ಲಿಯಕತ್ ಆಲಿ ಖಾನ್ :** ಗೌರವಾನ್ವಿತ ಸದಸ್ಯರೊಬ್ಬರು ನೀಡಿದ ಮಾಹಿತಿಯನ್ನು ನಂಬದಿರಲು ಗೌರವಾನ್ವಿತ ಕಾರ್ಮಿಕ ಸದಸ್ಯರಿಗೆ ಏನು ತೊಡಕಿದೆ?

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಇದು ವಾದವಾಯಿತು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅಧಿಕೃತವಾದ ಮಾಹಿತಿ ಇದೆ ನನ್ನ ಬಳಿ. ಗೌರವಾನ್ವಿತ ಸದಸ್ಯರು ಪಡೆದಿರುವ ಮಾಹಿತಿಯ ಮೂಲ ಎಷ್ಟು ನಂಬಲರ್ಹವೆಂದು ನನಗೆ ಗೊತ್ತಿಲ್ಲ.

## ೧೧೨
## ಭಾರತೀಯ ಕಾರ್ಮಿಕ ಸಂಘಗಳು (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ೧೯೨೬ರ ಭಾರತೀಯ ಕಾರ್ಮಿಕ ಸಂಘಗಳ ಕಾಯಿದೆಯನ್ನು ತಿದ್ದುಪಡಿ ಮಾಡಲು ಮಸೂದೆಯೊಂದನ್ನು ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ವಿಷಯವೆಂದರೆ "೧೯೨೬ರ ಭಾರತೀಯ ಕಾರ್ಮಿಕ ಸಂಘಗಳ ಕಾಯಿದೆಯನ್ನು ತಿದ್ದುಪಡಿ ಮಾಡಲು ಮಸೂದೆಯನ್ನು ಮಂಡಿಸಲು ಅನುಮತಿ ನೀಡಿ".

ಮಂಡನೆಯನ್ನು ಸ್ವೀಕರಿಸಲಾಯಿತು.

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೧೧೩
## ಭಾರತೀಯ ಯುದ್ಧ ಗಾಯಗಳ ಪರಿಹಾರ ಯೋಜನೆಯನ್ವಯ ಪುರುಷರು ಹಾಗೂ ಸ್ತ್ರೀಯರಿಗೆ ನೀಡುವ ಭತ್ಯದ ದರದಲ್ಲಿ ಸಮಾನತೆ **

**೪೭. ಶ್ರೀ ಎನ್.ಎಮ್. ಜೋಶಿ :** (ಅ) ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಈ ಸಂಗತಿ ಬಂದಿರುವುದೆ? ಯುದ್ಧ ಗಾಯಗಳ ಯೋಜನೆಯಡಿಯಲ್ಲಿ ಪುರುಷರು ಹಾಗೂ ಸ್ತ್ರೀಯರಿಗೆ ನೀಡುವ ಭತ್ಯದಲ್ಲಿ ವ್ಯತ್ಯಾಸವನ್ನು ಗ್ರೇಟ್ ಬ್ರಿಟನ್ನಿನಲ್ಲಿ ತೆಗೆದುಹಾಕಿ ಆ ಭತ್ಯ ಇಬ್ಬರಿಗೂ ಒಂದೇ ಸಮನಾಗಿ ಇರುವಂತೆ ಮಾಡಲಾಗಿದೆ.

ಆ) ಮೇಲಿನ ಪ್ರಶ್ನೆಗೆ ಉತ್ತರ ಸಕಾರಾತ್ಮಕವಾದರೆ, ಭಾರತ ಸರ್ಕಾರವೂ ಕೂಡ ಅದೇ ಮಾದರಿಯನ್ನನುಸರಿಸಿ ಯುದ್ಧಗಾಯಗಳ ಪರಿಹಾರ ಯೋಜನೆಯನ್ವಯ ನೀಡುವ ಭತ್ಯದಲ್ಲಿ ಸ್ತ್ರೀಯರು ಹಾಗೂ ಪುರುಷರಿಗೆ ಸಮಾನವಾದ ದರಗಳನ್ನು ತರಲು ಸರ್ಕಾರ ಪ್ರಸ್ತಾವಿಸಿರುವುದೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಈ ಪ್ರಶ್ನೆ ನನ್ನ ಗಮನಕ್ಕೆ ಬಂದ ಕೂಡಲೇ ಗ್ರೇಟ್ ಬ್ರಿಟನ್ನಿನ ಪರಿಸ್ಥಿತಿಯ ಬಗ್ಗೆ ಕೇಳಿತಿಳಿದುಕೊಂಡಿದ್ದೇನೆ. ಭತ್ಯೆ ದರಗಳಲ್ಲಿನ ವ್ಯತ್ಯಾಸವನ್ನು ಗ್ರೇಟ್ ಬ್ರಿಟನ್ನಿನಲ್ಲಿ ತೆಗೆದುಹಾಕಿರುವುದು ನಿಜಸಂಗತಿಯಾಗಿದೆ.

ಆ) ಈ ಪ್ರಶ್ನೆಯನ್ನು ಪರಿಗಣಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೮ ನವೆಂಬರ್ ೧೯೪೩, ಪು. ೩೦

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೮ ನವೆಂಬರ್ ೧೯೪೩, ಪು. ೩೦

# ೧೧೪
# ಕಾರ್ಮಿಕರ ಸ್ಥಿತಿ ಸುಧಾರಣೆಗಾಗಿ ಸರ್ಕಾರಿ ಒಪ್ಪಂದಗಳಲ್ಲಿ ಒಳ ಅಡಕಗಳು*

**೪೮. ಶ್ರೀ ಎನ್.ಎಂ. ಜೋಷಿ :** 'ತ್ರಿಪಕ್ಷೀಯ ಕಾರ್ಮಿಕ ಸಭೆ'ಯೊಂದರಲ್ಲಿ ಕಾರ್ಮಿಕರ ಸ್ಥಿತಿ ಸುಧಾರಣೆಗಾಗಿ ಸರ್ಕಾರಿ ಒಪ್ಪಂದಗಳಲ್ಲಿ ಕಾರ್ಮಿಕರನ್ನು ನ್ಯಾಯಸಮ್ಮತವಾಗಿ ನೋಡಿಕೊಳ್ಳಬೇಕೆಂಬ ಅಂಶವನ್ನು ಸೇರಿಸಬೇಕಾದ ಅಗತ್ಯತೆಯ ಬಗ್ಗೆ ಚರ್ಚೆಯಾಯಿತೆ ಎಂದು ಗೌರವಾನ್ವಿತ ಸದಸ್ಯರು ತಿಳಿಸುವರೆ? ಹಾಗಿದ್ದಲ್ಲಿ, ಭಾರತ ಸರ್ಕಾರ ಇದರ ಬಗ್ಗೆ ಏನು ಕ್ರಮಕೈಗೊಳ್ಳಲು ತೀರ್ಮಾನಿಸಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು. ಸ್ಥಾಯೀ ಕಾರ್ಮಿಕ ಸಮಿತಿಯ ಮೂರನೇ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು. ನಿಖರವಾಗಿ ಹೇಳಬೇಕಾದರೆ ಸರ್ಕಾರಿ ಒಪ್ಪಂದಗಳಲ್ಲಿ ಕಾರ್ಮಿಕರಿಗೆ ಸಮರ್ಪಕವಾದ ವೇತನವನ್ನು ಕೊಡುವುದರ ಬಗ್ಗೆ ಷರತ್ತು ಸೇರಿಸುವುದರ ಬಗ್ಗೆ ಚರ್ಚೆಯಾಯಿತೇ ಹೊರತು ನ್ಯಾಯಸಮ್ಮತವಾಗಿ ನೋಡಿಕೊಳ್ಳುವ ಬಗ್ಗೆ ಅಲ್ಲ. ಕೇಂದ್ರ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಈ ದಿಶೆಯಲ್ಲಿ ಈಗಾಗಲೇ ಈ ತತ್ತ್ವವನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಅಗತ್ಯವಾದ ಪ್ರಾಥಮಿಕ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ಈ ಯೋಜನೆಯನ್ನು ಜಾರಿಗೊಳಿಸಿದ ನಂತರ ಸರ್ಕಾರದ ಬೇರೆ ಇಲಾಖೆಗಳಲ್ಲೂ ಸಹ ಇದೇ ಬಗೆಯ ಷರತ್ತುಗಳನ್ನು ಸೇರ್ಪಡೆ ಮಾಡಲು ತೀರ್ಮಾನಿಸಲಾಗಿದೆ.

**ಶ್ರೀ ಹುಸೇನ್ ಭಾಯ್ ಎ. ಲಾಲ್‌ಜೀ :** 'ಸಕ್ರಿಯವಾಗಿ ಪರಿಗಣಿಸಲಾಗಿದೆ" ಎಂದರೇನು? ಇದರಲ್ಲಿ ಕಾಲಮಿತಿ ಎಂಬುದು ಉಂಟೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು; ಯಾವುದೇ ಒಂದು ವಿಷಯವನ್ನು ಪರಿಗಣಿಸುವುದಕ್ಕೂ, ತೀವ್ರವಾಗಿ ಪರಿಗಣಿಸುವುದಕ್ಕೂ ವ್ಯತ್ಯಾಸವಿದೆಯೆಂದು ನನಗೆ ಚೆನ್ನಾಗಿ ತಿಳಿದಿದೆ.

**ಶ್ರೀ ಹುಸೇನ್ ಭಾಯ್ ಎ. ಲಾಲ್‌ಜೀ :** ಇವುಗಳ ನಡುವಿನ ಕಾಲದಲ್ಲೇನಾದರೂ ವ್ಯತ್ಯಾಸವಿದೆಯೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅಂದಮೇಲೆ ವಿಷಯ ಅಂತಿಮ ಘಟ್ಟ ಮುಟ್ಟುತ್ತಿದೆ ಎಂದರ್ಥ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೯೪೩, ೯ ನವೆಂಬರ್ ೧೯೪೩, ಪು. ೬೮

# ೧೧೫
# ನವದೆಹಲಿಯಲ್ಲಿ ಆಯಾ ವರ್ಗಗಳ ಅರ್ಹತೆ ಪಡೆಯದವರಿಗೆ ಮನೆ ನೀಡುವ ಬಗ್ಗೆ ನಿಯಮಗಳು *

**೪೯. ಮೌಲ್ವಿ ಮುಹಮ್ಮದ್ ಅಬ್ದುಲ್ ಘಾನಿ :**

ಅ) ನಿಯಮಗಳನ್ನು ಪರಿಷ್ಕರಿಸುವುದುಕ್ಕೆ ಮೊದಲು, ಯುದ್ಧದ ಸಮಯದಲ್ಲಿ ಮನೆಗಳ ಹಂಚಿಕೆಯನ್ನು ಪಡೆದುಕೊಂಡವರು, ನಂತರ ತಮ್ಮ ವರ್ಗದವರಿಗೆ ಮೀಸಲಾದ ಮನೆಗಳನ್ನು ದೊರಕದ ಕಾರಣ, ಈ ಮೊದಲು ತಮಗೆ ನೀಡಲ್ಪಟ್ಟಿದ್ದ ಮನೆಗಳಲ್ಲಿಯೇ ವಾಸ್ತವ್ಯವನ್ನು ಮುಂದುವರೆಸಲು ಅವಕಾಶವನ್ನು ನೀಡಿರುವುದು ವಾಸ್ತವ ಸಂಗತಿಯೇ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಅ) ಗೆ ಉತ್ತರ ಸಕಾರಾತ್ಮಕವಾದರೆ, ನಿಯಮ ೭ (೨) ಆ)ದ ಪ್ರಕಾರ ಅಂಥ ವ್ಯಕ್ತಿಗಳು ಕೆಳ ದರ್ಜೆಯ ವಸತಿಮನೆಗಳಲ್ಲಿ ವಾಸ ಮುಂದುವರೆಸುವಂತೆ ಮಾಡಲು ಕಾರಣಗಳೇನು? ಅವರು ಹುದ್ದೆಗೆ ಸೇರಿದ ದಿನಾಂಕವನ್ನೇ ಅವರು 'out of class' ಆದ ದಿನವೆಂದು ಘೋಷಿಸಿ ಕಿರಿಯ ಸ್ಥಾನಕ್ಕೆ ಅವರನ್ನು ನೂಕುವ ಪರಿಪಾಠ ಸರಿಯೇ?

ಇ) ಮೇಲಿನ (ಅ) ಖಂಡದಲ್ಲಿ ಹೇಳಿದಂತೆ ಮೇಲ್ದರ್ಜೆಯ ನೌಕರರಿಗೆ ಕೆಳದರ್ಜೆಯ ನೌಕರರ ಮನೆಗಳಲ್ಲಿ ತಮ್ಮ ವಾಸ್ತವ್ಯವನ್ನು ಮುಂದುವರೆಸಲು ಅವಕಾಶಮಾಡಿಕೊಡುವುದರಿಂದ ಕೆಳದರ್ಜೆಯ ನೌಕರರಿಗೆ ತೊಂದರೆಯಾಗುವುದಿಲ್ಲವೆ? ಇದರಿಂದ ಕೆಳದರ್ಜೆಯ ನೌಕರರು ವಸತಿ ಸೌಕರ್ಯಗಳಿಗಾಗಿ ಹೆಚ್ಚುಕಾಲ ಕಾಯಬೇಕಾಗುವುದು ನಿಜವಲ್ಲವೆ?

ಈ) ನಿಯಮ ೭(ಅ) ಅಡಿಯಲ್ಲಿ ಹಾಗೂ ೨ ಮತ್ತು ೩ ಯಾದಿಗಳ ಕೆಳಗಡೆ ಬರುವ ಉಪನಿಯಮವನ್ನು ತೆಗೆದುಹಾಕುವುದರಿಂದ ಎಲ್ಲ ದೋಷಗಳನ್ನೂ ಸರಿಪಡಿಸುವತ್ತ ಗೌರವಾನ್ವಿತ ಸದಸ್ಯರು ಮನಸ್ಸು ಮಾಡಿರುವರೆ?

ಉ) ಒಟ್ಟು ಸೇವೆಯನ್ನು ಗಣನೆಗೆ ತೆಗೆದುಕೊಂಡು ವಸತಿಮನೆಗಳನ್ನು ಹಂಚಿಕೊಡುವ ನಿಯಮವನ್ನು ಜಾರಿಗೆ ತರುವುದರಿಂದ ಹೊಸದಾಗಿ ಸೇವೆಗೆ ಸೇರಿರುವವರೆಲ್ಲಾ – ಅವರು ಯಾವುದೇ ವರ್ಗದ ವಸತಿಮನೆಗಳಿಗೆ ಅರ್ಹತೆ ಹೊಂದಿರಲಿ – ಕ್ವಾರ್ಟರ್ಸ್‌ಗಳಿಲ್ಲದೇ ಇರಬೇಕಾದ ಪರಿಸ್ಥಿತಿ ತಲೆದೋರಿ ಬಹಳ ತೊಂದರೆಗೆ ಒಳಗಾಗುವರು. ಈ ಅಂಶವನ್ನು ಗೌರವಾನ್ವಿತ ಸದಸ್ಯರು ಮನಗೂಂಡಿರುವರೆ?

ಊ) ಇವರ ಕುಂದುಕೊರತೆಯ ನಿವಾರಣೆಯ ದೃಷ್ಟಿಯಿಂದ ಚಾಲ್ತಿಯಲ್ಲಿರುವ ನಿಯಮವನ್ನು ಬದಲಾಯಿಸಿ, ಹೊಸದಾಗಿ ಕೆಲಸಕ್ಕೆ ಸೇರಿರುವವರ ವಿಷಯದಲ್ಲಿ ಅವರ ವರ್ಗವಾದ ದಿನಾಂಕದಿಂದಲೂ ಉಳಿದವರ ಬಗ್ಗೆ ಅವರು ಯಾವ ದಿನಾಂಕದಿಂದ ತಮ್ಮ ವರ್ಗದಿಂದ ಮೇಲ್ದರ್ಜೆಗೆ ಹೋದರು ಎಂಬುದನ್ನು ಪರಿಗಣಿಸಿ ಜ್ಯೇಷ್ಠತೆಯನ್ನು ನಿರ್ಧರಿಸುವ ಸಲಹೆಯನ್ನು ಗೌರವಾನ್ವಿತ ಸದಸ್ಯರು ಪ್ರಸ್ತಾವಿಸುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ ನವೆಂಬರ್ ೧೯೪೩, ಪು. ೬೮–೬೯

ಋ) ಸೂಚಿಸಿರುವ ತಿದ್ದುಪಡಿಗಳನ್ನು ಒಪ್ಪುವುದಾದರೆ ಅವುಗಳನ್ನು ತಕ್ಷಣದಿಂದಲೇ ಜಾರಿಗೊಳಿಸುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** (ಅ) ಹೌದು.

ಆ) ನಿಯಮ ೭ (೨) ೨೦ (ಆ) ಇದರ ಉಪನಿಯಮಗಳ ಜಾರಿಗಿಂತ ಹೆಚ್ಚಾಗಿ ಬದಲಾಗಿ ವಸತಿಮನೆಗಳ ಕೊರತೆರುವ ಪರಿಸ್ಥಿತಿಯ ಕಾರಣದಿಂದ ದಂಡವಿಧಿಸುವ ಪ್ರಸಂಗಗಳು ಉದ್ಭವಿಸುತ್ತವೆ.

ಇ) ಹೌದು, ಆದರೆ ಪ್ರಸ್ತುತ ಪರಿಸ್ಥಿತಿಯನ್ನು ಪರಿಗಣಿಸಿದರೆ ಇದನ್ನು ನಿವಾರಿಸಲಾಗದೆಂದು ತೋರುತ್ತದೆ.

ಈ) ಇಲ್ಲಾ. ಸರ್ಕಾರದ ಬಳಿ ಹೆಚ್ಚು ವಸತಿಮನೆಗಳು ಲಭ್ಯವಾಗದ ಹೊರತು ಈ ಕುಂದುಕೊರತೆಯ ನಿವಾರಣಾ ಕಾರ್ಯ ಸಾಧ್ಯವಾಗದು, ಅಲ್ಲದೆ ಯುದ್ಧ ಮುಗಿಯುವ ತನಕ ಇದನ್ನು ಪರಿಹರಿಸಲಾಗದು ಎಂಬುದೂ ಕೂಡ ವಾಸ್ತವ ಸಂಗತಿ.

ಉ) ಪರಿಸ್ಥಿತಿ ಹೀಗಿದೆ ಎಂದು ನಾನು ಭಾವಿಸುವುದಿಲ್ಲ, ಆದರೆ ಬೇಡಿಕೆಗಿಂತ ವಸತಿಮನೆಗಳ ಸಂಖ್ಯೆ ಕಡಿಮೆ ಇರುವ ತನಕ ಕೆಲವರಿಗಾದರೂ ತೊಂದರೆಯಾಗುವುದು ಎಂಬುದು ನನ್ನ ದೃಷ್ಟಿಯಲ್ಲಿ ದಿಟ.

ಊ) ನಿಯಮಗಳಲ್ಲೇ ಇದಕ್ಕೆ ಈಗಾಗಲೇ ಅವಕಾಶ ಕಲ್ಪಿಸಲಾಗಿದೆ.

ಋ) ಇದು ಉದ್ಭವವಾಗುವುದಿಲ್ಲ.

## ೧೧೬
## ಬಂಗಾಳದ ಕಾರ್ಮಿಕ ಇಲಾಖೆಯ ಉದ್ಯೋಗಿಗಳಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವ ಬಗೆಗೆ *

**೫. ಶ್ರೀ ಕೆ.ಸಿ. ನಿಯೋಗಿ :** ಅ) ತಮ್ಮ ಇಲಾಖೆಯ ಅಧೀನದಲ್ಲಿ ಬರುವ ಬೇರೆ ಬೇರೆ ವರ್ಗದ ಉದ್ಯೋಗಿಗಳ ಬಗ್ಗೆ ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗೆಯೇ ನಿಯಂತ್ರಿತ ಅಥವಾ (ಕಡಿಮೆ) ಇಳಿಕೆ ದರದಲ್ಲಿ ಆಹಾರ ಧಾನ್ಯವನ್ನು ಪಡೆಯಲು ಅರ್ಹರಾಗಿರುವ ಬಂಗಾಳದ ನೌಕರರ ಸಂಖ್ಯೆಯೆಷ್ಟು?

ಆ) ಕಳೆದ ಜನವರಿಯಿಂದ ಪ್ರತಿ ತಿಂಗಳು ನಿಯಂತ್ರಿತ ಅಥವಾ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಪಡೆದ ನೌಕರರ ಸಂಖ್ಯೆಯೆಷ್ಟು?

ಇ) ಬಂಗಾಳದಲ್ಲಿ ಈ ರೀತಿ ನೌಕರರಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಯಾವ ಸಂಸ್ಥೆಗೆ ವಹಿಸಿಲಾಗಿದೆ; ಕಾಲದಿಂದ ಕಾಲಕ್ಕೆ ಎಷ್ಟು ಪ್ರಮಾಣದ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ ನವೆಂಬರ್ ೧೯೪೩, ಪು. ೮೧

ಆಹಾರಧಾನ್ಯದ ದಾಸ್ತಾನನ್ನು ಅವರು ಕಾಯ್ದಿರಿಸಬೇಕು; ಬಂಗಾಳದಲ್ಲಿ ಯಾವ ಏಜೆನ್ಸಿಗಳ ಮೂಲಕ ಅವರು ಈ ದಾಸ್ತಾನನ್ನು ಪಡೆಯುತ್ತಾರೆ? ಹಾಗೆಯೇ, ಪ್ರತಿ ತಿಂಗಳು ಸರಾಸರಿ ಯಾವ ದರದಲ್ಲಿ ಅವರಿಗೆ ಇವು ಸಿಗುತ್ತವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ೧೯೪೩ರ ನವೆಂಬರ್ ೯ ರಂದು ೫೫ನೇ ಸಂಖ್ಯೆಯ ಪ್ರಶ್ನೆಗೆ ಗೌರವಾನ್ವಿತ ಆಹಾರ ಇಲಾಖೆ ಸದಸ್ಯರು ನೀಡಿದ ಉತ್ತರದ ಕಡೆ ಮಾನ್ಯ ಸದಸ್ಯರ ಗಮನ ಸೆಳೆಯಲಿಚ್ಛಿಸುತ್ತೇನೆ.

## ೧೧೭
## ವೇತನ ವಿತರಣಾ ಕಾಯಿದೆಯ ಕಾರ್ಯಪಾಲನೆಯಲ್ಲಿ ಇರುವ ಕೆಲವು ಅಕ್ರಮಗಳು*

**೧೩೦. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅ) ವೇತನ ವಿತರಣಾ ಕಾರ್ಯಪಾಲನೆಯಲ್ಲಿ ೧೯೩೯–೪೦ ಹಾಗೂ ೧೯೪೦–೪೧ರ ಅವಧಿಯಲ್ಲಿ ರೈಲ್ವೆ ಇಲಾಖೆಯ 'ಕನ್ಸಿಲಿಯೇಷನ್ ಅಧಿಕಾರಿಗಳು' ಮತ್ತು 'ರೈಲ್ವೆ ಲೇಬರ್' 'ಸೂಪರ್‌ವೈಸರ್, ಇವರುಗಳು ಪತ್ತೆ ಮಾಡಿದ ಅಕ್ರಮಗಳು ಎಷ್ಟು ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಈಗ ಸೂಚಿಸಿರುವ ಎರಡನೆಯ ವರ್ಷದಲ್ಲಿ ಅಕ್ರಮಗಳ ಸಂಖ್ಯೆ ಹೆಚ್ಚಾಗಿರುವ ಪಕ್ಷದಲ್ಲಿ, ರೈಲ್ವೆ ಆಡಳಿತಕ್ಕೆ ಇದರ ಬಗ್ಗೆ ವರದಿ ಸಲ್ಲಿಸಿರುವುದರ ಜೊತೆಗೆ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಏನು ಕ್ರಮಕೈಗೊಂಡಿದೆ?

ಆ) ಕಾಯಿದೆಯ ೧೫ನೇ ಅಧಿನಿಯಮದಲ್ಲಿ ಸೂಚಿತವಾಗಿರುವಂತೆ ಆ ಪ್ರಾಧಿಕಾರಕ್ಕೆ ಅಕ್ರಮಗಳ ಬಗ್ಗೆ ವರದಿ ಮಾಡುವ ಬದಲು ರೈಲ್ವೆ ಆಡಳಿತಕ್ಕೆ ವರದಿ ಮಾಡುವ ರೀತಿ ಸೂಕ್ತವಾದ ಕ್ರಮವೇ? ವೇತನ ವಿತರಣಾ ಕಾಯಿದೆ ಅಥವಾ ಅದರಡಿಯಲ್ಲಿ ರೂಪಿತವಾಗಿರುವ ನಿಯಮಗಳ ಪಟ್ಟಿಯನ್ನು ಗೌರವಾನ್ವಿತ ಸದಸ್ಯರು ನೀಡುವರೆ?

ಇ) ಅಂಥ ಉಪನಿಯಮವೇನಾದರೂ ಇಲ್ಲದ ಪಕ್ಷದಲ್ಲಿ ವೇತನ ವಿತರಣಾ ಕಾಯಿದೆಯ ೧೫(೩) ಅಧಿನಿಯಮದ ಪ್ರಕಾರ ಕಾರ್ಮಿಕ ಪರಿವೀಕ್ಷಕರೇ ಏಕೆ ಕಾನೂನು ಕ್ರಮ ಜರುಗಿಸಲಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ೧೯೩೯–೪೦ ಹಾಗೂ ೧೯೪೦–೪೧ರಲ್ಲಿ ಪತ್ತೆ ಹಚ್ಚಿದ ಅಕ್ರಮಗಳ ಸಂಖ್ಯೆ ಕ್ರಮವಾಗಿ, ೩೦೧೨ ಹಾಗೂ ೪,೧೫೮. ಇಂಥ ಅಕ್ರಮಗಳು ಪುನರಾವರ್ತನೆಯಾಗದ ಹಾಗೆ ಎಚ್ಚರಿಕೆವಹಿಸುವಂತೆ ಇತ್ತೀಚೆಗೆ ರೈಲ್ವೆ ಆಡಳಿತಕ್ಕೆ ನಿರ್ದೇಶನ ನೀಡಲಾಗಿದೆ. ಅಕ್ರಮಗಳು ಮುಂದುವರಿದ ಪಕ್ಷದಲ್ಲಿ ಕಾಯಿದೆಯ ೧೫ನೇ ಅಧಿನಿಯಮದನ್ವಯ ಕಾನೂನು ಕ್ರಮ ಜರುಗಿಸುವ ಸಾಧ್ಯತೆಯನ್ನು ಪರಿಗಣಿಸಲಾಗುವುದು. ಇದರಿಂದ ತೃಪ್ತಿಕರವಾದ ಫಲಿತಾಂಶ ದೊರೆಯುವ ಸಾಧ್ಯತೆಯಿರುವುದರಿಂದ ಈ ಅಧಿನಿಯಮದ ಮೊರೆಹೋಗಬೇಕಾದ ಪ್ರಮೇಯವಿಲ್ಲವೆಂದು ಸರ್ಕಾರದ ತಿಳಿವಳಿಕೆಯಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ ನವೆಂಬರ್ ೧೯೪೩, ಪು. ೨೩೦–೩೧

ಆ) ವೇತನ ವಿತರಣಾ ಕಾಯಿದೆಯಡಿಯಲ್ಲಿ ಅಥವಾ ಆ ಮೂಲಕ ಸಿದ್ಧಪಡಿಸಿದ ನಿಯಮಾವಳಿಯಲ್ಲಿ ಅಂಥ ಉಪನಿಯಮವೇನೂ ಇಲ್ಲ.

ಇ) ೧೫(೩)ನೇ ಅಧಿನಿಯಮದಲ್ಲಿನ ಉಪನಿಯಮಗಳು ಆಜ್ಞೆರೂಪದವಲ್ಲ, ಹಾಗಾಗಿ ಸೌಹಾರ್ದಯುತವಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ಕಾರ್ಮಿಕ ಪರಿವೀಕ್ಷಕರು ರೈಲ್ವೆ ಆಡಳಿತಕ್ಕೆ ವರದಿ ನೀಡಬಹುದಾಗಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಶಿಫಾರಸುಗಳನ್ನು ಮಾಡುವಷ್ಟು ಅಧಿಕಾರ ಈ ಪರಿವೀಕ್ಷಕರಿಗೆ ಇರುವುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

**ಶ್ರೀ ಎನ್. ಎಮ್. ಜೋಷಿ :** ಈ ಅಕ್ರಮಗಳು ಕಂಪನಿ ಆಡಳಿತದಲ್ಲಿ ರೈಲ್ವೆಗಳಲ್ಲಿ ಮಾತ್ರ ಜರುಗಿದೆಯೇ ಇಲ್ಲವೆ ಸರ್ಕಾರದ ಆಡಳಿತದಲ್ಲಿರುವ ರೈಲ್ವೆಗಳಲ್ಲಿಯೂ ಅಕ್ರಮಗಳಿವೆಯೇ ಎಂದು ನಾನು ಕೇಳಬಹುದೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಕಾಲಾವಕಾಶ ಬೇಕು.

## ೧೧೮
## ರೈಲ್ವೆಗಳ ಸಂಧಾನಾಧಿಕಾರಿಗಳ ಚಟುವಟಿಕೆಗಳು *

೧೩೧. **ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅ) ಮಾನ್ಯ ಕಾರ್ಮಿಕ ಸದಸ್ಯರು ಶ್ರೀ ಎನ್.ಎಂ. ಜೋಷಿಯವರಿಗೆ ೧೯೪೩ರ ಫೆಬ್ರವರಿ ೧೯ರ, ನನ್ನ ೧೪೭೭ನೆಯ ಪ್ರಶ್ನೆಗೆ ನೀಡಿದ ಉತ್ತರಕ್ಕೆ ಸಂಬಂಧಿಸಿದಂತೆ ರೈಲ್ವೆ ಸಂಧಾನಾಧಿಕಾರಿಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವುದಾಗಿ ಹೇಳಿದಂತೆ ಆ ಬಗ್ಗೆ ಏನಾದರೂ ತೆಗೆದುಕೊಳ್ಳಲಾಗಿದೆಯೇ ಕ್ರಮ ಎಂದು ತಿಳಿಸುವರೇ? ಹಾಗಿದ್ದ ಪಕ್ಷದಲ್ಲಿ ಈ ವಿಷಯದ ಬಗ್ಗೆ ಸಂಕ್ಷಿಪ್ತ ಹೇಳಿಕೆ ನೀಡುವ ಪ್ರಸ್ತಾಪವಿದೆಯೋ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆ ಇನ್ನೂ ಪರಿಶೀಲನೆಯಲ್ಲಿದೆ. ಆದ್ದರಿಂದ ನಾನು ಈಗ ಯಾವುದೇ ಹೇಳಿಕೆ ನೀಡುವ ಸ್ಥಿತಿಯಲ್ಲಿಲ್ಲ.

**ಶ್ರೀ ನವಲ್ ಲಾಲ್ ಚಂದ್ ರಾಯ್ :** ಇಷ್ಟು ವಿಳಂಬಕ್ಕೆ ಕಾರಣವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ವಿಷಯವನ್ನು ಪರಿಗಣಿಸಲಾಗುತ್ತಿದೆಯೆಂದು ನಾನು ತಿಳಿಸಿದ್ದೇನೆ.

**ಶ್ರೀ ಲಾಲ್ ಚಂದ್ ನವಲ್‌ರಾಯ್ :** ಏಕಿಷ್ಟು ಸಮಯ ಹಿಡಿಯುತ್ತದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೆಚ್ಚು ಸಮಯ ಹಿಡಿಯುತ್ತಿದೆ ಎಂದು ನನಗನ್ನಿಸುವುದಿಲ್ಲ.

**ಶ್ರೀ ಹುಸೇನ್ ಭಾಯ್ ಎ. ಲಾಲ್‌ಜೀ :** ಸಕ್ರಿಯವಾಗಿ ಪರಿಗಣಿಸಲಾಗುವ ಘಟ್ಟವನ್ನು ಅದು ತಲುಪುವುದು ಯಾವಾಗ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪರಿಗಣಿತವಾಗುವ ಘಟ್ಟ ಈಗ ಪೂರ್ಣಗೊಂಡಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೩೧

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಯಾವಾಗಿನಿಂದ ಈ ವಿಷಯವು ಪರಿಗಣಿಸಲ್ಪಟ್ಟಿದೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಬಹಳ ಹಿಂದಿನಿಂದಲೇ, ಅದರಲ್ಲೂ ವಿಶೇಷವಾಗಿ ಶ್ರೀ ಜೋಷಿಯವರು ತಮ್ಮ ಪ್ರಶ್ನೆ ಕೇಳಿದಾಗಿನಿಂದ.

## ೧೧೯
## ಇಂಜಿನಿಯರುಗಳ ಸಂಸ್ಥೆ *

**೧೩೬. ಶ್ರೀ ಅನಂಗ್ ಮೋಹನ್ ರಾಮ್ :** ದಯಮಾಡಿ ಗೌರವಾನ್ವಿತ ಕಾರ್ಮಿಕ ಸದಸ್ಯರು ಮುಂದಿನ ವಿಷಗಳ ಬಗ್ಗೆ ತಿಳಿಸುವರೆ? ಅ) ಇಂಜಿನಿಯರುಗಳ ಸಂಸ್ಥೆ ('ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್') ಪರೀಕ್ಷೆಗಳನ್ನು ನಡೆಸುವ ಅಧಿಕೃತ ಸಂಸ್ಥೆಯೇ? ಈ ಸಂಸ್ಥೆ ನೀಡುವ ಎ.ಎಮ್.ಐ.ಇ. ಪದವಿಯನ್ನು ಇಂಜಿನಿಯರಿಂಗ್‌ನ ಪದವಿ ಗುಣಮಟ್ಟಕ್ಕೆ ಸಮವೆಂದು ಭಾರತ ಸರ್ಕಾರ ಪರಿಗಣಿಸಿರುವುದೇ?

ಆ) ಸರ್ಕಾರ (ಕೇಂದ್ರ ಅಥವಾ ಪ್ರಾಂತೀಯ) ಈ ಸಂಸ್ಥೆಗೆ ಹಣಕಾಸಿನ ಸಹಾಯ ನೀಡುತ್ತಿದೆಯೇ? ಹಾಗಿದ್ದಲ್ಲಿ ಮಂಜೂರು ಮಾಡಿರುವ ಸಹಾಯಧನದ ಮೊತ್ತವೆಷ್ಟು?

ಇ) ಪ್ರಾಂತೀಯ ಗವರ್ನರ್‌ಗಳು ಹಾಗೂ ವೈಸ್‌ರಾಯ್‌ಗಳನ್ನು ಈ ಸಂಸ್ಥೆ ತನ್ನ ಮಹಾಪೋಷಕರು ಹಾಗೂ ಗೌರವ ಸದಸ್ಯರನ್ನಾಗಿ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸಂಸ್ಥೆ 'ರಾಯಲ್ ಚಾರ್ಟರ್'ಅನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇಂಗ್ಲೆಂಡಿನ ಸೋದರ ಸಂಸ್ಥೆಗಳಾದ 'ದ ಇನ್ಸ್‌ಟಿಟ್ಯೂಟ್ ಆಫ್ ಮೆಕ್ಯಾನಿಕಲ್ ಎಂಜಿನಿಯರ್ಸ್', 'ದ ಇನ್ಸ್‌ಸ್ಟಿಟ್ಯೂಟ್ ಆಫ್ ಸಿವಿಲ್ ಎಂಜಿನಿಯರ್ಸ್' ಹಾಗೂ 'ದ ಇನ್ಸ್‌ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಎಂಜಿನಿಯರ್ಸ್' ಇವು ಭಾರತದ 'ದ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರ್ಸ್' ಸಂಸ್ಥೆ ನಡೆಸುವ ಪರೀಕ್ಷೆಗಳನ್ನು ಅಂಗೀಕರಿಸಿಲ್ಲ ಎಂಬುದು ನಿಜವೇ? ಹಾಗೂ

ಊ) ಸದರಿ ಲೋಹದ ಸಂಸ್ಥೆಗಳು ಭಾರತೀಯ ಸಂಸ್ಥೆಯನ್ನು ಅಂಗೀಕರಿಸುವಂತೆ ಪ್ರಭುಗಳ ಸರ್ಕಾರವನ್ನು ಕೋರುವ ಪ್ರಸ್ತಾವ ಭಾರತ ಸರ್ಕಾರದ ಮುಂದೆ ಇದೆಯೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಕೇಂದ್ರ ಸರ್ಕಾರ ಮಾತ್ರ ಈ ಸಂಸ್ಥೆಗೆ ಯಾವುದೇ ರೀತಿಯ ಹಣಕಾಸಿನ ಸಹಾಯ ಮಾಡುತ್ತಿಲ್ಲ, ಆದರೆ ಪ್ರಾಂತೀಯ ಸರ್ಕಾರಗಳು ಸಹಾಯ ಮಾಡುತ್ತಿವೆಯೋ ಎಂಬುದು ನನಗೆ ತಿಳಿಯದು.

ಇ) ಘನತೆವೆತ್ತ ವೈಸ್‌ರಾಯ್ ಅವರು ಹಾಗೂ ಪ್ರಾಂತೀಯ ರಾಜ್ಯಪಾಲರುಗಳು ಈ ಸಂಸ್ಥೆಯ ಗೌರವ ಸದಸ್ಯರೆಂಬುದು ನಿಜ.

ಈ) ಹೌದು.

ಉ) ಸರ್ಕಾರಕ್ಕೆ ಈ ಬಗ್ಗೆ ಮಾಹಿತಿ ಇಲ್ಲ.

ಊ) ಅಗತ್ಯವೆನಿಸಿದರೆ, ಭಾರತೀಯ ಸಂಸ್ಥೆಯೇ ಈ ಪ್ರಶ್ನೆಯನ್ನು ಎತ್ತಬೇಕು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ನವೆಂಬರ್ ೧೯೪೩, ಪು. ೨೩೩–೩೪

ಆ ಕಾರಣದಿಂದ ಮಿತ್ರರು ನೇರವಾಗಿ ಸಂಸ್ಥೆಗೇ ಬರೆದು ತಿಳಿದುಕೊಳ್ಳಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

## ೧೨೦
## ನವದೆಹಲಿಯಲ್ಲಿ ಭಾರತೀಯ ಗುಮಾಸ್ತರುಗಳಿಗೆ ಒಂದು ದೊಡ್ಡ ಹೋಟೆಲ್ಲನ್ನು ನಿರ್ಮಾಣ ಮಾಡುವ ಬಗೆಗೆ *

** **೧೪೫, ಸರ್‌ದಾರ್ ಸಂತ್ ಸಿಂಗ್ :** ಅ) ನವದೆಹಲಿಯಲ್ಲಿ ಭಾರತೀಯ ಗುಮಾಸ್ತರುಗಳಿಗಾಗಿ ಒಂದು ಬಹುಮಹಡಿಯ ಹೋಟೆಲ್ಲನ್ನು ಕಟ್ಟಿ ಅವರ ಊಟ ಮತ್ತು ವಸತಿಗೆ ಅನುಕೂಲ ಮಾಡುವರೆ? ಈ ತರಹದ ಒಂದು ದೊಡ್ಡ ಹೋಟೆಲಿನ ಕೊರತೆಯಿದ್ದು ಗುಮಾಸ್ತರುಗಳಿಗೆ ಇದರಿಂದ ತುಂಬಾ ಅನಾನುಕೂಲವಾಗಿರುತ್ತದೆ.

ಅ) ಅವಿವಾಹಿತರಾದ ಯೂರೋಪಿಯನ್ ನಾನ್–ಕಮೀಷನ್ಡ್ ಅಧಿಕಾರಿಗಳಿಗಾಗಿ ಇಂಥ ಅನೇಕ ಕಟ್ಟಡಗಳನ್ನು ನಿರ್ಮಿಸಿರುವುದೇ ಅಲ್ಲದೆ ಇಂಥ ಕಟ್ಟಡಗಳು ಹಾಸ್ಟೆಲ್‌ಗಳಾಗಿ ಕೆಲಸ ಮಾಡುತ್ತಿರುವುದು ನಿಜವೇ?

ಇ) ಇದೇ ರೀತಿಯ ಸೌಲಭ್ಯಗಳನ್ನು ಸರ್ಕಾರ ಭಾರತೀಯ ಅವಿವಾಹಿತ ಗುಮಾಸ್ತರುಗಳಿಗೆ ನೀಡಲು ಸರ್ಕಾರ ಸಿದ್ಧವಿದೆಯೇ? ಹಾಗಿಲ್ಲದಿದ್ದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಗುಮಾಸ್ತರುಗಳಿಗೆ ಒಂದು ಹಾಸ್ಟೆಲ್ ಕಟ್ಟಲು ಸರ್ಕಾರ ಪರಿಗಣಿಸುತ್ತಿದೆ.

ಆ) ಹೌದು.

ಇ) ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಮಾದರಿಯ ಚುಮ್ಮಿಗಳನ್ನು ಭಾರತೀಯ ಅವಿವಾಹಿತ ಗುಮಾಸ್ತರುಗಳಿಗೆ ಈಗಾಗಲೇ ಸರ್ಕಾರ ಕಟ್ಟಿಸಿಕೊಟ್ಟಿದೆ. ಒಂದು ಹಾಸ್ಟೆಲ್ಲನ್ನೇ ನಿರ್ಮಾಣ ಮಾಡುವಷ್ಟು ಒತ್ತಡವಿದೆಯೇ ಎಂಬುದನ್ನು ಈಗ ಪರಿಶೀಲಿಸಲಾಗುತ್ತಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೨–೪೩

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

# ೧೨೧
# ನವದೆಹಲಿಯ ಮಿಂಟೊ ರಸ್ತೆ ಹಾಗೂ ಹ್ಯಾವ್‌ಲಾಕ್ ಸ್ಕ್ವೇರ್‌ರ ವಿಂಟೇಜ್ ಕಛೇರಿಗಳಿಗೆ ನೀಡಿದ ದೂರುಗಳನ್ನು ಪರಿಶೀಲಿಸುವುದರಲ್ಲಿ ಆಗಿರುವ ವಿಳಂಬದ ಬಗೆಗೆ *

** **೧೪೭. ಸರ್‌ದಾರ್ ಸಂತ್ ಸಿಂಗ್ :** ಅ) ಗುಮಾಸ್ತರ ವಸತಿಮನೆಗಳ ದುರಸ್ತಿಗೆ ಸಂಬಂಧಿಸಿದಂತೆ ಮಿಂಟೊ ರಸ್ತೆ ಹಾಗೂ ಹ್ಯಾವ್‌ಲಾಕ್ ಸ್ಕ್ವೇರ್‌ನಲ್ಲಿರುವ ವಿಚಾರಣಾ ಕಛೇರಿಗಳಿಗೆ ನೀಡಿದ ದೂರುಗಳನ್ನು ಸಾಮಾನ್ಯವಾಗಿ ಸಾಕಷ್ಟು ವಿಳಂಬವಾದ ನಂತರ ಪರಿಗಣಿಸಲಾಗುವ ಪರಿಪಾಠ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಸರ್ಕಾರದ ಗಮನಕ್ಕೆ ಈ ವಿಷಯಗಳು ಬಂದಿವೆಯೇ–

i) ಇವುಗಳ ಪೈಕಿ ಕೆಲವು ದೂರುಗಳನ್ನು ಸರಿಪಡಿಸಿಯೇ ಇಲ್ಲ; ಅಲ್ಲದೆ

ii) ಈ ವಿಷಯವಾಗಿ ೩ನೇ ನಿರ್ಮಾಣ ವಿಭಾಗದ ಕಾರ್ಯಪಾಲ ಇಂಜಿನಿಯರಿಗೆ ಅಥವಾ 'ಬಿ' ವಿಭಾಗದ ಅಧಿಕಾರಿಗಳಿಗೆ ಕಳುಹಿಸಿದ ಪತ್ರಗಳು ತಲುಪಿದ್ದಕ್ಕೆ ಸಂಬಂಧಪಟ್ಟವರಿಂದ ಯಾವ ಸೂಚನೆಯೂ ದೊರೆಯದು, ಅಷ್ಟೇ ಅಲ್ಲ ಯಾವುದೇ ಕ್ರಮವನ್ನೂ ಕೈಗೊಳ್ಳುವುದಿಲ್ಲ.

ಇ) ಸಂಬಂಧಪಟ್ಟ ಅಧಿಕಾರಿಗಳು ತಮಗೆ ಬರುವ ಎಲ್ಲ ಪತ್ರಗಳು ತಲುಪಿದ್ದಕ್ಕೆ ಉತ್ತರ ನೀಡಬೇಕೆಂದೂ, ಆ ಸಂಬಂಧವಾಗಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರ ಅವರಿಗೆ ತಿಳಿವಳಿಕೆ ನೀಡುವುದೆ? ಇಲ್ಲವಾದರೆ, ಏಕಿಲ್ಲ?

ಈ) ಸರ್ಕಾರಕ್ಕೆ ಇದರ ಬಗ್ಗೆ ಗಮನವಿದೆಯೇ :

i) ವಸತಿಮನೆಗಳಿಗೆ ಸುಣ್ಣ ಬಣ್ಣ ಹಚ್ಚುವ ಕಾರ್ಯದಲ್ಲಿ ಕಂಟ್ರ್ಯಾಕ್ಟ್‌ದಾರರು ತೀರಾ ಅಕ್ರಮವೆಸಗುವುದರಿಂದ ಬಾಡಿಗೆದಾರರುಗಳಿಗೆ ತುಂಬಾ ಅನನುಕೂಲವಾಗಿದೆ;

ii) ಯಾವುದೋ ಒಂದು ದಿನ ಇದ್ದಕ್ಕಿದ್ದಂತೆಯೇ ಬಂದು ಅಂದು ಸುಣ್ಣ ಬಣ್ಣ ಹಚ್ಚಲು ವಸತಿಮನೆಗಳನ್ನು ತೆರವು ಮಾಡಬೇಕೆಂದು ತಿಳಿಸುವುದು, ನಂತರ ಬಹಳ ದಿನಗಳವರೆಗೆ ಸುಣ್ಣ ಬಣ್ಣದವರು ಈ ಕಡೆ ಸುಳಿಯದಿರುವುದು ರೂಢಿಯಾಗಿದೆ.

ಉ) ತಮ್ಮ ಬಾಡಿಗೆದಾರರ ಈ ಅನನುಕೂಲತೆಗಳನ್ನು ಸರಿಮಾಡಲು ಸರ್ಕಾರ ಸೂಕ್ತಕ್ರಮಕೈಗೊಳ್ಳಲು ಪ್ರಸ್ತಾವಿಸುವುದೇ? ಇಲ್ಲವಾದಲ್ಲಿ ಯಾಕಿಲ್ಲ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) i) ಇಲ್ಲ.

ii) ಕಾರ್ಯಪಾಲಕ ಇಂಜಿನಿಯರು ಸ್ವೀಕರಿಸುವ ಎಲ್ಲಾ ಪತ್ರಗಳ ಬಗ್ಗೆ ಕ್ರಮ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೨–೪೩

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

ಕೈಗೊಳ್ಳುತ್ತಿರುವುದರಿಂದ ಬರುವ ಪತ್ರಗಳಿಗೆಲ್ಲ ತಲುಪಿದ್ದಕ್ಕೆ ಸೂಚನೆ ನೀಡಬೇಕಾದ ಪ್ರಮೇಯ ಕಾಣುತ್ತಿಲ್ಲ.

ಇ) ಹೌದು.

ಈ) i), ii) ಇಲ್ಲ.

ಉ) ಹೌದು, ಆಗಿಂದಾಗ್ಯೆ ವೈಯಕ್ತಿಕವಾದ ತಪಾಸಣೆ ನಡೆಸಬೇಕಾದ ಸರ್ಕಾರ ಕಾರ್ಯಪಾಲಕ ಇಂಜಿನಿಯರಿಗೆ ಸೂಚನೆ ನೀಡುವ ಯತ್ನದಲ್ಲಿದೆ.

## ೧೨೨

## ನವದೆಹಲಿಯ ಬೇಯರ್ಡ್ ಸ್ಕ್ವೇರ್, ಈಸ್ಟ್ ಹಾಗೂ ಇರ್ವಿನ್ ರಸ್ತೆಯ ನಡುವೆ ಇರುವ ಬಯಲು ಜಾಗದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಸಾಂಪ್ರದಾಯಿಕ 'ಇ' ಮಾದರಿ ವಸತಿಮನೆಗಳು*

** **೧೪೮. ಸರ್‌ದಾರ್ ಸಂತ್ ಸಿಂಗ್ :** ಅ) ಬೇಯರ್ಡ್ ಸ್ಕ್ವೇರ್, ಈಸ್ಟ್ ಹಾಗೂ ಇರ್ವಿನ್ ರಸ್ತೆಯ ನಡುವಿನ ಮುಕ್ತ ಜಾಗದಲ್ಲಿ ಅನೇಕ ಸಾಂಪ್ರದಾಯಿಕ 'ಇ' ಮಾದರಿ ವಸತಿಮನೆಗಳು ನಿರ್ಮಾಣವಾಗಿರುವುದು ನಿಜವೆಂದು ಗೌರವಾನ್ವಿತ ಸದಸ್ಯರು ತಿಳಿಸುವರೆ?

ಆ) ಮಾನ್ಯ ಸದಸ್ಯರ ಗಮನಕ್ಕೆ ಮುಂದಿನ ವಿಷಯಗಳು ಬಂದಿವೆಯೇ

i) ಗಲ್ಲಿ ಹಾಗೂ ಓಣಿಗಳನ್ನು ಹೊಂದಿದ ನಗರವೊಂದರ ಇಕ್ಕಟ್ಟಾದ ಭಾಗದಲ್ಲಿ ಇವು ಕಾಣಿಸುತ್ತಿವೆ ; ಅಲ್ಲದೆ

ii) ಕೇಂದ್ರ ಲೋಕೋಪಯೋಗಿ ಇಲಾಖೆಯ ಈಗಿನ ಅಧಿಕಾರಿಗಳು ನವದೆಹಲಿಯ ಆರಂಭದ ನಕ್ಷೆಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ, ತತ್ಪರಿಣಾಮವಾಗಿ ಮೇಲೆ ಕಾಣಿಸಿರುವ ಪ್ರದೇಶವು ಬಹಳ ಇಕ್ಕಟ್ಟಾಗಿದೆ.

ಇ) ಸಾಂಪ್ರದಾಯಿಕ 'ಇ' – ಮಾದರಿ ವಸತಿಮನೆಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವುದು ನಿಜವೇ?

ಈ) ಹೊಸದಾಗಿ ವಸತಿಮನೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಗುಮಾಸ್ತರ ವಸತಿ ನಿವಾಸದ ಪ್ರದೇಶಗಳು ಇನ್ನೂ ಹೆಚ್ಚು ಇಕ್ಕಟ್ಟಾಗದ ಹಾಗೆ ಹಸಿರು ಹಾಸು ಹಾಗೂ ಮುಕ್ತ ಜಾಗಗಳಿಗೆ ಅವಕಾಶವಿರುವಂತೆ ನಿರ್ಮಿಸಬೇಕೆಂದು ಸಲಹೆ ನೀಡಿದರೆ ಅದನ್ನು ಸ್ವೀಕರಿಸಲು ಸರ್ಕಾರ ಸಿದ್ಧವಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :**

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೪

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

ಅ) ಹೌದು.

ಆ) i) ಮತ್ತು ii) ಇಲ್ಲ.

ಇ) ಹೌದು.

ಈ) ಸರ್ಕಾರ ಇಂಥ ಸಲಹೆಗಳ ಮೇರೆಗೆ ಕ್ರಮಕೈಗೊಂಡಿದೆ.

## ೧೨೩
## ನವದೆಹಲಿಯ ಹ್ಯಾವ್‌ಲಾಕ್ ಮತ್ತು ಬೇಯ್ರ್ಡ್ ಸ್ಕ್ವೇರ್‌ಗಳಲ್ಲಿ ಕೆಲವು ರಸ್ತೆಗಳನ್ನು ಮುಚ್ಚುವ ಬಗೆಗೆ*

** **೧೪೯. ಸರ್‌ದಾರ್ ಸಂತ್ ಸಿಂಗ್ :** ಅ) ನವದೆಹಲಿ ಡಿ.ಐ.ಜಡ್ ಪ್ರದೇಶದ ಎಲ್ಲಾ ಗುಮಾಸ್ತರ ಸಾಂಪ್ರದಾಯಿಕ ವಸತಿಮನೆಗಳ ನಾಲ್ಕು ಕಡೆಗಳಲ್ಲಿ ರಸ್ತೆಯಿದ್ದುದು ನಿಜವೆಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಈ ರಸ್ತೆಗಳನ್ನು ನಂತರ ಮುಚ್ಚಿದುದು ವಾಸ್ತವವೇ?

ಇ) ಆ ಪ್ರದೇಶಗಳಲ್ಲಿನ ಹಸಿರು ಹಾಸನ್ನು ರಕ್ಷಿಸುವುದು ಈ ಕ್ರಮಕ್ಕೆ ಕಾರಣವೆನ್ನುವುದರಲ್ಲಿ ನಿಜಾಂಶವಿದೆಯೇ?

ಈ) ಮುಂದಿನ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?

i) ಹ್ಯಾವ್‌ಲಾಕ್ ಹಾಗೂ ಬೇಯ್ರ್ಡ್ ಚೌಕಗಳ, 'ಬಿ' ಮತ್ತು 'ಸಿ' ಮಾದರಿ ವಸತಿಮನೆಗಳಲ್ಲಿ ಮೂಲೆಗಳನ್ನು ಬಿಟ್ಟು ಉಳಿದಂತೆ ಪ್ರತಿ ಎರಡು ಚೌಕಗಳ ನಂತರ ರಸ್ತೆಗಳಿವೆ; ಅಲ್ಲದೆ

ii) ಕೂಲಿಗಳು ಹಾಗೂ ಕೆಲಸಗಾರರು ಪ್ರತಿನಿತ್ಯ ಈ ಮಾರ್ಗಗಳನ್ನು ಉಪಯೋಗಿಸುವುದರಿಂದ ಹಸಿರುಹಾಸಿನ ಮೇಲೆ ಅವರು ನಡೆದು ಹೆಜ್ಜೆ ಗುರುತುಗಳಿಂದಾಗಿ ಹಸಿರು ಹಾಸು ವಿಕೃತಗೊಂಡಿದೆ.

ಉ) ಈ ಮಾರ್ಗಗಳನ್ನು ಮುಚ್ಚಿಸಿ ಹಸಿರು ಹಾಸಿಗೆ ಮತ್ತೆ ಹುಲ್ಲು ತಟ್ಟಿಸಿ ಸರಿ ಮಾಡುವ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಸಿದ್ಧವಿದೆಯೇ? ಇಲ್ಲವಾದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :**

ಅ) ಮತ್ತು ಆ) ಹೌದು.

ಇ) ಇಲ್ಲ.

ಈ) ಹೌದು.

ಉ) ಈ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೪–೪೫

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

# ೧೨೪
# ನವದೆಹಲಿ ಸಾಂಪ್ರದಾಯಿಕ ಮಾದರಿಯ ವಸತಿಮನೆಗಳಲ್ಲಿ ಹೆಚ್ಚು ಹೆಚ್ಚು ತರಕಾರಿ ಬೆಳೆಯುವುದರ ಬಗೆಗೆ *

** **೧೫೦. ಸರ್‌ದಾರ್ ಸಂತ್ ಸಿಂಗ್ :** ಅ) ಹೆಚ್ಚು ಹೆಚ್ಚು ಹಣ್ಣು, ತರಕಾರಿಗಳನ್ನು ಬೆಳೆಯುವಂತೆ ಸರ್ಕಾರವು ಸಾರ್ವತ್ರಿಕವಾಗಿ ಮಾಡಿಕೊಂಡಿರುವ ಮನವಿಯ ಮೇರೆಗೆ ನವದೆಹಲಿಯಲ್ಲಿ ವಾಸಮಾಡುತ್ತಿರುವ ಭಾರತ ಸರ್ಕಾರದ ಸಿಬ್ಬಂದಿ ವರ್ಗದವರು ಸಾಂಪ್ರದಾಯಿಕ ಮಾದರಿ ವಸತಿಮನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣ್ಣು, ತರಕಾರಿಗಳನ್ನು ಬೆಳೆಯಲು ಸಾಧ್ಯವೇ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ವಿಶೇಷವಾಗಿ 'ಡಿ' – ಮಾದರಿಯ ವಸತಿಮನೆಗಳಲ್ಲಿ, ಸಾಮಾನ್ಯವಾಗಿ 'ಇ', 'ಸಿ' ಹಾಗೂ 'ಬಿ' – ಮಾದರಿ ಮನೆಗಳಲ್ಲಿ ಅಂಗಳವು ಬಹಳ ಚಿಕ್ಕದಾಗಿದ್ದು ತರಕಾರಿ ಬೆಳೆಯಲು ಇದು ಏನೇನೂ ಸಾಲದಾಗಿರುವುದು ನಿಜಸಂಗತಿಯೇ?

ಇ) ಸಾಂಪ್ರದಾಯಿಕ ಮಾದರಿ ಮನೆಗಳಲ್ಲಿ ವಾಸಮಾಡುತ್ತಿರುವ ಸರ್ಕಾರದ ಸಿಬ್ಬಂದಿ ವರ್ಗದವರು ಒಂದು ವೇಳೆ ತರಕಾರಿ ಬೆಳೆಯಲು ಹೆಚ್ಚು ಜಾಗವನ್ನು ಕೇಳಿದ ಪಕ್ಷದಲ್ಲಿ ಅಂಥ ಜಾಗವನ್ನು ಕೊಟ್ಟು ಸುತ್ತಲೂ ರಕ್ಷಣೆ ಒದಗಿಸಿಕೊಡಲು ಸರ್ಕಾರ ಸಿದ್ಧವಿದೆಯೇ? ಇಲ್ಲವಾದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಈ ವಸತಿಮನೆಗಳಲ್ಲಿ ವಾಸಿಸುವಂಥ ಸಿಬ್ಬಂದಿ ವರ್ಗದವರು ತಮ್ಮ ಮನೆಬಳಕೆಗೆ ಆಗುವಷ್ಟು ತರಕಾರಿಯನ್ನು ಬೆಳೆದುಕೊಳ್ಳಲು ಅಡ್ಡಯಿಲ್ಲ.

ಆ) ಹೌದು.

ಇ) ಇಲ್ಲ. ಈ ಪ್ರಸ್ತಾಪವನ್ನು ಸ್ವೀಕರಿಸಿದರೆ ಪ್ರಸ್ತುತ ಹಸಿರು ಹುಲ್ಲಿನ ಹಾಸನ್ನು ತೆಗೆದು ಹಾಕಬೇಕಾಗುತ್ತದೆ. ಸುತ್ತಲೂ ಬೇಲಿಹಾಕಿಸುವುದು ಬಹಳ ದುಬಾರಿಯಾದ ಕಾರಣ ಸರ್ಕಾರಕ್ಕೆ ಆ ಜವಾಬ್ದಾರಿ ಹೊರಲಾಗುವುದಿಲ್ಲ ; ಅಲ್ಲದೆ, ಅಷ್ಟು ವಿಶಾಲವಾದ ಜಾಗವನ್ನು ಸಿಬ್ಬಂದಿವರ್ಗದವರಿಗೆ ನೀಡಿದರೆ ಪ್ರಾಯಶಃ ಅದನ್ನು ಪೂರ್ಣವಾಗಿ ಅವರು ಉಪಯೋಗಿಸಿಕೊಳ್ಳಲಾರರು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೫

** ಈ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಯಿತಾದರೂ, ಪ್ರಶ್ನೆ ಕೇಳಿದವರು ಗೈರುಹಾಜರಾಗಿದ್ದರು.

# ೧೨೫
# ಸಂಯುಕ್ತ ಪ್ರಾಂತ್ಯಗಳಲ್ಲಿರುವ 'ಸಿವಿಲ್ ಪಯನಿಯರ್ ಫೋರ್ಸ್'ನಲ್ಲಿ ನಿಯೋಜಿತವಾಗಿರುವ ಅಧಿಕಾರಿಗಳು

**೨೯. ಶ್ರೀ ಪಿಯರ್ ಲಾಲ್ ಕುರೀಲ್ :** ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ : ಅ) 'ಸಂಯುಕ್ತ ಪ್ರಾಂತ್ಯಗಳಲ್ಲಿ ಸಿವಿಲ್ ಪಯೊನಿಯರ್ ಫೋರ್ಸ್'ನಲ್ಲಿ (ಬೇರೆ ಬೇರೆ ವರ್ಗಗಳಲ್ಲಿ) ಇದುವರೆಗೆ ನೇಮಕರಾಗಿರುವ ನಿಯೋಜಿತ ಅಧಿಕಾರಿಗಳ ಒಟ್ಟು ಸಂಖ್ಯೆಯೆಷ್ಟು?

ಆ) ಅವರಲ್ಲಿ ಎಷ್ಟು ಮಂದಿ ಹಿಂದೂಗಳು, ಮುಸ್ಲಿಮರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರು?

ಇ) ಈ ನಿಯೋಜಿತ ಅಧಿಕಾರಿಗಳಲ್ಲಿ ಎಷ್ಟು ಮಂದಿಗೆ ಮೇಲಿನ ಹುದ್ದೆಗೆ ಬಡ್ತಿ ನೀಡಲಾಗಿದೆ?

ಈ) ಪರಿಶಿಷ್ಟ ಜಾತಿಗೆ ಸೇರಿದ ಯಾರಾದರೂ ನಿಯೋಜಿತ ಅಧಿಕಾರಿಗಳನ್ನು ಮೇಲಿನ ಹುದ್ದೆಗೆ ಬಡ್ತಿ ಮಾಡಿರುವರೆ; ಹಾಗೂ

ಉ) ಈ) ಭಾಗಕ್ಕೆ ಉತ್ತರವು ನಕಾರಾತ್ಮಕವಾದರೆ, ಈಗಲಾದರೂ ಸರ್ಕಾರ ಆ ದಿಶೆಯಲ್ಲಿ ಬಡ್ತಿ ನೀಡಲು ಪ್ರಸ್ತಾವಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು. ಆ) ನಿಯೋಜಿತ ಹುದ್ದೆಯ ಇಪ್ಪತ್ತೈದು ಮಂದಿ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಧಿಕಾರಿಗಳ ಹುದ್ದೆ ಹಾಗೂ ಕೋಮನ್ನು ಈ ಕೆಳಕಂಡಂತೆ ಕಾಣಿಸಲಾಗಿದೆ.

| | **ಮುಸ್ಲಿಮರು** | **ಪರಿಶಿಷ್ಟ ಜಾತಿಯವರು** | **ಇತರೆ** |
|---|---|---|---|
| ಕಮಾಂಡೆಂಟುಗಳು | – | – | ೨ (ಒಬ್ಬರು ಕ್ರಿಶ್ಚಿಯನ್ನರು) |
| ಕ್ಯಾಪ್ಟನ್ನರು – | – | | ೨ (ಒಬ್ಬರು ಕ್ರಿಶ್ಚಿಯನ್ನರು) |
| ಲೆಫ್ಟಿನೆಂಟರು | – | – | ೭ (ಇಬ್ಬರು ಕ್ರಿಶ್ಚಿಯನ್ನರು) |
| ೨ನೇ ಲೆಫ್ಟಿನೆಂಟರು | ೪ | ೩ | ೭ |

ಇ) ಮೊದಲನೆಯ ಬಾರಿಗೆ ನಿಯೋಜಿಸಿದಾಗಲೇ ಇಬ್ಬರು ಕಮಾಂಡೆಂಟರು ಹಾಗೂ ಇಬ್ಬರು ಕ್ಯಾಪ್ಟನ್‌ರನ್ನು ಆ ಹುದ್ದೆಗಳಿಗೆ ನೇಮಕ ಮಾಡಲಾಯಿತು. ಏಳು ಮಂದಿ ೨ನೇ ಲೆಫ್ಟಿನೆಂಟರನ್ನು ಲೆಫ್ಟಿನೆಂಟ್‌ಗಳ ಸ್ಥಾನಕ್ಕೆ ಬಡ್ತಿ ನೀಡಲಾಗಿದೆ.

ಈ) ಇಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೪ ನವೆಂಬರ್ ೧೯೪೩, ಪು. ೨೪೮–೪೯

ಉ) ಹುದ್ದೆಗಳು ತೆರವಾದಂತೆ ಆ ಹುದ್ದೆಗಳಿಗೆ ಪ್ರಚಲಿತವಿರುವ ನೀತಿ ನಿಯಮಗಳಿಗೆ ಅನುಗುಣವಾಗಿ ಬಡ್ತಿ ನೀಡಲು ಬರುತ್ತದೆ. ಕೇಂದ್ರ ಸರ್ಕಾರದ ಪರಮಾಧಿಕಾರದ ಅಧೀನದಲ್ಲಿ ಪ್ರಾಂತೀಯ ಸರ್ಕಾರಕ್ಕೆ ಬಡ್ತಿ ನೀಡುವ ಹಕ್ಕನ್ನು ನೀಡಲಾಗಿದೆ. ಅನ್ಯಾಯವಾಗುವ ಸಂದರ್ಭದಲ್ಲಿ ನ್ಯಾಯದೊರಕಿಸುವ ಜವಾಬ್ದಾರಿಯನ್ನು ಹೊರತುಪಡಿಸಿ ಉಳಿದಂತೆ ಬಡ್ತಿ ಮುಂತಾದ ವಿಷಯಗಳಲ್ಲಿ ಪ್ರಾಂತೀಯ ಸರ್ಕಾರ ಕೈಗೊಳ್ಳುವ ತೀರ್ಮಾನದ ಮಧ್ಯೆ ಪ್ರವೇಶಿಸುವುದು ಕೇಂದ್ರ ಸರ್ಕಾರಕ್ಕೆ ಅನಿವಾರ್ಯವೆನಿಸುವುದಿಲ್ಲ. ಎರಡು ಮಾನದಂಡಗಳಿಂದ ಬಡ್ತಿಯನ್ನು ಕ್ರಮಬದ್ಧಗೊಳಿಸಲಾಗದೆ (೧) ದಕ್ಷತೆ (೨) ಸೇವಾ ಹಿರಿತನ. ಒಂದು ಘಟಕದ ದಕ್ಷತೆಯು ಆ ಘಟಕದ ಅಧಿಕಾರಿಗಳ ದಕ್ಷತೆಯ ಮೇಲೆ ಅವಲಂಬಿತವಾಗುವುದರಿಂದ, ಬಡ್ತಿಗೆ ದಕ್ಷತೆಯೇ ಆಧಾರವಾಗಬೇಕು. ದಕ್ಷತೆ ಒಂದು ವೇಳೆ ಸಮಾನವಾಗಿದ್ದರೆ, ಸೇನೆಗೆ ಸೇರಿದಾಗಿನಿಂದ ಲಭ್ಯವಿರುವ ಸೇವಾ ಹಿರಿತನವನ್ನೇ ಬಡ್ತಿಗೆ ಮಾನದಂಡವಾಗಿ ಉಪಯೋಗಿಸಿಕೊಳ್ಳಲಾಗುವುದು.

## ೧೨೬
## 'ಸಿವಿಲ್ ಪಯೊನಿಯರ್ ಫೋರ್ಸ್‌ನಲ್ಲಿ ನಿಯೋಜಿತ ಅಧಿಕಾರಿಗಳು ಸಲ್ಲಿಸಿರುವ ಸೇವೆಯನ್ನು ಯುದ್ಧಕಾಲದ ಸೇವೆ ಎಂದು ಗಣನೆ ಮಾಡುವ ಬಗೆಗೆ*

**೩೦. ಶ್ರೀ ಪಿಯರ್ ಲಾಲ್ ಕುರೀಲ್ :**

ಅ) 'ಸಿವಿಲ್ ಪಯೊನಿಯರ್ ಫೋರ್ಸ್‌ನಲ್ಲಿ ನಿಯೋಜಿತ ಅಧಿಕಾರಿಗಳು ಸಲ್ಲಿಸಿರುವ ಸೇವೆಯನ್ನು ಯುದ್ಧಸೇವೆಯೆಂದು ಪರಿಗಣಿಸುವರೆ ; ಇಲ್ಲವಾದರೆ, ಯಾಕಿಲ್ಲ, ಹಾಗೂ

ಆ) ಅ) ಭಾಗಕ್ಕೆ ಉತ್ತರ ನಕಾರಾತ್ಮಕವಾದರೆ, ಸರ್ಕಾರ ತನ್ನ ತೀರ್ಮಾನವನ್ನು ಬದಲಾಯಿಸಿಕೊಳ್ಳಲು ಪ್ರಸ್ತಾವಿಸಿರುವುದೆ? ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಆ) ಇದು ಉದ್ಭವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೩ ನವೆಂಬರ್ ೧೯೪೩, ಪು. ೨೪೯

# ೧೨೭
# ಸಮರೋತ್ತರ ಸಾಮಾಜಿಕ ಭದ್ರತೆಯ ಕುರಿತು ಬೆವರಿಡ್ಜ್ ವರದಿ **

**೨೨೯. ಖಾನ್ ಬಹದೂರ್ ಮಿಯಾನ್ ಗುಲಾಮ್ ಕದೀರ್ ಮುಹಮ್ಮದ್ ಶಹ್‌ಬಾನ್ :**

ಅ) ಸಮರೋತ್ತರ ಸಾಮಾಜಿಕ ಭದ್ರತೆಗಾಗಿ ಸರ್ಕಾರ ಬೆವರಿಡ್ಜ್ ವರದಿಯನ್ನು ಪರಿಗಣಿಸಿರುವುದೇ?

ಆ) ಶತ್ರುತ್ವ ಕೊನೆಯಾದ ನಂತರ ಭಾರತದ ಸಂದರ್ಭದಲ್ಲಿ ಯಾವುದಾದರೂ ಸಾಮಾಜಿಕ ಭದ್ರತಾ ಯೋಜನೆಯನ್ನು ಗಮನದಲ್ಲಿರಿಸಿಕೊಂಡಿರುವರೆ?

ಇ) ಇದುವರೆಗೆ ಈ ವಿಷಯ ಅವರ ಆಲೋಚನೆಯಲ್ಲಿರದಿದ್ದ ಪಕ್ಷದಲ್ಲಿ ಈಗಲಾದರೂ ಇತ್ತ ಗಮನಹರಿಸಿ 'ಬೆವರಿಡ್ಜ್ ಯೋಜನೆ'ಗೆ ಸರಿಸಮಾನವಾದ ಒಂದು ಯೋಜನೆಯನ್ನು ತಯಾರಿಸಲು ಮುಂದಾಗುವರೆ? ಹಾಗೂ

ಈ) ಒಂದು ವೇಳೆ ಸರಕಾರವು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆಯಾದರೆ, ಸಮರೋತ್ತರ ಪುನಾರಚನಾ ಸಮಿತಿ ಯಾವ ರೀತಿ ಕೆಲಸ ಮಾಡುತ್ತಿದೆ?

–ಎಂಬುದನ್ನು ದಯಮಾಡಿ ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಯುನೈಟೆಡ್ ಕಿಂಗ್‌ಡಮ್‌ನ ಸರ್ಕಾರಕ್ಕೆ ಸಲ್ಲಿಸಿರುವ ಬೆವರಿಡ್ಜ್ ವರದಿಯನ್ನು ಪರಿಗಣಿಸಬೇಕೆಂಬ ಉದ್ದೇಶ ಭಾರತ ಸರ್ಕಾರಕ್ಕೆ ಇಲ್ಲ. ಆದಾಗ್ಯೂ, ಭಾರತ ಸರ್ಕಾರವು ಸದರಿ ವರದಿಯನ್ನು ಗಮನಿಸಿದೆ.

ಆ) ಮತ್ತು ಇ) 'ಟ್ರೈ ಪಾರ್ಟೈಟ್ ಲೇಬರ್ ಕಾನ್‌ಫರೆನ್ಸ್' ಅಥವಾ ತ್ರಿಪಕ್ಷೀಯ ಕಾರ್ಮಿಕ ಸಮಾವೇಶ ೧೯೪೩ರ ಸೆಪ್ಟೆಂಬರ್ ತಿಂಗಳಿನಲ್ಲಿ ತಿರುಗಿತು. ಆ ಸಭೆಯಲ್ಲಿ ಈ ವಿಷಯ ಕುರಿತು ಒಂದು ಗೊತ್ತುವಳಿಯನ್ನು ಜಾರಿಗೊಸಲಾಗಿದೆ; ಮಾನ್ಯ ಸದಸ್ಯರ ಗಮನವನ್ನು ಆ ಗೊತ್ತುವಳಿಯತ್ತ ಸೆಳೆಯುತ್ತೇನೆ. ಆ ಗೊತ್ತುವಳಿಯ ಪ್ರತಿಗಳನ್ನು ಸದನದಕ್ಕೆ ನೀಡಲಾಗಿದೆ. ಹಾಗೆಯೇ ಆ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತರಲು ಭಾರತ ಸರ್ಕಾರವು ತೀವ್ರವಾಗಿ ಆಲೋಚನೆ ನಡೆಸಿದೆ.

ಈ) ಗೌರವಾನ್ವಿತ ಪಂಡಿತ್ ಎಚ್.ಎನ್. ಕುಂಜ್ರು ಅವರ ೭೪ನೇ ಸಂಖ್ಯೆಯ ಪ್ರಶ್ನೆಗೆ ಉತ್ತರವಾಗಿ ಉತ್ತರವಾಗಿ ದಿನಾಂಕ ೧೯೪೩ರ ಆಗಸ್ಟ್ ೪ರಂದು ಗೌರವಾನ್ವಿತ ಸರ್ ಜ್ವಾಲಾ ಪ್ರಸಾದ್ ಶ್ರೀವಾಸ್ತವರವರು ಹೇಳಿದ ಮಾತುಗಳನ್ನು ಒಕ್ಕಣಿಕೆಯ ರೂಪದಲ್ಲಿ ಒದಗಿಸಲಾಗಿದೆ. ಅದರತ್ತ ಗೌರವಾನ್ವಿತ ಸದಸ್ಯರ ಗಮನವನ್ನು ಸೆಳೆಯುತ್ತೇನೆ.

೧೯೪೩ರ ಸೆಪ್ಟೆಂಬರ್ ೬ ಹಾಗೂ ೭ರಂದು ನವದೆಹಲಿಯಲ್ಲಿ ಜರುಗಿದ ತ್ರಿಪಕ್ಷೀಯ ಕಾರ್ಮಿಕ ಸಮಾವೇಶದಲ್ಲಿ, ಅನುಮೋದಿಸಿದ ಗೊತ್ತುವಳಿ ಈ ರೀತಿ ಇದೆ :

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ४, ೧೭ ನವೆಂಬರ್ ೧೯೪३, ಪು. ४೧೧೦–೧೧

ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತೆ ನೀಡುವ ನಿಮಿತ್ತ ಒಂದು ಯೋಜನೆಯನ್ನು ತಯಾರಿಸಲು ಕೇಂದ್ರ ಸರ್ಕಾರ ಬ್ರಿಟಿಷ್ ಭಾರತದ ಪ್ರಾಂತೀಯ ಸರ್ಕಾರಗಳು, ಭಾರತೀಯ ರಾಜ್ಯಗಳು ಹಾಗೂ ದೇಶೀಯ ಸಂಸ್ಥಾನಗಳೊಡನೆ ಸಮಾಲೋಚನೆ ನಡೆಸಿ ಈ ಕೂಡಲೇ ಒಂದು ವ್ಯವಸ್ಥೆಯನ್ನು ರಚಿಸಿ, ವೇತನ, ಗಳಿಕೆ, ಉದ್ಯೋಗ, ವಸತಿ ಹಾಗೂ ಸಾಮಾನ್ಯ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಲು ತ್ರಿಪಕ್ಷೀಯವಾದ ಕಾರ್ಮಿಕ ಸಮಾವೇಶ ಶಿಫಾರಸು ಮಾಡಿದೆ. ಈ ಮೇಲೆ ಕಾಣಿಸಿದ ಅಂಶಗಳಿಗೆ ಸಂಬಂಧಿಸಿದ ಅಂಕಿಅಂಶ ಹಾಗೂ ದತ್ತಾಂಶ ದೊರಕಿದ ಕೂಡಲೇ ಕೇಂದ್ರ ಸರ್ಕಾರವು ಒಂದು ಮಿಶ್ರ ಸಮಿತಿಯನ್ನು ರಚನೆ ಮಾಡಿ ಸಾಮಾಜಿಕ ಭದ್ರತೆಗಾಗಿ ಒಂದು ಯೋಜನೆಯನ್ನು ತಯಾರಿಸಲು ಮುಂದಾಗಬೇಕು.

## ೧೨೮
## ನವದೆಹಲಿಯ ಡಿ.ಐ.ಜಡ್. ಪ್ರದೇಶದಲ್ಲಿ ಗುಮಾಸ್ತರ ಸಾಂಪ್ರದಾಯಿಕ ಮಾದರಿ ವಸತಿಮನೆಗಳ ಮುಂದೆ ಹಸಿರು ಹುಲ್ಲಿನ ಹಾಸನ್ನು ಕಡೆಗಣಿಸಿರುವ ಬಗೆಗೆ*

***೨೩.೨ ಸರ್‌ದಾರ್ ಸಂತ್ ಸಿಂಗ್ :*** ಅ) ನವದೆಹಲಿ, ಡಿ.ಐ.ಜಡ್. ಪ್ರದೇಶದಲ್ಲಿನ ಸಾಂಪ್ರದಾಯಿಕ ಮಾದರಿ ಗುಮಾಸ್ತರ ವಸತಿಮನೆಗಳ ಮುಂದಿನ ಹಸಿರು ಹುಲ್ಲಿನ ಹಾಸನ್ನು ಕಡೆಗಣಿಸಿರುವರೆ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಾಮಾಡಿ ತಿಳಿಸುವರೆ?

ಆ) ನೆಲವೆಲ್ಲ ಮುಕ್ಕಾಲುಪಾಲು ಒಣಗಿದ ಹುಲ್ಲಿನಿಂದ ಮುಚ್ಚಿಹೋಗಿರುವುದು ನಿಜವೆ?

ಇ) ಈ ಹುಲ್ಲುಹಾಸಿನ ಅಂಚಿನಲ್ಲಿ ಹರಿದಿರುವ ರಸ್ತೆ ಅಂಕುಡೊಂಕಾಗಿದ್ದು ರಸ್ತೆಯ ಅನೇಕ ಕಡೆ ಹುಲ್ಲು ಚಾಚಿರುವುದು ಇನ್ನು ಕೆಲವು ಕಡೆ ಹುಲ್ಲೇ ಮಾಯವಾಗಿ ಬೇರೆ ರೀತಿಯ ಕಳೆಯಿಂದ ಆವೃತವಾಗಿ ಬರೀ ನೆಲ ಕಾಣಿಸುತ್ತಿರುವುದು ನಿಜವೇ?

ಈ) ಈ ಹಸಿರುಹಾಸುಗಳನ್ನು ಕ್ರಮವಾಗಿ ನೋಡಿಕೊಳ್ಳಲು ಮಾಲಿಗಳನ್ನು ತೋಟಗಾರಿಕೆ ಇಲಾಖೆ ನೇಮಕ ಮಾಡಿಕೊಳ್ಳುತ್ತಿರುವುದು ನಿಜವೇ?

ಉ) ತಿಂಗಳಿಗೆ ಒಮ್ಮೆಯೋ ಎರಡು ಬಾರಿಯೋ ಸ್ವಲ್ಪ ನೀರು ಹಾಕಿ ನಂತರ ಇಡೀ ತಿಂಗಳು ಈ ಮಾಲಿಗಳು ಹಾಸನ್ನು ಪಾಳುಗೆಡುವಿರುವುದು ನಿಜವೇ?

ಊ) ಈ ಲಾನುಗಳನ್ನು ಕ್ರಮವಾಗಿ ನೋಡಿಕೊಳ್ಳುವಂತೆ ಆದೇಶ ನೀಡಲು ಸರ್ಕಾರ ಮನಸ್ಸು ಮಾಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಹೌದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪ ನವೆಂಬರ್, ಪು. ೪೧೨

ಉ) ಮಾಲಿಗಳು ಈ ಹಸಿರುಹಾಸುಗಳಿಗೆ ನೀರನ್ನು ಹಾಕಿ ಸುಮ್ಮನಾಗುವುದಿಲ್ಲ, ಜೊತೆಗೆ ಅವುಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆ.

ಊ) ಈ ಪ್ರಶ್ನೆ ಉದ್ಭವವಾಗುವುದಿಲ್ಲ, ಆದರೆ ಯಾವುದೇ ಸಮರ್ಪಕವಾದ ಅಹವಾಲು ಬಂದರೆ ಅದನ್ನು ಸರ್ಕಾರ ಪರಿಗಣಿಸುತ್ತದೆ.

**ಸರ್‌ದಾರ್ ಸಂತ್ ಸಿಂಗ್ :** ಕೇವಲ ಇಲಾಖೆಯು ಸಿದ್ಧಪಡಿಸಿದ ಟಿಪ್ಪಣಿಯ ಸಹಾಯದಿಂದ ಉತ್ತರ ಕೊಟ್ಟಿರುವರೋ ಅಥವಾ ಮಾನ್ಯ ಸದಸ್ಯರು ತಾವೇ ಸ್ವತಃ ಹಸಿರು ಹಾಸಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ವಸತಿಮನೆಗಳ ಮುಂದಿನ ಈ ಲಾನುಗಳ ಬಗ್ಗೆ ಮಾಡಿರುವ ಆಪಾದನೆಗಳು ಸರಿಯಾಗಿವೆಯೇ ಇಲ್ಲವೇ ಎಂದು ತಿಳಿಯುವ ಗೋಜಿಗೆ ಹೋಗಿರುವರೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಲಭ್ಯವಾಗಿರುವ ಮಾಹಿತಿಯು ಸರಿಯಾದುದಲ್ಲವೆಂದು ತಿಳಿಯಲು ನನ್ನ ಬಳಿ ಕಾರಣಗಳಿಲ್ಲ.

## ೧೨೯
## ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ*

**೨೩೬. ನವಾಬ್ ಸಿದ್ದಿಕ್ ಆಲಿಖಾನ್ :** (ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ ಅವರ ಪರವಾಗಿ) : ಅ) ೧೫ನೇ ಅಕ್ಟೋಬರ್, ೧೯೪೩ರವರೆಗೆ ೧೯೪೧, ೧೯೪೨ನೇ ವರ್ಷಗಳಲ್ಲಿ ಪ್ರತಿವರ್ಷ ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯು (೧೯೩೬ರ ४ನೇ ಕಾಯಿದೆ ४) ಎಷ್ಟು ಸಂದರ್ಭಗಳಲ್ಲಿ ಉಲ್ಲಂಘನೆಯಾಗಿದೆ ;

ಆ) ೧೯೩೭ರಲ್ಲಿ ಕಾಯಿದೆಯನ್ನು ಜಾರಿಗೊಳಿಸಿದಾಗಿನಿಂದ ಈಸ್ಟ್ ಇಂಡಿಯಾ ರೈಲ್ವೆ ಅಧಿಕಾರಿಗಳು ಎಸಗಿದ ಅಕ್ರಮಗಳ ಬಗ್ಗೆ ಗಮನ ಸೆಳೆಯುವ ದಿಶೆಯಲ್ಲಿ ಅಧಿನಿಯಮ ೧೫ (೧)ರ ಅಡಿಯಲ್ಲಿ ನೇಮಕರಾಗಿರುವ ವೇತನ ವಿತರಣಾ ಕಾಯಿದೆಯ ಅಧಿಕಾರಿಗಳಿಗೆ ಪರಿವೀಕ್ಷಕರು ಎಷ್ಟು ಬಾರಿ ಅರ್ಜಿ ಸಲ್ಲಿಸಿರುವರು?

ಇ) ಈಸ್ಟ್ ಇಂಡಿಯಾ ರೈಲ್ವೆ ಅಧಿಕಾರಿಗಳ ವಿರುದ್ಧ ಅಧಿನಿಯಮ ೨೦ರ ಅಡಿಯಲ್ಲಿ ಎಷ್ಟು ಮಂದಿಗೆ ದಂಡ ವಿಧಿಲಾಗಿದೆ.

ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೩೩೪ ಈಸ್ಟ್ ಇಂಡಿಯಾ ಕಂಪನಿಯ ರೈಲ್ವೆ ಅಧಿಕಾರಿಗಳ ವಿರುದ್ಧ ೧೯೪೧–೪೨ರಲ್ಲಿ ಕ್ರಮ ಜರುಗಿಸಲಾಗಿದೆ. ಹಾಗೆಯೇ ೧೯೪೨–೪೩ರಲ್ಲಿ ೧೨೩ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ – ೧೯೪೩ರ ಏಪ್ರಿಲ್ ೧ ರಿಂದ ಅಕ್ಟೋಬರ್ ಅವಧಿಯಲ್ಲಿ.

---

* ಲೆಜಿಸ್ಲೇಟಿವ್ ಅಸೆಂಬಿ ಡಿಬೇಟ್ಸ್ (ಕೇಂದ್ರ) ಸಂ. ४, ೧೭ ನವೆಂಬರ್ ೧೯೪೩, ಪು. ४೧४

ಆ) ಇಲ್ಲ.

ಇ) ಇಲ್ಲ.

## ೧೩೦
## ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ*

**೨೩೭. ನವಾಬ್ ಸಿದ್ದಿಕ್ ಆಲಿಖಾನ್ (ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ ಅವರ ಪರವಾಗಿ):** ಅ) ವೇತನ ವಿತರಣಾ ಕಾಯಿದೆಯನ್ವಯ ತಪ್ಪಿತಸ್ಥರ ವಿರುದ್ಧ ಯಾವುದೇ ಕಾನೂನು ಕ್ರಮಕೈಗೊಳ್ಳುವ ಮೊದಲು ರೈಲ್ವೆ ಕಾರ್ಮಿಕ ಪರಿವೀಕ್ಷಕರು ರೈಲ್ವೆ ಕಾರ್ಮಿಕ ಸೂಪರ್‌ವೈಸರ್‌ರ ಪೂರ್ವಾನುಮತಿಯನ್ನು ಪಡೆಯಬೇಕಾಗಿರುವುದು ನಿಜವೇ?

ಆ) ಮೇಲಿನ ಅ) ಭಾಗಕ್ಕೆ ಉತ್ತರ ಸಕಾರಾತ್ಮಕವಾದರೆ, ೧೯೨೭ರಿಂದೀಚೆಗೆ ವರ್ಷೇ ವರ್ಷೇ ವೇತನ ವಿತರಣಾ ಕಾಯಿದೆಯ ಉಲ್ಲಂಘನೆಯ ಎಷ್ಟು ಕೇಸುಗಳ ವಿಷಯಲ್ಲಿ ಪೂರ್ವಾನುಮತಿ ಕೇಳಲಾಯಿತು ಹಾಗೂ ಪೂರ್ವಾನುಮತಿ ದೊರೆತಿದ್ದು ಎಷ್ಟು ಕೇಸುಗಳಲ್ಲಿ? ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೩೬ರ ವೇತನ ವಿತರಣಾ ಕಾಯಿದೆಯ ಅಧಿನಿಯಮ ೧೪ರ ಅಡಿಯಲ್ಲಿ ರೈಲ್ವೆ ಕಾರ್ಮಿಕ ವಿಭಾಗದ ಸೂಪರ್‌ವೈಸರ್ ಹಾಗೂ ಅವರ ಡೆಪ್ಯುಟಿಯವರು ಪರಿವೀಕ್ಷಕರಾಗಿ ನೇಮಕರಾಗಿರುತ್ತಾರೆ; ಈ ಕಾಯಿದೆಯನ್ವಯ ಈ ಇಬ್ಬರು ಅಧಿಕಾರಿಗಳು ಮಾತ್ರ ಕಾನೂನು ಕ್ರಮಕೈಗೊಳ್ಳಲು ಅಧಿಕಾರ ಹೊಂದಿರುವ ಕಾರಣ ಅವರ ಪೂರ್ವಾನುಮತಿ ಪಡೆಯುವ ಪ್ರಶ್ನೆ ಉದ್ಭವವಾಗುವುದೇ ಇಲ್ಲ.

ಆ) ಅ) ಭಾಗಕ್ಕೆ ನೀಡಿದ ಉತ್ತರದ ಆಧಾರದ ಮೇಲೆ ಹೇಳುವುದಾದರೆ ಇದು ಉದ್ಭವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೧೪–೪೧೪

## ೧೩೧
## ಈಸ್ಟ್ ಇಂಡಿಯಾ ರೈಲ್ವೆಯ ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನ*

**೨೩೮. ನವಾಬ್ ಸಿದ್ದಿಕ್ ಅಲಿಖಾನ್** (ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ ಅವರ ಪರವಾಗಿ): ಅ) ವೇತನ ವಿತರಣಾ ಕಾಯಿದೆಯ ಕಾರ್ಯವಿಧಾನವು ಸಮರ್ಪಕವಾಗಿ ಇರುವುದೇ ಎಂದು ಮೇಲ್ವಿಚಾರಣೆ ನಡೆಸದ ಕಾರಣದಿಂದ ಈಸ್ಟ್ ಇಂಡಿಯಾ ಕಂಪನಿಯ ಮೇಲಿನ ವೇತನ ವಿತರಣಾ ಕಾಯಿದೆಯ ವಿಷಯದಲ್ಲಿ ಇಷ್ಟು ಪ್ರಮಾಣದ ಉಲ್ಲಂಘನೆಯಾಗುತ್ತಿರುವುದು ನಿಜಸಂಗತಿಯೇ ಇಲ್ಲವೇ ಎಂದು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ರೈಲ್ವೆ ಅಧಿಕಾರಿಗಳಿಂದ ವೇತನ ವಿತರಣಾ ಕಾಯಿದೆಯಲ್ಲಾಗುತ್ತಿರುವ ಈ ಬಗೆಯ ಉಲ್ಲಂಘನೆಗಳನ್ನು ಪರಿಣಾಮಕಾರಿಯಾಗಿ ತಡೆಯಲು ಈಗ ಪ್ರಚಲಿತವಿರುವ ನಿಯಮಗಳಲ್ಲಿ ಬದಲಾವಣೆ ಮಾಡಬೇಕಾಗಿರುವುದು ಅಗತ್ಯವೆಂದು ಸರ್ಕಾರಕ್ಕೆ ಮನವರಿಕೆಯಾಗಿಲ್ಲವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಗೌರವಾನ್ವಿತ ಸದಸ್ಯರು ಸೂಚಿಸುತ್ತಿರುವುದು ನಿಜ ಸಂಗತಿಯಲ್ಲ. ಪ್ರತಿವರ್ಷ ಈ ದೊಡ್ಡ ಪ್ರಮಾಣದ ಅಕ್ರಮಗಳನ್ನು ಬೆಳಕಿಗೆ ತಂದು ರೈಲ್ವೆ ಕಾರ್ಮಿಕ ಸೂಪರ್‌ವೈಸರ್‌ರವರ ಆಜ್ಞೆಯ ಮೇರೆಗೆ ಸರಿಪಡಿಸುತ್ತಿರುವುದನ್ನು ಗಮನಿಸಿದರೆ ಸ್ಪಷ್ಟವಾಗುವುದೆಂದರೆ ಈಗ ಇರುವ ನಿಯಮಗಳೇ ಸದ್ಯದ ಉದ್ದೇಶಗಳಿಗೆ ಸಾಕಾಗುತ್ತದೆ.

ಆ) ಇದು ಉದ್ಭವವಾಗುವುದಿಲ್ಲ.

## ೧೩೨
## ಕಾರ್ಮಿಕರಿಗೆ ಯುದ್ಧ ಬೋನಸ್ಸನ್ನು ನೀಡುವ ಬಗೆಗೆ ಶ್ರೀ ವಿ.ಜಿ. ಬಲ್ವೇಕ್ ಅವರ ಮನವಿ**

**೨೩೯. ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಗೌರವಾನ್ವಿತ ಮುಂದಿನ ವಿಷಯಗಳ ಬಗ್ಗೆ ಸದಸ್ಯರು ತಿಳಿಸುವರೆ :

ಅ) ೧೯೪೩ರ ಅಕ್ಟೋಬರ್ ಮಾಹೆಯಲ್ಲಿ ಕೇಂದ್ರೀಯ ಪ್ರಾಂತ್ಯಗಳು ಹಾಗೂ ಬೇರಾರ್ ಪ್ರಾಂತೀಯ ಕಾರ್ಮಿಕ ಒಕ್ಕೂಟ, ನಾಗ್‌ಪುರ, ಇದಕ್ಕೆ ಅಧ್ಯಕ್ಷರಾದ ಶ್ರೀ ವಿ.ಜಿ. ಬಲ್ವೇಕ್‌ರವರಿಂದ ಯುದ್ಧ ಬೋನಸ್ಸನ್ನು ಕಾರ್ಮಿಕರಿಗೆ ಕೊಡಿಸುವ ಸಂಬಂಧ ಒಂದು ಮನವಿಯನ್ನು ತಾವು ಸ್ವೀಕರಿಸಿರುವಿರಾ;

ಆ) 'ಎಂಪ್ರೆಸ್ ಅಂಡ್ ಮಾಡೆಲ್ ಮಿಲ್ಸ್'ನವರು ಹೆಚ್ಚುವರಿ ಯುದ್ಧ ಬೋನಸ್‌ಗೆ ಹೊಂದಿಸಿರುವ ಷರತ್ತಿನ ಬಗ್ಗೆ ಸರ್ಕಾರ ಏನಾದರೊಂದು ತೀರ್ಮಾನಕ್ಕೆ ಬಂದಿದೆಯೇ? ಭಾರತ ಸರ್ಕಾರ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೧೪–೪೧೫

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೧೫

ಎರಡು ತಿಂಗಳ ವೇತನವನ್ನು ಯುದ್ಧಬೋನಸ್ಸಾಗಿ ಪರಿವರ್ತಿಸಬಹುದಾಗಿರುವ ಕಾರಣ ಆ ಖರ್ಚಿಗೆ ಕಾರ್ಖಾನೆಯು ತೆರಿಗೆ ನೀಡಬೇಕಾಗಿರುವುದಿಲ್ಲ ; ಈ ವಿಷಯದಲ್ಲಿ ಭಾರತ ಸರ್ಕಾರದ ತೀರ್ಮಾನವೇನು?; ಹಾಗೆಯೇ

ಇ) ಈ ಹೆಚ್ಚುವರಿ ಬೋನಸ್‌ನ ಎರಡನೇ ಕಂತನ್ನು ೧೯೪೩ರ ನವೆಂಬರ್ ೧೪ರ ಒಳಗಾಗಿ ಪ್ರಾಂತ್ಯದಲ್ಲಿ ಕಾರ್ಖಾನೆ ಮಾಲೀಕರು ನೀಡದ ಪಕ್ಷದಲ್ಲಿ ಕೇಂದ್ರ ಪ್ರಾಂತ್ಯಗಳು ಹಾಗೂ ಬೇರಾರ್ ಜವಳಿ ಕಾರ್ಮಿಕರ ಒಕ್ಕೂಟದ ಕ್ರಿಯಾ ಸಮಿತಿಯು ೧೫ನೇ ೧೯೪೩ರ ನವೆಂಬರ್ ೧೫ರಿಂದ ಮುಷ್ಕರ ಹೂಡುವುದಾಗಿ ಘೋಷಿಸಿರುವ ಸುದ್ದಿ ಮಾನ್ಯ ಸದಸ್ಯರಿಗೆ ತಿಳಿದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಇಲ್ಲ, ರೆವಿನ್ಯೂ ಖರ್ಚಿಂದು ಎಷ್ಟು ಪ್ರಮಾಣದ ಹಣವನ್ನು ಪರಿಗಣಿಸಬಹುದೆಂಬ ಪ್ರಶ್ನೆಯನ್ನು ಚರ್ಚಿಸಲಾಗುತ್ತಿದೆ; ಈ ವಿಷಯವಾಗಿ ಈ ಘಟ್ಟದಲ್ಲಿ ಹೆಚ್ಚಿನ ಮಾಹಿತಿಯನ್ನು ನೀಡುವುದು ಸೂಕ್ತವೆನಿಸಲಾರದು.

ಇ) ಹೌದು.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಆದಷ್ಟು ಬೇಗ ಈ ವಿಷಯವಾಗಿ ತೀರ್ಮಾನ ತೆಗೆದುಕೊಂಡು ವಿವರಗಳನ್ನು ನೀಡಲು ಏಕೆ ಸಾಧ್ಯವಾಗುವುದಿಲ್ಲವೆಂದು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆದಷ್ಟು ಶೀಘ್ರವಾಗಿ ಒಂದು ತೀರ್ಮಾನಕ್ಕೆ ಬರಲು ನಾವು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಎಷ್ಟು ಸಮಯ ಹಿಡಿಯಬಹುದು? ನನ್ನ ಮನವಿಯ ಮೇರೆಗೆ ಮುಷ್ಕರವನ್ನು ಹಿಂತೆಗೆದುಕೊಂಡಿದ್ದಾರೆ. ಭಾರತ ಸರ್ಕಾರ ಆದಷ್ಟು ಜಾಗ್ರತೆ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ತವಕದಲ್ಲಿರುವುದರಿಂದ ಮುಷ್ಕರವನ್ನು ಮುಂದಕ್ಕೆ ಹಾಕಬೇಕೆಂದು ನಾನು ಸೂಚಿಸಿದ್ದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೆಚ್ಚಿನ ವಿವರವನ್ನು ನಾನು ಸದ್ಯಕ್ಕೆ ಕೊಡಲಾರೆ.

**ಶ್ರೀ ಎನ್. ಎಮ್. ಜೋಷಿ :** ಈ ಪ್ರಶ್ನೆಯನ್ನು ಶೀಘ್ರವಾಗಿ ಇತ್ಯರ್ಥ ಮಾಡದಿರುವುದರಿಂದ ಕೇಂದ್ರ ಪ್ರಾಂತ್ಯಗಳ ಜವಳಿ ಕಾರ್ಮಿಕರು ಭಾರತ ಸರ್ಕಾರದ ವಿಳಂಬ ನೀತಿಯ ಬಗ್ಗೆ ಬಹಳ ಬೇಸರಗೊಂಡಿರುವ ಸಂಗತಿ ಭಾರತ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯದ ಬಗ್ಗೆ ನನಗೆ ಮಾಹಿತಿ ದೊರಕಿಲ್ಲ.

# ೧೩೩
# ಧನ್‌ಬಾದ್ ಗಣಿಗಳ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿದ ಬಗೆಗೆ*

**೨೪೨. ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿ :**

ಅ) ೧೯೪೧, ೧೯೪೨ ಹಾಗೂ ೧೯೪೩ನೇ ಇಸವಿಗಳಲ್ಲಿ ಧನ್‌ಬಾದ್ ಗಣಿಗಳ ಶಾಲೆಗೆ ಸೇರಿದ ವಿದ್ಯಾರ್ಥಿಗಳ ಸಂಖ್ಯೆ, ಮತ್ತು ಅವರಲ್ಲಿ ಮುಸ್ಲಿಮರ ಸಂಖ್ಯೆಯೆಷ್ಟು?

ಆ) ಮುಸ್ಲಿಮರ ಪ್ರವೇಶಕ್ಕೆ ಏನಾದರೂ ಮೀಸಲಾತಿಯನ್ನು ನಿರ್ದೇಶಿಸಿರುವರೆ? ಅಲ್ಲದೆ

ಇ) ಕಳೆದ ಮೂರು ವರ್ಷಗಳಲ್ಲಿ ಪ್ರವೇಶಾವಕಾಶ ಬೇಡಿ ಅರ್ಜಿ ಸಲ್ಲಿಸಿದ ಒಟ್ಟು ಮುಸ್ಲಿಂ ವಿದ್ಯಾರ್ಥಿಗಳ ಸಂಖ್ಯೆಯೆಷ್ಟು ?

–ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೪೧, ೧೯೪೨ ಹಾಗೂ ೧೯೪೩ – ಈ ಮೂರು ವರ್ಷಗಳಲ್ಲಿ ತಲಾ ೨೪ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ೧೯೪೧ ಹಾಗೂ ೧೯೪೨ರಲ್ಲಿ ಯಾವ ಮುಸ್ಲಿಂ ವಿದ್ಯಾರ್ಥಿಗೂ ಪ್ರವೇಶ ದೊರೆಯಲಿಲ್ಲ. ೧೯೪೩ರಲ್ಲಿ ಇಬ್ಬರಿಗೆ ಪ್ರವೇಶ ದೊರೆಯಿತಾದರೂ ಒಬ್ಬರು ಮಾತ್ರ ಸೇರಿಕೊಂಡರು.

ಆ) ಇಲ್ಲ ; ಮತ್ತು

ಇ) ೩೪.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಮುಸ್ಲಿಂ ವಿದ್ಯಾರ್ಥಿಗಳು ಸೇರಿಕೊಳ್ಳದುದಕ್ಕೆ ಏನು ಕಾರಣ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರವೇಶ ಪರೀಕ್ಷೆಯಲ್ಲಿ ಅವರು ತೇರ್ಗಡೆಯಾಗದುದೇ ಅವರು ಪ್ರವೇಶವಾಗದಿದ್ದುದಕ್ಕೆ ಕಾರಣ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಶೈಕ್ಷಣಿಕ ವಿದ್ಯಾರ್ಹತೆಯ ವಿಷಯದಲ್ಲಿ ಹೇಳುವುದಾದರೆ ಸಂಸ್ಥೆಯನ್ನು ಸೇರಬಹುದಾದಂಥ ಎಷ್ಟೋ ಮುಸ್ಲಿಂ ವಿದ್ಯಾರ್ಥಿಗಳು ಇದ್ದಾರೆಯೆಂದು ನಾನು ಸಾಧಿಸಿ ತೋರಿಸಬಲ್ಲೆ. ಮುಸ್ಲಿಮರಿಗೆ ವಿದ್ಯಾರ್ಥಿವೇತನ ನೀಡದಿರುವುದು ನಿಜಸಂಗತಿಯಲ್ಲವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹೇಳಲಾರೆ ; ನನಗೆ ಸ್ವಲ್ಪ ಸಮಯಬೇಕು.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ಕಳೆದ ವರ್ಷ ಅರ್ಹ ಮುಸ್ಲಿಂ ಅಭ್ಯರ್ಥಿಗಳು ಅರ್ಜಿ ಹಾಕಿದ್ದರಾದರೂ ಅವರನ್ನು ತಿರಸ್ಕರಿಸಲಾಯಿತೆಂಬುದು ನಿಜವೇ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ. ಈ ಸಂಸ್ಥೆಗೆ ಇರುವ ಪ್ರವೇಶ ವಿಧಾನವನ್ನು ನಾನು ಗೌರವಾನ್ವಿತ ಸದಸ್ಯರಿಗೆ ತಿಳಿಸಬಯಸುತ್ತೇನೆ. ಎಲ್ಲಾ ವಿದ್ಯಾರ್ಥಿಗಳಿಗೆ ಮುಕ್ತವಾಗಿ ನಡೆಸುವ ಪ್ರವೇಶ ಪರೀಕ್ಷೆಯ ಮೂಲಕ ಶೇಕಡಾ ೫೦ ಪ್ರಮಾಣದ ವಿದ್ಯಾರ್ಥಿಗಳನ್ನು ಭರ್ತಿ ಮಾಡಲಾಗುತ್ತದೆ. ಈಗಾಗಲೇ ನಿಗದಿಯಾಗಿರುವ ಮೀಸಲಾತಿಯ ಪ್ರಕಾರ ಪ್ರತಿಯೊಂದು ಪ್ರಾಂತ್ಯದ ಪ್ರಾತಿನಿಧ್ಯವನ್ನು ಕಾಪಾಡುವಂತೆ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೧೬

ಸ್ವಲ್ಪ ಸ್ಥಳಗಳನ್ನು ಮೀಸಲಾತಿಯ ಮೂಲಕ ಭರ್ತಿ ಮಾಡಲಾಗುತ್ತದೆ. ಇದಾದ ನಂತರ ಉಳಿದ ವಿದ್ಯಾರ್ಥಿಗಳನ್ನು ಶುದ್ಧಾಂಗವಾಗಿ ಪ್ರತಿಭೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಯಾವುದೇ ಕೋಮಿನವರಿಗೆ ಈ ಸಂಸ್ಥೆಯಲ್ಲಿ ಮೀಸಲಾತಿಯನ್ನು ನೀಡುವ ರೂಢಿ ಇರುವುದಿಲ್ಲ.

## ೧೩೪
## ಕಲ್ಲಿದ್ದಲಿನ ಉತ್ಪಾದನೆಯಲ್ಲಿನ ಇಳಿತ *

**೨೫೦. ಕೆ.ಸಿ. ನಿಯೋಗಿ :** ಅ) ಶಾಸನಸಭೆಯಲ್ಲಿ ೨೦ನೇ ಮಾರ್ಚ ೧೯೪೩ರಂದು ನಾನು ಕೇಳಿದ ೩೪೯ನೇ ಸಂಖ್ಯೆಯ ಪ್ರಶ್ನೆಗೆ ತಾವು ನೀಡಿದ ಉತ್ತರವನ್ನು ಗೌರವಾನ್ವಿತ ಕಾರ್ಮಿಕ ಖಾತೆ ಸದಸ್ಯರು ಮತ್ತೊಮ್ಮೆ ಪರಿಗಣಿಸುವರೆ? ಕಲ್ಲಿದ್ದಲಿನ ಉತ್ಪಾದನೆಯಲ್ಲಾಗಿರುವ ಇಳಿತ ತೀರಾ ಅಲ್ಪ ಪ್ರಮಾಣದಲ್ಲಾದ್ದರಿಂದ ಆ ಕುರಿತು ವಿವರವಾದ ವಿಚಾರಣೆ ನಡೆಸಬೇಕಾದ ಅಗತ್ಯವಿಲ್ಲವೆಂದು ತಮ್ಮ ಉತ್ತರದಲ್ಲಿ ಅವರು ತಿಳಿಸಿದ್ದರು. ಈಗ ಮತ್ತೊಮ್ಮೆ ಆ ಪ್ರಶ್ನೆಯನ್ನು ಪರಿಗಣಿಸಿ ಬ್ರಿಟಿಷ್ ಭಾರತದಲ್ಲಿ ಹಾಗೂ ಭಾರತೀಯ ರಾಜ್ಯಗಳಲ್ಲಿ ಕಲ್ಲಿದ್ದಲಿನ ಉತ್ಪಾದನಾ ಪ್ರಮಾಣದಲ್ಲಿ ಗಣನೀಯವಾಗಿ ಇಳಿತವುಂಟಾಗಿದೆಯೆಂದು ತಿಳಿಸುವರೆ?

ಆ) ಅ) ಭಾಗಕ್ಕೆ ಉತ್ತರ ಹೌದೆನ್ನುವುದಾದರೆ, ಈ ಇಳಿತವು ಗಮನಕ್ಕೆ ಬಂದಾಗಿನಿಂದ ಪ್ರತಿ ತಿಂಗಳೂ ಯಾವ ಪ್ರಮಾಣದಲ್ಲಿ ಹಾಗಾಗಿದೆಯೆಂದು ಮಾನ್ಯ ಸದಸ್ಯರು ತಿಳಿಸುವರೆ?

ಇ) ಕಲ್ಲಿದ್ದಲಿನ ಕೊರತೆಯ ಬಗ್ಗೆ ಯಾವುದಾದರೂ ಕಾರ್ಮಿಕ ಸಂಘಟನೆ ಅಥವಾ ಯಾರಾದರೂ ಕಾರ್ಮಿಕ ಸದಸ್ಯ ವೈಯಕ್ತಿಕವಾಗಿ ಸರ್ಕಾರದ ಗಮನಸೆಳೆದದ್ದುಂಟೆ? ಹಾಗಿದ್ದಲ್ಲಿ ಮೊಟ್ಟ ಮೊದಲ ಬಾರಿಗೆ ಯಾವಾಗ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು ಹಾಗೂ ಸರ್ಕಾರ ಏನಾದರೂ ಆ ದಿಶೆಯಲ್ಲಿ ಕ್ರಮಕೈಗೊಂಡಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕಳೆದ ವರ್ಷ ಇದೇ ತಿಂಗಳಿಗೆ ಹೋಲಿಸಿದರೆ ೧೯೪೩ರ ಕಲ್ಲಿದ್ದಲು ಉತ್ಪಾದನೆಯಲ್ಲಿ ಬ್ರಿಟಿಷ್ ಭಾರತ ಹಾಗೂ ಭಾರತೀಯ ರಾಜ್ಯಗಳಲ್ಲಿ ಇಳಿತವುಂಟಾಗಿದೆ. ವರ್ಷದ ಮೊದಲ ಐದು ತಿಂಗಳುಗಳಲ್ಲಿ ಇಳಿತದ ಪ್ರಮಾಣ ಕಡಿಮೆಯಿದ್ದಿತು; ಜೂನ್ ತಿಂಗಳಿನಿಂದ ಇಳಿತದ ಪ್ರಮಾಣ ಗಣನೀಯವಾಗುತ್ತಿದೆ.

ಆ) ಕಲ್ಲಿದ್ದಲು ಉತ್ಪಾದನೆಯ ವಿಷಯದಲ್ಲಿ ೧೯೪೦ ಅತಿ ಹೆಚ್ಚಿನ ಉತ್ಪಾದನಾ ವರ್ಷ. ಅಲ್ಲಿಂದೀಚೆಗೆ ಪ್ರತಿವರ್ಷ ಉತ್ಪಾದನೆಯಲ್ಲಿ ಇಳಿಮುಖವಾಗುತ್ತಿದೆ. ಜೂನ್ ೧೯೪೩ರಿಂದ ಈ ಇಳಿತ ಗಂಭೀರ ಪರಿಸ್ಥಿತಿಯ ಕಡೆ ತಿರುಗುತ್ತಿದೆ. ೧೯೪೨ರ ತತ್ಸಮಾನವಾದ ತಿಂಗಳುಗಳಿಗೆ ಹೋಲಿಸಿದರೆ, ಈ ವರ್ಷದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಪ್ರತೀ ತಿಂಗಳು ಸುಮಾರು ೪,೫೩,೦೦೦ ಟನ್ನುಗಳಷ್ಟು ಇಳಿತವಾಗಿದ್ದರೆ, ಸೆಪ್ಟೆಂಬರ್ ತಿಂಗಳಿನಲ್ಲಿ ೨೯೯,೦೦೦ ಟನ್ನುಗಳಷ್ಟು ಇಳಿತವಾಯಿತು.

ಇ) ೧೯೪೩ ಆಗಸ್ಟ್‌ನಲ್ಲಿ ಕಾರ್ಮಿಕ ಸದಸ್ಯರೊಬ್ಬರು ಎಚ್ಚರಿಕೆ ಕೊಟ್ಟರು. ಆ ವೇಳೆಗಾಗಲೇ ಸರ್ಕಾರವು ಪರಿಸ್ಥಿತಿಯನ್ನು ಮನಗಂಡಿದ್ದ ಪರಿಣಾಮವಾಗಿ ಪರಿಹಾರೋಪಾಯಗಳ ಬಗ್ಗೆ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೨೧–೨೨

ಆಲೋಚಿಸುತ್ತಿದ್ದರು. ಪರಿಸ್ಥಿತಿಯನ್ನು ಸುಧಾರಿಸಲು ಈ ಕೆಳಗಿನ ಕೆಲವು ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಕಲ್ಲಿದ್ದಲನ್ನು ಸಾಗಿಸಲು ಹೆಚ್ಚು ವ್ಯಾಗನ್‌ಗಳನ್ನು, ವಿಶೇಷವಾಗಿ ಬಂಗಾಳ ಹಾಗೂ ಬಿಹಾರದ ಗಣಿಗಳಿಂದ, ವ್ಯವಸ್ಥೆ ಮಾಡಲಾಗಿದೆ.

೨) ಗಣಿಗಾರಿಕೆ ಯಂತ್ರಗಳ ಸಮರ್ಪಕವಾದ ವಿತರಣೆಯ ವಿಷಯದಲ್ಲೂ ವಿಶೇಷ ಎಚ್ಚರಿಕೆ ವಹಿಸಲಾಗಿದೆ.

೩) ಮಧ್ಯ ಪ್ರಾಂತಗಳಲ್ಲಿ ಹಾಗೂ ಬೇರಾರ್ ಕಲ್ಲಿದ್ದಲು ಗಣಿಗಳಲ್ಲಿ ಹೆಂಗಸರು ಭೂತಳದಲ್ಲಿ ಕೆಲಸ ಮಾಡಲು ಅನುಮತಿ ನೀಡಲಾಗಿದೆ.

೪) ಕಲ್ಲಿದ್ದಲು ಗಣಿಪ್ರದೇಶಗಳಲ್ಲಿ ಸೈನಿಕ ಚಟುವಟಿಕೆಗಳಿಂದ ಗಣಿ ಕೆಲಸಕ್ಕೆ ತೊಂದರೆಯಾಗದ ಹಾಗೆ ನಿಗಾ ಇಡಲಾಗಿದೆ.

೫) ಗಣಿ ಪ್ರದೇಶಗಳಲ್ಲಿ ಗ್ರಾಹಕ ವಸ್ತುಗಳು, ವಿಶೇಷವಾಗಿ ಆಹಾರ ಪದಾರ್ಥಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವಂತೆ ಹಾಗೂ ಅಗ್ಗದ ದರದಲ್ಲಿ ದೊರೆಯುವಂತೆ ಏರ್ಪಾಟು ಮಾಡಲಾಗಿದೆ.

೬) ಬಂಗಾಳ ಹಾಗೂ ಬಿಹಾರ ಕಲ್ಲಿದ್ದಲು ಗಣಿ ಪ್ರದೇಶಗಳಲ್ಲಿ ಗಣಿ ಕೆಲಸಗಾರರ ಆರೋಗ್ಯ ಹಾಗೂ ಸಾಮಾನ್ಯ ಸುಸ್ಥಿತಿಯನ್ನು ಉತ್ತೇಜಿಸುವ ಕಾರಣದಿಂದ ಕಲ್ಯಾಣಾಧಿಕಾರಿಗಳನ್ನು ನೇಮಕ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

**ಶ್ರೀ ಕೆ.ಸಿ. ನಿಯೋಗಿ :** ಈ ರೀತಿ ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಇಳಿತವುಂಟಾಗಲು ಪ್ರಮುಖವಾದ ಕಾರಣಗಳೇನೆಂದು ತಿಳಿಸಲು ಗೌರವಾನ್ವಿತ ಸದಸ್ಯರಿಗೆ ಸಾಧ್ಯವಾಗುವುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಇಳಿಮುಖವಾಗಲು ಪ್ರಧಾನ ಕಾರಣವೆಂದರೆ ಶ್ರಮದ ಕೊರತೆ, ಕಾರ್ಮಿಕರ ಕೊರತೆ. ಕಾರ್ಮಿಕರಲ್ಲಿ ಕೊರತೆಯುಂಟಾಗಲು ಕಾರಣವೆಂದರೆ 'ಹೆಚ್ಚು ಆಹಾರ ಬೆಳೆಯಿರಿ' ಚಳುವಳಿಗೆ ಜನ ಓಗೊಟ್ಟಿದ್ದು; ಜೊತೆಗೆ ಕಲ್ಲಿದ್ದಲಿನ ಗಣಿ ಪ್ರದೇಶದಲ್ಲೇ ಸೈನಿಕ ಕೆಲಸಗಳು ಪ್ರಾರಂಭವಾದದ್ದು.

# ೧೩೫
# ದೆಹಲಿಯಲ್ಲಿ ಕಲ್ಲಿದ್ದಲು ವ್ಯಾಪಾರದ ಪ್ರತಿನಿಧಿಗಳ ಸಮಾವೇಶ *

**೨೫೧. ಕೆ.ಸಿ. ನಿಯೋಗಿ :** ಅ) ಕಳೆದ ಅಕ್ಟೋಬರ್ ೨೩ನೇ ತಾರೀಖಿನಂದು ದೆಹಲಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಕಲ್ಲಿದ್ದಲು ವ್ಯಾಪಾರದ ಪ್ರತಿನಿಧಿಗಳ ಸಮ್ಮೇಳನ ಪ್ರಧಾನವಾಗಿ ಕಲ್ಲಿದ್ದಲಿನ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿತ್ತೆ ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ತಿಳಿಸುವರೆ? ಹಾಗಾದರೆ, ಈ ಸಮ್ಮೇಳನವನ್ನು ನಡೆಸಲು ಪ್ರೇರೇಪಣೆ ನೀಡಿದ ಸಂದರ್ಭಗಳು ಯಾವುವು, ಹಾಗೂ ಚರ್ಚೆಯಲ್ಲಿ ಹೊರಬಿದ್ದ ಫಲಿತಾಂಶವೇನು?

ಆ) ಯುದ್ಧದ ಅಥವಾ ಬೇರೆ ಉದ್ದೇಶಗಳಿಗಾಗಿ ಹೊರದೇಶಕ್ಕೆ ಕಲ್ಲಿದ್ದಲನ್ನು ಸರಬರಾಜು ಮಾಡುವ ಒತ್ತಡವಿರುವ ಕಾರಣ ದೇಶದ ಒಳಗೆ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸಬೇಕಾದ ಪ್ರಮೇಯ ಒದಗಿರುವುದರಿಂದ ಪ್ರಸ್ತುತ ಪ್ರಯತ್ನ ನಡೆಯಿತೆಂದು ತಿಳಿಯಬಹುದೆ?

ಇ) ಸಮ್ಮೇಳನಕ್ಕೆ ಆಹ್ವಾನಿತರಾದ ಪ್ರತಿನಿಧಿಗಳಿಗೆ ಕಾರ್ಮಿಕ ಇಲಾಖೆಯ ಪತ್ರವೊಂದನ್ನು ತಲುಪಿಸಲಾಯಿತಲ್ಲದೆ, ಆ ಪತ್ರದಲ್ಲಿ ಕಲ್ಲಿದ್ದಲಿನ ಉತ್ಪಾದನಾ ಪ್ರಮಾಣ ಇಳಿಮುಖವಾಗುತ್ತಿರುವುದರ ಬಗ್ಗೆ, ಭಾರತೀಯ ಕಲ್ಲಿದ್ದಲಿಗೆ ದೇಶದಲ್ಲಿ ಮತ್ತು ಹೊರಗೆ ಇರುವ ಬೇಡಿಕೆಯ ಬಗ್ಗೆ ಪ್ರಸ್ತಾಪಿಸಿ, ಆ ಕಾರಣದಿಂದ ಉಂಟಾದ ಆತಂಕದ ಬಗ್ಗೆ ವಿವರವಿದ್ದದ್ದು ನಿಜವೇ? ಆ ರೀತಿ ಮೊದಲು ಸರ್ಕಾರಕ್ಕೆ ಆತಂಕವಾದದ್ದು ಯಾವಾಗ ಹಾಗೂ ಯಾವ ಸಂದರ್ಭಗಳಿಂದ, ಅಲ್ಲಿಂದ ಪರಿಸ್ಥಿತಿಯನ್ನು ಉತ್ತಮಪಡಿಸಲು ಯಾವ ಕ್ರಮಕೈಗೊಳ್ಳಲಾಗಿದೆ ಮತ್ತು ಇದುವರೆಗೆ ಯಾವ ಫಲಿತಾಂಶ ಬಂದಿದೆ?

ಈ) ಕಲ್ಲಿದ್ದಲನ್ನು ಹೊರದೇಶಕ್ಕೆ ರಫ್ತುಮಾಡುವ ಜರೂರನ್ನು ಸರ್ಕಾರ ಮನಗಂಡು ಆ ದಿಶೆಯಲ್ಲಿ ಹೆಚ್ಚು ಒತ್ತುಕೊಡುವ ಪ್ರಮೇಯವೇರ್ಪಟ್ಟಲ್ಲಿ ಇದರಿಂದ ದೇಶದ ಒಳಗೆ ಕಲ್ಲಿದ್ದಲಿನ ಸರಬರಾಜಿನಲ್ಲಿ ಆಗಬಹುದಾದ ವ್ಯತ್ಯಾಸಗಳೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು, ಉತ್ಪಾದನೆಯಲ್ಲಿ ಇಳಿಮುಖವಾಗಿರುವುದಕ್ಕೆ ಕಾರ್ಮಿಕರು ಸಿಕ್ಕದಿರುವುದು ಕಾರಣವೆಂಬುದಕ್ಕೆ ತಿಳಿದಿತ್ತು. ಕಾರ್ಮಿಕರ ಕೊರತೆಯನ್ನು ನಿವಾರಿಸಲು ಸಾಧ್ಯವಾದರೆ ಉತ್ಪಾದನೆಯಲ್ಲಾಗಿರುವ ಕೊರತೆಯನ್ನು ನೀಗುವುದರ ಜೊತೆಗೆ ನಿಗದಿತ ಗುರಿಯ ಪ್ರಮಾಣವನ್ನು ತಲುಪಲು ಸಾಧ್ಯವಾಗುವುದು. ಈ ಉದ್ದೇಶಗಳಿಗಾಗಿ ಮಾಲೀಕರ ಸಂಪೂರ್ಣ ಸಹಕಾರವನ್ನು ಪಡೆಯಲು ಸರ್ಕಾರವು ಕಾತರವಾಗಿತ್ತು. ಈ ಚರ್ಚೆಯ ಪ್ರಮುಖ ಫಲಿತಾಂಶವೆಂದರೆ ಬಂಗಾಳ ಹಾಗೂ ಬಿಹಾರದ ಮಾಲೀಕರ ಸಂಘಗಳು ಏಕರೂಪವಾದ ಯೋಜನೆಗಳನ್ನು ಪ್ರಾರಂಭಿಸಿ ಗಣಿ ಕೆಲಸಗಾರರಿಗೆ ಸುಲಭದ ದರದಲ್ಲಿ ಆಹಾರ ಧಾನ್ಯಗಳು ಹಾಗೂ ಇತರೆ ಪದಾರ್ಥಗಳು ದೊರೆಯುವಂತೆ ಮಾಡುವುದು; ಇಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಭಾರತ ಸರ್ಕಾರ ಮಾಲೀಕರ ಸಂಘಗಳಿಗೆ ಸಹಾಯ ನೀಡುವುದು.

ಆ) ಭಾರತದಲ್ಲಿ ಆಂತರಿಕ ಬೇಡಿಕೆಯನ್ನು ಈಡೇರಿಸಲು ಕಲ್ಲಿದ್ದಲಿನ ಉತ್ಪಾದನಾ ಪ್ರಮಾಣದಲ್ಲಿ

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೨೨–೨೩

ಹೆಚ್ಚಳವಾಗುವುದು ಅನಿವಾರ್ಯವಾಗಿದೆ. ಕಾರಣ, ಕೈಗಾರಿಕೆಗಳು ಹೆಚ್ಚಾಗಿವೆ, ಕಲ್ಲಿದ್ದಲಿನ ಉತ್ಪಾದನೆ ತಗ್ಗಿದೆ.

ಇ) ಹೌದು. ಯುದ್ಧ ಪ್ರಾರಂಭವಾದಾಗಿನಿಂದ ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಗರಿಷ್ಠ ಪ್ರಮಾಣವನ್ನು ಸ್ಥಿರಗೊಳಿಸುವಲ್ಲಿ ಭಾರತ ಸರ್ಕಾರ ಪ್ರಯತ್ನಿಸಿದೆ. ಕಲ್ಲಿದ್ದಲಿನ ಉತ್ಪಾದನೆಯ ಅತ್ಯಧಿಕ ವರ್ಷ ೧೯೪೦. ೧೯೪೦ರ ಪ್ರಮಾಣಕ್ಕೆ ಹೋಲಿಸಿದರೆ ೧೯೪೧ರಲ್ಲಿ ಸ್ವಲ್ಪ ಇಳಿಮುಖವಾಗಿತ್ತು, ಹಾಗೂ ೧೯೪೨ರಲ್ಲಿ ಇನ್ನೂ ಕೊಂಚ ತಗ್ಗಿತು. ೧೯೪೩ರ ಪ್ರಮಾಣವನ್ನು ಗಮನಿಸಿದರೆ ಇದು ೧೯೪೨ರ ಪ್ರಮಾಣಕ್ಕಿಂತಲೂ ಕೊಂಚ ಕಡಿಮೆಯಾಗುವ ನಿರೀಕ್ಷೆಯಿದೆ. ಈ ವರ್ಷದ ಜೂನ್ ತಿಂಗಳಿನಿಂದ ಸ್ಪಷ್ಟವಾದಂತೆ ಕಲ್ಲಿದ್ದಲಿನ ಉತ್ಪಾದನಾ ಪ್ರಮಾಣ ಸಾಕಾಗುವುದಿಲ್ಲವೆಂದು ತಿಳಿಯಿತು. ಯುದ್ಧ ಕೈಗಾರಿಕೆ, ರೈಲ್ವೆ ಹಾಗೂ ಪ್ರಥಮ ಪ್ರಾಮುಖ್ಯತೆಯ ಸೈನಿಕ ಯೋಜನೆಗಳಿಗೆ ಅಗತ್ಯವಾಗುವ ಕಲ್ಲಿದ್ದಲಿನ ಪ್ರಮಾಣವನ್ನು ಸರಿದೂಗಿಸಲು ಗ್ರಾಹಕರಿಗೆ ವಾರ್ಷಿಕ ಕಲ್ಲಿದ್ದಲಿನ ಪ್ರಮಾಣ ೨೫–೭೫ ದಶಲಕ್ಷ ಟನ್‌ಗಳನ್ನು ದೊರಕಿಸಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇಷ್ಟು ಪ್ರಮಾಣದಲ್ಲಿ ಕಲ್ಲಿದ್ದಲನ್ನು ದೊರಕಿಸುವ ಅಗತ್ಯ ಸರ್ಕಾರಕ್ಕೆ ಈ ಮೊದಲು ಇರಲಿಲ್ಲ. ಹಾಗಾಗಿ ಉತ್ಪಾದನೆಯನ್ನು ಹೆಚ್ಚಿಸುವ ಮಾರ್ಗಗಳನ್ನು ಅನ್ವೇಷಿಸುವುದು ಅತ್ಯಂತ ಜರೂರಿನ ಕೆಲಸವಾಗಿ ಪರಿಣಮಿಸಿದೆ.

ಈ ಪರಿಸ್ಥಿತಿಯ ಸುಧಾರಣೆಗೆ ಕೈಗೊಂಡಿರುವ ಕ್ರಮದ ಬಗ್ಗೆ ಹೇಳುವುದಾದರೆ, ತಮ್ಮ ೧೫೬ನೇ ಸಂಖ್ಯೆಯ ಪ್ರಶ್ನೆಗೆ ನೀಡಿರುವ ಉತ್ತರವನ್ನು ಗೌರವಾನ್ವಿತ ಸದಸ್ಯರು ಉಲ್ಲೇಖಿಸಿದ್ದಾರೆ. ಈ ಕ್ರಮಗಳ ಫಲಿತಾಂಶಗಳನ್ನು ನಿರ್ಧರಿಸುವುದು ಶೀಘ್ರವಾಗಿ ಆಗಲಾರದೆಂದು ತೋರುತ್ತದೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಹೆಚ್ಚಳವನ್ನು ತರಲು ಮಹಿಳಾ ಕೆಲಸಗಾರರನ್ನು ಗಣಿಗಳ ಒಳಗೆ ಕೆಲಸಮಾಡಲು ಅವಕಾಶ ನೀಡಿರುವುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ತುರ್ತು ಪರಿಸ್ಥಿತಿ ಇರುವತನಕ ಅಷ್ಟೇ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಗಣಿಗಳ ಒಳಗೆ ಕೆಲಸಮಾಡಲು ನೇಮಕ ಮಾಡಿಕೊಂಡಿರುವಂಥ ಈ ಮಹಿಳಾ ಕೆಲಸಗಾರರ ಉಸ್ತುವಾರಿಗಾಗಿ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುತ್ತಿದ್ದೀರಿ ಎಂದು ತಿಳಿಯಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವು ಕ್ರಮಗಳ ಬಗ್ಗೆ ನಾವು ಚಿಂತನೆ ನಡೆಸಿದ್ದೇವೆ, ನನ್ನ ಗೌರವಾನ್ವಿತ ಸ್ನೇಹಿತರು ಮುಂದಿನ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದರೆ, ಅವರಿಗೆ ಸ್ವಲ್ಪ ಮಾಹಿತಿ ಒದಗಿಸಬಲ್ಲೆ.

**ಶ್ರೀ ಕೆ.ಸಿ. ನಿಯೋಗಿ :** ಕಲ್ಲಿದ್ದಲಿನ ರಫ್ತನ್ನು ಉತ್ತೇಜಿಸುವ ದಿಸೆಯಲ್ಲಿ ಪ್ರಭುಗಳ ಸರ್ಕಾರವು ಏನಾದರೂ ಸೂಚನೆಗಳನ್ನು ನೀಡಿರುವುದೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಬಗ್ಗೆ ನನ್ನಲ್ಲಿ ಯಾವ ಮಾಹಿತಿಯೂ ಇಲ್ಲ.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮುಂದಿನ ಪ್ರಶ್ನೆ.

# ೧೩೬
# ನವದೆಹಲಿ ಹಾಗೂ ಕಲ್ಕತ್ತೆಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಮ್ಯಾನೇಜರುಗಳನ್ನು ನೇಮಕ ಮಾಡುವುದರ ಬಗೆಗೆ*

**೨೫೩. ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಠ್ :** ದಯಮಾಡಿ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ : ಅ) ಇತ್ತೀಚೆಗೆ ನವದೆಹಲಿ ಹಾಗೂ ಕಲ್ಕತ್ತೆಯ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಮ್ಯಾನೇಜರುಗಳ ಹುದ್ದೆಗಳನ್ನು ಭರ್ತಿಮಾಡುವ ಸಂದರ್ಭದಲ್ಲಿ ಅನೇಕ ಮುಸ್ಲಿಂ ಸಹಾಯಕ ಮ್ಯಾನೇಜರುಗಳ ಅರ್ಹತೆ ಹಾಗೂ ಸೇವಾಹಿರಿತನವನ್ನು ಕಡೆಗಣಿಸಲಾದದ್ದು ನಿಜವೇ? ಹಾಗಾದರೆ, ಇದಕ್ಕೆ ಕಾರಣವೇನು?

ಆ) ಮುದ್ರಣ ಹಾಗೂ ಲೇಖನಸಾಮಗ್ರಿ ವಿಭಾಗದ ನಿಯಂತ್ರಣಾಧಿಕಾರಿಗಳ ಕಛೇರಿಯ ಮ್ಯಾನೇಜರ್‌ರವರು ಗುಮಾಸ್ತರ ಹುದ್ದೆಗೆ ಆಯ್ಕೆಯಾದ ಮುಸ್ಲಿಂ ನೌಕರರೊಬ್ಬರನ್ನು ಬಿಡುಗಡೆಮಾಡಲು ನಿರಾಕರಿಸಿ, ಜೋಡಣೆ ವಿಭಾಗ ಹಾಗೂ ಸರಬರಾಜು ವಿಭಾಗದ ನಿಯಂತ್ರಣಾಧಿಕಾರಿಯವರ ಕಛೇರಿಗೆ ಗುಮಾಸ್ತರ ಹುದ್ದೆಗೆ ಆಯ್ಕೆಯಾದ ಒಬ್ಬ ಮುಸ್ಲಿಮೇತರ ನೌಕರರನ್ನು ಸದರಿ ಮ್ಯಾನೇಜರ್‌ರವರು ಬಿಡುಗಡೆ ಮಾಡಿರುವ ವಿಷಯ ಗೌರವಾನ್ವಿತ ಸದಸ್ಯರ ಗಮನಕ್ಕೆ ಬಂದಿದೆಯೇ?

ಇ) ನವದೆಹಲಿಯಲ್ಲಿನ, ಭಾರತ ಸರ್ಕಾರ ಮುದ್ರಣಾಲಯದ ಸಹಾಯಕ ನಿರ್ವಹಣಾಧಿಕಾರಿಯವರು ಲಿನೋ ವಿಭಾಗದಲ್ಲಿ ತುಂಡು–ಜೋಡಣೆ ಕೆಲಸದಲ್ಲಿದ್ದ ಆರು ಮಂದಿ ಮುಸ್ಲಿಂ ನೌಕರರನ್ನು ವರ್ಗಮಾಡಿರುವುದು ನಿಜವೇ? ಹಾಗಾದರೆ, ಇಡಿಯಾಗಿ ಮುಸ್ಲಿಂ ಕೆಲಸಗಾರರನ್ನೆಲ್ಲಾ ಈ ವಿಭಾಗದಿಂದ ಒಮ್ಮೆಲೇ ವರ್ಗಾಯಿಸಲು ಏನು ಕಾರಣ?

ಈ) ನವದೆಹಲಿ, ಭಾರತ ಸರ್ಕಾರ ಮುದ್ರಣಾಲಯದಲ್ಲಿ ಇತ್ತೀಚೆಗೆ ಮುದ್ರಣದೋಷ ಪರೀಕ್ಷಕನ ಹುದ್ದೆಯನ್ನು ತುಂಬುವಾಗ ಹಳೆಯ ವೇತನಶ್ರೇಣಿಯ ಸೇವಾಹಿರಿತನವುಳ್ಳ ವ್ಯಕ್ತಿಯನ್ನು ಕಡೆಗಣಿಸಿ ಕಡಿಮೆ ವೇತನದ ವ್ಯಕ್ತಿಯನ್ನು ನಿರ್ವಹಣಾಧಿಕಾರಿಗಳು ತೆಗೆದುಕೊಂಡಿರುವುದು ನಿಜವೇ; ಹಾಗಿದ್ದರೆ ಏಕೆ ಹೀಗೆ ಮಾಡಿದರು?

ಉ) ಸರ್ಕಾರಿ ಮುದ್ರಣಾಲಯದ ಮ್ಯಾನೇಜರ್ ಹಾಗೂ ಸಹಾಯಕ ಮ್ಯಾನೇಜರ್ ಅವರು ಹುದ್ದೆಗಳಿಗೆ ನೇಮಕಮಾಡಲು, ಬಡ್ತಿನೀಡಲು, ವರ್ಗಮಾಡಲು, ಕೆಲವು ಹುದ್ದೆಗಳನ್ನು ಆಯ್ಕೆ ಹುದ್ದೆಗಳೆಂದು ಘೋಷಿಸಲು ಅಧಿಕಾರ ಹೊಂದಿರುತ್ತಾರೆಯೆ? ಹಾಗಿದ್ದಲ್ಲಿ, ಈ ವಿಷಯವಾಗಿ ಅವರ ಮಾರ್ಗದರ್ಶನಕ್ಕಾಗಿ ಯಾವುದಾದರೂ ನಿಯಮಗಳನ್ನು ಸಿದ್ಧಪಡಿಸಲಾಗಿದೆಯೇ?

ಊ) ಎಲ್ಲಾ ಕೇಸುಗಳಲ್ಲಿ ಈ ಅಧಿಕಾರಿಗಳು ನಿಯಮಗಳನ್ನು ತಪ್ಪದೆ ಪರಿಪಾಲಿಸಿರುವರೆ ಎಂಬುದನ್ನು ತಿಳಿಯುವುದಕ್ಕೆ ಗೌರವಾನ್ವಿತ ಸದಸ್ಯರು ಒಂದು ವಿಚಾರಣೆ ನಡೆಸುವರೆ? ಹಾಗೂ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩, ಪು. ೪೨೪–೨೫

ಋ) ಮೇಲೆ ಕಾಣಿಸಿದ ಸಂದರ್ಭಗಳಲ್ಲಿ ಕಾನೂನು ಉಲ್ಲಂಘನೆಯಾಗಿರುವ ಕಾರಣ ಇದನ್ನು ಸುಸಂಬದ್ಧಗೊಳಿಸುವ ದಿಶೆಯಲ್ಲಿ ಉ) ಭಾಗದಲ್ಲಿ ಸೂಚಿಸಿರುವ ಅಧಿಕಾರವನ್ನು ಹೊಂದಿದಂಥ ಒಂದು ಸ್ವತಂತ್ರ ಸಮಿತಿಯನ್ನು ನೇಮಿಸಲು ಗೌರವಾನ್ವಿತ ಸದಸ್ಯರು ಪರಿಗಣಿಸುವರೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ. ಆ) ಇಲ್ಲ.

ಇ) ಹೌದು. ವಿಭಾಗೀಯ ಅದಲುಬದಲಿನ ಒಂದು ಭಾಗವಾಗಿ ಇದು ೨ ತಿಂಗಳಿಗೊಮ್ಮೆ ನಡೆಯುವ ಪ್ರಕ್ರಿಯೆ ಇದರಿಂದ ಪ್ರತಿಯೊಬ್ಬ ಕೆಲಸಗಾರನಿಗೂ ಕಷ್ಟದ ಕೆಲಸ, ನಂತರ ಸುಲಭದ ಕೆಲಸ ದಕ್ಕುವ ಹಾಗಾಗುತ್ತದೆ. ಮುಸ್ಲಿಂ ನೌಕರರ ಜೊತೆಯಲ್ಲಿ ಮೂವರು ಮುಸ್ಲಿಮೇತರ ತುಂಡು–ಜೋಡಣೆದಾರರನ್ನೂ ವರ್ಗಾಯಿಸಲಾಯಿತು. ಹಾಗೆಯೇ ಇಬ್ಬರು ಮುಸ್ಲಿಂ ತುಂಡು–ಜೋಡಣೆದಾರರನ್ನು ಲಿನೋ–ವಿಭಾಗಕ್ಕೆ ತರಲಾಯಿತು.

ಈ) ಹೌದು. ಮುದ್ರಣ ದೋಷಪರೀಕ್ಷಕನ ಹುದ್ದೆ ಆಯ್ಕೆಹುದ್ದೆಯಾಗಿರುವ ಕಾರಣ, ಪ್ರತಿಭೆಯ ಆಧಾರದ ಮೇಲೆ ಆ ಹುದ್ದೆಗೆ ಸಮರ್ಥನನ್ನು ಆಯ್ಕೆಮಾಡಲಾಯಿತು.

ಉ) ಇಲಾಖೆಯ ಕೈಪಿಡಿಯನ್ವಯ ಕೆಲವು ಹುದ್ದೆಗಳಿಗೆ ನೇಮಕಮಾಡುವ ಹಾಗೂ ಬಡ್ತಿ ನೀಡುವ ಅಧಿಕಾರವನ್ನು ಭಾರತ ಸರ್ಕಾರ ಮುದ್ರಣಾಲಯದ ಮ್ಯಾನೇಜರುಗಳಿಗೆ ನೀಡಲಾಗಿದೆ. ಆದರೆ ಯಾವುದೇ ಹುದ್ದೆಯನ್ನೂ ಅವರು ಆಯ್ಕೆಹುದ್ದೆಯೆಂದು ಘೋಷಿಸಲು ಸಮರ್ಥರಾಗಿರುವುದಿಲ್ಲ.

ಊ) ಮತ್ತು ಋ) ಈ ಮೇಲೆ ಉಲ್ಲೇಖಿಸಿದಂಥ ಅಕ್ರಮಗಳು ಇದುವರೆಗೆ ನಡೆದಿಲ್ಲವಾದ ಕಾರಣ ಆ ದಿಶೆಯಲ್ಲಿ ಕ್ರಮಕೈಗೊಳ್ಳುವ ಅಗತ್ಯ ಕಂಡುಬಂದಿಲ್ಲ.

**ಶ್ರೀ ಎಚ್. ಎ. ಸತ್ತಾರ್ ಎಚ್. ಎಸ್ಸಾಕ್ ಸೇಠ್ :** ಈ) ಭಾಗಕ್ಕೆ ಸಂಬಧಿಸಿದಂತೆ, ನನ್ನ ಗೌರವಾನ್ವಿತ ಮಿತ್ರರು ಕೆಲವು ಕಾರಣಗಳಿಗಾಗಿ ಮುಸ್ಲಿಂರೊಬ್ಬರ ಅರ್ಹತೆಯನ್ನು ಕಡೆಗಣಿಸಲಾಯಿತೆಂದು ಒಪ್ಪಿಕೊಂಡಿದ್ದಾರೆ. ಕಡೆಗಣಿಸಲ್ಪಟ್ಟ ಮುಸ್ಲಿಮರು ೨೨ ವರ್ಷಗಳಿಗೂ ಮಿಕ್ಕು ಸೇವೆ ಸಲ್ಲಿಸಿದ್ದರೆಂಬ ವಿಷಯ ಅವರ ಗಮನಕ್ಕೆ ಬಂದಿರುವುದೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನ್ನ ಗೌರವಾನ್ವಿತ ಗೆಳೆಯರು ಹೇಳುವುದನ್ನು ಸ್ವೀಕರಿಸಲು ನಾನು ತಯಾರಿದ್ದೇನೆ, ನನ್ನ ಬಳಿ ಮಾಹಿತಿ ಇಲ್ಲದಿದ್ದರೂ ಕೂಡ.

**ಶ್ರೀ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಠ್ :** ಅ) ಮತ್ತು ಆ) ಭಾಗಗಳಿಗೆ ಉತ್ತರ ನಕಾರಾತ್ಮಕವಾದದ್ದೆಂದು ತಿಳಿಸಿದರು. ಅ)ಗೆ ಸಂಬಂಧಿಸಿದ ನೇಮಕಾತಿಗಳನ್ನು ಈ ವರ್ಷ ಮಾಡಿರುವರೆಂಬ ಸಂಗತಿಯನ್ನು ಅವರು ಒಪ್ಪುತ್ತಾರೆಯೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನಗೆ ಸಮಯಬೇಕು.

# ೧೩೭
# ಸರ್ಕಾರಿ ಪ್ರಕಟಣೆ ಇತ್ಯಾದಿಗಳನ್ನು ಕಾರ್ಮಿಕ ಸಂಘಗಳಿಗೆ ನೀಡುವ ಬಗೆಗೆ *

**೩೫. ಶ್ರೀ ಮುಹಮ್ಮದ್ ಅಜರ್ ಆಲಿ :**

ಅ) ಯಾವುದೇ ಒಂದು ಪ್ರಾಂತ್ಯಕ್ಕೆ ಸೀಮಿತವಾಗದ, ನೋಂದಾಯಿಸಿದ ಹಾಗೂ ನೋಂದಾಯಿಸಿರದ ಕಾರ್ಮಿಕ ಸಂಘಗಳ ಹೆಸರುಗಳನ್ನು (ಪ್ರತ್ಯೇಕವಾಗಿ) ತಿಳಿಸುವರೆ:

ಆ) ಯಾವ ಕಾರ್ಮಿಕ ಸಂಘಗಳಿಗೆ (ನೋಂದಾಯಿಸಲ್ಪಟ್ಟ ಮತ್ತು ನೊಂದಾಯಿಸಲ್ಪಡದ) ಅಧಿಕೃತ ಪ್ರಕಟಣೆಗಳನ್ನು ಉಚಿತವಾಗಿ ನೀಡಲಾಗಿದೆ.

ಇ) ತ್ರಿಪಕ್ಷೀಯ ಸಮಾವೇಶ ಹಾಗೂ ಸಮಿತಿಗಳಿಗಾಗಿ ಆಹ್ವಾನಿತರಾದ ನೋಂದಾಯಿತ ಹಾಗೂ ನೋಂದಾಯಿಸಿರದ ಕಾರ್ಮಿಕ ಸಂಘಗಳ ಹೆಸರು (ಪ್ರತ್ಯೇಕವಾಗಿ), ಮತ್ತು

ಈ) ಭಾಗ (ಅ) ಮತ್ತು (ಇ) ಗಳಲ್ಲಿ ಚರ್ಚಿತವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ತಾರತಮ್ಯ ತೋರಿದುದಕ್ಕೆ ಕಾರಣಗಳು?

–ಎಂಬುದನ್ನು ಗೌರವಾನ್ವಿತ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಅ) ಯಾವುದೇ ಒಂದು ಪ್ರಾಂತ್ಯಕ್ಕೆ ಸೀಮಿತಗೊಳ್ಳದ ಕಾರ್ಮಿಕ ಸಂಘಗಳ ಹೆಸರಿನ ಯಾದಿಯನ್ನೂ ಕೊಡಲಾಗಿದೆ. ನೋಂದಾಯಿಸಿರದ ಕಾರ್ಮಿಕ ಸಂಘಗಳ ಬಗೆಗೆ ವಿವರಗಳು ಲಭ್ಯವಾಗಿಲ್ಲ.

ಆ) ಗೌರವಾನ್ವಿತ ಸದಸ್ಯರು ಯಾವುದೇ ಒಂದು ಪ್ರಾಂತ್ಯಕ್ಕೆ ತಮ್ಮ ಚಟುವಟಿಕೆಯನ್ನು ಸೀಮಿತಗೊಳಿಸಿಕೊಳ್ಳದ ಕಾರ್ಮಿಕ ಸಂಘಗಳ ಬಗ್ಗೆ ಪ್ರಸ್ತಾಪಿಸುತ್ತಿರಬಹುದೆಂದು ನಾನು ಊಹಿಸುವೆ.

ಕೋರಿಕೆಯ ಮೇರೆಗೆ ಎರಡು ಅಖಿಲ ಭಾರತ ಕಾರ್ಮಿಕರ ಸಂಘಗಳಿಗೆ, ಉದಾಹರಣೆಗೆ, 'ಆಲ್–ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್' ಮತ್ತು 'ಇಂಡಿಯನ್ ಫೆಡರೇಷನ್ ಆಫ್ ಲೇಬರ್' – ಇವುಗಳಿಗೆ ಸುದ್ದಿಪತ್ರಗಳು, ವಾರ್ಷಿಕ ವರದಿ, ಇತ್ಯಾದಿಗಳ ಪ್ರತಿಗಳನ್ನು ನೀಡಲಾಗಿದೆ. ಯಾವುದೇ ಒಂದು ಕಾರ್ಮಿಕ ಸಂಘಕ್ಕೆ ಸರ್ಕಾರಿ ಪ್ರಕಟಣೆಯನ್ನು ಮುಫತ್ತಾಗಿ ನೀಡಿಲ್ಲ.

ಇ) ತ್ರಿಪಕ್ಷೀಯ ಕಾರ್ಮಿಕ ಸಮಾವೇಶ ಹಾಗೂ ಸ್ಥಾಯಿ ಕಾರ್ಮಿಕ ಸಮಿತಿಗಳು ಈ ಕೆಳಕಂಡಂತೆ ಕಾರ್ಮಿಕ ಪ್ರತಿನಿಧಿಗಳ ನೇಮಕಕ್ಕೆ ಅವಕಾಶ ಮಾಡಿಕೊಡುತ್ತವೆ :

i) ಕಾರ್ಮಿಕ ಸಮಾವೇಶಕ್ಕೆ,

ii) ಇವರ ಪೈಕಿ ೪ ಮಂದಿಯನ್ನು ಆಲ್ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಸಮಾಲೋಚನೆಯೊಂದಿಗೆ ಸರ್ಕಾರ ನೇಮಕಮಾಡುವುದು, ೪ ಮಂದಿಯನ್ನು ಇಂಡಿಯನ್ ಫೆಡರೇಷನ್ ಆಫ್ ಲೇಬರ್‌ನೊಡನೆ ಸಮಾಲೋಚಿಸಿ ಸರ್ಕಾರವೇ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ (ಕೇಂದ್ರ) ಸಂ. ೪, ೧೭ ನವೆಂಬರ್ ೧೯೪೩. ಪು. ೪೩೮–೪೦

ನೇಮಕ ಮಾಡುವುದು, ಇತರೆ ನೌಕರರ ಹಿತದೃಷ್ಟಿಯಿಂದ ೨ ಮಂದಿಯನ್ನು ಸರ್ಕಾರ ನೇರವಾಗಿ ನೇಮಿಸುವುದು.

iii) ಸ್ಥಾಯಿ ಕಾರ್ಮಿಕ ಸಮಿತಿಗೆ ೫ಜನ ಪ್ರತಿನಿಧಿಗಳ ೪ ಮಂದಿಯನ್ನು ಎರಡು ಅಖಿಲ ಭಾರತ ಕಾರ್ಮಿಕ ಸಂಘಗಳ ಒಪ್ಪಿಗೆಯಾಧಾರದ ಮೇಲೆ ಕಾರ್ಮಿಕ ಖಾತೆ ಸದಸ್ಯರು ನೇಮಕ ಮಾಡುವರು, ಮತ್ತು ಐದನೇ ಸ್ಥಾನವನ್ನು ಸ್ವತಂತ್ರವಾಗಿ ಕಾರ್ಮಿಕ ಸದಸ್ಯರು ನೇಮಕ ಮಾಡುವರು.

ಸಮಾವೇಶ ಹಾಗೂ ಸಮಿತಿಗಳಿಗೆ ಪ್ರತಿನಿಧಿಗಳನ್ನು ಆಯಾ ವಿಭಾಗದ ಸಂವಿಧಾನದ ರೀತಿಯೇ ನಡೆಯುವುದರಿಂದ ಬೇರೆ ಬೇರೆ ಕಾರ್ಮಿಕ ಸಂಘಗಳನ್ನು ತಾರತಮ್ಯದಿಂದ ಕಾಣುವ ಪ್ರಮೇಯವುಂಟಾಗುವುದಿಲ್ಲ.

ಈ) ಆ) ಮತ್ತು ಇ) ಭಾಗಗಳಿಗೆ ನೀಡಿರುವ ಉತ್ತರದಿಂದಲೇ ಸ್ಪಷ್ಟವಾಗುವಂತೆ ಯಾವುದರಲ್ಲೂ ತಾರತಮ್ಯ ತೋರಿರುವುದಿಲ್ಲ.

**ಬೇರೆ ಬೇರೆ ಪ್ರಾಂತ್ಯಗಳಲ್ಲಿ ನೋಂದಾಯಿಸಿರುವ ಕೇಂದ್ರ ಕಾರ್ಮಿಕ ಸಂಘಗಳು.**

**ಮುದ್ರಣಾಲಯಗಳು**

೧. ಭಾರತ ಸರ್ಕಾರ ಮುದ್ರಣಾಲಯ ಕಾರ್ಮಿಕರ ಸಂಘ.

**ನೌಕಾ ವಿಭಾಗ**

೨. ಇಂಡಿಯನ್ ಮರ್ಚೆಂಟ್ಸ್ ನೇವಿ ಆಫೀಸರ್ಸ್ ಅಸೋಸಿಯೋಷನ್, ಬಾಂಬೆ.

**ಇತರೆ**

೩. ದ ಆಲ್–ಇಂಡಿಯ ಟೆಲಿಗ್ರಾಫ್ ಲೈನ್ ಸ್ಟಾಫ್ ಯೂನಿಯನ್, ಲಾಹೋರ್.

೪. ದ ಇಂಡಿಯನ್ ಶುಗರ್ ಇಂಡಸ್ಟ್ರೀಸ್ ಎಂಪ್ಲಾಯೀಸ್ ಅಸೋಸಿಯೇಷನ್, ಲಕ್ನೋ.

೫. ಇಂಡಿಯನ್ ಶುಗರ್ ಮಿಲ್ಸ್ ಅಸೋಸಿಯೇಷನ್, ಕಲ್ಕತ್ತಾ.

೬. ಇಂಡಿಯನ್ ಜೂಟ್‌ಮಿಲ್ಸ್ ಅಸೋಸಿಯೇಷನ್, ಕಲ್ಕತ್ತಾ.

೭. ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಅಸೋಸಿಯೇಷನ್, ಕಲ್ಕತ್ತಾ.

೮. ಸೆಂಟ್ರಲ್ ಕೌನ್ಸಿಲ್ ಆಫ್ ಟೊಬ್ಯಾಕೊ ಮ್ಯಾನುಫ್ಯಾಕ್ಚರಿಂಗ್ ವರ್ಕರ್ಸ್ ಯೂನಿಯನ್.

೯. ಆಲ್–ಇಂಡಿಯಾ ಟೆಲಿಗ್ರಾಫ್ ವರ್ಕ್‌ಮೆನ್ಸ್ ಯೂನಿಯನ್, ಲಾಹೋರ್.

೧೦. ದ ಇಂಡಿಯನ್ ಸದರ್ನ್ ಪ್ರಾವಿನ್ಸಸ್ ಶುಗರ್ ಮಾರ್ಕೆಟಿಂಗ್ ಬೋರ್ಡ್, ಮದ್ರಾಸ್.

**ರೈಲ್ವೆ ಹಾಗೂ ಸಾರಿಗೆ**

೧೧. ಎನ್.ಡಬ್ಲ್ಯೂ. ರೈಲ್ವೆ ಜೂನಿಯರ್ ಕ್ಲಾರ್ಕ್ಸ್ ಅಸೋಸಿಯೇಷನ್.

೧೨. ಬೆಂಗಾಲ್ ಅಸ್ಸಾಂ ರೇಲ್ ರೋಡ್ ವರ್ಕರ್ಸ್ ಯೂನಿಯನ್.

೧೩. ಅಸ್ಸಾಂ ಬೆಂಗಾಲ್ ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್.

೧೪. ಇ.ಐ. ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್, ಕಲ್ಕತ್ತಾ.

೧೫. ಬೆಂಗಾಲ್ ಅಂಡ್ ಅಸ್ಸಾಂ ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್.

೧೬. ಬಿ.ಎನ್.ಆರ್. ಎಂಪ್ಲಾಯೀಸ್ ಯೂನಿಯನ್, ಕಲ್ಕತ್ತಾ.

೧೭. ಬಿ.ಎನ್. ರೈಲ್ವೆ, ಇಂಡಿಯನ್ ಲೇಬರ್ ಯೂನಿಯನ್, ಖರಗ್‌ಪುರ್

೧೮. ಎನ್.ಡಬ್ಲ್ಯೂ. ರೈಲ್ವೆ ಎಂಪ್ಲಾಯೀಸ್ ಯೂನಿಯನ್, ಕರಾಚಿ.
೧೯. ಜಿ.ಐ.ಪಿ. ರೈಲ್ವೇಮೆನ್ಸ್ ಯೂನಿಯನ್, ಬಾಂಬೆ.
೨೦. ಜಿ.ಐ.ಪಿ. ರೈಲ್ವೆ ಅಕೌಂಟ್ಸ್ ಸ್ಟಾಫ್ ಯೂನಿಯನ್, ಬಾಂಬೆ.
೨೧. ಬಿ.ಬಿ. ಮತ್ತು ಸಿ.ಐ. ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್ ಅಹ್ಮದಾಬಾದ್.
೨೨. ಬಿ.ಬಿ. ಮತ್ತು ಸಿ.ಐ. ರೈಲ್ವೆ ಮೆನ್ಸ್ ಯೂನಿಯನ್, ಬಾಂಬೆ.
೨೩. ನ್ಯಾಷನಲ್ ಯೂನಿಯನ್ ಆಫ್ ರೈಲ್ವೆಮೆನ್ ಆಫ್ ಇಂಡಿಯಾ ಅಂಡ್ ಬರ್ಮಾ, ಬಾಂಬೆ.
೨೪. ಬಿ.ಬಿ. ಮತ್ತು ಸಿ.ಐ. ರೈಲ್ವೆ ಎಂಪ್ಲಾಯೀಸ್ ಯೂನಿಯನ್, ಬಾಂಬೆ.
೨೫. ಜಿ.ಐ.ಪಿ. ರೈಲ್ವೆ ಕಂಟ್ರಾಕ್ಟರ್ಸ್ ಮತ್ತು ಲೈಸೆನ್ಸ್‌ಡ್ ಕೂಲೀಸ್ ಯೂನಿಯನ್, ಭೂಸಾವಲ್.
೨೬. ಎನ್. ಡಬ್ಲ್ಯೂ. ರೈಲ್ವೆ ಅಕೌಂಟ್ಸ್ ಯೂನಿಯನ್, ಲಾಹೋರ್.
೨೭. ಎನ್. ಡಬ್ಲ್ಯೂ. ರೈಲ್ವೆ ಯೂನಿಯನ್, ಲಾಹೋರ್.
೨೮. ಇ.ಐ. ರೈಲ್ವೆಮೆನ್ಸ್ ಯೂನಿಯನ್, ಲಕ್ನೋ.
೨೯. ರೈಲ್ವೆ ವರ್ಕರ್ಸ್ ಅಸೋಸಿಯೇಷನ್, ಮೊರಾದಾಬಾದ್.
೩೦. ಇ.ಐ. ರೈಲ್ವೆಗಾರ್ಡ್ಸ್ ಅಸೋಸಿಯೇಷನ್, ಲಕ್ನೋ.
೩೧. ರೈಲ್ವೆ ವರ್ಕ್‌ಮೆನ್ಸ್ ಯೂನಿಯನ್ ಆಫ್ ಇಂಡಿಯಾ, ಅಲಹಾಬಾದ್.
೩೨. ಬಿ.ಎನ್. ರೈಲ್ವೆಮೆನ್ಸ್ ಅಸೋಸಿಯೇಷನ್, ಗೋರಖ್‌ಪುರ.
೩೩. ಇ.ಬಿ. ರೈಲ್ವೆ ವರ್ಕರ್ಸ್ ಯೂನಿಯನ್.
೩೪. ಅಸೋಸಿಯೇಷನ್ ಆಫ್ ಅಕೌಂಟೆಂಟ್ಸ್, ಇ.ಐ. ರೈಲ್ವೆ.
೩೫. ಅಸೋಸಿಯೇಷನ್ ಆಫ್ ಅಕೌಂಟೆಂಟ್ಸ್, ಎನ್.ಡಬ್ಲ್ಯೂ.ರೈಲ್ವೆ, ಲಾಹೋರ್.
೩೬. ಆಲ್–ಇಂಡಿಯಾ ರೈಲ್ವೆ ಮೆಕ್ಯಾನಿಕಲ್ ವರ್ಕರ್ಸ್ ಫೆಡರಲ್ ಯೂನಿಯನ್, ಲಾಹೋರ್.
೩೭. ಡೆಲ್ಲಿ ಸೋನಿಪಟ್ ಬಸ್ ಸರ್ವೀಸ್ ಯೂನಿಯನ್, ಸೋನಿಪಟ್.
೩೮. ಇತ್ತೆಹಾದ್ ಮೋಟಾರ್ ಯೂನಿಯನ್, ಪಾಣಿಪಟ್.
೩೯. ಎನ್.ಡಬ್ಲ್ಯೂ. ರೈಲ್ವೆ ಗಾರ್ಡ್ಸ್ ಅಸೋಸಿಯೇಷನ್, ಲಾಹೋರ್.
೪೦. ಫೆಡರೇಟೆಡ್ ಯೂನಿಯನ್ ಆಫ್ ದ ಎನ್.ಡಬ್ಲ್ಯೂ. ರೈಲ್ವೆ ವರ್ಕರ್ಸ್, ಲಾಹೋರ್.
೪೧. ಯೂನಿಯನ್ ಆಫ್ ದ ಇ.ಐ. ರೈಲ್ವೆ ಟಿಕೆಟ್ ಚೆಕಿಂಗ್ ಸ್ಟಾಫ್, ಕಲ್ಕತ್ತಾ.
೪೨. ಇ.ಐ.ರೈಲ್ವೆ ಜಾಯಿಂಟ್ ಹ್ಯಾಂಡ್ಸ್ ಯೂನಿಯನ್, ಹೂಗ್ಲಿ.
೪೩. ಆಲ್–ಇಂಡಿಯಾ ರೈಲ್ವೆಮೆನ್ಸ್ ಯೂನಿಯನ್, ನಾಗ್‌ಪುರ್
೪೪. ಯುನೈಟೆಡ್ ಯೂನಿಯನ್ ಆಫ್ ಎನ್.ಡಬ್ಲ್ಯೂ. ಆರ್. ವರ್ಕರ್ಸ್, ಲಾಹೋರ್.
೪೫. ಡೆಲ್ಲಿ–ಗರ್ಮುಕ್ತೇಸರ್ ಮೋಟಾರ್ ಅಸೋಸಿಯೇಷನ್.
೪೬. ಈಸ್ಟ್ ಇಂಡಿಯನ್ ರೈಲ್ವೆ ಮುಸ್ಲಿಂ ಎಂಪ್ಲಾಯೀಸ್ ಅಸೋಸಿಯೇಷನ್, ಲಕ್ನೋ.
೪೭. ಎಸ್.ಎಸ್. ಲೈಟ್ ರೈಲ್ವೆ ಎಂಪ್ಲಾಯೀಸ್ ಯೂನಿಯನ್, ಸಹರಾನ್‌ಪುರ್.
೪೮. ಬಿ.ಎನ್.ಡಬ್ಲ್ಯೂ. ರೈಲ್ವೆ ವರ್ಕರ್ಸ್ ಅಸೋಸಿಯೇಷನ್, ಗೋರಖ್‌ಪುರ್.
೪೯. ಇ.ಐ. ರೈಲ್ವೆ ವರ್ಕ್‌ರ್ಸ್ ಅಸೋಸಿಯೇಷನ್, ಕಲ್ಕತ್ತಾ.
೫೦. ದ ಮದ್ರಾಸ್ ಅಂಡ್ ಸದರ್ನ್ ಮರಾಠಾ ರೈಲ್ವೆ ಎಂಪ್ಲಾಯೀಸ್ ಯೂನಿಯನ್, ಪೆರಂಬೂರ್

ಮದ್ರಾಸ್.

೫೧. ದ ಸೌತ್ ಇಂಡಿಯನ್ ರೈಲ್ವೆ ಲೇಬರ್ ಯೂನಿಯನ್, ಗೋಲ್ಡನ್ ರಾಕ್, ತಿರುಚಿನಾಪಲ್ಲಿ

೫೨. ದ ಸೌತ್ ಇಂಡಿಯನ್ ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್, ವಿಲ್ಲುಪುರಂ.

೫೩. ದ ಆಲ್–ಇಂಡಿಯಾ ರೈಲ್ವೆಮೆನ್ಸ್ ಫೆಡರೇಷನ್, ಮೈಲಾಪುರ್, ಮದ್ರಾಸ್.

## ೧೩೮
## ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿ ಕೋಮುವಾರು ಸಂಯೋಜನೆ *

೧. **ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಕಾರ್ಮಿಕ ಶಾಖೆಯ ಸನ್ಮಾನ್ಯ ಸದಸ್ಯರು ಈ ಕೆಳಗಿನ ವಿವರಗಳನ್ನು ದಯಮಾಡಿ ಒದಗಿಸುವರೆ?

ಅ) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿ ಎಷ್ಟು ಮಂದಿ ಗುಮಾಸ್ತರಿದ್ದಾರೆ?

ಆ) ೧೯೪೨ರ ಡಿಸೆಂಬರ್‌ನಿಂದ ೧೯೪೪ ಫೆಬ್ರವರಿ ಎರಡನೆಯ ವಾರದವರೆಗೆ, ತಾತ್ಕಾಲಿಕ ಅಥವಾ ಖಾಯಂ ಆಗಿ, ಎಷ್ಟು ಮಂದಿ ರೈಲ್ವೆ ಕಾರ್ಮಿಕ ಇಲಾಖೆಯ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡಲಾಗಿದೆ? ಮತ್ತು

ಇ) ಈ ನೇಮಕಾತಿಗಳಲ್ಲಿ ಕೆಳಗಿನ ವರ್ಗಗಳಿಂದ ಎಷ್ಟು ಮಂದಿಯನ್ನು ಭರ್ತಿ ಮಾಡಲಾಗಿದೆ?

(i) ದಲಿತ ವರ್ಗ

(ii) ಸವರ್ಣ ಹಿಂದುಗಳು

(iii) ಮುಸ್ಲಿಮರು ಮತ್ತು

(iv) ಇತರ ಕೋಮಿಗೆ ಸೇರಿದವರು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಒಬ್ಬ ಶೀಘ್ರಲಿಪಿಕಾರನನ್ನು ಒಳಗೊಂಡಂತೆ ಹನ್ನೊಂದು ಮಂದಿ.

ಆ) ಡಿಸೆಂಬರ್ ೧೯೪೨ರಿಂದ ಜನವರಿ ೧೯೪೪ರವರೆಗೆ ಐವರು ತಾತ್ಕಾಲಿಕ ಇನ್‌ಸ್ಪೆಕ್ಟರುಗಳನ್ನು ನೇಮಕಮಾಡಲಾಗಿದೆ.

ಇ) (i) ಮೂವರು (ii) ಯಾರೂ ಇಲ್ಲ (iii) ಯಾರೂ ಇಲ್ಲ (iv) ಇಬ್ಬರು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೪–೨೫.

## ೧೩೯
## ರೈಲ್ವೆ ಕಾರ್ಮಿಕ ಇಲಾಖೆಯಲ್ಲಿ ಮುಸ್ಲಿಂ ಇನ್‌ಸ್ಪೆಕ್ಟರ್‌ಗಳು *

**೨. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಅ) ಸಮನ್ವಯಾಧಿಕಾರಿಯಾಗಿ (ರೈಲ್ವೆ) ಶ್ರೀ ಜಾಧವ್ ಅವರು ಮೊದಲ ಬಾರಿಗೆ ನೇಮಕಗೊಂಡಾಗ, ಎಷ್ಟು ಮಂದಿ ತಾತ್ಕಾಲಿಕವಾಗಿ, ರೈಲ್ವೆ ಕಾರ್ಮಿಕ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್‌ಗಳಾಗಿ ಸೇವೆಸಲ್ಲಿಸಿದ್ದಾರೆ? ಮತ್ತು ತರಬೇತಿ ಪಡೆದವರು ಯಾರು?

ಆ) ಈ ಇನ್‌ಸ್ಪೆಕ್ಟರ್‌ಗಳಲ್ಲಿ ಎಷ್ಟು ಮಂದಿ ಮುಸ್ಲಿಮರು? ಮತ್ತು ತಾತ್ಕಾಲಿಕ ಇನ್‌ಸ್ಪೆಕ್ಟರ್‌ಗಳಾಗಿ ಸೇವೆಸಲ್ಲಿಸಿದ ಎಷ್ಟು ಮಂದಿ ಮುಸ್ಲಿಮರಿಗೆ ಖಾಯಂ ಅಥವಾ ಅರೆ–ಖಾಯಂ ಹುದ್ದೆ ದೊರೆತಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಬ್ಬರು ಆ) ಇಬ್ಬರೂ ಮುಸ್ಲಿಮರು, ಒಬ್ಬರಿಗೆ ಬೇರೆಡೆ ಕೆಲಸ ದೊರೆತಿದೆ. ಮತ್ತೊಬ್ಬರು ಪ್ರಕೃತದಲ್ಲಿ ರೈಲ್ವೆ ಕಾರ್ಮಿಕ ವಿಭಾಗದ ಕಾರ್ಯವಾಹಿ ಇನ್‌ಸ್ಪೆಕ್ಟರ್ ಆಗಿದ್ದಾರೆ.

## ೧೪೦
## ರೈಲ್ವೆ ಕಾರ್ಮಿಕ ವಿಭಾಗದಲ್ಲಿ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿಗಳು**

**೩. ಶ್ರೀ ಮಹಮ್ಮದ್ ಹುಸೇನ್ ಚೌಧುರಿ :** ಅ) ಡಾಕಾ, ತಾತಾನಗರ, ಅಜ್ಮೀರ್, ಅಸನ್‌ಸಾಲ್ ಮತ್ತು ಜಲಪೈಗುರಿಗೆ ನೇಮಿಸಿ ಕಳುಹಿಸಲಾಗಿದ್ದ ಕಾರ್ಮಿಕ ಇಲಾಖೆಯ ಐವರು ಇನ್‌ಸ್ಪೆಕ್ಟರ್‌ಗಳು, ಪ್ರತಿನಿಯೋಜನೆಯ ಮೇಲೆ ಕೇಂದ್ರ ನಾಗರಿಕ ಸರಬರಾಜು ಇಲಾಖೆಗೆ ನಾಗರಿಕ ಕಾರ್ಮಿಕ ಕಲ್ಯಾಣಾಧಿಕಾರಿಗಳಾಗಿ ಹೋಗಿರುವುದು ನಿಜವೆ?

ಆ) ದೀರ್ಘಾವಧಿಯಿಂದ ಮುಂದುವರಿದುಕೊಂಡು ಬಂದಿರುವ, ಯುದ್ಧಾವಧಿಯವರೆಗೂ ಮುಂದುವರಿಯಲಿರುವ, ಈ ಐದು ಪ್ರತಿಯೋಜನೆಯ ಸ್ಥಾನಗಳಿಗೆ, ತರಬೇತಿಹೊಂದಿದ, ಆರು ತಿಂಗಳಿಗಿಂತಲೂ ಹೆಚ್ಚು ತಾತ್ಕಾಲಿಕ ಸೇವೆ ಸಲ್ಲಿಸಿರುವ ಇಬ್ಬರು ಮುಸ್ಲಿಮ್ ಕೋಮಿನ ಇನ್‌ಸ್ಪೆಕ್ಟರ್‌ಗಳನ್ನು ಅತಿಕ್ರಮಿಸಿ ಐವರು ಹಿಂದು ದಲಿತ ಕೋಮಿನವರನ್ನು ಇನ್‌ಸ್ಪೆಕ್ಟರ್‌ಗಳಾಗಿ, ಸಂಧಾನಾಧಿಕಾರಿಗಳು (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಅಧೀಕ್ಷಕರು ನಿರಂಕುಶವಾಗಿ ಭರ್ತಿಮಾಡಿ, ನೇಮಕಮಾಡಿರುವುದು ನಿಜವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು ; ಆದರೆ ಎಲ್ಲ ಪ್ರತಿನಿಯೋಜನೆಗಳು ನಾಗರಿಕ ಪೂರೈಕೆ ಇಲಾಖೆಗಲ್ಲ ; ಅಥವಾ ನಾಗರಿಕ ಕಾರ್ಮಿಕ ಕಲ್ಯಾಣಾಧಿಕಾರಿಗಳಾಗಿ ಅಲ್ಲ.

ಆ) ಇಲ್ಲ ; ಇದೇ ಸದಸ್ಯರ ಪ್ರಶ್ನೆ ೧, ವಿಭಾಗ 'ಇ' ಗೆ ಕೊಟ್ಟ ಉತ್ತರದಲ್ಲಿ ಅದು ಸ್ಪಷ್ಟವಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪ ; ಪು ೨೫.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪ ; ಪು ೨೫.

## ೧೪೧
## ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ*

**೪. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಇಬ್ಬರು ಮುಸ್ಲಿಮರನ್ನು – ಅದಾಗಿ, ಶ್ರೀ ಎ. ಹಮೀದ್, ಮತ್ತು ಶ್ರೀ ಕರೀಂ, ಸಿಖ್ ಕೋಮಿನವರಾದ ಶ್ರೀ ಟಿ. ಸಿಂಗ್ ಮತ್ತು ಇಬ್ಬರು ಸವರ್ಣ ಹಿಂದುಗಳು – ಪ್ರತಿನಿಯೋಜಿಸಿದ್ದರಿಂದಲೇ ಐದು ದೀರ್ಘಾವಧಿ ಕಾರ್ಯನಿರ್ವಹಣಾ ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳ ಹುದ್ದೆಗಳು ತೆರವಾದುವು ಎಂಬುದು ನಿಜವೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಪ್ರತಿನಿಯೋಜನೆಯಿಂದಲೇ ಸ್ಥಾನಗಳು ತೆರವಾದದ್ದು ಎಂಬುದು ನಿಜ.

## ೧೪೨
## ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ*

**೫. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ಐವರು ದಲಿತ ವರ್ಗದವರನ್ನು, ಯಾವುದೇ ಜಾಹೀರಾತು ಪ್ರಕಟನೆ ಇಲ್ಲದೆ, ಆಯ್ಕೆ ಸಮಿತಿಯ ಮೂಲಕ ಆಯ್ಕೆಮಾಡದೆ, ನೇರವಾಗಿ ನೇಮಿಸಿಕೊಳ್ಳಲಾಯಿತು ಎಂಬುದು ನಿಜವೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ ; ದಲಿತ ವರ್ಗದ ಮೂವರು ಅಭ್ಯರ್ಥಿಗಳನ್ನು ಮಾತ್ರ ನೇಮಕಮಾಡಲಾಯಿತು. ಸ್ಥಾನ ಭರ್ತಿಯನ್ನು ಜಾಹಿರಾತಿನ ಮೂಲಕವಾಗಲಿ, ಆಯ್ಕೆ ಸಮಿತಿಯ ಮೂಲಕವಾಗಲಿ ಮಾಡಲಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೫

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೫.

# ೧೪೩
# ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳಾಗಿ ದಲಿತ ವರ್ಗದವರ ನೇಮಕಾತಿ **

**೬. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಅ) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರು, ಯಾವುದೇ ಆಯ್ಕೆ ಮೂಲಕವಲ್ಲದೆ ಎಲ್ಲ ಐವರು ದಲಿತ ವರ್ಗದ ಇನ್‌ಸ್ಪೆಕ್ಟರ್‌ಗಳನ್ನು ನೇಮಕಮಾಡಿರುವುದು ಸಮರ್ಥನೀಯವೇ ಎಂದು ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? ಅವರೆಲ್ಲರೂ ಆ ಅಧಿಕಾರಿಯ (ಅಥವಾ ತಮ್ಮ) ಸ್ವಂತ ಪ್ರಾಂತ್ಯವಾದ ಬಾಂಬೆಗೆ ಸೇರಿದ ಬಂಧುವರ್ಗದವರೆ?

ಆ) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ವರ್ಗದ ಮೇಲ್ವಿಚಾರಕರು ತನ್ನ ಬಂಧುಗಳನ್ನು, ತನ್ನ ಕೋಮಿನವರನ್ನು ಕಾರಕೂನರಾಗಿ ಮತ್ತು ಇನ್‌ಸ್ಪೆಕ್ಟರ್‌ಗಳಾಗಿ ನೇಮಕಮಾಡಿರುವುದು ನ್ಯಾಯ ಸಮ್ಮತವೇ?

ಇತರ ಪ್ರಾಂತ್ಯಗಳಲ್ಲಿ ಅರ್ಹ ದಲಿತ ವರ್ಗದ ಅಭ್ಯರ್ಥಿಗಳಿರುವರೆಂಬುದು ಸನ್ಮಾನ್ಯ ಸದಸ್ಯರಿಗೆ ತಿಳಿದಿಲ್ಲವೆ?

ಇ) ಈ ಮುನ್ನ, ಒಮ್ಮೆ ಕಾರ್ಯನಿರ್ವಹಣ ಸ್ಥಾನದಲ್ಲಿ ವಿಶ್ವಾಸಾರ್ಹತೆಯಿಂದ ಇನ್‌ಸ್ಪೆಕ್ಟರ್ ಆಗಿ ಸೇವೆ ಸಲ್ಲಿಸಿದವರ ಹಕ್ಕೊತ್ತಾಯವನ್ನು ಏಕೆ ಪರಿಗಣಿಸಬಾರದು?

ಈ) ರೈಲ್ವೆ ಕಾರ್ಮಿಕ ಮೇಲ್ವಿಚಾರಕರು ಏಕೆ ಆಯ್ಕೆಸಮಿತಿಯ ಅಭಿಪ್ರಾಯ ಪಡೆಯದೆ ಇನ್‌ಸ್ಪೆಕ್ಟರ್‌ಗಳನ್ನು ನೇಮಿಸಿದರು?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ), (ಇ) ಮತ್ತು (ಈ) ಸಂಬಂಧಿಸಿದಂತೆ, ಹಿಂದಿನ ಪ್ರಶ್ನೆಗೆ ನಾನು ಕೊಟ್ಟ ಉತ್ತರವನ್ನು ಗಮನಿಸಿ, ನೇಮಕಗೊಂಡ ಅಭ್ಯರ್ಥಿಗಳು ಸಂಧಾನಾಧಿಕಾರಿ (ರೈಲ್ವೆ) ಮತ್ತು ಕಾರ್ಮಿಕ ಮೇಲ್ವಿಚಾರಕರ ಸಂಬಂಧಿಗಳಲ್ಲ.

ಆ) ಇನ್‌ಸ್ಪೆಕ್ಟರ್‌ಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಹನ್ನೊಂದು ಮಂದಿ ಕಾರಕೂನರಲ್ಲಿ ಒಬ್ಬರು ಮಾತ್ರ ಅನುಸೂಚಿತ ಜಾತಿಗೆ ಸೇರಿದವರು. ಅವರನ್ನು ಸಹ, ಹಾಲಿ ಸಂಧಾನಾಧಿಕಾರಿ (ರೈಲ್ವೇ) ನೇಮಿಸಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೫–೨೬.

## ೧೪೪
## ರೈಲ್ವೆ ಕಾರ್ಮಿಕ ಇಲಾಖೆಯಲ್ಲಿ ದಲಿತ ವರ್ಗದ ಇನ್‌ಸ್ಪೆಕ್ಟರ್‌ಗಳ ನೇಮಕಾತಿ *

**೭. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಎಲ್ಲ ಕೋಮಿನವರ ನ್ಯಾಯಬದ್ಧ ಹಕ್ಕಿಗೆ ಚ್ಯುತಿ ಬರದಂತೆ, ತೆರವಾಗಿರುವ ರೈಲ್ವೆ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳ ಐದು ಸ್ಥಾನಕ್ಕೆ ಆಯ್ಕೆ ಸಮಿತಿಯ ಮೂಲಕ ಸ್ಥಾನ ಭರ್ತಿಮಾಡಬಹುದಾದ ವಿಹಿತ ಸಲಹೆಯನ್ನು ಮಾನ್ಯ ಕಾರ್ಮಿಕ ಸದಸ್ಯರು ಒಪ್ಪುವರು ಎಂದು ಭಾವಿಸಬಹುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇನ್‌ಸ್ಪೆಕ್ಟರ್‌ಗಳ ಶ್ರೇಣಿಯ ತೆರವಾಗಿರುವ ಸ್ಥಾನವನ್ನು ಭರ್ತಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

## ೧೪೫
## ಸಂಧಾನಾಧಿಕಾರಿ (ರೈಲ್ವೆ) ಮತ್ತು ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿರುವ ಬೆಂಗಾಲಿ ಇನ್‌ಸ್ಪೆಕ್ಟರ್‌ಗಳು **

**೮. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು, ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಕಛೇರಿಯಲ್ಲಿ ಎಷ್ಟು ಮಂದಿ ಬೆಂಗಾಲಿ ಇನ್‌ಸ್ಪೆಕ್ಟರ್‌ಗಳಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸುವರೆ? ಒಂದು ಪಕ್ಷ ಒಬ್ಬರೇ ಬೆಂಗಾಲಿ ಇರುವುದಾದರೆ, ಏತಕ್ಕೆ ಹೆಚ್ಚು ಮಂದಿ ಬೆಂಗಾಲಿಗಳನ್ನು ನೇಮಿಸಿಕೊಳ್ಳಲಿಲ್ಲ?

ಆ) ಅವಕಾಶಗಳನ್ನು ಎದುರುನೋಡುತ್ತಿರುವ, ಅರ್ಹ ಬೆಂಗಾಲಿ ಹಿಂದು ಮತ್ತು ಮುಸ್ಲಿಮರು ಸಾಕಷ್ಟು ಸಂಖ್ಯೆಯಲ್ಲಿರುವುದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಬ್ಬರು. (ಆ) ಸಾಕಷ್ಟು ಸಂಖ್ಯೆಯಲ್ಲಿ ಅರ್ಹ ಬೆಂಗಾಲಿಗಳು ನೇಮಕಾತಿಗೆ ದೊರೆಯಬಹುದು. ಆದರೆ ಅಭ್ಯರ್ಥಿಯ ಪ್ರಾಂತ್ಯವನ್ನು ಗಮನಿಸಿ ನೇಮಕಾತಿಗಳನ್ನು ಮಾಡಲಾಗುತ್ತದೆ ಎಂಬ ನಿಮ್ಮ ಪ್ರಶ್ನೆಯ ಹಿಂದಿರುವ ಸೂಚನೆ ಸರಿಯಾದುದಲ್ಲ.

---

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭।೨।೧೯೪೪; ಪು. ೨೬

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪, ಪು. ೨೬.

# ೧೪೬
# ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರಾದ ಶ್ರೀ ಡಿ.ಜಿ. ಜಾಧವ್ ಅವರ ಅರ್ಹತೆಗಳು*

**೯. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಅ) ಶ್ರೀ ಡಿ. ಜಿ ಜಾಧವ್ ಅವರು ಪ್ರಕೃತ ಭಾರತ ಸರ್ಕಾರದ ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರಾಗಿರುವುದು ನಿಜವೆ? ಹಾಗಿದ್ದಲ್ಲಿ ಅವರ ಅರ್ಹತೆಗಳೇನು? ಅವರು ಈ ಮೊದಲು ಸರ್ಕಾರಿ ಸೇವೆಯಲ್ಲಿದ್ದರೆ? ಅಥವಾ ರೈಲ್ವೆ ಸೇವೆಯಲ್ಲಿದ್ದರೆ? ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕರ ಮೇಲ್ವಿಚಾರಕರ ಕಛೇರಿಯಲ್ಲಿ ಮುಖ್ಯ ಕಾರಕೂನರಾಗಿದ್ದ ಶ್ರೀ ಅಡೂರ್ ರಹಮಾನ್‌ಪುರಿ ಅವರನ್ನು ಇನ್‌ಸ್ಪೆಕ್ಟರಾಗಿ ಹಿಂಬಡ್ತಿ (ಪದಾವನತಿ) ಗೊಳಿಸಿರುವುದು ನಿಜವೆ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂಬುದನ್ನು ಮಾನ್ಯ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು ; ಶ್ರೀ ಡಿ.ಜಿ. ಜಾಧವ್ ಪ್ರಕೃತದಲ್ಲಿ ಆ ಹುದ್ದೆಯಲ್ಲಿದ್ದಾರೆ. ಈ ಹಾಲಿ ನೇಮಕಕ್ಕೆ ಮುನ್ನ ಶ್ರೀ ಜಾಧವ್ ಅವರು ಬಾಂಬೆ ವಿಧಾನಸಭೆಯ ಚುನಾಯಿತ ಸದಸ್ಯರಾಗಿದ್ದರು. ಅವರು ಬಾಂಬೆಯ ಹಿಂದುಳಿದ ವರ್ಗ ಮಂಡಲಿಯ ಚುನಾಯಿತ ಸದಸ್ಯರು ಮಾತ್ರವಲ್ಲದೆ, ಅನೇಕ ಆಯ್ಕೆ ಸಮಿತಿಗಳಲ್ಲಿಯೂ, ಅಭಿವೃದ್ಧಿ ಮಂಡಲಿಗಳಲ್ಲಿಯೂ, ಸಲಹಾ ಮಂಡಲಿಗಳಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಮತ್ತು ಪೂರ್ವ ಖಾಂದೇಶ್ ಜಿಲ್ಲೆಯ ಸಹಕಾರ ಸಂಘಗಳಲ್ಲಿ ಮಧ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದಾರೆ.

ಅವರ ವಿದ್ಯಾರ್ಹತೆ ಬಿ.ಎ., ಎಲ್.ಎಲ್.ಬಿ, ಬಿ.ಎ. ಪದವಿಯನ್ನು ೧೯೩೪ರಲ್ಲಿ ಹಾಗೂ ಎಲ್‌ಎಲ್.ಬಿ, ಪದವಿಯನ್ನು ೧೯೪೦ರಲ್ಲಿ ಗಳಿಸಿದ್ದಾರೆ. ಅವರು ಈ ಮೊದಲು ಸರ್ಕಾರಿ ಸೇವೆಯಲ್ಲಾಗಲಿ ಅಥವಾ ರೈಲ್ವೆ ಸೇವೆಯಲ್ಲಾಗಲಿ ಇರಲಿಲ್ಲ.

ಆ) ಮಾನ್ಯ ಸದಸ್ಯರು ಬಹುಶಃ ಶ್ರೀ ಅಬ್ದುಲ್ ಹಮೀದ್‌ಪುರಿ ಅವರನ್ನು ಕುರಿತು ಸೂಚಿಸಿರಬಹುದು. ಅವರನ್ನು ಮುಖ್ಯ ಕಾರಕೂನ ಸೇವಾವಧಿ ಮುಗಿದ ಅನಂತರ ಅವರ ಖಾಯಂ ಹುದ್ದೆಯಾದ ಇನ್‌ಸ್ಪೆಕ್ಟರ್ ಹುದ್ದೆಗೆ ವಾಪಸ್ಸು ಕಳುಹಿಸಲಾಯಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪, ಪು. ೨೬.

## ೧೪೭
## ಸಂಧಾನಾಧಿಕಾರಿಗಳು (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರು*

**೧೦. ಶ್ರೀ ಮಹಮ್ಮದ್ ಹುಸೇನ್ ಚೌಧರಿ :** ಅ) ಪ್ರಾರಂಭದಿಂದಲೂ ಯಾರು ಯಾರು ಸಂಧಾನಾಧಿಕಾರಿಗಳು (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರಾಗಿದ್ದರೆಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? (ಆ) ಒಬ್ಬ ಐ.ಸಿ.ಎಸ್. ಅಧಿಕಾರಿಯನ್ನು ಅಥವಾ ಒಬ್ಬ ಅನುಭವಿ ಅಧಿಕಾರಿಯನ್ನು ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರಾಗಿ ನೇಮಿಸುವುದು ಅಪೇಕ್ಷಣೀಯವೆಂದು ಪರಿಗಣಿಸುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಸಂಯುಕ್ತ ಹುದ್ದೆಯನ್ನು ಶ್ರೀ ಜಾಧವ್ ಅವರ ನೇಮಕಕ್ಕೆ ಮುನ್ನ ಹೊಂದಿದ್ದವರು ಶ್ರೀ ಖಲೀಲ್, ಐ.ಸಿ.ಎಸ್. ಅವರು ಮಾತ್ರ.

ಆ) ಐ.ಸಿ.ಎಸ್. ಅಧಿಕಾರಿ ಅಥವಾ ಬೇರೆ ಯಾರಾದರೂ ಸರ್ಕಾರಿ ಅಧಿಕಾರಿಯಾಗಿ ಅನುಭವವಿರುವವರು ಮಾತ್ರ ಈ ಹುದ್ದೆಯನ್ನು ಹೊಂದಲು ಅರ್ಹರೆಂದು ನಾನು ಪರಿಗಣಿಸುವುದಿಲ್ಲ.

## ೧೪೮
## ಬ್ರಿಟಿಷ್ ಭಾರತ ಮತ್ತು ರಾಜ್ಯಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆ ಇತ್ಯಾದಿ**

**೧೯. ಶ್ರೀ ಕೆ.ಸಿ. ನಿಯೋಗಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ವಿವರಗಳನ್ನು ಕೊಡುವರೆ?

ಅ) ೧೯೪೧, ೧೯೪೨ ಮತ್ತು ೧೯೪೩ರಲ್ಲಿ ಬ್ರಿಟಿಷ್ ಭಾರತ ಮತ್ತು ರಾಜ್ಯಗಳಲ್ಲಿ ಕಲ್ಲಿದ್ದಲಿನ ಉತ್ಪಾದನೆಯ ಪ್ರತ್ಯೇಕ ವಿವರ.

ಆ) ೧೯೪೧, ೧೯೪೨ ಮತ್ತು ೧೯೪೩ನೆಯ ವರ್ಷಗಳ ಡಿಸೆಂಬರ್ ೩೧ರಂದು ಬ್ರಿಟಿಷ್ ಭಾರತ ಮತ್ತು ರಾಜ್ಯಗಳಲ್ಲಿದ್ದ ಕಲ್ಲಿದ್ದಲ್ಲಿನ ದಾಸ್ತಾನು, ಮತ್ತು

ಇ) ಬ್ರಿಟಿಷ್ ಭಾರತ ಮತ್ತು ರಾಜ್ಯಗಳ ಗಣಿಯಿಂದ, ಗಣಿಯ ಸ್ವಂತ ಬಳಕೆಯನ್ನು ಒಳಗೊಂಡಂತೆ, ೧೯೪೧, ೧೯೪೨ ಮತ್ತು ೧೯೪೩ನೆಯ ವರ್ಷಗಳಲ್ಲಿ ರವಾನೆಯಾದ ಕಲ್ಲಿದ್ದಲಿನ ಪ್ರಮಾಣ.

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ೧೯೪೧ ಮತ್ತು ೧೯೪೨ನೆಯ ವರ್ಷಗಳಲ್ಲಿ ಬ್ರಿಟಿಷ್ ಭಾರತ ಮತ್ತು ರಾಜ್ಯಗಳಲ್ಲಿ ಕಲ್ಲಿದ್ದಲ್ಲಿನ ಉತ್ಪಾದನೆ ಈ ಮುಂದೆ ವಿವರಿಸಿದಂತೆ ಇದೆ :

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪, ಪು. ೨೬–೨೭.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪ ; ಪು. ೩೭–೩೮.

| | ೧೯೪೧ | ೧೯೪೨ |
|---|---|---|
| | [ಟನ್‌ಗಳಲ್ಲಿ] | |
| ಬ್ರಿಟಿಷ್ ಭಾರತ | ೨೬,೦೮೮,೬೦೦ | ೨೫,೯೪೯,೮೦೦ |
| ರಾಜ್ಯಗಳು | ೩,೨೬೦,೪೦೦ | ೩,೩೮೫,೧೦೦ |

ಆ) ಬ್ರಿಟಿಷ್ ಭಾರತದಲ್ಲಿ ೧೯೪೧ರ ಡಿಸೆಂಬರ್ ೩೧ರಲ್ಲಿದ್ದ ಕಲ್ಲಿದ್ದಲ್ಲಿನ ದಾಸ್ತಾನು ೨,೭೬೭,೫೦೦ ಟನ್ನುಗಳು. ೧೯೪೨ನೇ ಡಿಸೆಂಬರ್ ೩೧ರಲ್ಲಿದ್ದ ದಾಸ್ತಾನು, ೨,೫೨೧,೬೦೦ ಟನ್ನುಗಳು ಎಂದು ಸಿ.ಐ.ಎಂ. (C.I.M) ಅಂದಾಜು ಮಾಡಿದೆ. ಗಣಿಗಳು ಒದಗಿಸಿರುವ ಈ ಅಂಕಿ ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿವೆ ಎದು ಸಿ.ಐ.ಎಂ. (C.I.M) ತನಿಖೆ ಮಾಡಿದಾಗ ಗೊತ್ತಾಗಿದೆ. ರಾಜ್ಯಗಳ ದಾಸ್ತಾನಿನ ಅಂಕಿಅಂಶಗಳು ದೊರೆತಿಲ್ಲ.

ಇ) ಬ್ರಿಟಿಷ್ ಭಾರತದಲ್ಲಿ ೧೯೪೧ ಮತ್ತು ೧೯೪೨ರಲ್ಲಿ ಕ್ರಮವಾಗಿ ರವಾನೆಯಾದ ಕಲ್ಲಿದ್ದಲಿನ ಪ್ರಮಾಣ, ಗಣಿಯ ಸ್ವಂತ ಬಳಕೆಯನ್ನು ಒಳಗೊಂಡಂತೆ, ೨೪,೨೫೭,೭೦೦ ಟನ್ನುಗಳು ಮತ್ತು ೨೨,೬೯೫,೮೦೦ ಟನ್ನುಗಳು. ರಾಜ್ಯಗಳಲ್ಲಿ ೧೯೪೧ ಮತ್ತು ೧೯೪೨ರಲ್ಲಿ ಕ್ರಮವಾಗಿ, ರವಾನೆಯಾದ ಕಲ್ಲಿದ್ದಲಿನ ಪ್ರಮಾಣ, ಗಣಿಯ ಸ್ವಂತ ಬಳಕೆಯನ್ನು ಹೊರತುಪಡಿಸಿ, (ಕ್ರಮವಾಗಿ) ೩,೨೪೩,೨೦೦ ಟನ್ನುಗಳು ಮತ್ತು ೩,೩೭೦,೫೦೦ ಟನ್ನುಗಳು. ರಾಜ್ಯಗಳಲ್ಲಿ, ಗಣಿಯ ಸ್ವಂತ ಬಳಕೆಯ ಕಲ್ಲಿದ್ದಲಿನ ಪ್ರಮಾಣದ ವಿವರಗಳು ಲಭ್ಯವಿಲ್ಲ. ಸದ್ಯಕ್ಕೆ ೧೯೪೩ರ ಅಂಕಿಅಂಶಗಳನ್ನು ಬಹಿರಂಗಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಉಚಿತವಲ್ಲ.

## ೧೪೯
## ಕಲ್ಲಿದ್ದಲಿನ ಪರಿಸ್ಥಿತಿ*

**೨೦. ಶ್ರೀ ಕೆ.ಸಿ. ನಿಯೋಗಿ :** ಅ) ಸದ್ಯದ ಕಲ್ಲಿದ್ದಲಿನ ಉತ್ಪಾದನೆಯ ಪ್ರಮಾಣವು ದೇಶದ ಬೇಡಿಕೆಯ ಅಗತ್ಯಕ್ಕಿಂತ ಎಷ್ಟು ಕಡಮೆಯಿದೆ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ತಿಳಿಸುವರೆ?

ಆ) ಇತ್ತೀಚೆಗೆ ಗಣಿಗಳ ಪ್ರಧಾನ ತಪಾಸಣಾಧಿಕಾರಿಗಳು (Chief Inspector) ಇಲಾಖೆಯ ವಿವಿಧ ಗಣಿಗಳ ದಾಸ್ತಾನನ್ನು ಪರಿಶೀಲಿಸಿದಾಗ ಆಯಾ ಗಣಿಗಳು ನಮೂದಿಸಿದ್ದ ದಾಸ್ತಾನು ಪ್ರಮಾಣದಲ್ಲಿ ಹೆಚ್ಚಿನ ಕೊರತೆ ಕಂಡುಬಂದದ್ದು ನಿಜವೆ? ಹಾಗಾದಲ್ಲಿ ಆ ಕೊರತೆಯ ಪ್ರಮಾಣವೆಷ್ಟು? ಮತ್ತು ಅದಕ್ಕೆ ಸಮಜಾಯಿಷಿ ಏನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ರಾಷ್ಟ್ರದ ಅಗತ್ಯಕ್ಕಿಂತ ಯಾವ ಪ್ರಮಾಣದಲ್ಲಿ ಕಲ್ಲಿದ್ದಲಿನ ಉತ್ಪಾದನೆ ಕಡಮೆ ಇದೆ ಎಂಬುದನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೩೮.

ಆ) ೧೯೪೩ರ ಮೇ ಮಾಸಾಂತ್ಯದಲ್ಲಿ, ಕಲ್ಲಿದ್ದಲಿನ ದಾಸ್ತಾನನ್ನು ಪರಿಶೀಲಿಸಿದಾಗ ಎರಡು ಮಿಲಿಯನ್ (ಎರಡು ದಶಲಕ್ಷ) ಟನ್ನಿಗಿಂತಲು ಹೆಚ್ಚು ಕೊರತೆ ಇದ್ದದ್ದು ಪತ್ತೆಯಾಯಿತು. ೧೯೪೨ರ ಸಾಲಿನಲ್ಲಿ ಅನೇಕ ಗಣಿಗಳು, ಬಹುಶಃ ಹೆಚ್ಚು ರೈಲ್ವೆ ಸರಕು ಬಂಡಿಗಳ ಹಂಚಿಕೆ ಪಡೆದುಕೊಳ್ಳುವ ಉದ್ದೇಶದಿಂದ, ಕಾಲ್ಪನಿಕ ಅಂಕಿಅಂಶಗಳನ್ನು ಕೊಟ್ಟಿವೆ. ಅಸಮರ್ಪಕ ಮಾಹಿತಿ ಕೊಟ್ಟ ಗಣಿಗಳ ವಿರುದ್ಧ ಕ್ರಮಕೈಗೊಳ್ಳಲಾಗಿದೆ. ಈಗ ನಿಯತಕಾಲಿಕವಾಗಿ ತನಿಖೆಗಳನ್ನು ಮಾಡಲಾಗುತ್ತಿದೆ.

## ೧೫೦
## ಕಲ್ಲಿದ್ದಲು ಗಣಿಗಳ ಸುರಕ್ಷತಾ (ಅಡಕು) (Stowing) ತಿದ್ದುಪಡಿ ಮಸೂದೆ*

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಮಾನ್ಯರೇ, ನಾನು ೧೯೩೯ರ ಕಲ್ಲಿದ್ದಲು ಗಣಿಗಳ ಸುರಕ್ಷತಾ (ಅಡಕು) ಅಧಿನಿಯಮಕ್ಕೆ ತಿದ್ದುಪಡಿಯನ್ನು ಸೂಚಿಸಿ, ಒಂದು ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಶ್ರೀ ಅಬ್ದುರ್ ರಹೀಮ್) : ವಿಷಯವೇನೆಂದರೆ ೧೯೩೯ರ ಕಲ್ಲಿದ್ದಲು ಗಣಿ ಸುರಕ್ಷತಾ (ಅಡಕು) ಅಧಿನಿಯಮಕ್ಕೆ ತಿದ್ದುಪಡಿಯನ್ನು ಸೂಚಿಸಿ, ಮಸೂದೆಯನ್ನು ಮಂಡಿಸಲು ಅನುಮತಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೫೫.

# ೧೫೧
# ಕಲ್ಲಿದ್ದಲು ಗಣಿಗಳ ಒಳಭಾಗದ ಕೆಲಸಕ್ಕೆ ಮಹಿಳೆಯರ ನೇಮಕಾತಿಗೆ ಇದ್ದ ನಿಷೇಧ ರದ್ದು*

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮುಂದಿನ ಗೊತ್ತುವಳಿ ಶ್ರೀಮತಿ ರೇಣುಕಾರಾಯ್ ಅವರ ಹೆಸರಿನಲ್ಲಿದೆ. ಅವರು ಝುರಿಯಾ ಮತ್ತು ಅದರ ನೆರೆಹೊರೆಯ ಪ್ರದೇಶಗಳಲ್ಲಿರುವ ಕಲ್ಲಿದ್ದಲು ಗಣಿಗಳ ನೆಲತಳದಲ್ಲಿ ಕೆಲಸ ಮಾಡಲು ಮಹಿಳೆಯರಿಗೆ ಕೊಡಲಾಗಿರುವ ಅನುಮತಿಯ ಬಗ್ಗೆ ಚರ್ಚಿಸಲು ಇಚ್ಛಿಸುತ್ತಾರೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) : ಈ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಿಳಿಸಲು ಬಯಸುವ ಏಕೈಕ ಅಂಶವೆಂದರೆ, ಇದು ಇತ್ತೀಚಿನ ವಿದ್ಯಮಾನವಲ್ಲ. ನಿಷೇಧವನ್ನು ರದ್ದುಮಾಡಿರುವ ಮೂಲ ಪ್ರಕಟಣೆಗಳು ಎರಡು : ಒಂದು, ೨–೮–೧೯೪೩ರಂದು; ಮತ್ತೊಂದು ದಿನಾಂಕ ೧೮–೮–೧೯೪೩ರಂದು. ಸದ್ಯದ ೨೪–೧೧–೧೯೪೩ರ ಪ್ರಕಟಣೆ, ಈಗಾಗಲೇ ನಾನು ಉಲ್ಲೇಖಿಸಿರುವ ಆಗಸ್ಟ್ ೧೯೪೩ರ ಪ್ರಕಟಣೆಯ ಮುಂದುವರಿಕೆ ಮಾತ್ರ ಆಗಿದೆ. ಆಗಸ್ಟ್ ಪ್ರಕಟಣೆಯ ಅನಂತರ ಒಂದು ವಿಧಾನಸಭಾಧಿವೇಶನವೂ ಜರುಗಿದೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹಿಮ್) : ಆ ಪ್ರಕಟಣೆ ಏನು? ಗಣಿಗಳ ಒಳಭಾಗದಲ್ಲಿ ದುಡಿಯಲು ಮಹಿಳೆಯರಿಗೆ ಅನುಮತಿಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು, ಈ ನಿಲುವಳಿ ಸೂಚನೆ ಔಪಚಾರಿಕ ಆಕ್ಷೇಪಣೆಯನ್ನು ಎತ್ತಿದ್ದರೂ ಇದರ ಮೇಲೆ ನನ್ನ ನಿಲುವನ್ನು ಹೇರಲು ಇಷ್ಟವಿಲ್ಲ. ಒಂದು ವೇಳೆ ಸದನವು ಈ ನಿಲುವಳಿಯನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಭಾವಿಸಿದರೆ ನನ್ನ ಅಭ್ಯಂತರವೇನೂ ಇಲ್ಲ.

**ಶ್ರೀ ಎನ್.ಎಂ. ಜೋಷಿ** (ನಾಮಕರಣಗೊಂಡ ಅಧಿಕಾರೇತರರು): ಈ ಗೊತ್ತುವಳಿಯ ಬಗ್ಗೆ ನಾನೊಂದು ಮಾತು ಹೇಳಬಹುದೆ ? ಭಾರತ ಸರ್ಕಾರವು ಕಳೆದ ಶಾಸನಸಭಾ ಅಧಿವೇಶನಕ್ಕೂ ಮುನ್ನ ಈ ಪ್ರಕಟನೆಯನ್ನು ಹೊರಡಿಸಿದ್ದರೂ ಪ್ರಧಾನ ಕಲ್ಲಿದ್ದಲು ಗಣಿಗಾರಿಕೆ ಪ್ರದೇಶಗಳಲ್ಲಿ ಇದನ್ನು ಜಾರಿಗೆ ಕೊಟ್ಟದ್ದು ತೀರ ಇತ್ತೀಚೆಗೆ. ಆದ್ದರಿಂದ ಈ ವಿಷಯವು ಅತ್ಯಂತ ಮುಖ್ಯವಾದ, ಮತ್ತು ಇತ್ತೀಚೆಗೆ ಸಂಭವಿಸಿದ್ದಾಗಿದೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಆಗಸ್ಟ್ ತಿಂಗಳ ಪ್ರಕಟನೆ ಝುರಿಯಾ ಮತ್ತು ನೆರೆಹೊರೆ ಪ್ರದೇಶಗಳಿಗೆ ಅನ್ವಯಿಸಿಲ್ಲವೆ ?

**ಶ್ರೀ ಎನ್.ಎಂ. ಜೋಷಿ :** ಇಲ್ಲ.

**ಮಾನ್ಯ ಅಧ್ಯಕ್ಷರು :** ಈ ಪ್ರದೇಶಗಳು ಪ್ರಕಟಣೆಯ ವ್ಯಾಪ್ತಿಯಿಂದ ಹೊರತಾಗಿದ್ದವೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ. ನಾವು ಹಂತ ಹಂತವಾಗಿ ಮುಂದುವರಿದಿದ್ದೆವು. ಭಾರತ ಸರ್ಕಾರದ ನಿಷೇಧ ರದ್ದತಿಯ ಈ ಮೊದಲ ಆಶಯ ವ್ಯಕ್ತವಾದುದು ೧೯೪೩ರ ಆಗಸ್ಟ್ ೨ ರಂದು. ಅದು ಮಧ್ಯಪ್ರಾಂತ ಮತ್ತು ಬೇರಾರ್ ಗಣಿಗಳಿಗೆ ಅನ್ವಯಿಸಿತ್ತು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭– ೨–೧೯೪೪; ಪು. ೯೩.

**ಶ್ರೀಮತಿ ರೇಣುಕಾರಾಯ್** (ನಾಮಕರಣಗೊಂಡ ಅಧಿಕಾರೇತರರು) : ೧೯೪೩ರ ಆಗಸ್ಟ್ ಎರಡು ಮತ್ತು ಹದಿನೆಂಟರ ದಿನಾಂಕಗಳ ಪ್ರಕಟಣೆಯ ವಿರುದ್ಧ ಪ್ರತಿಭಟನೆಗಳಾದುವು. ಆದರೆ ಆ ಪ್ರತಿಭಟನೆಗಳನ್ನು ಸರ್ಕಾರ ಲಕ್ಷಿಸಲಿಲ್ಲ. ಹೇಗೂ ಇರಲಿ, ಝರಿಯಾ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ. ಅವುಗಳಿಗೆ ಸಂಬಂಧಿಸಿದ ಪ್ರಕಟಣೆಗಳು ಹೊರಬಂದದ್ದು ಹಿಂದಿನ ಶಾಸನಸಭಾಧಿವೇಶನದ ನಂತರ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಹಾಗಾದರೆ ಗೊತ್ತುವಳಿಯನ್ನು ಚರ್ಚೆಗೆ ತೆಗೆದುಕೊಳ್ಳಲು, ಸನ್ಮಾನ್ಯ ಸದಸ್ಯರ ಆಕ್ಷೇಪಣೆ ಇಲ್ಲವಾಗಿ, ಅದನ್ನು ೪ ಘಂಟೆಗೆ ಚರ್ಚೆಗೆ ತೆಗೆದುಕೊಳ್ಳಲಾಗುವುದು.

## ೧೫೨
## ಭಾರತದಲ್ಲಿ ಕಲ್ಲಿದ್ದಲಿನ ಸಂರಕ್ಷಣೆ*

**೮೦. ಶ್ರೀ ಕೆ.ಸಿ. ನಿಯೋಗಿ :** ಅ) ರಾಂಚಿಯ ನಂಕುಮ್ಮಿನ ಭಾರತೀಯ ಅರಗು ಸಂಶೋಧನಾ ಸಂಸ್ಥೆಯ ನಿರ್ದೇಶಕರೂ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಲಿಯ ಇಂಧನ ಸಂಶೋಧನಾ ಸಮಿತಿಯ ಅಧ್ಯಕ್ಷರೂ ಆದ ಡಾ॥ ಎಚ್.ಕೆ. ಸೆನ್ ಅವರು ೧೯೪೩ರ ಡಿಸೆಂಬರ್‌ನಲ್ಲಿ ಪಾಟ್ನ ವಿಶ್ವವಿದ್ಯಾನಿಯಲದ ಆಶ್ರಯದಲ್ಲಿ ನೀಡಿದ ಕೆಲವು ಉಪನ್ಯಾಸಗಳಲ್ಲಿ, ಭಾರತದಲ್ಲಿ ಕಲ್ಲಿದ್ದಲಿನ ಸಂರಕ್ಷಣೆಯ ಬಗ್ಗೆ ಸೂಚಿಸಿದ ಕೆಲವು ಪರಿಶೀಲನಾಂಶಗಳು ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) (ಅಲ್ಲದೆ) ಆಗಾಗ್ಗೆ ಇತರ ಹಲವು ತಜ್ಞರು ಸಹ ಈ ಪ್ರಶ್ನೆಯನ್ನು ಸರ್ಕಾರದ ಪರಿಗಣನೆಗಾಗಿ ಮುಂದಿಡುತ್ತಾ ಬಂದಿರುವುದು ನಿಜವೆ? ಹಾಗಿದ್ದಲ್ಲಿ, ಈ ಬಗ್ಗೆ ಇಲ್ಲಿಯವರೆಗೆ ಸರ್ಕಾರ ಯಾವ ಕ್ರಮತೆಗೆದುಕೊಂಡಿದೆ?

ಇ) ಡಾ॥ ಸೇನ್ ಅವರು ತಮ್ಮ ಉಪನ್ಯಾಸದಲ್ಲಿ ಸಲಹೆ ಮಾಡಿದಂತೆ, ಯಾವ ಪ್ರಮಾಣದಲ್ಲಿ ಮತ್ತು ಯಾವ ರೀತಿಯಲ್ಲಿ ಕಡಮೆ ದರ್ಜೆ ಕಲ್ಲಿದ್ದಲಿನ ಹೆಚ್ಚು ಬಳಕೆಗೆ, ಅದರಲ್ಲೂ ಮುಖ್ಯವಾಗಿ ರೈಲ್ವೆಯ ಬಳಕೆಗೆ – ಏನು ಕ್ರಮಕೈಗೊಳ್ಳಲಾಗಿದೆ? ಅಥವಾ ಭವಿಷ್ಯದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು?

ಈ) ದೇಶದಲ್ಲಿ ಕಲ್ಲಿದ್ದಲಿನ ಪರಿಸ್ಥಿತಿಯಲ್ಲಿರುವ ಸದ್ಯದ ಬಿಕ್ಕಟ್ಟನ್ನು ಮುಖ್ಯವಾಗಿ ಲಕ್ಷಿಸಿ, ಈ ಎಲ್ಲ ಪ್ರಶ್ನೆಗಳನ್ನು ತುರ್ತು ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಇಲ್ಲ. (ಆ) ಹೌದು.

(i) ಭಾರತ ಸರ್ಕಾರವು ೧೯೩೭ರಲ್ಲಿ "ಕಲ್ಲಿದ್ದಲು ಗಣಿಗಳ ಅಡಕು ಅಧಿನಿಯಮ"ವನ್ನು (Coal Mines Stowing Act) ಜಾರಿಗೆ ತಂದಿತು. ಈ ಅಡಕು ಮಂಡಲಿಯು (Stowing Board) ಸ್ವಯಂ ಅಡಕುವಿಕೆಗೆ ಇತ್ತ ನೆರವಿನಿಂದ ಉತ್ತಮ ದರ್ಜೆಯ ಕಲ್ಲಿದ್ದಲು ಸಂರಕ್ಷಿಸುವುದರಲ್ಲಿ ಗಣನೀಯವಾಗಿ ಯಶಸ್ವಿಯಾಯಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೦–೨–೧೯೪೪; ಪು. ೨೦೩–೪.

(ii) ೧೯೩೯ರಲ್ಲಿ ಜಾರಿಗೆ ತಂದ ಭಾರತೀಯ ಕಲ್ಲಿದ್ದಲು ಗಣಿ ನಿಬಂಧನೆಗಳ ಅನ್ವಯ ಕೆಲವು ಕಾಮಗಾರಿಗಳ ಪರಿವ್ಯಾಪ್ತಿಯ ಮೇಲೆ ನಿರ್ಬಂಧಗಳನ್ನು ಹೇರಲಾಯಿತು. ಇದರಿಂದ ಸುರಕ್ಷತಾ ಪ್ರಯೋಜನದೊಂದಿಗೆ ಕಲ್ಲಿದ್ದಲನ್ನು ಉಳಿತಾಯ ಮಾಡುವುದು ಸಹ ಸಾಧ್ಯವಾಯಿತು.

ಇ) ಕಡಿಮೆ ದರ್ಜೆ ಕಲ್ಲಿದ್ದಲು ಬಳಸುವ ಕೈಗಾರಿಕೆಗಳಿಗೆ ಉತ್ತಮ ದರ್ಜೆಯ ಕಲ್ಲಿದ್ದಲು ಸರಬರಾಜಾಗದಂತೆ ನಿಗಾವಹಿಸಲು ಕಲ್ಲಿದ್ದಲು ವಿತರಣಾ ನಿಯಂತ್ರಕರ ಕಛೇರಿಗೆ "ತಜ್ಞ–ಜ್ವಲನ–ಇಂಜಿನಿಯರುಗಳನ್ನು" (Expert Combastion Engineer)ಗಳನ್ನು ಕಳುಹಿಸಲಾಯಿತು. ಕಲ್ಲಿದ್ದಲು ಬಳಸುವ ಕಾರ್ಖಾನೆಗಳ ಪರಿವೀಕ್ಷಣೆಗೆ ಬಾಯ್ಲರ್ ಇನ್‌ಸ್ಪೆಕ್ಟರ್‌ಗಳ ಪ್ರಾತಿನಿಧ್ಯದ ಮೂಲಕ ಕಂಬಸ್ಟನ್ ಇಂಜಿನಿಯರ್‌ಗಳೊಡನೆ ಸಮಾಲೋಚನೆ ನಡೆಸಲು ಪ್ರಾಂತೀಯ ಸರ್ಕಾರಗಳ ನೆರವನ್ನು ಕೋರಲಾಯಿತು. ಸರ್ಕಾರವು ಇಂಧನ ಮಿತವ್ಯಯ ಚಳುವಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿರುವ ಅಂಶ ಕಲ್ಲಿದ್ದಲು ಆಯುಕ್ತರ ಅವಗಾಹನೆಗೆ ಬಂದಿದೆ. ರೈಲ್ವೆ ಬೇಡಿಕೆಯನ್ನು ಗಮನದಲ್ಲಿರಿಸಿಕೊಂಡು ಕಡಮೆ ದರ್ಜೆ ಕಲ್ಲಿದ್ದಲನ್ನೇ ಇತರ ಎಲ್ಲ ಸೇವೆಗಳಿಗೂ ಸಹ ಗರಿಷ್ಠ ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ.

ಈ) ಈ ಪ್ರಶ್ನೆಗಳು ಸದಾ ಸರ್ಕಾರದ ಗಮನದಲ್ಲಿರುತ್ತದೆ.

**ಶ್ರೀ ಕೆ.ಸಿ. ನಿಯೋಗಿ :** ನಾನು ಸೂಚಿಸಿದ ವಿಷಯಗಳ ಕಡೆ ಸನ್ಮಾನ್ಯ ಸದಸ್ಯರ ಗಮನ ಹರಿಯಲಿಲ್ಲವೆಂದು ತೋರುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಸೂಚಿಸಿದ ಉಪನ್ಯಾಸಗಳನ್ನು ನಾನು ಗಮನಿಸಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಆದರೆ ಅವು ಪತ್ರಿಕೆಗಳಲ್ಲಿ ವರದಿಯಾಗಿದ್ದವು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇರಬಹುದು.

**ಶ್ರೀ ಕೆ.ಸಿ. ನಿಯೋಗಿ :** ಆದರೆ, ಸನ್ಮಾನ್ಯ ಸದಸ್ಯರು ಅಂಥ ಪ್ರಮುಖ ವಿಷಯಗಳನ್ನು ಗಮನಿಸಿರಬೇಕೆಂದು ನಿರೀಕ್ಷಿಸುವುದು ತಪ್ಪೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪತ್ರಿಕೆಯಲ್ಲಿ ಪ್ರಕಟವಾದುದನ್ನೆಲ್ಲ ನೋಡಲಾಗುವುದಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಆದರೆ ಮಾನ್ಯರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ನನಗೊಂದು ಪ್ರತಿಯನ್ನು ಕಳುಹಿಸಲಿ. ಅದನ್ನು ನಾನು ನೋಡಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಇದು ಶೋಚನೀಯ ! ಸದ್ಯದ ಕಲ್ಲಿದ್ದಲು ನೀತಿಗೆ ಸಂಬಂಧಿಸಿದಂತೆ, ಕಡಿಮೆ ದರ್ಜೆ ಕಲ್ಲಿದ್ದಲನ್ನು ಸಾಧ್ಯವಾದಮಟ್ಟಿಗೂ, ಸಾಧ್ಯವಿರುವ ಗರಿಷ್ಠ ಪ್ರಮಾಣದವರೆಗೂ ಬಳಸಲು ಸೂಕ್ತ ಕ್ರಮಕೈಗೊಳ್ಳುವಿರೆಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರ ಆ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆಯೆಂದು ಈಗಾಗಲೇ ನಾನು ಹೇಳಿದ್ದೇನೆ.

**ಶ್ರೀ ಕೆ.ಸಿ. ನಿಯೋಗಿ :** ಸದ್ಯದ ಕಲ್ಲಿದ್ದಲು ನೀತಿಯ ಬಗ್ಗೆ, ಮಾನ್ಯ ಸದಸ್ಯರಿಂದ ನನಗೆ ಭರವಸೆ ಬೇಕಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಗತ್ಯವಾಗಿ.

**ಶ್ರೀ ಹೂಸಿನ್ ಭಾಯ್ ಎ. ಲಾಲ್ ಜೀ :** ಎಷ್ಟು ಮಂದಿ ತಜ್ಞರನ್ನು ನೇಮಕ ಮಾಡಲಾಗಿದೆ ಎಂದು

ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಪ್ರಶ್ನೆಗೆ (ಪೂರ್ವಭಾವಿ) ನೋಟಿಸ್ ಬೇಕು.

## ೧೫೭
## ಕಲ್ಲಿದ್ದಲು ಪರಿಸ್ಥಿತಿ*

**೮೨.ಸರ್ ಎಫ್. ಇ. ಜೇಮ್ಸ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಮಾಹಿತಿಯನ್ನು ಒದಗಿಸುವರೆ?

ಅ) ಭಾರತದಲ್ಲಿ ಕಲ್ಲಿದ್ದಲು ಉತ್ಪಾದನೆಯ ಇತ್ತೀಚಿನ ಪರಿಸ್ಥಿತಿ ಏನು? ಮತ್ತು ದಿನಾಂಕ ೧೯೪೫ರ ಡಿಸೆಂಬರ್ ೧ರಿಂದ ಉತ್ಪಾದನೆಯಲ್ಲಿ ಹೆಚ್ಚಳ ಅಥವಾ ಕೊರತೆ ಆಗಿದೆಯೇ? ಹಾಗಿದ್ದರೆ ಅದರ ಪರಿಣಾಮವೇನು?

ಆ) ಅನೇಕ ಕಲ್ಲಿದ್ದಲು ಗಣಿಗಳು ಕಾರ್ಯನಿರತವಾಗಿಲ್ಲ; ಅಥವಾ ಪೂರ್ಣ ಸಾಮರ್ಥ್ಯದ ಮಟ್ಟಕ್ಕೆ ಕಾರ್ಯನಿರ್ವಹಿಸುತ್ತಿಲ್ಲವೆಂಬುದು ನಿಮ್ಮ ಗಮನಕ್ಕೆ ಬಂದಿದೆಯೆ?

ಇ) ಮುಖ್ಯವಾಗಿ, ಕಾಮಗಾರಿ ವ್ಯವಸ್ಥೆ, ಆಹಾರ ಧಾನ್ಯಗಳು, ಯಾಂತ್ರೀಕರಣ, ಮತ್ತು ತೆರಿಗೆ ಹೊಂದಾಣಿಕೆಗೆ ಸಂಬಂಧಿಸಿದಂತೆ ಯಾವ ಕ್ರಮತೆಗೆದುಕೊಳ್ಳಲಾಗಿದೆ?

ಈ) (i) ಉದ್ದೇಶಪೂರ್ವಕವಾಗಿಯೇ ಗರಿಷ್ಠ ಪ್ರಮಾಣದ ಉತ್ಪಾದನೆಗೆ ಹಿಂದೆಗೆಯುತ್ತಿರುವ ಉದ್ಧಟ ಕಲ್ಲಿದ್ದಲು ಮಾಲೀಕರೊಡನೆ ವ್ಯವಹರಿಸಲು,

(ii) ಕಲ್ಲಿದ್ದಲಿನ ಸಮರ್ಥ ವಿತರಣೆಯನ್ನು ಖಾತ್ರಿಪಡಿಸಲು ಮತ್ತು ಅದು ಕಾಳಸಂತೆ ಸೇರುವುದನ್ನು ತಪ್ಪಿಸಲು – ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ?

ಉ) ರೈಲ್ವೆ ಕಲ್ಲಿದ್ದಲು ಗಣಿಗಳು ತಮ್ಮ ಪೂರ್ಣ ಸಾಮರ್ಥ್ಯದ ಮಟ್ಟಕ್ಕೆ ದುಡಿಯುತ್ತಿವೆಯೆ? ಇಲ್ಲದಿದ್ದಲ್ಲಿ, ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಕಲ್ಲಿದ್ದಲು ಉತ್ಪಾದನೆಯಲ್ಲಿ ಇತ್ತೀಚೆಗೆ ಸ್ವಲ್ಪ ಪ್ರಗತಿ ಕಂಡುಬಂದಿದೆ. ೧೯೪೫ರ ಡಿಸೆಂಬರ್ ಉತ್ಪಾದನೆ ನವೆಂಬರ್ ತಿಂಗಳ ಉತ್ಪಾದನೆಗಿಂತ ಶೇಕಡ ೨೦ಕ್ಕೂ ಅಧಿಕವಾಗಿತ್ತು. ಜನವರಿಯ ಅಂಕಿಅಂಶಗಳು ಇನ್ನೂ ಲಭ್ಯವಿಲ್ಲ. ಆದರೆ ಉತ್ಪಾದನೆ ಏರುಮುಖವಾಗಿದೆ ಎಂದು ಭಾವಿಸಲಾಗಿದೆ.

(ಆ) ಸುರಕ್ಷಿತವಾಗಿ, ಲಾಭದಾಯಕವಾಗಿ ಕೆಲಸ ನಿರ್ವಹಿಸುತ್ತಿರುವ ಯಾವುದೇ ಗಣಿ ಮುಚ್ಚಿದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ.

ಕಳೆದ ಮುಂಗಾರಿನಲ್ಲಿ ಪ್ರವಾಹದ ಪರಿಣಾಮವಾಗಿ ಗಣಿ ಜಲಮಯವಾದುದರಿಂದಲೋ ಕಾರ್ಮಿಕರ ಅಥವಾ ಯಂತ್ರಗಳ ಕೊರತೆಯಿಂದಲೋ ಬಹುಸಂಖ್ಯೆಯ ಗಣಿಗಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ಕಾರ್ಯನಿರ್ವಹಿಸಲು ಸಾಧ್ಯವಾಗಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೬; ಪು. ೨೦೫–೭

ಇ) (i) ಬಂಗಾಳ ಮತ್ತು ಬಿಹಾರದ ಕಲ್ಲಿದ್ದಲು ಬಯಲುಗಳಲ್ಲಿ , ಪ್ರಾರಂಭಕ್ಕೆ ಕಲ್ಲಿದ್ದಲನ್ನು ಕೊಡಲು, ತುಂಬಲು, ಸರ್ಕಾರದ ಕಾರ್ಮಿಕ ತಂಡದಿಂದ ೧೦,೦೦೦ ಮಂದಿಯನ್ನು ತೊಡಗಿಸಲಾಗುತ್ತಿದೆ. ಸ್ವಲ್ಪ ಅನುಭವ ಗಳಿಕೆಯ ಅನಂತರ ಅವರನ್ನು ಗಣಿಯಾಳದಲ್ಲಿ ದುಡಿಯಲು ಬಳಸಿಕೊಳ್ಳಬಹುದೆಂದು ಭಾವಿಸಲಾಗಿದೆ. ಮೊದಲ ತಂಡದ ೧೦೦೦ ಮಂದಿ ಈಗಾಗಲೇ ತಲುಪಿದ್ದಾರೆ.

ಕಲ್ಲಿದ್ದಲು ಭರ್ತಿಮಾಡಲು ೧೦೦೦ ಮಂದಿಯ ತಂಡವನ್ನು ತಾತ್ಕಾಲಿಕವಾಗಿ ರಕ್ಷಣಾ ಪಡೆಗಳಿಂದ ಸಹ ಪಡೆದುಕೊಳ್ಳಲಾಗಿದೆ.

ಸರ್ಕಾರಿ ಕಾರ್ಮಿಕರನ್ನು ರೈಲ್ವೆ ಕಲ್ಲಿದ್ದಲು ಗಣಿಗೂ, ಹೈದ್ರಾಬಾದಿನ ಸಿಂಗರೇನಿ ಕಲ್ಲಿದ್ದಲು ಗಣಿಗೂ ಒದಗಿಸಲಾಗಿದೆ. ಗಣಿ ಕೆಲಸಗಾರರು ಗಣಿ ಮೈದಾನದಲ್ಲಿ , ಬೇರೆ ಕೆಲಸಗಳಲ್ಲಿ ನೇಮಕವಾಗುವುದನ್ನು ತಡೆಯಲು ಸಹ ಕ್ರಮಕೈಗೊಳ್ಳಲಾಗಿದೆ.

(ii) ತಮ್ಮ ಕಾರ್ಮಿಕರಿಗೆ ರೂಪಾಯಿಗೆ ಆರು ಸೇರಿನಂತೆ ಆಹಾರ ಧಾನ್ಯಗಳನ್ನು ಒದಗಿಸಲು ಗಣಿಉದ್ಯಮ ಸಂಘಗಳು ಒಪ್ಪಿಕೊಂಡಿವೆ. ಭಾರತ ಸರ್ಕಾರವು ಪ್ರಾಂತೀಯ ಸರ್ಕಾರದೊಡನೆ ಕೂಡಿ, ಗಣಿ ಕಾರ್ಮಿಕರಿಗೂ ಅವರ ಆಶ್ರಿತರಿಗೂ ಆಹಾರ ಧಾನ್ಯಗಳನ್ನು ಒದಗಿಸಲು ವ್ಯವಸ್ಥೆಮಾಡಿದೆ. ಅಲ್ಲದೆ, ಕೂಲಿಯೊಡನೆ, ತುಟ್ಟಿಭತ್ಯೆಯನ್ನು ಸಹ ೧೯೩೯ರ ಮಟ್ಟಕ್ಕಿಂತ ಶೇಕಡ ೫೦ರಷ್ಟು ಹೆಚ್ಚಿಸಲಾಗಿದೆ. ಜೊತೆಗೆ ಭಾರತ ಸರ್ಕಾರವು ಹಾಜರಾತಿಯನ್ನು ಆಧರಿಸಿ, ಅಥವಾ ಉತ್ಪಾದನೆಯನ್ನು ಆಧರಿಸಿ, ಉತ್ಪಾದನಾ ಬೋನಸ್ ಕೊಡುವಂತೆ ಎಲ್ಲ ಕಲ್ಲಿದ್ದಲು ಗಣಿಸಂಸ್ಥೆಗಳನ್ನು ಪ್ರೇರೇಪಿಸುತ್ತಿದೆ. ಈಗಾಗಲೇ ಅನೇಕ ಕಲ್ಲಿದ್ದಲು ಗಣಿಸಂಸ್ಥೆಗಳು ಬೋನಸ್ ಕೊಡುವುದನ್ನು ಜಾರಿಮಾಡಿದೆ ಎಂದು ತಿಳಿದುಬಂದಿದೆ.

(iii) ಹೊರದೇಶದಿಂದ ಯಂತ್ರಗಳನ್ನು ತರಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹೆಚ್ಚುವರಿ ಲಾಭಗಳ ತೆರಿಗೆ ಮತ್ತು ವರಮಾನ ತೆರಿಗೆ ಇವುಗಳ ಕೆಳಗೆ, ಹೊಸ ಕಲ್ಲಿದ್ದಲು ಕತ್ತರಿಸುವ ಯಂತ್ರದ ಬೆಲೆಯ ಮೇಲೆ ವಾರ್ಷಿಕ ಶೇಕಡ ೫೦ ಸವಕಳಿ ತೆಗೆಯುವುದಕ್ಕೆ ಸರ್ಕಾರ ಸಿದ್ಧವಿದೆ. ಈ ಸವಕಳಿಯನ್ನು ಈಗ ಖರೀದಿಸಬೇಕಾದ ಇಂಥ ಯಂತ್ರದ ಸವಕಳಿತೆಗೆದ ಮೌಲ್ಯದ ಮೇಲೆ ಅನುಮತಿಸಲಾಗುತ್ತದೆ. ವಾಣಿಜ್ಯೋದ್ಯಮಕ್ಕೆ ಈ ಷರತ್ತು ಒಪ್ಪಿಗೆಯಾಗಿದ್ದಲ್ಲಿ, ಅವರಿಗೆ ಅಗತ್ಯವಿರುವ ಯಂತ್ರಗಳ ವಿವರಗಳನ್ನು ಕಳುಹಿಸಲಿ. ಅವರ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿದ್ದೇವೆ.

(iv) ಅಧಿಕ ಉತ್ಪಾದನೆ ಮಾಡಿ, ಹೆಚ್ಚುವರಿ ಲಾಭಾಂಶ ತೆರಿಗೆಯಿಂದ ವಿನಾಯಿತಿಯನ್ನು ಪಡೆದು ಅದರ ಪರಿಣಾಮವಾಗಿ ಕಾರ್ಮಿಕರಿಗೆ ಬೋನಸ್ ಕೊಟ್ಟು, ಉತ್ಪಾದನೆಯನ್ನು ಪ್ರೋತ್ಸಾಹಿಸುವ ಒಂದು ಪ್ರಸ್ತಾವನೆಯನ್ನು ವಾಣಿಜ್ಯ ವಲಯದೊಡನೆ ಚರ್ಚಿಸುತ್ತಿದ್ದೇವೆ.

(v) ಸಾಕಷ್ಟು ಸಂಖ್ಯೆಯಲ್ಲಿ ಗ್ರಾಹಕ ಸರಕುಗಳು ಗುಣಮಟ್ಟದ ಬಟ್ಟೆ ಮತ್ತು ಔಷಧದ ಅಂಗಡಿಗಳನ್ನು ಸಮರ್ಪಕವಾದ ಪ್ರಮಾಣದಲ್ಲಿ ಒದಗಿಸಲು ಸಹ ಏರ್ಪಾಡು ಮಾಡಲಾಗಿದೆ.

ಈ) (i) ಗರಿಷ್ಠ ಪ್ರಮಾಣದ ಉತ್ಪಾದನೆಯನ್ನು ಉದ್ದೇಶಪೂರ್ವಕ ತಪ್ಪಿಸುವ ಯಾವ ಗಣಿ

ಮಾಲೀಕನ ಬಗ್ಗೆಯೂ ಸರ್ಕಾರಕ್ಕೆ ಮಾಹಿತಿ ಇಲ್ಲ. ಹೇಗೂ ಇರಲಿ, ಅಂಥ ಯಾವುದೇ ಸಾಧ್ಯತೆಗಳನ್ನು ತಡೆಯಲು ಕಲ್ಲಿದ್ದಲು ಆಯುಕ್ತರು ವಾಣಿಜ್ಯ ವಲಯದವರೊಡನೆ ಚರ್ಚಿಸಿ, ಪ್ರತಿಯೊಂದು ಕಲ್ಲಿದ್ದಲು ಗಣಿಗೂ ಒಂದು ಉತ್ಪಾದನಾ ಗುರಿಯನ್ನು ಗೊತ್ತುಪಡಿಸಲು ಒಂದು ಯೋಜನೆಯನ್ನು ಸಿದ್ಧಪಡಿಸುತ್ತಿದ್ದಾರೆ. ಉದ್ದೇಶಿತ ಯೋಜನೆಯ ಅನ್ವಯ ಗಣಿ ಮಾಲೀಕ ನಿಗದಿತ ಗುರಿಯ ಟನ್ನಿನಷ್ಟು ಉತ್ಪಾದನೆಯನ್ನು ಸಾಧಿಸಲು ವಿಫಲನಾದರೆ ಮಾಲೀಕನಿಗೆ ಔಪಚಾರಿಕ ಎಚ್ಚರಿಕೆಯನ್ನು ಕೊಡಬಹುದು. ಆದರೆ ಇಂಥದ್ದೆ ವೈಫಲ್ಯ ನಿರಂತರವಾಗಿ ಪುನರಾವರ್ತನೆಯಾಗುತ್ತಿದ್ದರೆ, ಸರ್ಕಾರವು ಅಂಥ ಗಣಿಗೆ, ನಿಬಂಧನೆಗೆ ಬದ್ಧವಾಗಿರುವಂತೆ ಕಡ್ಡಾಯದ ಅಪ್ಪಣೆ ವಿಧಿಸುವುದಲ್ಲದೆ, ಸಾಂದರ್ಭಿಕ ತುರ್ತು ಇದ್ದಲ್ಲಿ, ಸಾರಾಸಗಟಾಗಿ ಗಣಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು.

(ii) ಯುದ್ಧ ಸಾರಿಗೆ ಇಲಾಖೆಯ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿರುವ ಕಲ್ಲಿದ್ದಲು ವಿತರಣಾ ನಿಯಂತ್ರಕರಿಂದ ಕಲ್ಲಿದ್ದಲಿನ ವಿತರಣೆಯಾಗುತ್ತದೆ. ಆ ವಿತರಣೆ ಕೌನ್ಸಿಲಿನ ಯುದ್ಧ ಸಂಪನ್ಮೂಲ ಸಮಿತಿಯಿಂದ ಅಂಗೀಕೃತವಾದ ಪಡಿತರ ಪದ್ಧತಿಗೆ ಅನುಗುಣವಾಗಿರುತ್ತದೆ. ವಿತರಣಾ ಕಛೇರಿಯ ನಿಯಂತ್ರಕರು ನೀಡುವ ಪರವಾನಿಗೆ ಅಥವಾ ಆದ್ಯತಾ ಪತ್ರದ ಆಧಾರದ ಮೇಲೆ ಎಲ್ಲ ಕಲ್ಲಿದ್ದಲು ರವಾನೆಯು ಆಗುತ್ತದೆ. ಒಂದೊಂದು ಕೈಗಾರಿಕೆಗೆ ನಿಗದಿಪಡಿಸಿರುವ ಪ್ರಮಾಣವನ್ನು ಆಧರಿಸಿ, ಪಡಿತರದ ಸಾಮಾನ್ಯ ಸೂಚನೆಗೆ ಅನುಗುಣವಾಗಿ, ವಿವಿಧ ಕೈಗಾರಿಕೆಗಳಿಗೆ ಸಂಬಂಧಿಸಿದ ಇಲಾಖೆಯ ಶಿಫಾರಸ್ಸನ್ನು ಗಮನಿಸಿ ಈ ರವಾನೆಯು ಜರುಗುತ್ತದೆ.

ಯಾವ ಸರಕು ಗ್ರಾಹಕನಿಗೆ, ಕಲ್ಲಿದ್ದಲು ಭರ್ತಿಮಾಡಿ ರವಾನಿಸಬೇಕೆಂಬ ವಿವರವಾದ ಅಂದಂದಿನ ಸೂಚನೆಗಳನ್ನು ಆಯಾ ಕಲ್ಲಿದ್ದಲು ಗಣಿಗಳಿಗೆ ಕೊಡಲಾಗುತ್ತದೆ. ಗಣಿಗಳಿಂದ ಭರ್ತಿಯಾದ ಸರಕುಗಳನ್ನು ತೂಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಲಾಗುತ್ತದೆ. (ಡಿಪೋ) ಕೇಂದ್ರಗಳಲ್ಲಿ ಕೊಡಲಾದ ಸಂಯೋಜಿತ ವರದಿಯನ್ನು ಹಂಚಿಕೆ ಕಛೇರಿಗಳಲ್ಲಿ ಮತ್ತೆ ಸೂಕ್ಷ್ಮವಾಗಿ ಪರಿಶೋಧಿಸಲಾಗುತ್ತದೆ.

ರೈಲ್ವೆ ಮತ್ತು ನಿಯಂತ್ರಕರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಇನ್‌ಸ್ಪೆಕ್ಟರ್‌ಗಳು ಮತ್ತೆ ಪರೀಶೀಲನೆ ಮಾಡುವುದರ ಮೂಲಕ ಸರಕನ್ನು ಕಳುಹಿಸಲಾದ ಸ್ಟೇಷನ್ನು, ಅದು ತಲುಪಬೇಕಾದ ಸ್ಟೇಷನ್ನುಗಳ ವಿವರಗಳನ್ನು ತಾಳೆನೋಡುತ್ತಾರೆ. ಗಣಿಗಳು ಸರಕುಬಂಡಿಗಳನ್ನು ಆದ್ಯತಾ ಪಟ್ಟಿಗೆ ಅನುಗುಣವಾಗಿ ಸರಕು ಗ್ರಾಹಕನಿಗೆ ರವಾನಿಸಿವೆಯೋ, ಮತ್ತು ಅವು ತಲುಪಬೇಕಾದ ಸ್ಟೇಷನ್ನಿನಲ್ಲಿ ಅದು ಮುಕ್ತ ಮಾರುಕಟ್ಟೆ ಸೇರಲು ಅವಕಾಶ ಕೊಡದೆ – ಉದ್ದಿಷ್ಟ ಗ್ರಾಹಕನನ್ನು ತಲುಪಿವೆಯೋ ಎಂಬುದನ್ನು ಸಹ ಈ ಇನ್‌ಸ್ಪೆಕ್ಟರ್‌ಗಳು ಖಚಿತಪಡಿಸಿಕೊಳ್ಳುತ್ತಾರೆ. ಅಲ್ಲದೆ, ಕಲ್ಲಿದ್ದಲು ಕಾಳಸಂತೆಯಲ್ಲಿ ಮಾರಾಟವಾದ ಅನೇಕ ಪ್ರಕರಣಗಳನ್ನು ಪತ್ತೆ ಹಚ್ಚಿ ಅವುಗಳ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗಿದೆ.

ಉ) ರೈಲ್ವೆಯ ಕಲ್ಲಿದ್ದಲು ಗಣಿಗಳನ್ನು ಅವುಗಳ ಪೂರ್ಣ ಸಾಮರ್ಥ್ಯದ ಉತ್ಪಾದನೆಯನ್ನು ಮಾಡಲು, ಆದಷ್ಟು ಬೇಗ, ಪ್ರಕೃತ ಸಂದರ್ಭಗಳಲ್ಲಿ ಆಸ್ಪದವಿರುವ ಮಟ್ಟಿಗೆ ಎಲ್ಲ ಸಾಧ್ಯವಿರುವ ಕ್ರಮಗಳನ್ನು

ಕೈಗೊಳ್ಳಲಾಗುತ್ತಿದೆ. ಸಾಕಷ್ಟು ಗಣನೀಯ ಅಭಿವೃದ್ಧಿಯನ್ನು ಸಾಧಿಸಿದ್ದರೂ ಎಲ್ಲ ರೈಲ್ವೆ ಕಲ್ಲಿದ್ದಲು ಗಣಿಗಳನ್ನು ಅವುಗಳ ಗರಿಷ್ಠ ಸಾಮರ್ಥ್ಯಕ್ಕೆ ತಕ್ಕಹಾಗೆ ಬಳಸಿಕೊಳ್ಳಲು ಸಾಧ್ಯವಾಗಿದೆ ಎನ್ನಲಾರೆ.

ಸದ್ಯದ ತೊಂದರೆಗಳಿಗೆ ಕಾರಣವೆಂದರೆ

(i) ಕಾರ್ಮಿಕರ ಅಭಾವ

(ii) ಯಂತ್ರ ಸ್ಥಾವರವನ್ನು ಸ್ಥಾಪಿಸುವುದರಲ್ಲಿ ಆಗುತ್ತಿರುವ ಅನಿವಾರ್ಯ ವಿಳಂಬ

(iii) ಹೆಚ್ಚಾದ ಉತ್ಪಾದನೆಯನ್ನು ಸಾಗಿಸಲು ಮಾರ್ಗಸಾಮರ್ಥ್ಯದ ಕೊರತೆ.

ಈ ಎಲ್ಲ ಅಡಚಣೆಗಳನ್ನು ಆದಷ್ಟು ಜಾಗ್ರತೆ ನಿವಾರಿಸುವ ನಿರೀಕ್ಷೆ ಇದೆ.

**ಸರ್ ಮಹಮ್ಮದ್ ಯಾಮಿನ್‌ಖಾನ್ :** ಅ) ಭಾಗಕ್ಕೆ ಉತ್ತರಿಸುತ್ತ, ಸನ್ಮಾನ್ಯ ಸದಸ್ಯರು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ಉತ್ಪಾದನೆ ಮಾಡದ ಕಲ್ಲಿದ್ದಲು ಗಣಿಗಳ ಬಗ್ಗೆ ತಿಳಿಸಿದ್ದಾರೆ. ಅವುಗಳಲ್ಲಿ ಐರೋಪ್ಯ ಸಂಸ್ಥೆಗಳನ್ನು ಪ್ರತಿನಿಧಿಸುವ ಗಣಿಗಳು ಎಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಹಂತದಲ್ಲಿ ಅದಕ್ಕೆ ಉತ್ತರ ಕೊಡಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಎಷ್ಟು ಗಣಿಗಳು ತಮ್ಮ ಪೂರ್ಣ ಪ್ರಮಾಣವನ್ನು ಬಳಸಿಕೊಂಡು ಉತ್ಪಾದನೆ ಮಾಡುತ್ತಿಲ್ಲ ಅವುಗಳಲ್ಲಿ ಯಾವುವು ಐರೋಪ್ಯ ಸ್ವಾಮ್ಯವುಳ್ಳವು, ಯಾವುವು ಭಾರತೀಯ ಸ್ವಾಮ್ಯವು? ಎಂಬ ಮಾಹಿತಿ ನಮ್ಮ ಬಳಿ ಇಲ್ಲ.

**ಸರ್ ಮಹಮ್ಮದ್ ಯಾಮಿನ್‌ಖಾನ್ :** ಸನ್ಮಾನ್ಯ ಸದಸ್ಯರು ಒಂದು ವಿಚಾರಣೆ ನಡೆಸಿ, ರೈಲ್ವೆ ಆಯವ್ಯಯ ಮಂಡನೆಗೆ ಮುಂಚೆ, ಈ ಮಾಹಿತಿಯನ್ನು ಇದೇ ಅಧಿವೇಶನದಲ್ಲಿ ಈ ಸದನಕ್ಕೆ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅಂಥ ಒಂದು ವಿಚಾರಣೆ ನಡೆಸಲು ಸಾಧ್ಯವಾಗುವುದೆಂದು ನಾನು ಭಾವಿಸಲಾರೆ.

**ಶ್ರೀ ಕೆ.ಸಿ. ನಿಯೋಗಿ :** ಸರ್ ಮಹಮ್ಮದ್ ಯಾಮಿನ್‌ಖಾನರು ಅಪೇಕ್ಷಿಸಿದ ಮಾಹಿತಿಗೆ ಸಂಬಂಧಿಸಿದಂತೆ – ಆದರೆ ಸ್ವಾಮ್ಯವನ್ನು ಬಯಸುವ ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಅಲ್ಲ ; ಆದರೆ ಎಲ್ಲ ಚಿಕ್ಕ ದೊಡ್ಡ ಕಲ್ಲಿದ್ದಲಿನ ಗಣಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೆ ಮತ್ತು ಸೂಚಿಸಿದ ಯೋಜನೆಯನ್ನು ದೊಡ್ಡ ಗಣಿಗಳಿಗೆ ಹೇಗೋ ಹಾಗೆ ಚಿಕ್ಕ ಗಣಿಗಳಿಗೂ ಅನ್ವಯಿಸುವ ಉದ್ದೇಶವಿದೆಯೇ ಎಂಬುದನ್ನು ಮಾನ್ಯ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಎಲ್ಲ ಕಲ್ಲಿದ್ದಲು ಗಣಿಗಳಿಗೂ ಆ ಯೋಜನೆಯನ್ನು ಅನ್ವಯಿಸುವ ಉದ್ದೇಶವಿದೆ. ನನ್ನ ಸನ್ಮಾನ್ಯ ಸದಸ್ಯರ ಪ್ರಶ್ನೆಗೆ ಪೂರ್ವಾರ್ಧಕ್ಕೆ ಸಂಬಂಧಿಸಿದಂತೆ ನಾನು ಹೇಳಬಹುದಾದದ್ದು ಇಷ್ಟೆ. ಅಧಿಕ ಕಲ್ಲಿದ್ದಲಿನ ಉತ್ಪಾದನೆಗೆ ನೆರವಾಗುವಂಥ ವಿಚಾರಣೆಯನ್ನು ಕೈಗೊಳ್ಳಲು ನಾನು ಸದಾ ಸಿದ್ಧ. ಕಲ್ಲಿದ್ದಲಿನ ಗಣಿಗಳ ಬಗ್ಗೆ ಕಾನೂನುಬದ್ಧ ವಿಚಾರಣೆಯನ್ನು ನಡೆಸುವುದು ನನಗೆ ಸಮ್ಮತವಿಲ್ಲ.

**ಶ್ರೀ ಎನ್. ಎಂ. ಜೋಷಿ :** ಸನ್ಮಾನ್ಯ ಸದಸ್ಯರು ಗಣಿ ಕಾರ್ಮಿಕರ ವೇತನವನ್ನು ಶೇಕಡ ೫೦ರಷ್ಟು ಹೆಚ್ಚಿಸಲಾಗಿದೆ ಎಂದು ಹೇಳಿಕೆಕೊಟ್ಟಿದ್ದಾರೆ. ಆದರೆ ಗಣಿಗಾರಿಕೆಯ ಪ್ರದೇಶದಲ್ಲಿ ಯುದ್ಧಪೂರ್ವದ ಜೀವನವೆಚ್ಚ ಮುಪ್ಪಟ್ಟು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ತಪ್ಪು ಅಭಿಪ್ರಾಯವನ್ನು ನಿವಾರಿಸಲು ಮಾನ್ಯ ಸದಸ್ಯರು ಒಂದು ಹೇಳಿಕೆ ಕೊಡುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದು ನನಗೊಂದು ಮಾರ್ಗದರ್ಶನವೇ ವಿನಾ

ಪ್ರಶ್ನೆಯಲ್ಲವೆಂದು ನಾನು ಭಾವಿಸುವೆ.

**ನವಾಬ್ ಝೂಡಾ ಮಹಮ್ಮದ್ ಲಿಯಾಖತ್ ಅಲಿಖಾನ್ :** ಯಾವುದೇ ಪ್ರಮಾಣದ ಕಲ್ಲಿದ್ದಲು ಭಾರತದಿಂದ ರಫ್ತಾಗುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ ; ಸಿಲೋನಿಗೆ ಮಾತ್ರ.

**ಶ್ರೀ ಎನ್. ಎಂ. ಜೋಷಿ :** ಸನ್ಮಾನ್ಯ ಸದಸ್ಯರು ಮಹಿಳಾ ಗಣಿ ಕಾರ್ಮಿಕರನ್ನು ಗಣಿಯ ಆಳಕ್ಕೆ ಹೋಗುವಂತೆ ಒತ್ತಾಯಿಸುವುದಿಲ್ಲವೆಂದು ಹೇಳಿಕೆ ಕೊಟ್ಟಿರುವುದರಲ್ಲಿ ಸತ್ಯಾಂಶವಿದೆಯೆ? ಹಾಗಿದ್ದಲ್ಲಿ ಭಾರತ ಸರ್ಕಾರವು ಗಣಿ ಕಾರ್ಮಿಕರಿಗೆ ಬೇರೆ ಉದ್ಯೋಗಗಳನ್ನು ನಿರಾಕರಿಸುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂಬ ಸದಸ್ಯರ ಸದ್ಯದ ಹೇಳಿಕೆಯನ್ನು ಹೇಗೆ ಅರ್ಥೈಸಬೇಕು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದರಲ್ಲಿ ಏನೂ ವಿರೋಧಾಭಾಸವಿಲ್ಲ.

**ಸರ್ ಮಹಮ್ಮದ್ ಯಾಮಿನ್ ಖಾನ್ :** ತೆರಿಗೆ ಹೊಂದಾಣಿಕೆ ಬಗ್ಗೆ ಪ್ರಶ್ನೆ ಭಾಗ 'ಇ' ಉತ್ತರಿಸುವಾಗ, ಮಾನ್ಯ ಸದಸ್ಯರು ಕಲ್ಲಿದ್ದಲು ಗಣಿ ಮಾಲೀಕರ ಹಕ್ಕೊತ್ತಾಯ ಏನು ಎಂಬುದನ್ನು ವಿವರಿಸಲಿಲ್ಲ. ಇ.ಪಿ.ಟಿ. ಕೊಡುವುದಕ್ಕೆ ಅವರ ಅಸಮ್ಮತಿಯೆ? ಅಥವಾ ಇ.ಪಿ.ಟಿ. ಪಾವತಿ ಮಾಡುವುದರಿಂದ ವಿನಾಯಿತಿಯನ್ನು ಅಪೇಕ್ಷಿಸಿದ್ದಾರೆಯೆ? ಇ.ಪಿ.ಟಿ. ವಿನಾಯಿತಿಯನ್ನು ಯಾವ ಆಧಾರದ ಮೇಲೆ ಬಯಸುತ್ತಾರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಲ್ಲಿದ್ದಲು ನಷ್ಟದ ಸರಕು ಎಂಬ ಆಧಾರದ ಮೇಲೆ.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ಸಿಲೋನಿಗೆ ರಫ್ತಾಗುತ್ತಿರುವ ಕಲ್ಲಿದ್ದಲಿನ ಪ್ರಮಾಣವನ್ನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ಪ್ರಶ್ನೆಗೆ, ಪೂರ್ವಭಾವಿ ನೋಟೀಸ್ ಅಗತ್ಯ.

# ೧೫೪
# ರೈಲ್ವೆ ಕಾರ್ಮಿಕರಿಗೆ ಸಂಬಂಧಿಸಿದ ಕೆಲವು ವಾರ್ಷಿಕ ವರದಿಗಳ ಪ್ರಕಟನೆ*

**೪೩. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈ ಕೆಳಗೆ ನಮೂದಿಸಿರುವ ವರದಿಗಳನ್ನು ಈಗಾಗಲೇ ಕೊಡಲಾಗಿದೆಯೆ? ಇಲ್ಲದಿದ್ದಲ್ಲಿ, ಏಕೆ ಕೊಟ್ಟಿಲ್ಲ? ಮತ್ತು ಪ್ರಾಯಶಃ ಎಂದು ಕೊಡಲಾಗುವುದು – ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿಸುವರೆ?

(i) ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕರ ಮೇಲ್ವಿಚಾರಕರು ಕಲ್ಕತ್ತೆ, – ಇವರು ೧೯೩೬ರ ಮಜೂರಿ ಪಾವತಿ ಅಧಿನಿಯಮ iv ರ ಪ್ರಚಾಲನೆಯ ಮೇಲೆ ಸಿದ್ಧಪಡಿಸಿದ ವಾರ್ಷಿಕ ವರದಿ ; ಮತ್ತು.

(ii) ೧೯೪೧–೪೨ ಸಾಲಿನಲ್ಲಿ ಭಾರತೀಯ ರೈಲ್ವೆಯ ಉದ್ಯೋಗಾವಧಿ ನಿಯಮಗಳ ಮೇಲೆ ಸಿದ್ಧಪಡಿಸಿದ ವಾರ್ಷಿಕ ವರದಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಕಟವಾದ ಕೊನೆಯ ವರದಿ ಎಂದರೆ, ೧೯೪೦–೪೧ ರ ಸಾಲಿನದು. ತೀವ್ರ ಕಾಗದದ ಅಭಾವದಿಂದ ಮುಂದಿನ ವರದಿಗಳ ಪ್ರಕಟನೆಯನ್ನು ನಿಲ್ಲಿಸಲಾಗಿದೆ.

# ೧೫೫
# ಕಲ್ಲಿದ್ದಲು ಗಣಿ ಸುರಕ್ಷತಾ (ಅಡಕುವ) (Stowing) ತಿದ್ದುಪಡಿ ಮಸೂದೆ **

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯ ಅಧ್ಯಕ್ಷರೇ, ಮಸೂದೆಯನ್ನು ಅಂಗೀಕರಿಸಲು ಮತ್ತಷ್ಟು ಕಾಲಾವಕಾಶಬೇಕೆಂದು ಸದನದ ಕೆಲವು ಸನ್ಮಾನ್ಯ ಸದಸ್ಯರು ಅಪೇಕ್ಷಿಸಿದುದರಿಂದ ನನ್ನ ಹೆಸರಿನಲ್ಲಿ ಮಂಡಿಸಲಾಗಿರುವ ಮಸೂದೆಯನ್ನು ಅಂಗೀಕರಿಸಬೇಕೆಂಬ ಗೊತ್ತುವಳಿಯನ್ನು ಪ್ರಸ್ತಾಪಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೧೦

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೨–೧೯೪೪; ಪು. ೨೧೧

## ೧೫೬
## ಪ್ರಾಂತ್ಯಗಳಲ್ಲಿ ಆಡಳಿತಾಧಿಕಾರಿಗಳಿಗೆ ನಾಗರಿಕ ಪ್ರವರ್ತಕ ತಂಡದಲ್ಲಿ ನಿಯೋಜಿತ ಅಧಿಕಾರಿಗಳಾಗಿ ಪದೋನ್ನತಿ *

೧೧೧. **ಶ್ರೀ ಜಿ. ರಂಗಯ್ಯ ನಾಯ್ಡು :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ೧೯೪೧, ೧೯೪೨ ಮತ್ತು ೧೯೪೩ರಲ್ಲಿ ವಿವಿಧ ಪ್ರಾಂತ್ಯಗಳಿಂದ ನಾಗರಿಕ ಪ್ರವರ್ತಕ ತಂಡದಲ್ಲಿ (Civil Pionner Forces) ನಿಯೋಜಿತ ಅಧಿಕಾರಿಗಳಾಗಿ ಪದೋನ್ನತಿ ಹೊಂದಿದ ಆಡಳಿತಾಧಿಕಾರಿಗಳ ಸಂಖ್ಯೆ ಎಷ್ಟು? ಯಾರೂ ಇಲ್ಲದಿದ್ದಲ್ಲಿ, ಏಕಿಲ್ಲ?

ಆ) ನಾಗರಿಕ ಪ್ರವರ್ತಕ ತಂಡದ ನಿಯೋಜಿತ ಅಧಿಕಾರಿಗಳು ಸೇನೆಯ ನಿಯೋಜಿತ ಅಧಿಕಾರಿಗಳ ಸ್ಥಾನಕ್ಕೆ ಅರ್ಜಿ ಸಲ್ಲಿಸುವುದನ್ನು ನಿಯಂತ್ರಿಸಲು ಯಾವುದಾದರೂ ಕಾನೂನನ್ನು ಅನಂತರದಲ್ಲಿ ಅಂಗೀಕರಿಸಲಾಯಿತೆ?

ಇ) ಹಿಂದುಗಳಲ್ಲಿ ಬ್ರಾಹ್ಮಣೇತರರು, ಹಿಂದುಳಿದವರು ಮತ್ತು ಅನುಸೂಚಿತ ಜಾತಿಯವರು, ಕ್ರಿಶ್ಚಿಯನ್ನರು, ಮಹಮ್ಮದೀಯರು ಮತ್ತು ಆಂಗ್ಲೋ ಇಂಡಿಯನ್ನರು ವರ್ಗಗಳಿಂದ ಭರ್ತಿಮಾಡಲಾದ ನಿಯೋಜಿತ ಅಧಿಕಾರಿಗಳ ಮತ್ತು ಆಡಳಿತಾಧಿಕಾರಿಗಳ ಸಂಖ್ಯೆ ಎಷ್ಟು?

ಈ) ಮೂಲ ತಂಡದ ಮತ್ತು ಆಡಳಿತಾಧಿಕಾರಿಗಳ ದೈನಂದಿನ ಪಡಿತರ ಪ್ರಮಾಣವನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಕೊಡಿ. ಮತ್ತು

ಉ) ೧೯೪೧, ೧೯೪೨ ಮತ್ತು ೧೯೪೩ರಲ್ಲಿ ಎಷ್ಟು ಮಂದಿ ನಾಗರಿಕ ಪ್ರವರ್ತಕ ತಂಡದಲ್ಲಿ ಕಾರಕೂನರಾಗಿ ಸೇವೆ ಸಲ್ಲಿಸುತ್ತಿರುವವರು ಆಡಳಿತಾಧಿಕಾರಿಗಳಾಗಿ ಪದೋನ್ನತಿ ಪಡೆದಿದ್ದಾರೆ? ಯಾರೂ ಇಲ್ಲದಿದ್ದಲ್ಲಿ, ಏಕಿಲ್ಲ ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** (ಅ), (ಇ) ಮತ್ತು (ಉ) ಈ ಭಾಗಕ್ಕೆ ಸಂಬಂಧಿಸಿದಂತೆ ಮೂರು ಪ್ರತ್ಯೇಕ ಪಟ್ಟಿಯನ್ನು ಸದನದ ಮುಂದೆ ಇರಿಸುತ್ತಿದ್ದೇನೆ. ಇವು ೧೯೪೨ ಮತ್ತು ೧೯೪೩ಕ್ಕೆ ಅನ್ವಯವಾಗುತ್ತವೆ ; ನಾಗರಿಕ ಪ್ರವರ್ತಕ ಪಡೆಯು ೧೯೪೧ರಲ್ಲಿ ರಚಿತವಾಗಿರಲಿಲ್ಲ.

ಆ) ಇಲ್ಲ ; ಆದರೆ ಒಬ್ಬ ಅಧಿಕಾರಿ ನಾಗರಿಕ ಪ್ರವರ್ತಕ ಪಡೆಯಲ್ಲಿ ಸೇವೆಯಲ್ಲಿ ತೊಡಗಿದರೆ, ಎಲ್ಲಿಯವರೆಗೆ ಅವನ ಸೇವೆಬೇಕಾಗಿದೆಯೋ ಅಲ್ಲಿಯವರೆಗೆ ಇರಬೇಕಾದ ಪ್ರವರ್ತಕ ಅವನದಾಗಿರುತ್ತದೆ. – ನೋಡಿ : ನಾಗರಿಕ ಮೂಲ ಪಡೆ ಅಧ್ಯಾದೇಶ ವಿಭಾಗ – ೯. ಪ್ರಕೃತದಲ್ಲಿ ಯಾವ ಅಧಿಕಾರಿಯನ್ನು ಇಲ್ಲಿಂದ ಬಿಟ್ಟುಕೊಡುವುದಿಲ್ಲ.

ಈ) ೧–೩–೧೯೪೩ಕ್ಕೆ ಮುನ್ನ, ಆಡಳಿತಾಧಿಕಾರಿಗಳಿಗೆ ಉಚಿತ ಪಡಿತರ ವ್ಯವಸ್ಥೆ ಇರಲಿಲ್ಲ. ಅಲ್ಲಿಂದ ಈಚೆಗೆ, ನಾಗರಿಕ ಪ್ರವರ್ತಕ ಪಡೆಯ ಸದಸ್ಯರಿಗೆ ಅನ್ವಯವಾಗುವ ಅದೇ ರಿಯಾಯಿತಿ ದರವನ್ನು ಇವರಿಗೂ ವಿಸ್ತರಿಸಲಾಯಿತು. ಅಂದರೆ ಮಾಹೆಯಾನ ತಲಾ ೧೫ರೂಗಳ ವೆಚ್ಚದಲ್ಲಿ. ಆದರೆ ಅನಂತರ ಆಹಾರ ಪದಾರ್ಥಗಳ ಬೆಲೆಯಲ್ಲಾದ ಏರುಪೇರಿನಿಂದಾಗಿ,

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪; ಪುಟ. ೨೮೧–೮೩.

ಅದೇ ದರವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಪ್ರಾಂತೀಯ ಅಧಿಕಾರಿಗಳು ತಾವೇ ಪ್ರಚಲಿತ ಮಾರ್ಕೆಟ್ ದರಕ್ಕೆ ಮೀರದ ಬೆಲೆಯಲ್ಲಿ ಅಂಗೀಕೃತ ಪಡಿತರವನ್ನು ಕೊಳ್ಳಲು ಪ್ರಾಂತೀಯ ಸರ್ಕಾರಗಳನ್ನು ಅಧಿಕೃತಗೊಳಿಸಲಾಯಿತು.

**ವಿವರಣಾ ಪಟ್ಟಿ**

**ಭಾಗ (ಅ)**

| | | |
|---|---|---|
| ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್ | ೧೯೪೨ | ೫ |
| | ೧೯೪೩ | |
| ಒರಿಸ್ಸಾ | ೧೯೪೨ | ೨ |
| | ೧೯೪೩ | |
| ಮದ್ರಾಸ್ | ೧೯೪೨ + ೧೯೪೩ | ೧ |
| ಬಾಂಬೆ | ಇಲ್ಲ | |
| ಪಂಜಾಬು | ೧೯೪೨ | – |
| | ೧೯೪೩ | ೩ |
| ಸಂಯುಕ್ತ ಪ್ರಾಂತ್ಯಗಳು | ೧೯೪೨ | – |
| | ೧೯೪೩ | ೧ |
| ಬಿಹಾರ | ೧೯೪೨ | – |
| | ೧೯೪೩ | ೨ |
| ಬಂಗಾಳ | ೧೯೪೨ | ೩ |
| | ೧೯೪೩ | ೧೧ |
| ವಾಯವ್ಯ ಗಡಿ ಪ್ರಾಂತ್ಯ | ೧೯೪೨ | ೧ |
| | ೧೯೪೩ | ೨ |
| | **ಒಟ್ಟು** | **೩೧** |

ಈ ಎರಡು ವರ್ಗದ ಅಧಿಕಾರಿಗಳು ವಿಭಿನ್ನ ಸ್ಥಾನಮಾನಗಳುಳ್ಳ ಪ್ರತ್ಯೇಕ ವರ್ಗಗಳೆಂದು ತಿಳಿಯಬೇಕು. ಒಬ್ಬ ಅಭ್ಯರ್ಥಿಯು ಆಡಳಿತಾಧಿಕಾರಿಯಾಗಿ ನೇಮಕಗೊಂಡರೆ, ಪ್ರಾಂತೀಯ ಸರ್ಕಾರಗಳಿಗೆ ಅವನನ್ನು ನಿಯೋಜಿತ ಅಧಿಕಾರಿ ಶ್ರೇಣಿಗೆ ಎತ್ತರಿಸಬೇಕೆಂಬ ಯಾವ ನಿಯಮವೂ ಇಲ್ಲ. ಆದರೂ ಕೆಲವು ಪ್ರಕರಣಗಳಲ್ಲಿ ತಮ್ಮ ಅರ್ಹತೆಯನ್ನು ಸಾದರಪಡಿಸಿದ ಆಡಳಿತಾಧಿಕಾರಿಗಳಿಗೆ, ಸ್ಥಾನ ತೆರವಾಗಿದ್ದ ಪಕ್ಷದಲ್ಲಿ ಎರಡನೆಯ ಲೆಫ್ಟಿನೆಂಟ್‌ಗಳಾಗಿ ಪದೋನ್ನತಿಯನ್ನು ನೀಡಲಾಗಿದೆ.

**ವಿವರ ಪಟ್ಟಿ**
**ಭಾಗ (ಇ)**

| ಪ್ರಾಂತ್ಯ | ಬ್ರಾಹ್ಮಣೇತರರು | ಬ್ರಾಹ್ಮಣರು | ಹಿಂದುಳಿದ ವರ್ಗ | ಅನುಸೂಚಿತ ಜಾತಿ | ಮುಸ್ಲಿಮರು | ಕ್ರಿಶ್ಚಿಯನ್ನರು | ಆಂಗ್ಲೋ ಇಂಡಿಯನ್ನರು |
|---|---|---|---|---|---|---|---|
| **ಮಧ್ಯಪ್ರದೇಶ ಮತ್ತು ಬೇರಾರ್** | | | | | | | |
| ನಿಯೋಜಿತ ಅಧಿಕಾರಿಗಳು (ನಿ.ಅ) | ೫ | ೪ | ೧ | ೨ | ೩ | ೧ | – |
| ಆಡಳಿತಾಧಿಕಾರಿಗಳು (ಆ.ಅ) | ೮ | ೫ | – | – | – | ೧ | – |
| **ಒರಿಸ್ಸಾ** | | | | | | | |
| ನಿ.ಅ | ೧೮ | ೯ | ೧ | – | ೪ | ೨ | – |
| ಆ.ಅ. | – | – | – | – | – | – | – |
| **ಮದ್ರಾಸ್** | | | | | | | |
| ನಿ.ಆ. | ೩೪ | – | – | ೭ | ೭ | *೧೫ | – |
| ಆ.ಅ. | – | – | – | – | – | – | – |
| **ಬಾಂಬೆ** | | | | | | | |
| ನಿ.ಅ. | ೨ | ೬ | – | ೩ | ೨ | – | – |
| ಆ.ಅ | ೪ | ೧ | ೧ | – | ೧ | – | – |
| **ಪಂಜಾಬು** | | | | | | | |
| ನಿ.ಅ. | ೧೧ | – | – | ೨ | ೧೩ | ೧ | – |
| ಆ.ಅ | ೮ | – | – | – | ೯ | – | – |
| **ಸಂಯುಕ್ತ ಪ್ರಾಂತ್ಯಗಳು** | | | | | | | |
| ನಿ.ಅ. | ೧೫ | – | – | ೪ | ೫ | ೨ | ೧ |
| ಆ.ಅ. | ೭ | – | – | ೨ | ೪ | ೧ | – |
| **ಬಿಹಾರ** | | | | | | | |
| ನಿ.ಅ. | ೧೭ | – | – | ೨ | ೫ | ೨ | – |
| ಆ.ಅ. | – | – | – | – | – | – | – |
| **ಬಂಗಾಳ** | | | | | | | |

* ಎರಡು ವರ್ಗಗಳ ಅಧಿಕಾರಿಗಳನ್ನು ಒಳಗೊಂಡಿದೆ.

| | | | | | | | |
|---|---|---|---|---|---|---|---|
| ನಿ.ಅ. | ೩೧ | – | – | ೧೭ | ೫೬ | ೭ | – |
| ಆ.ಅ. | – | – | – | – | – | – | – |
| **ವಾಯವ್ಯ ಗಡಿ ಪ್ರಾಂತ್ಯ** | | | | | | | |
| ನಿ.ಅ. | – | – | – | – | ೧೯ | – | – |
| ಆ.ಅ. | ೧ | – | – | – | ೭ | – | – |
| **ಒಟ್ಟು** | **೧೬೧** | **೨೫** | **೩** | **೩೯** | **೧೩೫** | **೩೨** | **೧** |

**ವಿವರ ಪಟ್ಟಿ – ಭಾಗ (ಉ)**

| | | |
|---|---|---|
| ಮಧ್ಯ ಪ್ರಾಂತ್ಯಗಳು | ೧೯೪೨ | |
| ಮತ್ತು ಬೇರಾರ್ | ೧೯೪೩ | ೨ |
| ಒರಿಸ್ಸಾ | | – |
| ಮದ್ರಾಸ್ | ೧೯೪೨ | ೨ |
| | ೧೯೪೩ | ೧ |
| ಬಾಂಬೆ | ೧೯೪೨ | |
| | ೧೯೪೩ | ೧ |
| ಪಂಜಾಬು | ೧೯೪೨ | – |
| | ೧೯೪೩ | ೩ |
| ಸಂಯುಕ್ತ ಪ್ರಾಂತ್ಯಗಳು | | – |
| ಬಿಹಾರ | ೧೯೪೨ | ೧ |
| | ೧೯೪೩ | ೨ |
| ಬಂಗಾಳ | ೧೯೪೨ | – |
| | ೧೯೪೩ | ೧೧ |
| ವಾಯವ್ಯಗಡಿ ಪ್ರಾಂತ್ಯ | ೧೯೪೨ | – |
| | ೧೯೪೩ | ೧ |
| | **ಒಟ್ಟು** | **೨೪** |

ನಾಗರಿಕ ಪ್ರವರ್ತಕ ಪಡೆಯಲ್ಲಿರುವ ಕಾರಕೂನರಿಗೆ ತೌಲನಿಕವಾಗಿ ಕಡಿಮೆ ವೇತನಶ್ರೇಣಿ ಇದ್ದುದರಿಂದ ಅವರಲ್ಲಿ ಅನೇಕರು ಆಡಳಿತಾಧಿಕಾರಿಗಳಾಗಿ ಪದೋನ್ನತಿ ಪಡೆಯಲು ಅರ್ಹರಾಗಿರಲಿಲ್ಲ.

**ಶ್ರೀ ಜಿ. ರಂಗಯ್ಯನಾಯ್ಡು :** ಯುದ್ಧಾರಂಭ ಕಾಲದಲ್ಲಿ ಈ ಆಡಳಿತಾಧಿಕಾರಿಗಳಿಗೆ ನಿಯೋಜಿತ ಅಧಿಕಾರಿಗಳ ಸ್ಥಾನಕ್ಕೆ (Commissioned officers) ಸ್ಥಾನಗಳ ತೆರವಾಗಿದ್ದ ಸಂದರ್ಭದಲ್ಲಿ, ಅರ್ಜಿ ಹಾಕಲು ಅವಕಾಶವಿತ್ತೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನಲ್ಲಿ ಆ ಬಗ್ಗೆ ಮಾಹಿತಿ ಇಲ್ಲ.

## ೧೫೭
## ಮಹಿಳಾ ಸರ್ಕಾರಿ ನೌಕರರಿಗೆ ವಸತಿ ಸೌಲಭ್ಯ *

**೧೧೨. ಸರ್ ಎಫ್. ಇ. ಜೇಮ್ಸ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಥಮ ದರ್ಜೆ ವಸತಿ ಎಂದು ವರ್ಗೀಕರಿಸಿರುವ ದೆಹಲಿಯ ಅಥವಾ ನವದೆಹಲಿಯ ಸರ್ಕಾರಿ ಹಾಸ್ಟೆಲ್ ಅಥವಾ ಹೊಟೆಲ್ ಅಥವಾ ಯಾವುದೇ ವಸತಿಗೃಹಗಳಲ್ಲಿ, ತಿಂಗಳಿಗೆ ೬೦೦ ರೂಗಳಿಗಿಂತ ಕಡಮೆ ವೇತನವಿರುವ ಸರ್ಕಾರಿ ನೌಕರರು ವಸತಿ ಪಡೆಯಲು ಅನರ್ಹರೆಂದು, ಕಾರ್ಮಿಕ ಇಲಾಖೆಯ ಯಾವುದೇ ನಿಬಂಧನೆ ಇದೆಯೆ?

ಆ) ಆ ನಿಬಂಧನೆ ಮಹಿಳಾ ಸರ್ಕಾರಿ ನೌಕರರಿಗೂ ಅನ್ವಯಿಸುತ್ತದೆಯೆ?

ಇ) 'ಆ' ಭಾಗದ ಪ್ರಶ್ನೆಗೆ ಉತ್ತರ 'ಹೌದು' ಎಂದಾದರೆ,
ಕುಟಂಬದಿಂದ ದೂರವಿರುವ, ಅಸಮರ್ಪಕ ವಸತಿಗಳು ಮಾತ್ರ ದೊರೆತಿರುವ ಮಹಿಳಾ ಸರ್ಕಾರಿ ನೌಕರರಿಗೆ, ಈ ನಿಯಮದಲ್ಲಿ ಬದಲಾವಣೆ ಮಾಡಲಾಗಿದೆಯೆ? ಮಹಿಳೆಯರಿಗೆ ೬೦೦ ರೂ.ಗಳ ಮಾಸಿಕ ವೇತನ ಲಭ್ಯವಿಲ್ಲದಿದ್ದರೂ ಆ ಸ್ಥಾನಕ್ಕೆ ಭರ್ತಿಯಾಗುವ ಪುರುಷ ನೌಕರರಿಗೆ ಅದಕ್ಕಿಂತಲು ಹೆಚ್ಚು ವೇತನ ದೊರೆಯುವುದೆಂಬುದನ್ನು ಗಮನಿಸಬೇಕು.

ಈ) ವಸತಿ ಸಲಹಾ ಸಮಿತಿ ರಚನೆ (ಅದರ ಸದಸ್ಯರು ಯಾರು?)

ಉ) ಅರ್ಹ ವ್ಯಕ್ತಿಗಳ ವಿಷಯದಲ್ಲಿ ಮೇಲಿನ ನಿರ್ಬಂಧವನ್ನು ಅತಿಕ್ರಮಿಸಲು ಅಧಿಕಾರವಿದೆಯೆ? ಮತ್ತು

ಊ) ಮಹಿಳಾ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಎಷ್ಟು ಸಂದರ್ಭಗಳಲ್ಲಿ ಈ ಸಮಿತಿ ನಿಯಮಗಳನ್ನು ಸಡಿಲಗೊಳಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು ಆ) ಹೌದು ಇ) ಇಲ್ಲ.

ಈ) (i) ಲೆಫ್ಟಿನೆಂಟ್ ಜನರಲ್ ಟಿ.ಡೆ. ಹಟ್ಟನ್, ಸಿ.ಬಿ.ಎಂ.ಸಿ.
(ii) ಸನ್ಮಾನ್ಯ ಶ್ರೀ ಹೆಚ್. ಸಿ. ಪ್ರಿಯರ್, ಸಿ. ಎಸ್. ಐ, ಸಿ.ಪಿ.ಇ., ಐ.ಸಿ.ಎಸ್.
(iii) ಸನ್ಮಾನ್ಯ ಶ್ರೀ ಇ. ಕಾನ್ರಾನ್‌ಸ್ಮಿತ್, ಸಿ.ಎ.ಪಿ. ಸಿ.ಪಿ.ಇ. ಐ.ಸಿ.ಎಸ್.
(iv) ಶ್ರೀ ಜಿ. ಮ್ಯಾಕ್‌ವರ್ತ್ ಯಂಗ್, ಸಿ.ಪಿ.ಇ. ಐ.ಸಿ.ಎಸ್.

ಉ) ಇಲ್ಲ, ಸಮಿತಿಯು ಘನತೆವೆತ್ತ ಗೌರ್ನರ್ ಜನರಲ್ ಅವರಿಗೆ ಶಿಫಾರಸುಗಳನ್ನು ಮಾತ್ರ ಮಾಡಬಹುದು.

ಊ) ಮೇಲೆ (ಉ) ಗೆ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಸರ್ ಎಫ್.ಇ. ಜೇಮ್ಸ್ :** ಈ ನಿಯಮದ ಕಟ್ಟುನಿಟ್ಟಿನ ಅನ್ವಯದಿಂದಾಗಿ ಅನೇಕ ತುಂಬ ಒಳ್ಳೆಯ,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪; ಪು. ೨೫೩.

ಕಷ್ಟಪಟ್ಟು ದುಡಿಯುವ, ಅರ್ಹತೆಯಿರುವ, ಸರ್ಕಾರಿ ಸೇವೆಯಲ್ಲಿರುವ ಮಹಿಳಾ ನೌಕರರಿಗೆ ಸಾಕಷ್ಟು ತೊಂದರೆಯಾಗಿದೆಯೆಂಬುದು ನನ್ನ ಸನ್ಮಾನ್ಯ ಸ್ನೇಹಿತರಿಗೂ ನಿಸ್ಸಂಶಯವಾಗಿ ಗೊತ್ತಿದೆಯೆಂದು ಭಾವಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ನನಗೆ ಅದು ಗೊತ್ತಿದೆ.

**ಶ್ರೀ ಎನ್. ಎಂ. ಜೋಷಿ** : ಅನೇಕರಿಗೆ ಒದಗಿರುವ ಈ ಸಂಕಷ್ಟದ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ವಸತಿ ಪಡಿತರ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಯೋಚಿಸುವುದೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಈ ಘಟ್ಟದಲ್ಲಿ ನಾನೇನೂ ಹೇಳಲಾರೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** : ಯಾವಾಗ ಈ ವಸತಿ ಸಲಹಾ ಸಮಿತಿ ನೇಮಕವಾಯಿತು? ಮತ್ತೆ, ಯಾರು ಅದನ್ನು ನೇಮಿಸಿದರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಸದ್ಯಕ್ಕೆ ನನ್ನ ಬಳಿ ಅದಕ್ಕೆ ಉತ್ತರವಿಲ್ಲ.

# ೧೫೮
# ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರ ನೇಮಕಾತಿ*

೧೧೪. **ಶ್ರೀ ಲಾಲ್‌ಚಂದ್ ನವಲ್‌ರಾಯ್** : ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು, ಕಲ್ಲಿದ್ದಲು ಗಣಿಗಳಲ್ಲಿ, ತಾವು ಮಹಿಳಾ ಕಾರ್ಮಿಕರನ್ನು ತೊಡಗಿಸಿರುವುದು ನಿಜವೆ ಎಂದು ತಿಳಿಸುವರೆ?

ಆ) ಭಾರತದ ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರ ನೇಮಕವನ್ನು ಸಾರ್ವಜನಿಕ ಒತ್ತಡದ ಮೇರೆಗೆ ರದ್ದುಪಡಿಸಲಾಯಿತೆಂಬುದು ನಿಜವೆ?

ಇ) ಭಾರತ ಸರ್ಕಾರದ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಅಮ್ರೆ ಅವರು, ಇಂಗ್ಲೆಂಡಿನ ಕಾಮನ್ಸ್ ಸಭೆಯಲ್ಲಿ, ಭಾರತದ ಮಹಿಳಾ ಕಾರ್ಮಿಕರಿಗೆ ಪುರುಷ ಕಾರ್ಮಿಕರಿಗೆ ದೊರೆಯುವಷ್ಟೇ ಮಜೂರಿ ದೊರೆಯುತ್ತದೆಯೇ, ಮತ್ತು ಮಹಿಳೆಯರು ಗಣಿಯ ಆಳದಲ್ಲಿ ದುಡಿಯುತ್ತಿರುವರೆ ಎಂದು ಕೇಳಲಾದ ಪ್ರಶ್ನೆಗೆ ಜಾರಿಕೆಯ ಉತ್ತರಕೊಟ್ಟದ್ದು ನಿಜವೆ?

ಈ) ಸನ್ಮಾನ್ಯ ಸದಸ್ಯರು ಮೇಲೆ (ಇ) ಭಾಗದಲ್ಲಿ ಉಲ್ಲೇಖಿಸಿರುವ ಎರಡು ಅಂಶಗಳ ಬಗ್ಗೆ ಹೇಳಿಕೆ ನೀಡುವರೆ?

ಉ) ಕಲ್ಲಿದ್ದಲು ಗಣಿಗಳಲ್ಲಿ ದುಡಿಯಲು ಪುರುಷ ಕಾರ್ಮಿಕರು ಸಾಕಷ್ಟು ಸಂಖ್ಯೆಯಲ್ಲಿ ಭಾರತದಲ್ಲಿ ದೊರೆಯುತ್ತಾರಲ್ಲವೆ? ಹಾಗಿದ್ದರೆ ಮಹಿಳಾ ಕಾರ್ಮಿಕರ ಬದಲಿಗೆ ಪುರುಷರನ್ನೇ ಏಕೆ ಉಪಯೋಗಿಸಿಕೊಳ್ಳಬಾರದು?

ಊ) ಮಹಿಳಾ ಕಾರ್ಮಿಕರು ತಮ್ಮ ಆರೋಗ್ಯ ಕೆಟ್ಟರೂ, ತಮ್ಮ ಸಂಸಾರಗಳು ಮುರಿದರೂ, ಶ್ರಮವಹಿಸಿ ದುಡಿಯುತ್ತಾರೆ ಮತ್ತು ಕಡಮೆ ಮಜೂರಿಯಲ್ಲಿ ತೃಪ್ತರಾಗುತ್ತಾರೆ ಎಂಬುದು ನಿಜವೆ? ಹಾಗಿಲ್ಲದಿದ್ದಲ್ಲಿ ಪುರುಷರ ಬದಲಿಗೆ ಮಹಿಳೆಯರನ್ನು ಮತ್ತೆ ನೇಮಕಮಾಡಿಕೊಳ್ಳಲು ವಿಶೇಷ ಕಾರಣಗಳೇನು?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪ ; ಪು. ೨೮೫–೮೬.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮಧ್ಯ ಪ್ರಾಂತ್ಯಗಳು, ಬೇರಾರ್, ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಮಹಿಳೆಯರಿಗೆ ಗಣಿಯ ಆಳದಲ್ಲಿ ದುಡಿಯಲು ಅನುಮತಿಸಲಾಗಿದೆ.

ಆ) ಮಹಿಳಾ ಕಾರ್ಮಿಕರನ್ನು ಕಲ್ಲಿದ್ದಲು ಗಣಿಯ ಆಳದಲ್ಲಿ ದುಡಿಯಲು ತೊಡಗಿಸಬಾರದೆಂಬುದು ಬಹಳಷ್ಟು ವರ್ಷಗಳಿಂದ ಭಾರತ ಸರ್ಕಾರದ ಉದ್ದೇಶಪೂರ್ವಕ ನೀತಿಯಾಗಿತ್ತು. ೧೯೨೩ರ ಭಾರತೀಯ ಗಣಿಗಳ ಅಧಿನಿಯಮ ಇದರಲ್ಲಿ ಈ ಉದ್ದೇಶಕ್ಕೆ ನಿಯಮಗಳನ್ನು ಕಲ್ಪಿಸಲಾಗಿತ್ತು. ೧೯೨೯ರಿಂದ ಮಹಿಳೆಯರನ್ನು ಗಣಿಯ ಆಳದ ಕೆಲಸಗಳಿಂದ ಹೊರತುಪಡಿಸುವ ಪ್ರಕ್ರಿಯೆ ಪ್ರಾರಂಭವಾಗಿ ಅದು ೧೯೩೭ರಲ್ಲಿ ಪೂರ್ಣವಾಯಿತು.

ಇ) ನನ್ನ ಬಳಿ ಮಾಹಿತಿ ಇಲ್ಲ.

ಈ) ಇಲ್ಲ ; ಈ ಎರಡು ಅಂಶಗಳಿಗೆ, ಫೆಬ್ರವರಿ ೮ನೇಯ ದಿನಾಂಕ ಶ್ರೀಮತಿ ರೇಣುಕಾರಾಯ್ ಅವರು ತಂದ ನಿಲುವಳಿ ಸೂಚನೆಗೆ ಉತ್ತರಿಸುತ್ತ ಹೇಳಿಕೆ ಕೊಟ್ಟಿದ್ದೇನೆ.

ಉ) ಪುರುಷ ಕಾರ್ಮಿಕರ ತೀವ್ರ ಕೊರತೆಯಿಂದಾಗಿ ಮಹಿಳೆಯರಿಗೆ ಗಣಿಯ ಆಳದಲ್ಲಿ ದುಡಿಯಲು ಅನುಮತಿಸಲಾಯಿತು. ಸರ್ಕಾರಕ್ಕೆ ಅಗತ್ಯವಿರುವಷ್ಟು ಕಲ್ಲಿದ್ದಲನ್ನು ಉತ್ಪಾದಿಸಲು ಬೇಕಾದಷ್ಟು ಪುರುಷ ಕಾರ್ಮಿಕರು ದೊರೆಯುವ ಭರವಸೆ ಕಂಡ ಕೂಡಲೇ, ಗಣಿಯ ಆಳದಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ನೇಮಕಕ್ಕೆ ನಿಷೇಧವನ್ನು ಮತ್ತೆ ಹೇರಲಾಗುವುದು. ಬಂಗಾಳ ಮತ್ತು ಬಿಹಾರ ಕಲ್ಲಿದ್ದಲು ಗಣಿಗಳಿಗೆ ಪುರುಷ ಕಾರ್ಮಿಕರನ್ನು ಪೂರೈಸಲು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳುತ್ತಿದೆ.

ಊ) ಇಲ್ಲ. (ಇ) ಭಾಗಕ್ಕೆ ಮೊದಲೆ ಉತ್ತರಿಸಿರುವಂತೆ ಸಾಕಷ್ಟು ಪುರುಷ ಕಾರ್ಮಿಕರು ದೊರೆಯದೆ ಇರುವುದರಿಂದಲೇ ಮಹಿಳೆಯರನ್ನು ಕೆಲವು ಗಣಿಗಳ ಆಳದಲ್ಲಿ ದುಡಿಯಲು ಅನುಮತಿಸಲಾಗಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಉಲ್ಲೇಖ ಭಾಗ (ಆ) ಗೆ ಸಂಬಂಧಿಸಿದಂತೆ, ಸಾರ್ವಜನಿಕ ಒತ್ತಾಯವೇ ಮಹಿಳಾ ಕಾರ್ಮಿಕರ ನೇಮಕ ನಿಷೇಧಕ್ಕೆ ಕಾರಣವೆಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಈ ಪ್ರಶ್ನೆಗೆ ಉತ್ತರಿಸಲಾರೆ; ಏಕೆಂದರೆ ನನಗೆ ಅದು ಗೊತ್ತಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಹಿಳಾ ಕಾರ್ಮಿಕರ ನೇಮಕ ನಿಷೇಧದ ರದ್ದಿಗೆ ಮುನ್ನ ಸಾರ್ವಜನಿಕರೊಡನೆ ಸಮಾಲೋಚನೆ ನಡೆಯಿತೆ? ಅಥವಾ ಸರ್ಕಾರ ತಾನಾಗಿಯೇ ಈ ನಿಷೇಧವನ್ನು ರದ್ದುಪಡಿಸಿತೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರವು ಸಂಬಂಧಿಸಿದ ಆಸಕ್ತರೊಡನೆ ಸಮಾಲೋಚನೆ ನಡೆಸಿತು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅವರು ಅದಕ್ಕೆ ವಿರೋಧ ವ್ಯಕ್ತಪಡಿಸಿದರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವಿರೋಧವಿಲ್ಲ.

**ಶ್ರೀ ಎನ್.ಎಂ. ಜೋಷಿ :** ಭಾಗ (ಇ) ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಪುರುಷರೊಡನೆ ಸಮಾನ ಮಜೂರಿ ದೊರೆಯುತ್ತದೆಯೇ ಎಂಬುದರ ಬಗ್ಗೆ, ಸನ್ಮಾನ್ಯ ಸದಸ್ಯರಲ್ಲಿ ಮಾಹಿತಿ ಇಲ್ಲವೆಂದು ಅರ್ಥವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಶ್ನೆಯ ಇಂಗಿತವೇನೆಂದರೆ ರಾಜ್ಯ ಕಾರ್ಯದರ್ಶಿಗಳು

ಆ ಪ್ರಶ್ನೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡಿದರೆ ಎಂಬುದು. ಆ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲವೆಂದು ನಾನು ಹೇಳಿದೆ. ಮಹಿಳೆಯರಿಗೆ, ಪುರುಷರಿಗೆ ಕೊಡುವಷ್ಟೇ ಮಜೂರಿ ಕೊಡಲಾಗುತ್ತಿದೆ.

**ಶ್ರೀ ಎನ್.ಎಂ. ಜೋಷಿ :** ಸಮಾನ ಮಜೂರಿ ಪಾವತಿ ಬಗ್ಗೆ ಹೇಳುವುದಾದರೆ ಭೂತಳದಲ್ಲಿ ಕೆಲಸಮಾಡುವ ಗಂಡು, ಹೆಣ್ಣು ಕಾರ್ಮಿಕರ ತಂಡದ ಕೆಲಸವನ್ನು ಆಧರಿಸಿ ಮಜೂರಿಯನ್ನು ಗೊತ್ತುಪಡಿಸಲಾಗುವುದೆಂಬ ಅಂಶ ಸನ್ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆ ? ಹಾಗಿದ್ದು, ಗಂಡು ಹೆಣ್ಣುಗಳಿಗೆ ಸಮಾನ ಮಜೂರಿ ಪಾವತಿಯಾಗುತ್ತಿದೆ ಎಂದು ಅವರು ಹೇಗೆ ಹೇಳುತ್ತಾರೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಸಮಾನ ಮಜೂರಿ ನಿಯಮವನ್ನು ಯಾವ ರೀತಿಯಿಂದ ಮೀರಲಾಗುತ್ತಿದೆ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದರೆ, ಖಂಡಿತ ಈ ಬಗ್ಗೆ ಕ್ರಮಕೈಗೊಳ್ಳಲಾಗುವುದು.

**ಶ್ರೀ ಎನ್.ಎಂ. ಜೋಷಿ :** ಗಂಡು, ಹೆಣ್ಣು ಕಾರ್ಮಿಕರಿಗೆ ಸಮಾನ ಮಜೂರಿ ದೊರೆಯುತ್ತದೆಯೆ ಎಂದು ತಿಳಿಯಲು ಇರುವ ಮಾರ್ಗಗಳ ಬಗ್ಗೆ ಮಾನ್ಯ ಸದಸ್ಯರು ವಿಚಾರಣೆ ಮಾಡಿದ್ದಾರೆಯೆ? ನನ್ನ ಬಳಿ ಇರುವ ಮಾಹಿತಿಯ ಪ್ರಕಾರ ಹೆಣ್ಣು ಗಂಡು ಕಾರ್ಮಿಕರಿಗೆ, ಕೂಡಿ ಮಾಡಿದ ಕೆಲಸಕ್ಕೆ ಮಜೂರಿ ಸಿಗುತ್ತದೆ. ಇಬ್ಬರಿಗೂ ಒಟ್ಟು ಮಜೂರಿ ಸಿಗುತ್ತದೆ. ಆದ್ದರಿಂದ ಮಜೂರಿ ಸಮಾನವಾಗಿದೆಯೇ ಎಂದು ತಿಳಿಯುವುದು ಕಷ್ಟ ಸಾಧ್ಯ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅದರ ವಿವರಕ್ಕೆ ಹೋಗಲು ನನಗೆ ಸಾಧ್ಯವಾಗುತ್ತಿಲ್ಲ. ಸನ್ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಭರವಸೆ ಕೊಡಬಲ್ಲೆ. ಸರ್ಕಾರ ಪ್ರಕಟಿಸಿದ ಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ಬಂದಿವೆಯೆ ಎಂಬುದನ್ನು ಪರಿಶೀಲಿಸಲು ತಪಾಸಣಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಆಲೋಚಿಸುತ್ತಿದೆ.

**ಶ್ರೀ ಎನ್. ಎಂ. ಜೋಷಿ :** ಭಾರತದಲ್ಲೂ, ಗ್ರೇಟ್ ಬ್ರಿಟನ್ನಿನಲ್ಲೂ, ಕಾರ್ಮಿಕ ಸಂಘಗಳು ನೆಲತಳದಲ್ಲಿ ಕೆಲಸಮಾಡುವ ಮಹಿಳಾ ಕಾರ್ಮಿಕರ ಸ್ಥಿತಿಗಳ ಬಗ್ಗೆ ಆಸಕ್ತಿ ವಹಿಸಿರುವುದರಿಂದ ಸನ್ಮಾನ್ಯ ಸದಸ್ಯರು ಭೂ ಆಳದಲ್ಲಿ ದುಡಿಯುವ ಕಾರ್ಮಿಕರ ಪ್ರಕೃತ ಸ್ಥಿತಿಗತಿಗಳ ಬಗ್ಗೆ ಒಂದು ವರದಿಯನ್ನು ಪ್ರಕಟಿಸಬಹುದಲ್ಲವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

# ೧೫೯
# ಯುದ್ಧ ತಂತ್ರಜ್ಞರ ತರಬೇತಿಗಾಗಿ ಕೇಂದ್ರಗಳು*

**೧೨೦. ಸಯ್ಯದ್ ಗುಲಾಂ ಭಿಕ್ ನೈರಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ಯುದ್ಧ ತಂತ್ರಜ್ಞರ ತರಬೇತಿ ಕೇಂದ್ರಗಳ ಹೆಸರುಗಳನ್ನೂ, ಒಂದು ಕೇಂದ್ರಲ್ಲಿ ಅನುಮತಿಸಲಾಗಿರುವ ಶಿಕ್ಷಣಾರ್ಥಿಗಳ ಸಂಖ್ಯೆಯನ್ನೂ ಒಳಗೊಂಡ ವಿವರವಾದ ಪಟ್ಟಿಯನ್ನು ಸದನದಲ್ಲಿ ಮಂಡಿಸುವರೆ?

ಆ) ಈ ಕೆಳಗೆ ನಮೂದಿಸಿರುವ ವಿಭಾಗಗಳಿಗನುಗುಣವಾಗಿ ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ?

(i) ಸರ್ಕಾರಿ ಸಂಸ್ಥೆಗಳು

(ii) ರೈಲ್ವೇ ಕಾರ್ಯಾಗಾರಗಳು ಮತ್ತು

(iii) ಖಾಸಗಿ ಸಂಸ್ಥೆಗಳು

ಇ) ಇವುಗಳಲ್ಲಿ ಎಷ್ಟು ಖಾಸಗಿ ಸಂಸ್ಥೆಗಳು ಹಿಂದುಗಳಿಗೆ ಸೇರಿವೆ? ಎಷ್ಟು ಮುಸ್ಲಿಮರದು?

ಈ) ಈ ಒಂದೊಂದು ಪ್ರವರ್ಗಕ್ಕೂ ಮಂಜೂರಾಗಿರುವ ಶಿಕ್ಷಣಾರ್ಥಿಗಳ ಸಂಖ್ಯೆ ಏನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಒಂದು ಪಟ್ಟಿಯನ್ನು ಮಂಡಿಸಲಾಗಿದೆ.

ಆ) (i) ೧೨೫ ; (ಇದರಲ್ಲಿ ಭಾರತೀಯ ಪ್ರಾಂತ್ಯಗಳಿಗೆ ಸೇರಿದ ಕೇಂದ್ರಗಳು = ೨೫; ಪೌರಮಹಾನಗರ ಪಾಲಿಕೆಗೆ ಸೇರಿದ್ದು ೪ ; ಪುರಸಭೆಯ ಸಮಿತಿಗಳಿಗೆ ಸೇರಿದ್ದು = ೪ ; ಜಿಲ್ಲಾ ಮಂಡಲಿಗಳದ್ದು = ೫ ; ಸೇರಿವೆ) (ii) ೨೬ ; (iii) ೧೧೯

'ಇ' ಮತ್ತು 'ಈ' ಖಾಸಗಿ ತರಬೇತಿ ಕೇಂದ್ರಗಳು ಕೈಗಾರಿಕಾ ಸಂಸ್ಥೆಗಳಿಗೆ, ತಾಂತ್ರಿಕ ಸಂಸ್ಥೆ ಮೊದಲಾದವುಗಳಿಗೆ ಸೇರಿವೆ. ಅನೇಕ ಸಂದರ್ಭಗಳಲ್ಲಿ ಇವು ನಿಯಮಿತ ಸಂಸ್ಥೆಗಳಿಂದ, ಧರ್ಮದರ್ಶಿಗಳ ಮಂಡಲಿ ಮೊದಲಾದವುಗಳಿಂದ ನಿರ್ವಹಿಸಲ್ಪಡುತ್ತಿವೆ. ಅಂಥ ಪ್ರಕರಣಗಳಲ್ಲಿ, ಕೂಲಂಕಷ ವಿಚಾರಣೆಯಿಲ್ಲದೆ, ಅವು ಪ್ರಧಾನವಾಗಿ ಹಿಂದು ಅಥವಾ ಮುಸ್ಲಿಮ್ ಸ್ವಾಮ್ಯದವೇ ಎಂಬುದನ್ನು ತಿಳಿಸಲು ಬರುವುದಿಲ್ಲ. ೭೬೩ ಸ್ಥಳಾವಕಾಶಗಳಿರುವ, ಸಂಪೂರ್ಣವಾಗಿ ಮುಸ್ಲಿಮ್ ಸ್ವಾಮ್ಯಕ್ಕೆ ಒಳಪಟ್ಟಿರುವ ೭ ತರಬೇತಿ ಕೇಂದ್ರಗಳಿದ್ದರೆ, ೫,೧೯೪ ಸ್ಥಳಾವಕಾಶಗಳಿರುವ ಸ್ಪಷ್ಟವಾಗಿ ಹಿಂದುಗಳ ಸ್ವಾಮ್ಯದಲ್ಲಿರುವ ೨೭ ಕೇಂದ್ರಗಳಿವೆ.

೭೬೩ ಸ್ಥಳವಕಾಶವಿರುವ ೭ ತರಬೇತಿ ಕೇಂದ್ರಗಳು ಸಂಪೂರ್ಣವಾಗಿ ಮುಸ್ಲಿಮರ ಸ್ವಾಮ್ಯಕ್ಕೆ ಒಳಪಟ್ಟಿದ್ದರೆ, ೫೧೮೪ ಸ್ಥಳಾವಕಾಶವಿರುವ ೨೭ ಕೇಂದ್ರಗಳ ಹಿಂದುಗಳ ಸ್ವಾಮ್ಯದಲ್ಲಿವೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂಪುಟ ೧, ೧೬–೨–೧೯೪೪; ಪು. ೨೯೦–೯೧.

## ೧೬೦
## ಉಪ ನಿರ್ದೇಶಕರುಗಳು, ಹಿರಿಯ ಪ್ರಾಂತೀಯ ಇನ್‌ಸ್ಪೆಕ್ಟರುಗಳು ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು ಮತ್ತು ತಾಂತ್ರಿಕ ಇನ್‌ಸ್ಪೆಕ್ಟರುಗಳು*

**೧೨೧. ಸಯ್ಯದ್ ಗುಲಾಂ ಭಿಕ್ ನೈರಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು, ಈಗ ಇರುವ ಉಪನಿರ್ದೇಶಕರು, ಹಿರಿಯ ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು, ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು ಹಾಗೂ ತಾಂತ್ರಿಕ ಇನ್‌ಸ್ಪೆಕ್ಟರ್‌ಗಳ ಸಂಖ್ಯೆಯನ್ನು ತಿಳಿಸುವರೆ?

ಆ) ಅವರಲ್ಲಿ ಎಷ್ಟು ಮಂದಿ ಮುಸ್ಲಿಮರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿವರಗಳು ಈ ಕೆಳಕಂಡಂತೆ ಇವೆ :

| | |
|---|---|
| ತರಬೇತಿ ಕೇಂದ್ರದ ಉಪನಿರ್ದೇಶಕರು | ೨ |
| ತಾಂತ್ರಿಕ ತರಬೇತಿಯ ಹಿರಿಯ ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು | ೭ |
| ತಾಂತ್ರಿಕ ತರಬೇತಿಯ ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳು | ೧೫ |
| ತಾಂತ್ರಿಕ ಇನ್‌ಸ್ಪೆಕ್ಟರ್‌ಗಳು | ೮ |

ಹದಿನೈದು ಪ್ರಾಂತೀಯ ಇನ್‌ಸ್ಪೆಕ್ಟರ್‌ಗಳಲ್ಲಿ ಏಳು ಮಂದಿ ಅರೆ – ಕಾಲಿಕರೂ, ನಾಲ್ವರು ಗೌರವಾರ್ಥಕ ಅಧಿಕಾರಿಗಳೂ ಸೇರಿದ್ದಾರೆ. ಎಂಟು ಮಂದಿ ತಾಂತ್ರಿಕ ಇನ್‌ಸ್ಪೆಕ್ಟರ್‌ಗಳಲ್ಲಿ ಮೂವರು ಅರೆಕಾಲಿಕ ಅಧಿಕಾರಿಗಳು ಸೇರಿದ್ದಾರೆ.

ಆ) ಯಾರೂ ಇಲ್ಲ.

**ಡಾ॥ ಸರ್. ಝಿಯಾವುದ್ದೀನ್ ಅಹಮ್ಮದ್ :** ಇವರಲ್ಲಿ ಒಬ್ಬರೂ ಮುಸ್ಲಿಮರಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆಂದೆ ನಾನು ಹೇಳಿದ್ದೇನೆ.

## ೧೬೧
## ಇಂಗ್ಲೆಂಡಿಗೆ ತರಬೇತಿಗೆ ಕಳುಹಿಸಿದ ಬೆವಿನ್ ಹುಡುಗರು (Bevin Boys)**

**೧೨೨. ಸಯ್ಯದ್ ಗುಲಾಂ ಭಿಕ್ ನೈರಂಗ್ :** (ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು, ಈಗಾಗಲೇ ಎಷ್ಟು ಮಂದಿ ಬೆವಿನ್ ಹುಡುಗರನ್ನು ತರಬೇತಿಗೆಂದು ಇಂಗ್ಲೆಂಡಿಗೆ ಕಳುಹಿಸಲಾಗಿದೆ ಎಂಬುದನ್ನು ತಿಳಿಸುವರೆ?

ಆ) ಅವರಲ್ಲಿ ಎಷ್ಟು ಮಂದಿ ಮುಸಲ್ಮಾನರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೫೬೩ ; (ಆ) ೧೧೦.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪; ಪು. ೨೯೭.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪; ಪು. ೨೯೭.

## ೧೬೨
## ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯ ಮಂಡಲಿಗಳ ಅಧ್ಯಕ್ಷರುಗಳು*

**೧೨೩. ಸಯ್ಯದ್ ಗುಲಾಂ ಭಿಕ್ ನೈರಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಮಂಡಲಿಗಳ ಅಧ್ಯಕ್ಷರುಗಳ ಒಟ್ಟು ಸಂಖ್ಯೆಯನ್ನು ದಯಮಾಡಿ ತಿಳಿಸುವರೆ,

ಆ) ಅವರಲ್ಲಿ ಎಷ್ಟು ಮಂದಿ ಮುಸಲ್ಮಾನರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹತ್ತು ಮಂದಿ. ಇದರಲ್ಲಿ ನಾಲ್ವರು ಪೂರ್ಣಕಾಲಿಕ ಅಧ್ಯಕ್ಷರುಗಳು ಮತ್ತು ಉಳಿದ ಆರು ಮಂದಿ ಅನ್ಯತ್ರ, ಕೇಂದ್ರ ಅಥವಾ ಪ್ರಾಂತೀಯ ಸರ್ಕಾರಗಳಲ್ಲಿ ಪೂರ್ಣಕಾಲಿಕ ಹುದ್ದೆಗಳಲ್ಲಿ ಇಲ್ಲಿ ಅರೆ–ಕಾಲಿಕ ಅಧ್ಯಕ್ಷರುಗಳಾಗಿರುವರು.

ಆ) ಒಬ್ಬರು.

## ೧೬೩
## ಕಲ್ಲಿದ್ದಲು ಆಯುಕ್ತರ ಅರ್ಹತೆಗಳು ಮತ್ತು ಕರ್ತವ್ಯಗಳು*

**ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ಶಾಸನಸಭೆಯಲ್ಲಿ ದಿನಾಂಕ ೧೭–೧೧–೧೯೪೩ರಂದು, ೨೫೦ನೇ ಸಂಖ್ಯೆಯ ಪ್ರಶ್ನೆಗೆ ಕೊಟ್ಟ ಉತ್ತರ ಹೀಗಿದೆ. "ಕಲ್ಲಿದ್ದಲಿನ ಕೊರತೆಗೆ ಮುಖ್ಯ ಕಾರಣವೆಂದರೆ ನಿಸ್ಸಂಶಯವಾಗಿ ಕಾರ್ಮಿಕರ ಕೊರತೆಯೆ" – ಅದನ್ನು ದಯವಿಟ್ಟು ಗಮನಿಸಲು ಅವರ ಮೇಲಿನ ಉತ್ತರದ ಪ್ರಕಾರ ಕಾರ್ಮಿಕರ ಕೊರೆತೆಯೇ ಪ್ರಾಥಮಿಕ ಕಾರಣವೆಂದಿರುವಾಗ, ಕಲ್ಲಿದ್ದಲಿನ ಉತ್ಪಾದನೆಯನ್ನು ಹೆಚ್ಚಿಸಲು, ಕಲ್ಲಿದ್ದಲು ಆಯುಕ್ತರನ್ನು ನೇಮಿಸುವುದು ಅಗತ್ಯವೆಂದು ಸರ್ಕಾರ ಏಕೆ ತೀರ್ಮಾನಿಸಿತು?

ಆ) ಕಲ್ಲಿದ್ದಲು ಆಯುಕ್ತರ ಕರ್ತವ್ಯಗಳೇನು? ನೇಮಕಗೊಂಡ ವ್ಯಕ್ತಿಯ ಅರ್ಹತೆಗಳೇನು? ಅಪೇಕ್ಷಿತ ಅರ್ಹತೆಗಳಿರುವ ಭಾರತೀಯರಾರೂ ಸಿಗುವುದಿಲ್ಲವೆಂದು ಸರ್ಕಾರಕ್ಕೆ ಮನವರಿಕೆಯಾಗಿದೆಯೆ?

ಇ) ಕ್ರಮವಾಗಿ ಕಾರ್ಮಿಕ ಇಲಾಖೆ, ರೈಲ್ವೆ ಇಲಾಖೆ ಮತ್ತು ಸರ್ಕಾರದ ಇನ್ನಾವುದೇ ಇಲಾಖೆಯೊಡನೆ ಕಲ್ಲಿದ್ದಲು ಆಯುಕ್ತರ ಅಧಿಕೃತ ಸಂಬಂಧಗಳೇನು?

ಈ) ಕಲ್ಲಿದ್ದಲು ಆಯುಕ್ತರಿಗೆ ಅರ್ಹತಾನುಸಾರ ಲಭ್ಯವಿರುವ ವರಮಾನಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಯುದ್ಧಸಾರಿಗೆ ಸದಸ್ಯರು ಈ ಪ್ರಶ್ನೆಗೆ ದಿನಾಂಕ ೨೪–೨–೧೯೪೪ರಂದು ಉತ್ತರ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೬–೨–೧೯೪೪ ; ಪು. ೨೯೭.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೧–೨–೧೯೪೪ ; ಪು. ೩೪೫

# ೧೬೪
# ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳು*

**೨೭೩. ಶ್ರೀ ಕೆ. ಎಸ್. ಗುಪ್ತ :** (ಅ) ಮೂಲ ಅಗತ್ಯಗಳಾದ ರೈಲ್ವೆ ಸಂಪರ್ಕ ಮತ್ತು ದೇಶೀಯ ಕೈಗಾರಿಕೆಗಳ ಸಂರಕ್ಷಣೆಗೆ ಅಗತ್ಯವಾದಷ್ಟು ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳಾವುವು ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಕಲ್ಲಿದ್ದಲು ಗಣಿಗಳಲ್ಲಿನ ಕೆಲಸ ಗಣಿ ಕಾರ್ಮಿಕರ ಆರೋಗ್ಯಕ್ಕೆ ತೀವ್ರ ಹಾನಿಕಾರಕವೆಂಬುದು ನಿಜವೆ?

ಇ) ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ಯಾವುದೇ ವಿಶೇಷ ಸೌಲಭ್ಯಗಳಿಲ್ಲದಿರುವುದರಿಂದ ದಕ್ಷ ಮತ್ತು ಕುಶಲ ಕೆಲಸಗಾರರನ್ನು ಈ ಸೇವೆಗೆ ಆಕರ್ಷಿಸಲಾಗುವುದಿಲ್ಲ ಎಂಬುದು ನಿಜವೆ?

ಈ) ಗಣಿ ಕಾರ್ಮಿಕರು ಮತ್ತು ಅವರ ಕುಟುಂಬದಲ್ಲಿ ಅಸಮರ್ಪಕ ಮತ್ತು ನೈರ್ಮಲ್ಯಹೀನ ಪ್ರದೇಶದಲ್ಲಿ ವಾಸ್ತವ್ಯ ಹೂಡಬೇಕಾದ ಪರಿಸ್ಥಿತಿ ಇರುವುದು ಸತ್ಯವೆ?

ಉ) ಕಲ್ಲಿದ್ದಲು ಗಣಿಗಾರಿಕೆ ವಲಯದಲ್ಲಿ ಮಕ್ಕಳಿಗೆ ವೈದ್ಯಕೀಯ ನೆರವಾಗಲಿ, ಶೈಕ್ಷಣಿಕ ಸೌಲಭ್ಯಗಳಾಗಲಿ ಲಭ್ಯವಿಲ್ಲದಿರುವುದು ವಾಸ್ತವ ಸಂಗತಿಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನಾನು ಫೆಬ್ರವರಿ ಹತ್ತನೆಯ ದಿನಾಂಕ ಶ್ರೀ ಎಫ್. ಇ. ಜೇಮ್ಸ್‌ರ ತಾರಾಂಕಿತ ೮೨ನೆ ಸಂಖ್ಯೆಯ ಪ್ರಶ್ನೆಗೆ ಕೊಟ್ಟ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನ ಸೆಳೆಯಲು ಇಚ್ಛಿಸುತ್ತೇನೆ. ಅದು ಸರ್ಕಾರ ಕಲ್ಲಿದ್ದಲು ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳ ವಿವರವನ್ನು ಕೊಡುತ್ತದೆ.

ಆ) ಇಲ್ಲ. ಗಣಿಗಾರಿಕೆಯು ಅಪಾಯಕರ ವೃತ್ತಿ ; ಆದರೆ ಆರೋಗ್ಯಕ್ಕೆ ಹಾನಿಕರವೆಂದು ಭಾವಿಸಲಾಗದು.

ಇ) ಇಲ್ಲ ; ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಆಹಾರವನ್ನು ಒದಗಿಸಲಾಗಿದೆ. ಗಣಿ ಪ್ರದೇಶದಲ್ಲಿ ಬಳಕೆ ಸರಕು ಪೂರೈಕೆಯನ್ನು ಹೆಚ್ಚಿಸಲು ಸರ್ಕಾರವೇ ಅಗತ್ಯ ಕ್ರಮ ಕೈಗೊಳ್ಳುತ್ತಿದೆ.

"ಹೊಸ ಕಲ್ಲಿದ್ದಲು ಗಣಿ ಕಾರ್ಮಿಕ ಕಲ್ಯಾಣ ನಿಧಿ ಅಧ್ಯಾದೇಶ"ದ ಪರಿವ್ಯಾಪ್ತಿಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಯೋಜಿಸಲಾಗಿದೆ.

ಈ) ಝರಿಯ ಮತ್ತು ರಾಣಿಗಂಜ್ ಗಣಿಪ್ರದೇಶಗಳಲ್ಲಿ, ಝರಿಯ ಮತ್ತು ಅಸನ್‌ಸಾಲ್ ಗಣಿಗಳ ಆರೋಗ್ಯಮಂಡಲಿ ನಿಗದಿಪಡಿಸಿರುವ ವಿಶಿಷ್ಟ ವಿವರಣಗಳನ್ನು ಅನ್ವಯಿಸಿ ಪಕ್ಕಾ ಕಟ್ಟಡಗಳನ್ನು ವಸತಿಗಾಗಿ ನಿರ್ಮಿಸಿಕೊಡಲಾಗಿದೆ. ಬೇರೆ ಗಣಿಪ್ರದೇಶಗಳಲ್ಲಿ ನಿವಾಸಿ ಕಾರ್ಮಿಕರ ಸಂಖ್ಯೆ ಕಡಮೆಯಿದ್ದು, ಗಣಿ ಮಾಲೀಕರು ತಮ್ಮ ವಿವೇಚನೆಯನ್ನು ಬಳಸಿ ವಸತಿ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೂ, ಸರ್ಕಾರಕ್ಕೆ ಗಣಿಪ್ರದೇಶದ ವಸತಿ ಮತ್ತು ನೈರ್ಮಲ್ಯದ ಹಾಲಿ ವ್ಯವಸ್ಥೆಯ ಬಗ್ಗೆ ಸಮಾಧಾನವಿಲ್ಲ. "ಕಲ್ಲಿದ್ದಲು ಗಣಿ ಕಾರ್ಮಿಕ ಕಲ್ಯಾಣ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೧–೨–೧೯೪೪ ; ಪು.೭೧೯

ನಿಧಿ ಅಧ್ಯಾದೇಶ"ದ ಅನ್ವಯ ಆ ವ್ಯವಸ್ಥೆಗಳನ್ನು ಉತ್ತಮಪಡಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಉ) ಪ್ರಚಲಿತವಿರುವ ವೈದ್ಯಕೀಯ ನೆರವಾಗಲಿ, ಶೈಕ್ಷಣಿಕ ಸೌಲಭ್ಯಗಳಾಗಲಿ ಅಷ್ಟು ಸಮರ್ಪಕವಾಗಿಲ್ಲ. ಕಲ್ಲಿದ್ದಲು ಗಣಿ ಕಾರ್ಮಿಕ ನಿಧಿ ಅಧ್ಯಾದೇಶದ ಅನ್ವಯ ಅವ್ಯವಸ್ಥೆಗಳನ್ನು ಉತ್ತಮಪಡಿಸಲು ಯೋಜನೆಗಳನ್ನು ತಯಾರಿಸಲಾಗುತ್ತಿದೆ.

**ಶ್ರೀ ಎನ್. ಎಂ. ಜೋಷಿ :** ಭಾರತ ಸರ್ಕಾರವು ಕಲ್ಲಿದ್ದಲು ಗಣಿ ಪ್ರದೇಶದಲ್ಲಿರುವ ವಸತಿ ಮತ್ತು ಇತರ ಪರಿಸ್ಥಿತಿಯ ಬಗ್ಗೆ ಹಾಗೂ ಅದನ್ನು ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮದ ಬಗ್ಗೆ, ಶಾಸನಸಭೆಗಾಗಿ, ಒಂದು ವರದಿಯನ್ನು ತಯಾರಿಸಿ, ಅದನ್ನು ಸದನದ ಮುಂದಿರಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಅಭಿಪ್ರಾಯದಲ್ಲಿ ವರದಿ ಮಾಡುವಂಥದ್ದು ಏನೂ ಇಲ್ಲ. ನಾವು ಈಗ ತಾನೆ ಕೆಲಸ ಪ್ರಾರಂಭಿಸಿದ್ದೇವೆ. ಈ ಅಧ್ಯಾದೇಶದ ಕಾರ್ಯಾಚರಣೆಯನ್ನು ಸ್ವಲ್ಪ ಕಾಲ ಗಮನಿಸಿ ನೋಡಿ, ಅನಂತರ ನನ್ನ ಸನ್ಮಾನ್ಯ ಮಿತ್ರರು ವರದಿಯನ್ನು ಬಯಸುವುದಾದರೆ ಆಗ ಆ ವಿಚಾರವನ್ನು ಪರಿಶೀಲಿಸಲು ನಾನು ಖಂಡಿತವಾಗಿಯೂ ಸಿದ್ಧವಿರುತ್ತೇನೆ.

**ಶ್ರೀ ಎನ್. ಎಂ. ಜೋಷಿ :** ಸದನಕ್ಕೆ ಈ ವಿಷಯದಲ್ಲಿ ತೀವ್ರ ಆಸಕ್ತಿಯಿದೆ. ಅಲ್ಲಿನ ಪರಿಸ್ಥಿತಿಯ ಬಗ್ಗೆ ಮತ್ತು ಮಾಡಿದ ಸುಧಾರಣೆಯ ಬಗ್ಗೆ ಮಾಹಿತಿಯನ್ನು ಪಡೆಯಲು ಇಚ್ಛಿಸುತ್ತದೆ. ಆದ್ದರಿಂದ ಸರ್ಕಾರವು ಈ ಬಗ್ಗೆ ಒಂದು ವರದಿಯನ್ನು ಸದನಕ್ಕೆ ಸಲ್ಲಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದಕ್ಕೆ ನಾನು ಮೊದಲೇ ಉತ್ತರಕೊಟ್ಟಿದ್ದೇನೆ.

## ೧೬೫
## ಕಾರ್ಖಾನೆಗಳ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) : ಮಾನ್ಯರೇ, ೧೯೩೪ರ ಕಾರ್ಖಾನೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡಲು ಮಸೂದೆಯೊಂದನ್ನು ಮಂಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ.

**ಶ್ರೀಮಾನ್ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ವಿಷಯ: "೧೯೩೪ರ ಕಾರ್ಖಾನೆಗಳಲ್ಲಿ ಅಧಿನಿಯಮವನ್ನು ತಿದ್ದುಪಡಿ ಮಾಡಲು, ಮಸೂದೆಯೊಂದನ್ನು ಮಂಡಿಸಲು ಅನುಮತಿಸಲಾಗಿದೆ."

ಪ್ರಸ್ತಾಪವು ಅಂಗೀಕೃತವಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೩–೩–೧೯೪೪ ; ಪು. ೭೯೮

# ೧೬೬
# ಅನುಸೂಚಿತ ಜಾತಿಯವರನ್ನು ಬಲತ್ಕಾರದ ದುಡಿಮೆಗೆ ಒಳಪಡಿಸುವುದು ಮತ್ತು "ಬೇಗಾರ್"*

**ರಾವ್‌ಬಹದ್ದೂರ್ ಎನ್. ಶಿವರಾಜ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ಪ್ರಶ್ನೆಗಳಿಗೆ ಉತ್ತರ ನೀಡುವರೆ?

ಅ) ಕೃಷಿ ಕಾರ್ಮಿಕರ ಕಲ್ಯಾಣ ಮತ್ತು ಸಂರಕ್ಷಣೆ ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಕಾರ್ಯವೆ?

ಆ) ೧೯೪೪ನೆಯ ವರ್ಷದ ಜನವರಿ ೨೯ ಮತ್ತು ೩೦ನೆಯ ದಿನಾಂಕಗಳಲ್ಲಿ ಕಾನ್‌ಪುರದಲ್ಲಿ ಸಮಾವೇಶವಾಗಿದ್ದ ಅಖಿಲ ಭಾರತ ಅನುಸೂಚಿತ ಜಾತಿಗಳ ಒಕ್ಕೂಟದ ವಾರ್ಷಿಕ ಅಧಿವೇಶನದಲ್ಲಿ ಅನುಸೂಚಿತ ಜಾತಿಗಳವರು ಮಾತ್ರ ಏಕೈಕ ಬಲಿಪಶುವಾಗುತ್ತಿರುವ, ಭಾರತಾದ್ಯಂತ ಪ್ರಚಲಿತವಿರುವ, ಬಲತ್ಕಾರದ ದುಡಿಮೆ, 'ಬೇಗಾರ್' ಪದ್ಧತಿಯನ್ನು ಖಂಡಿಸಿ ಕೈಕೊಂಡ ನಿರ್ಣಯವು ತಮ್ಮ ಗಮನಕ್ಕೆ ಬಂದಿದೆಯೇ?

ಇ) ಈ 'ಬೇಗಾರ್' ಪದ್ಧತಿಯನ್ನು ನಿಲ್ಲಿಸಲು ಸರ್ಕಾರ ಯಾವ ಕ್ರಮತೆಗೆದುಕೊಳ್ಳಲು ಯೋಚಿಸಿದೆ?

ಈ) ಈ ಪದ್ಧತಿಯನ್ನು ಸಮೀಕ್ಷಿಸಿ ಅದನ್ನು ಕಾನೂನಿನ ಮೂಲಕ ರದ್ದುಮಾಡುವ ಉದ್ದೇಶದಿಂದ ಒಂದು ಸಮಿತಿಯನ್ನು ರಚಿಸಲು ಭಾರತ ಸರ್ಕಾರ ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಈ ವಿಷಯ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದೆ. ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಏಳನೆಯ ಪರಿಶಿಷ್ಟ (ಷೆಡ್ಯೂಲರ್)ದ ಎರಡನೆಯ ಭಾಗದ, ಮೂರನೆಯ ಪಟ್ಟಿಯಲ್ಲಿರುವ ಸಮವರ್ತಿ ವಿಷಯಗಳಲ್ಲಿ ಇದು ಸೇರ್ಪಡೆಯಾಗಿದೆ.

ಆ) ಅಖಿಲ ಭಾರತ ಅನುಸೂಚಿತ ಜಾತಿಗಳ ಒಕ್ಕೂಟದಿಂದ ಯಾವುದೇ ಔಪಚಾರಿಕ ಪತ್ರ ನಮಗೆ ಬಂದಿಲ್ಲ.

ಇ) ಭಾರತ ಸರ್ಕಾರವು ಈ ಪ್ರಶ್ನೆಯನ್ನು ಇಲ್ಲಿಯವರೆಗೆ ಪರಿಶೀಲಿಸಿಲ್ಲ.

ಈ) ಸಲಹೆಯನ್ನು ಕಾಲಾನುಕ್ರಮದಲ್ಲಿ ಪರಿಗಣಿಸಲಾಗುವುದು.

**ಶ್ರೀ ಗೋವಿಂದ ವಿ. ದೇಶಮುಖ್ :** ಮಧ್ಯ ಪ್ರಾಂತ್ಯಗಳಲ್ಲಿ ಮತ್ತು ಬೇರಾರ್‌ನಲ್ಲಿ ಈ 'ಬೇಗಾರ್' ಅನ್ನು ರದ್ದುಮಾಡಿರುವುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಬಗ್ಗೆ ನನ್ನಲ್ಲಿ ಯಾವುದೇ ಮಾಹಿತಿ ಇಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಘನತೆವೆತ್ತ ಪ್ರಭುತ್ವದ ಪ್ರತಿನಿಧಿಯೂ, ಅವರ ಕಾರ್ಯಭಾರಿ (ಏಜೆಂಟು) ಈ ರೀತಿಯ ಬಲಾತ್ಕಾರದ ದುಡಿಮೆಯು ನಿಲ್ಲಬೇಕೆಂದು ರಾಜ್ಯಾಡಳಿತದ ಮೇಲೆ ಪ್ರಭಾವ ಬೀರುತ್ತಿರುವುದೂ ಅದರ ಪರಿಣಾಮವಾಗಿ, ದೇಶದ ಕೆಲವು ಭಾಗಗಳಲ್ಲಿ ತುಂಬ ಅನುಕೂಲಕರ ಫಲಿತಾಂಶವಾಗಿರುವುದು ನಿಜವಲ್ಲವೇ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೭–೩–೧೯೪೪ ; ಪು. ೯೦೩–೪

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಈ ಸಂಗತಿ ನನಗೆ ಸಂತೋಷ ಕೊಟ್ಟಿದೆ.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್** : ಸಂಯುಕ್ತ ಪ್ರಾಂತ್ಯಗಳಲ್ಲಿ ಕೃಷಿಕರೆಂದು ಕರೆಯಲ್ಪಡುವವರಲ್ಲಿ ಶೇಕಡ ೩೮ ಮಂದಿ ಗ್ರಾಮೀಣ ಕೂಲಿಕಾರರು. ಬೆಲೆ ಏರಿಕೆಯ ದೆಸೆಯಿಂದ ಅವರಿಗೆ ಯಾವುದೇ ಲಾಭ ದೊರೆಯುತ್ತಿಲ್ಲ. ಈ ಕೃಷಿಕರಿಗೆ ಮಜೂರಿಯು ವಸ್ತು ರೂಪದಲ್ಲಿ ದೊರೆಯುವುದಿಲ್ಲ. ಅವರಿಗೆ ಹಣದ ರೂಪದಲ್ಲಿ ಮಜೂರಿ ಪಾವತಿಯಾಗುವುದರಿಂದ ಅವರಿಗೆ ವಿಪರೀತ ತೊಂದರೆ....

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಪ್ರಶ್ನೆ ಏನು?

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್** : ಪ್ರಶ್ನೆಯೇನೆಂದರೆ, ಸನ್ಮಾನ್ಯ ಸದಸ್ಯರಿಗೆ ಈ ಅಂಶಗೊತ್ತಿದೆಯೆ, ಅಂದರೆ, ಕೃಷಿಕರು....

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸನ್ಮಾನ್ಯ ಸದಸ್ಯರು ಸುದೀರ್ಘ ಭಾಷಣ ಮಾಡಿದ್ದಾರೆ.

**ಡಾ॥ ಸರ್ ಝಿಯಾವುದ್ದೀನ್ ಅಹಮದ್** : ಸನ್ಮಾನ್ಯ ಸದಸ್ಯರಿಗೆ ಇದು ಗೊತ್ತಿದೆಯೆ? ಮತ್ತು ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳಲು ಉದ್ದೇಶಿಸಿದೆ, ಎಂಬುದು ಪ್ರಶ್ನೆ.

(ಉತ್ತರವಿಲ್ಲ)

## ೧೬೭
## ಸಂಧಾನಾಧಿಕಾರಿ (ರೈಲ್ವೆ) ಮತ್ತು ಕಾಮಗಾರಿಯ ಮೇಲ್ವಿಚಾರಕರ ಕಾರ್ಯಚಟುವಟಿಕೆಗಳ ವಿಸ್ತರಣೆ*

**೩೯೪ ಶ್ರೀ ಲಾಲ್‌ಚಂದ್ ನವಲ್‌ರಾಯ್** : ಕಳೆದ ನವೆಂಬರ್ ಹದಿಮೂರರಂದು ನಾನು ಕೇಳಿದ ತಾರಾಂಕಿತ ೧೩೧ನೆಯ ಪ್ರಶ್ನೆಗೆ ಕೊಟ್ಟ ಉತ್ತರದಂತೆ ಸಂಧಾನಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ಕಾರ್ಯಚಟುವಟಿಕೆಗಳನ್ನು, ಕಲ್ಕತ್ತೆಯಲ್ಲಿ ಪ್ರಧಾನ ಕಛೇರಿಯಿಲ್ಲದ ಇತರ ರೈಲ್ವೆ ಕೇಂದ್ರಗಳಿಗೆ ವಿಸ್ತರಿಸುವ ಬಗ್ಗೆ ಯಾವುದಾದರೂ ನಿರ್ಣಯ ತೆಗೆದುಕೊಳ್ಳಲಾಯಿತೆ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? ಇಲ್ಲವಾದಲ್ಲಿ ಪ್ರಾಯಶಃ ಎಂದು ನಿರ್ಣಯ ತೆಗೆದುಕೊಳ್ಳಬಹುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಕೇಂದ್ರೀಯ ಉದ್ಯಮಗಳಲ್ಲಿ ತಲೆದೋರಬಹುದಾದ ವಾಣಿಜ್ಯ ವ್ಯಾಜ್ಯಗಳ ಇತ್ಯರ್ಥಕ್ಕೆ ಒಂದು ವ್ಯಾಪಕ ಪ್ರಸ್ತಾವನೆಯ ಆಡಳಿತದ ವ್ಯವಸ್ಥೆಯನ್ನು ರೂಪಿಸುವ ಉದ್ದೇಶದಿಂದ, ಆ ಪ್ರಶ್ನೆಯ ಮೇಲೆ ನಿರ್ಣಯ ತೆಗೆದುಕೊಳ್ಳುವುದನ್ನು ಮುಂದೂಡಲಾಯಿತು.

**ಶ್ರೀ ಲಾಲ್‌ಚಂದ್ ನವಲ್‌ರಾಯ್** : ಅದನ್ನು ಯುದ್ಧಾನಂತರ ತೆಗೆದುಕೊಳ್ಳುವಿರೋ ಅಥವಾ ಈಗಲೇ ಜಾರಿಗೆ ಕೊಡುವಿರೋ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ನಾನು ಕೊಟ್ಟ ಉತ್ತರದಿಂದ ನಿಮಗೆ ಈ ಸಂದೇಹ ಹೇಗೆ ಬಂದಿತೋ ಕಾಣೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೪–೩–೧೯೪೪ ; ಪು. ೧೦೭೪–೭೫

# ೧೬೮
# ಸಂಯುಕ್ತ ಪ್ರಾಂತ್ಯಗಳ ನಾಗರಿಕ ಪ್ರವರ್ತಕ ಪಡೆಯಲ್ಲಿರುವ ಅನುಸೂಚಿತ ಜಾತಿಯ ನಿಯೋಜಿತ ಅಧಿಕಾರಿಗಳು*

**೪೧೪. ಪಿಯರ್‌ಲಾಲ್ ಕುರೀಲ್ :** ಶ್ರೀ ಜಿ. ರಂಗಯ್ಯ ನಾಯ್ಡು ಅವರು ೧೯೪೪ನೇ ಫೆಬ್ರವರಿ ೧೫ರಂದು ಕೇಳಿದ, ನಾಗರಿಕ ಪ್ರವರ್ತಕ ಪಡೆಯಲ್ಲಿರುವ ಅನುಸೂಚಿತ ಜಾತಿಯ ನಿಯೋಜಿತಾಧಿಕಾರಿಗಳಿಗೆ ಸಂಬಂಧಿಸಿದ ತಾರಾಂಕಿತ ಪ್ರಶ್ನೆಗೆ ೧೧೧ಕ್ಕೆ ಕೊಟ್ಟ ಉತ್ತರಕ್ಕೆ ಸಂಬಂಧಿಸಿದಂತೆ, ಸನ್ಮಾನ್ಯ ಕಾರ್ಮಿಕ ಸದಸ್ಯರು, ಸಂಯುಕ್ತ ಪ್ರಾಂತ್ಯಗಳ ನಾಗರಿಕ ಮೂಲ ಪಡೆಯಲ್ಲಿರುವ ಅನುಸೂಚಿತ ಜಾತಿಯ ನಿಯೋಜಿತಾಧಿಕಾರಿಗಳ ಹೆಸರುಗಳನ್ನು ಕೊಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವಿವರಣೆಯುಳ್ಳ ಪಟ್ಟಿಯನ್ನು ಸದನದ ಮುಂದಿರಿಸಿದ್ದೇನೆ.

**ಸಂಯುಕ್ತ ಪ್ರಾಂತ್ಯಗಳ ಪ್ರವರ್ತಕ ದಳ ಘಟಕಗಳಲ್ಲಿದ್ದು, ನಿಯೋಜಿತಾಧಿಕಾರಿಗಳಾಗಿ ನೇಮಕಗೊಂಡಿರುವ ಅನುಸೂಚಿತ ಜಾತಿ ಅಭ್ಯರ್ಥಿಗಳ ವಿವರವನ್ನು ತೋರಿಸುವ ಪಟ್ಟಿ**

| ಅನುಸೂಚಿತ ಜಾತಿ ಅಧಿಕಾರಿಗಳ ಹೆಸರು | ಮೊದಲನೇ ನೇಮಕಾತಿಯ ದಿನಾಂಕ ಮತ್ತು ಶ್ರೇಣಿ | ಪ್ರಕೃತ ಶ್ರೇಣಿ | ನೇಮಕವಾದ ಅಧಿಕಾರಿಗಳ ಒಟ್ಟು ಸಂಖ್ಯೆ | ನೇಮಕಗೊಂಡ ಅನುಸೂಚಿತ ಜಾತಿ ಅಧಿಕಾರಿಗಳ ಸಂಖ್ಯೆ |
|---|---|---|---|---|
| ೧. ನಂದಲಾಲ್ ಕುರೀಲ್ | ೧೯–೫–೪೩ | ॥ ಲೆಫ್ಟಿನೆಂಟ್ | ೨೮ | ೪ |
| ೨. ಎಸ್.ಕೆ. ಮಲೀಕ್ | ೩–೭–೪೩ | ॥ ಲೆಫ್ಟಿನೆಂಟ್ | | |
| ೩. ಕೆ.ಬಿ. ಭಾಲೆರಾವ್ | ೧೯–೧–೪೩ | ॥ ಲೆಫ್ಟಿನೆಂಟ್ | | |
| ೪. ಕ್ಷೇತ್ರಪಾಲ್‌ಸಿಂಗ್ ಸಾಗರ್ | ೨೯–೧–೪೪ | ॥ ಲೆಫ್ಟಿನೆಂಟ್ | | |

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೧–೨–೧೯೪೪ ; ಪು. ೧೦೨೪–೨೫

# ೧೬೯
# ನಾಗರಿಕ ಪ್ರವರ್ತಕ ಪಡೆಯ ಕಾರಕೂನರ ಕೋಮುವಾರು ಸಂಯೋಜನೆ*

**೪೧೬. ಶ್ರೀ ಪಿಯರ್‌ಲಾಲ್ ಕುರೀಲ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದೆ ಕೇಳಿದ ವಿವರಗಳನ್ನು ಒದಗಿಸುವರೆ?

ಅ) ವಿವಿಧ ಪ್ರಾಂತ್ಯಗಳ ನಾಗರಿಕ ಪ್ರವರ್ತಕ ಪಡೆಯಲ್ಲಿರುವ ಒಟ್ಟು ಕಾರಕೂನರ ಸಂಖ್ಯೆ ಮತ್ತು

ಆ) ಆ ಕಾರಕೂನರಲ್ಲಿ ವಿವಿಧ ಪ್ರಾಂತ್ಯಗಳಲ್ಲಿರುವ ಹಿಂದುಗಳು, ಮುಸ್ಲಿಮರು, ಅನುಸೂಚಿತ ಜಾತಿಯವರು, ಕ್ರಿಶ್ಚಿಯನ್ನರು ಮತ್ತು ಆಂಗ್ಲೋಇಂಡಿಯನ್ನರು ಎಷ್ಟು ಮಂದಿ? ಪ್ರಾಂತ್ಯಾನುಸಾರ ಪ್ರತ್ಯೇಕ ಮಾಹಿತಿ ಕೊಡಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅನೇಕ ಘಟಕಗಳು ಯುದ್ಧ ಕ್ಷೇತ್ರಗಳಲ್ಲಿವೆ. ಮಿಕ್ಕವರು ಸೇನಾ ಹೊರದಾಣದಲ್ಲಿದ್ದಾರೆ. ಆದ್ದರಿಂದ ಕೇಳಲಾದ ಮಾಹಿತಿಯನ್ನು ಸಂಗ್ರಹಿಸಲು ಈ ಸನ್ನಿವೇಶದಲ್ಲಿ ಸಾಧ್ಯವಾಗುವುದಿಲ್ಲ.

# ೧೭೦
# ನವದೆಹಲಿಯ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳಲ್ಲಿರುವ ತಾರತಮ್ಯ**

**೪೯೩. ಸರ್ದಾರ್ ಸಂತ್ ಸಿಂಗ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರಕೂನರ ಸಾಂಪ್ರದಾಯಿಕ ನಿವಾಸಗಳಿಗಿಂತಲೂ, ಅದಕ್ಕೆ ಸಂವಾದಿಯಾದ ಕಾರಕೂನರ ಅಸಾಂಪ್ರದಾಯಿಕ ನಿವಾಸಗಳ ಅದರಲ್ಲೂ ವಿಶೇಷವಾಗಿ ಮಿಂಟೋ ರಸ್ತೆ ಪ್ರದೇಶದಲ್ಲಿ – ಹೊರಮನೆ, ಕೈತೋಟವನ್ನು ಒಳಗೊಂಡಂತೆ ಮೇಲ್ಛಾಯ, ಭೂಕ್ಷೇತ್ರಗಳು ವಿಸ್ತಾರವಾದುದು. ಆದ್ದರಿಂದ ಅಸಾಂಪ್ರದಾಯಿಕ ನಿವಾಸಗಳಲ್ಲಿರುವ ಬಾಡಿಗೆದಾರರಿಗೆ, ತರಕಾರಿ ಬೆಳೆಯಲು, ಹೂ–ತೋಟ ಮಾಡಲು, ಕೋಳಿ ಸಾಕಲು, ಹೈನುಗಾರಿಕೆ ಮಾಡಲು, ದನ ಸಾಕಲು, ಬ್ಯಾಡ್‌ಮಿಂಟನ್ ಅಥವಾ ಟೆನಿಸ್ ಕ್ಷೇತ್ರ ಮಾಡಿಕೊಳ್ಳಲು ಸಾಕಷ್ಟು ತೆರೆದ ಬಯಲು ಲಭ್ಯವಿದ್ದರೆ, ಸಾಂಪ್ರದಾಯಿಕ ನಿವಾಸಗಳಲ್ಲಿ ಒಂದು ಸಾಧಾರಣ ಗಾತ್ರದ ಕುಟುಂಬಕ್ಕೂ ಬೇಸಗೆಯಲ್ಲಿ 'ಚಾರ್‌ಪಾಯಿ' ಹಾಕಲು ಜಾಗವಿರುವುದಿಲ್ಲ. ಅಲ್ಲದೆ 'ಡಿ' ಮತ್ತು 'ಇ' ಸಾಂಪ್ರದಾಯಕ ಮಾದರಿಗಳಲ್ಲಿ ಛಾವಣಿಯು ತಗ್ಗಾಗಿದ್ದು, ಬೇಸಗೆಯಲ್ಲಿ ಬಹು ಬೇಗ ಅದು ಶಾಖತಪ್ತವಾಗುವುದರಿಂದ ಹೆಚ್ಚಿನ ತೊಂದರೆಯಾಗುತ್ತಿದೆ ಎಂಬುದು ವಸ್ತುಸ್ಥಿತಿಯೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೧೬–೩–೧೯೪೪, ಪು. ೧೦೩೭

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೧೭–೩–೧೯೪೪, ಪು. ೧೨೧೭–೧೮

ಆ) ಅಸಾಂಪ್ರದಾಯಿಕ ನಿವಾಸಗಳ ನಿರ್ಮಾಣದಲ್ಲಿ ಬಳಸಿರುವ ಮರ, ಚಿಲಕ ಮೊದಲಾದ ಸಾಮಾನುಗಳ, ಒದಗಿಸಿದ ಪೀಠೋಪಕರಣಗಳ, ಕಾಮಗಾರಿಕೆಯ ಗುಣಮಟ್ಟವು, ಸಂವಾದಿಯಾಗಿ, ಸಾಂಪ್ರದಾಯಿಕ ನಿವಾಸಗಳಲ್ಲಿರುವುದಕ್ಕಿಂತಲೂ ಉತ್ತಮಕರವಾಗಿದೆಯೆ?

ಇ) ಈ ಕೆಳಗೆ ನಮೂದಿಸಿರುವ, ಅಸಾಂಪ್ರದಾಯಿಕ ನಿವಾಸಗಳಿಗೆ ಒದಗಿಸಿರುವ, ವಿಶೇಷ ಸೌಲಭ್ಯಗಳು ಮತ್ತು ಜೋಡಣೆಗಳು ಸಾಂಪ್ರದಾಯಿಕ ನಿವಾಸಗಳಲ್ಲಿರುವುದಿಲ್ಲ , ಅಲ್ಲವೆ?

(i) ಉದ್ಯಾನ ಮತ್ತು ಹಸಿರುಪೊದೆ,
(ii) ಸೇವಕರ ನಿವಾಸ,
(iii) ಒಲೆಯ ಬಾಯಿಗೆ ಕಬ್ಬಿಣ ಸರಳಿನ ತಡೆ,
(iv) ಗೋಡೆ ಕಪಾಟು/ಬೀರು,
(v) ಪರದೆ ಮತ್ತು ಬಿದಿರು ತೆರೆಗಳಿಗೆ ಕೊಂಡಿಗಳು ಇತ್ಯಾದಿ,
(vi) ಬಚ್ಚಲು ಮನೆಯಲ್ಲಿ ವಾಷ್‌ಬೇಸಿನ್,
(vii) ಹೊರಾವರಣದಲ್ಲಿ (ಕಾಂಪೌಂಡಿನಲ್ಲಿ) ಪರಿಶೋಧಿಸಿದ ನೀರಿನ ಸಂಪರ್ಕ,
(viii) 'ಡಿ' ಮತ್ತು 'ಇ' ಮಾದರಿ ಸಾಂಪ್ರದಾಯಿಕ ನಿವಾಸಗಳಲ್ಲಿ ಸಡಿಲಪಟ್ಟಿಕೆಯ ಮುಚ್ಚಳದ ಕಿಟಕಿ.

ಈ) 'ಬಿ'ಗಿಂತಲೂ ಕೆಳದರ್ಜೆ ಸಾಂಪ್ರದಾಯಿಕ ನಿವಾಸಗಳಲ್ಲಿ ದನದ ಕೊಟ್ಟಿಗೆಗಳನ್ನು ಕಟ್ಟಲು ಅನುಮತಿ ಇರುವುದಿಲ್ಲ . ಆದರೆ ಅದಕ್ಕೆ ಸಂವಾದಿಯಾದ ಅಸಾಂಪ್ರದಾಯಿಕ ನಿವಾಸಗಳಲ್ಲಿ ಅದಕ್ಕೆ ಅನುಮತಿ ಇದೆ.

ಉ) ಅಸಾಂಪ್ರದಾಯಿಕ ನಿವಾಸಗಳ ಬಾಡಿಗೆದಾರರು ಲೋಕೋಪಯೋಗಿ ವಿಚಾರಣಾ ಕಛೇರಿಗೆ ಸಲ್ಲಿಸುವ ದೂರುಗಳಿಗೆ ತಕ್ಷಣದ ಗಮನ ಕೊಡಲಾಗುವುದೆಂದೂ, ಹಾಗೆಯೇ ವಾರ್ಷಿಕ ದುರಸ್ತಿ, ಸಾಮಾನ್ಯ ಪಾಲನೆಗಳಲ್ಲಿಯೂ, ಸಾಂಪ್ರದಾಯಿಕ ನಿವಾಸಗಳಿಗಿಂತಲೂ, ಅಸಾಂಪ್ರದಾಯಿಕ ನಿವಾಸಗಳಿಗೆ ಆದ್ಯತೆ ದೊರೆಯುವುದೆಂಬುದು ನಿಜವೆ?

ಊ) ಅಸಾಂಪ್ರದಾಯಿಕ ನಿವಾಸಗಳ ಪಾಲನಾವೆಚ್ಚ ಸಾಂಪ್ರದಾಯಕ ನಿವಾಸಗಳ ಪಾಲನಾ ವೆಚ್ಚಕ್ಕಿಂತಲೂ ಎಷ್ಟೋ ಪಾಲು ಹೆಚ್ಚು . ಅಲ್ಲದೆ ಅಸಾಂಪ್ರದಾಯಕ ನಿವಾಸಗಳಿಂದ ಬರುವ ಆದಾಯ, ಅದಕ್ಕೆ ತೊಡಗಿಸಿದ ಮೂಲಧನದ ದೃಷ್ಟಿಯಿಂದ ತೀರ ಅಗಣ್ಯ . ಆದರೆ ಸಾಂಪ್ರದಾಯಕ ನಿವಾಸಗಳು ಸರ್ಕಾರಕ್ಕೆ ಸಾಕಷ್ಟು ಆದಾಯವನ್ನು ತರುತ್ತಿವೆ.

ಋ) (ಅ) ಗೆ ಉತ್ತರ ಇತ್ಯಾತ್ಮಕವಾಗಿದ್ದರೆ, ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಮಾದರಿ ನಿವಾಸಗಳಿಗೆ ಪೂರೈಸುವ ಸೌಲಭ್ಯಗಳಲ್ಲಿ ಈ ತಾರತಮ್ಯವೇಕೆ? – ಅದರಲ್ಲೂ ಈ ಎರಡು ವರ್ಗಗಳ ನಿವಾಸಿಗಳಿಗೆ ಏಕಪ್ರಮಾಣದ ಅಂದರೆ, ವೇತನದ ಶೇಕಡ ೧೦ರಷ್ಟು ಬಾಡಿಗೆಯನ್ನು ನಿಗದಿಪಡಿಸಿರುವಾಗ ಮತ್ತು ,

ಎ) ಕಟ್ಟುನಿಟ್ಟಾದ ವಾಣಿಜ್ಯ ನೀತಿಗನುಗುಣವಾಗಿ ಮೂಲಭೂತ ನಿಯಮಗಳನ್ನು ತಿದ್ದುಪಡಿ ಮಾಡಲು ಸರ್ಕಾರ ಸಿದ್ಧವಾಗಿದೆಯೇ? ಇಲ್ಲವಾದಲ್ಲಿ ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಪ್ರಶ್ನೆಯ ಪೂರ್ವಭಾಗಕ್ಕೆ ಉತ್ತರ : 'ಇತ್ಯಾತ್ಮಕ'; ಅನಂತರದ ಭಾಗಕ್ಕೆ ಉತ್ತರ 'ನೇತ್ಯಾತ್ಮಕ'

ಆ) ಇಲ್ಲ.

ಇ) ಹೌದು : (i), (ii), (iii), (iv) ಮತ್ತು (v) – ಇವುಗಳಿಗೆ ಸಂಬಂಧಿಸಿದಂತೆ. ಸಾಂಪ್ರದಾಯಿಕ ನಿವಾಸಗಳಲ್ಲಿ, 'ಡಿ' ಮತ್ತು 'ಇ' ಮಾದರಿಯನ್ನು ಹೊರತುಪಡಿಸಿ ಉಳಿದವುಗಳಲ್ಲಿ ಸೇವಕನಿಗೆ ಒಂದು ಕೋಣೆ ಇದೆ. ಸಾಂಪ್ರದಾಯಿಕ ನಿವಾಸಗಳ ಆಚೆಗೆ, ತೆರೆದ ಆವರಣದಲ್ಲಿ ಪರಿಶೋಧಿತ ನೀರಿನ ಸಂಪರ್ಕವಿದೆ.

ಈ) ಹೌದು.

ಉ) ಇಲ್ಲ.

ಊ) ಈ ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ ಇತ್ಯಾತ್ಮಕವಾಗಿದೆ. ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ ಹೀಗೆ ವಿವರಣೆ ಕೊಡಬಹುದು. ಈ ಎರಡು ಬಗೆಯ ನಿವಾಸಗಳನ್ನು ಆಶ್ರಯಿಸಿರುವ ಸರ್ಕಾರಿ ನೌಕರರು, ನಿಗದಿತ ಬಾಡಿಗೆ ಅಥವಾ ತಮ್ಮ ವೇತನದ ಶೇಕಡ ೧೦ರಷ್ಟು ಬಾಡಿಗೆ–ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಕೊಡುತ್ತಾರೆ. ಸಾಂಪ್ರದಾಯಿಕ ನಿವಾಸಗಳ ನಿಗದಿತ ಬಾಡಿಗೆ ದರ ಕಡಮೆ ಇರುವುದರಿಂದ ಬಹು ಮಂದಿ ಬಾಡಿಗೆದಾರರು ನಿಗದಿತ ಬಾಡಿಗೆಯನ್ನೇ ಕೊಡುತ್ತಾರೆ.

ಋ) ನಿಗದಿತ ವಿನ್ಯಾಸಕ್ಕೆ ಅನುಗುಣವಾಗಿ, ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಜೀವನ ಶೈಲಿಗಳಿಗೆ ಹೊಂದಿಕೊಳ್ಳುವಂತೆ ಈ ಎರಡು ಮಾದರಿಯ ನಿವಾಸಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಬಾಡಿಗೆಯನ್ನು ನಿಯಮಾನುಸಾರ ವಿಧಿಸಲಾಗಿದೆ.

ೠ) ಇಲ್ಲ ; ಸರ್ಕಾರವು ನಿಯಮಗಳಲ್ಲಿ ಸೂಚಿಸಿರುವಂತೆ ರಿಯಾಯಿತಿ ದರದಲ್ಲಿ ನಿವಾಸಗಳನ್ನು ಒದಗಿಸಿದೆ. ಅಧಿಕಾರಿಗಳ ಲಹರಿಗೆ ತಕ್ಕಂತೆ ನಿಯಮಗಳನ್ನು ಬದಲಾಯಿಸುವುದಿಲ್ಲ.

**ಸರ್ದಾರ್ ಸಂತ್‌ಸಿಂಗ್ :** ಸಾಂಪ್ರದಾಯಿಕ ನಿವಾಸಗಳ ಕಾಂಪೌಂಡಿನಲ್ಲಿ ನೀರಿನ ಪೂರೈಕೆ ಇದ್ದರೆ, ಅಸಾಂಪ್ರದಾಯಿಕ ನಿವಾಸಗಳ ಮಟ್ಟಿಗೆ ನಿವಾಸಗಳಲ್ಲೇ ನೀರು ಪೂರೈಸುವುದು ಸಹ ನಿಯಮಗಳ ಒಂದು ಭಾಗವೇ ಆಗಿದೆ ಎಂದು ಭಾವಿಸಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆಯೇ ಇರಬೇಕು.

# ೧೭೧
# ಅರ್ಹತೆಯಿರುವ ನಕಲು ಮಾಡುವವರಿಗೆ (Copy - Holder) ಮತ್ತು ಪರಿಷ್ಕರಿಸುವವರಿಗೆ (Revisers) ಹಸ್ತಪ್ರತಿ ಪರಿಶೀಲಕರಾಗಿ (Readers) ಪದೋನ್ನತಿ*

**೫೦೧. ಶ್ರೀ ಮಹಮ್ಮದ್ ಹುಸೇನ್ ಚೌಧುರಿ :** ಅ) ಭಾರತ ಸರ್ಕಾರದ ಮುದ್ರಣಾಲಯದಲ್ಲಿ ನಕಲುಮಾಡುವವರಿಗೆ, ಪರಿಷ್ಕರಿಸುವವರಿಗೆ ಪರಿಶೀಲಕರಾಗಿ ಪದೋನ್ನತಿಯಾದ ಬಗ್ಗೆ ಶ್ರೀ ಖಾಜಿ ಮಹಮ್ಮದ್ ಅಹಮದ್ ಕಜ್ಮಿ ಅವರು ೧೯೪೪ನೆಯ ಫೆಬ್ರವರಿ ೨೫ರಂದು ಕೇಳಿದ ತಾರಾಂಕಿತ ಪ್ರಶ್ನಾಂಕ ೨೩೧ನೆಯ ಪ್ರಶ್ನೆಯ (ಈ) ಭಾಗಕ್ಕೆ ಕೊಟ್ಟ ಉತ್ತರಕ್ಕೆ ಸಂಬಂಧಿಸಿದಂತೆ, 'ಅಸಾಂಗತ್ಯ'ಕ್ಕೆ ಕಾರಣ, ಅನಂತರದ ಪರೀಕ್ಷೆಗಳಲ್ಲಿ ಎರಡನೆಯ ಪ್ರಯತ್ನದಲ್ಲಿ ತೇರ್ಗಡೆಯಾದವರಿಗಿಂತ ಹೆಚ್ಚಿನ ಆದ್ಯತೆ, ಈ ಮೊದಲೆ ಪಾಸ್ ಮಾಡಿದ ಇಲಾಖೆಯ ವ್ಯಕ್ತಿಗಳಿಗೆ ಲಭ್ಯವಾಗದೆ ಇರುವುದರಿಂದಲೇ ಎಂಬುದನ್ನು ಸನ್ಮಾನ್ಯ ಸದಸ್ಯರು ಸ್ಪಷ್ಟಪಡಿಸುವರೆ?

ಆ) ಮೊದಲ ಹಂತದಲ್ಲಿ ತೇರ್ಗಡೆಯಾದವರು ವೈಶಿಷ್ಟ್ಯಪೂರ್ಣವಾಗಿ ದಕ್ಷತೆ, ಯೋಗ್ಯತೆ ಮತ್ತು ಅನುಭವದಲ್ಲಿ ತುಂಬ ಮೇಲಿದ್ದು, ರೀಡರ್ ಹುದ್ದೆಗೆ ಅರ್ಹರಾಗಿದ್ದಾರೆ ಎಂಬುದು ಸನ್ಮಾನ್ಯ ಸದಸ್ಯರಿಗೆ ತಿಳಿಯದೆ?

ಇ) ಅಭ್ಯರ್ಥಿಗಳನ್ನು ರೀಡರ್ ಹುದ್ದೆಗೆ ಪರಿಗಣಿಸುವಾಗ, ತೇರ್ಗಡೆಯಾದ ದಿನಾಂಕವನ್ನು ಆಧರಿಸಿ, ಕ್ರಮಾನುಗತ ಆದ್ಯತೆಯನ್ನು ನಿರ್ಧರಿಸಬೇಕು. ಆಗ ಮಾತ್ರ, ಈಗ ಚಾಲ್ತಿ ಇರುವ ನಿಯಮ ಜಾರಿಗೆ ಬರುವ ಮುನ್ನ ಇದ್ದ ತೊಡಕುಗಳು ಮತ್ತು ಹಾಲಿ ಇರುವ ಅಸಾಂಗತ್ಯಗಳು ನಿವಾರಣೆಯಾಗಬಹುದು, ಅಲ್ಲವೆ?

ಈ) ಸರ್ಕಾರ ಅಭ್ಯರ್ಥಿಗಳನ್ನು ಸೇವಾಹಿರಿತನ ಮತ್ತು ದಕ್ಷತೆಯ ಆಧಾರದ ಮೇಲೆ ಅಂದರೆ ಜ್ಯೇಷ್ಠತೆಯನ್ನು ಲಕ್ಷಿಸಿ, ಪರೀಕ್ಷೆ ಪಾಸ್ ಮಾಡಿದ ದಿನಾಂಕದ ಕ್ರಮಾನುಸರಣೆಯನ್ನೂ ಗಣನೆಗೆ ತಂದುಕೊಂಡು ಪದೋನ್ನತಿಗೊಳಿಸುವುದು ರೀಡರ್ ಹುದ್ದೆಗೆ ಪದೋನ್ನತಿಗೊಳಿಸಲು ಯೋಚಿಸುತ್ತಿದೆಯೆ? – ಇಲ್ಲವಾದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಇಲ್ಲ. ಪರೀಕ್ಷೆಯನ್ನು ಪ್ರಥಮತಃ ಪಾಸುಮಾಡುವುದನ್ನು, ಅಗತ್ಯವಾಗಿ ಹೆಚ್ಚಿನ ಅರ್ಹತೆಯೆಂದು ಭಾವಿಸಬೇಕಾಗಿಲ್ಲ.

ಇ) ರೀಡರ್‌ಷಿಪ್ ಪರೀಕ್ಷೆಯನ್ನು ಪ್ರಥಮ ಅಥವಾ ದ್ವಿತೀಯ ಪ್ರಯತ್ನದಲ್ಲಿ ಪಾಸ್ ಮಾಡಿದವರ ವಿಷಯದಲ್ಲಿ ಏನೂ 'ಅಸಾಂಗತ್ಯ', ಇಲ್ಲ. ಶ್ರೀ ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ ಅವರ ೨೩೧ನೆಯ ಪ್ರಶ್ನೆಯ 'ಡಿ'ಭಾಗಕ್ಕೆ ಕೊಟ್ಟ ಉತ್ತರದಲ್ಲಿ ತಿಳಿಸಿದಂತೆ, ಮೂರನೆಯ ಪ್ರಯತ್ನದಲ್ಲಿ ತೇರ್ಗಡೆಯಾದವರ ವಿಷಯದಲ್ಲಿ ಸ್ವಲ್ಪ 'ಅಸಾಂಗತ್ಯ' ತಲೆದೋರಿ ಅವರನ್ನು ತೆಗೆಯುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೧೩–೩–೧೯೪೪ ; ಪು. ೧೨೨೪–೨೫

ಈ) ರೀಡರ್‌ಷಿಪ್ ಪರೀಕ್ಷೆಯು ಅರ್ಹತಾಗಳಿಕೆಯ ಪರೀಕ್ಷೆ . ಪ್ರತಿಯೊಬ್ಬ ಅಭ್ಯರ್ಥಿಯು ಪಾಸು ಮಾಡಲು ಎರಡು ಅವಕಾಶಗಳನ್ನು ಬಳಸಿಕೊಳ್ಳಬಹುದು. ಪರೀಕ್ಷೆಯನ್ನು ಸರ್ಕಾರವು ಪಾಸುಮಾಡಿದ ದಿನಾಂಕವನ್ನು ಆಧರಿಸಿ ಪದೋನ್ನತಿಯನ್ನು ನೀಡುವ ಬಗ್ಗೆ ಯೋಚಿಸುತ್ತಿಲ್ಲ.

## ೧೭೨
## ಉಪ ಭೂಗರ್ಭಶಾಸ್ತ್ರಜ್ಞರಾಗಿ ಬಿಹಾರಿಗಳು*

****೫೦೪. ಶ್ರೀ ಕೈಲಾಸ್ ಬಿಹಾರಿಲಾಲ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾರತದ ಭೂಗರ್ಭ ಪರಿವೀಕ್ಷಣಾ ಇಲಾಖೆಯಲ್ಲಿ , ತೆರವಾದ ಸ್ಥಾನಗಳನ್ನು ಆಯಾ ಪ್ರಾಂತ್ಯಕ್ಕೆ ನಿಗದಿಪಡಿಸಿರುವ ದೇಯಾಂಶದ (Quota) ಆಧಾರದ ಮೇಲೆ ಭರ್ತಿ ಮಾಡುತ್ತಿರುವುದು ಸತ್ಯಾಂಶವಲ್ಲವೆ?

ಆ) ಬಿಹಾರಕ್ಕೆ ನಿಗದಿಪಡಿಸಿರುವ ಉಪ ಭೂಗರ್ಭಶಾಸ್ತ್ರಜ್ಞರ ಸ್ಥಾನಗಳ 'ದೇಯಾಂಶ'ವೆಷ್ಟು?

ಇ) ಹಾಲಿ ಎಷ್ಟು ಮಂದಿ ಬಿಹಾರಿಗಳು ಉಪ ಭೂಗರ್ಭಶಾಸ್ತ್ರಜ್ಞರಾಗಿ ಅಥವಾ ಅದಕ್ಕೂ ಮೇಲಿನ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ? ಮತ್ತು

ಈ) ವಿವಿಧ ಪ್ರಾಂತ್ಯಗಳಿಗೆ ನಿಗದಿಯಾಗಿರುವ ದೇಯಾಂಶವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ . (ಆ) ಆ ಪ್ರಶ್ನೆ ಉದ್ಭವಿಸದು.

ಇ) ಮಾಹಿತಿ ಸಂಗ್ರಹಿಸಲಾಗುತ್ತಿದೆ, ಸದನದ ಮುಂದೆ ಇರಿಸಲಾಗುವುದು. ಈ) ಪ್ರಶ್ನೆ ಉದ್ಭವಿಸದು.

## ೧೭೩
## ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಅರ್ಹತೆ ಇರುವ ನಕಲು ಮಾಡುವವರಿಗೆ ಮತ್ತು ಪರಿಷ್ಕರಿಸುವವರಿಗೆ ಹಸ್ತಪ್ರತಿ ಪರಿಶೀಲಕರಾಗಿ ಪದೋನ್ನತಿ***

******೫೦೬. ಶ್ರೀ ಕೈಲಾಸ್ ಬಿಹಾರಿಲಾಲ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಅರ್ಹತೆ ಇರುವ ನಕಲು ಮಾಡುವವರನ್ನೂ ಪರಿಪರಿಷ್ಕರಣಕಾರರನ್ನೂ ಹಸ್ತಪ್ರತಿ ಪರಿಶೀಲಕರಾಗಿ ಪದೋನ್ನತಿಗೊಳಿಸಲು, ಅನ್ವಯವಾಗುವ ನಿಯಮವನ್ನು ತಿದ್ದುಪಡಿ ಮಾಡಲು ಆಲೋಚಿಸಲಾಗುತ್ತಿದೆ ಎಂಬುದು ನಿಜವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ೧೭–೩–೧೯೪೪ ; ಪು. ೧೨೨೬

** ಪ್ರಶ್ನಕರು ಗೈರು ಹಾಜರಾಗಿದ್ದುದರಿಂದ ಉತ್ತರವನ್ನು ಸದನದ ಮುಂದಿರಿಸಿದೆ.

*** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ೧೯–೩–೧೯೪೪, ಪು ೧೨೨೬.

**** ಪ್ರಶ್ನಕರು ಗೈರುಹಾಜರಾಗಿದ್ದುದರಿಂದ ಉತ್ತರವನ್ನು ಸದನದ ಮುಂದಿರಿಸಿದೆ.

ಆ) ಭಾರತ ಸರ್ಕಾರದ ಎಲ್ಲ ಮುದ್ರಣಾಲಯಗಳ, ಅವುಗಳ ಕಾರ್ಯಕಾರಿಣಿಗಳ, ಕಾರ್ಮಿಕ ಸಂಘಗಳು, ಆಹ್ವಾನಿತ ಅಭಿಪ್ರಾಯಗಳು ಪರಿಶೀಲನೆಯಲ್ಲಿರುವುದು ನಿಜವೆ?

ಇ) ೧೯೩೬ರಲ್ಲಿ ರೀಡರ್‌ಷಿಪ್ ಪರೀಕ್ಷೆಗಳನ್ನು ಪಾಸುಮಾಡಿದ ಅರ್ಹ ನಕಲು ಮಾಡುವವರನ್ನು ಪ್ರಕೃತ ನಿಯಮಾನುಸಾರ – ನಾಲ್ಕು ವರ್ಷಗಳ ನಂತರ (೧೯೪೦ರಲ್ಲಿ) ಅರ್ಹತೆ ಪಡೆದವರು ಅಧಿಕ್ರಮಿಸುತ್ತಿರುವುದು (Supercede) ನಿಜವೆ?

ಈ) ಸಾಕಷ್ಟು ಮುಂಚೆಯೇ ಪರೀಕ್ಷೆಗಳನ್ನು ಪಾಸುಮಾಡಿ ಅರ್ಹತೆ ಗಳಿಸಿದವರನ್ನು, ದೀರ್ಘ ಕಾಲಾನಂತರ ಅರ್ಹತೆಗಳಿಸಿದವರು ಅಧಿಕ್ರಮಿಸುತ್ತಿರುವುದು ಸತ್ಯವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು ; ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿಯವರ ೨೩೧ನೆಯ ಪ್ರಶ್ನೆಗೆ ೧೯೪೪ರ ಫೆಬ್ರವರಿ ೨೫ರಂದು ಕೊಟ್ಟ ಉತ್ತರದ ಕಡೆಗೆ ನಿಮ್ಮ ಗಮನ ಸೆಳೆಯಲಾಗಿದೆ.

ಆ) ಹೌದು.

ಇ) ಮತ್ತು (ಈ) : ಇಲ್ಲ. ೧೯೪೦ರವರೆಗೂ ಜಾರಿಯಲ್ಲಿದ್ದ ನಿಯಮಾವಳಿ ಪ್ರಕಾರ ಪುನರ್ ಅರ್ಹತಾಗಳಿಕೆ ಅಗತ್ಯ. ಇಲ್ಲಿ ಅಧಿಕ್ರಮಣದ ಪ್ರಶ್ನೆ ಬರುವುದಿಲ್ಲ.

## ೧೭೪
## ಸಾರ್ವಜನಿಕ ಮಾಹಿತಿ ಕೇಂದ್ರದ ಭಾಷೆಗಳ ವಿಭಾಗವನ್ನು ಲಾಹೋರಿಗೆ ವರ್ಗಾಯಿಸುವುದು*

**೧೪೦. ಶ್ರೀ ಮಹಮ್ಮದ್ ಅಜ್‌ಹರ್ ಆಲಿ :** ಅ) ಲಾಹೋರಿನಲ್ಲಿ ಭಾಷೆಗಳ ವಿಭಾಗಕ್ಕೆ ಕೊಡಮಾಡಿರುವ ಸ್ಥಳದ ವಿಸ್ತೀರ್ಣ (ಅಧಿಕಾರಿಗಳದ್ದನ್ನು ಬಿಟ್ಟು) ಮತ್ತು ಅಲ್ಲಿ ಸ್ಥಳಾವಕಾಶ ಪಡೆದಿರುವ ಒಟ್ಟು ಉದ್ಯೋಗಿಗಳ ಸಂಖ್ಯೆಯನ್ನು ದಯಮಾಡಿ ಸನ್ಮಾನ್ಯ ಕಾರ್ಮಿಕ ಸಚಿವರು ತಿಳಿಸುವರೆ? ಇದು ಉದ್ಯೋಗಿಗಳ ಕಾರ್ಯಕ್ಷಮತೆಗೆ ಅನುಗುಣವಾಗಿದೆ ಎಂದು ಸರ್ಕಾರ ಭಾವಿಸುವುದೆ? ಇಷ್ಟಗಲ ಜಾಗವೂ ದೆಹಲಿಯಲ್ಲಿ ದೊರೆಯುತ್ತಿರಲಿಲ್ಲವೆ?

(ಆ) ಉದ್ಯೋಗಿಗಳಿಗೆ ಶೌಚಾಲಯವನ್ನೇನೊ ಒದಗಿಸಲಾಗಿದೆ, ಆದರೆ ಸುಧಾರಿತ ಮೂತ್ರಿಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೆ?

(ಇ) ದೆಹಲಿಯಿಂದ ಲಾಹೋರಿಗೆ ವರ್ಗವಾದ ಸಾರ್ವಜನಿಕ ಮಾಹಿತಿ ಕೇಂದ್ರದ ಉದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟು? ಅವರಲ್ಲಿ ಎಷ್ಟು ಮಂದಿಗೆ ದೆಹಲಿಯಲ್ಲಿ ನಿವಾಸಗಳನ್ನು ಕೊಡಲಾಗಿದೆ? ಮತ್ತು ಎಷ್ಟು ಮಂದಿಗೆ ಲಾಹೋರಿನಲ್ಲಿ? ಅವರಲ್ಲಿ ಎಷ್ಟು ಮಂದಿ ಅಸಮರ್ಪಕ ಸ್ಥಳಾವಕಾಶಗಳ ಕಾರಣ ಲಾಹೋರಿನ ನಿವಾಸಗಳನ್ನು ಹಿಂತಿರುಗಿಸಿದ್ದಾರೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ೪,೫೮೭ ಚದುರ ಅಡಿ ಆವರಣವನ್ನು ಈ ಕಛೇರಿಗೆಂದು ಬಿಟ್ಟುಕೊಡಲಾಗಿದೆ. ಕಛೇರಿ ಸಿಬ್ಬಂದಿ ಒಟ್ಟು ೪೮ ಮಂದಿ ಇದ್ದಾರೆ.

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ೧೭–೩–೧೯೪೪;ಪು.೧೨೨೬

ಎರಡನೆಯ ಭಾಗ : ಹೌದು.

ಮೂರನೆಯ ಭಾಗ : ಇಲ್ಲ.

ಅ) ಪ್ರಶ್ನೆಯ ಪ್ರಥಮಾರ್ಧಕ್ಕೆ ಉತ್ತರ 'ಹೌದು' ಎಂದು ; ಉತ್ತರಾರ್ಧಕ್ಕೆ ಉತ್ತರ ನಕಾರಾತ್ಮಕ.

ಇ) ದೆಹಲಿಯಿಂದ ಹೋದ ಉದ್ಯೋಗಿಗಳ ಸಂಖ್ಯೆ ೩೫

ದೆಹಲಿಯಲ್ಲಿ ನಿವಾಸ ಪಡೆದ ಉದ್ಯೋಗಿಗಳ ಸಂಖ್ಯೆ ೭

ಅಸಮರ್ಪಕತೆಯ ಕಾರಣ ಕೊಟ್ಟು ಲಾಹೋರಿನಲ್ಲಿ ನಿವಾಸಗಳನ್ನು ಹಿಂದಿರುಗಿಸಿದವರ ಸಂಖ್ಯೆ ೫

## ೧೭೫
## ದೆಹಲಿಯ ಪ್ರಕಟನಾ ವಿಭಾಗದ ಕಾರ್ಯನಿರ್ವಾಹಕರ ಮಾರಾಟ ಕಛೇರಿಯಲ್ಲಿ ವಿಳಂಬ*

೧೪೧. **ಶ್ರೀ ಕೈಲಾಸ್ ಬಿಹಾರಿಲಾಲ್ :** ಸಾರ್ವಜನಿಕರು, ಹಳೇಬಿಹಾರದ ಪ್ರಕಟನಾ ವಿಭಾಗದ ಮಾರಾಟ ಕಛೇರಿಯ ಕಿಟಕಿ ಬಳಿ ಗಂಟೆಗಟ್ಟಲೆ ಪ್ರಕಟನೆಗಾಗಿ ಕಾಯಬೇಕಾಗಿರುವುದು ನಿಜವೇ ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಉತ್ತರ ನೇತ್ಯಾತ್ಮಕವಾಗಿದೆ. (ಇಲ್ಲ)

## ೧೭೬
## ಕಾರ್ಮಿಕ ಇಲಾಖೆಯ ಸ್ಥಾಯಿ ಸಮಿತಿಗೆ ಸದಸ್ಯರ ಚುನಾವಣೆ**

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೇ, ನಾನು ಈ ಮಸೂದೆಯನ್ನು ಮಂಡಿಸುತ್ತೇನೆ. ಸ್ಥಾಯಿ ಸಮಿತಿಯಲ್ಲಿ ಕೆಲಸ ಮಾಡುತ್ತ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಲಹೆ ಕೊಡಲು ಐವರು ಅಧಿಕಾರೇತರ ಸದಸ್ಯರನ್ನು, ಸನ್ಮಾನ್ಯ ಅಧ್ಯಕ್ಷರ ಸೂಚನೆಗೆ ಅನುಗುಣವಾಗಿ, ಈ ಸಭೆಯು ಚುನಾಯಿಸುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೧೭–೩–೧೯೪೪ ; ಪು. ೧೨೨೭

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೨, ೧೭–೩–೧೯೪೪ ; ಪು. ೧೨೩೪

# ೧೭೭
# ಕಲ್ಲಿದ್ದಲಿನ ಬೆಲೆ ನಿಯಂತ್ರಣ ಮತ್ತು ಹಂಚಿಕೆ ಇತ್ಯಾದಿ ಯೋಜನೆ*

**೫೫೭. ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಅ) ಕಲ್ಲಿದ್ದಲಿನ ಹಂಚಿಕೆ ನಿಯಂತ್ರಣ, ಬೆಲೆ ನಿಯಂತ್ರಣ ಮತ್ತು ಕಲ್ಲಿದ್ದಲಿನ ಉತ್ಪಾದನೆಯ ಹೆಚ್ಚಳಕ್ಕಾಗಿ ಪ್ರೋತ್ಸಾಹ – ಈ ಉದ್ದೇಶಗಳಿಗಾಗಿ ಒಂದು ಯೋಜನೆಯನ್ನು ರೂಪಿಸಿರುವುದು ನಿಜವೇ ಎಂಬುದನ್ನು ಸನ್ಮಾನ್ಯ ಸದಸ್ಯರು ದಯವಿಟ್ಟು ತಿಳಿಸುವರೆ? ಹಾಗಿದ್ದಲ್ಲಿ, ಯೋಜನೆಯನ್ನು ರೂಪಿಸಲು ಕಾರಣವಾದ ನೀತಿಯ ವಿವರವನ್ನುಳ್ಳ ತಃಖ್ತೆಯನ್ನು ಸನ್ಮಾನ್ಯ ಸದಸ್ಯರು ಸದನದ ಮುಂದಿರಿಸುವರೆ?

ಆ) ಕಲ್ಲಿದ್ದಲು ಗಣಿ ಮಾಲೀಕರು ಮತ್ತು ನಿಜವಾದ ಬಳಕೆದಾರರ ನಡುವಿನ ಮಧ್ಯವರ್ತಿಗಳನ್ನು ನಿವಾರಿಸುವ ಯೋಜನೆಯೆ ಇದು?
ಹಾಗಿದ್ದಲ್ಲಿ ಆ ಯೋಜನೆಯ ಅನ್ವಯ ಸಾಧಿಸಬಹುದಾದ ಅನುಕೂಲಗಳೇನು? ಹಾಗೂ ಆ ಯೋಜನೆಯಿಂದ ಹಾಲಿ ಕಲ್ಲಿದ್ದಲು ಪೂರೈಕೆದಾರರಿಗೆ ಒದಗುವ ಅನನುಕೂಲಗಳೇನು?

ಇ) ಕಲ್ಲಿದ್ದಲು ಗಣಿಗಳಿಗೆ ಅಧಿಕ ಉತ್ಪಾದನೆಗಾಗಿ ಬೋನಸ್ ಏಕೆ ಕೊಡಬೇಕು? ಅಥವಾ ಕಲ್ಲಿದ್ದಲು ಗಣಿಗಳು ನೇರವಾಗಿ ಬಳಕೆದಾರರಿಗೆ ಸರಬರಾಜು ಮಾಡಲು ಸಾಧ್ಯವಿರುವಾಗ ೦–೪–೦ ಆಣೆ ಕಮಿಷನ್ ಅನ್ನು ಮಧ್ಯವರ್ತಿಗಳಿಗೆ, ಗಣಿಗಳು ಮತ್ತು ಬಳಕೆದಾರರು ಏಕೆ ಕೊಡಬೇಕು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು, ಒಂದು ವಿವರವಾದ ತಃಖ್ತೆಯನ್ನು ಸದನದ ಮುಂದೆ ಇರಿಸಲಾಗಿದೆ. ಈ ಯೋಜನೆಯಲ್ಲಿ ಐದು ಭಾಗಗಳಿವೆ.

ಅ೧) ಪ್ರತಿಯೊಂದು ಕಲ್ಲಿದ್ದಲು ಗಣಿಯ ಮಾಸಿಕ ಉತ್ಪಾದನಾ ಸಾಮರ್ಥ್ಯದ ಅಂದಾಜು

ಅ೨) ಯೋಜನೆಯ ಕಾರ್ಯಪರತೆಯ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಲು ಒಂದು ಕಲ್ಲಿದ್ದಲು ನಿಯಂತ್ರಣ ಮಂಡಲಿಯ ರಚನೆ.

ಅ೩) ಸರ್ಕಾರವು, ಎಲ್ಲ ಉತ್ಪಾದನೆಯನ್ನು ನಿಗದಿತ ಬೆಲೆಯಲ್ಲಿ ವಿತರಿಸುವುದು.

ಅ೪) ಉತ್ಪಾದನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಅಧಿಕಗೊಂಡ ಉತ್ಪಾದನೆಗೆ, ಹೆಚ್ಚಿಸಿದ ಲಾಭಾಂಶದ ಮೇಲಿನ ತೆರಿಗೆಯಿಂದ ಮುಕ್ತವಾದ ಬೋನಸ್ ನೀಡಿಕೆ ; ಮತ್ತು

ಅ೫) ಗಣಿಗಾರಿಕೆಯನ್ನು ನಿಯಂತ್ರಿಸುವುದು.

ಈ ಯೋಜನೆಯ ಹಿಂದಿರುವ ಉದ್ದೇಶ :

(i) ಉತ್ಪಾದಿಸಿದ ಕಲ್ಲಿದ್ದಲು ಸಂಪೂರ್ಣವಾಗಿ ಅಗತ್ಯವಿರುವ ಬಳಕೆದಾರರಿಗೆ, ನ್ಯಾಯ ಬೆಲೆಯಲ್ಲಿ ವಿತರಣೆಯಾಗುವುದನ್ನು ಖಾತರಿ ಮಾಡಿಕೊಳ್ಳುವುದು.

(ii) ಗರಿಷ್ಠ ಪ್ರಮಾಣದ ಕಲ್ಲಿದ್ದಲಿನ ಉತ್ಪಾದನೆಗೆ ಪೂರ್ಣ ಪ್ರೋತ್ಸಾಹವನ್ನು ಕೊಡುವುದು.

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೧೭–೨–೧೯೪೪ ; ಪು. ೧೩೯೩

ಆ) ಇಲ್ಲ ; ಆದ್ದರಿಂದ ಪ್ರಶ್ನೆಯ ಉತ್ತರಾರ್ಧಕ್ಕೆ ಆಸ್ಪದವಿಲ್ಲ .

ಇ) ಉತ್ಪಾದನೆಯನ್ನು ಪ್ರೋತ್ಸಾಹಿಸಲು ಬೋನಸ್ ಕೊಡಲಾಗುತ್ತಿದೆ. ಕಮಿಷನ್ ಮೊತ್ತವನ್ನು ನಿಗದಿಪಡಿಸಿಲ್ಲ . ಅದನ್ನು ಭಾರತ ಸರ್ಕಾರ ನಿಗದಿಪಡಿಸುವುದು. ಕಲ್ಲಿದ್ದಲು–ಗಣಿ ಮಾಲೀಕರು ಮತ್ತು ಬಳಕೆದಾರರು ಪರಸ್ಪರ ಒಪ್ಪಿಕೊಂಡು ಬಯಸಿದರೆ ಮಾತ್ರ ಮಧ್ಯವರ್ತಿಗಳನ್ನು ನೇಮಕ ಮಾಡಲಾಗುವುದು.

# ೧೭೮
# ಬೋನಸ್ ನಿಧಿಗಾಗಿ ಕಲ್ಲಿದ್ದಲಿನ ಮೇಲೆ ಉಪಕರ (Cess) ವಿಧಿಸುವಿಕೆ *

****೫೭೮. ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ಬೋನಸ್ ಕೊಡಲು ಸಾಧ್ಯವಾಗುವಂತೆ ಒಂದು ನಿಧಿಯನ್ನು ಸ್ಥಾಪಿಸಲು ಕಲ್ಲಿದ್ದಲಿನ ಮೇಲೆ ಉಪಕರ ವಿಧಿಸುತ್ತಿರುವುದು ನಿಜವೇ ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿಸಬೇಕು. ಅದು ಬಳಕೆದಾರರ ಮೇಲೆ ಹೇರಿದ ಇಮ್ಮಡಿ ತೆರಿಗೆಯಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಿಮ್ಮ ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ ಅದೇ ಉದ್ದೇಶ. ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ, ಉಪಕರ ವಿಧಿಸುವುದೆಂದರೆ, ಅದರ ಎಲ್ಲ ಸಂಭಾವ್ಯತೆಗಳಲ್ಲಿ ಅದು ಬಳಕೆದಾರರ ಮೇಲಿನ ತೆರಿಗೆಯೇ ! ಆದರೆ ಬೋನಸ್ ಕೊಡುವುದು ಬಳಕೆದಾರರ ಅನುಕೂಲಕ್ಕಾಗಿಯೇ; ಏಕೆಂದರೆ ಸದ್ಯಕ್ಕೆ ಬಳಕೆದಾರರ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿರುವ ಕಲ್ಲಿದ್ದಲಿನ ಉತ್ಪಾದನೆಯನ್ನು ಹೆಚ್ಚಿಸುವುದೇ ಅದರ ಉದ್ದೇಶ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ೨೨–೩–೪೪; ಪು. ೧೩೯೫.

** ಪ್ರಶ್ನಕರು ಗೈರುಹಾಜರಾಗಿದ್ದುದರಿಂದ ಉತ್ತರವನ್ನು ಸದನದ ಮುಂದಿರಿಸಿದೆ.

# ೧೭೯

# ಭಾರತ ಸರ್ಕಾರದ ಹೊಸದೆಹಲಿಯ ಮುದ್ರಣಾಲಯದ ಮುಸ್ಲಿಂ ನೌಕರರ ಕಾಲಮೀರಿ ದುಡಿಮೆ ವೇಳೆಯಿಂದ (O.T.) ಶುಕ್ರವಾರ ಪ್ರಾರ್ಥನೆಯ ಬಿಡುವಿಗಾಗಿ ಕಡಿತ*

**೫೮೭. ಸೇಟ್ ಯೂಸುಫ್ ಅಬ್ದುಲ್ ಹರೂನ್** (ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ ಅವರ ಪರವಾಗಿ) : ಅ) ಭಾರತ ಸರ್ಕಾರದ ನವದೆಹಲಿ ಮುದ್ರಣಾಲಯದ ಮುಸ್ಲಿಮ್ ನೌಕರರು ಶುಕ್ರವಾರದ ಸಾಮೂಹಿಕ ಪ್ರಾರ್ಥನೆಗೆ ಹಾಜರಾಗುವುದರ ಪ್ರಯುಕ್ತ ಅವರು ಕಛೇರಿ ವೇಳೆಯ ನಂತರವೂ ದುಡಿದ ವೇಳೆಯಲ್ಲಿ (O.T) ಯಲ್ಲಿ ಒಂದು ಗಂಟೆ ಕಾಲವನ್ನು ಕಡಿತಗೊಳಿಸುತ್ತಿರುವುದು ನಿಜವೆ?

ಆ) ಈ ಮೊದಲು ಈ ಒಂದು ಗಂಟೆ ಕಡಿತ ಮಾಡುತ್ತಿರಲಿಲ್ಲವೆಂಬುದು ಸಹ ದಿಟವೆ?

ಇ) ಸರ್ಕಾರ ಆ ಹಿಂದಿನ ಪದ್ಧತಿಯನ್ನು ಅನುಸರಿಸುವುದರ ಸೂಕ್ತತೆಯನ್ನು ಮನಗಾಣುವುದೆ? ಅಥವಾ ಪರ್ಯಾಯವಾಗಿ, ಆ ಒಂದು ಗಂಟೆಯನ್ನು ಸಾಂದರ್ಭಿಕ ರಜೆಯ ಭಾಗವೆಂದಾಗಲಿ, ಸರಾಸರಿ ವೇತನದ ರಜೆಯೆಂದಾಗಲಿ ಪರಿಗಣಿಸುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್** : ಅ) ಹೌದು.

ಆ) ೧೯೩೧ಕ್ಕೆ ಮೊದಲು ಕಡಿತ ಮಾಡುತ್ತಿರಲಿಲ್ಲ; ಆದರೆ ಈ ಅಭ್ಯಾಸ ಕ್ರಮಬಾಹಿರವಾದುದರಿಂದ ರದ್ದುಗೊಳಿಸಲಾಯಿತು.

ಇ) 'ಆ' ಭಾಗಕ್ಕೆ ಕೊಟ್ಟ ಉತ್ತರದ ಅನ್ವಯ, ಮುಂದಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಭಾರತೀಯ ಕಾರ್ಖಾನೆಗಳ ಅಧಿನಿಯಮದ ಪ್ರಕಾರ, ಅಧಿನಿಯಮದಲ್ಲಿ ನಿಗದಿತವಾದ ಮಾಮೂಲು ಕೆಲಸದ ವೇಳೆಗಿಂತ ಹೆಚ್ಚು ಗಂಟೆ ಕೆಲಸ ಮಾಡಿದ ನೌಕರನು ಅತಿದುಡಿಮೆ ವೇತನಕ್ಕೆ (O.T.A) ಅರ್ಹ. ಕಾಲಮೀರಿ ದುಡಿಮೆ ವೇಳೆಯನ್ನು ಗಣಿಸುವಾಗ, ನೌಕರನ ಒಟ್ಟು ದುಡಿಮೆ ಗಂಟೆಗಳಿಂದ, ಪ್ರಾರ್ಥನೆಯ ಬಿಡುವುಗಳನ್ನು ಕಳೆಯಲಾಗುವುದು.

**ಸೇಟ್ ಯೂಸುಫ್ ಅಬ್ದುಲ್ ಹರೂನ್** : ಭಾರತ ಸರ್ಕಾರ ಕೆಲಸದ ಅವಧಿಯನ್ನು ಒಂದು ಘಂಟೆ ಬೇಗ ಪ್ರಾರಂಭಿಸಿದ್ದರಿಂದ ಈ ತೊಂದರೆ ಉಂಟಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್** : ನಾನು ಹಾಗೆ ಭಾವಿಸುವುದಿಲ್ಲ.

**ಸೇಟ್ ಯೂಸುಫ್ ಅಬ್ದುಲ್ ಹರೂನ್** : ಸರ್ಕಾರ ಕೆಲಸದ ವೇಳೆಯುನ್ನು ಬದಲಾಯಿಸಿದ್ದರಿಂದ, ಪ್ರಾರ್ಥನಾ ಸಮಯವನ್ನು ಸಹ ಬದಲಿಸಬೇಕೆಂದು ಮಾನ್ಯ ಸದಸ್ಯರು ಸಲಹೆ ನೀಡುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್** : ಇದು ಪ್ರಾರ್ಥನಾ ವೇಳೆಯನ್ನು ಬದಲಿಸುವ ಪ್ರಶ್ನೆ ಅಲ್ಲ. ಪ್ರಾರ್ಥನಾ ವೇಳೆಯನ್ನು ಅಧಿಕ ದುಡಿಮೆ ವೇಳೆಯೆಂದು ಪರಿಗಣಿಸಬಹುದೇ ಎಂಬುದಕ್ಕೆ ಸಂಬಂಧಿಸಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ୬, ೨୬–೩–೧೯೪೪; ಪು. ೧೩೭೮–೯.

# ೧೮೦
# ನವ ದೆಹಲಿಯ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಭಾನುವಾರ ಮತ್ತು ಇತರ ರಜಾದಿನಗಳ ಕೆಲಸಕ್ಕೆ ಮಜೂರಿ*

**೫೮೮. ಸೇಟ್ ಯೂಸುಫ್ ಅಬ್ದುಲ್ ಹರೂನ್** (ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ ಅವರ ಪರವಾಗಿ) : ಅ) ಭಾರತ ಸರ್ಕಾರದ ದೆಹಲಿಯ ಮುದ್ರಣಾಲಯದ ಕಾರ್ಯನಿರ್ವಾಹಕರ ಸೂಚನೆಯ ಮೇರೆಗೆ ಭಾನುವಾರ ಮತ್ತು ಇತರ ಹಬ್ಬದ ರಜಾದಿನಗಳಲ್ಲಿ, ಸರ್ಕಾರದ ತುರ್ತು ಕೆಲಸವನ್ನು ನಿರ್ವಹಿಸುವ ಉದ್ದೇಶದಿಂದ ಕೆಲಸಕ್ಕೆ ಹಾಜರಾಗುವ ನೌಕರರಿಗೆ ಅವರ ದಿನಗೆಲಸದ ಕೊನೆಯಲ್ಲಿ ನಾಲ್ಕು ಗಂಟೆಗಳಿಗೆ ಮಾತ್ರ ಮಜೂರಿ ಕೊಡಲಾಗುತ್ತಿದೆ – ಆದರೆ ಮೊದಲು ೧೨ ಗಂಟೆಗಳ ಮಜೂರಿ ಕೊಡಲಾಗುತ್ತಿತ್ತು ಎಂಬುದು ನಿಜವೆ? – ತಿಳಿಸಿ.

ಆ) ರಜಾದಿನಗಳಲ್ಲಿ ಎಂಟು ಗಂಟೆ ಕೆಲಸ ಮಾಡಿ ಮಾಮೂಲು ವೇತನ ಪಡೆಯುವವರಿಗೆ ಹನ್ನೆರಡು ಗಂಟೆಗಳ ಮಜೂರಿ ಕೊಡುತ್ತಿದ್ದ ಹಳೆಯ ಪದ್ಧತಿಯನ್ನು ಮತ್ತೆ ಜಾರಿಗೆ ತರುವುದು ಸೂಕ್ತವೆಂದು ಸರಕಾರ ಭಾವಿಸುವುದೆ? ಅಥವಾ ಕೊನೆಯ ಪಕ್ಷ ನಾಲ್ಕು ಗಂಟೆಗಳನ್ನು ಎಂಟು ಗಂಟೆಗಳಿಗೆ ಏರಿಸುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ "ಹೌದು". ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ, ಭಾರತ ಕಾರ್ಖಾನೆಗಳ ಅಧಿನಿಯಮದನ್ವಯ ಭಾನುವಾರ ದುಡಿಯುವ ನೌಕರರಿಗೆ, ಪರಿಹಾರ ರಜೆಯ ಬದಲಿಗೆ, ನಾಲ್ಕು ಗಂಟೆಗಳ ದುಡಿಮೆಯ ಹೆಚ್ಚಿನ ಮಜೂರಿ ಕೊಡಲಾಗುವುದು. ಅಂದರೆ ಅವರ ದಿನದ ವೇತನ, ಜೊತೆಗೆ ಶೇಕಡ ೫೦ರಷ್ಟು ಹೆಚ್ಚುವರಿ. ಇತರ ರಜಾದಿನಗಳಲ್ಲಿ ಹಾಜರಾದರೆ, ನೌಕರನ ವೇತನದ ಶೇಕಡ ೨೫ ಅಧಿಕ ಮಜೂರಿ ಕೊಡಲಾಗುವುದು. ನ್ಯಾಯಬದ್ಧವಾದ ನಾಲ್ಕು ಗಂಟೆಗಳ ಮಜೂರಿಗೆ ಬದಲಾಗಿ ಹನ್ನೆರಡು ಗಂಟೆಗಳ ಹೆಚ್ಚಿನ ಮಜೂರಿಯನ್ನು (ಅಂದರೆ, ಒಂದು ದಿನದ ವೇತನ, ಜೊತೆಗೆ ಶೇಕಡ ೧೫೦ ಮಜೂರಿಯನ್ನು) ಕೆಲವು ವರ್ಷಗಳ ಹಿಂದೆ ತಪ್ಪುಗ್ರಹಿಕೆಯಿಂದ ಕೊಡಲಾಗಿದೆ.

ಆ) ಇಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೨–೩–೧೯೪೪; ಪು. ೧೯೪೪

## ೧೮೧
## ಪಂಕ್ತಿ ಎರಕ ಯಂತ್ರ (Lino-machine)ದ ಕೂಲಿಗಳಿಗೆ ಆಸನಗಳನ್ನು ಪೂರೈಸದಿರುವಿಕೆ*

**೫೮೯. ಸೇಟ್ ಯೂಸುಫ್ ಅಬ್ದುಲ್ ಹರೂನ್** (ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ ಅವರ ಪರವಾಗಿ)

ಅ) ಪಂಕ್ತಿ ಎರಕ ಯಂತ್ರಗಳಲ್ಲಿ ದುಡಿಯುವ ಕೂಲಿಗಳಿಗೆ ಕುರ್ಚಿಗಳನ್ನು ಪೂರೈಸಿಲ್ಲ; ಅವರು ದಿನವಿಡಿ ನಿಂತು ದುಡಿಯಬೇಕು; ಅವರು ಆ ಬಗ್ಗೆ ಸಲ್ಲಿಸಿದ ಮನವಿಗಳ ಬಗ್ಗೆ ಸಂಬಂಧಿಸಿದವರ ಗಮನಹರಿದಿಲ್ಲವೆಂಬುದು ನಿಜವೆ? ಸನ್ಮಾನ್ಯ ಸದಸ್ಯರು ಉತ್ತರಿಸಬೇಕು.

ಆ) 'ಬಾರ್‌ಮನ್'ಗಳ ಕೆಲಸವನ್ನು ಕೂಲಿಗಳಿಂದಲೇ ಮಾಡಿಸುತ್ತಿದ್ದು 'ಬಾರ್‌ಮನ್' ಹುದ್ದೆಗಳನ್ನು ರದ್ದುಮಾಡಿರುವುದು ನಿಜವೆ?

ಇ) ಕೂಲಿಗಳ ಕುಂದುಕೊರತೆಗಳನ್ನು ನಿವಾರಿಸುವ ಸೂಕ್ತತೆಯ ಬಗ್ಗೆ ಸರ್ಕಾರ ಆಲೋಚಿಸುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಪಂಕ್ತಿ ಎರಕ ಯಂತ್ರಗಳಲ್ಲಿ ಕೆಲಸ ಮಾಡುವವರು ನಿಂತು ಕೆಲಸ ಮಾಡುವುದಿಲ್ಲ. ಲಿನೋ ಯಂತ್ರದ ವಿತರಣಾ ಪಟ್ಟಿಯ ತೊಡಕುಗಳನ್ನು ಬಿಡಿಸಬೇಕಾಗಿರುವುದರಿಂದ ಅದಕ್ಕಾಗಿ ಅವರು ಯಂತ್ರದ ಮೇಲೆ ಹತ್ತಬೇಕಾಗುತ್ತದೆ. ಆದ್ದರಿಂದ ಅವರ ಕೆಲಸದ ರೀತಿಯಿಂದಾಗಿ ಅವರಿಗೆ ಆಸನಗಳು ಬೇಕಾಗುವುದಿಲ್ಲ. ಏಕೆಂದರೆ ವಿಶ್ರಾಂತಿ ತೆಗೆದುಕೊಳ್ಳುವಾಗ ಕೆಲಸಗಾರರು ಸಾಮಾನ್ಯವಾಗಿ ನೆಲದ ಮೇಲೆಯೇ ಕೂರುತ್ತಾರೆ.

ಆ) ಮತ್ತು (ಇ) ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ 'ಬಾರ್‌ಮನ್'ಗಳ ಹುದ್ದೆ ಇಲ್ಲ. ಅಂಥ ಯಾವ ಹುದ್ದೆಯೂ ನವದೆಹಲಿಯ ಮುದ್ರಣಾಲಯದಲ್ಲಿ ಎಂದೂ ಇದ್ದುದಿಲ್ಲ. ಆದ್ದರಿಂದ ಆ ಪ್ರಶ್ನೆಯೇ ಉದ್ಭವಿಸದು.

## ೧೮೨
## ಕಾರ್ಮಿಕ ಇಲಾಖೆಗೆ ಕಾರ್ಮಿಕ ಸಲಹೆಗಾರರು**

*** **೬೨೭. ಶ್ರೀ ಕೆ.ಎಸ್. ಗುಪ್ತ :** ಅ) ಕಾರ್ಮಿಕ ಇಲಾಖೆಗೆ ಕಾರ್ಮಿಕ ಸಲಹೆಗಾರರ ಹುದ್ದೆ ಹೊಸದಾಗಿ ಸೃಷ್ಟಿಸಿದ್ದೆ? ಹಾಗಿದ್ದಲ್ಲಿ ಏಕೆ ಅದನ್ನು ಸೃಷ್ಟಿಸಿದ್ದು? – ಸನ್ಮಾನ್ಯ ಸದಸ್ಯರು ಉತ್ತರಿಸುವರೆ?

ಆ) ಒಂದು ವೇಳೆ ಮೊದಲೇ ಅಸ್ತಿತ್ವದಲ್ಲಿದ್ದ ಹುದ್ದೆಯಾಗಿದ್ದರೆ, ಆ ಹುದ್ದೆಯಲ್ಲಿದ್ದವರಾರು? ಮತ್ತು ಅವರ ವೇತನವೇನು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೨–೩–೧೯೪೪; ಪು. ೧೯೪೪

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ ೨, ೨೨–೩–೧೯೪೪; ಪು. ೧೫೫೯–೬೦

*** ಈ ದಿನ ಪ್ರಶ್ನೋತ್ತರ ಕಾಲದ್ದಾಗಿತ್ತು ಆದರೆ ಸಂಪ್ರದಾಯದ ಪ್ರಕಾರ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿತ್ತು.

ಇ) ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಗೆ ಕಾರ್ಮಿಕ ಸಲಹೆಗಾರರಾಗಿ ಶ್ರೀ ಬಿ.ಎಲ್. ವಾಟರ್ಸ್ ಅವರನ್ನು ನೇಮಕಮಾಡಿರುವುದು ನಿಜವೆ? ಅವರ ವೇತನ, ಸಾಗರೋತ್ತರ ಭತ್ಯೆ, ಇತರ ಭತ್ಯೆಗಳೇನು (ಇರುವುದಾದಲ್ಲಿ)?

ಈ) ಯುದ್ಧ ಸಮಯದ ಸಿದ್ಧತೆಗಳು ಶ್ರೀ ವಾಟರ್ಸ್ ಅವರ ನೇಮಕಕ್ಕೆ ಕಾರಣವಾಯಿತೆ? ಬ್ರಿಟಿಷ್ ಮಂತ್ರಿಮಂಡಲದ ಕಾರ್ಮಿಕ ಮತ್ತು ರಾಷ್ಟ್ರಸೇವೆ ಇಲಾಖೆಯಲ್ಲಿ ಅವರಿಗೆ ದೊರೆಯುತ್ತಿದ್ದ ವೇತನವೇನು?

ಉ) ಭಾರತೀಯ ಪರಿಸ್ಥಿತಿಯಲ್ಲಿ, ಪೂರ್ವಾನುಭವವೇನಾದರೂ ಅವರಿಗಿದೆಯೇ, ಇದ್ದರೆ, ಭಾರತ ಸರ್ಕಾರದ ಯಾವ ವಿಭಾಗದಲ್ಲಿ ದುಡಿದ ಅನುಭವವಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಕಾರ್ಮಿಕ ಸಲಹೆಗಾರರ ಹುದ್ದೆ ಡಿಸೆಂಬರ್ ೧೯೪೨ರಲ್ಲಿ ಸೃಷ್ಟಿಯಾಯಿತು. ಅದನ್ನು ಹೊಂದಿದ್ದವರು ಶ್ರೀ ಡಿ. ಟಿ. ಜ್ಯಾಕ್, ೧೯೪೩ರ ಜೂನ್‌ವರೆಗೆ ; ಈಗ ಶ್ರೀ ಬಿ.ಎಲ್. ವಾಟರ್ಸ್ ಆ ಹುದ್ದೆಯಲ್ಲಿದ್ದಾರೆ. ಶ್ರೀ ಜ್ಯಾಕ್ ಅವರ ಸಂಬಳ ತಿಂಗಳಿಗೆ ೨,೭೫೦ ರೂಪಾಯಿಗಳಾಗಿದ್ದವು.

ಕಾರ್ಮಿಕ ಸಲಹೆಗಾರರು, ಕಾರ್ಮಿಕ ಶಾಸನ ಮತ್ತು ಆಡಳಿತದ ಎಲ್ಲ ಮುಖ್ಯ ವಿಷಯಗಳಲ್ಲೂ, ಅದರಲ್ಲೂ ಮುಖ್ಯವಾಗಿ, ಇಂಗ್ಲೆಂಡಿನಲ್ಲಿ ಕಾರ್ಮಿಕ ಸಮಸ್ಯೆಗಳ ನಿರ್ಣಯದ ರೀತಿ, ಉದ್ಭವಿಸಬಹುದಾದ, ಉದ್ಭವಿಸಿರುವ ಸಮಸ್ಯೆಗಳನ್ನು ಪರಿಹರಿಸುವ ರೀತಿಗಳನ್ನು ಸಹ ಕುರಿತು ಸಲಹೆ ಕೊಡುವರು.

ಇ) ಹೌದು ; ಶ್ರೀ ವಾಟರ್ಸ್ ಮಾಹೆಯಾನ ೨,೦೦೦ ರೂಪಾಯಿಗಳ ವೇತನ ಪಡೆಯುತ್ತಿದ್ದಾರೆ. ಅವರಿಗೆ ಸಾಗರೋತ್ತರ ಅಥವಾ ಇನ್ಯಾವುದೇ ಭತ್ಯೆ ಕೊಡುತ್ತಿಲ್ಲ.

ಈ) ಹೌದು ; ಹಾಲಿ ಹುದ್ದೆಗೆ ಅವರನ್ನು ನೇಮಿಸುವಾಗ ಶ್ರೀ ವಾಟರ್ಸ್ ಅವರು ಬ್ರಿಟಿಷ್ ಕಾರ್ಮಿಕ ಮತ್ತು ರಾಷ್ಟ್ರೀಯ ಸೇವಾ ಮಂತ್ರಾಲಯದಲ್ಲಿ ಪೌಂಡು, ೮೫೦–೩೦–೧೦೦೦, ವೇತನಶ್ರೇಣಿಯಲ್ಲಿ ಪೌಂಡು ೮೮೦, ವಾರ್ಷಿಕ ವೇತನ ಪಡೆಯುತ್ತಿದ್ದರು.

ಉ) ಮಾನ್ಯರೇ, ಇಲ್ಲ.

## ೧೮೩
## ಉತ್ತರ ವಿಭಾಗದ ಕಾರಕೂನರ ಕೆಲವು ವಸತಿಗಳಲ್ಲಿನ ಬಚ್ಚಲು ಮನೆಗಳಲ್ಲಿ ದೀಪದ ಕೊರತೆ*

**೬೨೯. ಸರ್ದಾರ್ ಸಂತ್ ಸಿಂಗ್ :** ಅ) ೧೯೪೩, ಮಾರ್ಚಿ ೩೦ನೆಯ ದಿನಾಂಕದ, ೪೩೨ನೇ ಪ್ರಶ್ನೆಗೆ ತಾವು ಕೊಟ್ಟ ಉತ್ತರಕ್ಕೆ ಸಂಬಂಧಿಸಿದಂತೆ ಮಾನ್ಯ ಕಾರ್ಮಿಕ ಸದಸ್ಯರು ಕೆಲವು ವಿವರಣೆ ಕೊಡುವರೆ? ವಾಯವ್ಯ ಮುಖಮಂಟಪಕ್ಕೆ ಮುಖ ಮಾಡಿರುವ ಉತ್ತರ ವಿಭಾಗದ ಮೊದಲ ಮಹಡಿಯ ಅಧಿಕಾರಿಗಳ ವಸತಿಗಳ ಮನೆಯ ಪಕ್ಕದಲ್ಲಿರುವ ಕಾರಕೂನರ ಬಚ್ಚಲು ಮನೆಯಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ದಿನಗಳಿಂದ ದೀಪವಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೭–೩–೧೯೪೪; ಪು. ೧೫೬೧.

ಆ) ಉತ್ತರ ವಿಭಾಗದಲ್ಲಿ ನೈರುತ್ಯ ದಿಕ್ಕಿನ ಒಳಮುಖ ಮಂಟಪಕ್ಕೆ ಎದುರಾಗಿ ಒಂದು ಕಾರಕೂನರ ಬಚ್ಚಲುಮನೆ ಇದೆ. ಕೆಲವು ಕೋಣೆಗಳ ನಿರ್ಮಾಣದಿಂದಾಗಿ ಅದರ ಮುನ್ನೆಲೆ ಈಗ ಮುಚ್ಚಲ್ಪಟ್ಟಿದೆ. ಈ ಬಚ್ಚಲುಮನೆಗೆ ಹೋಗಲು ಕಿರಿದಾದ ಕತ್ತಲೆ ಓಣಿಯಿದೆ. ಈ ಬಚ್ಚಲು ಮನೆಯಂತೂ, ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ದಿನಗಳಿಂದ ಬೆಳಕಿನ ಸಂಪರ್ಕವನ್ನೇ ಕಂಡಿಲ್ಲ.

ಇ) ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಅಂಥ ಸ್ಥಿತಿ ಇಲ್ಲವೆಂದು ವರದಿ ಮಾಡಿದ್ದರೂ, ಉತ್ತರ ವಿಭಾಗದ ಇತರ ಕಾರಕೂನರ ಬಚ್ಚಲುಮನೆಗಳನ್ನು ಅಥವಾ ಭಾರತ ಸರ್ಕಾರದ ಇತರ ಕಟ್ಟಡಗಳ ತಪಾಸಣೆ ಮಾಡಿದರೆ, ಸನ್ಮಾನ್ಯ ಸದಸ್ಯರಿಗೆ ಹೆಚ್ಚುಕಡಿಮೆ ಎಲ್ಲ ಕಡೆ ಇದೇ ಅಸಮರ್ಪಕ ಸ್ಥಿತಿ ಇರುವುದು ಗೊತ್ತಾಗುವುದು.

ಈ) ಸನ್ಮಾನ್ಯ ಸದಸ್ಯರು, ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಹೇಳಿಕೆಯ ಸತ್ಯತೆಯನ್ನು ಪರೀಕ್ಷಿಸುವ ದೃಷ್ಟಿಯಿಂದಲಾದರೂ ಆರು ತಿಂಗಳಿಗೊಮ್ಮೆ ಸಿ.ಪಿ.ಡಬ್ಲ್ಯೂ.ಡಿ. ಅಧಿಕಾರಿಗಳಿಗೆ ತಿಳಿಸದೆ, ಅನಿರೀಕ್ಷಿತ ಭೇಟಿಕೊಡುವರೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) (ಆ) ಮತ್ತು (ಇ) **"ಹೌದು"** ; ಸರ್ಕಾರಿ ಕಟ್ಟಡಗಳ ಉತ್ತರ ವಿಭಾಗದಲ್ಲಿರುವ, ಕಾರಕೂನರ ಕೆಲವು ಬಚ್ಚಲು ಮನೆಗಳಲ್ಲಿ ದೀಪದ ವ್ಯವಸ್ಥೆ ಅಸಮರ್ಪಕವಾಗಿದೆ ಎಂಬುದು ನನಗೆ ಗೊತ್ತಿದೆ. ಪರಿಸ್ಥಿತಿ ಕೆಳಕಂಡಂತೆ ಇದೆ : ಕಾರಕೂನರ ಬಚ್ಚಲುಮನೆಗಳಿಗೆ ವಿದ್ಯುತ್ ಬಲ್ಬುಗಳನ್ನು ತಪ್ಪದೆ ಒದಗಿಸಲಾಗಿದೆ. ಅವು ಕೆಟ್ಟುಹೋದಾಗ ಬದಲಾಯಿಸಲಾಗಿದೆ ಮತ್ತು ಅವುಗಳ ಭದ್ರತೆಗೂ ಕ್ರಮ ಕೈಗೊಳ್ಳಲಾಗಿದೆ. ಬಲ್ಬು – ಬೀಗಗಳನ್ನು ಅಳವಡಿಸಿದ್ದರೂ ಬಲ್ಬುಗಳು ಮೇಲಿಂದ ಮೇಲೆ ಕಳುವಾಗುತ್ತಲೇ ಇವೆ.

ಕಳೆದ ಅಕ್ಟೋಬರ್‌ನಿಂದ ಉತ್ತರ ವಿಭಾಗದ ಕಾರಕೂನರ ಆರು ಬಚ್ಚಲು ಮನೆಗಳಲ್ಲಿ, ೪೮ ಬಲ್ಬುಗಳನ್ನೂ, ಅಷ್ಟೆ ಸಂಖ್ಯೆಯ ಬಲ್ಬು ಬೀಗಗಳನ್ನೂ ಒದಗಿಸಿದ್ದರೂ ಅವುಗಳಲ್ಲಿ ಎರಡು ಅಥವಾ ಮೂರು ಬಲ್ಬುಗಳು ಮಾತ್ರ ಸುಸ್ಥಿತಿಯಲ್ಲಿದ್ದು, ಮಿಕ್ಕವೆಲ್ಲ ಕಳುವಾಗಿವೆ ಎಂದು ದಾಖಲೆಗಳೇ ಸ್ಪಷ್ಟಪಡಿಸಿವೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಎಲ್ಲ ದೀಪ ತುದಿಗಳಿಗೆ (points) ೧೫ರಿಂದ ೧೬ ಬಲ್ಬುಗಳನ್ನು ಒದಗಿಸಿದ್ದರೆ ಸಾಕಾಗುತ್ತಿತ್ತು. (ಒಂದು ಬಲ್ಬಿನ ಸರಾಸರಿ ಆಯಸ್ಸು ೧,೦೦೦ ಗಂಟೆಗಳೆಂದು ಅಂದಾಜು) ಬಲ್ಬು ಬೀಗಗಳು ಕಳ್ಳತನವನ್ನು ತಪ್ಪಿಸಲು ವಿಫಲವಾಗಿರುವುದರಿಂದ, ವಿದ್ಯುತ್ ಇಂಜಿನಿಯರ್ ಅವರು ಒಂದು ವಿಶೇಷ ರೀತಿಯ ಜೋಡಣೆಯನ್ನು ಬಚ್ಚಲು ಮನೆಯ ದೀಪ ತುದಿಗಳಿಗೆ ಅಳವಡಿಸಲು ವ್ಯವಸ್ಥೆ ಮಾಡುತ್ತಿದ್ದಾರೆ. ಈ ವ್ಯವಸ್ಥೆ ಸಫಲವಾದರೆ, ಕಳವನ್ನು ತಪ್ಪಿಸಲು, ಕಾರಕೂನರ ಬಚ್ಚಲುಮನೆಯ ಬೆಳಕಿನ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗಬಹುದೆಂದು ಭಾವಿಸಲಾಗಿದೆ.

ಈ) ಈಗ ನಾವು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳ ಹಿನ್ನೆಲೆಯಲ್ಲಿ ನನ್ನ ಅನಿರೀಕ್ಷಿತ ಭೇಟಿಗಳು ಅಗತ್ಯವಿಲ್ಲವೆಂದು ಅನಿಸುತ್ತದೆ.

# ೧೮೪
# ನವದೆಹಲಿಯ ಡಿ.ಐ.ಜಡ್. ಪ್ರದೇಶದ ಕಾರಕೂನರ ಸಾಂಪ್ರದಾಯಿಕ ನಿವಾಸಗಳ ಮುಂದಿನ ಹಸಿರುಹಾಸು (Lawns) *

**೬೩೦. ಸರ್ದಾರ್ ಸಂತ್‌ಸಿಂಗ್ :** ಅ) ೧೯೪೩ನೆಯ ನವೆಂಬರ್ ೧೭ನೆಯ ದಿನಾಂಕದ ೨೩೨ನೆಯ ಪ್ರಶ್ನೆಗೆ ಕೊಟ್ಟ ಉತ್ತರಕ್ಕೆ ಸಂಬಂಧಿಸಿದಂತೆ ಈ ಪ್ರಶ್ನೆ ಕೇಂದ್ರ ಲೋಕೋಪಯೋಗಿ ಇಲಾಖೆಯ ಆಡಳಿತವು ನವದೆಹಲಿಯ ಡಿ.ಐ.ಜಡ್. ಪ್ರದೇಶದ ಕಾರಕೂನರ ಸಾಂಪ್ರದಾಯಿಕ ನಿವಾಸಗಳ ಮುಂದಿನ ಹಸಿರುಹಾಸಿನ ಬಗ್ಗೆ ತಪ್ಪು ಮಾಹಿತಿ ಕೊಟ್ಟಿರುವ ವಿಚಾರ ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ತಿಳಿದಿದೆಯೆ?

ಆ) (ಅ) ಪ್ರಶ್ನೆಗೆ ಉತ್ತರ ನಕಾರಾತ್ಮಕವಾಗಿದ್ದರೆ, ಅವರು ಲೋಕೋಪಯೋಗಿ ಅಧಿಕಾರಿಗಳನ್ನು ಜೊತೆಗೆ ಕರೆದೊಯ್ಯದೆ, ಕಾರಕೂನರ ಸಾಂಪ್ರದಾಯಕ ನಿವಾಸಗಳ ಮುಂದಿನ ಹಸಿರು ಹಾಸಿನ ಬಗ್ಗೆ, ತಾವೇ ಖುದ್ದಾಗಿ ತನಿಖೆಮಾಡಿ, ಲೋಕೋಪಯೋಗಿ ಇಲಾಖೆಯು ಹಸಿರುಹಾಸಿನ ಬಗ್ಗೆ ತಮ್ಮ ಮೂಲಕ ಸದನಕ್ಕೆ ಒದಗಿಸಿದ ಮಾಹಿತಿಯ ಸತ್ಯಾಸತ್ಯತೆಯ ಬಗ್ಗೆ ಮನವರಿಕೆ ಮಾಡಿಕೊಳ್ಳುವರೆ?

ಇ) (ಆ) ಭಾಗದ ಪ್ರಶ್ನೆಗೆ ಉತ್ತರ ನಕಾರಾತ್ಮವಾಗಿದ್ದರೆ, ಸನ್ಮಾನ್ಯ ಸದಸ್ಯರು ಈ ಮುಂದಿನ ವಿವರಗಳನ್ನು ದಯವಿಟ್ಟು ಒದಗಿಸುವರೆ?

(i) ಎಲ್ಲ ಪ್ರಕರಣಗಳಲ್ಲೂ ನಿವಾಸಗಳ ಹೊರಗೋಡೆಯಾಚೆಯ, ರಸ್ತೆ ಮತ್ತೊಂದು ತುದಿಯಿಂದ ಹಸಿರುಹಾಸು ತೊಡುಗುತ್ತದೆಯೆ?

(ii) ಈ ಹಸಿರುಹಾಸುಗಳ ಅಂಚು, ನಿವಾಸಗಳ ಗೋಡೆಗಳಿಗೆ ಸಮಾನಾಂತರವಾಗಿ ಸಾಗುತ್ತವೆಯೆ? ಅಂದರೆ, ನಿವಾಸಗಳು ಎಲ್ಲಿಯವರೆಗೆ ಸರಳರೇಖೆಯಲ್ಲಿ ಕಟ್ಟಲ್ಪಟ್ಟಿವೆಯೋ ಅಲ್ಲಿಯವರೆಗೆ ಸರಳರೇಖೆಯಲ್ಲಿ, ಅಥವಾ ಯಾವುದಾದರೂ ತಿರುವನ್ನು ಅನುಸರಿಸಿ, ಇತ್ಯಾದಿ.... ಆದರೆ ಯಾವಾಗಲೂ ನಿವಾಸದ ಗೋಡೆಗಳಿಗೆ ನಿರ್ದಿಷ್ಟ ರೀತಿಯಲ್ಲಿ ಸಮಾನಾಂತರವಾಗಿ ಸಾಗುತ್ತವೆಯೆ?

(iii) ಈ ಹಸಿರುಹಾಸುಗಳ ಅಂಚುಗಳನ್ನು ಸರಿಯಾಗಿ ಮಂಡಿದ್ದಾರೆಯೇ? ಮಾಡಿದ್ದರೆ, ಬಯರ್ಡ್‌ಚೌಕ, ಹ್ಯಾವ್‌ಲಾಕ್ ಚೌಕಗಳಲ್ಲಿನ ನಿವಾಸಗಳ ಮುಂದಿನ ಹಸಿರುಹಾಸು ಹಾಗೂ ನಿವಾಸಗಳ ನಡುವಿನ ಹಾದಿಯ ಉದ್ದೇಶಿಸಿದ್ದ ಅಗಲ ಮತ್ತು ನಿರ್ಮಿಸಿದ ಅಗಲ. ಅಲ್ಲದೆ ತಿರುಪುಗಳಲ್ಲಿರುವ ಹಾದಿಯ ಅಗಲಗಳು ಎಷ್ಟು?

(iv) ಈ ಹಸಿರುಹಾಸುಗಳ ಸ್ಥಿತಿಯನ್ನು ವೀಕ್ಷಿಸಲು ಕೇಂದ್ರ ಲೋಕೋಪಯೋಗಿ ಇಲಾಖೆಯ ಯಾವ ಅಧಿಕಾರಿಯಾದರೂ ಈ ಚೌಕಗಳಿಗೆ ಭೇಟಿ ಕೊಟ್ಟಿದ್ದಾರೆಯೆ? ಹಾಗಿದ್ದಲ್ಲಿ ಆ ಅಧಿಕಾರಿ ಯಾರು? ಅಥವಾ ಈ ಸಮಸ್ತ ವ್ಯವಹಾರವನ್ನು ಕೆಳದರ್ಜೆಯ ಅಧೀನ ನೌಕರರ ಕೈಗೆ ಒಪ್ಪಿಸಲಾಗಿದೆಯೆ? ಮತ್ತು,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೭–೩–೧೯೪೪; ಪು. ೧೫೬೧.

(v) ಆಕ್ಷೇಪಣೆಗಳು ಸ್ಪಷ್ಟವಾಗಿ ಬೆಳಕಿಗೆ ಬಂದಿರುವ ಪ್ರದೇಶಗಳನ್ನು ಸನ್ಮಾನ್ಯ ಸದಸ್ಯರು ಖುದ್ದಾಗಿ ತನಿಖೆಮಾಡಿ, ಕನಿಷ್ಠ ಅರ್ಧ ಡಜನ್ ಬಾಡಿಗೆದಾರರನ್ನಾದರೂ ಕರೆಸಿ, ಕುಂದುಕೊರತೆಗಳೇನಾದರೂ ಇದ್ದರೆ ಅದನ್ನು ದಾಖಲಿಸಿ, ಅವರ ರುಜು ಪಡೆದು, ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ವರದಿ ತಯಾರಿಸುವಂತೆ, ಸೂಚನೆ ಕೊಡುವರೆ? ಇಲ್ಲದಿದ್ದಲ್ಲಿ, ಯಾಕಿಲ್ಲ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಮತ್ತು (ಆ) ಇಲ್ಲ ; ನನಗೆ ಬಂದಿರುವ ಮಾಹಿತಿಗಳು ಸರಿಯಿಲ್ಲವೆಂದು ಭಾವಿಸಲು ಕಾರಣಗಳಿಲ್ಲ.

ಇ) (i) ಹೌದು ; ಸಾಮಾನ್ಯವಾಗಿ.

(ii) ಹಸಿರುಹಾಸುಗಳು ಸಾಮಾನ್ಯವಾಗಿ ನಿವಾಸಗಳ ಗೋಡೆಗಳಿಗೆ ಸಮಾನಾಂತರವಾಗಿ ಸಾಗುತ್ತವೆ.

(iii) ಹಸಿರುಹಾಸುಗಳ ಅಂಚುಗಳ ಪಂಕ್ತೀಕರಣವನ್ನು ಈಗಲೂ ಇಟ್ಟುಕೊಳ್ಳಲಾಗಿದೆ. ಮತ್ತು ದಾರಿಯ ಅಗಲ ಸುಮಾರು ಎಂಟು ಅಡಿಗಳು.

(iv) ಉಪವಿಭಾಗಾಧಿಕಾರಿಗಳು ಹಸಿರುಹಾಸುಗಳನ್ನು ನೋಡಲು ಪದೇ ಪದೇ ಸುತ್ತಾಡುತ್ತಾರೆ, ಮತ್ತು ತೋಟಗಾರಿಕೆ ನಿರ್ವಹಣೆಯ ಅಧೀಕ್ಷಕರು ಒಮ್ಮೊಮ್ಮೆ ಅವುಗಳನ್ನು ತಪಾಸಣೆ ಮಾಡುತ್ತಾರೆ.

(v) ದೂರುಗಳು ಬಂದಾಗ ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಅದಕ್ಕೆ ಗಮನಹರಿಸುತ್ತಾರೆ. ಆದ್ದರಿಂದ ವಿಶೇಷ ಸೂಚನೆಗಳು ಅಗತ್ಯವಿಲ್ಲವೆಂದು ತೋರುತ್ತದೆ.

## ೧೮೫

## ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯದ ರೀಡರ್ಸ್ ಪರೀಕ್ಷೆಗಳನ್ನು ಪಾಸುಮಾಡಿದ ನಕಲು ಮಾಡುವವರು (Copy-holders) ಮತ್ತು ಪರಿಷ್ಕರಿಸುವವರು (Revisers) *

**೬೪೬. ಮೌಲಾನ ಜಫಾರ್ ಅಲಿಖಾನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ವಿವರಗಳನ್ನು ಒದಗಿಸುವರೇ?

ಅ) ೧೯೪೨ರಲ್ಲಿ, ಮೂರನೆಯ ಪ್ರಯತ್ನದಲ್ಲಿ (ಕೃಪಾವಕಾಶ/Grace chance)ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯದ ರೀಡರ್ ಪರೀಕ್ಷೆಗಳನ್ನು ಪಾಸುಮಾಡಿದ ಕೆಲವು ಪ್ರತಿಕಾರರು ಮತ್ತು ಪರಿಷ್ಕಾರಕರಿಗೆ, ಮೊದಲ ಮತ್ತು ಎರಡನೆಯ ಪ್ರಯತ್ನದಲ್ಲಿ ತೇರ್ಗಡೆಯಾದ ಎಲ್ಲ ಅರ್ಹ ನೌಕರರಿಗಿಂತ ಸೇವಾಗಣನೆಯಲ್ಲಿ ಕಿರಿಯರಾಗಬೇಕಾಗುತ್ತದೆ ಎಂಬ ಸೂಚನೆ ಕೊಟ್ಟಿರುವುದು ನಿಜವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೭–೩–೧೯೪೪; ಪು. ೧೫೬೧೭–೬೮.

ಆ) ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯದಲ್ಲಿ ೧೯೪೨ರ ಮೇ ತಿಂಗಳಿನಲ್ಲಿ ಪರೀಕ್ಷೆ ನಡೆದಾಗ, ಹಾಲಿ ಚಾಲ್ತಿಯಲ್ಲಿರುವ ಈ ನಿಯಮ ಆಗ ಜಾರಿಯಲ್ಲಿತ್ತೆ?

ಇ) ಮೂರನೆಯ (ಕೃಪಾವಕಾಶ ಪ್ರಯತ್ನದಲ್ಲಿ) ಪ್ರಯತ್ನದಲ್ಲಿ ತೇರ್ಗಡೆಯಾದವರನ್ನು ಎಲ್ಲರಿಗಿಂತ ಸೇವೆಯಲ್ಲಿ ಹಿರಿಯರಾಗಿ ಪರಿಗಣಿಸಲು ಅನುಕೂಲವಾಗುವಂತೆ ಅರ್ಹ ಪ್ರತಿಕಾರರು ಮತ್ತು ರೀಡರ್‌ಗಳ ಪದೋನ್ನತಿಯ ನಿಯಮವನ್ನು, ಅತಿ ಶೀಘ್ರದಲ್ಲಿ ತಿದ್ದಲಾಗುವುದೆ? ಅದು ಹೌದಾದರೆ, ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ : (ಅ) ಹೌದು. (ಇ) ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ ಅವರ ೨೩೧ನೆಯ ಪ್ರಶ್ನೆಯ 'ಈ' ಮತ್ತು 'ಉ' ಭಾಗಗಳಿಗೆ ಮತ್ತು ಶ್ರೀ ಮಹಮ್ಮದ್ ಹುಸೇನ್ ಚೌಧುರಿಯವರ ೫೦೧ನೇ ಪ್ರಶ್ನೆಯ ಭಾಗ 'ಇ'ಗೆ ಕೊಡಲಾದ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನಸೆಳೆಯಲು ಇಚ್ಛಿಸುತ್ತೇನೆ.

## ೧೮೬
## ದೆಹಲಿಯಲ್ಲಿ ಭೂಮಾಲೀಕರ ಸ್ವೇಚ್ಛಾಚಾರ *

**೬೪೭. ಶ್ರೀ ಕೈಲಾಸ್ ಬಿಹಾರಿಲಾಲ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದೆಹಲಿಯ 'ವೈಶ್ಯ ಸಮಾಚಾರ' ಹಿಂದಿ ವಾರಪತ್ರಿಕೆಯು ೧೨–೩–೪೪ನೆಯ ಸಂಚಿಕೆಯಲ್ಲಿ "ದೆಲ್ಲಿ ಮೇ ಮಕನ್‌ದಾರೊಂಕಿ ನಾದಿರ್‌ಶಾಹಿ" ಎಂಬ ಶೀರ್ಷಿಕೆಯಡಿ ಪ್ರಕಟವಾದ ಲೇಖನ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಳೆ ದೆಹಲಿಯ ಮಲಿವಾರ್‍ಸ್ ಮೊಹಲ್ಲದಲ್ಲಿ ಮನೆಬಾಡಿಗೆ ೯ ರೂ. ನಿಂದ (ರೂ. ಆ. ಪೈ) ೨೧–೪–೦ಗಳವರೆಗೆ ಏರಿಸುವುದು ನಿಜವೆ?

ಈ) ಹಳೆ ದೆಹಲಿಯ ನಿವಾಸಗಳ ಬಾಡಿಗೆ ವ್ಯಾಜ್ಯ ನಿಯಂತ್ರಿಸಲು ಪ್ರಚಲಿತವಿರುವ ಕಾನೂನನ್ನೆ ಹಳೆ ದೆಹಲಿಗೂ ವಿಸ್ತರಿಸುವುದರಲ್ಲಿ ಇರುವ ತೊಂದರೆ ಏನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸ್ಥಳೀಯ ಅಧಿಕಾರಿಗಳೊಡನೆ ಸಮಾಲೋಚನೆ ನಡೆಯುತ್ತಿದೆ. ಆದಷ್ಟು ಬೇಗ ಉತ್ತರವನ್ನು ಸದನದ ಮುಂದಿರಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೭–೩–೧೯೪೪; ಪು. ೧೫೭೧–೭೨.

# ೧೮೭
# ಆಹಾರ ಇಲಾಖೆಯಲ್ಲಿ ಅನುಸೂಚಿತ ಜಾತಿಗಳವರ ಪ್ರಾತಿನಿಧ್ಯ *

**೬೪೮. ಶ್ರೀ ಪಿಯರ್‌ಲಾಲ್ ಕುರೀಲ್ :** ಅ) ಆಹಾರ ಇಲಾಖೆ ಮತ್ತು ಅದರ ವ್ಯಾಪ್ತಿಯಲ್ಲಿರುವ ಕಾರ್ಯಾಂಗ ಮತ್ತು ಪ್ರಾಂತೀಯ ಸಂಸ್ಥೆಗಳಲ್ಲಿ ಗೆಜೆಟೆಡ್ ಮತ್ತು ಗೆಜೆಟೆಡ್ ಅಲ್ಲದ ಸಿಬ್ಬಂದಿಗಳಲ್ಲಿ, ಅನುಸೂಚಿತ ಜಾತಿಗಳನ್ನೊಳಗೊಂಡಂತೆ, ಕೋಮುವಾರು ಪ್ರಾತಿನಿಧ್ಯವನ್ನು ಸನ್ಮಾನ್ಯ ಸದಸ್ಯರು ತಿಳಿಸುವರೆ?

ಆ) ಆಹಾರ ಇಲಾಖೆಯಲ್ಲಿನ ಅನುಸೂಚಿತ ಜಾತಿಗಳ ಪ್ರಕೃತ ಪ್ರಾತಿನಿಧ್ಯ ಸರ್ಕಾರಕ್ಕೆ ಸಮಾಧಾನ ತಂದಿದೆಯೆ? ಇಲ್ಲದಿದ್ದಲ್ಲಿ, ಆ ಇಲಾಖೆಯಲ್ಲಿ ಅವರ ಸಮರ್ಪಕ ಪ್ರಾತಿನಿಧ್ಯವನ್ನು ಸಾಧಿಸಲು ಸರ್ಕಾರ ಉದ್ದೇಶಿಸಿರುವ ಕ್ರಮಗಳಾವುವು?

ಇ) ಪೂರ್ವೋಕ್ತ ಗೆಜೆಟೆಡ್ ಮತ್ತು ಗೆಜೆಟೆಡ್ ಅಲ್ಲದ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅನುಸೂಚಿತ ಜಾತಿಗಳಿಗೆ ಅನುಕೂಲವಾಗುವಂತೆ ಕಡಿಮೆ ಮಾಡಲು ಸರ್ಕಾರ ಆಲೋಚಿಸುತ್ತಿದೆಯೆ? ಇಲ್ಲವಾದಲ್ಲಿ, ಯಾಕಿಲ್ಲ.

**ಗೌರವಾನ್ವಿತ ಸರ್ ಜ್ವಾಲಾಪ್ರಸಾದ್ ಶ್ರೀವಾತ್ಸವ :**

| | | | | |
|---|---|---|---|---|
| ಅ) | **I ಗೆಜೆಟೆಡ್ ಹುದ್ದೆಗಳು :** | | | |
| | ಐರೋಪ್ಯರು | – | – | ೨೨ |
| | ಆಂಗ್ಲೊ–ಇಂಡಿಯನ್ನರು | – | – | ೧ |
| | ಅನುಸೂಚಿತ ಜಾತಿಗಳನ್ನು ಬಿಟ್ಟು | | | |
| | ಇತರ ಹಿಂದುಗಳು | – | – | ೬೦ |
| | ಮುಸ್ಲಿಮರು | – | – | ೨೨ |
| | ಇತರ ಅಲ್ಪಸಂಖ್ಯಾತ ಕೋಮುಗಳು | – | – | ೮ |
| | ಅನುಸೂಚಿತ ಜಾತಿಗಳು | – | – | ೧ |
| II | **ಗೆಜೆಟೆಡ್ ಅಲ್ಲದ ಹುದ್ದೆಗಳು** | | | |
| | ಐರೋಪ್ಯರು | – | – | ೩ |
| | ಆಂಗ್ಲೋ – ಇಂಡಿಯನ್ನರು | – | – | ೩ |
| | ಅನುಸೂಚಿತ ಜಾತಿಗಳನ್ನು ಬಿಟ್ಟು | | | |
| | ಇತರ ಹಿಂದುಗಳು | – | – | ೪೪೫ |
| | ಮುಸ್ಲಿಮರು | – | – | ೧೪೯ |
| | ಇತರ ಅಲ್ಪಸಂಖ್ಯಾತ ಕೋಮುಗಳು | – | – | ೫೨ |
| | ಅನುಸೂಚಿತ ಜಾತಿಗಳು | – | – | ೧ |

ಆ) ಪ್ರಶ್ನೆಯ ಪ್ರಥಮ ಭಾಗಕ್ಕೆ ಉತ್ತರ ನಕಾರಾತ್ಮಕ ; ಎರಡನೆಯ ಭಾಗಕ್ಕೆ ಸಬಂಧಿಸಿದಂತೆ, ಮಾನ್ಯ ಸದಸ್ಯರ ಗಮನವನ್ನು ಗೃಹಖಾತೆಯ ೧೧–೮–೧೯೪೩ನೆಯ ದಿನಾಂಕ ಸಂಖ್ಯೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೭–೩–೧೯೪೪; ಪು. ೧೫೭೧–೭೨.

೨೩/೫/೪೨ ಇಎಸ್‌ಟಿಎಸ್ (ಎಸ್) ನಿರ್ಣಯದ ಕಡೆಗೆ ಸೆಳೆಯಲು ಇಚ್ಛಿಸುತ್ತೇನೆ. ಅದರಲ್ಲಿ ಎಲ್ಲ ನೇರ ನೇಮಕಾತಿಯ ಹುದ್ದೆಗಳಲ್ಲಿ ಶೇಕಡ ೮೧/೨ರಷ್ಟನ್ನು ಅನುಸೂಚಿತ ಜಾತಿ ಅಭ್ಯರ್ಥಿಗಳಿಗೆ ಕಾದಿರಿಸಲಾಗಿದೆ. ಅಲ್ಲದೆ ವಯೋಮಿತಿಯಲ್ಲಿ ಶುಲ್ಕ ಪಾವತಿಯಲ್ಲಿ ಸಹ ಕೆಲವು ರಿಯಾಯಿತಿಗಳನ್ನು ಅಂಥ ಅಭ್ಯರ್ಥಿಗಳಿಗೆ ಕೊಡಲಾಗಿದೆ. ಎಲ್ಲ ಅಭ್ಯರ್ಥಿಗಳ ತಿಳುವಳಿಕೆಗಾಗಿ, ತೆರವಾಗಿರುವ ಹುದ್ದೆಗಳನ್ನು ಪ್ರಮುಖ ವಾರ್ತಾಪತ್ರಿಕೆಗಳಲ್ಲಿ ಜಾಹೀರು ಮಾಡಲಾಗುತ್ತದೆ.

ಇ) ಇಲ್ಲ ; ಈಗ ನಾನು ಉಲ್ಲೇಖಿಸಿದ, ಗೃಹಖಾತೆ ನಿರ್ಣಯದ ಅನುಸಾರ ಜಾರಿಯಾದ ಆದೇಶದ ಪ್ರಕಾರ, ಎಲ್ಲ ಪ್ರಕರಣಗಳಲ್ಲೂ (Cases) ಒಂದು ಕನಿಷ್ಠ ಮಟ್ಟದ ಅರ್ಹತೆಯನ್ನು ನಿಗದಿಪಡಿಸಲಾಗಿದೆ. ಅನುಸೂಚಿತ ಜಾತಿ ಅಭ್ಯರ್ಥಿಗಳಿಗೆ ಕಾದಿರಿಸಿದ ಸ್ಥಳಾವಕಾಶವು ಸಹ ಈ ನಿಯಮಕ್ಕೆ ಬದ್ಧವಾಗಿರುತ್ತದೆ.

## ೧೮೮
## ಹಳೆ ದೆಹಲಿಯ ಮತ್ತು ಷಹದಾರಾದಲ್ಲಿರುವ ಬಾಡಿಗೆದಾರರು ಅನುಭವಿಸಿದ ಸಂಕಷ್ಟಗಳು *

೧೯೧. **ಶ್ರೀ ಮಹಮ್ಮದ್ ಅಜಹರ್ ಅಲಿ :** ಅ) ಹಳೆ ದೆಹಲಿಯ ಮತ್ತು ಷಹದಾರದ ಬಾಡಿಗೆದಾರರು ಅನುಭವಿಸಿದ ಸಂಕಷ್ಟಗಳ ಅರಿವು ಮಾನ್ಯ ಕಾರ್ಮಿಕ ಸದಸ್ಯರಿಗಿದೆಯೆ?

ಆ) ಪಂಜಾಬು ನಾಗರಿಕ ಮತ್ತು ಗ್ರಾಮೀಣ ಅಧಿನಿಯಮವು ಜಾರಿಯಲ್ಲಿದ್ದರೂ ಕೆಲವು ಶ್ರೀಮಂತ ಮಾಲೀಕರು ಕಳೆದ ಎರಡು ವರ್ಷಗಳಲ್ಲಿ ಬಾಡಿಗೆಯನ್ನು ಶೇಕಡ ೧೫೦ರಷ್ಟು ಹೆಚ್ಚಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೆ?

ಇ) ಕೆಲವು ಮಾಲೀಕರು, ಬಾಡಿಗೆದಾರರು ಮನೆ ಖಾಲಿಮಾಡುವಂತೆ, ಅಥವಾ ಹೆಚ್ಚಿನ ಬಾಡಿಗೆಗೆ ಒಪ್ಪುವಂತೆ, ಅವರ ಮೇಲೆ ಒತ್ತಡಹೇರುವುದಕ್ಕಾಗಿ, ನೀರು ಸರಬರಾಜನ್ನು, ವಿದ್ಯುತ್ ಸಂಪರ್ಕವನ್ನು ತಪ್ಪಿಸುತ್ತಿರುವುದು ನಿಜವೆ?

ಈ) ಹೊಸ ದೆಹಲಿಯ ಬಾಡಿಗೆದಾರರನ್ನು ರಕ್ಷಿಸಲು ಈಚೆಗೆ ಜಾರಿಯಾದ ಬಾಡಿಗೆ ನಿಯಂತ್ರಣ ಕಾನೂನನ್ನು, ಹಳೆದೆಹಲಿ ಮತ್ತು ಷಹದಾರಕ್ಕೂ ವಿಸ್ತರಿಸಲು ಸರ್ಕಾರ ಯೋಚಿಸುತ್ತಿದೆಯೆ? ಇಲ್ಲದಿದ್ದಲ್ಲಿ, ಯಾಕಿಲ್ಲ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** (ಅ) ಹೌದು, ಸ್ಥೂಲವಾಗಿ ತಿಳಿದಿದೆ.

ಆ) ಮತ್ತು (ಇ) : ಬಾಡಿಗೆ ಏರಿಕೆ ಆಗಿದೆ ಎಂಬುದು ಗೊತ್ತು. ಆದರೆ ೧೯೪೧ರ ಪಂಜಾಬು ನಾಗರಿಕ ಬಾಡಿಗೆ ನಿಯಂತ್ರಣ ಅಧಿನಿಯಮದ ಪ್ರಕಾರ, ಈ ವಿಷಯಗಳೆಲ್ಲ ನ್ಯಾಯಾಲಯಗಳಲ್ಲಿ ನಿರ್ಣಯವಾಗಬೇಕು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂಪುಟ ೨, ೨೭–೩–೧೯೪೪; ಪು. ೧೫೭೧–೭೨.

ಈ) ಈಗ ಪ್ರಸ್ತಾಪಿಸಲಾದ ಪ್ರದೇಶಗಳಿಗೆ ೧೯೩೯ರ ನವದೆಹಲಿ ಮನೆಬಾಡಿಗೆ ನಿಯಂತ್ರಣ ಆದೇಶವನ್ನು ವಿಸ್ತರಿಸಲು ಕೆಲವು ಆಡಳಿತಾತ್ಮಕ ತೊಂದರೆಗಳಿವೆ. ಆದರೆ ಭಾರತ ಸರ್ಕಾರವು ಇತರ ಕ್ರಮಗಳ ಬಗ್ಗೆ ಪರಿಶೀಲಿಸುತ್ತಿದೆ.

## ೧೮೯
## ಪೂರ್ವ ಭಾರತೀಯ ರೈಲ್ವೆಯಲ್ಲಿ ಮಜೂರಿ ಪಾವತಿ ಅಧಿನಿಯಮದ ವ್ಯಾಪ್ತಿಯಲ್ಲಿ ವರದಿಯಾದ ಅಕ್ರಮಗಳು *

**೫೪. ಶ್ರೀ ಅನಂಗ ಮೋಹನ ದಾಮ್ :** ಅ) ೧೯೩೮ರಿಂದಲೂ ಪೂರ್ವ ಭಾರತೀಯ ರೈಲ್ವೆಯಲ್ಲಿ "ಮಜೂರಿ ಪಾವತಿ ಕಾನೂನು" ಜಾರಿಯಲ್ಲಿದೆ. ಆದರೂ ಅಲ್ಲಿ ನಡೆದಿರಬಹುದಾದ ಅನೇಕ ಅಕ್ರಮಗಳನ್ನು ತಪಾಸಣಾಧಿಕಾರಿಗಳು ವರದಿಮಾಡಿದ್ದಾರೆ. ಅವುಗಳ ಬಗ್ಗೆ ಸರ್ಕಾರ, ರೈಲ್ವೆ ಮಂಡಲಿ, ಮತ್ತು ರೈಲ್ವೆ ಆಡಳಿತ ತೆಗೆದುಕೊಂಡ ಕ್ರಮಗಳನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ? ಒಂದು ವೇಳೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವಾದರೆ ಅದಕ್ಕೆ ಕಾರಣಗಳೇನು?

ಆ) ಈ ಅಕ್ರಮಗಳಲ್ಲಿ ಯಾವುದಾದರೂ ವರ್ಷದಿಂದ ವರ್ಷಕ್ಕೆ ಪುನರಾವರ್ತನೆಯಾಗುತ್ತಲೇ ಇದೆಯೆ?

ಇ) ಭಾಗ (ಆ)ದಲ್ಲಿ ಉಲ್ಲೇಖಿಸಿದ ಅಕ್ರಮದ ಬಗ್ಗೆ ಯಾವ ಕಾರ್ಯಕೈಗೊಳ್ಳಲಾಗಿದೆ? ಇಲ್ಲವಾದಲ್ಲಿ ಏಕೆ?

ಈ) ಅಕ್ರಮಗಳ ಪುನರಾವರ್ತನೆಗಾಗಿ, ರೈಲ್ವೆ ಆಡಳಿತದ ವಿರುದ್ಧ, ಮಜೂರಿ ಪಾವತಿ ಕಾನೂನು ಅನ್ವಯ ನಡವಳಿಗಳನ್ನು ಏಕೆ ತೆಗೆದುಕೊಳ್ಳಲಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಮಾಹಿತಿ ಸಂಗ್ರಹಿಸಲಾಗುತ್ತಿದೆ. ಕೆಲವು ದಿನಗಳಲ್ಲಿ ಸದನದ ಮುಂದಿರಿಸಲಾಗುವುದು.

ಇ) ಪತ್ತೆ ಹಚ್ಚಿದ ಅಕ್ರಮಗಳನ್ನು ರೈಲ್ವೆ ಆಡಳಿತದ ಗಮನಕ್ಕೆ ತಂದು ಸರಿಪಡಿಸಲಾಗುತ್ತಿದೆ.

ಈ) ಕೆಲವು ವೈಯಕ್ತಿಕ ಪ್ರಕರಣಗಳಲ್ಲಿ, ಒಂದು ರೀತಿಯಲ್ಲಿ ಸಮಾಧಾನಕರವಾಗಿ ಇತ್ಯರ್ಥ ಮಾಡಲು ಸಾಧ್ಯವಾಗಿರುವುದರಿಂದ ಸರ್ಕಾರ ಕಾನೂನಿನ ಅನ್ವಯ ಔಪಚಾರಿಕ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವೆಂದು ಭಾವಿಸಲಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೩೦–೩–೧೯೪೪; ಪು. ೩೫೮.

# ೧೯೦
# ಯುದ್ಧತಂತ್ರಜ್ಞರಿಗೆ ತರಬೇತಿ ಕೊಡಲು ತಾಂತ್ರಿಕ ಪ್ರವೀಣರ ನೇಮಕಾತಿ *

**೨೨೨. ಡಾ॥ ಸರ್. ಝಿಯಾವುದ್ದೀನ್ ಅಹಮ್ಮದ್ :** ಅ) ಭಾರತ ಸರ್ಕಾರವು ಯಂತ್ರತಂತ್ರಜ್ಞರಿಗೆ ತರಬೇತಿ ಕೊಡಲು ಎಷ್ಟು ಮಂದಿ ತಾಂತ್ರಿಕ ಪ್ರವೀಣರನ್ನು ನೇಮಕ ಮಾಡಿಕೊಂಡಿತು ಎಂಬ ವಿವರವನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ತಿಳಿಸುವರೆ? ಮೂಲ ವೇತನ ಮತ್ತು ಇತರ ಭತ್ಯೆಗಳೊಡನೆ ಅವರ ಒಟ್ಟು ಮಾಸಿಕ ವೇತನ ಎಷ್ಟು?

ಆ) ಒಟ್ಟು ಎಷ್ಟು ಯುದ್ಧತಂತ್ರಜ್ಞರ ಕೇಂದ್ರಗಳಿವೆ? ಅವುಗಳಲ್ಲಿ ಎಷ್ಟು ಕೇಂದ್ರಗಳು ತಾಂತ್ರಿಕ ಕಾಲೇಜು ಮತ್ತು ರೈಲ್ವೆ ಕಾರ್ಯಾಗಾರಗಳೊಡನೆ ನಿಕಟ ಸಂಪರ್ಕ ಹೊಂದಿದೆ?

ಇ) ತಜ್ಞ ಬೋಧಕರಲ್ಲಿ ಎಷ್ಟು ಮಂದಿಯನ್ನು ತಾಂತ್ರಿಕ ಕಾಲೇಜು ಮತ್ತು ರೈಲ್ವೆ ಕಾರ್ಯಾಗಾರಗಳ ಸಹಯೋಗದ ಯುದ್ಧ ತರಬೇತಿ ಕೇಂದ್ರಗಳಿಗೆ ಕಳುಹಿಸಲಾಗಿದೆ?

ಈ) ಈಗ ಭಾರತೀಯರೂ ಪ್ರಶಿಕ್ಷಣ ಪಡೆದಿರುವುದರಿಂದ, ಈ ತಜ್ಞ ತರಬೇತಿದಾರರನ್ನು ಅನ್ಯತ್ರ, ಹೆಚ್ಚು ಉಪಯುಕ್ತ ಕೆಲಸಗಳಲ್ಲಿ ನಿಯೋಜಿಸಬಹುದಲ್ಲವೆ?

ಉ) ಈ ತಜ್ಞ ಬೋಧಕರಿಗೆ ಬೋಧನಾ ಕಾರ್ಯದ ಜೊತೆಗೆ, ಇತರ ಕೇಂದ್ರಗಳ ತಪಾಸಣೆ ಮಾಡುವ ಕಾರ್ಯವನ್ನೂ ವಹಿಸಿರುವುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸ್ಪಷ್ಟವಾಗಿ ಈ ಪ್ರಶ್ನೆ ಬ್ರಿಟಿಷ್ ತಜ್ಞ ಬೋಧಕರನ್ನು ಕುರಿತದ್ದು. ನೂರು ಮಂದಿ ಬ್ರಿಟಿಷ್ ತಜ್ಞ ಬೋಧಕರನ್ನು ನೇಮಿಸಲಾಯಿತು. ಅವರಲ್ಲಿ ೮೭ ಮಂದಿ ಇನ್ನು ಸೇವೆಯಲ್ಲಿದ್ದಾರೆ. ಇವರ ಒಟ್ಟು ವೇತನ ಉಪಲಬ್ಧ ತಿಂಗಳಿಗೆ ೬೨೦ ರೂ.ನಿಂದ ೬೭೨ ರೂವರೆಗೆ (ವಿಭಿನ್ನವಾಗಿದ್ದು) ಸಜ್ಜಾದ ಉಚಿತ ನಿವಾಸ, ಅಥವಾ ಅದರ ಬದಲಿಗೆ ನಿವಾಸಭತ್ಯೆ, ಸೂಕ್ತ ಪ್ರಕರಣಗಳಲ್ಲಿ ವಾಹನ ಭತ್ಯೆಗಳು ದೊರೆಯುತ್ತವೆ.

ಆ) ತಾಂತ್ರಿಕ ತರಬೇತಿ ಯೋಜನೆಯ ಅಡಿಯಲ್ಲಿರುವ ಒಟ್ಟು

| | |
|---|---|
| ತರಬೇತಿ ಕೇಂದ್ರಗಳು | ೨೭೦ |
| ತಾಂತ್ರಿಕ ಕಾಲೇಜು (ಇಂಜಿನಿಯರಿಂಗ್) ಗಳಲ್ಲಿರುವ ಕೇಂದ್ರಗಳು | ೧೨ |
| ರೈಲ್ವೆ ಕಾರ್ಯಾಗಾರದಲ್ಲಿರುವ ಕೇಂದ್ರಗಳು | ೨೭ |

ಇ) ಒಂದೊಂದು ಕೇಂದ್ರದಲ್ಲೂ ಹತ್ತು ಮಂದಿ ಇದ್ದಾರೆ.

ಈ) ಅವರನ್ನು ತಂತ್ರಜ್ಞರ ತರಬೇತಿ ಕಾರ್ಯಗಳಿಗಿಂತಲೂ ಹೆಚ್ಚು ಉಪಯುಕ್ತವಾಗಿ ಅನ್ಯತ್ರ ಬಳಸಲಾಗುವುದಿಲ್ಲವೆಂಬುದು ಸರ್ಕಾರದ ಅಭಿಪ್ರಾಯ.

ಉ) ಹೌದು ; ಕೆಲವು ಸಂದರ್ಭಗಳಲ್ಲಿ.

**ಶ್ರೀ ಲಾಲ್‌ಚಂದ್ ನವಲರಾಯ್ :** ಕರಾಚಿಯಲ್ಲಿ ಯಾವುದೇ ಕೇಂದ್ರ ಸ್ಥಾಪಿತವಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರವನ್ನು ನೀಡಲು ಮೊದಲೇ ನೋಟೀಸ್ ಕೊಡಬೇಕು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೨, ೨೫–೨–೧೯೪೪; ಪು. ೫೩೯.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಇಂಜಿನಿಯರಿಂಗ್ ಕಾಲೇಜು ಅಥವಾ ರೈಲ್ವೆ ಕಾರ್ಯಾಗಾರದ ಸಹಯೋಗವಿರುವ ಕೇಂದ್ರಗಳಿಗೆ ಈ ಬೋಧಕರನ್ನು ಪ್ರತಿನಿಯೋಜನೆ ಮಾಡಿರುವಾಗ, ಅವರು ಈ ಸಂಸ್ಥೆಗಳವರಿಂದ ಹೊರಗಿರುವ ಕೇಂದ್ರಗಳ ತಪಾಸಣೆ ಮಾಡುವ ಹೆಚ್ಚಿನ ಕೆಲಸವನ್ನು ಮಾಡಬೇಕಾಗುತ್ತದೆಯಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು ; ಕೆಲವು ಸಂದರ್ಭಗಳಲ್ಲಿ ಎಂದು ಮೊದಲೇ ತಿಳಿಸಿದ್ದೇನೆ.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಈ ಇಂಜಿನಿಯರಿಂಗ್ ಕಾಲೇಜಿನೊಡನೆ ಸಂಪರ್ಕವಿರುವ ಈ ತಜ್ಞರು ಸರ್ಕಾರದ ನೌಕರರೆ? ಅಥವಾ ಸಂಬಂಧಿಸಿದ ಕಾಲೇಜಿನ ಇತರ ನೌಕರ ವರ್ಗದೊಡನೆ ಇವರನ್ನು ಪರಿಗಣಿಸಬೇಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ಮೊದಲೇ ನೋಟೀಸ್ ಕೊಡಬೇಕಾಗಿತ್ತು.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಈ ಇಂಜಿನಿಯರಿಂಗ್ ಕಾಲೇಜಿನೊಡನೆ ಸಂಬಂಧಿಸಿರುವ ತಜ್ಞರು ತಾವು ಆ ಕಾಲೇಜಿನ ನೌಕರ ವರ್ಗದವರೆಂದು ಭಾವಿಸುವುದಿಲ್ಲ. ಆ ಕಾಲೇಜಿನ ನೌಕರವರ್ಗಕ್ಕೆ ಅನ್ವಯಿಸುವ ನೀತಿ ಶಿಸ್ತು ತಮಗೆ ಅನ್ವಯವಾಗುವುದಿಲ್ಲವೆಂದು ಭಾವಿಸುತ್ತಾರೆ. ಅಲ್ಲದೆ ಅವರು ತಮ್ಮ ಹೆಚ್ಚು ಸಮಯವನ್ನು ಇತರ ಕೇಂದ್ರಗಳ ತಪಾಸಣಾ ಕಾರ್ಯದಲ್ಲಿ ಕಳೆಯುತ್ತಾರೆ. ಬೋಧನಾಕಾರ್ಯವು ಅವರಿಗೆ ಆಕರ್ಷಕರಹಿತವಾಗಿ ಕಾಣುವುದರಿಂದ ಅವರಿಗೆ ಬೋಧನೆಯಲ್ಲಿ ನಿಜವಾದ ಕಾಳಜಿ ಇಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸನ್ಮಾನ್ಯ ಮಿತ್ರರು ಹೇಳಿದ ವಿಷಯದ ಬಗ್ಗೆ ಕೂಲಂಕಷವಾಗಿ ವಿಚಾರಿಸುತ್ತೇನೆ.

## ೧೯೧
## ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಮುಷ್ಕರ*

**೨೩೦. ಶ್ರೀ ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ :** ಅ) ಸರ್ಕಾರಿ ಮುದ್ರಣಾಲಯದ ನೌಕರರಲ್ಲಿ ತಲೆದೋರಿರುವ ತೀವ್ರ ಅಸಮಾಧಾನದ ಪ್ರಯುಕ್ತ ೧೯೪೨ನೇ ಡಿಸೆಂಬರ್ ಒಂದನೆಯ ದಿನಾಂಕ ಒಂದು ಮುಷ್ಕರ ನಡೆಯಿತು. ಕಾರ್ಮಿಕ ಇಲಾಖೆಯ ಕಾರ್ಯದರ್ಶಿ, ಮತ್ತು ಕಾರ್ಮಿಕ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕಾರ್ಮಿಕರನ್ನು ಭೇಟಿಯಾಗಿ ಸಮಾಧಾನ ಮಾಡಿದಾಗ, ಅವರು ತಮ್ಮ ಕುಂದುಕೊರತೆಗಳನ್ನು ಪಟ್ಟಿಮಾಡಿಕೊಟ್ಟಿದ್ದಾರೆ. ಇವೆಲ್ಲ ಮಾನ್ಯ ಸದಸ್ಯರಿಗೆ ತಿಳಿದಿದೆಯೆ?

ಆ) ಅವರ ಕುಂದುಕೊರತೆಗಳನ್ನು ನಿವಾರಿಸಲು ಅದರಲ್ಲೂ ಪಟ್ಟಿಮಾಡಿರುವ ಮುಖ್ಯ ಕುಂದುಕೊರತೆಗಳ ಬಗ್ಗೆ – ಸರ್ಕಾರ ಏನು ಮಾಡಿದೆ ?

(i) ರೈಲ್ವೆ ನೌಕರರಿಗೆ ದೊರೆಯುವ ತುಟ್ಟಿಭತ್ಯೆಯ ದರದಲ್ಲಿಯೇ ಮುದ್ರಣಾಲಯದ ನೌಕರರಿಗೂ ತುಟ್ಟಿಭತ್ಯೆ ಮಂಜೂರು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೫–೨–೧೯೪೪ ; ಪು. ೫೪೬

(ii) ಎಲ್ಲ ಕೈಗಾರಿಕಾ ಕ್ಷೇತ್ರದ ನೌಕರರಿಗೂ ಸಾಂದರ್ಭಿಕ ರಜೆಯನ್ನು ಕೊಡುವುದು.

(iii) ಎಲ್ಲ ನೌಕರರಿಗೂ, ಅವರು ಮುದ್ರಣಾಲಯದ ನಿವಾಸಗಳನ್ನು ಸುಪರ್ದಿಗೆ ಪಡೆದ ದಿನಾಂಕದ ಗಣನೆ ಮಾಡದೆ ವೇತನದ ಶೇಕಡ ೫ರಷ್ಟು ಏಕರೂಪದ ಬಾಡಿಗೆ ವಿಧಿಸುವದು.

(iv) ರಟ್ಟುಕಟ್ಟುವ ಶಾಖೆಯ ನೌಕರರಲ್ಲಿ, ಹಾಲಿ ಪ್ರಚಲಿತವಿರುವ ಅಸಂಖ್ಯಾತ ವೇತನಶ್ರೇಣಿಗಳನ್ನು ಪರಿಷ್ಕರಿಸಿ, ಒಂದು ಕಾಲಮಿತಿಯ ವೇತನಶ್ರೇಣಿಯನ್ನು ಜಾರಿಗೊಳಿಸಿದರೆ ಅವರಿಗೆ ಯೋಗ್ಯ ವೇತನಕೊಟ್ಟಂತಾಗುತ್ತದೆ. ಅಲ್ಲದೆ,

(v) ಕನಿಷ್ಠ ಪಕ್ಷ, ಮುದ್ರಣಾಲಯದ ಎಲ್ಲ ನೌಕರರಿಗೂ ಹಳೆಯ ವೇತನಶ್ರೇಣಿಗಳನ್ನು ಅನ್ವಯಿಸಲಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಅ) ಗಮನಕ್ಕೆ ಬಂದಿದೆ. (ಆ) (i) ಮತ್ತು (iii): ಇಲ್ಲಿನ ಸೂಚನೆಗಳು ಇತರ ಎಲ್ಲ ಸೇವೆಗಳಿಗೂ ವ್ಯಾಪಿಸಬಹುದಾದ್ದರಿಂದ, ಮುದ್ರಣಾಲಯದ ನೌಕರರನ್ನು ಮಾತ್ರ ಪ್ರತ್ಯೇಕಿಸಿ ಅನ್ವಯಿಸಲಾಗದು. ಮುದ್ರಣಾಲಯದ ನೌಕರರ ಮನವಿಯನ್ನು ಪುರಸ್ಕರಿಸಿ, ಸರ್ಕಾರಿ ನಿವಾಸಗಳಲ್ಲಿ ವಾಸಿಸುತ್ತಿರುವವರ ಬಾಡಿಗೆ ದರವನ್ನು ನಿಷ್ಕರ್ಷಿಸುವಾಗ, ತುಟ್ಟಿಭತ್ಯೆಯನ್ನು ಬಿಟ್ಟು ಮೂಲವೇತವನ್ನು ಮಾತ್ರ ಪರಿಗಣಿಸಬೇಕೆಂದು ತೀರ್ಮಾನಿಸಲಾಯಿತು.

(ii) ಮತ್ತು (iv) ಈ ಎರಡು ಪ್ರಶ್ನೆಗಳು ಪ್ರಕೃತ ಪರಿಶೀಲನೆಯಲ್ಲಿವೆ. ಬೇಗ ತೀರ್ಮಾನಿಸಲು ಕ್ರಮ ಕೈಗೊಳ್ಳಲಾಗುವುದು.

(v) ಎಲ್ಲರಿಗೂ ಅನ್ವಯಿಸುವ ವೇತನಶ್ರೇಣಿಗಳ ಪರಿಷ್ಕರಣಕ್ಕೆ ಇದು ಯೋಗ್ಯ ಸಮಯವಲ್ಲ. ಯುದ್ಧ ನಿಂತ ಮೇಲೆ, ಯುದ್ಧೋತ್ತರ ಪರಿಸ್ಥಿತಿಯನ್ನು ಗಮನಿಸಿ ಅನಂತರ ಅಂಥ ಪರಿಷ್ಕಾರವನ್ನು ಮಾಡಲಾಗುವುದು.

## ೧೯೨

## ಅರ್ಹತೆಯಿರುವ ನಕಲು ಮಾಡುವವರಿಗೆ ಮತ್ತು ಪರಿಷ್ಕರಿಸುವವರಿಗೆ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಹಸ್ತಪ್ರತಿ ಪರಿಶೀಲಕರಾಗಿ ಪದೋನ್ನತಿ*

**೨೩೧. ಖಾಜಿ ಮಹಮ್ಮದ್ ಅಹಮ್ಮದ್ ಕಜ್ಮಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾರತ ಸರ್ಕಾರದ ಮುದ್ರಣಾಲಯಗಳ ಅರ್ಹತೆಯಿರುವ ನಕಲು ಮಾಡುವವರಿಗೆ ಮತ್ತು ಪರಿಷ್ಕರಿಸುವವರಿಗೆ ಪರಿಶೀಲಕರಾಗಿ ಪದೋನ್ನತಿಗೊಳಿಸುವ ಪ್ರಸ್ತಾವನೆಯು, ಭಾರತ ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಕರ ಕಛೇರಿಯಲ್ಲಿ ಒಂದೂವರೆ ವರ್ಷಗಳಿಗೂ ಮೀರಿ ಇತ್ಯರ್ಥವಾಗದೆ ಉಳಿದಿರುವುದು ನಿಜವೆ?

ಆ) ಈ ಪ್ರಸ್ತಾವನೆಯ ಬಗ್ಗೆ ಭಾರತ ಸರ್ಕಾರದ ಎಲ್ಲ ಮುದ್ರಣಾಲಯಗಳ, ಅವುಗಳ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೫–೨–೧೯೪೪ ; ಪು. ೫೪೬–೪೭

ಕಾರ್ಯನಿರ್ವಾಹಕ ಸಮಿತಿಗಳ ಮತ್ತು ಕಾರ್ಮಿಕ ಸಂಘಗಳ ಅಭಿಪ್ರಾಯವನ್ನು ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಕರು ಅಪೇಕ್ಷಿಸಿರುವುದು ನಿಜವೆ ?

ಇ) ಮುದ್ರಣ ಮತ್ತು ಲೇಖನಸಾಮಗ್ರಿಗಳ ನಿಯಂತ್ರಕರು ಪರಿಶೀಲಕರ ಪರೀಕ್ಷೆಗಳನ್ನು ಅನಿರ್ದಿಷ್ಟ ಕಾಲ – ಅಂದರೆ ಪ್ರತೀಕ್ಷಾ ಪಟ್ಟಿಯಲ್ಲಿರುವ ಅರ್ಹ ಅಭ್ಯರ್ಥಿಗಳು ಖಾಯಂ ಆಗಿ ನೇಮಕವಾಗುವವರೆಗೂ ಸಲಹೆ ಮುಂದೂಡಲು ಕೊಟ್ಟಿರುವುದು ನಿಜವೆ?

ಈ) ಎಲ್ಲರು ಒಟ್ಟಿಗೆ ಅದೇ ಪರೀಕ್ಷೆಯಲ್ಲಿ ಅರ್ಹತೆಯನ್ನು ಗಳಿಸಿದ್ದರೂ, ಹದಿನೈದು ವರ್ಷಗಳಿಗಿಂತಲೂ ಹೆಚ್ಚು ಸೇವಾವಧಿ ಹೊಂದಿರುವ ಅರ್ಹತೆಯಿರುವ ನಕಲು ಮಾಡುವವರನ್ನು ಮತ್ತು ಪರಿಷ್ಕರಿಸುವವರನ್ನು ಹಾಲಿ ನಿಯಮಾವಳಿ ಪ್ರಕಾರ, ನಾಲ್ಕೈದು ವರ್ಷದ ಸೇವಾವಧಿಯವರಿಗಿಂತಲೂ ಜ್ಯೇಷ್ಠತೆಯ ಪಟ್ಟಿಯಲ್ಲಿ ಕಿರಿಯರನ್ನಾಗಿ ಗಣಿಸಿರುವುದು ನಿಜವೆ?

ಉ) ರೀಡರ್‌ಷಿಪ್ ಪರೀಕ್ಷೆಯನ್ನು ೧೯೩೬ರಲ್ಲಿ, ಪ್ರಥಮ ಪ್ರಯತ್ನದಲ್ಲಿ ಪಾಸುಮಾಡಿದ ಕೆಲವರು, ನಾಲ್ಕು ವರ್ಷಗಳ (೧೯೪೦ರಲ್ಲಿ) ಅನಂತರದ ಎರಡನೆಯ ಪ್ರಯತ್ನದಲ್ಲಿ ತೇರ್ಗಡೆಯಾದವರಿಗೆ, ಸೇವಾಹಿರಿತನದಲ್ಲಿ ಕಿರಿಯರಾಗಿ ಉಳಿದಿರುವುದು ನಿಜವೆ?

ಊ) ಮೇಲಿನ ಪ್ರಶ್ನೆಯ (ಅ) ಮತ್ತು (ಉ) ಭಾಗಗಳಿಗೆ ಉತ್ತರ ಇತ್ಯಾತ್ಮಕವಾಗಿದ್ದರೆ ಮಾನ್ಯ ಸದಸ್ಯರು ನಿಯಮಾವಳಿಯಲ್ಲಿರುವ ಅಸಾಂಗತ್ಯವನ್ನು ನಿವಾರಿಸಿ, ಈ ತೊಡಕಿನ ಬಗ್ಗೆ ಅಂತಿಮ ತೀರ್ಪನ್ನು ತ್ವರಿತಗೊಳಿಸುವುದರ ಮೂಲಕ ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯಗಳ ರೀಡರ್‌ಷಿಪ್ ಪರೀಕ್ಷೆಗಳು, ನಿಗದಿಯಾಗಿರುವಂತೆ ೧೯೪೪ರ ಮೇ ತಿಂಗಳಿನಲ್ಲಿಯೇ ಜರುಗಲು ಅವಕಾಶ ಕಲ್ಪಿಸುವರೆ? ಇಲ್ಲದಿದ್ದಲ್ಲಿ, ನಿರ್ಣಯವನ್ನು ಇಷ್ಟು ದೀರ್ಘಕಾಲ ಮುಂದೂಡುತ್ತ ಬಂದದ್ದಕ್ಕೆ ಪ್ರತಿಯಾಗಿ ಏನು ಅನುಕೂಲಗಳನ್ನು ಕಲ್ಪಿಸಲಾಗುವುದು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ), ಆ) ಮತ್ತು ಇ) ಹೌದು. ಕೈಗೆತ್ತಿಕೊಂಡು ಕೆಲವು ಅಂಶಗಳ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳಲು ತಡವಾದುದಕ್ಕೆ ಕಾರಣವೆಂದರೆ, ಅಭಿಪ್ರಾಯವನ್ನು ಕೇಳಿದಾಗ ವಿವಿಧ ಘಟಕಗಳು ವ್ಯಕ್ತಪಡಿಸಿದ ತೀರ ವಿಭಿನ್ನ ದೃಷ್ಟಿಕೋನಗಳು.

ಈ) ನಿಯಮಾವಳಿಯನ್ನು ಅನ್ವಯಿಸುವಲ್ಲಿ ಇರುವ ಕೆಲವು ಅಸಂಗತಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಅವುಗಳನ್ನು ನಿವಾರಣೆ ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಸದ್ಯಕ್ಕೆ ಪರಿಶೀಲಿಸುತ್ತಿದೆ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ. ಹಸ್ತಪ್ರತಿ ಪರಿಶೀಲಕರ ಹುದ್ದೆಗೆ ನೇಮಕ ಮಾಡುವಾಗ ಸೇವಾಹಿರಿತನವನ್ನು ಗಮನಿಸಲಾಗುವುದೇ ವಿನಾ ಅರ್ಹತಾ ಪರೀಕ್ಷೆಗಳ ಫಲಿತಾಂಶದ ಗುಣಾಂಶವನ್ನಲ್ಲ.

ಊ) ಮೇಲಿನ (ಈ) ಭಾಗಕ್ಕೆ ಉತ್ತರ ಕೊಟ್ಟಿರುವಂತೆ, ಈ ವಿಷಯಕ್ಕೆ ಸಂಬಂಧಿಸಿದ ನಿಯಮಾವಳಿಯ ತಿದ್ದುಪಡಿಗೆ ಅನೇಕ ಸಲಹೆಗಳು ಬಂದಿದ್ದು ಅವು ಪರಿಶೀಲನೆಯಲ್ಲಿವೆ. ಭಾರತ ಸರ್ಕಾರದ ನವದೆಹಲಿಯ ಮುದ್ರಣಾಲಯಗಳ ಮುಂದಿನ ರೀಡರ್‌ಷಿಪ್ ಪರೀಕ್ಷೆಗಳಿಗೆ (ಮೇ ೧೯೪೪ ರಲ್ಲಿ ನಡೆಯುವುದಿದೆ) ಸಾಕಷ್ಟು ಮುನ್ನ ಆದೇಶಗಳನ್ನು ಹೊರಡಿಸುವ ಸಂಭವವಿದೆ.

# ೧೯೩
# ನವದೆಹಲಿಯ ಬಾಡಿಗೆ ನಿಯಂತ್ರಣ ಆದೇಶಕ್ಕೆ ತಿದ್ದುಪಡಿ *

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ಅ) ಕಾರ್ಮಿಕ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಮೊಜುಂದಾರರು ೧೯೪೪ನೆಯ ಜನವರಿ ೨೪ರಂದು ಪತ್ರಿಕಾ ಸಮ್ಮೇಳನದಲ್ಲಿ ಪ್ರಕಟಿಸಿದ ಭಾರತ ಸರ್ಕಾರದ ಬಾಡಿಗೆ ನಿಯಂತ್ರಣಾದೇಶದ ತಿದ್ದುಪಡಿಯ ಸಾರಾಂಶವು ಜನವರಿ ೨೭ರ "ನ್ಯೂಡೆಲ್ಲಿ ಸ್ಟೇಟ್ಸ್‌ಮನ್" ಪತ್ರಿಕೆಯಲ್ಲಿ ಬಂದಿದೆ. ಅದು ಪೂರ್ವಾನ್ವಯವಾಗಿ ಜಾರಿಗೆ ಬರುವುದೆ?

ಆ) ಈ ತಿದ್ದುಪಡಿಗಳನ್ನು ಪೂರ್ವಾನ್ವಯವಾಗಿ ಜಾರಿಗೆ ತರಬೇಕೆಂದು ದೆಹಲಿಯ ನ್ಯಾಯಾಲಯಗಳು ವ್ಯಾಖ್ಯಾನಿಸಿರುವುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಇ) ಒಂದು ಪಕ್ಷ ಪೂರ್ವಾನ್ವಯವಾಗಿ ಈ ತಿದ್ದುಪಡಿಗಳನ್ನು ಜಾರಿಗೆ ತರುವುದು ಸರ್ಕಾರಕ್ಕೆ ಸಮ್ಮತವಿಲ್ಲದಿದ್ದರೆ, ದೆಹಲಿಯ ನ್ಯಾಯಾಲಯಗಳು ಈ ಸಂಬಂಧ ಮಾಡಿದ ವ್ಯಾಖ್ಯಾನವನ್ನು ಗಮನಿಸಿ ಒಂದು ವಿವರಣೆಯನ್ನು ಕೊಡುವ ಉದ್ದೇಶವಾದರೂ ಸರ್ಕಾರಕ್ಕೆ ಇದೆಯೆ? ಇಲ್ಲದಿದ್ದಲ್ಲಿ, ಏಕಿಲ್ಲ?

ಈ) ಈ ತಿದ್ದುಪಡಿಗಳು ಪ್ರಕಟವಾಗಿದ್ದ ವಿಶೇಷ ರಾಜ್ಯಪತ್ರದ ಪ್ರತಿಯೊಂದನ್ನು ದಿನಾಂಕ ಜನವರಿ ೨೪ರಂದು ಮಾನ್ಯ ಸದಸ್ಯರ ಕಛೇರಿಯಿಂದಲೇ, ಖಾಸಗಿಯಾಗಿ, ಹಿಂದು ಪತ್ರಿಕೆಯ ಪ್ರತಿನಿಧಿ ಶ್ರೀ ಶಿವರಾವ್ ಅವರಿಗೆ ಕೊಡಲಾಗಿರುವ ವಿಷಯ ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿಲ್ಲವೆ? ಅದರಲ್ಲೂ ಈ ಪ್ರತಿಗಳು ಸಾರ್ವಜನಿಕರಿಗೆ ದುರ್ಲಭವಾಗಿದ್ದಾಗ, ದೆಹಲಿ ಸಿವಿಲ್ ನ್ಯಾಯಾಲಯಗಳಲ್ಲಿ ಈ ಪ್ರಕರಣದ ತೀರ್ಪು ಜನವರಿ ೨೫ರಂದು ಹೊರಬರಲಿರುವ ನಿರೀಕ್ಷೆಯಿದ್ದು, ಅದು 'ಉಚ್ಚಾಟನೆ'ಯಾಗಿದ್ದರೆ, ಅದರಿಂದ ಗರಿಷ್ಠ ಪ್ರಯೋಜನವನ್ನು ಪಡೆಯಲು ಶ್ರೀ ಶಿವರಾವ್ ಅವರಿಗೆ ಅನುಕೂಲವಾಗುವಂತೆ ಗೆಜೆಟ್ ಪ್ರತಿಯನ್ನು ಪೂರ್ವಭಾವಿಯಾಗಿ ಕೊಡಲಾಗಿದೆ ಎಂಬುದು ಸ್ಪಷ್ಟವಾಗುವುದಿಲ್ಲವೆ?

ಉ) ಬರಖಾಂಬ ರಸ್ತೆಯ ನಂಬರ್ ೭ನೆಯ ಮನೆಯಲ್ಲಿ ವಾಸವಾಗಿರುವ ಬಾಡಿಗೆದಾರ ಶ್ರೀ ಶಿವರಾವ್ ಅವರನ್ನು ಅಲ್ಲಿಂದ ಉಚ್ಚಾಟಿಸುವಂತೆ, ಮನೆ ಮಾಲೀಕರ ಪರವಾಗಿ ತೀರ್ಪು, ಸಿವಿಲ್ ನ್ಯಾಯಾಲಯದಿಂದ ಹೊರಬಿದ್ದರೆ, ಅವರನ್ನು ಅಲ್ಲೆ ಉಳಿಸುವಂತೆ ಕೋರಿಕೆ ಸಲ್ಲಿಸಲು ಆದೇಶವನ್ನು ಸನ್ಮಾನ್ಯ ಸದಸ್ಯರ ಜಂಟಿ ಕಾರ್ಯದರ್ಶಿ ಶ್ರೀ ಮೊಜುಂದಾರ್ ಕೊಟ್ಟಿರುವುದು ನಿಜವೆ? ಈ ಎಲ್ಲ ಆಪಾದನೆಗಳು ನಿಜವಾದರೆ, ಸರ್ಕಾರಿ ನೌಕರನ ಈ ಆಪಾದಿತ ಪಕ್ಷಪಾತ ಧೋರಣೆಯ ಬಗ್ಗೆ ಮಾನ್ಯ ಸದಸ್ಯರು ತನಿಖೆ ಮಾಡುವರೆ?

ಊ) ಶ್ರೀ ಶಿವರಾವ್ ಅವರು ನಿವಾಸದಿಂದ ಉಚ್ಚಾಟಿತರಾದರೆ, ಸರ್ಕಾರದ ವತಿಯಿಂದ ಮೂರು ಕೋಣೆಗಳ ಒಂದು ಪ್ರತ್ಯೇಕ ನಿವಾಸವನ್ನು ಒದಗಿಸಬೇಕೆಂದು ಶ್ರೀ ಮೊಜುಂದಾರರು ಆದೇಶ ಕೊಟ್ಟಿರುವುದು ನಿಜವೆ ? ಸರ್ಕಾರವು ಇದೇ ಸಮನಾದ ಸೌಲಭ್ಯಗಳನ್ನು ನವದೆಹಲಿಯ ಇತರ ಪತ್ರಿಕೆಗಳಿಗೂ ಒದಗಿಸುವುದೆ ? ಇಲ್ಲದಿದ್ದಲ್ಲಿ ಏಕಿಲ್ಲ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೨೮–೨–೧೯೪೪ ; ಪು. ೬೫೭–೫೮.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಕಾರ್ಮಿಕ ಇಲಾಖೆಯ ಜಂಟಿ ಕಾರ್ಯದರ್ಶಿ ಅಂಥ ಹೇಳಿಕೆಯನ್ನು ಕೊಟ್ಟಿಲ್ಲ.

ಆ) ಆ ವಿಷಯದ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ.

ಇ) ಇಲ್ಲ ; ವಿಧಿ ವಿಧಾನಗಳ ವ್ಯಾಖ್ಯಾನ ಮತ್ತು ತೀರ್ಪು ನ್ಯಾಯಾಲಗಳಿಗೆ ಸಂಬಂಧಿಸಿದ್ದು; ಸರ್ಕಾರಕ್ಕೆ ಸಂಬಂಧಿಸಿದ್ದಲ್ಲ.

ಈ) ಇಲ್ಲ ; ಆ ಆಪಾದನೆ ಸರಿಯಲ್ಲ.

ಉ) ಹೌದು; ಉಲ್ಲೇಖಿತವಾದ ಅಂಥ ಸಂದರ್ಭಗಳಲ್ಲಿ, ಮನೆ ತೆರವಾದರೆ ಅದು ಸರ್ಕಾರದ ಉಪಯೋಗಕ್ಕೆ ದೊರೆಯಲಿ ಎಂಬ ಉದ್ದೇಶದಿಂದ ಆದೇಶಗಳನ್ನು ಕೊಡಲಾಗಿದೆ. ಅದನ್ನು ಶ್ರೀ ಶಿವರಾವ್ ಅವರಿಗೆ ಆಜ್ಞಾ ಕೋರಿಕೆಯ ಮೂಲಕ ಕೊಡುವ ಪ್ರಶ್ನೆಯೇ ಇಲ್ಲ. ದೆಹಲಿಯಲ್ಲಿ ತೆರವಾದ ಎಲ್ಲ ನಿವಾಸಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ಸರ್ಕಾರದ ನೀತಿಯೇ ಆಗಿದೆ.

ಊ) ಇಲ್ಲ.

**ಸರ್ ಮಹಮ್ಮದ್ ಯಾಮಿನ್‌ಖಾನ್ :** ಸರ್ಕಾರದ ಇಂಗಿತವಾದರೂ ಏನು? ಪೂರ್ವಾನ್ವಯವಾಗಿ ಅದನ್ನು ಜಾರಿಗೆ ಕೊಡುವುದೆ? ಅಥವಾ ಇಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನು ನ್ಯಾಯಾಲಯಕ್ಕೆ ಬಿಡೋಣ.

**ಸರ್ ಮಹಮ್ಮದ್ ಯಾಮಿನ್ ಖಾನ್ :** ನಿಸ್ಸಂಶಯವಾಗಿ ನ್ಯಾಯಾಲಯವು ವ್ಯಾಖ್ಯಾನಿಸುತ್ತದೆ; ಆದರೆ ಸರ್ಕಾರದ ಆದೇಶವೇನು? ಅದು ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆಯೋ, ಅಥವಾ ಅದು ಭವಿಷ್ಯಕ್ಕೊ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ವಿಷಯ ನ್ಯಾಯಾಲಯಗಳ ಪರಿಧಿಗೆ ಸೇರಿದ್ದು.

**ಶ್ರೀ ಎಂ. ಎನ್. ಜೋಷಿ :** ದೆಹಲಿಯಲ್ಲಿ ಮನೆ ಮಾಲೀಕರು ಲಾಭಬಡಕತನದಿಂದ ಬಾಡಿಗೆದಾರರಿಗೆ ಕಾಟ ಕೊಡುತ್ತಿರುವುದು ನಿಜವಲ್ಲವೆ? ಅದನ್ನು ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮನೆ ಮಾಲೀಕರು ಕಾಟ ಕೊಡುತ್ತಿದ್ದಾರೆ ಎಂಬ ಬಗ್ಗೆ ನನ್ನ ಬಳಿ ಮಾಹಿತಿ ಇಲ್ಲ. ಆದರೆ ಬಾಡಿಗೆದಾರರ ನಿಯೋಗವೊಂದು ಸರ್ಕಾರದ ಮುಂದೆ ಕೆಲವು ದೂರುಗಳನ್ನು ಇರಿಸಿದೆ. ಹೊಸ ದೆಹಲಿಯ ಬಾಡಿಗೆ ನಿಯಂತ್ರಣ ಆದೇಶಕ್ಕೆ ತಂದ ತಿದ್ದುಪಡಿಯು ಇಂಥ ಕೆಲವು ದೂರುಗಳನ್ನು ಪರಿಹರಿಸಲು ಪ್ರಯತ್ನಿಸುತ್ತದೆ.

**ಸರ್ ಮಹಮ್ಮದ್ ಯಾಮಿನ್‌ಖಾನ್ :** ಈ ಪ್ರಕರಣದಲ್ಲಿ, ಮನೆ ಮಾಲೀಕರಾದ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ರಾಯ್ ಬಹದ್ದೂರ್ ದುರ್ಗಾದಾಸ್ ಅವರದು ಬೇರೆಡೆ ಆಶ್ರಯ ಪಡೆಯಲಾಗದ, ಇಪ್ಪತ್ತು ಸದಸ್ಯರನ್ನುಳ್ಳ ದೊಡ್ಡ ಕುಟುಂಬ.

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ಆ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ನ್ಯಾಯಾಲಯವು ಸರ್ಕಾರದ ಯಾವುದೇ ಆದೇಶದಲ್ಲಿ ಸಂದಿಗ್ಧತೆ ಇದೆಯೆಂದು ಭಾವಿಸಿದರೆ, ಅದರ ಪರಿಣಾಮವನ್ನು ವಿವರಿಸುವ ಆಶಯ ಸರ್ಕಾರಕ್ಕೆ ಇದೆಯೆ?

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರ ಪ್ರಶ್ನೆ ನನಗೆ ಅರ್ಥವಾಗಲಿಲ್ಲ.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ಸರ್ಕಾರ ಹೊರಡಿಸಿದ ಆದೇಶದ ಪೂರ್ವಾನ್ವಯ ಜಾರಿ

ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಳ್ಳಲು ಏನಾದರೂ ವಿವರಣೆ ಕೊಡುವ ಉದ್ದೇಶವಿದೆಯೆ?

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿ ಏನಾದರೂ ಸಂದಿಗ್ಧತೆ ಇದ್ದರೆ ಅದನ್ನು ಸ್ಪಷ್ಟಪಡಿಸುವುದು ಸರ್ಕಾರದ ಕರ್ತವ್ಯವೇ ಆಗಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಆದೇಶವು ಸುಸ್ಪಷ್ಟವಾಗಿದೆಯೆ? ಅಥವಾ ವಿವರಣಗಳನ್ನು ಬಯಸುತ್ತದೆಯೋ?

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ನನ್ನ ಪ್ರಶ್ನೆ ಇಷ್ಟು : ಆದೇಶವು ಸ್ಪಷ್ಟವಾಗಿದೆಯೇ? ಮತ್ತು ಅಸ್ಪಷ್ಟವಾಗಿದೆಯೆ? ಅಥವಾ ವ್ಯಾಖ್ಯಾನವನ್ನು ಮಾಡಬೇಕಾಗಿದೆಯೆ? ಸನ್ಮಾನ್ಯ ಸದಸ್ಯರು ನ್ಯಾಯಾಲಯವು ಅದನ್ನು ವ್ಯಾಖ್ಯಾನಿಸುತ್ತೆ ಎಂದಿದ್ದಾರೆ. ವ್ಯಾಖ್ಯಾನಕ್ಕೆ ಅವಕಾಶವಿದ್ದಾಗ ಖಂಡಿತ ನ್ಯಾಯಾಲಯವು ಅದನ್ನು ಮಾಡುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಮ್ಮ ಸನ್ಮಾನ್ಯ ಸದಸ್ಯರು ಏನು ಹೇಳಬೇಕೆಂದು ಇಚ್ಛಿಸುತ್ತಿದ್ದಾರೆಂಬುದು ನನಗೆ ಗೊತ್ತಾಗುತ್ತಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ನನ್ನ ಪ್ರಶ್ನೆ ಇದು : ಸನ್ಮಾನ್ಯ ಸದಸ್ಯರು ಆದೇಶವನ್ನು ನ್ಯಾಯಾಲಯವು ವ್ಯಾಖ್ಯಾನಿಸುತ್ತದೆ ಎನ್ನುತ್ತಾರೆ. ನಾನು ಹೇಳುವುದು ಆದೇಶದಲ್ಲಿ ವ್ಯಾಖ್ಯಾನಕ್ಕೆ ಆಸ್ಪದವಿದೆಯೇ?..... ಎಂದು ಅದಕ್ಕೆ ಮಾನ್ಯ ಸದಸ್ಯರು ನ್ಯಾಯಾಲಯಕ್ಕೆ ಅದನ್ನು...

**ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) ಅದು ಒಂದು ವಾದ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ನಾನು ಪ್ರಶ್ನೆ ಕೇಳುತ್ತಿದ್ದೇನೆ.

**ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) ಸದ್ದು ! ಸದ್ದು !

# ೧೯೪
# ಕಲ್ಲಿದ್ದಲು ಗಣಿಗಳ ಆಳದಲ್ಲಿ ದುಡಿಯಲು ಮಹಿಳಾ ಕಾರ್ಮಿಕರ ನೇಮಕ *

**೭೦೧. ಶ್ರೀ ಕೆ.ಎಸ್. ಗುಪ್ತಾ :** ಅ) ಭಾರತದಲ್ಲಿ ಮಹಿಳೆಯರನ್ನು ಕಲ್ಲಿದ್ದಲು ಗಣಿಗಳಲ್ಲಿ ದುಡಿಯಲು ಹಚ್ಚುವುದು "ಅತ್ಯಂತ ಗಂಭೀರವಾದ ಮತ್ತು ಹಿನ್ನಡೆಯ ಹೆಜ್ಜೆ" ಎಂದು ಶ್ರೀ ಸೊರನ್‌ಸೆನ್ ವಿವರಿಸಿರುವುದು ಸನ್ಮಾನ್ಯ ಸದಸ್ಯರಿಗೆ ತಿಳಿದಿದೆಯೆ?

ಆ) ಆಹಾರ ಪದಾರ್ಥಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಬೆಲೆಗಳು ಯುದ್ಧಪೂರ್ವ ಸ್ಥಿತಿಗಿಂತ ನಾಲ್ಕರಿಂದ ಐದುಪಟ್ಟು ಹೆಚ್ಚಾಗಿದ್ದರೂ, ಬಹುಪಾಲು ಕಲ್ಲಿದ್ದಲು ಗಣಿಗಳಲ್ಲಿ ಯುದ್ಧಪೂರ್ವದ ಮಜೂರಿಯ ಶೇಕಡ ೫೦ರಷ್ಟು ಮಾತ್ರ ಹೆಚ್ಚಳ ಕಂಡುಬಂದಿದೆಯೆಂಬುದು ಸತ್ಯಾಂಶವಲ್ಲವೆ?

ಇ) ಸಾಕಷ್ಟು ಸಂಖ್ಯೆಯಲ್ಲಿ ಗಂಡುಕೂಲಿಗಳು ಸಿಗದೆ ಇರುವುದರಿಂದ ಹೆಣ್ಣಾಳುಗಳನ್ನು ಕಲ್ಲಿದ್ದಲು ಗಣಿ ಕೆಲಸಕ್ಕೆ ಸೇರಿಸಿಕೊಳ್ಳಲಾಗುತ್ತಿದೆ ಎಂಬುದು ಸತ್ಯವೆ?

ಈ) ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳು ಅವರ ಅಗತ್ಯಗಳಿಗಿಂತ ತುಂಬಾ ಕಡಿಮೆ ಇರುವುದರಿಂದ, ಗಂಡಾಳುಗಳು ಉತ್ತಮ ವೇತನ ಮತ್ತು ಹೆಚ್ಚಿನ ಸೌಲಭ್ಯಗಳನ್ನು ಅರಸಿಕೊಂಡು ಬೇರೆ ಕಡೆಗೆ ಹೋಗುತ್ತಾರೆ ಎಂಬುದು ನಿಜವೆ?

ಉ) ಬ್ರಿಟನ್‌ನಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಮಹಿಳೆಯರು ಗಣಿಯಾಳದಲ್ಲಿ, ಭೂತಳದಲ್ಲಿ ಸೇವೆಯಲ್ಲಿ (ಅಂದರೆ ಕಲ್ಲಿದ್ದಲು ಗಣಿಗಳನ್ನು ಬಿಟ್ಟು ಇತರ ಗಣಿಗಳಲ್ಲಿ) ತೊಡಗುವುದನ್ನು ನಿಷೇಧಿಸಿವೆ ಎಂಬುದು ನಿಜವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ನಾನು ಆ ಬಗ್ಗೆ, ಪತ್ರಿಕಾ ವರದಿಗಳನ್ನು ನೋಡಿದ್ದೇನೆ. (ಆ) ಕಲ್ಲಿದ್ದಲು ಗಣಿ ಪ್ರದೇಶದ ಇಂದಿನ ಏರಿದ ಜೀವನ ಸೂಚ್ಯಂಕವನ್ನು ಯುದ್ಧಪೂರ್ವ ಸ್ಥಿತಿಯೊಡನೆ ಹೋಲಿಸಿ ನೋಡಿದ ಖಚಿತ ಮಾಹಿತಿ ನನ್ನ ಬಳಿ ಇಲ್ಲ. ಆಹಾರ ಪದಾರ್ಥಗಳನ್ನು ಗಣಿ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದೆ.

ಇ) ಹೌದು.

ಈ) ನೆರೆಹೊರೆಯ ಕಲ್ಲಿದ್ದಲು ಗಣಿಗಳ ಕಾರ್ಮಿಕರು, ಕಲ್ಲಿದ್ದಲು ಗಣಿ ಕೆಲಸಕ್ಕಿಂತ ರಕ್ಷಣಾ ಪಡೆಗೆ ಸೇರಲು ಇಚ್ಛಿಸುತ್ತಾರೆ. ಇನ್ನು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸನ್ಮಾನ್ಯ ಸದಸ್ಯರು, ನಾನು ೨೭೩ನೆಯ ಪ್ರಶ್ನೆಗೆ ೧–೩–೪೪ರಂದು ಕೊಟ್ಟ ಉತ್ತರದ 'ಸಿ' ಭಾಗವನ್ನು ನೋಡಲಿ.

ಉ) ಮಹಿಳೆಯರು ಗಣಿಯ ಆಳದಲ್ಲಿ ದುಡಿಯಲು ಬ್ರಿಟನ್ನಿನಲ್ಲಿ ಆಸ್ಪದವಿಲ್ಲ ; ಆದರೆ ಕಲ್ಲಿದ್ದಲಿನ ಗಣಿಗಳಲ್ಲಿ ನೆಲಮಟ್ಟದ ಕೆಲಸಗಳಲ್ಲಿ ನಿಯೋಜಿತರಾಗಿದ್ದಾರೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧೩ ೩೦–೩–೧೯೪೪ ; ಪು. ೧೭೪೫

**ಶ್ರೀ ಎನ್. ಎಂ. ಜೋಷಿ :** ಯುದ್ಧಪೂರ್ವದಲ್ಲಿ ಅಕ್ಕಿ ಬೆಲೆ ಒಂದು ರೂಪಾಯಿಗೆ ೧೨ ಸೇರುಗಳಾಗಿದ್ದು, ಕಲ್ಲಿದ್ದಲು ಗಣಿಪ್ರದೇಶದಲ್ಲಿ ಇಂದು, ಒಂದು ರೂಪಾಯಿಗೆ ೬ ಸೇರುಗಳಾಗಿವೆ ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಆ ಬಗ್ಗೆ ಖಚಿತ ಮಾಹಿತಿ ಇಲ್ಲ.

## ೧೯೫
## ಕಲ್ಲಿದ್ದಲು ಗಣಿಗಳ ಆಳದಲ್ಲಿ ಹೆಣ್ಣಾಳುಗಳ ನೇಮಕಾತಿ*

**೭೦೨. ಶ್ರೀ ಕೆ.ಎಸ್. ಗುಪ್ತ :** ಅ) ಕಲ್ಲಿದ್ದಲು ಗಣಿ ಆಳದಲ್ಲಿ ದುಡಿಯಲು ಮಹಿಳೆಯರಿಗಿದ್ದ ನಿಷೇಧವನ್ನು ಭಾರತ ಸರ್ಕಾರವು ರದ್ದುಪಡಿಸಲು ಕಲ್ಲಿದ್ದಲಿನ ಕೊರತೆಯೆ ಕಾರಣವೇ ಎಂಬುದನ್ನು ಮಾನ್ಯ ಸದಸ್ಯರು ತಿಳಿಸುವರೆ? ಹಾಗಿದ್ದಲ್ಲಿ, ಮಾನವ ಜೀವದ ಬೆಲೆ, ಕಲ್ಲಿದ್ದಲು ಉತ್ಪಾದನೆಗಿಂತ ಅಮೂಲ್ಯವಾದುದೆಂದು ಸರ್ಕಾರಕ್ಕೆ ತಿಳಿದಿಲ್ಲವೆ?

ಆ) ಇಂಥ ಅನುಮತಿ (ಮಹಿಳೆಯರಿಗೆ, ಜೀವವಿರೋಧಿಯಾದ ಕಲ್ಲಿದ್ದಲು ಗಣಿಕೆಲಸಕ್ಕೆ) ಇಂಗ್ಲೆಂಡ್ ಅಥವಾ ಬೇರೆಡೆಯಲ್ಲಿ, ಜನ ಒಂದು ಕ್ಷಣವು ಸಹಿಸುತ್ತಿರಲಿಲ್ಲವೆಂದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆ?

ಇ) ಭಾರತದ ಕಲ್ಲಿದ್ದಲು ಗಣಿಗಳಲ್ಲಿ ಸಮರ್ಪಕ ಜೀವನ ಸ್ಥಿತಿ, ಯೋಗ್ಯ ಮಜೂರಿ ಕಾರ್ಮಿಕರಿಗೆ ದೊರೆಯುತ್ತಿಲ್ಲವೆಂಬ ಅಂಶ ಸತ್ಯವಲ್ಲವೆ?

ಈ) ಬ್ರಿಟನ್‌ನಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿರುವಂತೆ, ಭಾರತದಲ್ಲಿ ವೈಜ್ಞಾನಿಕವಾಗಿ ಉತ್ಪಾದಿಸಿದ ಕಲ್ಲಿದ್ದಲು ದೊರೆಯುವುದಿಲ್ಲವೆಂಬುದು ನಿಜವೆ?

ಉ) ಸಾಕಷ್ಟು ಮುನ್ನೆಚ್ಚರಿಕೆಯ ಕ್ರಮಗಳ ಅಭಾವದಿಂದಲೂ ಅದಿರನ್ನು ತೆಗೆಯಲು ಪ್ರಾಥಮಿಕ ವಿಧಾನಗಳನ್ನು ಇನ್ನೂ ಅನುಸರಿಸುತ್ತಿರುವುದರಿಂದಲೂ, ಭಾರತದ ಗಣಿಗಳಲ್ಲಿ ಮೇಲಿಂದ ಮೇಲೆ ಭೂಕುಸಿತ, ಕಲ್ಲಿದ್ದಲು ಅನಿಲದ ಆಸ್ಫೋಟಗಳು ಬೇರೆ ಕಡೆಗಿಂತಲೂ ಹೆಚ್ಚು ಸಂಭವಿಸುತ್ತಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ಇದರ ಎರಡು ಭಾಗಗಳ ಪ್ರಶ್ನೆಗೂ ಉತ್ತರ "ಹೌದು" ಎಂದು.

ಆ) ಗ್ರೇಟ್ ಬ್ರಿಟನ್ನಿನ ಕಲ್ಲಿದ್ದಲು ಗಣಿಗಳ ಆಳದಲ್ಲಿ ಕೆಲಸಮಾಡಲು ಮಹಿಳೆಯರಿಗೆ ಅನುಮತಿಯಿಲ್ಲ. ಬೇರೆ ದೇಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

ಇ) ಮಾನ್ಯ ಸದಸ್ಯರ ದಿನಾಂಕ ೧–೩–೧೯೪೪ರ ೨೭೪ನೆಯ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುವಂತೆ, ಗಣಿಗಳಲ್ಲಿ ದುಡಿಮೆಯ ಪರಿಸ್ಥಿತಿ ಹೆಚ್ಚು ಸಮಾಧಾನಕರವಾಗಿಲ್ಲ. ಆದರೆ ಈಗ, ಅವರ ಜೀವನ ಪರಿಸ್ಥಿತಿಯನ್ನು ಸುಧಾರಿಸಲು, ಯೋಗ್ಯ ವೇತನವನ್ನು ಕೊಡಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೩, ೩೦–೩–೧೯೪೪; ಪು. ೧೭೪೫–೪೬.

ಈ) ಬ್ರಿಟನ್ನಿನಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿರುವಂತೆ, ಭಾರತದಲ್ಲಿ ಕಲ್ಲಿದ್ದಲಿನ ಗಣಿಗಳಲ್ಲಿ ಇನ್ನು ಯಾಂತ್ರೀಕರಣ ಅಷ್ಟು ಮುಂದುವರಿದಿಲ್ಲ.

ಉ) ಕಲ್ಲಿದ್ದಲು ಪದರ ಭೂಮಟ್ಟದ ಹತ್ತಿರದಲ್ಲೇ ಇರುವ ಇತರ ದೇಶಗಳ ಕಲ್ಲಿದ್ದಲು ಗಣಿಗಳಲ್ಲಿ ಸಂಭವಿಸುವುದಕ್ಕಿಂತಲೂ, ಭಾರತದ ಗಣಿಗಳಲ್ಲಿ ಭೂಕುಸಿತ ಹೆಚ್ಚು ಮೇಲಿಂದ ಮೇಲೆ ಸಂಭವಿಸುತ್ತಲೇ ಇರುತ್ತದೆ. ಭಾರತದಲ್ಲಿ ಅಳವಡಿಸಲಾಗಿರುವ ಮುನ್ನೆಚ್ಚರಿಕೆಯ ಸುರಕ್ಷತಾ ಕ್ರಮಗಳು ಬೇರೆ ಯಾವುದೇ ದೇಶದ ಅಂಥ ಕ್ರಮಗಳ ಜೊತೆ ಸರಿಗಟ್ಟುವ ಮಟ್ಟದಲ್ಲಿವೆ.

## ೧೯೬
## ನವದೆಹಲಿಯ ಡಿ.ಐ.ಜಡ್. ಪ್ರದೇಶದ ಚೌಕಗಳ ದ್ವಾರಗಳನ್ನು ಬಂದ್ ಮಾಡಿರುವಿಕೆ *

**೭೦೪. ಸರ್ದಾರ್ ಸಂತ್‌ಸಿಂಗ್ :** ನವದೆಹಲಿಯ ಡಿ.ಐ.ಜಡ್. ಪ್ರದೇಶದ ಚೌಕಗಳ ಮಧ್ಯಭಾಗದ ಮತ್ತು ಮೂಲೆಯ ದ್ವಾರಗಳನ್ನು ಯಾವ ಕಾರಣಕ್ಕಾಗಿ ಮುಚ್ಚಲಾಗಿದೆ ಎಂದು ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಜನ ಅಲ್ಲಿ ಹೇಸಿಗೆ ಮಾಡುವುದನ್ನು ತಪ್ಪಿಸುವುದೇ ಆ ದ್ವಾರಗಳನ್ನು ಮುಚ್ಚಿರುವ ಉದ್ದೇಶ. ಸಾರ್ವಜನಿಕ ಆಹಾರ ಇಲಾಖೆಯ ಸಲಹೆ ಮೇರೆಗೆ ಈ ಕ್ರಮವನ್ನು ತೆಗೆದುಕೊಂಡಿದೆ.

## ೧೯೭
## ಕರಾಚಿ ಬಂದರು ಟ್ರಸ್ಟಿನಲ್ಲಿ ಕಾರ್ಮಿಕರ ಅಶಾಂತಿ **

**೭೧೫. ಸೇಟ್ ಯೂಸುಫ್ ಅಬ್ದುಲ್ ಹರೂನ್ :** ಅ) ಸಿಂಧ್‌ಪ್ರಾಂತೀಯ ವಾಣಿಜ್ಯ ಸಂಘದ ಕಾಂಗ್ರೆಸ್ಸಿನ ಮಹಾಕಾರ್ಯದರ್ಶಿಯಾದ ಕಾಜಿ ಮಹಮ್ಮದ್ ಮುಜ್ತಬ ಅವರು "ಕರಾಚಿ ಬಂದರು ನ್ಯಾಸ (Trust)ದಲ್ಲಿನ ಕಾರ್ಮಿಕ ಅಶಾಂತಿಗೆ ಸಂಬಂಧಿಸಿದ ಕೆಲವು ಸತ್ಯಾಂಶಗಳು" ಎಂಬ ಶೀರ್ಷಿಕೆಯಡಿ ಪ್ರಕಟಿಸಿದ ಕಡೆ ಸನ್ಮಾನ್ಯ ಸದಸ್ಯರ ಗಮನ ಹರಿದಿದೆಯೆ?

ಆ) ಕರಾಚಿ ಬಂದರು ನ್ಯಾಸದ ೨,೩೮೪ ಮಂದಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಪರಿಶೀಲಿಸಲು, ಒಬ್ಬ ತೀರ್ಪುಗಾರರನ್ನು ನೇಮಿಸುವಂತೆ ಹಕ್ಕೊತ್ತಾಯ ಸಲ್ಲಿಸಿರುವುದು ನಿಜವೆ?

ಇ) ಭಾರತ ಸರ್ಕಾರದ ಕಾರ್ಮಿಕ ಕಲ್ಯಾಣಾಧಿಕಾರಿ, ಕರಾಚಿಗೆ, ೧೯೪೩ರ ಜುಲೈ ತಿಂಗಳಿನಲ್ಲಿ ಭೇಟಿ ಕೊಟ್ಟ ನಂತರ, ಕೆಲವು ಶಿಫಾರಸ್ಸುಗಳನ್ನು ಮಾಡಿರುವುದು ನಿಜವಷ್ಟೆ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೩, ೩೦–೩–೧೯೪೪; ಪು. ೧೭೪೬

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ); ಸಂ ೩, ೩೦–೩–೧೯೪೪; ಪು. ೧೭೫೧.

ಈ) ಮೇಲಿನ ಪ್ರಶ್ನೆಗೆ ಉತ್ತರ ಹೌದೆಂದಾದರೆ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು? ಅಥವಾ ತೆಗೆದುಕೊಳ್ಳಲು ಯೋಜಿಸಿರುವ ಕ್ರಮಗಳಾದರೂ ಏನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಯುದ್ಧ ಸರಬರಾಜು ಇಲಾಖೆಯ ಸನ್ಮಾನ್ಯ ಸದಸ್ಯರು ಈ ಪ್ರಶ್ನೆಗೆ ಉತ್ತರ ಕೊಡಲು ಒಪ್ಪಿದ್ದಾರೆ.

## ೧೯೮
## ನಾಗರಿಕ ಪ್ರವರ್ತಕ ಪಡೆಗಳನ್ನು ಪೂರಕ ಪ್ರವರ್ತಕ ಪಡೆಗಳಾಗಿ ಪರಿವರ್ತಿಸಲು ಯೋಜನೆ *

**೭೧೭. ಶ್ರೀ ಪಿಯರ್‌ಲಾಲ್ ಕುರೀಲ್ :** ಸನ್ಮಾನ್ಯ ಸದಸ್ಯರು ಈ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ನಾಗರಿಕ ಪ್ರವರ್ತಕ ಪಡೆಯನ್ನು ಪೂರಕ ಪ್ರವರ್ತಕ ಪಡೆಯಾಗಿ ಪರಿವರ್ತಿಸಲು ಉದ್ದೇಶಿಸಿದೆಯೆ? ಮತ್ತು

ಆ) (ಅ) ಪ್ರಶ್ನೆಗೆ ಉತ್ತರ ಇತ್ಯಾತ್ಮಕವಾಗಿದ್ದರೆ, ಸರ್ಕಾರ ಯಾವಾಗ ನಾಗರಿಕ ಮೂಲ ಪಡೆಯನ್ನು ಪೂರಕ ಪಡೆಯಾಗಿ ಪರಿವರ್ತಿಸಲು ಯೋಜಿಸಿದೆ? – ಯುದ್ಧ ಸಮಯದಲ್ಲೋ? ಯುದ್ಧಾನಂತರವೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ ; ಆ) ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

## ೧೯೯
## ನಾಗರಿಕ ಪ್ರವರ್ತಕ ಪಡೆಗಳಲ್ಲಿರುವ ಮೂಲಪ್ರವರ್ತಕರಿಗೆ ವೇತನ *

**೭೧೮. ಶ್ರೀ ಪಿಯರ್ ಲಾಲ್ ಕುರೀಲ್ :** ಅ) ನಾಗರಿಕ ಪ್ರವರ್ತಕ ಪಡೆಗಳಲ್ಲಿರುವ ಪ್ರವರ್ತಕರ ಮಾಸಿಕ ವೇತನ ಕೇವಲ ೧೫ ರೂ.ಗಳು ಎಂಬುದು ನಿಜವೆ?

ಆ) ಪ್ರವರ್ತಕರ (Pioneer) ಹಾಲಿ ವೇತನ ದೇಶದ ಸದಸ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಸಮರ್ಪಕವಾಗಿದೆಯೆಂದು ಸನ್ಮಾನ್ಯ ಸದಸ್ಯರು ಭಾವಿಸುವರೆ?

ಇ) ಭಾರತದ ರಕ್ಷಣಾ ಪಡೆಯ ಸೈನಿಕರ ಪ್ರಕರಣದಲ್ಲಿ ಮಾಡಿದಂತೆ, ಪ್ರವರ್ತಕರ ವೇತನದಲ್ಲಿಯೂ ಹೆಚ್ಚಳ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನಾಗರಿಕ ಪ್ರವರ್ತಕ ಪಡೆಯಲ್ಲಿರುವ ಪ್ರವರ್ತಕರ ಮೂಲವೇತನ ದರ ತಿಂಗಳಿಗೆ ೧೫ರೂ. ಗಳು. ಆತ ಯುದ್ಧಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದರೆ, ರಕ್ಷಣಾ ಪಡೆಯ ಸದಸ್ಯರಿಗೆ ಕೊಡುತ್ತಿರುವ ಮಾಸಿಕ ರೂ. ३–೮–೦ ಆಣೆಗಳ ಭತ್ಯೆಯನ್ನು ಇವರಿಗೂ ಕೊಡುತ್ತಾರೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ३, ३೦–३–೧೯೪೪ ; ಪು. ೧೭೫೨

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ३, ३೦–३–೧೯೪೪ ; ಪು. ೧೭೫೨.

ಆ) ಪ್ರವರ್ತಕ ಪಡೆಯ ಸದಸ್ಯನಿಗೆ ವೇತನದ ಜೊತೆಗೆ ಲಭ್ಯವಿರುವ ಉಚಿತ ಪಡಿತರ, ಉಚಿತ ವಸತಿ, ಉಚಿತ ಸಮವಸ್ತ್ರ ಮತ್ತು ಇತರ ಸೌಲಭ್ಯಗಳನ್ನು ಪರಿಗಣಿಸುವುದಾದರೆ ವೇತನ ಸಮರ್ಪಕವೆನಿಸುತ್ತದೆ.

ಇ) ಯುದ್ಧಪ್ರದೇಶದಲ್ಲಿ ನಿಯುಕ್ತರಾಗಿರುವ ವ್ಯಕ್ತಿಗಳನ್ನು ಲಕ್ಷಿಸಿ, ಅದಕ್ಕೆ ಅನುಗುಣವಾಗಿ ಈ ವಿಷಯ ನಿರ್ಣಯವಾಗುತ್ತದೆ.

## ೨೦೦
## ನಾಗರಿಕ ಪ್ರವರ್ತಕ ಪಡೆಯಲ್ಲಿರುವ ದರ್ಜಿಗಳಿಗೆ ಭತ್ಯೆ ಪಾವತಿಯಾಗದಿರುವಿಕೆ *

**೭೧೯. ಶ್ರೀ ಪಿಯರ್‌ಲಾಲ್ ಕುರೀಲ್ :** ಸಂಯುಕ್ತ ಪ್ರಾಂತಗಳ ನಾಗರಿಕ ಪ್ರವರ್ತಕ ಪಡೆಗೆ ಸೇರಿದ ಎರಡನೆಯ ಘಟಕದ ಕಾರಕೂನರು, ಜಾಡಮಾಲಿಗಳು ಮತ್ತು ಅಗಸರಿಗೆ ಮಾಸಿಕ ೫ ರೂ.ಗಳ ಭತ್ಯೆ ದೊರೆಯುತ್ತಿದೆಯೆ?

ಆ) 'ಅ' ಭಾಗದ ಪ್ರಶ್ನೆಗೆ ಉತ್ತರ ಹೌದೆಂದಾದರೆ, ಏಕೆ ಅದೇ ಭತ್ಯೆಯನ್ನು ಅದೇ ಪಡೆಗೆ ಸೇರಿರುವ ದರ್ಜಿಗಳಿಗೆ ಕೊಡುತ್ತಿಲ್ಲ?

ಇ) ಸನ್ಮಾನ್ಯ ಸದಸ್ಯರು ದರ್ಜಿಗಳ ಈ ನಿಮಿತ್ತದಿಂದಾಗಿರುವ ತಾರತಮ್ಯವನ್ನು ಸರಿಪಡಿಸಲು ಯೋಚಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕ್ಷೌರಿಕರು, ಅಗಸರು ಮತ್ತು ಜಾಡಮಾಲಿಗಳನ್ನು ಕೆಲಸಕ್ಕೆ ಪಡೆಯಲು ಇದ್ದ ತೊಂದರೆಯಿಂದಾಗಿ, ಪ್ರಾಂತೀಯ ಸರಕಾರವು ಆಯಾ ವರ್ಗದವರ ಲಭ್ಯತೆಯ ಅಭಾವವನ್ನು ದೃಷ್ಟಿಯಲ್ಲಿಟ್ಟುಕೊಂಡು ತಿಂಗಳಿಗೆ ಗರಿಷ್ಠ ೫ ರೂ. ಗಳವರೆಗೆ ವಿಶೇಷ ವೃತ್ತಿಭತ್ಯೆ ಕೊಡಲು ಅನುಮತಿಸಿತು. ಆದ್ದರಿಂದ ಮೇಲೆ ಹೇಳಿದ ವರ್ಗಗಳಲ್ಲದೆ, ದರ್ಜಿಯನ್ನು ಒಳಗೊಂಡಂತೆ ಇತರ ವರ್ಗಗಳಿಗೆ ವೃತ್ತಿಭತ್ಯೆಯನ್ನು ಕೊಡುವಂತೆ ಶಿಫಾರಸು ಮಾಡುವುದು ಪ್ರಾಂತೀಯ ಸರ್ಕಾರದ ವಿವೇಚನೆಗೆ ಬಿಟ್ಟದ್ದು.

ಆ) ದರ್ಜಿಗಳಿಗೆ ಯಾವುದೇ ವಿಶೇಷ ಭತ್ಯೆ ಕೊಡುವಂತೆ ಶಿಫಾರಸ್ಸು ಸಂಯುಕ್ತ ಪ್ರಾಂತ್ಯ ಸರ್ಕಾರದಿಂದ ಬಂದಿರುವುದಿಲ್ಲ.

ಇ) ಭಾರತ ಸರ್ಕಾರವು ತಾನು ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳುವ ಅಗತ್ಯವಿಲ್ಲವೆಂದು ಭಾವಿಸುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೩೦–೩–೧೯೪೪ ; ಪು. ೧೭೫೭.

## ೨೦೧
## ರೈಲ್ವೆ ಆಡಳಿತದ ಕಾನೂನುಬಾಹಿರ ಕಡಿತ ಇತ್ಯಾದಿ, ವಿರುದ್ಧ ಮಜೂರಿ ಪಾವತಿ ಅಧಿನಿಯಮವನ್ನು ಆಧರಿಸಿ ಬಂದಿರುವ ಅರ್ಜಿಗಳು*

**೨೨೨. ಶ್ರೀ ಮಹಮ್ಮದ್ ಅಜ್ಹರ್ ಅಲಿ :** ರೈಲ್ವೆ ಆಡಳಿತವು ಕಾನೂನುಬಾಹಿರ ಕಡಿತ ಮತ್ತು ತಡವಾಗಿ ಪಾವತಿ ಮಾಡಿದ್ದರ ವಿರುದ್ಧ, ೧೯೩೬ರ ಮಜೂರಿ ಪಾವತಿ ಅಧಿನಿಯಮದ, ೧೫(೨) ಉಪವಿಭಾಗದ ಅನ್ವಯ, ೧೯೩೮ರ ಏಪ್ರಿಲ್ ಒಂದನೆಯ ದಿನಾಂಕದಿಂದ ಸೂಚನೆ ಕೊಡುವಂತೆ ಕೋರಿ, ಎಷ್ಟು ಅರ್ಜಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಬಂದಿವೆ? ಕಡಿತ ಮತ್ತು ವಿಳಂಬ ಪಾವತಿಗಳಿಗೆ ಸಂಬಂಧಿಸಿದ ಅರ್ಜಿಗಳ ವಿವರಗಳನ್ನು ಕ್ರಮವಾಗಿ ಮತ್ತು ಪ್ರತ್ಯೇಕವಾಗಿ ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಜೂರಿ ಪಾವತಿ ಅಧಿನಿಯಮ ೧೫(೨) ಉಪವಿಭಾಗದ ಅನ್ವಯ ಎಷ್ಟೊಂದು ಅರ್ಜಿಗಳು ರೈಲ್ವೆ ಕಾರ್ಮಿಕರಿಂದ ಬಂದಿವೆ ಎಂಬುದರ ಮಾಹಿತಿ ಸರ್ಕಾರದ ಬಳಿ ಇಲ್ಲ. ಆ ಮಾಹಿತಿಯನ್ನು ಸಂಗ್ರಹಿಸಲು ಮಾಡಬೇಕಾಗಿರುವ ಕೆಲಸದ ಪ್ರಮಾಣ ಉದ್ದೇಶಿಸಿರುವ ಫಲಿತಾಂಶವನ್ನು ಸಮರ್ಥಿಸುವುದಿಲ್ಲ.

## ೨೦೨
## ಕಾರ್ಖಾನೆಗಳ ಅಧಿನಿಯಮಕ್ಕೆ ಒಳಪಡುವ ರೈಲ್ವೆ ಕಾರ್ಮಿಕರ ದುಡಿಮೆಯ ಅವಧಿ (ವಿಧಿ) ಉಲ್ಲಂಘನೆಯ ಪ್ರಕರಣಗಳು **

**ಶ್ರೀ ಮಹಮ್ಮದ್ ಅಜ್ಹರ್ ಅಲಿ :** ಕಾರ್ಖಾನೆಗಳ ಅಧಿನಿಯಮದ ವ್ಯಾಪ್ತಿಗೆ ಸೇರದ ರೈಲ್ವೆ ಕಾರ್ಮಿಕರ ದುಡಿಮೆಯ ಅವಧಿಯ ವಿಧಿಯಲ್ಲಿ ಉಲ್ಲಂಘನೆ ಆಗಿರುವ ಪ್ರಕರಣಗಳು ೧೯೩೧ರಿಂದ ಎಷ್ಟು ವರದಿಯಾಗಿವೆ ಎಂಬುದನ್ನೂ ಅವುಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನೂ ಸನ್ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾಹಿತಿಯನ್ನು ಪಡೆಯಲಾಗುತ್ತಿದೆ. ಸದ್ಯದಲ್ಲಿಯೇ ಸದನದ ಮುಂದಿರಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೩೦–೩–೧೯೪೪ ; ಪು. ೧೭೫೨.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೩೦–೩–೧೯೪೪ ; ಪು. ೧೭೫೭.

## ೨೦೩
## ಕೇಂದ್ರ ವಿದ್ಯುತ್ ಮಂಡಲಿಯ ಕಾರ್ಯ ಮತ್ತು ಕರ್ತವ್ಯ ಇತ್ಯಾದಿ*

**೨೨೪. ಶ್ರೀ ಮಹಮ್ಮದ್ ಅಜ್ಹರ್ ಅಲಿ :** ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗೆ ಸೂಚಿಸಲಾದ ಮಂಡಲಿಗಳ ಕಾರ್ಯ ಮತ್ತು ಕರ್ತವ್ಯಗಳನ್ನು ತಿಳಿಸುವರೆ?

(i) ಕೇಂದ್ರ ವಿದ್ಯುತ್ ಮಂಡಲಿ.

(ii) ದೆಹಲಿ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ ಮಂಡಲಿ ; ಮತ್ತು

(iii) ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಲಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (i) ಕೇಂದ್ರ ವಿದ್ಯುತ್ ಮಂಡಲಿಯು, ೧೯೧೦ರ ಭಾರತೀಯ ವಿದ್ಯುಚ್ಛಕ್ತಿ ಮಂಡಲಿ ಅಧಿನಿಯಮದ ಭಾಗ ೩೬–ಎ ಪ್ರಕಾರ ರಚನೆಯಾದ, ಅದೇ ಅಧಿನಿಯಮದ ಭಾಗ ೩೭ರ ವ್ಯಾಪ್ತಿಯ ನಿಯಮಾವಳಿಗಳನ್ನು ರೂಪಿಸುವ ಪ್ರಾಧಿಕಾರ.

(ii) ದೆಹಲಿ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರವು (ನಿಯಮಿತ) ಒಂದು ಖಾಸಗಿ ಸಂಸ್ಥೆ. ಅದು ದೆಹಲಿ ಪ್ರಾಂತದಲ್ಲಿ ಸಗಟು ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸಲು ಮತ್ತು ಸಗಟು ಬಳಕೆದಾರರಿಗೆ ಅಂದರೆ, ವಾರ್ಷಿಕವಾಗಿ ೫,೦೦,೦೦೦ ಯೂನಿಟ್ಟುಗಳಿಗೆ ಕಡಮೆ ಇಲ್ಲದಂತೆ ವಿದ್ಯುತ್ತನ್ನು ಬಳಸುವ ಅಥವಾ ಅದಕ್ಕಾಗಿ ಹಣ ಪಾವತಿ ಮಾಡಲು ಸಿದ್ಧವಿರುವವರಿಗೆ – ವಿತರಿಸಲು ಒಂದು ಕೇಂದ್ರೀಯ ಸಂಸ್ಥೆಯ ಪಾತ್ರ ವಹಿಸುತ್ತದೆ.

(iii) ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಲಿಯ ಕೆಲಸಗಳು ಇಂತಿವೆ :

ಅ) ಯಾವುದೇ ಸಾರ್ವಜನಿಕ ವಿದ್ಯುಚ್ಛಕ್ತಿ ಸರಬರಾಜು ಸಂಸ್ಥೆಗೆ, ಯಾವುದೇ ನಿಯಂತ್ರಣ ಕ್ರಮವನ್ನು ಅನ್ವಯಿಸುವುದರ ಬಗ್ಗೆ ಭಾರತ ಸರ್ಕಾರಕ್ಕೆ ಸಲಹೆ ಕೊಡುವುದು.

ಆ) ಯಾವುದೇ ಸಾರ್ವಜನಿಕ ವಿದ್ಯುತ್ ಸರಬರಾಜು ಸಂಸ್ಥೆಗೆ, ಭಾರತ ಸರ್ಕಾರ ಅನುಮೋದಿಸಿರುವ ನಿಯಂತ್ರಣವನ್ನು ವ್ಯವಸ್ಥೆಗೊಳಿಸುವುದು ಮತ್ತು, ಅದರಲ್ಲೂ ಮುಖ್ಯವಾಗಿ, ಭಾರತ ಸರ್ಕಾರ ವಿಧಿಸಿರುವ ಸಾಮಾನ್ಯ ನಿಯಮಾವಳಿಗಳ ಅನ್ವಯ ಹೊಸ ಪೂರೈಕೆಗಳಿಗೆ ಅನುಮತಿಕೊಡುವುದು, ಅಥವಾ ಹಾಲಿ ಪೂರೈಕೆಯನ್ನು ನಿಯಂತ್ರಿಸುವುದು.

ಇ) ಅಲ್ಲದೆ ನಿಯಂತ್ರಣದ ಅಗತ್ಯ ಮತ್ತು ಹೆಚ್ಚುವರಿ ವಿದ್ಯುತ್ ದೊರೆಯಬಹುದಾದ ಕ್ಷೇತ್ರಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಬಹುದಾದ ಮಾಹಿತಿಗಳನ್ನು ಸಾರ್ವಜನಿಕ ವಿದ್ಯುತ್ ಸಂಸ್ಥೆಗಳಿಂದ ಸಂಗ್ರಹಿಸುವುದು ಅಗತ್ಯವೆಂದು ಈ ಸಂಸ್ಥೆ ಭಾವಿಸುತ್ತದೆ.

ಈ) ಭಾರತದ ಕೈಗಾರಿಕೆಯ ಅಭಿವೃದ್ಧಿ ಮತ್ತು ಯುದ್ಧ ಸಿದ್ದತೆಗಳ ಹಿತಾಸಕ್ತಿಯನ್ನು ಸಂರಕ್ಷಿಸಲು ಬೇಕಾದ, ವಿದ್ಯುಚ್ಛಕ್ತಿಯ ಅಭಿವೃದ್ಧಿ ಮತ್ತು ಉಪಯೋಗವನ್ನು ಅತ್ಯುತ್ತಮವಾಗಿ ಸಮನ್ವಯಗೊಳಿಸಲು ನೆರವಾಗುವ ಮಾಹಿತಿಯನ್ನು ಸಂಗ್ರಹಿಸುವುದು.

---

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೧, ೩೦–೩–೧೯೪೪ ; ಪು. ೧೭೫೭.

# ೨೦೪
# ದೆಹಲಿಯ ಷಹದಾರಾದ ಬಳಕೆದಾರರು ಪಾವತಿ ಮಾಡಿದ ವಿದ್ಯುತ್ ದರ *

**೨೨೫. ಶ್ರೀ ಮಹಮ್ಮದ್ ಅಜ್ಹರ್ ಅಲಿ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಕೆಳಗಿನ ಮಾಹಿತಿಯನ್ನು ಒದಗಿಸುವರೆ?

ಅ) (i) ಕೇಂದ್ರ ವಿದ್ಯುತ್ ಮಂಡಲಿ

(ii) ದೆಹಲಿಯ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ ಮಂಡಲಿ ಮತ್ತು

(iii) ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಲಿಗೆ, ಷಹದಾರಾ ಪಟ್ಟಣಕ್ಕೆ ಸರಬರಾಜಾಗುವ ವಿದ್ಯುತ್ತನ್ನು ಮೇಲ್ವಿಚಾರಣೆ ಮಾಡುವ ಅಧಿಕಾರ ಮತ್ತು ನಿಯಂತ್ರಣವಿದೆಯೆ?

ಆ) ದೆಹಲಿ ಪ್ರಾಂತ್ಯದ ವ್ಯಾಪ್ತಿಯಲ್ಲಿ, ವಿದ್ಯುತ್ ಬಳಕೆಗೆ ಏಕರೂಪ ಶುಲ್ಕ ವಿಧಿಸಬೇಕೆಂದು ಪಿಟ್‌ಕೀತ್ಲಿ ವರದಿ ಶಿಫಾರಸು ಮಾಡಿದೆಯೆ?

ಇ) ಪಿಟ್‌ಕೀತ್ಲಿ ವರದಿ ಬರುವುದಕ್ಕೆ ಮೊದಲು ಹಿಂದಿನ ದಿನಾಂಕದಲ್ಲಿ "ಮೇಲ್ದಂಡೆ ಯಮುನಾ ಕಣಿವೆ ವಿದ್ಯುತ್ ಕಂಪೆನಿ" (ನಿಯಮಿತ)ಕ್ಕೆ ಷಹದಾರಾ ಪಟ್ಟಣಕ್ಕೆ ವಿದ್ಯುತ್ ಸರಬರಾಜು ಮಾಡಲು ಪರವಾನಿಗೆ ಕೊಡಲಾಗಿತ್ತೆ? ಹಾಗಿದ್ದಲ್ಲಿ, ಆ ವರದಿಯ ಅನುಸಾರ ಪರವಾನಿಗೆಯನ್ನು ತಿದ್ದುಪಡಿಮಾಡಿ ವಿದ್ಯುತ್ ದರವನ್ನು ೬ ಆಣೆಗಳಿಂದ ೪ ಆಣೆಗಳಿಗೆ ಇಳಿಸದಿರಲು ಕಾರಣಗಳೇನು? ಮತ್ತು

ಈ) ಸರ್ಕಾರವು ಟೆಂಡರ್ ಕರೆದು, ಯಾವ ಸಂಸ್ಥೆ ಕಡಮೆ ವೆಚ್ಚದಲ್ಲಿ ವಿತರಣೆ ಮಾಡಲು ಒಪ್ಪುತ್ತದೆಯೋ ಅದಕ್ಕೆ ಪರವಾನಿಗೆ ಕೊಡುವ ಪ್ರಸ್ತಾಪವಿಲ್ಲವೆ ? ಇಲ್ಲದಿದ್ದಲ್ಲಿ ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಷಹದಾರಾ ಪಟ್ಟಣಕ್ಕೆ ಪೂರೈಕೆಯಾಗುವ ವಿದ್ಯುತ್ ಸರಬರಾಜಿನ ಮೇಲಿನ ಮೇಲ್ವಿಚಾರಣೆ, ಅಧಿಕಾರ ಮತ್ತು ನಿಯಂತ್ರಣ ಹಾಗೂ ಷರತ್ತುಗಳು ಮತ್ತು ಸರಬರಾಜು ದರ ಇವುಗಳಿಗೆ ಆ ಪ್ರಾಧಿಕಾರಗಳು ಹೊಣೆಯಲ್ಲ.

ಆ) ಇಲ್ಲ.

ಇ) ಪ್ರಥಮ ಭಾಗದ ಪ್ರಶ್ನೆಗೆ ಉತ್ತರ : ಹೌದು. ಎರಡನೆಯ ಭಾಗಕ್ಕೆ ವರದಿ, ಪರವಾನಿಗೆಯ ತಿದ್ದುಪಡಿಗೆ ಶಿಫಾರಸು ಮಾಡಿರುವುದಿಲ್ಲ.

ಈ) ಷಹದಾರಾ ಪಟ್ಟಣಕ್ಕೆ ವಿದ್ಯುತ್ ಹಂಚುವ ಪರವಾನಿಗೆದಾರನಿಗೆ, ಸದಸ್ಯಕ್ಕೆ ದೆಹಲಿಯ 'ಕೇಂದ್ರ ವಿದ್ಯುತ್ ಸದನ'ದಿಂದ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಆ ಕಾಲ ಬರುವವರೆಗೂ ಷಹದಾರದ ಹಂಚಿಕೆ ಪಡೆದ ಪರವಾನಗಿದಾರ ವಿಧಿಸುತ್ತಿರುವ ದರ (ಅದು ಅವನ ಪರವಾನಗಿಯ ಒಪ್ಪಂದದಲ್ಲಿ ನಿಗದಿತವಾಗಿದೆ) ಅಧಿಕವೆಂದು ಪರಿಗಣಿಸಲಾಗುವುದಿಲ್ಲ. ಈ ಕ್ಷೇತ್ರಕ್ಕೆ ಬೇರೆ ಯಾರಿಗೂ ಎರಡನೆಯ ಹಂಚಿಕೆ ಪರವಾನಗಿ ಕೊಡುವ ಪ್ರಶ್ನೆಯೇ ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೩, ೩೦–೩–೧೯೪೪ ; ಪು. ೧೭೫೭–೫೮.

# ೨೦೫
# ದೆಹಲಿಯ ಷಹದಾರಾ ಪಟ್ಟಣದ ಬಳಕೆದಾರರು ಪಾವತಿ ಮಾಡಿದ ವಿದ್ಯುತ್ತಿನ ದರ *

**೨೨೬. ಶ್ರೀ ಮಹಮ್ಮದ್ ಅಜ್ಹರ್ ಅಲಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಕೆಳಗಿನ ವಿವರಗಳನ್ನು ಒದಗಿಸುವರೆ?

ಅ) ಮೇಲ್ದಂಡೆ ಯಮುನಾ ಕಣಿವೆ ವಿದ್ಯುತ್ ಕಂಪೆನಿ (ನಿಯಮಿತ)ವು ತಾನು ಪಡೆದ ವಿದ್ಯುತ್ತಿಗಾಗಿ ಸಂಯುಕ್ತ ರಾಷ್ಟ್ರ ಸರ್ಕಾರಕ್ಕೆ ಯೂನಿಟ್ ಒಂದಕ್ಕೆ ೦–೨–೬ (ಎರಡು ಆಣೆ, ಆರುಕಾಸು)ಗಳಂತೆ ಕೊಡುವುದೆ?

ಆ) ಸದರಿ ಕಂಪೆನಿಯು ಷಹದಾರ ಟೌನಿನ ಬಳಕೆದಾರರಿಗೆ ಯೂನಿಟ್ ಒಂದಕ್ಕೆ (೦–೬–೦–) ಆರು ಆಣೆಯಂತೆ ದರ ವಿಧಿಸುತ್ತಿರುವುದು ಸತ್ಯಾಂಶವೆ?

ಇ) ಯಾವ ದರದಲ್ಲಿ ಕಂಪೆನಿಯು ನಿರ್ವಹಣಾ ವೆಚ್ಚವನ್ನು ಲೆಕ್ಕಹಾಕುತ್ತದೆ? ಮತ್ತು

ಈ) ೧೯೩೯ರಿಂದ ವರ್ಷಾವಾರು ಬಳಕೆದಾರರ ಸಂಖ್ಯೆ ಎಷ್ಟು? ಸದರಿ ಕಂಪೆನಿಯಿಂದ ಪ್ರತಿ ವರ್ಷ ಸೇವಾ ನಿರ್ವಹಣೆಗಾಗಿ ವೆಚ್ಚವಾಗುತ್ತಿರುವ ಮೊತ್ತವೇಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಹೌದು.

ಇ) ಸರ್ಕಾರದ ಬಳಿ ಮಾಹಿತಿ ಇಲ್ಲ.

ಈ) ಬಳಕೆದಾರರ ಸಂಖ್ಯೆ ನಮೂದಾಗಿರುವ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ. "ಸೇವಾ ನಿರ್ವಹಣಾ ವೆಚ್ಚ" ಎಂಬ ಅಭಿವ್ಯಕ್ತಿ ಸಾಕಷ್ಟು ಸ್ಪಷ್ಟವಾಗಿಲ್ಲವಾದ್ದರಿಂದ ಆ ಬಗ್ಗೆ ಯಾವುದೇ ಅಂಕಿಅಂಶ ಕೊಡಲಾಗುತ್ತಿಲ್ಲ.

**ಪಟ್ಟಿ**

| **ವರ್ಷ** | **ಬಳಕೆದಾರರ ಸಂಖ್ಯೆ** |
|---|---|
| ೧೯೩೯ರ ಮಾರ್ಚಿ ೩೧ಕ್ಕೆ ಅಂತಿಮವಾದ ವರ್ಷ | ೧೧೪ |
| ೧೯೪೦ರ ಮಾರ್ಚಿ ..............".............. | ೧೧೮ |
| ೧೯೪೧ರ ಮಾರ್ಚಿ ..............".............. | ೧೩೧ |
| ೧೯೪೨ರ ಮಾರ್ಚಿ ..............".............. | ೧೪೧ |
| ೧೯೪೩ರ ಮಾರ್ಚಿ ..............".............. | ೧೪೩ |

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೩, ೩೦–೩–೧೯೪೪ ; ಪು. ೧೭೫೮.

## ೨೦೬
## ಕಾರ್ಖಾನೆಗಳ (ಎರಡನೆಯ ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೇ, "೧೯೪೩ರ ಕಾರ್ಖಾನೆಗಳ ಅಧಿನಿಯಮದ ಎರಡನೆಯ ತಿದ್ದುಪಡಿಗೆ – ತಿದ್ದುಪಡಿಯನ್ನು ಸೂಚಿಸಿ ನಾನು ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ"

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ವಿಷಯ "೧೯೩೪ರ ಕಾರ್ಖಾನೆಗಳ ಅಧಿನಿಯಮ ಎರಡನೆಯ ತಿದ್ದುಪಡಿಗೆ ಮತ್ತೆ ತಿದ್ದುಪಡಿಯನ್ನು ತರಲು ಮಂಡಿಸಲಿರುವ ಮಸೂದೆಗೆ ಅನುಮತಿಸಲಾಗಿದೆ". ಸೂಚನೆ ಅಂಗೀಕೃತವಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಮಸೂದೆಯನ್ನು ಮಂಡಿಸುವೆ.

## ೨೦೭
## ನವದೆಹಲಿಯ ಇರ್ವಿನ್ ರಸ್ತೆಯಲ್ಲಿರುವ ನಿವಾಸಗಳ ಮಧ್ಯದ ಕಮಾನುಗಳ ಮುಚ್ಚುವಿಕೆ **

**೭೭೧. ಶ್ರೀ ಮಹಮ್ಮದ್ ಅಜ್ಹರ್ ಅಲಿ :** ಅ) ನವದೆಹಲಿಯ ಇರ್ವಿನ್‌ರಸ್ತೆಯಲ್ಲಿರುವ ಸರ್ಕಾರಿ ನಿವಾಸಗಳ ನಡುವಿನ ಕೆಲವು ಓಣಿಗಳು (ಕಮಾನುಗಳು) ಕೆಲವು ದಿನಗಳ ಹಿಂದೆ ವಾಹನ ಸಂಚಾರಕ್ಕೆ ಮುಚ್ಚಲ್ಪಟ್ಟವು, ಇತ್ಯಾದಿ ವಿಚಾರಗಳು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಇವುಗಳಲ್ಲಿ ಕೆಲವನ್ನು ಸಿಮೆಂಟಿನ ಕಂಬಗಳನ್ನು ನೆಡುವುದರ ಮೂಲಕ ಮುಚ್ಚಿದರೆ, ಮಿಕ್ಕವನ್ನು 'V' ಮಾದರಿ ನಿರ್ಮಿತಿಗೆ ಕಬ್ಬಿಣದ ಸರಳುಗಳನ್ನು ಅಳವಡಿಸಿದ ತಿರುಗುಗೇಟುಗಳನ್ನು ಸೇರಿಸಿ ಮುಚ್ಚಲಾಗಿದೆ ಎಂಬುದು ಸಹ ತಮ್ಮ ಗಮನಕ್ಕೆ ಬಂದಿದೆಯೆ?

ಇ) ವಾಹನ ಸಂಚಾರಕ್ಕೆ 'V' ಮಾದರಿ ನಿರ್ಮಿತಿಯೇ ಸಾಕಷ್ಟು ತಡೆಯಾಗಿರುವಾಗ, ಕಬ್ಬಿಣದ ಸರಳಿನ ಗೇಟನ್ನು ಅಳವಡಿಸುವುದರ ಉದ್ದೇಶ ಮತ್ತು ಉಪಯುಕ್ತತೆ ಏನು?

ಈ) ಅಲ್ಲದೆ ಈ ಕಬ್ಬಿಣದ ಸರಳಿನ ಗೇಟುಗಳಿಂದಾಗಿ ಆಡುವ ಮಕ್ಕಳಿಗೆ ಏಟು ತಗುಲಿದೆ; ಕೆಲವು ಬಾರಿ ತೀವ್ರಗಾಯಗಳೂ ಆಗಿವೆ ಎಂಬುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಉ) ಈ ಕಬ್ಬಿಣದ ಗೇಟುಗಳನ್ನು ತೆಗೆದುಹಾಕಿ, ಅನ್ಯತ್ರ ಅದರ ಸದುಪಯೋಗಮಾಡಿಕೊಳ್ಳುವ ವಿಹಿತ ಯೋಜನೆಯನ್ನು ಪರಿಶೀಲಿಸುವರೆ? ಇಲ್ಲದಿದ್ದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು (ಆ) ಹೌದು. ಇ) ಸೈಕಲ್‌ಗಳ ಸಂಚಾರವನ್ನು ತಪ್ಪಿಸಲು ಈ ಕ್ರಮವನ್ನು ತೆಗೆದುಕೊಂಡಿದೆ. (ಈ) ಇಲ್ಲ (ಉ) ಸರ್ಕಾರ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲು ಸಿದ್ಧವಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ३, ३–४–೧೯४४ ; ಪು. ೧೮೭೦.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ३, ४–४–೧೯४४ ; ಪು. ೧೯೧४.

# ೨೦೮
# ಕೇಂದ್ರ ಲೇಖನಸಾಮಗ್ರಿ ಕಛೇರಿಯಲ್ಲಿ ಮುಸ್ಲಿಮ್ ಅಧಿಕಾರಿಗಳ ಅನುಪಸ್ಥಿತಿ *

**೭೭೩. ಶ್ರೀ ಮಹಮ್ಮದ್ ನೌಮನ್ :** (ಅ) ಕೇಂದ್ರ ಲೇಖನಸಾಮಗ್ರಿ ಕಛೇರಿಯಲ್ಲಿ ಒಬ್ಬ ಮುಸ್ಲಿಮ್ ಅಧಿಕಾರಿಯೂ ಇಲ್ಲವೆಂಬುದು ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಲೇಖನಸಾಮಗ್ರಿ ವಿಭಾಗಕ್ಕೆ ಉಪನಿಯುಕ್ತರ ಹುದ್ದೆ ಈಚೆಗೆ ಮಂಜೂರಾದರೂ ಇಲ್ಲಿಯವರೆಗೆ ಯಾರನ್ನು ಆ ಹುದ್ದೆಗೆ ನೇಮಿಸಿಲ್ಲವೆಂಬುದು ನಿಜವೆ? ಹಾಗಿದ್ದಲ್ಲಿ ಸನ್ಮಾನ್ಯ ಸದಸ್ಯರು ಆ ಸ್ಥಾನವನ್ನು ಮುಸ್ಲಿಮ್ ಅಭ್ಯರ್ಥಿಗೆ ಕಾದಿರಿಸುವ ಪ್ರಸ್ತಾವ ಮಾಡುವರೆ ? ಇಲ್ಲದಿದ್ದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು ; ಆ) ಆಹುದ್ದೆಗೆ ಯಾರನ್ನೂ ನೇಮಿಸಿಲ್ಲ, ಹಾಗೂ ಕೋಮುವಾರು ಪ್ರಾತಿನಿಧ್ಯದ ನಿಯಮಾನುಸಾರ ಆ ಸ್ಥಾನವನ್ನು ಭರ್ತಿಮಾಡಲಾಗುವುದು.

# ೨೦೯
# ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಕರ ಕಛೇರಿಗೆ ತಾಂತ್ರಿಕ ಅಧಿಕಾರಿಯ ನಿಯುಕ್ತಿಯ ಅಪೇಕ್ಷಣೀಯತೆ **

**೭೭೪. ಶ್ರೀ ಮಹಮ್ಮದ್ ನೌಮನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿನ ಕೆಲಸ ತಾಂತ್ರಿಕ ಸ್ವರೂಪದ್ದೆ?

ಆ) ಮುದ್ರಣ ಮತ್ತು ಲೇಖನಸಾಮಗ್ರಿ ನಿಯಂತ್ರಕರ ಪ್ರಧಾನ ಕಛೇರಿಯಲ್ಲಿ ತಾಂತ್ರಿಕ ವಿಭಾಗದಿಂದ ಕರೆಸಿಕೊಂಡ ಒಬ್ಬ ಅಧಿಕಾರಿಯೂ ಇಲ್ಲವೆಂಬುದು ವಾಸ್ತವವೆ?

ಇ) ಒಂದು ಪಕ್ಷ ಪ್ರಶ್ನೆ ಸಂಖ್ಯೆ (ಅ) ಮತ್ತು (ಆ) ಗಳಿಗೆ ಉತ್ತರ ಹೌದೆಂದಾದರೆ, ನಿಯಂತ್ರಕರ ಕಛೇರಿಗೆ ಒಬ್ಬ ತಾಂತ್ರಿಕ ಅಧಿಕಾರಿಯ ನಿಯುಕ್ತಿಯ ಅಪೇಕ್ಷಣೀಯತೆಯನ್ನು ಪರಿಗಣಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಬಹುಮಟ್ಟಿಗೆ, ಆ) ಹೌದು. ಇ) ಇಲ್ಲ; ಏಕೆಂದರೆ, ಈ ಕಛೇರಿಯಲ್ಲಿ ಮುದ್ರಣ ಕಾರ್ಯದ ವಿವರವಾದ ತಾಂತ್ರಿಕ ಮೇಲ್ವಿಚಾರಣೆಯಾಗಲಿ, ಪರಿಶೋಧನೆಯಾಗಲಿ ಇರುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೩, ೪-೪-೧೯೪೪ ; ಪು. ೧೯೧೫.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೩, ೪-೪-೧೯೪೪ ; ಪು. ೧೯೧೫-೧೬.

# ೨೧೦
# ಭಾರತ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಸಹಾಯಧನ *

**೭೭೬. ಶ್ರೀಲಾಲ್ ಚಂದ್ ನವಲ್‌ರಾಯ್ :** ಅ) ಭಾರತ ಕಾರ್ಮಿಕ ಒಕ್ಕೂಟಕ್ಕೆ ಸನ್ಮಾನ್ಯ ಸದಸ್ಯರ ಇಲಾಖೆಯು ಶ್ರೀ ಎಂ.ಎನ್. ರಾಯ್ ಅವರ ಮೂಲಕ ೧೩,೦೦೦ ರೂ.ಗಳ ಮಾಸಿಕ ಸಹಾಯಧನವನ್ನು ಕೊಡುತ್ತಿದೆಯೆ? ಹಾಗಿದ್ದಲ್ಲಿ ಯಾವ ಉದ್ದೇಶಕ್ಕಾಗಿ? ಒಂದು ಪಕ್ಷ ಈ ಸಹಾಯಧನದ ಮೊತ್ತ ನಾನು ಹೇಳಿದ್ದಕ್ಕಿಂತ ಕಡಮೆಯೋ ಹೆಚ್ಚೋ ಇದ್ದಲ್ಲಿ, ಗೌರವಾನ್ವಿತ ಸದಸ್ಯರು ಸರಿಯಾದ ಮೊತ್ತವನ್ನು ತಿಳಿಸುವರೆ?

ಆ) ಭಾರತ ಕಾರ್ಮಿಕ ಒಕ್ಕೂಟಕ್ಕೆ ನೀಡಿದ ಸಹಾಯಧನಕ್ಕೆ ಲೆಕ್ಕ ಇಡಲಾಗಿದೆಯೆ ? ಇಲ್ಲದಿದ್ದಲ್ಲಿ, ಏಕಿಲ್ಲ?

ಇ) ಒಂದು ವೇಳೆ 'ಆ' ಪ್ರಶ್ನೆಯ ಪ್ರಥಮ ಭಾಗಕ್ಕೆ ಉತ್ತರ ಇತ್ಯಾತ್ಮಕವಾಗಿದ್ದರೆ, ಮಾನ್ಯ ಸದಸ್ಯರು ತಮ್ಮ ಬಳಿ ಇರಬಹುದಾದ ಕಳೆದ ನಾಲ್ಕು ತಿಂಗಳುಗಳ ಲೆಕ್ಕ ತಃಖ್ತೆಯನ್ನು ಸದನದ ಮುಂದಿರಿಸುವರೆ?

ಇಲ್ಲದಿದ್ದಲ್ಲಿ ಯಾಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತ ಕಾರ್ಮಿಕ ಒಕ್ಕೂಟಕ್ಕೆ ಮಾಹೆಯಾನ ೧೩,೦೦೦ ರೂ. ಸಹಾಯಧನ ಕೊಡುತ್ತಿರುವುದು, ಕೈಗಾರಿಕಾ ಕಾರ್ಮಿಕರ ನೈತಿಕ ಸ್ಥೈರ್ಯವನ್ನು ಕಾಪಾಡುವಲ್ಲಿ ಒಕ್ಕೂಟ ಮಾಡುತ್ತಿರುವ ಪ್ರಚಾರ ಕಾರ್ಯಕ್ಕಾಗಿ.

ಆ) ಹೌದು, ಮಾನ್ಯರೇ.

ಇ) ಇಲ್ಲ ; ಇತರ ಎಲ್ಲ ಸರ್ಕಾರಿ ಲೆಕ್ಕಪತ್ರಗಳಿಗೆ ಅನ್ವಯಿಸುವ ಲೆಕ್ಕ ಪರಿಶೋಧನೆಯ ನಿಯಮಗಳಿಗೆ ಇದು ಒಳಪಡುವುದರಿಂದ, ಅದನ್ನು ಈ ಸದನದ ಮುಂದೆ ಪ್ರತ್ಯೇಕವಾಗಿ ಇರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅವರು (ಶ್ರೀ ಎಂ.ಎನ್. ರಾಯ್) ಈ ಹಣವನ್ನು ಪ್ರಚಾರೋದ್ದೇಶಕ್ಕಾಗಿ ಬೇರೆ ಯಾರಿಗಾದರೂ ವಿತರಿಸಲು ಅಧಿಕಾರವಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಅವರಿಗೆ ಕೊಟ್ಟದ್ದಲ್ಲ. ಭಾರತ ಕಾರ್ಮಿಕ ಒಕ್ಕೂಟಕ್ಕೆ ಕೊಟ್ಟ ಧನ ಅದು.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ಅಂದರೆ, ಒಕ್ಕೂಟದ ಪ್ರಭಾವದಲ್ಲಿರುವ ವ್ಯಕ್ತಿಗೆ ಅವರು ಅದನ್ನು ಬೇರೆಯವರಿಗೆ ವಿತರಿಸಿ, ಪ್ರಚಾರಮಾಡಲು ತಿಳಿಸಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಣ ಹೇಗೆ ವಿತರಣೆಯಾಗುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಲೆಕ್ಕಪತ್ರ ಸಿದ್ಧಪಡಿಸಬೇಕಾಗಿರುವುದರಿಂದ ಸನ್ಮಾನ್ಯ ಸದಸ್ಯರು ಆ ಬಗ್ಗೆ ವಿಚಾರಿಸಲಿಲ್ಲವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೩, ೪–೪–೧೯೪೪ ; ಪು. ೧೯೧೫–೧೬.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಲೆಕ್ಕಪತ್ರಗಳು ಇತರ ಎಲ್ಲ ಸರ್ಕಾರಿ ಲೆಕ್ಕಪತ್ರಗಳಂತೆ ಪರಿಶೋಧಿತವಾಗುತ್ತವೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈ ಹಣ ಹೇಗೆ ವಿತರಣೆಯಾದಂತೆ ತೋರಿಸಲಾಗಿದೆ? ಅದು ಲೆಕ್ಕ ಪರಿಶೋಧನೆಯಲ್ಲಿ ನಮೂದಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ ; ಆದರೆ ಲೆಕ್ಕಪತ್ರಗಳು ಇತರ ಎಲ್ಲ ಸರ್ಕಾರಿ ಲೆಕ್ಕಪತ್ರಗಳಂತೆಯೇ ಪರಿಶೋಧಿತವಾಗುತ್ತವೆ.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಯಾವ ರೀತಿಯಲ್ಲಿ ಈ ಹಣ ವಿನಿಯೋಗವಾಗಬೇಕೆಂದು ಒಕ್ಕೂಟವು ಯಾವುದಾದರೂ ನಿಯಮವನ್ನು ಮಾಡಿ, ಅದನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಬಗ್ಗೆ ನನ್ನ ಬಳಿ ಮಾಹಿತಿ ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಸನ್ಮಾನ್ಯ ಸದಸ್ಯರು ಆ ಬಗ್ಗೆ ವಿಚಾರಣೆ ಮಾಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಈ ವಿಷಯದಲ್ಲಿ ಆಸಕ್ತಿ ತೋರಿಸಿರುವುದರಿಂದ, ನಾನು ವಿಚಾರಣೆ ಮಾಡುವೆ.

**ಡಾ॥ ಝಿಯಾವುದ್ದೀನ್ ಅಹಮ್ಮದ್ :** ವಿತರಣೆ ಮಾಡಲು ಯಾವ ನಿಯಮಾವಳಿಯೂ ಇಲ್ಲದಿರುವಾಗ, ಹೇಗೆ ಲೆಕ್ಕಪತ್ರಗಳು ಪರಿಶೋಧನೆಯಾಗುತ್ತವೆಯೆ ಎಂಬುದು ನನಗೆ ತೋರುತ್ತಿಲ್ಲ!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವು ನಿಯಮಾವಳಿಗನುಗುಣವಾಗಿಯೇ ಹಣದ ವಿತರಣೆಯಾಗಿರುವುದನ್ನು ಲೆಕ್ಕ ಪರಿಶೋಧನಾಧಿಕಾರಿ ಮನವರಿಕೆ ಮಾಡಿಕೊಂಡಿದ್ದಾರೆ ಎಂಬುದು ನಿಶ್ಚಯ.

**ಶ್ರೀ ಬದ್ರಿದತ್ತ ಪಾಂಡೆ :** ಇತರ ಯಾವುದೇ ಸಂಘಗಳು ಹೀಗೆ ಹಣ ಪಡೆಯುತ್ತಿವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು 'ನೋಟೀಸ್' ಬೇಕು.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಶ್ರೀ ರಾಯ್ ಆ ಎಲ್ಲ ಹಣವನ್ನು ತಮ್ಮ ಸ್ನೇಹಿತರಿಗೆ ವ್ಯಯಿಸಲು ನೀಡದಂತೆ ಖಾತ್ರಿಪಡಿಸಲು ಕೆಲವು ನಿಯಮಾವಳಿಗಳು ಇರಬೇಕಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಯಾವುದೇ ನಿಯಮಾವಳಿಗಳು ಇಲ್ಲವೆಂದು ಭಾವಿಸಲು ಮಾನ್ಯ ಸದಸ್ಯರಿಗೆ ಏನು ಸಮರ್ಥನೆ ಇದೆಯೋ ನನಗೆ ತಿಳಿಯದು.

**ಡಾ॥ ಸರ್ ಝಿಯಾವುದ್ದೀನ್ ಅಹಮ್ಮದ್ :** ಸರ್ಕಾರ ಈ ಬಗ್ಗೆ ತನ್ನ ಅಜ್ಞಾನವನ್ನು ತೋರಿಸಿದ್ದರಿಂದ ಯಾರಿಗಾದರೂ ಈ ಬಗ್ಗೆ ಶಂಕೆ ಬರುವಂತಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರ ಈ ಬಗ್ಗೆ ತನ್ನ ಅಜ್ಞಾನ ಪ್ರದರ್ಶನ ಮಾಡಿಲ್ಲ. ಇತರ ಸಾರ್ವಜನಿಕ ಲೆಕ್ಕಪತ್ರಗಳ ಪರಿಶೋಧನೆಯಂತೆಯೇ ಇದರದು ಸಹ ಎಂದು ನಾನು ಸ್ಪಷ್ಟೋಕ್ತಿಯಲ್ಲಿ ನಿವೇದಿಸಿದ್ದೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಕಾರ್ಮಿಕರ ನೈತಿಕ ಸ್ಥೈರ್ಯವನ್ನು ಕಾಪಾಡುವಲ್ಲಿ ಸರ್ಕಾರಕ್ಕೆ ನೆರವಾಗುವ ಏಕೈಕ ಸಂಸ್ಥೆ ಇದೆಂದು ಮಾನ್ಯ ಸದಸ್ಯರ ಅಭಿಪ್ರಾಯವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ. ಆ ಪ್ರಶ್ನೆಗೆ ಪೂರ್ವಭಾವಿ 'ನೋಟೀಸ್' ಬೇಕು.

# ೨೧೧
# ದೆಹಲಿಯ ನ್ಯಾಯಾಲಯಗಳಲ್ಲಿ ಮನೆಗಳನ್ನು ತೆರವು ಮಾಡಿಸುವ ಪ್ರಕರಣಗಳು*

****೭೮೨ ಖಾನ್ ಬಹದ್ದೂರ್ ಷಾಹಿಕ್ ಫಜ್ಲ್–ಇ–ಹಕ್ ಪಿರಚಾ :** ಅ) ಪಂಜಾಬು ಬಾಡಿಗೆ ನಿಯಂತ್ರಣ ಅಧಿನಿಯಮವು ದೆಹಲಿ ಪ್ರಾಂತ್ಯಕ್ಕೆ ವಿಸ್ತರಿಸಲ್ಪಟ್ಟಾಗ, ಮನೆಯನ್ನು ತೆರವು ಮಾಡಿಸುವ (ಉಚ್ಚಾಟನಾ) ಎಷ್ಟು ಪ್ರಕರಣಗಳು ದೆಹಲಿಯ ನ್ಯಾಯಾಲಯಗಳಲ್ಲಿ ದಾಖಲಾಗಿದ್ದವು? ಎಷ್ಟು ಪ್ರಕರಣಗಳು ವಿಲೇವಾರಿಯಾಯಿತು? ಮತ್ತೆಷ್ಟು ನ್ಯಾಯಾಲಯಗಳಲ್ಲಿ ಬಾಕಿ ಇವೆ – ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಪಂಜಾಬು ಬಾಡಿಗೆ ನಿಯಂತ್ರಣ ಕಾಯಿದೆಯನ್ನು ದೆಹಲಿಯ ಪುರಸಭಾ ಪ್ರದೇಶದಲ್ಲಿ ಜಾರಿಗೆ ತಂದ ಕೂಡಲೆ, ಮನೆ ಮಾಲೀಕರು ತಮ್ಮ ಸ್ವಂತ ಉಪಯೋಗಕ್ಕೆ ವಾಸದ ಮನೆಗಳನ್ನು, ಫ್ಲಾಟುಗಳನ್ನು ತೆರವು ಮಾಡುವಂತೆ ತಮ್ಮ ಬಾಡಿಗೆದಾರರನ್ನು ಒತ್ತಾಯಿಸುತ್ತಿದ್ದುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ? ಆದರೆ ಅಂಥ ಸ್ವಂತ ಉಪಯೋಗದ ಕಾರಣಗಳು ಸುಳ್ಳು ಎಂದೂ "ನಜರಾನ" ಸಲ್ಲಿಸಿದ ಅದೇ ಬಾಡಿಗೆದಾರನಿಗೆ ಅಥವಾ ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರುವ ಪ್ರಸಂಗಗಳು ನಿಜವಷ್ಟೆ?

ಇ) ಎಲ್ಲಿಯವರೆಗೆ ಬಾಡಿಗೆದಾರ ನಿಯಂತ್ರಿತ ಬಾಡಿಗೆಯನ್ನು ಕೊಡುತ್ತಾನೋ ಅಥವಾ ಕೊಡಲು ಒಪ್ಪಿರುತ್ತಾನೋ ಅಲ್ಲಿಯವರೆಗೆ ವಾಸದ ಮನೆಯಿಂದ ಅಥವಾ ಫ್ಲಾಟ್‌ನಿಂದ ಅವನನ್ನು ಬಿಡಿಸದೆ ಇರುವಂತೆ, ನಿಯಂತ್ರಣ ಕಾಯಿದೆಯನ್ನು ದೆಹಲಿ ಪ್ರಾಂತ್ಯದಾದ್ಯಂತ ಜಾರಿಗೆ ತರುವಂತೆ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಡುವರೆ?

ಈ) ನಿಯಂತ್ರಣ ಕಾಯಿದೆ ಜಾರಿಗೆ ಬಂದಂದಿನಿಂದ ದೆಹಲಿಯ ಮನೆ ಮಾಲೀಕರು ಅವರ ಸ್ವತ್ತಾದ ನಿವಾಸಗಳಿಗೆ ಯಾವುದೇ ದುರಸ್ತಿ ಮಾಡಲು ನಿರಾಕರಿಸುತ್ತಿರುವುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ತಮ್ಮ ಸ್ವತ್ತಾದ ನಿವಾಸಗಳಿಗೆ ಲಕ್ಷ್ಯ ಕೊಡದ (ದುರಸ್ತಿ ಮಾಡದ) ಮನೆ ಮಾಲೀಕರ ವಿರುದ್ಧ ಯಾವ ದಂಡಾರ್ಹ ಕ್ರಮಗಳನ್ನು ತೆಗೆದುಕೊಳ್ಳಲು ಮಾನ್ಯ ಸದಸ್ಯರು ಉದ್ದೇಶಿಸಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೪೪ನೆಯ ಮಾರ್ಚಿ ೨೮ರವರೆಗೆ ಹೂಡಿದ ಮೊಕದ್ದಮೆಗಳು ೧,೪೪೪. ಇವುಗಳಲ್ಲಿ ೮೮೮ ಮೊಕದ್ದಮೆಗಳು ಇತ್ಯರ್ಥವಾಗಿವೆ. ೫೫೬ ಪ್ರಕರಣಗಳು ಇನ್ನು ಇತ್ಯರ್ಥವಾಗದೆ ಉಳಿದಿದೆ.

ಆ) ಹೌದು ; ಸ್ಥಳೀಯ ಅಧಿಕಾರಿಗಳಿಗೆ ಆ ಸ್ವರೂಪದ ದೂರುಗಳು ಬಂದಿವೆ.

ಇ) ಸರ್ಕಾರ ಈ ಬಗ್ಗೆ ತಾನು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಕುರಿತು ಆಲೋಚಿಸುತ್ತಿದೆ.

ಈ) ಸ್ಥಳೀಯ ಅಧಿಕಾರಿಗಳಿಗೆ ಕೆಲವು ದೂರುಗಳು ಬಂದಿವೆ ಮತ್ತು ಈ ವಿಷಯ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೩, ೪-೪-೧೯೪೪ ; ಪು. ೧೯೧೯-೨೦

** ಈ ಪ್ರಶ್ನೆಗೆ ಉತ್ತರವನ್ನು ಸದನದಲ್ಲಿ ಮಂಡಿಸಲಾಯಿತು ಪ್ರಶ್ನಕರು ಗೈರುಹಾಜರಾಗಿದ್ದರು.

## ೨೧೨
## ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಯ ಪ್ರಕಟಣೆ *

**೨೬೨. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ರೈಲ್ವೇ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಯ ಪ್ರಕಟನೆಗೆ ಸಂಬಂಧಿಸಿದಂತೆ ೧೯೮೮ರ ಫೆಬ್ರವರಿ ೧೦ನೇ ದಿನಾಂಕ ಕೇಳಲಾದ ತಾರಾಂಕಿತವಲ್ಲದ ೪೩ನೇ ಪ್ರಶ್ನೆಗೆ ಮಾನ್ಯ ಸದಸ್ಯರು ಉತ್ತರ ಕೊಟ್ಟಿರುವುದು ಸರಿಯಷ್ಟೇ. ಆ ಉತ್ತರಕ್ಕೆ ಪೂರಕವಾಗಿ, ಅದರಲ್ಲಿ ಆಸಕ್ತರಾಗಿರುವವರ ಮಾಹಿತಿಗಾಗಿ, ಒಂದು ಅಧಿಕೃತ ಪತ್ರಿಕಾ ಪ್ರಕಟನೆಯ ಸ್ವರೂಪದ ಸಂಕ್ಷಿಪ್ತ ವರದಿ ನೀಡುವುದನ್ನು ಖಾತ್ರಿಪಡಿಸುವರೆ? ಇಲ್ಲದಿದ್ದಲ್ಲಿ ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಬಹುಶಃ ೧೯೪೪ನೆಯ ಫೆಬ್ರವರಿ ೧೦ನೆಯ ದಿನಾಂಕ ಕೇಳಲಾದ ತಾರಾಂಕಿತವಲ್ಲದ ಪ್ರಶ್ನೆಯನ್ನು ಸೂಚಿಸುತ್ತಿರಬಹುದು. ಈಗ, ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಯ ಮೇಲೆ ಪತ್ರಿಕಾ ಹೇಳಿಕೆ ನೀಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

## ೨೧೩
## ದೆಹಲಿಯ ಷಹದಾರಾ ಪಟ್ಟಣದ ವ್ಯಾಪ್ತಿಯಲ್ಲಿ ರಸ್ತೆಗಳ ಪಾಲನೆ *

**೨೬೩. ಶ್ರೀ ಜಿ. ರಂಗಯ್ಯ ನಾಯ್ಡು :** ದೆಹಲಿ ಪ್ರಾಂತದ ಷಹದಾರ ಟೌನಿನ ರಸ್ತೆಗಳ ದುರಸ್ತಿ, ಪಾಲನೆ ಯಾವ ಪ್ರಾಧಿಕಾರದ (ಪುರಸಭಾ ಸಮಿತಿ, ಅಥವಾ ಕೇಂದ್ರ ಲೋಕೋಪಯೋಗಿ ಇಲಾಖೆಯ) ಕರ್ತವ್ಯ ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಷಹದಾರಾ ಪಟ್ಟಣದೊಳಗಿನ ರಸ್ತೆಗಳ ಪಾಲನೆಯು "ಷಹದಾರಾದ ಸೂಚಿತ ಪ್ರಾದೇಶಿಕ ಸಮಿತಿ"ಯ ಹೊಣೆಯಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೩, ೪–೪–೧೯೪೪ ; ಪು. ೧೯೨೪–೨೫.
* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೩, ೪–೪–೧೯೪೪ ; ಪು. ೧೯೨೫.

## ೨೧೪

## ಪೂರ್ವ ರೈಲ್ವೆ ಮತ್ತು ವಾಯುವ್ಯ ರೈಲ್ವೆಗಳ ಕಾನೂನುಬಾಹಿರ ಕಡಿತ ಇತ್ಯಾದಿಗಳ ವಿರುದ್ಧ ವೇತನ ಪಾವತಿ ಅಧಿನಿಯಮದ ಅನ್ವಯ ಬಂದಿರುವ ಅರ್ಜಿಗಳು *

**೨೬೬. ಶ್ರೀ ಅನಂಗ ಮೋಹನದಾಮ್ :** ಪೂರ್ವ ರೈಲ್ವೆ ಮತ್ತು ವಾಯುವ್ಯ ರೈಲ್ವೆ ಆಡಳಿತ ವಿರುದ್ಧ ನೌಕರರು ವೇತನ ಕಡಿತದ ಮರುಪಾವತಿ, ವಿಳಂಬಿತ ವೇತನದ ಪಾವತಿಯ ಬಗ್ಗೆ ಕೋರಿ ಸಲ್ಲಿಸಿದ ಅರ್ಜಿಗಳು ೧೯೩೮ರ ಮಾರ್ಚಿಯಿಂದ, ಕ್ರಮವಾಗಿ ಒಂದೊಂದು ವಿಭಾಗಕ್ಕೆ ಸಂಬಂಧಿಸಿದಂತೆ, ಎಷ್ಟೆಷ್ಟು ಬಂದಿವೆ? ಆ ಅರ್ಜಿಗಳು ವಿಲೇವಾರಿಯಾದ ಬಗೆ ಹೇಗೆ ? ಆಗಿಲ್ಲದಿದ್ದಲ್ಲಿ ಏಕೆ ಆಗಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಶ್ರೀ ಮಹಮ್ಮದ್ ಅಜ್ಹರ್ ಅಲಿ ಅವರ ೩೦–೪–೧೯೪೪ರ ತಾರಾಂಕಿತವಲ್ಲದ ಪ್ರಶ್ನಾಂಕ ೨೨೨ಕ್ಕೆ ಕೊಡಲಾದ ಉತ್ತರದ ಕಡೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ.

## ೨೧೫
## ಭಾರತ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರಿ ಅನುದಾನ **

**೩೧. ಶ್ರೀಲಾಲ್ ಚಂದ್ ನವಲ್‌ರಾಯ್ :** (ಅ) ದಿನಾಂಕ ೪–೪–೧೯೪೪ರ ನನ್ನ ತಾರಾಂಕಿತ ೭೭೬ನೆಯ ಪ್ರಶ್ನೆಯ ಉತ್ತರಕ್ಕೆ ಸಂಬಂಧಿಸಿದಂತೆ ಭಾರತ ಕಾರ್ಮಿಕ ಒಕ್ಕೂಟಕ್ಕೆ ಮಾಹೆಯಾನ ಕೊಡುತ್ತಿರುವ ೧೩,೦೦೦ ರೂ.ಗಳು ಅದರ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಪದಾಧಿಕಾರಿಗಳಿಗೆ ಹಂಚಿಕೆಯಾಗುತ್ತದೆಯೆ? ಹಾಗಿದ್ದಲ್ಲಿ ಯಾವ ಅನುಪಾತದಲ್ಲಿ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಈ ಅನುದಾನದ ಹಣ ಹೇಗೆ ಬಳಕೆಯಾಗುತ್ತದೆ ಎಂಬುದನ್ನು ತಿಳಿಯಲು ಸನ್ಮಾನ್ಯ ಸದಸ್ಯರು ಒಕ್ಕೂಟದ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿದ್ದಾರೆಯೇ? ಇಲ್ಲದಿದ್ದಲ್ಲಿ ಏಕಿಲ್ಲ? ಪರಿಶೀಲಿಸಿದ್ದಲ್ಲಿ, ಮಾಸಿಕವಾಗಿ ಕೊಡುತ್ತಿದ್ದ ೧೩,೦೦೦ ರೂ.ಗಳ ಸಹಾಯಧನ ಕೊಡಲಾರಂಭಿಸಿದ ದಿನದಿಂದ ಇಂದಿನವರೆಗಿನ ಲೆಕ್ಕಪರಿಶೋಧನಾ ವರದಿಗಳನ್ನು ಸದನದ ಮುಂದಿರಿಸುವ ಯೋಚನೆ ಇದೆಯೆ?

ಇ) ಫಿಲಿಡೆಲ್ಫಿಯದಲ್ಲಿ ಜರುಗಿದ ಅಂತರರಾಷ್ಟ್ರೀಯ ಕಾರ್ಮಿಕ ಸಮಾವೇಶದಲ್ಲಿ ಭಾರತ ಕಾರ್ಮಿಕ ಒಕ್ಕೂಟ ಮತ್ತು ಅಖಿಲ ಭಾರತ ವಾಣಿಜ್ಯ ಕೂಟ ಕಾಂಗ್ರೆಸ್‌ಗಳ ತೌಲನಿಕ ಪ್ರಾತಿನಿಧಿಕ ಸ್ವರೂಪದ ಬಗ್ಗೆ ಪ್ರಸ್ತಾಪವಾಗಿ ಅಲ್ಲಿ ಈ ಅನುದಾನದ ಪ್ರಶ್ನೆ ಎದ್ದದ್ದು ನಿಜವೆ? ಮತ್ತು ಆ ಸಮಾವೇಶದ ನಿರ್ಣಯಗಳೇನು? ಸಹಾಯಧನವನ್ನು ಸ್ವೀಕರಿಸಿದ ಭಾರತೀಯ ಕಾರ್ಮಿಕ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೩, ೪–೪–೧೯೪೪ ; ಪು. ೧೯೨೫.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೪, ೨–೧೧–೧೯೪೪ ; ಪು. ೧೧೩–೨೩.

ಸಂಘಕ್ಕೆ ಮುಂದಿನ ಅಂತರರಾಷ್ಟ್ರೀಯ ಕಾರ್ಮಿಕ ಸಮಾವೇಶಗಳಲ್ಲಿ ಭಾಗವಹಿಸುವ ಪ್ರಾತಿನಿಧ್ಯವನ್ನು ಕೊಡುವ ಬಗ್ಗೆ ಆದ ತೀರ್ಮಾನವೇನು?

ಈ) ಭಾರತ ಕಾರ್ಮಿಕ ಒಕ್ಕೂಟಕ್ಕೆ ಕೊಡಲಾದ ಸಂಪೂರ್ಣ ಅನುದಾನದ ಮೊತ್ತವು ಯಾವ ಉದ್ದೇಶಕ್ಕಾಗಿ ಕೊಡಲಾಗಿತ್ತೋ ಅದೇ ಉದ್ದೇಶಕ್ಕಾಗಿ ಖರ್ಚಾಗಿದೆಯೆ? ಹಾಗಿದ್ದಲ್ಲಿ, ಒಕ್ಕೂಟದ ಕಾರ್ಯಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ಸನ್ಮಾನ್ಯ ಸದಸ್ಯರು ಕೊಡುವರೆ? ಅನುದಾನದ ಸ್ವಲ್ಪ ಭಾಗವಾದರೂ ಕೊಟ್ಟ ಉದ್ದೇಶಕ್ಕೆ ವ್ಯಯವಾಗದೆ ಉಳಿದಿದ್ದರೆ, ಅದನ್ನು ವಾಪಸ್ಸು ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವರೆ? ಇಲ್ಲದಿದ್ದಲ್ಲಿ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಅದನ್ನು ಒಂದು ಸಂಸ್ಥೆಯಾಗಿ ಪರಿಗಣಿಸಿ, ಸಹಾಯಧನವನ್ನು ನೀಡಲಾಗಿದೆ. ಹಣವನ್ನು ವಿವಿಧ ಪದಾಧಿಕಾರಿಗಳಿಗೆ ಹಂಚಿಲ್ಲ.

ಆ) ಮತ್ತು (ಈ) ಪ್ರಥಮ ಭಾಗ: ಒಕ್ಕೂಟದ ಲೆಕ್ಕಪತ್ರಗಳ ಬಗ್ಗೆ ಸರ್ಕಾರ ಚಿಂತೆಮಾಡುವುದಿಲ್ಲ. ಆದರೆ ಸರ್ಕಾರದ ಸಹಾಯಧನವು ಒಕ್ಕೂಟದ ವತಿಯಿಂದ ಹೇಗೆ ಬಳಸಲಾಯಿತು ಎಂಬುದು ಮಾತ್ರ ಸರ್ಕಾರದ ಕಾಳಜಿಯಾಗಿರುತ್ತದೆ. ಆರಂಭದ ದಿನಗಳಿಗೆ ಸಂಬಂಧಿಸಿದಂತೆ ಪೂರ್ಣ ಮತ್ತು ನಿಯತ ಲೆಕ್ಕಪತ್ರಗಳು ಅಲಭ್ಯವಾಗಿದ್ದರೂ, ಸಹಾಯಧನ ಯಾವ ಉದ್ದೇಶಕ್ಕಾಗಿ ಮಂಜೂರಾಗಿದೆಯೋ ಆ ಉದ್ದೇಶ ಸಫಲವಾಗಿದೆ. ೧–೬–೯೪೪ರಿಂದ ಅರ್ಹ ಲೆಕ್ಕ ಪರಿಶೋಧಕರಿಂದ ಪರಿಶೋಧನೆಗೆ ಈ ಲೆಕ್ಕಪತ್ರಗಳು ಲಭ್ಯವಿದೆ.

ಇ) ಅಖಿಲ ಭಾರತ ವಾಣಿಜ್ಯ ಸಂಘದ ಕಾಂಗ್ರೆಸ್ ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿಗೆ, ಭಾರತೀಯ ನಿಯೋಗದ ಕಾರ್ಮಿಕ ಪ್ರತಿನಿಧಿಗಳ ಬಗ್ಗೆ ಕೊಟ್ಟ ಪರಿಚಯ ಪತ್ರದಲ್ಲಿ ಈ ಸಹಾಯಧನದ ಪ್ರಸ್ತಾಪವನ್ನು ಆಕ್ಷೇಪಣೆ ಎಂಬಂತೆ ಮಾಡಿದೆ. ಪರಿಚಯ ಪತ್ರದ ಸಮಿತಿಯು ಸಮಾವೇಶದಲ್ಲಿ ಅಂಗೀಕೃತವಾದ ತನ್ನ ವರದಿಯಲ್ಲಿ ಭಾರತದ ಕಾರ್ಮಿಕ ಪ್ರತಿನಿಧಿಗಳನ್ನೂ, ಅವರ ಸಲಹೆಗಾರರನ್ನೂ ಸಮಾವೇಶದ ಆ ಅಧಿವೇಶನದಲ್ಲಿ ಕ್ರಮಬದ್ಧವಾಗಿ ಸೇರಿಸಿಕೊಳ್ಳುವಂತೆ ತಿಳಿಸಿದೆ. ಸಮಿತಿಯ ವರದಿಯು ಸಹಾಯಧನದ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಆದರೆ ಈ ಕೆಳಕಂಡಂತೆ ಹೇಳಿದೆ.

ಮುಂದಿನ ಸಮಾವೇಶದ ಅಧಿವೇಶನಗಳಲ್ಲಿ ಈ ಎರಡು ಸಂಸ್ಥೆಗಳು (ಭಾರತ ಕಾರ್ಮಿಕ ಒಕ್ಕೂಟ, ಅಖಿಲ ಭಾರತ ವಾಣಿಜ್ಯ ಕೂಟ ಕಾಂಗ್ರೆಸ್) ಪ್ರಾತಿನಿಧಿಕವಾಗಿ ಭಾಗವಹಿಸಲು ಸಾಧ್ಯವಾಗುವಂತಹ ಅವಕಾಶಗಳನ್ನು ಕಲ್ಪಿಸಿಕೊಡುವ ಪ್ರಯತ್ನವನ್ನು ಭಾರತ ಸರ್ಕಾರವು ಮುಂದುವರಿಸುತ್ತದೆ ಎಂಬ ವಿಚಾರದಲ್ಲಿ ಈ ಸಮಿತಿಗೆ ಯಾವ ಸಂದೇಹವೂ ಇಲ್ಲ. ಮತ್ತೆ ಈ ಎರಡು ಸಂಸ್ಥೆಗಳು ತಮ್ಮಲ್ಲಿ ಒಂದು ಒಪ್ಪಂದಕ್ಕೆ ಬಂದು, ಅಂತಾರಾಷ್ಟ್ರೀಯ ಕಾರ್ಮಿಕ ವ್ಯವಸ್ಥೆಯಲ್ಲಿ ಭಾರತದ ಕಾರ್ಮಿಕ ಸಂಘಗಳ ಚಳುವಳಿಯ ಎಲ್ಲ ವರ್ಗಗಳ ಪ್ರಾತಿನಿಧಿಕ ಸ್ವರೂಪದ ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಪಡೆದುಕೊಳ್ಳಲು ಸಾಧ್ಯವಾಗಬಹುದೆಂದು ಸಹ ಭಾವಿಸಲು ಮುಂದಾಗುತ್ತದೆ. ಒಂದು ಪಕ್ಷ ಅಂಥ ಒಪ್ಪಂದ ಸಾಧ್ಯವಾಗದಿದ್ದಲ್ಲಿ, ಸಮಾವೇಶದ ಮುಂದಿನ ಅಧಿವೇಶನಕ್ಕೆ, ಭಾರತ ಕಾರ್ಮಿಕ ನಿಯೋಗವನ್ನು, ಅಖಿಲ ಭಾರತ ವಾಣಿಜ್ಯ ಸಂಘ ಕಾಂಗ್ರೆಸ್ಸಿನ ಒಪ್ಪಿಗೆಯೊಡನೆ ನೇಮಿಸಲಾಗುವುದು ಎಂದು ಸಮಿತಿಯು ಭಾವಿಸುತ್ತದೆ.

ಈ) (ಎರಡನೆಯ ಭಾಗ) : ಮಾಸಿಕ ಅನುದಾನವನ್ನು ಮುದ್ರಿತ ಸಾಹಿತ್ಯದ ಪ್ರಸಾರಕ್ಕಾಗಿ, ಮೌಖಿಕ

ಪ್ರಚಾರಕ್ಕಾಗಿ, ದೃಶ್ಯ ಮಾಧ್ಯಮದ ಮೂಲಕ ಪ್ರಚಾರಕ್ಕಾಗಿ, ದೃಢೀಕರಿಸಿದ ವಿದ್ಯಮಾನಗಳ ಪ್ರಸಾರಕ್ಕಾಗಿ ಬಳಸಲಾಗಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಅನುದಾನವನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗುತ್ತಿದೆ ಎಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದಕ್ಕೆ ಉತ್ತರವನ್ನು ನಾನು ಕೊಟ್ಟ ಉತ್ತರ ಭಾಗ (ಈ) ಎರಡನೆಯ ಭಾಗದಲ್ಲಿ ಕಾಣಬಹುದು. ಅದರಲ್ಲಿ, ಅನುದಾನವು, ಮುದ್ರಿತ ಸಾಹಿತ್ಯದ ಪ್ರಸಾರ, ಮೌಖಿಕ ಪ್ರಚಾರ, ದೃಶ್ಯರೂಪಿ ಪ್ರಚಾರ ಮತ್ತು ಯುದ್ಧದ ಬಗ್ಗೆ ದೃಢೀಕರಿಸಿದ ಸಂಗತಿಗಳ ಪ್ರಸಾರಗಳಿಗಾಗಿ ಬಳಸಲಾಗಿದೆ ಎಂದು ತಿಳಿಸಿದ್ದೇನೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಆಯಾ ಉದ್ದೇಶಗಳಿಗಾಗಿಯೇ ಸರ್ಕಾರದ ಅನುದಾನದ ಹಣ ಬಳಕೆಯಾಗಿದೆ ಎಂಬ ಬಗ್ಗೆ ಸರ್ಕಾರಕ್ಕೆ ಮನವರಿಕೆ ಆಗಿದೆಯೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸರ್ಕಾರಕ್ಕೆ ಸಮಾಧಾನವಾಗಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಈ ಅನುದಾನದ ಭಾಗಾಂಶವನ್ನು ಕಾಂಗ್ರೆಸ್ಸಿನ ವಿರುದ್ಧದ ಪ್ರಚಾರಕ್ಕೆ ಬಳಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರಕ್ಕೆ ಅದರ ಬಗ್ಗೆ ಮಾಹಿತಿ ಇಲ್ಲ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಸರ್ಕಾರವು ಈ ಬಗ್ಗೆ ತನಿಖೆ ಮಾಡುವುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದ್ದೇನೆ. ೧೯೪೪ನೆಯ ಜೂನ್ ೧ನೆಯ ದಿನಾಂಕದಿಂದ ಅರ್ಹ ಲೆಕ್ಕಶಾಸ್ತ್ರಜ್ಞನಿಂದ ಒಕ್ಕೂಟದ ಕಛೇರಿಯಲ್ಲಿ ಲೆಕ್ಕಪತ್ರವು ಸಿದ್ಧವಾಗುತ್ತಿದೆ. ಅವು ಮಾಮೂಲು ರೀತಿಯಲ್ಲಿಯೇ ಲೆಕ್ಕಪರಿಶೋಧನೆಗೆ ಲಭ್ಯವಿದೆ.

**ಸರ್ದಾರ್ ಮಂಗಲ್‌ಸಿಂಗ್ :** ಈ ಅನುದಾನ ಪಾವತಿ ಮಾಸಿಕವಾಗಿಯೋ, ವಾರ್ಷಿಕವಾಗಿಯೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಬಗ್ಗೆ ನನ್ನ ಬಳಿ ಸದ್ಯಕ್ಕೆ ಮಾಹಿತಿ ಇಲ್ಲ ; ಬಹುಶಃ ಮಾಸಿಕವಾಗಿಯೇ ಇರಬಹುದು.

**ಸರ್ದಾರ್ ಮಂಗಲ್‌ಸಿಂಗ್ :** ಅನುದಾನವನ್ನು ಕಾರ್ಯದರ್ಶಿಗೆ ಕೊಡಲಾಗುವುದೋ ಅಥವಾ ಅಧ್ಯಕ್ಷರಿಗೋ?

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ಸಂಬಂಧಿಸಿದ ಸಂಸ್ಥೆಯ ಜವಾಬ್ದಾರಿಯುತ ಅಧಿಕಾರಿಗೆ.

**ಶ್ರೀ ಟಿ. ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಈ ಪ್ರಚಾರದ ವಿಷಯವೇನು ? ಪ್ರಸಾರ ಮಾಡಲಾದ ಪ್ರಕಟನೆಗಳ ವಿಷಯವೇನು ?

**ಗೌರಾವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದು ಯುದ್ಧಪರ ಪ್ರಚಾರ ಮತ್ತು ಯುದ್ಧಪರ ಸಾಹಿತ್ಯ .

**ಶ್ರೀ ಬದ್ರಿ ದತ್ತ ಪಾಂಡೆ :** ಸನ್ಮಾನ್ಯ ಸದಸ್ಯರು ಪರಿಶೋಧಿತ ಲೆಕ್ಕಪತ್ರಗಳನ್ನು ಸಭೆಯ ಮುಂದಿರಿಸುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಲೆಕ್ಕಪರಿಶೋಧನೆಯ ಅನಂತರ ಅದನ್ನು ಸದನದ ಮುಂದಿರಿಸಲಾಗುವುದು : ಆಗ ಅದು ಮಾಮೂಲು ರೀತಿಯಲ್ಲಿ ಸದಸ್ಯರಿಗೆ ದೊರೆಯುತ್ತದೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಯಾವ ಕಾಲಾವಧಿಗೆ ಲೆಕಪತ್ರವಿಲ್ಲ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆರಂಭದ ಕಾಲಾವಧಿಗೆ, ಖಚಿತ ಲೆಕ್ಕವಿವರವಿಲ್ಲ .

ಆದರೆ ಈಗ ಲೆಕ್ಕಪರಿಶೋಧನಾ ಇಲಾಖೆಯ ಒಬ್ಬರು ಅಧಿಕಾರಿಯಿಂದಲೇ ಲೆಕ್ಕಪತ್ರಗಳನ್ನು ಇರಿಸುವ ವ್ಯವಸ್ಥೆಯಾಗಿದೆ.

**ಶ್ರೀ ಲಾಲ್‌ಚಂದ್ ನವಾಲ್‌ರಾಯ್ :** ಪ್ರಾರಂಭದ ದಿನಗಳಲ್ಲಿ ಲೆಕ್ಕಪತ್ರ ಇರಿಸದೆ ಇರಲು ಯಾರು ಹೊಣೆ? ಸನ್ಮಾನ್ಯ ಸದಸ್ಯರೋ? ಅಥವಾ ಸರ್ಕಾರವೋ? ಅಥವಾ ಇಬ್ಬರದೂ ಹೊಣೆಯೋ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಕೆಲವು ಕಾಲದವರೆಗೆ ಲೆಕ್ಕಪತ್ರಗಳನ್ನು ಇರಿಸುತ್ತಿರಲಿಲ್ಲವೆಂದು ಮಾನ್ಯ ಸದಸ್ಯರೇ ತಿಳಿಸಿದ್ದಾರೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಲೆಕ್ಕಪತ್ರಗಳನ್ನು ಇರಿಸಿರಲಿಲ್ಲವೆಂದು ಹೇಳಿಲ್ಲ. ನಾನು ಹೇಳಿದ್ದು ಏನೆಂದರೆ, ಪರಿಪೂರ್ಣ ಮತ್ತು ನಿಯತ ಲೆಕ್ಕಪತ್ರಗಳ ವಿವರ ಪ್ರಾರಂಭದ ಅವಧಿಗೆ ದೊರೆಯದಿದ್ದರೂ, ಅನುದಾನವು ಯಾವ ಉದ್ದೇಶಕ್ಕಾಗಿ ಕೊಡಲಾಗಿತ್ತೊ ಅದಕ್ಕಾಗಿಯೇ ಖರ್ಚಾಗಿದೆಯೆಂದು ಸರ್ಕಾರಕ್ಕೆ ಮನವರಿಕೆಯಾಗಿದೆ ಎಂದು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅನುದಾನವು ಸಮರ್ಪಕ ವಿನಿಯೋಗವಾಗಿರುವುದರ ಬಗ್ಗೆ ಸರ್ಕಾರಕ್ಕೆ ಸಮಾಧಾನವಾಗಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದಕ್ಕೆ ವ್ಯತಿರಿಕ್ತವಾಗಿ ಭಾವಿಸಲು ಯಾವ ಕಾರಣವೂ ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಇದು ಸನ್ಮಾನ್ಯ ಸದಸ್ಯರು ಅದಕ್ಕೆ ವಿರುದ್ಧವಾಗಿ ಭಾವಿಸುವ ಪ್ರಶ್ನೆ ಅಲ್ಲ.

**ಮಾನ್ಯ ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) ಮಾನ್ಯ ಸದಸ್ಯರು ವಾದ ಮಾಡುತ್ತಿದ್ದಾರೆ!

**ಶ್ರೀ ಲಾಲ್ ಚಂದ್ ನವಲ್‌ರಾಯ್ :** ಅನುದಾನವು ಸಮರ್ಪಕವಾಗಿಯೇ ವಿನಿಯೋಗವಾಗಿದೆ ಎಂದು ಸನ್ಮಾನ್ಯ ಸದಸ್ಯರು ಭಾವಿಸಲು ಆಧಾರವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದಕ್ಕೆ ವಿರುದ್ಧವಾಗಿ ಭಾವಿಸಲು ನನಗೆ ಯಾವ ಕಾರಣವೂ ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ನನ್ನ ಪ್ರಶ್ನೆಯೇ ಬೇರೆಯಾದದ್ದು. ಸನ್ಮಾನ್ಯ ಸದಸ್ಯರು ಒಂದು ರೀತಿಯಲ್ಲೋ ಮತ್ತೊಂದು ರೀತಿಯಲ್ಲೋ ಭಾವಿಸಲು ಹೇಗೆ ಸಾಧ್ಯವಾಗುತ್ತದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅನುದಾನವು ನಿಯತವಾಗಿ ವಿನಿಯೋಗವಾಗಿಲ್ಲವೆಂದು ಭಾವಿಸಲು ನನಗೆ ಕಾರಣಗಳಿಲ್ಲ.

**ಸರ್ದಾರ್ ಸಂತ್‌ಸಿಂಗ್ :** ಈ ಬಗ್ಗೆ ಸನ್ಮಾನ್ಯ ಸದಸ್ಯರಿಗೆ ಸಮಾಧಾನವಾದರೆ ಸಾಕೋ? ಹಣದ ಸದುಪಯೋಗದ ಬಗ್ಗೆ ಸಾರ್ವಜನಿಕರಿಗೂ ಸಮಾಧಾನವಾಗಬೇಕೆಂಬ ಅಂಶವನ್ನೂ ಲಕ್ಷಿಸಬೇಕೋ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸಾರ್ವಜನಿಕರನ್ನು ಹೇಗೆ ಸಮಾಧಾನಪಡಿಸುವುದೋ ನನಗೆ ಗೊತ್ತಿಲ್ಲ. ಆದರೆ ಧನ ಕೊಟ್ಟ ಸರ್ಕಾರಕ್ಕಂತೂ ಆ ಬಗ್ಗೆ ಸಮಾಧಾನವಾಗಿದೆ.

**ಸರ್ದಾರ್ ಸಂತ್‌ಸಿಂಗ್ :** ಸರ್ಕಾರ ತೆಗೆದುಕೊಡುತ್ತಿರುವ ಹಣ ತೆರಿಗೆದಾರನ ಹಣ. ಆ ಹಣವು ನ್ಯಾಯಬದ್ಧವಾಗಿ ಖರ್ಚಾಗಿದೆಯೆಂದು ಸರ್ಕಾರ ಅವರನ್ನು ಹೇಗೆ ಸಮಾಧಾನಪಡಿಸುತ್ತದೆ?

(ಉತ್ತರವಿಲ್ಲ)

**ಡಾ॥ ಸರ್ ಝಿಯಾವುದೀನ್ ಅಹಮ್ಮದ್ :** ಲೆಕ್ಕಪತ್ರಗಳ ಸಮರ್ಪಕತೆಯ ಬಗ್ಗೆ ಅರ್ಥ ಇಲಾಖೆಯ ಸದಸ್ಯರಿಗೆ ಸಮಾಧಾನವಾಗಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಯನ್ನು ಸನ್ಮಾನ್ಯ ಅರ್ಥ ಸದಸ್ಯರನ್ನೇ ಕೇಳಬಹುದು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈ ಕಾರ್ಮಿಕ ಒಕ್ಕೂಟದ ಅಧ್ಯಕ್ಷರಾರು? ಕಾರ್ಯದರ್ಶಿ ಯಾರು? ಅವರಿಗೆ ಈ ನಿಧಿಯಿಂದ ಯಾವುದೇ ವೇತನ ಅಥವಾ ಹಣ ಕೊಟ್ಟಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ಪ್ರಶ್ನೆ ಉದ್ಭವಿಸದು. ಸನ್ಮಾನ್ಯ ಸದಸ್ಯರು ನೋಟೀಸ್ ಕೊಟ್ಟರೆ ನಾನು ಅವರಿಗಾಗಿ ಮಾಹಿತಿ ಸಂಗ್ರಹಿಸುವೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ನಾನು ಒಂದು ಕ್ರಿಯೋಲೋಪವನ್ನು ಎತ್ತಬಹುದೆ? ಸರ್ ಝಿಯಾವುದೀನ್ ಅಹಮ್ಮದ್‌ರು ಅರ್ಥ ಸದಸ್ಯರಿಗೆ ಸಮಾಧಾನವಾಗಿಯೇ ಎಂದು ಕೇಳಿದಾಗ, ಕಾರ್ಮಿಕ ಸದಸ್ಯರು ಈ ಪ್ರಶ್ನೆಯನ್ನು ಅರ್ಥ ಸದಸ್ಯರನ್ನೇ ಕೇಳಬೇಕೆಂದು ಉತ್ತರಿಸಿದ್ದಾರೆ. ಹೊಣೆ ವಹಿಸಿರುವ ಸದಸ್ಯರು ಅರ್ಥ ಸಚಿವರಿಗೆ ಈ ಬಗ್ಗೆ ತೃಪ್ತಿಯಾಗಿದೆಯೆ ಇಲ್ಲವೇ ಎಂಬುದನ್ನು ತಿಳಿದುಕೊಂಡಿರಬೇಕು. ಅದಕ್ಕೆ ಅವರು ಉತ್ತರಿಸಬೇಕು.

**ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಅವರು ಉತ್ತರ ಕೊಟ್ಟಿದ್ದಾರೆ. ನಾನು ಹೀಗೆಯೇ ಉತ್ತರಿಸಬೇಕೆಂದು ಮಾನ್ಯ ಕಾರ್ಮಿಕ ಸದಸ್ಯರಿಗೆ ಹೇಳಲಾರೆ.

## ೨೧೬
## ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಕೊಡುಗೆ *

**೩೨. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅ) ೧೯೪೪ನೆಯ ಏಪ್ರಿಲ್ ೪ನೆಯ ದಿನಾಂಕದ ನನ್ನ ತಾರಾಂಕಿತ ಪ್ರಶ್ನಾಂಕ ೭೭೬ಕ್ಕೆ ಕೊಟ್ಟ ಉತ್ತರದ ಸಂಬಂಧದ ಪೂರಕ ವಿವರ : ಭಾರತೀಯ ಕಾರ್ಮಿಕ ಒಕ್ಕೂಟದ ಅಧ್ಯಕ್ಷರು ಕಳೆದ ಡಿಸೆಂಬರ್ ಅಂತ್ಯದಲ್ಲಿ, ಬಾಂಬೆಯಲ್ಲಿ ಜರುಗಿದ ಒಕ್ಕೂಟದ ಪ್ರಥಮ ವಾರ್ಷಿಕ ಅಧಿವೇಶನದಲ್ಲಿ, ಸರ್ಕಾರದಿಂದ ಒಕ್ಕೂಟವು ಮಾಹೆಯಾನ ೧೩,೦೦೦ ರೂ.ಗಳನ್ನು ಪಡೆಯುತ್ತಿದೆಯೆಂಬುದು "ಅತ್ಯಂತ ಕಪ್ಪು ಸುಳ್ಳು" ಎಂಬುದಾಗಿ ಹೇಳಿಕೆ ಕೊಟ್ಟಿರುವುದು ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಭಾರತ ಕಾರ್ಮಿಕ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಮ್ನಾದಾಸ್ ಮೆಹತ ಅವರು ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಸಮಾವೇಶಕ್ಕಾಗಿ ಫಿಲಡೆಲ್ಫಿಯಾಕ್ಕೆ ಹೊರಡುವ ಮುನ್ನ ೧೩,೦೦೦ ರೂ.ಗಳ ಸರ್ಕಾರದ ಸಹಾಯಧನವನ್ನು ಒಕ್ಕೂಟ ಪಡೆಯುತ್ತಿದೆ ಎಂಬುದನ್ನು ನಿರಾಕರಿಸಿರುವುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರಬಹುದೆ?

ಇ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಿನಾಂಕ ೪–೪–೧೯೪೪ರಂದು, ಸದನದಲ್ಲಿ, ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ೧೩,೦೦೦ ರೂ.ಗಳ ಮಾಸಿಕ ಸಹಾಯಧನ ಕೊಡುತ್ತಿರುವುದನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೨–೧೧–೧೯೪೪ ; ಪು. ೧೧೧.

ಖಚಿತಪಡಿಸಿದ ಮೇಲೆ ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ಮೇಲಿನ ಹೇಳಿಕೆ ಬಂದಿದೆ ಎಂಬುದನ್ನು ಸನ್ಮಾನ್ಯ ಸದಸ್ಯರು ಗಮನಿಸುವರೆ?

ಈ) ೧೩,೦೦೦ ರೂ.ಗಳ ಸಹಾಯಧನವನ್ನು ರಹಸ್ಯವಾಗಿ ಶ್ರೀ ಎಂ.ಎನ್. ರಾಯ್ ಅವರಿಗೆ ಪಾವತಿಮಾಡಲಾಗುತ್ತಿದೆ ಎಂಬ ಅಂಶ ನಿಜವೆ? ನಿಜವಿದ್ದಲ್ಲಿ, ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಕೊಡದೆ, ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಈ ಹಣವನ್ನು ಏಕೆ ಕೊಡಲಾಗುತ್ತಿದೆ.

ಉ) ಅಖಿಲ ಭಾರತ ಕಾರ್ಮಿಕ ಒಕ್ಕೂಟವು ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಕಾಲಾವಧಿಯಲ್ಲಿ ಅನುದಾನದ ಉದ್ದೇಶ, ಅಂದರೆ ಕಾರ್ಮಿಕರ ನೈತಿಕ ಸ್ಥೈರ್ಯವನ್ನು ಕಾಪಾಡಲು ಸರ್ಕಾರಕ್ಕೆ ನೆರವಾಗುವುದರಲ್ಲಿ ಅದು ಕೈಗೊಂಡ ಕ್ರಮಗಳ ಸಂಕ್ಷಿಪ್ತ ಹೇಳಿಕೆಯನ್ನು ಮಾನ್ಯ ಸದಸ್ಯರು ಕೊಡುವರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ), ಆ) ಮತ್ತು ಇ) ಸಂಬಂಧಿಸಿದ ಹೇಳಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗಿದೆ.

ಪ್ರಾರಂಭದಿಂದಲೂ ಇದರ ವ್ಯವಸ್ಥೆ ಭಾರತೀಯ ಕಾರ್ಮಿಕ ಒಕ್ಕೂಟದೊಡನೆಯೆ ವಿನಾ ಯಾವ ಒಬ್ಬ ವ್ಯಕ್ತಿಯೊಡನಲ್ಲ. ಶ್ರೀ ಮೆಹತ ಅವರ ಹೇಳಿಕೆ ಬಗ್ಗೆ ಒಕ್ಕೂಟದ ಗಮನ ಸೆಳೆಯಲಾಗಿದೆ. ಅದಕ್ಕೆ ಉತ್ತರವಾಗಿ ಒಕ್ಕೂಟವು ಈ ಏರ್ಪಾಡು ಒಕ್ಕೂಟದೊಡನೆ ಎಂಬುದನ್ನು ದೃಢಪಡಿಸಿದೆ.

ಈ) ಈ ಇಂದಿನ ಪ್ರಶ್ನೆಗೆ ಈಗಾಗಲೇ ಉತ್ತರಿಸಿರುವಂತೆ, ಅನುದಾನವು ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಬಹಿರಂಗವಾಗಿಯೇ ಕೊಡಲಾಗಿದೆ. ವೈಯಕ್ತಿಕವಾಗಿ ಶ್ರೀ ಎಂ.ಎನ್. ರಾಯ್ ಅವರಿಗಲ್ಲ.

ಉ) ಹಿಂದಿನ ಪ್ರಶ್ನೆಯ ಎರಡನೆಯ ಭಾಗದ (ಈ) ಭಾಗಕ್ಕೆ ನಾನು ಕೊಟ್ಟ ಉತ್ತರದ ಕಡೆಗೆ ಸನ್ಮಾನ್ಯ ಸದಸ್ಯರ ಅವಗಾಹನೆಯನ್ನು ಆಹ್ವಾನಿಸುತ್ತೇನೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಸನ್ಮಾನ್ಯ ಸದಸ್ಯರು ತಮ್ಮ ಉತ್ತರದಲ್ಲಿ ಹಣ ಕೊಡಲಾಗಿದೆ ಎಂದರೆ, ಶ್ರೀ ಜುಮ್ಮಾನದಾಸ್ ಮೆಹತ, ಫಿಲಿಡೆಲ್ಫಿಯಾಕ್ಕೆ ಹೋಗುವ ಮುನ್ನಿನ ಹೇಳಿಕೆಯಲ್ಲಿ ಹಣ ಪಡೆದುಕೊಂಡಿಲ್ಲವೆಂದು ಹೇಳಿದ್ದಾರೆ. ಈ ಅಸಾಂಗತ್ಯವನ್ನು ಮಾನ್ಯ ಸದಸ್ಯರು ಹೇಗೆ ವಿವರಿಸುತ್ತಾರೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಈ ಎರಡು ಹೇಳಿಕೆಗಳನ್ನು ಹೊಂದಿಸುವುದು ನನ್ನ ಕೆಲಸವಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈಗಾಗಲೇ ಹೇಳಿಕೆ ಕೊಟ್ಟಿರುವುದರಿಂದ, ಸನ್ಮಾನ್ಯ ಸದಸ್ಯರ ಹೇಳಿಕೆ ಸರಿಯೋ ತಪ್ಪೋ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ನಾನು ಉತ್ತರಿಸಲಾರೆ.

**ಸರ್ದಾರ್ ಸಂತ್‌ಸಿಂಗ್ :** ಯಾರು 'ಅತ್ಯಂತ ಕಪ್ಪು ಸುಳ್ಳು' ಹೇಳುತ್ತಿರುವುದು, ಒಕ್ಕೂಟವೋ ಅಥವಾ ಭಾರತ ಸರ್ಕಾರವೋ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ನನ್ನ ಸನ್ಮಾನ್ಯ ಸ್ನೇಹಿತರು ತಮಗೆ ಇಷ್ಟ ಬಂದ ನಿರ್ಣಯವನ್ನು ಮಾಡಿಕೊಳ್ಳಬಹುದು.

# ೨೧೭
# ನವದೆಹಲಿಯಲ್ಲಿ ಕಟ್ಟಿದ ತಾತ್ಕಾಲಿಕ ಕಟ್ಟಡಗಳನ್ನು ಯುದ್ಧಾನಂತರ ಕೆಡವುವುದು *

೫೦. **ಸರ್ ಎಫ್.ಇ. ಜೇಮ್ಸ್ :** ಅ) ಸನ್ಮಾನ್ಯ ಸದಸ್ಯರಿಗೆ ಮುಂದಿನ ಮಾಹಿತಿ ಇದ್ದರೆ ತಿಳಿಸುವರೆ?

(i) ನವದೆಹಲಿ ಪುರಸಭಾಸಮಿತಿಯು ೧೯೪೩ನೆಯ ಅಕ್ಟೋಬರ್ ೧೬ರಂದು ಲಾರ್ಡ್ ಲಿನ್‌ಲಿತ್‌ಗೋ ಅವರಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿದ್ದಾರೆ. "ಅನೇಕ ತಾತ್ಕಾಲಿಕ ಕಟ್ಟಡಗಳನ್ನು ಯುದ್ಧಾನತರ ಬೀಳಿಸುವ ಬಗ್ಗೆ ನೀವು ಆತಂಕವ್ಯಕ್ತಪಡಿಸಿದ್ದೀರಿ. ಆದರೆ ಅವು ನಗರ ಸೌಂದರ್ಯಕ್ಕೆ ಧಕ್ಕೆಯೊಡ್ಡಿವೆ ಎಂಬುದನ್ನು ಒಪ್ಪಿಕೊಳ್ಳಬೇಕು. ನಾನು ವಿಧಾನಸಭೆಗಳಲ್ಲಿ ಮಾಡಿದ ಇತ್ತೀಚಿನ ಭಾಷಣದಲ್ಲಿ ಪ್ರಕಟಿಸಿದಂತೆ ಆದಷ್ಟು ಜಾಗ್ರತೆ ಈ ಕಟ್ಟಡಗಳನ್ನು ನೆಲಸಮಮಾಡುವುದು ಸರ್ಕಾರದ ಖಚಿತ ಧೋರಣೆಯೇ ಆಗಿದೆ.

ಕಛೇರಿಗಳಿಗಾಗಿ, ವಸತಿ ಇತ್ಯಾದಿಗಳಿಗಾಗಿ, ಸಚಿವಾಲಯದ ಆಜುಬಾಜಿನಲ್ಲಿ, ಇರ್ವಿನ್ ಕ್ರೀಡಾಂಗಣದಲ್ಲಿ, ವಿಲಿಂಗ್‌ಡನ್ ಅಕ್ರೋಡ್ರೋಮಿನ ಹತ್ತಿರದಲ್ಲಿ ಕನೌಟ್ ಸರ್ಕಸ್ಸಿನ ಅಕ್ಕಪಕ್ಕ ಮತ್ತು ವಿವಿಧ ವಿಭಾಗಗಳಲ್ಲಿ ನಿರ್ಮಿಸಿದ ಎಲ್ಲ ತಾತ್ಕಾಲಿಕ ಕಟ್ಟಡಗಳನ್ನು, ನವದೆಹಲಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಬೇರೆ ಉದ್ದೇಶಕ್ಕಾಗಿ ಹಂಚಿಕೊಟ್ಟಿರುವುದರಿಂದ – ಪ್ರತಿಕೂಲ ಪರಿಸ್ಥಿತಿ ನಿವಾರಣೆಯಾದ ಕೂಡಲೇ ಆದಷ್ಟು ಜಾಗ್ರತೆಯಾಗಿ ತೆಗೆದುಹಾಕಲಾಗುವುದು,"

(ii) ೧೯೪೩ ಅಕ್ಟೋಬರ್ ೩೦ರಂದು ನವದೆಹಲಿ ಪುರಸಭಾ ಸಮಿತಿಯು ನಿವೇದಿಸಿದ ಸ್ವಾಗತ ಭಾಷಣಕ್ಕೆ ಘನತೆವೆತ್ತ ಲಾರ್ಡ್ ವೇವೆಲ್ ಅವರು ಉತ್ತರವಾಗಿ ಈ ಹೇಳಿಕೆಯನ್ನು ಕೊಟ್ಟರು :

"ಯುದ್ಧಾನಂತರ ತಾತ್ಕಾಲಿಕ ಕಟ್ಟಡಗಳನ್ನು ತೆಗೆದುಹಾಕುವ ವಿಚಾರದಲ್ಲಿ ನಾನೂ, ಘನತೆವೆತ್ತ ಶ್ರೀಮತಿಯವರು ನಿಮ್ಮೊಡನೆ ಏಕಾಭಿಪ್ರಾಯವುಳ್ಳವರಾಗಿದ್ದೇವೆ. ಭಾರತ ಸರ್ಕಾರದ ಪರವಾಗಿ ಲಾರ್ಡ್ ಲಿನ್‌ಲಿತ್‌ಗೋ ಅವರು ಕೊಟ್ಟ ಆಶ್ವಾಸನೆಯನ್ನು ನೀವು ನೆನಪಿಸಿಕೊಳ್ಳಬಹುದು."

ಆ) ೧೯೪೩ನೆಯ ಅಕ್ಟೋಬರ್‌ನಿಂದ ಕಟ್ಟಡ ನಿರ್ಮಾಣಕಾರ್ಯ ಆರಂಭವಾಗಿರುವುದರ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಸೂಚನೆ ಲಾರ್ಡ್ ಲಿನ್‌ಲಿತ್‌ಗೋ ಅವರಿಂದ ಪ್ರಕಟವಾಗಿರುವಂತೆ ಯಾವ ಕಟ್ಟಡಗಳಿಗೆ ಅನ್ವಯಿಸುತ್ತದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು. ಆ) ದೆಹಲಿಯ ಮುಂದಿನ ಅಭಿವೃದ್ಧಿಗೆ ಅಡ್ಡಿಯಾಗುವ ಎಲ್ಲ ತಾತ್ಕಾಲಿಕ ಕಟ್ಟಡಗಳಿಗೂ ೧೯೪೧ರಲ್ಲಿ ನಿರ್ಮಿಸಿದ ಲೋದಿರಸ್ತೆಯ ಅಧಿಕಾರಿಗಳ ಬಂಗಲೆಗಳಿಗೆ ಅಥವಾ ಇತ್ತೀಚೆಗೆ ಕಟ್ಟಲಾದ ಬಹಳಷ್ಟು ಕಾರಕೂನರ ನಿವಾಸಗಳಿಗೆ ಇದು ಅನ್ವಯವಾಗುವುದಿಲ್ಲ. ಅದರಲ್ಲೂ ಮುಖ್ಯವಾಗಿ, ನಿರೀಕ್ಷಣಾಲಯದ ಹಿಂಭಾಗದ ಲೋದಿರಸ್ತೆಯ ದಕ್ಷಿಣಕ್ಕಿರುವ ಕಾರಕೂನರ ನಿವಾಸಗಳ ಸಮುಚ್ಚಯಕ್ಕೆ ಇದು ಅನ್ವಯಿಸದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ৪, ೨–೧೧–೧೯೪೪ ; ಪು. ೧೨೮–೧೨೯.

**ಸರ್ ಎಫ್.ಇ. ಜೇಮ್ಸ್ :** ದೆಹಲಿಯ ಅಭಿವೃದ್ಧಿಗೆ ಈಗ ಕಟ್ಟಲಾಗುತ್ತಿರುವ ತಾತ್ಕಾಲಿಕ ಕಟ್ಟಡಗಳು ಅಡ್ಡಿಯಾಗುವುವೋ ಇಲ್ಲವೋ ಎಂಬುದನ್ನು ಯಾರು ನಿರ್ಧರಿಸುತ್ತಾರೆ ಎಂಬುದನ್ನು ತಿಳಿಸುವಿರಾ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಭಾರತ ಸರ್ಕಾರ ಎಂಬುದು ಸುಸ್ಪಷ್ಟ.

**ಸರ್ ಎಫ್.ಇ. ಜೇಮ್ಸ್ :** ಅವರು ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿದ, 'ತಾತ್ಕಾಲಿಕ' ಕಟ್ಟಡಗಳ ವ್ಯಾಪ್ತಿಯಲ್ಲಿ ಬಾರದ, ಖಾಯಂ ಆಧಾರದ ಮೇಲೆ ಕಟ್ಟಿದ, ಉತ್ತಮ ಗುಣಮಟ್ಟದ, ಖಾಯಂ ಕಟ್ಟಡಗಳಾಗಿ ಉಳಿಸಿಕೊಳ್ಳಲು ಸಮರ್ಥನೀಯವಾದುವನ್ನು ಉಳಿಸಿಕೊಳ್ಳಲಾಗುವುದೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿಯೂ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಅಮೆರಿಕನ್ನರಿಗಾಗಿ ಕಟ್ಟಿದ ಎಲ್ಲ ಅರಮನೆಯಂಥ ಕಟ್ಟಡಗಳೂ ನಗರ ಸೌಂದರ್ಯಕ್ಕೆ ಧಕ್ಕೆಯುಂಟುಮಾಡುತ್ತವೆಯೋ ? ಅವು ಸಹ ತಾತ್ಕಾಲಿಕವೋ? ಪ್ರತಿಕೂಲ ವಾತಾವರಣ ನಿವಾರಣೆಯಾದೊಡನೆ ಅವುಗಳನ್ನು ಸಹ ಕೆಡವಲಾಗುವುದೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಯಿಂದ ಹಾಗೇನೂ ಅರ್ಥವಾಗುವುದಿಲ್ಲ

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಆ ಅರ್ಥ ಬರುತ್ತದೆ. ಈ ಕಟ್ಟಡಗಳು ಕೌನ್ಸಿಲ್ ಸದನದ ಬಳಿ ಕಟ್ಟಿದ್ದು ಸಹ ನಗರ ಸೌಂದರ್ಯಕ್ಕೆ ಧಕ್ಕೆಯುಂಟುಮಾಡುತ್ತವೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅಮೆರಿಕದ ಪಡೆಗಳಿಗೆ ಕಟ್ಟಿದ ಕಟ್ಟಡಗಳಿಗೆ ಈ ಪ್ರಶ್ನೆ ಅನ್ವಯಿಸುವುದಿಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಈ ಎಲ್ಲ ಕಟ್ಟಡಗಳು ಸರ್ಕಾರದಿಂದಲೇ ಕಟ್ಟಲ್ಪಡುತ್ತಿವೆಯಾಗಿ....

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆ ಅಮೆರಿಕದ ಪಡೆಗಳಿಗಾಗಿ ಕಟ್ಟಿದ ಕಟ್ಟಡಗಳಿಗೆ ಅನ್ವಯಿಸದು. ಆದ್ದರಿಂದ ಈ ಪ್ರಶ್ನೆ ಉದ್ಭವಿಸುದು.

**ಮಾನ್ಯ ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮುಂದಿನ ಪ್ರಶ್ನೆ.

## ೨೧೮
## ಭಾರತೀಯ ಕಾರ್ಮಿಕ ಒಕ್ಕೂಟವನ್ನು ಹೊರತುಪಡಿಸಿ ಇತರ ಸಂಘಗಳಿಗೆ ಅನುದಾನ *

**೫೯. ಶ್ರೀ ಬದ್ರಿದತ್ ಪಾಂಡೆ :** ಅ) ೧೯೪೪ನೆಯ ಏಪ್ರಿಲ್ ೪ನೆಯ ದಿನಾಂಕದ ನನ್ನ ತಾರಾಂಕಿತ ಪ್ರಶ್ನಾಂಕ ೭೭೬ಕ್ಕೆ ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಮಾಸಿಕ ೧೩,೦೦೦ ರೂ. ಅನುದಾನ ಕೊಡುವ ಬಗ್ಗೆ ಕೇಳಲಾದ ಪೂರಕ ಪ್ರಶ್ನೆಗೆ ಉತ್ತರಿಸುವರೆ? ಬೇರೆ ಯಾವುದಾದರೂ ಸಂಘ ಸಂಸ್ಥೆಗಳು ಪೂರ್ವೋಕ್ತ ಒಕ್ಕೂಟದಂತೆ ಸಹಾಯಧನವನ್ನು ಪಡೆಯುತ್ತಿವೆಯೆ?

ಆ) ಅಂಥ ಹಣವು ಸಾರ್ವಜನಿಕ ಉದ್ದೇಶಕ್ಕಾಗಿಯೇ ಬಳಕೆಯಾಗುವಂತೆ ನೋಡಿಕೊಳ್ಳಲು ಸರ್ಕಾರದ ನಿಯಂತ್ರಣವೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಬೇರೆ ಯಾವುದೇ ಕಾರ್ಮಿಕ ಸಂಘಗಳು ಸರ್ಕಾರದಿಂದ ಈ ಉದ್ದೇಶಕ್ಕಾಗಿ ಸಹಾಯಧನವನ್ನು ಪಡೆಯುತ್ತಿಲ್ಲ. ಕಾರ್ಮಿಕರ ನೈತಿಕ ಸ್ಥೈರ್ಯವನ್ನು ರೂಢಿಸಲು ಕೊಡಮಾಡಿದ ಈ ಸಹಾಯದ ಬಗ್ಗೆ ಬರೆಯಲಾದ ಪತ್ರ, ಅಖಿಲ ಭಾರತ ವಾಣಿಜ್ಯ ಸಂಘ

ಕಾಂಗ್ರೆಸ್ ಮತ್ತು ಭಾರತೀಯ ಕಾರ್ಮಿಕ ಒಕ್ಕೂಟಗಳನ್ನು ಉದ್ದೇಶಿಸಿದ್ದು ಉತ್ತರವಾಗಿ, ಅಖಿಲ ಭಾರತ ವಾಣಿಜ್ಯ ಸಂಘ ಕಾಂಗ್ರೆಸ್ ನೆರವನ್ನು ಅಪೇಕ್ಷಿಸಲಿಲ್ಲ.

ಆ) ಶ್ರೀ ಲಾಲ್‌ಚಂದ್ ನವಲ್ ರಾಯ್ ಅವರ ಪ್ರಶ್ನೆಗೆ ಕೊಟ್ಟ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲು ಬಯಸುತ್ತೇನೆ.

## ೨೧೯
## ಷಹದಾರಾ (ದೆಹಲಿ) ಸಹರಣಪುರ ಲಘು ರೈಲ್ವೆ ಮತ್ತು ಅದರ ನೌಕರರ ನಡುವಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ತೀರ್ಪುಗಾರರನ್ನು ಸರ್ಕಾರ ನೇಮಿಸಿರುವ ಸಂವಿಧಾನಬಾಹಿರ ಕೃತ್ಯ ಇತ್ಯಾದಿ **

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮುಂದಿನ ಗೊತ್ತುವಳಿ ಶ್ರೀರಾಮ್ ಅವರ ಹೆಸರಿನಲ್ಲಿದೆ. ಅವರು ಅದನ್ನು ಚರ್ಚಿಸಲು ಇಚ್ಛಿಸುತ್ತಾರೆ. "ಷಹದಾರಾ (ದೆಹಲಿ) ಸಹರಣಪುರ ಲಘು ರೈಲ್ವೆ ಆಡಳಿತ ಮತ್ತು ಅದರ ನೌಕರರ ಮಧ್ಯದ ವೃತ್ತಿವ್ಯಾಜ್ಯಕ್ಕೆ ತೀರ್ಪುಗಾರರು ಕೊಟ್ಟ ತೀರ್ಪನ್ನು ಪೂರ್ವ ಭಾರತೀಯ ರೈಲ್ವೆಯ ನೌಕರರಿಗೆ ವಿಸ್ತರಿಸದೆ ಇರುವುದು ಕೇಂದ್ರ ಸರ್ಕಾರದ ವೈಫಲ್ಯವೇ ಆಗಿದೆ. ವಾಯುವ್ಯ ರೈಲ್ವೆಯು ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸುತ್ತಿದ್ದು, ಅದು ಷಹದಾರ ಮತ್ತು ಸಹರಣಪುರ ಲಘು ರೈಲ್ವೆ ನೌಕರರಿಗೆ ದೊರೆತರೂ ಪೂರ್ವ ಭಾರತೀಯ ರೈಲ್ವೆ ನೌಕರರಿಗೆ ದೊರೆಯುತ್ತಿಲ್ಲ"

ಖಚಿತವಾದ ಆಕ್ಷೇಪಣೆ ಏನು? ಬೇರೆಡೆ ಕೊಟ್ಟಿರುವ ಕೆಲವು ರೀತಿಯ ಭತ್ಯೆಗಳನ್ನು ಕೊಡಬೇಕೆಂಬುದೇ ಅವರ ಆಕ್ಷೇಪಣೆಯೆ?

**ಶ್ರೀ ಅನಂಗ ಮೋಹನ್ ದಾಮ್** (ಸುರ್ಮಾ ಕಣಿವೆ ಮತ್ತು ಷಿಲಾಂಗ್ ; ಮಹಮ್ಮದಿಯೇತರ): ಮಾನ್ಯರೇ, ನಿಯಮದ ಪ್ರಕಾರ ವ್ಯಾಜ್ಯದ ಉಭಯ ಪಕ್ಷಗಳು ಪರಾಮರ್ಶೆಗೆ ನ್ಯಾಯಾಲಯಕ್ಕೆ ಇದನ್ನು ಒಯ್ಯಬೇಕು. ಅದು ಆಗಿದೆ. ಆದರೂ ವಾಯುವ್ಯ ರೈಲ್ವೆ ನೌಕರರಿಗೆ ವಿಸ್ತರಿಸಲಾದ ರಿಯಾಯಿತಿ ದರದ ಆಹಾರ ಧಾನ್ಯದ ಸೌಲಭ್ಯಗಳನ್ನು ಪೂರ್ವ ಭಾರತೀಯ ರೈಲ್ವೆ ನೌಕರರಿಗೆ ವಿಸ್ತರಿಸಿರುವುದಿಲ್ಲ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) ಅದೇ ಸೌಲಭ್ಯಗಳನ್ನು ಪೂರ್ವ ಭಾರತೀಯ ರೈಲ್ವೆ ನೌಕರರಿಗೂ ವಿಸ್ತರಿಸಬೇಕೆಂದು ನೀವು ಇಚ್ಛಿಸುತ್ತೀರಾ?

**ಶ್ರೀ ಅನಂಗ ಮೋಹನದಾಮ್ :** ಹೌದು ಮಾನ್ಯರೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೇ, ನಾನು ಈ ಗೊತ್ತುವಳಿಯನ್ನು ವಿರೋಧಿಸುತ್ತೇನೆ. ನನ್ನ ಗೌರವಾನ್ವಿತ ಮಿತ್ರರು ಸನ್ನಿವೇಶ ಮತ್ತು ಸತ್ಯಾಂಶಗಳನ್ನು ಸಾಕಷ್ಟು ತಪ್ಪಾಗಿ ಗ್ರಹಿಸಿದ್ದಾರೆ. ಈ ನ್ಯಾಯನಿರ್ಣಯ ಬಂದಿರುವುದು ನಿಯಮ ೮೧–ಎ ಪ್ರಕಾರ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಈಗ ಸದನದ ಮುಂದೆ ಇರುವ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೨–೧೧–೧೯೪೪ ; ಪು. ೧೩೪.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೩–೧೧–೧೯೪೪ ; ಪು. ೨೧೮.

ಒಂದೇ ಪ್ರಶ್ನೆ ಎಂದರೆ, ನಿರ್ಣಯವು ಕ್ರಮಬದ್ಧವಾಗಿದೆಯೆ ಎಂದು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಸತ್ಯಾಂಶಗಳನ್ನು ಹೇಳುತ್ತಿದ್ದೇನೆ. ಈ ನ್ಯಾಯನಿರ್ಣಯ ಭಾರತರಕ್ಷಣಾ ಕಾಯಿದೆ ನಿಯಮ ೮೧–ಎ ಅನ್ವಯ ಆಗಿದೆ ಮತ್ತು ತೀರ್ಪುಗಾರರನ್ನು ನೇಮಕಮಾಡುವ ಅಧಿಕಾರ ಸಂಪೂರ್ಣವಾಗಿ ಭಾರತ ಸರ್ಕಾರಕ್ಕಿದೆ. ಆದ್ದರಿಂದ ಈ ವ್ಯಾಜ್ಯ ಪರಿಹಾರಕ್ಕೆ ತೀರ್ಪುಗಾರರನ್ನು ನೇಮಿಸಿರುವುದರಲ್ಲಿ ಯಾವ ಸಂವಿಧಾನಬಾಹಿರ ಕೃತ್ಯವೂ ನಡೆದಿಲ್ಲ. ಅದರಲ್ಲೂ ಸಂಯುಕ್ತ ಪ್ರಾಂತ್ಯಗಳು ಮತ್ತು ದೆಹಲಿ – ಈ ಎರಡೂ ರಾಜ್ಯಗಳಲ್ಲಿ ರೈಲ್ವೆ ಆಡಳಿತ ನಡೆಸುತ್ತಿರುವ ಒಂದೇ ಸಂಸ್ಥೆಗೆ ಈ ಹಕ್ಕು ಇದ್ದೇ ಇದೆ. ಈ ಎರಡರಲ್ಲಿ ಒಂದೇ ರಾಜ್ಯ ಸರ್ಕಾರ ನ್ಯಾಯಮಂಡಲಿ ರಚಿಸಲು ಬರುವುದಿಲ್ಲ. ಆದ್ದರಿಂದ ತೆಗೆದುಕೊಂಡ ಕ್ರಮದಲ್ಲಿ ಯಾವುದೇ ಸಂವಿಧಾನಬಾಹಿರತೆ ಇಲ್ಲವೆಂದು ನಿವೇದಿಸುತ್ತೇನೆ.

ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ ನನ್ನ ಮಾನ್ಯ ಮಿತ್ರರಿಗೆ ಈ ಅಂಶದ ಮೇಲೆ ತಪ್ಪು ಗ್ರಹಿಕೆ ಇದೆ. ಏಕೆಂದರೆ ತೀರ್ಪುಗಾರರ ನ್ಯಾಯನಿರ್ದೇಶನ, ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ಇನ್ನೊಂದು ರೈಲ್ವೆ ವಲಯವನ್ನು ಹೊರತುಪಡಿಸುವಂತಿಲ್ಲ. ವ್ಯಾಜ್ಯಕ್ಕೆ ಸಂಬಂಧಪಡದ ಮತ್ತೊಂದು ರೈಲ್ವೆ ಆಡಳಿತದ ನೌಕರರಿಗೆ ಈ ನ್ಯಾಯನಿರ್ದೇಶನವನ್ನು ವಿಸ್ತರಿಸುವುದು ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ವ್ಯಾಜ್ಯವು ಸಂಬಂಧಿಸಿರುವುದು ಕೇವಲ ಷಹದಾರ (ದೆಹಲಿ) ಸಹರಣಪುರ ಲಘು ರೈಲ್ವೆಗೆ ಮಾತ್ರ, ಪೂರ್ವ ಭಾರತೀಯ ರೈಲ್ವೆಗಲ್ಲ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಂ) : ಪೂರ್ವ ಭಾರತೀಯ ರೈಲ್ವೆ ನೌಕರರಿಂದ ಅಂಥ ಹಕ್ಕೊತ್ತಾಯವಿಲ್ಲದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತ ಇಲ್ಲ, ಮಾನ್ಯರೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸನ್ಮಾನ್ಯ ಕಾರ್ಮಿಕ ಸದಸ್ಯರು ನೀಡಿದ ವಾಸ್ತವಾಂಶಗಳ ಬೆಳಕಿನಲ್ಲಿ ಈ ಗೊತ್ತುವಳಿ ಮಂಡನೆಗೆ ಯಾವುದೇ ಸಮರ್ಥನೆ ಇಲ್ಲ. ಆದ್ದರಿಂದ ಈ ಗೊತ್ತುವಳಿಯನ್ನು ತಳ್ಳಿಹಾಕಿದೆ.

## ೨೨೦
## ದೆಹಲಿಯ ಕಟ್ಟಡಗಳ ಮೇಲಿನ ಖರ್ಚು *

****೧೩೨. ಡಾ॥ ಸರ್ ಝಿಯಾವುದೀನ್ ಅಹಮ್ಮದ್ :** ಅ) ಭಾರತ ಸರ್ಕಾರವು ದೆಹಲಿಯ ಖಾಯಂ ಮತ್ತು ತಾತ್ಕಾಲಿಕ ಕಟ್ಟಡಗಳ ಮೇಲೆ ವ್ಯಯಿಸುವ ಹಣವೆಷ್ಟು ?

ಆ) ಅವುಗಳಲ್ಲಿ (i) ಸಾಲ (ii) ರಾಜ್ಯಾದಾಯಕ/ಕಂದಾಯ (iii) ಭೂಮಿ ಮತ್ತು ಗುತ್ತಿಗೆ ವ್ಯವಸ್ಥೆ ಈ ಬಾಬ್ತುಗಳ ಮೇಲಿನ ಖರ್ಚನ್ನು ಪ್ರತ್ಯೇಕವಾಗಿ ನೀಡುತ್ತಾರೆಯೆ?

ಇ) ಯುದ್ಧಾನಂತರ ಈ ಕಟ್ಟಡಗಳನ್ನು ಏನು ಮಾಡುತ್ತಾರೆ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** (ಅ) ೧೯೩೯ರಿಂದೀಚೆಗೆ ನಿರ್ಮಿಸಿದ ತಾತ್ಕಾಲಿಕ ಮತ್ತು ಖಾಯಂ ಕಛೇರಿ ಮತ್ತು ನಿವಾಸಗಳ ಕಟ್ಟಡಗಳಿಗಾಗಿ ಒಟ್ಟು ಖರ್ಚಾಗಿರುವುದು ೬.೩೮ ಕೋಟಿಗಳು.

ಆ) ಅಪೇಕ್ಷಿಸಿದ ಮಾಹಿತಿ, ತಕ್ಷಣಕ್ಕೆ ದುರ್ಲಭ.

ಇ) ಖಾಯಂ ಕಟ್ಟಡಗಳನ್ನು ಯುದ್ಧಾನಂತರದಲ್ಲಿ ಉಳಿಸಿಕೊಳ್ಳಲಾಗುವುದು. ತಾತ್ಕಾಲಿಕ ಕಟ್ಟಡಗಳನ್ನು ಯುದ್ಧಾನಂತರ, ಅಗತ್ಯವಿದ್ದಷ್ಟು ಬೇಗ, ಮತ್ತು ದೆಹಲಿಯ ಅಭಿವೃದ್ಧಿಗೆ ಬೇಕಾದ ನಿವೇಶನಗಳ ಅಗತ್ಯವನ್ನು ಗಮನಿಸಿ ಕೆಡವಲಾಗುವುದು.

## ೨೨೧
## ತಾತ್ಕಾಲಿಕ ಕಟ್ಟಡಗಳ ಕೆಡವುವಿಕೆ ***

**೧೩೩. ಡಾ॥ ಸರ್ ಝಿಯಾವುದ್ದೀನ್ ಅಹಮದ್ :** (ಅ) ಯುದ್ಧಾನಂತರ ಕೆಡವಬಹುದಾದ್ದರಿಂದ, ಅದಕ್ಕೂ ಸಹ ಹೆಚ್ಚಿನ ಖರ್ಚು ತಗಲುವುದರಿಂದ, ಅದಕ್ಕನುಗುಣವಾಗಿ ಕಟ್ಟಡಗಳನ್ನು ನಿರ್ಮಿಸುವಂತೆ ಮಾನ್ಯ ಸದಸ್ಯರು ತಮ್ಮ ಇಲಾಖೆಗೆ ಸೂಚನೆ ಕೊಟ್ಟಿದ್ದರೆ?

ಆ) ಸರ್ಕಾರ ತಾತ್ಕಾಲಿಕ ಕಟ್ಟಡಗಳನ್ನು ಕೆಡವಲು ಆಲೋಚಿಸುತ್ತಿದೆಯೆ? ಕಟ್ಟಡ ಕೆಡವಲು ತಗಲುವ ವೆಚ್ಚವೇನು? ಮತ್ತು ಕಟ್ಟಡಗಳನ್ನು ನೆಲಸಮಮಾಡಲು ಅನುಸರಿಸುವ ವಿಧಾನ ಯಾವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ ; ಆ ಕಟ್ಟಡಗಳ ಮುಖ್ಯ ಉದ್ದೇಶ ಯುದ್ಧದ ಅಗತ್ಯಗಳನ್ನು ಪೂರೈಸುವುದು. ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮತ್ತು ನಿವೇಶನಗಳಲ್ಲಿ ಅವುಗಳನ್ನು ನಿರ್ಮಿಸಲಾಗಿದೆ. ಇದರ ಪರಿಣಾಮವಾಗಿ, ಅನೇಕ ನಿವೇಶನಗಳಲ್ಲಿ ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಿ ಅದನ್ನು ಯುದ್ಧಾನಂತರ ಇತರ ಉದ್ದೇಶಕ್ಕೂ ಬಳಸಬಹುದಾದ ಸಾಧ್ಯತೆ ಇದೆ. ಕಟ್ಟಡ ಕೆಡಹುವ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ೩೧೯.

** ಈ ಪ್ರಶ್ನೆಗೆ ಉತ್ತರ ಸದನದ ಮುಂದಿದೆ ; (ಪ್ರಶ್ನಕರು ತಮ್ಮ ಕೋಟಾವನ್ನು ಬಳಸಿಕೊಂಡಿದ್ದರು)

*** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೪, ೭–೧೧–೧೯೪೪ ; ಪು. ೩೧೯–೨೦

ಆದೇಶವು ನಿವೇಶನಗಳ ಬಳಸುವಿಕೆಯ ದೆಹಲಿಯ ಅಭಿವೃದ್ಧಿಯ ನಿರ್ದಿಷ್ಟ ರೂಪರೇಷೆಯನ್ನು ಅವಲಂಬಿಸಿದೆ.

ಆ) ಹೌದು ; ಕಟ್ಟಡಗಳನ್ನು ನೆಲಸಮ ಮಾಡುವುದಕ್ಕೆ ತಗಲುವ ಖರ್ಚನ್ನು ಈಗ ಅಂದಾಜು ಮಾಡುವುದಾಗಲಿ, ಅವುಗಳನ್ನು ಕೆಡಹುವ ಮಾರ್ಗೋಪಾಯಗಳನ್ನಾಗಲೀ ಯೋಚಿಸುವುದು ಈಗ ಸಾಧ್ಯವಿಲ್ಲ.

## ೨೨೨
## ದೆಹಲಿ ಮತ್ತು ನವದೆಹಲಿಯಲ್ಲಿ ವಸತಿಗಳ ನಿರ್ಮಾಣ *

** **೧೩೫. ಸರ್‌ಎಫ್.ಇ. ಜೇಮ್ಸ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಲೋಕೋಪಯೋಗಿ ಇಲಾಖೆಯು, ಯುದ್ಧ ಪ್ರಾರಂಭವಾದಂದಿನಿಂದ ಎಷ್ಟು ಮಂದಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ, ದೆಹಲಿ ಮತ್ತು ನವದೆಹಲಿಯಲ್ಲಿ (i) ಕಛೇರಿ ಮತ್ತು (ii) ವಸತಿಗಳನ್ನು ಕಟ್ಟಿಸಿಕೊಟ್ಟಿದೆ?

ಆ) ಹಾಗೆ ನಿರ್ಮಿಸಿದ (i) ತಾತ್ಕಾಲಿಕ, (ii) ಖಾಯಂ ವಸತಿಗಳ ಒಟ್ಟು ವೆಚ್ಚವೆಷ್ಟು?

ಇ) ಯಾವ ತಾತ್ಕಾಲಿಕ ಕಛೇರಿ ಮತ್ತು ನಿವಾಸದ ಕಟ್ಟಡಗಳು ಈಗ ನಿರ್ಮಾಣದ ಹಂತದಲ್ಲಿವೆ? ಮತ್ತು ಅವುಗಳ ಅಂದಾಜು ವೆಚ್ಚವೆಷ್ಟು?

ಈ) ಮತ್ತೆ ಬೇರೆ ಯಾವುದಾದರೂ ತಾತ್ಕಾಲಿಕ ಕಟ್ಟಡಗಳ ನಿರ್ಮಾಣ ಪರಿಶೀಲನೆಯಲ್ಲಿದೆಯೇ? ಹಾಗಿದ್ದರೆ ಯಾವ ಕಾರಣಕ್ಕಾಗಿ? ಮತ್ತು

ಉ) ಯುದ್ಧಾನಂತರ ಈ ತಾತ್ಕಾಲಿಕ ಕಟ್ಟಡಗಳನ್ನು ಕೆಡವಲು ಏನು ಯೋಜನೆ ಹಾಕಿಕೊಳ್ಳಲಾಗಿದೆ? ಹಾಗೂ ಇವುಗಳ ನಿರ್ಮಾಣದಲ್ಲಿ ಸೇರಿವ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಮತ್ತು ಬೇರೆಡೆ ಉಪಯೋಗಿಸುವ ಉಪಾಯಗಳೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಯುದ್ಧ ಪ್ರಾರಂಭವಾದಂದಿನಿಂದ ೧೨,೨೪,೫೧೬ ಚದುರ ಅಡಿಗಳು ಕಛೇರಿ ಸ್ಥಳಾವಕಾಶಕ್ಕಾಗಿಯೂ, ಸೂರಿರುವ ನಿವಾಸದ ಸ್ಥಳಾವಕಾಶಗಳು ೯೬೯ ಮಂದಿ ಅಧಿಕಾರಿಗಳಿಗೂ ಮತ್ತು ೭೪೫ ಮಂದಿ ಕಾರಕೂನರಿಗೆ ಲಭ್ಯವಾಗಿವೆ. ಇದರಲ್ಲಿ ಬ್ರಿಟಿಷ್ ವಾರ್ತಾ ಸಚಿವಾಲಯದ ದೂರ ಪ್ರಾಚ್ಯದ ಕಾರ್ಯಾಲಯ, ಆಗ್ನೇಯ ಏಷ್ಯಾ ಕಮ್ಯಾಂಡ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ಪಡೆಗಳಿಗೆ ಒದಗಿಸಿರುವ ಸ್ಥಳಾವಕಾಶಗಳನ್ನು ಸೇರಿಸಿಲ್ಲ. ಕಛೇರಿ ಸ್ಥಳಾವಕಾಶಗಳು ಲಭ್ಯವಾಗಿರುವ ಅಧಿಕಾರಿಗಳು ಮತ್ತು ಕಛೇರಿ ಸಹಾಯಕರ ಒಟ್ಟು ಸಂಖ್ಯೆ ಸದ್ಯಕ್ಕೆ ದೊರೆಯುವುದಿಲ್ಲ.

ಆ) ಕಛೇರಿ ಮತ್ತು ವಸತಿ ಕಟ್ಟಡಗಳಿಗಾಗಿ ೧೯೩೯ರಿಂದ ಖರ್ಚಾಗಿರುವುದು :

(i) ೫.೨೯ ಕೋಟಿ ರೂಗಳು ತಾತ್ಕಾಲಿಕ ವ್ಯವಸ್ಥೆಗಾಗಿ ಮತ್ತು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ૩೨೧–೨೨.

** ಪ್ರಶ್ನಕರು ಗೈರು ಹಾಜರಾಗಿದ್ದುದರಿಂದ ಉತ್ತರವನ್ನು ಸದನದಲ್ಲಿ ಮಂಡಿಸಲಾಯಿತು.

(ii) ೧.೦೯ ಕೋಟಿ ರೂ.ಗಳು ಖಾಯಂ ವ್ಯವಸ್ಥೆಗಾಗಿ.

ಇ) ಅಪೇಕ್ಷಿತ ಮಾಹಿತಿ ಮತ್ತು ನಿರ್ಮಾಣ ಹಂತದಲ್ಲಿರುವ ಖಾಯಂ ಕಟ್ಟಡಗಳ ಮಾಹಿತಿಯನ್ನೊಳಗೊಂಡ ವಿವರ–ಪಟ್ಟಿಯನ್ನು ಸದನದ ಮುಂದಿರಿಸಲಾಗಿದೆ.

ಈ) ಹೆಚ್ಚಿನ ಪ್ರಸ್ತಾವನೆಗಳು ಯಾವುದೂ ಇನ್ನು ಅಂಗೀಕೃತವಾಗಿಲ್ಲ.

ಉ) ತಾತ್ಕಾಲಿಕ ಕಟ್ಟಡಗಳನ್ನು ಯುದ್ಧಾನಂತರ ಆದಷ್ಟು ಶೀಘ್ರವಾಗಿ ಕೆಡವಲು ನಿರ್ಧರಿಸಲಾಗಿದೆ. ಕಟ್ಟಡ ಸಾಮಗ್ರಿಗಳ ವಿಲೇವಾರಿ ಮತ್ತು ಉಪಯೋಗದ ಪ್ರಶ್ನೆ ಈಗ ಪರಿಶೀಲನೆಯಲ್ಲಿದೆ.

**ನಿರ್ಮಾಣ ಹಂತದಲ್ಲಿರುವ ತಾತ್ಕಾಲಿಕ ಮತ್ತು ಖಾಯಂ ಕಛೇರಿ ಮತ್ತು ವಸತಿ ಸ್ಥಳಾವಕಾಶಗಳು ಹಾಗೂ ಅವುಗಳ ಅಂದಾಜು ವೆಚ್ಚದ ವಿವರ–ಪಟ್ಟಿ.**

| | **ಸ್ಥಳಾವಕಾಶಗಳ ವಿವರಣೆ** | **ಅಂದಾಜು ವೆಚ್ಚ ರೂ.ಗಳಲ್ಲಿ** |
|---|---|---|
| ೧. | **ತಾತ್ಕಾಲಿಕ** | |
| ೧. | ಜಿ.ಹೆಚ್.ಕ್ಯೂ. ಸಿಗ್ನಲ್ಸ್ ಅಧಿಕಾರಿಗಳಿಗೆ ಹೆಚ್ಚುವರಿ ನಿವಾಸಾವಕಾಶ | (ಸದ್ಯಕ್ಕೆ ಲಭ್ಯವಿಲ್ಲ) |
| ೨. | ಕಿಚನರ್ ರಸ್ತೆಯಲ್ಲಿನ ಕಾರಕೂನರ ಏಕವ್ಯಕ್ತಿ ನಿವಾಸಗಳು– ೧,೦೦೦.... | ೨೩,೪೧,೦೦೦ |
| ೩. | ಅಸ್ಮಾರ ಮತ್ತು ಮಸಾವ ಓಣಿಗಳಲ್ಲಿ ೩೬೭ ಕಾರಕೂನರ ವಸತಿ (ಇರುವ ತಾತ್ಕಾಲಿಕ ಕಟ್ಟಡಗಳ ರೂಪ ಪರಿವರ್ತನೆ) | – |
| ೪. | ಟಿಬ್ಬಿಯಾ ಕಾಲೇಜು ಹೊರಾವರಣದಲ್ಲಿ ೬೮ ಮಂದಿ ವಿವಾಹಿತ ಕಾರಕೂನರ ಮತ್ತು ೨೨೪ ಮಂದಿ ಒಂಟಿ ಕಾರಕೂನರ ನಿವಾಸಗಳು... | ೨೧,೦೦,೦೦೦ |
| ೫. | ೨೦೦ ಮಂದಿ ಅವಿವಾಹಿತ (ಜಂಟಿ) ಅಧಿಕಾರಿಗಳಿಗೆ ಹಾಲಿ ಇರುವ ಸರ್ಕಾರಿ ಹಾಸ್ಟೆಲಿನಲ್ಲಿ ಸ್ಥಳಾವಕಾಶ | ೭,೮೦,೦೦೦ |
| ೬. | ಕಿಂಗ್ ಎಡ್ವರ್ಡ್ ರಸ್ತೆಯಲ್ಲಿ ೧೬೦ ವಿವಾಹಿತ ಅಧಿಕಾರಿಗಳಿಗೆ ಹಾಸ್ಟೆಲ್... | (ವಿವರ ಲಭ್ಯವಿಲ್ಲ) |
| ೭. | ಕಛೇರಿ ಸ್ಥಳಾವಕಾಶ, ೩,೦೫,೦೪೩ ಚದುರ ಅಡಿಗಳು | ೩೯,೬೫,೫೫೯ |
| II. | **ಖಾಯಂ** | |
| ೧. | ಮಿಂಟೋ ರಸ್ತೆ ಬಳಿಯ ರೈಲ್ವೆ ನಿವೇಶನದಲ್ಲಿ ೫೦ 'ಡ' ಮಾದರಿ ಮತ್ತು ೧೬೮ – 'ಇ' ಮಾದರಿ ಕಾರಕೂನರ ನಿವಾಸಗಳು | ೨೩,೬೭,೩೮೬ |
| ೨. | ಲೂದಿ ರಸ್ತೆಯಲ್ಲಿ ೨,೪೬೮ ಕಾರಕೂನರ ನಿವಾಸಗಳು | ೨,೯೪,೦೦,೦೦೦ |

| | | |
|---|---|---|
| ೩. | ಕರೋಲ್‌ಬಾಗ್‌ನಲ್ಲಿ, ೧೨ ಎಕರೆ ಭೂಮಿಯಲ್ಲಿ ವಿವಾಹಿತ ಕಾರಕೂನರ ನಿವಾಸಗಳು | ೩೨,೦೦,೦೦೦ |
| ೪. | ಆರಾಮ್‌ಬಾಗ್‌ನಲ್ಲಿ ಕಾರಕೂನರ ೮ ಇ ಮಾದರಿ ನಿವಾಸಗಳು | ೮೦,೦೦೦ |
| ೫. | ಚಿತ್ರಗುಪ್ತ ರಸ್ತೆಯಲ್ಲಿ ೧೨೦ ಕಾರಕೂನರಿಗೆ ಮೂರು ಅಂತಸ್ತಿನ ಪ್ಲಾಟುಗಳು | ೧೫,೦೦,೦೦೦ |

## ೨೨೩
## ಕೇಂದ್ರೀಯ ತಾಂತ್ರಿಕ ವಿದ್ಯುತ್ ಮಂಡಲಿಯ ರಚನೆ *

**೧೩೯. ಶ್ರೀ ಕೆ.ಸಿ. ನಿಯೋಗಿ :** ಕಾರ್ಮಿಕ ಸದಸ್ಯರು ಈ ಕೆಳಗಿನ ವಿವರಗಳನ್ನು ಕೊಡುವರೆ?

ಅ) ಕೇಂದ್ರೀಯ ತಾಂತ್ರಿಕ ವಿದ್ಯುತ್ ಮಂಡಲಿಯ ರಚನೆ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ಯೋಜನೆಗಳಿವೆಯೆ?

ಆ) ಈ ಮಂಡಲಿಯ ಅಧ್ಯಕ್ಷ ಪದವಿಗೆ 'ಮೆರ್ಜ್ ಮತ್ತು ಮೆಲ್ಲೆನ್' ಸಂಸ್ಥೆಯ ಮಾಜಿ ಉದ್ಯೋಗಿಯೊಬ್ಬರನ್ನು ಆಹ್ವಾನಿಸಿದ್ದು, ಮಂಡಲಿಯ ಎರಡರಲ್ಲಿ ಒಂದು ಸ್ಥಾನವನ್ನು ಅಮೆರಿಕದ ಇಂಜಿನಿಯರ್‌ಗೆ ಕೊಟ್ಟಿದ್ದಿರಾ?

ಇ) ಹಾಗೆಯೆ ಸರ್ಕಾರವು ಮೆರ್ಜ್ ಮತ್ತು ಮೆಲ್ಲೆನ್ ಹಾಗೂ ಅಮೆರಿಕನ್ ಬ್ಯಾಂಡ್ ಅಂಡ್ ಷೇರ್ ಸಂಸ್ಥೆಗಳನ್ನು ಸಮಾಲೋಚನಾ ಇಂಜಿನಿಯರುಗಳಾಗಿ ನೇಮಕ ಮಾಡುವ ಬಗ್ಗೆ ಪರಿಶೀಲಿಸುತ್ತಿರುವುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಅದು ನಿಜವೆ?

ಈ) ಈ ಎರಡು, ಕ್ರಮವಾಗಿ ಅಮೆರಿಕ ಮತ್ತು ಬ್ರಿಟಿಷ್ ಸಂಸ್ಥೆಗಳು ಭಾರತದಲ್ಲಿ ವಿದ್ಯುತ್ ಜಾಲ ಸ್ಥಾಪನೆ ಮತ್ತು ಕಾರ್ಯಾಚರಣೆಯ ಬಗ್ಗೆ ಈವರೆಗೆ ಏನಾದರೂ ಆಸಕ್ತಿಯನ್ನು ತೋರಿಸಿವೆಯೇ? ಹಾಗಿದ್ದಲ್ಲಿ ಅದರ ವಿವರಗಳೇನು?

ಉ) ಈ ವರ್ಷಾದಿಯಲ್ಲಿ ಸರ್ಕಾರ ನೇಮಿಸಿದ ಅಗ್ರೇಸರ ವಿದ್ಯುತ್ ಇಂಜಿನಿಯರ್‌ಗಳ ಸಮಿತಿ ಭಾರತಕ್ಕೆ ೪೦೦ ಕೋಟಿ ರೂಪಾಯಿ ಮೌಲ್ಯದ ವಿದ್ಯುತ್ ಸ್ಥಾವರದ ಅಗತ್ಯವಿದೆಯೆಂದು ವರದಿ ಮಾಡಿರುವುದೂ ಆ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಂಡಿರುವುದೂ ನಿಜವೆ ? ಮತ್ತು

ಊ) ಮೇಲೆ ಪ್ರಸ್ತಾಪಿತವಾದ ಸಮಿತಿಯ ಶಿಫಾರಸ್ಸುಗಳ ಪೂರ್ಣ ವಿವರಗಳನ್ನು ಸರ್ಕಾರ ಪ್ರಕಟಿಸುವುದೆ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ೩೨೫–೨೬.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಹೌದು, ಮೊದಲನೆಯವರು ವಿದ್ಯುತ್ – ಆಯುಕ್ತರಾಗಿ ಭಾರತ ಸರ್ಕಾರದ ಸೇವೆಯಲ್ಲಿ ಮೂರು ವರ್ಷ, ಒಂಬತ್ತು ತಿಂಗಳುಗಳಿಂದಲೂ ಇದ್ದಾರೆ.

ಇ) ಈ ಅರ್ಥ ಬರುವ ಕೆಲವು ಪತ್ರಿಕಾ ವರದಿಗಳನ್ನು ಸರ್ಕಾರ ಗಮನಿಸಿದೆ. ಆದರೆ ಅವು ಸರಿಯಲ್ಲ. ಸಲಹಾ ಇಂಜಿನಿಯರ್‌ಗಳ ನೇಮಕದ ಬಗ್ಗೆ ಸರ್ಕಾರ ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ.

ಈ) ಮೆರ್ಜ್ ಅಂಡ್ ಮೆಲ್ಲೆನ್‌ಗೆ ಸಂಬಂಧಿಸಿದಂತೆ ಅವರ ಪ್ರತಿಕ್ರಿಯೆ ನಕಾರಾತ್ಮಕವಾಗಿದೆ. ಅಮೆರಿಕೆಯ "ಎಲಕ್ಟ್ರಿಕ್ ಬಾಂಡ್ ಅಂಡ್ ಷೇರ್ ಕಂಪನಿ" (ಅಮೆರಿಕನ್ ಬಾಂಡ್ ಅಂಡ್ ಷೇರ್ ಕಂಪನಿ ಅಲ್ಲ) ಸಾಮರ್ಥ್ಯವುಳ್ಳ ಕಂಪನಿಯಾಗಿದೆ. ಅಲ್ಲದೆ ಅದು ಕರಾಚಿ, ಬ್ರೋಚ್, ನಾಸಿಕ್ ದಿಯೋಲಾಲಿ ಮತ್ತು ಪೂನಾಗಳಲ್ಲಿ ವಿದ್ಯುತ್ ಸರಬರಾಜು ಕೆಲಸಗಳ ನಿರ್ವಾಹಕ ಪ್ರತಿನಿಧಿಗಳಾಗಿರುವ "ಟಾಟಾ ಹೈಡ್ರೋ ಎಲಕ್ಟ್ರಿಕ್ ಏಜೆನ್ಸೀಸ್" ಮತ್ತು ಯುನೈಟೆಡ್ "ಈಸ್ಟರನ್ ಏಜನ್ಸೀಸ್"ಗಳಲ್ಲಿ ಸಾಕಷ್ಟು ಆಸಕ್ತಿ ಹೊಂದಿರುವ ಕಂಪೆನಿ ಆಗಿದೆ.

ಉ) ಇಲ್ಲ.

ಊ) ಸಮ್ಮೇಳನದ ನಡವಳಿಗಳನ್ನು ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ.

**ಶ್ರೀ ಕೆ.ಸಿ. ನಿಯೋಗಿ :** ನಾನು ಈ ಶಿಫಾರಸ್ಸುಗಳನ್ನು ಯಾವಾಗ ನೋಡಬಹುದೆಂದು ನಿರೀಕ್ಷಿಸಬಹುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬಹುಶಃ ಒಂದು ವಾರದ ಅವಧಿಯಲ್ಲಿ.

**ಶ್ರೀ ಮನು ಸುಬೇದಾರ್ :** ಪ್ರಶ್ನೆಯ 'ಇ' ಭಾಗಕ್ಕೆ ಸಂಬಂಧಿಸಿದಂತೆ, ಅದು ೪೦೦ ಕೋಟಿ ಅಲ್ಲದಿದ್ದರೂ, ಅದರ ಪ್ರಮಾಣದ ಬಗ್ಗೆ ಒಂದು ಸುಳಿವುಕೊಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ.

## ೨೨೪
## ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಅನುದಾನ *

**೧೫೨. ಪ್ರೊ॥ ಎನ್.ಜಿ. ರಂಗ :** ಕಾರ್ಮಿಕ ಕ್ಷೇತ್ರದಲ್ಲಿ ಪ್ರಚಾರಕ್ಕಾಗಿ ತಿಂಗಳಿಗೆ ೧೩,೦೦೦ ರೂ.ಗಳನ್ನು ವಿನಿಯೋಗಿಸುವ ಶ್ರೀ ಎಂ.ಎನ್. ರಾಯ್ ಅವರ ಯೋಜನೆಯನ್ನು ಕಾರ್ಮಿಕ ಇಲಾಖೆಯ ದಿನಾಂಕ ೩–೩–೧೯೪೨ರ ಪತ್ರ ಸಂಖ್ಯೆ ಎಲ್ ೧೮೮೨ರಲ್ಲಿ ಅನುಮೋದಿಸಿದೆಯಷ್ಟೆ. ಅದಕ್ಕೆ ಸಂಬಂಧಿಸಿದ ಈ ಕೆಳಗಿನ ಪ್ರಶ್ನೆಯನ್ನು ಸನ್ಮಾನ್ಯ ಸದಸ್ಯರು ಉತ್ತರಿಸುವರೆ?

ಅ) ಆ ನಿರ್ದಿಷ್ಟ ಹಣಯೋಜನೆಯ ಅನುಸಾರ ವಿನಿಯೋಗವಾಗಿದೆಯೆಂಬ ಬಗ್ಗೆ ಸರ್ಕಾರಕ್ಕೆ ಸಮಾಧಾನವಾಗಿದೆಯೆ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ೩೩೭–೩೮

ಆ) ಶ್ರೀ ಎಂ.ಎನ್. ರಾಯ್ ಅವರಿಂದಾಗಲಿ, ಅಥವಾ ಅವರ ಕಾರ್ಮಿಕ ಸಂಘದಿಂದಾಗಲಿ ಅದು ಬಳಕೆಯಾದ ರೀತಿಯ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿ ಬಂದಿದೆಯೆ?

ಇ) ಸರ್ಕಾರ ಅವರ ಕೆಲಸ ಮತ್ತು ವರದಿಯ ಬಗ್ಗೆ ಯಾವುದಾದರೂ ತೀರ್ಮಾನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅವು ಯಾವುವು? ಅವುಗಳನ್ನು ಸದನದ ಮುಂದಿರಿಸಲಾಗುವುದೆ?

ಈ) ಯಾವುದಾದರೂ ಲೆಕ್ಕಪರಿಶೋಧನೆ ನಡೆದಿದೆಯೆ? ಆಗಿದ್ದಲ್ಲಿ ಯಾರಿಂದ?

ಉ) ಲೆಕ್ಕಪರಿಶೋಧನಾ ವರದಿಯನ್ನಾದರೂ ಸದನದ ಮುಂದೆ ಇರಿಸಲಾಗುವುದೆ?

ಊ) ಈ ರೀತಿಯ ಸಹಾಯಧನವನ್ನು ಬೇರೆ ಯಾವುದೇ ವ್ಯಕ್ತಿಗಳಿಗಾಗಿಯಾಗಲಿ, ಸಂಸ್ಥೆಯಾಗಲಿ ಕೊಡಲಾಗಿದೆ? ಹಾಗಿದ್ದಲ್ಲಿ ಅವು ಯಾವುವು? ಎಷ್ಟು ಮೊತ್ತದ ಹಣ ಹಾಗೆ ಕೊಡಲಾಗುತ್ತಿದೆ? ಮತ್ತು ಅದರ ಪ್ರಯೋಜನಗಳೇನು?

ಋ) ಸರ್ಕಾರ ಈ ಅನುದಾನವನ್ನು ಮುಂದುವರಿಸುವುದೆ?

ೠ) ಆ ಅನುದಾನಗಳು ಸಹಾಯಧನಗಳೇ? ಹಾಗಿದ್ದರೆ ಯಾವ ಆಧಾರದ ಮೇಲೆ ಈ ಸಹಾಯ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** (ಅ) ನನ್ನ ಮಾನ್ಯ ಮಿತ್ರರು, ಶ್ರೀ ಲಾಲ್‌ಚಂದ್ ನವಲ್ ರಾಯ್ ಅವರ ಪ್ರಶ್ನಾಂಕ ೩೧೮ರ ಭಾಗ (ಈ)ಕ್ಕೆ ನಾನು ಕೊಟ್ಟ ಉತ್ತರವನ್ನು ನೋಡಲಿ.

ಆ) ಹೌದು.

ಇ) ಈಗಾಗಲೇ ನಾನು ಹಿಂದಿನ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರುವಂತೆ, ಕೊಟ್ಟ ಹಣಕ್ಕೆ ತಕ್ಕ ಪ್ರತಿಫಲ ದೊರೆತಿದೆ ಎಂಬ ತೃಪ್ತಿಯ ಭಾವ ಸರ್ಕಾರಕ್ಕಿದೆ. ಮಾಸಿಕ ಸಹಾಯಧನವನ್ನು ಮುದ್ರಿತ ಸಾಹಿತ್ಯದ ಪ್ರಚಾರಕ್ಕಾಗಿ, ಮೌಖಿಕ ಪ್ರಚಾರಕ್ಕಾಗಿ, ದೃಶ್ಯ ಮಾಧ್ಯಮದ ಪ್ರಚಾರಕ್ಕಾಗಿ ಮತ್ತು ದೃಢೀಕರಿಸಿದ ವಿದ್ಯಮಾನಗಳ ಪ್ರಚಾರಕ್ಕಾಗಿ ಖರ್ಚುಮಾಡಲಾಗುತ್ತಿದೆ.

ಈ) ಮತ್ತು (ಉ) ಈ ಖರ್ಚು ಇತರ ಎಲ್ಲ ಖರ್ಚಿನಂತೆಯೇ ಸರ್ಕಾರಿ ಲೆಕ್ಕ ಪರಿಶೋಧನೆಗೆ ಒಳಪಟ್ಟಿದೆ ಮತ್ತೆ ಟೀಕೆ, ಟಿಪ್ಪಣಿ ಲೆಕ್ಕ ಎಲ್ಲವೂ ಪರಿಶೋಧನಾ ವರದಿಯಲ್ಲಿ ದಾಖಲಾಗುತ್ತದೆ.

ಊ) ಇಲ್ಲ.

ಋ) ಹೌದು ; ಒಕ್ಕೂಟಕ್ಕೆ ಕೊಡಲಾಗುತ್ತಿರುವ ಅನುದಾನವನ್ನು ಸದ್ಯಕ್ಕೆ ಮುಂದುವರಿಸುವ ಅಭಿಪ್ರಾಯವಿದೆ.

ೠ) ಅದು ಸಹಾಯಧನವಲ್ಲ ; ಅದನ್ನು ಸರ್ಕಾರದ ಕೋರಿಕೆಯಂತೆ ಮಾಡಲಾದ ನಿರ್ದಿಷ್ಟ ಕಾರ್ಯ ಚಟುವಟಿಕೆಗಳಿಗಾಗಿ ಕೊಡಮಾಡಿದ ಹಣ ಎಂದು ಭಾವಿಸಬಹುದು.

# ೨೨೫
# ಕೇಂದ್ರ ಲೋಕೋಪಯೋಗಿ ಇಲಾಖೆಯ ಪೂರ್ವವಲಯದಲ್ಲಿ ಮುಸ್ಲಿಮರ ಅನುಪಸ್ಥಿತಿ *

**೧೫೪. ಶ್ರೀ ಖಾನ್ ಬಹದ್ದೂರ್ ಶಾಯಿಕ್ ಫಜಲ್–ಇ–ಹಕ್ ಪಿರಾಚ :** ಅ) ಕೇಂದ್ರ ಲೋಕೋಪಯೋಗಿ ಇಲಾಖೆಯು ಪೂರ್ವ ಮತ್ತು ಪಶ್ಚಿಮ ವಲಯಗಳೆಂದು ಇಬ್ಭಾಗವಾಗಿರುವುದು ನಿಜವೆ?

ಆ) ಪೂರ್ವ ವಲಯದಲ್ಲಿ ಎಲ್ಲ ಶ್ರೇಣಿಯ ಸೇವೆಗಳಲ್ಲಿ, ಮುಸ್ಲಿಮರ ನೇಮಕಾತಿಯಲ್ಲಿ ಕಡಮೆಯಾಗಿದೆ ಎಂಬುದು ವಾಸ್ತವಾಂಶವೆ?

ನಿಜವಿದ್ದಲ್ಲಿ, ಸರ್ಕಾರ ಈ ಲೋಪವನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳಾವುವು? ಯಾವ ಕ್ರಮವನ್ನೂ ತೆಗೆದಕೊಳ್ಳದಿದ್ದಲ್ಲಿ, ಏಕೆ ತೆಗೆದುಕೊಳ್ಳಲಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಈ ವಲಯಗಳನ್ನು ಪ್ರತ್ಯೇಕ ಎಂದು ಭಾವಿಸುವುದಾದರೆ ಪೂರ್ವ ವಲಯದ ಕೆಳಗಣ ವರ್ಗಗಳಲ್ಲಿ ನೌಕರಿ ಭರ್ತಿಯಲ್ಲಿ ಮುಸ್ಲಿಮರ ಸಂಖ್ಯೆ ಕಡಮೆ ಇದೆ. ಪಶ್ಚಿಮ ವಲಯದ ನೌಕರಿ ಭರ್ತಿಯಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿದೆ. ಆದರೆ ಕೇಂದ್ರ ಲೋಕೋಪಯೋಗಿ ಇಲಾಖೆಯನ್ನು ಇಡಿಯಾಗಿ ಪರಿಗಣಿಸಿದಾಗ ಮುಸ್ಲಿಮರ ಸಂಖ್ಯೆ ಹೆಚ್ಚಿದೆ. ತಾತ್ಕಾಲಿಕ ಇಂಜಿನಿಯರುಗಳ ನೌಕರಿಭರ್ತಿ ಪ್ರಮಾಣದಲ್ಲಿ ಪೂರ್ವ ವಲಯದಲ್ಲಿ ನೌಕರಿಭರ್ತಿಯಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿದೆ. ಮತ್ತು ಪೂರ್ವವಲಯದಲ್ಲಿ ಅರ್ಹ ಮುಸ್ಲಿಮ್ ಅಭ್ಯರ್ಥಿಗಳು ನೌಕರಿಭರ್ತಿಯ ಸಂದರ್ಭದಲ್ಲಿ ಲಭ್ಯವಿಲ್ಲದಿದ್ದ ಕಾರಣ ನೌಕರಿಭರ್ತಿಯಲ್ಲಿ ಮುಸ್ಲಿಮರ ಸಂಖ್ಯೆ ಕಡಮೆಯಾಗಿದೆ. ಪೂರ್ವವಲಯದಲ್ಲಿನ ಈ ಅಭಾವವನ್ನು ಅರ್ಹ ಮುಸ್ಲಿಮ್ ಅಭ್ಯರ್ಥಿಗಳು ದೊರೆಯುತ್ತಿದ್ದಂತೆಯೇ ಕ್ರಮವಾಗಿ ಸರಿಪಡಿಸಲಾಗುವುದು.

ಇನ್ನು, ಯಾವುದೇ ಶ್ರೇಣಿಯಲ್ಲಿ, ಪೂರ್ವ ಅಥವಾ ಪಶ್ಚಿಮ ವಲಯಗಳಲ್ಲಿ ಮುಸ್ಲಿಮರ ಕೊರತೆ ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ೩೫೧.

# ೨೨೬
# ಸಾರ್ವಜನಿಕ ವಾರ್ತಾ ಕೇಂದ್ರಕ್ಕೆ ವಾರ್ಷಿಕವಾಗಿ ಸರಬರಾಜಾದ ಕಾಗದದ ಪ್ರಮಾಣ *

**೩೯. ಭಾಯ್‌ಪರ್ಮಾನಂದ್ :** ಸನ್ಮಾನ್ಯ ಕೈಗಾರಿಕಾ ಮತ್ತು ನಾಗರಿಕ ಪೂರೈಕೆಯ ಸದಸ್ಯರು ೧೯೪೧ನೆಯ ವರ್ಷದಿಂದ ವರ್ಷಾವಾರು ಈ ಕೆಳಗಿನ ಬಾಬ್ತುಗಳಿಗೆ ಕಾಗದ ಪೂರೈಕೆಯಾದ ವಿವರಗಳನ್ನು ಕೊಡುವರೆ?

(i) ಸಾರ್ವಜನಿಕ ವಾರ್ತಾ ವಿಭಾಗ (ii) ಪ್ರತಿಕ್ರಿಯಾತ್ಮಕ ಪ್ರಚಾರ ನಿರ್ದೇಶನಾಲಯ (iii) ಸಿನಿಮಾ ಪ್ರಚಾರ (iv) ಬಾಹ್ಯ ಪ್ರಚಾರ ; ಮತ್ತು (v) ವಿದೇಶಿ ಪ್ರಚಾರ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಶ್ನೆ ಕಾರ್ಮಿಕ ಇಲಾಖೆಗೆ ಸಂಬಂಧಿಸಿರುವುದರಿಂದ ನಾನು ಉತ್ತರಿಸುತ್ತಿದ್ದೇನೆ. ಪ್ರಕೃತ ಲಭ್ಯವಿರುವ ಮಾಹಿತಿಯನ್ನು ಕೆಳಗಿನ ವಿವರ ಪಟ್ಟಿಯಲ್ಲಿ ಕೊಟ್ಟಿರುತ್ತೇನೆ.

**ವಿವರಸೂಚಿ ಪಟ್ಟಿ**

| | ಕೋರಿಕೆದಾರರು | ಬಳಸಿದ ಪ್ರಮಾಣ (ಟನ್ನುಗಳಲ್ಲಿ) ೧–೪–೧೯೪೩ ರಿಂದ ೩೧–೪–೧೯೪೪ರವರೆಗೆ | ಬಳಸಿದ ಪ್ರಮಾಣ (ಟನ್ನುಗಳಲ್ಲಿ) ೧–೪–೧೯೪೩ ರಿಂದ ೩೧–೪–೧೯೪೪ರವರೆಗೆ |
|---|---|---|---|
| (i) | ಸಾರ್ವಜನಿಕ ವಾರ್ತಾಕೇಂದ್ರ | ೧೬೨ | ೫೫ |
| (ii) | ಪ್ರಚಾರ – ಪ್ರತಿಕ್ರಿಯಾ ನಿರ್ದೇಶನಾಲಯ (Counter propaganda) | ೫೦ | ೨೩ |
| (iii) | ಸಿನಿಮಾ ಪ್ರಚಾರ | ಅಂಕಿಅಂಶಗಳು ಲಭ್ಯವಿಲ್ಲ | ೦೧ |
| (iv) | ಬಾಹ್ಯ ಪ್ರಚಾರ | ೧೮ | ಶೂನ್ಯ |
| (v) | ವಿದೇಶಿ ಪ್ರಚಾರ | ೯೯ | ೧೭ |

ಸೂಚನೆ : (i) ಸಿನಿಮಾ ಪ್ರಚಾರಕ್ಕೆ ಸಂಬಂಧಿಸಿದ ಕಾಗದ ಪೂರೈಕೆ ಮಾಹಿತಿ, ೧–೪–೪೪ಕ್ಕೆ ಹಿಂದಿನದು ಲಭ್ಯವಿಲ್ಲ. ದತ್ತ ಅಂಕಿಅಂಶಗಳು ಆರ್ಥಿಕ ವರ್ಷಕ್ಕೆ ಸಂಬಂಧಿಸಿವೆ.

(ii) ಮೇಲಿನ ಪರಿಚ್ಛೇದ (iv)ರ ಮುಂದೆ ಸೂಚಿಸಿರುವ ಅಂಕಿಅಂಶಗಳು ಬ್ರಿಟಿಷ್ ವಾರ್ತಾ ಸಚಿವಾಲಯದ ಬಳಕೆಯನ್ನು ಪ್ರತಿನಿಧಿಸುತ್ತದೆ.

(iii) ಪರಿಚ್ಛೇದ (iii) ಮತ್ತು (v)ರ ಮುಂದೆ ಸೂಚಿಸಿರುವ ಅಂಕಿಅಂಶಗಳು 'ಭಾರತದ ವಾರ್ತಾ ಸಿನಿಮಾ' ಮತ್ತು ಪ್ರಚಾರಾಧಿಕಾರಿ (ವಿದೇಶ) ಇವರಿಗೆ ಕ್ರಮವಾಗಿ ಸಂಬಂಧಿಸಿವೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೭–೧೧–೧೯೪೪ ; ಪು. ೩೪೧.

# ೨೨೭
# ನಿರುದ್ಯೋಗಿ ಕಾರ್ಮಿಕರ ಬಗ್ಗೆ ಅಂಕಿಅಂಶಗಳು *

**೨೨೧. ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಕೆಳಗಿನ ವಿವರ ಕೊಡುವರೆ?

ಅ) ಭಾರತದ ನಿರುದ್ಯೋಗಿ ಕಾರ್ಮಿಕರ ಬಗ್ಗೆ ಏನಾದರೂ ಅಂಕಿಅಂಶಗಳು ದೊರೆಯುತ್ತವೆಯೆ? ದೊರೆತರೆ ಆ ಪ್ರಮಾಣವೆಷ್ಟು? ಮತ್ತು ಅದನ್ನು ಹೇಗೆ ವರ್ಗೀಕರಿಸಲಾಗಿದೆ?

ಆ) ಒಂದು ವೇಳೆ, ಅಂಕಿಅಂಶಗಳು ಅಲಭ್ಯವಾಗಿದ್ದಲ್ಲಿ, ಸರ್ಕಾರ ಅದನ್ನು ಯಾವಾಗ ಸಂಗ್ರಹಿಸಲು ಉದ್ದೇಶಿಸಿದೆ? ಮತ್ತು ಯಾವಾಗ ಅದನ್ನು ಕೈಗಾರಿಕಾವಾರು, ವಿದ್ಯಾವಂತ ಮತ್ತು ಅವಿದ್ಯಾವಂತ ಎಂಬ ಶೀರ್ಷಿಕೆಯಡಿ ವರ್ಗೀಕರಿಸಿ ಕೊಡುತ್ತದೆ?

ಇ) ಸಂಯುಕ್ತ ರಾಷ್ಟ್ರವು ತಮ್ಮ ದೇಶಗಳಲ್ಲಿ ಉದ್ಯೋಗಸ್ಥರ ಗರಿಷ್ಠ ಪ್ರಮಾಣ ಸ್ತರವನ್ನು ಕಾಪಾಡಲು ಅನೇಕ ಕ್ರಮಗಳನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಅವರೊಡನೆ ಹೆಜ್ಜೆಹಾಕಲು ಸಾಧ್ಯವಾಗುವಂಥ ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಉದ್ದೇಶಿಸಿದೆ? ಮತ್ತು ಎಂದು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಪ್ರಥಮ ಭಾಗಕ್ಕೆ ಉತ್ತರ ನಕಾರಾತ್ಮಕ. ಆದ್ದರಿಂದ ಎರಡನೆಯ ಭಾಗಕ್ಕೆ ಉತ್ತರ ಕೊಡಬೇಕಾದ ಸಂದರ್ಭವಿಲ್ಲ.

ಆ) ಸರ್ಕಾರ, ಪ್ರಕೃತದಲ್ಲಿ, ಕೆಲವು ಕೈಗಾರಿಕೆಗಳಲ್ಲಿನ ಉದ್ಯೋಗಾವಕಾಶಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿದೆ ; ಸಂಗ್ರಹಕಾರ್ಯ ಸಮರ್ಪಕವೂ, ಶೀಘ್ರವೂ ಆಗುವಂತೆ ಎಚ್ಚರಿಕೆಯನ್ನು ವಹಿಸಲಾಗಿದೆ.

ಇ) ಸಂಯುಕ್ತ ರಾಷ್ಟ್ರಗಳಲ್ಲಿ ಕೆಲವು ಯುದ್ಧಾನಂತರವೂ, ಉದ್ಯೋಗಸ್ಥರ ಗರಿಷ್ಠ ಪ್ರಮಾಣವನ್ನು ಕಾಪಾಡಲು ಅನೇಕ ಯೋಜನೆಗಳನ್ನು ಹಾಕಿಕೊಂಡಿರುವುದು ಸರ್ಕಾರದ ಲಕ್ಷ್ಯದಲ್ಲಿದೆ.

ಭಾರತ ಸರ್ಕಾರದ ಪುನರ್‌ನಿರ್ಮಾಣದ ಯೋಜನೆಗಳು, ಕಾರ್ಯ ಸಾಧ್ಯವಾಗುವ ಮಟ್ಟಿಗೂ ಉದ್ಯೋಗಸ್ಥರ ರೇಖೆಯನ್ನು ಎತ್ತರಿಸುವ ಅಗತ್ಯದ ಬಗ್ಗೆ ಪರಿಶೀಲಿಸುತ್ತಿದೆ.

**ಡಾ ॥ ಸರ್ ಝಿಯಾವುದೀನ್ ಅಹಮ್ಮದ್ :** ಸನ್ಮಾನ್ಯ ಕಾರ್ಮಿಕಸದಸ್ಯರು ಯುದ್ಧೋತ್ತರ ಪುನಾರಚನೆಯ ಯೋಜನೆಗಳಲ್ಲಿ ಕಾರ್ಮಿಕರನ್ನು ತೊಡಗಿಸಿ, ಯಾರೂ ನಿರುದ್ಯೋಗಿಗಳಾಗಿ ಉಳಿಯದಂತೆ, ಅವರ ಹಿತವನ್ನು ಕಾಪಾಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ನಮ್ಮ ಆದರ್ಶವಾಗಬೇಕು. ಅದಕ್ಕೆ ನನ್ನ ಸಹಮತವಿದೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಅಂಕಿಅಂಶಗಳ ಸಂಗ್ರಹಣೆಗೆ ಏನು ತೊಂದರೆ?

ಒಂದು ವರ್ಷದ ಹಿಂದೆ ಅಂಕಿಅಂಶಗಳ ಬಗ್ಗೆ ಪ್ರಶ್ನೆ ಕೇಳುವುದರ ಮೂಲಕ ಈ ಇಲಾಖೆ ಚಲನಶೀಲವಾಗಲಿ ಎಂದು ಹೇಳಿದ್ದ ನೆನಪು. ಅಂಕಿಅಂಶಗಳ ಸಂಗ್ರಹಕಾರ್ಯ ಇನ್ನೂ ಪ್ರಾರಂಭವೇ ಆಗಿಲ್ಲವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೧೦–೧೧–೧೯೪೪; ಪು. ೫೪೬

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗ ತಾನೆ ಪ್ರಾರಂಭಿಸಿದ್ದೇನೆ. ಅದೂ ಒಳ್ಳೆಯ ಪ್ರಾರಂಭವಾಗಿದೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಕಳೆದ ಒಂದು ವರ್ಷದಿಂದ ಮಾನ್ಯ ಸದಸ್ಯರು ಏನು ಮಾಡುತ್ತಿದ್ದರು? ಎಂದು ಅವರು ಪ್ರಾರಂಭ ಮೂಡಿದ್ದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದರೊಡನೆ ನಮಗೆ ಬೇರೆ ಕೆಲಸಗಳು ಇರುತ್ತವೆ. ಈಗಂತು ಒಳ್ಳೆಯ ಪ್ರಾರಂಭಮಾಡಿದ್ದೇವೆ.

**ಪ್ರೊ॥ ಎನ್.ಜಿ. ರಂಗ :** ವಿವಿಧ ಕೈಗಾರಿಕೆಗಳಲ್ಲಿರುವ ನಿರುದ್ಯೋಗದ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಲು ಈ ಮೊದಲೇ ಪ್ರಯತ್ನಿಸಲಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದ್ದೇನೆ. ನಾವು ಅಂಕಿಅಂಶಗಳ ಸಂಗ್ರಹಮಾಡುವ ಕಾರ್ಯನೀತಿಯನ್ನು ಪ್ರಾರಂಭಿಸಿದ್ದೇವೆ.

**ಶ್ರೀ ಗೋವಿಂದ್ ವಿ. ದೇಶ್‌ಮುಖ್ :** ಕಳೆದ ಬಾರಿ ಅಂಕಿಅಂಶಗಳ ಸಂಗ್ರಹಣೆಯ ಬಗ್ಗೆ ನನಗೆ ಕೊಟ್ಟ ಭರವಸೆ ಏನಾಯಿತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗಾಗಲೇ ನಾನು ತಿಳಿಸಿರುವಂತೆ, ಪ್ರಾರಂಭ ಮಾಡಿದ್ದಾಗಿದೆ.

## ೨೨೮
## ಗಣಿಯ ಆಳದಲ್ಲಿನ ಕೆಲಸಗಳಿಗೆ ಮಹಿಳೆಯರ ನೇಮಕಾತಿ *

**೨೬೯. ಶ್ರೀ ಮನುಸುಬೇದಾರ್ :** ಅ) ಭೂಗರ್ಭದ ಕೆಲಸಗಳಿಗೆ ಮಹಿಳೆಯರನ್ನು ನೇಮಿಸುವುದು ಸರ್ಕಾರ ಒಪ್ಪಿಕೊಂಡಿರುವ ಜಿನೇವಾ ಸಮ್ಮೇಳನದ ನಿರ್ಣಯಕ್ಕೆ ವಿರುದ್ಧವಾದುದಲ್ಲವೆ? – ಈ ಬಗ್ಗೆ ಮಾನ್ಯ ಕಾರ್ಮಿಕ ಸದಸ್ಯರು ಉತ್ತರಿಸುವರೆ?

ಆ) ಯುದ್ಧದ ಅಗತ್ಯಗಳ ಒತ್ತಡದಲ್ಲಿಯೂ ಗ್ರೇಟ್ ಬ್ರಿಟನ್ನಿನಲ್ಲಿ ಅಂಥ ಯಾವ ನೇಮಕವೂ ಆಗಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿಲ್ಲವೆ?

ಇ) ಸರ್ಕಾರ ಈ ನಿಯಮವನ್ನು ಎಂದು ಸಡಿಲಗೊಳಿಸಿತು? ಮತ್ತು ಏಕೆ?

ಈ) ಎಲ್ಲಿಯವರೆಗೆ ಸರ್ಕಾರವು ಕಲ್ಲಿದ್ದಲು ಗಣಿಗಳಲ್ಲಿ ಹೆಣ್ಣಾಳುಗಳನ್ನು ನೇಮಿಸುವ ಮುಕ್ತಾವಕಾಶವನ್ನು ಮುಂದುವರಿಸುತ್ತದೆ?

ಉ) ಗಣಿಗಳ ಆಳದಲ್ಲಿ ಹೆಣ್ಣಾಳುಗಳು ಗಳಿಸುವ ಮಜೂರಿ ಏನು? ಇತರ ವೃತ್ತಿಗಳಲ್ಲಿ ತೊಡಗಿರುವ ಹೆಣ್ಣಾಳುಗಳ ಗಳಿಕೆಯನ್ನು ಈ ಹೆಣ್ಣಾಳುಗಳ ಗಳಿಕೆಯೊಡನೆ ತೌಲನಿಕವಾಗಿ (ಹೋಲಿಸಿ) ನೋಡಿದ್ದೀರಾ?

ಋ) ಕಲ್ಲಿದ್ದಲು ಗಣಿಗಳ ಭೂಗರ್ಭದಲ್ಲಿ ದುಡಿಯುವ ಹೆಣ್ಣಾಳುಗಳ ಆರೋಗ್ಯ ಮತ್ತು ನೈತಿಕ ಸ್ಥೈರ್ಯವನ್ನು ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೪, ೧೦–೧೧–೧೯೪೪, ಪು. ೫೬೯–೭೧.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು; ಆ) ಹೌದು.

ಇ) ಬೆರಾರ್ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಆಗಸ್ಟ್ ೧೯೪೩ರಲ್ಲಿ; ಬಂಗಾಳ ಮತ್ತು ಬಿಹಾರಗಳಲ್ಲಿ ನವೆಂಬರ್ ೧೯೪೩ರಲ್ಲಿ; ಒರಿಸ್ಸಾದಲ್ಲಿ ಡಿಸೆಂಬರ್ ೧೯೪೩ರಲ್ಲಿ ಈ ಕಲ್ಲಿದ್ದಲು ಗಣಿಗಳಲ್ಲಿ ದುಡಿಯಲು ಗಂಡಾಳುಗಳ ತೀವ್ರ ಅಭಾವವಿದ್ದುದೇ ಈ ನಿರ್ಧಾರಕ್ಕೆ ಕಾರಣ.

ಈ) ಈ ಬಗ್ಗೆ ಇದ್ದ ನಿಷೇಧವನ್ನು ಮತ್ತೆ ಜಾರಿಗೊಳಿಸಲು ಸರ್ಕಾರ ಕಾತರವಾಗಿದೆ. ಆದರೆ ಕಲ್ಲಿದ್ದಲ ಉತ್ಪಾದನೆ ಅಧಿಕವಾಗುವ ಪ್ರಮಾಣದ ಮೇಲೆ, ಈ ನಿಷೇಧ ಪುನರ್‌ಜಾರಿಯಾಗುವುದು ಅವಲಂಬಿಸಿದೆ.

ಉ) ಭೂಗರ್ಭದಲ್ಲಿ ನಿಯೋಜಿತವಾಗಿರುವ ಹೆಣ್ಣಾಳುಗಳ ಖಚಿತ ಸಂಖ್ಯೆಯನ್ನು ಕೊಡುವುದು ಕಷ್ಟ. ಏಕೆಂದರೆ ಅದು ದಿನದಿಂದ ದಿನಕ್ಕೆ ಬದಲಾಗುತ್ತದೆ. ಆದರೂ, ಬಂಗಾಳ, ಬಿಹಾರ, ಮಧ್ಯ ಪ್ರಾಂತ್ಯಗಳು ಮತ್ತು ಒರಿಸ್ಸಾಗಳ ಗಣಿ ಭೂಗರ್ಭಗಳಲ್ಲಿ ಸುಮಾರು ೧೬,೦೦೦ ಹೆಣ್ಣಾಳುಗಳು ದುಡಿಯುತ್ತಿದ್ದಾರೆ ಎಂದ ಅಂದಾಜು ಮಾಡಲಾಗಿದೆ.

ಊ) ಭೂಗರ್ಭದಲ್ಲಿ ದುಡಿಯುವ ಹೆಣ್ಣಾಳುಗಳು, ಅದೇ ಕೆಲಸ ಮಾಡುವ ಗಂಡಾಳುಗಳಷ್ಟೇ ಮಜೂರಿ ಪಡೆಯುವ ಹಕ್ಕುಳ್ಳವರಾಗಿದ್ದಾರೆ. ಭೂಗರ್ಭದಲ್ಲಿ ದುಡಿಯುವ ಹೆಣ್ಣಾಳುಗಳ ಮಜೂರಿ, ಉಚಿತ ಅಕ್ಕಿ ಪಡಿತರವನ್ನು ಬಿಟ್ಟು, ೦–೧೨–೦ ಆಣೆಗಳಿಂದ ೦–೧೫–೦ ಆಣೆಗಳವರೆಗಿನ ಹೆಚ್ಚು ಕಡಿಮೆಯಲ್ಲಿರುತ್ತದೆ. ಇತರ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಹೆಣ್ಣಾಳುಗಳ ಮಜೂರಿಯ ಬಗ್ಗೆ ತಹಲ್‌ವರೆಗಿನ ಮಾಹಿತಿ ದೊರೆಯುವುದಿಲ್ಲ.

ಋ) ಐದೂವರೆ ಅಡಿಗಳಿಗಿಂತಲೂ ಕಡಮೆ ಎತ್ತರವಿರುವ ಗಣಿಯ ಕೈಸಾಲೆಗಳಲ್ಲಿ (Gallery) ಮಹಿಳೆಯರನ್ನು ದುಡಿಯಲು ನಿಯೋಜಿಸುತ್ತಿಲ್ಲ. ಅವರಿಗೆ ೧೯೪೧ರ ಗಣಿ ಕಾರ್ಮಿಕರ ಪ್ರಸೂತಿ ಸೌಲಭ್ಯ ಅಧಿನಿಯಮಾನುಸಾರ ಸೌಲಭ್ಯಗಳನ್ನು ಪಡೆಯುವ ಹಕ್ಕಿದೆ. ಈ ಕಾನೂನಿನ ಮತ್ತು ಇದಕ್ಕೆ ಪೂರಕವಾದ ಇತರ ನಿಯಮಾವಳಿಗಳನ್ನು ಸಮರ್ಪಕವಾಗಿ ಜಾರಿಮಾಡಲು ಮೂವರು ಇನ್‌ಸ್ಪೆಕ್ಟರ್‌ಗಳನ್ನು ಸಹ ನೇಮಕ ಮಾಡಲಾಗಿದೆ. ಇದಲ್ಲದೆ ಮೂವರು ಕಾರ್ಮಿಕ ಕಲ್ಯಾಣಾಧಿಕಾರಿಗಳನ್ನೂ, ಗಣಿ ವಲಯಕ್ಕೆ ಒರ್ವ ಮಹಿಳಾ ಕಲ್ಯಾಣಾಧಿಕಾರಿಯನ್ನೂ ನೇಮಕ ಮಾಡಲಾಗಿದೆ.

**ಶ್ರೀಮನುಸುಬೇದಾರ್ :** ಗ್ರೇಟ್ ಬ್ರಿಟನ್ನಿನಲ್ಲಿ ಪ್ರಕಟವಾದ ವರದಿಯ ಪ್ರಕಾರ ಕಲ್ಲಿದ್ದಲಿನ ಗಣಿಗಳಲ್ಲಿ ದುಡಿಯುವ ಮಹಿಳೆಯರು ಸೊಂಟದ ಮೇಲೆ ಅರಿವೆ ಧರಿಸಬಾರದು ಎಂದು ಸೂಚಿಸಲಾಗಿದೆ. ಇದನ್ನು ಸನ್ಮಾನ್ಯ ಸದಸ್ಯರು ಗಮನಿಸಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ಶ್ರೀ ಮನುಸುಬೇದಾರ್ :** ಗ್ರೇಟ್ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಯಾವುದೇ ರಾಷ್ಟ್ರಗಳಲ್ಲಾಗಲಿ, ಎಷ್ಟೇ ಯುದ್ಧದ ಒತ್ತಡವಿದ್ದರೂ, ಮಹಿಳೆಯರನ್ನು ಗಣಿ ಭೂಗರ್ಭದಲ್ಲಿ ದುಡಿಯಲು ಹಚ್ಚುವ ಪದ್ಧತಿ ಇಲ್ಲ. ಸನ್ಮಾನ್ಯ ಸದಸ್ಯರು ಏಕೆ ಈ ದೀನ ಪದ್ಧತಿಯಲ್ಲಿ ಭಾಗಿಗಳಾಗುತ್ತಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಲ್ಲಿದ್ದಲಿನ ತೀವ್ರ ಅಭಾವದಿಂದ ವಿಧಿಯಿಲ್ಲದೆ.

**ಶ್ರೀ ಎನ್.ಎಂ. ಜೋಷಿ :** ಸನ್ಮಾನ್ಯ ಸದಸ್ಯರು ಹೆಣ್ಣಾಳು ಮತ್ತು ಗಂಡಾಳುಗಳು ಸಮಾನ ವೇತನಕ್ಕೆ ಅರ್ಹರೆಂದೂ ಹೆಣ್ಣಾಳು ಸರಾಸರಿ ಹನ್ನೆರಡು ಆಣೆಗಳನ್ನು ಪಡೆಯುತ್ತಾಳೆ ಎಂದು ತಿಳಿಸಿದ್ದಾರೆ. ನಾನು ನಿಮ್ಮ ಹೇಳಿಕೆಯನ್ನು ಒಪ್ಪುವುದಿಲ್ಲ. ಕಲ್ಲಿದ್ದಲ ಗಣಿಗಳಲ್ಲಿ ಹೆಣ್ಣು ಮತ್ತು ಗಂಡಾಳುಗಳು ತಾವು ಕೂಡಿ ಮಾಡಿದ ಕಲ್ಲಿದ್ದಲ ಉತ್ಪಾದನೆಗೆ ಜಂಟಿಯಾಗಿಯೇ ಮಜೂರಿ ಪಡೆಯುತ್ತಾರೆ. ಹಾಗೆ ಒಟ್ಟಿಗೆ ಪಡೆದ ಮಜೂರಿಯ ಸಮಭಾಗವನ್ನು ಗಂಡಾಳು ಹೆಣ್ಣಾಳಿಗೆ ಕೊಡುತ್ತಾನೆ ಎಂದು ಹೇಗೆ ಭಾರತ ಸರ್ಕಾರ ಖಾತ್ರಿಪಡಿಸಿಕೊಳ್ಳುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಗುಂಪು ಮಜೂರಿ ಪಾವತಿಯಾಗುವುದರಿಂದ ಲೆಕ್ಕಾಚಾರಕ್ಕೆ ಸುಲಭ.

**ಶ್ರೀ ಎನ್.ಎಂ. ಜೋಷಿ :** ಸನ್ಮಾನ್ಯ ಸದಸ್ಯರಿಗೆ ಮತ್ತೆ ನನ್ನ ಪ್ರಶ್ನೆ ಏನೆಂದರೆ ಗಂಡಾಳಿನಷ್ಟೆ ಹೆಣ್ಣಾಳು ಮಜೂರಿ ಪಡೆಯುತ್ತಾಳೆ ಎಂಬುದಕ್ಕೆ ಪುರಾವೆ ಏನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ತಿಳಿಸಿದ್ದೇನೆ. ಸಮಾನ ಸ್ವರೂಪದ ಕೆಲಸಕ್ಕೆ ಗಂಡಾಳಿನಷ್ಟೆ ಹೆಣ್ಣಾಳಿಗೂ ಮಜೂರಿ ಪಡೆಯಲು ಹಕ್ಕಿದೆ ಎಂದು.

**ಶ್ರೀ ಎನ್.ಎಂ. ಜೋಷಿ :** ಗಂಡಸು ಸಮಭಾಗದ ಮಜೂರಿಯನ್ನು ಹೆಂಗಸಿಗೂ ಕೊಡುತ್ತಾನೆ ಎಂದೂ, ತಾನು ಹೆಚ್ಚು ತೆಗೆದುಕೊಂಡು ಹೆಂಗಸಿಗೆ ಕಡಮೆ ಕೊಡುವುದಿಲ್ಲವೆಂದು ಏನು ಖಾತ್ರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ನನಗೆ ತಿಳಿಯದು, ಆದರೆ ಹಾಗೆ ಕೂಡಿ ದುಡಿಯುವ ಕಾರ್ಮಿಕರಲ್ಲಿ ಬಹುಮಟ್ಟಿಗೆ ಗಂಡಹೆಂಡತಿಯರೇ ಆಗಿರುವುದರಿಂದ ಅವರು ತಮ್ಮ ಮಜೂರಿಯ ಲೆಕ್ಕಾಚಾರದಲ್ಲಿ ಅಷ್ಟು ಆಸಕ್ತರಾಗಿರುತ್ತಾರೆಯೊ – ನನಗಂತು ತಿಳಿಯದು.

**ಶ್ರೀ ಎನ್.ಎಂ. ಜೋಷಿ :** ಸನ್ಮಾನ್ಯ ಸದಸ್ಯರು ತಮಗೆ ಗೊತ್ತಿಲ್ಲವೆಂದು ಒಪ್ಪಿಕೊಂಡಿದ್ದರಿಂದ, ಭಾರತ ಸರ್ಕಾರವು ಹೆಣ್ಣಾಳು ಗಂಡಾಳಿನಷ್ಟೆ ಸಮಾನ ವೇತನಕ್ಕೆ ಅರ್ಹಳು ಎಂಬ ಹೇಳಿಕೆಯನ್ನು ವಾಪಸ್ಸು ಪಡೆಯಲಿ. ಸನ್ಮಾನ್ಯ ಸದಸ್ಯರು ಹೆಣ್ಣಾಳು ಗಂಡಾಳಿನೊಡನೆ ಸಮಾನ ವೇತನ ಪಾವತಿಯ ಬಗ್ಗೆ ಖಚಿತಪಡಿಸಿಕೊಳ್ಳದೆ ಸನ್ಮಾನ್ಯ ಸದಸ್ಯರು ಅಂಥ ಹೇಳಿಕೆ ನೀಡುವುದು, ನನ್ನ ದೃಷ್ಟಿಯಲ್ಲಿ, ದಾರಿತಪ್ಪಿಸುವಿಕೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಮಾನ್ಯ ಸದಸ್ಯರ ವಾಕ್‌ಚಾತುರ್ಯ ಎಂದು ಮಾತ್ರ ಭಾವಿಸುತ್ತೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಕಳೆದ ಅಧಿವೇಶನದಲ್ಲಿ ಸರ್ಕಾರ ಕೊಟ್ಟ ಭರವಸೆಯ ಮೇರೆಗೆ, ಗಣಿಗಳಲ್ಲಿ ಹೆಣ್ಣಾಳುಗಳನ್ನು ನೇಮಿಸುವ ಈ ಕ್ರೂರ ಪದ್ಧತಿಯನ್ನು ಮುಂದುವರಿಸಬೇಕಾದ ಅನಿವಾರ್ಯತೆ ಇದೆಯೆ ಎಂಬುದನ್ನು ಪುನರ್‌ಪರಿಶೀಲಿಸಿದೆಯೆ? ಅಂಥ ಅನಿವಾರ್ಯತೆ ಇದೆಯೆಂದು ಸರ್ಕಾರಕ್ಕೆ ಮನವರಿಕೆಯಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರ ಪರಿಸ್ಥಿತಿಯನ್ನು ಪುನರ್‌ಪರಿಶೀಲಿಸುತ್ತದೆ.

**ಸರ್ ಕವಾಸ್ಜಿ ಜಹಾಂಗೀರ್ :** ಭೂಗರ್ಭಗಳಲ್ಲಿ ದುಡಿಮೆಗಾಗಿ ಗರ್ಭಿಣಿಸ್ತ್ರೀಯರು ಹೋಗಲು ಏನಾದರೂ ನಿರ್ಬಂಧಗಳಿವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ನಿರ್ಬಂಧಗಳನ್ನು ವಿಧಿಸುವುದು ಕಷ್ಟ. ಏಕೆಂದರೆ

ನನ್ನ ಮಾನ್ಯ ಮಿತ್ರರಿಗೆ ಗೊತ್ತಿರುವಂತೆ ಅನೇಕ ಹೆಂಗಸರಲ್ಲಿ ಗರ್ಭವತಿಯರಾಗಿರುವುದರ ಚಿಹ್ನೆಯನ್ನು ಗುರುತಿಸುವುದು ತುಂಬ ಕಷ್ಟ.

**ಸರ್ ಕವಾಸ್ಜಿ ಜಹಾಂಗೀರ್ :** ಸನ್ಮಾನ್ಯ ಸದಸ್ಯರಿಗೆ ಖಂಡಿತವಾಗಿ ಗೊತ್ತು ಇದು ಅಂತಹ ಕಠಿಣ ಸಮಸ್ಯೆಯಲ್ಲ, ಇದನ್ನು ಬೇರೆ ಕ್ಷೇತ್ರಗಳಲ್ಲಿ ತಿಳಿಯಲಾಗುತ್ತದೆ. ಇಲ್ಲೂ ಏಕೆ ತಿಳಿಯಬಾರದು? ಕೊನೆಯ ಪಕ್ಷ ಯಾವ ಗರ್ಭಿಣಿ ಹೆಣ್ಣಾಳೂ ಗಣಿಯಾಳವನ್ನು ಹೋಗಬಾರದೆಂದೂ ವ್ಯಾವಹಾರಿಕವಾಗಿ ಅಲ್ಲದಿದ್ದರೂ, ತಾತ್ವಿಕವಾಗಿಯಾದರೂ ನಿಷೇಧವೇಕಿರಬಾರದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಚಾರ ನಮ್ಮ ಕ್ರಿಯಾತ್ಮಕ ಪರಿಶೀಲನೆಯಲ್ಲಿರುತ್ತದೆ ಎಂದು ನನ್ನ ಮಾನ್ಯ ಸ್ನೇಹಿತರಿಗೆ ಭರವಸೆ ಕೊಡುತ್ತೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಈ ಹೆಣ್ಣಾಳುಗಳ ಶಿಶುಗಳಿಗೆ ಮತ್ತು ಮಕ್ಕಳಿಗೆ ಏನಾದರೂ ಪಾಲನಾವ್ಯವಸ್ಥೆಯನ್ನು ಸರ್ಕಾರ ಮಾಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ನಿಧಿಯೊಂದು ಸ್ಥಾಪಿತವಾಗಿದೆ. ಮಕ್ಕಳ ಪಾಲನೆ ಅದರ ಕರ್ತವ್ಯಗಳಲ್ಲೊಂದು.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸರ್ಕಾರವು ಈ ಮಹಿಳಾ ಕಾರ್ಮಿಕರ ಶಿಶು ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಏನಾದರೂ ನಿರ್ದಿಷ್ಟ ವ್ಯವಸ್ಥೆಯನ್ನು ಮಾಡಿದೆಯೆ ಎಂದು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದೊಂದು (ಕಾರ್ಮಿಕ ಕಲ್ಯಾಣ ನಿಧಿ) ಶಾಸನಬದ್ಧ ಸಂಸ್ಥೆ, ಅದು ನಿರ್ವಹಿಸಬೇಕಾದ ಕರ್ತವ್ಯಗಳಲ್ಲೊಂದು ಹೆಣ್ಣಾಳುಗಳ ಶಿಶುಗಳ ಮಕ್ಕಳ ಪಾಲನೆ.

**ಪ್ರೊ ॥ ಎನ್.ಜಿ.ರಂಗ :** ಸರ್ಕಾರವು ಗಣಿಗಳಲ್ಲಿ ಕೆಲಸಮಾಡುತ್ತಿರುವ ಮಹಿಳೆಯರ ಸಂಖ್ಯೆಯನ್ನು ಕುಗ್ಗಿಸಿ, ಅಲ್ಲಿ ಪುರುಷರ ಸಂಖ್ಯೆಯನ್ನು ಹೆಚ್ಚುಮಾಡುವ ಬಗ್ಗೆ ಏನಾದರೂ ಪರಿಣಾಮಕಾರಿ ಕ್ರಮಗಳನ್ನು ತೆಗದುಕೊಂಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಪರಿಶೀಲನೆಯಲ್ಲಿದೆ.

**ಪ್ರೊ॥ ಎನ್.ಜಿ. ರಂಗ :** ಏನಾದರೂ ಕ್ರಮಕೈಗೊಳ್ಳಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ರಮಗಳನ್ನು ಕುರಿತು ಆಲೋಚನೆ ಮಾಡಲಾಗುತ್ತಿದೆ.

**ಡಾ॥ ಜಿ.ವಿ. ದೇಶ್‌ಮುಖ್ :** ಶಾಸನಬದ್ಧ ವಿಧಿಗಳ ಜೊತೆಗೆ, ಗರ್ಭಿಣಿ ಸ್ತ್ರೀಯರ, ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಲು ಸರ್ಕಾರ ಏನಾದರೂ ವ್ಯವಸ್ಥೆ ಮಾಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬುದ್ಧಿವಂತಿಕೆ ಮಾನ್ಯ ಸದಸ್ಯರ ಏಕಸ್ವಾಮ್ಯ ಸ್ವತ್ತಲ್ಲವೆಂದು ತಿಳಿಸಲು ಅವಕಾಶ ಕೊಡುವರೆ?

**ಡಾ॥ ಜಿ.ವಿ. ದೇಶ್‌ಮುಖ್ :** ಅದು ಹಾಗೆಯೇ, ಸರ್ಕಾರದ ಏಕಸ್ವಾಮ್ಯ ಸ್ವತ್ತೂ ಅಲ್ಲ.

# ೨೨೯
# ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಅಭಾವ *

**೨೪೦. ಶ್ರೀ ಮನುಸುಬೇದಾರ್ :** (ಅ) ರಕ್ಷಣಾ ಪಡೆಯ ಕಂಟ್ರಾಕ್ಟರ್‌ಗಳು ವಿಮಾನ ನಿಲ್ದಾಣ ನಿರ್ಮಾಣದಲ್ಲಿ ತೊಡಗಿರುವ ಕಾರ್ಮಿಕರಿಗೆ ಅಧಿಕ ಮಜೂರಿ ಕೊಡುತ್ತಿರುವುದೇ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಕೊರತೆಗೆ ಕಾರಣವಾಗಿದೆ ಎಂಬುದು ನಿಜವೆ?

ಆ) ಕಲ್ಲಿದ್ದಲು ಗಣಿಗಳಲ್ಲಿ, ಯುದ್ಧಪೂರ್ವದಲ್ಲಿ ಕೊಡುತ್ತಿದ್ದ ಮಜೂರಿ ಏಷ್ಟು? ಈ ಯುದ್ಧಾವಧಿಯ ಐದು ವರ್ಷಗಳಲ್ಲಿ, ಒಂದೊಂದು ವರ್ಷವೂ ಚಾಲ್ತಿಯಲ್ಲಿದ್ದ ಮಜೂರಿ ಏಷ್ಟು?

ಇ) ಜೀವನ ವೆಚ್ಚದ ಏರಿಕೆಗೆ ಅನುಗುಣವಾದ ಯೋಗ್ಯ ಮಜೂರಿ ಕೊಡದ ಗಣಿ ಮಾಲೀಕರ ನಿರ್ಲಕ್ಷ್ಯವೇ ಕಲ್ಲಿದ್ದಲು ಗಣಿಗಳ ಉತ್ಪಾದನೆಯ ಇಳಿಮುಖಕ್ಕೆ ಕಾರಣ – ಎಂಬ ಅಂಶ ನಿಜವೆ?

ಈ) ಈ ಕೆಳಗಿನ ಪರಿಸ್ಥಿತಿಯನ್ನು ಪರಿಹರಿಸಲು ಸರ್ಕಾರ ಏನು ಕ್ರಮಕೈಗೊಂಡಿದೆ? (i) ಕಾರ್ಮಿಕರ ಅಭಾವ, (ii) ಕಲ್ಲಿದ್ದಲ ಕೊರತೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಅ) ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಅಭಾವಕ್ಕೆ ರಕ್ಷಣಾ ಪಡೆಯ ಕಂಟ್ರಾಕ್ಟರುಗಳು ನೀಡುವ ಅಧಿಕ ಮಜೂರಿಯು (Contributory) ಒಂದು ಕಾರಣವಾಗಿದೆ.

ಆ) ಒಂದು ಹೇಳಿಕೆಯನ್ನು ಸದನದ ಮುಂದಿರಿಸಿದೆ **

ಇ) ಏರಿದ ಜೀವನವೆಚ್ಚಕ್ಕೆ ಹೊಂದಾಣಿಕೆಯಾಗುವಂತೆ ಕಲ್ಲಿದ್ದಲು ಗಣಿ ಕಾರ್ಮಿಕರ ಮಜೂರಿಯನ್ನು ಬಹಳ ದಿನಗಳಿಂದಲೂ ಪರಿಷ್ಕರಿಸದೆ ಇರುವುದು ಸತ್ಯಾಂಶವೇ! ಲಭ್ಯ ಕಾರ್ಮಿಕರ ಸಂಖ್ಯೆ ಇಳಿಮುಖವಾಗಿರುವುದಕ್ಕೆ ಇದು ಒಂದು ಕಾರಣ.

ಈ) ಶ್ರೀ ನಿಯೋಗಿಯವರ ತಾರಾಂಕಿತ ಪ್ರಶ್ನಾಂಕ ೧೭೭ರ (ಅ), (ಆ), (ಈ) ಮತ್ತು (ಊ) ಭಾಗಗಳಿಗೆ ಮಾನ್ಯ ಸರಕು ಸರಬರಾಜು ಸದಸ್ಯರು ಕೊಟ್ಟ ಉತ್ತರದ ಕಡೆಗೆ, ಮಾನ್ಯ ಸದಸ್ಯರ ಗಮನ ಸೆಳೆಯಲು ಇಚ್ಛಿಸುತ್ತೇನೆ. ಅದು ಸರ್ಕಾರ ಕಾರ್ಮಿಕರ ಅಭಾವವನ್ನು, ಕಲ್ಲಿದ್ದಲ ಕೊರತೆಯನ್ನು ಪರಿಹರಿಸಲು ತೆಗೆದುಕೊಂಡ ವಿವಿಧ ಕ್ರಮಗಳ ಬಗ್ಗೆ ವಿವರಣೆಯಿಂದ ಕೂಡಿದೆ.

ಡಿಸೆಂಬರ್ ೧೯೪೩ರಲ್ಲಿ ಧನ್‌ಬಾದ್‌ನಲ್ಲಿ ಸಮಾವೇಶವಾಗಿದ್ದ ಈ ಕೈಗಾರಿಕೆಯ ಪ್ರತಿನಿಧಿಗಳು ಕಲ್ಲಿದ್ದಲು ಕಾರ್ಮಿಕರ ನಗದು ಮಜೂರಿಯನ್ನು ಹೆಚ್ಚಿಸಲೂ ರಿಯಾಯಿತಿ ದರದಲ್ಲಿ ಆಹಾರ ಪದಾರ್ಥಗಳನ್ನು ಪೂರೈಸಲೂ ಒಪ್ಪಿಕೊಂಡಿದ್ದಾರೆ.

**ಶ್ರೀ ಮನುಸುಬೇದಾರ್ :** ಗಣಿ ಮಾಲೀಕರು ನಿರ್ವಾಹವಿಲ್ಲದೆ ಕೊಡಬೇಕಾಗಬಹುದಾದ ಅಧಿಕ ಮಜೂರಿಯನ್ನು ಯುದ್ಧಪೂರ್ವ ಮಜೂರಿ ದರದೊಡನೆ ಹೋಲಿಸಿದಾಗ ಎಷ್ಟು ಹೆಚ್ಚಳ ಕಂಡುಬರುತ್ತದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೧೦–೧೧–೧೯೪೪, ಪು. ೫೬೧.

** ಆ ವಿವರಪಟ್ಟಿಯನ್ನು ಇಲ್ಲಿ ಲಗತ್ತಿಸಿಲ್ಲ (ಸಂಪಾದಕ)

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ಷಮಿಸಿ, ನಾನು ಆ ಅಂಕಿಅಂಶ ಕೊಡಲಾರೆ. ಆದರೆ ನನ್ನ ಬಳಿ ಅದಕ್ಕೆ ಸಂಬಂಧಿಸಿದ ಸಾಕಷ್ಟು ಸಮಗ್ರವಾದ ವಿವರ ಇಲ್ಲಿದೆ. ಸನ್ಮಾನ್ಯ ಸದಸ್ಯರು ತಮಗೆ ಬೇಕಾದ ಮಾಹಿತಿಯನ್ನು ಅಲ್ಲಿದ ಪಡೆಯಬಹುದು.

**ಶ್ರೀ ಮನುಸುಬೇದಾರ್ :** ಶೋಚನೀಯ ರೀತಿಯಲ್ಲಿ ನಿರ್ವಾಹವಿಲ್ಲದೆ ಈ ಗಣಿ ಕೆಲಸಕ್ಕೆ ನೂಕಲ್ಪಟ್ಟ ಈ ಮಹಿಳೆಯರಿಗೆ, ಇತರ ವೃತ್ತಿಗಳಲ್ಲಿ ನೆಲದ ಮೇಲೆ ದುಡಿಯುವ ಮಹಿಳೆಯರಿಗಿಂತ ಸ್ವಲ್ಪ ಹೆಚ್ಚಿನ 'ಹಿಡಿಗೂಳು' ದೊರೆಯುವಂತೆ ಸರ್ಕಾರ ನೋಡಕೊಳ್ಳಬಾರದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ನನ್ನ ಗೌರವಾನ್ವಿತ ಸ್ನೇಹಿತರಿಗೆ ಭರವಸೆ ಕೊಡುತ್ತೇನೆ. ಕಲ್ಲಿದ್ದಲು ಗಣಿಗಳಲ್ಲಿ ವೇತನ ಶೇಕಡ ೫೦ರಷ್ಟು ಹೆಚ್ಚಾಗಿದೆ.

**ಶ್ರೀ ಮನುಸುಬೇದಾರ್ :** ಗಣಿ ಮಾಲೀಕರ ಮೇಲೆ, ಹೆಚ್ಚು ವೇತನ ಕೊಡುವಂತೆ, ಒತ್ತಡ ತರಲು ಸರ್ಕಾರ ಏನು ಮಾಡಿದೆ? ಯುದ್ಧಪೂರ್ವದಲ್ಲಿ ಸರ್ಕಾರ ಕಲ್ಲಿದ್ದಲಿಗೆ ೩ ರೂ. ೮ ಆಣೆ ಕೊಡುತ್ತಿದ್ದರೆ, ಈಗ ೯ ರೂ. ೮ ಆಣೆ ಕೊಡುತ್ತಿದೆ. ನೀವು ಕಲ್ಲಿದ್ದಲಿಗೆ ಅಷ್ಟು ಹೆಚ್ಚು ಕೊಡುತ್ತಿರುವಾಗ, ಈ ಹೆಚ್ಚಳದ ಒಂದು ಭಾಗವು ಗಣಿಗೆ ನೂಕಲ್ಪಟ್ಟ ಮಹಿಳಾ ಕಾರ್ಮಿಕರಿಗೆ ತಲುಪುವಂತೆ ನಿರ್ಬಂಧ ವಿಧಿಸಬಹುದಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ಅಗತ್ಯವಿರುವ ಎಲ್ಲ ಕ್ರಮಗಳನ್ನು ಜಾರಿಮಾಡಿದ್ದೇವೆ.

**ಶ್ರೀ ಎನ್.ಎಂ. ಜೋಷಿ :** ಭಾರತ ಸರ್ಕಾರವು, ಗಣಿ ಕಾರ್ಮಿಕರನ್ನು ಸೇನೆಯ ಕಂಟ್ರಾಕ್ಟರ್‌ಗಳು ನೇಮಿಸಿಕೊಳ್ಳುವುದನ್ನು ತಡೆದದ್ದರಿಂದ, ಅವರು ಹಸಿವಿನಿಂದ ತಪ್ಪಿಸಿಕೊಳ್ಳಲು ವಿಧಿಯಿಲ್ಲದೆ, ಗಣಿ ಕೆಲಸಕ್ಕೆ ನೂಕಲ್ಪಡುವಂಥ ದುಃಖಸ್ಥಿತಿಗೆ ಬರುವಂತಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಯಿಂದ ನೀವು ಪ್ರಸ್ತಾಪಿಸುತ್ತಿರುವ ವಿಷಯಗಳು ಉದ್ಭವಿಸುವುದಿಲ್ಲ.

**ಪ್ರೊ॥ ಎನ್.ಜಿ. ರಂಗ :** ಈ ನಾಡಿನ ಪುರುಷರಿಂದ ಗಳಿಸಿಕೊಳ್ಳಲಾರದ ಯಾವ ವಿಶೇಷ ಅರ್ಹತೆ, ಮತ್ತು ಕೌಶಲ ಈ ೧೬,೦೦೦ ಮಂದಿ ಮಹಿಳಾ ಗಣಿ ಕಾರ್ಮಿಕರಲ್ಲಿದೆ ಎಂಬ ಕಾರಣಕ್ಕಾಗಿ ಅವರನ್ನು ಬಲಾತ್ಕಾರವಾಗಿ ದುಡಿಯಲು ಗಣಿಯೊಳಕ್ಕೆ ತಳ್ಳಲಾಗುತ್ತಿದೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರನ್ನು ಕೇಳಿಯೂ ಇಲ್ಲ ; ಬಲವಂತದ ಪ್ರಶ್ನೆಯೂ ಇಲ್ಲ. ಅವರು ತಮ್ಮ ಸಾಂಪ್ರದಾಯಕ ವೃತ್ತಿಗೆ ತಮ್ಮನ್ನು ಒಡ್ಡಿಕೊಳ್ಳಲು ಅವಕಾಶವನ್ನು ಮಾತ್ರ ಕೊಡಲಾಗಿದೆ.

**ಶ್ರೀ ಎನ್.ಎಂ. ಜೋಷಿ :** ಇಂದಿನ ನಮ್ಮ ಕಲ್ಲಿದ್ದಲ ಉತ್ಪಾದನೆ ಯುದ್ಧಪೂರ್ವ ಉತ್ಪಾದನೆಗಿಂತ ಕಡಿಮೆ ಇದೆ. ಇದಕ್ಕೆ ಕಾರಣ, ಗಣಿ ಕಾರ್ಮಿಕರಿಗೆ ಕೊಡುತ್ತಿರುವ ಕಡಿಮೆ ಮಜೂರಿ ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಸ್ನೇಹಿತರು ಅವರಿಗೆ ಇಷ್ಟಬಂದ ಊಹೆಯನ್ನು ಮಾಡಿಕೊಳ್ಳಲು ಅವಕಾಶವಿದೆ.

## ೨೩೦
# ಮೂಲಭೂತವಾದಿ ಪ್ರಜಾಪ್ರಭುತ್ವ ಪಕ್ಷ ಮತ್ತು ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಪ್ರಾಂತೀಯ ಸರ್ಕಾರಗಳಿಂದ ಅನುದಾನ *

**೨೫೨. ಸರ್ ಅಬ್ದುಲ್ ಹಲೀಂ ಘಜ್ನಾವಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ವಿವರಗಳನ್ನು ಒದಗಿಸುವರೆ?

ಅ) ಕೇಂದ್ರ ಸರ್ಕಾರ ಕೊಡುತ್ತಿರುವ ೧೩,೦೦೦ ಮಾಸಿಕ ಅನುದಾನವನ್ನು ಹೊರತುಪಡಿಸಿ, ವಿವಿಧ ಪ್ರಾಂತೀಯ ಸರ್ಕಾರಗಳಿಂದ ಮೂಲಭೂತವಾದಿ ಪ್ರಜಾಪ್ರಭುತ್ವ ಪಕ್ಷ ಅಥವಾ ಭಾರತೀಯ ಕಾರ್ಮಿಕ ಪಕ್ಷದ ಪದಾಧಿಕಾರಿಗಳಾಗಲಿ ಅಥವಾ ಯಾವುದೇ ವ್ಯಕ್ತಿಗಳಾಗಲಿ ಆರ್ಥಿಕ ನೆರವನ್ನು ಪಡೆಯುತ್ತಿದ್ದಾರೆಯೆ?

ಆ) ಈ ಎರಡು ಸಂಸ್ಥೆಗಳು ಮಾಸಿಕ ೭೫,೦೦೦ ರೂ.ಗಳನ್ನು ಸಂಯುಕ್ತ ಪ್ರಾಂತ್ಯಗಳ ಸರ್ಕಾರದಿಂದ ಪಡೆಯುತ್ತಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಇ) ಸರ್ಕಾರವು ಈ ಎರಡು ಸಂಘಟನೆಗಳಿಗೆ ಮಾತ್ರ ಆರ್ಥಿಕ ನೆರವನ್ನು ನೀಡುವುದರ ಉದ್ದೇಶವೇನು? ಮತ್ತು

ಈ) ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಇತರ ಸಂಘಟನೆಗಳಾವುವು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸರ್ಕಾರದ ಬಳಿ ಮಾಹಿತಿ ಇಲ್ಲ ೧೩,೦೦೦ ರೂಪಾಯಿಗಳ ಅನುದಾನವನ್ನು ಮೂಲಭೂತವಾದಿ ಪ್ರಜಾಪ್ರಭುತ್ವ ಪಕ್ಷಕ್ಕೆ ಕೊಟ್ಟಿಲ್ಲ. ಆದರೆ ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಕೊಟ್ಟಿರುವುದು. ಅದು ಸಹ ಯಾವೊಬ್ಬ ಸದಸ್ಯನಿಗಾಗಲಿ, ಪದಾಧಿಕಾರಿಗಳಿಗಾಗಲಿ ಅಲ್ಲ. ಸಹಾಯಧನವನ್ನು ಕೊಡಲು ಒಪ್ಪಿ ಬರೆದ ಪತ್ರವು ಅಖಿಲ ಭಾರತ ವಾಣಿಜ್ಯ ಸಂಘದ ಕಾಂಗ್ರೆಸ್ಸು ಮತ್ತು ಭಾರತಿಯ ಕಾರ್ಮಿಕ ಒಕ್ಕೂಟ – ಈ ಉಭಯ ಸಂಘಟನೆಗಳನ್ನು ಉದ್ದೇಶಿಸಿತ್ತು. (ಪ್ರತ್ಯುತ್ತರವಾಗಿ) ಅಖಿಲ ಭಾರತ ವಾಣಿಜ್ಯ ಸಂಘ ಕಾಂಗ್ರೆಸ್ಸು ಯಾವ ಸಹಾಯವನ್ನು ಕೇಳಲಿಲ್ಲ.

ಆ) ಒಕ್ಕೂಟಕ್ಕೆ ಸಂಯುಕ್ತ ರಾಷ್ಟ್ರಗಳ ಸರ್ಕಾರವು ಕೊಟ್ಟ ಅನುದಾನದ ಬಗ್ಗೆ ನನಗೆ ತಿಳಿದಿಲ್ಲ.

ಇ) ಈ ಇಲಾಖೆ, ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಕೊಟ್ಟ ಅನುದಾನದ ಬಗ್ಗೆ ಸಂಬಂಧಿಸಿದೆ. ಈ ಅನುದಾನದ ಉದ್ದೇಶ, ಕೈಗಾರಿಕಾ ಕಾರ್ಮಿಕರ ನೈತಿಕ ಸ್ಥೈರ್ಯವನ್ನು ರೂಢಿಸಲು ಅಗತ್ಯವಾದ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಒಕ್ಕೂಟಕ್ಕೆ ಬೆಂಬಲ ಕೊಡುವುದು.

ಈ) ಕೇಂದ್ರ ಸರ್ಕಾರದಿಂದ ಬೇರೆ ಯಾವುದೇ ಕಾರ್ಮಿಕ ಸಂಘಟನೆಗಳು ಆರ್ಥಿಕ ನೆರವನ್ನು ಪಡೆಯುತ್ತಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೧೦–೧೧–೧೯೪೪, ಪು. ೫೬೮.

## ೨೩೧
## ಬ್ರಿಟಿಷ್ ಮತ್ತು ಅಮೆರಿಕದ ಸಂಸ್ಥೆಗಳಿಗೆ, ಅಂತಸ್ಥ ತೈಲ ಸಂಪನ್ಮೂಲಗಳನ್ನು ಅನ್ವೇಷಿಸಲು ಮತ್ತು ಅಭಿವೃದ್ಧಿಪಡಿಸಲು ಪರವಾನಗಿ *

**೪೮. ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು, ಖನಿಜ ರಿಯಾಯಿತಿಗಳನ್ನು (ಅನ್ವೇಷಿಸಲು ಮತ್ತು ಅಭಿವೃದ್ಧಿಪಡಿಸಲು ಕೊಟ್ಟ ಪರವಾನಗಿಯೂ ಸೇರಿದಂತೆ) ಅಂತಸ್ಥ ತೈಲ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ. ಬ್ರಿಟಿಷ್ ಮತ್ತು ಅಮೆರಿಕದ ಸಂಸ್ಥೆಗಳಿಗೆ ಕೊಟ್ಟ ಬಗ್ಗೆ ; ೧೯೪೩ನೆಯ ಆಗಸ್ಟ್ ೨ರಂದು ಸದನದ ಮುಂದಿರಿಸಿದ ವಿವರಪಟ್ಟಿಯನ್ನು, ತಹಲ್‌ವರೆಗೂ ಪರಿಷ್ಕರಿಸಿ ಸದನದಲ್ಲಿ ಮಂಡಿಸುವರೆ?

ಆ) ವಿವಿಧ ಪ್ರಾಂತ್ಯ ಸರ್ಕಾರಗಳು ಭೂ – ಭೌತಿಕ ಅನ್ವೇಷಣೆಗಳನ್ನು ಮಾಡಲು ಪರವಾನಗಿಯನ್ನು ಕೊಟ್ಟಿರುವುದು ನಿಜವೆ? ಹಾಗಿದ್ದಲ್ಲಿ, ಸಂಬಂಧಿಸಿದ ಪ್ರಾಂತ್ಯ ಸರ್ಕಾರಗಳು ಅಂಥ ಪರವಾನಗಿ ಕೊಡುವ ಮುನ್ನ ಭಾರತ ಸರ್ಕಾರದೊಡನೆ ಸಮಾಲೋಚಿಸಿದ್ದವೆ?

ಇ) ಯಾವ ಸಂಸ್ಥೆಗಳಿಗೆ ಈ ಪರವಾನಗಿ ಕೊಡಲಾಗಿದೆ? ಯಾವ ಕ್ಷೇತ್ರಕ್ಕೆ ಸಂಬಂಧಿಸಿದಂತೆ? ಮತ್ತು ಅದರ ನಿಬಂಧನೆಗಳೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಕಾಲಕ್ರಮದಲ್ಲಿ ವಿವರಪಟ್ಟಿಯನ್ನು ಸದನದ ಮುಂದಿರಿಸಲಾಗುವುದು.

## ೨೩೨
## ಭಾರತೀಯ ವಾಣಿಜ್ಯ ಸಂಘಗಳ (ತಿದ್ದುಪಡಿ) ಮಸೂದೆ **

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) : ನನ್ನ ಹೆಸರಿನಲ್ಲಿರುವ ಗೊತ್ತುವಳಿಯನ್ನು ಪ್ರಸ್ತಾಪಿಸಲು ಇಚ್ಛಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೪, ೧೦–೧೧–೧೯೪೪, ಪು. ೫೭೪.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೪, ೧೪–೧೧–೧೯೪೪, ಪು. ೭೩೦.

## ೨೩೩
## ದೆಹಲಿಯ ವಿದ್ಯುತ್ ಪೂರೈಕೆ ಮತ್ತು ಟ್ರಾಕ್ಷನ್ ಸಂಸ್ಥೆ *

**೪೧೯. ಶ್ರೀ ಕೆ.ಸಿ.. ನಿಯೋಗಿ :** ಅ) ಡೆಲ್ಲಿ ಎಲೆಕ್ಟ್ರಿಕ್ ಸಪ್ಲೈ ಅಂಡ್ ಟ್ರಾಕ್ಷನ್ ಕಂಪನಿ (ಲಿ.) ಸಂಸ್ಥೆಯು ವಿದೇಶಿ ಸಂಸ್ಥೆಯೆ? ಎಷ್ಟು ದಿನಗಳಿಂದ ದೆಹಲಿ ಪ್ರಾಂತ್ಯದಲ್ಲಿ ವ್ಯವಹಾರ ಮಾಡುತ್ತಿದೆ? ಮತ್ತು ಇದರ ಸೇವಾಕ್ಷೇತ್ರದ ವ್ಯಾಪ್ತಿ ಏನು?

ಆ) ಎಷ್ಟು ಯೂನಿಟ್ಟು ವಿದ್ಯುತ್ತನ್ನು ಈ ಸಂಸ್ಥೆ ಟ್ರಾಕ್ಷನ್‌ಗಾಗಿ ಉಪಯೋಗಿಸುತ್ತಿದೆ? ತನ್ನ ಪೂರೈಕೆಯ ವಲಯದಲ್ಲಿ ಬಳಕೆದಾರರಿಗೆ ಎಷ್ಟು ಯೂನಿಟ್ಟು ವಿದ್ಯುತ್‌ನ್ನು ಕಳೆದ ೧೨ ತಿಂಗಳುಗಳಲ್ಲಿ ಮಾರಾಟ ಮಾಡಿದೆ? ಅದು ಪೂರೈಸುತ್ತಿರುವ ಒಟ್ಟು ಯೂನಿಟ್ಟುಗಳಲ್ಲಿ ಎಷ್ಟನ್ನು ತನ್ನ ಶಕ್ತಿಸ್ಥಾನದಲ್ಲಿ ಉತ್ಪಾದಿಸುತ್ತದೆ? ಮತ್ತು ಎಷ್ಟು ಯೂನಿಟ್ಟುಗಳನ್ನು ಅದು ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದಿಂದ ಕೊಳ್ಳುತ್ತದೆ?

ಇ) ಈ "ದೆಹಲಿ ವಿದ್ಯುತ್ ಪೂರೈಕೆ ಮತ್ತು ಟ್ರಾಕ್ಷನ್ ಕಂಪೆನಿ"ಯು ಅನೇಕ ವರ್ಷಗಳಿಂದ ತನ್ನ ಶಕ್ತಿಸ್ಥಾವರದ ವಿದ್ಯುತ್ ಉತ್ಪಾದನೆಯನ್ನು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸಿಲ್ಲ; ಮತ್ತು ಕೆಲವು ದಿನಗಳಿಂದ ಎಲ್ಲ ವ್ಯಾವಹಾರಿಕ ಉದ್ದೇಶಗಳಿಗೆ, ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ನಿಯಂತ್ರಣದಲ್ಲಿರುವ "ಸರ್ಕಾರಿ ವಿದ್ಯುತ್ ಕೇಂದ್ರದ"ದ ಮೇಲೆ ಅವಲಂಬಿತವಾಗಿದೆ ಎಂಬ ಸಂಗತಿ ನಿಜವೆ?

ಈ) ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ಸರ್ಕಾರದಿಂದ ಪ್ರಾಯೋಜಿತವಾದ ಕಂಪೆನಿಯಾಗಿದ್ದು, ಲಾಭರಹಿತ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ ಎಂಬುದು ವಾಸ್ತವವೆ?

ಉ) ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದಿಂದ "ಡೆಲ್ಲಿ ಎಲೆಕ್ಟ್ರಿಕ್ ಸಪ್ಲೈ ಅಂಡ್ ಟ್ರಾಕ್ಷನ್ ಕಂಪೆನಿ (ಲಿ.)" ಪಡೆಯುವ ವಿದ್ಯುತ್ತಿಗೆ ತಲಾ ಯೂನಿಟ್ಟಿಗೆ ಎಷ್ಟು ದರ ಕೊಡುತ್ತದೆ? ಮತ್ತು ಯಾವ ವಿವಿಧ ದರಗಳಲ್ಲಿ ತಾನು (ಡೆಲ್ಲಿ ಎಲೆಕ್ಟ್ರಿಕ್ ಸಪ್ಲೈ ಅಂಡ್ ಟ್ರಾಕ್ಷನ್ ಕಂಪನಿ (ಲಿ) ವಿವಿಧ ವರ್ಗದ ಬಳಕೆದಾರರಿಗೆ ಮಾರಾಟ ಮಾಡುತ್ತದೆ?

ಊ) ಸರ್ಕಾರವು ಡೆಲ್ಲಿ ಎಲೆಕ್ಟ್ರಿಕಲ್ ಸಪ್ಲೈ ಅಂಡ್ ಟ್ರಾಕ್ಷನ್ ಕಂಪೆನಿ (ಲಿ)ಗೆ ನಿಯಮಾನುಗುಣ ಫೆಬ್ರವರಿ ೧೯೪೭ರಲ್ಲಿ ಮುಕ್ತಾಯಗೊಂಡಾಗ, ಅದನ್ನು ಕೊಂಡುಕೊಳ್ಳುವ ಅಭಿಪ್ರಾಯ ಸರ್ಕಾರಕ್ಕಿದೆಯೆ? ಹಾಗಿದ್ದಲ್ಲಿ ತನ್ನ ಐಚ್ಛಿಕವನ್ನು ವ್ಯಕ್ತಪಡಿಸುವ ಪ್ರಶ್ನೆ ಇನ್ನೂ ನಿರ್ಧಾರವಾಗಿಲ್ಲವೆ?

ಅದರ ಫಲಿತಾಂಶವೇನು?

ಋ) ಸದರಿ ಸಂಸ್ಥೆಯನ್ನು ಕೊಳ್ಳುವುದಾದರೆ, ಸರ್ಕಾರ ತೆರಬೇಕಾದ ಹಣದ ಮೊತ್ತವೆಷ್ಟು? ಮತ್ತು ಎಷ್ಟರಮಟ್ಟಿಗೆ, ಈ ಕೊಳ್ಳುವಿಕೆಯಿಂದ, ಭಾರತದ ಲೆಕ್ಕದಲ್ಲಿ ಇಂಗ್ಲೆಂಡಿನಲ್ಲಿರುವ ಸ್ಟರ್ಲಿಂಗ್ ಬಾಕಿಯನ್ನು ಉಪಯೋಗಿಸಲು ಸಮರ್ಥವಾಗುತ್ತದೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಅ) ಹೌದು. ಕಂಪನಿಯ ಪರವಾನಗಿ ೧೯೦೫, ಮಾರ್ಚ್ ೨ನೆಯ ದಿನಾಂಕದಿಂದ ಆರಂಭವಾಗಿದೆ. ಅದರ ಪೂರೈಕೆ ಕ್ಷೇತ್ರ ಇಷ್ಟನ್ನು ಒಳಗೊಂಡಿದೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ ೫, ೧೫–೧೧–೧೯೪೪, ಪು. ೮೦.

(ಮುಂದೆ ಸೂಚಿಸಿರುವಂತೆ).

(i) ದೆಹಲಿ ಪುರಸಭಾ ಸಮಿತಿಯ ಅಧಿಕಾರ ವ್ಯಾಪ್ತಿಯಲ್ಲಿರುವ ಸಂಪೂರ್ಣ ಪ್ರದೇಶ.

(ii) ದೆಹಲಿ ಸಿವಿಲ್ ಸ್ಟೇಷನ್ನಿನ ಸಂಪೂರ್ಣ ಸೂಚಿತ ಪ್ರದೇಶ.

(iii) ಪಶ್ಚಿಮ ದೆಹಲಿಯ ಸಂಪೂರ್ಣ ಸೂಚಿತ ಪ್ರದೇಶ.

(iv) ದೆಹಲಿ ಜಿಲ್ಲಾ ಮಂಡಲಿಯ ಅಧಿಕಾರವ್ಯಾಪ್ತಿಯಲ್ಲಿರುವ ಒಂದು ಪ್ರದೇಶ.

ಆ) ಯುದ್ಧಸಮಯದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಆ ಮಾಹಿತಿಯನ್ನು ಕೊಡಲಾಗದು.

ಇ) ಹೌದು ; ಕಂಪೆನಿಯ ಉತ್ಪಾದನಾ ಸ್ಥಾವರವು ಹೆಚ್ಚು ಕಡಮೆ ಪರ್ಯಾಯ ವ್ಯವಸ್ಥೆಯಾಗಿ ಬಳಕೆಯಾಗುತ್ತಿದೆ.

ಈ) ಹೌದು.

ಉ) ಹೇಳಿಕೆಯನ್ನು ಸದನದ ಮುಂದಿರಿಸಿದೆ.

ಊ) ಹೌದು ; ಈ ಪ್ರಶ್ನೆ ದೆಹಲಿಯ ಮುಖ್ಯ ಆಯುಕ್ತರ ಪರಿಶೀಲನೆಯಲ್ಲಿದೆ.

ಋ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ ೧೯೧೦ರ ೭ನೆಯ ಭಾಗದ ಉಪವಿಭಾಗ (i)ರ ಪ್ರಥಮ ವಿಧಿಯ ಪ್ರಕಾರ, ಕಂಪೆನಿಯನ್ನು ಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರೆ, ಪರವಾನಗಿದಾರರ ಆಸ್ತಿಯ ಬೆಲೆಯನ್ನು ಕೊಡಬೇಕಾಗುತ್ತದೆ. ಅದರ ಅಂದಾಜು ಬೆಲೆಯು ಗೊತ್ತಿಲ್ಲದೆ ಇರುವುದರಿಂದ ಪ್ರಶ್ನೆಯ ಎರಡನೆಯ ಭಾಗಕ್ಕೆ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ.

**ಹೇಳಿಕೆ**

ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರವು (ಸೀಮಿತ) ತಾನು ಸಗಟಾಗಿ ಪೂರೈಸುವ ವಿದ್ಯುತ್ತಿಗೆ ದೆಹಲಿ ವಿದ್ಯುತ್ ಪೂರೈಕೆ ಮತ್ತು ಟ್ರಾಕ್ಷನ್ ಕಂಪೆನಿಗೆ ಒಂದು ಯೂನಿಟ್ಟಿಗೆ ೬೯ ಆಣೆಗಳಂತೆ ದರ ವಿಧಿಸುತ್ತದೆ.

"ದೆಹಲಿ ವಿದ್ಯುತ್ ಪೂರೈಕೆ ಮತ್ತು ಟ್ರಾಕ್ಷನ್ ಕಂಪೆನಿ (ಲಿ)" ವಿಧಿಸುವ ದರಗಳು.

| | | |
|---|---|---|
| ದೀಪಕ್ಕೆ, ಫ್ಯಾನಿಗೆ | : | ಒಂದು ಯೂನಿಟ್‌ಗೆ ೩ ಆಣೆಗಳು. ನಿಯತವಾಗಿ ವಿದ್ಯುತ್ ಬಿಲ್‌ಅನ್ನು ಪಾವತಿ ಮಾಡಿದಾಗ ಯೂನಿಟ್ಟಿಗೆ ೩ ಪೈಸೆ ರಿಯಾಯಿತಿ. |
| ಗೃಹಕೃತ್ಯಕ್ಕೆ ವಿದ್ಯುತ್ | : | (ಶೈತ್ಯೀಕರಣ, ನೀರು ಕಾಯಿಸುವಿಕೆ, ರೆಫ್ರಿಜರೆಟರ್, ರೇಡಿಯೇಟರ್ ಮತ್ತು ಹವಾನಿಯಂತ್ರಣ) ಯೂನಿಟ್ಟಿಗೆ ಒಂದು ಆಣೆ. |
| ಬ್ಯಾಟರಿ ಚಾರ್ಜಿಂಗ್ | : | ಒಂದು ಯೂನಿಟ್ಟಿಗೆ ಎರಡು ಆಣೆಗಳು. ಬಿಲ್ ಹಣವನ್ನು ನಿಗದಿತ ಕಾಲಕ್ಕೆ ಪಾವತಿ ಮಾಡಿದರೆ ಶೇಕಡ ಹತ್ತರಷ್ಟು ರಿಯಾಯಿತಿ. |

ಕೈಗಾರಿಕೆ :

೭೫. ಕೆ.ವಿ.ಎ. ತನಕ ಲೋಡ್ ಇರುವ ಬಳಕೆದಾರರಿಗೆ ನಿಯತ ಕಾಲಗಳಲ್ಲಿ ಪೂರೈಕೆ – ೧.೧ ಆಣೆ ತಲಾ ಯೂನಿಟ್ಟಿಗೆ, ೦.೧ ಆಣೆ ಯೂನಿಟ್ಟಿಗೆ ರಿಯಾಯಿತಿ, ನಿಗದಿತ ಕಾಲದೊಳಗೆ ಬಿಲ್ ಪಾವತಿ ಮಾಡಿದರೆ.

ಅನಿಯತ ಕಾಲಗಳಲ್ಲಿ ಪೂರೈಕೆ – ನಿಯತ ಕಾಲಗಳಲ್ಲಿನ ಪೂರೈಕೆಗೆ ಹೇಗೋ ಹಾಗೆಯೇ ದರ ; ಅದರ ಜೊತೆಗೆ ಒಂದು ತಿಂಗಳಿಗೆ ಒಂದು ಎಚ್.ಪಿ.ಗೆ. ೫ ರೂಗಳ ಪ್ರತ್ಯೇಕ ದರ. (ಶೇಕಡ ೧೦ ರಷ್ಟು ರಿಯಾಯಿತಿ ಕ್ಲುಪ್ತ ಕಾಲಕ್ಕೆ ಬಿಲ್ ಪಾವತಿ ಮಾಡಿದಲ್ಲಿ) ವಿಶೇಷ ದರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

**ಶ್ರೀ ಕೆ.ಸಿ. ನಿಯೋಗಿ :** ದೆಹಲಿ ಪುರಸಭಾ ಸಮಿತಿಯು ಕೆಲವು ವರ್ಷಗಳ ಹಿಂದೆ, ತನ್ನ ಪ್ರದೇಶದಲ್ಲಿ ಅಥವಾ ಅದರ ಕೆಲವುಭಾಗಗಳಲ್ಲಿ ವಿದ್ಯುತ್ ಪೂರೈಸಲು ಉದ್ದೇಶಿಸಿ, ಪರವಾನಗಿಗಾಗಿ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯ ಪರಿಣಾಮವಾಗಿ, ಈ ವಿದ್ಯುತ್ ಕಂಪೆನಿಯ ಸ್ಥಿತಿಗತಿಗಳ ತನಿಖೆಗಾಗಿ, ಬಹುಶಃ ಸರ್ ಜೇಮ್ಸ್ ಪಿಟ್‌ಕಿಲ್ಲೇ ಅವರ ಅಧ್ಯಕ್ಷತೆಯಲ್ಲಿಯೋ ಅಥವಾ ಬಂಗಾಳ ಸರ್ಕಾರದ ವಿದ್ಯುತ್ ಸಲಹೆಗಾರರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿಯನ್ನು ರಚಿಸಿದ್ದರು. ಈ ಸಮಿತಿ ಅಥವಾ ವ್ಯಕ್ತಿಗಳು ವಿದ್ಯುತ್ ಸಂಸ್ಥೆಯ ವ್ಯವಹಾರದ ಬಗ್ಗೆ ವ್ಯಕ್ತಪಡಿಸಿದ ಟಿಪ್ಪಣಿ, ವ್ಯಾಖ್ಯೆಗಳ ಒಂದು ಸ್ಥೂಲಚಿತ್ರವನ್ನಾದರೂ ಕೊಡಲು ಸನ್ಮಾನ್ಯ ಸದಸ್ಯರಿಗೆ ಸಾಧ್ಯವಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಖಚಿತವಾದ ಪ್ರಶ್ನೆ ಕೇಳಿದರೆ, ಖಂಡಿತವಾಗಿಯು, ಸಂತೋಷದಿಂದ ಮಾಹಿತಿ ಒದಗಿಸಬಹುದು.

**ಶ್ರೀ ಕೆ.ಸಿ. ನಿಯೋಗಿ :** ಈ ಸಂಸ್ಥೆಯು ಗಳಿಸಿದ ಒಟ್ಟು ಲಾಭವನ್ನು ಖಚಿತಪಡಿಸಲಾಗುವುದೆ? 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ಮೂಲಧನದ ಐದು ಪಟ್ಟು ಲಾಭವನ್ನು ಅದು ಈಗಾಗಲೇ ಗಳಿಸಿದೆಯೆಂದು ಗೊತ್ತಾಗುತ್ತದೆ. ಅದು ಸದಸ್ಯರ ಗಮನಕ್ಕೆ ಬಂದಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಹೌದು, ನಾನು ಗಮನಿಸಿದ್ದೇನೆ.

**ಶ್ರೀ ಕೆ.ಸಿ. ನಿಯೋಗಿ :** ಮಾನ್ಯ ಸದಸ್ಯರು ಅದು ಸತ್ಯಾಂಶವೇ ಅಲ್ಲವೇ ಎಂದು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಅದರ ಬಗ್ಗೆ ಈಗ ಏನೂ ಹೇಳಲಾರೆ. ಮಾನ್ಯ ಸದಸ್ಯರಿಗೆ ಮಾಹಿತಿ ಬೇಕಿದ್ದರೆ ಅದಕ್ಕಾಗಿ ನೋಟಿಸ್ ಕೊಡಬೇಕು.

**ಶ್ರೀ ಕೆ.ಸಿ. ನಿಯೋಗಿ :** ಭಾಗ (ಅ) ಕ್ಕೆ ಸಂಬಂಧಿಸಿದಂತೆ, ಈ ವಿದ್ಯುತ್ ಕಂಪನಿ ತಾನು ಉತ್ಪಾದಿಸಿದ ಒಟ್ಟು ಯೂನಿಟ್ಟುಗಳಿಗೂ ಮತ್ತು ಸರ್ಕಾರಿ ನಿರ್ವಹಣೆಯ ಕಂಪನಿಗಳಿಂದ ಉತ್ಪಾದನಾ ದರದಲ್ಲೇ ಪಡೆದ ಯೂನಿಟ್ಟುಗಳಿಗೂ ಇರುವ ಅನುಪಾತವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಇದಕ್ಕೆ ಈ ಮೊದಲೇ ಉತ್ತರಿಸಿದ್ದೇನೆ. ಯುದ್ಧ ಸಮಯದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಆ ಮಾಹಿತಿಯನ್ನು ಕೊಡುವುದು ಉಚಿತವಲ್ಲ.

**ಶ್ರೀ ಕೆ.ಸಿ. ನಿಯೋಗಿ :** ನನಗೆ ಗೊತ್ತು. ಸನ್ಮಾನ್ಯ ಸದಸ್ಯರು ಆ ಕಂಪೆನಿ ತನ್ನ ಸ್ವಯಂ ಉತ್ಪಾದನೆಯ ವಿದ್ಯುತ್ತನ್ನು ತುಂಬ ಕಡಮೆ ಪ್ರಮಾಣದಲ್ಲಿ ಅನುಪಾತದಲ್ಲಿ ತಾನು ಪಡೆಯುವ ವಿದ್ಯುತ್ತಿಗಿಂತ ಕಡಿಮೆಯಾಗಿ ಮಾತ್ರ, ವಿತರಿಸಿದೆ ಎಂಬ ಅಂಶವನ್ನು ನಿರಾಕರಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಮ್ಮ ಪ್ರಶ್ನೆ, ಅಧಿನಿಯಮ ವಿಧಿಯನ್ನು ಸುತ್ತು ಬಳಸಿನಿಂದ ದಾಟುವ ವಿಧಾನ ; ನಾನು ಹಿಂದೆಗೆಯುವೆ.

**ಶ್ರೀ ಕೆ.ಸಿ. ನಿಯೋಗಿ :** ಸನ್ಮಾನ್ಯ ಸದಸ್ಯರು ತೌಲನಿಕವಾಗಿ ಅನುಪಾತವನ್ನು ಉಲ್ಲೇಖಿಸುವುದು ಸಹ ಕಾನೂನುಬಾಹಿರವಾಗುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಆ ವಿಷಯವನ್ನು ನಾನು ಇಲ್ಲಿಗೆ ಕೈಬಿಡುತ್ತೇನೆ.

ಮುಖ್ಯ ಆಯುಕ್ತರ ಪರಿಶೀಲನೆಯಲ್ಲಿರುವ ಅಂಶದ ಬಗ್ಗೆ – ಒಂದು ನೀತಿ ಧೋರಣೆಯ ಅಂಶವೂ ಅಡಗಿಕೊಂಡಿರುವುದರಿಂದ – ಸರ್ಕಾರವು ಮುಖ್ಯ ಆಯುಕ್ತರನ್ನು ಒಂದು ನಿರ್ದಿಷ್ಟ ನಿರ್ಣಯಕ್ಕೆ ಬರುವಂತೆ ಸೂಚಿಸುವುದೇ ಅಥವಾ ಭಾರತ ಸರ್ಕಾರವು ಮುಖ್ಯ ಆಯುಕ್ತರ ನಿರ್ಣಯವನ್ನು ನೇರವಾಗಿ ಜಾರಿಗೆ ತರುತ್ತದೆಯೋ ಅಥವಾ ಅದನ್ನು ಬೆಂಬಲಿಸುತ್ತದೆಯೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಭಾರತ ಸರ್ಕಾರವು, ತಾನೇ, ಈ ವಿಷಯವನ್ನು

ಪರಿಶೀಲಿಸುತ್ತದೆ.

**ಶ್ರೀ ಕೆ.ಸಿ. ನಿಯೋಗಿ :** ಭಾಗ (ಊ) ಗೆ ಸಂಬಂಧಿಸಿದಂತೆ, – ನೋಟಿಸ್ ಕೊಡಲು ಕಾಲಾವಕಾಶ ಕಡಿಮೆ ಇರುವುದರಿಂದ, ಸಾಧ್ಯವಾದರೆ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಈ ಸದನವನ್ನು ನಂಬಿಕೆಗೆ ತೆಗೆದುಕೊಂಡು, ಶೀಘ್ರ ನಿರ್ಧಾರಕ್ಕೆ ಬರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಾಲ ಮೀರುವ ಮುನ್ನ ಸರ್ಕಾರವು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದೆಂದು ನಾನು ನನ್ನ ಮಿತ್ರರಿಗೆ ಆಶ್ವಾಸನೆ ಕೊಡುತ್ತೇನೆ.

**ಶ್ರೀ ಕೆ.ಸಿ. ನಿಯೋಗಿ :** ಈ ಶಾಸನಸಭೆಯು, ದೆಹಲಿ ಪ್ರಾಂತ್ಯದ ಮಟ್ಟಿಗೆ, ವಾಸ್ತವವಾಗಿ ಪ್ರಾಂತೀಯ ಶಾಸನಸಭೆ, ಆದ್ದರಿಂದ ಮಾನ್ಯ ಸದಸ್ಯರು ಆ ವಿಷಯದ ಬಗ್ಗೆ, ಇಲ್ಲಿ ಪ್ರಸ್ತಾಪಿಸಲು, ಚರ್ಚಿಸಲು ನಿರ್ಣಯ ಕೈಗೊಳ್ಳಲು ಒಂದು ಅವಕಾಶ ಕಲ್ಪಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತೇನೆ.

**ಶ್ರೀ ಆರ್.ಆರ್. ಗುಪ್ತ :** ಸರ್ಕಾರದ ನಿಯಂತ್ರಣದಲ್ಲಿರುವ, ನವದೆಹಲಿಯಲ್ಲಿ ಸ್ಥಾಪಿತವಾಗಿರುವ ವಿದ್ಯುತ್‌ಶಕ್ತಿ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಪ್ರಶ್ನೆ ಉದ್ಭವಿಸದು. ಅದಕ್ಕೆ ನಾನು ಉತ್ತರಿಸಲಾರೆ.

# ೨೩೪
# ಕಲ್ಲಿದ್ದಲು ಗಣಿಗಳ ಮಹಿಳಾ ಕಾರ್ಮಿಕರ ಸ್ಥಿತಿಗತಿಯ ಅಧ್ಯಯನಕ್ಕಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಸೌಲಭ್ಯ ಒದಗಿಸಲು ನಿರಾಕರಣೆ *

**೫೭೯. ಶ್ರೀಮತಿ ರೇಣುಕಾ ರೇ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ಹೇಳಿಕೆ ನೀಡಿ: ಅ) ಕಲ್ಲಿದ್ದಲು ಗಣಿಗಳ ಮಹಿಳೆಯರ ಸ್ಥಿತಿಗತಿಯ ನಿಷ್ಪಕ್ಷಪಾತ ಅಧ್ಯಯನಕ್ಕಾಗಿ ಒಂದು ತನಿಖಾ ಸಮಿತಿಯನ್ನು ಕಳಿಸಲು ತಕ್ಕ ಸೌಲಭ್ಯಗಳನ್ನು ಒದಗಿಸಬೇಕೆಂದು ಅಖಿಲ ಭಾರತ ಮಹಿಳಾ ಸಮ್ಮೇಳನ ಸರ್ಕಾರವನ್ನು ಸಂಪರ್ಕಿಸಿ ಕೋರಿಕೆ ಸಲ್ಲಿಸಿದ್ದು ಹಾಗೂ ಮೇ ೩ರಂದು ಭಾರತ ಸರ್ಕಾರ ಇದೇ ಸಂಸ್ಥೆಗೆ ಅಂಥ ತನಿಖೆ ನಡೆಸಲು ಯಾವುದೇ ಅಭ್ಯಂತರ ಇಲ್ಲವೆಂದೂ, ಆದರೆ ಪ್ರಸ್ತುತದಲ್ಲಿ ಕಾಲ ಯುಕ್ತವೆನ್ನಿಸದೆಂದೂ ತಿಳಿಸಿದ್ದು ನಿಜ ತಾನೆ?

ಆ) ತರುವಾಯ ಅಖಿಲ ಭಾರತ ಮಹಿಳಾ ಸಮ್ಮೇಳನ ಮೇ ೨೬ರಂದು ಸಲ್ಲಿಸಿದ ಕೋರಿಕೆಗೆ, ಭಾರತ ಸರ್ಕಾರ ಮತ್ತೆ ಸೌಲಭ್ಯ ನೀಡಿಕೆಯನ್ನು ನಿರಾಕರಿಸಿ ಯಾವಾಗ ಸೂಕ್ತ ಕಾಲ ಎಂಬುದನ್ನು ಮುಂದೆ ತಿಳಿಸಲಾಗುವುದೆಂದು ಭರವಸೆಯನ್ನು ನೀಡಿದ್ದರೂ, ಇದುವರೆಗೆ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಸರ್ಕಾರದಿಂದ ಯಾವ ಸುದ್ದಿಯೂ ತಲುಪದಿರುವುದು ನಿಜ ತಾನೆ? ಈ ಶ್ರೀಮದ್ ಮೌನಕ್ಕೆ ಸರ್ಕಾರವನ್ನು ದೂಡಿದ ಕಾರಣಗಳಾವುವು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಮೊದಲ ಭಾಗದ ಪ್ರಶ್ನೆಗೆ ಉತ್ತರ ಇತ್ಯಾತ್ಮಕ. ಸಮ್ಮೇಳನ ಅಧ್ಯಕ್ಷರಿಗೆ ಬರೆದ ಸರ್ಕಾರದ ಪತ್ರದಲ್ಲಿ ಕಾರಣಗಳನ್ನು ವಿವರಿಸಲಾಗಿದೆ.

**ಶ್ರೀ ಕೆ.ಸಿ. ನಿಯೋಗಿ :** ಸರ್ಕಾರ ಭಾಗ (ಅ)೧ನಲ್ಲಿ ಸೂಚಿಸಲಾಗಿರುವ ಆಜ್ಞೆಯನ್ನು ಹೊರಡಿಸಲು ನಿಮಿತ್ತವಾದ ಸಂಗತಿಗಳನ್ನು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಾಲ ಸೂಕ್ತವಾಗಿರಲಿಲ್ಲ.

**ಶ್ರೀ ಎನ್. ಎಂ. ಜೋಶಿ :** ಕಾಲ ಸೂಕ್ತವಾಗಿರಲಿಲ್ಲ ಎಂದು ಹೇಳುವ ಸರ್ಕಾರದ ಮಾತಿನ ಅರ್ಥವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** 'ಸೂಕ್ತ' ಎಂಬ ಶಬ್ದ, ತುಂಬ ಸರಳವಾದದ್ದು ಎಂದು ನಾನು ಭಾವಿಸಿದ್ದೇನೆ. ಹಾಗೆಂದರೇನು ಎಂಬುದು ಪ್ರತಿಯೊಬ್ಬರಿಗೂ ಗೊತ್ತು. ಅದನ್ನು ಇನ್ನೂ ಸರಳಗೊಳಿಸುವ ಅಗತ್ಯವಿಲ್ಲ.

**ಶ್ರೀಮತಿ ರೇಣುಕಾ ರೇ :** ಇದೇ ಅವಧಿಯಲ್ಲಿ ರೆಗ್ಗೆ (Regge) ಮತ್ತು ಆರೋಗ್ಯ ಸಂವೀಕ್ಷಣಾ ಸಮಿತಿಗಳಿಗೆ ತನಿಖಾ ಪರವಾನಗಿ ನೀಡಿರುವುದು ನಿಜ ತಾನೆ? ಇದುವರೆಗೂ ಅಂಥ ಅನುಮತಿಯನ್ನು ಅಖಿಲ ಭಾರತ ಮಹಿಳಾ ಸಂಸ್ಥೆಗೆ ನೀಡದಿರುವುದು ವಾಸ್ತವ ತಾನೆ? ನಿಜವಾದಲ್ಲಿ ಇಂಥ ಭಿನ್ನ ನಿಲುವಿಗೆ ಆಧಾರವೇನು? ಮಹಿಳಾ ಕಲ್ಯಾಣದಲ್ಲಿ ಆಸಕ್ತಿ ಹೊಂದಿದ ಅಖಿಲ ಭಾರತ ಮಹಿಳಾ ಸಂಸ್ಥೆಯಂಥ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೦೦–೦೧.

ಜವಾಬ್ದಾರಿಯುತ ಸಂಘಕ್ಕೆ ಅನುಮತಿ ನಿರಾಕರಿಸಿದ್ದು ಯಾವ ಕಾರಣಕ್ಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವುಗಳು ಅಧಿಕೃತ ಸಂಸ್ಥೆಗಳಾದ್ದರಿಂದ ಅನುಮತಿಯನ್ನು ನೀಡಲಾಗಿದೆ.

**ಶ್ರೀಮತಿ ರೇಣುಕಾ ರೇ :** ಆ ಸಮಿತಿಯಲ್ಲಿ ಶಾಸನಸಭಾ ಸದಸ್ಯರು ಇಲ್ಲವೆ?

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮಾನ್ಯ ಸದಸ್ಯರು ವಾದ ಮಾಡುತ್ತಿದ್ದಾರೆ,

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಗಣಿಗಳಿಗೆ ಹೋಗಿ ತನಿಖೆ ಮಾಡಲು ಮಹಿಳೆಯರನ್ನು ತಡೆದದ್ದೇಕೆ? ಸರ್ಕಾರ ಮಹಿಳಾ ಸಂಸ್ಥೆಗೆ ಸಂಬಂಧಿಸಿದಂತೆ ಮಾತ್ರ 'ಕಾಲ ಸೂಕ್ತವಾಗಿಲ್ಲ' ಎಂಬ ಧೋರಣೆಯನ್ನು ತಳೆದದ್ದೇಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ತಮ್ಮದೇ ಆದ ಊಹೆಯನ್ನು ಮಾಡಿಕೊಳ್ಳಬಹುದು.

**ಶ್ರೀ ಎನ್.ಎಂ. ಜೋಶಿ :** ಗಣಿಗಳ ಸ್ಥಿತಿ ಹದಗೆಟ್ಟಿರುವುದರಿಂದ ನಿಷ್ಪಕ್ಷಪಾತ ಸಂಸ್ಥೆಗಳಿಂದ ತನಿಖೆ ಮಾಡಿಸಲು ಇಷ್ಟವಿಲ್ಲದೆ ಸರ್ಕಾರ 'ಕಾಲ ಸೂಕ್ತವಾಗಿಲ್ಲ' ಎಂಬ ಮಂತ್ರವನ್ನು ಜಪಿಸುತ್ತಿರುವುದು ಸತ್ಯವಲ್ಲವೆ ಎಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ತಮ್ಮದೇ ಆದ ಊಹೆಗಳನ್ನು ಮಾಡಲು ಸ್ವತಂತ್ರರು.

## ೨೩೫
## ಮಲೇರಿಯಾ ದೆಸೆಯಿಂದಾಗಿ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಕೊರತೆ *

**೫೮೦. ಶ್ರೀಮತಿ ರೇಣುಕಾ ರೇ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ಹೇಳಿಕೆ ನೀಡಿ: ಅ) ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಕೊರತೆಗೆ – ಅದರಲ್ಲೂ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳ ಅವಧಿಯಲ್ಲಿ – ಹೆಚ್ಚಿನ ಪ್ರಮಾಣದಲ್ಲಿ ಕಾರ್ಮಿಕರು ಮಲೇರಿಯಾ ರೋಗಪೀಡಿತರಾಗುವುದು ಮತ್ತು ಕ್ವಿನೈನ್ ಸರಬರಾಜಿನ ಕೊರತೆಯಿಂದ ಸಾಕಷ್ಟು ಪ್ರಮಾಣದ ಚಿಕಿತ್ಸೆ ಸಾಧ್ಯವಾಗದಿರುವುದು ಮುಖ್ಯ ಕಾರಣ ಎಂಬುದು ನಿಜ ತಾನೆ?

(ಆ) ಗಣಿ ಕಾರ್ಮಿಕರು ಕಾಯಿಲೆ ಕಸಾಲೆಗಳ ನ್ಯೂನ ಆಹಾರ ಪೋಷಣೆಗಳ ಪರಿಣಾಮದಿಂದ ನರಳಿ ನರಳಿ ನಶಿಸುವುದೇ ಅವರ ದಕ್ಷತೆಯ ವಿನಾಶಕ್ಕೆ ಪ್ರಬಲ ಕಾರಣ ಎಂಬ ಅರಿವು ಮಾನ್ಯ ಸದಸ್ಯರಿಗಿದ್ದಲ್ಲಿ, ಅದರ ನಿವಾರಣೆಗಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕಲ್ಲಿದ್ದಲು ಗಣಿಯ ಕಾರ್ಮಿಕರು ಆಯಾ ಕಾಲದ ಮಲೇರಿಯಾ ಸೋಂಕು ರೋಗದ ತೀವ್ರತೆಗೆ ಮುಂಜಾಗ್ರತಾ ರಕ್ಷಣೆ ಪಡೆದಿರುವುದಿಲ್ಲ. ಆದರೆ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಹೆಚ್ಚಿನ ಕಾರ್ಮಿಕರು ಈ ಕಾಯಿಲೆಯಿಂದ ನರಳುತ್ತಾರೆ ಎಂಬ ಮಾತು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೦೧–೦೨.

ಸರಿಯಲ್ಲ. ೧೯೪೩ ಹಾಗೂ ೧೯೪೪ರ ಆಗಸ್ಟ್ ತಿಂಗಳಿನಲ್ಲಿ ಕ್ರಮವಾಗಿ ಝೂರಿಯಾ ಕಲ್ಲಿದ್ದಲು ಗಣಿಯ ದಿನಗೂಲಿ ಕಾರ್ಮಿಕರಲ್ಲಿ ಸರಾಸರಿ ಸಾವಿರಕ್ಕೆ ೮೧ ಮತ್ತು ೮೦ ಜನ ಈ ಕಾಯಿಲೆಗೆ ಗುರಿಯಾಗಿದ್ದಾರೆ ; ೧೯೪೩ ಮತ್ತು ೧೯೪೪ರ ಸೆಪ್ಟೆಂಬರ್ ತಿಂಗಳಿನಲ್ಲಿ ಕ್ರಮವಾಗಿ ೧೧೧ ಮತ್ತು ೭೪ ಮಂದಿ ಈ ಕಾಯಿಲೆಯಿಂದ ನರಳಿದ್ದಾರೆ. ಚಿಕಿತ್ಸೆಗೆ ಸಾಕಷ್ಟು ಸೌಲಭ್ಯ ಕಲ್ಲಿದ್ದಲು ಮತ್ತು ಸಾಕಷ್ಟು ಕ್ವಿನೈನ್ ಹಾಗೂ ತತ್ಸಮಾನ ಔಷಧಿಗಳನ್ನು ಸರಬರಾಜು ಮಾಡಲು ಎಲ್ಲ ಪ್ರಯತ್ನವನ್ನು ಮಾಡಲಾಗಿದೆ.

ಆ) ಗಣಿ ಕಾರ್ಮಿಕರು ನ್ಯೂನ ಪೋಷಣೆಯಿಂದ ತೀವ್ರವಾಗಿ ನರಳುತ್ತಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಅವರ ಆರೋಗ್ಯಕ್ಕೆ ಸಂಬಂಧಪಟ್ಟಂತೆ, ೩೦ ಅಥವಾ ಹೆಚ್ಚಿಗೆ ಕಾರ್ಮಿಕರಿರುವ ಕಲ್ಲಿದ್ದಲು ಗಣಿಗಳಲ್ಲಿ ಒಂದು ಔಷಧಶಾಲೆಯನ್ನು ನಡೆಸಲು ಮತ್ತು ಅವರ ವೈದ್ಯರ ಮೂಲಕ ಔಷಧಿಯನ್ನು ವಿತರಿಸಲು ಸೂಚಿಸಲಾಗಿದೆ. ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ನಿಧಿಯನ್ನು ಇತ್ತೀಚೆಗೆ ಸ್ಥಾಪಿಸಿ, ಗಣಿ ಕಾರ್ಮಿಕರ ಕಾಯಿಲೆ ತಡೆಗಟ್ಟುವಿಕೆಗೆ ಕ್ರಮಕೈಗೊಳ್ಳಲು ಹಾಗೂ ವೈದ್ಯಕೀಯ ಸೌಲಭ್ಯವನ್ನು ಉತ್ತಮಪಡಿಸಲು ಧನಸಹಾಯ ನೀಡಲಾಗುತ್ತಿದೆ.

**ಶ್ರೀ ಕೆ.ಸಿ. ನಿಯೋಗಿ :** ನ್ಯೂನ ಪೋಷಣೆಯ ಅಂಶಕ್ಕೆ ಸಂಬಂಧಿಸಿದಂತೆ, ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರ ಕೊರತೆಯ ಜೊತೆಗೆ ನ್ಯೂನ ಪೋಷಣೆಯ ದೆಸೆಯಿಂದ ವ್ಯಕ್ತಿಗತ ಹುಟ್ಟುವಳಿ ಇಳಿಮುಖವಾಗಿದೆ ಎಂಬುದು ಒಪ್ಪಿತ ಸತ್ಯವಲ್ಲವೆ? ಮಾನ್ಯ ಸದಸ್ಯರು ದಯಮಾಡಿ ತಿಳಿಸಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸ್ನೇಹಿತರು ವ್ಯಕ್ತಪಡಿಸಿದ ಸಂಗತಿಗಳು ನನಗೆ ನಿಜವೆನ್ನಿಸುವುದಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಇತ್ತೀಚೆಗೆ ವಾಣಿಜ್ಯ ಮಂಡಲಿಯೊಂದಕ್ಕೆ ಭೇಟಿ ನೀಡಿದ ಮಾನ್ಯ ಸರಬರಾಜು ಸದಸ್ಯರು ಈ ಸಬಂಧವಾಗಿ ಹೇಳಿಕೆ ಕೊಟ್ಟ ನೆನಪು ನನಗಿದೆ. ಮಾನ್ಯ ಸದಸ್ಯರು ಅವರನ್ನು ವಿಚಾರಿಸಬಹುದಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರಿಗೆ ಸತ್ಯಸಂಗತಿ ಗೊತ್ತಿರುವುದರಿಂದ ವಿಚಾರಿಸುವ ಅಗತ್ಯ ಕಂಡುಬರುವುದಿಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಈ ಸಂಗತಿಯ ಸತ್ಯದ ಬಗೆಗೆ ಮಾನ್ಯ ಸದಸ್ಯರಿಗೆ ಪೂರ್ಣ ನಂಬಿಕೆ ಇದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ಉತ್ಪಾದನೆಯಲ್ಲಿ ಕೊರತೆ ಇಳಿಮುಖವಾಗಿದೆ ಎಂದು ನನಗೆ ಗೊತ್ತು. ಆದರೆ ಅದು ಪೂರ್ಣವಾಗಿ ಯಂತ್ರೋಪಕರಣಗಳ ಕೊರತೆಯಿಂದ ಆದದ್ದು ಎಂದು ನಾನು ತಿಳಿದಿದ್ದೇನೆ.

**ಶ್ರೀಮತಿ ರೇಣುಕಾ ರೇ :** ಮಾನ್ಯ ಸದಸ್ಯರು ವಿವಿಧ ಗಣಿಗಳಲ್ಲಿರುವ ಉಚಿತ ಔಷಧಾಲಯಗಳ ಪ್ರಸ್ತಾವನೆ ಮಾಡಿರುವುದರಿಂದ, ಅವು ನೀಡುವ ವೈದ್ಯಕೀಯ ಸೌಲಭ್ಯಗಳಾವುವು? ರಾಣಿಗಂಜ್ ಮತ್ತು ಝೂರಿಯಾ ಗಣಿಗಳಲ್ಲಿ ಅವು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ ಹಾಗೂ ಔಷಧಿಗಳನ್ನು ನೀಡುತ್ತಿವೆ ಎಂಬುದನ್ನು ತನಿಖೆ ಮಾಡಿ ಅಂಕಿಅಂಶಗಳನ್ನು ಪ್ರಕಟಿಸುವಿರಾ? ನನಗೆ ಸಿಕ್ಕಿದ ಸುದ್ದಿಯ ಪ್ರಕಾರ, ಸಾಕಷ್ಟು ಔಷಧಿಗಳಿಲ್ಲದೆ ಅವುಗಳಲ್ಲಿ ಕೆಲವು ಕೆಲಸಮಾಡುತ್ತಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಮೊದಲೇ ತಿಳಿಸಿದ ಹಾಗೆ, ಸಾಕಷ್ಟು ಸೌಲಭ್ಯಗಳಿಲ್ಲವೆಂಬ ಅಂಶವನ್ನು ಮನಗಂಡೇ ಸರ್ಕಾರ ಕಲ್ಲಿದ್ದಲು ಗಣಿಗಳ ಕಾರ್ಮಿಕ ಕಲ್ಯಾಣ ನಿಧಿಯನ್ನು ಸ್ಥಾಪಿಸಿದೆ.

# ೨೩೬
# ಗಣಿಗಳ ಆಳದಲ್ಲಿನ ಕೆಲಸಕ್ಕೆ ಮಕ್ಕಳ ನೇಮಕಾತಿ ವಿದ್ಯಮಾನಗಳು *

**೫೮೧. ಶ್ರೀಮತಿ ರೇಣುಕಾ ರೇ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಉತ್ತರಿಸಿ :

ಅ) ಗಣಿಗಳ ತಳಪಾಯದ ಕೆಲಸಕ್ಕೆ ಮಕ್ಕಳನ್ನು ನೇಮಿಸಿಕೊಳ್ಳಬಾರದೆಂಬ ಕಾನೂನನ್ನು ಉಲ್ಲಂಘಿಸಿದ ಘಟನೆಗಳು ದಿನೇ ದಿನೇ ಹೆಚ್ಚುತ್ತಿವೆ ಎಂಬ ಅರಿವು ನಿಮಗಿದೆಯೆ?

ಆ) ಉತ್ತರ ಇತ್ಯಾತ್ಮಕವಾಗಿದ್ದರೆ, ಕಾನೂನನ್ನು ತೀವ್ರವಾಗಿ ಜಾರಿಗೊಳಿಸಲಾಗುತ್ತಿದೆ ಎಂಬ ಭರವಸೆ ಮೂಡಿಸಲು ಕೈಗೊಂಡಿರುವ ಕ್ರಮಗಳಾವುವು?

ಇ) ಉತ್ತರ ನೇತ್ಯಾತ್ಮಕವಾಗಿದ್ದರೆ, ಮಾನ್ಯ ಸದಸ್ಯರು ವಿಷಯವನ್ನು ತನಿಖೆ ಮಾಡಿ, ನ್ಯಾಯಬಾಹಿರ ಪದ್ಧತಿಯ ನಿಲುಗಡೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗಣಿಗಳಲ್ಲಿ ಮಕ್ಕಳ ನೇಮಕಾತಿಯ ನಿಷೇಧವನ್ನು ಕುರಿತ ಭಾರತೀಯ ಗಣಿಗಳ ಕಾಯಿದೆಯ ಷರತ್ತುಗಳನ್ನು ಜಾರಿಗೊಳಿಸಲು ಗಣಿ ಇಲಾಖೆಯ ಅಧಿಕಾರಿಗಳು ಕ್ರಮಬದ್ಧ ತನಿಖೆಗಳನ್ನು ನಡೆಸುವರು ; ಅಂಥ ನ್ಯಾಯಬಾಹಿರ ಪದ್ಧತಿ ಎಲ್ಲಾದರೂ ಕಂಡುಬಂದಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವರು.

**ಶ್ರೀಮತಿ ರೇಣುಕಾ ರೇ :** ಝೂರಿಯಾ ಮತ್ತು ರಾಣಿಗಂಜ್ ಕಲ್ಲಿದ್ದಲು ಪ್ರದೇಶದ ಕೆಲವು ಗಣಿಗಳಲ್ಲಿ ಕಾನೂನಿನ ಉಲ್ಲಂಘನೆಯ ಎಷ್ಟೋ ಘಟನೆಗಳು ಹೆಚ್ಚುತ್ತಿವೆ. ೧೪ ಮತ್ತು ೧೫ ವರ್ಷಗಳ ಮಕ್ಕಳು, ವಯಸ್ಕರೆಂದು ಸಹಿಮಾಡಿ ಗಣಿ ಕೆಲಸಕ್ಕೆ ಹೋಗುತ್ತಿದ್ದಾರೆ ಎಂಬ ಅರಿವು ಮಾನ್ಯ ಸದಸ್ಯರಿಗಿದೆಯೆ? ಇದ್ದಲ್ಲಿ, ಆ ಬಗ್ಗೆ ಕೈಗೊಳ್ಳುವ ಕ್ರಮಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರಿಗೆ ನಿರ್ದಿಷ್ಟ ಗಣಿಗಳ ನಿರ್ದಿಷ್ಟ ಘಟನೆಗಳ ವಿವರ ಗೊತ್ತಿದ್ದರೆ ನನ್ನ ಅವಗಾಹನೆಗೆ ತರಲಿ ; ಆಗ ನಾನು ಸೂಕ್ತ ಕ್ರಮವನ್ನು ಖಂಡಿತ ತೆಗೆದುಕೊಳ್ಳುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೦–೩.

# ೨೩೭
# ಗಣಿಗಳ ಆಳದಲ್ಲಿ ಗರ್ಭಿಣಿ ಸ್ತ್ರೀಯರಿಂದ ಕೆಲಸ *

**೫೮೨. ಶ್ರೀಮತಿ ರೇಣುಕಾ ರೇ :** ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿ :

ಅ) ಗಣಿಗಳ ಆಳದಲ್ಲಿ ಒಂಬತ್ತು ತಿಂಗಳು ತುಂಬಿದ ಗರ್ಭಿಣಿ ಸ್ತ್ರೀಯರು ಕೆಲಸ ಮಾಡುವರು, ಹದಿನೈದು ದಿನಗಳ ಬಳಿಕ ಬಾಣಂತಿಯರು ಕೆಲಸಕ್ಕೆ ಹಾಜರಾಗುವರು, ಮಾತೃತ್ವ ಸೌಲಭ್ಯವಿಲ್ಲದ ಗಣಿಗಳಲ್ಲಿ ಇನ್ನೂ ದೀರ್ಘಕಾಲ ಕೆಲಸ ಮಾಡುವರು ಎಂಬ ನಿಜದ ಅರಿವು ಸದಸ್ಯರಿಗಿದೆಯೆ?

ಆ) ಗಣಿಗಳ ಆಳದಲ್ಲಿನ ಕೆಲಸದಲ್ಲಿ ಗರ್ಭಿಣಿ ಸ್ತ್ರೀಯರು ಭಾಗವಹಿಸುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ನೆಲದಾಳದ ಕೆಲಸದಲ್ಲಿ ತೊಡಗಿದ್ದ ಗರ್ಭಿಣಿ ಸ್ತ್ರೀಯರಿಗೆ ಕಳೆದ ವರ್ಷದಿಂದೀಚೆಗೆ ಅಪಾಯಗಳು ಸಂಭವಿಸಿವೆ ಎಂಬುದು ನಿಜವೆ? ಇಂಥ ಘಟನೆಗಳು ಇನ್ನೆಷ್ಟು ಜರುಗಿದೆ ಎಂಬುದನ್ನು ಬೆಳಕಿಗೆ ತರುವ ದಾರಿ ಯಾವುದು?

ಈ) ಕೆಲವು ಗಣಿಗಳಲ್ಲಿ ಮಾತ್ರ ಹೆರಿಗೆಗಾಗಿ ಸೌಲಭ್ಯವನ್ನು ಕೊಡಲಾಗುತ್ತಿದೆ ಎಂಬುದು ನಿಜವಾದರೆ, ಗಣಿ ಪ್ರದೇಶದಲ್ಲಿ ಕೆಲಸ ಮಾಡುವ ಎಲ್ಲ ಸ್ತ್ರೀಯರಿಗೂ ಹೆರಿಗೆಗಾಗಿ ಸೌಲಭ್ಯಗಳನ್ನು ಕಡ್ಡಾಯಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈ ಆಪಾದನೆಗೆ ಆಧಾರವೇನು ಎಂಬುದು ನನಗೆ ಗೊತ್ತಿಲ್ಲ. ಗಣಿಗಳಲ್ಲಿ ಹೆರಿಗೆಗಾಗಿ ಸೌಲಭ್ಯ ಶಾಸನದ ಪರಿಚ್ಛೇದ ೩ರಲ್ಲಿ ಹೆರಿಗೆಯಾದಲ್ಲಿಂದ ನಾಲ್ಕು ವಾರಗಳ ತನಕ ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ಬಹಿಷ್ಕರಿಸಲಾಗಿದೆ. ಅಷ್ಟೇ ಅಲ್ಲದೆ ತಾನು ಮಗುವಿಗೆ ಜನ್ಮ ನೀಡುವ ಒಂದು ತಿಂಗಳು ಮೊದಲೇ ಕೆಲಸಕ್ಕೆ ಗೈರುಹಾಜರಾಗುವ ಹಕ್ಕನ್ನು ಮಹಿಳೆಗೆ ನೀಡಲಾಗಿದೆ. ಗಣಿಗಳ ಪ್ರಧಾನ ತನಿಖಾಧಿಕಾರಿಯ ಕೈಕೆಳಗೆ ಇರುವ ಕಾರ್ಮಿಕ ತನಿಖಾಧಿಕಾರಿಗಳು – ಅವರೆಲ್ಲರೂ ವೈದ್ಯರು – ಕಾನೂನಿನ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲೆಂದು ಕಾಲಕಾಲಕ್ಕೆ ಕ್ರಮಬದ್ಧವಾಗಿ ಕಾನೂನಿನ ಅನ್ವಯ ತನಿಖೆ ನಡೆಸುವರು.

ಆ) ಈಗಾಗಲೇ ಹೇಳಿರುವಂತೆ, ಹೆರಿಗೆಗೆ ಒಂದು ತಿಂಗಳು ಮುನ್ನವೇ ರಜ ಪಡೆಯುವ ಹಕ್ಕು ಗರ್ಭಿಣಿ ಸ್ತ್ರೀಯರಿಗಿದೆ. ಗಣಿಗಳ ಪ್ರಧಾನ ತನಿಖಾಧಿಕಾರಿಯ ಕೈಕೆಳಗೆ ಕಾರ್ಮಿಕ ತನಿಖಾಧಿಕಾರಿಗಳ ನೇಮಕಾತಿಯ ಉದ್ದೇಶ, ಈ ಕಾನೂನಿನ ರಕ್ಷೆಯೊಳಗೆ ದೊರಕುವ ಸವಲತ್ತು ರಿಯಾಯಿತಿಗಳ ಅರಿವನ್ನು ಮಹಿಳೆಯರಿಗೆ ಮೂಡಿಸುವುದು ಹಾಗೂ ಸವಲತ್ತುಗಳನ್ನು ಬಳಸಿಕೊಳ್ಳಲು ಸಹಾಯ ಮಾಡುವುದು – ಇವು ಕ್ರಮಗಳು ತಾನೆ?

ಇ) ಹೌದು, ಆದರೆ ಈ ಮಹಿಳೆಯರು ಗರ್ಭಿಣಿಯರಾಗಿದ್ದರು ಎಂಬ ಸುದ್ದಿ ನಮಗೆ ತಲುಪಿಲ್ಲ. ಅಪಾಯ ಸಂಭವಿಸಿದಾಗ ಜರುಗುವ ತನಿಖೆಯಲ್ಲಿ ಗಣಿ ವೈದ್ಯರ ಸಾಕ್ಷ್ಯವನ್ನು ತಪ್ಪದೆ ದಾಖಲುಗೊಳಿಸಲಾಗುತ್ತದೆ. ಮಹಿಳೆ ಗರ್ಭಿಣಿಯಾಗಿದ್ದ ಪಕ್ಷದಲ್ಲಿ ಅವಳ ಸ್ಥಿತಿಗತಿಯನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೦೩.

§»gÀAUÀUÉÆ½¸À¯ÁUÀÄvÀÛzÉ ºÁUÀÆ CzÀ£ÀÄß zÁR°¸À¯ÁUÀÄvÀÛzÉ.

F) 1941gÀ UÀtÂUÀ¼À ªÀiÁvÀÈ¨sÁµÉ¸ÀA§A¢ü CArAiÀiÁzÀ J®è UÀtÂUÀ½UÀÆ C£Àé¬Ä¸ÀÄvÀÛzÉ. PÉ¼ÀV£ÀªÀÅUÀ¼À£ÀÄß ºÉÆgÀvÀÄ¥Àr¹ :

(i) ªÀÄÄA¨ÉÊ ¥ÁæAvÀzÀ°è UÀtÂUÀ¼À ªÀiÁgÀÄªÀ PÉ®ªÀÅ PÀ®Äè¥ÀÅr ªÀiÁqÀÄªÀ ¸ÁÜªÀgÀUÀ

(ii) AiÀiÁªÀ ±ÀQÛAiÀÄ £ÉgÀ«®èzÉ PÉ®¸À ªÀiÁqÀÄªÀ PÀ©âtzÀ CzÀÄj£À UÀtÂUÀ C¢gÀ£ÀÄß ¸ÀÜ½ÃAiÀÄªÁV PÀgÀV¹, ¯ÉÆÃºÀ ªÀiÁqÀÄªÀªÀjUÉ CxÀªÁ ºÀ½îAiÀÄ P ¸ÀgÀ§gÁdÄ ªÀiÁqÀÄªÀAxÀªÀÅ.

(iii) ¸À«ÄÃPÉëAiÀÄ GzÉÝÃ±ÀQÌAvÀ ºÉZÁÑV ¨ÉÃgÉ ªÀÄvÀÄÛ E£ÀÆß PÉ®ªÀÅ µÀgÀvÀÄÛUÀ ºÉZÁÑV £ÉÃ«Ä¹PÉÆ¼Àîzà vÉÆqÀVzÀ UÀtÂUÀ¼ÀÄ ; 20 d£ÀjVAvÀ §zÀÞªÁzÀAxÀªÀÅ.

EAxÀ ¸ÀÜ¼ÀUÀ¼À°è ªÀiÁvÀÈ¨sÁµÉ¬ÄAzÀ UÀtÂUÀ¼À°è ªÀiÁvÀÈUÀ¼ÀÄß PÀqÁØAiÀÄUÉÆ½¸ÀÄªÀÀ DªÀ±ÀåPÀvÉ E ¥ÀjUÀtÂ¸À¯ÁVzÉ.

² ±ÀPÀÄ¯Á ïZÀzï £ÀAïgÁAiÀÄ : UÀtÂ ¹ÛçÃAiÀÄgÀ ¸ÀAPÀµÀÖzÀ WÀl£ÉUÀ¼ÉÃ£ÁzÀgÀ w½zÀÄ§A¢zÉAiÉÄ?

UËgªÁ¤éÃvÀ qÁ|| ©.Dgï. CA¨ÉÃqÀÌgï : ºËzÀÄ, PÉ®ªÀÅ w½zÀÄ§A¢ªÉ.

² ±ÀPÀÄ¯Á ïZÀzï £ÀAïgÁAiÀÄ : AiÀiÁªÁUÀ?

UËgªÁ¤éÃvÀ qÁ|| ©.Dgï. CA¨ÉÃqÀÌgï : PÉ®¸ÀPÉÌ vÉÆqÀVzÀA¢¤AzÀ, EAxÀ «¥ÀvÀÄÛUÀ¼À DUÁUÉÎ PÀ°èzÀÝ®Ä UÀ¨sÀ«¸ÀÄvÀÛªÉ.

² ±ÀPÀÄ¯Á ïZÀzï £ÀAïgÁAiÀÄ : ªÀÄ»¼ÉAiÀÄgÀÄ UÀtÂUÀ¼À D¼ÀzÀ°è PÉ®¸À ªÀiÁqÀ¨ÁgÀzÉA§ ¤µ eÁjUÉ, UÀtÂ ¹ÛçÃAiÀÄgÀÄ UÀtÂAiÉÆ¼ÀPÉÌ E½AiÀÄ¨ÁgÀzÀÄ JA§ vÀqÉ ¥ÀÇgÀPÀªÁU JA§ÄzÀ£ÀÄß ªÀiÁ£Àå ¸ÀzÀ¸ÀågÀÄ ¸ÀàµÀÖ¥Àr¸À¨ÉÃPÀÄ.

UËg

ಆ) ನೆಲದಡಿಯಲ್ಲಿ ಕೆಲಸಮಾಡುವ ಮಹಿಳೆಯರ ನೇಮಕಾತಿ ಎಷ್ಟರಮಟ್ಟಿಗೆ ಕಲ್ಲಿದ್ದಲು ಉತ್ಪನ್ನವನ್ನು ಹೆಚ್ಚಿಸಿತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮರುಹೇರಿಕೆ ಸಾಧ್ಯವಾಗುವಂಥ ಮಟ್ಟವನ್ನು ಕಲ್ಲಿದ್ದಲು ಉತ್ಪನ್ನ ಮುಟ್ಟಿದ ತಕ್ಷಣ ಸರ್ಕಾರ ನಿಷೇಧವನ್ನು ಪುನಃ ಹೇರಲು ಕಾತರವಾಗಿತ್ತು.

ಆ) ನೆಲದಡಿಯಲ್ಲಿ ಮಹಿಳೆಯರ ನೇಮಕಾತಿಯ ಪರಿಣಾಮದಿಂದ ಕಲ್ಲಿದ್ದಲು ಉತ್ಪನ್ನ ಗಣನೀಯವಾಗಿ ಹೆಚ್ಚಿತು. ಆದರೆ ಅದೇ ಕಾಲದಲ್ಲಿ ಬೇರೆ ಅಂಶಗಳೂ ಸಕ್ರಿಯವಾಗಿದ್ದುದರಿಂದ ಖಚಿತ ಅಂಕಿಅಂಶಗಳನ್ನು ಕೊಡಲು ಸಾಧ್ಯವಾಗುವುದಿಲ್ಲ.

**ಶ್ರೀಮತಿ ರೇಣುಕಾ ರೇ :** ನೆಲದಡಿಯಲ್ಲಿ ಕೆಲಸ ಮಾಡುವ ಮಹಿಳೆಯರ ನೆರವಿನಿಂದ ಉಂಟಾದ ಅಧಿಕ ಉತ್ಪನ್ನ ತೀರ ಅತ್ಯಲ್ಪ ಪ್ರಮಾಣದ್ದು ಎಂಬ ಅರಿವು ಮಾನ್ಯ ಸದಸ್ಯರಿಗಿರಬಹುದು. ಆದ್ದರಿಂದ ಅಂತರರಾಷ್ಟ್ರೀಯ ನ್ಯಾಯಸೂತ್ರಗಳ ಮತ್ತು ನೈತಿಕ ನಡವಳಿಕೆಗಳ ಉಲ್ಲಂಘನೆ, ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರ ನಿಮಿತ್ತ ಉಂಟಾದ ಉತ್ಪನ್ನದ ಏರಿಕೆಯಿಂದ ಸರಿಯಾಗುತ್ತದೆ ಎಂದು ಮಾನ್ಯ ಸದಸ್ಯರು ಭಾವಿಸುವರೆ?

**ಗೌರಾವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ತಿಳಿವಳಿಕೆಯ ಪ್ರಕಾರ ಪ್ರತಿಕೂಲ.

**ಶ್ರೀ ಗೋವಿಂದ ವಿ. ದೇಶಮುಖ್ :** ನಿಷೇಧದ ಪುನರ್‌ಸ್ಥಾಪನೆಗೆ ಸರ್ಕಾರ ಕಣ್ಣಿಟ್ಟಿರುವ ಉತ್ಪನ್ನದ ಗುರಿಯಾವುದು ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಗೌರಾವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅದನ್ನು ಹೇಳಲು ಆಗದು.

**ಶ್ರೀಮತಿ ರೇಣುಕಾ ರೇ :** ನೆಲದಡಿಯಲ್ಲಿ ಮಹಿಳೆ ತುಂಬುವ ಕೆಲಸ ಮಾಡುತ್ತಾಳೆ, ಗಂಡಸು ಕಡಿಯುವ ಕೆಲಸ ಮಾಡುತ್ತಾನೆ, ಆದ್ದರಿಂದ ಪ್ರತಿಯೊಂದು ತೊಟ್ಟಿಯ ಮುನ್ನಡೆಯ ವೇಗ ನಿಧಾನವಾಗುತ್ತದೆ. ಏಕೆಂದರೆ ಮಹಿಳೆ ಕಡಿಯುವ ಕೆಲಸ ಮಾಡಲಾರಳು, ಪರಿಣಾಮವಾಗಿ ಗಂಡಸು ಸುಧಾರಿಸಿಕೊಳ್ಳಬೇಕಾಗುತ್ತದೆ. ವೇಗ ಹೆಚ್ಚು ವರ್ಧಿಸಬೇಕಾದರೆ.......

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್): ಮಾನ್ಯ ಸದಸ್ಯರು ಉಪನ್ಯಾಸಕ್ಕಿಳಿದಿದ್ದಾರೆ.

**ಶ್ರೀಮತಿ ರೇಣುಕಾ ರೇ :** ಮಹಿಳೆಯರು ಕಡಿಯುವ ಕೆಲಸವನ್ನು ಮಾಡದೆ ಬರೀ ತುಂಬುವ ಕೆಲಸವನ್ನು ಮಾಡುವ ಕಾರಣದಿಂದ ಪ್ರತಿ ತೊಟ್ಟಿಯ ಮುನ್ನಡೆಯ ವೇಗ ನಿಧಾನವಾಗುತ್ತದೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ಗಣನೆಗೆ ತೆಗೆದುಕೊಳ್ಳುವುದಿಲ್ಲವೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಗೌರಾವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ಬಗೆಗಿನ ಮಾಹಿತಿ ದೊರಕಿದ್ದಕ್ಕೆ ಸಂತೋಷಪಡುತ್ತೇನೆ. ಆದರೆ ಹೇಳಿಕೆಯ ಮೆಚ್ಚಿಕೆಯ ಬಗೆಗಾಗಲಿ ಅಥವಾ ಸಲಹೆಯ ಸಾಧ್ಯತೆಯ ಬಗೆಗಾಗಲಿ ನಾನು ಯಾವುದೇ ಅಭಿಪ್ರಾಯ ನೀಡುವುದಿಲ್ಲ .

# ೨೩೯
# ಭಾರತ ಸರ್ಕಾರದ ಮುದ್ರಣಾಲಯಗಳಿಗೆ ಕಾರ್ಮಿಕ ಕಲ್ಯಾಣಾಧಿಕಾರಿ ಹುದ್ದೆ*

**೫೮೬. ಮೌಲ್ವಿ, ಮಹಮ್ಮದ್ ಅಬ್ದುಲ್ ಘನಿ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ: ಅ) ಭಾರತ ಸರ್ಕಾರದ ಮುದ್ರಣಾಲಯಗಳ ಕಾರ್ಮಿಕ ಕಲ್ಯಾಣಾಧಿಕಾರಿ ಹುದ್ದೆಯ ಜಾಹೀರಾತು ಪ್ರಕಟವಾಗಿತ್ತೆ? ಆಗಿದ್ದರೆ, ಯಾವಾಗ ಮತ್ತು ಹೇಗೆ?

ಆ) ಯಾವುದಾದರೂ ಆಯ್ಕೆ ಆಯಿತೆ?

ಇ) ಆ ಹುದ್ದೆ ಮುಸ್ಲಿಮರಿಗೆ ಕಾದಿರಿಸಲಾಗಿತ್ತು ಎಂಬುದು ನಿಜವೆ?

ಈ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ನೇಮಕಗೊಂಡ ಸಹಾಯಕ ಕಾರ್ಮಿಕ ಕಲ್ಯಾಣಾಧಿಕಾರಿಗಳ ಸಂಖ್ಯೆ ಎಷ್ಟು?

ಉ) ಅವರ ವಿದ್ಯಾರ್ಹತೆಗಳೇನು ಮತ್ತು ಅವರಲ್ಲಿ ಎಷ್ಟು ಜನ ಮುಸ್ಲಿಮರಿದ್ದಾರೆ?

**ಗೌರಾವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಭಾರತ ಸರ್ಕಾರದ ಮುದ್ರಣಾಲಯಗಳಿಗೆ ಕಾರ್ಮಿಕ ಕಲ್ಯಾಣಾಧಿಕಾರಿ ಹುದ್ದೆಯೊಂದನ್ನು ಮಂಜೂರು ಮಾಡಲಾಗಿತ್ತು ಹಾಗೂ ಕಳೆದ ಜೂನ್ ತಿಂಗಳಲ್ಲಿ ಸಂಯುಕ್ತ ಲೋಕಸೇವಾ ಆಯೋಗ ಮಾನ್ಯತೆ ಪಡೆದ ವೃತ್ತಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಿತ್ತು. ಆಯೋಗದ ಕಛೇರಿಗೆ ಜುಲೈ ೧೦ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕೆಂದು ನಿಗದಿಪಡಿಸಲಾಗಿತ್ತು.

ಆ) ಹೌದು.

ಇ) ಹೌದು.

ಈ) ಕಾರ್ಮಿಕ ಇಲಾಖೆಯ ವತಿಯಿಂದ ನೇರವಾಗಿ ಒಬ್ಬ ಮಹಿಳೆಯನ್ನು ಸಹಾಯಕ ಕಲ್ಯಾಣಾಧಿಕಾರಿಯಾಗಿ ನೇಮಿಸಿಕೊಳ್ಳಲಾಯಿತು.

ಉ) ಎಂ.ಎ., ಎಂ.ಲಿಟ್. ವಿದ್ಯಾರ್ಹತೆಯುಳ್ಳ ಆಕೆ ಹಿಂದು.

**ಪ್ರೊ॥ ಎನ್.ಜಿ. ರಂಗ :** ಕೇಂದ್ರ ಸರ್ಕಾರದ ಮುದ್ರಣಾಲಯಗಳಿಗೆ ಈ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಯಿತೊ ಅಥವಾ ಪ್ರಾಂತೀಯ ಸರ್ಕಾರದ ಮುದ್ರಣಾಲಯಗಳಿಗೂ ಸಹ ನೇಮಕ ಮಾಡಿಕೊಳ್ಳಲಾಯಿತೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೇಂದ್ರ ಸರ್ಕಾರದ ಮುದ್ರಣಾಲಯಗಳಿಗೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿಬೇಟ್ಸ್ (ಕೇಂದ್ರ), ಸಂ. ೫, ೨೦ ನವೆಂಬರ್ ೧೯೪೪, ಪು. ೧೦೦೫–೦೬

# ೨೪೦
# ಖಾಸಗಿ ವೃತ್ತಪತ್ರಿಕಾ ಧಣಿಗಳ ಮತ್ತು ಅವರ ನೌಕರರ ಬಗೆಗಿನ ಅಂಕಿಅಂಶಗಳು *

**೬೦೦. ಶ್ರೀ ಕೈಲಾಶ್ ಬಿಹಾರಿಲಾಲ್ :** ಮಾನ್ಯ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ಹೇಳಿಕೆ ನೀಡಿ :

ಅ) ಖಾಸಗಿ ವೃತ್ತಪತ್ರಿಕಾ ಧಣಿಗಳ ಮತ್ತು ಅವರು ನೇಮಿಸಿಕೊಂಡಿರುವ ನೌಕರರ ಅಂಕಿ ಅಂಶಗಳನ್ನು ಸರ್ಕಾರ ಸಂಗ್ರಹಿಸಿದೆಯೆ?

ಆ) ಪ್ರಶ್ನೆ (ಅ)ಗೆ ಉತ್ತರ ನೇತ್ಯಾತ್ಮಕವಾಗಿದ್ದರೆ, ನೌಕರರಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಅಂಕಿಅಂಶಗಳನ್ನು ಪಡೆಯಲು ಸರ್ಕಾರ ಸೂಚಿಸುವುದೆ?– (೧) ರಜೆಯ ವಿಧಿವಿಧಾನಗಳು, (೨) ರಜಾದಿನಗಳ ಪಟ್ಟಿ, (೩) ಸಂಬಳಗಳ ಶ್ರೇಣಿಗಳು, (೪) ತುಟ್ಟಿಭತ್ಯೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಅಚ್ಚುಕೂಟಗಳಲ್ಲಿ ಕೆಲಸಮಾಡುವ ಉದ್ಯೋಗಿಗಳ ನಿಯಮ ಷರತ್ತುಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಯನ್ನು ಕಾರ್ಮಿಕ ತನಿಖಾ ಸಮಿತಿ ಸಂಗ್ರಹಿಸುತ್ತಿದೆ. ಯಾವ ಬಗೆಯ ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಬೇಕೆಂಬುದನ್ನು ಮತ್ತು ವೃತ್ತಪತ್ರಿಕಾ ಸಂಖ್ಯೆಗಳ ಕಾರ್ಮಿಕ ಷರತ್ತುಗಳ ನಿರ್ವಹಣೆಗೆ ಶಾಸನಬದ್ಧ ರೂಪಕೊಡುವ ಸಾಧ್ಯಸಾಧ್ಯತೆಯನ್ನು ಇನ್ನು ಮುಂದೆ ಪರಿಗಣಿಸಲಾಗುವುದು.

**ಶ್ರೀ ಕೈಲಾಶ್ ಬಿಹಾರಿಲಾಲ್ :** ಕನಿಷ್ಠ ಪಕ್ಷ ದೆಹಲಿ ಅಚ್ಚುಕೂಟದ ಅಂಕಿಅಂಶಗಳನ್ನು ಸರ್ಕಾರ ಪಡೆದುಕೊಳ್ಳಲು ಸಾಧ್ಯವೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಸಂಬಂಧವಾಗಿ ಕಾರ್ಮಿಕ ತನಿಖಾ ಸಮಿತಿ ಏನು ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಸ್ವಲ್ಪ ಕಾಲ ಕಾಯುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಕೈಲಾಶ್ ಬಿಹಾರಿಲಾಲ್ :** ದಿಲ್ಲಿ ಚಿಕ್ಕ ಪ್ರದೇಶವಾದುದರಿಂದ ಮಾನ್ಯ ಸದಸ್ಯರು ಬೇಗ ಪಡೆಯಲು ..........

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮಾನ್ಯ ಸದಸ್ಯರು ಚರ್ಚೆಗೆ ಇಳಿದು ನಿಂತಿದ್ದಾರೆ, ಮುಂದಿನ ಪ್ರಶ್ನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೧೩.

# ೨೪೧
# ಅಲಿಘರದ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಸೇವಾ ವಿಸ್ತರಣೆಗಳು *

**೬೦೧. ಖಾಜಿ ಮಹಮದ್ ಅಹಮದ್ ಕಜ್ಮಿ :** ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿ : ಅ) ಅಲಿಘರದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಅನೇಕ ವೇಳೆ ಸೇವಾ ವಿಸ್ತರಣೆಗೆ ಅವಕಾಶ ನೀಡಲಾಗಿದೆ ಎಂಬುದು ನಿಜವೆ?

ಆ) ಆ ಮುದ್ರಣಾಲಯದ ವ್ಯವಸ್ಥಾಪಕರು ಭಾರತದ ಮುದ್ರಣ ಮತ್ತು ಸಾಮಗ್ರಿಗಳ ನಿಯಂತ್ರಣಾಧಿಕಾರಿಗೆ ಅನೇಕ ವಿಸ್ತರಣಾ ಶಿಫಾರಸ್ಸು ಮಾಡಿದ್ದಾರೆ ಎಂಬುದು ನಿಜವೆ?

ಇ) ವ್ಯವಸ್ಥಾಪಕರಿಂದ ಸೇವಾ ವಿಸ್ತರಣೆಯ ಶಿಫಾರಸ್ಸು ಪಡೆದಿರುವ ಹಾಗೂ ನಿವೃತ್ತಿಯ ಅಂಚಿನಲ್ಲಿರುವ ವ್ಯಕ್ತಿಗಳ ಸ್ಥಾನದಲ್ಲಿ ಕೆಲಸ ಮಾಡಬಲ್ಲ ತರಬೇತಿ ಹೊಂದಿದ ಅರ್ಹ ಜನರು ಆ ಮುದ್ರಣಾಲಯದಲ್ಲಿ ಇದ್ದಾರೆ ಎಂಬುದು ದಿಟವೆ?

ಈ) ಈ ಸೇವಾ ವಿಸ್ತರಣೆಯ ಶಿಫಾರಸ್ಸುಗಳ ಕಾರಣದಿಂದಾಗಿ ನಿವೃತ್ತಿ ಹೊಂದುವವರ ಸ್ಥಾನಕ್ಕೆ ಬರಲು ಎಲ್ಲ ಅರ್ಹತೆಗಳಿರುವ ವ್ಯಕ್ತಿಗಳ ಹಕ್ಕುಬಾದ್ಯತೆಗಳನ್ನು ತಡೆಗಟ್ಟಿದಂತಾಗಿದೆ ಎಂಬುದು ಸತ್ಯವೆ?

ಉ) ಪ್ರಶ್ನೆ (ಅ) ಮತ್ತು (ಈ)ಗಳಿಗೆ ಉತ್ತರ ಇತ್ಯಾತ್ಮಕವಾಗಿದ್ದರೆ, ಇನ್ನು ಮುಂದೆ ಯಾವ ಕಾರಣಕ್ಕಾಗಿಯೂ ಸೇವಾ ವಿಸ್ತರಣೆ ಮಾಡಲಾಗುವುದಿಲ್ಲವೆಂದು ಸೂಚಿಸಲು ಮಾನ್ಯ ಸದಸ್ಯರು ಮನಸ್ಸು ಮಾಡುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಇಲ್ಲ. ಕೇವಲ ಕೆಲವೇ ಕೆಲವು ಶಿಫಾರಸ್ಸುಗೊಂಡಿದೆ.

ಇ) ಕೆಲವು ವಿಷಯಗಳಲ್ಲಿ ಅರ್ಹ ಜನರು ಸಿಗುತ್ತಾರೆ. ಇನ್ನು ಕೆಲವು ವಿಷಯಗಳಲ್ಲಿ ಸಿಗುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಪ್ರಶ್ನೆ (ಅ)ಗೆ ನಿಮ್ಮ ಉತ್ತರ ನೇತ್ಯಾತ್ಮಕವಾಗಿರುವುದರಿಂದ, ಯಾವುದೇ ಬಗೆಯ ಸೇವಾ ವಿಸ್ತರಣೆಗಳನ್ನು ಶಿಫಾರಸ್ಸು ಮಾಡಲಾಗಿಲ್ಲ ಎಂದು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವೇ ಕೆಲವು ಶಿಫಾರಸ್ಸುಗಳನ್ನು ಮಾಡಲಾಗಿದೆ ಎಂದು ನಾನು ಹಿಂದೆಯೇ ಹೇಳಿದ್ದೇನೆ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಪ್ರಧಾನ ವ್ಯವಸ್ಥಾಪಕರು ವಿಸ್ತರಣೆಗಳನ್ನು ಮಂಜೂರು ಮಾಡುತ್ತಾರೆಯೆ ಅಥವಾ ಇಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವ್ಯವಸ್ಥಾಪಕರು ವಿಸ್ತರಣೆಗಳನ್ನು ಮಂಜೂರು ಮಾಡುತ್ತಾ ಬಂದಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೧೧೩–೧೪.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಅರ್ಹ ವ್ಯಕ್ತಿಗಳು ಲಭ್ಯವಿರುವಾಗಲೂ ಇಂಥ ವಿಸ್ತರಣೆಗಳನ್ನು ಏಕೆ ಮಂಜೂರು ಮಾಡಲಾಗುತ್ತದೆ ಎಂದು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅರ್ಹ ವ್ಯಕ್ತಿಗಳು ಲಭ್ಯವಿದ್ದಾಗಲೂ ವಿಸ್ತರಣೆಗಳನ್ನು ಮಂಜೂರು ಮಾಡಲಾಗುತ್ತದೆ ಎಂಬುದನ್ನು ಒಪ್ಪಿಕೊಳ್ಳಲು ನಾನು ತಯಾರಿಲ್ಲ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಅರ್ಹ ವ್ಯಕ್ತಿಗಳು ಲಭ್ಯವಿರುವಾಗಲೂ ಕೆಲವು ಸಾರಿ ವಿಸ್ತರಣೆಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ಸದಸ್ಯರು ಅಭಿಪ್ರಾಯಪಡುತ್ತಾರೆ ಎಂದು ನಾನು ಭಾವಿಸಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಕೆಲವು ಸಂದರ್ಭಗಳಲ್ಲಿ ಮಾತ್ರ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಅಂಥ ಸಂದರ್ಭಗಳಲ್ಲಿಯೂ ಸಹ ವ್ಯಕ್ತಿಗಳಿಗೆ ಸೇವಾ ವಿಸ್ತರಣೆಯ ಮಂಜೂರಾತಿ ಮಾಡುವುದಕ್ಕೆ ಕಾರಣವೇನು ಎಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಸಂದರ್ಭಗಳ ವಿಸ್ತರಣೆಯ ಮಂಜೂರಾತಿಗೆ ಹಿನ್ನೆಲೆಯಾದ ಸರ್ವೆ ಸಾಮಾನ್ಯ ಕಾರಣವೆಂದರೆ, ಅವರಿಗೆ ಒಂದು ಅಥವಾ ಎರಡು ವರ್ಷ ವಿಸ್ತರಣೆಯ ಸೌಲಭ್ಯ ಒದಗಿಸದಿದ್ದರೆ ಅವರು ನಿವೃತ್ತವೇತನಕ್ಕೆ ಎರವಾಗುತ್ತಾರೆ ಎಂಬ ಮಾನವೀಯ ದೃಷ್ಟಿ.

**ಖಾಜಿ ಮಹಮ್ಮದ್ ಅಹಮದ್ ಕಜ್ಮಿ :** ಅದೊಂದೇ ಕಾರಣವೊ ಅಥವಾ ಬೇರೆ ಯಾವುದಾದರೂ ಕಾರಣವಿರುವುದೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೇರೆ ಯಾವ ಕಾರಣವೂ ನನ್ನ ಗಮನಕ್ಕೆ ಬಂದಿಲ್ಲ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಮೇಲೆ ಪ್ರಸ್ತಾಪಿಸಿದ ಸಂದರ್ಭಗಳಲ್ಲಾದ ವಿಸ್ತರಣೆಗಳಿಗೆ ಹಿನ್ನೆಲೆಯಾಗಿರುವುದು ಇದೊಂದೆ ಕಾರಣವೆ ಅಥವಾ ಬೇರಾವುದಾದರೂ ಕಾರಣ ಇರುವುದೆ ಎಂಬುದನ್ನು ಮಾನ್ಯ ಸದಸ್ಯರು ತನಿಖೆಮಾಡಲು ಮನಗೊಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಸಂಬಧವಾಗಿ ತನಿಖೆಯನ್ನು ನಡೆಸಿಯೇ ಈ ಮಾಹಿತಿಯನ್ನು ಪಡೆದಿದ್ದೇನೆ.

**ಮೌಲ್ವಿ ಮಹಮದ್ ಅಬ್ದುಲ್ ಘನಿ :** ಅಂಥ ಕೆಲವೇ ಕೆಲವು ವಿದ್ಯಮಾನಗಳಲ್ಲಿ ಸೇರ್ಪಡೆಯಾದ ವ್ಯಕ್ತಿಗಳ ಹೆಸರುಗಳನ್ನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಕೆಲವು ಘಟನೆಗಳು ನನ್ನ ಮುಂದೆ ಇವೆಯೆ ಹೊರತು, ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿಲ್ಲ.

**ಮೌಲ್ವಿ ಮಹಮದ್ ಅಬ್ದುಲ್ ಘನಿ :** ಅವರು ಯಾವ ಕೋಮಿಗೆ ಸೇರಿದವರು?

(ಪ್ರತ್ಯುತ್ತರವಿಲ್ಲ)

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮುಂದಿನ ಪ್ರಶ್ನೆ.

## ೨೪೨
## ನವದೆಹಲಿಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಮಳಿಗೆ ಕೆಲಸಗಾರರ ಹಾಗೂ ರಟ್ಟುಕಟ್ಟುವವರ (ಬೈಂಡರ್ಸ್) ಸಂಬಳದ ಕಾಲನಿಗದಿತ ಶ್ರೇಣಿ *

**೬೦೨. ಖಾಜಿ ಮಹಮ್ಮದ್ ಅಹಮದ್ ಕಜ್ಮಿ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ಭಾರತ ಸರ್ಕಾರ ಅನುಮೋದಿಸಿದ ಸಂಬಳದ ಕಾಲನಿಗದಿತ ಶ್ರೇಣಿಗೆ ನವದೆಹಲಿಯ ಭಾರತ ಸರ್ಕಾರದ ಮುದ್ರಣಾಲಯ ಮಳಿಗೆಯ ಕೆಲಸಗಾರರು ಹಾಗೂ ಪುಸ್ತಕಕ್ಕೆ ರಟ್ಟುಕಟ್ಟುವವರು ಸಹ ಪ್ರಯತ್ನಮಾಡುತ್ತಾ ಬಂದಿರುವುದು ನಿಜವೆ?

ಆ) ಈ ಉದ್ದೇಶಕ್ಕಾಗಿ ಹೆಚ್ಚು ಕಡಮೆ ಕಳೆದ ಹದಿನೈದು ವರ್ಷಗಳಿಂದ ತಮ್ಮ ಅಹವಾಲನ್ನು ಮಂಡಿಸುತ್ತಾ ಬಂದಿರುವುದು ದಿಟವೆ?

ಇ) ತಿಂಗಳಿಗೆ ೨೫ ರೂ. ಸಂಬಳ ಪಡೆಯುತ್ತಿರುವ, ಕಳೆದ ಹದಿನೈದು – ಇಪ್ಪತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿರುವ ಮಳಿಗೆಯ ಕೆಲಸಗಾರರಿಗೆ ಕಾಲ ನಿಗದಿತ ಶ್ರೇಣಿಯ ಸಂಬಳದ ಪ್ರಯೋಜನ ದೊರಕಿಲ್ಲದಿರುವುದು ಸತ್ಯವೆ?

ಈ) ಯಾರೊಬ್ಬರಿಗೂ ಒಂದೇ ಒಂದು ಬಡ್ತಿಯೂ ಸಹ ಮಂಜೂರಾಗಿಲ್ಲವೆಂಬುದು ವಾಸ್ತವವೆ?

ಉ) ಪ್ರಶ್ನೆ (ಅ) ಮತ್ತು (ಈ)ಗಳಿಗೆ ಉತ್ತರ ಇತ್ಯಾತ್ಮಕವಾಗಿದ್ದರೆ, ಕಾಲನಿಗದಿತ ಶ್ರೇಣಿಯ ಸಂಬಳವನ್ನು ಅನುಷ್ಠಾನಕ್ಕೆ ತರುವಾಗ ಅನೇಕ ವರ್ಷಗಳಿಂದ ಕಾಯುತ್ತಿರುವ ಮಳಿಗೆ ಕೆಲಸಗಾರರು ಮತ್ತು ರಟ್ಟು ಕಟ್ಟುವವರು ತತ್‌ಕ್ಷಣದ ಫಾಯಿದೆ ಪಡೆಯಲು ಅನುಕೂಲವಾಗುವಂತೆ ಕನಿಷ್ಠ ಒಂದು ಬಡ್ತಿಯನ್ನು ದೊರಕಿಸಲು ಮಾನ್ಯ ಸದಸ್ಯರು ಪ್ರಯತ್ನಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಹೌದು, ಕಳೆದ ಕೆಲವು ವರ್ಷಗಳಿಂದ.

ಇ) ಹೌದು, ಅವರು ತಮ್ಮ ಮುಂದಿನ ಬಡ್ತಿಯನ್ನು ಪಡೆದ ಕೂಡಲೇ ಇದರ ಪ್ರಯೋಜನ ಅವರಿಗೆ ಲಭಿಸುತ್ತದೆ.

ಈ) ಹೌದು, ಕಾಲನಿಗದಿತ ಶ್ರೇಣಿಯ ಸಂಬಳ ೧೯೪೪ರ ಜೂನ್ ೨೨ರಿಂದ ಅನುಷ್ಠಾನಕ್ಕೆ ಬಂದ ಲಾಗಾಯ್ತಿನಿಂದ ಅವರು ಯಾವುದೇ ಬಡ್ತಿಯನ್ನು ಪಡೆದಿಲ್ಲ.

ಉ) ಮುಂದಿನ ವರ್ಷ ಬಡ್ತಿಯನ್ನು ಪಡೆಯುವ ಪ್ರಯುಕ್ತ ಈ ಸಲಹೆಯನ್ನನುಸರಿಸಿ ಕ್ರಮ ಕೈಗೊಳ್ಳಬೇಕಾದ ಅಗತ್ಯವಿಲ್ಲ.

**ಖಾಜಿ ಮಹಮದ್ ಅಹಮದ್ ಕಜ್ಮಿ :** ಕೆಲವರು ಈಗಾಗಲೇ ನಿವೃತ್ತಿಯ ಅಂಚಿನಲ್ಲಿದ್ದು ಕಾಲನಿಗದಿತ ಶ್ರೇಣಿಯ ಸಂಬಳದ ಪ್ರಯೋಜನ ಪಡೆಯಲಾರದ ಸ್ಥಿತಿಯಲ್ಲಿ ಇರುವುದರಿಂದ, ಇದುವರೆಗಿನ ಅವರ ಸೇವೆಯನ್ನು ಪರಿಗಣಿಸಿ ಸರ್ಕಾರ ಒಂದು ಬಡ್ತಿಯನ್ನು ನೀಡುವುದು ಉಚಿತವಲ್ಲವೆ? ಮಾನ್ಯ ಸದಸ್ಯರು ದಯಮಾಡಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುವರೆ ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೧೪–೧೫.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ಲಿಷ್ಟ ಸಂಗತಿಗಳನ್ನು ಬಗೆಹರಿಸಲು ನಿಯಮವನ್ನೇ ಬದಲಾಯಿಸುವುದು ವಿವೇಕವೆನ್ನಿಸುವುದಿಲ್ಲ.

## ೨೪೩
## ಒರಿಸ್ಸಾದ ಮಹಾನದಿ ಯೋಜನೆಗಳ ಅಭಿವೃದ್ಧಿ *

**೬೦೭. ಪ್ರೊ ॥ ಎನ್ ಜಿ. ರಂಗ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ಹೇಳಿಕೆ ನೀಡಿ: ಅ) ಒರಿಸ್ಸಾದ ಮಹಾನದಿಯ ನೆರೆ ಹಾವಳಿಯನ್ನು ತಡೆಗಟ್ಟಲು ಮಹಾನದಿ ಯೋಜನೆಗಳ ಅಭಿವೃದ್ಧಿಯನ್ನು ಮತ್ತು ನೀರಾವರಿ ಕಾಲುವೆಗಳನ್ನು ವ್ಯವಸ್ಥೆಗೊಳಿಸಿ ಕಟಕ್, ಪುರಿ, ಸಂಬಾರ್‌ಪೂರ್ ಮತ್ತು ಬಲಾಸೂರ್ ಜಿಲ್ಲೆಗಳ ಅತ್ಯಧಿಕ ಪ್ರದೇಶದ ಭೂಮಿಗೆ ನೀರುಣಿಸುವ ಸೌಲಭ್ಯ ಒದಗಿಸಲು ಸರ್. ಎಂ. ವಿಶ್ವೇಶ್ವರಯ್ಯ ಸಮಿತಿಯ ವರದಿ ಸೂಚಿಸಿದೆ ಎಂಬುದು ತಿಳಿದಿದೆಯೆ?

(ಆ) ಅಂಥ ಯೋಜನೆಗೆ ೧೯೩೮–೩೯ರಲ್ಲಿ ಸುಮಾರು ೪ ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ಸೂಚಿಸಿರುವುದು ಗೊತ್ತಿದೆಯೆ?

(ಇ) ಒರಿಸ್ಸಾ ಪ್ರದೇಶದಲ್ಲಿ ಆರ್ಥಿಕ ಅನನುಕೂಲ ಹಾಗೂ ಅಶಕ್ತತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಅಧಿಕ ಅಕ್ಕಿ ಉತ್ಪಾದನೆಯ ಅಗತ್ಯವನ್ನು ಮನಗಂಡು ಭಾರತ ಸರ್ಕಾರ ಯೋಜನೆಯನ್ನು ಅಭಿವೃದ್ಧಿಗೊಳಿಸಲು ಮುಂದೆಬರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಇಲ್ಲ . ಈ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಕೇಳಲಾಗಿದೆ.

ಇ) ಯೋಜನೆಯ ಸೂಕ್ಷ್ಮ ಪರಿಶೀಲನೆ ನಡೆಸದೆ ಈ ಘಟ್ಟದಲ್ಲಿ ಸರ್ಕಾರ ಅಂಥ ಭರವಸೆಯನ್ನು ನೀಡಲಾರದು.

**ಪ್ರೊ॥ ಎನ್. ಜಿ. ರಂಗ :** ಅದು ಅನೇಕ ಉಪಸಮಿತಿಗಳಲ್ಲಿ ಒಂದರ ಸಂಶೋಧನೆಗಳ ಭಾಗವಾಗಿರುವುದೋ ಅಥವಾ ಸಮಿತಿಗಳ ರಾಷ್ಟ್ರೀಯ ಯೋಜನಾ ವಿನ್ಯಾಸದ ಭಾಗವಾಗಿರುವುದೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರ ಅನುಸರಿಸಬೇಕಾದ ಕ್ರಮದ ಬಗ್ಗೆ ನಾನೇನೂ ಹೇಳಲಾರೆ. ಆದರೆ ಈ ವಿಷಯವನ್ನು ಆಳವಾಗಿ ಪರಿಶೀಲಿಸಬೇಕು.

**ಪ್ರೊ॥ ಎನ್. ಜಿ. ರಂಗ :** ವಂದನೆಗಳು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪, ಪು. ೧೦೧೮.

# ೨೪೪
# ಬಿಹಾರದ ಕಲ್ಲಿದ್ದಲು ಗಣಿಗಳ ಕಾರ್ಮಿಕರಿಗೆ ಅಕ್ಕಿ ಸರಬರಾಜಿನ ವ್ಯವಸ್ಥೆಗಳು *

**೬೧೧. ಶ್ರೀ ಕೆ.ಸಿ. ನಿಯೋಗಿ :** ಅ) ಬಿಹಾರ ಪ್ರಾಂತ್ಯದ ಕಲ್ಲಿದ್ದಲು ಗಣಿಗಳ ಕಾರ್ಮಿಕರಿಗೆ ಮಾಡಿರುವ ಅಕ್ಕಿ ಸರಬರಾಜಿನ ಏರ್ಪಾಡುಗಳನ್ನು ಮಾನ್ಯ ಕಾರ್ಮಿಕ ಸದಸ್ಯರು ವಿವರವಾಗಿ ತಿಳಿಸುತ್ತಾರೆಯೇ?

ಆ) ಬಿಹಾರದ ಅಧಿಕಾರಿಗಳು ಕಲ್ಲಿದ್ದಲು ಗಣಿಗಳ ಕಾರ್ಮಿಕರಿಗೆ ಸರಬರಾಜು ಮಾಡುವ ಅಕ್ಕಿಗೆ ನಿಯಮಿತ ಬೆಲೆಗಿಂತ ಅಧಿಕ ಬೆಲೆ ಹೇರುತ್ತಿದ್ದಾರೆ ಹಾಗೂ ಸರಬರಾಜಾದ ಅಕ್ಕಿ ಕೀಳುದರ್ಜೆಯದು ಎಂಬುದರ ಬಗ್ಗೆ ಮಾನ್ಯ ಸದಸ್ಯರಿಗೆ ದೂರುಗಳು ಬಂದಿವೆಯೆ? ಹಾಗಿದ್ದ ಪಕ್ಷದಲ್ಲಿ ಆ ದೂರುಗಳಲ್ಲಿ ಎತ್ತಿರುವ ವಿವಿಧ ಅಂಶಗಳಾವುವು ಮತ್ತು ಅವುಗಳಿಗೆ ಸಂಬಂಧಿಸಿದಂತೆ ನಿಜವೆಂದು ಕಂಡುಬಂದ ಅಂಕಿ ಅಂಶಗಳಾವುವು?

ಇ) ಬಂಗಾಳದ ಕಲ್ಲಿದ್ದಲು ಗಣಿಗಳಲ್ಲಿ ಅನುಷ್ಠಾನಕ್ಕೆ ತಂದ ವ್ಯವಸ್ಥೆಗಿಂತ ಬಿಹಾರದ ವ್ಯವಸ್ಥೆ ಈ ವಿಷಯದಲ್ಲಿ ಹೇಗೆ ಭಿನ್ನವಾಗಿದೆ?

ಈ) ಈ ಸಂಬಂಧವಾಗಿ ಬಿಹಾರ ಕಲ್ಲಿದ್ದಲು ಗಣಿಗಳಿಂದ ಬಂದ ದೂರುಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಕೈಗೊಳ್ಳಲು ಬಯಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಏಪ್ರಿಲ್ ೧೯೪೪ರ ೨೦ರಂದು ಭಾರತ ರಕ್ಷಣಾ ನಿಯಮಗಳನ್ವಯ ಧನಬಾದಿನ ಹೆಚ್ಚುವರಿ ಉಪಆಯುಕ್ತರು (Additional Deputy Commissioner) ಹೊರಡಿಸಿದ ಆಜ್ಞೆಯಂತೆ ಕಲ್ಲಿದ್ದಲು ಗಣಿಯ ಪ್ರತಿಯೊಬ್ಬ ಕಾರ್ಮಿಕನೂ ಕಲ್ಲಿದ್ದಲು ಗಣಿಯ ಅಂಗಡಿಯಿಂದ ತನಗೆ ಮತ್ತು ತನ್ನ ವಯಸ್ಕ ಅವಲಂಬಿತನಿಗೆ ನಿಯಮಿತ ಬೆಲೆಗೆ ವಾರಕ್ಕೆ ನಾಲ್ಕು ಸೇರು ಆಹಾರಧಾನ್ಯ ಕೊಳ್ಳಲು ಹಕ್ಕುಂಟು (ಅದರಲ್ಲಿ ಎರಡು ಸೇರಿಗಿಂತ ಹೆಚ್ಚಿಗೆ ಅಕ್ಕಿ ಕೊಳ್ಳುವಂತಿಲ್ಲ). ಅಲ್ಲದೆ ಅಪ್ರಾಪ್ತ ವಯಸ್ಸಿನ ಅವಲಂಬಿತನಿದ್ದರೆ ಎರಡು ಸೇರು ಆಹಾರಧಾನ್ಯ ಪಡೆಯಲು ಹಕ್ಕುಂಟು (ಅದರಲ್ಲಿ ಒಂದು ಸೇರಿಗಿಂತ ಹೆಚ್ಚಿಗೆ ಅಕ್ಕಿ ಕೊಳ್ಳುವಂತಿಲ್ಲ). ಇದರ ಜೊತೆಗೆ ಭಾರಿ ಶ್ರಮದ ಕೆಲಸಕ್ಕೆ ನೇಮಿತರಾದ ಕಾರ್ಮಿಕರು ತಮ್ಮ ಪ್ರತಿಯೊಂದು ಹಾಜರಾತಿಗೂ ಅರ್ಧಸೇರು ಅಕ್ಕಿಯ ಉಚಿತ ಪಡಿಯನ್ನು ಪಡೆಯಲು ಅರ್ಹತೆಯುಂಟು. ಈ ಉಚಿತ ಪಡಿಯನ್ನು ಪೂರ್ಣವಾಗಿ ಪಡೆದುಕೊಳ್ಳಬಹುದು ಅಥವಾ ಕಾರ್ಮಿಕರು ಬಯಸಿದರೆ ಬೇರೆ ಧಾನ್ಯಗಳಲ್ಲೂ ಪಡೆದುಕೊಳ್ಳಬಹುದು.

ಆ) ಈ ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ ಇತ್ಯಾತ್ಮಕ. ನವೆಂಬರ್ ೧೯೪೪ರ ೧ರವರೆಗೆ ಕಲ್ಲಿದ್ದಲು ಗಣಿಯ ಸಂಘಗಳಿಗೆ ಸರಬರಾಜಾದ ಅಕ್ಕಿಗೆ ಬಿಹಾರ ಸರ್ಕಾರ ವಾಸ್ತವ ಬೆಲೆಯನ್ನು ಹಾಕಿರುವುದು ಸತ್ಯಸಂಗತಿ. ನೇಪಾಳದಲ್ಲಿ ಉತ್ಪಾದನೆಯಾದ ಈ ಅಕ್ಕಿಯನ್ನು ಬಿಹಾರ ಸರ್ಕಾರ ನಿಯಮಿತ ಬೆಲೆಗಿಂತ ಅಧಿಕ ಬೆಲೆಗೆ ಕೊಳ್ಳಬೇಕಾಗುತ್ತದೆ. ಪರಿಣಾಮವಾಗಿ ಕಲ್ಲಿದ್ದಲು ಗಣಿಯ ಸಂಘಗಳಿಗೆ ಸರಬರಾಜು ಮಾಡುವ ನೇಪಾಳ ಅಕ್ಕಿಯ ಬೆಲೆ ಸ್ಥಳೀಯ ಸಗಟು ನಿಯಮಿತ ಬೆಲೆಗಿಂತ ಅಧಿಕವಾಗಿ ಅಂದರೆ ಸುಮಾರು ೧–೮–೦ರಂತೆ ಇರುವುದು ಸಹಜ. ಈ ನಷ್ಟವನ್ನು ಭರಿಸಲು ೧ ನವೆಂಬರ್ ೧೯೪೪ರಿಂದ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ.೫, ೨೦ ನವೆಂಬರ್ ೧೯೪೪, ಪು. ೧೦೨೧.

ಸ್ಥಳೀಯ ಸಗಟು ನಿಯಮಿತ ಬೆಲೆಯ ಮೇಲೆ ನಾಲ್ಕು ಆಣೆ ಹೆಚ್ಚಿಗೆ ಹಾಕಲು ಬಿಹಾರ ಸರ್ಕಾರ ನಿರ್ಧರಿಸಿತು. ಅಕ್ಕಿಯ ಗುಣಮಟ್ಟ ಕುರಿತ ದೂರುಗಳ ಸತ್ಯಸಂಗತಿಗಳನ್ನು ಖಚಿತಪಡಿಸಿಕೊಳ್ಳಲಾಗಿದೆ.

ಇ) ಬಂಗಾಳ ಕಲ್ಲಿದ್ದಲು ಗಣಿಗಳಲ್ಲಿ ಪಡಿತರ ವ್ಯವಸ್ಥೆ ಇಲ್ಲ. ಆದರೆ ೧೦೦೦ಕ್ಕಿಂತ ಹೆಚ್ಚಿಗೆ ಕೆಲಸಗಾರರಿರುವ ಉದ್ಯಮಿಗಳು ಸರ್ಕಾರದ ನಾಗರಿಕ ಸರಬರಾಜು ಇಲಾಖಾವತಿಯಿಂದ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಬಿಹಾರದಲ್ಲಿ ಪ್ರತಿಯೊಂದು ಕಲ್ಲಿದ್ದಲು ಗಣಿಯೂ ಭಾರತೀಯ ಗಣಿ ಸಂಘದ ಆಡಳಿತಾಧಿಕಾರಿಯ ಮೂಲಕ ಅಥವಾ ಜಂಟಿ ಸರಬರಾಜು ಹಂಚಿಕೆಯ ಕಾರ್ಯದರ್ಶಿಯ ಮೂಲಕ ಕೊಳ್ಳಬೇಕಾಗುತ್ತದೆ.

ಈ) ಮಾನ್ಯ ಸದಸ್ಯರು (ಆ) ಪ್ರಶ್ನೆಗೆ ನೀಡಿದ ಉತ್ತರದತ್ತ ಗಮನಹರಿಸಬೇಕು.

## ೨೪೫
## ದೆಹಲಿಯ ಲೋದಿ ರಸ್ತೆಯಲ್ಲಿನ ಗುಮಾಸ್ತರ ನಿವಾಸ ನಿರ್ಮಾಣದ ಗುತ್ತಿಗೆ *

**೬೧೨. ಶ್ರೀ ಕೆ.ಬಿ. ಜಿನರಾಜ ಹೆಗ್ಡೆ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : ಅ) ಲೋದಿ ರಸ್ತೆಯಲ್ಲಿನ ಗುಮಾಸ್ತರ ನಿವಾಸ ನಿರ್ಮಾಣದ ಗುತ್ತಿಗೆಯನ್ನು (ರೂ. ೨೮,೬೦,೦೦೦) ಕಡಮೆ ದರದ ದರಖಾಸ್ತುದಾರನಿಗೆ ಕೊಡದೆ (ದರಗಳ ವಿವರಣ ಪಟ್ಟಿಗಿಂತ ೧೧.೨೫ ಕಡಿಮೆ ಚಾಲ್ತಿಯ ಬೆಲೆ ನೀಡಿದ್ದರೂ) ಅಧಿಕ ದರದ ದರಖಾಸ್ತುದಾರನಿಗೆ ಕೊಡಲಾಗಿದೆ ಎಂಬುದು ದಿಟವೆ?

ಆ) ಪ್ರಶ್ನೆ (ಅ)ಗೆ ಉತ್ತರ ಇತ್ಯಾತ್ಮಕವಾಗಿದ್ದರೆ ಕಡಿಮೆ ದರದ ದರಖಾಸ್ತುದಾರನಿಗಿಂತ ಎಷ್ಟು ಹೆಚ್ಚಿಗೆ ಮೊತ್ತವನ್ನು ಸರ್ಕಾರ ನೀಡಬೇಕಾಯಿತು?

ಇ) ಇದೇ ಗುತ್ತಿಗೆ ಸಂಸ್ಥೆಗೆ ಅದೇ ಸ್ಥಳದಲ್ಲಿ ಅಂಥವೇ ನಿರ್ಮಾಣ ಕಾರ್ಯದ ಗುತ್ತಿಗೆಯನ್ನು ಕಡಿಮೆ ದರದ ದರಖಾಸ್ತುದಾರನನ್ನು ತಿರಸ್ಕರಿಸಿ ದರಗಳ ಚಾಲ್ತಿ ಬೆಲೆಗಿಂತ ಶೇಕಡ ೫ರಷ್ಟು ಹೆಚ್ಚಿಗೆ ದರದಲ್ಲಿ ರೂ.೫೦,೦೦,೦೦೦ಕ್ಕೆ ಕೊಡಲಾಯಿತು ಎಂಬುದು ದಿಟವೆ?

(ಈ) ಮೇಲಿನ ದರಖಾಸ್ತುಗಳನ್ನು ಒಪ್ಪಿಕೊಳ್ಳುವ ಮೊದಲು ಇಲಾಖಾವತಿಯಿಂದ ಪರಿಶೀಲಿಸಲಾಯಿತೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ. ಲೋದಿ ರಸ್ತೆಯಲ್ಲಿನ ಯೋಜನೆಯ ಒಂದು ಭಾಗವನ್ನು ಈ ಸಂಸ್ಥೆಗೆ ಕೊಡಲಾಯಿತು. ಕಾರಣ, ಉಳಿದವುಗಳಿಗೆ ಹೋಲಿಸಿದಾಗ ಈ ಸಂಸ್ಥೆಯ ದರವು ಕಡಿಮೆ ಇತ್ತು.

ಈ) ಕೇಂದ್ರ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ಈ ದರಖಾಸ್ತುಗಳನ್ನೆಲ್ಲ ಪರಿಶೀಲಿಸಿ ಅನುಮೋದಿಸಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೨೧–೨೨

## ೨೪೬
## ದೆಹಲಿ ಬಾಡಿಗೆ ನಿಯಂತ್ರಣ ಶಾಸನದನ್ವಯ ಬಾಡಿಗೆ ರಶೀದಿಯ ಸಿದ್ಧ ನಮೂನೆಯನ್ನು ವಿಧಿಸುವುದು *

**೬೨೫. ಶ್ರೀ ಕೈಲಾಸ್ ಬಿಹಾರಿಲಾಲ್ :** ೧೯೪೪ರ ದಿಲ್ಲಿ ಬಾಡಿಗೆ ನಿಯಂತ್ರಣ ಶಾಸನದನ್ವಯ ಪ್ರತಿಯೊಬ್ಬ ಮಾಲೀಕನೂ ಬಾಡಿಗೆದಾರರಿಗೆ ಸಿದ್ಧ ನಮೂನೆಯ ರಶೀದಿಯನ್ನು ಕಡ್ಡಾಯವಾಗಿ ಕೊಡಬೇಕೆಂದು ಸರ್ಕಾರ ಸೂಚಿಸುವುದೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಸಂಬಂಧವಾಗಿ ಸರ್ಕಾರ ಪರಿಶೀಲನೆ ನಡೆಸುತ್ತಿದೆ.

## ೨೪೭
## ಕೆಲವು ನಗರಗಳಲ್ಲಿ ಜೀವನ ವೆಚ್ಚದ ಹೆಚ್ಚಳ **

**೧೦೦. ಶ್ರೀ ಬದ್ರಿದತ್ತ ಪಾಂಡೆ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರ ನೀಡುವರೆ: ಅ) ಸಮಕಾಲಿಕ ಸೂಚಿಯ ಪ್ರಕಾರ ಕೆಲವು ನಗರಗಳಲ್ಲಿ ಜೀವನವೆಚ್ಚ ಶೇಕಡ ೧೮೨ ಹೆಚ್ಚಿದೆ ಎಂಬುದು ಸರಿಯೆ? ಇಲ್ಲದಿದ್ದರೆ ನಿಜಸಂಗತಿಯೆನು?

ಆ) ಆ ನಗರದ ರೈಲ್ವೆ ಕೆಲಸಗಾರರ ಮಜೂರಿಯನ್ನು ಶೇಕಡ ೧೮೨ರಷ್ಟು ಹೆಚ್ಚಿಸಿಲ್ಲ ಎಂಬುದು ದಿಟವೆ? ಇಲ್ಲದಿದ್ದರೆ ನಿಜಸಂಗತಿಯೇನು?

ಇ) ಶೇಕಡ ೧೮೨ರಷ್ಟು ಜೀವನವೆಚ್ಚ ಹೆಚ್ಚಾಗಿರುವ ನಗರಗಳಲ್ಲಿ ಉದ್ಯೋಗಿಗಳ ಸಂಬಳವನ್ನು ಅನುಗುಣವಾಗಿ ಏರಿಸಲಾಗಿದೆಯೆ? ಇಲ್ಲದಿದ್ದರೆ, ಏಕೆ ಏರಿಸಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಪ್ರಕಟವಾಗಿರುವ ಜೀವನವೆಚ್ಚದ ಸಮಕಾಲಿಕ ಸೂಚ್ಯಂಕವು ಆಗಸ್ಟ್ ೧೯೩೯ರ ಸೂಚ್ಯಕ್ಕಿಂತ ಶೇ. ೧೮೨ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ – ಕೆಲವು ಪಟ್ಟಣಗಳಲ್ಲಿ.

ಆ) ಮೊದಲ ಭಾಗಕ್ಕೆ ಉತ್ತರ ಇತ್ಯಾತ್ಮಕ. ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ, ರೈಲ್ವೆ ಕೆಲಸಗಾರರ ಜೀವನ ವೆಚ್ಚದ ಹೆಚ್ಚಳವನ್ನು ಸಮತೋಲನಗೊಳಿಸಲು ಹಣದ ರೂಪದ ಪರಿಹಾರ ಹಾಗೂ ಪದಾರ್ಥ ರೂಪದ ರಿಯಾಯ್ತಿಗಳನ್ನು ನೀಡಲಾಗುತ್ತಿದೆ. ಅಗತ್ಯವನ್ನೆದುರಿಸಲು ಅವೆರಡೂ ನೆರವಾಗುತ್ತವೆ. ಅಷ್ಟೇ ಅಲ್ಲ, ಸಂದರ್ಭಕ್ಕನುಗುಣವಾಗಿ ಆ ಕೆಲಸಗಾರರು ಕಾಲದಿಂದ ಕಾಲಕ್ಕೆ ಹೊಂದಿಕೊಂಡು ಹೋಗುತ್ತಾರೆ.

ಇ) ಮೊದಲ ಭಾಗಕ್ಕೆ ಉತ್ತರ ನೇತ್ಯಾತ್ಮಕ. ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ, ಪ್ರಸಕ್ತ ಅಭದ್ರ ಆರ್ಥಿಕ ಸ್ಥಿತಿಯಲ್ಲಿ ಸಂಬಳ ಶ್ರೇಣಿಗಳ ಸಮಗ್ರ ಪರಿಷ್ಕರಣ ಸರ್ಕಾರದ ನೀತಿಯಾಗಲಸಾಧ್ಯ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೨೭

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೩೮.

ಆದರೆ ತುಟ್ಟಿಭತ್ಯೆಯ ಮೂಲಕವೊ ಅಥವಾ ಪದಾರ್ಥದ ರಿಯಾಯಿತಿಯ ಮೂಲಕವೊ ಅಥವಾ ಎರಡೂ ವಿಧಾನಗಳ ಮೂಲಕವೊ ಜೀವನವೆಚ್ಚದ ಹೆಚ್ಚಳವನ್ನು ಎದುರಿಸಲು ಸರ್ಕಾರ ನೆರವಾಗುತ್ತದೆ.

## ೨೪೮
## ರೈಲ್ವೆ ಉದ್ಯೋಗ ವಿವಾದಗಳ ತೀರ್ಮಾನಕ್ಕೆ ವಿನಂತಿಗಳು *

೧೦೧. **ಶ್ರೀ ಬದ್ರಿದತ್ತ ಪಾಂಡೆ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ : ಅ) ರೈಲ್ವೆ ಆಡಳಿತ ಮತ್ತು ಅದರ ಉದ್ಯೋಗಿಗಳ ಮಧ್ಯೆ ಉದ್ಭವಿಸಿದ ಉದ್ಯೋಗ ವಿವಾದಗಳ ತೀರ್ಮಾನಕ್ಕಾಗಿ ಕಳೆದ ಐದು ವರ್ಷಗಳಿಂದ ದಾಖಲಾದ ವಿನಂತಿಗಳ ಸಂಖ್ಯೆ ಎಷ್ಟು?
ಆ) ಆ ವಿನಂತಿಗಳನ್ನು ಹೇಗೆ ಬಗೆಹರಿಸಲಾಯಿತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಉದ್ಯೋಗ ವಿವಾದಗಳ ಶಾಸನ ಅಥವಾ ಭಾರತದ ರಕ್ಷಣಾ ನಿಯಮಗಳ ೮೧ (ಅ) ಸೂತ್ರದಡಿಯಲ್ಲಿ ಕಳೆದ ಐದು ವರ್ಷಗಳಿಂದ ರೈಲ್ವೆ ಆಡಳಿತ ಮತ್ತು ಉದ್ಯೋಗಿಗಳ ಮಧ್ಯೆ ಉದ್ಭವಿಸಿದ ಉದ್ಯೋಗ ವಿವಾದಗಳ ತೀರ್ಮಾನಕ್ಕಾಗಿ ಬಂದ ವಿನಂತಿಗಳ ಸಂಖ್ಯೆ ಎಷ್ಟು ಎಂಬ ವರದಿಯನ್ನು ಸಭೆಯ ಮುಂದೆ ಇರಿಸಲಾಗಿದೆ. ಹಾಗೂ ಆ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೩೮.

# ೨೪೯
# ಉದ್ಯೋಗ ವಿವಾದಗಳ ತೀರ್ಪುಗಾರನ ನೇಮಕಾತಿಯ ವಿಧಾನ *

**೧೦೨. ಶ್ರೀ ಬದ್ರಿದತ್ತ ಪಾಂಡೆ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ:

ಅ) ಭಾರತದ ರಕ್ಷಣಾ ಕಾನೂನಿನ ನಿಯಮಗಳ ೮೧ (ಅ) ಸೂತ್ರದಡಿಯಲ್ಲಿ ತೀರ್ಪುಗಾರರನ್ನು ನೇಮಿಸುವ ಮುನ್ನ ನಡೆವಳಿಗಳನ್ನು ನಿಯಂತ್ರಿಸುವ ನಿಯಮಗಳೇನು?

ಆ) ಉದ್ಯಮಿ ಮತ್ತು ಉದ್ಯೋಗಿಗಳ ಮಧ್ಯೆ ಉದ್ಭವಿಸುವ ಉದ್ಯೋಗ ವಿವಾದಗಳನ್ನು ಬಗೆಹರಿಸುವ ತೀರ್ಪುಗಾರನ ನೇಮಕಕ್ಕೆ ಸೂಚಿಸಿರುವ ವಿದ್ಯಾರ್ಹತೆಗಳೇನು?

ಇ) ಭಾರತದ ರಕ್ಷಣಾ ಕಾಯಿದೆಯ ೮೧ (ಅ) ಸೂತ್ರದಡಿಯಲ್ಲಿ ಯಾರ ವರದಿ ಅಥವಾ ವಿನಂತಿಯಿಂದ ತೀರ್ಪುಗಾರನ ನೇಮಕ ಮಾಡಲಾಗುವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮಾನ್ಯ ಸದಸ್ಯರು ಪ್ರಾಯಶಃ ಭಾರತದ ರಕ್ಷಣಾ ನಿಯಮಗಳ ೮೧ (ಆ) ಸೂತ್ರದತ್ತ ಬೆರಳು ಮಾಡಿದ್ದಾರೆ. ತೀರ್ಪುಗಾರನ ನೇಮಕದ ಮುನ್ನ ನಡೆವಳಿಗಳನ್ನು ನಿಯಂತ್ರಿಸುವ ಯಾವ ನಿಯಮಗಳೂ ಇಲ್ಲ.

ಆ) ಯಾವುದೇ ವಿದ್ಯಾರ್ಹತೆಗಳನ್ನು ನಿಗದಿಗೊಳಿಸಿಲ್ಲ. ಅದು ಸಾಧ್ಯವೂ ಇಲ್ಲ. ಏಕೆಂದರೆ ೮೧ (ಅ) ಸೂತ್ರದಡಿಯಲ್ಲಿ ಕ್ರಮ ತೀವ್ರಸ್ವಭಾವದ್ದಾಗಿರುತ್ತದೆ. ಆದ್ದರಿಂದ ದೇಶದ ಬೇರೆ ಬೇರೆ ಭಾಗಗಳಿಂದ ವಿಶಿಷ್ಟ ವಿದ್ಯಾರ್ಹತೆಗಳನ್ನುಳ್ಳ ವ್ಯಕ್ತಿಗಳನ್ನು ಆರಿಸುವುದು ಯಾವಾಗಲೂ ಸಾಧ್ಯವಾಗುವುದಿಲ್ಲ. ಸಾಧಾರಣ ನೀತಿ ಎಂದರೆ ಲಭ್ಯದಲ್ಲಿ ಸೂಕ್ತ ವ್ಯಕ್ತಿಯನ್ನು ನೇಮಕ ಮಾಡುವುದು. ಇದುವರೆಗೆ ನೇಮಕ ಮಾಡಿಕೊಂಡಿರುವವರು, ಉಚ್ಚ ನ್ಯಾಯಾಸ್ಥಾನದ ನ್ಯಾಯಾಧೀಶರು, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಸ್ಥಾನದ ನ್ಯಾಯಾಧೀಶರು, ಪ್ರಧಾನ ಪ್ರಾಂತ್ಯ ದಂಡಾಧಿಕಾರಿಗಳು, ಕಾರ್ಮಿಕ ಆಯುಕ್ತರು ಮತ್ತು ಅವರ ಸಹಾಯಕರು, ಕೆಲಸಗಾರರ ಪರಿಹಾರ ಆಯುಕ್ತರು ಮತ್ತು ಯುದ್ಧ ಹಾನಿಯ ಕ್ಲೇಮುಗಳ ಅಧಿಕಾರಿಗಳು.

ಇ) ಒಂದು ಅಥವಾ ಎರಡೂ ಪಕ್ಷಗಳ ವಿನಂತಿಯನ್ನು ಆಧರಿಸಿ ಅಥವಾ ಸರ್ಕಾರವೇ ಮೊದಲ ಹೆಜ್ಜೆ ಇಟ್ಟು ತೀರ್ಪುಗಾರರನ್ನು ನೇಮಿಸಬಹುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೩೮.

## ೨೫೦
## ಭಾರತೀಯ ಕಾರ್ಮಿಕ ಸಂಯುಕ್ತ ಸಂಘದ ಪ್ರಚಾರ ಫಲಿತಾಂಶಗಳು *

**೧೦೩. ಶ್ರೀ ಬದ್ರಿದತ್ತ ಪಾಂಡೆ :** ಮಾಹೆಯಾನ ಪಡೆಯುತ್ತಿದ್ದ ೧೩,೦೦೦ ರೂಪಾಯಿಗಳ ಸಹಾಯಧನದ ಮೂಲಕ ಕಾರ್ಮಿಕ ಒಕ್ಕೂಟ ನಡೆಸಿದ ಪ್ರಚಾರದಿಂದ ಸಾಧಿಸಿದ ಫಲಿತಾಂಶಗಳೇನು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರೊ॥ ಎನ್.ಜಿ. ರಂಗ ಅವರ ನಕ್ಷತ್ರ ಚಿಹ್ನೆಯ ೧೫೨ನೇ ಪ್ರಶ್ನೆಯ (ಇ) ಭಾಗಕ್ಕೆ ನಾನು, ೧೯೪೪ ನವೆಂಬರ್ ೭ರ ರಂದು ನೀಡಿರುವ ಉತ್ತರದತ್ತ ಮಾನ್ಯ ಸದಸ್ಯರ ಗಮನ ಸೆಳೆಯಬಯಸುತ್ತೇನೆ.

## ೨೫೧
## ಭಾರತೀಯ ಅಭ್ರಕ ಕೈಗಾರಿಕೆಗೆ ತನಿಖಾ ಸಮಿತಿ ನೇಮಕ **

**ಶ್ರೀ ಸತ್ಯನಾರಾಯಣ ಸಿನ್ಹ :** ಅ) ಬಿಹಾರದ ಕಾಗೆಬಂಗಾರ ಕೈಗಾರಿಕೆಗೆ ಕೇಂದ್ರ ಸರ್ಕಾರ ತನಿಖಾ ಸಮಿತಿಯನ್ನು ನೇಮಿಸಿರುವುದು ಅಥವಾ ನೇಮಿಸಲಿರುವುದು ನಿಜವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವಿರಾ?

ಆ) ಪೂರ್ವೋಕ್ತ ತನಿಖಾ ಸಂವಿಧಾನ, ಸಂಯುಕ್ತ ಶಾಸನರಚನಾ ಪಟ್ಟಿಯ ಅಧಿಕಾರ ವ್ಯಾಪ್ತಿಯನ್ನು ಮೀರಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಿದ್ದೀರಾ?

ಇ) ಉತ್ತರ ಇತ್ಯಾತ್ಮಕವಾಗಿದ್ದರೆ, ೧೯೩೫ರ ಭಾರತ ಸರ್ಕಾರ ಶಾಸನದ ಏಳನೇ ತಪ್ಸೀಲು ಪಟ್ಟಿಯಲ್ಲಿ ವಿತರಿಸಿರುವಂತೆ ಪ್ರಾಂತೀಯ ಶಾಸನಪಟ್ಟಿಯ ಮೇಲೆ ನಡೆಸಿದ ಇಂಥ ಅತಿಕ್ರಮಣಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಸದಸ್ಯರು ಹೇಳುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಸಮಿತಿ ನೇಮಕಗೊಂಡಿದೆ.

ಆ) ಮತ್ತು (ಇ) ಅಂಥ ಅತಿಕ್ರಮಣವೇನೂ ಅಲ್ಲವೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರ ಸಮಿತಿಯನ್ನು ನೇಮಿಸಿತು. ಆದರೆ ಮಾನ್ಯ ಸದಸ್ಯರು ತಮ್ಮದೇ ಆದ ಅಭಿಪ್ರಾಯತಾಳಲು ಸ್ವತಂತ್ರರು.

**ಶ್ರೀ ಸತ್ಯನಾರಾಯಣ ಸಿನ್ಹ :** ಭಾರತ ಸರ್ಕಾರ ಶಾಸನದ ಯಾವ ಪರಿಚ್ಛೇದದಡಿಯಲ್ಲಿ ಕ್ರಮ ಕೈಗೊಳ್ಳಲಾಯಿತು ಎಂಬುದನ್ನು ಮಾನ್ಯ ಸದಸ್ಯರು ದಯಮಾಡಿ ತಿಳಿಸುವಿರಾ?

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಪ್ರಾಯಶಃ ಸರ್ಕಾರ ಸ್ವಂತ ಜವಾಬ್ದಾರಿಯ ಮೇಲೆ ಕ್ರಮಕೈಗೊಂಡಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೪೦.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೪೧

## ೨೫೨
## ಐದನೆಯ ಕಾರ್ಮಿಕ ಸಮ್ಮೇಳನದ ನಡೆವಳಿಗಳ ಸಾರಾಂಶ ಮತ್ತು ಕಾರ್ಮಿಕ ಸ್ಥಾಯಿ ಸಮಿತಿಯ ನಾಲ್ಕನೆಯ ಸಭೆ *

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ, ೧೯೪೩ರ ಸೆಪ್ಟಂಬರ್ ೬ ಮತ್ತು ೭ರಂದು ನವದೆಹಲಿಯಲ್ಲಿ ನಡೆದ ಐದನೆಯ ಕಾರ್ಮಿಕ ಸಮ್ಮೇಳನದ ನಡೆವಳಿಗಳ ಸಾರಾಂಶದ ಪ್ರತಿಯೊಂದನ್ನು ಹಾಗೂ ೧೯೪೪ರ ಜನವರಿ ೨೫ ಮತ್ತು ೨೬ರಂದು ಲಕ್ನೋನಲ್ಲಿ ಜರುಗಿದ ಕಾರ್ಮಿಕ ಸ್ಥಾಯಿ ಸಮಿತಿಯ ನಾಲ್ಕನೆಯ ಸಭೆಯ ಕಲಾಪದ ಪ್ರತಿಯೊಂದನ್ನು ನಾನು ಈ ಸಭೆಯ ಮುಂದಿರಿಸಿದ್ದೇನೆ.

## ೨೫೩
## ಭಾರತೀಯ ಕಾರ್ಮಿಕ ಒಕ್ಕೂಟಕ್ಕೆ ಸರ್ಕಾರದ ಕೊಡುಗೆ **

**೩೫. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ಹೇಳಿ : ಅ) ೧೭ ಡಿಸೆಂಬರ್ ೧೯೪೪ರ 'ಸಿಂಧ್ ಅಬ್ಸರ್ವರ್'ನಲ್ಲಿ "ರಾಯ್‌ಮೆಹ್ತಾ ಮಣ್ಣೆರಚಾಟ – ರೂ ೧೩,೦೦೦ದ ಮೇಲೆ' ಎಂಬ ಶಿರೋನಾಮೆಯಲ್ಲಿ ಯುನೈಟೆಡ್ ಪ್ರೆಸ್ಸಿನ ಲೇಖನ ಪ್ರಕಟವಾಗಿದೆ. ಅದರಲ್ಲಿ ಶಾಸಕರಾದ ಶ್ರೀ ಜಮ್ನಾದಾಸ್ ಮೆಹ್ತಾ – ಹಾಲಿ ಭಾರತ ಸರ್ಕಾರದಲ್ಲಿ ಅಧಿಕಾರಿಯಾಗಿದ್ದಾರೆ. ತಮ್ಮ ಬಳಿ ಪೂರ್ವೋಕ್ತ ವಿಷಯಕ್ಕೆ ಸಂಬಂಧಿಸಿದ ಅಧಿಕೃತ ಕಾಗದಪತ್ರಗಳು ಇವೆಯೆಂದೂ, ಅದರ ಶಿರೋಭಾಗದಲ್ಲಿ, ಹಿಂಭಾಗದಲ್ಲಿ ಕಾರ್ಮಿಕ ಒಕ್ಕೂಟದ ಹೆಸರಿರುವುದೆಂದೂ, ಅದರ ಅಧ್ಯಕ್ಷರಿಗೆ ಅಥವಾ ಕಾರ್ಯಕಾರಿ ಸಮಿತಿಗೆ ಗೊತ್ತಾಗದಂತೆ ಮನಸೋ ಇಚ್ಛೆ ಖರ್ಚುಮಾಡಲು ಶ್ರೀಯುತ ರಾಯ್ ಮಾಹೆಯಾನ ೧೩,೦೦೦ ರೂ.ಗಳನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ – ಇದು ನಿಜವೆ?

ಆ) ಮೇಲಿನ ಸುದ್ದಿಯ ಆಧಾರದ ಮೇಲೆ, ಸಾರ್ವಜನಿಕ ಹಣವನ್ನು ಯಾರಿಗೆ ಕೊಡಲಾಯಿತು? ಯಾವ ಉದ್ದೇಶಕ್ಕಾಗಿ ಮತ್ತು ಯಾವ ರೀತಿ ಬಳಸಲಾಯಿತು? ಶ್ರೀಯುತ ರಾಯ್ ತಮ್ಮ ಮನಸ್ಸಿಗೆ ಬಂದಂತೆ ತಾವೇ ಬಳಸಿದರೆ? ಅಥವಾ ವೈಯಕ್ತಿಕ ಉದ್ದೇಶಕ್ಕಾಗಿ ಬಳಸಿಕೊಂಡರೆ? ಅಥವಾ ಅದನ್ನು ಶ್ರೀಯುತ ಜಮ್ನಾದಾಸ್ ಮೆಹ್ತಾರೊಂದಿಗೆ ಹಂಚಿಕೊಂಡರೆ? ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ವಿವರಿಸಿ ಹೇಳಬೇಕು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು, ಮಾನ್ಯ ಸದಸ್ಯರಿಂದಲೇ. (ಆ) ೧೯೪೪ರ ನವೆಂಬರ್ ೨ರಂದು ಮಾನ್ಯ ಸದಸ್ಯರ ३೧ನೇ ಪ್ರಶ್ನೆಗೆ ನಾನು ಕೊಟ್ಟ ಉತ್ತರದತ್ತ ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂಪುಟ. ೫, ೨೦ ನವೆಂಬರ್ ೧೯೪೪ ; ಪು. ೧೦೪೧.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೮೭–೮೮.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಸದಸ್ಯರು ನನ್ನ ಪ್ರಶ್ನೆಗಳಿಗೆ ಖಚಿತ ಉತ್ತರ ಕೊಟ್ಟಿಲ್ಲ. ಪ್ರಶ್ನೆ (ಅ)ಗೆ ಸಂಬಂಧಿಸಿದಂತೆ ನಾನು ತಿಳಿಯಬಯಸುತ್ತೇನೆ – ಜಮ್ನಾದಾಸ್ ಮೆಹ್ತಾ ತಮ್ಮ ಲೇಖನದಲ್ಲಿ ಹೇಳಿರುವುದು ಸರಿಯೆ ಅಥವಾ ಮಾನ್ಯ ಸದಸ್ಯರು ಕಳೆದ ಸಾರಿ ನನ್ನ ಪ್ರಶ್ನೆಗೆ ಕೊಟ್ಟ ಉತ್ತರ ಸರಿಯೆ? ಈ ಹಣ ಜಮ್ನಾದಾಸರ ಪಾಲಾಯಿತೊ, ಅಥವಾ ರಾಯ್ ಪಾಲಾಯಿತೊ ಅಥವಾ ಇಬ್ಬರ ಪಾಲಾಯಿತೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಕೊಟ್ಟ ಉತ್ತರಕ್ಕೆ ಮತ್ತೇನನ್ನೂ ಸೇರಿಸುವಂಥದು ಇಲ್ಲ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಆದರೆ ನನ್ನ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಸದಸ್ಯರು ಉತ್ತರಿಸಬೇಕೆಂದು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮಾನ್ಯ ಸದಸ್ಯರು ಉತ್ತರ ಕೊಟ್ಟಾಗಿದೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಸದಸ್ಯರು ಈ ಪ್ರಶ್ನೆಗೆ ಉತ್ತರಿಸಲು ನಾಚಿಕೆ ಸಂಕೋಚಗಳನ್ನು ಪಡುತ್ತಿದ್ದಾರೆ ಎಂದು ನನಗೆ ಗೊತ್ತು. ಏಕೆಂದರೆ ಅವರು ಹೇಳಿಕೆ ನೀಡಿದರೆ ಅದು ಅವರ ಉತ್ತರಗಳಿಗೆ ವಿರುದ್ಧವಾಗಿರುತ್ತದೆ. ಮಾನ್ಯ ಸದಸ್ಯರು ನನ್ನ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದೇ ಹೋದರೆ ಈ ವಿಷಯದ ಮೇಲೆ ನಿಲುವಳಿ ಸೂಚನೆ ಮಂಡಿಸಬೇಕಾಗುತ್ತದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ್ :** ಅದು ವೈಯಕ್ತಿಕ ಪ್ರೋತ್ಸಾಹ ದ್ರವ್ಯವೇ ಅಥವಾ ಸಂಯುಕ್ತ ಸಂಘದ ಪ್ರಯೋಜನಕ್ಕಾಗಿಯೇ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಈ ಸದನಕ್ಕಿದೆ ಎಂದು ನಾನು ಭಾವಿಸಿದ್ದೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದನ್ನು ಒಕ್ಕೂಟಕ್ಕೆ ಕೊಡಲಾಗಿದೆ.

**ಶ್ರೀ ಅವಿನಾಶಿಲಿಂಗಂ ಚೆಟ್ಟಿಯಾರ್ :** ಅದು ಸಂಯುಕ್ತ ಸಂಘದ ಲೆಕ್ಕಪತ್ರಗಳಲ್ಲಿ ದಾಖಲುಗೊಂಡಿದೆ ಮತ್ತು ಸಂಘದ ಮೂಲಕವೇ ಖರ್ಚಾಗಿದೆ ಎಂಬ ಪೂರ್ಣ ನಂಬಿಕೆಯ ತೃಪ್ತಿ ಸರ್ಕಾರಕ್ಕಿದೆಯೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಹೆಚ್ಚಿಗೆ ಮೊತ್ತವನ್ನು ಕೊಡಲಾಗಿದೆ ಎಂಬ ಮೊಟ್ಟೆಯ ಮೇಲೆ ಸರ್ಕಾರ ಕಾವು ಕೊಡುತ್ತಾ ಕೂತಿದೆಯೆ ಎಂದು ನಾನು ಕೇಳಬಹುದೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಎಷ್ಟು ಅವಧಿಯವರೆಗೆ ಇದನ್ನು ಮಂಜೂರು ಮಾಡಲಾಗಿದೆ ಎಂಬುದನ್ನ ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಒಂದು ವರ್ಷದ ಅವಧಿಗೆ ಮಂಜೂರು ಮಾಡಲಾಗಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಯಾವಾಗ ಕೊನೆಗೊಳ್ಳುತ್ತದೆ ಎಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬಜೆಟ್ ಮುಗಿದ ತಕ್ಷಣ.

**ಶ್ರೀ ಬದ್ರಿದತ್ತ ಪಾಂಡೆ :** ತನಿಖೆಯಾದ ಲೆಕ್ಕಪತ್ರವನ್ನು ಸದನದ ಮುಂದೆ ಮಂಡಿಸುವುದಾಗಿ ಕಳೆದ ಬಾರಿ ಆಶ್ವಾಸನೆ ನೀಡಲಾಗಿತ್ತು. ಮಾನ್ಯ ಸದಸ್ಯರು ಅದಕ್ಕೇಕೆ ಮುಂದಾಗಿಲ್ಲ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಇನ್ನೂ ಅವುಗಳು ನಮ್ಮ ಕೈಗೆ ಬಂದಿಲ್ಲ.

**ಶ್ರೀ ಗೋವಿಂದ ವಿ. ದೇಶಮುಖ್ :** ಈ ಲೆಕ್ಕಪತ್ರದ ವಿವರವನ್ನು ಮಾನ್ಯ ಸದಸ್ಯರು ನೋಡಿದ್ದಾರೆಯೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ಸಂಬಂಧವಾಗಿ ಸರ್ಕಾರದಿಂದ ನೇಮಕಗೊಂಡಿರುವ ವಿಶೇಷ ಅಧಿಕಾರಿ ಅವುಗಳನ್ನು ನೋಡಿದ್ದಾರೆ ಎಂದು ನನ್ನ ತಿಳಿವಳಿಕೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಸದಸ್ಯರು ಈಗಾಗಲೇ ಆ ಲೆಕ್ಕಪತ್ರಗಳನ್ನು ನೋಡಿರುವುದರಿಂದ, ಆ ಹಣವನ್ನು ಶ್ರೀ ರಾಯ್ ತಮ್ಮ ವೈಯಕ್ತಿಕ ಉದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಸ್ಪಷ್ಟವಾಗುವುದಿಲ್ಲವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅದು ಸೂಕ್ತ ಹೇಳಿಕೆಯಲ್ಲವೆಂದು ನಾನು ಭಾವಿಸಿದ್ದೇನೆ.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಹಾಗಾದರೆ ಯಾವುದು ಸೂಕ್ತ ಹೇಳಿಕೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಯಾವ ಉದ್ದೇಶಕ್ಕೆ ಕೊಡಲಾಗಿತ್ತೋ ಅದೇ ಉದ್ದೇಶಕ್ಕೇ ಬಳಸಲಾಗಿದೆ.

**ಶ್ರೀ ಬದ್ರಿದತ್ತ ಪಾಂಡೆ :** ಹಣನ್ನು ಯಾರಿಗೆ ಕೊಡಲಾಯಿತು – ಶ್ರೀ ರಾಯ್ ಅವರಿಗೊ? ಶ್ರೀ ಜಮ್ನಾದಾಸ್ ಮೆಹ್ತಾ ಅವರಿಗೋ? ಅಥವಾ ಒಕ್ಕೂಟದ ಕಾರ್ಯದರ್ಶಿಯವರಿಗೋ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಒಕ್ಕೂಟದ ಕಾರ್ಯದರ್ಶಿಗೆ ಕೊಡಲಾಗಿತ್ತು.

**ಶ್ರೀ ಜಮ್ನಾದಾಸ್ ಎಂ. ಮೆಹ್ತಾ :** ಸರ್ಕಾರದಿಂದ ಒಕ್ಕೂಟ ಯಾವುದೇ ಹಣವನ್ನು ಪಡೆದಿಲ್ಲ. ಮೇಲ್ಭಾಗದಲ್ಲಿ ಹಿಂಭಾಗದಲ್ಲಿ ಒಕ್ಕೂಟದ ಹೆಸರನ್ನು ಬಳಸಲಾಗಿದೆ. ಆದರೆ ಅದರ ಅಧ್ಯಕ್ಷರ ಅಥವಾ ಕಾರ್ಯಕಾರಿ ಸಮಿತಿಯ ಗಮನಕ್ಕೆ ಬಂದಿಲ್ಲ. ಸರ್ಕಾರ ಮೋಸ ಹೋಗಿದೆ. ಒಕ್ಕೂಟಕ್ಕೆ ಗೊತ್ತಿಲ್ಲದ ಹಾಗೆ ನಡೆದಿರುವ ಕಾರ್ಯ ಅದು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನಗೆ ತಲುಪಿರುವ ಸುದ್ದಿಯ ಪ್ರಕಾರ ಅದು ಸುಳ್ಳು.

**ಶ್ರೀ ಜಮ್ನಾದಾಸ್ ಎಂ. ಮೆಹ್ತಾ :** ಸರ್ಕಾರ ಮೋಸಹೋಗಿದೆ.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ಸರ್ಕಾರದ ಕಣ್ಣಿಗೆ ಮಣ್ಣೆರಚಲಾಗಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತಂದಿರುವುದರಿಂದ ಈಗಲಾದರೂ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ತಾನು ಮೋಸಹೋಗಿದೆ ಎಂದು ಸರ್ಕಾರ ನಂಬುವುದಿಲ್ಲ.

# ೨೫೪
# ಗಣಿಗಳ ನೆಲದಡಿಯಲ್ಲಿ ಕೆಲಸ ಮಾಡುವ ಮಹಿಳೆಯರ ಮೇಲೆ ನಿಷೇಧದ ಮರುಹೇರಿಕೆ*

**೪೮. ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ : ಅ) ಗಣಿಗಳ ಆಳಕ್ಕೆ ಮಹಿಳೆಯರ ಪ್ರವೇಶ ಮುಂದುವರಿಕೆಯ ವಿಷಯ ಮರುಪರಿಶೀಲನೆಗೆ ಒಳಗಾಯಿತೆ?

(ಆ) ಗಣಿಗಳ ಆಳದಲ್ಲಿ ಎಷ್ಟು ಜನ ಮಹಿಳೆಯರು ಹಾಲಿ ಕೆಲಸ ಮಾಡುತ್ತಿದ್ದಾರೆ?

(ಇ) ನೆಲದಡಿಯಲ್ಲಿ ಕೆಲಸ ಮಾಡುವ ಮಹಿಳೆಯರು ಮರ್ಯಾದೆಯ ಯೋಗ್ಯ ಉಡುಗೆಗಳನ್ನು ತೊಟ್ಟುಕೊಳ್ಳಲಾಗುವುದಿಲ್ಲ ಎಂಬ ದೃಷ್ಟಿಯಿಂದ, ಆ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಸೂಕ್ತವೆಂದು ಮಾನ್ಯ ಸದಸ್ಯರು ಗಣಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕಲ್ಲಿದ್ದಲು ಗಣಿಗಳ ಆಳದಲ್ಲಿ ಕೆಲಸ ಮಾಡುವ ಮಹಿಳೆಯರ ಮೇಲೆ ಮರುನಿಷೇಧ ಹೇರಬೇಕೆಂಬ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲಿಸಲಾಗಿದೆ.

ಆ) ಅಂಕಿಅಂಶಗಳು ಕೊಂಚ ಏರುಪೇರಾದರೂ ಸದ್ಯದಲ್ಲಿ ೧೫,೦೦೦ದಿಂದ ೧೬,೦೦೦ ಮಹಿಳೆಯರು ಕಲ್ಲಿದ್ದಲು ಗಣಿಗಳ ಆಳದಲ್ಲಿ ಕೆಲಸಕ್ಕೆ ನೇಮಕಗೊಂಡಿದ್ದಾರೆ.

ಇ) ತಾತ್ಕಾಲಿಕ ಕ್ರಮವಾಗಿ ನಿಷೇಧವನ್ನು ತೆಗೆಯಲಾಗಿದೆ. ಸನ್ನಿವೇಶ ಅನುವುಮಾಡಿಕೊಟ್ಟ ಕೂಡಲೇ ಮತ್ತೆ ಹೇರಲಾಗುವುದು.

ಬೇರೆ ಬೇರೆ ಗಣಿ ಸಂಘಗಳು ವ್ಯವಸ್ಥೆಗೊಳಿಸಿರುವಂತೆ ರಿಯಾಯಿತಿ ದರದಲ್ಲಿ ವರ್ಷಕ್ಕೆ ಎರಡು ಸೀರೆಗಳನ್ನು ಗಣಿಯ ಮೇಲುಗಡೆ ಮತ್ತು ಒಳಗಡೆ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಕೊಡಲಾಗುವುದು ಎಂಬುದನ್ನು ತಿಳಿಸಬಯಸುತ್ತೇನೆ. ಕೆಲವು ಗಣಿಗಳಲ್ಲಿ ಸೀರೆಗಳನ್ನು ಉಚಿತವಾಗಿ ಕೊಡಲಾಗುತ್ತದೆ ಮತ್ತು ಕೆಲವು ಗಣಿಗಳಲ್ಲಿ ಅರ್ಧ ಬೆಲೆಗೆ ಕೊಡಲಾಗುತ್ತದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಅವರಿಗೆ ಉಡಲು ಸೀರೆಗಳನ್ನು ಕೊಡಲಾಗುತ್ತದೆ ಎಂಬುದು ಮುಖ್ಯ ಪ್ರಶ್ನೆಯಲ್ಲ. ಗಣಿಗಳ ಒಳಗೆ ಸೀರೆ ಧರಿಸುವುದು ಅಸಾಧ್ಯ – ಆದ್ದರಿಂದ ಉಚಿತವಾಗಿ ಅರ್ಧ ಬೆಲೆಯಲ್ಲಿ ಸೀರೆಗಳನ್ನು ಕೊಡುವ ವಿಷಯ ಸಂಪೂರ್ಣವಾಗಿ ಅರ್ಥರಹಿತ. ಗಣಿಗಳ ಒಳಗೆ ಕೆಲಸ ಮಾಡುವ ಮಹಿಳೆಯರು ಸೊಂಟದ ಮೇಲೆ ಸೀರೆ ಧರಿಸಲು ಸಾಧ್ಯವಿಲ್ಲ – ಹಾಗೆ ಮಾಡಿದರೆ ದೊಡ್ಡ ತಪ್ಪಾಗುತ್ತದೆ – ಎಂದು ತಿಳಿದಿದ್ದೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಸಂಪೂರ್ಣ ತಪ್ಪು ಕಲ್ಪನೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ನಿಷೇಧವನ್ನು ಮತ್ತೆ ಜಾರಿಗೊಳಿಸುವುದು ಯಾವಾಗ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ನಿವೇಶಗಳು ಅನುಕೂಲ ಎಂದು ಕಂಡ ಕೂಡಲೇ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಸನ್ನಿವೇಶಗಳು ಯಾವುವು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೧೦೪.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅವುಗಳು ನನ್ನ ನಿಯಂತ್ರಣದಲ್ಲಿಲ್ಲ ಅಥವಾ ಅವುಗಳನ್ನು ಮುಂದಾಗಿ ಊಹಿಸಲು ಸಾಧ್ಯವಿಲ್ಲ.

## ೨೫೫
## ಕಲ್ಲಿದ್ದಲು ಗಣಿಗಳಲ್ಲಿ ದುರಂತಗಳು*

**೫೨. ಶ್ರೀ ಅಬ್ದುಲ್ ಖಯೂಮ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರ ನೀಡಿ : ಅ) ೧೯೪೩ ಮತ್ತು ೪೪ರಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುವ ಎಷ್ಟು ಕಾರ್ಮಿಕರು ಮರಣ ಹೊಂದಿದರು ಅಥವಾ ಗಾಯಗೊಂಡರು?

ಆ) ಗಣಿಗಳ ಕೆಲಸ ಮಾಡುವ ಮಹಿಳೆಯರಿಗೆ ಗಣಿದ್ವಾರದ ಬಳಿ ಸ್ನಾನದ ವ್ಯವಸ್ಥೆ ಮಾಡುವ ಮತ್ತು ಮಕ್ಕಳಿಗೆ ಶಿಶುವಿಹಾರದ ವ್ಯವಸ್ಥೆ ಮಾಡುವ ಸಲಹೆಯನ್ನು ಅನುಷ್ಠಾನಗೊಳಿಸಲಾಗಿದೆಯೆ?

ಇ) ಇಲ್ಲದಿದ್ದರೆ, ಈ ನಿಧಾನಕ್ಕೆ ಕಾರಣಗಳೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :**

| **ವರ್ಷ** | **ಮರಣ ಹೊಂದಿದವರು** | **ಗಾಯಗೊಂಡವರು** |
|---|---|---|
| ೧೯೪೩ | ೨೯೦ | ೧,೩೨೦ |
| ೧೯೪೪ | ೩೩೨ | ೧,೩೯೫ |

ಆ) ಇಲ್ಲಿಯವರೆಗೆ ದಿಗ್‌ವರ್ದಿ ಕಲ್ಲಿದ್ದಲು ಗಣಿಗಳಲ್ಲಿ "ಗಣಿದ್ವಾರದ ಬಳಿ ಸ್ನಾನದ ವ್ಯವಸ್ಥೆ"ಗಳನ್ನು ಒದಗಿಸಲಾಗಿದೆ. ಕೇಂದ್ರ ಪ್ರದೇಶದ ೭ ಕಲ್ಲಿದ್ದಲು ಗಣಿಗಳಲ್ಲಿ ಮತ್ತು ರಾಣಿಗಂಜ್ (ಬಂಗಾಳ)ನ ಒಂದು ಕಲ್ಲಿದ್ದಲು ಗಣಿಯಲ್ಲಿ ಶಿಶುವಿಹಾರಗಳನ್ನು ಸ್ಥಾಪಿಸಲಾಗಿದೆ.

ಇ) ನಿಧಾನಕ್ಕೆ ಕಾರಣಗಳೇನು ಎಂಬುದು ಭಾರತ ಸರ್ಕಾರಕ್ಕೆ ತಿಳಿದು ಬಂದಿಲ್ಲ. ಆದರೆ ಗಣಿ ಉದ್ಯಮಿಗಳು ತಾವು ನೇಮಿಸಿಕೊಂಡಿರುವ ಮಹಿಳಾ ಕಾರ್ಮಿಕರ ಮಕ್ಕಳಿಗೆ ಶಿಶುವಿಹಾರಗಳ ಸೌಲಭ್ಯವನ್ನು ಕಡ್ಡಾಯವಾಗಿ ಕಲ್ಪಿಸಬೇಕೆಂದು ಭಾರತೀಯ ಗಣಿಶಾಸನವನ್ನು ತಿದ್ದುಪಡಿಮಾಡಲು ಸರ್ಕಾರ ಉದ್ಯುಕ್ತವಾಗಿದೆ.

**ಶ್ರೀ ಅಬ್ದುಲ್ ಖಯೂಮ್ :** ಮಹಿಳೆಯರ ನೇಮಕದ ಮೇಲೆ ನಿಷೇಧ ಹೇರುವ ಮುನ್ನ ಅನುಕೂಲಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಪ್ರಯತ್ನಿಸುವುದೆ? ಹಾಗೆ ಮಾಡದಿದ್ದರೆ, ಆಮೇಲಿನ ಈ ಸೌಲಭ್ಯಗಳಿಗೆ ಅರ್ಥವೇ ಇರುವುದಿಲ್ಲವಲ್ಲವೆ? ಹೆಚ್ಚು ವಿಳಂಬವಾಗದಂತೆ ಮಾನ್ಯ ಸದಸ್ಯರು ಇತ್ತ ಗಮನಹರಿಸುವರೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಗಣಿಯೊಳಗಡೆ ಕೆಲಸಮಾಡುವ ಮಹಿಳೆಯರ ನೇಮಕವನ್ನು ನಿಲ್ಲಿಸಬಹುದು. ಆದರೆ ಗಣಿಯ ಮೇಲುಗಡೆ ಕೆಲಸಮಾಡುವ ಮಹಿಳೆಯರ ನೇಮಕಾತಿ ಮುಂದುವರಿಯುತ್ತದೆ. ಶಿಶುವಿಹಾರಗಳು ಅಗತ್ಯ. ನಾನು ಕಾಲವಿಳಂಬ ಮಾಡುತ್ತೇನೆ ಎಂಬುದು ಇದರ ಅರ್ಥವಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೧೦೯–೧೦.

**ಪ್ರೊ॥ ಎನ್.ಜಿ. ರಂಗ :** ಗಣಿ ದುರಂತಗಳಲ್ಲಿ ಮಡಿದವರ ಪೈಕಿ ಮಹಿಳೆಯರು ಎಷ್ಟು ಜನ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾಹಿತಿ ಬರಬೇಕಾಗಿದೆ.

**ಪಂಡಿತ ಲಕ್ಷ್ಮಿಕಾಂತ ಮೈತ್ರ :** ಈ ಸಾವುಗಳಲ್ಲಿ ಶೇಕಡ ಎಷ್ಟು ಉಸಿರುಕಟ್ಟಿದ್ದರಿಂದ ಸತ್ತಿದ್ದಾರೆ ಹಾಗೂ ಶೇಕಡ ಎಷ್ಟು ದುರಂತಗಳಿಂದ ಸತ್ತಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾಹಿತಿ ಬರಬೇಕಾಗಿದೆ.

## ೨೫೬
## ದಕ್ಷಿಣ ಭಾರತದಲ್ಲಿ ಖನಿಜ ನಿಕ್ಷೇಪಗಳು*

**೬೧. ಶ್ರೀ ಕೆ.ಎಸ್. ಗುಪ್ತ :** ಅ) ಕಳೆದ ಮೂವತ್ತು ವರ್ಷಗಳಲ್ಲಿ ದಕ್ಷಿಣ ಭಾರತದಲ್ಲಿ ಭೂವಿಜ್ಞಾನ ಇಲಾಖೆ ಆಗಾಗ್ಗೆ ನಡೆಸಿದ ಸರ್ವೇಕ್ಷಣೆಗಳಿಂದ ಅರಿವಿಗೆ ಬಂದಿರುವ ವಿವಿಧ ಖನಿಜ ನಿಕ್ಷೇಪಗಳ – ಲೋಹ ಮತ್ತು ಲೋಹೇತರ – ವಿವರವನ್ನು ಮಾನ್ಯ ಕಾರ್ಮಿಕ ಸದಸ್ಯರು ನೀಡುವರೆ?

ಆ) ಸುಲಭ ಸುಗಮ್ಯ ಪ್ರದೇಶಗಳಲ್ಲಿ ಕಾಂತಗುಣದ ಕಬ್ಬಿಣದ ಅದುರಿನ ನಿಕ್ಷೇಪಗಳು ಅಧಿಕ ಪ್ರಮಾಣದಲ್ಲಿ ಕಂಡುಬಂದಿವೆಯೆಂಬುದು ನಿಜವೆ?

ಇ) ಈ ನಿಕ್ಷೇಪಗಳ ಅಕ್ಕಪಕ್ಕದಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯೊಂದನ್ನು ಸ್ಥಾಪಿಸುವ ಪ್ರಯತ್ನವನ್ನು ಸರ್ಕಾರ ಮಾಡಿದೆಯೆ? ಅಥವಾ ಬೇರೆಯವರಿಗೆ ಹಾಗೆ ಮಾಡಲು ಪ್ರೋತ್ಸಾಹ ನೀಡಿದೆಯೆ?

ಈ) ಮದ್ರಾಸ್ ಪ್ರಾಂತ್ಯದ ಈ ಕೆಳಗಿನ ನಿಕ್ಷೇಪಗಳ ಕ್ರಮಬದ್ಧ ಪರೀಕ್ಷೆ ಮತ್ತು ಸಂಶೋಧನೆ ನಡೆದಿದೆಯೇ? – (೧) ತಾಮ್ರ, (೨) ಸತುವು (Zinc), (೩) ಸೀಸ, (೪) ತವರ (Aluminium) ನಡೆದಿದ್ದರೆ, ಫಲಿತಾಂಶಗಳೇನು?

ಉ) ಸಾಧನ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡರೆ ಮದ್ರಾಸ್ ಪ್ರಾಂತ್ಯದಲ್ಲಿ ಮೇಲ್ಮಟ್ಟದ ಕುಂಭಕಲೆಯ ವಸ್ತುಗಳನ್ನು ಉತ್ಪಾದಿಸಬಹುದು ಎಂಬುದು ನಿಜವಲ್ಲವೆ? ಈ ಕೈಗಾರಿಕೆಗೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ನಡೆಸಲಾಗಿದೆಯೆ? ಇಲ್ಲದಿದ್ದರೆ, ಏಕೆ ನಡೆಸಿಲ್ಲ?

ಊ) ಬಣ್ಣದ ಉತ್ಪಾದನೆಗೆ ಅಗತ್ಯವಾಗಿ ಬೇಕಾಗಿರುವ ಇಲ್ಮೆನೈಟ್ (Iimenite) ಖನಿಜ ದಕ್ಷಿಣ ಜಿಲ್ಲೆಗಳಲ್ಲಿ ಕಂಡುಬರುತ್ತದೆ ಎಂಬುದು ದಿಟವಲ್ಲವೆ ? ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಪ್ರಯತ್ನ ಅಥವಾ ಯೋಜನೆಯತ್ತ ಗಮನನೀಡಲಾಗಿದೆಯೇ ಅಥವಾ ಪ್ರಯತ್ನಮಾಡಲಾಗಿದೆಯೆ? ಇಲ್ಲದಿದ್ದರೆ, ಏಕೆ ಗಮನಹರಿಸಿಲ್ಲ?

ಋ) ಅಧಿಕ ಕರ್ಷಣದ ವಿದ್ಯುತ್ ಕಾರ್ಯಗಳಿಗೆ ಅಗತ್ಯವಾಗಿ ಬೇಕಾಗುವ – ಬದಲಿ ಪದಾರ್ಥ ಸಾಧ್ಯವಾಗದ – ಅಧಿಕ ಪ್ರಮಾಣದ ಅಭ್ರಕ (ಕಾಗೆಬಂಗಾರ) ಮದ್ರಾಸ್ ಪ್ರಾಂತ್ಯದ ಸಮುದ್ರ ತೀರದ ಜಿಲ್ಲೆಗಳಲ್ಲಿ ಕಂಡುಬರುತ್ತದೆ ಎಂಬುದು ನಿಜವಲ್ಲವೆ?

ೠ) ವಿದ್ಯುತ್‌ಸಂಬಂಧಿ ವಸ್ತುಗಳ ಉತ್ಪಾದನೆಗೆ ಕೈಗಾರಿಕೆಯೊಂದನ್ನು ಸ್ಥಾಪಿಸುವ ಪ್ರಯತ್ನವನ್ನೇ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೧೧೬–೧೭.

ಮಾಡದೆ, ಕೇವಲ ಸುರಂಗ ತೋಡಿ ಅದಿರನ್ನು ವಿದೇಶಗಳಿಗೆ ರಫ್ತುಮಾಡಬಹುದಲ್ಲವೆ?

ಎ) ಈ ನಿಕ್ಷೇಪಗಳ ಅಧ್ಯಯನಕ್ಕೆಂದು ಕೇಂದ್ರ ಸಂಶೋಧನಾ ಸಂಸ್ಥೆಯೊಂದನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸುವ ಉದ್ದೇಶ ಭಾರತ ಸರ್ಕಾರಕ್ಕಿದೆಯೆ? ಇದ್ದರೆ, ಯಾವಾಗ? ಇಲ್ಲದಿದ್ದರೆ, ಏಕೆ?

ಏ) ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯಡಿಯಲ್ಲಿ ಸ್ಥಾಪಿತವಾದ, ಸ್ಥಾಪಿತವಾಗಲಿರುವ ಎಲ್ಲ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು ಉತ್ತರ ಭಾರತದಲ್ಲಿಯೇ ನೆಲೆಗೊಂಡಿರುವುದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಲೋಹ : ಕ್ರೋಮೈಟ್, ಕಬ್ಬಿಣದ ಅದುರು, ಇಲ್ಮೆನೈಟ್, ಕೊಲಂಬೈಟ್ – ಟೆಂಟಲೈಟ್.

ಲೋಹೇತರ : ಕುಂಭಕಲೆಗೆ ಅಗತ್ಯ ಪದಾರ್ಥವೆನ್ನಿಸಿದ ಬಿಳಿ ಜೇಡಿಮಣ್ಣು, ಕಾವು ಜೇಡಿಮಣ್ಣು, ಬೇರೆ ಬಗೆಯ ಜೇಡಿಮಣ್ಣುಗಳು; ಬೆಣಚುಕಲ್ಲು, ಫೆಲ್‌ಸ್ಪರ್, ಸಿಲ್ಲಿಮೆನೈಟ್, ಕಂದು ಕಲ್ಲಿದ್ದಲು ಮತ್ತು ವಿರಳ ಭೂ ಖನಿಜಗಳಾದ ಮೋನಾಜೈಟ್, ಜರ್ಕಸ್, ಸಮರ್‌ಸ್ಕೈಟ್.

ಆ) ಹೌದು.

ಇ) ಇಲ್ಲ. ಅದಿರು ಕೆಳದರ್ಜೆಯದು. ಕರಗಿಸಿ ಲೋಹ ಮಾಡಲು ಬೇಕಾದ ಇಂಧನವು ಸಮೀಪದಲ್ಲಿ ದೊರೆಯುವುದಿಲ್ಲ.

ಈ) ಹೌದು. ಭೂವಿಜ್ಞಾನ ಸಂವೀಕ್ಷಣೆಯಿಂದ ನಿಕ್ಷೇಪಗಳ ಆರ್ಥಿಕ ಮೌಲ್ಯ ಕಂಡುಹಿಡಿಯಲಾಗಿಲ್ಲ.

ಉ) ಮದ್ರಾಸ್ ಸರ್ಕಾರ ಇತ್ತ ಗಮನ ಹರಿಸಿದೆ. ಮತ್ತು ಕುಂಭಕಲೆಯ ಕುಶಲಿಗಳನ್ನು ನೇಮಕಮಾಡಿಕೊಂಡಿದೆ. ಭೂವಿಜ್ಞಾನ ಸಮೀಕ್ಷಣೆ ಮದ್ರಾಸಿನ ಕುಂಭಕಲಾ ಪದಾರ್ಥಗಳ ಗುಣಗಾತ್ರಗಳ ಬಗೆಗೆ ಸಂಶೋಧನೆ ನಡೆಸುತ್ತಿದೆ.

ಊ) ಮೊದಲ ಭಾಗ : ಹೌದು. ಎರಡನೆಯ ಭಾಗ : ಇಲ್ಲ. ಏಕೆಂದರೆ ಮದ್ರಾಸಿನಲ್ಲಿರುವ ನಿಕ್ಷೇಪಗಳಿಗಿಂತ ಟ್ರಾವಂಕೂರಿನಲ್ಲಿರುವಂಥವು ಹೆಚ್ಚು ಸಂಪದ್ಯುಕ್ತವಾಗಿವೆ. ಈ ಖನಿಜಕ್ಕಿರುವ ತಗಾದೆ ಸೀಮಿತ.

ಋ) ಹೌದು.

ೠ) ಹೌದು. ಅಭ್ರಕ ಅಧಿಕ ಪ್ರಮಾಣದಲ್ಲಿ ರಫ್ತುಗೊಳ್ಳುತ್ತಿದೆ.

ಎ) ಸಿಬ್ಬಂದಿ ಮತ್ತು ಚಟುವಟಿಕೆಗಳೆರಡರಲ್ಲೂ ಭಾರತ ಭೂವಿಜ್ಞಾನ ಸಮೀಕ್ಷಣಾ ಇಲಾಖೆಯನ್ನು ವಿಸ್ತರಿಸುವ ಯೋಜನೆ ಸರ್ಕಾರದ ಗಮನದಲ್ಲಿದೆ. ಈಗಿರುವುದಕ್ಕಿಂತ ದೇಶದ ಖನಿಜ ನಿಕ್ಷೇಪಗಳ ತೀವ್ರವಾದ ವಿಸ್ತೃತ ಅಧ್ಯಯನ ಭವಿಷ್ಯದಲ್ಲಿ ಸಾಧ್ಯವಾಗುತ್ತದೆ ಎಂದು ನಾನು ನಂಬಿದ್ದೇನೆ.

ಏ) ಪ್ರಶ್ನೆಯನ್ನು ಸಂಬಂಧಪಟ್ಟ ಸದಸ್ಯರಿಗೆ ಕೇಳಬೇಕು.

# ೨೫೭
# ದಾಮೋದರ್ ಕಾಲುವೆ ಮತ್ತು ಪೋಲಾವರಂ ಯೋಜನೆಗಳು*

**೬೫. ಪ್ರೊ॥ ಎನ್.ಜಿ.ರಂಗ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆಉತ್ತರ ನೀಡಿ :

ಅ) ಟೆನ್ನೆಸ್ಸಿ ಕಣಿವೆ ಪ್ರಾಧಿಕಾರದ ಮಾದರಿಯಂತೆ ದಾಮೋದರ್ ಕಾಲುವೆ (ಬಂಗಾಳ) ಮತ್ತು ಪೋಲಾವರಂ (ಮದ್ರಾಸ್) ಯೋಜನೆಗಳನ್ನು ಅಭಿವೃದ್ಧಿಗೊಳಿಸಬೇಕೆಂಬ ಸದಸ್ಯರ ನಿರ್ದೇಶನದ ಅನುಸಾರ, ಆ ಯೋಜನೆಯ ಸಾಧಾರಣ ಗುಣವಿಶೇಷಗಳ ಮತ್ತು ಸಾಧನೆಗಳ ಪ್ರಕಟಿತ ಸಂಕ್ಷಿಪ್ತ ವರದಿಯನ್ನು ಸರ್ಕಾರ ತರಿಸಿಕೊಳ್ಳಲು ಯತ್ನಿಸುವುದೆ?

ಆ) ನೆರೆಹಾವಳಿಯ ಪರಿಹಾರದ ವಿಶೇಷ ಅಗತ್ಯ ಬಂಗಾಳಕ್ಕಿದೆ ಎಂಬ ದೃಷ್ಟಿಯಿಂದ ಪ್ರವಾಹ ನಿಯಂತ್ರಣವು ಯೋಜಿತ ದಾಮೋದರ್ ಯೋಜನೆಯ ಪ್ರಾಥಮಿಕ ಗುರಿಯಾಗಿದೆಯೇ?

ಇ) ಬಂಗಾಳ ಮತ್ತು ಬಿಹಾರದ ಪರಿಶಿಷ್ಟ ಜನರಿಗೆ ಜಮೀನಿನ ಆವಶ್ಯಕತೆ ಅಧಿಕವಾಗಿರುವ ದೃಷ್ಟಿಯಿಂದ, ಸಹಕಾರ ವ್ಯವಸಾಯ ಪದ್ಧತಿಗಾಗಿ ಹೆಚ್ಚಿನ ಭೂಮಿ ಪಡೆಯಲು ಸಾಕಷ್ಟು ಹಣವನ್ನು ಪ್ರತ್ಯೇಕವಾಗಿರಿಸಿ ಸರ್ಕಾರ ವಿಶೇಷ ಕ್ರಮಕೈಗೊಳ್ಳುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಟೆನ್ನೆಸ್ಸಿ ಕಣಿವೆ ಪ್ರಾಧಿಕಾರ ವಿದೇಶಿ ಸರ್ಕಾರದ ಸಂಸ್ಥೆ, ಪ್ರಾಧಿಕಾರದ ವಹಿವಾಟಿನ ವರದಿಯ ಪ್ರತಿಯನ್ನು ಪಡೆದು ಸದನದ ಗ್ರಂಥಭಂಡಾರದಲ್ಲಿ ಇಡಲಾಗುವುದು.

ಆ) ಹೌದು. ಉಳಿದ ನಿಯಂತ್ರಣ ಕ್ರಮಗಳಿಗಿಂತ ಪ್ರವಾಹ ನಿಯಂತ್ರಣಕ್ಕೆ ಅಗ್ರಸ್ಥಾನವಂಟು.

ಇ) ಭೂರಹಿತ ಕಾರ್ಮಿಕರಿಗೆ ಸಹಾಯಮಾಡುವ ಉತ್ತಮ ಮಾರ್ಗವೆಂದರೆ ಸರ್ಕಾರದ ಗಮನವನ್ನು ಸಮಸ್ಯೆಯಲ್ಲಿ ಅಂತರ್ಗತಗೊಳಿಸುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೧೧೮.

## ೨೫೮
## ಬಿಹಾರ ಕಲ್ಲಿದ್ದಲು ಗಣಿಗಳಲ್ಲಿ ಅಕ್ಕಿಗೆ ದುಬಾರಿ ಬೆಲೆ*

**೭೨. ಶ್ರೀ ಕೆ.ಸಿ. ನಿಯೋಗಿ :** ಅ) ೧೯೪೪ರ ನವೆಂಬರ್ ೨೧ನೆಯ ದಿನಾಂಕದ ನನ್ನ ನಕ್ಷತ್ರ ಗುರುತಿನ ೬೧೧ (ಆ) ಪ್ರಶ್ನೆಗೆ ಉತ್ತರವನ್ನು ಹೇಳಿದ ನಂತರವೂ ಬಿಹಾರ ಸರ್ಕಾರ ನಷ್ಟಭರಿಸಲು ಸ್ಥಳೀಯ ಸಗಟು ನಿಯಂತ್ರಣ ಬೆಲೆಯ ಮೇಲೆ ನಾಲ್ಕು ಆಣೆಯನ್ನು ಆಡಳಿತ ವೆಚ್ಚವೆಂದು ವಿಧಿಸುತ್ತದೆಯೆಂಬ, ಹಾಗೂ ಝರಿಯಾ ಜಂಟಿ ವಾಣಿಜ್ಯ ವ್ಯವಸ್ಥೆ ತನ್ನ ಸದಸ್ಯರಿಗೆ ಹಳೆಯ ಬೆಲೆಯನ್ನೇ ಹೇರುತ್ತಿದೆಯೆಂಬ ಸುದ್ದಿ ನಿಜವೆ ಎಂಬುದನ್ನು ಮಾನ್ಯ ಸದಸ್ಯರು ಸ್ಪಷ್ಟಪಡಿಸಿ.

ಆ) ಕೆಲವು ಗಣಿ ಉದ್ಯಮಿಗಳು ಈ ಸಂಬಂಧವಾಗಿ ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆ ಸಲ್ಲಿಸಿದ್ದಾರೆ ಎಂಬುದು ನಿಜವೆ? ಹಾಗಿದ್ದರೆ, ಅವರ ಕುಂದುಕೊರತೆಗಳನ್ನು ನಿವಾರಿಸಲು ಯಾವ ಕ್ರಮ ಕೈಗೊಂಡಿದ್ದೀರಿ?

ಇ) ತಮ್ಮ ಕಲ್ಲಿದ್ದಲು ಗಣಿಗಳಲ್ಲಿ ಹೆಚ್ಚಿಗೆ ಉತ್ಪನ್ನ ಮಾಡಲೋಸುಗ ಗಣಿ ಕಾರ್ಮಿಕರಿಗೆ ನಿಯಮಿತ ಪಡಿತರ ಪ್ರಮಾಣಕ್ಕಿಂತ ಹೆಚ್ಚಿಗೆ ಅಕ್ಕಿ ಸರಬರಾಜು ಮಾಡಬೇಕೆಂದು ಬಿಹಾರ ಪ್ರಾಂತ್ಯದ ದೊಡ್ಡ ಕಲ್ಲಿದ್ದಲು ಗಣಿಯ ಪ್ರಧಾನ ವ್ಯವಸ್ಥಾಪಕರು ಒತ್ತಾಯ ಹೇರುತ್ತಿದ್ದಾರೆಂದು ಧನಬಾದಿನ ಪಡಿತರ ಅಧಿಕಾರಿ ಕೋರಿಕೆ ಸಲ್ಲಿಸಿದ್ದರ ಆಧಾರದ ಮೇಲೆ, ಧನಬಾದಿನ ದಂಡಾಧಿಕಾರಿ, ಭಾರತ ರಕ್ಷಣಾ ಕಾಯಿದೆಯ ೮೧ನೇ ಪರಿಚ್ಛೇದದನ್ವಯ ವಿಚಾರಣೆಗೆ ಗುರಿಪಡಿಸಲು ಗಣಿಯ ಪ್ರಧಾನ ವ್ಯವಸ್ಥಾಪಕರನ್ನು ಸೆಷನ್ಸ್ ನ್ಯಾಯಸ್ಥಾನಕ್ಕೆ ಹಾಜರಾಗುವಂತೆ ಆಜ್ಞೆಮಾಡಿರುವುದು ನಿಜವೆ?

ಈ) ಧನಬಾದಿನ ಪಡಿತರ ಅಧಿಕಾರಿ, ಅದೇ ಸಂದರ್ಭದಲ್ಲಿ ಘೋಷಿತ ನಿಯಂತ್ರಿತ ಬೆಲೆಗಿಂತ ಹೆಚ್ಚಿಗೆ ಬೆಲೆಯನ್ನು ಬಿಹಾರ ಸರ್ಕಾರದ ಪರವಾಗಿ ಅವರೇ ನಿಗದಿಪಡಿಸುತ್ತಿದ್ದರು ಮತ್ತು ಜಂಟಿ ವಾಣಿಜ್ಯ ವ್ಯವಸ್ಥೆಗೆ ಹೆಚ್ಚು ಬೆಲೆ ವಿಧಿಸಲು ಅವಕಾಶ ನೀಡುತ್ತಿದ್ದರು ಎಂಬುದು ನಿಜವೆ?

ಉ) ೯ ಫೆಬ್ರವರಿ ೧೯೪೪ರಲ್ಲಿ ಧನಬಾದಿನ ಜಿಲ್ಲಾಧಿಕಾರಿಗಳು ಹೊರಡಿಸಿದ ಕಟ್ಟಳೆಗಳನ್ನು ಉಲ್ಲಂಘಿಸಿ, ಅಕ್ಕಿಯ ನಿಯಂತ್ರಿತ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ವಿಧಿಸುತ್ತಿದ್ದ ಧನಬಾದಿನ ಪಡಿತರ ಅಧಿಕಾರಿಯ ವಿರುದ್ಧ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು

ಆ) ಈ ಸಂಬಂಧವಾಗಿ ತನಗೆ ಯಾವುದೇ ಪ್ರತಿಭಟನೆ ಬಂದಿಲ್ಲವೆಂದು ಬಿಹಾರ ಸರ್ಕಾರ ವರದಿ ಮಾಡಿದೆ. ಆದರೆ ನನಗೆ ಒಂದು ಪ್ರತಿಭಟನಾ ಪತ್ರ ಬಂದಿದೆ. ಆದ್ದರಿಂದ ಬಿಹಾರ ಸರ್ಕಾರಕ್ಕೆ ಮರುವರದಿ ಕಳಿಸುವಂತೆ ಸೂಚಿಸಿದ್ದೇನೆ. ಆ ವರದಿ ಬಂದ ಬಳಿಕ ವಿಷಯವನ್ನು ಮರುಪರಿಶೀಲಿಸಲಾಗುತ್ತದೆ.

ಇ) ಹೌದು.

ಈ) ಪ್ರಾಂತೀಯ ಸರ್ಕಾರದ ಆಜ್ಞೆಯ ಮೇರೆಗೆ ೧೯೪೪ರ ನವೆಂಬರ್‌ಗಿಂತ ಮೊದಲು ಕಲ್ಲಿದ್ದಲು ಗಣಿಗಳು ಆಹಾರ ಧಾನ್ಯಗಳಿಗೆ ನಿಯಂತ್ರಿತ ಬೆಲೆಗಿಂತ ಹೆಚ್ಚಿಗೆ ಬೆಲೆ ವಿಧಿಸುತ್ತಿದ್ದವು.

ಉ) ಪ್ರಶ್ನೆ (ಈ)ಗೆ ಕೊಟ್ಟಿರುವ ಉತ್ತರದ ದೃಷ್ಟಿಯಿಂದ ಈ ಪ್ರಶ್ನೆಗೆ ಉತ್ತರಿಸುವ ಅಗತ್ಯ ಬೀಳುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೨೨೧.

# ೨೫೯
# ದೆಹಲಿಯ ವಿದ್ಯುತ್‌ವಸ್ತುಗಳ ದಾಸ್ತಾನು ಮತ್ತು ಕರ್ಷಕ ಕಂಪನಿಯ ಖರೀದಿ *

**೭೬. ಶ್ರೀ ಕೆ.ಸಿ. ನಿಯೋಗಿ :** ಅ) ೧೫ ನವೆಂಬರ್ ೧೯೪೪ರ ನನ್ನ ನಕ್ಷತ್ರ ಗುರುತಿನ ೪೧೯ನೇ ಪ್ರಶ್ನೆಗೆ ನೀವು ಕೊಟ್ಟ ಉತ್ತರದತ್ತ ಗಮನಸೆಳೆದು ಕೇಳುತ್ತಿದ್ದೇನೆ : ದೆಹಲಿ ವಿದ್ಯುತ್ ವಸ್ತುಗಳ ದಾಸ್ತಾನು ಮತ್ತು ಕರ್ಷಕ ಕಂಪನಿಯನ್ನು ಅದರ ಸದ್ಯದ ಅನುಮತಿ ಮುಗಿದ ತಕ್ಷಣ ಕೊಂಡುಕೊಳ್ಳುವ ಇಚ್ಛೆಯ ಸಂಬಂಧವಾಗಿ ಸರ್ಕಾರ ಯಾವುದಾದರೂ ಒಂದು ನಿರ್ಧಾರಕ್ಕೆ ಬಂದಿದೆಯೆ?

ಆ) ಇಚ್ಛೆಯನ್ನು ಚಲಾಯಿಸಲು ನಿರ್ಧರಿಸಿದ್ದರೆ, ಕಂಪನಿಗೆ ಅಗತ್ಯ ತಿಳಿವಳಿಕೆಪತ್ರವನ್ನು ಜಾರಿ ಮಾಡಲಾಗಿದೆಯೆ?

ಇ) ಸರ್ಕಾರವೇ ಅದನ್ನು ವಹಿಸಿಕೊಳ್ಳುವ ಪಕ್ಷದಲ್ಲಿ, ಅದನ್ನು ಮುಂದಕ್ಕೆ ನಡೆಸಿಕೊಂಡು ಹೋಗಲು ವ್ಯವಸ್ಥೆ ಸಜ್ಜುಗೊಂಡಿದೆಯೆ?

ಈ) ಒಂದು ಪಕ್ಷ ಪೂರ್ವೋಕ್ತ ಇಚ್ಛೆಯನ್ನು ಚಲಾಯಿಸದಿದ್ದರೆ, ಮಾನ್ಯ ಸದಸ್ಯರು ಅಂತ ನಿರ್ಧಾರಕ್ಕೆ ಕಾರಣಗಳೇನು ಎಂಬುದನ್ನು ವಿವರವಾಗಿ ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಅದನ್ನು ಖರೀದಿಸುವ ಸರ್ಕಾರದ ಇಚ್ಛೆಯನ್ನು ಕುರಿತಂತೆ, ಪ್ರಧಾನ ಆಯುಕ್ತರು ಕಂಪನಿಗೆ ತಿಳಿವಳಿಕೆಪತ್ರವನ್ನು ಸಲ್ಲಿಸಲು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ. ಆದರೆ ತಿಳಿವಳಿಕೆಪತ್ರವನ್ನು ಇನ್ನೂ ಜಾರಿಗೊಳಿಸಿಲ್ಲ.

ಇ) ಇನ್ನೂ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ.

ಈ) ಉದ್ಭವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೧೨೩–೨೪.

# ೨೬೦
# ಇತ್ತೀಚೆಗೆ ವಾಸದ ಮನೆಗಳ ಹಂಚಿಕೆಯಲ್ಲಿ ಕಾರ್ಮಿಕ ಇಲಾಖೆ ಅನುಸರಿಸುತ್ತಿರುವ ಜನಾಂಗೀಯ ಮತ್ತು ಧಾರ್ಮಿಕ ಭೇದಗಣನೆ*

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸರ್ ಸಯಿದ್ ರಾಜಾ ಅಲಿಯವರ ನಿಲುವಳಿ ಸೂಚನೆಯ ಮುಂದಿನ ತಿಳಿವಳಿಕೆಪತ್ರವೇನೆಂದರೆ ಇತ್ತೀಚೆಗೆ ಕಾರ್ಮಿಕ ಇಲಾಖೆ ೧೯೪೫ರ ಜನವರಿ ೨೫ರಂದು ಜ್ಞಾಪನಾಪತ್ರವನ್ನು (ನಂ. ಡಬ್ಲ್ಯೂ ೧೧–೪/೧೧೪) ಹೊರಡಿಸಿ ವಾಸದ ಮನೆಗಳ ಹಂಚಿಕೆಯಲ್ಲಿ ಜನಾಂಗೀಯ ಹಾಗೂ ಧಾರ್ಮಿಕ ಭೇದಗಣನೆ ಮಾಡುವುದರಿಂದ ಉದಾಹರಣೆಗೆ ಯೂರೋಪಿಯನ್ನರು ಆಂಗ್ಲೋ ಇಂಡಿಯನ್ನರು ಮತ್ತು ಭಾರತಿಯ ಕ್ರೈಸ್ತರು ಎಂದು ಹೆಸರಿಸುವುದರಿಂದ – ಸರ್ಕಾರವನ್ನು ಖಂಡಿಸಬೇಕು ಎಂಬುದು. ಅದರ ಹೊಣೆ ಹೊತ್ತ ಕಾರ್ಮಿಕ ಸದಸ್ಯರು ನಿಜಸ್ಥಿತಿ ತಿಳಿಸಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಜ್ಞಾಪನಪತ್ರವನ್ನು ನೋಡಿದ್ದೇನೆ. 'ಭಾರತೀಯ' ಎಂಬ ಪದಕ್ಕೆ ಬದಲಾಗಿ 'ಭಾರತೀಯ ಕ್ರೈಸ್ತರು' ಎಂಬ ಪದ ಅಜಾಗರೂಕತೆಯಿಂದ ಸೇರ್ಪಡೆಯಾಗಿದೆ ಎಂದು ನನಗೆ ಹೇಳಿದರು. ಯಾವುದೇ ಭೇದಭಾವಕ್ಕೆ ಅವಕಾಶವಿರದ ಹಾಗೆ ಅದನ್ನು ಸರಿಪಡಿಸಲಾಗುವುದು.

**ಸರ್ ಸಯಿದ್ ರಾಜಾ ಆಲಿ :** ಮಾನ್ಯ ಸದಸ್ಯರು ಸದನದಲ್ಲಿ ಹೇಳಿಕೆ ನೀಡಿ ಇಡೀ ಪ್ರಸಂಗವನ್ನು ದಾಖಲುಗೊಳಿಸುವುದು ಉತ್ತಮ ಮಾರ್ಗವೆಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಕಛೇರಿಯ ಜ್ಞಾಪನಾಪತ್ರವನ್ನು ತಿದ್ದಿದ್ದೇನೆ. ಬದಲಾದ ನಮೂನೆಯಲ್ಲಿ ಅದನ್ನು ಹಂಚಲಾಗುತ್ತದೆ.

**ಸರ್ ಸಯಿದ್ ರಾಜಾ ಆಲಿ :** ಈಗ ಚರ್ಚಿತ ವಿಷಯ ಏನೆಂಬುದನ್ನು ಸದನ ತಿಳಿದುಕೊಳ್ಳಲು ಬಯಸುತ್ತದೆ. ಈಗಿರುವಂತೆ ಜ್ಞಾಪನಾಪತ್ರದ ಅರ್ಥವೇನು, ಮಾನ್ಯ ಸದಸ್ಯರು ತಿದ್ದುಪಡಿ ಮಾಡಿರುವುದು ಏನನ್ನು ಮತ್ತು ತಿದ್ದುಪಡಿಯ ಪರಿಣಾಮವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಜಾರಿಯಾದ ಮೂಲ ಜ್ಞಾಪನಾಪತ್ರದ ವಿಷಯ ಹೀಗಿದೆ. ಮಾಹೆಯಾನ ೬೦೦ ರೂ.ಗಳಿಗಿಂತ ಕಡಿಮೆ ಸಂಬಳ ಪಡೆಯುತ್ತಿರುವ ಅಧಿಕಾರಿಗಳಿಗೆ ವಾಸದ ಮನೆಗಳನ್ನು ದೆಹಲಿ, ನವದೆಹಲಿ ಮತ್ತು ಸಿಮ್ಲಾಗಳಲ್ಲಿ ಹಂಚುವಾಗ 'ಸಾಂಪ್ರದಾಯಿಕ', 'ಅಸಾಂಪ್ರದಾಯಿಕ' ಮನೆಗಳು ಎಂದು ಭೇದವೆಣಿಸುವುದನ್ನು ತೆಗೆದುಹಾಕಬೇಕು ಎಂದು ಇಲಾಖೆ ಯೋಚಿಸುತ್ತಿದೆ. ಇಲಾಖೆಗಳ ಅಭಿಪ್ರಾಯಗಳನ್ನು ಅಧ್ಯಯನ ಮಾಡಿದ ಮೇಲೆ, ಮುಂದಿನ ಬೇಸಿಗೆಯಿಂದ ಈ ಭೇದಗಣನೆಯನ್ನು ತೆಗೆದುಹಾಕಬೇಕೆಂದು ನಿರ್ಧರಿಸಲಾಗಿದೆ.

"ಯೂರೋಪಿಯನ್ನರು, ಆಂಗ್ಲೋ–ಇಂಡಿಯನ್ನರು, ಭಾರತೀಯ ಕ್ರೈಸ್ತರುಗಳ ವಿಷಯದಲ್ಲಿ ಅವರು ಯೂರೋಪಿಯನ್ ನಡೆನುಡಿಗಳನ್ನು ಒತ್ತಿ ಹೇಳುವುದರಿಂದ ವಸತಿ ಅಧಿಕಾರಿ ತನ್ನ ಸ್ವಂತ ವಿವೇಚನೆಯ ಮೇರೆಗೆ ಅವರಿಗೆ ಡಬ್ಲ್ಯೂ.ಸಿ. (ಅಸಾಂಪ್ರದಾಯಿಕ) ವಾಸದ ಮನೆಗಳನ್ನು ಹಂಚಬಹುದು – ವಿಶಿಷ್ಟ ವರ್ಗದ ಎ, ಬಿ, ಸಿ, ಡಿ ಮಾದರಿಯ ವಸತಿಗೆ ತಾವು ಅರ್ಹರು ಎಂಬುದಕ್ಕೆ ಸಮರ್ಥನೆಯನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೨೦೬.

ಒದಗಿಸಿದರೆ."

ಮುಂದೆ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗುವುದು. ಜಾರಿಗೊಳಿಸಿದ ಮೂಲ ಜ್ಞಾಪನಾಪತ್ರವಿದು. ತಿದ್ದುಪಡಿಗೊಳಗಾದ ಜ್ಞಾಪನಪತ್ರದಲ್ಲಿ ಕೆಳಗಿನ ಬದಲಾವಣೆಯನ್ನು ಮಾಡಲಾಗಿದೆ.

"ಯೂರೋಪಿಯನ್ನರು, ಆಂಗ್ಲೋ ಇಂಡಿಯನ್ನರು ಅಥವಾ ಭಾರತೀಯರು ಯಾರೇ ಆಗಿರಲಿ, ಅವರು ಯೂರೋಪಿಯನ್ ನಡೆನುಡಿಗಳನ್ನು ತೋರಿಸಿಕೊಂಡರೆ ಹಾಗೂ ವಿಶಿಷ್ಟ ವರ್ಗದ ಎ, ಬಿ, ಸಿ, ಡಿ ಮಾದರಿಯ ವಸತಿಗೂ ನಾವು ಅರ್ಹರು ಎಂಬುದಕ್ಕೆ ಸಮರ್ಥನೆಯನ್ನು ಒದಗಿಸಿದರೆ, ವಸತಿ ಅಧಿಕಾರಿ ತನ್ನ ಸ್ವಂತ ವಿವೇಚನೆಯ ಮೇರೆಗೆ ಆ ಅಧಿಕಾರಿಗಳಿಗೆ ಡಬ್ಲ್ಯೂ.ಸಿ. (ಅಸಾಂಪ್ರದಾಯಿಕ) ವಾಸದ ಮನೆಗಳನ್ನು ಹಂಚಬಹುದು."

## ೨೬೧
## ಪಶ್ಚಿಮ ಅಂಗಣದ ಕೊಠಡಿಗಳಲ್ಲಿ ಕೇಂದ್ರ ಶಾಸನಸಭಾ ಸದಸ್ಯರಿಗೆ ವಸತಿ ಸೌಕರ್ಯ ನೀಡಲು ತೋರಿರುವ ಅಲಕ್ಷ್ಯ*

**೧೫೬. ಶ್ರೀ ಅಬ್ದುಲ್ ಖಯೂಮ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಉತ್ತರ ನೀಡಿ : ಅ) ಪಶ್ಚಿಮ ಅಂಗಣದ ಕೆಲವು ಕೊಠಡಿಗಳಲ್ಲಿ ವಸತಿಯನ್ನು ಅಧಿವೇಶನಕ್ಕೆ ಹಾಜರಾಗುವ ಕೇಂದ್ರ ಶಾಸನಸಭಾ ಸದಸ್ಯರಿಗೆ ಅಥವಾ ಆಯ್ಕೆ ಸಮಿತಿಗೆ ಆದ್ಯತೆಯ ಮೇಲೆ ಮೀಸಲಿಡಲಾಗಿದೆಯೆ?

ಆ) ಜೀವವಿಮಾ ಮಸೂದೆಯ ಆಯ್ಕೆ ಸಮಿತಿ ಸದಸ್ಯರಿಗೆ ವಸತಿ ಹಂಚಿಕೆಯನ್ನು ಅಲಕ್ಷಿಸಿ, ರಾಷ್ಟ್ರೀಯ ರಕ್ಷಣಾ ಮಂಡಲಿಯ ಸದಸ್ಯರಿಗೆ ಆದ್ಯತೆಯನ್ನು ಕೊಡಲಾಗಿದೆ ಎಂಬುದು ನಿಜವಾದ ಪಕ್ಷದಲ್ಲಿ, ಹೀಗೇಕೆ?

ಇ) ಕೇಂದ್ರ ಶಾಸನಸಭಾ ಸದಸ್ಯರಿಗೆ ಇನ್ನು ಮುಂದಾದರೂ ಗೌರವದಿಂದ ಆದ್ಯತಾ ಹಕ್ಕನ್ನು ಕೊಡುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಪಶ್ಚಿಮ ಅಂಗಣದಲ್ಲಿ ೧೯ ಕೊಠಡಿಗಳು ಮತ್ತು ೬೯ ನಿವಾಸಗಳನ್ನು ಭಾರತೀಯ ನ್ಯಾಯವಿಧಾಯಕ ಸಭೆಯ ಮಾನ್ಯ ಸದಸ್ಯರಿಗೆ ಕಾದಿರಿಸಲಾಗುತ್ತದೆ – ಅಧಿವೇಶನದ ವೇಳೆಯಲ್ಲಿ. ಅಧಿವೇಶನರಹಿತ ವೇಳೆಯಲ್ಲಿ ಕೇಂದ್ರ ಶಾಸನಸಭೆಯ ಕೆಲಸದ ನಿಮಿತ್ತ ದೆಹಲಿಗೆ ಭೇಟಿ ಕೊಡುವ ಸದಸ್ಯರಿಗೆ ಪಶ್ಚಿಮ ಅಂಗಣದಲ್ಲಿ ೭ ಕೊಠಡಿಗಳು ಮತ್ತು ಎಂಟು ನಿವಾಸಗಳನ್ನು ಕಾದಿರಿಸಲಾಗುತ್ತದೆ.

ಆ) ಇಲ್ಲ, ೧೯೪೫ ಜನವರಿಯ ಜೀವವಿಮಾ ಮಸೂದೆಯ ಆಯ್ದ ಸಮಿತಿಯ ಸಭೇ ನಡೆಯುತ್ತದೆ ಎಂದು ಸುದ್ದಿ ತಿಳಿಸದೆ ಇದ್ದಾಗ ಅಥವಾ ಸದಸ್ಯರಿಂದ ವಸತಿಗಾಗಿ ಒತ್ತಾಯ ಬಾರದಿದ್ದಾಗ ರಾಷ್ಟ್ರೀಯ ರಕ್ಷಣಾ ಮಂಡಲಿಯ ಸದಸ್ಯರಿಗೆ ಪಶ್ಚಿಮ ಅಂಗಣದಲ್ಲಿಯೇ ಕೊಠಡಿಗಳನ್ನು ವಿತರಿಸಲಾಯಿತಷ್ಟೇ. ವಸತಿ ಕೇಳಿದ ಆಯ್ಕೆ ಸಮಿತಿಯ ಸದಸ್ಯರಿಗೆ ಹೇಗೋ ಮಾಡಿ ಪಶ್ಚಿಮ ಅಂಗಣದಲ್ಲಿಯೇ ವಸತಿಯ ಏರ್ಪಾಡು ಮಾಡಲಾಯಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೯ ಫೆಬ್ರವರಿ ೧೯೪೫ ; ಪು. ೩೨೩–೨೪.

ಇ) ಸಕಾಲಿಕ ಸೂಚನೆಗಳನ್ನು ಒದಗಿಸಿದರೆ ಕೇಂದ್ರ ಶಾಸನಸಭಾ ಸದಸ್ಯರಿಗೆ ವಸತಿ ಕಲ್ಪಿಸಲು ಏರ್ಪಾಟು ಮಾಡಲಾಗುವುದು.

## ೨೬೨
## ಮುಕ್ತೇಶ್ವರದ ಬಳಿ ಸಾಮ್ರಾಜ್ಯ ಸಂಶೋಧನಾ ಸಂಸ್ಥೆಗೆ ರಸ್ತೆ ನಿರ್ಮಾಣ*

**೧೭೮. ಶ್ರೀ ಬದ್ರಿದತ್ತ ಪಾಂಡೆ :** ಅ) ನೈನಿತಾಲ್ ಜಿಲ್ಲೆಯ ಮುಕ್ತೇಶ್ವರದ ಬಳಿ ಸಾಮ್ರಾಜ್ಯ ಸಂಶೋಧನಾ ಸಂಸ್ಥೆಗೆ ಬಂಡಿ ಅಥವಾ ಮೋಟಾರ್ ರಸ್ತೆ ಮಾಡುವ ಸೂಚನೆ ಇದೆಯೆ ಎಂಬುದನ್ನು ಮಾನ್ಯ ಸದಸ್ಯರು ತಿಳಿಸುವಿರಾ?

ಆ) ಇದು ದಿಟವಾದಲ್ಲಿ, ರಸ್ತೆಯ ಉದ್ದವೆಷ್ಟು? ಮತ್ತು ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಸರ್ಕಾರದ ಎದುರು ಅಂಥ ಯಾವುದೇ ಸೂಚನೆ ಇಲ್ಲ. ಆ) ಉದ್ಭವಿಸುವುದಿಲ್ಲ.

## ೨೬೩
## ಭಾರತೀಯ ಚಿಲುಮೆ ನೀರಿನ ವಾಣಿಜ್ಯ ದೃಷ್ಟಿಯ ಪರಿಶೀಲನೆ **

**೩೦೮. ಶ್ರೀ ಕೆ.ಸಿ. ನಿಯೋಗಿ :** ಅ) ೫ ಆಗಸ್ಟ್ ೧೯೪೩ರಂದು ನನ್ನ ನಕ್ಷತ್ರಚಿಹ್ನೆರಹಿತ ೫೦ನೇ ನಂಬರ್ ಪ್ರಶ್ನೆಗೆ ಮಾನ್ಯ ಸದಸ್ಯರು ಕೊಟ್ಟ ಉತ್ತರದತ್ತ ಗಮನಸೆಳೆದು ಕೇಳುತ್ತಿದ್ದೇನೆ. ಭಾರತೀಯ ಚಿಲುಮೆ ನೀರಿನ ವಾಣಿಜ್ಯ ದೃಷ್ಟಿಯ ಪರಿಶೀಲನೆಯ ಪರಿಣಾಮವೇನು? ಪ್ರಯೋಗ ನಡೆಸಿದ ಬೇರೆಬೇರೆ ಚಿಲುಮೆಗಳ ನೆಲೆಗಳಲ್ಲಿ? ಮತ್ತು ಸಂಬಂಧಿಸಿದ ನೀರುಗಳ ರಚನೆ ಹಾಗೂ ಗುಣವಿಶೇಷಗಳೇನು? ಎಂಬುದನ್ನು ದಯಮಾಡಿ ವಿವರಿಸಿ.

ಆ) ಸರ್ಕಾರ ಈ ಚಿಲುಮೆ ನೀರಿನ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳುವ ಯೋಜನೆಯನ್ನು ನಿಯೋಗದ ಮೂಲಕವೊ ಅಥವಾ ಯಾವುದಾದರೂ ಖಾಸಗಿ ಸಂಸ್ಥೆಯ ನಿಯೋಗದ ಮೂಲಕವೊ ಕೈಗೊಳ್ಳುವ ಸಂಭವವಿದೆಯೆ? ಹಾಗಿದ್ದಲ್ಲಿ ಆ ಯೋಜನೆಗಳ ವಿವರಗಳೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) : ಬಿಹಾರದ ಕೆಲವು ಉಷ್ಣ ಖನಿಜ ಚಿಲುಮೆಗಳ ನೀರನ್ನು ಭಾರತೀಯ ಭೂವಿಜ್ಞಾನ ಸಂವೀಕ್ಷಣಾ ಸಂಸ್ಥೆಯಿಂದ ಸಂಶೋಧನೆಗೆ ಒಳಪಡಿಸಲಾಯಿತು. ಈ ನೀರಿನ ರಾಸಾಯನಿಕ ಗುಣಗಳ ಪರಿಶೀಲನೆ ನಡೆಸಿದ ಮೇಲೆ, ಯುದ್ಧ ಸಮಯದಲ್ಲಿ ಸರ್ಕಾರ ಈ ನೀರಿನ ವಾಣಿಜ್ಯ ಲಾಭಕ್ಕಾಗಿ ಕೈಹಾಕುವುದು ಪ್ರಯೋಜನಕಾರಿಯಲ್ಲವೆಂದು ನಿರ್ಧರಿಸಲಾಯಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೧೪ ಫೆಬ್ರವರಿ ೧೯೪೫ ; ಪು. ೩೩೭.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೧೯ ಫೆಬ್ರವರಿ ೧೯೪೫ ; ಪು. ೪೫೪–೫೫.

## ೨೬೪
## ಬಂಗಾಳದ ಕಲ್ಲಿದ್ದಲು ಸಾಗಣೆಗೆ ದಾಮೋದರ್ ನದಿ ಸಾರಿಗೆ *

**೩೧೦. ಶ್ರೀ ಆರ್.ಆರ್. ಗುಪ್ತ :** ಕಳೆದ ಶತಮಾನದಲ್ಲಿ ಬಂಗಾಳ ಕಲ್ಲಿದ್ದಲು ಗಣಿಯ ಕಲ್ಲಿದ್ದಲನ್ನು ಕಲ್ಕತ್ತಕ್ಕೆ ನದಿ ಸಾರಿಗೆಯ ಮೂಲಕ ಸಾಗಿಸಲು ದಾಮೋದರ್ ನದಿಯನ್ನು ಸರ್ವಋತು ಜಲಮಾರ್ಗವನ್ನಾಗಿ ಬಳಸಿಕೊಳ್ಳಲು ಸರ್ಕಾರ ಪ್ರಯತ್ನಿಸಿತ್ತು ಎಂಬುದು ಮಾನ್ಯ ಕಾರ್ಮಿಕ ಸದಸ್ಯರಿಗೆ ನೆನಪಿದೆಯೆ ? ಇಲ್ಲದಿದ್ದರೆ, ಸದ್ಯದ ವಿವಿಧೋದ್ದೇಶದ ದಾಮೋದರ್ ನದಿ ಯೋಜನೆಯ ಸಂಬಂಧದಲ್ಲಿ ಅಂಥ ಸೂಚನೆಯನ್ನು ಸರ್ಕಾರ ಮರು ಪರಿಶೀಲನೆ ನಡೆಸುವುದು ಸೂಕ್ತವಲ್ಲ ಎಂದು ನಡೆಸದಿದ್ದರೆ, ಏಕೆ ನಡೆಸುವುದಿಲ್ಲ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಯಾವ ಸೂಚನೆಯೂ ನನಗೆ ಗೊತ್ತಿಲ್ಲ. ಆದರೆ ರಾಣಿಗಂಜ್‌ನಿಂದ ಕಲ್ಕತ್ತಕ್ಕೆ ದಾಮೋದರ್ ನದಿಯಿಂದ ಕಾಲುವೆ ತೋಡಬೇಕೆಂಬ ಸಲಹೆ ಇತ್ತು. ದಾಮೋದರ್ ನಿಯಂತ್ರಣದ ವಿವಿಧೋದ್ದೇಶ ಯೋಜನೆಯ ಸಾಧ್ಯತೆಗಳನ್ನು ಈಗ ಆಗಿರುವ ತನಿಖೆಯಿಂದ ಪರಿಶೀಲಿಸಲಾಗುತ್ತಿದೆ. ಈ ಪರಿಶೀಲನೆಯನ್ನು ನೌಕಾಯಾನದ ಸಾಧ್ಯತೆಗಳಿಗೆ ವಿಸ್ತರಿಸಲಾಗುತ್ತದೆ.

## ೨೬೫
## ರಾವಲ್‌ಪಿಂಡಿಯ ಬಳಿ ಖನಿಜತೈಲದ (ಪೆಟ್ರೋಲಿಯಂ) ಶೋಧನೆ **

**೩೧೪. ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ತಿಳಿಸಿ :

ಅ) ರಾವಲ್‌ಪಿಂಡಿ ಮತ್ತು ಪಂಜಾಬುಗಳಲ್ಲಿ ಖನಿಜತೈಲದ ಶೋಧನೆಯ ಸುದ್ದಿ ವೃತ್ತಪತ್ರಿಕೆಗಳಲ್ಲಿ ವರದಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಆ) ಈ ಖನಿಜತೈಲದ ಪ್ರಯೋಜನ ಪಡೆಯುವ ಗುತ್ತಿಗೆಯನ್ನು ವಿದೇಶಿ ಸಂಸ್ಥೆಗೆ ವಹಿಸಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು ; ಸರ್ಕಾರ ವರದಿಗಳನ್ನು ಅವಲೋಕಿಸಿದೆ. ಆ) ಈ ವಿಷಯ ಪ್ರಾಂತೀಯ ಸರ್ಕಾರಕ್ಕೆ ಸಂಬಂಧಿಸಿದ್ದು ಇದು. ಭಾರತ ಸರ್ಕಾರಕ್ಕೆ ಯಾವುದೇ ವಿವರ ಈ ಸಂಬಂಧದಲ್ಲಿ ತಲುಪಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೧೯ ಫೆಬ್ರವರಿ ೧೯೪೫ ; ಪು. ೪೫೫

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೧೯ ಫೆಬ್ರವರಿ ೧೯೪೫ ; ಪು. ೪೫೬.

## ೨೬೬
## ದೆಹಲಿ ಪ್ರಾಂತ್ಯದ ಬಟ್ಟೆಗಿರಣಿ ಮತ್ತು ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರು*

**೩೨೭. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ಕಾರ್ಖಾನೆಗಳ ಶಾಸನದ ಅನ್ವಯ ದೆಹಲಿ ಪ್ರಾಂತ್ಯದ ಬಟ್ಟೆಗಿರಣಿ ಮತ್ತು ಕಾರ್ಖಾನೆಗಳಲ್ಲಿ ೧೯೪೪ರಲ್ಲಿದ್ದ ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು?
ಆ) ಶಾಸನಗಳ ಅನುಸಾರ ಮಹಿಳೆಯರ ಯೋಗಕ್ಷೇಮ ರಕ್ಷಣೆಯಲ್ಲಿ ಇವುಗಳು ವಿಫಲವಾಗಿರುವುದರಿಂದ, ಕಾರ್ಖಾನೆ ಶಾಸನಗಳ ರೀತ್ಯ ಇವುಗಳ ಮೇಲೆ ಕ್ರಮಕೈಗೊಳ್ಳಲಾಗಿದೆಯೆ?
ಇ) ದೆಹಲಿ ಪ್ರಾಂತ್ಯಕ್ಕೆ ಮಹಿಳಾ ಕಾರ್ಮಿಕ ಕಲ್ಯಾಣಾಧಿಕಾರಿಯನ್ನು ನೇಮಕ ಮಾಡಲಾಗಿದೆಯೆ? ಮಾಡಿದ್ದರೆ, ಆಕೆಯ ಕರ್ತವ್ಯಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಮಾನ್ಯ ಅಧ್ಯಕರಿಗೆ) : ಸ್ವಾಮಿ, ತಮ್ಮ ಅನುಮತಿಯನ್ನು ಪಡೆದು ನಾನು ೩೨೭ ಮತ್ತು ೩೨೮ನೇ ಪ್ರಶ್ನೆಗಳಿಗೆ ಒಟ್ಟಿಗೇ ಉತ್ತರಿಸಬಯಸುತ್ತೇನೆ.

ನಾನು ಈ ಬಗ್ಗೆ ತನಿಖೆ ಮಾಡಿದ್ದೇನೆ ಮತ್ತು ಆ ವರದಿಯನ್ನು ಇಷ್ಟರಲ್ಲೆ ಸದನದ ಮುಂದೆ ಮಂಡಿಸುತ್ತೇನೆ.

## ೨೬೭
## ದೆಹಲಿಯ ವಿದ್ಯುತ್‌ವಸ್ತುಗಳ ಸರಬರಾಜು ಮತ್ತು ಕರ್ಷಕ ಕಂಪನಿ *

**೪೦೩. ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ಕಳೆದ ಅಧಿವೇಶನದಲ್ಲಿ ದಿಲ್ಲಿಯ ವಿದ್ಯುತ್‌ವಸ್ತುಗಳ ಸರಬರಾಜು ಮತ್ತು ಕರ್ಷಕ ಕಂಪನಿಗೆ ಸಂಬಂಧಿಸಿದಂತೆ ಶ್ರೀ ಕೆ.ಸಿ. ನಿಯೋಗಿಯವರ ೪೮೯ನೇ ಪ್ರಶ್ನೆಗೆ ನೀವು ಕೊಟ್ಟ ಭರವಸೆಯಂತೆ ತನಿಖೆಯನ್ನು ಮಾಡಿ ಮುಗಿಸಿದ್ದೀರಾ?

ಆ) ಕಂಪನಿ ಗಳಿಸುತ್ತಿರುವ ಲಾಭ.

ಇ) ತನಿಖೆಗಳ ಫಲಿತಾಂಶವೇನ್ನು ಮತ್ತು ಆ ಕಂಪನಿಯನ್ನು ಖರೀದಿಸುವ ಇಚ್ಛೆ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಇ) ೧೬೪೫ ಫೆಬ್ರವರಿ ೯ ರಂದು ಕೆ.ಸಿ. ನಿಯೋಗಿಯವರ ಪ್ರಶ್ನೆಗೆ ಕೊಟ್ಟ ಉತ್ತರದತ್ತ ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ.
ಆ) ೧೯೩೯ರ ಲಾಗಾಯ್ತು ಕಂಪನಿ ಘೋಷಿಸಿರುವ ಲಾಭಾಂಶ ಹೀಗಿದೆ :

| | | |
|---|---|---|
| ೧೯೩೯ – | ಶೇಕಡ | ೧೧ |
| ೧೯೪೦ – | “ | ೧೧ |

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೧೯ ಫೆಬ್ರವರಿ ೧೯೪೫ ; ಪು. ೪೬೩.
* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೨೧ ಫೆಬ್ರವರಿ ೧೯೪೫ ; ಪು. ೫೮೩.

| | | | |
|---|---|---|---|
| ೧೯೪೧ – | " | ೧೧ | ಆದಾಯಕರದಿಂದ ವಿನಾಯ್ತಿಯನ್ನು ಪಡೆದಿದೆ. |
| ೧೯೪೨ – | " | ೯ | |
| ೧೯೪೩ – | " | ೯ | |

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಕಂಪನಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಇದು ಯಾವಾಗ ಅನುಷ್ಠಾನಕ್ಕೆ ಬರುವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅನುಮತಿಯ ಅವಧಿ ಮುಗಿದ ಕೂಡಲೇ.

**ಶ್ರೀ ಕೆ.ಸಿ. ನಿಯೋಗಿ :** ವಾಸ್ತವವಾಗಿ ತಿಳಿವಳಿಕೆಪತ್ರವನ್ನು ಜಾರಿ ಮಾಡಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆ ನಾನು ನಂಬಿದ್ದೇನೆ.

## ೨೬೮
## ಭಾರತೀಯ ಕಾರ್ಮಿಕ ಸಂಯುಕ್ತ ಸಂಘಕ್ಕೆ ಸರ್ಕಾರದ ಕೊಡುಗೆ

**೪೦೪. ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಉತ್ತರಿಸಿ : ಅ) ಕಾರ್ಮಿಕ ಸದಸ್ಯರು ಆಪಾದಿಸಿರುವಂತೆ ಸರ್ಕಾರದ ಮೊತ್ತವನ್ನು ನಾನು ಸ್ವೀಕರಿಸಿಲ್ಲ ಎಂದು ವಾಣಿಜ್ಯ ಒಕ್ಕೂಟದ ಪರಿಷತ್ತಿನ ಅಧ್ಯಕ್ಷ ಶ್ರೀ ಜಮ್ನಾದಾಸ್ ಮೆಹ್ತಾ ಹೇಳಿರುವ ಹಿನ್ನೆಲೆಯಲ್ಲಿ ವಿಷಯವನ್ನು ತನಿಖೆಗೊಳಪಡಿಸಬೇಕು.

ಆ) ಮೊತ್ತ ವಾಣಿಜ್ಯ ಒಕ್ಕೂಟದ ಪರಿಷತ್ತಿನ ಲೆಕ್ಕದಲ್ಲಿ ದಾಖಲಾಗಿದೆಯೆ?

ಇ) ಯಾರ ಕೈಗೆ ಹಣವನ್ನು ಕೊಡಲಾಯಿತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಮೆಹ್ತಾ ಅಧ್ಯಕ್ಷರಾಗಿರುವ ಕಾರ್ಮಿಕ ಒಕ್ಕೂಟಕ್ಕೆ ಈ ಪ್ರಶ್ನೆಯನ್ನು ಅನ್ವಯಿಸುತ್ತಿದ್ದಾರೆ. ಆದರೆ ಅಖಿಲ ಭಾರತ ವಾಣಿಜ್ಯ ಒಕ್ಕೂಟದ ಪರಿಷತ್ತಿಗಲ್ಲ.

ಅ) ೨ ನವೆಂಬರ್ ೧೯೪೪ರಲ್ಲಿ ನಾನು ಶ್ರೀ ಲಾಲ್‌ಚಂದ್ ನವಲ್‌ರಾಯ್ ಅವರ ಪ್ರಶ್ನೆ ೩೧ಕ್ಕೆ ಕೊಟ್ಟ ಉತ್ತರದತ್ತ ಮಾನ್ಯ ಸದಸ್ಯರ ಗಮನ ಸೆಳೆಯುತ್ತೇನೆ.

ಆ) ನನಗೆ ಗೊತ್ತಿಲ್ಲ.

ಇ) ಮೊದಲು ರಾಷ್ಟ್ರೀಯ ವಾರ್‌ಫ್ರಂಟ್ ಮೂಲಕ ಕಾರ್ಮಿಕರ ಒಕ್ಕೂಟದ ಪ್ರತಿನಿಧಿಗಳಿಗೆ ಕೊಡಲಾಗುತ್ತಿತ್ತು. ಆಮೇಲೆ ೧೯೪೪ರ ಜೂನ್‌ನಿಂದ ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಪೀಠದ ಅಧ್ಯಕ್ಷರ ಮೂಲಕ ಕಾರ್ಮಿಕ ಒಕ್ಕೂಟದ ಕಾರ್ಯದರ್ಶಿಗೆ ಕೊಡಲಾಗುತ್ತಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಸರ್ಕಾರ ಸಂಬಂಧಪಟ್ಟ ಸಂಸ್ಥೆಗೆ ಮಂಜೂರು ಮಾಡಿದ ಹಣ ಆ ಸಂಸ್ಥೆಯ ಲೆಕ್ಕಕ್ಕೆ ಜಮಾ ಆಗಬೇಕಾದದ್ದು ಅಗತ್ಯವಲ್ಲವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ; ಸಂ. ೧, ೨೧ ಫೆಬ್ರವರಿ ೧೯೪೫ ; ಪು. ೫೮೩–೮೪.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಯಾವುದೇ ಸಂಸ್ಥೆಯ ಲೆಕ್ಕಪತ್ರಗಳನ್ನು ತನಿಖೆ ಮಾಡುವ ಹೊಣೆ ನನ್ನದಲ್ಲ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಲೆಕ್ಕಪರಿಶೋಧನೆಗಾಗಿ ಒಬ್ಬ ಲೆಕ್ಕಪರಿಶೋಧಕರನ್ನು ಕಳಿಸಲಾಗಿದೆ ಎಂದು ಹಿಂದೆ ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿಕೆ ನೀಡಿದ್ದಿರಿ. ಲೆಕ್ಕ ಪರಿಶೋಧಕರ ವರದಿ ತಲುಪಿದೆಯೆ ಎಂದು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಆ ಸಂಬಂಧವಾಗಿ ಖಚಿತ ಪ್ರಶ್ನೆ ಕೇಳಬೇಕು.

**ಶ್ರೀ ಅಬ್ದುಲ್ ಖಯೂಮ್ :** ವಾಸ್ತವವಾಗಿ ಹಣ ಸ್ವೀಕರಿಸಿದ ಸಂಸ್ಥೆಯ ಅಧಿಕಾರಿಗಳ ಹೆಸರನ್ನು ಮಾನ್ಯ ಸದಸ್ಯರು ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಾರಂಭದಲ್ಲಿ ರಾಷ್ಟ್ರೀಯ ವಾರ್‌ಫ್ರಂಟ್ ಮೂಲಕ ನೀಡಲಾಗುತ್ತಿತ್ತು. ಆಮೇಲೆ ಅದನ್ನು ಬದಲಾಯಿಸಿ ರಾಷ್ಟ್ರೀಯ ಕಾರ್ಮಿಕ ಸೇವಾ ನ್ಯಾಯಪೀಠದ ಅಧ್ಯಕ್ಷರ ಮೂಲಕ ಹಣ ನೀಡಲಾಯಿತು. ಜೂನ್ ೧೯೪೪ರಿಂದ ಸಂಯುಕ್ತ ಸಂಘದ ಕಾರ್ಯದರ್ಶಿಗೆ ನೀಡಲಾಗುತ್ತಿದೆ.

**ಶ್ರೀ ಅಬ್ದುಲ್ ಖಯೂಮ್ :** ಹಣ ಸ್ವೀಕರಿಸಿದ ನಿರ್ದಿಷ್ಟ ವ್ಯಕ್ತಿಯ ಹೆಸರನ್ನು ತಿಳಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಬಗೆಗಿನ ಖಚಿತ ಮಾಹಿತಿಯನ್ನು ತರಿಸಿಕೊಳ್ಳಬೇಕಾಗಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಶ್ರೀ ರಾಯ್ ಅವರಿಗೆ ಕೊಟ್ಟ ಹಣದ ಬಗ್ಗೆ ದಾಖಲೆಗಳಾಗಲಿ ರಶೀದಿಗಳಾಗಲಿ ಇಲ್ಲವೆಂದು ೧೯೪೨–೪೩ರ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಭಿಪ್ರಾಯಪಟ್ಟಿರುವುದರಿಂದ, ಹಣವನ್ನು ರಾಯ್ ಅವರ ವೈಯಕ್ತಿಕ ಹೆಸರಿಗೆ ಕೊಡಲಾಗುತ್ತಿತ್ತೆ ಎಂಬುದನ್ನು ನಾನು ತಿಳಿಯಬಹುದೆ? ಲೆಕ್ಕಪರಿಶೋಧನೆ ಆಗಿದ್ದರೆ, ಸಂಸ್ಥೆಯ ಲೆಕ್ಕಕ್ಕೆ ಮೊತ್ತ ಜಮಾ ಆಗಿದೆಯೆ, ಇಲ್ಲವೆ? ಲೆಕ್ಕಪರಿಶೋಧಕರು ಯಾವ ನಿರ್ಣಯಕ್ಕೆ ಬಂದಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೊಸ ಏರ್ಪಾಟು ಮಾಡುವ ಮುನ್ನ ಹಣವನ್ನು ಯಾರಿಗೆ ಕೊಡಲಾಗುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ. ಹೊಸ ಏರ್ಪಾಟು ಆದ ನಂತರ ಹಣವನ್ನು ಕಾರ್ಯದರ್ಶಿ ಹೆಸರಿನಲ್ಲಿ ಕೊಡಲಾಗುತ್ತಿದೆ.

**ಶ್ರೀ ಬದ್ರಿದತ್ತ ಪಾಂಡೆ :** ಕಾರ್ಮಿಕ ಒಕ್ಕೂಟಕ್ಕೆ ಸಹಾಯಧನ ಈ ಸದನದಿಂದ ಮಂಜೂರಾಗದಿರುವ ದೃಷ್ಟಿಯಿಂದ ಅದನ್ನು ನಿಲ್ಲಿಸಬೇಕೆಂಬುದು ಸರ್ಕಾರದ ಇಚ್ಛೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ನಿರ್ಧಾರವನ್ನು ಊಹಿಸಲು ಬಯಸುವುದಿಲ್ಲ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಮುಂದಿನ ವಾರ್ಷಿಕ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅದಕ್ಕೆ ಅನುವು ಮಾಡಿಕೊಡಲಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸ್ನೇಹಿತರು ಕಾದುನೋಡಿದರೆ ವಿಷಯ ತನಗೆ ತಾನೇ ಗೊತ್ತಾಗುವುದು.

**ಶ್ರೀ ಪ್ರಕಾಶ :** ಹಣ ಸದುಪಯೋಗವಾಗಿದೆ ಎಂಬ ನಂಬಿಕೆ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸ್ವಾಮಿ, ನನಗೆ ಅದರಲ್ಲಿ ಅನುಮಾನವಿಲ್ಲ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಸ್ವಾಮಿ, ಇದು ಅಪ್ರಸ್ತುತ, ಅಸಂಬದ್ಧ ಉತ್ತರ ಎಂದು

ಅಧ್ಯಕ್ಷರಿಗೆ ತೋರಿಸಿಕೊಡಲೆ? ಆಯವ್ಯಯ ಅಧಿವೇಶನ ಸನ್ನಿಹಿತವಾಗುತ್ತಿದೆ. ಆದ್ದರಿಂದ ಈ ಮೊತ್ತಕ್ಕೆ ಮುನ್ನೇರ್ಪಾಡು ಆಗಿದೆಯೆ ಎಂಬುದು ಇವರಿಗೆ ತಿಳಿದಿರಬೇಕು. ಆಯವ್ಯಯಪತ್ರದಲ್ಲಿ ಈ ಮೊತ್ತಕ್ಕೆ ಏರ್ಪಾಡಾಗಿದೆ ಎಂಬುದನ್ನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸ್ನೇಹಿತರು ಫೆಬ್ರವರಿ ೨೮ರಂದು ತಿಳಿಯಬಹುದು.

## ೨೬೯
## ಕಾರ್ಮಿಕ ವಿನಿಮಯ ಕಛೇರಿಗಳು *

**೪೦೫. ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಅ) ಎಷ್ಟು ಸ್ಥಳಗಳಲ್ಲಿ ಕಾರ್ಮಿಕ ವಿನಿಮಯ ಕಛೇರಿಗಳು ಸ್ಥಾಪನೆಗೊಂಡಿವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?
ಆ) ಈ ಕಛೇರಿಗಳು ಯಾರಿಗೆ ಸೇವೆ ಸಲ್ಲಿಸಲು ಬಯಸಿವೆ?
ಇ) ಅವು ಇಲ್ಲಿಯವರೆಗೆ ಎಷ್ಟು ಜನರಿಗೆ ಉದ್ಯೋಗ ಒದಗಿಸಿವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತದಲ್ಲಿ ಹತ್ತು ಕೇಂದ್ರಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ – ಮುಂಬೈ, ಅಹಮದಾಬಾದ್, ನಾಗಪುರ, ಮದ್ರಾಸ್, ಕಲ್ಕತ್ತ, ಧನಬಾದ್, ಕಾನಪುರ, ದೆಹಲಿ, ಲಾಹೋರ್ ಮತ್ತು ಕರಾಚಿ.

ಆ) ೧೯೪೦ರ ರಾಷ್ಟ್ರೀಯ ಸೇವಾ (ತಾಂತ್ರಿಕ) ಸಿಬ್ಬಂದಿ ಶಾಸನದಲ್ಲಿ ಉಕ್ತವಾಗಿರುವಂತೆ ಪ್ರಸ್ತುತದಲ್ಲಿ ಮುಂಬೈ, ಕಲ್ಕತ್ತಾ ನಗರಗಳಲ್ಲಿ ದಿನಕ್ಕೆ ರೂ. ೧–೮–೦ ಕೂಲಿ ತೆಗೆದುಕೊಳ್ಳುವ ಮತ್ತು ಉಳಿದ ಕಡೆ ದಿನಕ್ಕೆ ರೂ. ೧ ತೆಗೆದುಕೊಳ್ಳುವ ತಾಂತ್ರಿಕ ಸಿಬ್ಬಂದಿಗೆ ನೆರವಾಗಲು ಉದ್ಯೋಗ ವಿನಿಮಯ ಕೇಂದ್ರಗಳು ಉದ್ದೇಶಿಸಿವೆ.

ಇ) ೧೯೪೪ ಡಿಸೆಂಬರ್ ೨೧ರವರೆಗೆ ವಿನಿಮಯ ಕೇಂದ್ರಗಳು ೫೯೦೯ ಕೆಲಸಗಾರರಿಗೆ ಉದ್ಯೋಗಗಳನ್ನು ದೊರಕಿಸಿಕೊಟ್ಟಿವೆ.

೧೯೪೩ರ ಡಿಸೆಂಬರ್‌ನಲ್ಲಿ ಈ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ದಕ್ಷ ಸಿಬ್ಬಂದಿಯನ್ನು ಮತ್ತು ಸೂಕ್ತ ವಸತಿಯನ್ನು ಪಡೆಯಲು ಸಾಕಷ್ಟು ಕಷ್ಟ ಅನುಭವಿಸಬೇಕಾಯಿತು ಎಂಬುದನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಈ ಕಾರ್ಮಿಕ ವಿನಿಮಯ ಕೇಂದ್ರಗಳ ಕೆಲಸವನ್ನು ಬೇರೆ ವರ್ಗದ ಕಾರ್ಮಿಕರಿಗೂ ಅನ್ವಯವಾಗುವಂತೆ ಸರ್ಕಾರ ಅದನ್ನು ವಿಸ್ತರಿಸುತ್ತದೆಯೆ ಎಂಬುದನ್ನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸ್ವಾಮಿ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ವಿಸ್ತರಣೆಗೆ ಅರ್ಹರಾದ ಕಾರ್ಮಿಕರ ಬೇರೆ ವರ್ಗಗಳು ಯಾವುವು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೧ ಫೆಬ್ರವರಿ ೧೯೪೬. ಪುಟ ೫೮೪.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಬಗ್ಗೆ ನಾವಿನ್ನೂ ಒಂದು ನಿರ್ಧಾರಕ್ಕೆ ಬಂದಿಲ್ಲ.

**ಶ್ರೀ ಅಬ್ದುಲ್ ಖಯೂಮ್ :** ಒಟ್ಟು ಅರ್ಜಿದಾರರಲ್ಲಿ ಶೇಕಡ ಎಷ್ಟು ಜನರಿಗೆ ಉದ್ಯೋಗ ದೊರಕಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಉದ್ಯೋಗಕ್ಕಾಗಿ ನೋಂದಾಯಿಸಿದವರ ಸಂಖ್ಯೆ ೧೪,೬೯೭ ಅವರ ಪೈಕಿ ೫೯೦೯ ಮಂದಿಗೆ ಉದ್ಯೋಗ ದೊರಕಿದೆ.

**ಶ್ರೀಮತಿ ರಾಧಾಬಾಯಿ ಸುಬ್ಬರಾಯನ್ :** ಈ ಸಂಖ್ಯೆಯಲ್ಲಿ ಮಹಿಳೆಯರೂ ಸೇರಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಅಂಕಿಅಂಶಗಳು ಸ್ತ್ರೀಪುರುಷರ ಮಧ್ಯೆ ಭೇದ ಸೂಚಿಸುವುದಿಲ್ಲ.

## ೨೭೦
## ಗಣಿಗಳ ಮಹಿಳಾ ಕಾರ್ಮಿಕರ ಮಕ್ಕಳ ಕ್ಷೇಮಕ್ಕಾಗಿ ಏರ್ಪಾಡು *

**೪೩೬. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ತಿಳಿಸಿ : ಅ) ಗಣಿಗಳ ಮೇಲುಭಾಗದಲ್ಲಿ ಮತ್ತು ಕೆಲಸ ಮಾಡುವ ಮಹಿಳಾ ಕಾರ್ಮಿಕರ ಹಸುಗೂಸುಗಳ ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಯಾವ ಏರ್ಪಾಡುಗಳನ್ನು ಮಾಡಲಾಗಿದೆ? ಯಾರ ಮೇಲ್ವಿಚಾರಣೆಯಲ್ಲಿ ಈ ವ್ಯವಸ್ಥೆಗಳು ಜರುಗುತ್ತಿವೆ?

ಆ) ಗಣಿಗಳ ಒಳಗೆ ಕೆಲಸ ಮಾಡುವ, ಮಕ್ಕಳಿಗೆ ಮೊಲೆಯುಣಿಸಬೇಕಾದ ತಾಯಂದಿರಿಗೆ, ಕ್ಲುಪ್ತ ಕಾಲಗಳಲ್ಲಿ ಮೊಲೆಯುಣ್ಣಿಸಲು ಯಾವ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಇ) (ಅ) ಮತ್ತು (ಆ) ಪ್ರಶ್ನೆಗಳಲ್ಲಿ ನಿರ್ದೇಶಿತವಾಗುವ ಏರ್ಪಾಡುಗಳು ವೈದ್ಯ ಪ್ರಾಧಿಕಾರದಿಂದ ಮಂಜೂರು ಪಡೆದಿವೆಯೆ? ಪಡೆದಿದ್ದರೆ, ಯಾರಿಂದ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇದುವರೆಗೆ ಯಾವುದೇ ಖಚಿತ ಏರ್ಪಾಡುಗಳನ್ನು ಮಾಡಲಾಗಿಲ್ಲ. ಆದರೆ ಕೆಲವು ಗಣಿಗಳು ಮಹಿಳಾ ಸೇವಕಿಯರಿಂದ ಕೂಡಿದ ಶಿಶುವಿಹಾರಗಳನ್ನು ಒದಗಿಸಿವೆ. ಕೆಲವು ಕಲ್ಲಿದ್ದಲು ಗಣಿಗಳಲ್ಲಿ ಮಕ್ಕಳ ಶಿಕ್ಷಣ ಸಂಸ್ಥೆ ಇದ್ದು, ಅಲ್ಲಿ ಕೆಲಸಗಾರರ ಮಕ್ಕಳಿಗೆ ಹಾಲನ್ನು ವಿತರಿಸಲಾಗುತ್ತದೆ. ಶಿಶುವಿಹಾರಗಳ ಸಮಸ್ಯೆ ಸರ್ಕಾರದ ಗಮನದಲ್ಲಿದೆ.

ಆ) ಗಣಿಯ ಆಳಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಲು ಬಿಡುವುದಿಲ್ಲ. ಆದ್ದರಿಂದ ಅಲ್ಲಿ ವಿಶೇಷ ಸೌಕರ್ಯಗಳ ಅಗತ್ಯವಿಲ್ಲ. ಹೆರಿಗೆಯಾಗಿ ಒಂದು ತಿಂಗಳಾಗಿರುವ ತಾಯಂದಿರನ್ನು ಗಣಿಯ ಆಳದ ಕೆಲಸಕ್ಕೆ ಕಳುಹಿಸುವುದಿಲ್ಲ. ಬೇರೆ ತಾಯಂದಿರು ಮೇಲುಗಡೆಗೆ ಬಂದು ಮಕ್ಕಳಿಗೆ ಮೊಲೆಯುಣ್ಣಿಸಲು ಸೌಲಭ್ಯ ಇದೆಯೇ ಎಂಬ ಮಾಹಿತಿಯನ್ನು ತರಿಸಿಕೊಳ್ಳಲಾಗುವುದು.

ಇ) ಇಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಗಣಿಯ ಆಳದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸರ್ಕಾರ ನಿಷೇಧ ವಿಧಿಸಿದರೆ, ಈ ಪ್ರಶ್ನೆಯನ್ನು ಸರ್ಕಾರ ಪರಿಗಣಿಸುವವರೆಗೂ ಏರ್ಪಾಡುಗಳನ್ನು ಮಾಡಿರುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೧ ಫೆಬ್ರವರಿ, ೧೯೪೩. ಪುಟ ೬೦೯

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಕ್ಕಳ ಯೋಗಕ್ಷೇಮದ ಉಚಿತ ವ್ಯವಸ್ಥೆಗಾಗಿ ಸರ್ಕಾರ ದೃಢ ಕ್ರಮಗಳನ್ನು ಕೈಗೊಳ್ಳುವುದೆ? ಮಹಿಳೆಯರು ಮೇಲೆ ಬಂದು ಮಕ್ಕಳಿಗೆ ಮೊಲೆಯುಣ್ಣಿಸಲು ಸೌಲಭ್ಯ ಕಲ್ಪಿಸಲಾಗುವುದೆ? ಒಂದು ತಿಂಗಳಾದ ಮಕ್ಕಳಿಗೂ ಕ್ಲುಪ್ತಕಾಲದಲ್ಲಿ ಮೊಲೆಯುಣ್ಣಿಸಲೇಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಸಮಸ್ಯೆಯ ಮಹತ್ವವನ್ನು ತಿಳಿದುಕೊಳ್ಳುವ ತನಕ ಯಾವುದೇ ನಿರ್ಣಯಕ್ಕೆ ಬರಲಾರೆ. ಮಾಹಿತಿಗಾಗಿ ಆದೇಶಿಸಿ ಅದರ ನಿರೀಕ್ಷೆಯಲ್ಲಿದ್ದೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸಮಸ್ಯೆ ತುಂಬ ಗಂಭೀರವಾದುದೆಂದು ಮಾನ್ಯ ಸದಸ್ಯರೇ ಒಪ್ಪಿಕೊಂಡಿರುವುದರಿಂದ, ಅವರು ಸಮಸ್ಯೆಯನ್ನು ಕುರಿತು ಯೋಚಿಸುವವರೆಗೂ, ಗಣಿಯ ಆಳದಲ್ಲಿ ಮಹಿಳೆಯರು ಕೆಲಸಮಾಡದಂತೆ ತಡೆಗಟ್ಟಲಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮೊಲೆ ಕುಡಿಯುವ ಹಾಲು ಹಸುಳೆಗಳ ತಾಯಂದಿರು ಎಷ್ಟು ಜನ ಗಣಿಗಳ ಆಳದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ.

**ಶ್ರೀ ಮನುಸುಬೇದಾರ್ :** ಯಾವ ಗಣಿಗಳಲ್ಲಿ ಈಗ ಹೇಳಲಾದ ಶಿಶುವಿಹಾರ ಮತ್ತು ಇನ್ನಿತರ ಸೌಲಭ್ಯಗಳಿಲ್ಲವೋ ಅಂಥ ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಮಾನ್ಯ ಸದಸ್ಯರು ತಡೆಯುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರತಿಯೊಂದು ಗಣಿಯೂ ಶಿಶುವಿಹಾರದ ವ್ಯವಸ್ಥೆ ಮಾಡುವಂತೆ ಕ್ರಮಕೈಗೊಳ್ಳುತ್ತೇನೆ.

**ಶ್ರೀ ಮನುಸುಬೇದಾರ್ :** ಅಲ್ಲಿಯವರೆಗೆ ಮಾನ್ಯ ಸದಸ್ಯರು ಮಹಿಳಾ ಕಾರ್ಮಿಕರ ಕೆಲಸವನ್ನು ಸ್ಥಗಿತಗೊಳಿಸುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದೊಂದೇ ಪರ್ಯಾಯ ವ್ಯವಸ್ಥೆ ಎನ್ನುವುದಾದರೆ, ಆ ಸಲಹೆಯನ್ನು ಸ್ವೀಕರಿಸಲಾಗುತ್ತದೆ.

**ಪ್ರೊ॥ ಎನ್. ಜಿ. ರಂಗ :** (ಇ) ಪ್ರಶ್ನೆಯ ಸಲಹೆಗೆ ಸಂಬಂಧಿಸಿದಂತೆ ಅಥವಾ ಮೊಲೆಯುಣ್ಣುವ ಮಕ್ಕಳು ಇದ್ದರೂ ತಾಯಂದಿರನ್ನು ನೆಲತಳದ ಕೆಲಸಕ್ಕೆ ನಿಯೋಜಿಸುವ ಸಂಬಂಧವಾಗಿ ಸರ್ಕಾರ ಅಖಿಲ ಭಾರತ ವೈದ್ಯಕೀಯ ಮಂಡಲಿಯೊಡನೆ ಸಮಾಲೋಚನೆ ಮಾಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವಾಗಿ ಅವರು ಸರ್ಕಾರಕ್ಕೆ ಸಲಹೆ ಮಾಡುವ ಹೊಣೆಯನ್ನು ಒಪ್ಪಿಕೊಳ್ಳುತ್ತಾರೆಯೆ ಎಂಬುದು ನನಗೆ ಗೊತ್ತಿಲ್ಲ.

**ಪ್ರೊ॥ ಎನ್.ಜಿ. ರಂಗ :** ಸಲಹೆ ಕೊಡಲು ಅವರು ತಯಾರಿರಲಿ, ಬಿಡಲಿ. ಸರ್ಕಾರ ಅವರನ್ನು ಕೇಳಲು ತಯಾರಾಗಿದೆಯೆ?...

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಅವರೊಂದಿಗೆ ವಿಚಾರ ವಿನಿಮಯ ಮಾಡಬೇಕಾದ ಸಮಸ್ಯೆಯಲ್ಲ ಎಂದು ನನ್ನ ಅನಿಸಿಕೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಈ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ಅಧಿವೇಶನದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಕೆಲವು ಸಲಹೆಗಳನ್ನು ನೀಡಿದೆಯೆ ಎಂಬುದನ್ನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದ್ಯದಲ್ಲಿ ನನ್ನ ಬಳಿ ಯಾವುದೇ ಬಗೆಯ ಮಾಹಿತಿ ಇಲ್ಲ.

**ಶ್ರೀಮತಿ ರೇಣುಕಾ ರೇ :** ಬಹುತೇಕ ಗಣಿಗಳ ಶಿಶುವಿಹಾರಗಳು ವೀಕ್ಷಕರು ಭೇಟಿ ನೀಡಿದಾಗ ಮತ್ತು

ಮುನ್‌ಸೂಚಿತ ಭೇಟಿಯಂತೆ ಸರ್ಕಾರದ ಪರಿಶೀಲಕರು ಆಗಮಿಸಿದಾಗ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ; ಉಳಿದಂತೆ ಅಕ್ಕಪಕ್ಕದಲ್ಲಿ ವಾಸಿಸುವ ಗಣಿ ಕೆಲಸಗಾರರ ಮಕ್ಕಳನ್ನು ಈ ಶಿಶುವಿಹಾರಗಳಿಗೆ ಕೆಲವು ಸಾರಿ ಸೇರಿಸುವುದಿಲ್ಲ ಮತ್ತು ಹಸುಗೂಸುಗಳ ಹಾಗೂ ಮಕ್ಕಳ ಪಾಲನೆಗೆ ಸಾಕಷ್ಟು ಸೌಲಭ್ಯಗಳಿಲ್ಲ, ಕೆಲವು ಅಪವಾದಗಳನ್ನು ಬಿಟ್ಟರೆ ಉಳಿದವು ಕೇವಲ ಹೆಸರಿಗೆ ಮಾತ್ರ ಇವೆ ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಹೋಗಿ ನೋಡಿಲ್ಲದಿರುವಾಗ ಶಿಶುವಿಹಾರಗಳಿಲ್ಲ ಎಂಬುದು ಹೇಗೆ ತಿಳಿದುಬಂತು, ನನಗೆ ಅರ್ಥವಾಗುವುದಿಲ್ಲ.

**ಶ್ರೀ ಎನ್. ಎಂ. ಜೋಷಿ :** ಮಾನ್ಯ ಸದಸ್ಯರು ಗಣಿ ಪ್ರದೇಶಕ್ಕೆ ಹೋಗಿಬಂದಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನೂ ಸಹ ಹೋಗಿಬಂದಿದ್ದೇನೆ.

# ೨೭೧
# ಗಣಿಪ್ರದೇಶಗಳಲ್ಲಿ "ಮಾತೃತ್ವ ಸೌಲಭ್ಯ ಶಾಸನ" ಅನುಷ್ಠಾನಕ್ಕೆ ಕ್ರಮ *

**೪೩೭. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳಿ: ಅ) ಗಣಿಗಳ ಮಹಿಳಾ ಕಾರ್ಮಿಕರು ಅನಕ್ಷರಸ್ಥರೂ, ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ಅಜ್ಞಾನಿಗಳೂ ಆದ ಕಾರಣ, ಗಣಿ ಪ್ರದೇಶಗಳಲ್ಲಿ ಮಾತೃತ್ವ ಸೌಲಭ್ಯ ಶಾಸನದ ಅನುಕೂಲಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಆ) ೧೯೪೧ರಲ್ಲಿ ಜಾರಿಗೆ ಬಂದ ಈ ಶಾಸನದ ಪ್ರಯೋಗದ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ವರದಿ ಬಂದಿದೆಯೆ?

ಇ) ಹೆರಿಗೆಗೆ ಮುನ್ನ ಹಾಗೂ ತರುವಾಯ ನಾಲ್ಕು ವಾರಗಳ ಗೈರುಹಾಜರಿಯ ಸೌಲಭ್ಯ ಗಣಿ ಕೆಲಸದ ಮಹಿಳೆಯರಿಗೆ ಸಾಕಷ್ಟು ವಿರಾಮ ನೀಡುವುದಿಲ್ಲ ಮತ್ತು ಆರೋಗ್ಯಕ್ಕೆ ಧಕ್ಕೆಯಾಗುವುದನ್ನು ತಪ್ಪಿಸಲು ಸಾಕಾಗುವುದಿಲ್ಲ ಎಂಬುದು ಸ್ಪಷ್ಟಗೊಂಡಿದೆಯೆ?

ಈ) ಪ್ರಶ್ನೆ (ಇ) ಗೆ ಸಂಬಂಧಿಸಿದಂತೆ ಸರ್ಕಾರ ವೈದ್ಯಕೀಯ ಅಭಿಪ್ರಾಯವನ್ನು ಪಡೆದುಕೊಂಡಿದೆಯೆ? ಪಡೆದುಕೊಂಡಿದ್ದರೆ, ಅದರ ಪ್ರತಿಯೊಂದನ್ನು ಸದನದ ಮುಂದೆ ಏಕೆ ಮಂಡಿಸಬಾರದು? ಪಡೆಯದಿದ್ದರೆ, ಅಂಥ ಅಭಿಪ್ರಾಯವನ್ನು ಪಡೆದುಕೊಳ್ಳಲು ಸರ್ಕಾರ ಪ್ರಯತ್ನಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತದ ಗಣಿಗಳ ಪ್ರಧಾನ ತನಿಖಾಧಿಕಾರಿಯ ಕೈಕೆಳಗೆ ಒಬ್ಬ ಹಿರಿಯ ಕಾರ್ಮಿಕ ತನಿಖಾಧಿಕಾರಿ ಮತ್ತು ಇಬ್ಬರು ಕಿರಿಯ ತನಿಖಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರು ವೃತ್ತಿಶಃ ವೈದ್ಯರು.

ಆ) ಶಾಸನದ ಪ್ರಯೋಗದ ಬಗ್ಗೆ ಸರ್ಕಾರಕ್ಕೆ ತಾನಾಗಿಯೇ ವರದಿ ಬರದಿದ್ದರೂ ಗಣಿಗಳ ಪ್ರಧಾನ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ ಫೆಬ್ರವರಿ, ೧೯೪೫. ಪುಟ ೬೧೦–೧೧

ತನಿಖಾಧಿಕಾರಿಯ ಕೈಕೆಳಗಿರುವ ತನಿಖಾಧಿಕಾರಿಗಳು ವರದಿಯನ್ನು ಸಲ್ಲಿಸುತ್ತಾರೆ. ಗಣಿ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಇ) ಮತ್ತು (ಈ) ಹೆರಿಗೆಗೆ ಮುನ್ನ ಮತ್ತು ತರುವಾಯ ನಾಲ್ಕು ವಾರಗಳ ರಜಾ ಅವಧಿ ಕಾರ್ಖಾನೆ ಶಾಸನ ಸೌಲಭ್ಯಕ್ಕೆ ಅನುಗುಣವಾಗಿದೆ. ಗಣಿಗಳ ಆಳದಲ್ಲಿ ಕೆಲಸಮಾಡುವ ಮಹಿಳೆಯರಿಗೆ ಹೆರಿಗೆಯ ಮುನ್ನಿನ ರಜ ಅವಧಿಯನ್ನು ಹೆಚ್ಚಿಸಲು ಯೋಚನೆ ಮಾಡಲಾಗುತ್ತಿದೆ.

**ಪ್ರೊ॥ ಎನ್.ಜಿ. ರಂಗ :** ಹೆರಿಗೆಯಾದ ಮೇಲೆ? ಹೆರಿಗೆಯಾದ ಮೇಲೂ ರಜ ಅವಧಿಯನ್ನು ಹೆಚ್ಚಿಸಬೇಕೆಂಬ ಸಲಹೆಯನ್ನು ಸರ್ಕಾರ ಪರಿಗಣಿಸದಿದ್ದರೆ ಹೇಗೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಗತ್ಯವಿಲ್ಲ. ಹೆರಿಗೆಯಾದ ಮಹಿಳೆಯರನ್ನು ನೇಮಕ ಮಾಡಿಕೊಳ್ಳಬಾರದು ಎಂಬ ನಿಷೇಧವಿದೆ.

**ಶ್ರೀಮತಿ ರೇಣುಕಾ ರೇ :** ಗಣಿಗಳ ಆಳದಲ್ಲಿ ಮಹಿಳೆಯರು ಕೆಲಸ ಮಾಡಬಾರದೆಂಬ ನಿಷೇಧವನ್ನು ತೆಗೆದ ಮೇಲೆ, ಕೆಲವು ಗಣಿಗಳ ಒಳಗೆ ಮಕ್ಕಳಿಗೆ ಜನ್ಮವಿತ್ತ ಪ್ರಕರಣಗಳಿವೆ ಎಂಬುದು ಮಾನ್ಯ ಸದಸ್ಯರ ಅರಿವಿಗೆ ಬಂದಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಅಂತಹ ವಿಷಯಗಳಾವುವೂ ನನ್ನ ಗಮನಕ್ಕೆ ಬಂದಿಲ್ಲ.

**ಶ್ರೀಮತಿ ರೇಣುಕಾ ರೇ :** ಮಾನ್ಯ ಸದಸ್ಯರು ಅಂಥವುಗಳನ್ನು ಪತ್ತೆ ಹಚ್ಚಿ, ಅವು ಮತ್ತೆ ಸಂಭವಿಸದ ಹಾಗೆ ಕ್ರಮಕೈಗೊಳ್ಳುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಖಚಿತವಾದ ಮಾಹಿತಿ ನೀಡಿದರೆ, ನಿಜವಾಗಿಯೂ ನಾನು ತನಿಖೆ ಮಾಡುತ್ತೇನೆ.

**ಶ್ರೀಮತಿ ರೇಣುಕಾ ರೇ :** ಅದನ್ನು ಮಾಡಲು ನಾನು ಸಿದ್ಧ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಈ ಮುಖ್ಯ ವಿಷಯದ ಬಗ್ಗೆ ಒಂದು ನಿರ್ಧಾರಕ್ಕೆ ಬರುವ ಮುನ್ನ ಅರ್ಹ ವೈದ್ಯಕೀಯ ಅಧಿಕಾರಿಯ ಅಭಿಪ್ರಾಯವನ್ನು ಪಡೆಯುತ್ತೇವೆ ಎಂಬ ಭರವಸೆಯನ್ನು ಸರ್ಕಾರ ನೀಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಸ್ಸಂದೇಹವಾಗಿ – ಅಗತ್ಯವೆಂದು ತೋರಿದರೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾತೃತ್ವ ಸೌಲಭ್ಯ ಶಾಸನದನ್ವಯ ಹೆರಿಗೆಗೆ ಮುನ್ನ ಮತ್ತು ತರುವಾಯ ಎರಡು ತಿಂಗಳ ಕಾಲಾವಧಿಯ ರಜೆ ಕೊಡಬೇಕೆಂದು ಕಳೆದ ಅಧಿವೇಶನದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಸೂಚಿಸಿತ್ತು ಎಂಬುದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ. ಆ ಮಾಹಿತಿಯನ್ನು ಈಗ ಪಡೆಯುವುದು ಸಾಧ್ಯವಿಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸರ್ಕಾರ ನಮಗೆಲ್ಲ ನೋಡಲು ಕಳಿಸಿದ್ದ ವರದಿಯಲ್ಲಿ ಅದು ಪ್ರಸ್ತಾಪಿತವಾಗಿದ್ದಂತೆ ನನಗೆ ನೆನಪು.

**ಶ್ರೀಮತಿ ರೇಣುಕಾ ರೇ :** ಗಣಿಗಳ ಆಳದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ನಿಷೇಧಿಸಬೇಕು ಎಂಬ ಅಂತಾರಾಷ್ಟ್ರೀಯ ಒಪ್ಪಂದವನ್ನು ಅಲಕ್ಷಿಸುವುದು ಸೂಕ್ತವೆಂದು ಮಾನ್ಯ ಸದಸ್ಯರು ಪರಿಗಣಿಸುತ್ತಿರುವುದರಿಂದ, ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ "ಮಾತೃತ್ವ ಸೌಲಭ್ಯ ವ್ಯವಸ್ಥೆ"ಯನ್ನು

ಪರಿಗಣಿಸುವುದೂ ಕೂಡ ಅನಗತ್ಯ ಎಂದು ಸದಸ್ಯರು ಯೋಚಿಸುತ್ತಿರಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವಿಷಯವನ್ನು ಪರ್ಯಾಲೋಚಿಸುತ್ತಿದ್ದೇವೆ.

# ೨೭೨
# ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ಭೇದ ರದ್ದು *

**೪೫೧. ಶ್ರೀ ಎಚ್.ಎ. ಸತ್ತಾರ್ ಎಚ್. ಇಸ್ಸಾಕ್ ಶೇಟ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಬಗ್ಗೆ ಹೇಳಿಕೆ ನೀಡಿ : ಅ) ೧೯೪೫ ಜನವರಿ ೨೫ರ ಕಾರ್ಮಿಕ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿರುವಂತೆ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಮಾದರಿಯ ನಿವಾಸಗಳ ಭೇದವನ್ನು ರದ್ದುಗೊಳಿಸುವ ನಿರ್ಣಯಕ್ಕೆ ಬರಲು ಕಾರಣವೇನು?

ಆ) (೧) ಅಂಥ ನಿವಾಸಗಳಲ್ಲಿ ಸದ್ಯ ವಾಸವಾಗಿರುವವರು ಮತ್ತು (೨) ಮುಂದೆ ಈ ನಿವಾಸಗಳಿಗೆ ಅರ್ಹತೆ ಪಡೆಯುವವರು ಇವರ ಮೇಲೆ ಈ ನಿರ್ಣಯದ ಪರಿಣಾಮವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲಿಯವರೆಗೆ ಜಾರಿಯಲ್ಲಿರುವ ಹಂಚಿಕೆಯ ನಿಯಮಗಳಂತೆ, ಅರ್ಜಿದಾರರು ವಸತಿಗಾಗಿ ಸಾಂಪ್ರದಾಯಿಕ ಅಥವಾ ಅಸಾಂಪ್ರದಾಯಿಕ ಮಾದರಿಯ ನಿವಾಸಗಳಿಗೆ ಅರ್ಜಿ ಸಲ್ಲಿಸಬಹುದಾಗಿತ್ತು. ಒಂದು ನಮೂನೆಯ ಮನೆಗಳಿಗೆ ಅರ್ಜಿ ಸಲ್ಲಿಸಿದವರು ಇನ್ನೊಂದು ನಮೂನೆಯ ಮನೆಗಳಿಗೆ ಅನರ್ಹರು ಎಂದು ನಿರ್ಣಯಿಸಲಾಗುತ್ತಿತ್ತು. ಸದ್ಯದ ವಸತಿ ಕೊರತೆಯ ದೃಷ್ಟಿಯಿಂದ, ಪೂರ್ವೋಕ್ತ ನಿಯಮಗಳು ಈ ನಮೂನೆಯ ವಸತಿಗಳಿಗೆ ಅರ್ಹರಾದ ಅಧಿಕಾರಿಗಳಿಗೆ ಅನನುಕೂಲವಾಗಿ ಪರಿಣಮಿಸಿವೆ; ಅಸಂಗತ ಫಲಿತಾಂಶವನ್ನು ನೀಡಿವೆ. ತಾನು ಅರ್ಜಿ ಸಲ್ಲಿಸಿದ ನಮೂನೆಯ ನಿವಾಸಗಳಲ್ಲಿ ವಸತಿ ಪಡೆಯಲು ವಿಫಲವಾದಾಗ, – ಬೇರೊಂದು ನಮೂನೆಯ ಮನೆಗೆ ಅರ್ಜಿ ಸಲ್ಲಿಸಿದ್ದರೆ, ಅಲ್ಲಿ ಪಡೆಯುವ ಅವಕಾಶವಿದ್ದರೂ, ವಸತಿ ಇಲ್ಲದೆಯೇ ಇರುವಂಥ ಸ್ಥಿತಿ ಪ್ರಾಪ್ತವಾಗುತ್ತದೆ.

ಇಷ್ಟೇ ಅಲ್ಲದೆ, ಎರಡು ನಮೂನೆಯ ವಸತಿಗಳ ಭೇದ ನಿರ್ವಹಣೆ ವಸತಿ ಕಛೇರಿಗೆ ಅಧಿಕ ಕೆಲಸವನ್ನು ಹೇರುತ್ತದೆ. ಜೊತೆಗೆ ಎರಡು ನಮೂನೆಯ ನಿವಾಸಗಳ ಹಂಚಿಕೆಯನ್ನು ಪ್ರತ್ಯೇಕವಾಗಿ ಇಡಬೇಕಾಗುತ್ತದೆ. ಅಷ್ಟೇ ಅಲ್ಲದೆ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ಭೇದ ನಿರ್ವಹಣೆ ಮತ್ತು ಅದೇ ಬಗೆಯ ಹಂಚಿಕೆ ಆಧುನಿಕ ಕಾಲಕ್ಕೆ ಸರಿತೋರುವುದಿಲ್ಲ.

ಆ) (೧) ಒಂದೂ ಇಲ್ಲ, (೨) ೧೯೪೫ರ ಜನವರಿ ೨೫ರ ನಿರ್ಧಾರವನ್ನು ೧೯೪೫ ಫೆಬ್ರವರಿ ೧೫ ರಂದು ಸ್ವಲ್ಪ ಮಾರ್ಪಾಟು ಮಾಡಲಾಯಿತು. ಎ, ಬಿ, ಸಿ ಮತ್ತು ಡಿ ಮಾದರಿಯ ವಸತಿಗಳಿಗೆ ಅರ್ಹರಾದವರು ಎರಡು ನಮೂನೆಯ ನಿವಾಸಗಳಿಗೆ ಅರ್ಜಿಹಾಕಲು ಅರ್ಹರಾಗುತ್ತಾರೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ ಫೆಬ್ರವರಿ ೧೯೪೫. ಪುಟ ೬೧೮

# ೧೭೩
# ಗಣಿಗಳಲ್ಲಿ ಮಹಿಳಾ ಕಾರ್ಮಿಕರ ಸಾವು*

**೪೫೩. ಶ್ರೀ ಕೆ.ಎಸ್. ಗುಪ್ತ :** ಅ) ೧೯೪೨, ೧೯೪೩ ಮತ್ತು ೧೯೪೪ರಲ್ಲಿ ಭಾರತದ ಗಣಿಗಳಲ್ಲಿ (ಕಲ್ಲಿದ್ದಲುಗಣಿಗಳ ಸಮೇತ) ೧) ಕಾಯಿಲೆಗಳಿಂದ (೨) ದುರಂತ ಘಟನೆಗಳಿಂದ ಸತ್ತ ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುತ್ತಾರೆಯೇ?

ಆ) ಆಹಾರ ಧಾನ್ಯಗಳ ಬೆಲೆಯಲ್ಲಿ ಹಾಗೂ ಜೀವನದ ಇನ್ನಿತರ ವಸ್ತುಗಳ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ ಕಲ್ಲಿದ್ದಲು ಗಣಿಗಳು ಕೆಲಸಗಾರರಿಗೆ ಕೊಡುವ ಸಂಬಳವನ್ನು ಅದಕ್ಕನುಗುಣವಾಗಿ ಏರಿಸದೆ ಇರುವುದರಿಂದ ಪುರುಷ ಕಾರ್ಮಿಕರು ಸಾಮಾನ್ಯವಾಗಿ ಆ ಕೆಲಸಕ್ಕೆ ಹೋಗುವುದಿಲ್ಲ ಎಂಬುದು ವಾಸ್ತವವಲ್ಲವೆ?

ಇ) ಉತ್ತಮ ಸಂಬಳ ಹಾಗೂ ಆಹಾರ ಧಾನ್ಯಗಳ ಸರಬರಾಜು ಮತ್ತು ವಸತಿಯ ವಿಶೇಷ ಸವಲತ್ತುಗಳನ್ನು ನೀಡಿ ಪುರುಷ ಕಾರ್ಮಿಕರನ್ನು ಆಕರ್ಷಿಸುವ, ಆ ಮೂಲಕ ಗಣಿಗಳ ಆಳದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ನಿಷೇಧಹಾಕುವ ಹಾಗೂ ಪ್ರತಿಯೊಂದು ನಾಗರಿಕ ದೇಶದಲ್ಲಿರುವಂತೆ ಭಾರತದ ನಾರಿಯರ ಮಾನ ಕಾಪಾಡುವ ಪ್ರಯತ್ನವನ್ನು ಗಣಿ ಉದ್ಯಮಿಗಳಾಗಲೀ ಅಥವಾ ಸರ್ಕಾರವಾಗಲೀ ಮಾಡಿದೆಯೆ?

ಈ) ಆಳದಲ್ಲಿ ಕಠಿಣತರವಾದ ಅಗಾಧ ಶ್ರಮದ ಕೆಲಸಗಳನ್ನು ಅವಿರತವಾಗಿ ಮಾಡಿ ಮಹಿಳಾ ಕಾರ್ಮಿಕರು ಬಡಕಲಾಗಿ ಒಣಗಿಹೋಗುವುದರಿಂದ ಅವರ ಸ್ತನಗಳಲ್ಲಿ ಹಾಲೂ ಸಹ ಬತ್ತಿ ಗಣಿ ಪ್ರದೇಶದ ಮಕ್ಕಳು ಅಲ್ಪಾಯುಗಳಾಗಿ ಸಾಯುತ್ತಾರೆ ಎಂಬುದು ವಾಸ್ತವವಲ್ಲವೆ?

ಉ) ಗಣಿ ಪ್ರದೇಶಗಳಲ್ಲಿ ಕೆಲಸಗಾರರಿಗೆ ಶುದ್ಧ ಹಾಲು ದೊರಕುವುದಿಲ್ಲ ಎಂಬುದು ವಾಸ್ತವವಲ್ಲವೆ?

ಊ) ಬೇರೆ ಬೇರೆ ಗಣಿ ಪ್ರದೇಶಗಳಲ್ಲಿರುವ ಒಂದು ವರ್ಷದ ಒಳಗಿನ ಮಕ್ಕಳಿಗೆ ಉಚಿತ ಹಾಲು ಸರಬರಾಜು ಮಾಡಲು ಗಣಿ ಉದ್ಯಮಿಗಳಾಗಲಿ ಅಥವಾ ಸರ್ಕಾರವಾಗಲಿ ಪ್ರಯತ್ನ ಮಾಡಿರುವುದುಂಟೆ? ಇಲ್ಲದಿದ್ದರೆ ಏಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಗಣಿಗಳ ಮೇಲುಭಾಗದಲ್ಲಿ ಮತ್ತು ಒಳಭಾಗದಲ್ಲಿ ದುರಂತದಿಂದ ಸತ್ತ ಮಹಿಳೆಯರ ಸಂಖ್ಯೆ ೧೯೪೨, ೧೯೪೩ ಮತ್ತು ೧೯೪೪ರಲ್ಲಿ ಕ್ರಮವಾಗಿ ೯,೧೧ ಮತ್ತು ೫೩. ಕಾಯಿಲೆಯಿಂದ ಸತ್ತವರ ಸಂಖ್ಯೆ ದೊರಕಿಲ್ಲ.

ಆ) ಇಲ್ಲ.

ಇ) ಹೌದು. ಸಂಬಳಕ್ಕೆ, ಯೋಗಕ್ಷೇಮ ಮತ್ತು ಸವಲತ್ತುಗಳಿಗೆ ಸಂಬಂಧಿಸಿದಂತೆ ಕೆಳಗಿನ ಸುಧಾರಣೆಗಳಾಗಿವೆ.

೧. ಆಹಾರ ಪದಾರ್ಥಗಳಿಗೆ ಸಹಾಯಧನ ಮತ್ತು ದಿನಸಿ ಅಂಗಡಿಗಳ ಏರ್ಪಾಡು.

೨. ಮಲೇರಿಯಾ ನಿಯಂತ್ರಣವೂ ಸೇರಿದಂತೆ ಆರೋಗ್ಯ ಸುಧಾರಣಾ ಕ್ರಮಗಳು ಮತ್ತು ಆಸ್ಪತ್ರೆಗಳ ಸ್ಥಾಪನೆಗೆ ಹೆಚ್ಚಿನ ಒತ್ತಾಸೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ನ ಫೆಬ್ರವರಿ, ೧೯೪೫. ಪುಟ ೬೨೦

೩. ಗ್ರಾಹಕರ ಪದಾರ್ಥಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು.

೪. ಕೆಲಸಕ್ಕೆ ಹೋಗಿ ಬರಲು ಸಾರಿಗೆ ವ್ಯವಸ್ಥೆ.

೫. ರೈಲ್ವೆ ಕಲ್ಲಿದ್ದಲು ಗಣಿಗಳಲ್ಲಿ ಕಲ್ಲಿದ್ದಲನ್ನು ಅಗೆದು ಮೇಲೆತ್ತಲು ಹೆಚ್ಚಿಗೆ ದರ. ಏಕೆಂದರೆ ಕೆಲಸಗಾರರಿಗೆ ಹೆಚ್ಚು ಆಕರ್ಷಕ ಸಂಬಳವನ್ನು ಕೊಡಲು ಗುತ್ತಿಗೆದಾರರಿಗೆ ಅದರಿಂದ ಸಾಧ್ಯ.

೬. ಕಲ್ಲಿದ್ದಲು ಗಣಿಗಳ ಕೆಲಸಗಾರರಿಗೆ ಹೆಚ್ಚಿನ ಸಂಬಳ ಕೊಡಲು ಗಣಿ ಉದ್ಯಮಿಗಳ ಮತ್ತು ಸರ್ಕಾರದ ಮಧ್ಯೆ ವಿಧ್ಯುಕ್ತವಲ್ಲದ ಒಪ್ಪಂದ.

ಈ) ಹಾಲಿನ ಅಭಾವದಿಂದ ಗಣಿ ಪ್ರದೇಶಗಳಲ್ಲಿ ಮಕ್ಕಳ ಮರಣ ಸಂಖ್ಯೆ ಅಧಿಕ ಎಂದು ಹೇಳಲಾಗುವುದಿಲ್ಲ. ಅಖಿಲ ಭಾರತ ಅಂಕಿಅಂಶಗಳಿಗಿಂತ ಕಲ್ಲಿದ್ದಲು ಗಣಿಗಳಲ್ಲಿ ಮಕ್ಕಳ ಮರಣ ಸಂಖ್ಯೆ ಕಡಮೆಯೇ.

ಉ) ಗಣಿ ಪ್ರದೇಶದಲ್ಲಿ ಶುದ್ಧ ಹಾಲು ಸಿಕ್ಕುತ್ತದೆ. ಗಣಿಗಳ ಆರೋಗ್ಯ ಮಂಡಲಿ ನೇಮಕ ಮಾಡಿಕೊಂಡಿರುವ ತನಿಖಾಧಿಕಾರಿಗಳು ಆಗಾಗ್ಗೆ ಹಾಲಿನ ಮಾದರಿಯನ್ನು ತೆಗೆದುಕೊಂಡು ಪರೀಕ್ಷಿಸುತ್ತಾರೆ. ಕಲಬೆರಕೆ ಏನಾದರೂ ಗೊತ್ತಾದರೆ ಕ್ರಮಕೈಗೊಳ್ಳುತ್ತಾರೆ.

ಊ) ಇಲ್ಲ. ಗಣಿಪ್ರದೇಶಗಳಲ್ಲಿನ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಸುಧಾರಣೆಯ ಹೆಚ್ಚಿನ ಸಾಧ್ಯತೆಗಳನ್ನು ಸರ್ಕಾರ ಪರಿಶೀಲಿಸುತ್ತಿದೆ.

# ೨೭೪
# ಗಣಿಗಳ ನೆಲತಳದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು *

**೪೫೪. ಶ್ರೀ ಕೆ.ಎಸ್. ಗುಪ್ತ :** ಅ) ೧೯೪೨, ೧೯೪೩ ಮತ್ತು ೧೯೪೪ರಲ್ಲಿ ಗಣಿಗಳ ಆಳದಲ್ಲಿ ಎಷ್ಟು ಜನ ಮಹಿಳೆಯರು ಕೆಲಸ ಮಾಡುತ್ತಿದ್ದರು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೇ?

ಆ) ಗಣಿಗಳ ಆಳದಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನಗಳು ಜರುಗಿದವೆ? ಇಲ್ಲದಿದ್ದರೆ, ಏಕೆ?

ಇ) ತುಂಬುಗರ್ಭಿಣಿಯರಾದ ಮಹಿಳೆಯರನ್ನು ಬಲಾತ್ಕಾರದಿಂದ ಗಣಿ ಕೆಲಸಕ್ಕೆ ತೊಡಗಿಸಿಕೊಂಡುದರಿಂದ, ಗಣಿಗಳ ಒಳಗೇ ಎಷ್ಟೋ ಹೆರಿಗೆಗಳು ಜರುಗಿದವು ಎಂಬುದು ನಿಜವೆ? ಆ ಸಂಬಂಧದ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ, ಅಂಥ ದುಷ್ಟಪದ್ಧತಿಗಳ ತಡೆಗಟ್ಟುವಿಕೆಗೆ ಏನು ಕ್ರಮಕೈಗೊಳ್ಳಲಾಗಿದೆ?

ಈ) ಗರ್ಭ ಧರಿಸಿ ಏಳು ತಿಂಗಳಾದ ಮಹಿಳಾ ಕಾರ್ಮಿಕರು ಗಣಿಗಳ ಆಳದಲ್ಲಿ ಕೆಲಸಕ್ಕೆ ಹೋಗದಂತೆ ನಿಷೇಧಿಸುವ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ಯೋಚಿಸುತ್ತಿದೆಯೆ? ಇಲ್ಲದಿದ್ದರೆ ಏಕೆ?

ಉ) ಮಹಿಳೆಯರಿಗೆ ಕೊಡಬೇಕೆಂದಿರುವ ಮಾತೃತ್ವ ಸೌಲಭ್ಯ ಹೆಸರಿಗೆ ಮಾತ್ರವಿದೆ. ಎಷ್ಟೋ ದೂರುಗಳನ್ನು ಈ ಸಂಬಂಧವಾಗಿ ಮೇಲಧಿಕಾರಿಗೆ ಸಲ್ಲಿಸಿದ್ದರೂ, ಅವರು ಸಂಬಂಧಪಟ್ಟವರಿಗೆ ಅವುಗಳನ್ನು ತಲುಪಿಸದೆ ನಿರ್ಲಕ್ಷಿಸಿದ್ದಾರೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೆ?

ಊ) ಮಾನ್ಯ ಸದಸ್ಯರು ತನಿಖೆ ನಡೆಸಿ, ಕೊರತೆಗಳಿಗೆ ಪರಿಹಾರ ಹುಡುಕುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೪೨ – ಯಾರೂ ಇಲ್ಲ; ೧೯೪೩ – ಸುಮಾರು ೭೦೦೦; ೧೯೪೪–೧೬,೦೦೦.

ಆ) ಹೌದು. ಕಲ್ಲಿದ್ದಲು ಗಣಿಗಳ ನೆಲತಳದ ಕೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳದಂತೆ ಮತ್ತೆ ನಿಷೇಧವನ್ನು ಹೇರಲು ಅನುವಾಗುವ ಪರಿಸ್ಥಿತಿಯನ್ನು ಗಮನಿಸಿ ಪ್ರಯತ್ನವನ್ನು ತ್ವರಿತಗೊಳಿಸಲಾಗುವುದು. ಬೇರೆ ಗಣಿಗಳಲ್ಲಿ ನಿಷೇಧ ಈಗಾಗಲೇ ಜಾರಿಯಲ್ಲಿದೆ.

ಇ) ಇಲ್ಲ. ನನಗೆ ಗೊತ್ತಿರುವ ಹಾಗೆ ಮಕ್ಕಳ ಜನನ ಗಣಿಗಳ ಒಳಗೆ ಆಗಿಲ್ಲ. ಅಂಥ ವರದಿಗಳು ಎಂದೂ ಬಂದಿಲ್ಲ. ಪ್ರಶ್ನೆಯ ಕೊನೆಯ ಭಾಗ ಉದ್ಭವಿಸುವುದಿಲ್ಲ.

ಈ) ಈ ನಿಟ್ಟಿನ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಉ) ಗಣಿಗಳಲ್ಲಿನ ಮಾತೃತ್ವ ಸೌಲಭ್ಯ ಶಾಸನದ ಅನುಷ್ಠಾನಕ್ಕಾಗಿ ನೇಮಕವಾಗಿರುವ ಗಣಿಗಳ ಪ್ರಧಾನ ತನಿಖಾಧಿಕಾರಿಯ ಕೈಕೆಳಗೆ ಒಬ್ಬ ಹಿರಿಯ ಕಾರ್ಮಿಕ ತನಿಖಾಧಿಕಾರಿ ಮತ್ತು ಇಬ್ಬರು ಕಿರಿಯ ಕಾರ್ಮಿಕ ತನಿಖಾಧಿಕಾರಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಈ ಶಾಸನದ ಅಗತ್ಯಗಳನ್ನು ಪೂರೈಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಊ) ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ ಫೆಬ್ರವರಿ, ೧೯೪೫. ಪುಟ ೬೨೧

# ೨೭೫
# ಕಲ್ಲಿದ್ದಲು ಗಣಿಗಳಲ್ಲಿನ ಉದ್ಯೋಗಕ್ಕಾಗಿ ಗೋರಖ್‌ಪುರ ಕಾರ್ಮಿಕರ ನೇಮಕಾತಿಗೆ ಯೋಜನೆ *

**೫೬೪. ಶ್ರೀ ಕೆ.ಸಿ. ನಿಯೋಗಿ :** ಅ) ಗೋರಖ್‌ಪುರ ಕಾರ್ಮಿಕರ ನೇಮಕಾತಿಯ ಯೋಜನೆ ಮತ್ತು ಕಲ್ಲಿದ್ದಲು ಗಣಿಗಳಲ್ಲಿ ಅವರ ನೇಮಕವನ್ನು ಕುರಿತಂತೆ ಮಾನ್ಯ ಸದಸ್ಯರು ವಿಶದವಾಗಿ ವಿವರಣೆ ನೀಡುವರೇ?

ಆ) ಈ ಯೋಜನೆಯಡಿಯಲ್ಲಿ ಹೊಸದಾಗಿ ನೇಮಕಗೊಂಡ ಕಾರ್ಮಿಕರ ಸಂಖ್ಯೆ ಎಷ್ಟು? ಅದಕ್ಕಾಗಿ ಎಷ್ಟು ವೆಚ್ಚ ತಗುಲಿದೆ? ಕಾರ್ಮಿಕರು ನೇಮಕಗೊಂಡಿರುವ ಅಥವಾ ನೇಮಕಗೊಳ್ಳಲಿರುವ ಕಲ್ಲಿದ್ದಲು ಗಣಿಗಳಿಂದ ಎಷ್ಟನ್ನು ವಸೂಲಿ ಮಾಡಿದೆ ಅಥವಾ ಮಾಡಲಿದೆ?

ಇ) ಈ ಕಾರ್ಮಿಕರು ಪಡೆಯುವ ಕೂಲಿಯ ದರ ಹಾಗೂ ಪಡೆಯುವ ಸೌಲಭ್ಯಗಳೇನು? ಕಲ್ಲಿದ್ದಲು ಗಣಿಗಳಲ್ಲಿ ನೇಮಕಗೊಂಡಿರುವ ಬೇರೆ ಕಾರ್ಮಿಕರ ನಿಯಮಗಳು ಮತ್ತು ಷರತ್ತುಗಳೊಡನೆ ಇವರದನ್ನು ಸರಿದೂಗಿಸುವ ಬಗೆ ಹೇಗೆ? ಇವರು ನೇಮಕಗೊಂಡಿರುವ ಬೇರೆ ಬೇರೆ ಗಣಿಗಳಲ್ಲಿ ಇವರ ಕೆಲಸದ ಸಾಮರ್ಥ್ಯ, ಕೆಲಸದ ಹೆಚ್ಚುವರಿ ಮತ್ತು ದಕ್ಷತೆಗಳ ಬಗ್ಗೆ ಏನಾದರೂ ವರದಿಗಳು ಬಂದಿವೆಯೆ?

ಈ) ಈ ಯೋಜನೆಯ ಕಾರ್ಯವನ್ನು ನಿರ್ವಹಿಸುತ್ತಿರುವ ಅಧಿಕಾರಿಗಳ ಹೆಸರುಗಳೇನು? ಅವರ ಕ್ರಮಬದ್ಧ ಕರ್ತವ್ಯಗಳೇನು? ಈ ನಿಟ್ಟಿನಲ್ಲಿ ಅವರ ಅನುಭವವೇನು, ವಿದ್ಯಾರ್ಹತೆಗಳೇನು? ಅವರು ಎಷ್ಟು ವರಮಾನ ಅಥವಾ ವೇತನಪಡೆಯುತ್ತಿದ್ದಾರೆ?

ಉ) ಈ ಯೋಜನೆಯು ಪ್ರಾರಂಭದಲ್ಲಿ ಯಾವ ಮೂಲದಿಂದ ಅಗತ್ಯ ಆರ್ಥಿಕ ನೆರವನ್ನು ಪಡೆಯಿತು? ಪ್ರಧಾನ ಲೆಕ್ಕಪರಿಶೋಧಕರ ನಿಯಂತ್ರಣದಲ್ಲಿ ಕಾಲಕಾಲಕ್ಕೆ ಈ ಯೋಜನೆಯ ಲೆಕ್ಕಪತ್ರಗಳು ಪರಿಶೋಧನೆಗೆ ಒಳಗಾಗಿವೆಯೇ? ಯಾವ ಅವಧಿಯವರೆಗೆ ಈ ಲೆಕ್ಕಪತ್ರಗಳ ಪರಿಶೋಧನೆ ನಡೆದಿದೆ? ಲೆಕ್ಕಪರಿಶೋಧನೆಯಿಂದ ಯಾವುದಾದರೂ ಹಣಕಾಸಿನ ಅಥವಾ ಲೆಕ್ಕಪತ್ರದಲ್ಲಿನ ಅಕ್ರಮಗಳು ಬೆಳಕಿಗೆ ಬಂದಿವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸರ್ಕಾರದ ಬೇರೆ ಬೇರೆ ಕೆಲಸಗಳಿಗೆ ಹಾಗೂ ಕಲ್ಲಿದ್ದಲು ಗಣಿಗಳಿಗೆ ಸಂಯುಕ್ತ ಪ್ರಾಂತ್ಯಗಳ ಗೋರಖ್‌ಪುರ ಕಾರ್ಮಿಕ ಸರಬರಾಜು ಮಳಿಗೆಯಿಂದ ಹೊಸದಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳಲಾಯಿತು. ಕೆಳಗಿನ ಮೇಲ್ವಿಚಾರಣಾ ಸಿಬ್ಬಂದಿಯ ನೇತೃತ್ವದಲ್ಲಿ ತಂಡತಂಡವಾಗಿ ವ್ಯವಸ್ಥೆಗೊಳಿಸಲಾಗಿತ್ತು–

೫೦ ಜನರ ತಂಡಕ್ಕೆ ಒಬ್ಬ ಸರದಾರ.

೨೫೦ ಜನರ ಪ್ರತಿ ದಳಕ್ಕೆ ಒಬ್ಬ ಘಟಕ ಮೇಲ್ವಿಚಾರಕ.

ನೆಲೆಗನುಗುಣವಾಗಿ ಒಂದು ಅಥವಾ ಹೆಚ್ಚಿನ ಶಿಬಿರಗಳ ಸಿಬ್ಬಂದಿಯ ಮೇಲ್ವಿಚಾರಣೆಗೆ ಒಬ್ಬ ಸಮೂಹಾಧಿಕಾರಿ.

ಈ ಕಾರ್ಮಿಕ ಶಿಬಿರಗಳ ನೇರ ಹೊಣೆ ಹೊತ್ತ ಅಧಿಕಾರಿಯೆಂದರೆ ಧನಬಾದ್ ಕೇಂದ್ರ ಕಾರ್ಯಸ್ಥಾನವಾಗಿರುವ ಕಾರ್ಮಿಕ ಸರಬರಾಜು ಇಲಾಖೆಯ (ಕಲ್ಲಿದ್ದಲು) ಸಹಾಯಕ ನಿರ್ದೇಶಕರು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ ಫೆಬ್ರವರಿ ೧೯೪೫. ಪುಟ ೬೨೯

ಕೆಲಸದ ಸ್ಥಳಗಳಲ್ಲಿ ಕಾರ್ಮಿಕರನ್ನು ಆರು ತಿಂಗಳು ಅಥವಾ ಒಂದು ವರ್ಷದ ಸೇವೆಗಾಗಿ ನೇಮಿಸಿಕೊಳ್ಳಲಾಗುತ್ತಿತ್ತು. ಅಥವಾ ಅಗತ್ಯ ಇರುವವರೆಗೆ ನೇಮಿಸಿಕೊಳ್ಳಲಾಗುತ್ತಿತ್ತು. ಪ್ರತಿಯೊಬ್ಬ ಕಾರ್ಮಿಕನಿಗೂ ಬಟ್ಟೆಗಳನ್ನು ಹಾಗೂ ಹೊದಿಕೆಗಳನ್ನು ನೀಡಲಾಗುತ್ತಿತ್ತು. ಪ್ರಾರಂಭದ ವೆಚ್ಚಗಳನ್ನು ಭರಿಸಲು ಮುಂಗಡ ಹಣವನ್ನು ಕೊಡುವುದೇ ಅಲ್ಲದೆ ಉಚಿತ ವಸತಿ, ವೈದ್ಯಕೀಯ ಸೌಲಭ್ಯ, ಅಡಿಗೆ ಇಂಧನ ಮತ್ತು ಪಡಿತರ ವ್ಯವಸ್ಥೆ ಮಾಡಲಾಗುತ್ತಿತ್ತು. ಉತ್ತಮ ಕೆಲಸಕ್ಕಾಗಿ ಮತ್ತು ದೀರ್ಘ ಸೇವೆಗಾಗಿ ಉಚಿತಾರ್ಥ ಕೊಡುವುದರ ಜೊತೆಗೆ ಸಂಬಳದ ಶ್ರೇಣಿಯನ್ನು ಅನುಸರಿಸಿ ಸಂಭಾವನೆಯನ್ನು ಕೊಡಲಾಗುತ್ತಿತ್ತು.

ಆ) ಗಣಿಗಳಲ್ಲಿ ಇದುವರೆಗೆ ಹೊಸದಾಗಿ ನೇಮಕ ಮಾಡಿಕೊಂಡಿರುವ ಕಾರ್ಮಿಕರ ಒಟ್ಟು ಸಂಖ್ಯೆ ೩೩,೫೦೦ ಸದ್ಯದ ಕೆಲಸಗಾರರ ಸಂಖ್ಯೆ ೧೫,೦೦೦. ೧೯೪೫ ಜನವರಿ ಕೊನೆಯವರೆಗೆ ತಗುಲಿದ ಒಟ್ಟು ವೆಚ್ಚ ರೂ. ೭೪.೧೬.೫೮೪.

**ವಸೂಲಿ ಹಣ**

೧೯೪೫ರ ಜನವರಿ ಮಧ್ಯಭಾಗದವರೆಗೆ ಒಟ್ಟು ಮೊತ್ತ .......... ೧೪½ಲಕ್ಷ
ವಾಸ್ತವವಾಗಿ ವಸೂಲಿಯಾದದ್ದು ........... ೫ ಲಕ್ಷ

ಇ) ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಕೆಲಸ ಮಾಡುವ ಗೋರಖ್‌ಪುರ ಕಾರ್ಮಿಕರಿಗೆ ಈ ಕೆಳಗಿನ ಸಂಬಳ ಮತ್ತು ಸೌಲಭ್ಯಗಳು ದೊರಕುತ್ತವೆ :
ದಿನಕ್ಕೆ ೧೨ ಆಣೆಗಳು ಮೂಲ ಕೂಲಿ.
ದಿನಕ್ಕೆ ೧೪ ಆಣೆಗಳು ಉತ್ಪನ್ನ ಲಾಭಾಂಶ.
ಗಣಿಗಳ ಆಳದಲ್ಲಿ ಕೆಲಸ ಮಾಡುವವರಿಗೆ ದಿನಕ್ಕೆ ೪ ಆಣೆಗಳ ವಿಶೇಷ ಭತ್ಯೆ. ಇದರ ಜೊತೆಗೆ, ಪೂರ್ಣ ಆಹಾರಕ್ಕಾಗಿ ಕಾರ್ಮಿಕರಿಗೆ ಉಚಿತ ಆಹಾರ ಪದಾರ್ಥಗಳನ್ನು ಒದಗಿಸಲಾಗುವುದು. ದಿನಕ್ಕೆ ಅದರ ಅಂದಾಜು ವೆಚ್ಚ ೧೪ ಆಣೆಗಳು. ಉಚಿತ ವಸತಿ ಮತ್ತು ವೈದ್ಯಕೀಯ ಸೌಲಭ್ಯಕ್ಕೂ ಅವರು ಅರ್ಹರು.
ಸ್ಥಳೀಯ ಕಾರ್ಮಿಕರಿಗಿಂತ ಗೋರಖ್‌ಪುರ ಕಾರ್ಮಿಕರು ಒಟ್ಟಾರೆ ಉತ್ತಮ ನಿಯಮ ಮತ್ತು ಷರತ್ತುಗಳನ್ನು ಪಡೆಯುತ್ತಿದ್ದಾರೆ. ಸ್ಥಳೀಯ ಕಲ್ಲಿದ್ದಲು ಗಣಿಯ ಕಾರ್ಮಿಕರು ಪಡೆಯುತ್ತಿರುವ ಸೌಲಭ್ಯಗಳು ಹೀಗಿವೆ.

೧) ಯುದ್ಧಪೂರ್ವ ಸ್ಥಳೀಯ ಕೂಲಿ ದರದ ಮೇಲೆ ಶೇ. ೫೦. ನಗದು ಕೂಲಿ. ಗಣಿಗಳ ಮೇಲೆಗಡೆ ಮತ್ತು ಒಳಗೆ ಕೆಲಸ ಮಾಡುವವರಿಗೆ ಯುದ್ಧಪೂರ್ವ ಸ್ಥಳೀಯ ಕೂಲಿ ಕ್ರಮವಾಗಿ ೮ ಆಣೆಗಳು ಮತ್ತು ೧೪ ಆಣೆಗಳು.

೨) ಆಹಾರ ರಿಯಾಯಿತಿಗಳು ಈ ಕೆಳಗಿನಂತಿವೆ:
ಪ್ರತಿದಿನದ ಹಾಜರಾತಿಗೆ ½ ಸೇರು ಉಚಿತ ಅಕ್ಕಿ.
ಒಂದು ರೂಪಾಯಿಗೆ ಆರು ಸೇರುಗಳಂತೆ ರಿಯಾಯಿತಿ ಬೆಲೆಯಲ್ಲಿ ಸಾಕಷ್ಟು ಬೇಳೆಯ ಸರಬರಾಜು.
ಅವರಿಗೆ ಇನ್ನೂ ಹೆಚ್ಚಿನ ಅಗತ್ಯ ಬಿದ್ದರೆ, ನಿಯಂತ್ರಿತ ಬೆಲೆಯಲ್ಲಿ ಅಕ್ಕಿ ಮತ್ತು ಬೇಳೆಯ ಸರಬರಾಜು.

ಪ್ರಸಕ್ತ ರಿಯಾಯಿತಿ ದರದ ಉದ್ದೇಶ ಗಣಿ ಕಾರ್ಮಿಕನಿಗೆ ಪೂರ್ಣ ಪ್ರಮಾಣದ ಪಡಿತರ ಸರಬರಾಜು ಮತ್ತು ಅವನ ಕುಟುಂಬಕ್ಕೆ ಬೇಕಾದ ಧಾನ್ಯಗಳಿಗೆ ನಿಯಂತ್ರಿತ ಬೆಲೆ ತೆರಬೇಕಾಗುತ್ತದೆ. ಕಳೆದ ಮೇ ತಿಂಗಳಲ್ಲಿ ಈ ರಿಯಾಯಿತಿಗಳನ್ನು ಮೊದಲು ನೀಡಲಾಯಿತು, ಹಿಂದೆ ಕೆಲಸಗಾರರ ಸಂಸಾರಕ್ಕೂ ರಿಯಾಯಿತಿಗಳನ್ನು ವಿಸ್ತರಿಸಲಾಗಿತ್ತು. ಅದೂ ಧಾನ್ಯದ ಅಧಿಕ ಪ್ರಮಾಣದ ಮೊತ್ತಕ್ಕೆ. ಆದರೆ ಈಗ ಅದರ ಬದಲಿಗೆ ಕೆಲಸಗಾರ ಅವಿವಾಹಿತನಾಗಿದ್ದರೆ ಎರಡು ಆಣೆಗಳ ಹೆಚ್ಚು ಭತ್ಯೆ ಮತ್ತು ವಿವಾಹಿತನಾಗಿ ಮಕ್ಕಳಿದ್ದರೆ ಐದು ಆಣೆಗಳ ಹೆಚ್ಚುವರಿ ಭತ್ಯೆ ಪಡೆಯುವಂತೆ ಮಾಡಲಾಗಿದೆ.

ಕಲ್ಲಿದ್ದಲು ಗಣಿಗಳ ಧಣಿಗಳ ವರದಿಯನ್ನೂ ಒಳಗೊಂಡಂತೆ ಬೇರೆ ಬೇರೆ ಮೂಲಗಳಿಂದ ಬಂದ ವರದಿಯಂತೆ ಗೋರಖ್‌ಪುರ ಕಾರ್ಮಿಕರು ಅನೇಕ ಬಗೆಯ ಕೆಲಸಗಳಿಗೆ ಸೂಕ್ತ ರೀತಿಯಲ್ಲಿ ಹೊಂದಿಕೊಂಡಿದ್ದಾರೆ. ಉದಾಹರಣೆಗೆ ಶಿಬಿರಗಳ ನಿರ್ಮಾಣ, ಕಲ್ಲುಗಣಿ ಯೋಜನೆಯಲ್ಲಿ ಭಾರದ ಸಾಗಣೆ, ಗಾಡಿಗಳಿಗೆ ಕಲ್ಲಿದ್ದಲು ತುಂಬುವುದು, ಹಾಗೆಯೇ ಕಲ್ಲಿದ್ದಲನ್ನು ಕತ್ತರಿಸುವುದು. ಅಲ್ಲದೆ, ಇವರು ಕೆಲಸಕ್ಕೆ ಕ್ರಮಬದ್ಧವಾಗಿ ಹಾಜರಾಗುತ್ತಾರೆ ಎಂದು ವರದಿಯಾಗಿದೆ. ಸೂಕ್ತ ಮೇಲ್ವಿಚಾರಣೆ ಇದ್ದರೆ, ಹುಟ್ಟುವಳಿ ಬೇರೆಯದರಷ್ಟೇ ಇಲ್ಲಿಯೂ ಉತ್ತಮವಾಗಿರುತ್ತದೆ.

ಈ) (೧) ಶ್ರೀ ವಾಲ್ಷ್ – ನಿಯೋಗಿ ನಿರ್ದೇಶಕರು, ಕಾರ್ಮಿಕ ಸರಬರಾಜು (ಕಲ್ಲಿದ್ದಲು) ಸಂಬಳ–ರೂ. ೧,೯೨೫.

(೨) ಶ್ರೀ ಮೋರಿಸ್–ಸಹಾಯಕ ನಿರ್ದೇಶಕರು (ಕಲ್ಲಿದ್ದಲು ಉತ್ಪನ್ನ) ಸಂಬಳ– ರೂ. ೧,೨೧೫.

ಶ್ರೀ ವಾಲ್ಷ್ ಗೋರಖ್‌ಪುರ ಕಾರ್ಮಿಕರಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಪಡಿತರ, ಸಂಬಳ, ವಸತಿ ಮತ್ತು ಯೋಗಕ್ಷೇಮ – ಸಮಗ್ರ ಮೇಲ್ವಿಚಾರಕರಾಗಿದ್ದಾರೆ. ಅವರಿಗೆ ಸ್ವಾವರದ ಮೇಲ್ವಿಚಾರಣೆಯಲ್ಲಿ ಹನ್ನೆರಡು ವರ್ಷಗಳ ಅನುಭವವಿದೆ. ಆಡಳಿತಾತ್ಮಕ ಅರ್ಹತೆಯಲ್ಲಿ ಮೂರು ವರ್ಷಗಳ ಕಾಲ ಸೈನ್ಯ ಸಿಬ್ಬಂದಿ ಅಧಿಕಾರಿಯಾಗಿದ್ದರು. ಇಂಡಿಯನ್ ರಿಸರ್ವ್ ಬೇಸ್‌ನಲ್ಲಿ ಹತ್ತು ತಿಂಗಳ ಕಾಲ ಕಾರ್ಮಿಕ ಸಿಬ್ಬಂದಿ ಅಧಿಕಾರಿಯಾಗಿದ್ದರು. ಆಗ ಗೋರಖ್‌ಪುರ ಕಾರ್ಮಿಕ ಮೂಲಸಂಸ್ಥೆಯನ್ನು ಕೇಂದ್ರಶಕ್ತಿಯನ್ನಾಗಿ ಮಾರ್ಪಡಿಸಲು ಕಾರಣವಾದ ವ್ಯಕ್ತಿ ಇವರು.

ಶ್ರೀ ಮೋರಿಸ್ ಕೆಲಸದ ನಿವೇಶನಗಳು, ಉತ್ಪನ್ನಗಳ ಉಪಕರಣ ಮತ್ತು ಸಾಗಣೆಯ ಮೇಲ್ವಿಚಾರಕರಾಗಿದ್ದಾರೆ. ಕಳೆದ ೨೫ ವರ್ಷಗಳಲ್ಲಿ ಭಾರತ ಮತ್ತು ಬರ್ಮಾಗಳಲ್ಲಿ ವಿವಿಧ ದರ್ಜೆಯ ಕಾರ್ಮಿಕರ ಹಿತ ನಿರ್ವಹಿಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಮಾರ್ಗಾನ್ವೇಷಣೆಯ ಸೈನ್ಯ ತುಕಡಿಯ ಮುಂದಾಳತ್ವ ವಹಿಸಿಕೊಂಡು ನಿರ್ವಹಿಸಿದ್ದಾರೆ.

ಉ) ಮೊದಲು ವಾಪಸ್ಸು ಮಾಡಬೇಕಾದ ಮುಂಗಡ – "ವಿಶೇಷ ಮುಗಡಗಳು" ಎಂಬ ಶೀರ್ಷಿಕೆಯಲ್ಲಿ ವೆಚ್ಚವನ್ನು ನಮೂದಿಸಲಾಗುತ್ತಿತ್ತು. ಗಣಿ ಉದ್ಯಮಿಗಳಿಂದ ಬಂದ ವಸೂಲಿ ಹಣವನ್ನು "xxxvi – ವಿವಿಧ ಬಗೆಯ ಇಲಾಖೆಗಳು" ಎಂಬ ಶೀರ್ಷಿಕೆಯಲ್ಲಿ ಜಮಾಮಾಡಲಾಗುತ್ತಿತ್ತು, ತಗುಲಿದ ವೆಚ್ಚ ಮತ್ತು ವಸೂಲಿಯಾದ ಹಣಗಳ ಮಧ್ಯೆ ಸಂಭವಿಸುತ್ತಿದ್ದ

ನಷ್ಟಗಳನ್ನು ಕಲ್ಲಿದ್ದಲು ಉತ್ಪನ್ನ ನಿಧಿಯಿಂದ ಪರಿಹಿರಿಸಿಕೊಳ್ಳಲಾಗುತ್ತಿತ್ತು. ಲೆಕ್ಕಪತ್ರಗಳ ಅಥವಾ ಲೆಕ್ಕಪರಿಶೋಧನೆಯಲ್ಲಿನ ಅಕ್ರಮಗಳು ಯಾವುವೂ ಇದುವರೆಗೆ ಬೆಳಕಿಗೆ ಬಂದಿಲ್ಲ.

## ೨೭೬
## ವಿಧಾನಸಭೆ ಮತ್ತು ವಿಧಾನಪರಿಷತ್ತುಗಳ ಚರ್ಚೆಗಳ (೧೯೪೪ರ ಶರತ್ಕಾಲದ ಅಧಿವೇಶನ) ವಿಳಂಬ ಪ್ರಕಟಣೆಯಲ್ಲಿ ವಿಳಂಬ *

೧೩. **ಶ್ರೀ ಅನಂಗ ಮೋಹನ್ ದಾಮ್ :** ಮಾನ್ಯ ಸದನದ ನೇತಾರರು ದಯಮಾಡಿ ಈ ವಿಷಯಗಳ ಬಗ್ಗೆ ತಿಳಿಸಿ: ಅ) ವಿಧಾನಸಭೆ ಮತ್ತು ವಿಧಾನಪರಿಷತ್ ಚರ್ಚೆಗಳ (ಶರತ್ಕಾಲದ ಅಧಿವೇಶನ ೧೯೪೪) ಪ್ರಕಟಣೆ, ಮಾರಾಟಕ್ಕೆ ಮಾನ್ಯ ಸದಸ್ಯರು ನಿಗದಿಪಡಿಸಿದ್ದ ಹಾಗೂ ವಾಸ್ತವಾಗಿ ನಡೆದ ದಿನಾಂಕಗಳು.

ಆ) ಈ ಚರ್ಚೆಗಳ ವಿಳಂಬ ಪ್ರಕಟಣೆಗೆ ಕಾರಣಗಳು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಲಗತ್ತಿಸಿರುವ ಹೇಳಿಕೆಯಲ್ಲಿ * ಮಾಹಿತಿಯನ್ನು ಕೊಡಲಾಗಿದೆ.

ಆ) ಚರ್ಚೆಗಳ ವಿಳಂಬ ಪ್ರಕಟಣೆಗೆ ಅನೇಕ ಕಾರಣಗಳುಂಟು. ಉದಾಹರಣೆಗೆ ಯುದ್ಧದ ಚಲನವಲನ, ಕೆಲಸದ ಗಡಿಬಿಡಿ, ಬಿಡಿ ಭಾಗಗಳ ಮರುಬೇಡಿಕೆಯ ಅಭಾವದಿಂದ ಯಂತ್ರಗಳ ಕೆಲಸದಲ್ಲಿ ಅಡಚಣೆ, ಸೂಕ್ತ ವ್ಯಕ್ತಿಗಳ ಕೊರತೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೧ ಫೆಬ್ರವರಿ ೧೯೪೫. ಪುಟ ೬೩೦

** ಹೇಳಿಕೆಯನ್ನು ಕೈಬಿಡಲಾಗಿದೆ.

# ೨೭೭
# ಕಲ್ಕತ್ತದ ರೈಲ್ವೆ ಕಾರ್ಮಿಕ ಮೇಲ್ವಿಚಾರಕರ ವಾರ್ಷಿಕ ವರದಿಗಳು *

**೫೩೨. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರನೀಡಿ :

ಅ) ಕಲ್ಕತ್ತದ ರೈಲ್ವೆ ಕಾರ್ಮಿಕ ಮೇಲ್ವಿಚಾರಕರು (೧) ವೇತನ ನೀಡಿಕೆಯ ಶಾಸನ ಮತ್ತು (೨) ೧೯೪೦–೪೧ರ ತರುವಾಯ ಉದ್ಯೋಗ ನಿಯತಕಾಲಗಳ ನಿರ್ವಹಣೆ ಕಾರ್ಯಗಳನ್ನು ಕುರಿತು ವಾರ್ಷಿಕ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಯೆ? ಸಲ್ಲಿಸಿದ್ದರೆ, ಈ ವರದಿಗಳು ಸಮಗ್ರವಾಗಿ ಅಥವಾ ಅಂತಿಮವಾಗಿ ಪ್ರಕಟವಾಗಿವೆಯೆ? ಮಾನ್ಯ ಸದಸ್ಯರು ಅದರ ಪ್ರತಿಗಳನ್ನು ಸದನದ ಮುಂದೆ ಮಂಡಿಸುವರೆ?

ಆ) ಮೇಲಿನ ಪ್ರಶ್ನೆಯ ಕೊನೆಯ ಭಾಗಕ್ಕೆ ಉತ್ತರ ನೇತ್ಯಾತ್ಮಕವಾಗಿದ್ದರೆ, ಕೋಷ್ಟಕದ ಅರ್ಜಿ ನಮೂನೆಯಲ್ಲಿ ೧೯೪೧–೪೨, ೧೯೪೨–೪೩, ಮತ್ತು ೧೯೪೩–೪೪ ಆರ್ಥಿಕ ವರ್ಷಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಮಾಹಿತಿಯನ್ನು ಕಳಿಸಿಕೊಡುವಂತೆ ಪ್ರತಿಯೊಂದು ರೈಲ್ವೆಗೂ ಸೂಚಿಸುವರೆ?

೧. ರೈಲ್ವೆ ಸಿಬ್ಬಂದಿಯ ಮೇಲೆ ಹೇರಿದ ದಂಡದ ಮೊತ್ತ.
೨. ದಂಡ ಹೇರಿದ ಘಟನೆಗಳ ಒಟ್ಟು ಸಂಖ್ಯೆ.
೩. ವೇತನ ನೀಡಿಕೆ ಶಾಸನದ ಅನುಷ್ಠಾನದಲ್ಲಿ ಕಂಡುಹಿಡಿಯಲಾದ ಅಕ್ರಮಗಳ ಒಟ್ಟು ಸಂಖ್ಯೆ.
೪. ಕೆಲಸದ ಸಮಯದ ನಿಯಂತ್ರಣದ ನಿಯಮಗಳ ಅನುಷ್ಠಾನದ ಕಾಲದಲ್ಲಿ ಕಂಡುಹಿಡಿಯಲಾದ ಅಕ್ರಮಗಳ ಒಟ್ಟು ಸಂಖ್ಯೆ.
೫. ಅಂಥ ಅಕ್ರಮಗಳು ಮತ್ತೆ ಜರುಗದಂತೆ ತಡೆಯಲು ವಿವಿಧ ರೈಲ್ವೆ ಆಡಳಿತಗಳಿಗೆ ಕಳಿಸಿಕೊಟ್ಟ ತಾಕೀತಿನ ರೀತಿ.
೬. ಮೇಲ್ವಿಚಾರಕರು ಮತ್ತು ರೈಲ್ವೆ ಆಡಳಿತ ಅಥವಾ ಮಂಡಲಿಯ ಮಧ್ಯೆ ಉಂಟಾದ ಅಭಿಪ್ರಾಯ ಘರ್ಷಣೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಕಾರ್ಮಿಕ ಇಲಾಖೆಗೆ ಕಾರ್ಮಿಕ ಮೇಲ್ವಿಚಾರಕರು ಸಲ್ಲಿಸಿದ ಮನವಿಗಳು.
೭. ಪ್ರಶ್ನೆ (೬)ರಲ್ಲಿ ಗಮನ ಸೆಳೆದ ಅಂಶಗಳಿಗೆ ತೆಗೆದುಕೊಂಡ ನಿರ್ಧಾರ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೪೦–೪೧ರಿಂದ ವೇತನ ನೀಡಿಕೆ ಶಾಸನದ ಅನುಷ್ಠಾನ ಮತ್ತು ೧೯೪೧–೪೨ ಹಾಗೂ ೧೯೪೨–೪೩ನೇ ವರ್ಷಗಳ ಕೆಲಸದ ಸಮಯದ ನಿಯಂತ್ರಣದ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಸಮನ್ವಯಾಧಿಕಾರಿ (ರೈಲ್ವೆ) ಮತ್ತು ರೈಲ್ವೆ ಕಾರ್ಮಿಕ ಮೇಲ್ವಿಚಾರಕರು ವಾರ್ಷಿಕ ವರದಿಗಳನ್ನು ಸಲ್ಲಿಸಿದ್ದಾರೆ. ೧೦ ಫೆಬ್ರವರಿ ೧೯೪೪ರಂದು ಮಾನ್ಯ ಸದಸ್ಯರ ನಕ್ಷತ್ರಚಿಹ್ನೆರಹಿತ ೪೩ನೇ ಪ್ರಶ್ನೆಗೆ ನಾನು ನೀಡಿದ ಉತ್ತರದಲ್ಲಿ ತಿಳಿಸಿದಂತೆ ಕಾಗದದ ತೀವ್ರ ಕೊರತೆಯ ಕಾರಣದಿಂದಾಗಿ ಸರ್ಕಾರ ಈ ವರದಿಗಳನ್ನು ಪ್ರಕಟಿಸಬಾರದೆಂದು ನಿರ್ಧರಿಸಿತು. ಆದಾಗ್ಯೂ ೧೯೪೨–೪೩ನೇ ವರ್ಷದ ವರದಿಗಳಿಗೆ ಸಂಬಂಧಿಸಿದಂತೆ ಮುಂದೆ ಅನುಕೂಲ ಒದಗಿದಾಗ ಮೊದಲಿನಂತೆ ಪ್ರಕಟಣೆಗೆ ತೊಡಗುವತನಕ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೧ ಫೆಬ್ರವರಿ ೧೯೪೫. ಪುಟ ೭೯೭

ಪತ್ರಿಕಾ ಟಿಪ್ಪಣಿಯನ್ನು ನೀಡಬೇಕೆಂದು ನಿರ್ಧರಿಸಿದೆ.
ಆ) ದೊರಕುವ ಮಾಹಿತಿಗಳನ್ನು ಸಂಗ್ರಹಿಸಿ, ಮುಂದೆ ಹೇಳಿಕೆಯನ್ನು ಸದನದಲ್ಲಿ ಮಂಡಿಸಲಾಗುವುದು.

## ೨೭೮
## ತ್ರಿಪಕ್ಷೀಯ (ಕಾರ್ಮಿಕ) ಸಮ್ಮೇಳನಗಳಿಗೆ ಉದ್ಯೋಗಿಗಳ ನಿಯೋಗ ರಚನೆ *

**೫೩೩. ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ತ್ರಿಪಕ್ಷೀಯ (ಕಾರ್ಮಿಕ) ಸಮ್ಮೇಳನಗಳಿಗೆ ಉದ್ಯೋಗಿಗಳ ನಿಯೋಗ ರಚನೆಯಾಗಿದೆಯೆ? ಅಥವಾ ಕೆಳಗಿನ ಪ್ರತಿನಿಧಿಗಳನ್ನೊಳಗೊಂಡ ಸ್ಥಾಯಿ ಸಮಿತಿ ರಚನೆಯಾಗಿದೆಯೆ?

೧) ಭಾರತೀಯ ಕಾರ್ಮಿಕ ಸಂಯುಕ್ತ ಸಂಘ.

೨) ಅಖಿಲ ಭಾರತ ವಾಣಿಜ್ಯ ಒಕ್ಕೂಟ ಪರಿಷತ್ತು.

೩) ಇನ್ನಿತರ ಕಾರ್ಮಿಕರು.

ಆ) ಇನ್ನಿತರ ಕಾರ್ಮಿಕರು ಎಂಬ ಮೂರನೆಯ ವರ್ಗದಲ್ಲಿ ಯಾವ ಕೈಗಾರಿಕೆಗಳ ಕಾರ್ಮಿಕರು ಸೇರ್ಪಡೆಯಾಗಿರುತ್ತಾರೆ? ಪ್ರತಿನಿಧಿಗಳನ್ನು ಹೇಗೆ ಚುನಾಯಿಸಲಾಗುತ್ತದೆ ಅಥವಾ ನಾಮಕರಣ ಮಾಡಲಾಗುತ್ತದೆ?

ಇ) 'ಇನ್ನಿತರ ಕಾರ್ಮಿಕರು' ಗುಂಪಿನಲ್ಲಿ ಪ್ರತಿನಿಧಿಗಳನ್ನು ಸರ್ಕಾರ ನಾಮಕರಣ ಮಾಡುವುದಾದರೆ, ಈ ಪದ್ಧತಿಯನ್ನು ನಿಲ್ಲಿಸುವ ಸೂಚನೆ ಏನಾದರೂ ಇದೆಯೆ? ಇಲ್ಲದಿದ್ದರೆ, ಏಕೆ?

ಈ) ಯಾವ ಆಧಾರ ಮತ್ತು ಪರಿಗಣನೆಯ ಮೇರೆಗೆ ಸರ್ಕಾರ ಈ ಪ್ರತಿನಿಧಿಗಳನ್ನು ನಾಮಕರಣ ಮಾಡುತ್ತದೆ? ಆ ನಾಮಕರಣದಲ್ಲಿ ಪ್ರಾಂತೀಯ ಸರ್ಕಾರಗಳ ಕೈವಾಡವೇನಾದರೂ ಇದೆಯೆ? ಇದ್ದರೆ, ಎಷ್ಟು ಪ್ರಮಾಣದಲ್ಲಿ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) (ಇ) (ಈ) : ಅಖಿಲ ಭಾರತ ಸಂಸ್ಥೆಗಳಲ್ಲಿ – ಭಾರತೀಯ ಕಾರ್ಮಿಕ ಸಂಘ ಮತ್ತು ಅಖಿಲ ಭಾರತ ವಾಣಿಜ್ಯ ಒಕ್ಕೂಟ ಪರಿಷತ್ತುಗಳು – ಕಾರ್ಮಿಕ ಆಸಕ್ತಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರತಿನಿಧಿಸುವುದಿಲ್ಲ ಎಂಬ ಕಾರಣದಿಂದ 'ಇನ್ನಿತರ ಕಾರ್ಮಿಕರು' ಗುಂಪನ್ನು ಮಾಡಲಾಗಿದೆ. ಪ್ರಾಂತೀಯ ಸರ್ಕಾರಗಳ ಸಲಹೆಗಳನ್ನು ಪರಿಶೀಲಿಸಿದ ಮೇಲೆ ಭಾರತ ಸರ್ಕಾರ ನಾಮಕರಣಗಳನ್ನು ಮಾಡುತ್ತದೆ. ಕನಿಷ್ಠ ಪಕ್ಷ, ಸದ್ಯದಲ್ಲಂತೂ ಈ ಪದ್ಧತಿಯನ್ನು ನಿಲ್ಲಿಸುವ ಉದ್ದೇಶವಿಲ್ಲ. ದೇಶದಲ್ಲಿ ಕಾರ್ಮಿಕ ಸಂಘಟನೆಗಳು ಅಭಿವೃದ್ಧಿ ಹೊಂದಬೇಕಾದ ಹಂತದಲ್ಲಿ ಇಂಥ ನಾಮಕರಣಗಳು ಆವಶ್ಯಕ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೭೯೮

## ೨೭೯
## ಜಲವಿದ್ಯುತ್ ಯೋಜನೆಗಳು *

**೫೩೯. ಶ್ರೀ ಮನುಸುಬೇದಾರ್ :** ಅ) ಪ್ರಸಕ್ತ ಭಾರತದಲ್ಲಿ ಎಷ್ಟು ಜಲವಿದ್ಯುತ್ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುತ್ತಾರೆಯೇ?
ಆ) ಅವುಗಳಿಂದ ಉತ್ಪಾದನೆಯಾಗುವ ವಿದ್ಯುತ್ತಿನ ಮೊತ್ತವೆಷ್ಟು?
ಇ) ಈ ವಿದ್ಯುತ್ತಿನ ಎಷ್ಟು ಭಾಗ ಕೈಗಾರಿಕಾ ಉದ್ದೇಶಕ್ಕೆ ಬಳಕೆಯಾಗುತ್ತಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಖಾಸಗಿಯ, ಕೈಗಾರಿಕೆಯ ಮತ್ತು ಸೈನ್ಯದ ಸ್ಥಾವರಗಳನ್ನು ಬಿಟ್ಟರೆ ಕೇವಲ ೩೪.
ಆ) ಪ್ರತಿಯೊಂದು ವಿದ್ಯುತ್ ಉತ್ಪಾದನಾ ಕೇಂದ್ರದ ಮಾಹಿತಿಯನ್ನು ಪ್ರತ್ಯೇಕವಾಗಿ ಕೊಡಲು ಸಾಧ್ಯವಾಗುವುದಿಲ್ಲ. ಎಲ್ಲ ಕೇಂದ್ರಗಳಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಮೊತ್ತ ಹೆಚ್ಚೂ ಕಡಿಮೆ ೧೯೮೩ ಮಿಲಿಯನ್ ಕೆ.ಡಬ್ಲ್ಯೂ.ಎಚ್.
ಇ) ಸುಮಾರು ಶೇಕಡ ೫೬.

## ೨೮೦
## ಜಲವಿದ್ಯುತ್ ಯೋಜನೆಗಳು **

**೫೪೦. ಶ್ರೀ ಮನುಸುಬೇದಾರ್ :** ಅ) ಇನ್ನೆಷ್ಟು ಬೇರೆಯ ಜಲವಿದ್ಯುತ್ ಯೋಜನೆಗಳು ಪರಿಶೀಲನೆಯಲ್ಲಿವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೇ?

ಆ) ಅವುಗಳಲ್ಲಿ ಎಷ್ಟು (೧) ಭಾರತ ಸರ್ಕಾರದಿಂದ (೨) ಪ್ರಾಂತೀಯ ಸರ್ಕಾರಗಳಿಂದ (೩) ಭಾರತೀಯ ಸಂಸ್ಥಾನಗಳಿಂದ ನಿರ್ವಹಣೆಗೊಳ್ಳುತ್ತವೆ?

ಇ) ಈ ಯೋಜನೆಗಳ ಒಟ್ಟು ಅಶ್ವಶಕ್ತಿ ಎಷ್ಟು?

ಈ) ಅವುಗಳಲ್ಲಿ ಈಗಾಗಲೇ ಎಷ್ಟು ಯೋಜನೆಗಳು ಭಾರತ ಸರ್ಕಾರದಿಂದ ಮಂಜೂರಾತಿ ಪಡೆದಿವೆ?

ಉ) ಅವುಗಳಲ್ಲಿ, ಖರೀದಿಯ ಆದೇಶದ ಮೇಲೆ ಮತ್ತು ಮಾತುಕತೆಯ ಮೂಲಕ ಬಂದ ಯಂತ್ರೋಪಕರಣಗಳ ಪಾಲು ಎಷ್ಟು?

ಊ) ಅವು ಕಾರ್ಯಾರಂಭಮಾಡುವ ಅಂದಾಜು ತಾರೀಖು ಯಾವುದು?

ಋ) ಈ ಯೋಜನೆಗಳಲ್ಲಿ ಯಾವುದು ಮೊದಲು ಅಸ್ತಿತ್ವಕ್ಕೆ ಬರುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ)ಅಧಿಕ ಪ್ರಮಾಣದ ಯೋಜನೆಗಳನ್ನು ಇತ್ತೀಚೆಗಷ್ಟೆ ಪರಿಶೀಲನೆ ಮಾಡಲಾಯಿತು. ಅವುಗಳಲ್ಲಿ ಬಹುತೇಕ ಪರಿಶೀಲನೆಯ ಬೇರೆ ಬೇರೆ ಹಂತಗಳಲ್ಲಿವೆ. ೩೧

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೦೪

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೦೫

ಸ್ಥಾವರಗಳ ಅಗತ್ಯಗಳನ್ನು ಸರ್ಕಾರದ ಕಾರ್ಯದರ್ಶಿಯ ಗಮನಕ್ಕೆ ತರಲಾಗಿದೆ.

ಆ) (೧) ಪ್ರಸಕ್ತ ಸಂವಿಧಾನದ ಪ್ರಕಾರ, ಜಲವಿದ್ಯುತ್ ಯೋಜನೆಗಳ ಅಭಿವೃದ್ಧಿ ಪ್ರಾಂತೀಯ ಸರ್ಕಾರಗಳ ಕಕ್ಷೆಯೊಳಗೆ ಬರುತ್ತದೆ. ಆದಾಗ್ಯೂ ವಿದ್ಯುತ್ ಅಭಿವೃದ್ಧಿ ಯೋಜನೆಗಳ ಪ್ರಾರಂಭಕ್ಕೆ ಸಂಘಟನೆಗೆ ಮತ್ತು ಮುಂದುವರಿಕೆಗೆಂದೇ ಇತ್ತೀಚೆಗೆ ಸ್ಥಾಪಿಸಿದ ಕೇಂದ್ರ ತಾಂತ್ರಿಕ ವಿದ್ಯುತ್ ಮಂಡಲಿಯ ಮೂಲಕ ಮನವಿ ಸಲ್ಲಿಸಿದರೆ ಅವರಿಗೆ ಭಾರತ ಸರ್ಕಾರ ನೆರವು ನೀಡಲು ಸಿದ್ಧವಾಗಿದೆ.

(೨) ಮತ್ತು (೩) ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಹೆಸರಿಸಲಾದ ೩೧ ಯೋಜನೆಗಳಲ್ಲಿ ೧೪ ಪ್ರಾಂತೀಯ ಸರ್ಕಾರಗಳ ನಿರ್ವಹಣೆಗೆ ಒಳಪಟ್ಟಿವೆ, ೧೩ ಭಾರತೀಯ ಸಂಸ್ಥಾನಗಳಿಗೆ ಒಳಪಟ್ಟಿವೆ ಮತ್ತು ೪ ಖಾಸಗಿ ಸಂಸ್ಥೆಗಳಿಗೆ ಸೇರಿವೆ.

ಇ) ಹೆಚ್ಚೂ ಕಡಿಮೆ ೬,೭೦,೦೦೦ ಅಶ್ವಶಕ್ತಿ ವಿದ್ಯುತ್

ಈ) ೧೯೪೭ಕ್ಕೆ ಮುನ್ನ ಸ್ಥಾವರದ ಕಾರ್ಯ ಪೂರ್ಣಗೊಳ್ಳಲು ಯೋಜಿಸಿರುವ ೨೮ ಯೋಜನೆಗಳಿಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಮಂಜೂರಾತಿ ದೊರಕಿದೆ.

ಉ) ಏಳು.

ಊ) ೧೯೪೬ ಮತ್ತು ೧೯೪೯ರ ಕೊನೆಯ ಭಾಗಗಳಲ್ಲಿ.

ಋ) ಉತ್ತರ ಪ್ರದೇಶ ಸರ್ಕಾರದ ಮಹಮ್ಮದ್‌ಪುರ ಜಲವಿದ್ಯುತ್ ಯೋಜನೆಗಳು ಬಹುಶಃ ಯುದ್ಧಾನಂತರ ಕಾರ್ಯನಿರ್ವಹಿಸುವ ಮೊಟ್ಟ ಮೊದಲ ಯೋಜನೆ ಎನ್ನಬಹುದು.

**ಶ್ರೀ ಮನುಸುಬೇದಾರ್ :** ಜಲವಿದ್ಯುತ್ ಯೋಜನೆಗಾಗಿ ಪ್ರಾಂತ್ಯಗಳಿಂದ ಮತ್ತು ಸಂಸ್ಥಾನಗಳಿಂದ ಬಂದ ಮನವಿಗಳ ಬಗ್ಗೆ ಭಾರತ ಸರ್ಕಾರ ಅನಗತ್ಯ ಕಟ್ಟುನಿಟ್ಟಿನ ಧೋರಣೆ ತಾಳುತ್ತದೆ ಎಂಬುದು ನಿಜವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ವಿಷಯಕ್ಕೆ ಸಂಬಂಧಿಸಿದ ಅಗತ್ಯಗಳಿಗಿಂತ ಹೆಚ್ಚಾಗಿ ಬೇರೆ ಯಾವುದಕ್ಕೂ ಕಟ್ಟುನಿಟ್ಟಿನ ಪಟ್ಟುಹಿಡಿಯಲಾರರು ಎಂದು ನನ್ನ ಭಾವನೆ.

## ೨೮೧
## ವಿದ್ಯುತ್ ಆಯುಕ್ತರ ವರದಿ *

**೫೪೧. ಶ್ರೀ ಮನುಸುಬೇದಾರ್ :** ಅ) ವಿದ್ಯುತ್ ಆಯುಕ್ತರು ಭಾರತ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಸದನದ ಗ್ರಂಥಭಂಡಾರಗಳಲ್ಲಿ ಏಕೆ ಇಡಲಿಲ್ಲ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ವಿದ್ಯುತ್ತಿಗೆ ಸಂಬಂಧಿಸಿದಂತೆ ನೀತಿ ಸಮಿತಿ ವರದಿ ಸಲ್ಲಿಸಿದೆಯೆ?

ಇ) ಸಲ್ಲಿಸಿದ್ದರೆ, ವರದಿಯ ಪ್ರತಿಗಳು ಲೋಕಸಭಾ ಸದಸ್ಯರಿಗೆ ದೊರಕುವಂತೆ ಮಾಡುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ತಾಂತ್ರಿಕಶಕ್ತಿ ಸಮ್ಮೇಳನದ ನಡೆವಳಿಗಳನ್ನು ಕುರಿತಂತೆ ಬಹುಶಃ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ ಎನ್ನಿಸುತ್ತದೆ. ಏಕೆಂದರೆ ಅದರ ಅಧ್ಯಕ್ಷರು ವಿದ್ಯುತ್ ಆಯುಕ್ತರು. ಆ ವರದಿ ಮುದ್ರಣ ಹಂತದಲ್ಲಿದೆ. ಮುದ್ರಿತವಾದ ಕೂಡಲೇ ಅದರ ಪ್ರತಿಯನ್ನು ಸದನದ ಗ್ರಂಥಭಂಡಾರದಲ್ಲಿ ಇಡಲಾಗುವುದು.

ಆ) ಮತ್ತು (ಇ) ಪ್ರಶ್ನೆಯ ವಿಭಾಗಗಳು ಬಹುಶಃ ೧೯೪೫ರ ಫೆಬ್ರವರಿ ೨ರಂದು ಸೇರಿದ್ದ ನೀತಿ ಸಮಿತಿಯ ಎರಡನೆಯ ಸಭೆಯ ಕಾರ್ಯಕಲಾಪದ ಬಗ್ಗೆ ಕೇಳಲಾಗಿದೆಯೆಂದು ಭಾವಿಸುತ್ತೇನೆ. ಸಭೆಯ ದಾಖಲೆಯನ್ನು ಅಂತ್ಯರೂಪಕ್ಕೆ ತರಲಾಗುತ್ತಿದೆ. ಅದರ ಪ್ರತಿಗಳನ್ನು ಮುಂದೆ ಸದನದ ಗ್ರಂಥಭಂಡಾರದಲ್ಲಿ ಇಡಲಾಗುವುದು. ಮೊದಲನೆ ಸಭೆಯ ದಾಖಲೆ ಈಗಾಗಲೇ ಸದನದ ಗ್ರಂಥಭಂಡಾರದಲ್ಲಿ ದೊರಕುತ್ತಿದೆ.

## ೨೮೨
## ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಉದ್ಯೋಗಿಗಳು *

**೫೫೬. ಶ್ರೀ ಪ್ಯಾರೆಲಾಲ್ ಕುರೀಲ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿರಿ: ಅ) ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರುಗಳಾಗಿ, ಉಪವಿಭಾಗಾಧಿಕಾರಿಗಳಾಗಿ ಎಷ್ಟು ಜನ ಪರಿಶಿಷ್ಟ ಜಾತಿಯವರು ಖಾಯಂ ಹುದ್ದೆಯಲ್ಲಿದ್ದಾರೆ? ಎಷ್ಟು ಜನ ಹಂಗಾಮಿ ಹುದ್ದೆಯಲ್ಲಿದ್ದಾರೆ? ಕಾರ್ಯನ್ಯಾಸ ಸಿಬ್ಬಂದಿಗಳಲ್ಲಿ ಎಷ್ಟು ಜನ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಇದ್ದಾರೆ (Work Charge Staff) ಪ್ರತ್ಯೇಕವಾಗಿ ತಿಳಿಸಿ.

ಆ) ಪರಿಶಿಷ್ಟ ಜಾತಿಗೆ ಸಂಬಂಧಿಸಿದ ಹಂಗಾಮಿ ಅಧೀನ ಹುದ್ದೆಯ ನೌಕರರಲ್ಲಿ ಒಬ್ಬರನ್ನೂ ಸಹ ೧೯೪೪ರಲ್ಲಿ ಖಾಯಂಗೊಳಿಸಲಿಲ್ಲ ಎಂಬುದು ನಿಜವೆ?

ಇ) ಕೇಂದ್ರ ಲೋಕೋಪಯೋಗಿ ಇಲಾಖೆಯ ಖಾಯಂ ಸಿಬ್ಬಂದಿ ವರ್ಗದಲ್ಲಿ ಪರಿಶಿಷ್ಟ ಜಾತಿಯವರಿಗೂ ಸೂಕ್ತ ಪ್ರಾತಿನಿಧ್ಯ ಸಿಕ್ಕುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೦೪.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೧೨–೧೩.

ಕೈಗೊಳ್ಳಬಯಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) : ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿರುವ ಖಾಯಂ ಹಾಗೂ ಹಂಗಾಮಿ ಕಾರ್ಯನಿರ್ವಾಹಕ ಇಂಜಿನಿಯರುಗಳ ಸಂಖ್ಯೆ ಕ್ರಮವಾಗಿ ೧೨ ಮತ್ತು ೫೫. ಇಬ್ಬರು ಹಂಗಾಮಿ ಕಾರ್ಯನಿರ್ವಾಹಕ ಇಂಜಿನಿಯರುಗಳು ಪರಿಶಿಷ್ಟ ಜಾತಿಗೆ ಸೇರಿದವರು. ಖಾಯಂ ಕಾರ್ಯನಿರ್ವಾಹಕ ಇಂಜಿನಿಯರುಗಳಲ್ಲಿ ಆ ಜಾತಿಗೆ ಸೇರಿದವರು ಯಾರೂ ಇಲ್ಲ. ಕಾರ್ಯನ್ಯಾಸ ಸಿಬ್ಬಂದಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆ ಇಲ್ಲ.

ಮಾನ್ಯ ಸದಸ್ಯರಿಂದ ಬಯಸಲ್ಪಟ್ಟ ಉಳಿದ ಮಾಹಿತಿ ದೊರಕುತ್ತಿಲ್ಲ. ಅದನ್ನು ಸಂಗ್ರಹಿಸಿ ಆದಷ್ಟು ಜಾಗ್ರತೆ ಅವರಿಗೆ ಒದಗಿಸಲಾಗುವುದು.

ಇ) ಸಾರ್ವಜನಿಕ ಸೇವೆಗಳಲ್ಲಿ ಕೋಮು ಪ್ರಾತಿನಿಧ್ಯದ ನಿಯಮಾನುಸಾರ ಹನ್ನೆರಡು ಹುದ್ದೆಗಳ ಪೈಕಿ (ಬಡ್ತಿಯಿಂದ ತುಂಬಲ್ಪಟ್ಟ ಹುದ್ದೆಗಳನ್ನು ಬಿಟ್ಟು) ಒಂದು ಹುದ್ದೆಯನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿದೆ. ಕೇಂದ್ರ ಲೋಕೋಪಯೋಗಿ ಇಲಾಖೆಯ ಎಲ್ಲ ವರ್ಗದ ಹುದ್ದೆಗಳಿಗೂ ಈ ನಿಯಮ ಅನ್ವಯವಾಗುವುದರಿಂದ ಪರಿಶಿಷ್ಟ ಜಾತಿಯವರಿಗೆ ಆ ಇಲಾಖೆಯಲ್ಲಿ ಸೂಕ್ತ ಪ್ರಾತಿನಿಧ್ಯ ಸಿಕ್ಕುವಂತಾಗುತ್ತದೆ.

**ಡಾ॥ ಸರ್ ಜಿಯಾಉದ್ದೀನ್ ಅಹಮದ್ :** ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತ ವರ್ಗದಲ್ಲಿ ಪರಿಗಣಿಸಲ್ಪಟ್ಟು ಅವರ ಪಾಲು ಶೇಕಡ ೩೩ರ ಕಕ್ಷೆಯೊಳಗೆ ಸೇರಿಕೊಂಡಿದೆಯೆ ಎಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರದು ಪ್ರತ್ಯೇಕ ವರ್ಗ.

**ಸರ್ ಜಿಯಾಉದ್ದೀನ್ ಅಹಮದ್ :** ಅವರನ್ನು ಪ್ರತ್ಯೇಕ ವರ್ಗಕ್ಕೆ ಸೇರಿಸಿದರೆ, ಅಲ್ಪಸಂಖ್ಯಾತರಿಗೆ ಮೀಸಲಾಗಿರುವ ಶೇ. ೩೩ ಹೇಗೆ ಈ ವರ್ಗದಿಂದ ಬಾಧಿತವಾಗುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಬಾಧಿತವಾಗುವುದೇ ಇಲ್ಲ. ಇದು ಅದರಿಂದ ಹೊರತಾದದ್ದು.

## ೨೮೩

## ಕಲ್ಕತ್ತ ಮತ್ತು ಮುಂಬೈಗಳಿಗೆ ವರ್ಗವಾಗಿರುವ ಸರ್ಕಾರಿ ಅಧಿಕಾರಿಗಳ ನವದೆಹಲಿ ನಿವಾಸದ ಮೇಲಿನ ಸ್ವಾಧಿನದ ಹಕ್ಕುಗಳು *

**೫೬೪. ಸಯ್ಯದ್ ಗುಲಾಂ ಭಿಕ್ ನೈರಂಗ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರ ನೀಡಿ : ಅ) ನವದೆಹಲಿ ಸಿಮ್ಲಾಗಳಲ್ಲಿ ಸತತವಾಗಿ ನೇಮಕಗೊಂಡ ದಿನದಿಂದ ಎಣಿಕೆಗೊಂಡು ಸೇವಾಹಿರಿತನದ ಮೇಲೆ ನವದೆಹಲಿಯ ಸರ್ಕಾರಿ ನಿವಾಸಗಳನ್ನು ಸರ್ಕಾರಿ ಅಧಿಕಾರಿಗಳಿಗೆ ಹಂಚಲಾಗುತ್ತದೆ ಎಂಬುದು ನಿಜವೆ?

ಆ) ಅಂಥ ಅಧಿಕಾರಿಗಳು ಸಿಮ್ಲಾಕ್ಕೆ ವರ್ಗವಾದರೆ, ವರ್ಗದ ಅವಧಿಯಲ್ಲಿ ನವದೆಹಲಿಯ ನಿವಾಸಗಳ ಮೇಲೆ ಅವರಿಗೆ ಸ್ವಾಧೀನಾಧಿಕಾರ (Lien) ಇರುತ್ತದೆಯೆ?

ಇ) ಕಲ್ಕತ್ತದ ಶಾಖಾ ಸೆಕ್ರೆಟೇರಿಯಟ್‌ಗೆ ವರ್ಗವಾದ ಅಧಿಕಾರಿಗಳಿಗೂ ನವದೆಹಲಿಯ ನಿವಾಸಗಳ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ. ೧೭೧೮.

ಮೇಲಿನ ಸ್ವಾಧೀನಾಧಿಕಾರ ಇರುತ್ತದೆಯೆಂದೂ ಆದರೆ ಅದಕ್ಕೆ ಲಗತ್ತಿಸಿದ ಕಛೇರಿಗಳಿಗೆ ವರ್ಗವಾದವರಿಗೆ ಆ ಹಕ್ಕು ಇಲ್ಲವೆಂದೂ ಇತ್ತೀಚೆಗೆ ಸರ್ಕಾರ ನಿಯಮ ಮಾಡಿದೆ ಎಂಬುದು ದಿಟವೆ?

ಈ) ಕೇಂದ್ರ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಇಂಜಿನಿಯರ್ ಕಛೇರಿಯ ಸಿಬ್ಬಂದಿಯನ್ನು ಕಛೇರಿಯ ಜೊತೆಗೇ ಕಲ್ಕತ್ತಕ್ಕೆ ವರ್ಗಾಯಿಸಿದಾಗ, ಅಂಥವರಿಗೆ ನವದೆಹಲಿಯ ನಿವಾಸದ ಮೇಲಿನ ಸ್ವಾಧೀನಾಧಿಕಾರ ಇರುತ್ತದೆಯೆ? ಅವರು ಮತ್ತೆ ದೆಹಲಿಗೆ ವರ್ಗವಾಗಿ ಬಂದಾಗ ಅವುಗಳನ್ನು ಅವರಿಗೆ ಕೊಡಲಾಗುತ್ತದೆ ಎಂಬುದು ಸತ್ಯವೆ?

ಉ) ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ಸತತವಾಗಿ ಸೇವೆ ಸಲ್ಲಿಸಿದ ಕೆಲವರನ್ನು ಸಿಮ್ಲಾ ಬಿಟ್ಟು ಬೇರೆ ಬೇರೆ ಕಡೆ ವರ್ಗ ಮಾಡಿದ್ದರಿಂದ ಸೇವೆಯಲ್ಲಿ ಉಂಟಾದ ಭಂಗವನ್ನು ಅವರು ಮತ್ತೆ ಮತ್ತೆ ದೆಹಲಿಗೆ ವರ್ಗವಾದಾಗ ಮಾಫಿ ಮಾಡಲಾಗುವುದು ಎಂಬ ಸಂಗತಿ ವಾಸ್ತವವೆ?

ಊ) ದೆಹಲಿಯಿಂದ ಕಲ್ಕತ್ತ, ಮುಂಬೈ ಮೊದಲಾದ ಸ್ಥಳಗಳಿಗೆ ವರ್ಗವಾಗಿ ಹೋದ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ, ಅವರ ನವದೆಹಲಿಯ ನಿವಾಸಗಳ ಮೇಲೆ ಸ್ವಾಧೀನಾಧಿಕಾರ ಇರುವುದಿಲ್ಲವೆಂದೂ, ಅವರು ನವದೆಹಲಿಗೆ ವರ್ಗವಾಗಿ ಬಂದ ಮೇಲೂ, ಹಂಚಿಕೆಯ ಉದ್ದೇಶಕ್ಕಾಗಿ, ಸತತವಾಗಿ ಸೇವೆಯಲ್ಲಿ ಇದ್ದವರೆಂದು ಪರಿಗಣಿಸುವುದಿಕ್ಕೆ ಆಗುವುದಿಲ್ಲವೆಂಬುದು ನಿಜವೇ?

ಋ) ಅಂಥ ಅಧಿಕಾರಿಗಳಿಗೆ (ಇ) ಮತ್ತು (ಉ) ಭಾಗದಲ್ಲಿ ಅಧಿಕಾರಿಗಳಿಗೆ ನೀಡುವ ರಿಯಾಯಿತಿಗಳನ್ನೇ ನೀಡಲು ಸರ್ಕಾರ ಪರಿಶೀಲಿಸುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು ಆ) ೧೦ ನವೆಂಬರ್ ೧೯೪೨ರಂದು ಅಥವಾ ಮುಂಚೆ ಸಿಮ್ಲಾಕ್ಕೆ ವರ್ಗವಾದ ಅಧಿಕಾರಿಗಳಿಗೆ ನವದೆಹಲಿಯ ನಿವಾಸಗಳ ಮೇಲೆ ಹಕ್ಕಿರುತ್ತದೆ. ಆದರೆ ಆ ತಾರೀಖಿನ ನಂತರ ಸಿಮ್ಲಾಕ್ಕೆ ವರ್ಗವಾದವರಿಗೆ ಒಂದು ವರ್ಷದ ತನಕ ದೆಹಲಿ ನಿವಾಸಗಳ ಮೇಲೆ ಹಕ್ಕಿರುತ್ತದೆ.

ಇ) ಹೌದು.

ಈ) ಕೇಂದ್ರ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಇಂಜಿನಿಯರ್ ಕಛೇರಿಯ ಸಿಬ್ಬಂದಿಗಳಲ್ಲಿ ಇಬ್ಬರಿಗೆ ದೆಹಲಿಯ ನಿವಾಸಗಳನ್ನು ಒಂದು ವರ್ಷಕ್ಕಿಂತ ಕಡಿಮೆ ಅವಧಿಯವರೆಗೆ. ಉಳಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಉ) ಹೌದು. ಅಂಥ ಸಂದರ್ಭದಲ್ಲಿ ಗಡುವು ಒಂದು ವರ್ಷದೊಳಗಿರಬೇಕು.

ಊ) ಸಂಬಂಧಿಸಿದ ಇಲಾಖೆಗಳು ಒಂದು ವರ್ಷದೊಳಗಾಗಿ ಮತ್ತೆ ಆ ಅಧಿಕಾರಿಗಳು ದೆಹಲಿಗೆ ಹಿಂದಿರುಗುತ್ತಾರೆ ಎಂಬ ಪ್ರಮಾಣಪತ್ರ ನೀಡಿದರೆ ಕೇಂದ್ರ ಸರ್ಕಾರದ ಅಧಿಕಾರಿಗಳು ದೆಹಲಿಯ ನಿವಾಸಗಳ ಮೇಲಿನ ಹಕ್ಕನ್ನು ಉಳಿಸಿಕೊಳ್ಳಲು ಅವಕಾಶ ಕೊಡಲಾಗುವುದು.

ಋ) ಪ್ರಶ್ನೆ (ಊ)ಗೆ ಕೊಟ್ಟ ಉತ್ತರದ ಹಿನ್ನೆಲೆಯಲ್ಲಿ ಇದು ಉದ್ಭವಿಸುವುದಿಲ್ಲ.

# ೨೮೪
# ಕಲ್ಲಿದ್ದಲು ಗಣಿಗಳ ಮೇಲೆ ಉತ್ಪನ್ನದ ತೆರಿಗೆ*

**೫೬೫. ಪ್ರೊ॥ ಎನ್.ಜಿ. ರಂಗ :** ಅ) ಬ್ರಿಟಿಷ್ ಭಾರತದಲ್ಲಿ ಗಣಿಗಳಿಂದ ಹೊರ ಸಾಗಿಸಿದ ಕಲ್ಲಿದ್ದಲ ಭಾಗಕ್ಕೆ ರೂ. ೧–೪–೦ ಉತ್ಪನ್ನ ತೆರಿಗೆಯನ್ನು ಸರ್ಕಾರ ವಿಧಿಸುತ್ತಿದೆಯೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಗೋರಖ್‌ಪುರ, ಬಲ್ಲಿಯಾ ಮತ್ತು ಸಂಯುಕ್ತ ಪ್ರಾಂತ್ಯಗಳ ಬೇರೆ ಬೇರೆ ಜಿಲ್ಲೆಗಳಿಂದ ಅನನುಭವಿ, ಅಕುಶಲ ಕಾರ್ಮಿಕರನ್ನು ಹೊಸದಾಗಿ ನೇಮಿಸಿಕೊಂಡು, ಅವರ ಉಸ್ತುವಾರಿಯ ಖರ್ಚನ್ನು ಈ ಉತ್ಪನ್ನ ತೆರಿಗೆಯ ಮೂಲಕ ಸರಿದೂಗಿಸಿಕೊಳ್ಳುತ್ತಿದೆಯೆ?

ಇ) ಕಾರ್ಮಿಕರು (ಮಹಿಳೆಯರೂ ಸೇರಿದಂತೆ) ಸಹಿಮಾಡಬೇಕಾದ ಒಪ್ಪಂದದ ಅರ್ಜಿ ಯಾವುದು? ಕಾರ್ಮಿಕರ ನೇಮಕಾತಿಯ ಆಜ್ಞೆಯನ್ನು ಮತ್ತು ಅವರ ಒಪ್ಪಂದ ಅರ್ಜಿಯ ಮಾದರಿಯನ್ನು ಸರ್ಕಾರ ಸದನದ ಮುಂದೆ ಇಡುವುದೆ?

ಈ) ಅವರ ನೇಮಕಾತಿಯ ವ್ಯವಸ್ಥೆ ಯಾವುದು?

ಉ) ಅವರು ಸದಾ ಎಲ್ಲಿ ನೆಲೆಗೊಂಡಿರುತ್ತಾರೆ?

ಊ) ೧೯೪೪ರ ಡಿಸೆಂಬರ್ ೩೧ರಂದು ಬೇರೆ ಬೇರೆ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಸಂಖ್ಯೆ ಎಷ್ಟು?

ಋ) ಅವರಿಗೆ ಪ್ರತ್ಯೇಕ ಶಿಬಿರಗಳನ್ನು ಸ್ಥಾಪಿಸಲಾಗಿದೆಯೆ? ಹಾಗೆ ಸ್ಥಾಪಿಸಿದ್ದರೆ ಅಲ್ಲಿ ಸ್ನಾನದ ಮನೆ ಮತ್ತು ಶೌಚಾಲಯಗಳ ಸೌಕರ್ಯವನ್ನು ಕಲ್ಪಿಸಲಾಗಿದೆಯೆ?

ೠ) ಇಲ್ಲಿಯವರೆಗೆ ಎಷ್ಟು ತಂಡಗಳನ್ನು ಕಳಿಸಲಾಗಿದೆ? ಅವರ ಸಂಖ್ಯಾಬಾಹುಳ್ಯವೆಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಪ್ರಾರಂಭದಲ್ಲಿ ವೆಚ್ಚವನ್ನು ಸರ್ಕಾರ ಭರಿಸುತ್ತಿತ್ತು. ಅದರ ಕೊಂಚ ಭಾಗವನ್ನು ಗಣಿ ಧಣಿಗಳಿಂದ ವಸೂಲಿ ಮಾಡಲಾಗುತ್ತಿತ್ತು. ಉಳಿದ ಬಾಕಿಯನ್ನು ಉತ್ಪನ್ನ ತೆರಿಗೆ ನಿಧಿಯಿಂದ ಸರಿದೂಗಿಸಲಾಗುತ್ತಿತ್ತು.

ಇ) ಆರು ಅಥವಾ ಹನ್ನೆರಡು ತಿಂಗಳವರೆಗೆ ಸೇವೆ ಸಲ್ಲಿಸುತ್ತೇನೆಂದು ಬಾಯಿ ಮಾತಿನ ಒಪ್ಪಿಗೆಯ ಮೇಲೆ ನೇಮಿಸಿಕೊಳ್ಳಲಾಗುವುದೇ ವಿನಾ ಕೆಲಸಗಾರರು ಯಾವುದೇ ಒಪ್ಪಂದ ಅರ್ಜಿಯಲ್ಲಿ ಸಹಿ ಮಾಡಬೇಕಾದ ಪದ್ಧತಿ ಇಲ್ಲ.

ಈ) ಸಂಯುಕ್ತ ಪ್ರಾಂತ್ಯ ಸರ್ಕಾರ ನಡೆಸುತ್ತಿರುವ ಗೋರಖ್‌ಪುರ ಕಾರ್ಮಿಕ ಸರಬರಾಜು ಸಂಸ್ಥೆ.

ಉ) ಬಂಗಾಳ ಮತ್ತು ಬಿಹಾರ ಕಲ್ಲಿದ್ದಲು ಗಣಿಗಳು ಮತ್ತು ಹೈದರಾಬಾದಿನಲ್ಲಿರುವ ಸಿಂಗರೇಣಿ ಕಲ್ಲಿದ್ದಲು ಗಣಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೧೮–೧೯

ಊ) ೧. ಬಂಗಾಳ ಬಿಹಾರ ಕಲ್ಲಿದ್ದಲು ಗಣಿಗಳು : ೧೫,೪೦೦
೨. ಸಿಂಗರೇಣಿ ಕಲ್ಲಿದ್ದಲು ಗಣಿ : ೨,೫೦೦

ಋ) ಹೌದು, ಬಹುತೇಕ ಶಿಬಿರಗಳಲ್ಲಿ ಶೌಚಾಲಯಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ. ತ್ವರಿತದಲ್ಲೇ ಉಳಿದೆಲ್ಲ ಕಡೆ ಕಲ್ಪಿಸುವ ಯೋಚನೆಯಿದೆ. ಆದರೆ ಸ್ನಾನದ ಮನೆಗಳಿಲ್ಲ. ಸಾಕಷ್ಟು ನೀರು ಸರಬರಾಜನ್ನು ಒಂದಲ್ಲ ಒಂದು ವಿಧದಲ್ಲಿ ಒದಗಿಸಲಾಗುವುದು.

ೠ) ಕಳಿಸಿದ ಕಾರ್ಮಿಕರ ಒಟ್ಟು ಸಂಖ್ಯೆ :
ಬಂಗಾಳ ಬಿಹಾರ ಕಲ್ಲಿದ್ದಲು ಗಣಿಗಳು : ೩೭,೦೦೦
ಸಿಂಗರೇಣಿ ಕಲ್ಲಿದ್ದಲು ಗಣಿಗಳು : ೫,೦೦೦

## ೨೮೫
## ಕಲ್ಲಿದ್ದಲು ಗಣಿಯ ಕಾರ್ಮಿಕರ ಶಿಬಿರಗಳಲ್ಲಿ ವೈದ್ಯಕೀಯ ನೆರವು*

**೫೬೬. ಪ್ರೊ॥ ಎಸ್.ಜಿ. ರಂಗ :** ಅ) ಕಲ್ಲಿದ್ದಲು ಗಣಿಗಳ ಕಾರ್ಮಿಕ ಶಿಬಿರಗಳಲ್ಲಿ ವೈದ್ಯಕೀಯ ನೆರವು ನೀಡುವ ಏರ್ಪಾಡು ಇದೆಯೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

ಆ) ಇದ್ದರೆ, ಅಂಥ ಶಿಬಿರಗಳಲ್ಲಿ ಔಷಧಿಗಳ ಶೇಖರಣೆ ಮತ್ತು ಶಸ್ತ್ರಚಿಕಿತ್ಸೆಯ ಉಪಕರಣಗಳ ಕನಿಷ್ಠ ಮಟ್ಟದ ದಾಸ್ತಾನನ್ನು ಇಟ್ಟುಕೊಟ್ಟುವ ಬಗ್ಗೆ ಒಂದು ವೇಳಾಪಟ್ಟಿಯನ್ನು ಬರೆಯಲಾಗಿದೆಯೆ? ಸೂಚಿಸುವ ವಿವರಣ ಪಟ್ಟಿಯುಂಟೆ?

ಇ) ಆ ಶಿಬಿರಗಳಲ್ಲಿ ಗುಹ್ಯರೋಗಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಇದೆಯೆ?

ಈ) ರೋಗಗಳ ಘಟನೆಗಳನ್ನು ದಾಖಲಿಸುವ ಪರಿಪಾಠವಿದೆಯೆ?

ಉ) ಇದ್ದರೆ, ಕಾರ್ಮಿಕ ಶಿಬಿರ ಸ್ಥಾಪನೆಯ ಪ್ರಾರಂಭದಿಂದ ೧೯೪೪ರ ಡಿಸೆಂಬರ್ ೩೧ರವರೆಗೆ ಮಲೇರಿಯಾ ರೋಗ ಹಾಗೂ ಗುಹ್ಯರೋಗಗಳ ಪ್ರಸಂಗಗಳು ವರದಿಯಾಗಿವೆ?

ಊ) ಅವಧಿಗನುಗುಣವಾಗಿ ಕಾರ್ಮಿಕರ ವೈದ್ಯಕೀಯ ಪರೀಕ್ಷೆ ನಡೆಸುವ ವ್ಯವಸ್ಥೆ ಇದೆಯೆ?

ಋ) ಇದ್ದರೆ, ಅವರಲ್ಲಿರುವ ಸಾಮಾನ್ಯ ಕಾಯಿಲೆಗಳು ಯಾವುವು? ನೂರಕ್ಕೆ ಎಷ್ಟಿರುತ್ತವೆ?

ೠ) ಸಾವುಗಳು ಸಂಭವಿಸಿವೆಯೆ? ಸಂಭವಿಸಿದ್ದರೆ, ಎಷ್ಟು ಮತ್ತು ಯಾವ ಕಾರಣಗಳಿಂದ?

ಎ) ಶಿಬಿರದ ವೈದ್ಯಕೀಯ ಇಲಾಖೆಗೆ ತನಿಖಾ ವ್ಯವಸ್ಥೆ ಇದೆಯೆ? ಸ್ಥಳೀಯ ಶಸ್ತ್ರವೈದ್ಯರು ಶಿಬಿರಕ್ಕೆ ಭೇಟಿ ನೀಡುವರೆ ಮತ್ತು ಗಂಭೀರ ರೋಗಗಳಿಗೆ ಚಿಕಿತ್ಸೆ ನಡೆಸುವರೆ? ಗಂಭೀರ ಕಾಯಿಲೆಯವರನ್ನು ಸಮುದಾಯ ಆಸ್ಪತ್ರೆಗೆ ಕೊಂಡೊಯ್ಯುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಪ್ರತಿಯೊಂದು ಶಿಬಿರದಲ್ಲೂ ಸಾಕಷ್ಟು ಔಷಧಗಳ ಮತ್ತು ಶಸ್ತ್ರಚಿಕಿತ್ಸೆಯ ಉಪಕರಣಗಳ ದಾಸ್ತಾನು ಇರುತ್ತದೆ. ೧೦೦೦ಕ್ಕೂ ಮಿಗಿಲು ಕಾರ್ಮಿಕರಿರುವ ಪ್ರತಿಯೊಂದು ಶಿಬಿರಕ್ಕೂ ಒಬ್ಬ ವೈದ್ಯಕೀಯ ಪದವೀಧರ ಕಾರ್ಯನಿರ್ವಹಣೆಯಲ್ಲಿ ತೊಡಗಿರುತ್ತಾನೆ. ವೈದ್ಯಕೀಯದಲ್ಲಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೨, ೨೮ ಫೆಬ್ರವರಿ ೧೯೪೫. ಪುಟ ೮೧

ಪರೀಕ್ಷಾ ಮಂಡಲಿಯ ಅರ್ಹತಾಪತ್ರ ಪಡೆದವನು ೧೦೦೦ಕ್ಕಿಂತ ಕಡಿಮೆ ಕಾರ್ಮಿಕರಿರುವ ಶಿಬಿರದ ಕಾರ್ಯನಿರ್ವಹಣೆಯಲ್ಲಿ ತೊಡಗಿರುತ್ತಾನೆ.

ಇ) ಹೌದು.

ಈ) ಹೌದು.

ಉ) ವಿಶಾಲ ಪ್ರದೇಶದಲ್ಲಿ ಶಿಬಿರಗಳು ಹರಡಿಹೋಗಿರುವುದರಿಂದ ಕ್ಲುಪ್ತ ಅವಧಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಿಲ್ಲ .

ಊ) ಹೌದು.

ಋ) ರಕ್ತಹೀನತೆ, ಈ ವಿಷಯದಲ್ಲೂ ಸಹ ಕೇಳಿರುವ ಅಂಕಿಅಂಶಗಳನ್ನು ಸಂಗ್ರಹಿಸಲು ಸ್ವಲ್ಪ ಸಮಯ ಬೇಕು.

ೠ) ಹೌದು. ಕಳೆದ ಡಿಸೆಂಬರ್ ಕೊನೆಯ ವೇಳೆಗೆ ೧೫೬ ಸಾವುಗಳು ಸಂಭವಿಸಿವೆ. ಅವುಗಳಲ್ಲಿ ಹೆಚ್ಚಿಗೆ ಸಾವುಗಳು ಪ್ರಕೃತಿ ಸಹಜವಾಗಿ ಸಂಭವಿಸಿದಂಥವು. ಕೆಲಸದ ಜಾಗದಲ್ಲಿ ಸಂಭವಿಸಿದ ದುರಂತಗಳಿಂದ ಉಂಟಾದ ಸಾವುಗಳ ಸಂಖ್ಯೆ ಬಹಳ ಅಲ್ಪ.

ಎ) ಹೌದು. ಅಕುಶಲ ಕಾರ್ಮಿಕ ಸರಬರಾಜು ನಿಯಾಮಕ ಮಂಡಲಿಯ ಮುಖ್ಯ ವೈದ್ಯಾಧಿಕಾರಿ ಹುದ್ದೆಯೊಂದನ್ನು ಮಂಜೂರು ಮಾಡಲಾಗಿದೆ. ವಿಶೇಷ ಏರ್ಪಾಡು ಮಾಡಿದ ದೆಸೆಯಿಂದ ಸ್ಥಳೀಯ ಸಮುದಾಯದ ಶಸ್ತ್ರವೈದ್ಯರು ಶಿಬಿರಗಳಿಗೆ ಭೇಟಿ ನೀಡುವುದಿಲ್ಲ . ತುಂಬ ಗಂಭೀರ ಕಾಯಿಲೆಯವರನ್ನು ನಾಗರಿಕ ಆಸ್ಪತ್ರೆಗಳಿಗೆ ಕೊಂಡೊಯ್ಯಲಾಗುವುದು.

## ೨೮೬
## ಕಲ್ಲಿದ್ದಲು ಗಣಿಯ ಕಾರ್ಮಿಕ ಶಿಬಿರಗಳಿಗೆ ಪಡಿತರ ವ್ಯವಸ್ಥೆ*

**೫೬೭. ಪ್ರೊ॥ ಎನ್.ಜಿ. ರಂಗ :** ಅ) ಗಣಿಗಳ ಕಾರ್ಮಿಕ ಶಿಬಿರಗಳಲ್ಲಿ ವಾಸಿಸುವ ಕೆಲಸಗಾರರಿಗೆ ನೇರವಾಗಿ ಸರ್ಕಾರದಿಂದ ಪಡಿತರ ವ್ಯವಸ್ಥೆ ಆಗುತ್ತದೆಯೋ ಅಥವಾ ದಳ್ಳಾಳಿಗಳ ಮೂಲಕ ಆಗುತ್ತದೆಯೋ?

ಆ) ಪ್ರತಿಯೊಬ್ಬ ಕೆಲಸಗಾರನೂ ಪ್ರತ್ಯೇಕವಾಗಿ ತನ್ನ ಪಾಲಿನ ಪಡಿತರವನ್ನು ಪಡೆಯುವನೋ ಅಥವಾ ೫೦ ಜನರ ಒಂದು ತಂಡಕ್ಕೆ ಒಟ್ಟಾಗಿ ಪಡಿತರ ವಿತರಣೆ ಮಾಡಲಾಗುವುದೋ?

ಇ) ಸಾಮಾನ್ಯವಾಗಿ ದಳ್ಳಾಳಿಗಳು ಕಾರ್ಮಿಕರಿಗೆ ಧಾನ್ಯವನ್ನು ತೂಗುವಾಗ ಕಡಿಮೆ ಕೊಡುವರೆಂಬುದು ನಿಜವೆ?

ಈ) ಈ ಕಾರ್ಮಿಕರು ತಮ್ಮ ಪಡಿತರವನ್ನು ಸ್ಥಳೀಯ ಸರ್ಕಾರದ ಪಡಿತರ ಅಂಗಡಿಗಳಿಂದ ಅಥವಾ ಡಿಪೋಗಳಿಂದ ಕೊಳ್ಳಬಲ್ಲರೆ? ಇಲ್ಲದಿದ್ದರೆ, ಏಕೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಗಣಿಗಳ ಕಾರ್ಮಿಕ ಶಿಬಿರದ ಕೆಲಸಗಾರರಿಗೆ ಪಡಿತರ ವ್ಯವಸ್ಥೆಯನ್ನು ದಳ್ಳಾಳಿಗಳ ಮೂಲಕ, ಸಮುದಾಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸರ್ಕಾರವೇ ಮಾಡುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೨೮ ಫೆಬ್ರವರಿ ೧೯೪೫, ಪು. ೮೧೯–೨೦

ಆ) ಪ್ರತಿವಾರವೂ ಪ್ರತಿಯೊಂದು ತಂಡಕ್ಕೂ ಸಗಟು ಪಡಿತರ ನೀಡಲಾಗುವುದು.

ಇ) ಇಲ್ಲ.

ಈ) ಇಲ್ಲ, ಉಚಿತ ಸರ್ಕಾರಿ ಪಡಿತರ ವ್ಯವಸ್ಥೆ ಇರುವುದರಿಂದ.

## ೨೮೭
## ಕಲ್ಲಿದ್ದಲು ಗಣಿಗಳ ಕಾರ್ಮಿಕ ಶಿಬಿರಗಳಲ್ಲಿ ದೈಹಿಕ ದಂಡನೆ

**೫೬೮. ಪ್ರೊ॥ ಎನ್.ಜಿ. ರಂಗ :** ಅ) ಕಲ್ಲಿದ್ದಲು ಗಣಿಗಳ ಕಾರ್ಮಿಕ ಶಿಬಿರಗಳಲ್ಲಿ ದೈಹಿಕ ದಂಡನೆ ನೀಡಲಾಗುತ್ತಿದೆ ಎಂಬುದು ನಿಜವೆ? ಇದು ಸ್ತ್ರೀ ಪುರುಷರಿಬ್ಬರಿಗೂ ಅನ್ವಯವಾಗುತ್ತಿದೆಯೆ?

ಆ) ಈ ಕೆಲಸಗಾರರ ಕುಂದುಕೊರತೆಗಳ ನಿವಾರಣೆಗೆ ಸಾಧನ ವ್ಯವಸ್ಥೆ ಇದೆಯೆ?

ಇ) ಈ ಕೆಲಸಗಾರರ ಯೋಗಕ್ಷೇಮ ನೋಡಿಕೊಳ್ಳಲು ಅಥವಾ ಕುಂದುಕೊರತೆಗಳನ್ನು ಪರಿಶೀಲಿಸಲು ಭಾರತ ಸರ್ಕಾರದ ಕಾರ್ಮಿಕ ಕಲ್ಯಾಣ ಸಲಹೆಗಾರ ಮತ್ತು ಅವರ ಸಹಾಯಕರಿಗೆ ಅಥವಾ ಕಲ್ಲಿದ್ದಲು ಗಣಿಗಳ ಕಲ್ಯಾಣ ಆಯುಕ್ತರು ಮತ್ತು ಅಧೀನ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆಯೆ? ಇಲ್ಲದಿದ್ದರೆ, ಏಕೆ?

ಈ) ಹಾಗೆ ನೀಡಿದ್ದರೆ ಅವರ ಅಹವಾಲುಗಳನ್ನು ಯಾರು ತನಿಖೆ ಮಾಡುತ್ತಾರೆ ?

ಉ) ಈ ಎಲ್ಲ ವಿದ್ಯಮಾನಗಳ ಬಗ್ಗೆ ದಾಖಲೆಯನ್ನು ವ್ಯವಸ್ಥಿತವಾಗಿ ರಕ್ಷಿಸಿಕೊಂಡು ಬರಲಾಗಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ. ಮಹಿಳಾ ಕಾರ್ಮಿಕ ಶಿಬಿರಗಳಿಲ್ಲ.

ಆ) ಹೌದು. ತಮ್ಮ ಕುಂದುಕೊರತೆಗಳ ನಿವಾರಣೆಗೆ ಕೆಲಸಗಾರರು ಕಾರ್ಮಿಕ ಸರಬರಾಜು ಇಲಾಖೆಯ (ಕಲ್ಲಿದ್ದಲು) ನಿಯೋಗಿ ನಿರ್ದೇಶಕರನ್ನು ನೋಡಬಹುದು.

ಇ) ಇಲ್ಲ. ಕಾರ್ಮಿಕ ಶಿಬಿರಗಳ ಯೋಗಕ್ಷೇಮವನ್ನು ಕಾರ್ಮಿಕ ಸರಬರಾಜು ಇಲಾಖೆಯ (ಕಲ್ಲಿದ್ದಲು) ನಿಯೋಗಿ ನಿರ್ದೇಶಕರು ಮತ್ತು ಸಿಬ್ಬಂದಿ ನೋಡಿಕೊಳ್ಳುತ್ತಾರೆ.

ಈ) ಅಕುಶಲ ಕಾರ್ಮಿಕ ಸರಬರಾಯಿ ಮಂಡಲಿಯ ಮುಖ್ಯ ಸಂಪರ್ಕಾಧಿಕಾರಿ ಮತ್ತು ಸಮುದಾಯ ಅಧಿಕಾರಿಗಳು.

ಉ) ಅಹವಾಲುಗಳನ್ನು ಬರವಣಿಗೆಯಲ್ಲಿ ಸಲ್ಲಿಸಿದಾಗ, ಕಾರ್ಮಿಕ ಸರಬರಾಯಿ ಇಲಾಖೆಯ (ಕಲ್ಲಿದ್ದಲು) ನಿಯೋಗಿ ಆಯುಕ್ತರ ಕಛೇರಿಯಲ್ಲಿ ಅದರ ದಾಖಲೆಯನ್ನು ಇಡಲಾಗುತ್ತದೆ. ಬಾಯಿಮಾತಿನ ದೂರುಗಳನ್ನು ಆಯಾ ಸ್ಥಳಗಳಲ್ಲೆ ಬಗೆಹರಿಸಲಾಗುತ್ತದೆ. ಅಗತ್ಯವಾದ ದಾಖಲೆಗಳನ್ನು ರಕ್ಷಿಸಿಕೊಂಡು ಬರಲಾಗಿದೆ.

---

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೨೮ ಫೆಬ್ರವರಿ ೧೯೪೫, ಪು ೮೨೦.

# ೨೮೮
# ಅಭ್ರಕ ಆಯೋಗ*

**೬೬೧. ಶ್ರೀ ಮನುಸುಬೇದಾರ್ :** ಅ) ಅಭ್ರಕ ಆಯೋಗವನ್ನು ನೇಮಕ ಮಾಡುವ ಉದ್ದೇಶವೇನು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸಿ.

ಆ) ಅದರ ರಚನೆಯ ನಿಬಂಧನೆಗಳು ಏನು ಮತ್ತು ಕಾರ್ಯವ್ಯಾಪ್ತಿ ಎಷ್ಟು?

ಇ) ದೇಶದ ಅಭ್ರಕ ಉತ್ಪಾದಕರಿಗೆ ಯಾವಾಗಲಾದರೂ ಸರ್ಕಾರ ನೆರವು ನೀಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅ) ಮತ್ತು (ಆ) :** ಬಹುಶಃ ಮಾನ್ಯ ಸದಸ್ಯರು ಅಭ್ರಕ ತನಿಖಾ ಸಮಿತಿಯನ್ನು ಗಮನದಲ್ಲಿರಿಸಿಕೊಂಡು ಕೇಳುತ್ತಿರಬಹುದು. ೧೯೪೪ರ ಮೇ ೧೫ ಮತ್ತು ೧೯೪೪ರ ಅಕ್ಟೋಬರ್ ೨೩ರ ನಂ. ಎಂ.ಡಿ. – ೫೫ ಗೊತ್ತುವಳಿಗಳತ್ತ ಅವರ ಗಮನವನ್ನು ಸೆಳೆಯಬಯಸುತ್ತೇನೆ. ಅದರ ಪ್ರತಿಗಳನ್ನು ಲೋಕಸಭೆಯ ಗ್ರಂಥಭಂಡಾರದಲ್ಲಿ ಇಡಲಾಗಿದೆ.

ಇ) ೧೯೩೫ರ ಭಾರತ ಸರ್ಕಾರದ ಶಾಸದನ್ವಯ ಖನಿಜಾಭಿವೃದ್ಧಿ ಪ್ರಾದೇಶಿಕ ವಿಷಯವಾಗಿದೆ. ಸಾರ್ವಜನಿಕ ಹಿತಾಸಕ್ತಿಯಿಂದ ಉಚಿತ ಎಂದು ಸಂಯುಕ್ತ ಕಾನೂನು ಘೋಷಿಸುವತನಕ ಅಂಥ ಸಂಯುಕ್ತ ಕಾನೂನು ಈಗ ಅಸ್ತಿತ್ವದಲ್ಲಿ ಇಲ್ಲ . ಆದ್ದರಿಂದ ಖನಿಜ ಅಭಿವೃದ್ಧಿಯನ್ನು ಪ್ರಾಂತೀಯ ಸರ್ಕಾರಗಳಿಗೆ ಸಂಪೂರ್ಣವಾಗಿ ಬಿಟ್ಟುಕೊಡಲಾಗಿದೆ. ಆದರೂ ಕೂಡ ಯುದ್ಧ ಸಮಯದಲ್ಲಿ ಅಭ್ರಕದ ಉತ್ಪಾದಕರಿಗೆ ಸರ್ಕಾರ ಗಣನೀಯ ಸಹಾಯವನ್ನು ಮಾಡಿದೆ. ಸುಗಮ ಸರಬರಾಜು ದೊರಕಿಸಿ, ಅಧಿಕ ಲಾಭದ ತೆರಿಗೆಗೆ ವಿನಾಯಿತಿ ನೀಡಿ ಮತ್ತು ಉತ್ಪನ್ನಕ್ಕೆ ಲಾಭಾಂಶದ ಅವಕಾಶ ನೀಡಿದೆ.

**ಶ್ರೀ ಮನುಸುಬೇದಾರ್ :** ಸರ್ಕಾರ ಅಭ್ರಕದ ಬೆಲೆಯನ್ನು ನಿಯಂತ್ರಿಸಿದೆ ಮತ್ತು ಈ ಸರ್ಕಾರಕ್ಕೆ ಮತ್ತು ಮಿತ್ರ ಸರ್ಕಾರಗಳಿಗೆ ನಿಯಂತ್ರಿತ ಬೆಲೆಯಲ್ಲಿ ಸಗಟು ಅಭ್ರಕವನ್ನು ಖರೀದಿಸಲಾಗುತ್ತಿದೆ ಹಾಗೂ ಕೇಂದ್ರ ಸರ್ಕಾರವೇ ಈ ನಿಯಂತ್ರಣವನ್ನು ಅಸ್ತಿತ್ವಕ್ಕೆ ತಂದಿದೆ ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೆಲೆಗಳನ್ನು ನಿಗದಿಗೊಳಿಸಲಾಗಿದೆ.

**ಶ್ರೀ ಮನುಸುಬೇದಾರ್ :** ಯುದ್ಧಪೂರ್ವದ ಬೆಲೆಗಳೊಡನೆ ಈ ಬೆಲೆಗಳು ಸರಿಹೊಂದುತ್ತವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಯುದ್ಧಪೂರ್ವದ ಬೆಲೆಗಳಿಗೆ ಹೋಲಿಸಿದಾಗ ಇವು ಹೆಚ್ಚು ಅನುಕೂಲಕರವಾಗಿವೆ.

**ಶ್ರೀ ಮನುಸುಬೇದಾರ್ :** ವ್ಯತ್ಯಾಸ ಎಷ್ಟು ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ಬಗ್ಗೆ ನಾನು ಇನ್ನೂ ಮಾಹಿತಿ ಪಡೆಯ ಬೇಕಾಗಿದೆ.

**ಶ್ರೀ ಎನ್. ಎಂ. ಜೋಶಿ :** ಅಭ್ರಕದ ಗಣಿ ಕೆಲಸಗಾರರ ಕೆಲಸದ ಸ್ಥಿತಿಗತಿಯನ್ನು ಅಭ್ರಕ ಆಯೋಗ ಗಮನಿಸುವುದೆ? ಗಮನಿಸುವುದಾದರೆ ಅಭ್ರಕ ಆಯೋಗದಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇಲ್ಲ. ಆಯೋಗ ತನಿಖೆ ಮಾಡುವ ವಿಷಯಗಳಲ್ಲಿ ಅದನ್ನು ಒಂದು ಅಗತ್ಯವೆಂದು ಪರಿಗಣಿಸಿಲ್ಲ .

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೫ ಮಾರ್ಚ್ ೧೯೪೫, ಪು. ೧೦೨೨–೨೩.

**ಶ್ರೀ ಜಿ. ಡಬ್ಲ್ಯೂ. ಟೈಸನ್ :** ಪ್ರಶ್ನೆ (ಇ)ಗೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ. ಯುದ್ಧದ ಸಮಯದಲ್ಲಿ ಕೇಂದ್ರ ಸರ್ಕಾರ ಅಭ್ರಕದ ಕೈಗಾರಿಕೆಯೊಡನೆ ಹೆಚ್ಚು ಸಂಪರ್ಕವಿದ್ದು ಸಹಾಯ ಮಾಡಬಹುದಿದ್ದರೂ, ಯಾಂತ್ರಿಕ ಗಣಿ ಕಂಪನಿಗಳಿಗೆ ರಕ್ಷಣೆಯನ್ನೊದಗಿಸಿ, ಅಭ್ರಕದ ಕಾಳಸಂತೆ ವ್ಯಾಪಾರದ ದೆಸೆಯಿಂದಾಗಿ ಅವುಗಳು ಅಪಾರ ನಷ್ಟಕ್ಕೆ ಗುರಿಯಾದವು ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಮಿತಿಯನ್ನು ನೇಮಕವಾಡಿದ್ದು ಈ ಕಾರಣದಿಂದಲೇ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಅಭ್ರಕದ ಕಾರ್ಖಾನೆಗಳಿಗೆ "ಮಾತೃತ್ವ ಸೌಲಭ್ಯ ಶಾಸನ" ಅನ್ವಯವಾಗುತ್ತದೆಯೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಎಲ್ಲ ಗಣಿಗಳಿಗೂ ಅದು ಅನ್ವಯಿಸುತ್ತದೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಅಭ್ರಕವನ್ನು ಸೀಳುವ ಕಾರ್ಖಾನೆಗಳಿಗೆ ಕಾರ್ಖಾನೆಗಳ ಶಾಸನ ಅನ್ವಯವಾಗುವುದಿಲ್ಲ ಎಂಬುದು ನಿಜವೆ? ನಿಜವಾಗಿದ್ದರೆ, ಏಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಅನ್ವಯವಾಗುವುದಿಲ್ಲ ಎಂದು ನಾನು ನಂಬಲು ಯಾವುದೇ ಕಾರಣಗಳು ಕಂಡುಬರುವುದಿಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸೆಪ್ಟೆಂಬರ್ ೧೯೪೪ರ ವಾಣಿಜ್ಯ ಸಂಘದ ದಾಖಲೆಯತ್ತ ಸರ್ಕಾರದ ಗಮನ ಸೆಳೆಯಲೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬಹುಶಃ ಅದಕ್ಕೆ ಹೆಚ್ಚಿನ ದೃಢೀಕರಣದ ಅಗತ್ಯವಿದೆ.

**ಶ್ರೀ ಎಂ. ಎನ್. ಜೋಶಿ :** ಕಾರ್ಖಾನೆಗಳ ಶಾಸನ ಅಭ್ರಕ ಕಾರ್ಖಾನೆಗಳಿಗೆ ಅನ್ವಯವಾಗುವುದೇ, ಇಲ್ಲವೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತನಿಖೆ ಮಾಡಿ ತಿಳಿದುಕೊಳ್ಳಬಾರದೇಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ತನಿಖೆ ಮಾಡಿಸುತ್ತೇನೆ.

## ೨೮೯
## ಸಾಂಪ್ರದಾಯಕ ಮತ್ತು ಅಸಾಂಪ್ರದಾಯಕ ನಿವಾಸಗಳ ವ್ಯತ್ಯಾಸ ರದ್ದು*

**೬೬೨. ಶ್ರೀ ಟಿ.ಟಿ. ಕೃಷ್ಣ ಮಾಚಾರಿ :** ಅ) ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ಭೇದದ ರದ್ದಿನ ೧೦ ಫೆಬ್ರವರಿ ೧೯೪೫ರ ನಿಲುವಳಿ ಸೂಚನೆಗೆ ಮಾನ್ಯ ಸದಸ್ಯರು ಕೊಟ್ಟ ಉತ್ತರಕ್ಕೆ ಸಂಬಂಧಿಸಿದಂತೆ, ಸರ್ಕಾರದ ಬೇರೆ ಬೇರೆ ಇಲಾಖೆಗಳ ಅಭಿಪ್ರಾಯವನ್ನು ಕೇಳಲಾಯಿತೆ? ಕೇಂದ್ರ ಸರ್ಕಾರದ ಯಾವ ಮತ್ತು ಎಷ್ಟು ಇಲಾಖೆಗಳು ವ್ಯತ್ಯಾಸ ರದ್ದಿನ ಪರ ಮತ್ತು ವಿರುದ್ಧ ನಿಲುವುಗಳನ್ನು ವ್ಯಕ್ತಪಡಿಸಿದವು?

ಆ) ಅಸಾಂಪ್ರದಾಯಿಕ ನಿವಾಸಗಳನ್ನು ಸ್ವಂತ ವಿವೇಚನೆಯ ಮೇರೆಗೆ ವಿಲೇವಾರಿ ಮಾಡುವ ಅಧಿಕಾರ ಇಲ್ಲಿಯವರೆಗೆ ವಸತಿ ಅಧಿಕಾರಿಗಿತ್ತೆ? ಇಲ್ಲದಿದ್ದರೆ, ಈಗೇಕೆ ಸ್ವಂತ ವಿವೇಚನೆಯ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂ), ಸಂ. ೨, ೫ ಮಾರ್ಚ್ ೧೯೪೫, ಪು. ೧೦೨೩.

ಅಧಿಕಾರ ನೀಡಬೇಕು?

ಇ) ಭಾರತೀಯ ಅರ್ಜಿದಾರನೊಬ್ಬ ಐರೋಪ್ಯ ಮಾದರಿಯ ನಡೆನುಡಿಗಳುಳ್ಳವನೆಂದೂ, ಆದ್ದರಿಂದ ಅಸಾಂಪ್ರದಾಯಿಕ ನಿವಾಸಗಳಿಗೆ ಅರ್ಹನೆಂದೂ ವಸತಿ ಅಧಿಕಾರಿ ತೀರ್ಮಾನಿಸುವ ಮಾರ್ಗ ಅಥವಾ ಸಾಧನ ಯಾವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಸೂಚನೆಯ ಪರ ಅಥವಾ ವಿರುದ್ಧ ಯಾವ ಮತ್ತು ಎಷ್ಟು ಇಲಾಖೆಗಳಿವೆ ಎಂದು ಖಚಿತಪಡಿಸುವ ಅಗತ್ಯವಿಲ್ಲವೆಂದು ಸರ್ಕಾರ ಭಾವಿಸಿದೆ.

ಆ) ಇಲ್ಲ. ಅರ್ಜಿದಾರನ ಜೀವನಶೈಲಿಯ ಘೋಷಣೆಯನ್ನು ಪ್ರಶ್ನೆ ಮಾಡುವ ಗೋಜಿಗೆ ಹೋಗದೆ ಪ್ರಶ್ನಾತೀತವಾಗಿ ಒಪ್ಪಿಕೊಳ್ಳಬೇಕೆಂದು ಸರ್ಕಾರ ನಿರ್ಧರಿಸಿರುವುದರಿಂದ ವಸತಿ ಅಧಿಕಾರಿ ಅಸಾಂಪ್ರದಾಯಿಕ ನಿವಾಸಗಳ ಹಂಚಿಕೆಯಲ್ಲಿ ಸ್ವಂತ ವಿವೇಚನೆಯನ್ನು ಉಪಯೋಗಿಸುವ ಅಗತ್ಯವೇ ಬೀಳುವುದಿಲ್ಲ.

ಇ) ಉದ್ಭವಿಸುವುದಿಲ್ಲ.

## ೨೯೦
## ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ನಿವಾಸಗಳ ವ್ಯತ್ಯಾಸ ರದ್ದು *

**೬೬೩. ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಅ) ಹಿಂದಿನ ಪ್ರಶ್ನೆಯಲ್ಲಿ ಸೂಚಿತವಾದ ವಿಷಯದ ಮೇಲಿನ ನಿಲುವಳಿ ಸೂಚನೆಯ ಬಗೆಗೆ ಮಾನ್ಯ ಸದಸ್ಯರು ಈತ ತಿಂಗಳ ೧೦ನೇ ತಾರೀಖಿನಲ್ಲಿ ಕೊಟ್ಟ ಉತ್ತರದ ಅನುಸಾರ ಅಸಾಂಪ್ರದಾಯಿಕ ನಿವಾಸಗಳ ಸ್ವಾಧೀನಾಧಿಕಾರ ಇರುವವರ ಅವಕಾಶವನ್ನು ಗೊಂದಲಕ್ಕೀಡು ಮಾಡುವ ಉದ್ದೇಶದಿಂದ ಸೂಚಿತವಾಗಿಯೆ? ಹಾಗಿದ್ದರೆ, ಅವರು ಯಾವ ಮಾದರಿಯ ನಿವಾಸಕ್ಕೆ ಅರ್ಹರೋ ಅದನ್ನೇ ವಿತರಣೆ ಮಾಡಲಾಗುವುದೆ?

ಆ) ಉತ್ತರ ವರ್ಗದ ವಸತಿ ಖಾಲಿ ಇರದ ಸಂದರ್ಭದಲ್ಲಿ ಅಂಥ ವಸತಿಗಳು ಸಿಕ್ಕುವವರೆಗೂ ಈಗ ಹಾಲಿ ಇರುವ ಬೇರೆ ಮಾದರಿಯ ನಿವಾಸಗಳಲ್ಲೆ ಅವರು ಮುಂದುವರಿಯುವಂತೆ ಅವಕಾಶ ನೀಡುವ ಉದ್ದೇಶವಿದೆಯೆ? ಇಲ್ಲದಿದ್ದರೆ, ಏಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ ನೇತ್ಯಾತ್ಮಕ. ಎರಡನೆಯ ಭಾಗಕ್ಕೆ ಅಗತ್ಯ ಬೀಳುವುದಿಲ್ಲ.

ಆ) ಹೌದು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೫ ಮಾರ್ಚ್ ೧೯೪೫, ಪು. ೧೦೨೩–೨೪.

# ೨೯೧
# ಅಹಮದಾಬಾದಿನ ವಾಣಿಜ್ಯ ವಿವಾದಗಳ ಪಂಚಾಯಿತಿ ವ್ಯವಸ್ಥೆಯ ವಿಫಲ*

**೬೬೮. ಶ್ರೀ ಕೆ.ಎಸ್. ಗುಪ್ತ :** ಅ) ಅಹಮದಾಬಾದಿನ ಕೈಗಾರಿಕೆ ಮತ್ತು ಬಂಡವಾಳಕ್ಕೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸುವ ಖಾಯಂ ಪಂಚಾಯಿತಿ ವ್ಯವಸ್ಥೆಯ ಕುಸಿತದಿಂದಾಗಿ ಉದ್ಭವಿಸಿದ ಗಂಭೀರ ಸನ್ನಿವೇಶದ ಅರಿವು ಮಾನ್ಯ ಕಾರ್ಮಿಕ ಸದಸ್ಯರಿಗಿದೆಯೆ?

ಆ) ಅಹಮದಾಬಾದಿನ ನೇಯ್ಗೆ ಕಾರ್ಮಿಕ ಸಂಘದ ಜಂಟಿ ಪ್ರತಿನಿಧಿ ಮಂಡಲಿ ಈ ಕುಸಿತವನ್ನು ತೀವ್ರ ಆಂತಕದಿಂದ ನೋಡುತ್ತಿದೆ ಎಂಬುದು ನಿಜವಲ್ಲವೆ?

ಇ) ಪಂಚಾಯಿತಿ ವ್ಯವಸ್ಥೆಯನ್ನು ಮತ್ತೆ ಅಸ್ತಿತ್ವಕ್ಕೆ ತರಲು ಸರ್ಕಾರ ಸೂಚಿಸುವುದಿಲ್ಲವೆ? ಇಲ್ಲದಿದ್ದರೆ, ಏಕೆ?

ಈ) ಅಹಮದಾಬಾದಿನ ಬಟ್ಟೆಗಿರಣಿಗಳ ಸಂಘ ಮತ್ತು ನೇಯ್ಗೆ ಕಾರ್ಮಿಕ ಸಂಘಗಳೆರಡೂ ೧೯೩೭ರಲ್ಲಿ ಲಿಖಿತ ಒಪ್ಪಂದಕ್ಕೆ ಸಹಿಹಾಕಿದ್ದು ನಿಜವಲ್ಲವೆ?

ಉ) ಮೇಲೆ ಪ್ರಸ್ತಾಪಿತವಾಗಿರುವ ಒಪ್ಪಂದ ಇನ್ನೂ ಸಹ ನೋಂದಣಿಗೊಂಡಿಲ್ಲವೆಂದೂ, ಬಟ್ಟೆಗಿರಣಿಗಳ ಸಂಘ ಅದರಂತೆ ವ್ಯವಹರಿಸುವುದಿಲ್ಲವೆಂದೂ ಹೇಳಿರುವುದು ನಿಜವಲ್ಲವೆ? ನಿಜವಿದ್ದರೆ, ವಿವಾದವನ್ನು ಬಗೆಹರಿಸಲು ಸರ್ಕಾರವೇಕೆ ತನ್ನ ಪ್ರಭಾವ ಮತ್ತು ಶಕ್ತಿಯನ್ನು ಬಳಸಬಾರದು?

ಊ) ಕಾರ್ಮಿಕ ವರ್ಗದ ಸೌಲಭ್ಯಕ್ಕಾಗಿ ಅಹಮದಾಬಾದಿನ ನೇಯ್ಗೆ ಕಾರ್ಮಿಕ ಸಂಘ ಆಲೋಚಿಸುತ್ತಿರುವ ಕಾರ್ಮಿಕ ಸಂಶೋಧನಾ ಸಂಸ್ಥೆಯ ರಚನೆಗೆ ಪ್ರೋತ್ಸಾಹ ಮತ್ತು ಸಹಾಯ ನೀಡಲು ಭಾರತ ಸರ್ಕಾರ ಮುಂದೆ ಬರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಹಮದಾಬಾದಿನ ಬಟ್ಟೆಗಿರಣಿ ಧಣಿಗಳ ಸಂಘಕ್ಕೂ, ನೇಯ್ಗೆ ಕಾರ್ಮಿಕ ಸಂಘಕ್ಕೂ ಮಧ್ಯೆ ಲಾಭಾಂಶದ ವಿಚಾರವಾಗಿ ಕೈಗಾರಿಕಾ ವಿವಾದವಿದೆ ಎಂಬ ಅರಿವು ನನಗಿದೆ. ೧೯೩೮ರ ಮುಂಬೈ ಕೈಗಾರಿಕಾ ವಿವಾದ ಶಾಸನದಡಿಯಲ್ಲಿ ಮುಖ್ಯ ಸಮನ್ವಯಾಧಿಕಾರಿ ಆ ವಿಷಯವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಪಂಚಾಯಿತಿ ವ್ಯವಸ್ಥೆ ಮುರಿದು ಬಿದ್ದಿದೆ ಎಂಬುದು ನನಗೆ ಗೊತ್ತಿಲ್ಲ . ಪ್ರಶ್ನೆಯಲ್ಲಿ ಪ್ರಸ್ತಾಪಿತವಾದ ಉಳಿದೆಲ್ಲವೂ ಪ್ರಾಂತ್ಯ ಸರ್ಕಾರಕ್ಕೆ ಸಂಬಂಧಿಸಿದಂಥವು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೫ ಮಾರ್ಚ್ ೧೯೪೫, ಪು. ೧೦೨೭.

## ೨೯೨
## ಕಾರ್ಮಿಕ ಇಲಾಖೆಯಲ್ಲಿ ಕೆಲವು ಸಿಬ್ಬಂದಿಯ ಕೋಮುವಾರು ರಚನೆ *

**೫೫. ಸರ್ದಾರ್ ಸಂತ್‌ಸಿಂಗ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯಗಳ ಹೇಳಿಕೆ ಬಗ್ಗೆ ನೀಡಿ: ಸದಸ್ಯರ ಕೈಕೆಳಗೆ ಬರುವ ಎಲ್ಲ ಇಲಾಖೆ ಮತ್ತು ಕಛೇರಿಗಳಲ್ಲಿರುವ ಮಾಹೆಯಾನ ೧೦೦೦ರೂ. ಸಂಬಳ ಬರುವವರು ಮತ್ತು ಮೇಲ್ಪಟ್ಟವರು ನೇಮಕಗೊಂಡಿರುವ ಸಿಖ್ಖರ ಹುದ್ದೆಯ ಹೆಸರುಗಳನ್ನು ತಿಳಿಸಿ.

ಅ) ಒಟ್ಟು ಸಂಖ್ಯೆ. ಆ) ಸಿಖ್ಖರ ಸಂಖ್ಯೆ. ಇ) ಕ್ರೈಸ್ತರ ಸಂಖ್ಯೆ. ಈ) ನೆಲಸಿದ ಐರೋಪ್ಯರು ಮತ್ತು ಅಂಗ್ಲೊ ಇಂಡಿಯನ್ನರ ಸಂಖ್ಯೆ.

ಉ) ಪಾರ್ಸಿಗಳು, ೧೯೩೪ರಿಂದೀಚೆಗೆ ನೇಮಕವಾದವರು.

೧. ಖಾಯಂ

೨. ಹಂಗಾಮಿ

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತಾವು ಕೇಳಿದ ಮಾಹಿತಿಯಿಂದ ಆಗಬಹುದಾದ ಪ್ರಯೋಜನವು, ಆ ಮಾಹಿತಿಯನ್ನು ಸಂಗ್ರಹಿಸಲು ಬೇಕಾದ ವೇಳೆ ಕ್ರಮಗಳನ್ನು ಸಮರ್ಥಿಸುವುದಿಲ್ಲ. ಆದ್ದರಿಂದ ಸರ್ಕಾರ ಈ ಮಾಹಿತಿಯನ್ನು ಒದಗಿಸಲು ತನ್ನ ಅಸಾಮರ್ಥ್ಯಕ್ಕಾಗಿ ವಿಷಾದಿಸುತ್ತದೆ.

## ೨೯೩
## ದೆಹಲಿಯ ಗೃಹಸ್ವತ್ತಿನ ವ್ಯವಹಾರಗಳಲ್ಲಿ ಲಾಭ ಸಂಪಾದನೆ**

**೫೭. ಶ್ರೀ ಸತ್ಯನಾರಾಯಣ ಸಿನ್ಹ :** ದೆಹಲಿ ನಗರದಲ್ಲಿ ಮನೆಮಾರಾಟದ ವ್ಯವಹಾರಗಳಲ್ಲಿ ವಿಪರೀತವಾದ ಲಾಭಬಡುಕತನ ನಡೆಯುತ್ತಿದೆ ಎಂಬುದು ವಾಸ್ತವವೇ ಎಂದು ಮಾನ್ಯ ಕಾರ್ಮಿಕ ಸಚಿವರು ತಿಳಿಸುತ್ತಾರೆಯೆ? ಹಾಗಿದ್ದ ಪಕ್ಷದಲ್ಲಿ ಅದನ್ನು ತಡೆಯಲು ಸರ್ಕಾರ ತೆಗದುಕೊಂಡಿರುವ ಕ್ರಮವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಶ್ನೆಯ ಮೊದಲ ಭಾಗಕ್ಕೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಈ ವಿಷಯವಾವುದೂ ತಿಳಿದುಬಂದಿಲ್ಲ. ಇನ್ನು ಎರಡನೆಯ ಭಾಗದ್ದು ಉದ್ಭವಿಸುವುದಿಲ್ಲ. ಆದರೆ ದೆಹಲಿ ನಗರದಲ್ಲಿ ಖಾಸಗಿ ಗೃಹಸ್ವತ್ತುಗಳ ಮಾರಾಟವನ್ನು ನಿಯಂತ್ರಿಸುವ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರಿಗಾಗಿ ನಾನು ಹೇಳಬಯಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೫ ಮಾರ್ಚ್ ೧೯೪೫, ಪು. ೧೦೩೯.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೮ ಮಾರ್ಚ್ ೧೯೪೫, ಪು. ೧೦೩೯.

# ೨೯೪
# ಬ್ರಿಟನ್ನಿನಲ್ಲಿ ಕಾರ್ಮಿಕಾಧಿಕಾರಿಗಳ ತರಬೇತಿ*

**೮೧೦. ಶ್ರೀ ಟಿ. ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ಕಾರ್ಮಿಕಾಧಿಕಾರಿಗಳನ್ನು ತರಬೇತಿಗಾಗಿ ಬ್ರಿಟನ್ನಿಗೆ ಕಳಿಸುವಿರಾ?

ಆ) ತರಬೇತಿಯ ಉದ್ದೇಶ ಮತ್ತು ಅವಧಿ.

ಇ) ಎಷ್ಟು ಜನರನ್ನು ಕಳಿಸಲು ಉದ್ದೇಶಿಸಿದ್ದೀರಿ? ಈ ಯೋಜನೆಗೆ ತಗಲುವ ವೆಚ್ಚವೆಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಉದ್ದೇಶ : ಅನುಭವಗಳಿಕೆ ಮತ್ತು ಕಾರ್ಮಿಕ ಆಡಳಿತದ ಸಮಸ್ಯೆಗಳನ್ನು ಎದುರಿಸಲು ಸೂಕ್ತ ತರಬೇತಿ ಪಡೆದ ಸಿಬ್ಬಂದಿಯ ಆವಶ್ಯಕತೆ. ಉದಾಹರಣೆಗೆ ಕಾರ್ಮಿಕ ವಿವಾದಗಳು, ಕಾರ್ಖಾನೆ ತನಿಖೆಗಳನ್ನೂ ಒಳಗೊಂಡು ಕೈಗಾರಿಕಾ ಸಂಬಂಧ ಮತ್ತು ಕಾರ್ಮಿಕ ಯೋಗಕ್ಷೇಮ, ಕೂಲಿ ಅಥವಾ ಸಂಬಳದ ಕಟ್ಟುಪಾಡು ಮತ್ತು ತನಿಖೆ, ಉದ್ಯೋಗ ವಿನಿಮಯ ಕೇಂದ್ರ, ವಿಕೇಂದ್ರೀಕರಣ ಮತ್ತು ಮರುವಸತಿ ಇವು ಭಾರತ ಅತಿ ಮುಖ್ಯವಾಗಿ ಗಮನಕೊಡಬೇಕಾದಂಥ ಸಮಸ್ಯೆಗಳು. ಮೇಲೆ ಉಕ್ತವಾದ ಎಲ್ಲ ವಿಷಯಗಳನ್ನೂ ತರಬೇತಿ ಕಾರ್ಯಕ್ರಮ ಒಳಗೊಂಡಿರುತ್ತದೆ. ಅದರ ಅರ್ಧ ಭಾಗ ಕಾರ್ಮಿಕ ಇಲಾಖೆಯ ಕೇಂದ್ರ ಕಾರ್ಯಸ್ಥಾನದಲ್ಲಿ ನಡೆಯುತ್ತದೆ. ಉಳಿದ ಭಾಗ ಬ್ರಿಟನ್ನಿನ ಉಳಿದ ಕೇಂದ್ರಗಳಲ್ಲಿ ನಡೆಯುತ್ತದೆ. ಅದರ ಅವಧಿ ಆರು ಅಥವಾ ಎಂಟು ತಿಂಗಳವರೆಗೆ.

ಇ) ಪ್ರತಿಯೊಂದು ತಂಡದಲ್ಲೂ ೨೦ ಅಧಿಕಾರಿಗಳನ್ನುಳ್ಳ ಮೂರು ತಂಡಗಳನ್ನು ಕಳಿಸುವ ಉದ್ದೇಶವಿದೆ. ಪ್ರತಿಯೊಂದು ತಂಡದಲ್ಲಿ ಕೇಂದ್ರ ಸರ್ಕಾರದ ೧೨ ಅಧಿಕಾರಿಗಳು ಮತ್ತು ಪ್ರಾಂತ್ಯ ಸರ್ಕಾರಗಳ ಹಾಗೂ ಸಂಸ್ಥಾನಗಳ ೮ ಜನ ಅಧಿಕಾರಿಗಳಿರುತ್ತಾರೆ. ಮೊದಲನೆಯ ತಂಡದಲ್ಲಿ ಕಳಿಸುವ ಕೇಂದ್ರ ಸರ್ಕಾರದ ೧೨ ಜನ ಅಧಿಕಾರಿಗಳಿಗೆ ಆರ್ಥಿಕ ಮಂಜೂರಾತಿಯನ್ನು ನೀಡಲಾಗಿದೆ. ಬಹುಶಃ ಕೇಂದ್ರ ಸರ್ಕಾರಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚ ಬೀಳುತ್ತದೆ. ಪ್ರಾಂತ್ಯ ಸರ್ಕಾರಗಳು ಮತ್ತು ಸಂಸ್ಥಾನಗಳು ತಮ್ಮ ಅಧಿಕಾರಿಗಳಿಗೆ ತಗಲುವ ವೆಚ್ಚವನ್ನು ತಾವೇ ಭರಿಸಬೇಕಾಗುತ್ತದೆ.

**ಸರ್ದಾರ್ ಸಂತ್‌ಸಿಂಗ್ :** ಆಯ್ಕೆಯನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿಸಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಾಂತ್ಯ ಸರ್ಕಾರಗಳು ಮತ್ತು ಸಂಸ್ಥಾನಗಳು ನಾಮಕರಣ ಮಾಡಲ್ಪಡುವವರ ಆಯ್ಕೆ ಆಯಾ ಪ್ರಾಂತ್ಯ ಅಥವಾ ಸಂಸ್ಥಾನಗಳಿಗೆ ಸೇರಿದ್ದು. ಕೇಂದ್ರ ಅಧಿಕಾರಿಗಳನ್ನು ಆಯ್ಕೆ ಮಾಡುವ ಹೊಣೆ ಕೇಂದ್ರ ಸರ್ಕಾರದ್ದು. ಆಯ್ಕೆ ಮಾಡುವುದರಲ್ಲಿ ಕೋಮುವಾರು ಪ್ರಮಾಣವನ್ನು ಅನುಸರಿಸಲಾಗುವುದೆ ಎಂಬುದು ಮಾನ್ಯ ಸದಸ್ಯರ ಇಂಗಿತವಾಗಿದ್ದರೆ, ಆ ತತ್ವವನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸುವುದರಲ್ಲಿ ನಾನೂ ಒಬ್ಬ ಎಂದು ಹೇಳಬಯಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೮ ಮಾರ್ಚ್ ೧೯೪೫, ಪು. ೧೧೬೬.

**ಸರ್ದಾರ್ ಸಂತ್‌ಸಿಂಗ್ :** ಉತ್ತಮ ಅರ್ಹತೆಯುಳ್ಳವರ ಶೈಕ್ಷಣಕ ಅರ್ಹತೆಗೂ ಆದ್ಯತೆಯನ್ನು ಕೊಡಬೇಕಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅರ್ಹತೆಗಳಲ್ಲಿ ಅದೂ ಒಂದು.

**ಶ್ರೀ ಲಾಲ್‌ಚಂದ್ ನವಲ್‌ರಾಯ್ :** ಸಂಬಂಧಪಟ್ಟ ಇಲಾಖೆಗಳು ಅಧಿಕಾರಿಗಳನ್ನು ಆಯ್ಕೆ ಮಾಡುತ್ತವೆಯೊ ಅಥವಾ ಯಾವುದಾದರೂ ಸಮಿತಿ ಮಾಡುತ್ತದೆಯೋ ಎಂಬುದನ್ನು ಮಾನ್ಯ ಸದಸ್ಯರು ತಿಳಿಸಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೇರೆ ಬೇರೆ ಇಲಾಖೆಗಳಿಂದ ಅವರು ಆಯ್ಕೆಯಾಗುತ್ತಾರೆ.

**ಮಹಮದ್ ಯಾಮಿನ್ ಖಾನ್ :** ಅವರು ಆಗಲೇ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಆ ಅಧಿಕಾರಿಗಳು ಈಗಾಗಲೇ ಸೇವೆಯಲ್ಲಿರುವವರು.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಹಿಳಾ ಕಾರ್ಮಿಕರ ಯೋಗಕ್ಷೇಮ ಮುಖ್ಯವಾದುದರಿಂದ, ಸರ್ಕಾರ ಮಹಿಳೆಯರನ್ನೂ ಇದರಲ್ಲಿ ಸೇರಿಸಬೇಕು ಎಂದು ಹೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

## ೨೯೫
## ಗಣಿಗಳ ಮಾತೃತ್ವ ಸೌಲಭ್ಯ (ತಿದ್ದು ಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ೧೯೪೧ರ ಗಣಿಗಳ ಮಾತೃತ್ವ ಸೌಲಭ್ಯ ಶಾಸನವನ್ನು ಮತ್ತೂ ಬದಲಾಯಿಸುವುದಕ್ಕೆ ಮಸೂದೆಯ ಮಂಡನೆಗಾಗಿ ಅವಕಾಶ ನೀಡಬೇಕೆಂದು ಕೇಳುತ್ತೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ವಿಷಯ ಇದು–

"೧೯೪೧ರ ಗಣಿಗಳಲ್ಲಿನ "ಮಾತೃತ್ವ ಸೌಲಭ್ಯ" ಶಾಸನದ ಹೆಚ್ಚುವರಿ ಬದಲಾವಣೆಗೆ ಮಸೂದೆ ಮಂಡಿಸಲು ಅವಕಾಶ ನೀಡಬೇಕು."

ಸೂಚನೆಯನ್ನು ಸ್ವೀಕರಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ ; ನಾನು ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೮ ಮಾರ್ಚ್ ೧೯೪೫, ಪು. ೧೨೦೬.

## ೨೯೬
## ಕಾರ್ಖಾನೆಗಳ (ದ್ವಿತೀಯ ತಿದ್ದುಪಡಿ) ಮಸೂದೆ*

**ವಿಚಾರಣಾ ಸಮಿತಿಯ ವರದಿಯ ಮಂಡನೆ**

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ೧೯೩೪ರ ಕಾರ್ಖಾನೆಗಳ ಶಾಸನದ ಹೆಚ್ಚುವರಿ ಬದಲಾವಣೆಯ ಮಸೂದೆಯ ಬಗೆಗಿನ ಆಯ್ದ ಸಮಿತಿಯ ವರದಿಯನ್ನು ನಾನು ಮಂಡಿಸುತ್ತಿದ್ದೇನೆ.

## ೨೯೭
## ಸಾಮಾನ್ಯ ಅಂದಾಜು ಮುಂಗಡಪತ್ರ
## ಬೇಡಿಕೆಗಳ – ಪಟ್ಟಿ – ಮುಂದುವರಿಕೆ **

**ಶ್ರೀಮತಿ ರೇಣುಕಾ ರೇ :** ಕಾರ್ಮಿಕ ಇಲಾಖೆಯ ಶೀರ್ಷಿಕೆಯಡಿ ೨೩ನೇ ಕ್ರಮ ಸಂಖ್ಯೆಯ ಬೇಡಿಕೆಯ ಕೆಳಗೆ ಇರುವ ಖೋತಾ ನಿರ್ಣಯಗಳ ಪಟಿಯಲ್ಲಿರುವ ನನ್ನ ೧೮೯ನೇ ನಂ. ಖೋತಾ ನಿರ್ಣಯವನ್ನು ಜೋಷಿಯವರ ನಿರ್ಣಯದ ನಂತರ ಪಕ್ಷೇತರ ಸದಸ್ಯರುಗಳಿಗೆ ನಿಗದಿಪಡಿಸಿರುವ ಸಮಯದಲ್ಲಿ ಮಂಡನೆ ಮಾಡಲು ಬಯಸುತ್ತೇನೆ. ಪಕ್ಷೇತರ ಸದಸ್ಯರುಗಳಾದ ಮಿ: ಫ್ರಾಂಕ್ ಆಂಥೋಣಿ, ಸರ್ದಾರ್ ಸಂತ್ ಸಿಂಗ್ ಮತ್ತು ಹುಸೇನ್ ಭಾಯಿ ಲಾಲ್‌ಜೀ ಇವರುಗಳು ನನ್ನ ಖೋತಾ ನಿರ್ಣಯವನ್ನು ತಮ್ಮ ನಿರ್ಣಯಗಳಿಗಿಂತ ಮೊದಲು ತೆಗೆದುಕೊಳ್ಳಲು ಸಮ್ಮತಿಸಿದ್ದಾರೆ. ಅದರಂತೆ ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ತಿಳುವಳಿಕೆ ಕೊಟ್ಟಿದ್ದೇನೆ. ಈ ಏರ್ಪಾಡಿಗೆ ತಾವು ಒಪ್ಪುತ್ತೀರಿ ಎಂದು ನಂಬಿದ್ದೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸರ್ಕಾರಿ ಸದಸ್ಯರಿಗೆ ಈ ಬಗ್ಗೆ ಏನಾದರೂ ತಕಾರಾರಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಈ ವಿಷಯದಲ್ಲಿ ನನಗೆ ಯಾವುದೇ ಹಕ್ಕುಗಳಿಲ್ಲ . ನಿಮ್ಮ ವಿವೇಚನೆಗೆ ಬಿಟ್ಟದ್ದು ಎಂದು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್): ಪಕ್ಷೇತರ ಸದಸ್ಯರಿಗೆ ಮೀಸಲಾದ ವೇಳೆಯಲ್ಲಿ ಈ ಸೂಚನೆಯನ್ನು ಮಂಡಿಸಲು ಮಾನ್ಯ ಸದಸ್ಯರು ಅವರುಗಳ ಒಪ್ಪಿಗೆಯನ್ನು ಪಡೆದಿರುವುದರಿಂದ ಮತ್ತು ಸೂಚನೆಯ ಉತ್ತರಕ್ಕೆ ಸಿದ್ಧತೆ ಮಾಡಿಕೊಳ್ಳಲು ಸೋಮವಾರ ಅಥವಾ ಮಂಗಳವಾರದವರೆಗೆ ಸರ್ಕಾರಕ್ಕೆ ಸಾಕಷ್ಟು ಸಮಯವಿರುವುದರಿಂದ ಕಾರ್ಯಸೂಚಿಯಲ್ಲಿ ಈ ಸೂಚನೆಯನ್ನು ಸೇರಿಸಲು ನಾನು ಅನುಮತಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೧೦ ಮಾರ್ಚ್ ೧೯೪೫, ಪು. ೧೩೧೧.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೮ ಮಾರ್ಚ್ ೧೯೪೫, ಪು. ೧೩೧೨.

# ೨೯೮
# ನೋಂದಾವಣೆಗೊಂಡ ಕಾರ್ಮಿಕ ಸಂಘಗಳು*

**೮೧೪. ಶ್ರೀ ಮನುಸುಬೇದಾರ್ :** ಅ) ಭಾರತದಲ್ಲಿ ನೋಂದಾವಣೆಗೊಂಡ ಎಷ್ಟು ಕಾರ್ಮಿಕ ಸಂಘಗಳಿವೆ? ಅವುಗಳ ಒಟ್ಟು ಸದಸ್ಯತ್ವ ಎಷ್ಟು ಎಂಬುದನ್ನು ಮಾನ್ಯ ಸದಸ್ಯರು ದಯಮಾಡಿ ತಿಳಿಸಬೇಕು.

ಆ) ಸರ್ಕಾರದ ವ್ಯವಹಾರಗಳನ್ನು ಬಿಟ್ಟು ಕೈಗಾರಿಕಾ ವ್ಯವಹಾರಗಳಲ್ಲಿ ನೇಮಕಗೊಂಡಿರುವ ಒಟ್ಟು ವ್ಯಕ್ತಿಗಳ ಸಂಖ್ಯೆ ಎಷ್ಟು?

ಇ) ಅಂಚೆ, ತಂತಿ, ರೈಲ್ವೆಯಂತಹ ಸರಕಾರಿ ಉದ್ಯೋಗಿಗಳ ಕಾರ್ಮಿಕ ಸಂಘಗಳನ್ನು ಸರ್ಕಾರ ಯಾವ ಆಧಾರದ ಮೇಲೆ ಪರಿಗಣಿಸುತ್ತದೆ?

ಈ) ಯುದ್ಧದಿಂದ ಉಂಟಾದ ಅಭಾವಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರದ ನಾಗರಿಕ ಸೇವಾ ಇಲಾಖೆಗಳ ಅಧೀನ ಸೇವಕರ ನ್ಯಾಯಬದ್ಧ ಕುಂದುಕೊರತೆಗಳ ನಿವಾರಣೆಗೆ ಸರ್ಕಾರ ಯಾವ ಮಾರ್ಗವನ್ನು ಅನುಸರಿಸಲು ಬಯಸಿದೆ?

ಉ) ಭಾರತ ಸರ್ಕಾರವು ದೇಶದಲ್ಲಿರುವ ಕಾರ್ಮಿಕ ಸಂಘಗಳಿಗೆ ಪ್ರತ್ಯಕ್ಷವಾದ ಅಥವಾ ಪರೋಕ್ಷವಾದ ಯಾವ ನೆರವನ್ನು ಅಥವಾ ಕೊಡುಗೆಯನ್ನು ಕಳೆದ ಐದು ವರ್ಷಗಳಿಂದ ನೀಡಿದೆ? ಯಾವ ಉದ್ದೇಶಕ್ಕಾಗಿ ನೀಡಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೪೨ರ ಮಾರ್ಚ್ ೩೧ರಂದು ೭೪೭ ನೋಂದಾಯಿತ ಸಂಘಗಳಿದ್ದವು. ೪೫೫ ಸಂಘಗಳ ಸದಸ್ಯತ್ವ (ಇವುಗಳ ಪೈಕಿ ನಿಯಮದ ಪ್ರಕಾರವರದಿಗಳನ್ನು ಸಲ್ಲಿಸಿದಂಥವು) ೫,೭೩,೫೨೦. ಉಳಿದ ಮಾಹಿತಿ ದೊರಕದಿರುವುದಕ್ಕೆ ವಿಷಾದಿಸುತ್ತೇನೆ.

ಆ) ದೊರಕುತ್ತಿರುವ ಇತ್ತೀಚಿನ ವರದಿಗಳ ಅನುಸಾರ, ೧೯೩೪ರ ಕಾರ್ಖಾನೆ ಶಾಸನದ ರೀತ್ಯಾ ಖಾಸಗಿ ಕಾರ್ಖಾನೆಗಳಲ್ಲಿ ೧೯೪೩ರಲ್ಲಿ ನೇಮಕಗೊಂಡ ವ್ಯಕ್ತಿಗಳ ದೈನಂದಿನ ಸರಾಸರಿ ಸಂಖ್ಯೆ ಸುಮಾರು ೨೧ಲಕ್ಷ ಮತ್ತು ೧೯೨೩ರ ಗಣಿಗಳ ಶಾಸನದ ರೀತ್ಯಾ ಗಣಿಗಳಲ್ಲಿ ನೇಮಕಗೊಂಡವರ ಸಂಖ್ಯೆ ೩ $^{1}/_{3}$ ಲಕ್ಷ. ಅಸ್ಸಾಮಿನ ಟೀ ತೋಟಗಳಲ್ಲಿ ೧೯೪೨–೪೩ರ ಅವಧಿಯಲ್ಲಿ ಕೆಲಸಗಾರರ ಸರಾಸರಿ ಸಂಖ್ಯೆ ಆರು ಲಕ್ಷಕ್ಕೆ ಮೇಲ್ಪಟ್ಟು.

ಇ) ಕೇಂದ್ರ ಸರ್ಕಾರದ ಕೈಗಾರಿಕಾ ಉದ್ಯೋಗಿಗಳ ಸಂಘಗಳ ಮಾನ್ಯತೆಯನ್ನು ನಿಯಂತ್ರಿಸುವ ನಿಯಮಗಳ ಪ್ರತಿಯನ್ನು ಸಭೆಯ ಮುಂದೆ ಇಡಲಾಗಿದೆ.

ಈ) ಸಮುದಾಯ ಇಲಾಖೆಗಳ ಅಧೀನ ಸೇವೆಯ ಸದಸ್ಯರು ತಮ್ಮ ಕುಂದುಕೊರತೆಗಳನ್ನು ಬಾಯಿಮಾತಿನಲ್ಲಿಯೊ ಅಥವಾ ಬರವಣಿಗೆಯಲ್ಲಿಯೊ ಇಲಾಖೆಗಳ ಮುಖ್ಯಸ್ಥರಿಗೆ ಅಥವಾ ತತ್ಸಮಾನ ಸ್ಥಾನದಲ್ಲಿರುವ ಅಧಿಕಾರಿಗಳಿಗೆ ಸಲ್ಲಿಸಬಹುದು. ಅಥವಾ ಅಸ್ತಿತ್ವದಲ್ಲಿರುವ ಮಾನ್ಯತೆ ಪಡೆದ ಸಂಘಗಳ, ಸಿಬ್ಬಂದಿ ಮಂಡಲಿಗಳ, ಕಾರ್ಖಾನೆ ಸಮಿತಿಗಳ ಮೂಲಕ ಮೇಲ್ಪಟ್ಟ ಅಧಿಕಾರಿಗಳನ್ನು ಅಥವಾ ಸರ್ಕಾರವನ್ನು ಸಂಪರ್ಕಿಸಬಹುದು. ೧೯೩೮ರ ಆಗಸ್ಟ್ ೨೪ರ ಗೃಹಖಾತೆಯ ತಿಳಿವಳಿಕೆ ಪತ್ರ (ನಂ. ೧೦೬/೩೮)ದಲ್ಲಿ ನಮೂದಿಸಲಾಗಿರುವ ನಿರ್ದೇಶನಗಳ

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೮ ಮಾರ್ಚ್ ೧೯೪೫, ಪು. ೧೧೭೧.

ಅನುಸಾರ ಸರ್ಕಾರಿ ಸೇವಕ ತನ್ನ ಕುಂದುಕೊರತೆಗಳನ್ನು ಇಲಾಖೆಯ ಮುಖ್ಯಸ್ಥರಿಗೊ ಅಥವಾ ಭಾರತ ಸರ್ಕಾರಕ್ಕೊ ಮನವಿ ಸಲ್ಲಿಸುವ ಮುಕ್ತ ಅವಕಾಶ ಉಂಟು.

ಉ) ಸಂಘದ ಸಭೆಗಳಿಗೆ ಹಾಜರಾಗಲು ಸಾಂದರ್ಭಿಕ ರಜೆಯ, ರೈಲು ಪ್ರಯಾಣದ ತೆರರಹಿತ ಉಚಿತ ಪಾಸುಗಳ ಸೌಲಭ್ಯವನ್ನು ಸಂಘದ ಅಧಿಕಾರಿಗಳಾಗಿರುವ ರೈಲ್ವೆ ಉದ್ಯೋಗಿಗಳಿಗೆ ರೈಲ್ವೆ ಇಲಾಖೆ ನೀಡುತ್ತದೆ. ಭಾರತ ಸರ್ಕಾರ ಕಾರ್ಮಿಕ ಸಂಘಗಳಿಗೆ ಬೇರಾವುದೇ ನೇರ ನೆರವನ್ನೂ ನೀಡುವುದಿಲ್ಲ.

## ೨೯೯
## ಯುದ್ಧೋಪಕರಣ ಕಾರ್ಖಾನೆಗಳ ಕೆಲಸಗಾರರ ಕೆಲಸದ ವೇಳೆ, ಸಂಬಳ ಇತ್ಯಾದಿ*

೯೨೬. **ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಅ) ಯುದ್ಧಸಾಮಗ್ರಿಗಳ ಉತ್ಪಾದನಾ ಕಾರ್ಖಾನೆಗಳಲ್ಲಿ ಕಾರ್ಮಿಕರು ಕೆಲಸ ಮಾಡಬೇಕಾದ ಎಷ್ಟು ಅವಧಿ ಗಂಟೆಗಳು? ಗಣಿಗಳಲ್ಲಿ ಒಂದೇ ಸಮನೆ(at a stretch) ಎಷ್ಟು ಗಂಟೆ ಕೆಲಸ ಮಾಡಬೇಕು ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸಬೇಕು.

ಆ) ಅದೇ ಕೆಲಸಗಾರರು ಅದೇ ಕಾರ್ಖಾನೆ ಮತ್ತು ಗಣಿಗಳಲ್ಲಿ ಸರದಿಯಲ್ಲಿ ಕೆಲಸ ಮಾಡುವರೆ?

ಇ) ಕಾರ್ಖಾನೆ ಮತ್ತು ಗಣಿಗಳಲ್ಲಿ ನಿಯತಕಾಲ ಮೀರಿ ಕೆಲಸ ಮಾಡುವ ಕಾರ್ಮಿಕರಿಗೆ ಕೊಡುವ ಕೂಲಿ ದರ ಎಷ್ಟು?

ಈ) ಕಾರ್ಖಾನೆ ಮತ್ತು ಗಣಿಗಳಿಗೆ ಸರಬರಾಜು ಮಾಡುವ ಪಡಿತರಕ್ಕೆ ಹಾಕುವ ಬೆಲೆಯೆಷ್ಟು? ಗಿರಣಿಗಳಲ್ಲಿ, ಕಾರ್ಖಾನೆಗಳಲ್ಲಿ ಮತ್ತು ಗಣಿಗಳಲ್ಲಿ ಪ್ರತಿಯೊಬ್ಬ ಕಾರ್ಮಿಕನಿಗೆ ನಿಗದಿ ಮಾಡಿರುವ ಪ್ರಮಾಣದ ಮೊತ್ತವೆಷ್ಟು? ಕಾರ್ಖಾನೆ, ಗಿರಣಿ ಮತ್ತು ಗಣಿಗಳಲ್ಲಿ ಪಡಿತರ ಹಂಚಿಕೆಯ ಮೇಲ್ವಿಚಾರಣೆಗೆ ಸರ್ಕಾರದಿಂದ ಯಾರಾದರೂ ಅಧಿಕಾರಿ ನೇಮಕವಾಗಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧೯೩೪ರ ಕಾರ್ಖಾನೆಗಳ ಶಾಸನದ ೩೪, ೩೬– ೩೮ ಖಂಡಗಳ ಅನುಸಾರ ಕಾರ್ಖಾನೆಗಳ ಕೆಲಸದ ಅವಧಿಯನ್ನು ನಿಯಂತ್ರಿಸಲಾಗಿದೆ. ಹಾಗೆಯೇ ಭಾರತದ ಗಣಿಗಳ ಶಾಸನದ ೨೨ ಬಿ ಮತ್ತು ೨೨ ಸಿ ಖಂಡಗಳ ಪ್ರಕಾರ ಗಣಿಗಳ ಕೆಲಸದ ಅವಧಿಯನ್ನು ನಿಯಂತ್ರಿಸಲಾಗಿದೆ. ಸೌಲಭ್ಯಗಳಲ್ಲಿ ಪೂರ್ಣ ಅಥವಾ ಅಂಶಿಕ ರಿಯಾಯಿತಿಗಳನ್ನು ಪ್ರಾಂತ್ಯ ಸರ್ಕಾರಗಳು ಯುದ್ಧಸಾಮಗ್ರಿಗಳನ್ನು ಉತ್ಪಾದಿಸುವ ಕಾರ್ಖಾನೆಗಳಿಗೆ ನೀಡಿವೆ. ಅಲ್ಪಾವಧಿಗಳನ್ನೂ ಮತ್ತು ತುರ್ತುಸ್ಥಿತಿಗಳನ್ನು ಹೊರತುಪಡಿಸಿ ವಾರಕ್ಕೆ ೬೦ ಘಂಟೆಗಳು ಮೀರಕೂಡದೆಂದು ನಿರ್ದೇಶನ ನೀಡಲಾಗಿದೆ. ನಿಬಂಧನೆಯ ಅಗತ್ಯ ಕರ್ತವ್ಯಗಳಿಂದ ವಿಶ್ರಾಂತಿಯ ವಿರಾಮ ಕಾಲಕ್ಕೆಂದು ಸಾಮಾನ್ಯವಾಗಿ ಯಾವುದೇ ರಿಯಾಯಿತಿಯನ್ನು ನೀಡಲಾಗಿಲ್ಲ. ಇನ್ನೂ ಹೆಚ್ಚಿನ ಮಾಹಿತಿ ದೊರಕದಿರುವುದಕ್ಕೆ ವಿಷಾದಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೧೩ ಮಾರ್ಚ್ ೧೯೪೫, ಪು. ೧೪೦೭.

ಬೇರೆ ಬೇರೆ ವರ್ಗಗಳ ಕಾರ್ಖಾನೆ ಮತ್ತು ಗಣಿಗಳಲ್ಲಿ ಹಾಗೂ ವಿಶಿಷ್ಟ ವರ್ಗದ ಬೇರೆಬೇರೆ ಘಟಕಗಳಲ್ಲಿ ಕೂಲಿ ದರಗಳು ಸಾಕಷ್ಟು ವ್ಯತ್ಯಾಸದಿಂದ ಕೂಡಿರುತ್ತವೆ. ಕೂಲಿಯ ಸಂಬಂಧವಾಗಿ ಅಥವಾ ಸಾಮಾನ್ಯ ಸರಾಸರಿಯ ಕೂಲಿಗಳ ಸಂಬಂಧವಾಗಿ ವಿವರವಾದ ಮಾಹಿತಿ ಸಿಗದಿರುವುದಕ್ಕೆ ವಿಷಾದಪಡುತ್ತೇನೆ.

ಆ) ಪ್ರಶ್ನೆ ಅರ್ಥವಾಗುವುದಿಲ್ಲ.

ಇ) ೧೯೪೩ರ ಕಾರ್ಖಾನೆ ಶಾಸನದ ೪೭ನೇ ಖಂಡ ಕಾರ್ಖಾನೆಗಳ ನಿಯತಕಾಲ ಮೀರಿ ಮಾಡಿದ ಕೆಲಸಕ್ಕೆ ಕೊಡುವ ಕೂಲಿ ದರವನ್ನು ನಿರ್ದೇಶಿಸಿದೆ. ಈ ಖಂಡದ ನಿಯಮಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಯಾವುದೇ ಬಗೆಯ ರಿಯಾಯಿತಿಗಳನ್ನು ನೀಡಲಾಗುವುದಿಲ್ಲ. ಗಣಿಗಳ ಅಥವಾ ಅಲ್ಲಿ ಕೆಲಸ ಮಾಡುವವರ ಸುರಕ್ಷತೆಗೆ ಅಪಾಯ ಒದಗುವ ತುರ್ತು ಸಂದರ್ಭದ ಹೊರತು ಗಣಿಗಳಲ್ಲಿ ನಿಯತ ಕಾಲ ಮೀರಿದ ಹೆಚ್ಚುವರಿ ಕೆಲಸಕ್ಕೆ ಅನುಮತಿ ನೀಡಲಾಗುವುದಿಲ್ಲ.

ಈ) ಕಾರ್ಖಾನೆ ಮತ್ತು ಗಿರಣಿಗಳ ಕಾರ್ಮಿಕರಿಗೆ ಸರಬರಾಜು ಮಾಡುವ ಪಡಿತರಕ್ಕೆ ಹಾಕುವ ಬೆಲೆಯಲ್ಲಿ ಏಕರೂಪತೆ ಇಲ್ಲ. ಆದರೆ ಉದ್ಯಮಿಗಳು ಆಹಾರ ಧಾನ್ಯಗಳನ್ನು ನಿಯಂತ್ರಿತ ಬೆಲೆಗಿಂತ ಕಡಿಮೆದರದಲ್ಲಿ ಸರಬರಾಜು ಮಾಡುವರೆಂದು ತಿಳಿದುಬಂದಿದೆ.

ಪಡಿತರ ಪ್ರದೇಶಗಳಲ್ಲಿ ಕೆಲಸಗಾರರು, ಸಾರ್ವಜನಿಕರು ಪಡಿತರ ಪಡೆವ ಶ್ರೇಣಿಯಲ್ಲಿಯೇ ಪಡೆಯುತ್ತಾರೆ. ಹೆಚ್ಚು ಶ್ರಮದ ಕೆಲಸಗಾರರು ವಿಶೇಷ ಪಡಿತರ ಪಡೆಯಲು ಅರ್ಹರಾಗಿರುತ್ತಾರೆ. ಇದರ ಜೊತೆಗೆ, ಬೇಯಿಸಿದ ಆಹಾರವನ್ನು ಸರಬರಾಜು ಮಾಡುವ ಕೈಗಾರಿಕಾ ಸಂಸ್ಥೆಗಳು ಪಡೆತರದ ಜೊತೆಗೆ ಹೊರಗಡೆಯಿಂದಲೂ ಸರಬರಾಜು ವ್ಯವಸ್ಥೆ ಮಾಡಿಕೊಂಡಿರುತ್ತವೆ.

ಬಿಹಾರದ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿಯಂತ್ರಿತ ಬೆಲೆಯಲ್ಲಿ ಕೊಡುವ ಪ್ರತಿಯೊಬ್ಬ ಕೆಲಸಗಾರನಿಗೆ ೪ ಸೇರು ಮತ್ತು ಮಗುವಿದ್ದರೆ ೨ ಸೇರು ಹಾಗೂ ಒಂದು ರೂಪಾಯಿಗೆ ಆರು ಸೇರಿನಂತೆ ರಿಯಾಯಿತಿ ದರದಲ್ಲಿ ಮೂಲ ಪಡಿತರದ ¼ ಭಾಗದಷ್ಟು ಬೇಳೆಯನ್ನು ಕೊಡಲಾಗುತ್ತದೆ. ಇದರ ಜೊತೆಗೆ ಗಣಿಗಳಲ್ಲಿನ ಪ್ರತಿಯೊಂದು ಹಾಜರಾತಿಗೂ ½ ಸೇರು ಅಕ್ಕಿ ಅಥವಾ ಬೇರೆ ಆಹಾರ ಧಾನ್ಯವನ್ನು ಉಚಿತವಾಗಿ ನೀಡಲಾಗುತ್ತದೆ. ಬಂಗಾಳದ ಕೆಲವು ಕಲ್ಲಿದ್ದಲು ಗಣಿಗಳು ಕೊಂಚ ವ್ಯತ್ಯಾಸವುಳ್ಳ ಸದೃಶ ಶ್ರೇಣಿಯನ್ನೇ ಅಳವಡಿಸಿಕೊಂಡಿವೆ. ಇನ್ನೂ ಕೆಲವು ಕಡಿಮೆ ಬೆಲೆಯಲ್ಲಿ ಪ್ರತಿಯೊಬ್ಬ ಕೆಲಸಗಾರನಿಗೆ ವಾರಕ್ಕೆ ೬ ಸೇರನ್ನು ಕೊಡುತ್ತಿವೆ. ಬಿಹಾರಿನ ಮತ್ತು ಕೇಂದ್ರ ಪ್ರದೇಶದ ಕೆಲವು ಕಲ್ಲಿದ್ದಲು ಗಣಿಗಳಲ್ಲಿ ಪಡಿತರವನ್ನು ರಿಯಾಯಿತಿ ದರದಲ್ಲಿ ಹೀಗೆ ಕೊಡುತ್ತಿವೆ – ಪ್ರಾಪ್ತ ವಯಸ್ಸಿನ ಕೆಲಸಗಾರನಿಗೆ ವಾರಕ್ಕೆ ೬ ಸೇರು, ಒಬ್ಬ ಮಹಿಳಾ ಅವಲಂಬಿತೆ ಇದ್ದರೆ ೩½ ಸೇರು ಮತ್ತು ಮಗುವಿದ್ದರೆ ೧¾ ಸೇರು.

ಕೆಲಸಗಾರರಿಗೆ ಪಡಿತರ ಹಂಚುವುದನ್ನು ನೋಡಿಕೊಳ್ಳಲು ಆಹಾರ ವಿತರಣಾ ಸಂಸ್ಥೆಗಳನ್ನು ಬಿಟ್ಟು ಸರ್ಕಾರದ ವಿಶೇಷ ಅಧಿಕಾರಿಗಳನ್ನು ನೇಮಿಸಿಲ್ಲ. ಕಲ್ಲಿದ್ದಲು ಗಣಿಗಳಿಗೆ ಸಂಬಂಧಿಸಿದಂತೆ ಆರು ಜನ ಪಡಿತರ ತನಿಖಾಧಿಕಾರಿಗಳನ್ನು ನೇಮಿಸಲಾಗಿದೆ – ಬಿಹಾರಕ್ಕೆ ಮೂರು (ಬಿಹಾರ ಸರ್ಕಾರದ ಅಧೀನದಲ್ಲಿ) ಮತ್ತು ಬಂಗಾಳದ ಗಣಿ ಇಲಾಖೆಗಳಿಗೆ ಮೂರು.

# ೩೦೦
# ಕಾರ್ಮಿಕರಿಗೆ ಕನಿಷ್ಠ ಜೀವನೋಪಾಯ ವೇತನ ನಿಗದಿ*

**೯೩೭. ಶ್ರೀ ಅಮರೇಂದ್ರನಾಥ್ ಚಟ್ಟೋಪಾಧ್ಯಾಯ :** ಅ) ಕಾರ್ಮಿಕ ವರ್ಗಗಳಿಗೆ ಬೇಕಾಗುವ ಆಹಾರ ಧಾನ್ಯ ಮತ್ತು ಬಟ್ಟೆಗಳ ಬೆಲೆಗಳಿಗನುಗುಣವಾಗಿ ಗಣಿ, ಗಿರಣಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ಜೀವನೋಪಾಯದ ವೇತನ ನಿಗದಿಯನ್ನು ಮಾನ್ಯ ಕಾರ್ಮಿಕ ಸದಸ್ಯರು ಮಾಡುವರೆ?

ಆ) ಗಣಿ, ಗಿರಣಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಏನಾದರೂ ವ್ಯವಸ್ಥೆ ಮಾಡಲಾಗಿದೆಯೆ? ವಯಸ್ಕ ಕಾರ್ಮಿಕರಿಗೆ ವಿದ್ಯಾಭ್ಯಾಸ ಒದಗಿಸುವ ಯಾವುದಾದರೂ ವ್ಯವಸ್ಥೆಯುಂಟೆ?

ಇ) ಗಣಿ, ಗಿರಣಿ ಮತ್ತು ಕಾರ್ಖಾನೆಗಳಲ್ಲಿ ಸಂಬಳ ಸಹಿತವಾದ ರಜಾದಿನಗಳಿಗೆ ಅವಕಾಶವಿದೆಯೆ? ವೈದ್ಯಕೀಯ ಚಿಕಿತ್ಸೆಗೆ ವ್ಯವಸ್ಥೆಯುಂಟೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಗಣಿ, ಗಿರಣಿ ಮತ್ತು ಕಾರ್ಖಾನೆಗಳ ಕಾರ್ಮಿಕರಿಗೆ ಕನಿಷ್ಠ ಜೀವನೋಪಾಯದ ವೇತನ ನಿಗದಿಗೆ ಯಾವುದೇ ಶಾಸನ ರಚನೆಯಾಗಿಲ್ಲ.

ಆ) ಪ್ರಾಂತೀಯ ವಿಧಾಯಕ ಅಧಿಕಾರಿಗಳು ಗಣಿ, ಗಿರಣಿ ಮತ್ತು ಕಾರ್ಖಾನೆಗಳ ಹೊರಗಡೆ ಕಾರ್ಮಿಕರ ಮಕ್ಕಳಿಗೆ ಅಥವಾ ವಯಸ್ಕ ಕಾರ್ಮಿಕರಿಗೆ ವಿದ್ಯಾಭ್ಯಾಸ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಕೆಲವು ಉದ್ದಿಮೆಗಳ ಧಣಿಗಳು ಎರಡು ಉದ್ದೇಶಗಳಿಗೂ ತಾವೇ ಅವಕಾಶ ಕಲ್ಪಿಸಿಕೊಂಡಿದ್ದಾರೆ. ಆದರೆ ಅದರ ವಿವರವಾದ ಮಾಹಿತಿ ನನ್ನ ಬಳಿ ಇಲ್ಲ . ಕೈಗಾರಿಕಾ ಉದ್ದಿಮೆಯ ಧಣಿಗಳಿಗೆ ಈ ಸಂಬಂಧವಾಗಿ ಯಾವುದೇ ಬಗೆಯ ಕಾನೂನು ನಿರ್ಬಂಧವಿಲ್ಲವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು.

ಇ) ಸಂಬಳ ಸಹಿತವಾದ ರಜೆ ನೀಡಲು ಕಾನೂನಿನಲ್ಲಿ ಅಗತ್ಯವಾದ ಅವಕಾಶವಿಲ್ಲ . ಅನಿಯತಕಾಲಿಕ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಸದನದ ಮುಂದೆ ಈ ವಿಷಯದ ಮಸೂದೆಯೊಂದಿದೆ. ಅದನ್ನು ಆಯ್ಕೆ ಸಮಿತಿಗೆ ವಹಿಸಿದೆ.

ಕಾನೂನು ಅವಕಾಶಗಳನ್ನು ಹೊರತುಪಡಿಸಿ ಕೆಲವು ನಿರ್ವಾಹಕರು ತಮ್ಮ ಉದ್ಯೋಗಿಗಳಿಗೆ ಸಂಬಳಸಹಿತ ರಜೆ ನೀಡುತ್ತಾರೆ. ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದಂತೆ, ಕಾರ್ಖಾನೆ ಮತ್ತು ಗಣಿಗಳಲ್ಲಿರುವ ಏಕಮಾತ್ರ ಶಾಸನಬದ್ಧ ಉಪಬಂಧವೆಂದರೆ ಪ್ರಥಮ ಚಿಕಿತ್ಸೆ . ಕೆಲವು ನಿರ್ವಾಹಕರು ತಾವೇ ಔಷಧದ ಅಂಗಡಿಗಳನ್ನು ಮತ್ತು ಆಸ್ಪತ್ರೆಗಳನ್ನು ನಡೆಸುತ್ತಾರೆ. ಇವುಗಳನ್ನು ಬಿಟ್ಟು , ಕಾರ್ಮಿಕರು ಪ್ರಾಂತೀಯ ಸರ್ಕಾರಗಳು ಒದಗಿಸುವ ವೈದ್ಯಕೀಯ ಸೌಲಭ್ಯಗಳನ್ನು ಅವಲಂಬಿಸಬೇಕಾಗುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೧೩ ಮಾರ್ಚ್ ೧೯೪೫, ಪು. ೧೪೦೭.

## ೩೦೧
## ಗಣಿಗಳಲ್ಲಿ ಮಹಿಳಾ ಕಾರ್ಮಿಕರು*

**೯೩೮ ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಅ) ಗಣಿಗಳಲ್ಲಿರುವ ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು? ಗಣಿಗಳಲ್ಲಿ ಬಾಲ ಕಾರ್ಮಿಕರಿರುವರೆ? ಇದ್ದರೆ, ಯಾವ ವಯಸ್ಸಿನವರು? ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸಬೇಕು.

ಆ) ಕಾರ್ಖಾನೆ, ಗಿರಣಿ ಮತ್ತು ಗಣಿಗಳಲ್ಲಿ ಮಹಿಳೆಯರಿಗೆ ಯಾವ 'ಮಾತೃತ್ವ ಸೌಲಭ್ಯ'ಗಳನ್ನು ಒದಗಿಸಲಾಗಿದೆ? ಗಣಿಗಳಲ್ಲಿ ಮಹಿಳಾ ಕಾರ್ಮಿಕರ ಮುಂದುವರಿಕೆ ಬಗ್ಗೆ ಮಾನ್ಯ ಸದಸ್ಯರು ಇನ್ನೆಷ್ಟು ಕಾಲ ಯೋಚಿಸಬೇಕು?

ಇ) ಕಾರ್ಖಾನೆ, ಗಿರಣಿ ಮತ್ತು ಗಣಿಗಳಲ್ಲಿ ಕಾರ್ಮಿಕ ಕಲ್ಯಾಣಾಧಿಕಾರಿಗಳ ಕರ್ತವ್ಯಗಳೇನು? ಅವರ ವಿದ್ಯಾರ್ಹತೆಗಳೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ೧೯೪೩ರಲ್ಲಿ ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಸಂಖ್ಯೆ ೭೨,೪೦೩ (ಗಣಿಗಳ ಮೇಲೆ ಮತ್ತು ಒಳಗೆ ಕೆಲಸ ಮಾಡುವವರನ್ನು ಇದು ಒಳಗೊಂಡಿದೆ) ೧೯೪೪ರ ಅಂಕಿಅಂಶ ದೊರಕಿಲ್ಲ. ಭಾರತದ ಗಣಿಗಳ ಶಾಸನದ ಅನುಸಾರ ಗಣಿಗಳಲ್ಲಿ ಮಕ್ಕಳನ್ನು ನೇಮಕ ಮಾಡಿಕೊಳ್ಳುವುದಿಲ್ಲ.

ಆ) ಹಾಲಿ ಜಾರಿಯಲ್ಲಿರುವ ಅಥವಾ ಯೋಜನೆಯಲ್ಲಿರುವ ಮಾತೃತ್ವ ಸೌಲಭ್ಯಗಳಿಗೆ ಸಂಬಂಧಿಸಿದ ಶಾಸನದ ಮುಖ್ಯ ಅವಕಾಶಗಳ ತೌಲನಿಕ ಹೇಳಿಕೆಯನ್ನು ಸದನದ ಮುಂದೆ ಮಂಡಿಸಲಾಗಿದೆ. ಮುಂಬೈ, ಮದ್ರಾಸ್‌ಗಳಿಂದ ಬಂದ ಇತ್ತೀಚಿನ ಸುದ್ದಿಯ ಪ್ರಕಾರ ಆ ಪ್ರಾಂತ್ಯಗಳ ಕೆಲವು ಗಿರಣಿಗಳು ನಿಬಂಧನೆಯ ಪ್ರಕಾರ ಇರುವ 'ಮಾತೃತ್ವ ಸೌಲಭ್ಯ'ದ ದರವನ್ನು ೮ ಆಣೆಯಿಂದ ೧೨ ಆಣೆಗಳಿಗೆ ಹೆಚ್ಚಿಸಿವೆ ಎಂದು ತಿಳಿದುಬಂದಿದೆ.

ಪ್ರಶ್ನೆಯ ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ, ಗಣಿಗಳ ಕೆಲಸದಿಂದ ಮಹಿಳೆಯರನ್ನು ಪೂರ್ಣ ತೆಗೆದುಹಾಕಬೇಕೆಂಬ ಯಾವುದೇ ಉದ್ದೇಶವಿಲ್ಲ.

ಇ) ಕಾರ್ಮಿಕ ಕಲ್ಯಾಣಾಧಿಕಾರಿಯ ಕರ್ತವ್ಯಗಳು ಸಾಮಾನ್ಯವಾಗಿ ಕೆಳಕಂಡಂತಿವೆ.

೧. ಕಾರ್ಮಿಕ ಸಂಬಂಧಗಳು ಮತ್ತು ಕೆಲಸದ ಸ್ಥಿತಿಗತಿಗಳಿಗೆ ಸಂಬಂಧಿಸಿದ ಎಲ್ಲ ಅಂಶಗಳಲ್ಲೂ ಕೆಲಸಗಾರರ ಮತ್ತು ಉದ್ಯಮಿಗಳ ಮಧ್ಯೆ ನಿಕಟ ಸಂಪರ್ಕ ಏರ್ಪಡಿಸುವುದು.

೨. ಉದ್ಯಮಿಗಳ ಮತ್ತು ಕಾರ್ಮಿಕರ ಮಧ್ಯೆ ಸೂಕ್ತ ತಿಳುವಳಿಕೆ, ನಿಕಟ ಸಹಕಾರ ಮತ್ತು ಕಷ್ಟ ಕಾರ್ಪಣ್ಯಗಳ ಬಗ್ಗೆ ಪರಸ್ಪರ ಅರಿವನ್ನು ಹೆಚ್ಚಿಸುವುದು.

೩. ಕಾರ್ಮಿಕರ ಯೋಗಕ್ಷೇಮಕ್ಕಾಗಿ ರಚನಾತ್ಮಕ ಸಲಹೆಗಳನ್ನು ನೀಡುವುದು ಮತ್ತು ನಿರ್ವಹಣೆಯ ಎಲ್ಲ ಯೋಗಕ್ಷೇಮ ಚಟುವಟಿಕೆಗಳ ಮೇಲ್ವಿಚಾರಣೆ ನೋಡಿಕೊಳ್ಳುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೧೩ ಮಾರ್ಚ್ ೧೯೪೫, ಪು. ೧೪೦೮–೦೯.

೪. ಕೆಲಸಗಾರರ ಕುಂದುಕೊರತೆಗಳನ್ನು ತಾವೇ ತಿಳಿದುಕೊಳ್ಳುವುದು ಮತ್ತು ಅಂಥ ಕುಂದುಕೊರತೆಗಳ ನಿವಾರಣೆಗಾಗಿ ಶ್ರಮಿಸುವುದು ಹಾಗೂ ಸಾಮಾನ್ಯವಾಗಿ ಸಂಘರ್ಷದ ಕಾರಣಗಳನ್ನು ತೊಡೆದುಹಾಕಲು ಪ್ರಯತ್ನಿಸುವುದು.

ಅರ್ಹತೆಗಳಿಗೆ ಸಂಬಂಧಿಸಿದಂತೆ, ಶೈಕ್ಷಣಿಕ ಅರ್ಹತೆಗಳಿಗೆ ಸಾಕಷ್ಟು ಮಾನ್ಯತೆ ಕೊಟ್ಟರೂ, ಮುಖ್ಯವಾದ ಅರ್ಹತೆಯೆಂದರೆ, ಸಾಮಾಜಿಕ ಸೇವೆಯ ಅನುಭವ. ಕಲ್ಕತ್ತ ವಿಶ್ವವಿದ್ಯಾನಿಲಯ ಅಥವಾ ಮುಂಬೈನ ಸರ್ ದೊರಬ್ಜಿ ಟಾಟಾ ಸಮಾಜ ಸೇವೆಯ ಪದವೀಧರ ಶಾಲೆಯಂಥ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುವುದು.

## ಪ್ರಾಂತ್ಯಗಳಲ್ಲಿ ಮತ್ತು ಗಣೆಗಳಲ್ಲಿ ಹಾಲಿ ಜಾರಿಯಲ್ಲಿರುವ ಮಾತೃತ್ವ ಸೌಲಭ್ಯಗಳಿಗೆ ಸಂಬಂಧಿಸಿದ ಶಾಸನದ ಕೆಲವು ಮುಖ್ಯ ಅವಕಾಶ ಮತ್ತು ನಿಬಂಧನೆಗಳನ್ನು ತೋರಿಸುವ ತೌಲನಿಕ ಹೇಳಿಕೆ

| ಪ್ರಾಂತ್ಯ | ವರ್ಷ | ಅರ್ಹತಾ ಅವಧಿ (ತಿಂಗಳುಗಳು) | ಮಾತೃತ್ವ ಸೌಲಭ್ಯದ ಗರಿಷ್ಠಾವಧಿ (ವಾರಗಳು) | ಮಾತೃತ್ವ ಸೌಲಭ್ಯದ ದರ | ಶಾಸನ ಉಲ್ಲಂಘನೆಗೆ ಉದ್ಯಮಿಯಿಂದ ದಂಡ |
|---|---|---|---|---|---|
| ಮುಂಬೈ | ೧೯೨೯ | ೯ | ೮ | ದಿನಕ್ಕೆ ೮ ಆಣೆ ಅಥವಾ ಸರಾಸರಿ ದಿನಗೂಲಿ (ಯಾವುದು ಕಡಿಮೆಯೋ ಅದು)<br>ಆದರೆ ಮುಂಬೈ ಅಹಮದಾಬಾದಿನಲ್ಲಿ ದಿನಕ್ಕೆ ೮ ಆಣೆ | ರೂ. ೫೦೦ |
| ಮಧ್ಯ ಪ್ರಾಂತ್ಯ ಮತ್ತು ಬೆರಾರ್ | ೧೯೩೦ | ೯ | ೮ | ದಿನಕ್ಕೆ ೮ ಆಣೆ ಅಥವಾ ಸರಾಸರಿ ದಿನಗೂಲಿ (ಯಾವುದು ಕಡಿಮೆಯೋ ಅದು) | ರೂ. ೫೦೦ |
| ಮದ್ರಾಸ್ | ೧೯೩೪ | *ಒಂದು ವರ್ಷದ ಅವಧಿಯಲ್ಲಿ ೨೪೦ ದಿನಗಳು (೮ ತಿಂಗಳುಗಳು) | ೭ | ದಿನಕ್ಕೆ ೮ ಆಣೆ | ರೂ. ೨೫೦ |
| ಸಂಯುಕ್ತ ಪ್ರಾಂತ್ಯ | ೧೯೩೮ | ೬ | ೮ | ದಿನಕ್ಕೆ ೮ ಆಣೆ ಅಥವಾ ಸರಾಸರಿ ದಿನಗೂಲಿ | ಮೊದಲ ತಪ್ಪಿಗೆ ರೂ. ೫೦೦ ಆ ನಂತರದ ತಪ್ಪುಗಳಿಗೆ ರೂ. ೧,೦೦ |
| ಬಂಗಾಳ | ೧೯೩೯ | ೯ | ೮ | " | ರೂ. ೫೦೦ |
| ಪಂಜಾಬು | ೧೯೪೩ | ೯ | ೬೦ದಿನಗಳು | ದಿನಕ್ಕೆ ೧೨ ಆಣೆ | ರೂ. ೫೦೦ |
| ಅಸ್ಸಾಂ | ೧೯೪೪ | ೧೫೦ ದಿನಗಳು | ೮ | (೧) ಟೀ ತೋಟಗಳಲ್ಲಿ ಗರ್ಭಿಣಿಗೆ ೧ ರೂ. ಬಾಣಂತಿಗೆ ರೂ. ೧/೪ ರೂ. (೨) ಬೇರೆ ಉದ್ಯಮಗಳಲ್ಲಿ ವಾರಕ್ಕೆ ೨ ರೂ. ಅಥವಾ ಸರಾಸರಿ ವಾರದ ಕೂಲಿ | ರೂ. ೫೦೦ |
| ಗಣೆಗಳು | ೧೯೪೧ | ೬ | ೮ | ದಿನಕ್ಕೆ ೮ ಆಣೆ | ರೂ. ೫೦೦ |

## ३೦೨
## ಕಾರ್ಮಿಕಕಲ್ಯಾಣದ ಬಗೆಗೆ ಭಾರತೀಯರಿಗೆ ಬ್ರಿಟನ್ನಿನಲ್ಲಿ ತರಬೇತಿ*

**೯३೬. ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಕಾರ್ಮಿಕ ಕಲ್ಯಾಣದ ಬಗೆಗೆ ತರಬೇತಿ ನೀಡಲು ಗಣನೀಯ ಸಂಖ್ಯೆಯ ಜನರನ್ನು ಕಾರ್ಮಿಕ ಇಲಾಖೆ ಬ್ರಿಟನ್ನಿಗೆ ಕಳಿಸುತ್ತಿದೆ ಎಂಬುದು ನಿಜವೆ? ನಿಜವಿದ್ದರೆ, ಸರ್ಕಾರ ಭಾರತದಲ್ಲೇ ಈ ಜನರಿಗೇಕೆ ತರಬೇತಿ ನೀಡಬಾರದು? ಅವರ ತರಬೇತಿ ಯೋಜನೆಯ ವೆಚ್ಚವೆಷ್ಟು? ಅಂಥ ತರಬೇತಿದಾರರಿಗೆ ಇರಬೇಕಾದ ಕನಿಷ್ಠ ಅರ್ಹತೆಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರತಿಯೊಂದು ತಂಡದಲ್ಲೂ ೨೦ ಅಧಿಕಾರಿಗಳಿರುವ – ಕೇಂದ್ರ ಸರ್ಕಾರದ ೧೨ ಅಧಿಕಾರಿಗಳು ಪ್ರಾಂತ್ಯ ಸರ್ಕಾರಗಳ ಹಾಗೂ ಸಂಸ್ಥಾನಗಳ ೮ ಅಧಿಕಾರಿಗಳು – ಮೂರು ತಂಡಗಳನ್ನು ಕಳಿಸಬೇಕೆಂದು ಮೊದಲು ನಿರ್ಧಾರ ತೆಗೆದುಕೊಳ್ಳಲಾಯಿತು. ಮೊದಲ ತಂಡದ ೧೨ ಜನ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಆರ್ಥಿಕ ಮಂಜೂರಾತಿಯನ್ನು ನೀಡಲಾಯಿತು.

ಯುದ್ಧೋತ್ತರ ಅವಧಿಯ ಪ್ರಾರಂಭದ ದಿನಗಳಲ್ಲಿ ದೀರ್ಘ ಪ್ರಯೋಗಗಳ ವಿಧಾನದ ಹೊರತಾಗಿ ಭಾರತದಲ್ಲಿ ಕಾರ್ಮಿಕ ಆಡಳಿತಕ್ಕೆ ಬೇಕಾದ ತರಬೇತಿ ಮತ್ತು ಅನುಭವವನ್ನು ನಮ್ಮದನ್ನಾಗಿಸಿಕೊಳ್ಳಲಾಗಲಿಲ್ಲ. ಆದ್ದರಿಂದಲೇ ಹೆಚ್ಚು ಉದ್ಯಮೀಕರಣಗೊಂಡಿರುವ ಬ್ರಿಟನ್ನಿನಂಥ ದೇಶಗಳ ಅನುಭವ ಮತ್ತು ಪ್ರಯೋಗಗಳ ಪ್ರಯೋಜನ ಪಡೆಯುವ ಅಗತ್ಯ ಕಂಡುಬಂತು.

ಮೊದಲನೆಯ ತಂಡಕ್ಕೆ ನಾಮಕರಣಗೊಂಡ ಕೇಂದ್ರ ಸರ್ಕಾರದ ಅಧಿಕಾರಿಗಳಿಗಾಗಿ ಸರ್ಕಾರಕ್ಕೆ ಬಿದ್ದ ಅಂದಾಜು ವೆಚ್ಚ ಒಂದು ಲಕ್ಷ ರೂಪಾಯಿ. ಪ್ರಾಂತ್ಯ ಸರ್ಕಾರಗಳು ಮತ್ತು ಸಂಸ್ಥಾನಗಳು ನಾಮಕರಣಗೊಂಡ ತಮ್ಮ ಅಧಿಕಾರಿಗಳಿಗೆ ತಗಲುವ ವೆಚ್ಚವನ್ನು ಭರಿಸುತ್ತವೆ.

ಕನಿಷ್ಠ ಅರ್ಹತೆಗಳೆಂದರೆ, ಅಧಿಕಾರಿಗಳು ಸರ್ಕಾರಿ ಉದ್ಯೋಗಗಳಲ್ಲಿರಬೇಕು ಅಥವಾ ಸರ್ಕಾರದ ಅಧೀನದಲ್ಲಿರುವ ಹುದ್ದೆಗಳಿಗೆ ನಿಯೋಜಿತರಾಗಿರಬೇಕು ಮತ್ತು ಕಾರ್ಮಿಕ ಅಭಿವೃದ್ಧಿಯ ಅಥವಾ ಕಾರ್ಮಿಕ ಶಾಸನಾಡಳಿತದ ಅನುಭವ ಇರಬೇಕು. ಉನ್ನತ ಶೈಕ್ಷಣಿಕ ಅರ್ಹತೆಗಳಿರುವ ಅಧಿಕಾರಿಗಳಿಗೆ ಆದ್ಯತೆ ನೀಡಲಾಗುವುದು.

## ३೦३
## ದೆಹಲಿ ಪ್ರಾಂತ್ಯದ ಕಾರ್ಖಾನೆ ಪರಿಶೀಲಕರು ಮತ್ತು ಕಾರ್ಮಿಕ ಕಲ್ಯಾಣಾಧಿಕಾರಿಗಳು **

**೯೬४. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ:

ಅ) ದೆಹಲಿ ಪ್ರಾಂತ್ಯದಲ್ಲಿರುವ ಕಾರ್ಖಾನೆ ಪರಿಶೀಲಕರುಗಳ ಮತ್ತು ಕಾರ್ಮಿಕ ಕಲ್ಯಾಣಾಧಿಕಾರಿಗಳ ಸಂಖ್ಯೆ ಎಷ್ಟು? ಅವರಲ್ಲಿ ಮಹಿಳೆಯರೂ ಇದ್ದಾರೆಯೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೧३ ಮಾರ್ಚ್ ೧೯४३. ಪುಟ ೧४೮೯–೧೦.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೧३ ಮಾರ್ಚ್ ೧೯४३. ಪುಟ ४२४–२३.

ಆ) ಕಾರ್ಖಾನೆಗಳ ಕಾರ್ಮಿಕರಿಗೆ ವಾಸದ ಮನೆಗಳನ್ನು ಒದಗಿಸುವ ತುರ್ತಿನ ಬಗ್ಗೆ ಈ ಅಧಿಕಾರಿಗಳು ವರದಿಯನ್ನು ಸಲ್ಲಿಸಿರುವರೆ? ಹಾಗೆ ಸಲ್ಲಿಸಿದ್ದರೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಅಥವಾ ಕೈಗೊಳ್ಳಬೇಕೆಂದು ಮನಸ್ಸು ಮಾಡಿದೆ?

ಇ) ಪ್ರಶ್ನೆ (ಆ) ಗೆ ಉತ್ತರ ನೇತ್ಯಾತ್ಮಕವಾಗಿದ್ದರೆ, ಈ ವಿಷಯದ ಬಗ್ಗೆ ತುರ್ತು ವರದಿಯನ್ನು ಸಲ್ಲಿಸಲು ಸರ್ಕಾರ ಸೂಚಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಪೂರ್ಣಕಾಲದ ಇಬ್ಬರು ಕಾರ್ಖಾನೆ ಪರಿಶೀಲಕರುಗಳು ಮತ್ತು ಇಬ್ಬರು ಹೆಚ್ಚುವರಿ ತನಿಖಾಧಿಕಾರಿಗಳಿದ್ದಾರೆ. ಕೊನೆಯವರಿಬ್ಬರದು ಅರೆಕಾಲಿಕ (Part time). ದೆಹಲಿಯಲ್ಲಿ ಕಾರ್ಮಿಕ ಕಲ್ಯಾಣ ಮತ್ತು ಮಾತೃತ್ವ ಸೌಲಭ್ಯ ಕೇಂದ್ರಗಳಿಲ್ಲ. ೧೯೩೯ರ ಮುಂಬೈನ ಮಾತೃತ್ವ ಸೌಲಭ್ಯ ಶಾಸನವನ್ನೂ ದೆಹಲಿಗೂ ವಿಸ್ತರಿಸಿದ್ದರಿಂದ, ದೆಹಲಿಯ ಪೌರಸಂಸ್ಥೆ ಈ ತನಿಖಾಧಿಕಾರಿಗಳ ಕರ್ತವ್ಯಗಳನ್ನು ನಿರ್ವಹಿಸುತ್ತಿದೆ.

ಆ) ಇಲ್ಲ. ಕೊನೆಯ ಭಾಗ ಉದ್ಭವಿಸುವುದಿಲ್ಲ.

ಇ) ಕೈಗಾರಿಕೆಗಳ ಕಾರ್ಮಿಕರ ವಾಸದ ಮನೆಗಳ ಪ್ರಶ್ನೆಯನ್ನು ಕಾಲಕ್ರಮದಲ್ಲಿ ಸರ್ಕಾರ ಗಣನೆಗೆ ತೆಗೆದುಕೊಳ್ಳುವುದು. ಆದ್ದರಿಂದಲೇ ದೆಹಲಿ ಪ್ರಾಂತ್ಯಕ್ಕೆ ಸೀಮಿತವಾದಂತೆ ವಿಶೇಷ ವರದಿಯನ್ನು ಸಲ್ಲಿಸಲು ಸರ್ಕಾರ ಸೂಚನೆ ನೀಡಿಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಪೂರ್ಣಕಾಲದ ಮಹಿಳಾ ಕಲ್ಯಾಣಾಧಿಕಾರಿಯನ್ನು ನೇಮಿಸಲು ಸರ್ಕಾರ ಮನಸ್ಸು ಮಾಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಅದನ್ನು ನಾನು ಪರಿಗಣಿಸುತ್ತೇನೆ.

**ಶ್ರೀ ಎನ್. ಎಂ. ಜೋಷಿ :** ವಸತಿಗೆ ಸಂಬಂಧಿಸಿದಂತೆ 'ಉಚಿತ ಕಾಲ' ಎಂಬುದರ ಅರ್ಥವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ವ್ಯಾಖ್ಯಾನದ ಆವಶ್ಯಕತೆ ಇರುವ ಅಸಾಧಾರಣ ವಾಕ್ಯಭಾಗ ಎಂದು ನಾನು ಭಾವಿಸುವುದಿಲ್ಲ.

## ೩೦೪
## ದೆಹಲಿ ಕಾರ್ಖಾನೆಗಳಲ್ಲಿ ಕಾರ್ಮಿಕರ ನೇಮಕಾತಿಗಾಗಿ ಗುತ್ತಿಗೆ ವ್ಯವಸ್ಥೆ *

**೯೬೫. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಮುಂದಿನ ವಿಷಯದ ಬಗ್ಗೆ ಹೇಳಿ : ದೆಹಲಿಯಲ್ಲಿ ಇನ್ನೂ ಗುತ್ತಿಗೆ ವ್ಯವಸ್ಥೆಯ ಮೂಲಕವೇ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತಿದೆಯೆ? ನಿಜವಿದ್ದರೆ (೧) ಅಂಥ ವ್ಯವಸ್ಥೆಯಿರುವ ಕಾರ್ಖಾನೆಗಳ ಹೆಸರು. (೨) ಆ ಪ್ರತಿಯೊಂದು ಕಾರ್ಖಾನೆಗಳಲ್ಲಿ ಅಂತಹ ವ್ಯವಸ್ಥೆಯ ಮೂಲಕ ನೇಮಕ ಮಾಡಿಕೊಂಡ ಕೆಲಸಗಾರರಲ್ಲಿ ಪುರುಷರು ಮತ್ತು ಮಹಿಳೆಯರು – ಸಂಖ್ಯೆ ಎಷ್ಟು? (೩) ಕೆಲಸಗಾರರ ಸರಾಸರಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೧೩ ಮಾರ್ಚ್ ೧೯೪೫. ಪುಟ ೧೪೨೨–೨೩

ದಿನಗೂಲಿ ಮತ್ತು ತುಟ್ಟಿಭತ್ಯೆಯ ದರಗಳೆಷ್ಟು? (೪) ಕಾರ್ಖಾನೆಗಳ ಮತ್ತು "ಮಾತೃತ್ವ ಸೌಲಭ್ಯ" ಶಾಸನದ ರೀತ್ಯ ಕಾರ್ಮಿಕರು ಸೌಲಭ್ಯ ಪಡೆಯುತ್ತಿರುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವು ಕಾರ್ಖಾನೆಗಳ ವಿಷಯದಲ್ಲಿ ಅದು ನಿಜ, ಅಂಥ ಕಾರ್ಖಾನೆಗಳ ಪಟ್ಟಿಯನ್ನು ಸದನದ ಮುಂದೆ ಇರಿಸಿದೆ. ಗುತ್ತಿಗೆದಾರರ ಮೂಲಕ ನೇಮಕಗೊಂಡ ಕೆಲಸಗಾರರ ಸಂಖ್ಯೆಗೆ ಸಂಬಂಧಿಸಿದಂತೆ ಮಾಹಿತಿ ಇಲ್ಲ. ಆದರೆ ಅಂಥ ಕಾರ್ಮಿಕರ ಸಂಖ್ಯೆ ಬಹಳ ಕಡಿಮೆ – ಕಲ್ಲಿದ್ದಲನ್ನು ಕೈಯಲ್ಲಿ ಎತ್ತಿ ಗಾಡಿಗೆ ತುಂಬುವುದಕ್ಕೆ ಮಾತ್ರ ಸೀಮಿತ. ಸರಾಸರಿ ದಿನಗೂಲಿ ಮತ್ತು ತುಟ್ಟಿಭತ್ಯೆಯ ದರಗಳ ಮಾಹಿತಿ ದೊರಕಿಲ್ಲ. ಆದರೆ ತುಟ್ಟಿಭತ್ಯೆ ೧೦ರೂ. ಯಿಂದ ಹಿಡಿದು ೩೨ ರೂ.ವರೆಗೆ ವಿಧವಿಧವಾಗಿದೆ. ತುಟ್ಟಿಭತ್ಯೆಯನ್ನು ಕೊಡದ ಕಾರ್ಖಾನೆಗಳಲ್ಲಿ ಕೂಲಿಯನ್ನು ಹೆಚ್ಚಿಸಲಾಗಿದೆ. ಕಾರ್ಖಾನೆಗಳ ಮತ್ತು ಮುಂಬೈ 'ಮಾತೃತ್ವ ಸೌಲಭ್ಯ' ಶಾಸನಗಳ ರೀತ್ಯ ಎಲ್ಲ ಕಾರ್ಖಾನೆಗಳ ಕಾರ್ಮಿಕರು ಸೌಲಭ್ಯ ಪಡೆಯುತ್ತಿದ್ದಾರೆ.

೧೯೪೫ರ ಮಾರ್ಚ್ ೧೩ರಂದು ೯೬೫ನೇ ಪ್ರಶ್ನೆಗೆ ಉತ್ತರವಾಗಿ ನೀಡಿದ ಗುತ್ತಿಗೆದಾರರ ಮೂಲಕ ಕಾರ್ಮಿಕರನ್ನು ನೇಮಿಸಿಕೊಂಡಿರುವ ದಿಲ್ಲಿಯ ಕಾರ್ಖಾನೆಗಳ ಪಟ್ಟಿ :

೧. ಬಿರ್ಲಾ ನೂಲುವ ಮತ್ತು ನೇಯುವ ಹತ್ತಿ ಗಿರಣಿಗಳು ನಿಯಮಿತ.
೨. ಮಹಾಬೀರ್ ನೂಲುವ, ನೇಯುವ ಹತ್ತಿ ತಯಾರಿಕಾ ಸಂಸ್ಥೆ ನಿಯಮಿತ.
೩. ದೆಹಲಿ ಜವಳಿ ಮತ್ತು ಸಾಮಾನ್ಯ ಗಿರಣಿಗಳು.
೪. ಲತೀಫಿ ಮುದ್ರಣಾಲಯ.
೫. ಗ್ವಾಲಿಯರ್ ಕುಂಬಾರಗೆಲಸ ನಿಯಮಿತ.
೬. ಈಶ್ವರ್ ಕುಂಬಾರಗೆಲಸ ನಿಯಮಿತ.
೭. ದೆಹಲಿ ಹಿಟ್ಟಿನ ಗಿರಣಿಗಳು ನಿಯಮಿತ.
೮. ದೆಹಲಿಯ ಕೇಂದ್ರ ವಿದ್ಯುತ್‌ವಸ್ತುಗಳ ಪ್ರಾಧಿಕಾರ ನಿಯಮಿತ.
೯. ತವರದ ತಗಡಿಗೆ ಅಚ್ಚೊತ್ತುವ ಮತ್ತು ಲೋಹದ ಕಾರ್ಖಾನೆ ನಿಯಮಿತ.
೧೦. ಗಣೇಶ್ ಹಿಟ್ಟಿನ ಗಿರಣಿಗಳು (ವನಸ್ಪತಿ ವಸ್ತುಗಳ ಕಾರ್ಖಾನೆ.)
೧೧. ಅಗರ್ವಾಲ್ ಒಳಉಡುಪುಗಳ ಗಿರಣಿಗಳು.
೧೨. ಸೈನಿಕರ ಜವಳಿ ಕಾರ್ಖಾನೆ.
೧೩. ಮಲ್ಲಿಕ್ ಮತ್ತು ಖುರೇಶಿ.
೧೪. ಎಚ್. ಎಸ್. ಸಿದ್ದು, ೨೬, ದರ್ಯಾಗಂಜ್, ದೆಹಲಿ.
೧೫. ಗಿರಿಧರಲಾಲ್ ಗೌರಿಶಂಕರ್ ನೇಯ್ಗೆ ಕಾರ್ಖಾನೆ.
೧೬. ಪ್ಯಾರೇಲಾಲ್ ಮತ್ತು ಮಕ್ಕಳು (ಲಾಹೋರ್) ನಿಯಮಿತ.
೧೭. ಪ್ರಧಾನ ನೇಯ್ಗೆ ಕಾರ್ಖಾನೆ.
೧೮. ಫೀನಿಕ್ಸ್ ಹತ್ತಿಪಟ್ಟಿ (Tape) ಕಾರ್ಖಾನೆ.
೧೯. ಶರ್ಮಾ ನೇಯ್ಗೆ ಮತ್ತು ಪ್ರಧಾನ ತಯಾರಿಕಾ ಸಂಸ್ಥೆ.
೨೦. ಮೆ॥ ಅಗ್ಗೆರಿಲ್ಲೊ ಮತ್ತು ಕಂಪನಿ, ೫೦, ಗ್ಯಾರಿಸನ್ ಬಾಸ್ಟನ್ ರಸ್ತೆ, ದೆಹಲಿ.
೨೧. ಮೆ॥ ಅಗ್ಗೆರಿಲ್ಲೊ ಮತ್ತು ಕಂಪನಿ, ೧೧–ಬಿ, ಫೈಜ್‌ಬಜಾರ್, ದರ್ಯಾಗಂಜ್, ದೆಹಲಿ.

೨೨. ಬ್ರಿಟಿಷ್ ನಿವಾರ್ ಕಾರ್ಖಾನೆ.

೨೩. ಯಾದವ್ ನಿವಾರ್ ಕಾರ್ಖಾನೆ.

೨೪. ದೆಹಲಿ – ವೃತ್ತಪತ್ರಿಕೆ.

೨೫. ಸಾಕ್ಸಾರಿಯ ಮುದ್ರಣಾಲಯ.

೨೬. ಬ್ರಿಟಿಷ್ ಮೋಟಾರ್ ಕಾರ್, ಓ.ಬಿ. ಎಫ್ ಕಂಪನಿ ವಿಭಾಗ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ದೆಹಲಿಯು ನವದೆಹಲಿಗೆ ತುಂಬ ಹತ್ತಿರವಿರುವುದರಿಂದ ಆದಷ್ಟು ಬೇಗನೆ ಈ ಮಾಹಿತಿಯನ್ನು ನನಗೆ ಒದಗಿಸುವುದೆಂದು ಸರ್ಕಾರ ಭರವಸೆ ಕೊಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಆದಷ್ಟು ಬೇಗ ಒದಗಿಸುತ್ತೇನೆ.

**ಪ್ರೊ॥ ಎನ್.ಜಿ. ರಂಗ :** ಕಾರ್ಮಿಕರನ್ನು ಗುತ್ತಿಗೆದಾರರ ಮೂಲಕ ನೇಮಿಸಿಕೊಳ್ಳುವ ವ್ಯವಸ್ಥೆಯಿಂದ ಕೆಡುಕುಗಳಿವೆ ಎಂದು ಒಪ್ಪಿಕೊಂಡ ಮೇಲೆ, ಸರ್ಕಾರ ಅದನ್ನು ಕೊನೆಗೊಳಿಸಲು ಕ್ರಮಕೈಗೊಳ್ಳುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಸರ್ಕಾರ ಆಸಕ್ತಿ ವಹಿಸುವಂಥ ಅಥವಾ ತಲೆ ಹಾಕುವಂಥ ವಿಷಯವಲ್ಲ.

**ಪ್ರೊ॥ ಎನ್.ಜಿ. ರಂಗ :** ಕಾರ್ಮಿಕರ ಬಗೆಗಿನ ರಾಯಲ್ ಆಯೋಗ ಇದನ್ನು ನಿರ್ಮೂಲನ ಮಾಡಲು ವಿಶೇಷ ಕ್ರಮಕೈಗೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆದಾರರ ಮೂಲಕ ಕಾರ್ಮಿಕರನ್ನು ನೇಮಕ ಮಾಡಿರುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದರೆ, ಅದನ್ನು ಖಂಡಿತವಾಗಿಯೂ ಪರಿಗಣಿಸಲಾಗುವುದು.

**ಶ್ರೀ ಎನ್.ಎಂ. ಜೋಷಿ :** ಗುತ್ತಿಗೆ ವ್ಯವಸ್ಥೆಯ ಮೂಲಕ ನೇಮಕಗೊಂಡ ಕಾರ್ಮಿಕರ ಕ್ಷೇಮಾಭಿವೃದ್ಧಿ, ಕಾರ್ಮಿಕ ಕ್ಷೇಮಾಭಿವೃದ್ಧಿಯ ವಿಷಯಕ್ಕೆ ಸಂಬಂಧಿಸಿಲ್ಲವೆಂದು ಸರ್ಕಾರ ಪರಿಗಣಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ತಮಗೆ ತೋಚಿದ ಊಹೆಯನ್ನು ಮಾಡಲು ಅರ್ಹರು, ಸ್ವತಂತ್ರರು.

## ೩೦೫
## ದೆಹಲಿ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸರಾಸರಿ ಕೂಲಿ *

**೯೬೭. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ಈ ಪ್ರಶ್ನೆಗಳಿಗೆ ಉತ್ತರಿಸಿ : ಅ) ದೆಹಲಿ ಕಾರ್ಖಾನೆಗಳಲ್ಲಿ ನೇಮಕಗೊಂಡಿರುವ ಮಹಿಳಾ ಕಾರ್ಮಿಕರ ಸರಾಸರಿ ಕೂಲಿ ಎಷ್ಟು? ಅವರಿಗೆ ದಿನಗೂಲಿ ಕೊಡಲಾಗುತ್ತಿದೆಯೊ ಅಥವಾ ಮಾಸಿಕ ವೇತನ ನೀಡಲಾಗುತ್ತಿದೆಯೊ?

ಆ) ಅವರಿಗೆ ಕೊಡುತ್ತಿರುವ ತುಟ್ಟಿಭತ್ಯೆ ಎಷ್ಟು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೧೩ ಮಾರ್ಚ್ ೧೯೪೫. ಪುಟ ೧೨೪–೨೫

ಇ) ಒಂದೇ ಬಗೆಯ ಕೆಲಸ ಮಾಡುವ ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಬಳ ಮತ್ತು ತುಟ್ಟಿಭತ್ಯೆಗಳಲ್ಲಿ ವ್ಯತ್ಯಾಸವಿದೆಯೆ? ಇದ್ದರೆ, ವ್ಯತ್ಯಾಸಕ್ಕೆ ಕಾರಣಗಳೇನು?

ಈ) ನೇರವಾಗಿ ನೇಮಕಗೊಂಡವರಿಗೆ ಕೊಡುವ ಸಂಬಳ ಮತ್ತು ತುಟ್ಟಿಭತ್ಯೆಗಳನ್ನೆ ಗುತ್ತಿಗೆ ವ್ಯವಸ್ಥೆಯ ಮೂಲಕ ನೇಮಕಗೊಂಡ ಮಹಿಳಾ ಕಾರ್ಮಿಕರಿಗೆ ಕೊಡಲಾಗುತ್ತಿದೆಯೆ? ವ್ಯತ್ಯಾಸಗಳಿದ್ದರೆ ಕಾರಣಗಳೇನು?

ಉ) ಮಾತೃತ್ವ ಸೌಲಭ್ಯ ಮತ್ತು ಶಿಶು ಕ್ಷೇಮಾಭಿವದ್ಧಿ ಸೌಲಭ್ಯಗಳನ್ನು ಯಾವುದಾದರೂ ಕಾರ್ಖಾನೆಗಳು ಒದಗಿಸಿವೆಯೆ? ಒದಗಿಸಿದ್ದರೆ, ಯಾವ ವಿಧದಲ್ಲಿ?

ಊ) ಈ ಕಾರ್ಖಾನೆಗಳಲ್ಲಿ ಯಾವುದಾದರೂ ಕಾರ್ಮಿಕರ ಮಕ್ಕಳಿಗೆ ಶಿಶುವಿಹಾರಗಳನ್ನು ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಬೇರೆ ಏರ್ಪಾಡುಗಳನ್ನು ಒದಗಿಸಿವೆಯೆ?

ಋ) ಪ್ರಶ್ನೆ (ಉ) ಮತ್ತು (ಊ)ಗಳಿಗೆ ಉತ್ತರ ನೇತ್ಯಾತ್ಮಕವಾಗಿದ್ದರೆ, ಅಗತ್ಯ ಏರ್ಪಾಡುಗಳನ್ನು ಮಾಡುವಂತೆ ಕಾರ್ಖಾನೆಗಳ ಮಾಲೀಕರನ್ನು ಒತ್ತಾಯಿಸುವ ಕ್ರಮಗಳನ್ನು ಸರ್ಕಾರ ತುರ್ತಾಗಿ ತೆಗೆದುಕೊಳ್ಳುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್:** ಅ) ದೆಹಲಿಯ ಕಾರ್ಖಾನೆಗಳಲ್ಲಿ ನೇಮಕಗೊಂಡಿರುವ ಮಹಿಳಾ ಕಾರ್ಮಿಕರ ಸರಾಸರಿ ಸಂಬಳಕ್ಕೆ ಸಂಬಂಧಿಸಿದಂತೆ ಅಂಕಿಅಂಶಗಳು ಸಿಗುತ್ತಿಲ್ಲ. ಕೆಲವು ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ಮಾಸಿಕ ವೇತನ ನೀಡಲಾಗುತ್ತದೆ. ಇನ್ನು ಕೆಲವು ಕಾರ್ಖಾನೆಗಳಲ್ಲಿ ದಿನಗೂಲಿ ಕೊಡಲಾಗುತ್ತದೆ.

ಆ) ವಿವರವಾದ ಮಾಹಿತಿ ದೊರಕುವುದಿಲ್ಲ. ಆದರೆ ಮಹಿಳಾ ಕಾರ್ಮಿಕರಿಗೆ ಕೊಡುವ ತುಟ್ಟಿಭತ್ಯೆ ೧೦ ರೂ.ಗಳಿಂದ ಹಿಡಿದು ೩೨ ರೂ.ಗಳವರೆಗೂ ಇದೆ.

ಇ) ಒಂದೇ ಬಗೆಯ ಕೆಲಸ ಮಾಡುವ ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಂಬಳ ಮತ್ತು ತುಟ್ಟಿಭತ್ಯೆಯಲ್ಲಿ ಇದುವರೆಗೂ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ.

ಈ) ಇದುವರೆಗೂ ತಿಳಿದುಬಂದಿರುವಂತೆ, ಕಾರ್ಖಾನೆಗಳಿಗೆ ಮಹಿಳೆಯರನ್ನು ನೇರವಾಗಿ ನೇಮಕಮಾಡಿಕೊಳ್ಳಲಾಗಿದೆಯೇ ಹೊರತು ಗುತ್ತಿಗೆದಾರರ ಮೂಲಕ ಮಾಡಿಕೊಂಡಿಲ್ಲ.

ಉ) ಎರಡು ಕಾರ್ಖಾನೆಗಳು ಮಾತೃತ್ವ ಮತ್ತು ಶಿಶು ಕ್ಷೇಮಾಭಿವೃದ್ಧಿ ಸೌಲಭ್ಯಗಳನ್ನು ಕಲ್ಪಿಸಿವೆ.

ಊ) ಹೌದು. ಎರಡು ಕಾರ್ಖಾನೆಗಳು ಶಿಶುವಿಹಾರಗಳನ್ನು ಒದಗಿಸಿವೆ. ಒಂದು ಕಾರ್ಖಾನೆಯಲ್ಲಿ ಉದ್ಯೋಗಿಗಳ ಮಕ್ಕಳಿಗೆ ನಿತ್ಯ ಉಚಿತ ಸ್ನಾನದ ಏರ್ಪಾಡು ಮಾಡಲಾಗಿದೆ. ಮತ್ತು ಪೌಷ್ಟಿಕ ಆಹಾರದ ಕೊರತೆ ಇರುವ ಮಕ್ಕಳಿಗೆ ನಿತ್ಯ ಅರ್ಧ ಸೇರು ಹಾಲನ್ನು ಸರಬರಾಜು ಮಾಡಲಾಗುತ್ತಿದೆ. ಬೇರೊಂದು ಕಾರ್ಖಾನೆ ತಾನೇ ನಡೆಸುತ್ತಿರುವ ಶಾಲೆಯಲ್ಲಿ ಉದ್ಯೋಗಿಗಳ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಿದೆ. ಮತ್ತು ಎಲ್ಲ ಮಕ್ಕಳಿಗೂ ನಿತ್ಯ ಅರ್ಧ ಸೇರು ಹಾಲನ್ನು ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಿದೆ.

ಋ) ಉದ್ಭವಿಸುವುದಿಲ್ಲ.

**ಶ್ರೀ ವಿಠ್ಠಲ್ ಎನ್. ಚಂದ್ರಾವರ್ಕರ್ :** ದೆಹಲಿ ಪ್ರಾಂತ್ಯಕ್ಕೆ ತನ್ನದೇ ಆದ ಕಾರ್ಮಿಕ ಇಲಾಖೆ ಇಲ್ಲವೆ ಎಂಬುದನ್ನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಪ್ರಶ್ನೆಗೆ ಪೂರ್ವಭಾವಿ ನೋಟೀಸ್ ಬೇಕು.

**ಶ್ರೀಮತಿ ರೇಣುಕಾ ರೇ :** ಮಾನ್ಯ ಕಾರ್ಮಿಕ ಸದಸ್ಯರು ನಾನು ಹೇಳುವ ವಿಷಯವನ್ನು ಕೇಳಿ ಆಶ್ಚರ್ಯಚಕಿತರಾಗಬಹುದು. ನೂಲುಂಡೆ ಕಾರ್ಖಾನೆಗಳಲ್ಲಿ ೩೫೦೦ ಮಹಿಳಾ ಕಾರ್ಮಿಕರಿದ್ದು ಅವರು ತುಟ್ಟಿಭತ್ಯೆಯನ್ನು ಪಡೆಯುತ್ತಿಲ್ಲ. ಪುರುಷರು ಮತ್ತು ಮಹಿಳೆಯರಿಗೆ ಸಮಾನ ವೇತನ ನೀಡುತ್ತಿಲ್ಲ. ಮಾನ್ಯ ಸದಸ್ಯರು ಇದನ್ನು ತನಿಖೆ ಮಾಡುವರೆ? ಅದು ನಿಜವಾದರೆ, ಸರಿಪಡಿಸಲು ಕ್ರಮಕೈಗೊಳ್ಳುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಮಹಿಳಾಸದಸ್ಯರಿಂದ ಬರುವ ಯಾವ ವಿಷಯವೂ ನನ್ನನ್ನು ಚಕಿತಗೊಳಿಸುವುದಿಲ್ಲ ಎಂದು ಧೈರ್ಯದಿಂದ ಹೇಳಬಲ್ಲೆ.

**ಶ್ರೀ ಎನ್.ಎಂ. ಜೋಷಿ :** ಮಾಹಿತಿ ಸಿದ್ಧಗೊಂಡು ತಲುಪಿಲ್ಲ ಎಂದು ಪ್ರಶ್ನೆ (ಅ)ಗೆ ಕೊಟ್ಟ ಉತ್ತರದತ್ತ ನಿಮ್ಮ ಗಮನಸೆಳೆದುಕೊಳ್ಳುತ್ತಿದ್ದೇನೆ – ಅದನ್ನು ದೊರಕಿಸಿಕೊಳ್ಳಲು ವಿಶೇಷ ಪ್ರಯತ್ನ ಮಾಡುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಏನು ಮಾಡಲು ಸಾಧ್ಯ ಎಂಬುದನ್ನು ಯೋಚಿಸುತ್ತೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಕಾರ್ಖಾನೆಗಳ ಪರಿಶೀಲಕರು ಕಾಲಕಾಲಕ್ಕೆ ವರದಿಗಳನ್ನು ಕಳಿಸುತ್ತಿಲ್ಲವೆ? ನಮಗೆ ಮಾಹಿತಿ ತಲುಪಿಲ್ಲ ಎಂದು ಸರ್ಕಾರ ಹೇಗೆ ಹೇಳುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ದೆಹಲಿಯ ಪ್ರಧಾನ ಆಯುಕ್ತರಿಗೆ ಹೋಗಬೇಕಾಗುತ್ತದೆ.

**ಪ್ರೊ॥ ಎನ್.ಜಿ.ರಂಗ :** (ಅಧ್ಯಕ್ಷರಿಗೆ) ಸ್ವಾಮಿ, ಮಾನ್ಯ ಕಾರ್ಮಿಕ ಸದಸ್ಯರ ಉತ್ತರಕ್ಕೆ ಸಂಬಂಧಿಸಿದಂತೆ, ತಮ್ಮ ಮಾರ್ಗದರ್ಶನವನ್ನು ಬಯಸುತ್ತೇನೆ. ಅದು ಒಂದು ರೀತಿಯಲ್ಲಿ ಆ ಮಹಿಳೆಗೆ ಕಳಂಕ ಹಚ್ಚುವಂತಿದೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮಾನ್ಯ ಕಾರ್ಮಿಕ ಸದಸ್ಯರು ಕಳಂಕ ಹಚ್ಚುವ ಉದ್ದೇಶದಿಂದ ಉತ್ತರಿಸಿಲ್ಲ ಎಂದು ನಾನು ಭಾವಿಸಿದ್ದೇನೆ. ಹೇಗಾದರೂ ಇರಲಿ, ಅದು ಕಳಂಕಪ್ರಾಯವಾದ ಉತ್ತರವೆ ಅಲ್ಲವೆ ಎಂಬುದನ್ನು ನಿಷ್ಕರ್ಷೆ ಮಾಡಲು ಪ್ರಶ್ನೆ ಹಾಕಿದ ಮಹಿಳೆಯ ಪಾಲಿಗೇ ಬಿಟ್ಟುಬಿಡಿ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಸ್ವಾಮಿ ಅಧ್ಯಕ್ಷರೇ, ಈ ದಿನ ವಿಶೇಷವಾಗಿ ಸರ್ಕಾರದ ಉತ್ತರಗಳು ಧ್ವನಿ ಧೋರಣೆಯಲ್ಲಿ ಯಥಾಸ್ಥಿತಿಯಲ್ಲಿಲ್ಲ. ಅದನ್ನು ಗ್ರಹಿಸಲು ನಮಗೆ ಆಹಾರ ಸದಸ್ಯರಿಂದ ಸಂದರ್ಭ ಒದಗಿತ್ತು. ಈಗ, ಸ್ವಾಮಿ ಮಹಿಳೆಯ ಪ್ರಶ್ನೆಗೆ ಮಾನ್ಯ ಸದಸ್ಯರ ಉತ್ತರ ಈ ರೀತಿಯದು, ಆಕೆ ಕೇಳಿದ್ದು ತನಿಖೆ ಮಾಡಲಾಗುವುದೆ ಎಂದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಲ್ಲ, ನಾನು ಆಶ್ವರ್ಯ ಚಕಿತನಾಗುತ್ತೇನೆಯೆ ಎಂದು.

**ಶ್ರೀಮತಿ ರೇಣುಕಾ ರೇ :** ಮಾನ್ಯ ಸದಸ್ಯರು ವಿಷಯದ ಒಳಹೊಕ್ಕು ನೋಡುವರೆ?

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಮಾನ್ಯ ಸದಸ್ಯರ ಉತ್ತರದ ಧ್ವನಿಗೆ ಸಂಬಂಧಿಸಿದಂತೆ, ನಿರ್ಣಯ ನೀಡಲು ನನಗೆ ತುಂಬ ಕಷ್ಟ. ಏಕೆಂದರೆ ಅದು ಸದನದ ಒಂದು ಭಾಗಕ್ಕೆ ಮಾತ್ರ ಸಂಬಂಧಿಸಿದ್ದಲ್ಲ ಎಂದು ನಾನು ಹಿಂದುಮುಂದು ನೋಡುತ್ತೇನೆ. (ಈ ಘಟ್ಟದಲ್ಲಿ ಅನೇಕ ಮಾನ್ಯ ಸದಸ್ಯರು ಮೇಲೆದ್ದು ಏಕಕಾಲದಲ್ಲಿ ಮಾತಾಡತೊಡಗಿದರು).

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸದ್ದು, ಸದ್ದು.

# ೩೦೬
# ಒಬ್ಬ ಸರ್ಕಾರಿ ನೌಕರನು ಶಿಕ್ಷೆಗೆ ಗುರಿಯಾದ ನಂತರ ಅವನನ್ನು ಪುನಃ ನೇಮಕಮಾಡಿಕೊಳ್ಳುವ ಬಗ್ಗೆ *

೯೭೨. **ಶ್ರೀ ಮಹಮ್ಮದ ಹುಸೇನ್ ಚೌಧರಿ :** ಒಬ್ಬ ಸರ್ಕಾರಿ ನೌಕರನು ಶಿಕ್ಷೆಗೆ ಗುರಿಯಾದ ನಂತರ ಅವನನ್ನು ಪುನಃ ನೇಮಕಮಾಡುವ ಬಗ್ಗೆ ೧೯೪೪ರ ಮಾರ್ಚ್ ೧೪ರಂದು ಕೇಳಿದ ಕ್ರಮಸಂಖ್ಯೆ ೪೦೭ನೇ ಪ್ರಶ್ನೆಗೆ ಮಾನ್ಯ ಕಾರ್ಮಿಕ ಸದಸ್ಯರನ್ನು ಕೇಳುವುದೇನೆಂದರೆ ಆ ಪ್ರಶ್ನೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರನನ್ನು ಕುರಿತು ಯಾವುದಾದರೂ ವಿಚಾರಣೆಯನ್ನು ಮಾಡಿರುವಿರಾ? ಹಾಗಿದ್ದಲ್ಲಿ ಆ ವಿಚಾರಣೆಯ ಪರಿಣಾಮ ಏನಾಯಿತು ಮತ್ತು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಆ ವ್ಯಕ್ತಿಯನ್ನು ಪಂಜಾಬ್ ಸರ್ಕಾರವು ಕೆಲಸದಿಂದ ವಜಾ ಮಾಡಿತ್ತು. ಆದರೆ ಅದೇ ಸರ್ಕಾರವು ಆ ವ್ಯಕ್ತಿಯನ್ನು ಪುನಃ ಕೇಂದ್ರ ಸಾರ್ವಜನಿಕ ಕಾರ್ಯಗಳ ವಿಭಾಗದಲ್ಲಿ ಸಿ.ಪಿ.ಡಬ್ಲ್ಯೂ.ಡಿ. ಇಲ್ಲವೆ ಬೇರಾವುದೋ ಖಾತೆಯಲ್ಲಿ ಕೆಲಸಕ್ಕೆ ಸೇರಬಹುದೆಂದು ಅವನಿಗೆ ಅನುಮತಿ ಕೊಟ್ಟಿತು. ಈ ದೃಷ್ಟಿಯಿಂದ ಹಾಗೂ ೧೯೪೨ನೆಯ ಫೆಬ್ರವರಿಯಿಂದ ಅವನು ನಿರಂತರವಾಗಿ ಕೇಂದ್ರ ಸಾರ್ವಜನಿಕ ಕಾರ್ಯಗಳ ಇಲಾಖೆಯಲ್ಲಿ (ಸಿ.ಪಿ.ಡಬ್ಲ್ಯೂ.ಡಿ.) ಕೆಲಸ ಮಾಡಿದ್ದರಿಂದ, ಬೇರಾವುದೇ ಕ್ರಮಕೈಗೊಳ್ಳುವುದು ಅವಶ್ಯವೆನಿಸಲಿಲ್ಲ.

**ಮೌಲ್ವಿ ಮಹಮ್ಮದ್ ಘನಿ :** ಪಂಜಾಬ್ ಸರ್ಕಾರವು ಆ ವ್ಯಕ್ತಿಯನ್ನು ಯಾವ ದೋಷಾರೋಪಣೆಯ ಮೇಲೆ ಕೆಲಸದಿಂದ ವಜಾ ಮಾಡಿತ್ತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೇವಲ ಹಲ್ಲೆ ಮಾತ್ರ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೧೩ನೇ ಮಾರ್ಚ್, ೧೯೪೫. ಪುಟ ೧೪೨೮

# ೩೦೭
# ಕಾರ್ಮಿಕರ ಸ್ಥಿತಿಗಳನ್ನು ಸುಧಾರಿಸುವ ಯುದ್ಧೋತ್ತರ ಯೋಜನೆಗಳು*

೧೦೪೩. **ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಿರಾ? : ಅ) ಸರ್ಕಾರವು ಕಾರ್ಮಿರ ಸ್ಥಿತಿ ಸುಧಾರಿಸಲು ಯಾವುದಾದರೂ ಯುದ್ಧೋತ್ತರ ಯೋಜನೆಗಳನ್ನು ಹೊಂದಿದೆಯೇ?

ಆ) ಸುವ್ಯವಸ್ಥಿತವಾಗಿ ಬಂದ ಕೈಗಾರಿಕೆಗಳ ಲಾಭಾಂಶದಲ್ಲಿ ಆಯಾ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಜೀವನ ಸ್ಥಿತಿ ಸುಧಾರಿಸಲು ಹಾಗೂ ಅವರಿಗೆ ಶಿಕ್ಷಣವನ್ನು ಕೊಡಲು ಆ ಹಣವನ್ನು ವಿನಿಯೋಗಿಸುತ್ತಿದ್ದಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈ ಬಗ್ಗೆ ಸರ್ಕಾರದ ಅಂತಿಮ ಯೋಜನೆಗಳು ಸಿದ್ಧವಾಗಿಲ್ಲ.

ಆ) ಸರ್ಕಾರದ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ, ಮಾನ್ಯ ಸದಸ್ಯರ ಸೂಚನೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

**ಶ್ರೀ ಅಬ್ದುಲ್ ಖಯೂಮ್ :** ಈ ಯೋಜನೆಗಳನ್ನು ಬಹುಶಃ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತನಿಖಾ ಸಮಿತಿಯ ವರದಿಯು ಬಂದ ನಂತರ.

**ಶ್ರೀ ಅಬ್ದುಲ್ ಖಯೂಮ್ :** ಈ ಸಮಿತಿಗೆ ಕಾಲಮಿತಿಯಿದೆಯೆಂದು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಅವರು ಮುಂದಿನ ಆಗಸ್ಟ್ ತಿಂಗಳ ವೇಳೆಗೆ ತಮ್ಮ ವರದಿಯನ್ನು ಒಪ್ಪಿಸುತ್ತೇವೆಂದು ವಚನವಿತ್ತಿದ್ದಾರೆ.

**ಪ್ರೊ॥ ಎನ್.ಜಿ. ರಂಗ :** ಈ ವರ್ಷ ಬರುವ ಲಾಭಾಂಶದಲ್ಲಿ ಕಾರ್ಮಿಕರ ಸ್ಥಿತಿಗತಿ ಉತ್ತಮಪಡಿಸಲು ಯೋಜನೆಗಳನ್ನು ರೂಪಿಸಿ, ಆ ಹಣವನ್ನು ವಿನಿಯೋಗಿಸಲು ಸರ್ಕಾರಕ್ಕೆ ಸಾಧ್ಯವಾಗಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಸೂಚನೆಗಳನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೧೩ನೇ ಮಾರ್ಚ್, ೧೯೪೫. ಪುಟ ೧೯೭೮–೧೯೭೯

# ೩೦೮
# ಗಣಿ ಕಾರ್ಮಿಕರ ವಸತಿ ಸೌಕರ್ಯ*

**೧೦೫೪. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ದಯವಿಟ್ಟು ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ಹೇಳುತ್ತಾರೆಯೆ? : ಅ) ಎಲ್ಲ ಕ್ಷೇತ್ರಗಳಲ್ಲಿ ವಸತಿ ಸೌಕರ್ಯವನ್ನು ಒದಗಿಸಿದ್ದೀರಾ? ಒಂದು ವೇಳೆ ಇರದಿದ್ದರೆ, ಏಕೆ ಇಲ್ಲ?

ಆ) ವಸತಿ ಸೌಕರ್ಯಗಳು ಇಲ್ಲದಿದ್ದರೆ ಸರ್ಕಾರವು ಗಣಿ ಕಾರ್ಮಿಕರಿಗೆ ಯೋಗ್ಯ ವಸತಿ ಸೌಕರ್ಯಗಳನ್ನು ಒದಗಿಸುವುದರ ಸಲುವಾಗಿ ಯಾವ ಕ್ರಮಕೈಗೊಳ್ಳಲು ಯೋಜಿಸಿದೆ?

ಇ) ಗಣಿಕ್ಷೇತ್ರದಲ್ಲಿ ನೈರ್ಮಲ್ಯ ಸ್ಥಿತಿಯು ತೃಪ್ತಿಕರವಾಗಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೆ? ಮತ್ತು ಅವು ಉತ್ತಮ ವಸತಿ ಸೌಕರ್ಯ ಮತ್ತು ನೈರ್ಮಲ್ಯಗಳ ಅಭಾವದಿಂದ ಕಾರ್ಮಿಕರ ಆರೋಗ್ಯ ಮತ್ತು ಅವರ ಕುಟುಂಬಗಳ ಆಯೋಗ್ಯಕ್ಕೆ ತೊಂದರೆಯಾಗುತ್ತಿದೆ. ಹಾಗೂ ಗಣಿಗಳ ಉತ್ಪಾದನೆಯು ಸಹ ಕುಂಠಿತವಾಗಿದೆಯೆ, ಮತ್ತು

ಈ) ಮೇಲೆ (ಇ)ದಲ್ಲಿ ಕಾಣಿಸಿದಂತೆ ಈ ವಿಷಯದ ಬಗ್ಗೆ ಸರ್ಕಾರವು ತ್ರಿಪಕ್ಷೀಯ ಸಮ್ಮೇಳವನ್ನು ಕೇಳಿದೆಯೆ? ಹಾಗಿಲ್ಲದಿದ್ದರೆ ಯಾಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮಹತ್ವದ ಗಣಿ ಪ್ರದೇಶಗಳಲ್ಲಿ ವಸತಿ ಸೌಕರ್ಯಗಳನ್ನು ಗಣಿ ಕಾರ್ಮಿಕರಿಗೆ ಒದಗಿಸಲಾಗಿದೆ.

ಆ) ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಆರೋಗ್ಯ ಮತ್ತು ನೈರ್ಮಲ್ಯದ ಮೂಲ ಆವಶ್ಯಕತೆಗಳ ಬಗ್ಗೆ ಭಾರತೀಯ ಗಣಿ ಅಧಿನಿಯಮದಲ್ಲಿ ಹೇಳಲಾಗಿದೆ. ಆ ಪ್ರಕಾರ ಗಣಿಗಳ ನಿಗಮ ಇನ್‌ಸ್ಪೆಕ್ಟರರು ಆರೋಗ್ಯ ಮತ್ತು ನೈರ್ಮಲ್ಯದ ವ್ಯವಸ್ಥೆಯನ್ನು ಸರಿಯಾಗಿ ಇಡುವಂತೆ ನಿರ್ದೇಶಿಸುತ್ತಾರೆ.

ಈ) ಈ ಸೂಚನೆಯನ್ನು ನಾನು ಗಮನಿಸುತ್ತೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯುನ್ :** ಕಲ್ಲಿದ್ದಲು ಸ್ಥಿತಿಯು ತುಂಬಾ ಶೋಚನೀಯವಾಗಿರುವುದರಿಂದ (ಇ) ದಲ್ಲಿ ಹೇಳಲಾದ ಪ್ರಶ್ನೆಗಳ ಬಗ್ಗೆ ನಾನು ಸರ್ಕಾರವನ್ನು ಕೇಳಬಯಸುವುದೇನೆಂದರೆ ಸರ್ಕಾರವು ವೈದ್ಯಕೀಯ, ಆರೋಗ್ಯ ಮತ್ತು ಇಂಜನೀಯರನ್ನು ಒಳಗೊಂಡ ಒಂದು ತಜ್ಞರ ಸಮಿತಿಯನ್ನು ನೇಮಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಎಲ್ಲ ಪ್ರಶ್ನೆಗಳನ್ನು ವಿಚಾರಿಸುವುದರ ಸಲುವಾಗಿ ನಾವು ಕಲ್ಲಿದ್ದಲು ಗಣಿಗಳ ಕಲ್ಯಾಣ ಸಮಿತಿಯನ್ನು ನೇಮಿಸಿದ್ದೇವೆ.

**ಶ್ರೀ ಎನ್.ಎಮ್. ಜೋಷಿ :** ಗಣಿ ಕ್ಷೇತ್ರದ ವಸತಿಗಳಲ್ಲಿ ಯಾವ ಪ್ರಮಾಣದಲ್ಲಿ ಗಣಿ ಕಾರ್ಮಿಕರಿಗಾಗಿ ವಸತಿ ಒದಗಿಸಲಾಗಿದೆಯೆಂಬುದನ್ನು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಯ ಬಗ್ಗೆ ನನಗೆ ನೋಟೀಸ್ ಕೊಡಬೇಕಾಗುತ್ತದೆ ಎಂದು ನಾನು ವಿನಯದಿಂದ ಹೇಳಬಯಸುತ್ತೇನೆ.

**ಶ್ರೀ ಎನ್.ಎಮ್. ಜೋಷಿ :** ಮಾನ್ಯ ಸದಸ್ಯರು ತಪ್ಪು ಹೇಳಿಕೆಯನ್ನು ಕೊಟ್ಟಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೧೬ನೇ ಮಾರ್ಚ್, ೧೯೪೫. ಪುಟ ೧೫೦೪–೦೫

# ೩೧೯
# ಭೂಮಿಯ ಅಡಿಯ ಗಣಿಗಳಲ್ಲಿ ಮಹಿಳೆಯರು ಕೆಲಸ ಮಾಡುವುದನ್ನು ಪುನಃ ನಿಷೇಧಿಸುವ ಬಗ್ಗೆ *

**೧೦೫೫. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತಾರೆಯೆ?

ಅ) ಭೂಮಿಯ ಅಡಿಯ ಗಣಿಗಳಲ್ಲಿ ಕೆಲಸಮಾಡುತ್ತಿರುವ ಮಹಿಳೆಯರ ಬಗ್ಗೆ ಇಂಗ್ಲೆಂಡ್‌ನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಕೇಳಿದ ಪ್ರಶ್ನೋತ್ತರಗಳ ಇತ್ತೀಚಿನ ವರದಿಯನ್ನು ಸರ್ಕಾರವು ನೋಡಿದೆಯೆ? ಮತ್ತು ಹಾಗಿದ್ದಲ್ಲಿ ಶ್ರೀ ಅಮೆರಿಯವರಿಗೆ ಅವರು ಕೇಳಿದ ಮತ್ತು ಅವರಿಗೆ ಬೇಕಾಗಿದ್ದ ಮಾಹಿತಿಯನ್ನು ಸರ್ಕಾರವು ಪೂರೈಸಿದೆಯೆ? ಮತ್ತು ಆ ಮಾಹಿತಿಯು ಯಾವುದು?

ಆ) ಭೂಮಿಯ ಅಡಿಯ ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಪುನಃ ನಿರ್ಬಂಧಿಸುವ ಪ್ರಶ್ನೆಯ ವಿಚಾರವನ್ನು ಸರ್ಕಾರವು ಯಾವಾಗ ತೀರ್ಮಾನಿಸುತ್ತದೆ?

ಇ) ಇಂಥ ಸಂಕಷ್ಟಗಳು ಮಹಿಳೆಯರಿಗೆ ಬಾರದಂತೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ; ಅವರ ಕೂಲಿ ಕಡಿಮೆ ಇದ್ದರೂ ಭಾರತದಲ್ಲಿನ ಬೇರೆ ಉದ್ದಿಮೆಗಳು ಕೊಡುವ ಕೂಲಿಗೆ ಹೋಲಿಸಿದರೆ ಅನುಕೂಲಕರವಾಗಿವೆ ಎಂದು ಯಾವ ಸಂಗತಿಗಳ ಆಧಾರದ ಮೇಲೆ ಹೇಳಲಾಗಿದೆ?

ಈ) ಮೇಲಿನ ಪ್ರಶ್ನೆಯ (ಇ) ವಿಭಾಗಕ್ಕೆ ಉತ್ತರವು ಹೌದು ಆಗಿದ್ದಲ್ಲಿ ಬೇರೆ ಕೆಲಸಗಳಲ್ಲಿ ಮಹಿಳಾ ಕಾರ್ಮಿಕರ ವೇತನಶ್ರೇಣಿಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸರ್ಕಾರವು ಆ ಸಂಬಂಧಪಟ್ಟ ವರದಿಗಳನ್ನು ನೋಡಿದೆ. ಆದರೆ ಜನಸಾಮಾನ್ಯರ ಹಿತದ ದೃಷ್ಟಿಯಿಂದ ಆ ವರದಿಯ ಸ್ವರೂಪ ಮತ್ತು ಅದರ ಒಳಗೊಂಡಿರುವ ಅಂಶಗಳ ಬಗ್ಗೆ ಅವರು ಇಂಡಿಯಾ ಆಫೀಸಿಗೆ ಏನು ತಿಳಿಸಿದ್ದಾರೆಂಬುದನ್ನು ಬಹಿರಂಗಪಡಿಸಲಾಗುವುದಿಲ್ಲ.

ಆ) ಭೂಮಿಯ ಆಳದ ಗಣಿಗಳಲ್ಲಿ ಕೆಲಸಮಾಡಲು ಮಹಿಳೆಯರನ್ನು ನೇಮಿಸುವ ಪ್ರಶ್ನೆಯನ್ನು ಪುನರ್‌ಪ್ರತಿಬಂಧಿಸಲು ಸರ್ಕಾರವು ಸದಾಕಾಲ ಪುನರ್ ವಿಮರ್ಶಿಸುತ್ತದೆ.

ಇ) ಮತ್ತು (ಈ) : ಭಾರತದ ಕಾರ್ಯದರ್ಶಿಗಳು ಹೇಳಿದ್ದೇನೆಂದರೆ "ದೇಶದ ಇತರ ಭಾಗಗಳಲ್ಲಿರುವ ಕೈಗಾರಿಕೆಗಳು ನೀಡುತ್ತಿರುವ ಕಾರ್ಮಿಕರು ಎಂದರೆ ಹತ್ತಿರದ ನಿರ್ಮಾಣ ಕೆಲಸದಲ್ಲಿ ತೊಡಗಿರುವವರು" ಮತ್ತು ಆ ಹೇಳಿಕೆಯ ಬಗ್ಗೆ ಸರ್ಕಾರದ ವರದಿ ಸತ್ಯಕ್ಕೆ ದೂರವಾದುದಲ್ಲವೆಂದು ನಂಬುತ್ತದೆ.

ಉ) ಝೂರಿಯಾ ಮತ್ತು ರಾಣೀಗಂಜ್ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಪ್ರಸವದ ಪೂರ್ವದಲ್ಲಿ ಮತ್ತು ನಂತರ ಆರೋಗ್ಯವನ್ನು ಕಾಯ್ದುಕೊಳ್ಳಲು ಖನಿಜ ಆರೋಗ್ಯ ಸಮಿತಿಯು ಯೋಗ್ಯ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೧೬ನೇ ಮಾರ್ಚ್, ೧೯೪೫. ಪುಟ ೧೬೦೫

ಕ್ರಮಗಳನ್ನು ಕೈಗೊಂಡಿದೆ. ಬೇರೆ ದೊಡ್ಡ ಗಣಿಗಳಲ್ಲಿ ಸ್ವತಂತ್ರವಾದ ಏರ್ಪಾಡುಗಳನ್ನು ಮಾಡಲಾಗಿದೆ.

ಊ) ಕೆಲವು ದೊಡ್ಡ ಭೂ ಗಣಿಗಳಲ್ಲಿ ಮಹಿಳಾ ಡಾಕ್ಟರರು ಮತ್ತು ಅವರಿಗೆ ಪೂರಕ ಸಿಬ್ಬಂದಿಯನ್ನು ಒದಗಿಸಲಾಗಿದೆ. ಅನೇಕ ಗಣಿಗಳು 'ಮಿಡ್ ವಾಯಿಫ್–ಸೂಲಗಿತ್ತಿ' ಹಾಗೂ ದಾದಿಯರನ್ನು ನೇಮಿಸಿವೆ. ಪ್ರಶ್ನೆಯ ಎರಡನೆಯ ಭಾಗವು ಉದ್ಭವಿಸುವುದಿಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮೇಲಣ ಮತ್ತು ಇತರ ಪ್ರದೇಶಗಳಲ್ಲಿ ಮಹಿಳೆಯರ ಕಲ್ಯಾಣಕ್ಕಾಗಿ ಎಂದು ಸಮಾನ ಏರ್ಪಾಡನ್ನು ಸರ್ಕಾರವು ಮಾಡುತ್ತದೆಯೆಂಬುದನ್ನು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವು ಪರಿಶೀಲನೆಯಲ್ಲಿದೆ.

**ಶ್ರೀ ಎನ್.ಎಮ್. ಜೋಷಿ :** ಭೂಮಿಯಡಿ ಕೆಲಸ ಮಾಡಲು ಮಹಿಳೆಯರನ್ನು ನೇಮಿಸುವ ಬಗ್ಗೆ ಈಗಾಗಲೇ ಈ ಸದನವು ತನ್ನ ವಿರೋಧವನ್ನು ವ್ಯಕ್ತಪಡಿಸಿರುವುದುರಿಂದ ಈಗ ಭಾರತ ಸರ್ಕಾರವು ಈ ಶಾಸನಸಭೆಯ ಅಭಿಪ್ರಾಯದ ಮೇರೆಗೆ ನಿಷೇಧವನ್ನು ಹೇರುತ್ತದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದನದ ಆ ನಿರ್ಣಯವು ವಿಷಯದ ಅರ್ಹತೆಯ ಮೇಲೆ ಅಲ್ಲ, ಆದರೆ ರಾಜಕೀಯ ಉದ್ದೇಶದಿಂದ ಕೂಡಿದುದೆಂದು ನಾನು ಭಾವಿಸುತ್ತೇನೆ.

**ಶ್ರೀ ಎನ್.ಜಿ. ರಂಗ :** ಅವರು ಸದನದ ಇಚ್ಚೆಯನ್ನು ಉದ್ದೇಶಪೂರ್ವಕವಾಗಿಯೇ ತಪ್ಪು ತಿಳಿದುಕೊಂಡಿದ್ದಾರೆ.

**ಶ್ರೀ ಅಬ್ದುಲ್ ಖಯೂಮ್ :** ಕರ್ತವ್ಯಲೋಪದ ಮೇಲೆ, ಸದನವು ಪೂರ್ವಾಪರ ವಿಚಾರ ಮಾಡಿ ನಿರ್ಣಯಿಸಿರುವುದರ ಮೇಲೆ ಮಾನ್ಯ ಸದಸ್ಯರು ಹೀಗೆ ಆರೋಪಿಸಲು ಬರುವುದಿಲ್ಲ. ಹಾಗೆ ಮಾಡಿದಲ್ಲಿ ಅದನ್ನು ನಡೆಯಿಸಿಕೊಂಡು ಹೋಗಲು ಕಷ್ಟಕರವಾಗುತ್ತದೆ. ಅವರು ಹೀಗೆ ಹೇಳುತ್ತಾ ಹೋದಲ್ಲಿ ನಮ್ಮ ಸರ್ಕಾರವು ಬೇಜವಾಬ್ದಾರಿ ಸರ್ಕಾರವೆಂದು ಅರ್ಥವಾಗುತ್ತದೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ನೀವು ಭಾಷಣವನ್ನು ಮಾಡುತ್ತಿದ್ದೀರಿ. ಆದರೆ ಕರ್ತವ್ಯಲೋಪದ ಮೇಲೆ ಮಾತನಾಡುವಾಗ ಭಾಷಣ ಮಾಡಬಾರದು.

**ಶ್ರೀ ಅಬ್ದುಲ್ ಖಯೂಮ್ :** ಇದಕ್ಕೆ ಅವರು ಯಾವುದೇ ಉದ್ದೇಶವನ್ನು ಹಚ್ಚುವರೇ?

**ಮಾನ್ಯ ಅಧ್ಯಕ್ಷರು :** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸನ್ಮಾನ್ಯ ಕಾರ್ಮಿಕ ಸದಸ್ಯರನ್ನು ಆರಿಸಿದ ಮೇಲೆ ಅವರು ಆ ಪ್ರಶ್ನೆಯ ಮೇಲೆ ಕೇವಲ ರಾಜಕೀಯ ದೃಷ್ಟಿ ಅಷ್ಟೇ ಅಲ್ಲ ಸದನವು ಆ ವಿಷಯವನ್ನು ಬೇರೆ ದೃಷ್ಟಿಯಿಂದ ಆಲೋಚಿಸಬೇಕೆಂಬುದು ಇಚ್ಛಿಸುತ್ತಾರೆ. ಎಷ್ಟೆಂದರೂ ಅವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿಲ್ಲವೆಂದು ಮತ್ತು ಆ ಪ್ರಶ್ನೆ ಬಗ್ಗೆ ಸದನವು ರಾಜಕೀಯ ಮಾಡುತ್ತಿಲ್ಲವೆಂದು ನಾನು ಭಾವಿಸುತ್ತೇನೆ.

**ಶ್ರೀ ಅಬ್ದುಲ್ ಖಯೂಮ್ :** ಅಧಿಕೃತ ವರದಿಯ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆಂಬುದನ್ನು ಅವರು ನೀಡಿರುವ ವಿವರಣೆಯ ಬಗ್ಗೆ ನೋಡಬಹುದು. ಅದು ರಾಜಕೀಯ ಕ್ರಮವೆಂದು ಅವರು ಹೇಳಿದ್ದಾರೆ.

**ಶ್ರೀ ಎನ್.ಎಮ್. ಜೋಷಿ :** ಸದನವು ಆ ಪ್ರಶ್ನೆಯ ಮೇಲೆ ಮತವನ್ನು ತೆಗೆದುಕೊಂಡ ಮೇಲೆ ಭಾರತ ಸರ್ಕಾರವು ಅದನ್ನು ಪುನರ್ವಿಮರ್ಶಿಸುವುದೆಂದು ನಾನು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹೇಳಿದ್ದಕ್ಕಿಂತ ಹೆಚ್ಚಿಗೆ ಏನನ್ನು ಹೇಳಲಾರೆ.

## ೩೧೦
## ಭಾರತದ ಖನಿಜ ಸಂಪತ್ತು ಡಾ॥ ಕೃಷ್ಣನ್‌ರ ಸಲಹೆಗಳು *

**೧೭೭೩. ಪ್ರೊ॥ ಎನ್.ಜಿ. ರಂಗ :** ಸನ್ಮಾನ್ಯ ಸದಸ್ಯರು ದಯವಿಟ್ಟು ಈ ಮುಂದಿನ ವಿಷಯಗಳ ಬಗೆಗೆ ಹೇಳುತ್ತಾರೆಯೆ? : ಅ) ಮಾರ್ಚ್ ೧೪ನೆಯ ಹಿಂದು ಪತ್ರಿಕೆಯಲ್ಲಿ ಡಾ॥ ಎಮ್. ಎಸ್. ಕೃಷ್ಣನ್ ಅವರು ಪ್ರೆಸಿಡನ್ಸಿ, ಕಾಲೇಜ್, ಮದ್ರಾಸ್‌ನಲ್ಲಿ ಭೂಗರ್ಭಶಾಸ್ತ್ರದ ಸಂಘದಲ್ಲಿ ೧೪ ಮಾರ್ಚ್‌ರಂದು ಮಾತಾಡಿದ ವರದಿಯು ತಮ್ಮ ಗಮನಕ್ಕೆ ಬಂದಿದೆಯೆ?

ಅ) ತಾಮ್ರ, ಬೆಳ್ಳಿ, ನಿಕಲ್, ಪ್ಲಾಟಿನಮ್, ತವರ, ಪಾದರಸ (ಮರ್ಕ್ಯುರಿ), ಗ್ರಾಫಾಯಿಟ್ ಮತ್ತು ಪೋಟಾಸಿಯಮ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಲು ಮತ್ತು ಅವುಗಳ ಖನಿಜಗಳನ್ನು ಕಾಯ್ದುಕೊಂಡು ಹೋಗಲು ಯಾವ ಕ್ರಮಕೈಕೊಳ್ಳಲಾಗಿದೆ?

ಇ) ಯಾವ ಪ್ರಾಂತಗಳಲ್ಲಿ ಕಲ್ಲಿದ್ದಲು ಗಣಿಗಳಿಲ್ಲವೋ ಹಾಗೂ ಕಲ್ಲಿದ್ದಲು ಗಣಿಗಳು ಸಮೀಪದಲ್ಲಿ ಇಲ್ಲವೋ ಅಂಥ ಪ್ರದೇಶಗಳಲ್ಲಿ ಹೈಡ್ರಾಲಿಕ್ ಪವರ್ (ಜಲವಿದ್ಯುತ್)ನಿಂದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಯಾವ ಕ್ರಮಕೈಕೊಳ್ಳಲಾಗಿದೆ?

ಈ) ಗಾಳಿಯಿಂದ (ಗಾಳಿ ಯಂತ್ರದಿಂದ) ವಿದ್ಯುತ್ ಉತ್ಪಾದಿಸಲು ಮತ್ತು ಅವುಗಳ ಬಗ್ಗೆ ಪ್ರಚಾರ ಮಾಡಿ ಅವುಗಳ ಉಪಯೋಗವನ್ನು ಜನರಿಗೆ ತಿಳಿಸಲು ಯಾವ ಕ್ರಮಗಳನ್ನು ಕೈಕೊಳ್ಳಲಾಗಿದೆ? ಮತ್ತು

ಉ) ಡಾ॥ ಕೃಷ್ಣನ್‌ರ ಈ ಕೆಳಕಂಡ ವಿಷಯಗಳ ಬಗ್ಗೆ ಸಲಹೆ, ಎಲ್ಲ ಸೌಲಭ್ಯಗಳನ್ನೊಳಗೊಂಡ ಪ್ರಯೋಗಶಾಲೆ, ಅನೇಕ ಖನಿಜಗಳ ಉತ್ಪನ್ನದ ಪ್ರಮಾಣ ಮತ್ತು ಅವುಗಳ ಗುಣಮಟ್ಟ ಅಧ್ಯಯನ ಮಾಡಲು, ವಿದೇಶದಿಂದ ಖನಿಜಗಳನ್ನು ಆಮದುಮಾಡಿಕೊಳ್ಳುವ ಬದಲು ಸ್ಥಾನಿಕವಾಗಿ ಲಭ್ಯವಿರುವ ಖನಿಜಗಳ ಬಗ್ಗೆ ಪರೀಕ್ಷಿಸಿ ಅಧ್ಯಯನ ಮಾಡಲು ಕ್ರಮ ಕೈಗೊಳ್ಳಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಸರಕಾರವು ಯುದ್ಧತಂತ್ರಕ್ಕೆ ಉಪಯೋಗವಾಗುವ ಕೆಲವು ಮತ್ತು ಅದಕ್ಕೆ ಸಂಬಂಧಪಟ್ಟ ಖನಿಜಗಳನ್ನು ಮತ್ತು ವಸ್ತುಗಳನ್ನು ದಾಸ್ತಾನು ಮಾಡಬೇಕೆಂಬುದು ಸರ್ಕಾರದ ಯೋಜನೆಯಲ್ಲಿತ್ತು. ಆದರೆ ಅದು ಕಾರ್ಯಗತವಾಗಲಿಲ್ಲ. ಸರ್ಕಾರ ಈಗ ಭಾರತದಲ್ಲಿ ಯಾವುದರ ಬಗ್ಗೆ ಕೊರತೆ ಇದೆಯೊ ಅದರ ಬಗ್ಗೆ ಪುನರ್ವಿಮರ್ಶಿಸುತ್ತಿದೆ.

ಇ) ಸಾಮಾನ್ಯವಾಗಿ ಹೇಳಬೇಕೆಂದರೆ ಎಷ್ಟು ಸಾಧ್ಯವೋ ಅಷ್ಟು ಜಲವಿದ್ಯುತ್ತನ್ನು ಉತ್ಪಾದಿಸಲು ಹಾಗೂ ಅವುಗಳನ್ನು ಅಭಿವೃದ್ಧಿಪಡಿಸಲು ಮತ್ತು ಅದರ ತಾಂತ್ರಿಕತೆಯನ್ನು ಹೆಚ್ಚಿಸಲು ಈಗ ಇರುವ ಪರಿಣತಿ ಹೊಂದಿರುವ ಸಿಬ್ಬಂದಿಯಿಂದಲೇ ಪ್ರಾಂತೀಯ ಸರ್ಕಾರಗಳು ಅವುಗಳ ತನಿಖೆಯನ್ನು ಮಾಡುತ್ತಿವೆ. ಇವುಗಳಿಗೆ ಸಹಾಯ ಮಾಡಲು ಕೇಂದ್ರೀಯ ತಾಂತ್ರಿಕ ಶಕ್ತಿ ಸಮಿತಿಯು ಈಗಾಗಲೇ ತನ್ನಲ್ಲಿರುವ ಸಿಬ್ಬಂದಿಯಿಂದ ಅಂತಹ ಸರ್ಕಾರಗಳಿಗೆ ಸಾಧ್ಯವಾದಷ್ಟು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೫, ೧೨ನೇ ಏಪ್ರಿಲ್, ೧೯೪೬, ಪುಟ ೩೮೯–೩೯೦೧

ತಾಂತ್ರಿಕ ಸಹಾಯವನ್ನು ಕೊಡುತ್ತಿದೆ. ಈಗ ದೇಶದಲ್ಲಿ ಸದ್ಯದಲ್ಲಿ ಕೈಗೆತ್ತಿಕೊಂಡಿರುವ ಜಲವಿದ್ಯುತ್ ಯೋಜನೆಗಳಷ್ಟೇ ಅಲ್ಲದೆ, ಇನ್ನೂ ಹೆಚ್ಚಿನ ಸಂಖ್ಯೆಯ ಯೋಜನೆಗಳನ್ನು ದೇಶಾದ್ಯಂತ, ಅದರಲ್ಲಿಯೂ ಕಲ್ಲಿದ್ದಲು ಸಿಗುವ ಪ್ರದೇಶಗಳಿಗೆ ದೂರದಲ್ಲಿರುವ ಭಾಗಗಳಲ್ಲಿ ಸ್ಥಾಪಿಸುವ ಅಗತ್ಯದ ಬಗ್ಗೆ ಭಾರತಕ್ಕೆ ಸರ್ಕಾರಕ್ಕೆ ಅರಿವಿದೆ. ಆದರೆ, ಇದಕ್ಕೆ ಅಗತ್ಯವಿರುವ, ಅನುಭವವನ್ನು ಹೊಂದಿರುವ ಸಿಬ್ಬಂದಿಗಳ ಪ್ರಮಾಣ ನಮ್ಮಲ್ಲಿರುವ ಅಂತಹವರ ಪ್ರಮಾಣಕ್ಕಿಂತ ಅಧಿಕವಾಗಿದ್ದು, ಹೆಚ್ಚಿನ ಅನುಭವವುಕ್ಕೆ ಸಿಬ್ಬಂದಿಗಳನ್ನು ಒಪ್ಪಂದದ ಮೇರೆಗೆ ನೇಮಿಸಿಕೊಳ್ಳಲು ತೀವ್ರ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈ) ಗಾಳಿಯಿಂದ ವಿದ್ಯುತ್ತನ್ನು ಪಡೆಯುವುದಕ್ಕಾಗಲಿ ಅಥವಾ ವಾಯುಯಂತ್ರಗಳ ಉಪಯೋಗವನ್ನು ಜನಪ್ರಿಯಗೊಳಿಸುವುದಕ್ಕಗಲಿ, ಭಾರತ ಸರ್ಕಾರವು ವಿಶೇಷ ಪ್ರಯತ್ನಗಳನ್ನೇನೂ ಮಾಡುತ್ತಿಲ್ಲ. ಹವಾಮಾನವು ಅನುಕೂಲವಾಗಿರುವ ಎಡೆಗಳಲ್ಲಿ ಕೂಡ ಅವುಗಳ ಸ್ಥಾಪನೆಯಿಂದ ದೊರಕಬಹುದಾದ ವಿದ್ಯುತ್ತು ಅಲ್ಪ ಪ್ರಮಾಣದಲ್ದಲಾಗಿರುತ್ತದೆ. ಅಲ್ಲದೆ, ಈ ಯಂತ್ರಗಳಿಂದ ಅವಿರತವಾಗಿ ವಿದ್ಯುತ್ ಉತ್ಪಾದನೆ ಆಗುವುದಿಲ್ಲ ಎಂದು ಪರಿಣತರು ಭಾರತ ಸರಕಾರಕ್ಕೆ ತಿಳಿಸಿದ್ದಾರೆ.

ಉ) ಭಾರತೀಯ ಭೂಗರ್ಭ ಸಮೀಕ್ಷಣೆಯ ಪ್ರಯೋಗಶಾಲೆಗಳು ಈಗ ಬಹಳವಾಗಿ ಅಭಿವೃದ್ಧಿ ಹೊಂದಿವೆ ಮತ್ತು ಪುನರ್‌ವಿಂಗಡಣೆಯಾಗಿವೆ.

ಖನಿಜ ಮತ್ತು ಗಣಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಮತ್ತು ಸಲಹೆ ಕೊಡಲು ಮತ್ತು ಅದನ್ನು ವಿಸ್ತರಿಸಲು ಕ್ರಮಗಳನ್ನು ಕೈಕೊಳ್ಳಲಾಗಿದೆ. ಈಗ ಅಭಿವೃದ್ಧಿ ಪಥದಲ್ಲಿರುವ ವಿವಿಧ ಖನಿಜ ಕೈಗಾರಿಕೆಗಳು ಭಾರತದಲ್ಲಿ ದೊರಕುವ ಖನಿಜಗಳ ಉಪಯೋಗವನ್ನು ಪಡೆಯಲು, ಸರಕಾರವು ಸ್ಥಾಪಿಸಲು ಯೋಚಿಸುತ್ತಿರುವ ರಾಷ್ಟ್ರೀಯ ಮೆಟಲರ್ಜಿಕಲ್ ಮತ್ತು ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆಗಳನ್ನು ಉಪಯೋಗಿಸಿಕೊಳ್ಳಲಾಗುವುದು. ಭಾರತ ದೇಶದಲ್ಲಿಯೆ ಲಭ್ಯವಿರುವ ಖನಿಜಗಳು ಮತ್ತು ಅದಿರುಗಳನ್ನು ಪರದೇಶಕ್ಕೆ ರಫ್ತು ಮಾಡುವುದಕ್ಕಿಂತ ಇಲ್ಲಿಯೇ ಅವುಗಳನ್ನು ಸಂಸ್ಕರಿಸಿ ರಫ್ತು ಮಾಡಬೇಕೆಂಬ ಆಲೋಚನೆ ಸರ್ಕಾರಕ್ಕೆ ಇದೆ. ೧೯೪೪ರಿಂದ ಸ್ಥಾಪಿಸಲ್ಪಟ್ಟ ಅನೇಕ ಕೈಗಾರಿಕಾ ಸಮಿತಿಗಳು ಈಗಾಗಲೇ ಬಹಳ ಮಹತ್ವದ ಮಾಹಿತಿಯನ್ನು ಹಾಗೂ ಅಂಶಗಳನ್ನು ಒದಗಿಸಿವೆ. ಈ ತಲೆಬರಹದ ಕೆಳಗೆ ಸಂಗ್ರಹಿಸಿದ ಖನಿಜಗಳ ಮತ್ತು ಹೊಸ ಖನಿಜಗಳ ಬಗ್ಗೆ ನೀತಿಗಳನ್ನು ರೂಪಿಸಲು ಅವುಗಳನ್ನು ಅಧ್ಯಯನ ಮಾಡಲಾಗುತ್ತಿದೆ.

**ಪ್ರೊ॥ ಎನ್.ಜಿ. ರಂಗ :** ಸನ್ಮಾನ್ಯ ಸದಸ್ಯರು (ಇ)ಗೆ ಸಂಬಂಧಪಟ್ಟಂತೆ ಅವರಿಗೆ ತಾಂತ್ರಿಕ ಸಿಬ್ಬಂದಿಗೆ ಮತ್ತು ಅವರ ಅಭಿವೃದ್ಧಿ ಮತ್ತು ಜಲವಿದ್ಯುತ್ ಉತ್ಪಾದಿಸಲು ತಾಂತ್ರಿಕ ಸಿಬ್ಬಂದಿ ಆವಶ್ಯಕತೆಯು ಬಹಳವಾಗಿದೆಯೆಂದು ತಿಳಿಸುತ್ತಾರೆ. ಅಂಥ ಅರ್ಹತೆ ಹೊಂದಿದ ಭಾರತೀಯರನ್ನು ನೇಮಿಸಲು ಮತ್ತು ಅಂಥ ವಿಷಯದಲ್ಲಿ ವಿಶೇಷ ಜ್ಞಾನಹೊಂದಿದ ಜನರನ್ನು ಉಪಯೋಗಿಸಲು ಸರ್ಕಾರವು ಯಾವ ಕ್ರಮವನ್ನು ಕೈಕೊಂಡಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂತಹ ವಿಶೇಷ ಉದ್ಯೋಗದಲ್ಲಿ ತರಬೇತಿಯನ್ನು ಪಡೆಯಲು ಅನೇಕ ಭಾರತೀಯರನ್ನು ಬೇರೆ ದೇಶಕ್ಕೆ ಕಳುಹಿಸಲಾಗಿದೆ.

**ಪ್ರೊ॥ ಎನ್.ಜಿ. ರಂಗ :** ನನ್ನ ಸನ್ಮಾನ್ಯ ಮಿತ್ರರು ಪ್ರಶ್ನೆಯ (ಈ) ವಿಭಾಗಕ್ಕೆ ಸಂಬಂಧಿಸಿದಂತೆ

ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಸಲಹೆಯ ಬಗ್ಗೆ ಕೇವಲ ಆಗಾಗ್ಗೆ ಮಾತ್ರ ವಿದ್ಯುತ್ ಉತ್ಪಾದಿಸುತ್ತದೆ. ಅದರಲ್ಲಿ ವಿಶೇಷವೇನೂ ಇಲ್ಲವೆಂದು ಹೇಳಿ ನನ್ನ ಸಲಹೆಗೆ ತಣ್ಣೀರು ಎರಚಿದ್ದಾರೆ. ಸಾವಿರಾರು ರೈತರು ಗಾಳಿಯ ಯಂತ್ರದ ಬಗ್ಗೆ ಆಸಕ್ತಿಯನ್ನು ವ್ಯಕ್ತಪಡಿಸಿರುವುದರಿಂದ ಅವರ ಬಗ್ಗೆ ಸರ್ಕಾರವು ವಿಶೇಷ ಆಸಕ್ತಿ ವಹಿಸಿ ಮತ್ತು ಕಾಳಜಿಪೂರ್ವಕವಾಗಿ ಗಾಳಿಯಿಂದ ವಿದ್ಯುತ್ ಉತ್ಪಾದಿಸಲು ಬೇರೆ ಉಪಯುಕ್ತ ಕ್ರಮಗಳನ್ನು ಯೋಜಿಸುತ್ತಿದೆಯೇ ಮತ್ತು ಅದರಿಂದ ಲಭ್ಯವಾಗುವ ವಿದ್ಯುತ್ತನ್ನು ಉತ್ಪಾದಿಸಿ ಅವರಿಗೆ ಸಹಾಯವನ್ನು ಮಾಡುತ್ತದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದಂತೆ ಅದು ಆ ಪ್ರದೇಶದಲ್ಲಿ ಎಷ್ಟು ಗಾಳಿ ಲಭ್ಯವಾಗುತ್ತದೆಂಬುದರ ಮೇಲೆ ಅವಲಂಬಿತವಾಗಿರುತ್ತದೆ.

**ಪ್ರೊ॥ ಎನ್.ಜಿ. ರಂಗ :** ವಾಯುಮಂಡಲ ಪರಿಣಿತರು ಕೆಲವು ಯೋಜನೆಗಳನ್ನು ಅಭ್ಯಸಿಸಿ ಮತ್ತು ಅವುಗಳ ಕಾರ್ಯಗಳ ಯೋಜನೆಯನ್ನು ವಾತಾವರಣ (ಹವಾಮಾನ) ಶಾಸ್ತ್ರಜ್ಞರಿಗೆ ಇದರ ಬಗ್ಗೆ ಕೆಲವು ಯೋಜನೆಗಳನ್ನು ಸಿದ್ಧಪಡಿಸಲು ಸಾಧ್ಯವಾಗಬಹುದೆ? ಮತ್ತು ದೇಶದ ವಿವಿಧ ಭಾಗಗಳಲ್ಲಿರುವ ಗಾಳಿಯಿಂದ ಎಷ್ಟು ವಿದ್ಯಚ್ಛಕ್ತಿ ಪಡೆಯಬಹುದೆಂದು ಅವರು ಅಂದಾಜು ಮಾಡಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು ನಾವು ಇದನ್ನು ವಿಚಾರ ಮಾಡಿದ್ದೇವೆ– ಗಮನಕ್ಕೆ ತೆಗೆದುಕೊಂಡಿದ್ದೇವೆ.

**ಶ್ರೀ ಎನ್.ಎಮ್. ಜೋಷಿ :** ಸದನದಲ್ಲಿ ಮತಗಣನೆಯ ನಂತರ ಭಾರತ ಸರ್ಕಾರವು ಆ ಪ್ರಶ್ನೆಯ ಬಗ್ಗೆ ಮರುವಿಚಾರಣೆ ಮಾಡಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದ್ದಕ್ಕಿಂತ ಹೆಚ್ಚಿನದೇನನ್ನೂ ಹೇಳಬಯಸುವುದಿಲ್ಲ.

## ೩೧೧
## ಗಣಿ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಏರ್ಪಾಟುಗಳು*

**೧೦೫೭. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳುತ್ತಾರೆಯೆ? ಅ) ೧೯೪೫ರ ಫೆಬ್ರವರಿ ೨೧ರ ೨೧ನೆಯ ದಿನಾಂಕ ಕೇಳಿದ ಮುಖ್ಯ ಪ್ರಶ್ನೆಯನ್ನು ಕುರಿತು ಗಣಿ ಕಾರ್ಮಿಕರ ಮಕ್ಕಳ ಹಾಗೂ ಶಿಶುಗಳ ಕಲ್ಯಾಣಕ್ಕಾಗಿ ಸರ್ಕಾರವು ಯಾವ ಏರ್ಪಾಡು ಮಾಡಿದೆ?

ಆ) ಆ ಮುಖ್ಯ ಪ್ರಶ್ನೆಯ ಉಪ ಪ್ರಶ್ನೆಗಳ ಬಗ್ಗೆ ಸರಕಾರಕ್ಕೆ ಮಾಹಿತಿ ಲಭ್ಯವಾಗಿದೆಯೆ?

ಇ) ಗಣಿ ಕಾರ್ಮಿಕರ ಶಿಶುಗಳಿಗೆ ಮತ್ತು ಮಕ್ಕಳಿಗೆ ಉಚಿತವಾಗಿ ಹಾಲು ಸರಬರಾಜು ಮಾಡಿದೆಯೆ? ಮತ್ತು ಹಾಗಿದ್ದಲ್ಲಿ ಎಷ್ಟು ವಯಸ್ಸಿನವರಿಗೆ ಯಾವ ಪ್ರಮಾಣದಲ್ಲಿ? ಮತ್ತು ಹಾಲನ್ನು ಸರಬರಾಜು ಮಾಡಿರದಿದ್ದರೆ ಯಾವ ಕಾರಣದಿಂದ ಸರಬರಾಜು ಮಾಡಿಲ್ಲ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೩. ಪುಟ ೨೦೦೬

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು (ಆ) ಎಲ್ಲ ವಿಷಯಗಳ ಬಗ್ಗೆ ನನಗೆ ಇಲ್ಲಿಯವರೆಗೆ ಯಾವ ವರದಿಯೂ ಸಿಕ್ಕಿಲ್ಲ. ಆದರೆ ನಾನು ಮೊದಲು ಸ್ಪಷ್ಟಪಡಿಸುವುದೇನೆಂದರೆ ಮಹಿಳೆಯರು ತಮ್ಮ ಶಿಶುಗಳನ್ನು ಜನನದ ೪ ವಾರಗಳ ವರೆಗೆ ಗಣಿಯ ಒಳಗೆ ತೆಗೆದುಕೊಂಡು ಹೋಗುವುದನ್ನು ಪೂರ್ಣವಾಗಿ ಪ್ರತಿಬಂಧಿಸಲಾಗಿದೆ. ಕೆಲವು ತಿಂಗಳುಗಳ ಹಿಂದೆ ಒಬ್ಬ ಮಹಿಳಾ ಕಾರ್ಮಿಕ ಕಲ್ಯಾಣ ಅಧಿಕಾರಿಯು ವಿಚಾರಣೆ ಮಾಡಲಾಗಿ ತಿಳಿದು ಬಂದ ವಿಷಯವೇನೆಂದರೆ ತುಂಬು ಬಸುರಿಯಾದ ಒಬ್ಬ ಹೆಣ್ಣುಮಗಳು ಸಾಮಾನ್ಯವಾಗಿ ಭೂಗರ್ಭದೊಳಗೆ ಹೋಗುವುದಿಲ್ಲ. ನಾನು ಒಂದು ಮಸೂದೆಯನ್ನು ಮಂಡಿಸಿದ್ದೇನೆ. ಅದರಲ್ಲಿ ಮಹಿಳೆಯರು ಹೆರಿಗೆಯ ಪೂರ್ವದಲ್ಲಿ ೧೦ ವಾರಗಳ ಮುಂಚೆ ಗಣಿಯ ಆಳಕ್ಕೆ ಹೋಗುವುದನ್ನು ಪ್ರತಿಬಂಧಿಸಲಾಗಿದೆ.

ಇಲ್ಲಿಯವರೆಗೆ ನಾನು ಕಂಡುಹಿಡಿದದ್ದು ಏನೆಂದರೆ ನೆಲತಳದ ಗಣಿಯ ಆಳದಲ್ಲಿ ಕೆಲಸ ಮಾಡುವ ತಾಯಂದಿರು ತಮ್ಮ ಮಕ್ಕಳಿಗೆ ಹಾಲು ಉಣಿಸಲು ಮೇಲೆ ಬರಲು ನಿರ್ದಿಷ್ಟವಾದ ಬಿಡುವು ಇಲ್ಲವೆ ವ್ಯವಸ್ಥೆಯು ಇರುವುದಿಲ್ಲ. ಆದರೆ ಮಹಿಳಾ ಕಲ್ಯಾಣ ಅಧಿಕಾರಿಯವರ ಪ್ರಕಾರ ಮಕ್ಕಳಿದ್ದ ಮಹಿಳೆಯರಿಗೆ ತಮ್ಮ ಗಣಿಗಳಲ್ಲಿರುವ ಕೆಲಸವನ್ನು ಬಹು ಬೇಗನೆ ಬಿಡುವ ಒಂದು ಸುವ್ಯವಸ್ಥೆ ಇದೆ.

ಇ) ಇನ್ನು ಕೆಲವು ಗಣಿಗಳಲ್ಲಿ ಸರ್ಕಾರವು ಮಹಿಳೆಯರ ಹಾಗೂ ಅವರ ಮಕ್ಕಳ ಆರೋಗ್ಯವನ್ನು ಹೇಗೆ ಅಭಿವೃದ್ಧಿಪಡಿಸಬೇಕು ಹಾಗೂ ಯಾವ ಕ್ರಮಗಳನ್ನು ಈ ವಿಚಾರವಾಗಿ ತೆಗೆದುಕೊಳ್ಳಬೇಕೆಂಬುದನ್ನು ಯೋಚಿಸುತ್ತದೆ.

**ಪ್ರೊ॥ ಎನ್.ಜಿ. ರಂಗ :** ಮಕ್ಕಳಿದ್ದ ಕಾರ್ಮಿಕ ಮಹಿಳೆಯರು ತಮ್ಮ ಕೆಲಸವನ್ನು ಸ್ವಲ್ಪ ಬೇಗನೆ ಬಿಡುವ ವ್ಯವಸ್ಥೆಯಿರುವುದೆಂದು ಅವರ ವೇತನದಲ್ಲಿ ಕಡಿತಮಾಡಲಾಗುತ್ತಿದೆಯೇ ಅಥವಾ ಅವರು ಗಣಿಯಲ್ಲಿ ಕೆಲಸ ಮಾಡುವುದನ್ನು ಬೇಗನೆ ಬಿಡುವಂತೆ ಉತ್ತೇಜಿಸಲಾಗುತ್ತದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರಿಗೆ ಅವರು ತುಂಬಿಸಿದ ಟಬ್ಬುಗಳ ಪ್ರಮಾಣದ ಪ್ರಕಾರ ವೇತನ ಕೊಡಲಾಗುವುದು. ಅದು ತುಂಡು ಕೆಲಸ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಅವರು ಒಂದೇ ಸಮನೆ ಎಷ್ಟು ತಾಸು ಕೆಲಸವನ್ನು ಮಾಡುತ್ತಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ತುಂಡು ಕೆಲಸವಾದ್ದರಿಂದ ಅವರು ಬೇಕಾದಾಗ ಬರಬಹುದು ಹಾಗೂ ಬೇಕಾದಾಗ ಹೋಗಬಹುದು.

## ೩೧೨
## ಅಸ್ಸಾಮ್ ಯೋಜನೆಗಾಗಿ ಕಳಿಸಿದ ಚಹಾ ತೋಟದ ಕಾರ್ಮಿಕರು*

**೧೩೧೩. ದಿವಾನ್ ಅಬ್ದುಲ್ ಬಸಿತ್ ಚೌಧರಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯದ ಬಗ್ಗೆ ಹೇಳುವಿರಾ? ಚಹಾ ತೋಟದ ಮ್ಯಾನೇಜರರು ಬಹಳಷ್ಟು ಜನರನ್ನು ಅಸ್ಸಾಮ್‌ನ ಚಹದ ತೋಟಗಳಿಗೆ ಕಾರ್ಮಿಕರೆಂದು ಕಳುಹಿಸಿದ ವಿಷಯದ ಬಗ್ಗೆ ಅವರಿಗೆ ಗೊತ್ತಿದೆಯೆ?

ಆ) ಅಂಥ ಯೋಜನೆಗಳಲ್ಲಿ ಕೆಲಸ ಮಾಡುವಾಗ ನಿಧನರಾದ ಕಾರ್ಮಿಕರ ಅವಲಂಬಿತರಿಗೆ ಇಲ್ಲಿಯವರೆಗೆ ಯಾವ ಪರಿಹಾರವನ್ನೂ ನೀಡಲಾಗಿಲ್ಲವೆಂಬುದು ಮಾನ್ಯ ಕಾರ್ಮಿಕ ಸದಸ್ಯರಿಗೆ ತಿಳಿದಿದೆಯೇ?

ಇ) ಸುಮಾರು ೨೦೦ ರೂ. ಗಳಿಂದ ೩೦೦ ರೂ.ಗಳವರೆಗೆ ಪರಿಹಾರಧನವನ್ನು ಅಂಥ ಅವಲಂಬಿತರಿಗೆ ಕೊಡಲಾಗಿದೆ ಎಂಬುದು ನಿಜವೆ? ಮತ್ತು ಆ ಹಣವು ಅವರಿಗೆ ಸಾಕಾಗುವುದೆ?

ಈ) ಅಂತಹ ನತದೃಷ್ಟ ಅವಲಂಬಿತರು ಪರಿಹಾರವನ್ನು ಪಡೆಯಲು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆಯೆ?

ಉ) ಯೋಜನೆಗಳಲ್ಲಿ ಜೀವ ಕಳೆದುಕೊಂಡವರ ಅವಲಂಬಿತರಿಗಾಗಿ ಸಾಕಷ್ಟು ಪರಿಹಾರ ಕೊಡುವ ಇಚ್ಛೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆಯೆ?

ಊ) ಅಂತಹ ಹಣವನ್ನು ಚಹಾದ ತೋಟದ ಕಚೇರಿಯ ಬದಲಾಗಿ ಉಪವಿಭಾಗ ಕಚೇರಿಯು ಅಧಿಕಾರಿಯ ಮೂಲಕವಾಗಿ ವಿತರಿಸುವುದು ಯೋಗ್ಯವೆಂಬುದರ ಬಗ್ಗೆ ವಿಚಾರ ಮಾಡಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಆ ಮಾಹಿತಿಯು ಸರಿಯಾದುದಲ್ಲ. ಭಾರತೀಯ ಚ.ಹಾ ಸಂಘದವರಿಂದ ಅಸ್ಸಾಂ ಯುದ್ಧ ಯೋಜನೆಗಳಿಗಾಗಿ ನೇಮಕವಾದ ಕಾರ್ಮಿಕರ (ಹಾಗೂ ಇತರ ಕಾರ್ಮಿಕ ವರ್ಗದವರ) ಪೈಕಿ ಜೀವಕಳೆದುಕೊಂಡ ಅಥವಾ ಗಾಯಗೊಂಡ ಎಲ್ಲರಿಗೂ ಪರಿಹಾರವನ್ನು ನೀಡುವಂತೆ ಯುದ್ಧ ಇಲಾಖೆಯ ಮೂಲಕ ಭಾರತ ಸರ್ಕಾರವು ನಿರ್ದೇಶನವನ್ನು ನೀಡಿದೆ. ಇದಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಪರಿಶೀಲಿಸಿ ಪಾವತಿಮಾಡಲು ಕಾರ್ಮಿಕ ವಲಸೆ ನಿಯಂತ್ರಕರನ್ನು ಕಾರ್ಮಿಕ ಪರಿಹಾರ ಆಯುಕ್ತರನ್ನಾಗಿ ನೇಮಿಸಲಾಗಿದೆ. ಅವರು ಕಳೆದ ಎರಡು ವರ್ಷಗಳಲ್ಲಿ ೪೦೦೦ ಪ್ರಕರಣಗಳಲ್ಲಿ ಪರಿಹಾರವನ್ನು ಪಾವತಿಸಿದ್ದಾರೆ. ೧೯೪೫ರ ಫೆಬ್ರವರಿ ೨೮ರವರೆಗೆ ಭಾರತೀಯ ಚಹಾ ಸಂಸ್ಥೆಯಿಂದ ಕಾರ್ಮಿಕರ ಪರವಾಗಿ ಸುಮಾರು ೨೬೧೨ ಅರ್ಜಿಗಳು ಅವರಿಗೆ ಬಂದಿವೆ. ಇದರಲ್ಲಿ ಸುಮಾರು ೨೩೧೯ ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ. ೨೧೭ ಪ್ರಕರಣಗಳನ್ನು ವಜಾಮಾಡಲಾಗಿದೆ ಮತ್ತು ೮೬ ಪ್ರಕರಣಗಳು ಇನ್ನೂ ವಿಚಾರಣೆಯಲ್ಲಿವೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೦೭

ಇ) ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ ಪ್ರಕಾರ ಪರಿಹಾರವನ್ನು ನೀಡಲಾಗಿದೆ. ಮತ್ತು ಉಳಿದ ಪ್ರಕರಣಗಳಲ್ಲಿ ಮರಣ ಸಂಭವಿಸಿದಲ್ಲಿ ಅನುಗ್ರಹಪೂರ್ವಕ ೬೦೦ ರೂ. ಮತ್ತು ಖಾಯಂ ಅಸಮರ್ಥರಾದವರಿಗೆ ೧೨೦೦ ರೂ. ಕೊಡಲಾಗಿದೆ. ಮೊದಲು ಸುಮಾರು ೩೦೦ ರೂ. ಗಳನ್ನು ಪೂರ್ವಭಾವಿಯಾಗಿ ಕೊಡಲಾಗಿದೆ. ಮೇಲುನೋಟಕ್ಕೆ ಕಂಡ ಈ ಪೂರ್ವಭಾವಿ ನೀಡಿಕೆಗಳ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖಿಸಿರಬಹುದು.

ಈ) ಅವಲಂಬಿತರು ಚಹಾತೋಟಗಳಲ್ಲಿ ಇರುತ್ತಿದ್ದರೆ ಸಂಪೂರ್ಣ ಪರಿಹಾರ ಮೊತ್ತವನ್ನು ಒಂದೇ ಸಲಕ್ಕೆ ಚಹಾತೋಟದ ಕಾರ್ಯನಿರ್ವಾಹಕ ಡೆಪ್ಯೂಟಿ ಕಮೀಷನರ್‌ರ ಮೂಲಕ ಕೊಡಲಾಗುವುದು. ಒಂದು ವೇಳೆ ಈ ಪರಿಹಾರ ಮೊತ್ತವು ದೊಡ್ಡದಾಗಿದ್ದಲ್ಲಿ ಹಾಗೂ ಅದನ್ನು ಪಡೆಯುವವರು ಅಪ್ರಾಪ್ತವಯಸ್ಕರಾಗಿದ್ದು ತಮ್ಮನ್ನು ತಾವು ಸಂಭಾಳಿಸಲು ನೋಡಿಕೊಳ್ಳಲು ಅಶಕ್ತರಾಗಿದ್ದರೆ, ಆಗ ಆ ಹಣವನ್ನು ಅಸ್ಸಾಮ್‌ನ ಕಾರ್ಮಿಕ ಆಯುಕ್ತರು ಅಂಚೆ ಕಚೇರಿಯಲ್ಲಿ ತೊಡಗಿಸುತ್ತಾರೆ. ಮತ್ತು ಈ ಹಣವನ್ನು ಅವರಿಗೆ ಕಾಲಕಾಲಕ್ಕೆ ಮನಿಯಾರ್ಡರ ಮೂಲಕ ಕಂತುಗಳಲ್ಲಿ ಕಳುಹಿಸಲಾಗುವುದು. ಮೊದಲು ಈ ಹಣವು ದೊಡ್ಡ ಪ್ರಮಾಣದಲ್ಲಿ ಇದ್ದುದರಿಂದ ಮತ್ತು ಈ ಹಣ ಕಳುಹಿಸುವ ಪ್ರಕರಣಗಳು ಹೆಚ್ಚಿಗೆ ಇದ್ದುದರಿಂದ ಆ ಕೆಲಸದಲ್ಲಿ ವಿಳಂಬವಾಗುತ್ತಿತ್ತು. ಈಗ ಎಲ್ಲವನ್ನೂ ಸುವ್ಯವಸ್ಥಿತಗೊಳಿಸಲಾಗಿದೆ.

ಉ) ಮೇಲಣ (ಇ) ಭಾಗದಲ್ಲಿ ಹೇಳಿರುವಂತೆ ಪರಿಹಾರ ಮೊತ್ತವನ್ನು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅನುಗುಣವಾಗಿ ನೀಡಲಾಗುತ್ತಿತ್ತು. ಆದರೆ ಬೇರೆ ಪ್ರಕರಣಗಳಲ್ಲಿ ಮರಣ ಸಂಭವಿಸಿದರೆ ೬೦೦ ರೂ.ಗಳನ್ನು ಹಾಗೂ ಖಾಯಂ ಅಶಕ್ತನಾದರೆ ೧೨೦೦ ರೂ. ಗಳನ್ನು ಇಂತಹ ಪ್ರಕರಣಗಳಲ್ಲಿ ಬರುವ ಪರಿಹಾರ ಮೊತ್ತವಾಗಿ ಕಾರ್ಮಿಕರಿಗೆ ಅಥವಾ ಅವರ ಅವಲಂಬಿತರಿಗೆ ಕೊಡಲಾಗುತ್ತದೆ.

ಈ) ಎಲ್ಲಾ ಪರಿಹಾರ ಮೊತ್ತಗಳು ಯೋಗ್ಯವೆಂದು ಭಾವಿಸಲಾಗಿದೆ.

ಊ) ಬಹಳಷ್ಟು ಪ್ರಕರಣಗಳಲ್ಲಿ ಅವಲಂಬಿತರು ಅಪ್ರಾಪ್ತವಯಸ್ಕರು ಇಲ್ಲವೆ ಅಂಥ ದೊಡ್ಡ ಮೊತ್ತವನ್ನು ಸರಿಯಾಗಿ ಇಟ್ಟುಕೊಳ್ಳಲು, ನೋಡಿಕೊಳ್ಳಲು ಅಸಮರ್ಥರು ಆಗಿರುತ್ತಾರೆ. ಅಂಥ ಪ್ರಕರಣಗಳಲ್ಲಿ ಅಂತಹ ಮೊತ್ತವನ್ನು ಕಂತುಗಳ ಮೂಲಕ ಅಂಚೆ ಮನಿಯಾರ್ಡರ್ ಮೂಲಕ ಕಳುಹಿಸಲಾಗುವುದು. ಕೇವಲ ಪೂರ್ವಭಾವಿಯಾಗಿ ಕೊಡುವ ಒಂದೇ ಮೊತ್ತವನ್ನು ಡೆಪ್ಯೂಟಿ ಕಮೀಷನ್‌ರು ಮತ್ತು ಚಹಾತೋಟದ ಕಾರ್ಯನಿರ್ವಾಹಕರು ಮಾತ್ರ ವಿತರಿಸುತ್ತಾರೆ. ಅವಲಂಬಿತರು ಚಹಾತೋಟದ ಆವರಣದಲ್ಲಿ ಇದ್ದರೆ ಚಹಾತೋಟದ ಕಾರ್ಯನಿರ್ವಾಹಕರು ಮಾತ್ರ ಆ ಹಣ ವಿತರಿಸುತ್ತಾರೆ. ಏಕೆಂದರೆ ಕಾರ್ಯನಿರ್ವಾಹಕರು ಅವಲಂಬಿತರು ಯಾರು ಎಂಬುದನ್ನು ಗುರುತಿಸಿ ಕಾರ್ಮಿಕರ ನಷ್ಟಪರಿಹಾರ ಆಯುಕ್ತರಿಗೆ ತಿಳಿಸಿ ಆ ಪರಿಹಾರದ ಮೊತ್ತವನ್ನು ಕೊಡಲಾಗುತ್ತದೆ. ಈವರೆಗೆ ಈ ವ್ಯವಸ್ಥೆಯು ಸುವ್ಯವಸ್ಥಿತವಾಗಿ ನಡೆದು ಬಂದಿದೆ.

# ೩೧೩
# ಅಸ್ಸಾಮ್ ಯೋಜನೆಯಿಂದ ಹಿಂದಿರುಗಿದ ಕಾರ್ಮಿಕರ ಅನಾರೋಗ್ಯ *

**೧೩೧೪. ಶ್ರೀ ದಿವಾನ್ ಅಬ್ದುಲ್ ಬಸಿತ್ ಚೌಧರಿ :** ಸನ್ಮಾನ್ಯ ಕಾರ್ಮಿಕ ಮುಂದಿನ ವಿಷಯಗಳು ಸದಸ್ಯರಿಗೆ ತಿಳಿದಿದೆಯೆ? ಅ) ಅಸ್ಸಾಮ್‌ದಿಂದ ಮರಳಿ ಬಂದ ಕಾರ್ಮಿಕರ ಅನಾರೋಗ್ಯದ ಬಗ್ಗೆ ತಿಳಿದಿದೆಯೆ? ಮತ್ತು

ಆ) ಅದರಲ್ಲಿಯ ಬಹು ಜನರು ಬೇರೆ ಬೇರೆ ರೋಗಗಳಿಗೆ ತುತ್ತಾಗಿದ್ದಾರೆಂಬುದು ತಿಳಿದಿದೆಯೆ?

ಇ) ಅವರಿಗೆ ಯೋಗ್ಯ ಉಪಚಾರವನ್ನು ಕೈಕೊಳ್ಳಲು ಯಾವ ಕ್ರಮಗಳನ್ನು ಕೈಗೊಂಡಿಲ್ಲವೆಂಬುದು ಅವರಿಗೆ ತಿಳಿದಿದೆಯೆ?

ಈ) (ಅ) ಮತ್ತು (ಇ) ಗಳಿಗೆ ಉತ್ತರವು ಹೌದು ಆಗಿದ್ದಲ್ಲಿ ಈ ನತದೃಷ್ಟ ಕಾರ್ಮಿಕರ ಸಂಕಷ್ಟಗಳ ಕಡೆ ಸಂಬಂಧಪಟ್ಟ ಅಧಿಕಾರಿಗಳ ಗಮನವು ಹರಿದಿದೆಯೆ?

ಉ) (ಅ) ಮತ್ತು (ಇ) ಗಳಿಗೆ ಉತ್ತರವು ಇಲ್ಲವಾಗಿದ್ದಲ್ಲಿ ಮಾನ್ಯ ಸದಸ್ಯರು ಅದರ ಬಗ್ಗೆ ವಿಚಾರಣೆಯನ್ನು ಮಾಡಲು ಸಿದ್ಧರಿದ್ದಾರೆಯೆ? ಮತ್ತು ಆ ವಿಚಾರಣೆಯ ಫಲಿತಾಂಶವನ್ನು ಈ ಸದನದ ಮುಂದೆ ಇಡುತ್ತಾರೆಯೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಅಸ್ಸಾಮ್ ಅರಣ್ಯದ ಅನಾರೋಗ್ಯ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಭೀಕರ ಸ್ವರೂಪವಾದ ಚಳಿಜ್ವರವು ಕಾಣಿಸಿಕೊಂಡಿದೆ. ಆದ್ದರಿಂದ ಕೆಲವು ಕಾರ್ಮಿಕರು ಆ ಯೋಜನೆಗಳಿಂದ ಹಿಂದಿರುಗಿದ್ದಾರೆ. ಅನಾರೋಗ್ಯದ ಪರಿಣಾಮವಾಗಿ ಮಡಿದ ಕುಟುಂಬಗಳಿಗೆ ಅನುಗ್ರಹಪೂರ್ವಕ ಮೊತ್ತವನ್ನು ಪರಿಹಾರ ಮೊತ್ತವಾಗಿ ಕೊಡಲು ವಿಶೇಷ ಆದೇಶ ಹೊರಡಿಸಲಾಗಿದೆ. ಏಕೆಂದರೆ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಪ್ರಕಾರ ಇಂತಹ ಸಂದರ್ಭಗಳಲ್ಲಿ ಪರಿಹಾರವನ್ನು ಸಾಧ್ಯವಿಲ್ಲ. ಕೊಡಲು ಬರುವುದಿಲ್ಲ. ಇಂಥದೇ ಯೋಜನೆಯಿಂದ ಹಿಂತಿರುಗಿ ಬಂದ ಮತ್ತು ಆ ಯೋಜನೆಗಳ ಕೆಲಸ ಮಾಡುವಾಗ ರೋಗಪೀಡಿತರಾಗಿ, ಮರಣ ಹೊಂದಿದ ಜನರಿಗೂ ಪರಿಹಾರವನ್ನು ಕೊಡಲಾಗಿದೆ.

ಆ) ಸರ್ಕಾರಕ್ಕೆ ಈ ಬಗ್ಗೆ ಮಾಹಿತಿಯು ಇರುವುದಿಲ್ಲ.

ಇ) ಚಹಾತೋಟಕ್ಕೆ ಮರಳಿ ಬಂದ ಕಾರ್ಮಿಕರಿಗೆ ಚಹಾತೋಟದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಲಾಗುತ್ತದೆ ಮತ್ತು ತಮ್ಮ ಊರಿಗೆ ಮರಳಿದ ಚಹಾತೋಟದ ಕಾರ್ಮಿಕರಿಗೆ ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ವೈಯಕ್ತಿಕಕಾರಣಗಳಿಂದ ಚಹಾತೋಟಕ್ಕೆ ಮರಳಿ ಬಂದ ಅಥವಾ ತಮ್ಮ ಹಳ್ಳಿಗಳಿಗೆ ಮರಳಿಬಂದ ಚಹಾ ಕಾರ್ಮಿಕರಿಗೆ ವಾಸ್ತವಿಕವಾಗಿ ವೈದ್ಯಕೀಯ ಏರ್ಪಾಡು ಮಾಡಲು ಸಾಧ್ಯವಿಲ್ಲ.

ಈ) (ಅ) (ಆ) ಮತ್ತು (ಇ) ದಲ್ಲಿ ಉತ್ತರಿಸಿರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಖಚಿತಪಡಿಸಿಕೊಂಡ ವಾಸ್ತವಾಂಶಗಳನ್ನು ಮೇಲೆ ತಿಳಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೧೦

# ೩೧೪
# ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕಾರ್ಮಿಕರ ಸಂಕಷ್ಟಗಳು*

**೧೩೧೫. ಶ್ರೀ ಅಬ್ದುಲ್ ಖಯೂಮ್ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುತ್ತಾರೆಯೆ?: ಅ) ೧೯೪೪ರ ಡಿಸೆಂಬರ್ ೨೦ ಹಾಗೂ ಮತ್ತು ೧೯೪೫ರ ಜನವರಿ ೨೪ರಂದು ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕೆಲಸಗಾರರು ಮನವಿಯನ್ನು ಅರ್ಪಿಸಿದ್ದಾರೆಯೆ?

ಆ) ಅಲ್ಲಿ ಕಾಣಿಸಿದ ಅವರ ಸಂಕಷ್ಟಗಳ ಸ್ವರೂಪಗಳೇನು? ಮತ್ತು

ಇ) ಭಾರತ ಸರ್ಕಾರವು ಈ ಬಗ್ಗೆ ಯಾವ ಕ್ರಮವನ್ನು ಕೈಕೊಂಡಿದೆ. ಇಲ್ಲವೆ ಕೈಕೊಳ್ಳಲು ಉದ್ದೇಶಿಸಿದೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಕೆಲಸಗಾರರು ಬೇಡಿಕೆಗಳು (೧) ಮೂಲವೇತನವನ್ನು ಏರಿಸುವುದು ಮತ್ತು ಕನಿಷ್ಠ ವೇತನವನ್ನು ತಿಂಗಳಿಗೆ ೧೦ ರೂ. ನಂತೆ ನಿಗದಿಪಡಿಸುವುದು (೨) ಹೆಚ್ಚಿನ ತುಟ್ಟಿಭತ್ತೆ ಕೊಡುವುದು (೩) ಅಗ್ಗದ ಕಾಳುಕಡ್ಡಿಗಳನ್ನು ಪೂರೈಸುವುದು (೪) ಕೆಲಸದ ಅವಧಿಯನ್ನು ಕಡಿಮೆ ಮಾಡುವುದು (೫) ತುಂಡು ಕೆಲಸಗಾರರಿಗೆ ಸಾಂದರ್ಭಿಕ ರಜೆಯನ್ನು ವಿಸ್ತರಿಸುವುದು (೬) ತುಂಡು ಕೆಲಸದ ವ್ಯವಸ್ಥೆಯನ್ನು ರದ್ದುಗೊಳಿಸುವುದು ಮತ್ತು (೭) ಕೆಲಸಗಾರರನ್ನು ಕೆಳಮಟ್ಟ ಮತ್ತು ಮೇಲ್ಮಟ್ಟವೆಂದು ವರ್ಗೀಕರಿಸುವುದನ್ನು ರದ್ದುಗೊಳಿಸುವುದು, ಮತ್ತು (೮) ಕೆಳಮಟ್ಟದ ವರ್ಗದ ಕೆಲಸಗಾರರಿಗೆ ಮೇಲುಮಟ್ಟದ ಕೆಲಸಗಾರರ ಸೌಲಭ್ಯಗಳನ್ನು ವಿಸ್ತರಿಸುವುದು.

ಇ) (ಆ) ಭಾಗದಲ್ಲಿ ಹೇಳಿದ (೨) (೩) (೫) ಮತ್ತು (೭) ರಲ್ಲಿ ಹೇಳಿದ ಅಂಶಗಳು ಪರಿಶೀಲನೆಯಲ್ಲಿವೆ. ಈ ಸದ್ಯದ ತುರ್ತು ಪರಿಸ್ಥಿತಿಯಲ್ಲಿ ಬೇರೆ ಅಂಶಗಳ ಬಗ್ಗೆ ಪರಿಶೀಲಿಸಲು ಸಾಧ್ಯವಾಗುವುದಿಲ್ಲ .

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್ ೧೯೪೫, ಪುಟ ೨೦೧೦

## ೩೧೫
## ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕಾರ್ಮಿಕರು ಕೆಲಸ ಮಾಡುವ ಅವಧಿ*

**೧೩೧೬. ಶ್ರೀ ಅಬ್ದುಲ್ ಖಯೂಮ್ :** ಅ) ಕಲ್ಕತ್ತೆಯ ಭಾರತೀಯ ಮುದ್ರಣಾಲಯದ ಕೆಲಸಗಾರರು ಒಂದು ವಾರಕ್ಕೆ ಎಷ್ಟು ತಾಸುಗಳವರೆಗೆ ಕೆಲಸ ಮಾಡುತ್ತಾರೆ?

ಆ) ಬಂಗಾಳ ಸರ್ಕಾರದ ಮುದ್ರಣಾಲಯದಲ್ಲಿ ಕೆಲಸದ ವೇಳೆಯನ್ನು ಬಂಗಾಳ ಸರ್ಕಾರವು ಕಡಿಮೆ ಮಾಡಿ, ವಾರಕ್ಕೆ ೪೦ ತಾಸುಗಳನ್ನು ಗೊತ್ತುಪಡಿಸಿ, ಬೋನಸ್ ಸಹ ಕೊಡಲು ಒಪ್ಪಿದೆಯೇ? ಮತ್ತು

ಇ) ಮುದ್ರಣಾಲಯದ ಕೆಲಸದ ಅವಧಿಯನ್ನು ಕಡಿಮೆ ಮಾಡಲು ಇಚ್ಛಿಸಿದೆಯೆ? ಇಲ್ಲದಿದ್ದರೆ ಏಕೆ ಇಲ್ಲ?

– ಈ ವಿಷಯಗಳ ಬಗ್ಗೆ ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಉತ್ತರಿಸುತ್ತಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ವಾರಕ್ಕೆ ೪೦ ತಾಸುಗಳೆಂದು ನಿಗದಿಪಡಿಸಲಾಗಿದೆ. ಆದರೆ ಬೋನಸ್ಸನ್ನು ಕೊಡಲಾಗುವುದಿಲ್ಲ .

ಆ) ಈಗಿನ ತುರ್ತು ಪರಿಸ್ಥಿತಿಯಲ್ಲಿ ಕೆಲಸದ ಅವಧಿಯನ್ನು ಕಡಿಮೆ ಮಾರುವ ಬಗ್ಗೆ ಯೋಚಿಸಲು ಸಾಧ್ಯವಿಲ್ಲ.

## ೩೧೬
## ಕಲ್ಕತ್ತೆಯ ಭಾರತೀಯ ಮುದ್ರಣಾಲಯದ ಕೆಲಸಗಾರರ ವೇತನ ಶ್ರೇಣಿಯನ್ನು ಪರಿಷ್ಕರಿಸುವುದು*

**೧೩೧೭. ಶ್ರೀ ಅಬ್ದುಲ್ ಖಯೂಮ್ :** ಅ) ಜೀವನವೆಚ್ಚವು ಅತಿಯಾಗಿ ಏರಿರುವುದರಿಂದ ಕಲ್ಕತ್ತೆಯಲ್ಲಿರುವ ಭಾರತದ ಮುದ್ರಣಾಲಯದ ಕೆಲಸಗಾರರಿಗೆ ಕೊಡುವ ತುಟ್ಟಿಭತ್ಯೆಯು ಸರಿಸಮಾನವಾಗಿದೆಯೆ?

ಆ) ಕಲ್ಕತ್ತಾದ ಮುದ್ರಣಾಲಯದ ಕಾರ್ಮಿಕರಿಗೆ ಕೊಡುವ ವೇತನವನ್ನು ಈ ಹಿಂದೆ ಯಾವಾಗ ಪರಿಷ್ಕರಿಸಲಾಗಿದೆ?

ಇ) ಪಡಿತರ ಮತ್ತು ಇತರ ವಸ್ತುಗಳಿಗೆ ರೇಲ್ವೆ ಮತ್ತು ಇತರ ಕಾರ್ಮಿಕರು ಕೊಡುತ್ತಿರುವ ಬೆಲೆಗಳಿಗಿಂತ ಹೆಚ್ಚಿನ ಬೆಲೆಯನ್ನು ಕಲ್ಕತ್ತಾದ ಮುದ್ರಣಾಲಯದ ಕೆಲಸಗಾರರು ಕೋಡುತ್ತಿದ್ದಾರೆಯೆ? ಮತ್ತು,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್, ೧೯೪೫, ಪುಟ ೨೦೧೦

** ಲೆಜಿಸ್ಲೆಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್, ೧೯೪೫, ಪುಟ ೨೦೧೦

ಈ) ಈ ಕಾರ್ಮಿಕರ ವೇತನಶ್ರೇಣಿಯನ್ನು ಸರ್ಕಾರವು ಪರಿಷ್ಕರಿಸಲು ಯೋಚನೆ ಮಾಡುತ್ತಿದೆಯೆ? ಮತ್ತು ಇಲ್ಲದಿದ್ದರೆ ಏಕೆ?

– ಮೇಲಿನ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಸಚಿವರು ಉತ್ತರಿಸುತ್ತಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈಗ ಕೊಡುತ್ತಿರುವ ತುಟ್ಟಿಭತ್ಯೆಯನ್ನು ಬೆಲೆ ಏರಿಕೆಯ ಆಧಾರದ ಮೇಲೆ ನಿಗದಿಪಡಿಸಲಾಗಿದೆ ಮತ್ತು ಅದರ ಪರಿಷ್ಕರಣೆ ಮಾಡುವ ವಿಚಾರ ನಡೆದಿದೆ.

ಆ) ೧೯೨೪ರಲ್ಲಿ, ೧೯೩೩–೩೪ರಲ್ಲಿ ಹೊಸದಾಗಿ ಸೇರಿರುವ ನೌಕರರಿಗೆ ಪರಿಷ್ಕೃತ ಮಾಡಿದ ವೇತನ ಶ್ರೇಣಿಯನ್ನು ಪ್ರಾರಂಭಿಸಲಾಗಿದೆ.

ಇ) ಹೌದು, ರೈಲ್ವೆ ಕೆಲಸಗಾರರಿಗೆ ಹೋಲಿಸಿದಾಗ ಇವರು ಹೆಚ್ಚಿನ ಹಣ ಕೊಡುತ್ತಿದ್ದಾರೆ. ಆದರೆ ಅವರಿಗೆ ಬರುವ ರಿಯಾಯಿತಿಗಳು ಕೇಂದ್ರ ಸರ್ಕಾರದ ಬೇರೆ ಕೆಲಸಗಾರರಿಗೆ ಸಿಗುವ ರಿಯಾಯಿತಿಗಳಿಗೆ ಹೋಲಿಸಿದರೆ ಸಮಾನವಾಗುತ್ತದೆ.

ಉ) ಈಗ ಇರುವ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರವು ವೇತನ ಶ್ರೇಣಿಯನ್ನು ಪರಿಷ್ಕರಣೆ ಮಾಡಲು ಯೋಚಿಸಿಲ್ಲ.

## ೩೧೭
## ಕಲ್ಕತ್ತೆಯ ಭಾರತೀಯ ಸರ್ಕಾರದ ಮುದ್ರಣಾಲಯದ ತುಂಡು ಕೆಲಸಗಾರ ರಜೆಯ ಸೌಲಭ್ಯ*

**೧೩೧೮. ಶ್ರೀ ಅಬ್ದುಲ್ ಖಯೂಮ್ :** ದಯವಿಟ್ಟು ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ವಿಷಯಗಳ ಬಗ್ಗೆ ಹೇಳುತ್ತಾರೆಯೆ? ಅ) ಕಲ್ಕತ್ತಾದ ಕೇಂದ್ರೀಯ ಸರ್ಕಾರದ ಮುದ್ರಣಾಲಯದ ತುಂಡು ಕೆಲಸಗಾರರಿಗೆ, ವೇತನ ಕೆಲಸಗಾರರಿಗೆ ಸಿಗುವ ರಜೆಯ ಸೌಲಭ್ಯವು ಸಿಗುತ್ತದೆಯೇ?

ಆ) ದೆಹಲಿ ಮತ್ತು ಕಲ್ಕತ್ತಾದ ವೇತನ ಕೆಲಸಗಾರರಿಗೆ ಅಂತಹದೇ ಸಾಂದರ್ಭಿಕ ರಜೆಯ ಸೌಲಭ್ಯವು ಸಿಗುತ್ತವೆಯೇ? ಮತ್ತು

ಇ) ಭಾರತೀಯ ಸರ್ಕಾರದ ಮುದ್ರಣಾಲಯದಲ್ಲಿ ಕೆಲಸ ಮಾಡುವ ವೇತನ ಕೆಲಸಗಾರರಿಗೆ ವರ್ಷಕ್ಕೆ ೧೫ ದಿನ ಸಾಂದರ್ಭಿಕ ರಜೆಯನ್ನು ಪಡೆಯಬಹುದು, ದೆಹಲಿಯಲ್ಲಿ ಎಲ್ಲ ಕೇಂದ್ರ ಸರ್ಕಾರದ ನೌಕರರಿಗೆ ನವದೆಹಲಿಯ ಮುದ್ರಣಾಲಯದ ಕೆಲಸಗಾರರನ್ನು ಒಳಗೊಂಡು, ವಾತಾವರಣ ಮತ್ತು ಇತರ ಪರಿಸ್ಥಿತಿಯನ್ನು ಗಮನಿಸಿ ಸಾಂದರ್ಭಿಕ ರಜೆಯ ಮಿತಿಯನ್ನು ವರ್ಷಕ್ಕೆ ೨೦ ದಿನಗಳಿಗೆ ಹೆಚ್ಚಿಸಲಾಗಿದೆ. ಈ ಹೆಚ್ಚಿನ ಮಿತಿಯ ಸೌಲಭ್ಯವನ್ನು, ಕಲ್ಕತ್ತೆಯ ಮುದ್ರಣಾಲಯದ ಕೆಲಸಗಾರರಿಗೆ ಮಾತ್ರ ವಿಸ್ತರಿಸಲಾಗಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್, ೧೯೪೫, ಪುಟ ೨೦೧೦

# ೩೧೮
# ಕಲ್ಕತ್ತಾದಲ್ಲಿರುವ ಭಾರತೀಯ ಸರ್ಕಾರದ ಕೆಳಮಟ್ಟದ ಕೆಲಸಗಾರರಿಗೆ ಕೆಲವು ನಿರ್ದಿಷ್ಟ ಸೌಲಭ್ಯಗಳನ್ನು ಕೊಡುವ ಬಗ್ಗೆ*

**೧೩೭೯. ಶ್ರೀ ಅಬ್ದುಲ್ ಖಯೂಮ್ :** ಅ) ಕಲ್ಕತ್ತೆಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದ ಕೆಳಮಟ್ಟದ ನೌಕರರು ಮೇಲ್ಮಟ್ಟ ನೌಕರರು ಪಡೆಯುತ್ತಿರುವ ಸೌಲಭ್ಯಗಳಾದ ಸಾಮಾನ್ಯ ಭವಿಷ್ಯನಿಧಿ, ಖಾಯಂ ನೌಕರಿ, ಮನೆ ಭತ್ಯೆ, ವೈದ್ಯಕೀಯ ರಜೆಗಳಿಂದ ವಂಚಿತರಾಗಿರುವ ವಸ್ತುಸ್ಥಿತಿಯ ಬಗ್ಗೆ ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

ಆ) ಹಾಗಿದ್ದಲ್ಲಿ ಈ ಎಲ್ಲ ಸೌಲಭ್ಯಗಳನ್ನು ಮೇಲ್ಮಟ್ಟದ ನೌಕರರು ಪಡೆಯುತ್ತಿರುವುದನ್ನು ಕೆಳಮಟ್ಟದವರಿಗೂ ವಿಸ್ತರಿಸುವುದು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಇ) ೧೯೨೮ರ ನಂತರ ನೇಮಿಸಲ್ಪಟ್ಟ ಭಾರತೀಯ ಮುದ್ರಣಾಲಯದ ಕೆಲಸಗಾರರಿಗೆ ರಜೆಯ ದಿನ ಕೆಲಸಮಾಡಿದಾಗ ಅವರಿಗೆ ಬದಲಿ ರಜವನ್ನು ಕೊಡುತ್ತಿಲ್ಲವೆಂಬುದು ನಿಜವಲ್ಲವೆ?

ಈ) ಕೇವಲ ೨೫ರಷ್ಟು ಭತ್ತೆಯನ್ನು ರಜೆಯ ದಿನಗಳಲ್ಲಿ ಕೆಲಸ ಮಾಡಿದ ಕೆಲಸಗಾರರಿಗೆ ಕೊಡಲಾಗುತ್ತದೆ ಮತ್ತು ಇತರ ರಜೆಗಳಲ್ಲಿ ಏನನ್ನೂ ಕೊಡಲಾಗುತ್ತಿಲ್ಲವೆಂಬುದು ನಿಜವೆ?

ಉ) ಹಾಗಿದ್ದಲ್ಲಿ ೧೯೨೮ರಿಂದ ನೇಮಿಸಲ್ಪಟ್ಟ ಕೆಲಸಗಾರರಿಗೆ ಯಾವ ಸಂದರ್ಭಗಳಲ್ಲಿ ಈ ಸೌಲಭ್ಯದಿಂದ ವಂಚಿತಗೊಳಿಸಲಾಗಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಮತ್ತು ಆ) ಇಲ್ಲ. ಅವರು ವೈದ್ಯಕೀಯ ರಜೆಯ ಸೌಲಭ್ಯಕ್ಕೆ ಅರ್ಹರಾಗಿದ್ದರೆ. ಕೆಳಮಟ್ಟದ ನೌಕರರಿಗೂ ಸಹ ಖಾಯಂ ನೌಕರಿ ಸೌಲಭ್ಯಗಳಾದ, ಪಿಂಚಣಿ ಸರಾಸರಿ ವೇತನದ ಮೇಲೆ ರಜೆ ಅಥವಾ ಗಳಿಸಿದ ರಜೆ ಮತ್ತು ಅಸಾಮಾನ್ಯ ರಜೆಗಳು ಲಭ್ಯವಿದೆ. ಮನೆ ಬಾಡಿಗೆ ಮತ್ತು ಇತರ ಸೌಲಭ್ಯಗಳನ್ನು ಕೊಡುವ ವಿಚಾರ ಸರ್ಕಾರದ ಮುಂದೆ ಇದೆ.

ಇ) ಹೌದು.

ಈ) ಮುಚ್ಚಿರುವ ರಜ ದಿನಗಳಲ್ಲಿ ಕೆಲಸ ಮಾಡಿದಾಗ ಅವರಿಗೆ ರಜೆಯ ಬದಲಿಗೆ ಕೆಲಸದ ಹಣವನ್ನು ಎಂದಿನ ದರಕ್ಕಿಂತ ಶೇಕಡಾ ೨೫ರಷ್ಟು ಹೆಚ್ಚು ಕೊಡಲಾಗುತ್ತಿದೆ.

ಉ) ಆಡಳಿತಾತ್ಮಕ ಕಾರಣಗಳಿಂದಾಗಿ.

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್, ೧೯೪೫, ಪುಟ ೨೦೧೦

# ೩೧೯
# ವಿದೇಶಗಳಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಯೋಜನೆಗಳು*

೧೩೨೦. **ಶ್ರೀ ದಿವಾನ್ ಅಬ್ದುಲ್ ಚೌಧರಿ :** ಅ) ತಾಂತ್ರಿಕ ಶಿಕ್ಷಣಕ್ಕಾಗಿ ವಿದೇಶಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸುವ ಬಗ್ಗೆ ಸರ್ಕಾರದ ಮುಂದೆ ಎರಡು ವಿಭಿನ್ನ ಯೋಜನೆಗಳು ಇವೆಯೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುತ್ತಾರೆಯೇ? ಹಾಗಿದ್ದಲ್ಲಿ ಅವುಗಳ ಮುಖ್ಯ ಸ್ವರೂಪ ಯಾವುವು?

ಆ) ಆ ತರಬೇತಿ ಯೋಜನೆಯು ಕಾರ್ಮಿಕ ಇಲಾಖಾ ವತಿಯಿಂದ ಪುರಸ್ಕರಿಸಲಾಗಿದೆಯೆ? ಮತ್ತು ಈ ಯೋಜನೆಯು ಶಿಕ್ಷಣ, ಆರೋಗ್ಯ ಮತ್ತು ರೆವೆನ್ಯೂ ಇಲಾಖೆಗಳ ಯೋಜನೆಗಿಂತ ಹೇಗೆ ಭಿನ್ನವಾಗಿದೆ?

ಇ) ಈ ಸೂಚಿತ ಯೋಜನೆಯು ಬೆವಿನ್ ತರಬೇತಿ ಯೋಜನೆಯನ್ನು ಹೇಗೆ ಹೋಲುತ್ತದೆ.

ಈ) ಯಾವ ತಾಂತ್ರಿಕ ವಿಷಯಗಳ ಬಗ್ಗೆ ಸರ್ಕಾರವು ವಿದೇಶಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲು ಯೋಚಿಸುತ್ತದೆ ಮತ್ತು ಪ್ರತಿ ವಿಷಯದ ತರಬೇತಿ ಅವಧಿಯು ಎಷ್ಟು?

ಉ) ಸರ್ಕಾರವು ಇಂತಹ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿ ಹಿಂದಿರುಗಿದ ವಿದ್ಯಾರ್ಥಿಗಳಿಗೆ ಯಾವ ತರಹದ ಉದ್ಯೋಗ ಕೊಡಲು ಯೋಚಿಸಿದೆ?

ಊ) ವಿದ್ಯಾರ್ಥಿಗಳನ್ನು ಸರ್ಕಾರವು ಬೇರೆ ಬೇರೆ ಪ್ರಾಂತಗಳಿಂದ ನಿಶ್ಚಿತ ಪ್ರಮಾಣದ ಆಧಾರದ ಮೇಲೆ ಮತ್ತು ಬೇರೆ ಬೇರೆ ಜಾತಿಯ ಜನರ ಪ್ರಮಾಣವನ್ನು ಅನುಸರಿಸಿ ಆಯ್ಕೆ ಮಾಡುತ್ತದೆಯೆ? ಹಾಗಿದ್ದಲ್ಲಿ ಬಂಗಾಳ ಮತ್ತು ಅಸ್ಸಾಮ್‌ನಿಂದ ಎಷ್ಟು ವಿದ್ಯಾರ್ಥಿಗಳನ್ನು ಕಳುಹಿಸಲಾಗಿದೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಮತ್ತು (ಆ) ಇದರಲ್ಲಿ ಎರಡು ವಿಭಿನ್ನ ಯೋಜನೆಗಳಿವೆ. ಮೊದಲನೆಯದಾಗಿ ವಿದ್ಯಾರ್ಥಿಗಳನ್ನು ತಾಂತ್ರಿಕ ಮತ್ತು ವೈಜ್ಞಾನಿಕ ವಿಷಯಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಕೊಡುವುದು. ಎರಡನೆಯ ಯೋಜನೆಯೆಂದರೆ : ಕೈಗಾರಿಕೆಗಳಲ್ಲಿ ಈಗಾಗಲೇ ಕಾರ್ಯಮಾಡುತ್ತಿರುವ ತಂತ್ರಜ್ಞರನ್ನು ಬೇರೆ ದೇಶಗಳಿಗೆ ತಮ್ಮ ಜ್ಞಾನವನ್ನು ಮತ್ತು ಅನುಭವವನ್ನು ಹೆಚ್ಚಿಸಿಕೊಳ್ಳುವುದರ ಸಲುವಾಗಿ ಕಳುಹಿಸಲಾಗುವುದು. ಮೊದಲನೆಯ ಯೋಜನೆಯನ್ನು ವೈದ್ಯಕೀಯ, ಭೂ ಕಂದಾಯ, ಮತ್ತು ಶಿಕ್ಷಣ ಇಲಾಖೆಯು ನೋಡಿಕೊಳ್ಳುತ್ತವೆ. ಎರಡನೆಯ ಯೋಜನೆಯನ್ನು ಕಾರ್ಮಿಕ ಇಲಾಖೆಯು ನಿರ್ವಹಿಸುತ್ತದೆ.

ಇ) ಈ ಪ್ರಸ್ತಾವಿತ ಯೋಜನೆ ಬೆವಿನ್ ತರಬೇತಿ ಯೋಜನೆಯ ವಿಸ್ತರಣೆಯಾಗಿದೆ. ಇಂತಹ ಹೆಚ್ಚಿನ ತಾಂತ್ರಿಕ ತರಬೇತಿಯಿಂದ ಕೈಗಾರಿಕೆಯಲ್ಲಿ ಬಹಳ ಮುಖ್ಯವಾಗಿರುವ ಮೇಲ್ವಿಚಾರಕರ ಹುದ್ದೆಯನ್ನು ಪಡೆಯುವವರಿಗೆ ಉಪಯೋಗವಾಗುತ್ತದೆ.

ಈ) ಕಾರ್ಮಿಕ ಇಲಾಖೆಯು ಉದ್ದೇಶಿಸಿರುವ ಯೋಜನೆಗಳೆಂದರೆ : ಯಂತ್ರ ಶಿಲ್ಪ, ವಿದ್ಯುತ್‌ಶಿಲ್ಪ, ರೇಡಿಯೋ ತಯಾರಿಕೆ, ಹಡಗು ಕಟ್ಟುವಿಕೆ, ವೈಮಾನಿಕ ಎಂಜಿನೀರಿಂಗ್, ಸಮುದ್ರ ಶಿಲ್ಪ, ಲೋಹಶಾಸ್ತ್ರ, ವಿದ್ಯುತ್ ಉತ್ಪಾದನೆ, ರೇಲ್ವೆ ಇಂಜಿನ್ ನಿರ್ಮಾಣ, ರಾಸಾಯನಿಕ ಎಂಜಿನೀರಿಂಗ್ ರಸಗೊಬ್ಬರಗಳು, ಪ್ಲಾಸ್ಟಿಕ್, ಗಾಜು, ಉಕ್ಕು – ಕಬ್ಬಿಣ ಉತ್ಪಾದನೆ. ಇತ್ಯಾದಿ ಈ ಎಲ್ಲ ಪಟ್ಟಿಯು ಸಂಪೂರ್ಣವಾಗಿಲ್ಲ. ಇತರ ತರಹದ ತರಬೇತಿಗಳನ್ನು ಮುಂದೆ ಬೇಕಾದಲ್ಲಿ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ ನೇ ಮಾರ್ಚ್, ೧೯೪೫, ಪುಟ ೨೦೧೦

ಪರಿಶೀಲಿಸಲಾಗುವುದು. ಸಾಮಾನ್ಯವಾಗಿ ತರಬೇತಿ ಅವಧಿಯು ಒಂದು ವರ್ಷ. ಆದರೆ ಕೆಲವು ವೈಯಕ್ತಿಕ ಪ್ರಕರಣಗಳಲ್ಲಿ ಅದನ್ನು ಎರಡು ವರ್ಷಗಳಿಗೆ ವಿಸ್ತರಿಸಲಾಗುವುದು.

ಉ) ಯಾವುದೇ ಕೋಟಾವನ್ನೂ ನಿಗದಿಪಡಿಸಿಲ್ಲ. ತಾವು ಆಯ್ದುಕಳುಹಿಸಿದವರ ಖರ್ಚನ್ನು ತಾವೇ ಭರಿಸಬೇಕಾಗುತ್ತದೆ ಎಂದು ಪ್ರಾಂತೀಯ ಸರಕಾರಗಳಿಗೆ ತಿಳಿಸಲಾಗಿದೆ. ಖಾಸಗಿ ಕೈಗಾರಿಕೆಗಳವರೂ ಸಹ ತಮ್ಮ ಉದ್ಯೋಗಿಗಳನ್ನು ಈ ಉದ್ದೇಶಕ್ಕಾಗಿ ಆಯ್ಕೆ ಮಾಡಿಕಳುಹಿಸಬಹುದು. ಪ್ರಾಂತೀಯ ಸರಕಾರಗಳು ಹಾಗೂ ಖಾಸಗಿ ಕೈಗಾರಿಕೆಗಳವರು ಸಿದ್ಧಪಡಿಸಿದ ಅಭ್ಯರ್ಥಿಗಳ ಪಟ್ಟಿಗಳನ್ನು ಕೇಂದ್ರ ಸರ್ಕಾರದವರು ಪರೀಶೀಲಿಸಿ ಅಂತಿಮಪಟ್ಟಿಯನ್ನು ಸಿದ್ಧಗೊಳಿಸುತ್ತಾರೆ.

## ೩೨೦
## ಗೂಡೂರ ವಿಭಾಗದಲ್ಲಿಯ ಅಭ್ರಕದ ಗಣಿಗಳ ಕೆಲಸಗಾರರು*

**೧೩೨೭. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ : ಅ) ಗೂಡೂರ ವಿಭಾಗದ ಅಭ್ರಕದ (ಕಾಗೆ ಬಂಗಾರ) ಗಣಿಗಳಲ್ಲಿ ಗಣಿ ಒಳಗಡೆ ಮತ್ತು ಗಣಿಗಳ ಹೊರಗಡೆ ಒಟ್ಟು ಕೆಲಸ ಮಾಡುವ ಗಂಡಸರ ಮಕ್ಕಳು ಹಾಗೂ ಹೆಂಗಸರ ಸಂಖ್ಯೆ ಎಷ್ಟು?

ಆ) ಅವರ ಪ್ರತಿ ದಿನದ ಕೂಲಿ ಎಷ್ಟು ಹಾಗೂ ತುಟ್ಟಿಭತ್ಯೆ ಎಷ್ಟು?

ಇ) ಅವರನ್ನು ಕಂಟ್ರಾಕ್ಟರ್‌ರ ಮೂಲಕ ನೇಮಿಸಿಕೊಂಡದ್ದು ನಿಜವಿದ್ದರೆ ಕಂಟ್ರಾಕ್ಟರ್‌ರು ಅವರ ವೇತನದ ಶೇಕಡಾ ಎಷ್ಟು ಅಂಶವನ್ನು ತಾವು ತೆಗೆದುಕೊಳ್ಳುತ್ತಾರೆ, ಹಾಗಿದ್ದಲ್ಲಿ ಇಂತಹ ಪದ್ದತಿಗೆ ಏಕೆ ಅನುಮತಿ ಕೊಟ್ಟಿದ್ದೀರಿ? ಮತ್ತು

ಈ) ಗಣಿಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಸ್ಥಿತಿಗಳ ಬಗೆಗೆ ವಿಚಾರಣೆ ಮಾಡಲು ಒಂದು ಸಮಿತಿಯನ್ನು ನೇಮಿಸಿ ಅದರ ವರದಿಯನ್ನು ಈ ಸದನಕ್ಕೆ ಒಪ್ಪಿಸುವ ವಿಚಾರ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ಅದನ್ನು ಯಾವಾಗ ಮಾಡುವಿರಿ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಗೂಡೂರ ವಿಭಾಗದ ಅಭ್ರಕದ ಗಣಿಗಳಲ್ಲಿ ಕೆಲಸ ಮಾಡುವ ಗಂಡಸರ ಸಂಖ್ಯೆ ಅಂದಾಜು ೭೦೦೦ ಮತ್ತು ಹೆಂಗಸರ ಸಂಖ್ಯೆ ಅಂದಾಜು ೪೦೦೦. ಗಣಿಯ ಆಳದಲ್ಲಿ ಹೆಂಗಸರನ್ನು ಕೆಲಸಕ್ಕೆ ನೇಮಿಸಿರುವುದಿಲ್ಲ .

ಆ) ಗಂಡುಮಕ್ಕಳಿಗೆ ಪ್ರತಿದಿನ ೧೨ ರೂ. ಮತ್ತು ಹೆಣ್ಣುಮಕ್ಕಳಿಗೆ ೭ ರೂ. ಇತ್ತೀಚಿಗೆ ಅವರ ಕೂಲಿಯನ್ನು ಹೆಚ್ಚಿಸಿದ್ದರಿಂದ ಅವರಿಗೆ ತುಟ್ಟಿಭತ್ಯೆ ನೀಡುತ್ತಿಲ್ಲ.

ಇ) ನಮಗೆ ತಿಳಿದಮಟ್ಟಿಗೆ ಗಣಿಗಳ ಮಾಲೀಕರು ತಾವೇ ಕೆಲಸಗಾರರನ್ನು ನೇಮಿಸಿಕೊಂಡು ಅವರಿಗೆ ನೇರವಾಗಿ ಅವರ ಕೂಲಿಯನ್ನು ಕೊಡುತ್ತಾರೆ. ಅಂದರೆ, ಕಂಟ್ರಾಕ್ಟರ್‌ರ ಮುಖಾಂತರವಲ್ಲ .

ಈ) ಇಲ್ಲ, ಎರಡನೆಯ ಭಾಗ ಉದ್ಭವಿಸುವುದಿಲ್ಲ .

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೨೬ನೇ ಮಾರ್ಚ್, ೧೯೪೫, ಪು ೨೦೧೪

# ೩೨೧
# ಗೂಡೂರು ವಿಭಾಗದ ಅಭ್ರಕವನ್ನು ಒಡೆಯುವ ಕಾರ್ಖಾನೆಗಳಿಗೆ ಕಾರ್ಖಾನೆ ಅಧಿನಿಯಮವನ್ನು ಅನ್ವಯಿಸುವುದು, ಇತ್ಯಾದಿ *

**೧೩೨೮. ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ? ಅ) (೧) ಗೂಡೂರ ವಿಭಾಗದ ಅಭ್ರಕವನ್ನು ಒಡೆಯುವ ಕಾರ್ಖಾನೆಗಳಿಗೆ ಕಾರ್ಖಾನೆ ಅಧಿನಿಯಮವನ್ನು ಅನ್ವಯಿಸುವುದಿಲ್ಲವೆ?

(೨) ಇದರಲ್ಲಿ ನೇಮಿಸಿಕೊಂಡ ಕಾರ್ಮಿಕರಲ್ಲಿ ಬಹಳಷ್ಟು ಜನ ಹೆಣ್ಣುಮಕ್ಕಳಿದ್ದು ಅವರಿಗೆ ಹೆರಿಗೆ ಸೌಲಭ್ಯ ಅಧಿನಿಯಮದ ಅನ್ವಯ ಯಾವುದೇ ಸೌಲಭ್ಯಗಳು ದೊರಕುತ್ತಿಲ್ಲ.

(೩) ಅಲ್ಲಿ ಕೆಲಸ ಮಾಡುವ ಹೆಂಗಸರು ಮತ್ತು ಮಕ್ಕಳಿಗೆ ಯೋಗ್ಯ ಕಾಳಜಿ ವಹಿಸಲು ಯಾವುದೇ ವ್ಯವಸ್ಥೆ ಇರುವುದಿಲ್ಲ.

(೪) ಅಲ್ಲಿಯ ಕಟ್ಟಡಗಳು ಅನಾರೋಗ್ಯಕರವಾಗಿದ್ದು ಅವುಗಳಿಗೆ ಸಾಕಷ್ಟು ಗಾಳಿ ಆಡುವುದಿಲ್ಲ ಮತ್ತು

ಆ) ಈ ಕಾರ್ಖಾನೆಗಳಿಗೆ ಕಾರ್ಖಾನೆ ಅಧಿನಿಯಮ ಮತ್ತು ಹೆರಿಗೆ ಸೌಲಭ್ಯ ಅಧಿನಿಯಮವನ್ನು ಅನ್ವಯಿಸುವ ಉದ್ದೇಶವು ಸರಕಾರಕ್ಕೆ ಇದೆಯೇ? ಕೆಲಸಗಾರ ಸ್ಥಿತಿ ಸುಧಾರಿಸುವ ಹಾಗೂ ಮಹಿಳಾ ಕಾರ್ಮಿಕರ ಶಿಶುಗಳ ಮತ್ತು ಮಕ್ಕಳ ಯೋಗ್ಯ ಕಾಳಜಿ ವಹಿಸಲು ಸಾಕಷ್ಟು ಸೌಲಭ್ಯಗಳನ್ನು ಒದಗಿಸಲಾಗುವುದೆ? ಮತ್ತು ಈ ಬಗ್ಗೆ ಸದನಕ್ಕೆ ವರದಿ ಸಲ್ಲಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಕಾರ್ಖಾನೆ ಅಧಿನಿಯಮ ಮತ್ತು ಮದ್ರಾಸ್ ಹೆರಿಗೆ ಸೌಲಭ್ಯದ ಅಧಿನಿಯಮ ಇವುಗಳನ್ನು ಜಾರಿಯಲ್ಲಿ ತರುವುದು ಪ್ರಾಂತೀಯ ಸರ್ಕಾರದ ಹೊಣೆ. ಆದರೆ ಗೂಡೂರು ವಿಭಾಗದ ಅಭ್ರಕ ಒಡೆಯುವ ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಸಮೀಕ್ಷೆಯನ್ನು ಕೆಲಸಗಾರರ ತನಿಖಾ ಸಮಿತಿಯು ಕೈಗೆತ್ತಿಕೊಂಡು, ಈಗಾಗಲೇ ಈ ಕಾರ್ಯವನ್ನು ಪ್ರಾರಂಭಿಸಿದೆ. ಯೋಜನಾ ಆಯೋಗವು ಕಾರ್ಮಿಕರಿಗಾಗಿ ಗೊತ್ತುಪಡಿಸಿದ ಯೋಜನೆಗಳನ್ನು ಕೆಲಸಗಾರರ ತನಿಖಾ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ ನಂತರ ಸೂಚನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಕಾಲಕ್ರಮದಲ್ಲಿ ವಿಚಾರಿಸುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೧೦

# ೩೨೨
# ಕೇಂದ್ರ ಸರ್ಕಾರದ ಮುದ್ರಣಾಲಯದಲ್ಲಿ ಅರ್ಹತೆಯುಳ್ಳ ನಕಲು ಮಾಡುವವರ ಮತ್ತು ಪರಿಷ್ಕರಿಸುವವರನ್ನು ಕಿರಿಯ ಹಸ್ತಪ್ರತಿ ವಾಚಕರೆಂದು ನೇಮಿಸುವ ಬಗ್ಗೆ ನಿಯಮ *

**೧೩೩೦. ಶ್ರೀ ಬದ್ರಿ ದತ್ತ ಪಾಂಡೆ :** ಗೌರವಾನ್ವಿತ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳುತ್ತಾರೆಯೇ? ಭಾರತ ಸರ್ಕಾರದ ಯಾವುದೇ ಮುದ್ರಣಾಲಯದ ನೌಕರುಗಳಿಂದ, ಅರ್ಹತೆ ಇರುವ ನಕಲು ಮಾಡುವವರನ್ನು ಮತ್ತು ಪರಿಷ್ಕರಿಸುವವರನ್ನು ಕಿರಿಯ ರೀಡರ್ ಹುದ್ದೆಗೆ ನೇಮಕ ಮಾಡುವಲ್ಲಿ ಪ್ರಸಕ್ತ ನಿಯಮದಲ್ಲಿರುವ ಅಸಂಗತಗಳಿಂದ ಅವರಿಗೆ ಆಗಿರುವ ಸಂಕಷ್ಟಗಳ ಸಂಬಂಧ ವಿಜ್ಞಾಪನಪತ್ರ ಇತ್ತೀಚೆಗೆ ಸರ್ಕಾರಕ್ಕೆ ಬಂದಿದೆಯೆ?

ಆ) ೧೯೪೦ನೆಯ ಇಸ್ವಿ ಮೇ ತಿಂಗಳು ನವದೆಹಲಿಯಲ್ಲಿರುವ ಕೇಂದ್ರ ಸರ್ಕಾರದ ಮುದ್ರಣಾಲಯದ ಕೆಲಸಗಾರರ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಅಸೀಫ್ ಅಲಿ, ಎಮ್.ಎಲ್.ಎ. (ಕೇಂದ್ರ) ಇವರಿಂದಲೇ ಸಂಪೂರ್ಣ ಒಪ್ಪಿಗೆ ಪಡೆದು ತಮ್ಮ ನಿರೂಪಣೆಯನ್ನು ಕಾರ್ಯದರ್ಶಿಗಳು, ಕಾರ್ಮಿಕ ವಿಭಾಗಕ್ಕೆ ಕಳುಹಿಸಿದ್ದು ನಿಜವೆ?

"ತದನಂತರ ಪಾಸಾದ ವಿದ್ಯಾರ್ಥಿಗಳಿಗಿಂತ ಈ ಮೊದಲೇ ಪಾಸಾದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಶಸ್ತ ಕೊಡಬೇಕೆಂಬ" ನಿಯಮವನ್ನು ತಿದ್ದುಪಡಿ ಮಾಡಲು, ಮತ್ತು

ಇ) ಈ ವಿಜ್ಞಾಪನಾಪತ್ರಗಳ ಆಧಾರದ ಮೇಲೆ ಈಗ ಇರುವ ನಿಯಮಗಳನ್ನು ತಿದ್ದುಪಡಿ ಮಾಡಲು ಸರ್ಕಾರ ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನವದೆಹಲಿಯಲ್ಲಿರುವ ಕೇಂದ್ರ ಸರ್ಕಾರದ ಮುದ್ರಣಾಲಯದ ಮೂರು ಜನ ನಕಲುಮಾಡುವವರ ವಿಜ್ಞಾಪನಾಪತ್ರಗಳು ಬಂದಿವೆ. ಆದರೆ ಈಗ ಹಸ್ತಪ್ರತಿ ಓದುವವರ ನೇಮಕದ ಬಗೆಗೆ ಇರುವ ನಿಯಮಗಳಲ್ಲಿ ಯಾವುದೇ ಕಷ್ಟವನ್ನಾಗಲಿ ಇಲ್ಲವೆ ಕ್ರಮಭಂಗದ ಬಗೆಗೆ ಆಗಲಿ ಯಾವುದೇ ದೂರೂ ಬಂದಿಲ್ಲ.

ಆ) ಹೌದು.

ಇ) ಆ ವಿಜ್ಞಾಪನೆಗಳನ್ನು ಅವುಗಳ ಅರ್ಹತೆಯ ಮೇಲೆ ವಿಚಾರಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೩. ಪುಟ ೨೦೨೦

# ೩೨೩
# ಸಿ.ಪಿ.ಡಬ್ಲು.ಡಿ.ಯ ಕೆಲವು ಕೇಂದ್ರ ಶಾಖೆಗಳಲ್ಲಿ ಅಕ್ರಮ ನೇಮಕಗಳು *

**೧೩೫೧. ಶ್ರೀ ಸೈಯದ್ ಗುಲಾಮ್ ಭಿಕ್ ನಾಯ್‌ರಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಿರಾ? ಸೇವೆಯ ನಿಯಮಗಳಲ್ಲಿ, ಸರ್ಕಾರದ ಸೇವೆಯಲ್ಲಿ ಜಾತೀಯ ಆಧಾರದ ವಿರುದ್ಧ ಸರ್ಕಾರ ಮಾಡಲಾದ ನೇಮಕಗಳನ್ನು ರದ್ದುಪಡಿಸಲೇಬೇಕೆ? ಎಂಬುದರ ಬಗ್ಗೆ ದಯವಿಟ್ಟು ತಿಳಿಸುವಿರಾ?

ಆ) ಸಿ.ಪಿ.ಡಬ್ಲು.ಡಿ.ಯ ತೋಟಗಾರಿಕೆಯ ವಿಭಾಗದಲ್ಲಿ ಒಬ್ಬ ಸಿಖ್‌ನನ್ನು ಅಕ್ರಮವಾಗಿ ನೇಮಕ ಮಾಡಿದ್ದು ಕಂಡುಬಂದಿದೆ ಎಂಬುದು ನಿಜವೆ?

ಇ) ಈ ನೇಮಕವನ್ನು ರದ್ದುಪಡಿಸಿಲ್ಲವೆಂಬುದು ನಿಜವೆ? ಒಬ್ಬ ಮುಸಲ್ಮಾನನನ್ನು ಆ ತೆರವಾದ ಸ್ಥಾನದಲ್ಲಿ ನೇಮಿಸಬೇಕಾಗಿತ್ತು, ಆದರೆ ಮುಂದೆ ಸೇವಾ ಜ್ಯೇಷ್ಠತೆಯಲ್ಲಿ ಆತನ ಸ್ಥಾನವನ್ನು ಸಿಖ್ ಅಭ್ಯರ್ಥಿಗೆ ಕೊಡಲಾಯಿತೆಂಬುದು ನಿಜವೆ?

ಈ) ವಿಭಾಗದಲ್ಲಿ ಕೆಲವು ಇಲೆಕ್ಟ್ರಿಕಲ್ ಇಂಜಿನಿಯರ್ ದರ್ಜೆಯ ಹುದ್ದೆಗಳನ್ನು ಅಕ್ರಮವಾಗಿ ತುಂಬಲಾಗಿದೆಯೆಂಬುದು ನಿಜವೆ?

ಉ) ಈ ನೇಮಕಗಳನ್ನು ರದ್ದುಪಡಿಸದೆ ಮುಸಲ್ಮಾನರಿಗೆ ಜ್ಯೇಷ್ಠತೆಯಲ್ಲಿ ಸರಿಯಾದ ಸ್ಥಾನವನ್ನು ಕಲ್ಪಿಸಿಕೊಡಲು ನಿಶ್ಚಯಿಸಿದ್ದು ನಿಜವೆ?

ಊ) ನಂತರ ಈ ಜ್ಯೇಷ್ಠತೆಯ ಪಟ್ಟಿಗಳನ್ನು ರದ್ದುಪಡಿಸಿ, ಜ್ಯೇಷ್ಠತೆಯನ್ನು ಮುಸಲ್ಮಾನರಲ್ಲದವರ ಈ ಅಕ್ರಮ ನೇಮಕದ ದಿನಾಂಕದಿಂದ ಜ್ಯೇಷ್ಠತೆ ಗೊತ್ತುಪಡಿಸಲಾಯಿತೆ? ಹಾಗಿದ್ದಲ್ಲಿ ಏಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಆ) ಇಲ್ಲ.

ಇ) ತೋಟಗಾರಿಕೆ ಇಲಾಖೆಯಲ್ಲಿ ಒಂದೇ ಕಾಲಕ್ಕೆ ಸಹಾಯಕ ತೋಟಗಾರಿಕೆ ಹುದ್ದೆಯ ಎರಡು ಸ್ಥಾನಗಳು ಖಾಲಿಯಾದವು. ಅದರಲ್ಲಿ ಮೊದಲನೆಯದು ಮುಸಲ್ಮಾನರಿಗೆ ಮೀಸಲಾಗಿತ್ತು. ಹಾಗೂ ಇನ್ನೊಂದು ಕಾಯ್ದಿರಿಸಿರಲಿಲ್ಲ. ಮುಸಲ್ಮಾನನನ್ನು ಆ ಮುಸಲ್ಮಾನರಿಗೆ ಗೊತ್ತುಪಡಿಸಿದ ಜಾಗಕ್ಕೆ ನೇಮಿಸಲಾಯಿತು. ಕಾಯ್ದಿರಿಸದೆ ಇದ್ದ ಜಾಗಕ್ಕೆ ಒಬ್ಬ ಸಿಖ್‌ನನ್ನು ನೇಮಿಸಲಾಯಿತು. ಆದರೆ ಸಿಖ್‌ರವನು ಈ ಮುಸಲ್ಮಾನನಿಗಿಂತ ಮೊದಲು ಕೆಲಸಕ್ಕೆ ಹಾಜರಾದನು. ಆ ಮುಸಲ್ಮಾನನು ಬೇರೆ ಕಡೆಗೆ ಕೆಲಸ ಮಾಡುತ್ತಿದ್ದು ಅವನನ್ನು ಬೇಗನೆ ಆ ಕೆಲಸದಿಂದ ಬಿಡುಗಡೆ ಮಾಡಲಿಲ್ಲ. ಈ ಎರಡು ನೇಮಕಗಳಲ್ಲಿ ಮೊದಲನೆಯದು ಮುಸಲ್ಮಾನನಿಗೆ ಗೊತ್ತುಪಡಿಸಲಾಗಿತ್ತು. ಆದ್ದರಿಂದ ಅವನನ್ನು ಸಿಖ್ಖರವನಿಗಿಂತ ಮೇಲಿನ ಸೇವಾ ಜ್ಯೇಷ್ಠತೆಯಲ್ಲಿ ಇಡಲಾಯಿತು.

ಈ) ಉ) ಮತ್ತು (ಊ) ವಿದ್ಯುತ್ ಇಂಜಿನಿಯರರ ಕೆಲವು ಸ್ಥಾನಗಳ ನೇಮಕಗಳನ್ನು ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಆದೇಶದ ಅನ್ವಯಮಾಡದೆ – ಅಂದರೆ ಜಾತಿಯನ್ನು ಕಟ್ಟುನಿಟ್ಟಾಗಿ ಪರಿಗಣಿಸದೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೨೫

ಮಾಡಲಾಯಿತು. ಈ ನೇಮಕ ಪೂರ್ವ ಭಾರತದಲ್ಲಿ ಯುದ್ಧ ಸಂಬಂಧಿ ಕಾರ್ಯಗಳನ್ನು ಪೂರೈಸಲು ಅತ್ಯಂತ ಕಡಿಮೆ ಅವಧಿಯಲ್ಲಿ ಮುಗಿಸಬೇಕಾಗಿದುದರಿಂದ ಆಡಳಿತದ ದೃಷ್ಟಿಯಿಂದ ಈ ಆದೇಶ ಪಾಲನೆ ಮಾಡುವುದು ಅಸಾಧ್ಯವಾಗಿತ್ತು. ಆದ್ದರಿಂದ ಆ ನೇಮಕಗಳನ್ನು ರದ್ದುಪಡಿಸಲಿಲ್ಲ. ಅಧಿಕಾರಿಗಳ ಸೇವಾಜ್ಯೇಷ್ಠತೆ ಅವರವರು ನೇಮಕವಾದ ದಿನದ ಮೇಲೆ ನಿರ್ಧರಿಸಲಾಯಿತು. ಯಾವುದೇ ಮುಸ್ಲಿಮ್ ವಿದ್ಯುತ್ ಇಂಜನೀಯರ್ ದರ್ಜೆಯ ಅಧಿಕಾರಿಯ ಸೇವಾ ಜ್ಯೇಷ್ಠತೆಯನ್ನು ನಿರ್ಧರಿಸಿ ನಂತರ ರದ್ದುಪಡಿಸಿಲ್ಲ.

## ೩೨೪
## ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆಯ ಸವಲತ್ತುಗಳನ್ನು ಒದಗಿಸುವುದು *

**೧೩೫೮. ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ದಯವಿಟ್ಟು ಸನ್ಮಾನ್ಯ ಕಾರ್ಮಿಕ ಸದಸ್ಯರು ಕೆಳಗಿನ ವಿಷಯದ ಬಗೆಗೆ ಹೇಳುತ್ತಾರೆಯೆ? ಅ) ೧೯೪೫ರ ಫೆಬ್ರವರಿ ೨೧ರಂದು ಕೇಳಿದ ೪೨೭ನೆಯ ಕ್ರಮ ಸಂಖ್ಯೆಯ ಮೂಲಪ್ರಶ್ನೆಗೆ ಕೊಟ್ಟ ಉತ್ತರದ ಮೇರೆಗೆ ಗಣಿಗಳಲ್ಲಿ ಕೆಲಸ ಮಾಡುವ ಒಬ್ಬ ಮಹಿಳೆ ಗರ್ಭವತಿಯಾದ ಎಷ್ಟು ತಿಂಗಳ ನಂತರ ಹಾಗೂ ಹಡೆದ ನಂತರ ಎಷ್ಟು ದಿನಗಳವರೆಗೆ ಗಣಿಯೊಳಗೆ ಕೆಲಸಮಾಡಬಾರದು ಎಂಬ ವಿಷಯದ ಬಗ್ಗೆ ಹಾಗೂ ಈ ಅವಧಿಯನ್ನು ವಿಸ್ತರಿಸುವುದನ್ನು ಕುರಿತು ಸರ್ಕಾರವು ವಿಚಾರ ಮಾಡಿದೆಯೆ?

ಆ) ಪ್ರತಿಯೊಂದು ಗಣಿಯಲ್ಲಿ ಕೆಲಸ ಮಾಡುವ ಮಹಿಳೆಯರ ಶಿಶುಗಳಿಗಾಗಿ ಶಿಶುಶಾಲೆಯನ್ನು ಒದಗಿಸಲು ಸರ್ಕಾರವು ಉದ್ದೇಶಿಸಿದೆಯೆ? ಮತ್ತು

ಇ) ಮಾನ್ಯ ಸದಸ್ಯರು ತಮ್ಮ ವೈಯಕ್ತಿಕ ಅನುಭವದ ಮೇಲೆ ಈ ಶಿಶುಶಾಲೆಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಈ ಸದನದಲ್ಲಿ ಕೊಟ್ಟ ಹೇಳಿಕೆಯ ಮೇಲಿಂದ ಈ ಶಿಶುಶಾಲೆಗಳು ಸರಿಯಾಗಿ ನಡೆಯುವಂತೆ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಂಡಿದೆಯೆ? ಅಥವಾ ಕ್ರಮವನ್ನು ಕೈಗೊಳ್ಳುವ ವಿಚಾರದಲ್ಲಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಆವಶ್ಯಕ ಕಾನೂನು ಸದನದ ಮುಂದೆ ಇದೆ. ಆ) ಮತ್ತು ಇ) ಗಣಿಗಳಲ್ಲಿ ಶಿಶುಶಾಲೆಗಳನ್ನು ಕಡ್ಡಾಯವಾಗಿ ಒದಗಿಸಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೨೮

## ೩೨೫
## ತಾಂತ್ರಿಕ ಕೈಗಾರಿಕೆಗಳಲ್ಲಿರುವವರನ್ನು ವಿದೇಶಗಳಲ್ಲಿ ತರಬೇತಿಗಾಗಿ ಕಳುಹಿಸುವ ಯೋಜನೆ *

**೧೩೫೯. ಶ್ರೀ ಟಿ. ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವರೆ : ಅ) ಶಿಕ್ಷಣ, ಆರೋಗ್ಯ ಮತ್ತು ಭೂ ಇಲಾಖೆಗೆ ಸಂಬಂಧಿಸಿದಂತೆ ಒಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದಂತೆ ವಿಶ್ವವಿದ್ಯಾಲಯದಲ್ಲಿ ಕೊಡುವ ತರಬೇತಿಯ ಹೊರತಾಗಿ ವಿದ್ಯಾರ್ಥಿಗಳು ಯುದ್ಧದ ನಂತರದ ದಿನಗಳಲ್ಲಿ ಉದ್ದಿಮೆಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಅವರಿಗೆ ತಾಂತ್ರಿಕ ಉದ್ಯೋಗಗಳಲ್ಲಿ ತರಬೇತಿಯನ್ನು ಕೊಡಲು ಸರ್ಕಾರಕ್ಕೆ ಯಾವುದಾದರೂ ಯೋಜನೆ ಇದೆಯೆ?

ಆ) ಭಾರತ ಸರ್ಕಾರವು ಇಂಗ್ಲೆಂಡ್ ಇಲ್ಲವೆ ಅಮೆರಿಕಾ ಸರ್ಕಾರದೊಂದಿಗೆ ಇಲ್ಲವೆ ಆ ದೇಶಗಳ ಉದ್ಯೋಗಪತಿಗಳ ಸಂಗಡ ಇಂತಹ ಜನರು ತರಬೇತಿ ಪಡೆಯುವುದರ ಸಲುವಾಗಿ ಯಾವುದೇ ಪತ್ರವ್ಯವಹಾರ ನಡೆಸಿದೆಯೆ? ಮತ್ತು

ಇ) ಹಾಗಿದ್ದಲ್ಲಿ ಯಾವ ಉದ್ಯಮಗಳಲ್ಲಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು ದಿನಾಂಕ ೧೨–೧೨–೧೯೪೪ರಂದು ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಪತ್ರ ಕ್ರಮ ಸಂ. ಟಿ..ಆರ್.ಸಿ. ೧೧–೧೧೪೦, ೧೯೮ನೆಯ ಪ್ರಶ್ನೆಗೆ ದಿನಾಂಕ ೧೮–೨–೧೯೪೫ರಂದು ಸದನದಲ್ಲಿ ಉತ್ತರಿಸಿದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಆ) ಸರ್ಕಾರಗಳೊಂದಿಗೆ.

ಇ) ಸಾಮಾನ್ಯವಾಗಿ ಮಾತುಕತೆಗಳು ನಡೆದಿವೆ. ನಿರ್ದಿಷ್ಟವಾಗಿ ಯಾವುದೇ ಉದ್ಯಮ ಕುರಿತು ಮಾತುಕತೆಗಳು ನಡೆದಿಲ್ಲ.

## ೩೨೬
## ಮೃದು ಕಲ್ಲಿದ್ದಲು ಕಿಟ್ಟದ ಮೇಲಿನ ಹಡಗು ಸುಂಕದ ಉಪಕರ **

**೧೦೪. ಶ್ರೀ ಕೆ.ಸಿ. ನಿಯೋಗಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳುವಿರಾ : ಅ) ಮೃದು ಕಲ್ಲಿದ್ದಲಿನ ಉಪಕರ ಸಮಿತಿಯು ೧೯೪೧ರಿಂದ ೧೯೪೪ರ ವರೆಗೆ ಹಡಗು ಸುಂಕದ ಮೇಲಿನ ಉಪಕರವನ್ನು ಎಷ್ಟು ಟನ್ನಿನ ಮೇಲೆ ವಸೂಲು ಮಾಡಿತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೨೯

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೮ನೇ ಮಾರ್ಚ್, ೧೯೪೫. ಪುಟ ೨೨೨೯

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾಹಿತಿಯು ಕೆಳಗಿನಂತಿದೆ :

| | |
|---|---|
| ೧೯೪೧ | ೯೫೭,೫೫೩ ಟನ್ನುಗಳು |
| ೧೯೪೨ | ೪೩೧,೮೫೮ ಟನ್ನುಗಳು |
| ೧೯೪೩ | ೩೬೪,೮೩೫ ಟನ್ನುಗಳು |
| ೧೯೪೪ | ೪೪೫,೭೨೧ ಟನ್ನುಗಳು |

## ೩೨೭
## ವಿವಿಧ ಖಾತೆಗಳು *

**ಸನ್ಮಾನ್ಯ ಸರ್ ಜೆರೆಮಿ ರೈಸ್‌ಮನ್ :** ಮಾನ್ಯರೆ, ೧೯೪೫ರ ಮಾರ್ಚ್ ೩೧ ಅಂದರೆ ವರ್ಷದ ಕೊನೆಯವರೆಗೆ ವಿವಿಧ ಖಾತೆಗಳ ಖರ್ಚುಗಳನ್ನು ಭರಿಸಲು ಗವರ್ನರ್–ಜನರಲ್ ಇನ್–ಕೌನ್ಸಿಲ್ ಇವರಿಗೆ ೧೦,೦೦,೦೦೦ರೂ.ಗಳಿಗೆ ಮೀರದಂತೆ ಪೂರಕ ಹಣವನ್ನು ಮಂಜೂರು ಮಾಡಬೇಕೆಂದು ನಾನು ಗೊತ್ತುವಳಿ ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಈ ಸೂಚನೆ ಮಂಡಿಸಲಾಗಿದೆ. "೧೯೪೫ ರ ಮಾರ್ಚ್ ೩೧ ಅಂದರೆ ವರ್ಷದ ಕೊನೆಯವರೆಗೆ ವಿವಿಧ ಖಾತೆಗಳ ಖರ್ಚುಗಳನ್ನು ಭರಿಸಲು ಗವರ್ನರ್–ಇನ್–ಕೌನ್ಸಿಲ್ ಇವರಿಗೆ ೧೦,೦೦,೦೦೦ ರೂ.ಗಳಿಗೆ ಮೀರದಂತೆ ಪೂರಕ ಹಣವನ್ನು ಮಂಜೂರು ಮಾಡಬೇಕೆಂದು ನಾನು ಈ ಸೂಚನೆ ಮಂಡಿಸುತ್ತೇನೆ."

**ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಪುಟ ೨೭ರಲ್ಲಿ ಕೊಟ್ಟಿರುವ ವಿವರಣೆ ಹೀಗಿದೆ :– "ಹೆಚ್ಚುವರಿ ಪ್ರಾಂತೀಯ ಮತ್ತು ಪ್ರಾದೇಶಿಕ ಕಾರ್ಮಿಕ ಪೂರೈಕೆ ಸಮಿತಿಗಳನ್ನು, ಕಾರ್ಮಿಕ ಪೂರೈಕೆ ಡಿಪ್ಲೋಗಳನ್ನು ಮತ್ತು ಕಾರ್ಮಿಕ ಪೂರೈಕೆ ಬ್ಯೂರೋಗಳನ್ನು ಸ್ಥಾಪಿಸಿದ ಕಾರಣ"

"ಕಾರ್ಮಿಕರಿಗಾಗಿ ಬೇಡಿಕೆ" ಅನ್ನುವ ಶೀರ್ಷಿಕೆಯ ಕೆಳಗೆ, ಪುಟ ೧೨ರಲ್ಲಿ ಹೀಗೆ ಬರೆದಿದೆ.

"ಪ್ರಾಂತೀಯ ಮತ್ತು ಪ್ರಾದೇಶಿಕ ಕಾರ್ಮಿಕರ ಪೂರೈಕೆ ಸಮಿತಿ ಮತ್ತು ಡಿಪೋಗಳ ಕೆಲಸವನ್ನು ಸಮನ್ವಯಗೊಳಿಸುವುದಕ್ಕೆ ಕೌಶಲವಿಲ್ಲದ ಕಾರ್ಮಿಕರ ಪೂರೈಕೆ ನಿರ್ದೇಶನಾಲಯವನ್ನು ಸ್ಥಾಪಿಸುವುದು"

ನನ್ನ ಅನಿಸಿಕೆಯ ಪ್ರಕಾರ ಇಲ್ಲಿ ಪುನರುಕ್ತಿ ಆಗಿದೆ. ಅವೆರಡರ ಮಧ್ಯೆ ಇರುವ ವ್ಯತ್ಯಾಸವನ್ನು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯ) "ಮೊದಲನೆಯ ಬೇಡಿಕೆ ಬಹಳ ಭಿನ್ನವಾದದ್ದು. ಅದು ಅಧಿಕಾರಿಗಳ ಸಂಬಳ ಕುರಿತದ್ದಾಗಿದ್ದು. ಅಧಿಕಾರಿಗಳ ಸಂಬಳಗಳನ್ನು ಕುರಿತು ಹೇಳುತ್ತದೆ. ಎರಡನೆಯದು ತುಂಬಾ ಭಿನ್ನವಾದದ್ದು. ಇದು ಕೆಲವು ಕಾರ್ಮಿಕ ಪೂರೈಕೆ ಸಮಿತಿಗಳನ್ನು ಕಾರ್ಮಿಕ ಪೂರೈಕೆ ಬ್ಯೂರೊಗಳನ್ನು ಮತ್ತು ಕಾರ್ಮಿಕ ಪೂರೈಕೆ ಡಿಪೋಗಳನ್ನು ಕುರಿತದ್ದಾಗಿದೆ ಇದು ಕೆಲಸಗಾರರನ್ನು ಕುರಿತ ಖರ್ಚಿನ ಬಗ್ಗೆ ಇದ್ದರೆ ಮೊದನೆಯಂದು ಸಚಿವಾಲಯದ ಅಧಿಕಾರಿಗಳ ಸಂಬಳವನ್ನು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೮ನೇ ಮಾರ್ಚ್, ೧೯೪೫. ಪುಟ ೨೨೧೯

ಕುರಿತು ಮಾತ್ರ ಪರಾಮರ್ಶೆ ಮಾಡುತ್ತದೆ.

**ಶ್ರೀ ಟಿ. ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ನಾನು ಅದನ್ನು ಪುನಃ ಓದುತ್ತೇನೆ. ಹೆಚ್ಚಿನ ಪ್ರಾಂತೀಯ ಮತ್ತು ಪ್ರಾದೇಶಿಕ ಕಾರ್ಮಿಕರ ಪೂರೈಕೆಯ ಸಮಿತಿಗಳು..........

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಸಮನ್ವಯಕ್ಕಾಗಿ ಮಾಡಿದ್ದು; ಪುಟ ೧೨ರಲ್ಲಿ ಇರುವುದು ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಸಂಬಳವನ್ನು ಕುರಿತದ್ದಾಗಿದ್ದು, ಈ ಬೇಡಿಕೆ ಸಚಿವಾಲಯದ ಹೊರತದ್ದಾಗಿದ್ದು, ಕೆಲಸಕ್ಕೆ ಸಂಬಂಧಿಸಿದ್ದು.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : "ಪೂರಕ ಹಣ ೧೦,೦೦,೦೦೦ ಮೀರದಂತೆ ಗವರ್ನರ್ ಜನರಲ್ ಇನ್–ಕೌನ್ಸಿಲ್ ಇವರಿಗೆ ೧೯೪೫ ಮಾರ್ಚ್ ೩೧ರಂದು ವಿವಿಧ ಖಾತೆಗಳ ಖರ್ಚು ಭರಿಸಲು ಮಂಜೂರು ಮಾಡಲು ಮಾಡಿದ ಸೂಚನೆಯನ್ನು ಅಂಗೀಕರಿಸಲಾಯಿತು."

## ೩೨೮
## ಧನಬಾದ್ ಉಪವಿಭಾಗದಲ್ಲಿ ಅಕ್ಕಿ ನಿಯಂತ್ರಿತ ಬೆಲೆಗಳ ಪ್ರಮಾಣ *

**೧೪೬೪. ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರೇ ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳುವಿರಾ, ಬಿಹಾರ ಪ್ರಾಂತದ ಧನಬಾದ್ ಉಪವಿಭಾಗದಲ್ಲಿ ಸದ್ಯಕ್ಕೆ ೧ ಮಣ ಅಕ್ಕಿಯ ನಿಯಂತ್ರಿತ ಬೆಲೆಯು ಎಷ್ಟಿದೆ?

ಆ) ಎರಡು ಕಲ್ಲಿದ್ದಲು ವ್ಯಾಪಾರ ಸಂಸ್ಥೆಗಳಿಗೆ ಪ್ರಾಂತೀಯ ಸರ್ಕಾರಗಳು ಗಣಿಯ ಕೆಲಸಗಾರರ ಸೌಕರ್ಯಕ್ಕಾಗಿ ಯಾವ ದರದಲ್ಲಿ ಅಕ್ಕಿಯನ್ನು ಪೂರೈಸಲಾಗುತ್ತದೆ?

ಇ) ಧನಬಾದ್ ಉಪವಿಭಾಗದಲ್ಲಿ ಪೂರೈಸುವ ಅಕ್ಕಿಗೆ ನಿಯಂತ್ರಿತ ಬೆಲೆಯ ಮೇಲೆ ಯಾವುದೇ ಪ್ರಾಸಂಗಿಕ ವೆಚ್ಚವನ್ನು ವಸೂಲು ಮಾಡಲಾಗುತ್ತಿದೆಯೆ? ಹಾಗಿದ್ದಲ್ಲಿ ಯಾವ ದರದಲ್ಲಿ ಮತ್ತು ಏಕೆ? ಇತ್ತೀಚೆಗೆ ಭಾರತೀಯ ಕಲ್ಲಿದ್ದಲು ಗಣಿ ಕೆಲಸಗಾರರ ಸಂಘದಿಂದ ಒಂದು ಮಣ ಅಕ್ಕಿಗೆ ನಿಯಂತ್ರಿತ ಬೆಲೆಗಿಂತ ೪ ರೂ. ಹೆಚ್ಚಿಗೆ ದರವನ್ನು ಹೆಚ್ಚುವರಿ ಬೆಲೆಯಾಗಿ ವಿಧಿಸುತ್ತಿದ್ದಾರೆಂದು ದೂರು ಬಂದಿದೆಯೆ?

ಈ) ಈ ಬಗ್ಗೆ ಧನಬಾದ್‌ನಲ್ಲಿರುವ ಕಲ್ಯಾಣ ಅಧಿಕಾರಿಯ ಕಡೆಯಿಂದ ಇಲ್ಲವೆ ಇದಕ್ಕೆ ಸಂಬಂಧಿಸಿದವರ ಕಡೆಯಿಂದ ಸರ್ಕಾರವು ಯಾವುದೇ ವಿಸ್ತೃತ ವರದಿಯನ್ನು ತರಿಸಿಕೊಂಡಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಧನಬಾದ್ ಉಪವಿಭಾಗದಲ್ಲಿ ಅಕ್ಕಿಯ ಸಗಟು ಮಾರಾಟದ ನಿಯಂತ್ರಿತ ಬೆಲೆಯು ಮಣ ಒಂದಕ್ಕೆ ೧೧ ರೂ ಮತ್ತು ೧೨. ಮಣ ೧ ಕ್ಕೆ ದಪ್ಪ ಅಕ್ಕಿ ೧೧ ರೂ. ಮಧ್ಯಮ ದರ್ಜೆಯ ಅಕ್ಕಿಗೆ ೧೨ ರೂ. ಇವುಗಳ ಚಿಲ್ಲರೆ ದರ ಪ್ರತಿಯೊಂದು ಸೇರಿಗೆ ಕ್ರಮವಾಗಿ ೪ ಆಣೆ ೭$^{1}/_{2}$ ಕಾಸು ಮತ್ತು ೫ ಆಣೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೯ನೇ ಮಾರ್ಚ್, ೧೯೪೫. ಪುಟ ೨೨೩೫

ಆ) ಪ್ರಾಂತೀಯ ಸರ್ಕಾರಗಳು ಎರಡು ಕಲ್ಲಿದ್ದಲು ಸಂಸ್ಥೆಗಳಿಗೆ, ದಪ್ಪ ಅಕ್ಕಿಗೆ ಮಣ ೧ ಕ್ಕೆ ೯ ರೂ. ಮತ್ತು ಮಧ್ಯಮ ದರ್ಜೆ ಅಕ್ಕಿಗೆ ಮಣ ೧ಕ್ಕೆ ೧೦ ರೂ. ಮತ್ತು ಆಡಳಿತ ವೆಚ್ಚ ಭರಿಸಲು ಮಣ ೧ಕ್ಕೆ ೪ ಆಣೆಯಂತೆ ಸಗಟು ದರದಲ್ಲಿ ಪೂರೈಸಲಾಗುತ್ತದೆ. ಇದಲ್ಲದೆ ಆ ಸಂಸ್ಥೆಗಳು ಆ ಚೀಲದ ಬೆಲೆಯೊಂದಿಗೆ ಅದಕ್ಕೆ ತಗಲುವ ಪ್ರಾಸಂಗಿಕ ವೆಚ್ಚವನ್ನು ಅಕ್ಕಿ ಪೂರೈಸಿದ ಸ್ಥಳದಿಂದ ಮಾರಾಟದ ಸ್ಥಳದವರೆಗೆ ತಗಲುವ ಎಲ್ಲ ವೆಚ್ಚವನ್ನು ಭರಿಸಬೇಕಾಗುತ್ತದೆ.

ಇ) ಮಾನ್ಯರೆ, ಹೌದು.

ಈ) ಇಲ್ಲ.

**ಶ್ರೀ ಕೆ.ಸಿ. ನಿಯೋಗಿ :** ಆ)ವನ್ನು ಕುರಿತು ಸ್ಥಾನಿಕ ನಿಯಂತ್ರಿತ ಬೆಲೆಗಿಂತ ಗಣಿ ಕೆಲಸಗಾರರಿಗೆ ಕೊಡುವ ಅಕ್ಕಿಯ ಬೆಲೆಯು ಹೆಚ್ಚಿಗೆ ಇದೆ. ಮೇಲೆ ಹೇಳಿದ ಎಲ್ಲ ಬೆಲೆ ಮತ್ತು ವೆಚ್ಚಗಳಿಂದಾಗಿ ಅಂತಿಮಬೆಲೆಯು ಹೆಚ್ಚಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಬಗ್ಗೆ ಯಾವುದೇ ಲೆಕ್ಕಮಾಡಿಲ್ಲವೆಂದು ವಿನಯದಿಂದ ಹೇಳಬಯಸುತ್ತೇನೆ.

**ಶ್ರೀ ಕೆ.ಸಿ. ನಿಯೋಗಿ :** ಈ ದೂರಿನ ಮುಖ್ಯ ಸಂಗತಿಯೇ ಇದಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸನ್ಮಾನ್ಯ ಮಿತ್ರರು ಇದರ ಲೆಕ್ಕಮಾಡಬಹುದು.

**ಶ್ರೀ ಕೆ.ಸಿ. ನಿಯೋಗಿ :** ಪ್ರಶ್ನೆಯ ಕುರಿತ ಈ ಅಧಿಕಾರಿಯು ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯಾಗಿದ್ದಾನೆಂದು ನಾನು ಗ್ರಹಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ಶ್ರೀ ಕೆ.ಸಿ. ನಿಯೋಗಿ :** ಈ ಪ್ರಶ್ನೆಯ ಬಗ್ಗೆ ಮೇಲಿಂದ ಮೇಲೆ ಬರುವ ದೂರನ್ನು ಕುರಿತು ಸನ್ಮಾನ್ಯ ಸದಸ್ಯರು ಈ ಬಗ್ಗೆ ಒಂದು ವರದಿಯನ್ನು ಸಂಬಂಧಿಸಿದ ಅಧಿಕಾರಿಯಿಂದ ಪಡೆಯುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವು ಆತನ ಅಧಿಕಾರವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಪ್ರಾಂತೀಯ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

**ಶ್ರೀ ಕೆ.ಸಿ. ನಿಯೋಗಿ :** ಗಣಿ ಕೆಲಸಗಾರರಿಗೆ ಯೋಗ್ಯ ದರದ ಬೆಲೆಯಲ್ಲಿ ಅಕ್ಕಿ ಪೂರೈಸಲು ಪ್ರಾಂತೀಯ ಸರ್ಕಾರಗಳು ಕೇಂದ್ರ ಸರ್ಕಾರದೊಂದಿಗೆ ಸಂಪೂರ್ಣ ಸಹಕಾರ ನೀಡುತ್ತಿಲ್ಲವೆಂಬ ವಿಷಯ ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಪ್ರಾಂತೀಯ ಸರ್ಕಾರವನ್ನು ಸಂಪರ್ಕಿಸುತ್ತೇನೆ. ಆದರೆ ಈ ವಿಷಯ ಕುರಿತು ಕಲ್ಲಿದ್ದಲು ಶ್ರೇಯೋಭಿವೃದ್ಧಿ ಅಧಿಕಾರಿಯನ್ನು ಕೇಳುವುದು ಸಮಂಜಸವೆಂದು ನನಗೆ ಅನಿಸುವುದಿಲ್ಲ.

## ೩೨೯
## ಬಲೂಚಿಸ್ತಾನದಲ್ಲಿ ನೀರಾವರಿಯ ಕ್ಷೇತ್ರ *

**೧೩೬೯. ಶ್ರೀ ಅಬ್ದುಲ್ ಖಯೂಮ್ :** ದಯವಿಟ್ಟು ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಿರಾ: ಅ) ಯುದ್ಧ ಪ್ರಾರಂಭವಾದಂದಿನಿಂದ ಬಲೂಚಿಸ್ತಾನದಲ್ಲಿ ಎಷ್ಟು ಕ್ಷೇತ್ರವನ್ನು ನೀರಾವರಿಗೆ ಅಳವಡಿಸಲಾಗಿದೆ?

ಆ) ಅದರಲ್ಲಿ ಸರ್ಕಾರದಿಂದ ಎಷ್ಟು ಕ್ಷೇತ್ರ ಹಾಗೂ ಖಾಸಗಿಯವರಿಂದ ಎಷ್ಟು ಕ್ಷೇತ್ರವನ್ನು ನೀರಾವರಿಗೆ ತರಲಾಗಿದೆ?

ಇ) ಇಂಥ ಯೋಜನೆಗಳಿಗೆ ಸರ್ಕಾರವು ಎಷ್ಟು ಹಣವನ್ನು ಖರ್ಚು ಮಾಡಿದೆ? ಮತ್ತು

ಈ) ಭೂಮಿಯನ್ನು ನೀರಾವರಿಗೆ ಅಳವಡಿಸಲು ಭೂಮಿಯ ಮಾಲೀಕರಿಗೆ ಯಾವುದೇ ರೀತಿಯಲ್ಲಿ ಹಣವನ್ನು ಸರ್ಕಾರವು ಮುಂಗಡವಾಗಿ ಕೊಟ್ಟಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) (ಆ) ಮತ್ತು (ಇ) ಯುದ್ಧ ಪ್ರಾರಂಭವಾದಂದಿನಿಂದ ಗಮನಾರ್ಹ ಪ್ರಮಾಣದ ಕ್ಷೇತ್ರವನ್ನು ನೀರಾವರಿಗೆ ಅಳವಡಿಸಿಲ್ಲ. ಆದರೆ ಸರ್ಕಾರದಿಂದ ಮಂಜೂರಾದ ಪ್ರವಾಹವನ್ನು ನಿಯಂತ್ರಿಸುವ ಎರಡು ಯೋಜನೆಗಳಿಗಾಗಿ ಅಂದಾಜು ೬೮,೦೦೦–೦೦ ರೂ.ಗಳನ್ನು ಖರ್ಚು ಮಾಡಲಾಗಿದೆ. ಇದರಿಂದ ೧,೦೦೦ ಎಕರೆ ನೀರಾವರಿ ಆಗುತ್ತದೆ. ಸರಕಾರದ ಧಾನ್ಯ ಸಂಗ್ರಹಣಾ ಕಾರ್ಯಕ್ರಮ ಹಾಗೂ ನೀರಾವರಿ ಭೂಮಿ ಮತ್ತು ಖುಷ್ಕಿ ಜಮೀನಿನ ವಿಸ್ತರಣೆಯ ಅಡಿಯಲ್ಲಿ ಅನುಸರಿಸುತ್ತಿರುವ ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವ ನೀತಿಯಿಂದಾಗಿ ಬಲೂಜಸ್ಥಾನವು ತನ್ನ ಅಗತ್ಯಕ್ಕಿಂತ ಹೆಚ್ಚಿನ ಗೋಧಿಯನ್ನು ಬೆಳೆಯ ಇತರ ಪ್ರಾಂತಗಳಿಗೆ ರಫ್ತು ಮಾಡುವ ಸ್ಥಿತಿಯನ್ನು ತಲುಪಿದೆ.

(ಈ) ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

## ೩೩೦
## ರೇಲ್ವೆ ಕಲ್ಲಿದ್ದಲು ಗಣಿಗಳ ಸಮೀಪದಲ್ಲಿರುವ ಮದ್ಯದಂಗಡಿಗಳು **

**೧೪೭೦ ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ದಯವಿಟ್ಟು ಮಾನ್ಯ ಕಾರ್ಮಿಕ ಸದಸ್ಯರು ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವರೆ : ಅ) ರೇಲ್ವೆ ಕಲ್ಲಿದ್ದಲು ಗಣಿಗಳ ಸಮೀಪದಲ್ಲಿ ಮದ್ಯದ ಅಂಗಡಿಗಳು ಇರುವುದು ನಿಜವಿದ್ದರೆ ಮತ್ತು ಹಾಗಿದ್ದಲ್ಲಿ ಅವು ಯಾವ ದಿವಸಗಳಲ್ಲಿ ಮತ್ತು ಎಷ್ಟು ಹೊತ್ತಿನವರೆಗೆ ತೆರೆದಿರುತ್ತವೆ?

ಆ) ಗಣಿಗಳ ಸಮೀಪ ಇರುವ ಮದ್ಯದ ಅಂಗಡಿಗಳು ಕಾರ್ಮಿಕರಿಗೆ ಕುಡಿಯುವ ಚಪಲವನ್ನು ಉಂಟುಮಾಡುತ್ತದೆ. ಇದರಿಂದಾಗಿ ಕಾರ್ಮಿಕರು ತಮ್ಮ ಕೂಲಿ ಹಣವನ್ನು ಹಾಳು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೯ನೇ ಮಾರ್ಚ್, ೧೯೪೩. ಪುಟ ೨೨೩೯

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೯ನೇ ಮಾರ್ಚ್, ೧೯೪೩. ಪುಟ ೨೨೩೯

ಮಾಡಿಕೊಳ್ಳುತ್ತಾರೆ ಮತ್ತು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆ, ಇದರ ಪರಿಣಾಮವಾಗಿ ಗಣಿಗಳಲ್ಲಿ ಹಾಜರಾತಿಯು ಕಡಿಮೆಯಾಗುತ್ತದೆ ಹಾಗೂ ಪಗಾರದ ದಿನ ಕಲ್ಲಿದ್ದಲು ಉತ್ಪಾದನೆಯ ಪ್ರಮಾಣವು ಕಡಿಮೆಯಾಗುತ್ತದೆ ಮತ್ತು ಪ್ರತಿಕೂಲವಾಗುತ್ತದೆ. ಈ ವಿಷಯಗಳ ಈ ಗಣಿಗಳ ಕಾರ್ಯನಿರ್ವಾಹಕರ ಗಮನಕ್ಕೆ ಬಂದಿವೆಯೆ?

ಇ) (ಬ) ಈ ಪ್ರಶ್ನೆಗೆ ಉತ್ತರವು ನಕಾರಾತ್ಮಕವಾಗಿದ್ದಲ್ಲಿ ಈ ವಿಷಯವಾಗಿ ಸರ್ಕಾರವು ಒಂದು ವರದಿಯನ್ನು ಪಡೆದುಕೊಳ್ಳಲು ಉದ್ದೇಶಿಸಿದೆಯೆ? ಮತ್ತು

ಈ) ಗಣಿ ಪ್ರದೇಶಗಳಲ್ಲಿರುವ ಮದ್ಯದ ಅಂಗಡಿಗಳನ್ನು ಮುಚ್ಚಿಸಬೇಕೆಂದಾಗಲೀ, ಅವುಗಳ ವ್ಯಾಪಾರದ ವೇಳೆಯನ್ನು ನಿಯಂತ್ರಿಸಲಾಗಲಿ ಅಥವಾ ಸಂಬಳದ ದಿನಗಳೆಂದು ಸಂಪೂರ್ಣವಾಗಿ ಮುಚ್ಚಿಸಬೇಕೆಂದಾಗಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಭಾರತ ಸರ್ಕಾರವು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಲು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ರೇಲ್ವೆಯ ಮಾಲ್ಕಿಯ ಕಲ್ಲಿದ್ದಲು ಗಣಿಗಳ ಸಮೀಪ ಹಾಗೂ ಅದರಂತೆ ಉಳಿದ ಗಣಿಗಳ ಸಮೀಪದಲ್ಲಿ ಮದ್ಯದ ಅಂಗಡಿಗಳು ಇವೆ. ಆದರೆ ಅವು ಯಾವ ದಿನಗಳಂದು ಎಷ್ಟು ಅವಧಿವರೆಗೆ ತೆರೆದಿರುತ್ತವೆಂಬ ವಿಷಯದ ಬಗ್ಗೆ ಸದ್ಯಕ್ಕೆ ಯಾವ ಮಾಹಿತಿಯು ಇಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ. ಆದರೆ ನಾನು ಈ ಮಾಹಿತಿಯನ್ನು ಪಡೆದುಕೊಂಡು ನಂತರ ಸದನದ ಮುಂದೆ ಇಡುತ್ತೇನೆ.

ಆ) ಇಲ್ಲ.

ಇ) ಸರ್ಕಾರವು, ಕುಡಿಯುವುದು ಮತ್ತು ಅದರಿಂದ ಆರೋಗ್ಯದ ಮೇಲೆ ಆಗುವ ಪರಿಣಾಮ ಮತ್ತು ಗಣಿಗಳ ಉತ್ಪನ್ನದ ಕುಸಿತ ಇವುಗಳನ್ನು ಕುರಿತು ಒಂದು ಸಾಮಾನ್ಯ ವರದಿ ತರಿಸಿಕೊಳ್ಳುವುದು.

ಈ) ಮದ್ಯವು ಪ್ರಾಂತೀಯ ವಿಷಯವಾಗಿರುತ್ತದೆ. ಅದಾಗ್ಯೂ ಮದ್ಯದ ಅಂಗಡಿಗಳನ್ನು ಕುರಿತು ಯಾವುದೇ ಶಿಫಾರಸ್ಸು ಮಾಡುವುದು ಅವಶ್ಯವಿದೆ ಎಂದು ಆ ವರದಿಯ ಮೇಲಿಂದ ಕಂಡು ಬಂದರೆ ಸರ್ಕಾರವು ಹಾಗೆ ಮಾಡುವುದು.

೧೯೪೪ ಡಿಸೆಂಬರ್ ತಿಂಗಳ ಬಿಹಾರ ಗಣಿ ಪ್ರದೇಶಗಳಲ್ಲಿಯ ಮದ್ಯದ ಚಿಲ್ಲರೆ ಮಾರಾಟದ ದರವನ್ನು ಹೆಚ್ಚಿಸಲಾಯಿತು. ಇದರ ಪರಿಣಾಮವನ್ನು ಪ್ರಾಂತೀಯ ಸರ್ಕಾರವು ಸೂಕ್ಷ್ಮವಾಗಿ ವೀಕ್ಷಿಸಿ ಮದ್ಯಪಾನದ ಪ್ರಮಾಣವನ್ನು ಕಡಿಮೆ ಮಾಡುವುದು ಇಲ್ಲವೆ ಬೇರೆ ಯಾವುದಾದರೂ ಕ್ರಮಕೈಕೊಳ್ಳುವ ಬಗ್ಗೆ ವಿಚಾರಿಸುತ್ತದೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಕಳೆದ ವರ್ಷ ಬಂಗಾಳದಿಂದ ಬಂದ ಒಂದು ವರದಿಯಲ್ಲಿ ಕಲ್ಲಿದ್ದಲು ಪ್ರದೇಶದಲ್ಲಿ ಹೆಚ್ಚಿನ ಮದ್ಯಪಾನ ಸೇವನೆಯಿಂದ ಯಾವುದೇ ಅನಾಹುತ ಸಂಭವಿಸಿಲ್ಲವೆಂದು ತಿಳಿದು ಬಂದಿದೆ.

**ಶ್ರೀಮತಿ ರಾಧಾಬಾಯಿ ಕೆ. ಸುಬ್ಬರಾಯನ್ :** ಮಾನ್ಯರೆ, ನಮ್ಮ ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆಯ ಪರಿಸ್ಥಿತಿಯು ತುಂಬಾ ಗಂಭೀರವಾಗಿದ್ದು ಈಗ ಇರುವ ಗಣಿಗಳಿಂದಲೇ ಅತಿ ಹೆಚ್ಚು ಉತ್ಪಾದನೆಯನ್ನು ತೆಗೆಯಬೇಕಾಗಿದೆ. ಆದ್ದರಿಂದ ಅದು ಪ್ರಾಂತೀಯ ವಿಷಯವಾದರೂ ಕಲ್ಲಿದ್ದಲು ಗಣಿಗಳ ಸಮೀಪದಲ್ಲಿರುವ ಮದ್ಯದ ಅಂಗಡಿಗಳನ್ನು ಮುಚ್ಚಿಸಲು ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಸೂಚಿಸಿದಂತೆ ಅವುಗಳ ಮೇಲೆ ನಮ್ಮ

ನಿಯಂತ್ರಣ ಇರುವುದಿಲ್ಲ.

**ಶ್ರೀ ಜಿ. ರಂಗಯ್ಯ ನಾಯ್ಡು :** ಸ್ಥಾನಿಕ ಸರ್ಕಾರಗಳ ಪರವಾನಗಿ ಪಡೆದು ಗಣಿಗಳ ಸಮೀಪದಲ್ಲಿ ಈ ಮದ್ಯದ ಅಂಗಡಿಯನ್ನು ತೆಗೆಯಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಪ್ರಾಂತೀಯ ಸರ್ಕಾರದ ವಿಷಯವಾಗಿದೆಯೆಂದು ನಾನು ಹೇಳಬಯಸುತ್ತೇನೆ.

## ೩೩೧
## ರೇಲ್ವೆ ಕಲ್ಲಿದ್ದಲು ಗಣಿ ಕಾರ್ಮಿಕರ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಗಳು*

**೧೪೭೧ ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ತಿಳಿಸುವರೆ : ಅ) ರೇಲ್ವೆಯವರ ಮಾಲ್ಕಿ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವ ಕಾರ್ಮಿಕ ಮಕ್ಕಳಿಗೆ ಯಾವುದೇ ಪ್ರಾಥಮಿಕ ಶಾಲೆಗಳು ಇವೆಯೆ?

ಹಾಗಿದ್ದಲ್ಲಿ ಒಟ್ಟು ಎಷ್ಟು ಶಾಲೆಗಳಿವೆ? ಒಟ್ಟು ಶಾಲೆಗೆ ಹೋಗುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಎಷ್ಟು ಜನ?

ಆ) ೧೯೩೯ರ ಜೂನ್‌ದಿಂದ ಶಾಲೆಗಳ ಸಂಖ್ಯೆಯು ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದೆಯೆ ಇಲ್ಲವೆ ಕಡಿಮೆಯಾಗಿದೆಯೆ? ಆಗಿರುವ ವ್ಯತ್ಯಾಸದ ಪ್ರಮಾಣವೆಷ್ಟು?

ಇ) ಈ ಶಾಲೆಗಳಲ್ಲಿ ಸಹಶಿಕ್ಷಣವಿದೆಯೆ? ಮತ್ತು ಅಲ್ಲಿ ಶಿಕ್ಷಕರೊಂದಿಗೆ ಶಿಕ್ಷಕಿಯರೂ ಇದ್ದಾರೆಯೆ?

ಈ) ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇದೆಯೆ? ಹಾಗಿರದಿದ್ದರೆ ಏಕೆ ಇರುವುದಿಲ್ಲ?

ಉ) ಈ ಶಾಲೆಗಳು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಕಲ್ಲಿದ್ದಲು ಗಣಿಗಳ ಕಾರ್ಯನಿರ್ವಾಹಕ ಆಡಳಿತದಲ್ಲಿವೆಯೆ? ಇಲ್ಲವೆ ಯಾವುದೇ ಸ್ಥಾನಿಕ ಅಧಿಕಾರಿಗಳ ಆಡಳಿತದಲ್ಲಿವೆಯೆ? ಮತ್ತು

ಊ) ಗಣಿ ಕೆಲಸಗಾರರಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಸರ್ಕಾರವು ಯಾವ ಕ್ರಮವನ್ನು ಕೈಕೊಂಡಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಶಾಲೆಗಳ ಸಂಖ್ಯೆಯ ಬಗ್ಗೆ ನನಗೆ ವಿವರವಾದ ಮಾಹಿತಿ ಇಲ್ಲವೆಂದು ವಿಷಾದದಿಂದ ತಿಳಿಸುತ್ತೇನೆ. ಆದರೆ ನಾನು ಈ ಬಗ್ಗೆ ಮಾಹಿತಿಯನ್ನು ನಿಶ್ಚಿತವಾಗಿ ಪಡೆಯುತ್ತೇನೆ. ಆದರೆ ಗಣಿ ಕಾರ್ಮಿಕರ ಎಷ್ಟು ಜನ ಮಕ್ಕಳು ಶಾಲೆಗೆ ಹೋಗುತ್ತಾರೆ ಅನ್ನುವುದನ್ನು ಪಡೆಯಲು ಕಷ್ಟವಾಗುತ್ತದೆ. ಏಕೆಂದರೆ ಆ ಶಾಲೆಗಳಲ್ಲಿ ಉಳಿದವರ ಮಕ್ಕಳು ಸಹ ಪ್ರವೇಶ ಪಡೆಯಲು ಅರ್ಹರಿದ್ದಾರೆ.

ಆ) (ಇ) ಮತ್ತು (ಈ) ಈಗ ನನ್ನಲ್ಲಿ ಯಾವುದೇ ಮಾಹಿತಿಯು ಇರುವುದಿಲ್ಲ. ಆದರೆ ನಾನು ಅದನ್ನು ಪಡೆದುಕೊಂಡು ಈ ಸದನದ ಮುಂದೆ ಇಡಲು ಪ್ರಯತ್ನಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೯ನೇ ಮಾರ್ಚ್, ೧೯೪೩. ಪುಟ ೨೨೩೯

ಉ) ಗಣಿ ಕೆಲಸಗಾರರು ಆರ್ಥಿಕವಾಗಿ ದೇಣಿಗೆ ಸಲ್ಲಿಸುತ್ತಿರುವ ಹಝಾರಿಬಾಗ್ ಗಣಿಗಳ ಬೋರ್ಡಿನ ಅಧೀನದಲ್ಲಿ ಈ ಶಾಲೆಗಳು ನಡೆಯುತ್ತವೆ.

ಊ) ಶಿಕ್ಷಣ ಸೌಕರ್ಯವನ್ನು ಒದಗಿಸುವುದು ಮುಖ್ಯವಾಗಿ ಪ್ರಾಂತೀಯ ಸರ್ಕಾರದ ಹೊಣೆಯಾಗಿದೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಮಾನ್ಯರೆ, ಸನ್ಮಾನ್ಯ ಸದಸ್ಯರು ಮೊನ್ನೆಯ ದಿನ ಒಂದು ಕಲ್ಯಾಣ ಸಮಿತಿ ಇದೆಯೆಂದು ಹೇಳಿದರು. ನಾನು ಮಾಡಿದ ಕೆಲವು ಸಲಹೆಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಹುದೆ? ಮತ್ತು ಶಾಲೆಗೆ ಹೋಗುವ ಗಣಿ ಕೆಲಸಗಾರರ ಮಕ್ಕಳ ದಾಖಲೆಗಳನ್ನು ತರಿಸಿಕೊಳ್ಳಬೇಕೆಂದು ಕೇಳಿದ್ದೇನೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಹೌದು, ಹಾಗೆ ಮಾಡಬಹುದು. ಸಮಿತಿಗಳಿಗೆ ಹಾಗೆ ಮಾಡಲು ಯಾವುದೇ ಅಡ್ಡಿ ಇಲ್ಲ.

## ೩೩೨
## ಅತ್ಯಾವಶ್ಯಕ ಸೇವೆಗಳ ಅಧ್ಯಾದೇಶವನ್ನು ಸರ್ಕಾರದ ನೌಕರರಿಗೆ ಅನ್ವಯಿಸುವುದು *

**೧೪೮೫. ಶ್ರೀ ಎನ್. ಎಮ್. ಜೋಷಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವಿರಾ? : ಅ) ಅತ್ಯಾವಶ್ಯಕ ಸೇವೆಗಳ ಅಧ್ಯಾದೇಶವು ಎಲ್ಲ ಸರ್ಕಾರಿ ನೌಕರರಿಗೂ ಅನ್ವಯಿಸುವುದೆ? ಮತ್ತು

ಆ) ಆವಶ್ಯಕ ಸೇವೆಗಳ (ನಿರ್ವಹಣೆ) ಅಧ್ಯಾದೇಶ ೧೯೪೧ರ ೨ನೆಯದು, ಇದರ ಕಲಂ (೫) ಮತ್ತು (೬) ಇವುಗಳನ್ನು ಸರ್ಕಾರಿ ನೌಕರರಿಗೆ ಅನ್ವಯಿಸದಿರುವ ಬಗ್ಗೆ ಪ್ರತಿಭಟಿಸಿದುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಸರ್ಕಾರದ ಬಾಧ್ಯತೆಯನ್ನು ಕುರಿತು ಯೋಗ್ಯ ಕಾರಣಗಳಿಲ್ಲದೆ ಸರ್ಕಾರಿ ನೌಕರರಿಗೆ ಸಿಗುವ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳಬಾರದು. ಅವರ ಕೂಲಿಗಳನ್ನು ಕುರಿತು ಮತ್ತು ಉಳಿದ ಸೇವೆಯ ಕರಾರುಗಳನ್ನು ಕುರಿತು ನಿಯಮಿತಗೊಳಿಸಲು ನಿರ್ದಿಷ್ಟಪಡಿಸಿದ ಅಧಿಕಾರಿಗೆ ಹೆಚ್ಚಿನ ಅಧಿಕಾರ ಕೊಡುವುದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು (ಆ) ಇಲ್ಲ.

**ಶ್ರೀ ಎನ್.ಎಮ್. ಜೋಷಿ :** ಆವಶ್ಯಕ ಸೇವೆಗಳ ಅಧಿನಿಯಮದ ಅನ್ವಯ ಅವಶ್ಯವಿರುವ ಯೋಗ್ಯ ಕ್ರಮಗಳನ್ನು ಸರ್ಕಾರವು ಏಕೆ ಕೈಗೊಂಡಿಲ್ಲವೆಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರ ಪ್ರಶ್ನೆಯು ಸರ್ಕಾರಕ್ಕೆ ಪ್ರತಿರೋಧವು ಬಂದಿತ್ತೆ? ಎಂಬುದಾಗಿತ್ತು.

* * *

***ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ೩ನೆಯ ಅಂಶ (ವಿಷಯ)...........

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ಮಾನ್ಯ ಸದಸ್ಯರಾದ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೨, ೨೯ನೇ ಮಾರ್ಚ್, ೧೯೪೫. ಪುಟ ೨೨೪೫

ಶ್ರೀ ಅವಿನಾಶಲಿಂಗಮ್ ಚೆಟ್ಟಿಯಾರ್ ಅವರು ಪ್ರಶ್ನೆಗಳನ್ನು ಎತ್ತಿದಾಗ ನಾನು ಸದನದಲ್ಲಿ ಇರಲಿಲ್ಲ ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಆದರೆ ಈ ಕಟ್ಟಡಗಳು ಶಾಶ್ವತವಾದುವುವೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಅವಿನಾಶಲಿಂಗಮ್ ಚೆಟ್ಟಿಯಾರ್ :** ಅವೆಲ್ಲವೂ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಆವಶ್ಯಕತೆಯು ನಮಗೆ ಈ ಕಟ್ಟಡಗಳನ್ನು ನಿರ್ಮಿಸಲು ಕಾರಣವಾಯಿತು.

**ಶ್ರೀ ಅವಿನಾಶಲಿಂಗಮ್ ಚೆಟ್ಟಿಯಾರ್ :** ನನಗೆ ಅದು ಗೊತ್ತಿದೆ. ಮಾನ್ಯ ಕಾರ್ಮಿಕ ಸದಸ್ಯರು ಈ ವಿಷಯವಾಗಿ ಒಂದು ಉಪನ್ಯಾಸವನ್ನು ಕೊಡಬಲ್ಲರು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತಾತ್ಪೂರ್ತಿಕ ಕಟ್ಟಡಗಳನ್ನು ಕಟ್ಟಲು ಸಾಕಷ್ಟು ಹಣವನ್ನು ಖರ್ಚುಮಾಡಲಾಗಿದ್ದು, ಮತ್ತು ಕನಿಷ್ಠ ಈ ಶಾಶ್ವತ ಕಟ್ಟಡಗಳನ್ನು ವಾಪಸ್ಸು ಪಡೆಯುವಲ್ಲಿ ನಾವು ಜಯಶೀಲರಾಗಿದ್ದೇವೆ. ಸಚಿವಾಲಯದಲ್ಲಿ ಕೆಲಸಮಾಡುವ ಅನೇಕ ಜನ ಕಾರಕೂನರು ಈ ಮನೆಗಳಲ್ಲಿ ವಾಸಿಸುತ್ತಾರೆ. ಇದೊಂದು ದೊಡ್ಡ ಅನುಕೂಲವೆಂದು ನಾನು ಭಾವಿಸುವೆನು.

## ೩೩೩
## ದೆಹಲಿ ಕರೋಲ್ ಭಾಗ್‌ದಲ್ಲಿ ಮಸೀದಿಯ ಸುತ್ತಲೂ ಗೋಡೆಯನ್ನು ಕಟ್ಟುವುದು **

**ಮೌಲ್ವಿ ಮುಹ್ಮಮದ ಅಬ್ದುಲ್ ಘನಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಇದಕ್ಕೆ ಉತ್ತರವನ್ನು ಹೇಳುವರೆ: ಅ) ದೆಹಲಿ ಮುಸಲ್ಮಾನ ವಕ್ಫ್ ಅಧಿನಿಯಮ ೧೯೪೩ರ ೧೩ನೆಯ ಅಧಿನಿಯಮದನ್ವಯ ಮಜಲಿಸ್–ಎ–ಅವಕಫ್‌ನ್ನು ಸ್ಥಾಪಿಸಿದ್ದಾರೆ. ಹಾಗಿದ್ದಲ್ಲಿ ಆ ಸುನ್ನಿ ಮಜಲಿಸ್–ಎ–ಅವಕಫ್‌ದವರೇ ದೆಹಲಿಯಲ್ಲಿರುವ ಎಲ್ಲ ವಕ್ಫ್ ಆಸ್ತಿಗಳಿಗೆ ಏಕಮಾತ್ರ ಆಡಳಿತಗಾರರೆ?

ಆ) ನವದೆಹಲಿ ಕರೋಲ್‌ಬಾಗ್‌ದಲ್ಲಿ ಇತ್ತೀಚೆಗೆ ಸರ್ಕಾರವು ಕಟ್ಟಿಸಿದ ಕಟ್ಟಡಗಳ ಪಕ್ಕದಲ್ಲಿಯೇ ಒಂದು ಹಳೇ ಮಸೀದಿ ಮತ್ತು ಅದಕ್ಕೆ ಹತ್ತಿಯೇ ಸ್ಮಶಾನವಿದೆ. ಮುಸಲ್ಮಾನರು ಅಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ಈ ವಿಷಯ ಗೊತ್ತಿದೆಯೆ?

ಇ) ಪ್ರಾರ್ಥನೆಗಾಗಿ ಹೋಗುವ ಮುಸಲ್ಮಾನರನ್ನು ತಡೆಯುವ ಉದ್ದೇಶದಿಂದ ಕೇಂದ್ರೀಯ ಸಾರ್ವಜನಿಕ ಕೆಲಸಗಳ ಇಲಾಖೆಯು ಇಲ್ಲಿ ಮಸೀದಿಯ ಸುತ್ತಲೂ ಒಂದು ಗೋಡೆಯನ್ನು ನಿರ್ಮಿಸಿರುವುದು ನಿಜವೆ?

ಈ) ಈ ಇಲಾಖೆಯು ಸುನ್ನಿ–ಮುಜಲಿಸ್–ಎ–ಅವಕಫ್ ಇದರಿಂದ ಸುತ್ತಲೂ ಆ ಗೋಡೆಯನ್ನು ಕಟ್ಟಲು ಪರವಾನಿಗೆಯನ್ನು ಪಡೆದುಕೊಂಡಿದೆಯೆ?

ಉ) ಈ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವ ಮುಸಲ್ಮಾನರ ತಕರಾರು ಬಂದುದರಿಂದ ಆ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೬ನೇ ಮಾರ್ಚ್, ೧೯೪೫. ಪುಟ ೨೦೨೦

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೨ನೇ ಮಾರ್ಚ್, ೧೯೪೫. ಪುಟ ೨೩೦೪

ಕಂಟ್ರಾಕ್ಟರರು ಹಾಗೂ ಕೇಂದ್ರಿಯ ಸಾರ್ವಜನಿಕ ಕೆಲಸಗಳ ಇಲಾಖೆಯವರು ಈಗ ಕೆಲಸವನ್ನು ನಿಲ್ಲಿಸಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಅಲ್ಲಿ ಯಾವುದೇ ಹಳೇ ಮಸೀದಿ ಇದ್ದ ಬಗ್ಗೆ ನನಗೆ ತಿಳಿದು ಬಂದಿಲ್ಲ. ಆದರೂ ಕರೋಲ್ ಭಾಗ್‌ನಲ್ಲಿ ಹೊಸದಾಗಿ ಕಟ್ಟಿಸಿದ ಮನೆಗಳ ಸಮೀಪ ಒಂದು ಹಳೆಯ ಮಸೀದಿ ಮತ್ತು ಉಪಯೋಗಿಸದೆ ಇರುವ ಸ್ಮಶಾನ ಕಾಣಿಸುತ್ತದೆ. ಈ ಭಾಗದಲ್ಲಿ ವಾಸಿಸುವ ಕೆಲವು ಮುಸಲ್ಮಾನರು ಇತ್ತೀಚೆಗೆ ಒಂದು ಎತ್ತರದ ಕಟ್ಟೆಯನ್ನು ಕಟ್ಟಿ ತೆಂಗಿನ ಗರಿಗಳ ಮೇಲು ಛಾವಣಿ ಹಾಕಿಕೊಂಡು ಆ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸುವುದಾಗಿ ಹೇಳಿಕೊಳ್ಳುತ್ತಿದ್ದಾರೆ.

ಇ) ಸ್ಥಳೀಯ ಅಧಿಕಾರಿಗಳೊಂದಿಗೆ ಆಲೋಚಿಸಿ, ಈ ಪ್ರದೇಶದಲ್ಲಿ ಮುಸಲ್ಮಾನರಾಗಲಿ ಇಲ್ಲವೆ ಹಿಂದೂಗಳಾಗಲಿ ಯಾವುದೇ ಅತಿಕ್ರಮಣ ಮಾಡಬಾರದೆಂದು ಈ ಕ್ಷೇತ್ರದ ಸುತ್ತಲೂ ಗೋಡೆಯನ್ನು ಕಟ್ಟಲು ಸರ್ಕಾರವು ಉದ್ದೇಶಿಸಿದೆ. ಮುಸಲ್ಮಾನ ಸಮಾಜದ ಪ್ರತಿಭಟನೆಯಿಂದ ಕಾನೂನಿನ ಅಂಶಗಳನ್ನೊಳಗೊಂಡುದನ್ನು ಸ್ಪಷ್ಟಪಡಿಸುವವರೆಗೆ ಈ ಕಾರ್ಯವನ್ನು ತಡೆಹಿಡಿಯಲಾಗಿದೆ.

ಈ) (ಆ) ಪ್ರಶ್ನೆಗೆ ಉತ್ತರಿಸಿದ ನಂತರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮತ್ತು ಊ) ಸನ್ಮಾನ್ಯ ಸದಸ್ಯರು ನಾನು (ಇ)ಕ್ಕೆ ಕೊಟ್ಟ ಉತ್ತರವನ್ನು ಗಮನಿಸಬೇಕು.

**ಸರ್ ಮಹಮ್ಮದ ಯಾಮೀನ್ ಖಾನ್ :** ಸನ್ಮಾನ್ಯ ಸದಸ್ಯರು ಈ ಸರ್ಕಾರಿ ಭೂಮಿಯಲ್ಲಿ ಜನರು ಅಡ್ಡಾಡುವುದನ್ನು ತಡೆಯಲು ಗೋಡೆಯನ್ನು ಕಟ್ಟಲು ಸರ್ಕಾರವು ಉದ್ದೇಶಿಸಿದೆಯೆಂದು ಸನ್ಮಾನ್ಯ ಸದಸ್ಯರು ಹೇಳುವುದರಿಂದ ಅದು ಸರ್ಕಾರದ ಭೂಮಿ ಹೇಗೆ ಆಗುವುದೆಂದು ನಾನು ಕೇಳಬಹುದೆ? ಅದು ಸ್ಮಶಾನವಾಗಿರುವುದರಿಂದ ಅದು ಸರ್ಕಾರದ ಭೂಮಿಯೆಂದು ಸನ್ಮಾನ್ಯ ಸದಸ್ಯರು ಹೇಗೆ ಹೇಳುವಿರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ನನಗೆ ಸಲಹೆ ಕೊಟ್ಟ ಪ್ರಕಾರ ಆ ಭೂಮಿಯು ಸರ್ಕಾರದ ಭೂಮಿಯೆಂದು ಗ್ರಹಿಸಲಾಗುತ್ತದೆ. ಈ ಬಗ್ಗೆ ನಾನು ಕಾನೂನಿನ ಅಂಶಗಳನ್ನು ಪಡೆಯಲಿಚ್ಛಿಸುತ್ತೇನೆ.

**ಸರ್ ಮಹಮ್ಮದ್ ಯಾಮೀನ್ ಖಾನ್ :** ಎಲ್ಲ ಕ್ರಿಶ್ಚಿಯನ್ನರ, ಹಿಂದುಗಳ ಹಾಗೂ ಮುಸಲ್ಮಾನರ ಸ್ಮಶಾನಗಳನ್ನು ಸರ್ಕಾರದ ಭೂಮಿಗಳೆಂದು ಸನ್ಮಾನ್ಯ ಸದಸ್ಯರು ಕರೆಯುವರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹೇಳಿದಂತೆ ಈ ಬಗ್ಗೆ ಕಾನೂನಿನ ಅಭಿಪ್ರಾಯವನ್ನು ಪಡೆಯುತ್ತೇನೆ.

**ಸರ್ ಮಹಮ್ಮದ್ ಯಾಮೀನ್ ಖಾನ್ :** ಸನ್ಮಾನ್ಯ ಸದಸ್ಯರು ಅಲ್ಲಿ ಒಂದು ಸ್ಮಶಾನವಿದೆಯೆಂದು ಹೇಳಿ ಅದೇ ಕಾಲಕ್ಕೆ ಅದು ಸರ್ಕಾರದ ಭೂಮಿ ಎಂದು ಹೇಳಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದ್ಯಕ್ಕೆ ಸರ್ಕಾರಕ್ಕೆ ಕೊಟ್ಟ ಸಲಹೆಯ ಮೇರೆಗೆ ಸ್ಥಿತಿಯು ಹೀಗೆ ಇದೆ.

**ಸರ್ ಮಹಮ್ಮದ್ ಯಾಮೀನ್ ಖಾನ್ :** ಯಾರಿಂದ?

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಬ್ದುರ್ ರಹೀಮ್) : ಸನ್ಮಾನ್ಯ ಸದಸ್ಯರು ಈಗಾಗಲೇ ಕಾನೂನಿನ ಸಲಹೆ ಪಡೆಯುವುದಾಗಿ ತಿಳಿಸಿದ್ದಾರೆ.

**ಸರ್ ಮಹಮ್ಮದ್ ಯಾಮೀನ್ ಖಾನ್ :** ಅವರಿಗೆ ಈ ಸಲಹೆಯನ್ನು ಯಾರು ಕೊಟ್ಟರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರಕ್ಕೆ ಸಲಹೆ ಕೊಡಲು ನೇಮಿಸಿದವರೆ ಕೊಟ್ಟಿದ್ದಾರೆ.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ :** ಸರ್ಕಾರವು ಮೇಲೆ ಹೇಳಿದ ಮಸೀದಿ ಮತ್ತು ಸ್ಮಶಾನದ ಭೂಮಿಯ ಒಂದು ಭಾಗವನ್ನು ಸ್ವಾಧೀನಪಡಿಸಿಕೊಂಡಿದೆಯೆ? ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವನ್ನು ವಶಪಡಿಸಿಕೊಳ್ಳುವುದು ಅವಶ್ಯವಿಲ್ಲ.

## ೩೩೪
## ಸಾರ್ವಜನಿಕ ಉಪಯೋಗಿ ಸಂಸ್ಥೆಗಳು ಭಾರತೀಯರಲ್ಲದವರ ಹಿತಾಸಕ್ತಿಗಳಿಗೆ *

**೧೫೯೧. ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಮುಂದಿನ ವಿಷಯದ ಬಗ್ಗೆ ದಯವಿಟ್ಟು ತಿಳಿಸುವರೆ : ಅ) ಭಾರತದಲ್ಲಿ ಸಾರ್ವಜನಿಕ ಉಪಯೋಗಿ ಸಂಸ್ಥೆಗಳು ಬ್ರಿಟಿಷರ ಕೈಯಲ್ಲಿ ಎಷ್ಟು ಮತ್ತು ಉಳಿದ ಭಾರತೀಯರಲ್ಲದವರ ಹಿತಾಸಕ್ತಿಗಳಲ್ಲಿ ಎಷ್ಟು? ಮತ್ತು

ಆ) ಈ ಸಾರ್ವಜನಿಕ ಉಪಯೋಗಿ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಯಾವುದಾದರೂ ಪ್ರಯತ್ನಗಳನ್ನು ಕೈಗೊಂಡಿರುವರೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು (ಆ) ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ಸದನದ ಮುಂದೆ ಇಡಲಾಗುವುದು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೪ನೇ ಏಪ್ರಿಲ್, ೧೯೪೫. ಪುಟ ೨೪೨೮

## ೩೩೫
## ಭಾರತ ಸರ್ಕಾರದ ಮುದ್ರಣಾಲಯಗಳ ಲೆಕ್ಕಪತ್ರಗಳ ಪರಿಶೋಧನೆ *

**೧೫೯೩. ಶ್ರೀ ಕೆ. ಬಿ. ಜಿನರಾಜ ಹೆಗಡೆ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರರವನ್ನು ಹೇಳುವರೆ? : ಅ) ಮಹಾಲೇಖಪಾಲರು ಕೇಂದ್ರ ಸರ್ಕಾರದ ಮುದ್ರಣಾಲಯಗಳ ಲೆಕ್ಕಪತ್ರಗಳ ಪರಿಶೋಧನೆಯನ್ನು ಪ್ರತಿ ವರ್ಷವೂ ಮಾಡುವರೆ?

ಆ) ಈ ಪರಿಶೋಧನೆಯ ವರದಿಯನ್ನು ಇಲಾಖೆಯವರ ಪರಿಶೀಲನೆಗೆ ಮತ್ತು ಕ್ರಮಕೈಗೊಳ್ಳಲು ಕಳುಹಿಸಿಕೊಡುವರೆ? ಇಂಥ ವರದಿಗಳು ಕಳೆದ ಎರಡು ವರ್ಷಗಳಿಂದ ಬಂದಿವೆಯೆ? ಹಾಗಿದ್ದರೆ ಅವುಗಳ ಮೇಲೆ ಯಾವ ಕ್ರಮಕೈಕೊಳ್ಳಲಾಗಿದೆ? ಮತ್ತು

ಇ) ಕಳೆದ ಎರಡು ವರ್ಷಗಳು ಲೆಕ್ಕಪತ್ರಗಳಲ್ಲಿ ಪರಿಶೋಧನೆಯ ವರದಿಯಲ್ಲಿ ಭಯಂಕರವಾದ ಅಸಂಗತಗಳು ಇರುವುದೂ ಮತ್ತು ಅದರ ಮೇಲೆ ಯಾವ ಕ್ರಮವನ್ನೂ ಕೈಗೊಂಡಿಲ್ಲವೆಂಬುದೂ ನಿಜವೆ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? ಮತ್ತು

ಈ) ನವದೆಹಲಿ ಮುದ್ರಣಾಲಯದ ಕಳೆದ ಎರಡು ವರ್ಷಗಳ ಲೆಕ್ಕಪರಿಶೋಧನೆಯ ವರದಿಗಳ ಪ್ರತಿಗಳನ್ನು ಸರ್ಕಾರವು ಈ ಸದನದ ಮುಂದೆ ಇಡಲು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಮುದ್ರಣಾಲಯದ ಲೆಕ್ಕಪತ್ರಗಳು ಮಹಾಲೇಖಪಾಲಕರು ಕೇಂದ್ರ ರಾಜಸ್ವ ಇವರ ಹಾಗೂ ಇವರ ವತಿಯಿಂದ ಉಳಿದ ಮಹಾಲೇಖಪಾಲರು ಈ ಲೆಕ್ಕ ಪರಿಶೋಧನೆಯನ್ನು ಮಾಡಿದ್ದಾರೆ.

ಆ) ಲೆಕ್ಕಪರಿಶೋಧನೆಯ ವರದಿಯನ್ನು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಿಕೊಡಲಾಗಿದೆ. ಯಾವ ವಿಷಯಗಳ ಮೇಲೆ ಕಂದಾಯ ನಿರ್ಣಯ ರಾಜಿಮಾಡಿಕೊಳ್ಳಲು ಸಾಧ್ಯವಿಲ್ಲವೋ ಅಂಥ ವಿಷಯಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತಾರೆ.

ಇ) ೧೯೪೨–೪೩ ವರದಿಯಲ್ಲಿ ಹಾಗೂ ೧೯೪೨–೪೩ರ ವರದಿಯಲ್ಲಿ ಅನೇಕ ಅಸಂಗತಗಳು ಕಂಡುಬಂದಿವೆ. ಆ ವಿಷಯ ಈಗಲೂ ಪರಿಶೀಲನೆಯಲ್ಲಿ ಇದೆ. ೧೯೪೩–೪೪ ವರದಿಯು ಇತ್ತೀಚೆಗೆ ಕೈ ಸೇರಿದೆ. ಅದು ಭಾರತದ ಲೇಖನಸಾಮಗ್ರಿ ಮತ್ತು ಮುದ್ರಣ ಇಲಾಖೆಯ ನಿಯಂತ್ರಕನ ಪರಿಶೀಲನೆಯಲ್ಲಿದೆ.

ಈ) ಇಲ್ಲ. ಮಹಾಲೇಖಪಾಲಕರು ಮಹತ್ವದ ಸಂಗತಿಗಳನ್ನು ಆ ವರ್ಷದ ವಿನಿಯೋಗ ಖಾತೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಲೆಕ್ಕಪತ್ರಗಳು ಸಾರ್ವಜನಿಕ ಲೆಕ್ಕಪತ್ರಗಳ ಅಧಿಕಾರಿಗಳಿಂದ ಪರೀಕ್ಷಿಸಲ್ಪಡುತ್ತವೆ. ಮತ್ತು ಈಗಾಗಲೇ ಆ ವರದಿಯನ್ನು ಲೆಜಿಸ್ಲೇಟಿವ್ ಅಸೆಂಬ್ಲಿ (ಸದನದ) ಮುಂದೆ ಇಡಲಾಗಿದೆ.

**ಶ್ರೀ ಕೆ.ಬಿ. ಜಿನರಾಜ ಹೆಗಡೆ :** (ಈ) ವಿಷಯುವನ್ನು ಕುರಿತು ಮಾನ್ಯ ಸದಸ್ಯರು ಆ ಲೆಕ್ಕಪರಿಶೋಧನೆಯ ವರದಿಯನ್ನು ದಯವಿಟ್ಟು ಈ ಸದನದ ಮುಂದೆ ಇಡುವಿರೆಂದು ನಾನು ಭಾವಿಸಬಹುದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೪ನೇ ಏಪ್ರಿಲ್, ೧೯೪೫. ಪುಟ ೨೪೩೧

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಇದು ಆಗುವುದಿಲ್ಲ ಮತ್ತು ಅವಶ್ಯವಿಲ್ಲ. ಇವುಗಳನ್ನು ಸಾರ್ವಜನಿಕ ಲೆಕ್ಕಪತ್ರಗಳ ಕಮಿಟಿಯ ವರದಿಯಲ್ಲಿ ಸೇರಿಸಲಾಗಿದೆ.

**ಶ್ರೀ ಕೆ.ಬಿ. ಜಿನರಾಜ ಹೆಗಡೆ :** ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯಲ್ಲಿ ಈ ಲೆಕ್ಕ ಪರಿಶೋಧನೆಯ ವರದಿಗಳನ್ನು ಸಂಪೂರ್ಣವಾಗಿ ಕೊಡಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಅವಶ್ಯವಿರುವಷ್ಟು ಭಾಗವನ್ನು ಮಾತ್ರ ಅದರಲ್ಲಿ ಸೇರಿಸಿರುತ್ತಾರೆ.

## ೩೩೬
## ಕೇಂದ್ರ ಸರ್ಕಾರದ ನೌಕರರಿಗೆ ಮನೆಗಳನ್ನು ಒದಗಿಸಿಲ್ಲ *

**೧೬೦೬. ಸರದಾರ್ ಸಂತ್ ಸಿಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವರೆ : ದೆಹಲಿ ಮತ್ತು ನವದೆಹಲಿಯಲ್ಲಿ ಕೆಲಸ ಮಾಡುವ ಕೇಂದ್ರ ಸರ್ಕಾರದ ನೌಕರರಿಗೆ ಪ್ರತಿಶತ ಎಷ್ಟರಂತೆ ಮನೆಗಳನ್ನು ಒದಗಿಸಲಾಗಿದೆ ಮತ್ತು ತಿಂಗಳಿಗೆ ೬೦೦ ರೂಪಾಯಿಗಳಿಗಿಂತ ಕಡಿಮೆ ವೇತನವಿರುವವರಿಗೆ ಇಲ್ಲಿಯವರೆಗೆ ಸರ್ಕಾರವು ಯಾವುದೇ ಸ್ಥಳವನ್ನು ಕೊಟ್ಟಿಲ್ಲ.

ಆ) ಒಬ್ಬ ಸರಕಾರಿ ನೌಕರನ ಪಗಾರವು ತಿಂಗಳಿಗೆ ೬೦೦ ರೂ. ಗಿಂತ ಕಡಿಮೆ ಇದ್ದಾಗ ಅವನು ಈ ಸೌಲಭ್ಯದಿಂದ ವಂಚಿತವಾಗಿಲ್ಲವೆಂಬುದು ನಿಜ, ಆದರೆ ಒಮ್ಮೆ ಅವನು ಆ ಶ್ರೇಣಿಯಿಂದ ಹೊರಬಂದರೆ ಆಗ ಅವನಿಗೆ ಮೇಲು ತರಗತಿ ನಮೂನೆಯ ಸ್ಥಳಗಳನ್ನು ಒದಗಿಸಲಾಗುವುದೆ?

ಇ) ದೆಹಲಿ ಮತ್ತು ನವದೆಹಲಿಯಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರಿಗೆ ಸರ್ಕಾರದ ಮನೆಗಳ ಕಬ್ಜೆಯಲ್ಲಿರುವರು, ಈಗ ಒಂದು ಸರ್ಕಾರಿ ಕಚೇರಿಯಿಂದ ನವದೆಹಲಿಯ ಸರ್ಕಾರಿ ಕಚೇರಿಗೆ ಉದಾ : ಕೇಂದ್ರ ಸರಕಾರವನ್ನು ಮುಖ್ಯ ಸಚಿವಾಲಯದ ಕೃಷಿ ಸಂಸ್ಥೆ, ಪೂಸಾ, ನವದೆಹಲಿಯ ಸರಕಾರಿ ಮುದ್ರಣಾಲಯ, ಎ. ಜಿ. ಪಿ. ಅಂಡ್ ಟಿ. ಮುಂತಾದ ವಿಭಾಗಗಳಿಗೆ ವರ್ಗವಾಗಿ ಹೋಗುವವರು, ತಾಂತ್ರಿಕ ಕಾರಣಗಳಿಂದಾಗಿ ಈ ಸೌಲಭ್ಯದಿಂದ ವಂಚಿತರಾಗಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸುಮಾರು ೬೫ ಶೇಕಡಾ.

ಆ) ಹೌದು.

ಇ) ಬೇಕಾದ ಮಾಹಿತಿಯು ಸದ್ಯಕ್ಕೆ ಲಭ್ಯವಿಲ್ಲ. ಈ ಹಂತದಲ್ಲಿ ಇದನ್ನು ಸಂಗ್ರಹಿಸಲು ಕಷ್ಟಪಡುವ ಶ್ರಮವು ಸಾರ್ಥಕವಾಗುವಂತದ್ದಾಗುವುದಿಲ್ಲ. ಆದರೆ ನಾನು ಸನ್ಮಾನ್ಯ ಸದಸ್ಯರಿಗೆ ಹೇಳ ಬಯಸುವುದೇನೆಂದರೆ ಈಗ ವರ್ಗಮಾಡಿದ ಕೇಂದ್ರೀಯ ಮುದ್ರಣಾಲಯ, ಒಕ್ಕಲುತನ ಸಂಶೋಧನೆ ಸಂಸ್ಥೆ ಮತ್ತು ಎ. ಜಿ. ಪಿ. ಮತ್ತು ಟಿ. ವಿಭಾಗಗಳ ಸಿಬ್ಬಂದಿವರ್ಗವನ್ನು ಹೊರತುಪಡಿಸಿ ಉಳಿದವರಿಗೆ ಪ್ರತ್ಯೇಕ ಕಟ್ಟಡಗಳನ್ನು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೪ನೇ ಏಪ್ರಿಲ್, ೧೯೪೫. ಪುಟ ೨೪೩೯

ಕೂಡಿಹಾಕಿದ್ದು, ಸರ್ಕಾರದ ಒಂದು ಕಚೇರಿಯಿಂದ ನವದೆಹಲಿಯ ಇನ್ನೊಂದಕ್ಕೆ ವರ್ಗವಾದ ಯಾವುದೇ ಅಧಿಕಾರಿಯು ಕಟ್ಟಡವನ್ನು ಖಾಲಿಮಾಡುವ ಆವಶ್ಯಕತೆಯು ಇರುವುದಿಲ್ಲ.

## ೩೩೭

## ನವದೆಹಲಿಯಲ್ಲಿ ಒಂದು ಕಚೇರಿಯಿಂದ ಇನ್ನೊಂದಕ್ಕೆ ವರ್ಗವಾಗಿ ವಸತಿ ಸೌಕರ್ಯದಿಂದ ವಂಚಿತರಾದ ಕೇಂದ್ರ ಸರ್ಕಾರದ ನೌಕರರ ಸಂಕಷ್ಟಗಳು

**೧೬೦೭. ಸರ್‌ದಾರ್ ಸಂತ್ ಸಿಂಗ್ :** ಅ) ವಸತಿ ಸೌಕರ್ಯದ ಹಂಚಿಕೆಯಿಂದ ವಂಚಿತರಾದವರಲ್ಲಿ ಕೇಂದ್ರ ಸರ್ಕಾರದ ನೌಕರರು ೧೫ ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದವರು ದೆಹಲಿ ಮತ್ತು ನವದೆಹಲಿಯಲ್ಲಿ ಇರುವಂತಹ ಪ್ರಕರಣಗಳು ಸಾಕಷ್ಟು ಇರುವುದು ವಾಸ್ತವ ಸಂಗತಿಯೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೆ?

ಆ) ಈಗ ಇರುವ ಪರಿಸ್ಥಿತಿಯಲ್ಲಿ ಈ ಸರ್ಕಾರಿ ನೌಕರರು ಸರ್ಕಾರಿ ಮನೆಗಳನ್ನು ಪಡೆಯಲು ಪ್ರಾರಂಭದಲ್ಲಿಯೆ ಅನೇಕ ವರ್ಷಗಳವರೆಗೆ ನಿರೀಕ್ಷಣೆಗಾಗಿ ಕಾಯಬೇಕಾಗುತ್ತದೆ. ಕೆಲವರಿಗೆ ಅವರ ಸೇವಾ ಅವಧಿಯಲ್ಲಿ ಸರ್ಕಾರಿ ವಸತಿಗೃಹಗಳನ್ನು ಪುನಃ ಪಡೆಯುವ ಅವಕಾಶವೇ ಇರುವುದಿಲ್ಲವೆಂಬುದು ನಿಜವೆ?

ಇ) ದೆಹಲಿ ಮತ್ತು ನವದೆಹಲಿಯಲ್ಲಿ ಒಬ್ಬ ಸರ್ಕಾರಿ ನೌಕರರಿಗೆ ಸರ್ಕಾರಿ ಮನೆಯನ್ನು ಒದಗಿಸಲು ಹೆಚ್ಚು ಆಸ್ಪದ ಸಿಗುವಂತೆ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಎಂಬ ಭೇದವನ್ನು ತೆಗೆದುಹಾಕಲಾಗಿದೆಯೆಂಬುದು ನಿಜವೆ?

ಈ) ದೆಹಲಿ ಮತ್ತು ನವದೆಹಲಿಯಲ್ಲಿ ಮೇಲೆ (ಅ) ಮತ್ತು (ಆ) ದಲ್ಲಿ ಕಾಣಿಸಿದವರಿಗೆ ಅವರು ಕೇಂದ್ರ ಸರ್ಕಾರದಲ್ಲಿ ಸಲ್ಲಿಸಿದ ಒಟ್ಟು ಸೇವೆಯನ್ನು ಗಣನೆಗೆ ತೆಗೆದುಕೊಂಡು ಅವರಿಗೆ ವಸತಿಯ ಸೌಕರ್ಯವನ್ನು ಒದಗಿಸಲು ಸರ್ಕಾರವು ಯೋಚಿಸಿದೆಯೆ? ಹಾಗಿಲ್ಲದಿದ್ದರೆ ಯಾಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮುಖ್ಯ ಪ್ರಶ್ನೆ ನಂ. ೧೬೦೬ರ (ಇ)ಕ್ಕೆ ಕೊಟ್ಟ ಉತ್ತರವನ್ನು ಗಮನಿಸಬೇಕೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಆ) ಕೊನೆಯ ಪ್ರಶ್ನೆ ನನ್ನ ಉತ್ತರದಲ್ಲಿ ಕಾಣಿಸಿದ ಅಧಿಕಾರಿಗಳು ಸಾಮಾನ್ಯ ವರ್ಗದಲ್ಲಿ ತಮ್ಮ ಸರತಿಗಾಗಿ ಕಾಯಬೇಕಾಗುತ್ತದೆ. ಆದರೆ ಅವರು ಎಷ್ಟು ಕಾಲಕಾಯಬೇಕಾಗುತ್ತದೆಂಬುದನ್ನು ನಾನು ನಿಶ್ಚಿತವಾಗಿ ಹೇಳಲಾರೆ.

ಇ) ಹೌದು.

ಈ) ಸಾಮಾನ್ಯ ವರ್ಗದಲ್ಲಿ ಒಟ್ಟು ಸೇವೆಯೇ ನಿರ್ಣಾಯಕ ಸಂಗತಿ. ಒಂದು ನಿರ್ದಿಷ್ಟ ಗುಂಪಿನ ಹಿತಾಸಕ್ತಿಗಾಗಿ ನ್ಯಾಯಬದ್ಧವಾಗಿ ಈಗ ಇರುವ ನಿಯಮವನ್ನು ತಿದ್ದುಪಡಿ ಮಾಡಲು ಸರ್ಕಾರವು ಇಚ್ಛಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೪ನೇ ಏಪ್ರಿಲ್, ೧೯೪೫. ಪುಟ ೨೪೩೯

## ೩೩೮
## ದೆಹಲಿ ಮತ್ತು ನವದೆಹಲಿಗಳಲ್ಲಿ ಸರ್ಕಾರದ ಮನೆಗಳಲ್ಲಿ ವಾಸಿಸುವವರಿಗೆ ಖಸ್‌ಖಸ್ ಹುಲ್ಲು ಚಾಪೆಗಳನ್ನು ಪೂರೈಸಲು ಅರ್ಜಿಗಳು *

**೧೩೧. ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ: ಕಳೆದ ೧೯೪೫ರ ಬೇಸಿಗೆ ಕಾಲದಲ್ಲಿ ದೆಹಲಿ ಮತ್ತು ನವದೆಹಲಿಗಳಲ್ಲಿ ಸರ್ಕಾರದ ಮನೆಗಳಲ್ಲಿ ವಾಸಿಸುವ ಸರ್ಕಾರಿ ನೌಕರರು ತಮ್ಮ ನಿವಾಸಗಳಿಗೆ ಖಸ್‌ಖಸ್ ಹುಲ್ಲು ಚಾಪೆಗಳನ್ನು ಪೂರೈಸಬೇಕೆಂದು ವಿಧ್ಯುಕ್ತ ಅರ್ಜಿಗಳನ್ನು ಕೊಟ್ಟಿದ್ದರು. ೧೯೪೫ರ ಮಾರ್ಚ್ ೨೦ರಂದು ಅರ್ಜಿಗಳನ್ನು ಆಮಂತ್ರಿಸಿದ್ದರು. ಹೆಚ್ಚುವರಿ ಮುಖ್ಯ ಇಂಜಿನಿಯರುಗಳು, ಪಶ್ಚಿಮ ವಲಯ, ಕೇಂದ್ರೀಯ ಸಾರ್ವಜನಿಕ ಕೆಲಸಗಳ ವಿಭಾಗ. ಇವರು ಕ್ರಮ ಸಂಖ್ಯೆ ಡಬ್ಲ್ಯೂಎಚ್. ೩೭೦೮ ೧೯೪೫ರ ಮಾರ್ಚ್ ೧೩ನೆಯ ದಿನಾಂಕದ ತಮ್ಮ ಸುತ್ತೋಲೆಯ ಮೂಲಕ ಇವುಗಳ ಬಗ್ಗೆ ತಮಗೆ ತಿಳಿದಿದೆಯೆ?

ಆ) ಬೇಸಿಗೆಯ ಹಂಚಿಕೆಯನ್ನು ಇನ್ನೂ ಪ್ರಕಟಿಸಿಲ್ಲ.

ಇ) ಮೇಲಣ (ಆ) ದಲ್ಲಿ ಯುದ್ಧಕ್ಕೆ ಉತ್ತರವು ದೃಢೀಕಾರಕವಾಗಿದ್ದರೆ ಆ ಸರ್ಕಾರಿ ನೌಕರರಿಗೆ ೧೯೪೫ ಏಪ್ರಿಲ್ ನಂತರ ಕಟ್ಟಡಗಳನ್ನು ಹಂಚಲಾಗುವುದೊ ಅಥವಾ ಸದ್ಯಕ್ಕೆ ಯಾರಿಗೂ ಇಲ್ಲವೊ? ಅಂಥ ಕಟ್ಟಡಗಳಿಗೆ ಖಸ್‌ಖಸ್ ಚಾಪೆಗಳನ್ನು ಪೂರೈಸುವ ಅವಧಿಯನ್ನು ವಿಸ್ತರಿಸಲಾಗುವುದೆ? ಹಾಗೆ ಮಾಡದಿದ್ದರೆ ಯಾಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಇತ್ತೀಚಿಗಿನ ನಿಯಮದ ಅನ್ವಯ ಈ ಋತುವಿನ ಹಂಚಿಕೆಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲವಾದ್ದರಿಂದ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಸರ್ಕಾರಿ ನೌಕರರಿಗೆ ಯಾರಿಗೆ ಈಗ ಸರ್ಕಾರಿ ಕಟ್ಟಡಗಳು ಇರುವುದಿಲ್ಲವೊ ಹಾಗೂ ಯಾರಿಗೆ ಏಪ್ರಿಲ್‌ನಲ್ಲಿ ಕಟ್ಟಡಗಳನ್ನು ಹಂಚಿಕೆ ಮಾಡಲಾಗುವುದೊ ಅವರು ಖಸ್‌ಖಸ್ ಚಾಪೆಗಳ ಪೂರೈಕೆಗೆ ಕೋರಿಕೆಯನ್ನು ಸಲ್ಲಿಸಲು ಏಪ್ರಿಲ್ ತಿಂಗಳ ಕೊನೆಯವರೆಗೆ ಅವಧಿ ವಿಸ್ತರಿಸಲಾಗುವುದು ಇಂತಹ ತಟ್ಟಿಗಳನ್ನು ಪೂರೈಸುವಲ್ಲಿ ಸ್ವಲ್ಪ ತಡವಾದರೂ ಅವು ಅವಶ್ಯಕವಾಗಿವೆ.

## ೩೩೯
## ಕಾರ್ಮಿಕ ಇಲಾಖೆಯಿಂದ ತೆರೆಯಲಾದ ತಾಂತ್ರಿಕ ಕೇಂದ್ರಗಳು **

**೧೬೯೭ ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಹೇಳುವರೆ : ಕಾರ್ಮಿಕ ಇಲಾಖೆಯಿಂದ ಎಷ್ಟು ತಾಂತ್ರಿಕ ಕೇಂದ್ರಗಳನ್ನು ತೆರೆಯಲಾಗಿದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೪ನೇ ಏಪ್ರಿಲ್, ೧೯೪೫. ಪುಟ ೨೪೪೯

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೧೧

೧) ಮುಸ್ಲಿಮ್ ಸಂಸ್ಥೆಗಳ ಸಹಯೋಗದೊಂದಿಗೆ ಎಷ್ಟು?

೨) ಮುಸ್ಲಿಮೇತರ ಸಂಸ್ಥೆಗಳ ಸಹಯೋಗದೊಂದಿಗೆ ಎಷ್ಟು?

೩) ಇಂಜಿನಿಯರಿಗ್ ಸಂಸ್ಥೆಗಳಲ್ಲಿ ಸ್ವತಂತ್ರ ಸಂಸ್ಥೆಗಳ ಸಹಯೋಗದೊಂದಿಗೆ ಎಷ್ಟು ಕೇಂದ್ರಗಳನ್ನು ತೆಗೆಯಲಾಗಿದೆಯೆಂಬ ಸಂಗತಿಯನ್ನು ತಿಳಿಸುವಿರಾ?

ಆ) (೩)ನೆಯ ವರ್ಗದಲ್ಲಿ ಮುಸಲ್ಮಾನ ಸಂಸ್ಥೆಗಳ ಆಡಳಿತದಲ್ಲಿ ಮತ್ತು ಮುಸಲ್ಮಾನೇತರ ಆಡಳಿತದಲ್ಲಿರುವ ಸಂಸ್ಥೆಗಳು ಎಷ್ಟು?

ಇ) ಸನ್ಮಾನ್ಯ ಸದಸ್ಯರು (೧) (೨) ಮತ್ತು (೩) ಈ ವರ್ಗಗಳಲ್ಲಿ ಕಾಣಿಸದ ಎಲ್ಲ ತಾಂತ್ರಿಕ ಕೇಂದ್ರಗಳ ಹೆಸರುಗಳನ್ನು ಈ ಸದನದ ಮುಂದೆ ಇಡಬಯಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) (೧) ೫ (೨) ೭೪ (೩) ಸ್ವತಂತ್ರ ಸಂಸ್ಥೆಗಳೆಂದರೆ ಖಾಸಗಿ ಸಂಸ್ಥೆಗಳು ೩೬.

ಆ) ೩೬ ರಲ್ಲಿ ೨ಸಂಪೂರ್ಣವಾಗಿ ಮುಸಲ್ಮಾನರ ಆಡಳಿತದಲ್ಲಿವೆ.

ಇ) ಈ ಬಗ್ಗೆ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ.

### ಹೇಳಿಕೆ

೧. ಮುಸಲ್ಮಾನ ಸಂಸ್ಥೆಯ ಸಹಯೋಗದೊಂದಿಗೆ ತಾಂತ್ರಿಕ ತರಬೇತಿ ಕೇಂದ್ರಗಳು.

ಅ) ಇಂಜಿನಿಯರಿಂಗ್

೧) ಅಬ್ದುಲ್ಲಫಜಲ್‌ಭಾಯ್ ತಾಂತ್ರಿಕ ಸಂಸ್ಥೆ, ಸೇಂಟ್ ಝೇವಿಯರ್ ಕಾಲೇಜ್, ಮುಂಬೈ.

೨) ಆಂಗ್ಲೋ ಅರೆಬಿಕ್ ಕಾಲೇಜ್ ತಾಂತ್ರಿಕ ಸಂಸ್ಥೆ, ದೆಹಲಿ.

೩) ಮುಸ್ಲಿಮ್ ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜು, ಅಲಿಘಡ.

ಆ) ಇಂಜಿನಿಯರಿಂಗ್ ಅಲ್ಲದ್ದು.

೪) ಅಂಜುಮನ್ ಔದ್ಯಮಿಕ ಶಾಲೆ, ಮದ್ರಾಸ್.

೫) ಶಿಯಾ ಇಂಟರ್‌ಮೀಡಿಯೇಟ್ ಕಾಲೇಜ್, ಲಕ್ನೋ.

೨. ಮುಸಲ್ಮಾನೇತರ ಸಂಸ್ಥೆಗಳ ಸಹಯೋಗದೊಂದಿಗಿನ ತಾಂತ್ರಿಕ ತರಬೇತಿ ಕೇಂದ್ರಗಳು (ಪ್ರಾಂತೀಯ ಸರ್ಕಾರ ಹಾಗೂ ರಾಜ್ಯಗಳಿಂದ ಮತ್ತು ರೇಲ್ವೆ ಕಾರ್ಖಾನೆಯ ಸಹಯೋಗದೊಂದಿಗೆ ನಡೆಯಿಸುತ್ತಿರುವವನ್ನು ಹೊರತುಪಡಿಸಿ)

ಅ) ಇಂಜಿನಿಯರಿಂಗ್

೧) ಬಿ. ಪಿ. ಚಡಿ ತಾಂತ್ರಿಕ ಶಾಲೆ, ಕೃಷ್ಣಾನಗರ.

೨) ಇಂಜಿನಿಯರಿಂಗ್ ಮತ್ತು ಯಂತ್ರ ವೈಜ್ಞಾನಿಕ ಕಾಲೇಜು, ಬಂಗಾಳ.

೩) ಡಿ. ಜಿ. ಔದ್ಯಮಿಕ ಶಾಲೆ, ರಾಜಶಾಹಿ.

೪) ಡಾನ್ ಬಾಸ್ಕೋ ತಾಂತ್ರಿಕ ಶಾಲೆ, ಕೃಷ್ಣಾನಗರ.

೫) ಆಯ್. ಜಿ. ಎನ್. ಕಂ. ಲಿ. ಸೋನಾಚಾರ ಕಾರ್ಖಾನೆ, ನಾರಾಯಣಗಂಜ್.

೬) ಕೆ.ಕೆ. ತಾಂತ್ರಿಕ ಶಾಲೆ, ಮೈಮನ್ ಸಿಂಗ್.

**ಶ್ರೀ ಟಿ.ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಈ ತಾಂತ್ರಿಕ ಕೇಂದ್ರಗಳ ಸ್ವರೂಪವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತಾಂತ್ರಿಕ ತರಬೇತಿಯನ್ನು ಕೊಡುವ ಕೇಂದ್ರಗಳಾಗಿವೆ.

**ಶ್ರೀ. ಟಿ. ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಯಾವ ಉದ್ಯಮಗಳಲ್ಲಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅನೇಕ ವ್ಯಾಪ್ತಿಗಳನ್ನು ಕುರಿತು.

**ಸರ್ ಮುಹಮ್ಮದ್ ಯಾಮೀನ್ ಖಾನ್ :** ಅವುಗಳಲ್ಲಿ ಅಲಿಘಡವೂ ಒಂದಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ನಿಜವಾಗಿಯೂ.

## ೩೪೦
## ಯುದ್ಧತಂತ್ರಜ್ಞರ ತರಬೇತಿಕೇಂದ್ರ ಅಥವಾ ಸ್ವಾಗತ ಕೇಂದ್ರ ತೆಗೆಯುವುದು *

**೧೬೯೮. ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ಯುದ್ಧತಂತ್ರಜ್ಞರ ತರಬೇತಿಕೇಂದ್ರ ಇಲ್ಲವೆ ಸ್ವಾಗತ ಕೇಂದ್ರ ತೆಗೆಯುವ ಆಲೋಚನೆಯು ಇದೆಯೆ? ಹಾಗಿದ್ದಲ್ಲಿ ಯಾವ ಸ್ಥಳಗಳಲ್ಲಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನೇಮಕಗೊಂಡ ನಾಗರಿಕ ಅಭ್ಯರ್ಥಿಗಳನ್ನು ಹೆಚ್ಚಿನ ತರಬೇತಿಗೆ ಬೇರೆ ಕೇಂದ್ರಗಳಿಗೆ ಕಳುಹಿಸುವ ಮುನ್ನ ಅವರಿಗೆ ಅಲ್ಪಕಾಲದ ತರಬೇತಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರಕಾರವು ಯೋಚಿಸುತ್ತಿದೆ. ಈಗಾಗಲೇ ಮಂಜೂರಾದ ಇಂತಹ ಕೇಂದ್ರಗಳ ಸಾಮರ್ಥ್ಯ ಮತ್ತು ಅವುಗಳ ಸ್ಥಳಗಳ ವಿವರಗಳನ್ನೊಳಗೊಂಡ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಈ ಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರು ತಾವೇ ಆ ಹೇಳಿಕೆಯನ್ನು ನೋಡಬಹುದು. ನಾನು ಹೇಳಿಕೆಯನ್ನು ಸದನದ ಮುಂದೆ ಇಡುತ್ತಿದ್ದೇನೆ.

**ಮಾಲ್ವಿ ಮಹಮ್ಮದ್ ಅಬ್ದುಲ್ ಘನಿ :** ಇಂತಹ ಸ್ವಾಗತ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಇಲ್ಲಿ ಲೆಕ್ಕ ಮಾಡಲಾರೆ.

**ಮಾನ್ಯ ಅಧ್ಯಕ್ಷರು** (ಗೌರವಾನ್ವಿತ ಸರ್ ಅಬ್ದುರ್ ರಹೀಮ್) : ಸನ್ಮಾನ್ಯ ಸದಸ್ಯರು ಸದನದ ಮುಂದಿರುವ ಪಟ್ಟಿಯನ್ನು ಅವಲೋಕಿಸುವುದು ಲೇಸು.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಅದು ಅಷ್ಟೊಂದು ದೊಡ್ಡ ಪಟ್ಟಿಯಾಗಿಲ್ಲ .

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಪಟ್ಟಿಯ ಸಾಕಷ್ಟು ದೊಡ್ಡದಾಗಿದೆ ಅಧ್ಯಕ್ಷರು ಅನುಮತಿಯನ್ನು ಕೊಡದೆ ನಾನು ಅದನ್ನು ಪೂರ್ತಿಯಾಗಿ ಓದಲಾರೆನು. ಭಾರತವನ್ನು ಉತ್ತರ ವಲಯ, ಮಧ್ಯ ವಲಯ, ಈಶಾನ್ಯ ವಲಯ ಮತ್ತು ಆಗ್ನೇಯ ವಲಯ, ಪೂರ್ವವಲಯ, ಪಶ್ಚಿಮ ವಲಯ ಮತ್ತು ದಕ್ಷಿಣ ವಲಯ ಎಂದು ವಿಭಜಿಸಲಾಗಿದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಅವುಗಳ ಮುಖ್ಯ ಕೇಂದ್ರ ಸ್ಥಾನಗಳಾವುವು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೧೪

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ತರಬೇತಿ ಕೊಡುವ ಮುಖ್ಯ ಕೇಂದ್ರಗಳು ಉತ್ತರ ವಲಯ ಲಾಯಿಲ್ಲಪುರ ಮತ್ತು ಸೋನೆಪತ್, ಮಧ್ಯ ವಲಯ–ದೆಹಲಿ ಅಕೋಲಾ ಇಲ್ಲವೆ ನಾಗಪುರ್ ಈಶಾನ್ಯ ವಲಯ. ಅಲಿಘಢ ನೈರುತ್ಯ ವಲಯ ಗುಲ್ಜಾರ ಬಾಗ್ (ಪಾಟ್ನಾ) ಮತ್ತು ಕಟಕ ಪೂರ್ವವಲಯ ಹುಗ್ಲಿ ಪಶ್ಚಿಮ ವಲಯ ವರ್ಲಿ (ಬಾಂಬೆ) ಮತ್ತು ಹುಬ್ಬಳ್ಳಿ ವಲಯ ಮದ್ರಾಸ್, ಬಿಜವಾಡ, ತ್ರೀವೇಂದ್ರಮ್ ಮತ್ತು ಕೊಯಂಬತ್ತೂರ್.

## ೩೪೧
## ಉತ್ತರ ಪ್ರದೇಶದ ತಾಂತ್ರಿಕ ಕೇಂದ್ರಗಳನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿಗೊಳಿಸುವುದು*

**೧೬೯. ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಹೇಳುವಿರಾ : ಉತ್ತರ ಪ್ರದೇಶದಲ್ಲಿಯ ತಾಂತ್ರಿಕ ತರಬೇತಿ ಕೇಂದ್ರಗಳನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದ ಆಲೋಚನೆಯಲ್ಲಿರುವುದೇ? ಸರ್ಕಾರವು ಎರಡು ತರಬೇತಿ ಕೇಂದ್ರಗಳನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿಪಡಿಸಲು ದಯಾಲ್‌ಬಾಗ್ ಮತ್ತು ಬನಾರಸ್ ವಿಶ್ವವಿದ್ಯಾಲಯಗಳನ್ನು ಆಯ್ಕೆಮಾಡಿರುವುದು ನಿಜವೇ? ಈ ಕೇಂದ್ರಗಳನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿಪಡಿಸಲು ದಯಾಲ್‌ಬಾಗ್ ಮತ್ತು ಬನಾರಸ್ ವಿಶ್ವವಿದ್ಯಾಲಯಗಳನ್ನು ಆಯ್ಕೆಮಾಡಿರುವುದು ನಿಜವೇ? ಈ ಕೇಂದ್ರಗಳ ಪಟ್ಟಿಯಲ್ಲಿ ಅಲಿಘಢ ಮುಸ್ಲಿಮ್ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಕಾಲೇಜನ್ನು ಕೈ ಬಿಡಲಾಗಿದೆಯೆಂಬ ವಿಷಯವು ಮಾನ್ಯ ಸದಸ್ಯರಿಗೆ ವಿದಿತವಿದೆಯೆ?

ಆ) ಮುಸ್ಲಿಮ್ ಲೀಗ್ ಪಕ್ಷದ ವಿಶೇಷ ವಿನಂತಿಯ ಮೇರೆಗೆ ಅಲಿಘಢ ಕೇಂದ್ರವನ್ನು ಆ ಪಟ್ಟಿಯಲ್ಲಿ ಸೇರಿಸಿದ್ದು ನಿಜವೇ? ಯುದ್ಧ ತಾಂತ್ರಿಕಜ್ಞರ ಸಲಹೆಗಾರರ ವರ್ಗದಲ್ಲಿ ಒಬ್ಬರು ಮುಸಲ್ಮಾನರೆಂಬುವುದು ನಿಜವೇ? ಉತ್ತರವು ನಿಷೇಧಾತ್ಮಕವಿದ್ದರೆ ಮುಸಲ್ಮಾನ ಇನ್‌ಸ್ಪೆಕ್ಟರ್‌ರು ಎಷ್ಟು ಜನರಿದ್ದಾರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಸಂಯುಕ್ತ ಪ್ರಾಂತದಲ್ಲಿಯೇ ಆಗಲಿ ಇಲ್ಲವೆ ಯಾವುದೇ ಕೇಂದ್ರವನ್ನು ಈಗ ಅಭಿವೃದ್ಧಿ ಕಾರ್ಮಿಕ ಇಲಾಖೆಯ ವತಿಯಿಂದ ಸಂಯುಕ್ತ ಪ್ರಾಂತದಲ್ಲಿಯೇ ಆಗಲಿ ಇಲ್ಲವೆ ಬೇರೆ ಯಾವ ಕಡೆಯೇ ಆಗಲಿ ಯಾವುದೇ ತರಬೇತಿ ಕೇಂದ್ರವನ್ನು ವಿವಿಧ ಔದ್ಯೋಗಿಕ ಸಂಸ್ಥೆಗಳನ್ನಾಗಿ ಅಭಿವೃದ್ಧಿ ಪಡಿಸುವ ಆಲೋಚನೆಯು ಈಗ ಸರ್ಕಾರದ ಮುಂದೆ ಇಲ್ಲ. ಆದ್ದರಿಂದ ಯಾವುದೇ ಕೇಂದ್ರವನ್ನು ಆಯ್ಕೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆ) ಪ್ರಶ್ನೆಯ (ಅ) ಭಾಗಕ್ಕೆ ಕೊಟ್ಟ ಉತ್ತರದಿಂದ (ಆ) ಪ್ರಶ್ನೆಯ ಮೊದಲನೆಯ ಭಾಗವು ಉದ್ಭವಿಸುವುದಿಲ್ಲ. ತಾಂತ್ರಿಕ ತರಬೇತಿ ಯೋಜನೆಯ ಪ್ರಾದೇಶಿಕ ಇನ್‌ಸ್ಪೆಕ್ಟರ್‌ರಾಗಿ ಯಾವುದೇ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ೯ನೇ ಏಪ್ರಿಲ್ ೧೯೪೫, ಪುಟ ೨೬೧೪

ಮುಸಲ್ಮಾನನು ಇರುವುದಿಲ್ಲ ಮತ್ತು ಯಾವುದೇ ಅಧಿಕಾರಿಗಳನ್ನು ಸಲಹೆಗಾರರೆಂದು ನಾಮಕರಣ ಮಾಡಿಲ್ಲ.

## ೩೪೨
## ಔದ್ಯಮಿಕ ಸ್ಥಾವರಗಳಲ್ಲಿ ಉಪಾಹಾರ ಗೃಹಗಳನ್ನು ಹಾಗೂ ಕೆಫೆಟೇರಿಯಾಗಳನ್ನು ಪ್ರಾರಂಭಿಸುವುದು*

**೧೭೦೦. ಶ್ರೀ ಕೆ. ಬಿ. ಜಿನರಾಜ ಹೆಗಡೆ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಹೇಳುವಿರಾ : ಅ) ಎಲ್ಲ ಔದ್ಯಮಿಕ ಸ್ಥಾಪನೆಗಳಲ್ಲಿ ಅವುಗಳ ಮಾಲೀಕರಿಂದ ಅಗ್ಗದ ದರದಲ್ಲಿ ಆಹಾರವನ್ನು ಪೂರೈಸಲು ಸರ್ಕಾರವು ಅವರಿಗೆ ಉಪಾಹಾರಗೃಹ ಮತ್ತು ಕಾಫಿಗೃಹಗಳನ್ನು ಪ್ರಾರಂಭಿಸಲು ಉತ್ತೇಜನ ಕೊಡುವುದೆ?

ಆ) ಇಂತಹವುಗಳಲ್ಲಿ ಎಷ್ಟು (೧) ಉಪಹಾರಗೃಹಗಳು ಮತ್ತು (೨) ಕಾಫಿಗೃಹಗಳು ದೇಶದಲ್ಲಿ ೧೯೪೪–೪೫ರಲ್ಲಿ ಸ್ಥಾಪಿಸಲ್ಪಟ್ಟವು.

ಇ) ದೇಶದಲ್ಲಿ ಫ್ಯಾಕ್ಟರಿ ಆರ್ಡಿನೆನ್ಸ್ ಜಾರಿಯಲ್ಲಿ ತಂದಿರುವುದರಿಂದ ಕಾರ್ಮಿಕರಿಗೆ ಸರ್ಕಾರವು ಯಾವುದೇ ಸೌಲಭ್ಯವನ್ನು ಒದಗಿಸಿದೆಯೆ?

ಈ) ಅರವಂಕಡಾ ಕಾರ್ಖಾನೆಯ ಕಾರ್ಮಿಕರು ಸರ್ಕಾರದಿಂದ ಇಂತಹ ಸೌಲಭ್ಯಗಳಿಗಾಗಿ ಬೇಡಿಕೆ ಮಂಡಿಸಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ? ಮತ್ತು

ಎ) ಅರವಂಕಡಾ ಕಾರ್ಮಿಕರಿಗೆ ಸರ್ಕಾರವು ಈ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಉಪಾಹಾರ ಮತ್ತು ಕಾಫಿಗೃಹಗಳ ಬಗ್ಗೆ ಪ್ರತ್ಯೇಕವಾದ ಅಂಕಿ–ಅಂಶಗಳು ದೊರಕುತ್ತಿಲ್ಲ. ೧೯೪೪ರ ಕೊನೆಯ ವೇಳೆಗೆ ೩೦೫ ಸಿದ್ಧ ಆಹಾರವನ್ನು ಒದಗಿಸುವಂತವೂ ಮತ್ತು ಉಳಿದವುಗಳು ಉಪಾಹಾರದವುಗಳೂ ಆಗಿದ್ದವು.

ಇ) ಹೌದು.

ಈ) ಇಲ್ಲ.

ಉ) ಕಾರ್ಖಾನೆಗಳಲ್ಲಿ ಈಗಾಗಲೇ ಚಹಾ ಹಾಗೂ ಅಲ್ಪೋಪಹಾರಗಳನ್ನು ಮಾರಲು ಸೌಕರ್ಯಗಳು ಇವೆ. ಸಾಕಷ್ಟು ಪ್ರಮಾಣದಲ್ಲಿ ಊಟದ ಬಗ್ಗೆ ಬೇಡಿಕೆ ಬಂದರೆ ಊಟವನ್ನು ಒದಗಿಸಲು ಸಹ ಆಲೋಚಿಸಲಾಗುವುದು.

**ಶ್ರೀ ಕೆ.ಬಿ. ಜಿನರಾಜ ಹೆಗಡೆ :** ಇಂತಹ ಸೌಲಭ್ಯ ದೊರೆಯಬೇಕಾದರೆ ಎಷ್ಟು ಜನ ಕಾರ್ಮಿಕರು ಅರ್ಜಿ ಹಾಕಿಕೊಳ್ಳಬೇಕು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅವರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರೆ ನಿಶ್ಚಿತವಾಗಿಯೂ ಅದನ್ನು ವಿಚಾರಿಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ೯ನೇ ಏಪ್ರಿಲ್ ೧೯೪೫, ಪುಟ ೨೬೧೫

**ಶ್ರೀ ಕೆ.ಬಿ. ಜಿನರಾಜ ಹೆಗಡೆ :** ಎಷ್ಟು ಜನ ಕಾರ್ಮಿಕರು ಕೂಡಿ ಅರ್ಜಿ ಮಾಡಬೇಕು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಂತಹ ಬೇಡಿಕೆಗಾಗಿ ಕನಿಷ್ಠ ಇಂತಿಷ್ಟೇ ಜನ ಇರಬೇಕೆಂದು ನಿಗದಿಪಡಿಸಿಲ್ಲ.

**ಪ್ರೊ॥ ಎನ್.ಜಿ. ರಂಗ :** ಕಾರ್ಮಿಕರಿಗೆ ಇಂತಹ ಸೌಲಭ್ಯಗಳನ್ನು ಒದಗಿಸಿಕೊಡುವುದು ಕಲ್ಯಾಣ ಅಧಿಕಾರಿಗಳ ಕರ್ತವ್ಯಗಳಲ್ಲಿ ಒಂದಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ಅದರ ಬಗೆಗೆ ಯೋಚಿಸುತ್ತಿದ್ದೇವೆ.

## ೩೪೩
## ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಕೆಲಸಗಾರರಿಗೆ ತುಟ್ಟಿಭತ್ಯೆ ಮತ್ತು ವೇತನಶ್ರೇಣಿಗಳನ್ನು ಹೆಚ್ಚಿಸುವುದು *

**೧೭೦೬. ಖಾಜಿ ಮುಹಮ್ಮದ್ ಅಹ್ಮದ್ ಕಜ್ಮಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಪ್ರಸ್ನೆಗಳಿಗೆ ಉತ್ತರವನ್ನು ಹೇಳುತ್ತಾರೆಯೆ : ೧) ಭಾರತ ಸರ್ಕಾರದ ಮುದ್ರಣಾಲಯದ ಕಾರ್ಮಿಕ ಸಂಘಗಳು ತಮ್ಮದೇ ಆದ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? (೨) ಭಾರತ ಸರ್ಕಾರಿ ಮುದ್ರಣಾಲಯದ ಕಾರ್ಮಿಕ ಸಂಘಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಒಂದು ಹೇಳಿಕೆಯನ್ನು ಹೊರಡಿಸಿ, ಅದರಲ್ಲಿ ಕಾರ್ಮಿಕ ಬವಣೆಯನ್ನು ತಿಳಿಸಿ, ಅವರ ತುಟ್ಟಿಭತ್ಯೆ ಮತ್ತು ವೇತನಶ್ರೇಣಿಗಳನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುವು ಸರ್ಕಾರದ ಗಮನಕ್ಕೆ ಬಂದಿದೆಯೆ? ಮತ್ತು

ಆ) ಪ್ರಶ್ನೆ (ಅ)ದ ಉತ್ತರವು ಸರಕಾರಾತ್ಮಕವಾಗಿದ್ದರೆ ಈ ಹೇಳಿಕೆಯ ನಂತರ ಈ ಬಗ್ಗೆ ಸರ್ಕಾರವು ಯಾವುದಾದರೂ ಕ್ರಮಕೈಗೊಂಡಿದೆಯೆ?

ಇಲ್ಲದಿದ್ದಲ್ಲಿ ಇದರ ಬಗ್ಗೆ ಯಾವಾಗ ಮತ್ತು ಯಾವ ರೀತಿ ಕ್ರಮಕೈಗೊಳ್ಳಬೇಕೆಂದು ವಿಚಾರಿಸಿರುವಿರಿ? ಹಾಗೆ ಇಲ್ಲದಿದ್ದಲ್ಲಿ ಯಾಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) (೧) ಮತ್ತು (೨) ಹೌದು.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೧೯

# ೩೪೪
# ಅಭ್ರಕದ ಗಣಿಗಳಲ್ಲಿ ಭಾರತೀಯರ ಹಿತಾಸಕ್ತಿಯನ್ನು ಕಾಪಾಡುವುದು *

**೧೭೭೯. ಪ್ರೊ॥ ಎನ್.ಜಿ. ರಂಗಾ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳಿಕೆಯನ್ನು ನೀಡುತ್ತಾರೆಯೆ? ೧೯೪೫ರ ಮಾರ್ಚ್ ೧೬ರಂದು ಫ್ರೀ ಪ್ರೆಸ್ ಜರ್ನಲ್‌ನಲ್ಲಿ ಪ್ರಕಟವಾದ ಒಂದು ಲೇಖನವು'ಭಾರತವು ಅಭ್ರಕದ ಉತ್ಪಾದನೆಯಲ್ಲಿ ಪ್ರಮುಖ ದೇಶ' ಲೇಖನದಲ್ಲಿ ಬ್ರಿಟಿಷರು ಹಾಗೂ ಅಮೇರಿಕನ್ನರು ಭಾರತದ ಅಭ್ರಕ ಗಣಿಗಳ ಮೇಲೆ ಹತೋಟಿ ಸಾಧಿಸಲು ಯತ್ನಿಸುತ್ತಿದ್ದಾರೆ ಎಂದು ಹೇಳಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಇದು ನಿಜವಾಗಿದ್ದಲ್ಲಿ ಈಗ ಸದ್ಯಕ್ಕೆ ಅಭ್ರಕದ ಉದ್ಯಮದಲ್ಲಿ ತೊಡಗಿದ ಭಾರತೀಯ ಮತ್ತು ಭಾರತೀಯ ಜಾಯಿಂಟ್ ಸ್ಟಾಕ್ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡಲು ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಕೊಳ್ಳಲಾಗಿದೆ?

ಇ) ಭಾರತದಲ್ಲಿ ಅಭ್ರಕದ ಗಣಿಗಳ ಉದ್ಯಮದಲ್ಲಿ ಎಷ್ಟು ಭಾರತೀಯ ಜಾಯಿಂಟ್ ಸ್ಟಾಕ್ ಕಂಪನಿಗಳು ಆಸಕ್ತಿ ಹೊಂದಿವೆ?

ಈ) ಮೂಲಧನಗಳ ನಿಯಂತ್ರಕರು (ಕಂಟ್ರೋಲರ್ ಆಫ್ ಕ್ಯಾಪಿಟಲ್ ಇಷ್ಯೂಸ್) ಇವರಿಗೆ ಹೊಸ ಅಭ್ರಕದ ಕಂಪನಿಗಳನ್ನು ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಗಳು ಬಂದಿವೆಯೆ? ಅಭ್ರಕದಲ್ಲಿ ಆಸಕ್ತಿ ಹೊಂದಿದವರಿಗೆ ಪರವಾನಗಿಯನ್ನು ಕೊಡಲಾಗಿದೆಯೇ? ಹಾಗಿದ್ದಲ್ಲಿ ಯಾರು ಯಾರಿಗೆ?

ಉ) ಭಾರತೀಯರ ಹಿಡಿತದಲ್ಲಿರುವ ಅಭ್ರಕದ ಉದ್ಯಮಗಳಿಗೆ ಹೆಚ್ಚು ಬಲಾಢ್ಯವಾದ ಬ್ರಿಟನ್ ಮತ್ತು ಅಮೇರಿಕೆಯ ಆಸಕ್ತಿಯು ಯಾವುದೇ ಬೆದರಿಕೆಯನ್ನು ಒಡ್ಡಿದಲ್ಲಿ ಈ ಉದ್ಯಮಗಳನ್ನು ರಕ್ಷಿಸಲಾಗುವುದೆಂದು ಮತ್ತು ಈಗ ಇರುವ ಭಾರತೀಯರ ಹಕ್ಕುಗಳಿಂದ ಅವರನ್ನು ವಂಚಿಸಲಾಗುವುದಿಲ್ಲ ಎಂದು ಸರ್ಕಾರವು ಭರವಸೆಯನ್ನು ಕೊಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ದಿನಾಂಕ ೧೬ ನೆಯ ಮಾರ್ಚ್ ೧೯೪೫ರ ಫ್ರೀ ಪ್ರೆಸ್ ಜರ್ನಲ್‌ದಲ್ಲಿನ ಆ ಲೇಖನವು ನಮಗೆ ಈಗ ಸಿಗದಾಗಿದೆ.

ಆ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ೧೯೪೩ರ ಮಾರ್ಚ್ ೩೧ರ ವಾರ್ಷಿಕ ವರದಿಯು ಕೈಸೇರಿದ್ದರ ಮೇಲಿಂದ ಆ ಸಂಖ್ಯೆ ಇಪ್ಪತ್ತು. ನಂತರದ ಅವಧಿಯ ಮಾಹಿತಿಯು ಲಭ್ಯವಿರುವುದಿಲ್ಲ.

ಈ) ಮೂಲಧನಗಳ ಪರೀಕ್ಷಕರಿಗೆ (ಕಂಟ್ರೋಲರ್ ಆಫ್ ಕ್ಯಾಪಿಟಲ್ ಇಷ್ಯೂಸ್) ಕೆಲವು ಅರ್ಜಿಗಳು ಬಂದಿದೆ. ಅವುಗಳಲ್ಲಿ ಕೆಲವು ಪ್ರಕರಣಗಳಲ್ಲಿ ಪರವಾನಗಿಯನ್ನು ಕೊಡಲಾಗಿದೆ. ಯಾವ ಇಂತಹ ಯಾವ ವಾಣಿಜ್ಯ ಸಂಸ್ಥೆಯವರ ಸಂಗಡ ಅವರು ವ್ಯವಹರಿಸುತ್ತಿದ್ದಾರೆಂಬುದನ್ನು ಬಹಿರಂಗಪಡಿಸುವ ಪದ್ಧತಿಯು ಆ ಇಲಾಖೆಯಲ್ಲಿ ಇರುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೧೯

ಉ) ಭಾರತೀಯ ಅಭ್ರಕದ ಉದ್ಯಮವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟುವ ಆವಶ್ಯಕತೆಯು ಇದೆಯೆಂಬುದು ಸರ್ಕಾರಕ್ಕೆ ಅರಿವಿದೆ. ಆದ್ದರಿಂದ ಅಭ್ರಕದ ಉತ್ಪಾದಕರ ಹಿತಾಸಕ್ತಿ ಕಾಪಾಡಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಇಚ್ಛಿಸಿದೆ.

**ಶ್ರೀ ಮನುಸುಬೇದಾರ್ :** ಅಭ್ರಕದ ಸಣ್ಣ ಉತ್ಪಾದಕರನ್ನೆಲ್ಲಾ ಸರ್ಕಾರದ ನೇತೃತ್ವದಲ್ಲಿಯೇ ಹಾಗೂ ಮಾರ್ಗದರ್ಶನದಲ್ಲಿಯೇ ಒಂದುಗೂಡಿಸಲು ಏಕೆ ಪ್ರಯತ್ನ ಮಾಡಬಾರದು? ಮತ್ತು ವಿದೇಶಿ ಆಸಕ್ತರಿಗೆ ಇದರಲ್ಲಿ ಪ್ರವೇಶಿಸಲು ಸರ್ಕಾರವು ಏಕೆ ದಾರಿ ಮಾಡಿಕೊಡುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ನೇಮಿಸಿದ ಸಮಿತಿಯ ವರದಿಯು ಕೈ ಸೇರುವವರಿಗೆ ನಾನು ಕ್ರಮ ಕೈಗೊಳ್ಳಲು ಉದ್ದೇಶಿಸಿಲ್ಲ.

**ಶ್ರೀ ಮನು ಸುಬೇದಾರ್ :** ಈ ವಿದೇಶಿಯರ ಆಸಕ್ತಿಯಿಂದ ಭಾರತೀಯರ ಆಸಕ್ತಿಯನ್ನು ಸಂರಕ್ಷಿಸಲು ಸರ್ಕಾರವು ಭಾರತೀಯರಿಗೆ ಪರವಾನಗಿ ಕೊಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ವಿವಾದದಲ್ಲಿ ಪೂರ್ವನಿರ್ಣಿತ ಅಭಿಪ್ರಾಯ ಕೊಡಲಿಚ್ಛಿಸುವುದಿಲ್ಲ.

**ಪ್ರೊ॥ ಎನ್. ಜಿ. ರಂಗ :** ಆ ವಿಷಯಕ್ಕಾಗಿ ಬಹಳಷ್ಟು ಅಂಜುವ ಕಾರಣವಿಲ್ಲ.

**ಶ್ರೀ ಮನು ಸುಬೇದಾರ್ :** ಸರ್ಕಾರವು ಆ ಬಗ್ಗೆ ಸದನಕ್ಕೆ ಭರವಸೆಯನ್ನು ಕೊಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವರದಿಯು ಕೈ ಸೇರಿದೊಡನೆ ನಾವು ಆವಶ್ಯಕ ಕ್ರಮಗಳನ್ನು ಕೈಗೊಳ್ಳುವೆವು.

## ೩೪೫
## ದೆಹಲಿ ತಿಮರ್‌ಪುರ್ ಮನೆಗಳ ದುಃಸ್ಥಿತಿ *

**೧೭೨೨. ಶ್ರೀ ಬದ್ರಿ ದತ್ತ ಪಾಂಡೆ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಿರಾ : ತಿಮರ್‌ಪುರದಲ್ಲಿಯು ಸರ್ಕಾರಿ ಮನೆಗಳನ್ನು ತಾತ್ಪೂರ್ತಿಕವಾಗಿ ಕಟ್ಟಲಾಗಿದೆಯೆ?

ಆ) ಈಗ ಈ ಮನೆಗಳು ತುಂಬಾ ದುಃಸ್ಥಿತಿಯಲ್ಲಿದ್ದು ಈಗ ಯಾವುದೇ ರಿಪೇರಿಯು ಬಹುಕಾಲ ನಿಲ್ಲುವಂತಿಲ್ಲ. ಕೆಲವು ಮನೆಗಳು ಯಾವ ವೇಳೆಯಲ್ಲಿಯಾದರೂ ಬೀಳಬಹುದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ನವದೆಹಲಿಯ ಸರ್ಕಾರಿ ಮನೆಗಳು ತಿಮರ್‌ಪುರದಲ್ಲಿಯ ಮನೆಗಿಂತ ನೂರಕ್ಕೆ ನೂರರಷ್ಟು ಉತ್ತಮವಾಗಿರುವ ವಿಷಯ ತಮಗೆ ತಿಳಿದಿದೆಯೆ?

ಈ) ಅದೂ ಅಲ್ಲದೆ 'ಸಿ' ಮಾದರಿಯ ಮನೆಗಳಿಗೆ ಒಂದೇ ಒಂದು ನಲ್ಲಿ ಇದೆ. ಇದರೆ ನವದೆಹಲಿಯ ಮನೆಗಳಿಗೆ ೩–೪ ನಲ್ಲಿಗಳಿವೆ. ಈ ವಿಷಯ ತಮಗೆ ತಿಳಿದಿದೆಯೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೩೦

ಉ) ಕಾರ್ಯನಿರ್ವಾಹಕ ಇಂಜಿನಿಯರರಾಗಲಿ ಇಲ್ಲವೆ ಯಾವುದೇ ಹೆಚ್ಚಿನ ಅಧಿಕಾರಿಗಳಾಗಲಿ ಒಮ್ಮೆಯೂ ಈ ಮನೆಗಳಿಗೆ ಭೇಟಿಕೊಟ್ಟಿಲ್ಲ ಮತ್ತು ಆ ಮನೆಗಳು ಸರಿಯಾಗಿ ರಿಪೇರಿ ಮಾಡಿರುವರೊ ಇಲ್ಲವೋ ಎಂದು ವಿಚಾರಿಸಿಲ್ಲ. ಇಲ್ಲಿಯ ಬಾಡಿಗೆದಾರರ ಅನುಕೂಲತೆಗಳ ಬಗ್ಗೆ ಯಾರೂ ಕಾಳಜಿ ಮಾಡುವುದಿಲ್ಲವೆಂಬ ವಿಚಾರ ತಮಗೆ ತಿಳಿದಿದೆಯೆ?

ಊ) ನವದೆಹಲಿಯಲ್ಲಿ ಉತ್ತಮ ಸ್ಥಿತಿಯಲ್ಲಿರುವ ಮನೆಗಳೂ ಮತ್ತು ದುಸ್ಥಿತಿಯಲ್ಲಿ ಹಾಗೂ ಕಡಿಮೆ ಸೌಲಭ್ಯವಿರುವ ಮನೆಗಳಿಗೂ ಸರ್ಕಾರವು ಒಂದೇ ರೀತಿಯ ಬಾಡಿಗೆಯನ್ನು ಏಕೆ ವಿಧಿಸುತ್ತದೆ ? ಈ ವಿಷಯವನ್ನು ಪರೀಕ್ಷಿಸಿ ಬಾಡಿಗೆಯನ್ನು ಕಡಿಮೆ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಇಲ್ಲ ಈ ಮನೆಗಳಿಗೆ ಆಗಿಂದಾಗ್ಗೆ ರಿಪೇರಿಯ ಆವಶ್ಯಕತೆಯಿದೆಯೆಂಬ ವಿಷಯ ನನಗೆ ತಿಳಿದಿದೆ.

ಇ) ನವದೆಹಲಿಯ ಮನೆಗಳು ತಿಮರ್‌ಪುರದಲ್ಲಿಯ ಮನೆಗಳಿಗಿಂತ ತುಂಬಾ ಉತ್ತಮವಾಗಿವೆ.

ಈ) ಹೌದು.

ಉ) ಇಲ್ಲ, ನನಗೆ ತಿಳಿದ ಮಟ್ಟಿಗೆ ಈ ಮನೆಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿಯಮಿತವಾಗಿ ಭೇಟಿಕೊಟ್ಟು ಪರೀಕ್ಷಿಸುತ್ತಾರೆ. ಬಾಡಿಗೆದಾರರ ದೂರುಗಳನ್ನು ವಿಚಾರಿಸಲು ಮನೆಗಳ ಸಮೀಪದಲ್ಲಿ ಒಂದು ವಿಚಾರಣಾ ಕಚೇರಿ ಇದೆ.

ಊ) ಸರ್ಕಾರದ ಒಂದೇ ರೀತಿಯ ಮನೆಗಳಲ್ಲಿಸಬೇಕಾದ ಸೌಲಭ್ಯಗಳು ಕೆಲವು ಮನೆಗಳಲ್ಲಿ ಕಡಿಮೆ ಇದ್ದರೂ ಬೇರೆ ಬೇರೆ ರೀತಿಯ ಬಾಡಿಗೆ ವಿಧಿಸಲು ಸಾಧ್ಯವಿಲ್ಲ. ತಿಮರ್‌ಪುರದಲ್ಲಿರುವ ಮನೆಗಳಿಗೆ ನಿಗದಿತವಾಗಿರುವ ಬಾಡಿಗೆಯು ನವದೆಹಲಿಯಲ್ಲಿರುವ ಅದೇ ನಮೂನೆಯ ಮನೆಗಳ ನಿಗದಿತ ಬಾಡಿಗೆಗಿಂತ ಕಡಿಮೆ ಇದೆ. ಇಲ್ಲಿ ವಾಸಿಸುವ ಬಹಳಷ್ಟು ಜನರು ತಮ್ಮ ಪಗಾರದ ಶೇಕಡಾ ೧೦ ಕ್ಕಿಂತ ಕಡಿಮೆ ಬಾಡಿಗೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ಬಾಡಿಗೆಯನ್ನು ಕಡಿಮೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**ಪ್ರೊ|| ಎನ್. ಜಿ. ರಂಗ :** ಹಳೆಯ ಮನೆಗಳಿಗೆ ಯಾವುದೇ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅವುಗಳಿಗೆ ಈಗಾಗಲೇ ಸೌಲಭ್ಯಗಳನ್ನು ಒದಗಿಸಲಾಗಿದೆ.

**ಪ್ರೊ|| ಎನ್.ಜಿ.ರಂಗ :** ಸನ್ಮಾನ್ಯ ಸದಸ್ಯರು ತಮ್ಮ ಉತ್ತರದಲ್ಲಿ ನಲ್ಲಿಗಳು ಮತ್ತು ಇತರ ಸೌಲಭ್ಯಗಳು ಇಲ್ಲವೆಂದು ಹೇಳಿದ್ದಾರೆ. ಆ ಸೌಲಭ್ಯಗಳನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗುವುದೇ?

**ಗೌರವಾನ್ವಿತ ಡಾ|| ಬಿ. ಆರ್. ಅಬೇಡ್ಕರ್ :** ಈ ವಿಷಯವನ್ನು ಪರಿಶೀಲಿಸಲಾಗುವುದು.

## ೩೪೬
## ನವದೆಹಲಿಯಲ್ಲಿ ಖಾಯಂ ಆಗಿ ನೆಲೆಸಿರುವ ಸಿಮ್ಲಾ ಸಿಬ್ಬಂದಿಗೆ ಪುನಃ ವಸತಿ ಕಲ್ಪಿಸಲು ಇರುವ ತೊಂದರೆ*

**೧೭೨೩. ಶ್ರೀ ಬದ್ರಿ ದತ್ತ ಪಾಂಡೆ :** ಅ) ಸಿಮ್ಲಾ ಬಿಟ್ಟು ಖಾಯಂ ಆಗಿ ದೆಹಲಿಯಲ್ಲಿ ವಾಸಿಸಲು ಎಷ್ಟು ಸಿಬ್ಬಂದಿ ವರ್ಗವು ಬಂದಿದೆ ಎಂದು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ತಿಳಿಸುವಿರಾ?

ಆ) ಇಂತಹ ಸಿಬ್ಬಂದಿಯವರು ಮುಖ್ಯ ಕಚೇರಿಯ ಶಾಖೆಗಳಿಂದ ಬಹಳ ದೂರ ಇರುವುದರಿಂದ ಸಿಬ್ಬಂದಿಗೆ ಹಾಗೂ ಇತರರಿಗೆ ಆಗುತ್ತಿರುವ ತೊಂದರೆಗಳು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಇ) ಪ್ರತಿಯೊಂದು ಇಲಾಖೆಯ ಘಟಕವು ಒಂದೇ ಕಟ್ಟಡದಲ್ಲಿರುವಂತೆ ಮಾಡುವ ಉದ್ದೇಶವು ಸರ್ಕಾರಕ್ಕೆ ಇದೆಯೇ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಈ ಮಾಹಿತಿಯು ಈಗ ಸದ್ಯಕ್ಕೆ ಲಭ್ಯವಿರುವದಿಲ್ಲ . ಆ ಮಾಹಿತಿಯನ್ನು ಸಂಗ್ರಹಿಸಲು ಹಿಡಿಯುವ ವೇಳೆ ಮತ್ತು ಶ್ರಮ ಅದರಿಂದಾಗಬಹುದಾದ ಉಪಯೋಗವನ್ನು ಸಮರ್ಥಿಸುವುದಿಲ್ಲ .

ಆ) ಹೌದು.

ಇ) ಈಗಿನ ಸಂದರ್ಭಗಳಲ್ಲಿ ಒಂದೇ ಇಲಾಖೆಯ ಎಲ್ಲ ಸಿಬ್ಬಂದಿಯನ್ನು ಒಂದೇ ಕಟ್ಟಡದಲ್ಲಿ ವಾಸಿಸುವಂತೆ ಮಾಡುವುದು ಸಾಧ್ಯವಿಲ್ಲ . ಸಾಧ್ಯವಾದಮಟ್ಟಿಗೆ ಈ ಪ್ರಯತ್ನವನ್ನು ಮಾಡಲಾಗುವುದು.

## ೩೪೭
## ಭಾರತೀಯ ಕಾರ್ಮಿಕ ಫೆಡರೇಶನ್ನಿಗೆ ಸರ್ಕಾರದ ಕೊಡುಗೆ*

**೧೮೦೦. ಶ್ರೀ ಬದ್ರಿ ದತ್ತ ಪಾಂಡೆ :** ಅ) ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಇದಕ್ಕೆ ಉತ್ತವನ್ನು ಹೇಳುವರೇ: ಒಂದು ಕ್ಷುದ್ರ ಘಟನಾವಳಿಯ ಕತೆಗಳು ಎಂಬ ಹೆಸರಿನ ಪುಸ್ತಕವನ್ನು ಸರ್ಕಾರ ನೋಡಿದೆಯೆ? ಈ ಪುಸ್ತಕವನ್ನು ಒಬ್ಬ ಗಣಪತರಾಜ ಅನ್ನುವವರು ಪ್ರಕಟಿಸಿದ್ದಾರೆ. ಶ್ರೀ ಎಮ್. ಎನ್. ರಾಯ್ ಕಾರ್ಯದರ್ಶಿಯಾಗಿರುವ ಭಾರತೀಯ ಕಾರ್ಮಿಕರ ಫೆಡರೇಶನ್ನಿಗೆ ಕಾರ್ಮಿಕ ಇಲಾಖೆಯು ೧೩,೦೦೦ರೂ. ಗಳ ಅನುದಾನ ಕೊಟ್ಟಿದೆಯೆ?

ಆ) ಈ ಹಣವನ್ನು ಹೇಗೆ ಖರ್ಚುಮಾಡಿಲಾಯಿತೆಂಬುದರ ಬಗ್ಗೆ ಸರ್ಕಾರವು ಸದನದ ಮುಂದೆ ಹೇಳಿಕೆಯನ್ನು ಇಡುವುದೆ?

ಇ) ಪ್ರತಿ ತಿಂಗಳು ೧೩,೦೦೦ ರೂ. ಗಳ ಅನುದಾನವನ್ನು ಚಾಲ್ತಿ ವರ್ಷದ ಆಯವ್ಯಯ

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ೯ನೇ ಏಪ್ರಿಲ್ ೧೯೪೫, ಪುಟ ೨೬೩೧

ಪತ್ರದಲ್ಲಿ ಸೇರಿಸಲಾಗಿದೆಯೆ? ಮತ್ತು ಹಾಗಿದ್ದಲ್ಲಿ ಅದನ್ನು ಅನುದಾನಕ್ಕಾಗಿ ಯಾವ ಶೀರ್ಷಿಕೆಯ ಕೆಳಗೆ ತೋರಿಸಿರುವಿರಿ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ನಾನು ಆ ಪುಸ್ತಕವನ್ನು ನೋಡಿರುವುದಿಲ್ಲ.

ಆ) ನಾನು ಮಾನ್ಯ ಸದಸ್ಯರ ಗಮನವನ್ನು ಪ್ರಶ್ನೆ ನಂ ೩೧ ಮತ್ತು ಶ್ರೀ ಲಾಲ್‌ಚಂದ್ ನವಲ್‌ರಾಯ್ ಅವರು ೧೯೪೪ರ ನವಂಬರ್‌ರಂದು ಕೇಳಿದ ಪೂರಕ ಪ್ರಶ್ನೆಗೆ ಕೊಟ್ಟ ನನ್ನ ಉತ್ತರ ಗಮನಿಸಬೇಕು.

ಇ) ಹೌದು, ೧೯೪೫–೪೬ರ ಆಯವ್ಯಯದಲ್ಲಿ ಕಿರುಕುಳ ಖರ್ಚುಗಳು ಈ ಶೀರ್ಷಿಕೆಯಡಿ ಯುದ್ಧಕ್ಕೆ–ಸಿ ೫ ಯುದ್ಧದ ಪ್ರಚಾರದ ಖರ್ಚು, ಸಿ ೫ (೪) ಕಾರ್ಮಿಕರ ಪ್ರಚಾರ ಇವುಗಳಿಗೆ ಸಂಬಂಧಿಸಿದಂತೆ ಅನುದಾನಕ್ಕಾಗಿ ಕೊಡಲಾಗಿದೆ.

**ಶ್ರೀ ಬದ್ರಿ ದತ್ತ ಪಾಂಡೆ :** ಮಾನ್ಯ ಸದಸ್ಯರು ಲೆಕ್ಕಪತ್ರದ ಹೇಳಿಕೆಯನ್ನು ಸದನದ ಮುಂದೆ ಇಡುವುದಾಗಿ ಮೊನ್ನೆಯ ದಿನ ಹೇಳಿದಂತೆ ಯಾವಾಗ ಅದನ್ನು ಇಡುವಿರಿ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅದು ಇದರಿಂದ ಉದ್ಭವಿಸುವುದಿಲ್ಲ.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ಮಾನ್ಯ ಸದಸ್ಯರು ಆ ಪುಸ್ತಕವನ್ನು ಓದಿರದಿದ್ದರೆ ನಾನು ಅವರಿಗೆ ಹೇಳಬಯಸುವುದೇನೆಂದರೆ ಅಂತಹ ಪುಸ್ತಕಗಳು ಎರಡು ಇವೆ. ಅವು ಒಂದಕ್ಕೊಂದು ವಿರುದ್ಧವಾಗಿವೆ. ಒಂದನ್ನು ಶ್ರೀ ಚಮನ್‌ದಾಸ್ ಮೆಹ್ತಾ ಹಾಗೂ ಇನ್ನೊಂದನ್ನು ಶ್ರೀ ರಾಯ್ ಬರೆದಿದ್ದಾರೆ. ಸನ್ಮಾನ್ಯ ಸದಸ್ಯರು ಈ ಎರಡೂ ಪುಸ್ತಕಗಳನ್ನು ತರಿಸಿಕೊಂಡು ಓದಿದರೆ ಅವು ಒಂದಕ್ಕೊಂದು ವಿರುದ್ಧವಾಗಿದೆಯೆಂಬುದು ತಮ್ಮ ಗಮನಕ್ಕೆ ಬರುವುದು. ಆಮೇಲೆ ಸನ್ಮಾನ್ಯ ಸದಸ್ಯರು ನನ್ನ ಪ್ರಶ್ನೆಗೆ ಬರಬಹುದು. ಈ ಹಣವನ್ನು ಆ ಈರ್ವರಲ್ಲಿ ಸರಿಯಾಗಿ ಹಂಚಲಾಯಿತೆ? ಇಲ್ಲವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅವುಗಳನ್ನು ಕೊಳ್ಳಲು ನಾನು ನನ್ನ ಹಣ ಖರ್ಚು ಮಾಡಬಯಸುವುದಿಲ್ಲ. ಆದರೆ ಅವುಗಳನ್ನು ನನಗೆ ಕಳುಹಿಸಿದರೆ ನಾನು ಅವುಗಳನ್ನು ಓದುತ್ತೇನೆ.

**ಶ್ರೀ ಅವಿನಾಶಲಿಂಗಮ್ ಚೆಟ್ಟಿಯಾರ್ :** ನನ್ನ (ಇ) ಪ್ರಶ್ನೆಗೆ ಕೊಟ್ಟ ಉತ್ತರವು ನನಗೆ ಅರ್ಥವಾಗಲಿಲ್ಲ. ಕ್ಷಮಿಸಿರಿ. ಸನ್ಮಾನ್ಯ ಸದಸ್ಯರು ಅದನ್ನು ದಯವಿಟ್ಟು ಪುನಃ ಹೇಳುವಿರಾ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಆ ಅನುದಾನವು ಅನುದಾನದ ಬೇಡಿಕೆಯ ಶೀರ್ಷಿಕೆಯಲ್ಲಿದೆ.

**ಶ್ರೀ ಟಿ. ಎಸ್. ಅವಿನಾಶಲಿಂಗಮ್ ಚೆಟ್ಟಿಯಾರ್ :** ಈ ಅನುದಾನವನ್ನು ಹೆಚ್ಚಿಸಲಾಗಿದೆಯೆ ಅಥವಾ ಮೊದಲಿನದೇ ಇದೆಯೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮೊದಲಿನ ಹಣದಷ್ಟೇ ಇದೆ.

**ಶ್ರೀ ಲಾಲ್‌ಚಂದ್ ನವಲ್ ರಾಯ್ :** ನನ್ನಲ್ಲಿರುವ ಪುಸ್ತಕಗಳನ್ನು ಕಳುಹಿಸಿಕೊಟ್ಟರೆ ಮಾನ್ಯ ಸದಸ್ಯರು ಅವುಗಳನ್ನು ಓದುತ್ತಾರೆಯೇ ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ವೇಳೆ ಸಿಕ್ಕರೆ ನಾನು ಓದುತ್ತೇನೆ.

**ಶ್ರೀ ಬದ್ರಿ ದತ್ತ ಪಾಂಡೆ :** ನನ್ನ ಪೂರಕ ಪ್ರಶ್ನೆಗೆ ಮಾನ್ಯ ಸದಸ್ಯರು ಸದನದ ಮುಂದೆ ಲೆಕ್ಕಪತ್ರದ ಹೇಳಿಕೆಯನ್ನು ಇಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಪ್ರಶ್ನೆಯಲ್ಲಿ ನಿಶ್ಚಿತವಾಗಿ ಹಣವನ್ನು ಹೇಗೆ ಖರ್ಚುಮಾಡಲಾಯಿತೆಂಬುದರ ಬಗ್ಗೆ ಲೆಕ್ಕಪತ್ರಗಳ ಹೇಳಿಕೆಯನ್ನು ಸದನದ ಮುಂದೆ ಇಡಬೇಕೆಂದು ಕೇಳಲಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತಮ್ಮ ಪ್ರಶ್ನೆಯು ನನಗೆ ಅರ್ಥವಾಗಲಿಲ್ಲ.

**ಶ್ರೀ ಬದ್ರಿ ದತ್ತ ಪಾಂಡೆ :** ಲೆಕ್ಕಪತ್ರ ಹೇಳಿಕೆಯನ್ನು ಸದನದ ಮುಂದೆ ಇಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ನೀವು ಹೇಳಿದ್ದೀರಿ. ಆದರೆ (ಅ)ದಲ್ಲಿದ್ದಂತೆ ಅದು ನಿಶ್ಚಿತವಾಗಿಯೂ ಪ್ರಶ್ನೆಯ ಒಂದು ಭಾಗವಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಇದಕ್ಕಾಗಿ ವಿಷಾದಿಸುತ್ತೇನೆ ನನ್ನ ಕಡೆಗೆ ಇದ್ದ ಮಾಹಿತಿಯನ್ನು ನಾನು ಸದನದ ಮುಂದೆ ಇಡುತ್ತೇನೆ.

## ೩೪೮
## ಅಭ್ರಕ ವಿಚಾರಣೆ ಸಮಿತಿ ನೇಮಿಸಲು ಅಧಿಕಾರ *

೧೮೦೧. **ಶ್ರೀ ರಾಮ ನಾರಾಯಣ ಸಿಂಗ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯದ ಬಗ್ಗೆ ಹೇಳುವಿರಾ? ಪ್ರಾಂತೀಯ ವಿಧಾಯಕದ ಅನುಸೂಚಿ ೭ರ ಪಟ್ಟಿಯಲ್ಲಿ ಭಾರತ ಸರ್ಕಾರದ ಅಧಿನಿಯಮ ೧೯೩೫ರ ಅನ್ವಯ ೨೭ ವಿಷಯಗಳಿವೆ. ಅಭ್ರಕದ ಉದ್ಯಮವು ಪ್ರಾಂತೀಯ ವಿಷಯವಲ್ಲವೆ? ಹಾಗಿದ್ದಲ್ಲಿ ಈ ಅಧಿನಿಯಮದ ಅನ್ವಯ ಭಾರತೀಯ ಸರ್ಕಾರವು ಅಭ್ರಕದ ವಿಚಾರಣೆಯನ್ನು ಕುರಿತು ಈಗ ರಚಿಸಿದ ಸಮಿತಿಯು ಅದರ ಅಧಿಕಾರ ವ್ಯಾಪ್ತಿಯಲ್ಲಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ೧೯೪೪ನೆಯ ನವೆಂಬರ್ ೨೦ರಂದು ನಾನು ಇದೇ ವಿಷಯದ ಬಗ್ಗೆ ಶ್ರೀ ಸತ್ಯನಾರಾಯಣ ಸಿಂಹಾ ಅವರ ಅಲ್ಪಕಾಲದ ನೋಟಿಸ್‌ನ ಪ್ರಶ್ನೆಗೆ ಕೊಟ್ಟ ಉತ್ತರಕ್ಕಿಂತ ಹೆಚ್ಚಿಗೆ ಏನನ್ನೂ ಸೇರಿಸಬಯಸುವುದಿಲ್ಲ.

**ಶ್ರೀ ರಾಮ ನಾರಾಯಣಸಿಂಗ್ :** ಹೀಗೆ ಮಾಡುವುದು ಪ್ರಾಂತೀಯ ಸರ್ಕಾರಗಳ ಅಧಿಕಾರಗಳ ಮೇಲೆ ಭಾರತ ಸರ್ಕಾರವು ಅತಿಕ್ರಮಣ ಮಾಡಿದಂತಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಮೊದಲೇ ಹೇಳಿದಂತೆ ನಾನು ಈಗಾಗಲೆ ಕೊಟ್ಟ ಉತ್ತರಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಬಯಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ४, ೯ನೇ ಏಪ್ರಿಲ್, ೧೯೪೫. ಪುಟ ೨೬೩೧

## ೩೪೯
## ಬ್ರಿಟಿಷ–ಅಮೇರಿಕ ಅಭ್ರಕ (ಕಾಗೆ ಬಂಗಾರ) ನಿಯೋಗ *

**೧೮೦೨. ಶ್ರೀ ರಾಮ ನಾರಾಯಣ ಸಿಂಗ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಬಗ್ಗೆ ಹೇಳುವಿರಾ?: ಯಾರ ಸೂಚನೆಯ ಮೇರೆಗೆ ಈಗ ಬ್ರಿಟಿಷ್–ಅಮೆರಿಕೆಯ ಅಭ್ರಕದ ನಿಯೋಗವನ್ನು ಸ್ಥಾಪಿಸಲಾಗಿದೆ?

ಆ) ಆ ನಿಯೋಗದಲ್ಲಿ ಕ್ರಮವಾಗಿ ಬ್ರಿಟಿಷರು ಮತ್ತು ಅಮೇರಿಕನ್ನರು ಎಷ್ಟು ಮಂದಿ ಇದ್ದಾರೆ.

ಇ) ಈ ನಿಯೋಗದ ಉದ್ದೇಶಗಳು ಮತ್ತು ಕಾರ್ಯಗಳಾವುವು?

ಈ) ಇದು ಕೇವಲ ಯುದ್ಧ ಕಾಲದ ವ್ಯವಸ್ಥೆಯೋ? ಇಲ್ಲವೆ ಯುದ್ಧ ಮುಗಿದ ನಂತರವೂ ಇದು ಖಾಯಂ ಆಗಿ ಮುಂದುವರಿಯುವುದೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಅಭ್ರಕದ ಜಂಟೀ ನಿಯೋಗ ಭಾರತ ಸರ್ಕಾರ ಹಾಗೂ ಇಂಗ್ಲೆಂಡ್ ಅರಸರ ಸರ್ಕಾರ ಮತ್ತು ಇಂಗ್ಲೆಂಡ್‌ದ ಅರಸರ ಮುಖಾಂತರ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸರ್ಕಾರಗಳು ಮಾತುಕತೆ ನಡೆಯಿಸಿದೆ ಚರ್ಚಿಸಿದ ಫಲವಾಗಿ ರಚಿಸಲ್ಪಟ್ಟಿದೆ.

ಆ) ಮೂವರು ಬ್ರಿಟಿಷರು ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನದ ಮೂವರು ಇದರಲ್ಲಿ ಪ್ರತಿನಿಧಿಗಳಾಗಿದ್ದಾರೆ.

ಇ) ನಿಯೋಗವು ತಮ್ಮ ತಮ್ಮ ಮುಖ್ಯಸ್ಥರು ಕೊಟ್ಟ ಮಾಹಿತಿಯ ಆಧಾರದ ಮೇಲೆ ಅಮೇರಿಕೆಯ ಸಂಯುಕ್ತ ಸಂಸ್ಥಾನಕ್ಕೆ ಬೇಕಾದಷ್ಟು ಅಭ್ರಕದ ಕೊಳ್ಳಲು, ತಪಾಸಣೆ ಮಾಡಲು, ಸ್ವೀಕರಿಸಲು ಮತ್ತು ಅವುಗಳ ಬೆಲೆ ಕೊಡಲು ಹೊಣೆಗಾರರಿರುತ್ತಾರೆ.

ಈ) ಇದು ಕೇವಲ ಯುದ್ಧಕಾಲದ ವ್ಯವಸ್ಥೆಯಾಗಿದೆ.

**ಶ್ರೀ ರಾಮ ನಾರಾಯಣ ಸಿಂಗ್ :** ಭಾರತ ಸರ್ಕಾರವಾಗಲಿ ಇಲ್ಲವೆ ಅಭ್ರಕದ ಉದ್ಯಮವಾಗಲಿ ಈ ನಿಯೋಗ ಮಂಡಲಿಯಲ್ಲಿ ಪ್ರಾತಿನಿಧ್ಯವನ್ನು ಏಕೆ ಪಡೆದಿಲ್ಲವೆಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಅವಶ್ಯವಿಲ್ಲ. ಇದು ಕೇವಲ ಅಭ್ರಕವನ್ನು ಖರೀದಿಸುವ ನಿಯೋಗವಾಗಿದೆ.

**ಶ್ರೀ ಎನ್.ಎಮ್. ಜೋಷಿ :** ನಾನು ಒಂದು ಪ್ರಶ್ನೆಯನ್ನು ಕೇಳಬಹುದೆ? ಭಾರತದಲ್ಲಿ ಅಭ್ರಕದ ಗಣಿಗಳ ಮಾಲೀಕರಿಗೆ ಅಭ್ರಕಕ್ಕಾಗಿ ಕೊಡುವ ಬೆಲೆಗಿಂತ ಅಮೇರಿಕೆಯಲ್ಲಿ ಅಭ್ರಕಕ್ಕೆ ಹೆಚ್ಚಿನ ಬೆಲೆ ಕೊಡುತ್ತಾರೆಂಬುದು ನಿಜವೆ? ಅದರಲ್ಲಿ ಬಹಳಷ್ಟು ಲಾಭವಿದ್ದರೆ ಆ ಲಾಭವನ್ನು ಯಾರು ತೆಗೆದುಕೊಳ್ಳುವರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಯ ಬಗ್ಗೆ ನನಗೆ ನೋಟೀಸ್ ಕೊಡಲೇಬೇಕು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೭೯

## ೩೫೦
## ಹಿಂದುಳಿದ ವರ್ಗಗಳ ಹಿಂದೂ ಅಭ್ಯರ್ಥಿಗಳನ್ನು ಕಾರ್ಮಿಕ ಅಧಿಕಾರಿಗಳು ಮುಂತಾಗಿ ನೇಮಕಾತಿ ಮಾಡಿದ್ದು *

**೧೮೦೩. ಶ್ರೀ ಎಂ. ಗಿಯಾಸುದ್ದೀನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ರವನ್ನು ನೀಡುವರೇ? ಹಿಂದೂಗಳಲ್ಲಿ ಹಿಂದುಳಿದ ವರ್ಗಗಳ ಅಹಿರ್ ಗಡರಿಯಾ, ತೇಲಿ, ತಂಬೋಲೀ, ಕಹಾರ್, ಲೋಹಾರ್, ಬರ್ರ್ವಾಯೀಜ್ ಮತ್ತು ಕುಂಮಾರ್ ಮುಂತಾದ ವಂಶಪರಂಪರೆಯಾಗಿ ವೃತ್ತಿಯಿಂದ ಬಂದವರು ಕುಶಲಕರ್ಮಿಗಳಂತಹವರು, ಈ ದೇಶದಲ್ಲಿ ಹದಿನಾರರಿಂದ ಹದಿನೇಳು ಕೋಟಿಗಳಷ್ಟು ಇದ್ದು ಇವರಲ್ಲಿ ಯೋಗ್ಯರಾದ ಅಭ್ಯರ್ಥಿಗಳನ್ನು ಯಾವುದೇ ಕಾರ್ಮಿಕ ಅಧಿಕಾರಿ, ಕಾರ್ಮಿಕ ನಿರೀಕ್ಷಕರನ್ನಾಗಿ, ಕಾರ್ಮಿಕ ಕಾನೂನು ಸಲಹೆಗಾರ ಮತ್ತು ಕಾರ್ಮಿಕ ಕಲ್ಯಾಣ ಸಂಘದ ಅಧಿಕಾರಿಯಗಳನ್ನಾಗಿ ನೇಮಿಸಿರುವಿರೇ ಎಂದು ಹೇಳುವಿರಾ? ಹಾಗಿಲ್ಲದಿದ್ದರೆ ಯಾಕೆ ಇಲ್ಲ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈಗ ಸದ್ಯಕ್ಕೆ ದೊರೆತ ಮಾಹಿತಿಯ ಮೇಲಿಂದ ಇಂಥ ನಿರ್ದಿಷ್ಟ ವರ್ಗಗಳಿಂದ ಬಂದವರಲ್ಲಿ ಯಾವ ಅಧಿಕಾರಿಯನ್ನೂ ನೇಮಿಸಿಲ್ಲ.

## ೩೫೧
## ಹಿಂದುಳಿದ ಹಿಂದೂ ವರ್ಗಗಳಿಂದ ಬಂದ ಅಭ್ಯರ್ಥಿಗಳಿಗೆ ಬೆವಿನ್ ಮತ್ತು ಉಳಿದ ತಾಂತ್ರಿಕ ಯೋಜನೆಗಳಲ್ಲಿ ಅನುಕೂಲತೆಗಳು **

**೧೮೦೪. ಶ್ರೀ ಎಮ್. ಗಿಯಾಸುದ್ದೀನ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಿರಾ? : ಹಿಂದುಳಿದ ವರ್ಗಗಳಾದ ಅಹಿರರು, ಗಡರಿಯಾರರು, ತೇಲಿ, ತಾಂಬೇಲಿಯರು, ಕಲ್ವಾರರು, ಲೋಹಾರರು, ಬರ್ಧಾಯರು, ಕುಮಾರರು ಮತ್ತು ವಂಶಪರಂಪರೆಯಾಗಿ ವೃತ್ತಿಯಿಂದ ಬಂದವರು ಕುಶಲ ಕಾರ್ಮಿಕರು ಇಂತಹವರಿಗೆ ಬೆವಿನ್ ತರಬೇತಿ ಯೋಜನೆಯಲ್ಲಿ ಮತ್ತು ಉಳಿದ ತಾಂತ್ರಿಕ ಯೋಜನೆಗಳಲ್ಲಿ ಆಗಾಗ ಜಾರಿಗೊಳಿಸುತ್ತಿರುವ ಯೋಜನೆಗಳಲ್ಲಿ ಇಂಥ ಅಭ್ಯರ್ಥಿಗಳಿಗೆ ಕಚೇರಿಯ ಸೌಲಭ್ಯವನ್ನು ಒದಗಿಸಿರುವಿರಾ? ಹಾಗಿಲ್ಲದಿದ್ದರೆ ಯಾಕೆ ಇಲ್ಲ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಸರ್ಕಾರವು ಈಗಾಗಲೇ ಬೆವಿನ್ ತರಬೇತಿ ಯೋಜನೆಯಲ್ಲಿ ಹಿಂದುಳಿದ ವರ್ಗದವರಿಗೆ (ಪರಿಶಿಷ್ಟ ಜಾತಿಗಳು ಮುಂತಾದವರಿಗೆ) ಸಹಾಯ ಮಾಡಲು ಅವರನ್ನು ಭರ್ತಿ ಮಾಡಿಕೊಳ್ಳಲು ವಿಶೇಷ ಕ್ರಮಗಳನ್ನು ಕೈಗೊಂಡಿದೆ ರಾಷ್ಟ್ರೀಯ ಸೌಕರ್ಯ (ಸೇವೆ) ಕಾರ್ಮಿಕರ ನ್ಯಾಯಾಧಿಕರಣವು ಇವರನ್ನು ಆಯ್ಕೆ ಮಾಡುತ್ತದೆ. ಆದರೆ ಬೇರೆ ಬೇರೆ ಪ್ರಾಂತಗಳಲ್ಲಿ ಜಾತಿಯ ಆಧಾರದ ಮೇಲೆ ಮತ್ತು ಎಲ್ಲ ಜಾತಿಯವರಿಗೆ ಯೋಗ್ಯ ಪ್ರಮಾಣದಲ್ಲಿ ಪ್ರಾತಿನಿಧ್ಯ ದೊರೆಯುವಂತೆ ನೋಡಿಕೊಳ್ಳಬೇಕೆಂದು ಆದೇಶಿಸಲಾಗಿದೆ. ಇದಲ್ಲದೆ ನ್ಯಾಯಾಧೀಕರಣ ಪ್ರಭಾವಿಯಾದ ಪರಿಶಿಷ್ಟ ವರ್ಗಕ್ಕೆ ಸೇರಿದ ಅಧಿಕಾರೇತರ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೭೭೯

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೯ನೇ ಏಪ್ರಿಲ್, ೧೯೪೫. ಪುಟ ೨೬೮೧

ಸಹ ಸದಸ್ಯನನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ. ಮತ್ತು ಅವಶ್ಯಬಿದ್ದರೆ ಒಬ್ಬ ಮುಸಲ್ಮಾನನನ್ನು ಮಾರ್ಗದರ್ಶಕನನ್ನಾಗಿ ಮಾಡಿಕೊಂಡು ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿಯವರಿಗೆ ಯೋಗ್ಯ ಪ್ರಾತಿನಿಧ್ಯ ದೊರಕುವಂತೆ ಮಾಡಲಾಗುವುದು.

## ೩೫೨
## ಪ್ರಾಂತೀಯ ರಾಷ್ಟ್ರೀಯ ಕಾರ್ಮಿಕರ ಸೇವೆಯ ಪ್ರಾಂತೀಯ ನ್ಯಾಯಾಧೀಕರಣದಲ್ಲಿ ಹಿಂದುಳಿದ ಹಿಂದೂ ವರ್ಗಗಳ ಪ್ರತಿನಿಧಿ *

**೧೮೦೫. ಶ್ರೀ ಎಂ. ಗಿಯಾಸುದ್ದೀನ್ :** ರಾಷ್ಟ್ರೀಯ ಕಾರ್ಮಿಕರ ಸೇವೆಯ ಪ್ರಾಂತಿಯ ನ್ಯಾಯಾಧಿಕರಣದಲ್ಲಿ ಹಿಂದುಳಿದ ಹಿಂದೂ ವರ್ಗಗಳ ಯಾವುದೇ ಪ್ರತಿನಿಧಿಗಳು ಯಾರಾದರೂ ಇರುವರೆ? ಇರದಿದ್ದರೆ ಯಾಕೆ ಇಲ್ಲ ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಾಂತೀಯ ರಾಷ್ಟ್ರೀಯ ಕಾರ್ಮಿಕರ ಸೇವೆಯ ನ್ಯಾಯಾಧಿಕರಣದಲ್ಲಿ ಯಾವುದೇ ಹಿಂದುಳಿದ ಹಿಂದೂ ವರ್ಗಗಳ ಸದಸ್ಯರು ಪ್ರತಿನಿಧಿ ಇರುವುದು ಭಾರತ ಸರ್ಕಾರದ ಗಮನಕ್ಕೆ ಬಂದಿಲ್ಲ. ನ್ಯಾಯಾಧಿಕರಣಕ್ಕೆ ಜಾತಿಯ ಆಧಾರದ ಮೇಲೆ ಪ್ರತಿನಿಧಿಸುವುದು ಅವಶ್ಯವೂ ಅಲ್ಲ. ಇಲ್ಲವೆ ಕಾರ್ಯಸಾಧ್ಯವೂ ಅಲ್ಲ.

## ೩೫೩
## ೫ನೆಯ ಕಾರ್ಮಿಕರ ಸ್ಥಾಯಿ ಸಮಿತಿಯ ನಡವಳಿಗಳ ಸಾರಾಂಶ **

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) : ೧೯೪೪ರ ಜೂನ್ ೨೭ನೆಯ ದಿನಾಂಕದಂದು ನವದೆಹಲಿಯಲ್ಲಿ ನಡೆದ ೫ನೆಯ ಕಾರ್ಮಿಕ ಸ್ಥಾಯಿ ಸಮಿತಿ ಸಭೆಯ ನಡವಳಿಗಳ ಸಾರಾಂಶದ ಪ್ರತಿಯನ್ನು ಸದನದ ಮುಂದೆ ಇಟ್ಟಿದ್ದೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೨೦ನೇ ನವೆಂಬರ್. ೧೯೪೫. ಪುಟ ೧೦೦೧

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೧ನೇ ಜನವರಿ. ೧೯೪೫. ಪುಟ ೬೧

## ೩೫೪
## ೬ನೆಯ ಕಾರ್ಮಿಕರ ಸಮ್ಮೇಳನದ ನಡವಳಿಗಳ ಸಾರಾಂಶ *

ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) : ೧೯೪೪ ಡಿಸೆಂಬರ್ ೨೭ ಹಾಗೂ ೨೮ ರಂದು ನವದೆಹಲಿಯಲ್ಲಿ ನಡೆದ ೬ನೆಯ ಕಾರ್ಮಿಕರ ಸಮ್ಮೇಳನದ ನಡವಳಿಗಳ ಸಾರಾಂಶದ ಪ್ರತಿಯನ್ನು ಸದನದ ಮುಂದೆ ಇಟ್ಟಿದ್ದೇನೆ.

## ೩೫೫
## ಆರನೆಯ ಕಾರ್ಮಿಕರ ಸ್ಥಾಯಿ ಸಮಿತಿಯ ನಡವಳಿಗಳ ಸಾರಾಂಶ **

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು) :** ೧೯೪೫ರ ಮಾರ್ಚ್ ೧೭ನೆಯ ದಿನಾಂಕದಂದು ನವದೆಹಲಿಯಲ್ಲಿ ನಡೆದ ಕಾರ್ಮಿಕರ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳ ಸಾರಾಂಶದ ಪ್ರತಿಯನ್ನು ಸದನದ ಮುಂದೆ ಇಡುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸದ ಜಿಲ್ಲೆ ಮತ್ತು ಚಿತ್ತರ ಗ್ರಾಮೀಣ ಮುಸಲ್ಮಾನೇತರ) : ಒಂದು ವಿಷಯದ ಮಾಹಿತಿಯ ಬಗ್ಗೆ ತಿಳಿಯಬಹುದೆ? ಈ ಕಾಗದಗಳು ೧೯೪೪ರ ಜೂನ್ ೨೭ನೆಯ ಮತ್ತು ೧೯೪೪ರ ಅಕ್ಟೋಬರ್ ೨೮ನೆಯ ತಯಾರಾದವುಗಳು ಇವುಗಳನ್ನು ಸದನದ ಮುಂದೆ ಇಡಲು ಇಷ್ಟು ಅವಧಿಯನ್ನೇಕೆ ತೆಗೆದುಕೊಂಡಿರಿ? ಹೋದ ಅಧಿವೇಶನದಲ್ಲಿಯೇ ಅವುಗಳನ್ನೇಕೆ ಇಡಲಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಉತ್ತರ ಕೊಡಲು ಅಶಕ್ಯ. ಆದರೆ ನಾನು ಈ ವಿಷಯವನ್ನು ಪರಿಶೀಲಿಸುವೆನು.

## ೩೫೬
## ಭಾರತೀಯ ಗಣಿಗಳ (ತಿದ್ದುಪಡಿ) ಮಸೂದೆ ***

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ ಭಾರತೀಯ ಗಣಿಗಳ ಅಧಿನಿಯಮ ೧೯೨೩ಕ್ಕೆ ಅಧಿನಿಯಮಕ್ಕೆ ತಿದ್ದುಪಡಿ ಮಾಡಲು ನಾನು ಒಂದು ಮಸೂದೆಯನ್ನು ಮಂಡಿಸಲು ಪರವಾನಗಿ ಬೇಡುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೧ನೇ ಜನವರಿ. ೧೯೪೫. ಪುಟ ೬೧.

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೨೧ನೇ ಜನವರಿ. ೧೯೪೬. ಪುಟ ೬೧.
@ ಈ ಚರ್ಚೆಗಳನ್ನು ಪ್ರಕಟಿಸಿಲ್ಲ. ಆದರೆ ನಕಲುಗಳನ್ನು ಸದನದ ಗ್ರಂಥಾಲಯದಲ್ಲಿ ಇಡಲಾಗಿದೆ.

*** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೩೦ನೇ, ಜನವರಿ ೧೯೪೫, ಪುಟ ೨೪೭.

**ಮಾನ್ಯ ಅಧ್ಯಕ್ಷರು** : ಈಗ ಇರುವ ವಿಷಯ ಎಂದರೆ : "೧೯೨೩ ನೆಯ ಭಾರತೀಯ ಗಣಿಗಳ ಅಧಿನಿಯಮಕ್ಕೆ ಇನ್ನೂ ತಿದ್ದುಪಡಿ ತರುವ ಮಸೂದೆಗೆ ಪರವಾನಗಿ ಕೊಡಬೇಕು." ನಿಲುವಳಿಯನ್ನು ಸ್ವೀಕರಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೩೫೭
## ಸರ್ಕಾರಿ ನೌಕರರಿಗೆ ಸಾಕಷ್ಟು ವಸತಿ ಸೌಕರ್ಯ *

**೨೪. ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಹೇಳುವಿರಾ. ಅ) ನವದೆಹಲಿಯಲ್ಲಿ ಮನೆಗಳಿಗಾಗಿ ಅರ್ಜಿಸಲ್ಲಿಸಿದ ಸರ್ಕಾರಿ ಕಾರಕೂನರು ಮತ್ತು ಸಹಾಯಕರುಗಳ ಪೈಕಿ ಎಷ್ಟು ಜನರಿಗೆ ಇನ್ನೂ ವಸತಿ ಸೌಕರ್ಯ ಒದಗಿಸಲಾಗಿಲ್ಲ?

ಆ) ಎಷ್ಟು ಜನ ಅಧಿನಿರೀಕ್ಷಕರು ಅರ್ಜಿ ಸಲ್ಲಿಸಿದ್ದರು ಮತ್ತು ಅವರಲ್ಲಿ ಎಷ್ಟು ಜನರಿಗೆ ವಸತಿ ಸೌಕರ್ಯವನ್ನು ಇದುವರೆಗೆ ಒದಗಿಸಲಾಗಿಲ್ಲ?

ಇ) ಮೇಲಿನ ಪ್ರಶ್ನೆಯ (ಅ) ಮತ್ತು (ಆ) ವಿಭಾಗಗಳಲ್ಲಿ ಹೇಳಿರುವ ವ್ಯಕ್ತಿಗಳಿಗಾಗಿ ಯುದ್ಧಕಾಲದಲ್ಲಿ ನವದೆಹಲಿ ಮತ್ತು ಕರೋಲ್ ಬಾಗ್ ಪ್ರದೇಶಗಳಲ್ಲಿ ಎಷ್ಟು ವಸತಿಗಳಿಗಾಗಿ ಬೇಡಿಕೆ ಬಂದಿತ್ತು?

ಈ) ೧೯೪೬ರ ಜನವರಿ ೧ರಂದು ಮತ್ತು ನಂತರ ಎಷ್ಟು ಮನೆಗಳನ್ನು ಮತ್ತು ಪ್ಲಾಟುಗಳನ್ನು ನವದೆಹಲಿ ಮತ್ತು ಕರೋಲ್ ಭಾಗ್‌ದಲ್ಲಿ ಅವುಗಳ ಮಾಲೀಕರಿಗೆ ಒಪ್ಪಿಸಲಾಗಿದೆ ಹಾಗೂ ಇನ್ನೂ ಒಪ್ಪಿಸಬೇಕೆಂದು ಉದ್ದೇಶಿಸಿರುವಿರಿ? ಮತ್ತು

ಉ) ಈಗಾಗಲೇ ಸರ್ಕಾರಿ ಮನೆಗಳಿಗೆ ಅರ್ಜಿ ಕೊಟ್ಟವರಿಗೆ ೧೯೪೫ರ ಜನವರಿ ೧ರ ಒಳಗೆ ಎಷ್ಟು ಜನರಿಗೆ ವಸತಿಯನ್ನು ಕಲ್ಪಿಸಿಕೊಡಲು ಉದ್ದೇಶಿಸಿದ್ದೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಅ) ಮತ್ತು ಆ) ಸರ್ಕಾರದ ಕಟ್ಟಡಗಳಿಗೆ ಕೊಟ್ಟ ಅರ್ಜಿಗಳನ್ನು ಎರಡು ವರ್ಗಗಳಲ್ಲಿ ಅಂದರೆ ೬೦೦ ರೂ. ಗಿಂತ ಕಡಿಮೆ ವೇತನ ಇರುವ ಅಧಿಕಾರಿಗಳು ಮತ್ತು ೬೦೦ ರೂ. ಹಾಗೂ ಅದಕ್ಕಿಂತ ಹೆಚ್ಚಿನ ವೇತನದವರೆಂದು ವರ್ಗೀಕರಿಸಲಾಗಿದೆ. ಎಲ್ಲ ಕಾರಕೂನರು ಸಹಾಯಕರು ಮತ್ತು ಕೆಲವು ಅಧೀಕ್ಷಕರು ಮೊದಲನೆಯ ವರ್ಗದಲ್ಲಿ ಬರುತ್ತಾರೆ. ಈ ಪ್ರವರ್ಗದಲ್ಲಿ ಅರ್ಜಿಗಳನ್ನು ಕೊಟ್ಟವರಲ್ಲಿ ೧೬,೨೫೬ ಜನರಿಗೆ ವಸತಿ ಸೌಕರ್ಯವನ್ನು ಒದಗಿಸಲಾಗಿಲ್ಲ. ಎಷ್ಟು ಜನ ಕಾರಕೂನರು, ಸಹಾಯಕರು ಇಲ್ಲವೆ ಅಧೀಕ್ಷಕರು ಅರ್ಜಿಕೊಟ್ಟರು ಹಾಗೂ ಅವರಿಗೆ ಮನೆಗಳನ್ನು ಒದಗಿಸದಿರುವವರ ಸಂಖ್ಯೆಯು ಸದ್ಯದಲ್ಲಿ ಲಭ್ಯವಿಲ್ಲ.

ಇ) ನವದೆಹಲಿ ಕರೋಲ್‌ಭಾಗ್ ಕ್ಷೇತ್ರಗಳಲ್ಲಿ ರೂಪಾಯಿ ೬೦೦ಗಿಂತ ಕಡಿಮೆ ವೇತನ ಪಡೆಯುವ ಅಧಿಕಾರಿಗಳಿಗಾಗಿ ೧೮೮ ಮನೆಗಳಿಗಾಗಿ ಬೇಡಿಕೆ ಇದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೫ನೇ ಫೆಬ್ರವರಿ. ೧೯೪೬. ಪುಟ ೪೭೭

ಈ) ೩ ಉ) ಅರ್ಜಿದಾರನೊಬ್ಬನಿಗೆ ಆತನು ಕೋರಿದ ಮನೆಯನ್ನು ಕೊಡಬೇಕಾದರೆ ಅನೇಕ ಸಂಗತಿಗಳನ್ನು ಅವಲೋಕಿಸಬೇಕಾಗುತ್ತದೆ. ಅವುಗಳೆಲ್ಲವೂ ಇಂತಹವೇ ಎಂದು ಮೊದಲೇ ಹೇಳಬರುವುದಿಲ್ಲ, ಅವು ಯಾವುವೆಂದರೆ ಅವನಿಗೆ ನವದೆಹಲಿಯಲ್ಲಿ ಸ್ಥಳನಿಯುಕ್ತಿ ಮಾಡಿದ ದಿನಾಂಕ, ಆತನ ವೇತನ, ಅವನು ಒಬ್ಬನೇ, ವಿವಾಹಿತನೇ ಇಲ್ಲವೆ ಕುಟುಂಬ ಹೊಂದಿದವನೆ, ಯಾವ ನಮೂನೆಯ ನಿರ್ದಿಷ್ಟ ಮನೆಗೆ ಅವನು ತನ್ನ ಕೋರಿಕೆಯನ್ನು ಸಲ್ಲಿಸಿದ್ದಾನೆ, ಇದೇ ಮುಂತಾದ ಸಂಗತಿಗಳು.

## ೩೫೮
## ದೆಹಲಿಯಲ್ಲಿ ಹೆಚ್ಚುವರಿ ಸರ್ಕಾರಿ ಕಟ್ಟಡಗಳು*

**೨೫. ಶ್ರೀ ಅನಂತಶಯನಮ್ ಅಯ್ಯಂಗಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಈ ವಿಷಯಗಳ ಹೇಳುವಿರಾ : ಅ) ಸಾಮ್ರಾಜ್ಯ ಸಚಿವಾಲಯದ ಕಟ್ಟಡಗಳ ಉತ್ತರ ಮತ್ತು ದಕ್ಷಿಣಕ್ಕೆ ಯಾವುದೇ ಸೇನಾವಾಸದ ಮತ್ತು ಇತರ ಕಟ್ಟಡಗಳನ್ನು ಕಟ್ಟಲಾಗಿದೆಯೇ? ಮತ್ತು ನವದೆಹಲಿಯ ಉಳಿದ ಪ್ರದೇಶಗಳಲ್ಲಿ ಅಮೇರಿಕನ್ನರ, ಬ್ರಿಟಿಷ್ ಮತ್ತು ಭಾರತೀಯರ ಸಿಬ್ಬಂದಿಗಾಗಿ ಕಟ್ಟಿದ ಕಟ್ಟಡಗಳು ಅಂತಹ ಉಪಯೋಗಕ್ಕೆ ಈಗ ಅನುಪಯುಕ್ತವಾಗಿದೆಯೆ? ಹಾಗಿದ್ದಲ್ಲಿ ಎಷ್ಟು?

ಆ) ಮೇಲೆ (ಅ)ದಲ್ಲಿಯ ಕಟ್ಟಡಗಳಲ್ಲಿ ಒಟ್ಟು ಕೋಣೆ ಮುಂತಾದವುಗಳೆಷ್ಟು?

ಇ) ಈಗ ಅವುಗಳನ್ನು ಯಾವುದೇ ಅಧಿಕಾರಿಗೆ ಬಾಡಿಗೆ ಕೊಡಲಾಗಿದೆಯೆ? ಇಲ್ಲದಿದ್ದರೆ ಅವುಗಳನ್ನು ಏನು ಮಾಡಬೇಕೆಂದು ಉದ್ದೇಶಿಸಿದ್ದೀರಿ?

ಈ) ಅಂತಹ ಕಟ್ಟಡಗಳನ್ನು ಈಗ ಬಾಡಿಗೆಗೆ ಕೊಡುವ ಉದ್ದೇಶವಿದೆಯೆ? ಇಲ್ಲವೆ ಇನ್ನು ಮುಂದೆ (೧) ಕಚೇರಿಗಳ ಉಪಯೋಗಕ್ಕೆ (೨) ಅಡಿಗೆ ಮನೆ ಮತ್ತು ಸ್ನಾನದ ಕೋಣೆಗಳನ್ನು ಸ್ವಲ್ಪ ಪರಿವರ್ತನೆ ಮಾಡಿ ವಸತಿಯ ಉದ್ದೇಶಕ್ಕಾಗಿ ನೀಡುವಿರಾ?

ಉ) (ಈ) ಪ್ರಶ್ನೆಗೆ ಉತ್ತರವು ಇತ್ಯಾತ್ಮಕವಾಗಿದ್ದರೆ ಇಲ್ಲಿಯವರೆಗೆ ಯಾರಿಗಾದರೂ ಹಂಚಲಾಗಿದೆಯೆ? ಹಾಗಿದ್ದಲ್ಲಿ ಎಷ್ಟು? ಮತ್ತು

ಊ) ವಿಶೇಷವಾಗಿ ಅಮೇರಿಕನ್ ತಲ್ಕಾಟೋರಾ ರಸ್ತೆ, ಗುರುದ್ವಾರ ರಸ್ತೆ, ರಾಣಿ ರಸ್ತೆ ಮತ್ತು ಕನ್ನಾಟ್‌ಪ್ಲೇಸ್‌ಗಳಲ್ಲಿರುವ ಸೇನಾವಾಸಗಳನ್ನು ಏನು ಮಾಡಲು ಉದ್ದೇಶಿಸಿದ್ದೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು (ಆ) ಪ್ರಶ್ನೆಗಳ ಮೂಲಕ ಸನ್ಮಾನ್ಯ ಸದಸ್ಯರು ತಾತ್ಪೂರ್ತಿಕ ಕಟ್ಟಡಗಳನ್ನು ಕುರಿತು ಕೇಳುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಇವುಗಳಲ್ಲಿ ಇತ್ತಿಚಿನವರೆಗೆ ಭಾರತ ಸರ್ಕಾರದ ನೌಕರರನ್ನು ಹೊರತುಪಡಿಸಿ ಇತರ ಸಿಬ್ಬಂದಿ ವರ್ಗದವರು ವಾಸವಾಗಿದ್ದರು.

ಇಂತಹ ಕಟ್ಟಡಗಳ, ಈಗಾಗಲೇ ಸರ್ಕಾರಕ್ಕೆ ಬಿಟ್ಟುಕೊಟ್ಟ ಮತ್ತು ಇನ್ನೂ ಕೆಲವರ ಸ್ವಾಧೀನದಲ್ಲಿಯೇ ಇದ್ದು ಮುಂದಿನ ಮೂರು ತಿಂಗಳ ಒಳಗೆ ಬಿಟ್ಟುಕೊಡುವ ಕಟ್ಟಡಗಳ ಬಗ್ಗೆ ವಿವರವಾದ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೫ನೇ ಫೆಬ್ರವರಿ, ೧೯೪೬. ಪುಟ ४೭೮–೭೯

ಇ) ಈ ಪ್ರಶ್ನೆಗೆ ಈಗಾಗಲೇ ಸರ್ಕಾರಕ್ಕೆ ಬಿಟ್ಟುಕೊಟ್ಟಿರುವ ಕಟ್ಟಡಗಳಿಗೆ ಮಾತ್ರ ನನ್ನ ಉತ್ತರವನ್ನು ಸೀಮಿತಗೊಳಿಸುವೆನು. ಉತ್ತರವು ಸಕಾರಾತ್ಮಕವಾಗಿದೆ. ಇತ್ತೀಚೆಗೆ ಬಿಟ್ಟುಕೊಟ್ಟ ಕಟ್ಟಡಗಳು ಸರ್ಕಾರಕ್ಕೆ ಬೇಕಾಗಿದೆ ಮತ್ತು ಅವುಗಳನ್ನು ಉಪಯೋಗಿಸಲು ಉದ್ದೇಶಿಸಲಾಗಿದೆ.

ಈ) ಈ ಪ್ರಶ್ನೆಗೆ ಮುಂದಿನ ಮೂರು ತಿಂಗಳುಗಳಲ್ಲಿ ಸರ್ಕಾರಕ್ಕೆ ಬಿಟ್ಟುಕೊಡುವ ಕಟ್ಟಡಗಳಿಗೆ ಅದಕ್ಕೆ ಮಾತ್ರ ನನ್ನ ಉತ್ತರವು ಸೀಮಿತವಾಗಿದೆ. ಅಂತಹ ಕಟ್ಟಡಗಳು ಸರ್ಕಾರಕ್ಕೆ ಬೇಕಾಗಿವೆ. ಅವುಗಳನ್ನು ಯಾವುದಾದದೊಂದು ಉದ್ದೇಶಕ್ಕೆ ಉಪಯೋಗಿಸಲಾಗುವುದು.

ಉ) ಇಲ್ಲ. ಪ್ರಶ್ನೆಯ ಎರಡನೆಯ ಭಾಗವು ಉದ್ಭವಿಸುವುದಿಲ್ಲ.

ಊ) ತಲ್ಕತೋರಾ ರಸ್ತೆ ಮತ್ತು ಗುರುದ್ವಾರ ರಸ್ತೆಗೆ ಇರುವ ಕಟ್ಟಡಗಳನ್ನು ಸರ್ಕಾರವು ತನ್ನ ಕಚೇರಿಗಳಿಗಾಗಿ ಉಪಯೋಗ ಮಾಡಿಕೊಳ್ಳುತ್ತಿದ್ದು ಸರ್ಕಾರಕ್ಕೆ ಅವುಗಳ ಆವಶ್ಯಕತೆ ಇರುವವರೆಗೆ ಅವುಗಳನ್ನು ಸರ್ಕಾರವು ಉಪಯೋಗಿಸಿಕೊಳ್ಳುವುದು. ಕನ್ನಾಟ್‌ಪ್ಲೇಸ್ ಮತ್ತು ರಾಣಿ ರಸ್ತೆಯಲ್ಲಿರುವ ಅಮೆರಿಕೆಯ ಕಟ್ಟಡಗಳನ್ನು ಹೇಗೆ ವಿನಿಯೋಗಿಸಬೇಕೆಂಬುದು ಪರಿಶೀಲನೆಯಲ್ಲಿದೆ. ಸದ್ಯದಲ್ಲಿಯೇ ಅವುಗಳೂ ಸಹ ಸರ್ಕಾರದ ಉಪಯೋಗಕ್ಕೆ ಬೇಕಾಗಬಹುದು.

ನವದೆಹಲಿಯಲ್ಲಿ ಸರ್ಕಾರಕ್ಕೆ ಬಿಟ್ಟುಕೊಟ್ಟಿರುವ ಇಲ್ಲವೆ ಮುಂದಿನ ತಿಂಗಳಲ್ಲಿ ಬಿಟ್ಟು ಕೊಡುವುದರ ಬಗ್ಗೆ ವಿವರಗಳಿರುವ ಕೋಷ್ಟಕ

| **ಕಟ್ಟಡದ ಹೆಸರು** | | **ಕೋಣೆಗಳ ಸಂಖ್ಯೆ ಮುಂತಾದ್ದು ಅದರಲ್ಲಿ ಲಭಿಸುವ** |
|---|---|---|
| ಎಲ್ ಬ್ಲಾಕ್ | | ೭೪ |
| ಎಮ್ ಬ್ಲಾಕ್ | | ೧೦೭ |
| ಗುರುದ್ವಾರ ರಸ್ತೆ | | ೧೦೬ |
| ತಲ್ಕತೋರಾ ಸೇನಾವಾಸದ ಕಟ್ಟೆಗಳು | ೧೪ ಸೇನಾವಾಸ | ೪೯,೦೦೦ ಚ.ಅ. |
| | ೧ ಸೇನಾವಾಸ | ೨,೮೯೦ ಚ.ಅ. |
| | ಕಚೇರಿ ಕೋಣೆಗಳು (೧೮) | ೪,೪೪೬ ಚ.ಅ. |
| | ಸ್ವಾಗತ ಕೋಣೆ ಮತ್ತು ಅದಕ್ಕೆ ಸೇರಿರುವ ಹತ್ತಿರುವ ೪ ಕೋಣೆಗಳು | ೫,೦೦೦ ಚ.ಅ. |
| | ಮತ್ತು ೧ ಉಗ್ರಾಣ ಅಡಿಗೆ ಮನೆ ಮತ್ತು ಊಟದ ಹಾಲ್ | ೨,೮೯೩ ಚ.ಅ. |
| ಕೇಂದ್ರ ವಿಸ್ಟಾದಲ್ಲಿರುವ ಅಧಿಕಾರಿಗಳ ಮನೆಗಳು | ೨೮೮ ಕೋಣೆಗಳು | |
| ಜೋಧಪುರ ಊಟದ ಮನೆ | ೧೨೦ | |

| | | |
|---|---|---|
| (ಏಪ್ರಿಲ್ ೧೯೪೬ರಲ್ಲಿ ಬಿಟ್ಟುಕೊಡುವ ಕ್ಯಾನಿಂಗ್ ರಸ್ತೆ ಸೇನಾವಾಸದ ಬಿ ಬ್ಲಾಕ್) | ೬ ಸೇನಾವಾಸದ (ಜೋಡು) ಮನೆಗಳು | ೬೨,೪೦೬ ಚ.ಅ. |
| (೨೧–೨–೧೯೪೬ರಂದು | ೧ ಸೇನಾವಾಸದ್ದು | ೪,೫೯೮ ಚ.ಅ. |
| ಬಿಟ್ಟುಕೊಡುವ) ಕಟ್ಟಡಗಳು | ೧೦ ಕಚೇರಿ ಕೋಣೆಗಳು | ೪,೫೬೬ ಚ.ಅ. |

## ೩೫೯
## ಮಿ. ಹಾರ್ಕ್‌ನೆಸ್‌ರವರನ್ನು ದೆಹಲಿ ಮತ್ತು ನವದೆಹಲಿಯ ನಗರ ಯೋಜನಾ ಅಧಿಕಾರಿಯೆಂದು ನೇಮಿಸುವುದು *

**೨೬. ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಹೇಳುವಿರಾ : ಅ) ಶ್ರೀ ಹಾರ್ಕನೆಸ್ ಅವರನ್ನು ದೆಹಲಿ ಮತ್ತು ನವದೆಹಲಿಯ ನಗರಯೋಜನಾ ಅಧಿಕಾರಿಯೆಂದು ಇತ್ತೀಚೆಗೆ ನೇಮಿಸಿರುವನ್ನು ನಿಜವೇ?

ಆ) ಯಾವ ಕರಾರುಗಳ ಮೇಲೆ ಆತನ ನೇಮಕವನ್ನು ಮಾಡಿಕೊಳ್ಳಲಾಗಿದೆ?

ಇ) ಈ ಹುದ್ದೆಗೆ ಭಾರತದಲ್ಲಿ ಜಾಹಿರಾತು ಕೊಡಲಾಗಿತ್ತೆ? ಮತ್ತು ಅರ್ಹತೆ ಪಡೆದ ಹಾಗೂ ಸಮರ್ಥ ಭಾರತೀಯರಿಂದ ಈ ಹುದ್ದೆಗೆ ಅರ್ಜಿಗಳನ್ನು ಕರೆಯಲಾಗಿತ್ತೆ? ಮತ್ತು ಹಾಗಿದ್ದಲ್ಲಿ ಯಾವುದಾದರೂ ಅರ್ಜಿಗಳು ಬಂದಿದ್ದವೆ?

ಈ) ಈ ನೇಮಕವನ್ನು ಫೆಡರಲ್ ಪಬ್ಲಿಕ್ ಸರ್ವಿಸ್ ಆಯೋಗದ ಮುಖಾಂತರ ಮಾಡಲಾಗಿದೆಯೆ? ಮತ್ತು ಹಾಗಿಲ್ಲದಿದ್ದರೆ ಏಕೆ ಇಲ್ಲ?

ಉ) ಅಗತ್ಯವಿರುವ ಸಾಮರ್ಥ್ಯವಿರುವ ಯಾವುದೇ ಭಾರತೀಯ ಲಭಿಸಲಿಲ್ಲವೆಂದು ಮೊದಲು ಖಾತರಿಮಾಡಿಕೊಂಡು ಹಾರ್ಕ್‌ನೆಸ್‌ನನ್ನು ಈ ಹುದ್ದೆಗೆ ನೇಮಕಮಾಡಿಕೊಂಡರೆ? ಮತ್ತು

ಊ) ಶ್ರೀ ಹಾರ್ಕ್‌ನೆಸ್ ಅವರಿಗೆ ಭಾರತದಂತಹ ಹಳ್ಳಿಗಳ ನಾಡಿನಲ್ಲಿ ನಗರ ಯೋಜನೆಯನ್ನು ಕೈಕೊಂಡ ಅನುಭವವಿದೆಯೇ? ಅಥವಾ ಆತನ ಅನುಭವವು ಭಾರತವನ್ನು ಬಿಟ್ಟು ಯುರೋಪ್ ಮತ್ತು ಉಳಿದ ದೇಶಗಳ ಅನುಭವಕ್ಕೆ ಸೀಮಿತವಾಗಿದೆಯೆ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೧, ೫ನೇ ಫೆಬ್ರವರಿ, ೧೯೪೬. ಪುಟ ೪೭೭

## ೩೬೦
## ವಿಧಾನಸಭೆ ಸದಸ್ಯರಿಗೆ ಕೈಯಿಂದ ಮಾಡಿದ ಕಾಗದ*

**೩೧. ಸೇಠ್ ಗೋವಿಂದ ದಾಸ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಈ ವಿಷಯದ ಬಗ್ಗೆ ದಯವಿಟ್ಟು ಹೇಳುವರೆ? ಇನ್ನು ಮುಂದೆ ಈ ಸದಸ್ಯರ ಉಪಯೋಗಕ್ಕೆ ಹಾಗೂ ಮಾರಾಟಕ್ಕೆ ಸಹಕಾರಿ ತತ್ವದ ಮೇಲೆ ಸ್ಥಾಪಿಸಲಾದ ಹಳ್ಳಿಯ ಔದ್ಯಮಿಕ ಸಂಸ್ಥೆಗಳು ಕೈಯಿಂದ ಮಾಡಿದ ಕಾಗದಗಳನ್ನು ಪಡೆಯಲು ಉದ್ದೇಶಿಸಿದ್ದೀರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸದನದ ಎಲ್ಲ ಸದಸ್ಯರು ಮಾನ್ಯ ಸದಸ್ಯರು ಉಲ್ಲೇಖಿಸಿದ ಕೈಯಿಂದ ಮಾಡಿದ ಕಾಗದಗಳನ್ನು ಒಪ್ಪಿ ಸ್ವೀಕರಿಸಿದರೆ, ಸ್ವೀಕರಿಸಲು ಯೋಗ್ಯವಾದ ಗುಣಮಟ್ಟದ ಅಂತಹ ಕಾಗದವು ಎಲ್ಲಿಂದ ಲಭ್ಯವಿದ್ದರೂ ಅದನ್ನು ಖರೀದಿಸಿ ಒದಗಿಸಲಾಗುವುದು.

## ೩೬೧
## ಶಾಸನಸಭಾ ಸದಸ್ಯರಿಗೆ ಬಾವಿ ಮತ್ತು ಹೆಚ್ಚಿನ ವಸತಿ ಸೌಕರ್ಯ**

**೩೩. ಸೇಠ್ ಗೋವಿಂದ ದಾಸ್ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವರೇ. ಕೇಂದ್ರ ಶಾಸಕರ ಉಭಯ ಸದನಗಳ ಸದಸ್ಯರುಗಳಿಗೆ ವಾಸಿಸಲು ಬಂಗ್ಲೆಗಳ ಕೊರತೆ ಇದೆಯೆಂಬುದು ನಿಜವೆ? ಹಾಗಿದ್ದಲ್ಲಿ ಎಲ್ಲ ಸದಸ್ಯರಿಗೆ ವಸತಿ ಸೌಕರ್ಯ ಒದಗಿಸಲು ಸಾಕಷ್ಟು ಸಂಖ್ಯೆಯಲ್ಲಿ ಹೆಚ್ಚಿನ ಬಂಗ್ಲೆಗಳನ್ನು ಕಟ್ಟಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಕೊಂಡಿದೆ?

ಆ) ಈ ಸ್ಥಳಗಳಲ್ಲಿ ಬಾವಿಗಳ ಅಭಾವವಿರುವುದರಿಂದ ಎಮ್.ಎಲ್.ಎ. ರವರ ಕುಟುಂಬದ ಸಾಂಪ್ರದಾಯಿಕ ಸದಸ್ಯರು ನಳದ ನೀರನ್ನು ಉಪಯೋಗಿಸಲು ತಕರಾರು ಮಾಡುವುದರಿಂದ ಅವರಿಗೆ ತುಂಬಾ ಕಷ್ಟವಾಗುತ್ತಿದೆಯೆಂಬುದರ ಅರಿವು ಸರ್ಕಾರಕ್ಕಿದೆಯೆ?

ಇ) ಸದಸ್ಯರು ಮುಂದಿನ ಅಧಿವೇಶನಕ್ಕೆ ಬರುವಷ್ಟರಲ್ಲಿ ಸರ್ಕಾರವು ಈ ಸ್ಥಳಗಳಲ್ಲಿ ಯೋಗ್ಯ ಅಂತರದಲ್ಲಿ ಬಾವಿಗಳನ್ನು ಕಟ್ಟಿಸಲು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಈ ಅಧಿವೇಶನ ಪ್ರಾರಂಭವಾಗುವವವರೆಗೆ ಇಂತಹ ಕೊರತೆಯ ಬಗ್ಗೆ ಸರ್ಕಾರಕ್ಕೆ ವರದಿ ಬಂದಿರಲಿಲ್ಲ ಮತ್ತು ಕೊರತೆಯ ಬಗ್ಗೆ ಯಾವುದೇ ದೂರು ಬಂದಿರಲಿಲ್ಲ. ಬಂಗ್ಲೆಗಳ ನಮೂನೆಯ ವಸತಿಯಲ್ಲಿ ಸ್ವಲ್ಪ ಕೊರತೆಯು ಇದೀಗ ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಈ ವಿಷಯವು ಈಗ ಅವರ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಅಂತಹ ಯಾವುದೇ ಉದ್ದೇಶವು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೫ನೇ ಫೆಬ್ರವರಿ, ೧೯೪೬, ಪುಟ ೪೮೧

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೧, ೫ನೇ ಫೆಬ್ರವರಿ, ೧೯೪೬, ಪುಟ ೪೮೧

## ೩೬೨
## ಭಾರತ ಸರ್ಕಾರದ ಭೂಗರ್ಭ ಸರ್ವೇಕ್ಷಣ ಇಲಾಖೆಯನ್ನು ಪುನರ್ ಸಂಯೋಜಿಸುವುದು*

**೩೬. ಶ್ರೀ ಕೆ.ಸಿ. ನಿಯೋಗಿ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಹೇಳುವಿರಾ : ೧) ಭಾರತ ಸರ್ಕಾರವು ತನ್ನ ಗಣಿಗಳ ಕಾರ್ಯನೀತಿಯನ್ನು ಮುಂದುವರೆಸಲು ಸಮರ್ಥವಾದ ಸಾಧನವಾಗುವಂತೆ ಮಾಡಲು ಭಾರತ ಸರ್ಕಾರದ ಭೂಗರ್ಭ ಸಮೀಕ್ಷಾ ಇಲಾಖೆಯನ್ನು ಪುನರ್‌ಸಂಯೋಜಿಸಲು ಯಾವ ಕ್ರಮವನ್ನು ಕೈಗೊಂಡಿದೆ? ಇಲ್ಲವೆ ತೆಗೆದುಕೊಳ್ಳಲು ಉದ್ದೇಶಿಸಿದೆ? ಮತ್ತು ೧೬೪೫ರ ಮಾರ್ಚ್ ೧೨ನೆಯ ದಿನಾಂಕದಂದು ಭಾರತ ಸರ್ಕಾರದ ಗಣಿಗಳ ಸಾಧನ ಸಂಪತ್ತುಗಳ ಕಾರ್ಯನೀತಿಯ ಬಗ್ಗೆ ವ್ಯಾಖ್ಯಾನಿಸಿ ಶಾಸನಸಭೆಯಲ್ಲಿ ಕೊಟ್ಟ ಹೇಳಿಕೆಯ ಪ್ರಕಾರ ಗಣಿಗಳ ಮೇಲೆ ನಿಯಂತ್ರಣವನ್ನು ಸಾಧಿಸಲು ಯಾವುದೇ ಶಾಸನವನ್ನು ಸರ್ಕಾರವು ತರುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ೧) ಕೇಂದ್ರ ಸರ್ಕಾರವು ಭೂಗರ್ಭ ಸಮೀಕ್ಷೆಯ ಅತಿ ಬೃಹತ್ ವಿಸ್ತರಣೆಯನ್ನು ಕೈಗೆತ್ತಿಕೊಂಡಿದೆ. ಈ ಸಮೀಕ್ಷಾ ಇಲಾಖೆಯ ಉನ್ನತ ಗೆಜೆಟೆಡ್ ಸಿಬ್ಬಂದಿಯ ಸಂಖ್ಯೆಯು ಯುದ್ಧಪೂರ್ವದಲ್ಲಿ ೨೭ ಇದ್ದುದನ್ನು ೧೦೨ಕ್ಕೆ ಹೆಚ್ಚಿಸಿದೆ. ಇದು ಭೂ–ಭೌತಶಾಸ್ತ್ರಜ್ಞರನ್ನು ಹಾಗೂ ಗಣಿಗಳ ಇಂಜಿನಿಯರ್‌ರನ್ನು ಒಳಗೊಂಡಿದೆ.

ಭಾರತ ಭೂಗರ್ಭ ಸಮೀಕ್ಷೆಯ ಸಂಘಟನೆ ಮತ್ತು ಅದರ ಕರ್ತವ್ಯಗಳನ್ನು ವಿವರಿಸುವ ಒಂದು ಚಿಕ್ಕ ಪುಸ್ತಕವು ಸದನದ ಗ್ರಂಥಾಲಯದಲ್ಲಿ ಲಭ್ಯವಿದೆ.

೨) ಪ್ರಾಂತೀಯ ಸರ್ಕಾರಗಳೊಂದಿಗೆ ಈ ವಿಷಯವಾಗಿ ಸಮಾಲೋಚಿಸಲಾಗಿದೆ ಮತ್ತು ಅವರ ಉತ್ತರಗಳನ್ನು ಪರಿಶೀಲಿಸಲಾಗುತ್ತದೆ.

## ೩೬೩
## ಭಾರತ ಸರ್ಕಾರ ಭೂಗರ್ಭ ಸಮೀಕ್ಷೆಯ ಬಳಕೆಯ ಶಾಖೆಯನ್ನು ರದ್ದುಪಡಿಸುವುದು *

**೩೭. ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಸದಸ್ಯರು ದಯವಿಟ್ಟು ಈ ವಿಷಯವನ್ನು ಕುರಿತು ಹೇಳುವಿರಾ : ಭಾರತ ಸರ್ಕಾರದ ಭೂಗರ್ಭ ಸಮೀಕ್ಷೆಯ ಬಳಕೆಯ ಶಾಖೆಯನ್ನು ರದ್ದುಪಡಿಸಿದ ಸಂದರ್ಭವು ಯಾವುದು?

ಆ) ಒಂದು ಹಂತದಲ್ಲಿ ಅದಕ್ಕಾಗಿ ನೇಮಿಸಿದ ಸಲಹಾ ಸಮಿತಿಯು ಯುದ್ಧದ ನಂತರ ಗಣಿಗಳಿಗೆ ಸಂಬಂಧಿಸಿದಂತೆ ಯೋಜನಾ ಸಮಿತಿಯಾಗಿ ಕೆಲಸ ಮಾಡಬೇಕೆಂದು ತಿಳಿಸಿದ್ದು ನಿಜವಲ್ಲವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೫ನೇ ಫೆಬ್ರವರಿ, ೧೯೪೬. ಪುಟ ೪೮೨–೮೩

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೫ನೇ ಫೆಬ್ರವರಿ, ೧೯೪೬. ಪುಟ ೪೮೩

ಇ) ಈಗ ಅಂತಹ ಒಂದು ಸಮಿತಿಯು ಯಾವುದಾದರೂ ಇದ್ದರೆ ಅದಿರುಗಳನ್ನು ಕುರಿತು ಯುದ್ಧಾನಂತರದ ಕಾರ್ಯನೀತಿಯ ಪ್ರಶ್ನೆಯನ್ನು ಪರಿಗಣನೆ ಮಾಡುವುದರಲ್ಲಿ ನಿರತವಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಯುದ್ಧದ ಉದ್ಯಮಗಳ ದೃಷ್ಟಿಯಿಂದ ದೇಶದ ಅಭಿವೃದ್ಧಿಯಾಗಿಲ್ಲದ ಗಣಿ ಸಂಪತ್ತಿನ ಬಳಕೆಯನ್ನು ಮುಂದುವರಿಸುವ ದೃಷ್ಟಿಯಿಂದ ಗಣಿಗಳ ಬಳಕೆ ಶಾಖೆಯನ್ನು ಸ್ಥಾಪಿಸಲಾಗಿತ್ತು. ಈಗ ಯುದ್ಧ ಮುಗಿದ ನಂತರ ಯುದ್ಧ ಕಾಲದ ಉತ್ಪನ್ನದ ಮಹತ್ವದಲ್ಲಿ ಆಗಿರುವ ಬದಲಾವಣೆಗಳಿಂದಾಗಿ ದೇಶದಲ್ಲಿ ಗಣಿಗಳ ಬೆಳವಣಿಗೆಯ ಯೋಜನೆಯು ರಾಜ್ಯನೀತಿಯಾಗಿದೆ. ಇಂತಹ ಯೋಜನಾಬದ್ಧವಾದ ಬೆಳವಣಿಗೆಯ ಕಾರ್ಯನೀತಿಯನ್ನು ಕೈಗೊಳ್ಳುವುದು ಭಾರತ ಭೂಗರ್ಭ ಸಮೀಕ್ಷಾ ಇಲಾಖೆಯ ಆಂತರಿಕ ಕರ್ತವ್ಯವಾಗಿದೆ ಮತ್ತು ಅದನ್ನು ಬೆಳಸಲಾಗಿದೆ ಮತ್ತು ಆದರೆ ಉತ್ಪಾದನೆಯ ಉದ್ದೇಶಕ್ಕಾಗಿ ಪ್ರತ್ಯೇಕ ಶಾಖೆಯನ್ನು ಮುಂದುವರೆಸುವುದು ಅವಶ್ಯವಿರಲಿಲ್ಲ.

ಆ) ಹೌದು. ಕಾರ್ಯನೀತಿಯಲ್ಲಿ ಬದಲಾವಣೆಗಳಾದುದರಿಂದ ಸಲಹಾ ಸಮಿತಿಯ ಸಿಬ್ಬಂದಿಯಲ್ಲಿಯೂ ಬದಲಾವಣೆಮಾಡುವುದು ಅವಶ್ಯಕವಾಯಿತು.

ಇ) ಭಾರತ ಸರ್ಕಾರವು ಇತ್ತೀಚೆಗೆ ಪರಿಣತ ಸಲಹಾ ಮಂಡಳಿಯನ್ನು ರಚಿಸಿದೆ. ಇದು ದೇಶದ ಗಣಿಗಳ ಬೆಳವಣಿಗೆಯ ವಿಷಯಗಳನ್ನು ಕುರಿತು ಸಲಹೆಯನ್ನು ಕೊಡುತ್ತದೆ. ೧೯೪೬ರ ಜನವರಿ ೯ನೇಯ ದಿನಾಂಕದ ಎಮ್ ೧೦೨(೪)ನೇ ಕ್ರಮ ಸಂಖ್ಯೆಯ ಕಾರ್ಮಿಕ ವಿಭಾಗದ ಠರಾವಿನ ಪ್ರಕಾರ ಸಮಿತಿಯನ್ನು ರಚಿಸಿದ್ದು, ಈ ಠರಾವಿನ ಪ್ರತಿಯು ಸದನದ ಗ್ರಂಥಾಲಯಾದಲ್ಲಿದೆ.

## ೩೬೪
## ಭಾರತೀಯ ಬೆವಿನ್ ಹುಡುಗರು *

**೪೦. ಶ್ರೀ ಕೆ.ಸಿ. ನಿಯೋಗಿ :** ಅ) ಬೆವಿನ್ ತರಬೇತಿ ಯೋಜನೆಯಂತೆ ಎಷ್ಟು ಭಾರತೀಯರು ಬ್ರಿಟನ್‌ನಲ್ಲಿ ತರಬೇತಿ ಪಡೆದರೆಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

ಆ) ಅವರಲ್ಲಿ ಎಷ್ಟು ಜನರನ್ನು ಯುದ್ಧದ ಸಾಮಗ್ರಿಗಳ ಉತ್ಪಾದನೆಯಲ್ಲಿ ತೊಡಗಿದ ಕಾರ್ಖಾನೆಗಳಲ್ಲಿ ನೇಮಿಸಿಕೊಂಡಿರುವಿರಿ?

ಇ) ಅವರಲ್ಲಿ ಎಷ್ಟು ಜನರನ್ನು ನಂತರ ಕೆಲಸದಿಂದ ತೆಗೆದುಹಾಕಲಾಗಿದೆ?

ಈ) ಬೆವಿನ್ ತರಬೇತಿ ಯೋಜನೆಯ ಅನ್ವಯ ತರಬೇತಿ ಪಡೆದ ತಜ್ಞ ಭಾರತೀಯರನ್ನು ಅವರು ವಿಶೇಷ ಪ್ರಾವೀಣ್ಯತೆಯನ್ನು ಪಡೆದ ಕ್ಷೇತ್ರಕ್ಕಿಂತ ಬೇರೆಯಾದ ಕ್ಷೇತ್ರಗಳಲ್ಲಿ ಕೆಲಸಗಳಿಗೆ ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರವು ಹೇಳುತ್ತಿರುವುದು ನಿಜವೆ? ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಮತ್ತು ಇಂತಹ ತಂತ್ರಜ್ಞರ ಸಂಖ್ಯೆ ಎಷ್ಟು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೫ನೇ ಫೆಬ್ರವರಿ, ೧೯೪೬. ಪುಟ ೪೮೩

ಉ) ಭಾರತದಲ್ಲಿ ನೌಕರಿಯ ಭರವಸೆಯು ಇಲ್ಲದಿದ್ದರೂ ಇಂಗ್ಲೆಂಡಿನಲ್ಲಿ ವಾಸಿಸುತ್ತಿದ್ದ ಜೆವಿನ್ ಹುಡುಗರಿಗೆ ಧಾರಾಳವಾದ ಆಶ್ವಾಸನೆಯನ್ನು ಕೊಟ್ಟು ಅವರ ಸೇವೆಯನ್ನು ಭಾರತದಲ್ಲಿ ಔದ್ಯೋಗಿಕ ಅಭಿವೃದ್ಧಿ ಸ್ಥಾನಮಾನವನ್ನು ಹೆಚ್ಚಿಸಲು ಉಪಯೋಗಿಸಿಕೊಳ್ಳಲಾಗುವುದೆಂದು ಹೇಳಿದುದು ನಿಜವೆ? ಉತ್ತರವು ಬಹುಮಟ್ಟಿಗೆ ಮೇಲೆ ಹೇಳಿದಂತೆ ಇದ್ದರೆ ಈ ತರಬೇತಿಪಡೆದ ಇವರಿಗೆ ಯೋಗ್ಯ ನೌಕರಿ ಕೊಡಿಸಲು ಯಾವ ಕ್ರಮವನ್ನು ಕೈಗೊಂಡಿದ್ದೀರಿ? ಇಲ್ಲವೆ ತೆಗೆದುಕೊಳ್ಳಬೇಕೆಂದು ಉದ್ದೇಶಿಸಿದ್ದೀರಿ?

(೧) ಹೀಗೆ ತರಬೇತಿ ಪಡೆದವರು ತಮ್ಮ ಅಸಮಾಧಾನವನ್ನು ತೋಡಿಕೊಂಡ ಯಾವುದೇ ವಿಜ್ಞಾಪನಾ ಪತ್ರವು ಸರ್ಕಾರದ ಕೈಸೇರಿದೆಯೆ? ಹಾಗಿದ್ದಲ್ಲಿ ಅದರ ಪರಿಣಾಮವೇನಾಗಿದೆ?

ಊ) ಬೆವಿನ್ ತರಬೇತಿ ಯೋಜನೆಯ ಉದ್ದೇಶಗಳಿಗೆ ಭಾರತೀಯ ಅಭ್ಯರ್ಥಿಗಳಿಗೆ ಈ ಯೋಜನೆಯಲ್ಲಿ ತರಬೇತಿಯಲ್ಲಿ ವ್ಯವಸ್ಥೆಯನ್ನು ಮಾಡಿದಾಗ ಬ್ರಿಟನ್‌ನಲ್ಲಿರುವ ಮಾಲೀಕರ ಮತ್ತು ನೌಕರರ ಸಹಕಾರ ಪದ್ಧತಿಯ ಅಧ್ಯಯನವನ್ನು ಮಾಡಿಸುವುದು. ಮತ್ತು ಅಲ್ಲಿ ಪ್ರಬಲವಾಗಿರುವ ಸಂಘಗಳ ತತ್ವಗಳ ಮಹತ್ವಗಳನ್ನು ತಿಳಿಸುವುದು ಉದ್ದೇಶವಾಗಿದ್ದಿತೆ? ಒಂದಾಗಿತ್ತೆ? ಹಾಗಿದ್ದಲ್ಲಿ ಭಾರತದಲ್ಲಿ ಕಾರ್ಮಿಕ ಸಂಘಗಳ ತತ್ವಗಳ ಆಧಾರದ ಮೇಲೆ ತರಬೇತಿ ಪಡೆದ ಇವರನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಸರ್ಕಾರವು ಉದ್ದೇಶಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೭೧೨. ಈಗ ೭೫ ಜನರ ಒಂದು ತಂಡ ತರಬೇತಿ ಪಡೆಯುತ್ತಿದೆ.

ಆ) ೪೧೪. ಇದಲ್ಲದೆ ೧೬೮ ತರಬೇತಿ ಹೊಂದುತ್ತಿರುವವರು ಸರ್ಕಾರದ ಆವಶ್ಯಕ ಸೇವೆ ಮತ್ತು ರಕ್ಷಣಾ ಸೇವೆ (ಕೇಂದ್ರ ಪ್ರಾಂತೀಯ ಮತ್ತು ಭಾರತೀಯ ರಾಜ್ಯಗಳ) ಉದ್ಯಮಗಳಲ್ಲಿ, ರೇಲ್ವೆ ಒಳಗೊಂಡು ಸೇವೆಯಲ್ಲಿ ತೊಡಗಿಸಲಾಗಿದೆ.

ಇ) ಯುದ್ಧದ ಉತ್ಪಾದನೆಗಳಲ್ಲಿ ತೊಡಗಿದ ಕಾರ್ಖಾನೆಗಳಲ್ಲಿ ೧೧೧ ಜನರನ್ನು ಮತ್ತು ೯ ಜನರನ್ನು ಉಳಿದ ಉದ್ಯಮಗಳಲ್ಲಿ ನೇಮಿಸಲಾಗಿದೆ.

ಈ) ಬೆವಿನ್ ತರಬೇತಿ ಪಡೆದು ಇಂಗ್ಲೆಂಡ್‌ನಿಂದ ಮರಳಿ ಬಂದವರನ್ನು ನೌಕರಿಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಭಾರತ ಸರ್ಕಾರವು ರಾಷ್ಟ್ರೀಯ ಸೇವೆ (ತಾಂತ್ರಿಕ ಸಿಬ್ಬಂದಿ) ಅಧ್ಯಾದೇಶದ ಅಡಿಯಲ್ಲಿ ನೇಮಕದ ಆದೇಶ ಹೊರಡಿಸಿದೆ. ಬೆವಿನ್ ತರಬೇತಿಯನ್ನು ಪಡೆದವರ ಬಹಳ ಪ್ರಕರಣಗಳಲ್ಲಿ ಇಂಗ್ಲೆಂಡಿನಲ್ಲಿ ಅವರಿಗೆ ಕೊಟ್ಟ ತರಬೇತಿಗೆ ಸುಸಂಗತವಾದ ಕೆಲಸಗಳಲ್ಲಿ ಅವರನ್ನು ತೊಡಗಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಮಾತ್ರ ಅವರು ನೈಪುಣ್ಯತೆಯನ್ನು ಪಡೆದ ಕೆಲಸದಲ್ಲಿ ನೇಮಿಸಲಾಗಲಿಲ್ಲ. ಅವರನ್ನು ಬೇರೆ ಕೆಲಸಗಳಲ್ಲಿ ತೊಡಗಿಸಲಾಗಿದೆ. ಅವರು ತಮಗೆ ದೊರೆತ ಸಾಮಾನ್ಯ ತರಬೇತಿಯಿಂದ ಆ ಕೆಲಸವನ್ನು ಮಾಡಬಲ್ಲರು. ಇಂತಹ ಎಲ್ಲಾ ಪ್ರಕರಣಗಳನ್ನೂ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸುತ್ತದೆ ಮತ್ತು ಅವರಿಗೆ ಸೂಕ್ತ ನೌಕರಿ ದೊರಕಿಸಿ ಕೊಡಲು ಎಲ್ಲ ಪ್ರಯತ್ನ ಮಾಡಲಾಗುವುದು.

ಉ) ಸರ್ಕಾರಕ್ಕೆ ಗೊತ್ತಿದ್ದ ಮಟ್ಟಿಗೆ ಅಂತಹ ಯಾವ ಭರವಸೆಯನ್ನು ಕೊಟ್ಟಿಲ್ಲ. ವಿವರಣಾ ಪತ್ರ (ಪ್ರಾಸ್ಪೆಕ್ಟಸ್)ದಲ್ಲಿ ನೌಕರಿ ಕೊಡುವ ಭರವಸೆಯು ಇಲ್ಲವೆಂದೂ ಆದರೆ ತರಬೇತಿಪಡೆದವರನ್ನು ಯೋಗ್ಯ ನೌಕರಿಗಳಲ್ಲಿ ತೊಡಗಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದೆಂದು ಸ್ಪಷ್ಟವಾಗಿ

ಹೇಳಲಾಗಿದೆ.

ಊ) ಹೌದು. ಅವರ ಮುಖ್ಯ ಕುಂದುಕೊರತೆಗಳು ಯುದ್ಧಾನಂತರದಲ್ಲಿ ಯೋಗ್ಯ ಹುದ್ದೆಗಳಿಗೆ ನೇಮಕ ಹೊಂದುವ ನಿರೀಕ್ಷೆಗಳಿಗೆ ಸಂಬಂಧಿಸಿದ್ದಾಗಿದೆ. ಬೆವಿನ್ ತರಬೇತಿ ಪಡೆದ ನಿರುದ್ಯೋಗಿಗಳಿಗೆ ಸರ್ಕಾರಿ ಮತ್ತು ಖಾಸಗಿ ಉದ್ಯಮಗಳಲ್ಲಿ ಕೆಲಸವನ್ನು ದೊರಕಿಸಿ ಕೊಡುವುದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡಲಾಗುತ್ತಿದೆ. ನೌಕರಿಗಾಗಿ ತಮ್ಮ ಹೆಸರನ್ನು ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾಯಿಸಿಕೊಂಡಿರುವ ಬೆವಿನ್ ತರಬೇತಿ ಪಡೆದವರಿಗೆ ಸಾಧ್ಯವಾದ ಎಲ್ಲ ಸಹಾಯವನ್ನೂ ಮಾಡಬೇಕೆಂದು ಕಛೇರಿಗಳ ಮೆನೇಜರುಗಳಿಗೆ ಸೂಚನೆಗಳನ್ನು ಕೊಡಲಾಗಿದೆ. ಬೆವಿನ್ ತರಬೇತಿ ಪಡೆದವರ ನಿರುದ್ಯೋಗ ಪರಿಸ್ಥಿತಿಯನ್ನು ನಿಯತಕಾಲಿಕವಾಗಿ ಪರಿಶೀಲನೆ ಮಾಡಿ, ಸಾಧ್ಯವಾದಷ್ಟು ಮಟ್ಟಿಗೆ ಅವರ ನ್ಯಾಯಸಮ್ಮತ ಕುಂದುಕೊರತೆಗಳನ್ನು ನಿವಾರಿಸಲು ಕ್ರಮತೆಗೆದು ಕೊಳ್ಳಲಾಗುವುದು.

ಋ) ಹೌದು. ಬೆವಿನ್ ತರಬೇತಿ ಪಡೆದವರಿಗೆ ಬ್ರಿಟನ್ನಿನ ಕಾರ್ಮಿಕ ಒಕ್ಕೂಟದ ಕಾರ್ಯಗಳನ್ನು ಅಭ್ಯಸಿಸಲು ಸೌಕರ್ಯಗಳನ್ನು ಒದಗಿಸಲಾಗಿತ್ತು. ಭಾರತದಲ್ಲಿ ಕಾರ್ಮಿಕ ಒಕ್ಕೂಟದ ಬೆಳವಣಿಗೆಗೆ ಅವರು ಪಡೆದ ಅನುಭವವು ಸಹಾಯವಾಗಬಹುದೆಂದು ಆಶಿಸಲಾಗಿದೆ.

## ೩೬೫
## ದಾಮೋದರ ಯೋಜನೆಯನ್ನು ಮುಂದುವರಿಸುವುದಕ್ಕಾಗಿ ಹಳ್ಳಿಗಳನ್ನು ಖಾಲಿಮಾಡಿಸುವ ಉದ್ದೇಶ *

**ಮಾನ್ಯ ಅಧ್ಯಕ್ಷರು :** ಈ ಯೋಜನೆಯು ಯಾವಾಗ ಪ್ರಾರಂಭವಾಯಿತು? ಮತ್ತು ಇಲ್ಲಿಯವರೆಗೆ ಆಗಿರುವ ಪ್ರಗತಿಯೆಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಹಂತದಲ್ಲಿ ಆ ಬಗ್ಗೆ ಸಂಪೂರ್ಣವಾಗಿ ಚರ್ಚಿಸಲು ಅಗತ್ಯಮಾಹಿತಿ ಇಲ್ಲ. ಬಿಹಾರ ಮತ್ತು ಬಂಗಾಳಗಳಲ್ಲಿ ಹರಿದುಹೋಗುವ ದಾಮೋದರ ನದಿಗೆ ಹಲವೆಡೆ ಕೆಲವು ಅಣೆಕಟ್ಟುಗಳನ್ನು ಕಟ್ಟುವ ಆಲೋಚನೆಯು ಸರ್ಕಾರಕ್ಕೆ ಇದೆ ಅನ್ನುವಲ್ಲಿ ಯಾವ ಸಂಶಯವೂ ಇಲ್ಲ. ಆದರೆ ತಾವು ಈಗ ಕೇಳಿದ ನಿಲುವಳಿ ಸೂಚನೆಯ ಒತ್ತಾಯದಿಂದ ಖಾಲಿ ಮಾಡಿಸುವಿಕೆಯ ಬಗ್ಗೆ ನಾನು ಹೇಳಬಯಸುವುದೇನೆಂದರೆ ನಾವು ಈಗ ಇನ್ನೂ ಪ್ರಾಥಮಿಕ ಹಂತದಲ್ಲಿದ್ದೇವೆ. ಈ ನದಿಯ ನೀರಿನಿಂದ ಎಷ್ಟು ಕ್ಷೇತ್ರವು ಈಗ ನೀರಿನಲ್ಲಿ ಮುಳುಗಡೆಯಾಗಬಹುದೆಂದು ಮತ್ತು ಅದು ಪರಿಣಾಮ ಬೀರಬಹುದಾದ ಕ್ಷೇತ್ರದ ಬಗ್ಗೆ ಒಂದು ವಿಚಾರಣೆ ನಡೆಯಿಸುತ್ತಿದ್ದೇವೆ. ಎಷ್ಟು ಜನರನ್ನು ಖಾಲಿ ಮಾಡಿಸಬೇಕು, ಅವರ ಭೂಮಿಯ ಸ್ವರೂಪ, ಅವರಿಗೆ ಅದರ ಮೇಲಿರುವ ಹಕ್ಕುಬಾಧ್ಯತೆಗಳನ್ನು ನಾವು ತಿಳಿಯಲು ಪ್ರಯತ್ನಿಸುತ್ತಿದ್ದೇವೆ. ನಿಜವಾಗಿ ನಿರ್ದಿಷ್ಟವಾಗಿ ಅಲ್ಲಿ ಏನೂ ಆಗಿಲ್ಲ ಹಾಗೂ ಸರ್ಕಾರವು ಇನ್ನೂ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಈ ಹಂತದಲ್ಲಿ ಚರ್ಚಿಸುವ ಯಾವ ವಿಷಯವೂ ಮತ್ತು ನಾನು ಹೇಳಬೇಕೆಂದಿರುವುದು ಏನೆಂದರೆ ಸರ್ಕಾರವು ಒಂದು ನಿಶ್ಚಿತ ನಿರ್ಣಯಕ್ಕೆ ಬಂದ ನಂತರ ನಾನು ಸರ್ಕಾರದ ಯೋಜನೆಯ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೭ನೇ ಫೆಬ್ರವರಿ, ೧೯೪೬. ಪುಟ ೬೦೫–೦೬.

ವಿವರಗಳನ್ನೊಳಗೊಂಡ ಒಂದು ಹೇಳಿಕೆಯ ಪ್ರತಿಯನ್ನು ಈ ಸದನದ ಮುಂದೆ ಇಡಲು ಸಾಧ್ಯವಾಗಬಹುದು. ಆಗ ಸದಸ್ಯರು ಈ ವಿಷಯದ ಬಗ್ಗೆ ತಮಗೆ ಸರಿಕಂಡಂತೆ ಚರ್ಚಿಸಬಹುದು.

## ೩೬೬
## ವಿದ್ಯುಚ್ಛಕ್ತಿ (ಸರಬರಾಜು) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ ನಾನು ಸದನದ ಮುಂದೆ ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಸರಬರಾಜು ಮತ್ತು ನ್ಯಾಯಯುತವಾದ ಮತ್ತು ಸಾಮಾನ್ಯವಾಗಿ ಅನುಕೂಲವಾದಂತಹ ಭಾರತೀಯ ವಿದ್ಯುಚ್ಛಕ್ತಿ ಬೆಳವಣಿಗೆಗಾಗಿ ಒಂದು ಮಸೂದೆ ತರಬಯಸುತ್ತೇನೆ. ಅದಕ್ಕಾಗಿ ಅನುಮತಿ ಕೊಡಬೇಕೆಂದು ಪ್ರಾರ್ಥಿಸುವೆನು.

**ಮಾನ್ಯ ಅಧ್ಯಕ್ಷರು :** ವಿಷಯವು ಹೀಗೆ ಇದೆ :

"ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಸರಬರಾಜು ಮತ್ತು ನ್ಯಾಯಯುತವಾದ ಸಾಮಾನ್ಯವಾಗಿ ಅನುಕೂಲಕರವಾದಂತಹ ಭಾರತೀಯ ವಿದ್ಯುಚ್ಛಕ್ತಿ ಬೆಳವಣಿಗೆಗಾಗಿ ತರಬಯಸುವ ಮಸೂದೆ ಮಂಡಿಸಲು ಅನುಮತಿ ನೀಡಬೇಕಾಗಿದೆ."

ಸೂಚನೆಯನ್ನು ಅಂಗೀಕರಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೩೬೭
## ಭಾರತ ಸರ್ಕಾರವು ತಾತ್ಕಾಲಿಕ ಕಟ್ಟಡಗಳನ್ನು ಕೊಳ್ಳುವ ಬಗ್ಗೆ **

**ಸರ್ ಆರ್. ವೆಂಕಟಸುಬ್ಬ ರೆಡ್ಡಿಯಾರ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ಹೇಳುವಿರಾ: ಅ) ೧೯೪೬ರ ಫೆಬ್ರವರಿ ೪ನೆಯ ದಿನಾಂಕದ ಹಿಂದೂಸ್ತಾನ ಟೈಮ್ಸ್ ದಿನಪತ್ರಿಕೆಯ ೧ನೆಯ ಪುಟದ ಕೊನೆಯ ಕಾಲಂದಲ್ಲಿರುವ "ಲೂಟಿಯನ್ನು ನಿಲ್ಲಿಸಿ" ಎಂಬ ತಲೆಬರಹವು ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಪ್ರಶ್ನೆ (ಅ) ದ ಉತ್ತರವು ಸಕಾರಾತ್ಮಕವಾಗಿದ್ದಲ್ಲಿ ಆ ಲೇಖನದಲ್ಲಿ ನಮೂದಿಸಲಾದ ಎರಡೂ ಕಟ್ಟಡಗಳನ್ನು ಖರೀದಿಸುವಂತೆ ಇಂಗ್ಲೆಂಡ್‌ನ ಸರ್ಕಾರವು ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದೆಯೆ? ಹಾಗಿದ್ದಲ್ಲಿ ಭಾರತ ಸರ್ಕಾರವು ಆ ಬಗ್ಗೆ ಯಾವುದಾದರೂ ಕ್ರಮವನ್ನು ಕೈಗೊಂಡಿದೆಯೆ?

ಇ) ಆ ಕಟ್ಟಡಗಳ ಈಗಿನ ಬೆಲೆಯೇನು?

ಈ) ಇಂಗ್ಲೆಂಡ್‌ನ ಸರ್ಕಾರಕ್ಕೆ ಆ ಕಟ್ಟಡಗಳ ಬೆಲೆ ಎಷ್ಟು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೭ನೇ ಫೆಬ್ರವರಿ, ೧೯೪೬. ಪುಟ ೬೧೬

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೭ನೇ ಫೆಬ್ರವರಿ, ೧೯೪೬. ಪುಟ ೬೮೯

ಉ) ಯಾವ ಬೆಲೆಗೆ ಈ ಕಟ್ಟಡಗಳನ್ನು ಮಾರಲು ಒಪ್ಪಿಗೆಯಾಗಿದೆ? ಮತ್ತು

ಊ) ಈ ಎರಡೂ ಕಟ್ಟಡಗಳನ್ನು ಕೆಡವದೇ ಬೇರೆ ಯಾವುದಾದರೂ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು ಸಾಧ್ಯವಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಇಲ್ಲ. ಭಾರತ ಸರ್ಕಾರವು ತನ್ನ ಅಧಿಕಾರಿಗಳಿಗೆ ವಸತಿ ಸೌಕರ್ಯಗಳನ್ನು ಒದಗಿಸಲು ತಾನೇ ಈ ಕಟ್ಟಡಗಳನ್ನು ಕೊಳ್ಳಲು ನಿರ್ಧರಿಸಿದೆ. ಈ ಖರೀದಿಯ ಕರಾರುಗಳು ಪರಿಶೀಲನೆಯಲ್ಲಿವೆ.

ಇ) ಈ ಕಟ್ಟಡಗಳ ಸದ್ಯದ ಬೆಲೆಯನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಇದು ಅನೇಕ ಸಂಗತಿಗಳ ಮೇಲೆ ಅವಲಂಬಿಸಿದೆ. ಅವು ಸಹಜವಾಗಿಯೇ ಭಿನ್ನವಾಗಿರುತ್ತವೆ.

ಈ) ರೂಪಾಯಿ ೨೫,೫೮,೦೦೦

ಉ) ರೂಪಾಯಿ ೨೧,೩೧,೬೬೭

ಊ) ಈ ಕಟ್ಟಡಗಳಲ್ಲಿ ದೂರ ಪ್ರಾಚ್ಯ ಬ್ಯೂರೋದ ಸಿಬ್ಬಂದಿ ಹಾಗೂ ಭಾರತ ಸರ್ಕಾರದ ಅಧಿಕಾರಿಗಳು ವಾಸವಾಗಿದ್ದಾರೆ. ಮತ್ತು ಅದು ಯಾವುದಕ್ಕೂ ಉಪಯೋಗವಿಲ್ಲವೆಂದು ಹೇಳಲಾಗದು. ಅವು ತಾತ್ಕಾಲಿಕ ಕಟ್ಟಡಗಳಾಗಿದ್ದರೂ ಅವುಗಳನ್ನು ಸರ್ಕಾರವು ತನಗೆ ಬೇಡವಾದಾಗ ಕೆಡವುತ್ತದೆ.

**ಪ್ರೊ॥ ಎನ್.ಜಿ. ರಂಗ :** ಅವು ಇನ್ನು ಎಷ್ಟು ವರ್ಷ ಬಾಳಬಹುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಗೊತ್ತಿಲ್ಲ. ನನಗೆ ಅನಿಸಿದಂತೆ ೮–೧೦ ವರ್ಷಗಳೆಂದು ಅಂದಾಜು ಮಾಡಬಹುದು.

**ಶ್ರೀ ಶಶಾಂಕ ಶೇಖರ ಸನ್ಯಾಲ್ :** ಇದನ್ನು ಸ್ವಇಚ್ಛೆಯಿಂದ ಕೊಳ್ಳಲಾಗಿದೆಯೆ? ಅಥವಾ ಯಾವುದೇ ಒತ್ತಾಯಕ್ಕೆ ಒಳಗಾಗಿಯೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಇಚ್ಛೆಯಿಂದ. ಒತ್ತಾಯವೇಕೆ? ಸರ್ಕಾರಕ್ಕೆ ಬೇಕಾಗಿದ್ದಲ್ಲಿ ಮಾತ್ರ ಅದು ಅವುಗಳನ್ನು ಖರೀದಿಸುತ್ತದೆ.

**ಶ್ರೀ ಮನುಸುಬೇದಾರ್ :** ಯಾವ ಆಧಾರದ ಮೇಲೆ ಬೆಲೆಯನ್ನು ನಿರ್ಧರಿಸಲಾಗಿದೆ? ಇದು ಸವಕಳಿ ಕಳೆದ ಬೆಲೆಯೆ? ಅಥವಾ ಹರಾಜಿನ ಬೆಲೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೆಲೆಯನ್ನು ನಿರ್ಧರಿಸಿಲ್ಲ. ಆ ವಿಷಯವು ಸಂಧಾನದಲ್ಲಿದೆ.

**ಶ್ರೀ ಅನಂತಶಯನಮ್ ಅಯ್ಯಂಗಾರ್ :** ಯುದ್ಧದ ನಂತರ ಎಷ್ಟು ವರ್ಷಗಳವರೆಗೆ ತಾಳಿಕೆ ಬರುತ್ತವೆ? ಈಗಾಗಲೇ ೮–೧೦ ವರ್ಷಗಳು ಗತಿಸಿವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವುಗಳನ್ನು ಯುದ್ಧದ ಕಾಲದಲ್ಲಿ ಕಟ್ಟಿಸಲಾಗಿದೆ ಮತ್ತು ಸದ್ಯಕ್ಕೆ ಅದರ ಸರಿಯಾದ ದಿನಾಂಕ ಗೊತ್ತಿಲ್ಲ.

**ಶ್ರೀ ಮೋಹನಲಾಲ ಸಂಸೆನಾ :** ಈ ಕಟ್ಟಡಗಳನ್ನು ಕೊಳ್ಳುವ ವಿಚಾರವು ಸದನದ ಮುಂದೆ ಬರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಏಕೆ? ಇದು ಆಡಳಿತಾತ್ಮಕ ಕೆಲಸ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಯುದ್ಧದ ಪ್ರಾರಂಭದಲ್ಲಿ ಅವುಗಳನ್ನು ಕಟ್ಟಿಸಿದ್ದರೆ

ಮತ್ತು ಅವುಗಳ ಬಾಳಿಕೆ ಇನ್ನೂ ೮–೧೦ ವರ್ಷಗಳಾಗಿದ್ದು ಅವು ಇನ್ನು ೩ ವರ್ಷ ಮಾತ್ರ ಬಾಳುವಂತಿದ್ದರೆ ಸನ್ಮಾನ್ಯ ಸದಸ್ಯರಿಗೆ ಅವುಗಳ ಮೇಲೆ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ವಿಚಾರವೇಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವು ಪರಿಶೀಲನೆಯಲ್ಲಿ ಇದೆಯೆಂದು ನಾನು ಹೇಳಿದ್ದೇನೆ. ಯಾವುದೇ ಅಂಕಿಯನ್ನು ನಿಗದಿಪಡಿಸಿಲ್ಲ.

**ಶ್ರೀ ಎಮ್ ಅಸೀಫ್ ಅಲಿ :** ಸನ್ಮಾನ್ಯ ಸದಸ್ಯರ ಕೊನೆಯ ಪ್ರಶ್ನೆಗೆ ನೀಡಿದ ಉತ್ತರವು ನನಗೆ ತಿಳಿಯಲಿಲ್ಲ. ಅದು ಆಡಳಿತಾತ್ಮಕ ವಿಷಯವೆಂದು ಸದನದ ಒಪ್ಪಿಗೆಯ ಅವಶ್ಯಕತೆಯು ಇಲ್ಲವೆಂದು ಹೇಳಿದಿರಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹಾಗೆ ಹೇಳಲಿಲ್ಲ. ಅದು ಆಡಳಿತಾತ್ಮಕ ವಿಷಯವಾದ್ದರಿಂದ ಸದನದ ಸಲಹೆ ಪಡೆಯುವುದು ಆವಶ್ಯವಿಲ್ಲವೆಂದು ಹೇಳಿದೆನು. ಅದಕ್ಕೆ ಬೇಕಾಗುವ ಹಣವನ್ನು ಮುಂಗಡಪತ್ರದಲ್ಲಿ ಪೂರೈಸಲಾಗುವುದು.

**ಶ್ರೀ ಎಮ್. ಅಸೀಫ್ ಅಲಿ :** ಹಣವು ಮಂಜೂರು ಆಗಿದೆಯೆ ಎಂಬುದನ್ನು ನಾನು ತಿಳಿಯ ಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಮಂಜೂರಾತಿಗಾಗಿ ಬರಲಿದೆ.

**ಶ್ರೀ ಎಮ್. ಅಸೀಫ್ ಅಲಿ :** ನೀವು ಇದನ್ನು ಯಾವ ರೀತಿಯಲ್ಲಿ ತರಬಯಸುತ್ತೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ಹಣಕಾಸು ಸದಸ್ಯರಿಗೆ ಸಂಬಂಧಿಸಿದ ವಿಷಯ.

**ಶ್ರೀ ಎಮ್. ಅಸೀಫ್ ಅಲಿ :** ಇದಕ್ಕೆ ಅವರು ನನಗೆ ಉತ್ತರ ಕೊಡಲಿ. ಇದು ಸನ್ಮಾನ್ಯ ಸದಸ್ಯರ ಸ್ವೇಚ್ಛಾ ಪ್ರವೃತ್ತಿಯ ಉತ್ತರ, ಅದು ಆಡಳಿತಾತ್ಮಕ ವಿಷಯವೆಂದು ಹೇಳುವುದು ಸರಿಯಲ್ಲ. ಅವರು ನಮಗೆ ಉತ್ತರಿಸಲೇಬೇಕು.

**ಶ್ರೀ ಶಶಾಂಕ ಶೇಖರ ಸನ್ಯಾಲ್ :** (ಯಾವುದೇ ಉತ್ತರವಿಲ್ಲ : ಅಡೆತಡೆ)

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ, ನಾವು ಸದನವನ್ನು ಮುಂದೂಡಬೇಕೆಂಬ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳೋಣ.

## ೩೬೮
## ದೆಹಲಿ ಮತ್ತು ನವದೆಹಲಿಯಲ್ಲಿ ವಸತಿಗಳ ಕೊರತೆ *

**೧೫೫. ಸರ್ ಹಸನ್ ಸುಹ್ರಾವರ್ದಿ :** ಅ) ಯುದ್ಧ ವಿರಾಮದ ನಂತರವೂ ದೆಹಲಿ ಮತ್ತು ನವದೆಹಲಿಯಲ್ಲಿ ವಸತಿಯ ತೀವ್ರ ಕೊರತೆ ಇರುವುದು ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ತಿಳಿದಿದೆಯೆ?

ಆ) ನವದೆಹಲಿ ಬಾಡಿಗೆ ನಿಯಂತ್ರಣ ಆದೇಶ ಮತ್ತು ದೆಹಲಿ ಬಾಡಿಗೆ ಅಧ್ಯಾದೇಶ ಇವುಗಳನ್ನು ಜಾರಿಯಲ್ಲಿ ತಂದರೂ ಮನೆಗಳ ಮಾಲೀಕರು ಬಾಡಿಗೆದಾರರಿಗೆ ಕಿರುಕುಳ ಕೊಡುತ್ತಿದ್ದಾರೆ ಮತ್ತು ಕಾನೂನಿನಲ್ಲಿರುವ ಪ್ರತಿಯೊಂದು ಲೋಪದೋಷದ ಪ್ರಯೋಜನ ಪಡೆಯುತ್ತಿದ್ದಾರೆ.

ಇ) ಕನಿಷ್ಠ ಸಾಮಾನ್ಯ ಪರಿಸ್ಥಿತಿಯು ಹಿಂತಿರುಗುವವರೆಗೆ ಮತ್ತು ಈ ಸದನವು ದೆಹಲಿ ಪ್ರಾಂತದಲ್ಲಿ ಮಾಲೀಕರ ಮತ್ತು ಬಾಡಿಗೆದಾರರ ನಡುವಿನ ಸಂಬಂಧವನ್ನು ನಿಯಂತ್ರಿಸುವುದರ ಸಲುವಾಗಿ ಕೆಲವು ಕಾನೂನುಗಳನ್ನು ಮಾಡುವವರೆಗೆ ಮೇಲೆ ಕಾಣಿಸಿದ ಅಧಿನಿಯಮಗಳನ್ನು ಜಾರಿಯಲ್ಲಿಡಲು ಯೋಗ್ಯವೆಂದು ಸರ್ಕಾರವು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಅ) ಹೌದು.

ಆ) ನನಗೆ ಇತ್ತೀಚೆಗೆ ಯಾವುದೇ ದೂರು ಬಂದಿಲ್ಲ.

ಇ) ದೆಹಲಿ ಮತ್ತು ನವದೆಹಲಿಯಲ್ಲಿ ಸಾಮಾನ್ಯ ಪರಿಸ್ಥಿತಿಯು ಬರುವವರೆಗೆ ಬಾಡಿಗೆ ನಿಯಂತ್ರಣವನ್ನು ಜಾರಿಯಲ್ಲಿಡಬೇಕೆಂದು ಭಾರತ ಸರ್ಕಾರದ ಇಚ್ಛೆಯಾಗಿದೆ.

## ೩೬೯
## ಬ್ರಿಟಿಷರ ಮತ್ತು ಭಾರತೀಯರಲ್ಲದವರ ಸಾರ್ವಜನಿಕ ಉಪಯುಕ್ತತೆ ಸಂಸ್ಥೆಗಳು *

**೧೭೨. ಶ್ರೀ ಕೆ.ಸಿ. ನಿಯೋಗಿ :** ಸಾರ್ವಜನಿಕ ವ್ಯಾಪಾರಿ ಸಂಸ್ಥೆಗಳು ಬ್ರಿಟಿಷರ ಕೈಯಲ್ಲಿ ಇರುವುವು ಎಷ್ಟು ಹಾಗೂ ಭಾರತೀಯರಲ್ಲದವರ ಕೈಯಲ್ಲಿ ಇರುವುವು ಎಷ್ಟು ಮತ್ತು ಅದರಲ್ಲಿ ಅವರು ತೊಡಗಿಸಿದ ಹಣವೆಷ್ಟು? ಇಂಥಹ ವ್ಯಾಪಾರ ಮಳಿಗೆಗಳನ್ನು ರಾಜ್ಯ ಸರ್ಕಾರದ ವತಿಯಿಂದ ಇಲ್ಲವೆ ಸ್ಥಾನಿಕ ಸಂಸ್ಥೆಗಳ ವತಿಯಿಂದ ಅಥವಾ ಭಾರತ ಸರ್ಕಾರ ಸ್ಥಾಪಿಸಿದ ನಿಗಮದ ವತಿಯಿಂದ ವಶಪಡಿಸಿಕೊಳ್ಳುವ ಸರ್ಕಾರದ ನೀತಿ ಏನು ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಯೋಜನೆ ಹಾಗೂ ಬೆಳವಣಿಗೆಯ ಸನ್ಮಾನ್ಯ ಸದಸ್ಯರು ೧೯೪೬ರ ಫೆಬ್ರವರಿ ೧೮ನೆಯ ದಿನಾಂಕದಂದು ಉತ್ತರಿಸುತ್ತಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೧೧ನೇ ಫೆಬ್ರವರಿ, ೧೯೪೬. ಪುಟ ೭೫೩

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೧೧ನೇ ಫೆಬ್ರವರಿ, ೧೯೪೬. ಪುಟ ೭೬೯

# ೩೭೦
# ತಂತ್ರಜ್ಞರಿಗೆ ಪರದೇಶದಲ್ಲಿ ತರಬೇತಿಕೊಡುವ ಯೋಜನೆಯನ್ನು ಕಾರ್ಯಗತಗೊಳಿಸುವುದು *

**೧೭೩. ಶ್ರೀ ಕೆ.ಸಿ. ನಿಯೋಗಿ :** ಅ) ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಕಳೆದ ವರ್ಷ ಸಾರಿದಂತೆ ಈಗಾಗಲೆ ಉದ್ಯಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ತಂತ್ರಜ್ಞರನ್ನು ಅವರ ವೃತ್ತಿಯಲ್ಲಿ ಹೆಚ್ಚಿನ ಅನುಭವ ಪಡೆಯಲು ವಿದೇಶಕ್ಕೆ ಕಳುಹಿಸುವ ಯೋಜನೆಯ ಸಾರಾಂಶವನ್ನು ಮತ್ತು ಈಗಾಗಲೇ ಬೇರೆ ಬೇರೆ ದೇಶಗಳಿಗೆ ಕಳುಹಿಸಿಕೊಟ್ಟ ತಂತ್ರಜ್ಞರ ಸಂಖ್ಯೆ ಮತ್ತು ಅವರು ಆಯ್ದುಕೊಂಡ ವಿವಿಧ ಪಠ್ಯಕ್ರಮಗಳು ಹಾಗೂ ಆ ತಂತ್ರಜ್ಞರನ್ನು ಆಯ್ಕೆ ಮಾಡಿದ ಕ್ರಮಗಳಾವುವು ಮತ್ತು ಇಂಥ ಬೇರೆ ಆಯ್ಕೆಗೆ ಯಾವುದೇ ಪರಿಗಣನೆ ಇದೆಯೇ ಎಂಬುದರ ಬಗ್ಗೆ ಹೇಳಿಕೆಯನ್ನು ಸದನದ ಮುಂದೆ ಇಡುವಿರಾ?

ಆ) ಒಟ್ಟು ಅರ್ಜಿದಾರರಲ್ಲಿ? ಈಗಾಗಲೇ ಆಯ್ಕೆ ಮಾಡಲ್ಪಟ್ಟವರಲ್ಲಿ ಇನ್ನೂ ಕಳುಹಿಸದೆ ಉಳಿದಿರುವವರ ಸಂಖ್ಯೆ ಎಷ್ಟು? ಈ ವರ್ಷವೂ ಹೆಚ್ಚಿನ ತಂತ್ರಜ್ಞರನ್ನು ಪರದೇಶಕ್ಕೆ ಕಳುಹಿಸುವ ಸಂಭವವಿದೆಯೆ? ಮತ್ತು ಯಾವ ಪಠ್ಯಕ್ರಮಗಳಲ್ಲಿ ಮತ್ತು ಯಾವ ದೇಶಗಳಲ್ಲಿ ಅವರಿಗೆ ತರಬೇತಿ ಕೊಡಲು ಉದ್ದೇಶಿಸಿದ್ದೀರಿ?

ಇ) ಈ ತಾಂತ್ರಿಕ ತಂತ್ರಜ್ಞರಿಗೆ ತರಬೇತಿ ಕೊಡಿಸಲು ಕೇಂದ್ರ ಸರ್ಕಾರದ ಅಂದಾಜು ವೆಚ್ಚವೆಷ್ಟು? ಸಂಬಂಧಿಸಿದ ಪ್ರಾಂತೀಯ ಸರ್ಕಾರವು ಯಾವುದೇ ವೆಚ್ಚ ವಹಿಸುತ್ತಿದ್ದರೆ ಅವುಗಳ ಪಾಲು ಎಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸದನದ ಮುಂದೆ ಒಂದು ಹೇಳಿಕೆಯನ್ನು ಇಡಲಾಗಿದೆ.

ಆ) ಈಗಾಗಲೇ ಆಯ್ಕೆಯಾದವರಲ್ಲಿ ೧೫೨ ಅಭ್ಯರ್ಥಿಗಳನ್ನು ಕಳುಹಿಸಿಕೊಡಬೇಕಾಗಿದೆ. ಪ್ರತಿಯೊಬ್ಬ ಅಭ್ಯರ್ಥಿಗೆ ಬೇಕಾದ ಪಠ್ಯಕ್ರಮದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ವಿವರಗಳನ್ನು ಕಳುಹಿಸಲಾಗಿದೆ. ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯಕ್ರಮದ ತರಬೇತಿ ಸೌಲಭ್ಯಗಳು ಇವೆಯೆಂದು ತಿಳಿಸಿದೊಡನೆ ಸಂಬಂಧಿಸಿದ ಅಭ್ಯರ್ಥಿಗಳನ್ನು ಕೂಡಲೇ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಲ್ಲದೆ ಇನ್ನೂ ಎಷ್ಟು ಜನರನ್ನು ಕಳುಹಿಸಲಾಗುವುದು ಪಡೆಯುವ ಮತ್ತು ಪಠ್ಯಕ್ರಮಗಳಾವುವು ಎಂಬುದನ್ನು ಈ ಹಂತದಲ್ಲಿ ಹೇಳಲು ಸಾಧ್ಯವಿಲ್ಲ. ಇದು ಪರದೇಶಗಳಲ್ಲಿ ತರಬೇತಿ ಸೌಲಭ್ಯಗಳನ್ನು ಅವಲಂಬಿಸಿದೆ.

ಇ) ಈ ಯೋಜನೆಯಲ್ಲಿ ತರಬೇತಿಪಡೆಯುವವರ ಖರ್ಚನ್ನು ಸಂಬಂಧಿಸಿದ ಮಾಲೀಕರು ವಹಿಸುತ್ತಾರೆ. ಖಾಸಗಿ ಉದ್ಯಮಗಳು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಮತ್ತು ಭಾರತೀಯ ರಾಜ್ಯಗಳು ತಮಗೆ ಸಂಬಂಧಿಸಿದಂತೆ ಈ ಯೋಜನೆಯಲ್ಲಿನ ತರಬೇತಿಯ ಪೂರ್ಣ ವೆಚ್ಚವನ್ನು ಭರಿಸಲು ಅಸಮರ್ಥರಾಗಿದ್ದರೆ ಇಲ್ಲವೆ ಉದ್ಯಮಗಳು ಶೈಶವಾವಸ್ಥೆಯಲ್ಲಿದಂತೆ ಅಥವಾ ಆ ಉದ್ಯಮವನ್ನು ರಾಷ್ಟ್ರೀಯ ಹಿತಾಸಕ್ತಿಯಿಂದ ಅದನ್ನು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೧೧ನೇ ಫೆಬ್ರವರಿ, ೧೯೪೬. ಪುಟ ೭೬೯

ಅಭಿವೃದ್ಧಿಗೊಳಿಸುವುದು ಅವಶ್ಯವೆಂದು ಕಂಡುಬಂದರೆ, ಅಂತಹ ಅಭ್ಯರ್ಥಿಗಳಿಗೆ ಕೇಂದ್ರ ಸರ್ಕಾರವು ಹಣಕಾಸಿನ ಸಹಾಯ ಮಾಡುವುದು.

ಕೇಂದ್ರ ಸರ್ಕಾರವು ೧೯೪೬–೪೭ ನೆಯ ಸಾಲಿನಲ್ಲಿ ಕೇಂದ್ರ ಸರ್ಕಾರದ ನೌಕರರಿಗೆ ಮತ್ತು ಕೆಲವು ಪ್ರಕರಣಗಳಲ್ಲಿ ಖಾಸಗಿ ಉದ್ಯಮಗಳಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ತರಬೇತಿ ಕೊಡಿಸಲು ಆಗಬಹುದಾದ ಅಂದಾಜು ವೆಚ್ಚ ರೂ. ೧,೦೧,೬೮೦, ೧೯೪೬–೪೭ನೆಯ ಸಾಲಿಗೆ ಪ್ರಾಂತೀಯ ಸರ್ಕಾರಗಳ ನೌಕರರಲ್ಲಿ ತರಬೇತಿ ಕೊಡಿಸಲು ಪ್ರಾಂತೀಯ ಸರ್ಕಾರಗಳು ಮಾಡಬಹುದಾದ ಅಂದಾಜು ವೆಚ್ಚ ರೂ. ೩,೬೦,೦೦೦.

## ೩೭೧
## ಗೋರಖಪುರದ ಕಲ್ಲಿದ್ದಲು ಗಣಿಗಳ ಕಾರ್ಮಿಕರ ನೇಮಕಾತಿಯ ಖರ್ಚುಗಳ ಲೆಕ್ಕಪತ್ರ ಕೊಡುವ ಕುರಿತು *

**೩೧. ಶ್ರೀ ಕೆ.ಸಿ. ನಿಯೋಗಿ :** ಅ) ಗೋರಖಪುರ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರನ್ನು ಭರ್ತಿಮಾಡಿಕೊಳ್ಳುವುದಕ್ಕಾಗಿ ಮತ್ತು ಕೆಲಸಕ್ಕೆ ನೇಮಿಸಿಕೊಳ್ಳುವುದಕ್ಕಾಗಿ ಮಾಡಿದ ಎಲ್ಲ ಖರ್ಚುಗಳ ಲೆಕ್ಕ ಪರಿಶೋಧನೆಯನ್ನು ನಿಯಮಿತವಾಗಿ ಮಾಡಲಾಗಿದೆಯೆ? ಮತ್ತು ಆ ಲೆಕ್ಕಪರಿಶೋಧಕರು ಸಂಪೂರ್ಣವಾಗಿ ಅದು ಕ್ರಮಬದ್ಧವಾಗಿದೆ ಎಂದು ಹೇಳಿದ್ದಾರೆಯೆ? ಅಂಥ ಲೆಕ್ಕಪತ್ರಗಳು ಯಾವ ದಿನಾಂಕದವರೆಗೆ ಪರಿಶೋಧಿಸಲ್ಪಟ್ಟಿವೆ ಎಂದು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ?

ಆ) ಕಾರ್ಮಿಕ ತಂಡದ ಪ್ರಭಾವಿ ಅಧಿಕಾರಿಯ ಹೆಸರೇನು ಹಾಗೂ ಅವನ ಪದನಾಮವೇನು? ಮತ್ತು ಅವನ ಕಾರ್ಯದರ್ಶಿಯ ಹೆಸರೇನು? ಅವರು ಅನುಕ್ರಮವಾಗಿ ಪಡೆಯತಕ್ಕ ಉಪಲಬ್ಧಿಗಳಾವುವು? ಈ ಪ್ರಭಾವಿ ಅಧಿಕಾರಿಯು ಮಾಡಬಹುದಾದ ಖರ್ಚಿನ ವ್ಯಾಪ್ತಿಯಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮೊದಲನೆಯ ಭಾಗಕ್ಕೆ ಉತ್ತರ ಹೌದು ಮತ್ತು ಈ ಲೆಕ್ಕಪತ್ರಗಳು ಕ್ರಮಬದ್ಧವಾಗಿಯೆಂದು ವರದಿಯಾಗಿದೆ.

ಆ) ಮೊದಲನೆಯ ಭಾಗ – ಶ್ರೀ ಎಚ್. ಜಿ. ವಾಲ್ಸ್, ಉಪನಿರ್ದೇಶಕರು – ಕಾರ್ಮಿಕ ಪೂರೈಕೆ (ಕಲ್ಲಿದ್ದಲು) ಅವರಿಗೆ ಕಾರ್ಯದರ್ಶಿಯನ್ನು ಕೊಟ್ಟಿಲ್ಲ. ಎರಡನೆಯ ಭಾಗ – ಅವನ ಪಗಾರದ ಶ್ರೇಣಿಯು ರೂ. ೧,೯೨೫–೫೦–೨,೦೭೫. ಕಾರ್ಮಿಕರ ಪಗಾರ, ಕಾರಕೂನರ ಪಗಾರ, ಕೆಳದರ್ಜೆ ಮತ್ತು ವೈದ್ಯಕೀಯ ಸಿಬ್ಬಂದಿ ಪಗಾರ ಮತ್ತು ಪಡಿತರದ ಖರ್ಚು ಮತ್ತು ಪ್ರವಾಸ ಭತ್ಯೆ (ಟಿ.ಎ) ಮತ್ತು ಸಾದಿಲ್ವಾರ ಇವೆಲ್ಲವುಗಳನ್ನು ಒಳಗೊಂಡು ಒಟ್ಟು ಪ್ರಮಾಣ ಪ್ರತಿಯೊಬ್ಬ ಕಾರ್ಮಿಕನಿಗೆ ತಿಂಗಳಿಗೆ ೬೦ ರೂಪಾಯಿಗಳಿಗೆ ಮೀರದಂತೆ ಖರ್ಚು ಮಾಡಲು ಅವರಿಗೆ ಅಧಿಕಾರ ಕೊಡಲಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಸರ್ಕಾರದಿಂದ ನಿರ್ದೇಶಿಸಲ್ಪಟ್ಟಿರುವ ಹಾಗೆ ಕಾರ್ಮಿಕರ ಶ್ರೇಣಿಯನ್ನು ಅವಲಂಬಿಸಿ ಖರ್ಚು ಮಾಡಬೇಕಾಗುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೧೧ನೇ ಫೆಬ್ರವರಿ, ೧೯೪೬. ಪುಟ ೭೭೩.

# ೩೭೨
# ಗೋರಖಪುರ ಕಲ್ಲಿದ್ದಲು ಗಣಿಗಳಲ್ಲಿನ ಕಾರ್ಮಿಕರ ಮೇಲೆ ಖರ್ಚು *

**೩೨. ಶ್ರೀ ಕೆ. ಸಿ. ನಿಯೋಗಿ :** ಅ) ಗೋರಖಪುರ ಕಲ್ಲಿದ್ದಲು ಗಣಿಗಳಲ್ಲಿ ನೇಮಿಸಿದ ಕಾರ್ಮಿಕರ ಮೇಲೆ ಇಲ್ಲಿಯವರೆಗೆ ಖರ್ಚುಮಾಡಿದ ಹಣವೆಷ್ಟು ಎಂಬುದನ್ನ ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ?

ಆ) ಗೋರಖಪುರದ ಕಾರ್ಮಿಕರನ್ನು ನೇಮಿಸಿಕೊಂಡ ಗಣಿಮಾಲಿಕರಿಂದ ಇಲ್ಲಿಯವರೆಗೆ ಎಷ್ಟು ಹಣವನ್ನು ವಾಪಸ್ಸು ಪಡೆಯಲಾಗಿದೆ?

ಇ) ಗೋರಖಪುರ ಕಾರ್ಮಿಕ ಸದಸ್ಯರ ಸಂಖ್ಯೆಯು (೧) ಮಾಲ್ಕಿಯ ರೇಲ್ವೆಯವರ ಕಲ್ಲಿದ್ದಲು ಗಣಿಗಳಲ್ಲಿ ಮತ್ತು (೨) ಸಾರ್ವಜನಿಕ ಕಂಪನಿಗಳ ಕಲ್ಲಿದ್ದಲು ಗಣಿಗಳ ಮತ್ತು ಮಾಲ್ಕಿಯ ಖಾಸಗಿ ವ್ಯಕ್ತಿಗಳಲ್ಲಿ ಎಷ್ಟು ಇವೆ?

ಈ) ಗೋರಖಪುರ ಕಾರ್ಮಿಕರನ್ನು ನೇಮಿಸಿಕೊಂಡ ಗಣಿಗಳ ಮಾಲೀಕರ ಹೆಸರುಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ರೂ. ೧,೯೧,೦೫,೩೮೬–೧೯೪೫ರ ಜನವರಿ ಅಂತ್ಯದವರೆಗೆ.

ಆ) ೧೯೪೫ರ ಡಿಸೆಂಬರ್ ಅಂತ್ಯದವರೆಗೆ ವಾಸ್ತವವಾಗಿ ರೂ. ೨೨,೫೨,೩೧೧ ವಸೂಲಿ ಮಾಡಲಾಗಿದ್ದು ಡಿಸೆಂಬರ್ ಅಂತ್ಯದವರೆಗೆ ರೂ. ೨೯,೪೮,೩೦೨ ಇನ್ನೂ ಬಾಕಿ ಉಳಿದಿದೆ. ೧೯೪೬ ಜನವರಿಗೆ ಅಂದಾಜು ಮಾಡಿ ಬಿಲ್ಲುಮಾಡಿರುವುದು ರೂ. ೧೬ ಲಕ್ಷ.

ಇ) ನೇಮಿಸಲ್ಪಟ್ಟವರ ಸಂಖ್ಯೆಗಳು ಹೀಗಿವೆ:

೧) ರೇಲ್ವೆ ಕಲ್ಲಿದ್ದಲು ಗಣಿಗಳಲ್ಲಿ ೧೦೦ಕ್ಕೆ ೭ ರಷ್ಟು,

೨) ಸಾರ್ವಜನಿಕ ಕಂಪನಿಗಳ ಮಾಲೀಕತ್ವದಲ್ಲಿರುವ ಕಲ್ಲಿದ್ದಲು ಗಣಿಗಳಲ್ಲಿ ೧೦೦ಕ್ಕೆ ೮೩ ರಷ್ಟು;

೩) ಖಾಸಗಿ ವ್ಯಕ್ತಿಗಳ ಮಾಲ್ಕಿಯ ಕಲ್ಲಿದ್ದಲು ಗಣಿಗಳಲ್ಲಿ ೧೦೦ಕ್ಕೆ ೧೦ರಷ್ಟು ೧೯೪೬ರ ಜನವರಿ ೧೯ರಂದು ಒಟ್ಟು ಕಾರ್ಮಿಕರ ಸಂಖ್ಯೆ ೧೭,೩೯೧. ಯಾವುದೇ ಒಂದು ತಿಂಗಳಲ್ಲಿ ನೇಮಿಸಿಕೊಂಡ ಸಂಖ್ಯೆಗಳಲ್ಲಿ ಅತಿ ಹೆಚ್ಚಿನದು: ೩೦,೬೦೦;

ಈ) ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ.

**ಹೇಳಿಕೆ**

**ಗಣಿಗಳ ಮೇಲ್ಭಾಗದ ಪಟ್ಟಿ**

೧) ಮಧುಬಂದ್

೨) ಡಾಯ್‌ಮೋನೆ ತಿಸ್ರಾ

೩) ಮೊಡೆಲ್ ಝೂರಿಯಾ

೪) ಎ.ಜಿ. ತಿಸ್ರಾ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೧೧ನೇ ಫೆಬ್ರವರಿ, ೧೯೪೬. ಪುಟ ೭೭೩.

೫) ಲೋಯರ್ ಅಪ್ಪರ್ ಝರಿಯಾ
೬) ಭಾರತೀಯ ಝರಿಯಾ
೭) ಬಗ್ಡಿ ಕುಜಮಾ
೮) ಕೆ.ಪಿ. ಯವರ ದೋಬರಿ
೯) ಬಲ್ಗೋರಾ
೧೦) ಚನುಯಾಡಿಹಾ
೧೧) ಬಗೇಚಿಯವರ ದೋಬರಿ
೧೨) ಪಂಡಲಬೇರಾ
೧೩) ಖಾಸಝರಿಯಾ ದೋಬರಿ
೧೪) ದಕ್ಷಿಣ ತಿಸ್ರಾ
೧೫) ಪೂರ್ವ ಬೆರಾರ್
೧೬) ಶುದ್ಧ ಜೋರ್‍ಯಾಪುರ
೧೭) ಉತ್ತರ ಬೇರಾರೆ
೧೮) ಜಿ. ಪಿ. ಸಿ. ಯವರ ಜಿನಗೋರಾ
೧೯) ಬಸುದೇವ 'ಅ' ಪ್ಲಾಟ ಕಲ್ಲಿದ್ದಲು
೨೦) ಪತಾರ್‌ಡಿಹಾ ಸುದಂಡಿಹಾ
೨೧) ಶುದ್ಧ ತಸ್ರಾ
೨೨) ಹೊಸ ತಸ್ರಾ
೨೩) ಕೇಂದ್ರ ಭವರಾ
೨೪) ಬಾವ್ರಾ
೨೫) ಮೋಹುಲಬೋನಿ
೨೬) ಪೂರ್ವವಿಕ್ರಾ
೨೭) ಬುಸೆರ್‍ಯ್ಯಾ
೨೮) ಉತ್ತರ ವಿಕ್ರಾ
೨೯) ಕಂಕಣಿ
೩೦) ಸೆಂಡ್ರಾ ಬನ್ಸಜೋರಾ
೩೧) ಎಕ್ರಾ ಖಾಸ
೩೨) ಎಕ್ರಾ ಖಾಸ ನಂ ೧೨ ಕಲ್ಲಿದ್ದಲು ಗಣಿ
೩೩) ಮುದಿದಿಹ
೩೪) ತೆತುಲಮರಿ
೩೫) ಟಾಟಾರವರ ಸಿಜುಯಾ
೩೬) ಅಂಗಾರಪತ್ರ
೩೭) ಝರಿಯಾ ಖಾಸ ಅಂಗಾರ ಪತ್ರ

೩೮) ಕ್ವಾಲಿಡುಹ
೩೯) ಅಗರಡಿಹ
೪೦) ಉತ್ತರ ದಾಮುದಾ
೪೧) ಇಸಾಬೆಲ್ಲಾ
೪೨) ಶಾಂಪುರ
೪೩) ಪ್ಯೂರ್ ಲೈಕಡಿಹ
೪೪) ಸಂಕ್ಟೋರಿಯಾ
೪೫) ಚಾಪುಯಿ ಖಾಸ
೪೬) ಖಾಸ ಜಾಮಚಾರಿ
೪೭) ಜೋಟೆ ಧೇಮೊ
೪೮) ಸಿರ್ಕಾ
೪೯) ರೆಲಿಗರಹ
೫೦) ಜುಂಕುಂಡ
೫೧) ಜಾಮಬಾದ
೫೨) ಧನ್ಸಾರ
೫೩) ಬ್ರೈಟ ಕುಸುಂದ
೫೪) ಉತ್ತರ ಭುಗ್ಗಟಡಿಹ
೫೫) ಗೋಡೂರ
೫೬) ಪ್ಯೂರ್ ಕುಸ್ಟೋರ
೫೭) ಅಲ್ಕುಸಾ ನಾಯಡ್ಕೆ
೫೮) ಜೈರಂಡಹ
೫೯) ಸ್ವಾಂಗ
೬೦) ಪರ್ಬೇಲಿಯಾ

ಭೂಗತ

೧) ಪರ್ಬೇಲಿಯಾ
೨) ಸೋಡೆಪೂರ
೩) ಸ್ಕೇತಲಪೂರ
೪) ಬಂಕ್ಸಿಮುಲ್ಲಾ ೧೧ ಮತ್ತು ೧೨ ಗುಂಡಿಗಳು
೫) ಬಂಕ್ಸಿಮುಲ್ಲಾ ೭ ಮತ್ತು ೮ ಗುಂಡಿಗಳು
೬) ದಾಮ್ರಾ
೭) ಅಡಜೈ ೧೧ ಕಲ್ಲಿದ್ದಲು ಗಣಿ
೮) ಸ್ಕೂಬಪುರ
೯) ಜಾಪುಯಿ ಖಾಸ

೧೦) ಎಸ್. ಇ. ಬಾರ್ಬ್ರೋನಿ
೧೧) ದಿಗ್ವಾಡಿಹ
೧೨) ಜಿತಪೂರ
೧೩) ಜೊಯ್ರಾಮಪೂರ
೧೪) ಭಟಡಿ
೧೫) ಫಾಸ್ಲಿತಂಡ
೧೬) ಸ್ವ್ಯಾಂಡರ್ಡ
೧೭) ಏಕ್ರಾಖಾಸ
೧೮) ಸ್ವಾಂಗ
೧೯) ಜೈರಂಡಿಹ
೨೦) ಧೇಮೊಮೇನ್
೨೧) ಆದರ್ಶ ಝಾರಿಯಾ

## ೩೭೩
## ಸಿ.ಪಿ.ಡಬ್ಲ್ಯು.ಡಿ. ಅಧಿಕಾರಿಗಳ ಸೇವಾ ವಿಸ್ತರಣೆ *

**೪೪. ಶ್ರೀ ಪ್ರಕಾಶ :** ಅ) ಕೇಂದ್ರೀಯ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿ ಅಧೀಕ್ಷಕರ (ಸೂಪರಿಂಟೆಂಡೆಂಟ್) ಕಾರ್ಯನಿರ್ವಾಹಕ ಮತ್ತು ಸಹಾಯಕ ಇಂಜಿನಿಯರರೆಂದು ಅನುಕ್ರಮವಾಗಿ ೧೯೩೯ರಿಂದ ಸೇವೆಯಿಂದ ನಿವೃತ್ತರಾದವರಲ್ಲಿ ಪುನಃ ನೇಮಕ ಆದವರ ಸಂಖ್ಯೆ ಎಷ್ಟು ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ?

ಆ) ಮೂಲ ಸೇವಾವಧಿಯ ಕರಾರು ಮುಗಿದ ಮೇಲೆ ಎಷ್ಟು ಜನರಿಗೆ ಹಾಗೂ ಪ್ರತಿಯೊಬ್ಬರಿಗೂ ಎಷ್ಟು ಬಾರಿ ವಿಸ್ತರಣೆಯನ್ನು ಕೊಡಲಾಗಿದೆ? ಕರಾರಿನೊಂದಿಗೆ ಪ್ರತಿಯೊಂದು ಅವಧಿಯ ವಿಸ್ತರಣೆಯ ಕಂತಿನೊಂದಿಗೆ ಸೇವಾವಿಸ್ತರಣೆಯನ್ನು ಕೊಟ್ಟವರ ಸಂಖ್ಯೆ ಎಷ್ಟು?

ಇ) ಕೇಂದ್ರ ಸರ್ಕಾರದ ಹಣಕಾಸಿನ ವಿಭಾವು ಹೀಗೆ ಅವರ ಮೂಲ ಸೇವಾವಧಿಯ ವಿಸ್ತರಣೆಗೆ ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿತೆಂಬುದು ನಿಜವೆ? ಹಾಗಿದ್ದಲ್ಲಿ ಹಣಕಾಸಿನ ವಿಭಾಗವು ಕೊಟ್ಟ ಸೂಚನೆಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳದಿರುವ ಕಾರಣಗಳಾವುವು?

ಈ) ಇಂತಹ ಸೇವಾವಿಸ್ತರಣೆಯು ಹೊಸಸ್ಥಾನಗಳನ್ನು ಭರ್ತಿಮಾಡಿಕೊಳ್ಳುವುದಕ್ಕೆ ಮತ್ತು ತರುಣ ಅಧಿಕಾರಿಗಳ ಪ್ರಗತಿಗೆ ಹಸ್ತಕ್ಷೇಪಮಾಡಿದಂತಾಗುತ್ತದೆಯೆ? ಹಾಗಿದ್ದಲ್ಲಿ ಯಾರ ಅಭ್ಯುದಯಕ್ಕೆ ಪ್ರಗತಿಗೆ ಅಡ್ಡಿಯಾಗಿದೆಯೋ ಅಂತಹ ಅಧಿಕಾರಿಗಳಿಗೆ ಯಾವುದೇ ಪರಿಹಾರವನ್ನು ನೀಡಲಾಗಿದೆಯೆ? ಮತ್ತು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೦ನೇ ಫೆಬ್ರವರಿ, ೧೯೪೬. ಪುಟ ೧೨೧೪

ಉ) ಇಂತಹ ವಿಸ್ತರಣೆಯನ್ನು ಕೊನೆಗೊಳಿಸಲು ಮತ್ತು ತರುಣ ಅಧಿಕಾರಿಗಳ ಅಭ್ಯುದಯಕ್ಕಾಗಿ ಸರ್ಕಾರ ಯಾವ ಕ್ರಮಕೈಗೊಳ್ಳಲು ಉದ್ದೇಶಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮೂರು.

ಆ) ೧೯೩೯ರಿಂದ ಮೂಲಭೂತ ನಿಯಮಗಳ ೫೬ರ ಅನ್ವಯ ಮೂರು ಪ್ರಕರಣಗಳಲ್ಲಿ ಸೇವಾವಿಸ್ತರಣೆ ನೀಡಿದ್ದು ಅವು ಅನುಕ್ರಮವಾಗಿ ೬ ತಿಂಗಳುಗಳು, ೩ ದಿನಗಳು ಮತ್ತು ೧ ತಿಂಗಳು ಇವೆ.

ಇ) ಪ್ರಶ್ನೆಯ ಮೊದಲನೆಯ ಭಾಗಕ್ಕೆ ಉತ್ತರವು ನಕಾರಾತ್ಮಕ. ಎರಡನೆಯ ಭಾಗವು ಉದ್ಭವಿಸುವುದಿಲ್ಲ.

ಈ) ಮತ್ತು (ಉ) ಇಲ್ಲ.

## ೩೭೪
## ಅಂತರರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ಅಂಗರಚನೆಯ ತಿದ್ದುಪಡಿಗಾಗಿ ದಸ್ತಾವೇಜು *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೇ ನಾನು ಪ್ಯಾರಿಸ್ಸಿನಲ್ಲಿ ೨೭ನೆಯ ಅಧಿವೇಶನದಲ್ಲಿ ೫ನೆಯ ನವೆಂಬರ್ ೧೯೪೫ರಂದು ಅಂಗೀಕರಿಸಿದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಅಂಗರಚನೆಯ ತಿದ್ದುಪಡಿಗಾಗಿ ಒಂದು ದಸ್ತಾವೇಜನ್ನು ಮತ್ತು ಅದರ ಮೇಲೆ ಯಾವ ಕ್ರಮಕೈಗೊಳ್ಳಲು ಉದ್ದೇಶಿಸಿದೆಯೆಂಬ ಹೇಳಿಕೆಗಳನ್ನು ನಾನು ಸದನದ ಮುಂದೆ ಇಡುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೧ನೇ ಫೆಬ್ರವರಿ, ೧೯೪೬. ಪುಟ ೧೨೧೪

## ೩೭೫
## ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) **:** ಮಾನ್ಯರೆ, ೧೯೨೬ರ ಭಾರತೀಯ ಕಾರ್ಮಿಕ ಸಂಘಗಳ ಅಧಿನಿಯಮಕ್ಕೆ ಮತ್ತೆ ಕೆಲವು ತಿದ್ದುಪಡಿ ತರಲು ನಾನು ಒಂದು ಮಸೂದೆಯನ್ನು ಮಂಡಿಸಲು ಪರವಾನಗಿ ಕೊಡಬೇಕೆಂದು ವಿನಂತಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಆ ವಿಷಯವು ಹೀಗೆ ಇದೆ:

"೧೯೨೬ರ ಭಾರತೀಯ ಕಾರ್ಮಿಕ ಸಂಘಗಳ ಅಧಿನಿಯವ ಇದಕ್ಕೆ ಇನ್ನೂ ತಿದ್ದುಪಡಿ ತರಲು ಒಂದು ಮಸೂದೆಯನ್ನು ಮಂಡಿಸಲು ಅನುಮತಿ ಕೊಡಬೇಕು."

ಈ ಸೂಚನೆಯನ್ನು ಅಂಗೀಕರಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಮಸೂದೆಯನ್ನು ಮಂಡಿಸುತ್ತೇನೆ.

## ೩೭೬
## ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರು ಕೆಲಸ ಮಾಡುವುದನ್ನು ನಿಲ್ಲಿಸುವುದು **

**೪೦೬. ಪ್ರೊ॥ ಎನ್.ಜಿ. ರಂಗ :**

ಅ) ಈಗ ಯುದ್ಧವು ಮುಕ್ತಾಯವಾಗಿದೆ. ಸರ್ಕಾರವು ಕಲ್ಲಿದ್ದಲು ಗಣಿಗಳಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುವುದನ್ನು ನಿಷೇಧಿಸಲು ಯಾವಾಗ ಕ್ರಮಕೈಗೊಳ್ಳಲಿದೆ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

ಆ) ಹಳ್ಳಿಗಳಿಂದ ಕರೆತಂದ ಈ ಹೆಂಗಸರಿಗೆ ಉದ್ಯೋಗ ಒದಗಿಸಲು ಯಾವುದೇ ಪರ್ಯಾಯ ಯೋಜನೆಯು ಸಿದ್ಧವಿದೆಯೆ? ಇಲ್ಲವೆ ಅವರನ್ನು ಪುಕ್ಕಟೆಯಾಗಿ ಅವರ ಊರಿಗೆ ಕಳುಹಿಸುವ ದಾರಿ ವ್ಯವಸ್ಥೆ ಮತ್ತು ಗಣಿಗಳಲ್ಲಿ ಕೆಲಸಮಾಡುವಾಗ ತಮ್ಮ ಪಗಾರದಿಂದ ಉಳಿಸಿ ತಿರುಗಿ ಕೊಡಬಲ್ಲೆವೆಂಬ ಆಶೆಯಿಂದ ಮಾಡಿದ ಯಾವುದೇ ಸಾಲದ ಭಾರದಿಂದ ಮುಕ್ತ ಮಾಡಿ ಕಳುಹಿಸುವ ಯೋಜನೆ ಇದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರು ಕೆಲಸ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸುವ ಉದ್ದೇಶವು ಸರ್ಕಾರಕ್ಕೆ ಇಲ್ಲ. ಅವರು ಭೂಗತದಲ್ಲಿ ಕೆಲಸ ಮಾಡುವುದನ್ನು ೧೯೪೬ರ ಫೆಬ್ರವರಿ ೧ನೆಯ ದಿನಾಂಕದಿಂದ ನಿಷೇಧಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೧ನೇ ಫೆಬ್ರವರಿ, ೧೯೪೬. ಪುಟ ೧೨೧೪

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೨೭

ಆ) ಕೇಂದ್ರ ಸರ್ಕಾರವು 'ಕಲ್ಯಾಣ ನಿಧಿ'ಯಿಂದ ಕಲ್ಲಿದ್ದಲಿನ ಕ್ಷೇತ್ರಗಳಲ್ಲಿ ಕಾಯಿಪಲ್ಲೆ ತೋಟಗಳನ್ನು ಮಾಡಲು ನಿರ್ಧರಿಸಿದೆ. ಅನೇಕ ಗಣಿಗಳ ಮಾಲೀಕರ ಸಂಘಗಳು ಸಂಸ್ಥೆಗಳಿಗೆ ಮತ್ತು ಪ್ರಾಂತೀಯ ಸರ್ಕಾರಗಳಾದ ಬಂಗಾಳ ಮತ್ತು ಬಿಹಾರಗಳಿಗೆ ಕಲ್ಲಿದ್ದಲು ಗಣಿಗಳ ಆಳದಲ್ಲಿ ಮಾಡುತ್ತಿದ್ದ, ಕೆಲಸದಿಂದ ಬಿಡುಗಡೆ ಮಾಡಿದ ಹೆಣ್ಣುಮಕ್ಕಳಿಗೆ ಈ ಕೂಡಲೆ ಪರ್ಯಾಯ ಕೆಲಸಮಾಡಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಲಾಗಿದೆ. ಕಲ್ಲಿದ್ದಲಿನ ಕ್ಷೇತ್ರಗಳಲ್ಲಿ ಹೊಲಗಳಲ್ಲಿ ಬಹುಸಂಖ್ಯೆಯ ಮಹಿಳಾ ಕಾರ್ಮಿಕರನ್ನು ಈಗಾಗಲೇ ಭೂಮಿಯ ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ.

## ೩೭೭
## ಭಾರತೀಯ ಕಾರ್ಮಿಕರ ಸಮ್ಮೇಳನದ ಶಿಫಾರಸುಗಳು *

**೪೬೭. ಪ್ರೊ॥ ಎನ್.ಜಿ. ರಂಗ :**

ಅ) ಭಾರತೀಯ ಕಾರ್ಮಿಕ ಸಮ್ಮೇಳನ ೧೯೪೫ರ ನವೆಂಬರ್‌ನಲ್ಲಿ ಮಾಡಿದ ಶಿಫಾರಸ್ಸುಗಳು.

ಆ) ಸರ್ಕಾರವು ಅದರ ಮೇಲೆ ಮಾಡಿದ ಅಂತಿಮ ನಿರ್ಧಾರ ಇಲ್ಲವೆ ತೀರ್ಮಾನ ಮತ್ತು

ಇ) ಇವುಗಳನ್ನು ಅನುಷ್ಠಾನಕ್ಕೆ ತರಲು ಭಾರತ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ?

–ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರೆ ದಯವಿಟ್ಟು ಹೇಳುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಯಾವುದೂ ಇಲ್ಲ (ಆ) ಮತ್ತು (ಇ) ಉದ್ಭವಿಸುವುದಿಲ್ಲ.

## ೩೭೮
## ದೊಡ್ಡ ನಗರಗಳಲ್ಲಿ ಸರ್ಕಾರವು ಮನೆಗಳನ್ನು ಕಟ್ಟುವ ಕಾರ್ಯಕ್ರಮ **

**೪೬೯. ಶ್ರೀ ಮನುಸುಬೇದಾರ್ :** ಅ) ದಿನಾಂಕ ೨೩ನೆಯ ಜನವರಿ ೧೯೪೬ರ ಸ್ಟೇಟ್ಸಮನ್‌ದ ಸಂಪಾದಕೀಯದಲ್ಲಿ ಅಭಿಪ್ರಾಯಪಟ್ಟಿದ್ದುದು ಏನೆಂದರೆ ಮತ್ತು ಇನ್ನೂ ನೆನಪಿಡಲೇಬೇಕಾದುದೇನೆಂದರೆ "ಕಳೆದ ೬ ವರ್ಷಗಳ ಅವಧಿಯಲ್ಲಿ ಭಾರತದ ನಗರಗಳಲ್ಲಿ ಬಹುಮಟ್ಟಿಗೆ ವಾಸದ ಮನೆಗಳನ್ನು ಕಟ್ಟಿಸಿಲ್ಲ" ಈ ಹೇಳಿಕೆಯು ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ? ಹೇಳಿಕೆಗೆ ಪ್ರತಿಹೇಳುವ ಸ್ಥಿತಿಯಲ್ಲಿ ಹೇಳಿಕೆಯು ಇದೆಯೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೨೬

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೨೮

ಆ) ಮುಂಬೈ ಮತ್ತು ಕಲ್ಕತ್ತದಂತಹ ವಿಪರೀತವಾಗಿ ಬೆಳೆದ ಶಹರಗಳಲ್ಲಿ ಮನೆಗಳನ್ನು ಕಟ್ಟಲು ಉತ್ತೇಜನ ಕೊಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಕಟ್ಟಡಗಳ ಕಾರ್ಯ ನಡೆಯುತ್ತಿರುವುದನ್ನು ತಡೆಯಲು ನಿಯಂತ್ರಣ ಮಾಡುವ ಕಾರ್ಯವು ಇನ್ನೂ ಇದೆಯೆ? ಇಲ್ಲವೆ ತಮ್ಮ ಕಾರ್ಯವ್ಯಾಪ್ತಿ ಮೀರಿ ಹೋಗಿ ಕಟ್ಟಡ ಕಟ್ಟುವವರ ತೊಂದರೆಗಳನ್ನು ಸುಗಮಗೊಳಿಸುವರೆ?

ಈ) ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳು ಅಸ್ತಿತ್ವದಲ್ಲಿ ಬರಲು ಪ್ರಾಂತೀಯ ಸರ್ಕಾರಗಳಿಂದ ಭಾರತ ಸರ್ಕಾರಕ್ಕೆ ಯಾವುದಾದರೂ ವಾಸ್ತವಿಕ ಯೋಜನೆ ಕೈಸೇರಿದೆಯೆ? ಇಲ್ಲವೆ?

ಉ) ಸರ್ಕಾರಿ ನೌಕರಿಯಿಂದ ಕಿತ್ತುಹಾಕಿದ ನೌಕರರನ್ನು ಕಟ್ಟಡ ವ್ಯಾಪಾರದಲ್ಲಿ ನಿರತರಾಗುವಂತೆ ಮಾಡುವುದು ಬಹುಮಟ್ಟಿಗೆ ಭರವಸೆಯನ್ನು ಕೊಡುವಂತಹುದೆಂಬುದು ಸರ್ಕಾರಕ್ಕೆ ತಿಳಿದಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಕಳೆದ ೬ ವರ್ಷಗಳಲ್ಲಿ ಖಾಸಗಿ ವ್ಯಕ್ತಿಗಳು ಎಷ್ಟು ಮನೆಗಳನ್ನು ಕಟ್ಟಿಸಿದರೆಂಬುದರ ಬಗೆಗೆ ಮಾಹಿತಿಯು ಇಲ್ಲ. ಹೇಳಿಕೆಯಲ್ಲಿ ಬಳಸಿದ ಶಬ್ದಗಳ ಮೇಲಿಂದ ಅದನ್ನು ಎತ್ತಿ ಹಿಡಿಯುವುದು ಇಲ್ಲವೆ ಅದಕ್ಕೆ ಪ್ರತಿ ಹೇಳುವುದು ಅಸಾಧ್ಯವಾದುದು. ಆದರೆ ನಾನು ಗಮನ ಸದನದ ಸೆಳೆಯಬಯಸುವುದು ಏನೆಂದರೆ ೧೯೪೧ರ ಕೊನೆಯ ಅರ್ಧದವರೆಗೆ ಕಟ್ಟಡ ಸಾಮಗ್ರಿಗಳ ಮೇಲೆ ನಿಯಂತ್ರಣವಿರಲಿಲ್ಲ.

ಆ) ನಾನು ಎಣಿಸಿಕೊಂಡಂತೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಖಾಸಗಿ ಕಟ್ಟಡವಿದೆ.
ಭಾರತ ಸರ್ಕಾರವು ಇತ್ತೀಚೆಗೆ ಕೆಲವು ಸಾಮಾನ್ಯ ಸ್ವರೂಪದ ಕ್ರಮಗಳನ್ನು ಕೈಕೊಂಡು ಭಾರತದಲ್ಲೆಲ್ಲ ಖಾಸಗಿ ಕಟ್ಟಡಗಳನ್ನು ಕಟ್ಟುವವರಿಗೆ ಉತ್ತೇಜನ ಕೊಡುತ್ತಿದೆ. ಇದ ನಿರ್ದಿಷ್ಟವಾಗಿ ಮುಂಬೈ ಮತ್ತು ಕಲ್ಕತ್ತೆಗಳಿಗೆ ಸೀಮಿತವಾಗಿಲ್ಲ.
ಕಟ್ಟಡ ರಚನೆಯನ್ನು ಕುರಿತು ನಿಯಂತ್ರಣವನ್ನು ಚಲಾಯಿಸಲು ಪ್ರಾಂತೀಯ ಸರ್ಕಾರಗಳಿಗೆ ನೀಡಿದ್ದ ಸೂಚನೆಗಳನ್ನು ಸರ್ಕಾರವು ಹಿಂತೆಗೆದುಕೊಂಡಿದೆ. ಸಾಮಾನ್ಯವಾಗಿ ಖಾಸಗಿ ಕಟ್ಟಡಗಳನ್ನು ಕಟ್ಟುವವರಿಗೆ ಸಾಧ್ಯವಿರುವ ಎಲ್ಲ ಪ್ರಯತ್ನಮಾಡಿ ಅವರಿಗೆ ಉತ್ತೇಜನ ಕೊಡಬೇಕೆಂದು ಪ್ರಾಂತೀಯ ಸರ್ಕಾರಗಳಿಗೆ ಆದೇಶಿಸಲಾಗಿದೆ. ಪ್ರಾಂತೀಯ ಸರ್ಕಾರಗಳಿಗೆ ನಿರ್ದಿಷ್ಟ ಸೂಚನೆಗಳನ್ನು ಕೊಟ್ಟು ಇಟ್ಟಿಗೆಗಳನ್ನು, ಹೆಚ್ಚಿನ ಪ್ರಮಾಣದಲ್ಲಿ ಕಟ್ಟಡಸಾಮಗ್ರಿಗಳಾದ ಸಿಮೆಂಟ್, ಉಕ್ಕು, ಕಟ್ಟಿಗೆಗಳನ್ನು ಬಿಡುಗಡೆಮಾಡಲು ತಿಳಿಸಲಾಗಿದೆ. ಇವು ಭಾರತ ಸರ್ಕಾರದ ನಿಯಂತ್ರಣದಲ್ಲಿರುವುವು. ಅವುಗಳನ್ನು ಖಾಸಗಿ ಕಟ್ಟಡದಾರರಿಗೆ ಲಭ್ಯವಾಗುವಂತೆ ಮಾಡಲಾಗಿದೆ. ಭಾರತ ಸರ್ಕಾರವು ೧೯೪೬ನೆಯ ಮಾರ್ಚ್ ತಿಂಗಳ ಮೊದಲನೆಯ ವಾರದಲ್ಲಿ ಕಟ್ಟಡ ವ್ಯಾಪಾರಿಗಳ ಪ್ರತಿನಿಧಿಗಳ ಒಂದು ಸಭೆಯನ್ನು ಕರೆಯಲು ನಿರ್ಧರಿಸಿದ್ದು ದೇಶದಲ್ಲಿ ಖಾಸಗಿ ಕಟ್ಟಡಗಳ ಪ್ರಗತಿಗೆ ಇನ್ನೂ ಇರುವ ಅಡ್ಡಿ ಆತಂಕಗಳನ್ನು ಚರ್ಚಿಸಲಿದೆ.

ಇ) ತನ್ನ ನೀತಿಯಲ್ಲಿನ ಈ ಸಡಲಿಕೆಗಳು ಕಟ್ಟಡ ಕಟ್ಟುವವರಿಗೆ ಇನ್ನು ಮುಂದೆ ಸಹಾಯವಾಗಬಹುದೆಂದು ಭಾರತ ಸರ್ಕಾರವು ನಂಬಿದೆ.

ಈ) ಔದ್ಯಮಿಕ ಕಾರ್ಮಿಕರಲ್ಲಿ ಮತ್ತು ಪಟ್ಟಣ ಪ್ರದೇಶಗಳ ಉಳಿದ ಕೆಲಸಗಾರಲ್ಲಿ ಯಾರಿಗೆ ಹೆಚ್ಚಿನ ದರದಲ್ಲಿ ಬಾಡಿಗೆ ಕೊಡಲು ಶಕ್ಯವಿಲ್ಲವೋ ಅಂಥವರಿಗಾಗಿ ಮನೆಗಳನ್ನು ಕಟ್ಟಿಸಲು ಉತ್ತೇಜನ ಕೊಡುವಂತಹ ಅಲ್ಪಕಾಲದ ಒಂದು ಯೋಜನೆಯನ್ನು ಭಾರತ ಸರ್ಕಾರವು

ಪ್ರಾಂತೀಯ ಸರ್ಕಾರಗಳಿಗೆ ಕಳುಹಿಸಿದೆ. ಈ ಯೋಜನೆಯಲ್ಲಿ ಪ್ರಾಂತೀಯ ಸರ್ಕಾರಗಳು ಕೊಡುವಷ್ಟೇ ಪ್ರಮಾಣದ ಸಹಾಯಧನವನ್ನು ಕೇಂದ್ರ ಸರ್ಕಾರವೂ ಸಹಾಯಧನವನ್ನಾಗಿ ಕೊಡುವುದು ಮತ್ತು ಹಣಕಾಸಿನ ಮಂತ್ರಿಗಳು ಆಯವ್ಯಯ ಪತ್ರದ ತಮ್ಮ ಭಾಷಣದಲ್ಲಿ ಇದನ್ನು ಉಲ್ಲೇಖಿಸುವರು.

## ೩೭೯
## ಯುದ್ಧಕಾಲದ ತಾತ್ಪೂರ್ತಿಕ ಕಟ್ಟಡಗಳನ್ನು ವಾಸಕ್ಕಾಗಿ ಉಪಯೋಗಿಸುವ ಸರ್ಕಾರದ ಕಾರ್ಯನೀತಿ *

**೪೭೦. ಶ್ರೀ ಮನುಸುಬೇದಾರ್ :** ಅ) ಇಂಗ್ಲೆಂಡಿನಲ್ಲಿ ಹೆಚ್ಚಿನ ಮನೆಕಟ್ಟುವ ಕಾರ್ಯವನ್ನು ಕೈಗೊಳ್ಳಲು ವಿಶೇಷ ಕ್ರಮಗಳನ್ನು ಕೈಗೊಂಡಿರುವುದು ಸನ್ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಆ ಕ್ರಮಗಳಾವುವು?

ಆ) ಸ್ಟೇಟ್ಸಮನ್ ೧೯೪೬ರ ಜನವರಿ ೨೩ರಂದು ಆದ್ದರಿಂದ ಪೂರೈಕೆ ಮತ್ತು ಬೇಡಿಕೆಗಳ ತತ್ವದಂತೆ ಯುದ್ಧಕಾಲದಲ್ಲಿ ಕಟ್ಟಿದ ತಾತ್ಪೂರ್ತಿಕ ಕಟ್ಟಡಗಳೇ ವಾಸದ ಮನೆಗಳಾಗಿರುತ್ತವೆ ಎಂಬ ಸೂಚನೆಯನ್ನು ಕುರಿತು ಸರ್ಕಾರವು ತನ್ನ ಧೋರಣೆಯನ್ನು ಸೂಚಿಸಲು ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಬ್ರಿಟಿಷ್ ವಾರ್ತಾ ಮತ್ತು ಪ್ರಚಾರ ಸಚಿವಾಲಯವು ಆರ್. ೫೨೦ನೇ ಸಂಖ್ಯೆಯ ತನ್ನ ಕಿರುಪುಸ್ತಕದಲ್ಲಿ ಈ ಎಲ್ಲ ಕ್ರಮಗಳನ್ನು ವಿವರಿಸಲಾಗಿದೆ. ಅದರ ಒಂದು ಪ್ರತಿ ಈ ಸದನದ ಗ್ರಂಥಾಲಯದಲ್ಲಿದೆ.

ಆ) ಸ್ಟೇಟ್ಸಮನ್ ದಿನಾಂಕ ೧೯೪೬ರ ಜನವರಿ ೨೩ರಂದು ನೀಡಿದ ಸೂಚನೆಗಳು ಕಲ್ಕತ್ತೆಯಲ್ಲಿರುವ ತಾತ್ಪೂರ್ತಿಕ ಕಟ್ಟಡಗಳನ್ನು ಕುರಿತು. ಸನ್ಮಾನ್ಯ ಸದಸ್ಯರು ಈ ಕಟ್ಟಡಗಳನ್ನು ಕುರಿತು ಸರ್ಕಾರದ ಧೋರಣೆಯ ಬಗೆಗೆ ಕೇಳುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಕೇಂದ್ರ ಸರ್ಕಾರವು ನಾಗರಿಕ ಅಧಿಕಾರಿಗಳಿಗಾಗಿ ಕಟ್ಟಿಸಿದ ಕಟ್ಟಡಗಳಿಗೆ ಮಾತ್ರ ನಿಮ್ಮ ಇಲಾಖೆಯು ಸಂಬಂಧಿಸಿದ್ದು ನಮ್ಮ ಬೇಡಿಕೆಗಳಿಂತ ಅವು ಹೆಚ್ಚಾಗುವವರೆಗೆ ನಾವು ಅವುಗಳನ್ನು ಇಟ್ಟುಕೊಳ್ಳುವಲ್ಲಿ ಯಾವ ಸಂದೇಹವೂ ಇಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೨೭

# ೩೮೦
# ಭಾರತದಲ್ಲಿ ಕಾರ್ಖಾನೆಯ ಕೆಲಸಗಾರರ ಕೆಲಸದ ವೇಳೆ*

**೪೮೧. ಶ್ರೀ ವಾಡಿಲಾಲ್ ಲಲ್ಲೂಭಾಯ್ :** ಅ) ಭಾರತದಲ್ಲಿ ಬೇರೆ ಬೇರೆ ಉದ್ಯಮಗಳು ಕಲ್ಲಿದ್ದಲು ಗಣಿಗಳ ಮತ್ತು ತೋಟವನ್ನು ಒಳಗೊಂಡು ಅಲ್ಲಿನ ಕಾರ್ಮಿಕರು ವಾಸ್ತವವಾಗಿ ಪ್ರತಿದಿನ ಎಷ್ಟು ತಾಸುಗಳವರೆಗೆ ಕೆಲಸ ಮಾಡುವರು.

ಆ) ಭಾರತೀಯ ಕಾರ್ಖಾನೆಗಳ ಅಧಿನಿಯಮ ೧೯೩೪ರ ಅನ್ವಯ ಎಷ್ಟು ಕಾರ್ಖಾನೆಗಳು ಅದರ ವ್ಯಾಪ್ತಿಯಲ್ಲಿ ಬರುವವು?

ಇ) ಅದರಲ್ಲಿ ಎಷ್ಟು ಒಂದು ಸರತಿಯವು ಎಷ್ಟು ಎರಡು ಸರತಿಯವು ಮತ್ತು ಎಷ್ಟು ಮೂರು ಸರತಿಯವು ? ಮತ್ತು

ಈ) ಪ್ರತಿಯೊಂದು ಸರತಿಯಲ್ಲಿ ಎಷ್ಟು ತಾಸುಗಳವರೆಗೆ ಕೆಲಸಮಾಡುವರು?

–ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುತ್ತಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಉದ್ಯಮಗಳಲ್ಲಿ ಮತ್ತು ತೋಟದ ಕಾರ್ಮಿಕರ ಕೆಲಸದ ಅವಧಿಯನ್ನು ತೋರಿಸುವ ಎರಡು ವಿವರವಾದ ಹೇಳಿಕೆಗಳನ್ನು ಸದನದ ಮುಂದೆ ಇಡಲಾಗಿದೆ. ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರು ವಾಸ್ತವವಾಗಿ ಎಷ್ಟು ತಾಸುಗಳವರೆಗೆ ಕೆಲಸ ಮಾಡುವರೆಂಬ ವಿವರವಾದ ಮಾಹಿತಿಯು ಲಭ್ಯವಿಲ್ಲ .

ಆ) ಕಾರ್ಖಾನೆಗಳ ಅಧಿನಿಯಮದ ವ್ಯಾಪ್ತಿಯಲ್ಲಿ ೧೯೪೪ರಲ್ಲಿ ಕಾರ್ಖಾನೆಗಳ ಸಂಖ್ಯೆಯು ೧೪,೯೨೨ ಇದ್ದವು. ನಂತರದ ಅಂಕಿಗಳು ಲಭ್ಯವಿಲ್ಲ .

ಇ) ಮತ್ತು (ಈ) ಇಲ್ಲ. ಮಾಹಿತಿಯು ಲಭ್ಯವಿಲ್ಲ.

**ಕಾರ್ಖಾನೆಗಳಲ್ಲಿ ಪ್ರತಿದಿನ ಎಷ್ಟು ತಾಸುಗಳವರೆಗೆ ಕೆಲಸಮಾಡುವರೆಂಬುದನ್ನು ತೋರಿಸುವ ವಿವರವಾದ ಹೇಳಿಕೆ**

| | | |
|---|---|---|
| ೧. | ಹತ್ತಿ | ೭$^{೧}/_{೨}$ – ೧೦ |
| ೨. | ಗೋಣಿತಟ್ಟು | ೯–೧೨ |
| ೩. | ರೇಶ್ಮೆ | ೭$^{೧}/_{೨}$ – ೯ |
| ೪. | ಉಣ್ಣೆ | ೯–೧೦ |
| ೫. | ಇಂಜಿನಿಯರಿಗ್ ರೇಲ್ವೆ ಕಾರ್ಯಾಗಾರ | ೭$^{೧}/_{೨}$ ರಿಂದ ೧೨ ಸರದಿ ಕೆಲಸಗಾರರಿಗೆ (ಕೆಲವು ಪ್ರಕರಣಗಳಲ್ಲಿ ರಾತ್ರಿ ಸರತಿಯ ಕೆಲಸಗಾರರು ೭ ತಾಸುಗಳವರೆಗೆ ಕೆಲಸ ಮಾಡುವರು) |
| ೬. | ಕಡ್ಡಿ ಪೆಟ್ಟಿಗೆಗಳು | ೮$^{೧}/_{೨}$ –೧೦ |

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಡ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬, ಪುಟ ೧೪೨೮

| | |
|---|---|
| ೭. ಮಣ್ಣಿನ ಪಾತ್ರೆಗಳು | ೮ ಸರದಿ ಕೆಲಸಗಾರರಿಗೆ |
| ೮. ಪ್ರಿಂಟಿಂಗ್ ಪ್ರೆಸ್ (ಮುದ್ರಣಾಲಯಗಳು) | ೭೧/೨ – ೮೧/೨ |
| ೯. ಗಾಜು | ೭೧/೨ – ೯ ಸರದಿ ಕೆಲಸಗಾರರಿಗೆ |
| ೧೦. ರಾಸಾಯನಿಕ ಮತ್ತು ಔಷಧಗಳ ಸಂಬಂಧ ಕೆಲಸಗಳು | ಸಾಮಾನ್ಯ ಕೆಲಸಗಾರರಿಗೆ<br>೭ – ೧೦ |
| ೧೧. ಸಕ್ಕರೆ | ೮ ಉತ್ಪಾದನಾ ವಿಭಾಗ<br>೮ – ೯ ಇಂಜಿನಿಯರಿಂಗ್ ವಿಭಾಗ |
| ೧೨. ಹತ್ತಿಗಿರಣಿ ಗಂಟು ಕಟ್ಟುವುದು (ಬೇಲ್ ಕಟ್ಟುವುದು) | ೯ – ೧೦ |
| ೧೩. ಅಕ್ಕಿ ಗಿರಣಿಗಳು | ೭ – ೧೦ |
| ೧೪. ಸಿಮೆಂಟ್ | ೭೧/೨ – ೮–ಸರದಿ ಕೆಲಸಗಾರರಿಗೆ<br>೮ – ೯–ಸಾಮಾನ್ಯ ಕೆಲಸಗಾರರಿಗೆ |
| ೧೫. ಕಾಗದ | ೭ – ೮–ಒಂದೇ ರೀತಿಯ ಕಾರ್ಯ ವಿಧಾನ ಸರತಿಗಳು |
| ೧೬. ಅಭ್ರಕ (ಕಾಗೆ ಬಂಗಾರದ ಕಾರ್ಖಾನೆಗಳು) | ೯ |
| ೧೭. ಶುದ್ಧ ಅರಗಿನ ತಯಾರಿಕೆ | ೮ – ೧೦ |
| ೧೮. ಚುಟ್ಟಾ, ಸಿಗರೇಟು ಮತ್ತು ಉದ್ದ ಸಿಗರೇಟು | ೧೧–೧೨–ಚುಟ್ಟಾ, ಉದ್ದ ಸಿಗರೇಟು, ಮತ್ತು<br>೮–೯ ಸಿಗರೇಟು |
| ೧೯. ಜಮಖಾನಾ ನೇಯುವುದು | ೯–೧೦ |
| ೨೦. ಚರ್ಮ ಹದ ಮಾಡುವುದು ಮತ್ತು ಹದ ಮಾಡಿದ ಚರ್ಮದ ಸರಕುಗಳನ್ನು ತಯಾರಿಸುವವರು | ಉ. ಪ್ರ ಮದ್ರಾಸ ೮೧/೨<br>೯ ಹಗಲು ಸರದಿ<br>೮–೯ ರಾತ್ರಿ ಸರದಿ |
| ೨೧. ತೆಂಗಿನ ನಾರಿನ ಚಾಪೆ | ೯ (ಗಂಡುಮಕ್ಕಳು); ೬–(ಹೆಣ್ಣುಮಕ್ಕಳಿಗೆ)<br>೫ ಸಣ್ಣ ಮಕ್ಕಳಿಗೆ |

**ತೋಟಗಾರಿಕೆಯಲ್ಲಿ ಪ್ರತಿದಿನ ಎಷ್ಟು ತಾಸುಗಳವರೆಗೆ ಕೆಲಸ ಮಾಡುವರೆಂದು ತೋರಿಸುವ ವಿವರವಾದ ಹೇಳಿಕೆ**

ಅಸ್ಸಾಂ ಮತ್ತು ಬಂಗಾಳ ಚಹಾದ ತೋಟಗಳು

| | |
|---|---|
| ಹರ್ಖೂರಿಯಾ (ಸಾಮಾನ್ಯ ಕೆಲಸದ ವೇಳೆ) | ೫–೬ |
| ಟಿಕ್ಕಾ (ಹೆಚ್ಚಿನ ಅವಧಿ) | ೩–೪ |
| ಕೊಯ್ಯುವವರು | ೧೦–೧೧ |
| ಕಾಂಗ್ರಾಕೊಳ್ಳ | ೮–೯ |
| ಡೆಹರಾಡೂನ್ | ೮ |
| ಅಲ್ಮೋರಾ | ೯ |
| ದಕ್ಷಿಣ ಭಾರತದ ಚಹಾ ಮತ್ತು ಕಾಫಿ | ೮–೯ |
| ರಬ್ಬರ್ ತೋಟಗಳು | ೫–೭ |

## ೩೮೧
## ನವದೆಹಲಿಯಲ್ಲಿಯ ತಾತ್ಪೂರ್ತಿಕ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವುದು *

**೪೯೫. ಎಮ್. ಅನಂತಶಯನಮ್ ಅಯ್ಯಂಗಾರ್ :** ಅ) ಯುದ್ಧ ಇಲಾಖೆಯು ಕಟ್ಟಿಸಿದ ಎಲ್ಲ ತಾತ್ಪೂರ್ತಿಕ ಕಟ್ಟಡಗಳನ್ನು ಮತ್ತು ಉಳಿದ ಆವಶ್ಯಕತೆಗಳಿಗಾಗಿ ಮತ್ತು ಅಮೇರಿಕನ್ನರು ಹಿಂದಿರುಗಿಸಿದ ಕಟ್ಟಡ, ರಾಣಿ ರಸ್ತೆ ಮತ್ತು ಉಳಿದ ಸ್ಥಳಗಳಲ್ಲಿರುವ ಕಟ್ಟಡಗಳನ್ನು ಒಳಗೊಂಡು ಎಲ್ಲವನ್ನು ಮುಖ್ಯವಾಗಿ ಕಚೇರಿಗಳಿಗಾಗಿ ಸ್ಥಳಕ್ಕಾಗಿ ಉಪಯೋಗಿಸಲಾಗುವುದೆ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೇ?

ಆ) ಇದರಲ್ಲಿ ಕೆಲವು ಕಟ್ಟಡಗಳನ್ನಾದರೂ ಸ್ವಲ್ಪ ಮಾರ್ಪಾಡು ಮಾಡಿ ಭಾರತ ಸರ್ಕಾರದ ಸಿಬ್ಬಂದಿಗಳಲ್ಲಿ ಯಾರಿಗಾದರೂ ವಸತಿಯ ಉದ್ದೇಶಕ್ಕಾಗಿ ಕೊಡುವ ಸಾಧ್ಯತೆಯನ್ನು ವಿಚಾರ ಮಾಡಿ ದೆಹಲಿಯಲ್ಲಿ ಈಗ ಇರುವ ಮನೆಯ ಅಭಾವವನ್ನು ಕೊನೆಗಾಣಿಸುವಿರಾ? ಮತ್ತು

ಇ) ಸರ್ಕಾರವು ಈ ನಿಟ್ಟಿನಲ್ಲಿ ಅವಶ್ಯವಾದ ಖರ್ಚನ್ನು ಭರಿಸಲು ಸಿದ್ಧವಿಲ್ಲವೆ? ಈ ಕಟ್ಟಡಗಳನ್ನು ಮೊದಲು ಸರ್ಕಾರಿ ನೌಕರರಿಗೆ ಕೊಡಬೇಕೆಂಬ ಕರಾರಿನ ಮೇಲೆ ಅವರು ಒಪ್ಪಂದ ಮಾಡಿಕೊಂಡು ಕೊಡಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ

ಆ) ಹೌದು. ಯಾವುದೇ ತಾತ್ಪೂರ್ತಿಕ ಕಟ್ಟಡಗಳು ಕಚೇರಿಯ ಉದ್ದೇಶಗಳಿಗಾಗಿ ಕಟ್ಟಿಸಿದವು. ಈಗ ಕಚೇರಿಗಳ ಉದ್ದೇಶಕ್ಕಾಗಿ ಅವುಗಳ ಮತ್ತು ಅವು ಇರುವ ನಿವೇಶನಗಳು ಇತರ ಉದ್ದೇಶಕ್ಕಾಗಿ ಬೇಡವಾದಲ್ಲಿ ಸರಕಾರಿ ಸಿಬ್ಬಂದಿಗಳಿಗೆ ಕೊಡಬಹುದು ಈ ಕಟ್ಟಡಗಳನ್ನು.

ಇ) ಈ ವಿಚಾರವನ್ನು ಪರಿಶೀಲನೆ ಮಾಡಲಾಗುವುದು. ಆದರೆ ಸರ್ಕಾರಕ್ಕೆ ತನ್ನ ಸಿಬ್ಬಂದಿಯ ಉದ್ದೇಶಕ್ಕಾಗಿಯೇ ಈ ಕಟ್ಟಡಗಳು ಬೇಕಾಗಬಹುದು. ಮತ್ತು ಅಂಥ ಪ್ರಕರಣದಲ್ಲಿ ಅವುಗಳನ್ನು ಸರ್ಕಾರವು ತನ್ನ ಸ್ವಾಧೀನನಲ್ಲಿಯೇ ಇಟ್ಟುಕೊಳ್ಳುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೪೬

# ೩೮೨
# ಅಭ್ರಕ ವ್ಯಾಪಾರದ ಬಗ್ಗೆ ಸರ್ಕಾರದ ಕಾರ್ಯನೀತಿ *

**೪೯. ಬಾಬುರಾಮ ನಾರಾಯಣ ಸಿಂಗ್ :** ಅ) ಅಭ್ರಕದ ಉದ್ಯೋಗ ಮತ್ತು ವ್ಯಾಪಾರ ಕುರಿತು ಸರ್ಕಾರದ ಕಾರ್ಯನೀತಿ ಮತ್ತು ಉದ್ದೇಶವೇನು?

ಆ) ಅಭ್ರಕ ವಿಚಾರಣಾ ಸಮಿತಿಯ ವರದಿಯು ಮುದ್ರಣ ಮತ್ತು ಪ್ರಕಟನೆಯಾಗುವ ಸಂಭವನೀಯ ದಿನಾಂಕ ಮತ್ತು

ಇ) ಮೈಕಾ ಹತೋಟಿ ಆದೇಶದ ಕೆಳಗೆ ಕಚ್ಚಾ ಅಭ್ರಕ ಮತ್ತು ಬೀಮಾ ಅಭ್ರಕದ ಮಾರಾಟದ ಮೇಲಿನ ನಿಷೇಧವನ್ನು ತೆಗೆದುಹಾಕುವ ಅಥವಾ ಕಡೆಯ ಪಕ್ಷ ಮಾರ್ಪಾಡು ಮಾಡುವುದರ ಅಪೇಕ್ಷಣೀಯತೆಯನ್ನು ಪರಿಗಣಿಸುವುದಕ್ಕೆ ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗಬಹುದು?

–ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಭಾರತ ಸರ್ಕಾರವು ಉದ್ಯಮಗಳಲ್ಲಿ ಕೆಲಸಗಾರರ ಸ್ಥಿತಿಗತಿಗಳನ್ನು ಸುಧಾರಿಸಲು ಇಚ್ಛಿಸುತ್ತದೆ ಮತ್ತು ಈ ಉದ್ಯಮವನ್ನು ಭದ್ರವಾದ ವ್ಯಾಪಾರದ ತಳಹದಿಯ ಮೇಲೆ ಕಟ್ಟಬಯಸುತ್ತದೆ. ಇದರಿಂದ ಭಾರತದ ಅಭ್ರಕಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರೆಯುತ್ತದೆ.

ಆ) ವರದಿಯು ಮುದ್ರಣವಾಗುತ್ತಿದೆ. ಮುದ್ರಿತ ಪ್ರತಿಗಳು ಬಂದೊಡನೆ ಅದನ್ನು ಪ್ರಕಟಿಸಲಾಗುವುದು.

ಇ) ಅಭ್ರಕ ವಿಚಾರಣೆ ಸಮಿತಿಯ ವರದಿಯ ಮೇಲೆ ಸರ್ಕಾರವು ನಿಶ್ಚಿತವಾಗಿ ಇಂತಹದೇ ದಿನ ಕ್ರಮ ಕೈಗೊಳ್ಳುವುದೆಂದು ಹೇಳಲು ಸಾಧ್ಯವಿಲ್ಲ. ಎಲ್ಲಾ ಪ್ರಯತ್ನಗಳನ್ನೂ ಮಾಡಿ ಆದಷ್ಟೂ ಬೇಗನೆ ಅದನ್ನು ಮಾಡಲಾಗುವುದು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೪೭

## ೩೮೩
## ಅಭ್ರಕ ನಿಯಂತ್ರಣ ಆದೇಶದಿಂದ ನಿರುದ್ಯೋಗ *

**೫೦೦. ಬಾಬು ರಾಮ ನಾರಾಯಣ ಸಿಂಗ್ :** ಅಭ್ರಕ ನಿಯಂತ್ರಣ ಆದೇಶದಿಂದ ಹಝಾರಿಬಾಗ ಜಿಲ್ಲೆಯಲ್ಲಿ ಲಕ್ಷಗಟ್ಟಲೆ ಜನರನ್ನು ಉದ್ಯೋಗದಿಂದ ಕಿತ್ತುಹಾಕಲಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಅ) ಹಝಾರಿಬಾಗ ಜಿಲ್ಲೆಯಲ್ಲಿ ಲಕ್ಷಗಟ್ಟಲೆ ಜನರಿಗೆ ಕೇವಲ ಅಭ್ರಕ ವ್ಯಾಪಾರ ಒಂದೇ ಉಪಜೀವನದ ಮಾರ್ಗವಾಗಿದೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೆ? ಹಾಗಿದ್ದಲ್ಲಿ ಅವರ ಹಿತಾಸಕ್ತಿಯನ್ನು ಕಾಪಾಡಲು ಅಭ್ರಕದ ಉದ್ಯೋಗ ಮತ್ತು ಅಭ್ರಕ ವ್ಯಾಪಾರಗಳನ್ನು ಕ್ರಮಗೊಳಿಸಲು ಸರ್ಕಾರವು ಯಾವ ಕ್ರಮಕೈಗೊಳ್ಳಲು ಉದ್ದೇಶಿಸಿದೆ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹಝಾರಿಬಾಗ ಜಿಲ್ಲೆಯಲ್ಲಿ ಅಭ್ರಕದ ನಿಯಂತ್ರಣ ಆದೇಶದಿಂದ ಲಕ್ಷಗಟ್ಟಲೆ ಜನರು ನಿರುದ್ಯೋಗಿಗಳಾಗಿದ್ದಾರೆಂಬ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲ.

ಆ) ಹೆಚ್ಚಿನ ಸಂಖ್ಯೆಯಲ್ಲಿ ಜನರು ಅಭ್ರಕದ ಉದ್ಯಮದಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಯಾವುದೇ ಔದ್ಯೋಗಿಕ ಸುಧಾರಣೆಯಲ್ಲಿ ಅವರ ಹಿತಾಶಕ್ತಿಗಳನ್ನು ಸರ್ಕಾರವು ಕಡೆಗಣಿಸುವುದಿಲ್ಲ.

## ೩೮೪
## ಮುಖ್ಯ ಕಾರ್ಯಾಲಯದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರರು **

**೫೮೮. ಶ್ರೀ ಮಹಮ್ಮದ್ ರಹಮತ್ ಉಲ್ಲಾ :**

ಅ) ಮುಖ್ಯ ಕಾರ್ಯಾಲಯದಲ್ಲಿ ರಾಯ್ ಸಾಹೇಬ್ ಸಿ. ಪಿ. ಮಲ್ಲಿಕ್ ಇವರಿಗೆ ಕಾರ್ಯ ನಿರ್ವಾಹಕ ಸೂಪರಿಂಟೆಂಡೆಂಟ್ ಇಂಜಿನಿಯರ್ ಸ್ಥಾನಕ್ಕೆ ನೇಮಿಕಾತಿಯ ಅವಕಾಶವನ್ನು ಕಲ್ಪಿಸಿಕೊಟ್ಟಿರುವರೆಂಬುದು ನಿಜವೆ?

ಆ) ಅಲ್ಲಿ ಇನ್ನೂ ಅನೇಕ ಜನ ಮುಸಲ್ಮಾನ ಕಾರ್ಯನಿರ್ವಾಹಕ ಇಂಜಿನಿಯರರು ಈತನಿಗಿಂತಲೂ ಸೇವಾಜ್ಯೇಷ್ಠತೆ ಇದ್ದವರು ಇದ್ದಾಗ್ಯೂ ಅವರಿಗೆ ಒಮ್ಮೆಯೂ ಕಾರ್ಯನಿರ್ವಾಹಕ ಸೂಪರಿಂಟೆಂಡಿಂಗ್ ಹುದ್ದೆಯ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲವೆಂಬುದು ನಿಜವೆ?

– ಈ ಬಗ್ಗೆ ಕಾರ್ಮಿಕ ಸದಸ್ಯರು ದಯವಿಟ್ಟು ಉತ್ತರಿಸುತ್ತಾರೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಇಲ್ಲ. ರಾಯ್ ಸಾಹೇಬ್ ಸಿ. ಪಿ. ಮಲ್ಲಿಕ್ ಇವರನ್ನು ಸೂಪರಿಂಟೆಂಡಿಂಗ್ ಇಂಜಿನಿಯರರ ಹುದ್ದೆಯ ತಾತ್ಕಾಲಿಕ ಕರ್ತವ್ಯಗಳನ್ನು ನೋಡಿಕೊಳ್ಳಲು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೫ನೇ ಫೆಬ್ರವರಿ, ೧೯೪೬. ಪುಟ ೧೪೪೭

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೧, ೨೮ನೇ ಫೆಬ್ರವರಿ, ೧೯೪೬. ಪುಟ ೧೬೬೮

ತಾತ್ಪೂರ್ತಿಕವಾಗಿ ದೆಹಲಿಯ ಎರಡನೆಯ ವಲಯದಲ್ಲಿ ನೇಮಿಸಿಕೊಳ್ಳಲಾಗಿದೆ. ಇದು ಕೇವಲ ಆಡಳಿತಾತ್ಮಕ ಅನುಕೂಲತೆಯ ದೃಷ್ಟಿಯಿಂದ ಮಾತ್ರ.

ಆ) ಹೌದು. ಆದರೆ ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಗೆ ಬಡ್ತಿ ಹೊಂದಲು ಅರ್ಹರಾಗಿಲ್ಲ.

**ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ೧೩ ಜನ ಸೂಪರಿಂಟೆಂಡಿಂಗ್ ಇಂಜನಿಯರರಲ್ಲಿ ಕೇವಲ ಒಬ್ಬ ಮುಸಲ್ಮಾನರಿದ್ದಾರೆ. ಈ ಹುದ್ದೆಗೆ ಒಬ್ಬ ಮುಸಲ್ಮಾನನನ್ನು ಏಕೆ ನೇಮಿಸಲಿಲ್ಲ ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ನನ್ನ ಉತ್ತರವನ್ನು ಪರಾಮರ್ಶಿಸಿದರೆ ಈ ನೇಮಕವು ಕಾರ್ಯನಿರ್ವಾಹಕವಲ್ಲವೆಂಬುದು ಕಂಡುಬರುವುದು. ಆತನಿಗೆ ಆ ಕಾರ್ಯವನ್ನು ತಾತ್‌ಪೂರ್ತಿಕವಾಗಿ ಮಾಡಿಕೊಂಡು ಹೋಗಲು ಹೇಳಲಾಗಿದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ಆತನನ್ನು ಸೂಪರಿಂಟೆಂಡಿಂಗ್ ಇಂಜಿನಿಯರೆಂದು ಕರೆಯುವುದಿಲ್ಲವೆ ಮತ್ತು ಅದಕ್ಕಾಗಿ ಆತನಿಗೆ ಯಾವುದೇ ಸಂಭಾವನೆ ಇಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು.

**ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ಇಬ್ಬರಿಗಿಂತ ಹೆಚ್ಚಿಗೆ ಮುಸಲ್ಮಾನರನ್ನು ನೇಮಕ ಮಾಡದೇ ಇರುವುದಕ್ಕೆ ಇದೊಂದು ಮೂರನೆಯ ಮಾರ್ಗ, ಹೆಚ್ಚಿಗೆ ದಕ್ಷತೆ ಮತ್ತು ಸೇವಾಜ್ಯೇಷ್ಠತೆಯ ಆಧಾರದ ಮೇಲೆ ಅವರಿಗೆ ಸ್ಥಾನ ಕೊಡದೆ ಹಾಗೆಯೇ ಕೆಲಸ ನೋಡಿಕೊಂಡು ಹೋಗಬೇಕೆಂದು ಹೇಳುವ ಮಾರ್ಗ ಇದಾಗಿದೆ.

ನೀವು ಆ ಹುದ್ದೆಗೆ ಕೊಟ್ಟ ಹೆಸರಿನಿಂದ ಆತನನ್ನು, ಆದರೆ ಕರೆಯುವುದಿಲ್ಲ. ನೀವು ಹಾಗೆಯೇ ಆತನನ್ನು ಕಾರ್ಯನಿರ್ವಾಹಕ ಸೂಪರಿಂಟೆಂಡೆಂಟರ ಕರ್ತವ್ಯವನ್ನು ಮಾಡಲು ನಿರ್ದೇಶಿಸುವಿರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತನ್ನ ಸನ್ಮಾನ್ಯ ಗೆಳೆಯರು ತಮಗೆ ಬೇಕಾದಂತೆ ಊಹೆ ಮಾಡಲು ಸ್ವತಂತ್ರರಿದ್ದಾರೆ.

**ಶ್ರೀ ಮೌಲಾನಾ ಜಾಫರ್ ಅಲಿ ಖಾನ್ :** ಮುಸಲ್ಮಾನರನ್ನು ನೇಮಕಮಾಡಿಕೊಳ್ಳುವಾಗ ಸರ್ಕಾರವು ಯಾವಾಗಲೂ ಮಲತಾಯಿ ಧೋರಣೆಯನ್ನು ತೋರುತ್ತದೆಂದು ಪರದೇಶದಲ್ಲಿ ಒಂದು ಭಾವನೆ ಇದೆಯೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆಯೆ?

**ಶ್ರೀ ಅಹಮ್ಮದ್ ಈ. ಎಚ್. ಜಾಫರ್ :** ಅ) ಭಾಗದ ಉತ್ತರದಲ್ಲಿ ಸನ್ಮಾನ್ಯ ಸದಸ್ಯರು ಕೇವಲ ಆಡಳಿತಾತ್ಮಕ ಅನುಕೂಲತೆ ಎಂದು ಹೇಳಿದರು. ಮುಸಲ್ಮಾನರ ನೇಮಕ ತಪ್ಪಿಸಲು ಅನುಕೂಲ ಮಾಡಿಕೊಡುವುದರಲ್ಲಿ ಸನ್ಮಾನ್ಯ ಸದಸ್ಯರ ಅನುಕೂಲತೆ ಇದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ನನ್ನ ಉತ್ತರವು ಸರಳವಾಗಿ ಅಭಿವ್ಯಕ್ತವಾಗಿದ್ದು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಹದ್ದಾಗಿದೆ.

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ, – ಮುಂದಿನ ಪ್ರಶ್ನೆ

## ೩೮೫

## ಕಾರ್ಮಿಕ ವಿಭಾಗ ಸಚಿವಾಲಯದಲ್ಲಿ ಗೆಜ಼ೆಟೆಡ್ ಮುಸಲ್ಮಾನ ಅಧಿಕಾರಿಗಳು*

**೬೦೦. ಶ್ರೀ ಮಹಮ್ಮದ್ ರಹಮತ್‌ಉಲ್ಲಾ :** ಕಾರ್ಮಿಕ ವಿಭಾಗ ಸಚಿವಾಲಯದಲ್ಲಿ ಮುಸ್ಲಿಮ್ ಗೆಜ಼ೆಟೆಡ್ ಅಧಿಕಾರಿಗಳ ಪ್ರಮಾಣವೇನು ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಾರ್ಮಿಕ ವಿಭಾಗದಲ್ಲಿ ೪೯ ಜನ ಗೆಜ಼ೆಟೆಡ್ ಹುದ್ದೆಯ ಕಾರ್ಯದರ್ಶಿಗಳಿದ್ದಾರೆ. ಅದರಲ್ಲಿ ೯ ಜನರು ಮುಸಲ್ಮಾನರು.

**ಶ್ರೀ ಅಹಮ್ಮದ್ ಈ. ಎಚ್. ಜಾಫರ್ :** ಇದರಿಂದ ೧೦೦ಕ್ಕೆ ೨೫ರಂತೆ ಮುಸಲ್ಮಾನರ ಪ್ರಮಾಣ ಕಾಯ್ದುಕೊಂಡಿಲ್ಲವೆಂದು ಅರ್ಥವಾಗುವುದಿಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆ ನಿಯಮವು ಸಚಿವಾಲಯಕ್ಕೆ ಅನ್ವಯಿಸುತ್ತದೆಂದು ನನಗೆ ಗೊತ್ತಿಲ್ಲ .

**ಶ್ರೀ ಅಹಮ್ಮದ್ ಈ. ಎಚ್. ಜಾಫರ್ :** ೪೯ರಲ್ಲಿ ೯ ಅವರ ಪ್ರಮಾಣವು ಕೆಳಗೆ ಇರುವುದು ಮುಸಲ್ಮಾನ ಸಮಾಜಕ್ಕೆ ನ್ಯಾಯಯುತವಾದುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಜಾತೀಯ ಪ್ರಾತಿನಿಧ್ಯದ ಪ್ರಮಾಣದ ಮೇಲೆ ಈ ವಿಷಯ ರೂಪಿಸಲಾಗಿದೆಯೆಂದು ನಾನು ಭಾವಿಸುತ್ತೇನೆ.

## ೩೮೬

## ಕೇಂದ್ರ ಪಿ.ಡಬ್ಲ್ಯೂ.ಡಿ.ಯಲ್ಲಿ ಮುಸಲ್ಮಾನ ಆಡಳಿತಾತ್ಮಕ ಅಧಿಕಾರಿಗಳು*

**೬೦೧. ಶ್ರೀ ಮಹಮ್ಮದ್ ರಹಮತ್ ಉಲ್ಲಾ :** ಅ) ೧೯೪೬ರ ಜನವರಿ ೨೬ನೆ ದಿನಾಂಕದಂದು ಡಾನ್ ಪತ್ರಿಕೆ ಪ್ರಕಟಿಸಿದ ಲೇಖನದಲ್ಲಿ ಮುಸಲ್ಮಾನ ಆಡಳಿತಾತ್ಮಕ ಅಧಿಕಾರಿಯನ್ನು ಕೇಂದ್ರ ಪಿ.ಡಬ್ಲ್ಯು.ಡಿ.ಯಲ್ಲಿ ನೇಮಿಸುವ ಬಗ್ಗೆ ಬರೆದಿರುವುದು ಸನ್ಮಾನ್ಯ ಕಾರ್ಮಿಕ ಸದಸ್ಯರ ಗಮನಕ್ಕೆ ಬಂದಿದೆಯೆ?

ಆ) ಆ ಲೇಖನದಲ್ಲಿ ಕಾರ್ಮಿಕ ವಿಭಾಗದ ಬಗ್ಗೆ ಹೇಳಿದ ಸಂಗತಿಗಳು ನಿಜವಿವೆಯೆ?

ಇ) ಆಡಳಿತಾತ್ಮಕ ಅಧಿಕಾರಿಯ ಮೂವರು ಸಹಾಯಕರು, ಅದರಂತೆ ಆರ್ಥಿಕ ಸಲಹೆಗಾರರು ಹಿಂದೂಗಳೆಂಬುದು ನಿಜವೆ?

ಈ) ಮಾನ್ಯ ಸದಸ್ಯರು ಮುಸಲ್ಮಾನೇತರೊಬ್ಬರನ್ನು ಆಡಳಿತಾತ್ಮಕ ಅಧಿಕಾರಿಯನ್ನಾಗಿ ನೇಮಿಸಲು ಉದ್ದೇಶಿಸುತ್ತಿದ್ದಾರೆಂಬುದು ನಿಜವೆ? ಹಾಗಿದ್ದಲ್ಲಿ ಮುಸಲ್ಮಾನರನ್ನು ಕೇಂದ್ರ ಪಿ.ಡಬ್ಲ್ಯು.ಡಿ. ಶಾಖೆಯ ನೇಮಕಾತಿಯಲ್ಲಿ ಏಕೆ ಕೈಬಿಡಲಾಗಿದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೨೮ನೇ ಫೆಬ್ರವರಿ, ೧೯೪೬, ಪುಟ ೧೬೬೮

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೨೮ನೇ ಫೆಬ್ರವರಿ, ೧೯೪೬, ಪುಟ ೧೬೭೦

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು. ಆ) ಇಲ್ಲ. ಇ) ಹೌದು. ಈ) ಕೇಂದ್ರ ಪಿ.ಡಬ್ಲ್ಯೂ.ಡಿ. ಯಲ್ಲಿ ಆಡಳಿತಾತ್ಮಕ ಅಧಿಕಾರಿಯ ಸ್ಥಳವನ್ನು ತುಂಬುವ ಪ್ರಶ್ನೆಯು ಪರಿಶೀಲನೆಯಲ್ಲಿದೆ.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಇದು ಎಲ್ಲಿಯವರೆಗೆ ಪರಿಶೀಲನೆಯಲ್ಲಿರುವುದು. ಇದರ ಬಗ್ಗೆ ಹಲವು ಸಲ ಅವರ ಗಮನಕ್ಕೆ ತರಲಾಗಿದೆ. ಈ ಅಧಿವೇಶನ ಮುಗಿದ ನಂತರ ಆ ಸ್ಥಳವನ್ನು ತುಂಬಲಾಗುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಾಲಕ್ರಮದಲ್ಲಿ ಅವರನ್ನು ನೇಮಿಸಲಾಗುವುದು.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಇದ್ದುದನ್ನು ಇದ್ದಂತೆ ಏಕೆ ಹೇಳುವುದಿಲ್ಲ. ಈ ವಿಭಾಗವನ್ನು ಹಿಂದೂ ಕಾರ್ಮಿಕರ ವಿಭಾಗವೆಂದಾಗಲಿ ಇಲ್ಲವೆ ಪರಿಶಿಷ್ಟ ಜನಾಂಗದ ವಿಭಾಗವೆಂದಾಗಲೀ ಏಕೆ ಕರೆಯುವುದಿಲ್ಲ?

–ಯಾವುದೇ ಉತ್ತರವನ್ನು ಕೊಡಲಿಲ್ಲ.

## ೩೮೭

## ಭಾರತದಲ್ಲಿ ಕಾರ್ಮಿಕ ಸಂಘಗಳು *

**೫೪. ಶ್ರೀ ವಾಡಿಲಾಲ್ ಲಲ್ಲೂಭಾಯ್ :** ಅ) ಭಾರತದಲ್ಲಿರುವ ಕಾರ್ಮಿಕ ಸಂಘಗಳೆಷ್ಟು ಮತ್ತು ೧೯೨೯ರಿಂದ ಇಲ್ಲಿಯವರೆಗೆ ಪ್ರತಿ ವರ್ಷವೂ ಬೇರೆ ಬೇರೆ ಪ್ರಾಂತಗಳಲ್ಲಿ ಇದ್ದ ಕಾರ್ಮಿಕ ಸದಸ್ಯರ ಸಂಖ್ಯೆ ಎಷ್ಟು?

ಆ) ೧೯೩೯ರಿಂದ ಇಂದಿನವರೆಗೆ ಪ್ರಾಂತಗಳಲ್ಲಿ ಶೇಖರಿಸಲ್ಪಟ್ಟ ನಿಧಿ ಎಷ್ಟು? ಮತ್ತು ೧೯೩೯ರಿಂದ ಇಲ್ಲಿಯವರೆಗೆ ಪ್ರತಿ ವರ್ಷ ವಂತಿಕೆಯಿಂದ ಬಂದ ಹಣವೆಷ್ಟು? ಮತ್ತು ದೇಣಿಗೆಯಿಂದ ಬಂದ ಹಣವೆಷ್ಟು?

ಇ) ೧೯೩೯ರಿಂದ ಕಾರ್ಮಿಕ ಸಂಘಗಳ ಅಧಿಕಾರಿ ವರ್ಗಗಳಲ್ಲಿ ಹೊರಗಿನವರ ಪ್ರಮಾಣವೆಷ್ಟು? ಈ ಪ್ರಮಾಣವು ಇತ್ತೀಚೆಗೆ ಇಳಿಮುಖವಾಗಿದೆಯೆಂಬುದು ನಿಜವೆ?

–ಈ ಪ್ರಶ್ನೆಗಳಿಗೆ ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಉತ್ತರಿಸುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ೧೯೩೯ ರಿಂದ ೧೯೪೪ರ ವರೆಗೆ ನೋಂದಾಯಿತ ಕಾರ್ಮಿಕ ಸಂಘಗಳ ಸಂಖ್ಯೆ ವಾರ್ಷಿಕ ವರದಿಯನ್ನು ಸಲ್ಲಿಸಿದ ಸಂಘಗಳ ಸಂಖ್ಯೆ ಮತ್ತು ಅವುಗಳ ಸದಸ್ಯರ ಸಂಖ್ಯೆಯನ್ನೊಳಗೊಂಡ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ೧೯೪೪–೪೫ರ ಅಂಕಿ ಸಂಖ್ಯೆಗಳು ಇಲ್ಲಿಯವರೆಗೆ ಲಭ್ಯವಿಲ್ಲ.

ಆ) ೧೯೩೯ ರಿಂದ ೧೯೪೪ರ ವರೆಗಿನ ಕಾರ್ಮಿಕ ಸಂಘಗಳ ಆದಾಯ ಖರ್ಚು ಪ್ರಾರಂಭದ ಮತ್ತು ಮುಕ್ತಾಯ ಶಿಲ್ಕುಗಳನ್ನು ತೋರಿಸುವ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ಪ್ರಶ್ನೆಯ ಎರಡನೆಯ ಭಾಗದ ಬಗ್ಗೆ ಸರ್ಕಾರದ ಹತ್ತಿರ ಯಾವುದೇ ಮಾಹಿತಿ ಇಲ್ಲ.

ಇ) ಮತ್ತು ಈ) ಮಾಹಿತಿಯು ಲಭ್ಯವಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೨೮ನೇ ಫೆಬ್ರವರಿ, ೧೯೪೬, ಪುಟ ೧೬೭೦

# ೩೮೮
# ಭಾರದಲ್ಲಿ ಕೈಗಾರಿಕಾ ಉದ್ಯಮಗಳಲ್ಲಿ ಇರುವ ಕೆಲಸಗಾರರು *

**೫೫. ಶ್ರೀ ವಾಡಿಲಾಲ್ ಲಲ್ಲೂಭಾಯ್ :** ಸನ್ಮಾನ್ಯ ಕಾರ್ಮಿಕ ಸದಸ್ಯರು ಮುಂದಿನ ಪ್ರಶ್ನೆಗಳಿಗೆ ದಯವಿಟ್ಟು ಹೇಳುತ್ತಾರೆಯೆ? ಅ) ಭಾರತದಲ್ಲಿ ಕೈಗಾರಿಗಾ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಯೆಷ್ಟು? ಮತ್ತು ೧೯೩೯ರಿಂದ ಕಲ್ಲಿದ್ದಲು ಗಣಿಗಳನ್ನು ಹಾಗೂ ತೋಟಗಳನ್ನು ಒಳಗೊಂಡಂತೆ ಪ್ರತಿಯೊಂದು ಉದ್ಯಮದಲ್ಲಿ ಎಷ್ಟು ಕಾರ್ಮಿಕರಿದ್ದಾರೆ?

ಆ) ೧೯೩೯ರಿಂದ ಇಲ್ಲಿಯವರೆಗೆ ಪ್ರತಿವರ್ಷ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ತಿಂಗಳ ಗಳಿಕೆ (ತುಟ್ಟಿಭತ್ಯೆ ಮತ್ತು ಬೋನಸ್ ಹೊರತುಪಡಿಸಿ) ಎಷ್ಟು?

ಇ) ೧೯೩೯ರಿಂದ ಇಂದಿನವರೆಗೆ ಔದ್ಯಮಿಕ ಕಾರ್ಮಿಕರಿಗೆ ಪ್ರತಿವರ್ಷ ಕೊಟ್ಟ ತುಟ್ಟಿಭತ್ಯೆ ಮತ್ತು ಬೋನಸ್ ಇವುಗಳು (೧) ಬೇರೆ ಬೇರೆ ಉದ್ಯಮಗಳಲ್ಲಿ ಮತ್ತು (೨) ಬೇರೆ ಬೇರೆ ಔದ್ಯಮಿಕ ಕೇಂದ್ರಗಳ ಪ್ರಕಾರ ಎಷ್ಟೆಷ್ಟು?

ಉ) ಈ ಯುದ್ಧದ ನಂತರ ಹೆಚ್ಚಾದ ಕಾರ್ಮಿಕರ, ಗಳಿಕೆಯಿಂದ ಕಾರ್ಮಿಕ ಸಂಘಗಳ ಸದಸ್ಯತ್ವದ ಮೇಲೆ ಮತ್ತು ಅವುಗಳ ನಿಧಿಯ ಮೇಲೆ ಏನಾದರೂ ಪರಿಣಾಮವಾಗಿದೆಯೆ ಎಂಬುದನ್ನು ದಯವಿಟ್ಟು ತಿಳಿಸುತ್ತಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈ ಬಗ್ಗೆ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ೧೯೪೫ರ ಅಂಕಿಸಂಖ್ಯೆಗಳು ಇನ್ನೂ ಲಭ್ಯವಿಲ್ಲ.

ಆ) ೧೯೩೯ರಿಂದ ೧೯೪೫ರ ವರೆಗಿನ ಉದ್ದಿಮೆಗಳಲ್ಲಿಯ ಕಾರ್ಮಿಕರ ತಿಂಗಳ ಸರಾಸರಿ ಗಳಿಕೆಯನ್ನು ತೋರಿಸುವ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ಇದರಲ್ಲಿ ನಗದಾಗಿ ಕೊಟ್ಟ ತುಟ್ಟಿಭತ್ಯೆಯನ್ನು ಸಹ ಸೇರಿಸಲಾಗಿದೆ. ಇವುಗಳನ್ನು ಹೊರತುಪಡಿಸಿದ ಅಂಕಿಗಳು ಲಭ್ಯವಿಲ್ಲ. ಇವು ಅಂದಾಜು ಸಂಖ್ಯೆಗಳು, ಏಕೆಂದರೆ ನೀಡಲಾಗಿರುವ ಒಟ್ಟು ಪಗಾರದ ಮೇಲೆ ಸಂಗ್ರಹಿಸಲಾದ ಅಂಕಿಸಂಖ್ಯೆಗಳ ಆಧಾರದ ಮೇಲೆ ಶೇಖರಿಸಿ ತೆಗೆದ ಅಂಕಿಸಂಖ್ಯೆಗಳಾಗಿವೆ. ಒಂದು ವರ್ಷದಲ್ಲಿ ಕೆಲಸಮಾಡಿದ ದಿವಸಗಳು ಎಷ್ಟು, ಎಷ್ಟು ತಾಸುಗಳ ದುಡಿಮೆ ಇತ್ಯಾದಿಗಳನ್ನು ಅದರಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ೧೯೪೨ರ ಅಂಕಿಸಂಖ್ಯೆಗಳನ್ನು ಒದಗಿಸಿಲ್ಲ ಏಕೆಂದರೆ ಆ ಅಂಕಿಗಳಲ್ಲಿ ಯಾವುದರಲ್ಲಿ ತುಟ್ಟಿಭತ್ಯೆಯನ್ನು ಸೇರಿಸಲಾಗಿದೆ, ಯಾವುದರಲ್ಲಿ ಇಲ್ಲ ಎಂಬುದು ಸರಿಯಾಗಿ ತಿಳಿದಿಲ್ಲ.

ಇ) ಪೂರ್ಣ ಮಾಹಿತಿಯು ಲಭ್ಯವಿಲ್ಲ. ಈ ಅಂಕಿಸಂಖ್ಯೆಗಳನ್ನು ಸಂಗ್ರಹಿಸಲು ಬೇಕಾಗುವ ಅವಧಿ ಮತ್ತು ಅದಕ್ಕಾಗುವ ಶ್ರಮ, ಇವು ಅದರಿಂದ ದೊರೆಯುವ ಫಲಿತಾಂಶಕ್ಕೆ ಅನುಗುಣವಾಗಿಲ್ಲ.

ಉ) ಈ ಪ್ರಶ್ನೆಯ ಆ ಭಾಗದ ಉತ್ತರದಲ್ಲಿ ಔದ್ಯಮಿಕ ಕಾರ್ಮಿಕರ ಸರಾಸರಿ ಗಳಿಕೆಯ ಅಂಕಿ ಸಂಖ್ಯೆಗಳನ್ನು ಪೂರೈಸಲಾಗಿದೆ. ಸದಸ್ಯರ ಸಂಖ್ಯೆಯನ್ನು ಮತ್ತು ಕಾರ್ಮಿಕ ಸಂಘಗಳ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ३, ೨೮ನೇ ಫೆಬ್ರವರಿ, ೧೯೪೬. ಪುಟ ೧೬೭೦

ಸಾಮಾನ್ಯ ನಿಧಿಯ ವಿವರವನ್ನೊಳಗೊಂಡ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ಕಾರ್ಮಿಕರ ಹೆಚ್ಚಾದ ವೇತನದ ಮೇಲಿಂದ ಇಲ್ಲವೆ ಬೇರಾವುದೇ ಕಾರಣದಿಂದ ಕಾರ್ಮಿಕ ಸದಸ್ಯರ ಸಂಖ್ಯೆ ಹೆಚ್ಚಳವಾಗಿದೆ ಎಂದು ಹೇಳುವ ಸ್ಥಿತಿಯಲ್ಲಿ ಸರ್ಕಾರವಿಲ್ಲ.

## ೩೮೯
## ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿ ಮುಸಲ್ಮಾನ ಆಡಳಿತಾತ್ಮಕ ಅಧಿಕಾರಿ *

**೭೧೫. ಶ್ರೀ ಅಹಮ್ಮದ್ ಇ. ಎಚ್. ಜಾಫರ್ :** ಅ) ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿ ಎಷ್ಟು ಜನ ಸಹಾಯಕ ಆಡಳಿತಾತ್ಮಕ ಹುದ್ದೆಯ ಅಧಿಕಾರಿಗಳಿದ್ದಾರೆ?

ಆ) ಈ ಹುದ್ದೆಗಳಲ್ಲಿ ಎಷ್ಟು ಜನ ಮುಸಲ್ಮಾನರಿದ್ದಾರೆ?

ಇ) ಆ) ಪ್ರಶ್ನೆಗೆ ಉತ್ತರವು ನಕಾರಾತ್ಮಕವಾಗಿದ್ದರೆ ಈಗ ಖಾಲಿ ಇರುವ ಆಡಳಿತಾತ್ಮಕ ಅಧಿಕಾರಿಯ ಹುದ್ದೆಗೆ ಒಬ್ಬ ಯೋಗ್ಯ ಮುಸಲ್ಮಾನನನ್ನು ತುಂಬಲು ಯಾವ ಕ್ರಮ ತೆಗೆದುಕೊಂಡಿದ್ದೀರಿ?

–ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮೂರು. ಆ) ಯಾರೂ ಇಲ್ಲ. ಇ) ಈ ಪ್ರಶ್ನೆಯಲ್ಲಿಯ ಊಹೆಯು ಅವಶ್ಯವಾಗಿ ಉದ್ಭವಿಸುವುದಿಲ್ಲ. ಏಕೆಂದರೆ ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗವು ಒಂದೇ ಕೇಡರ್ ಮತ್ತು ಅದನ್ನು ಹಾಗೆ ಒಂದೇ ಎಂದು ಭಾವಿಸಲೇಬೇಕು. ಈ ವಿಷಯವು ಹೇಗೆ ಆದರೂ ಈಗ ಪರಿಶೀಲನೆಯಲ್ಲಿದೆ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಆ) ಗೆ ಉತ್ತರವು ಏನೂ ಇಲ್ಲ, ಆಡಳಿತಾತ್ಮಕ ಅಧಿಕಾರಿ ಹುದ್ದೆಗೆ ಒಬ್ಬ ಮುಸಲ್ಮಾನನನ್ನು ಏಕೆ ನೇಮಿಸಬಾರದೆಂದು ನಾನು ಸನ್ಮಾನ್ಯ ಸದಸ್ಯರನ್ನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಸರಿಯಾಗಿ ಅರ್ಥವಾಗಲಿಲ್ಲ.

**ಶ್ರೀ ಅಹಮ್ಮದ್ ಇ. ಎಚ್. ಜಾಫರ್ :** ಸಹಾಯಕ ಆಡಳಿತಾತ್ಮಕ ಅಧಿಕಾರಿಯಾಗಿ ಯಾವ ಮುಸಲ್ಮಾನನೂ ಇಲ್ಲ. ಒಬ್ಬ ಮುಸಲ್ಮಾನನನ್ನು ಆ ಹುದ್ದೆಗೆ ಯಾಕೆ ನೇಮಿಸಬಾರದೆಂದು ನಾನು ಸನ್ಮಾನ್ಯ ಸದಸ್ಯರನ್ನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ವಿಚಾರ ಮಾಡುವ ವಿಷಯ, ಒಂದು ನಿರ್ದಿಷ್ಟ ಸಮಾಜಕ್ಕೆ ಸ್ಥಾನ ಮೀಸಲಾಗಿಡಲಾಗುವುದೆಂದು ನಾನು ಭರವಸೆಯನ್ನು ಕೊಡಲಾರೆನು.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಈ ಹುದ್ದೆಗೆ ಅರ್ಜಿಗಳನ್ನು ಸ್ವೀಕರಿಸಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅರ್ಜಿಗಳನ್ನು ಕರೆಯಲಾಗುವುದಿಲ್ಲ.

**ಮೌಲಾನಾ ಜಾಫರ್ ಆಲಿ ಖಾನ್ :** ಇದನ್ನು ಜಾಹಿರಾತು ಮಾಡಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವಶ್ಯವಿಲ್ಲ.

**ಶ್ರೀ ಅಹ್ಮದ್ ಇ. ಎಚ್. ಜಾಫರ್ :** ಒಬ್ಬ ಮುಸಲ್ಮಾನನನ್ನೇಕೆ ನೇಮಿಸುವುದಿಲ್ಲ?

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೬ನೇ ಮಾರ್ಚ್, ೧೯೪೬. ಪುಟ ೧೯೨೯

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಭರವಸೆಯನ್ನು ಕೊಡಲಾರೆನೆಂದು ಹೇಳಿದ್ದೇನೆ. ಇದಲ್ಲದೆ ಯಾವುದೇ ಸಮಾಜಕ್ಕೆ ಒಂದು ನಿರ್ದಿಷ್ಟ ಹುದ್ದೆಯಲ್ಲಿ ನಿಹಿತವಾದ ಪಟ್ಟಭದ್ರವಾದ ಹಕ್ಕು ಇದೆಯೆಂಬ ತತ್ತ್ವವನ್ನು ಭಾರತ ಸರ್ಕಾರವು ಒಪ್ಪುವುದಿಲ್ಲ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ವಿಶೇಷವಾಗಿ ಮೇಲೆ ಕಾಣಿಸಿದ ಸಂಗತಿಗಳ ಮೇಲಿಂದ ಸನ್ಮಾನ್ಯ ಸದಸ್ಯರ ವಿಭಾಗವು ಭಾರತ ಸರ್ಕಾರದಲ್ಲಿಯೇ ಅತ್ಯಂತ ಕೆಟ್ಟ ವಿಭಾಗವಾಗಿದೆ.

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ, ಸನ್ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಾರೆ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಕಾರ್ಮಿಕ ವಿಭಾಗದಲ್ಲಿ ಸಾಕಷ್ಟು ಮುಸಲ್ಮಾನ ಪ್ರತಿನಿಧಿಗಳನ್ನು ಹೊಂದಿಲ್ಲ. ಆದ್ದರಿಂದ ಒಬ್ಬ ಮುಸಲ್ಮಾನನನ್ನು ಆ ಹುದ್ದೆಗೆ ಯಾಕೆ ನೇಮಿಸಬಾರದೆಂದು ಮಾನ್ಯ ಸದಸ್ಯರನ್ನು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರ ಊಹೆಯನ್ನು ನಾನು ನಿರಾಕರಿಸುತ್ತೇನೆ.

**ಶ್ರೀ ಅಹ್ಮದ್ ಇ. ಎಚ್. ಜಾಫರ್ :** ನಾನು .............

**ಮಾನ್ಯ ಅಧ್ಯಕ್ಷರು :** ಸನ್ಮಾನ್ಯ ಸದಸ್ಯರು ನನಗೆ ತಿಳಿದಂತೆ ತಪ್ಪು ತಿಳುವಳಿಕೆಯಿಂದ ತಮ್ಮ ಪ್ರಶ್ನೆ ಕೇಳುತ್ತಿದ್ದಾರೆ. ಅವರು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವರೆ? ಸರ್ಕಾರದ ಸನ್ಮಾನ್ಯ ಸದಸ್ಯರು ಹೇಳಿದ್ದೇನೆಂದರೆ ವಿಭಾಗದಲ್ಲಿಯ ಕೋಟಾ ಹಾಗೂ ಒಂದು ನಿರ್ದಿಷ್ಟ ಹುದ್ದೆ ಇವುಗಳಲ್ಲಿ ಭಿನ್ನತೆ ಇದೆ ಎಂದು ಹೇಳುತ್ತಿದ್ದಾರೆ. ನನ್ನ ಮಾತು ಸರಿಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಹೌದು.

**ಮಾನ್ಯ ಅಧ್ಯಕ್ಷರು :** ಒಂದು ನಿರ್ದಿಷ್ಟ ಹುದ್ದೆಯನ್ನು ಒಂದು ನಿರ್ದಿಷ್ಟ ಸಮಾಜಕ್ಕೆ ಕೊಡಲು ಭರವಸೆಯನ್ನು ಕೊಡಲಾರರೆಂದು ಅವರು ಹೇಳಿದರು. ಇದು ಕೋಟಾಗಿಂತ ಭಿನ್ನವಾದುದು.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ನನ್ನ ವಿನಂತಿ ಏನೆಂದರೆ, ಈ ಸಂಗತಿಗಳ ಮೇಲಿಂದ, ಅವರ ವಿಭಾಗದಲ್ಲಿ ಮುಸಲ್ಮಾನರನ್ನು ಶೇಕಡಾ ೨೫ರ ಪ್ರಮಾಣದಲ್ಲಿ ನೇಮಿಸಿಕೊಂಡಿಲ್ಲ ಅವರು ಕನಿಷ್ಠ ಪ್ರಮಾಣದಲ್ಲಿ ಮುಸಲ್ಮಾನರನ್ನು ನೇಮಿಸಿಕೊಳ್ಳುವ ಪ್ರಶ್ನೆಯನ್ನು ವಿಚಾರಮಾಡುವರೆ?

**ಮಾನ್ಯ ಅಧ್ಯಕ್ಷರು :** ಅದು ಯೋಗ್ಯವಾದುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದೊಂದೇ ವಿಧಾನವೆಂಬ ತತ್ವವನ್ನು ನಾನು ಸ್ವೀಕರಿಸುವುದಿಲ್ಲ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಸನ್ಮಾನ್ಯ ಸದಸ್ಯರು ತಮ್ಮ ವಿಭಾಗದಲ್ಲಿ ನೌಕರಿಯಲ್ಲಿ ಇರುವವರಲ್ಲಿ ೧೦೦ಕ್ಕೆ ೨೫ರ ಪ್ರಮಾಣದಲ್ಲಿ ಮುಸ್ಲಿಮರು ಇರುವರೆಂಬುದನ್ನು ನಿರಾಕರಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಇದನ್ನು ನಿರಾಕರಿಸುತ್ತೇನೆ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಯಾವ ಫಲಿತಾಂಶದಿಂದ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಫಲಿತಾಂಶಕ್ಕೆ ಬದ್ಧನಲ್ಲ, ಸಾಕಷ್ಟು ಸಂಖ್ಯೆಯಲ್ಲಿ ಮುಸಲ್ಮಾನ ಅಭ್ಯರ್ಥಿಗಳು ಇರದಿದ್ದರೆ ಅದು ನನ್ನ ತಪ್ಪು ಅಲ್ಲ.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಇದು ಏನೂ ಅಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಮುಸಲ್ಮಾನ ಅಭ್ಯರ್ಥಿ ಇದ್ದಾಗಲೂ ಸನ್ಮಾನ್ಯ ಸದಸ್ಯರು ಕುಂಟು ನೆಪ ಹೇಳುತ್ತಿದ್ದಾರೆಂದು ನಾನು ಹೇಳಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ, ಅದು ಒಂದು ಟೀಕೆ. ಸನ್ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕೇಳಬಹುದು.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಸಾಕಷ್ಟು ಸಂಖ್ಯೆಯಲ್ಲಿ ಮುಸಲ್ಮಾನರು ಮುಂದೆ ಬರುತ್ತಿದ್ದಾರೆ. ಆದರೆ ಅವರ ಹಕ್ಕುಸಾಧನೆಗಳನ್ನು ಉದ್ದೇಶಪೂರ್ವಕವಾಗಿಯೇ ಕಡೆಗಣಿಸಲಾಗುತ್ತಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗ ಹೇಳಿದುದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಿಲ್ಲ.

## ३೯೦
## ಕಾರ್ಮಿಕ ವಿಭಾಗದಲ್ಲಿ ಕೋಮು ಪ್ರಾತಿನಿಧ್ಯ *

**೭೧೮. ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಅ) ಕಾರ್ಮಿಕ ವಿಭಾಗದ ಸಿಬ್ಬಂದಿ (ಮುಖ್ಯ ಸಚಿವಾಲಯ) ಜಂಟಿ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ಸಹಾಯಕ ಕಾರ್ಯದರ್ಶಿಗಳು, ಅಧೀಕ್ಷಕರು, ಸಹಾಯಕರು, ಕಾರಕೂನರು ಮುಂತಾದವರ ನಿಖರವಾದ ಸಂಖ್ಯೆಗಳೆಷ್ಟು?

ಆ) ಪ್ರತಿಯೊಂದು ದರ್ಜೆಯಲ್ಲಿ ಎಷ್ಟು ಮುಸಲ್ಮಾನರು ಹಾಗೂ ಮುಸಲ್ಮಾನೇತರರು ಇರುವರು?

ಇ) ಈ) ಪ್ರಶ್ನೆಗಳಿಗೆ ಮುಸಲ್ಮಾನರನ್ನು ಕುರಿತು ಉತ್ತರವು ನಕಾರಾತ್ಮಕವಾಗಿದ್ದರೆ, ಅದಕ್ಕೆ ಕಾರಣಗಳಾವುವು?

–ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮತ್ತು ಆ) ಇವುಗಳ ಮಾಹಿತಿಗಳನ್ನು ಕೊಡುವ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ಇ) ಉದ್ಭವಿಸುವುದಿಲ್ಲ.

**ಹೇಳಿಕೆ**

| | ಒಟ್ಟು | ಮುಸಲ್ಮಾನರು | ಮುಸಲ್ಮಾನೇತರರು |
|---|---|---|---|
| ಜಂಟಿ ಕಾರ್ಯದರ್ಶಿಗಳು | ೩ | ೧ | ೨ |
| ಉಪ ಕಾರ್ಯದರ್ಶಿಗಳು | ೪ | ೧ | ೩ |
| ಸಹಾಯಕ ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳು | ೧೩ | ೨ | ೧೧ (ಒಬ್ಬ ಯುರೋಪಿಯನ್ ಒಬ್ಬ ಆಂಗ್ಲೋ ಇಂಡಿಯನ್ ಮತ್ತು ಒಬ್ಬ ಪರಿಶಿಷ್ಟ ಜಾತಿಯವರ ನ್ನೊಳಗೊಂಡು) |
| ಅಧೀಕ್ಷಕರು | ೨೧ | ೬ | ೧೫ (೧ ಸಿಖ್ ಮತ್ತು ಭಾರತೀಯ ಕ್ರಿಶ್ಚಿಯನ್ ಒಳಗೊಂಡು) |

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೬ನೇ ಮಾರ್ಚ್, ೧೯೪೬. ಪುಟ ೧೯೩೩–೩೫

| | | | |
|---|---|---|---|
| ಸಿಬ್ಬಂದಿ ಶಾಖೆಯಲ್ಲಿ ಸಹಾಯಕರು | ೯ | ೨ | ೭ |
| ಕಾರಕೂನರು ಸಿಬ್ಬಂದಿ ಶಾಖೆಯಲ್ಲಿ | ೯ | – | ೯ (ಒಬ್ಬ ಪರಿಶಿಷ್ಟ ಜಾತಿಯನ್ನು ಒಳಗೊಂಡು |

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಮಾನ್ಯರೆ, ನಾನು ಹೇಳಿಕೆಯನ್ನು ಸದನದ ಮುಂದೆ ಇಡಲು ಕೇಳಲಿಲ್ಲ. ಆದರೆ ಸಂಖ್ಯೆಗಳನ್ನು ಸದನದ ಮುಂದೆ ಇಡಲು ಕೇಳಿದೆನು. ನಾನು ಪೂರಕ ಪ್ರಶ್ನೆಯನ್ನು ಕೇಳಬಯಸುವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಅಂಕಿಗಳನ್ನು ಕೊಡಲೆ?

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ತಮಗೆ ಕೊಡಲು ಅಂಕಿಗಳೇ ಇಲ್ಲ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಹೌದು ಅಂಕಿಗಳು ಇವೆ. ತಿಳಿದವರು ಹೆದರಿಸುವ ನಿಲುವನ್ನು ತಾಳಬಾರದು.

**ಶ್ರೀ ಅಹ್ಮದ್ ಇ.ಎಚ್. ಜಾಫರ್ :** ಮಾನ್ಯ ಸದಸ್ಯರ ಹೆದರಿಸುವ ಪ್ರವೃತ್ತಿಯನ್ನು ನಾನು ಹಿಂತಿರುಗಿಸಿ ಹೇಳುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ಆ ಪಟ್ಟಿಯು ಬಹಳ ದೊಡ್ಡದಿರದಿದ್ದರೆ ಸನ್ಮಾನ್ಯ ಸದಸ್ಯರು ಅದನ್ನು ಓದಬಹುದು.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :**

| | ಒಟ್ಟು | ಮುಸಲ್ಮಾನರು |
|---|---|---|
| ಜಂಟಿ ಕಾರ್ಯದರ್ಶಿಗಳು | ೩ | ೧ |
| ಉಪ ಕಾರ್ಯದರ್ಶಿಗಳು | ೪ | ೧ |
| ಸಹಾಯಕ ಮತ್ತು ಅಧೀನ ಕಾರ್ಯದರ್ಶಿಗಳು | ೧೩ | ೨ |
| ಅಧೀಕ್ಷಕರು | ೨೧ | ೬ |
| ಸಿಬ್ಬಂದಿ ಶಾಖೆಯಲ್ಲಿ ಸಹಾಯಕರು | ೯ | ೨ |
| ಕಾರಕೂನರು ಸಿಬ್ಬಂದಿ ಶಾಖೆಯಲ್ಲಿ | ೯ | – |

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಪುನರ್‌ವ್ಯವಸ್ಥೆ ಮತ್ತು ನೌಕರಿ ನಿರ್ದೇಶನಾಲಯದಲ್ಲಿ ಮುಸಲ್ಮಾನರ ಪ್ರತಿನಿಧಿಯ ಅಂಕಿಗಳನ್ನು ಇವು ಒಳಗೊಂಡಿವೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ನನಗೆ ನೋಟೀಸು ಕೊಡಲೇಬೇಕು.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ನಾನು ಮುಖ್ಯ ಸಚಿವಾಲಯದ ಕಾರ್ಮಿಕ ವಿಭಾಗದ ಅಂಕಿಗಳನ್ನು ಕೇಳಿದೆನು. ಸನ್ಮಾನ್ಯ ಸದಸ್ಯರು, ಹೌದು ಅಥವಾ 'ಇಲ್ಲ'ವೆಂದು ಹೇಳಲಾರರೆ?

ಪುನರ್‌ವ್ಯವಸ್ಥೆ ಮತ್ತು ನೌಕರಿ ನಿರ್ದೇಶನಾಲಯದಲ್ಲಿ ಮುಸಲ್ಮಾನರ ಪ್ರತಿನಿಧಿ ಸಂಖ್ಯೆಗಳನ್ನು ಒಳಗೊಂಡಿದೆಯೆ ಅಥವಾ ಇಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ನನಗೆ ನೋಟೀಸು ಕೊಡಲಿಕ್ಕೇಬೇಕು.

**ಶ್ರೀ ಹಾಜಿ ಅಬ್ದುಸ್ ಸತ್ತಾರ ಹಾಜಿ ಇಸಾಖ ಸೇಠ್ :** ನೀವು ಪ್ರಶ್ನೆಗೆ ಉತ್ತರಿಸುವಾಗ ವಿಭಾಗದ

ಶಾಖಾ ಸಿಬ್ಬಂದಿಯೆಂದು ಹೇಳಿದಿರಿ, ಅದು ಯಾವ ವಿಭಾಗ ಎಂಬುದನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದು ಮುಖ್ಯ ಸಚಿವಾಲಯ. ನನ್ನ ಮಾಹಿತಿಯು ಸರಿಯಾಗಿ ಇರಬೇಕಾದರೆ ನಾನು ಹೇಳಿದಂತೆ, ನನಗೆ ನೋಟೀಸು ಕೊಡಲಿಕ್ಕೆಬೇಕು.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಪುನರ್‌ವ್ಯವಸ್ಥೆ ಮತ್ತು ನೌಕರಿ ನಿರ್ದೇಶನಾಲಯವು ಮುಖ್ಯ ಸಚಿವಾಲಯದಿಂದ ಬಹಳ ಭಿನ್ನವಾಗಿದೆಯೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಖಂಡಿತವಾಗಿಯೂ ನನಗೆ ಗೊತ್ತಿದೆ.

**ಶ್ರೀ ಮನುಸುಬೇದಾರ್ :** ಜಂಟಿ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ಸಹಾಯಕ ಮತ್ತು ಅಧೀನ ಸಹಾಯಕರು ಕಾರ್ಮಿಕ ವಿಭಾಗಕ್ಕೆ ಇಂತಹ ದೊಡ್ಡ ಪಡೆ ಏಕೆ ಬೇಕು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಯಾವ ಅಭಿಪ್ರಾಯವನ್ನು ವ್ಯಕ್ತಮಾಡಲಾರೆನು.

**ಪ್ರೊ॥ ಎನ್. ಜಿ. ರಂಗ :** ಆ ವಿಭಾಗವನ್ನೇ ಸಂಪೂರ್ಣವಾಗಿ ಮುಸಲ್ಮಾನರನ್ನಾಗಿ ಮಾಡಿರಿ.

**ಶ್ರೀ ಪ್ರಕಾಶ :** ನಾನು ಅತ್ಯಂತ ವಿನಯದಿಂದ ಕೇಳುವುದೇನೆಂದರೆ–

ಪ್ರತಿಯೊಂದು ಅಧಿವೇಶನದ ಪ್ರಾರಂಭವಾಗುವ ಮೊದಲು, ಅನೇಕ ವಿಭಾಗಗಳಲ್ಲಿಯ ಬೇರೆ ಬೇರೆ ಜಾತಿಯ ನೌಕರರ ಪೂರ್ಣ ಪಟ್ಟಿಯನ್ನು ಸರ್ಕಾರವು ಸದನದ ಮುಂದೆ ಇಡಬೇಕು. ಇದರಿಂದ ಇಂತಹ ಅನೇಕ ಪ್ರಶ್ನೆಗಳನ್ನು ನಿವಾರಿಸಬಹುದು ಮತ್ತು ಮನಸ್ಸಿನ ಉದ್ವೇಗವನ್ನು ನಿಯಂತ್ರಿಸಬಹುದು.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಸರಕಾರದ ಗೃಹಶಾಖೆಯ ೧೯೩೪ರ ಠರಾವು ಮುಸಲ್ಮಾನರ ಪ್ರಮಾಣವನ್ನು ಪ್ರತಿಶತ ೨೫ ಎಂದು ಗೊತ್ತುಮಾಡಿದೆ. ಆದರೆ, ಪ್ರಕಾರ ಕಾರ್ಮಿಕ ವಿಭಾಗದ ಮುಸಲ್ಮಾನರ ಪ್ರಾತಿನಿಧ್ಯವು ಈ ಗೊತ್ತುವಳಿ ಪ್ರಮಾಣಕ್ಕಿಂತ ಕಡಿಮೆ ಇದೆ. ಇದನ್ನು ಸನ್ಮಾನ್ಯ ಸದಸ್ಯರು ಸರಿಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರನ್ನು ನೇಮಿಸಿಕೊಂಡು ಆ ಒಟ್ಟು ಪ್ರಮಾಣವನ್ನು ಭರ್ತಿಮಾಡುವರೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಕೊಟ್ಟ ಉತ್ತರದಲ್ಲಿ ಉಲ್ಲೇಖಿಸಿದ ಹುದ್ದೆಗಳು ಜಾತಿಯ ಪ್ರಮಾಣದ ಮೇಲಿನವುಗಳಲ್ಲ. ಅವು ಬಡ್ತಿಯ ಹುದ್ದೆಗಳಾಗಿವೆ.

**ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಆ ಠರಾವು ನಿಮ್ಮ ವಿಭಾಗಕ್ಕೆ ಅನ್ವಯಿಸುವುದಿಲ್ಲವೆಂದು ನಾನು ಭಾವಿಸಲೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರು ಸರ್ಕಾರದ ಠರಾವನ್ನು ಈ ಹಿಂದೆ ಓದಿದಕ್ಕಿಂತಲೂ ಹೆಚ್ಚು ಲಕ್ಷ್ಯಗೊಟ್ಟು ಮತ್ತೆ ಓದಬೇಕು.

**ಶ್ರೀ ಅಹಮ್ಮದ್ ಇ.ಎಚ್.ಜಾಫರ್ :** ಮೊನ್ನಿನ ದಿವಸ ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ ಅವರ ಪ್ರಶ್ನೆಗೆ ಉತ್ತರಿಸುತ್ತ ಸನ್ಮಾನ್ಯ ಗೃಹ ಸದಸ್ಯರು ಸರ್ಕಾರದ ಆ ಠರಾವು ಕಾರ್ಮಿಕ ವಿಭಾಗಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದರು. ಆ ಗೊತ್ತುವಳಿಯನ್ನು ಸನ್ಮಾನ್ಯ ಕಾರ್ಮಿಕ ಸದಸ್ಯರಿಗೆ ವರ್ಗಾಯಿಸಲಾಗುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಆ ಗೊತ್ತುವಳಿಯು ಚೆನ್ನಾಗಿ ಗೊತ್ತಿದೆ.

**ಸನ್ಮಾನ್ಯ ಅಧ್ಯಕ್ಷರು :** ಮುಂದಿನ ಪ್ರಶ್ನೆ.

**ಶ್ರೀ ಅಹಮ್ಮದ್ ಇ.ಎಚ್.ಜಾಫರ್ :** ಮಾನ್ಯರೆ, ಇನ್ನೊಂದು ಪ್ರಶ್ನೆ ಉಪಕಾರ್ಯದರ್ಶಿಗಳ ಹುದ್ದೆಯು

೧ನೆಯ ದರ್ಜೆಯ ಹುದ್ದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅಲ್ಲಿ ೧ನೆಯ ದರ್ಜೆಯಂತಹ ಹುದ್ದೆಗಳು ಇರುವುದಿಲ್ಲ.

## ೩೯೧
## ದೆಹಲಿ ಸಾಮಗ್ರಿ ಮಳಿಗೆಯ (ಸ್ಟೋರ್ಸ್) ಉಪ ವಿಭಾಗದಲ್ಲಿ ಸಾರ್ವಜನಿಕ ಹಣದ ದುರುಪಯೋಗದ ಪ್ರಕರಣ*

**೭೧೯. ಶ್ರೀ ಅಹಮ್ಮದ್ ಇ.ಎಚ್. ಜಾಫರ್ :** ಅ) ದೆಹಲಿ ಸಾಮಗ್ರಿ ಮಳಿಗೆ (ಸ್ಟೋರ್ಸ್) ಉಪವಿಭಾಗದಲ್ಲಿ ಸಾರ್ವಜನಿಕ ಹಣ ದುರುಪಯೋಗವಾಗಿದ್ದು ಅದರ ಅಂದಾಜು ಎಷ್ಟು?

ಆ) ತಪ್ಪಿತಸ್ಥರು ಯಾರು? ಅವರನ್ನು ಶಿಕ್ಷಿಸಲು ಅವರ ಮೇಲೆ ಇಲ್ಲಿಯವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದರ ಬಗ್ಗೆ ಸನ್ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಹೇಳುವಿರಾ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ದೆಹಲಿ ಸಾಮಗ್ರಿ ಮಳಿಗೆಯಲ್ಲಿ ಹಣದ ದುರುಪಯೋಗದ ಯಾವುದೇ ಪ್ರಕರಣ ಇಲ್ಲ. ಸನ್ಮಾನ್ಯ ಸದಸ್ಯರ ಮನಸ್ಸಿನಲ್ಲಿ ಒಂದು ವಿಭಾಗದ ಕಟ್ಟಡ ನಿರ್ಮಾಣ ಹಂತದಲ್ಲಿರುವ ಸಿಮೆಂಟಿನ ಬಂಡಿಗೆ ಬಾಡಿಗೆ ಹೆಚ್ಚಿಗೆ ಕೊಟ್ಟದ್ದು ಇದ್ದಲ್ಲಿ, ಆ ವಿಷಯವು ಇನ್ನೂ ತನಿಖೆಯ ಹಂತದಲ್ಲಿರುವುದೆಂದು ನಾನು ಹೇಳಬಯಸುತ್ತೇನೆ.

ಆ) ಉದ್ಭವಿಸುವುದಿಲ್ಲ.

**ಶ್ರೀ ಅಹಮ್ಮದ್ ಇ.ಎಚ್ ಜಾಫರ್ :** ಸಂಬಂಧಿಸಿದ ಎಸ್.ಡಿ.ಓ. ೨ ಲಕ್ಷ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದರೂ ಇನ್ನೂ ಸೇವೆಯಲ್ಲಿರುವನೆಂಬುದು ನಿಜವೆ?

**ಮಾನ್ಯ ಅಧ್ಯಕ್ಷರು :** ಶಾಂತರಾಗಿರಿ, ಶಾಂತರಾಗಿರಿ. ಸನ್ಮಾನ್ಯ ಸದಸ್ಯರು ಈಗಾಗಲೇ ಹಣದ ದುರುಪಯೋಗವಾಗಿಲ್ಲವೆಂದು ಹೇಳಿದ್ದಾರೆ.

**ಶ್ರೀ ಅಹಮ್ಮದ್ ಇ.ಹೆಚ್. ಜಾಫರ್ :** ಸನ್ಮಾನ್ಯ ಸದಸ್ಯರು ಕೊಟ್ಟ ಉತ್ತರವನ್ನು ನಾನು ಒಪ್ಪುತ್ತೇನೆ. ಅವರು ಉಲ್ಲೇಖಿಸಿದ ಹೆಚ್ಚಿಗೆ ಕೊಟ್ಟ ೨ ಲಕ್ಷ ರೂಪಾಯಿಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು.

**ಮಾನ್ಯ ಅಧ್ಯಕ್ಷರು :** ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಹಣದ ದುರುಪಯೋಗ ನಡೆದಿಲ್ಲ. ಆದರೆ ಹೆಚ್ಚಿಗೆ ಹಣಕೊಟ್ಟ ಪ್ರಕರಣ. ಮಾನ್ಯ ಸದಸ್ಯರು ಮುಂದಿನ ಪ್ರಶ್ನೆಯಲ್ಲಿ ಪುನಃ ಹಣದ ದುರುಪಯೋಗವೆಂದು ಭಾವಿಸದೆ, ಹೆಚ್ಚಿಗೆ ಹಣದ ಬಗ್ಗೆ ಪ್ರಶ್ನೆ ಎಂದು ಕೇಳಬಹುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ૩, ೬ನೇ ಮಾರ್ಚ್, ೧೯೪೬, ಪುಟ ೧೯೩೫–೩೬

# ೩೯೨
# ಸೂಪರಿಂಟೆಂಡಿಂಗ್ ಇಂಜಿನಿಯರರ ನೇಮಕರ ಬಗೆಗೆ ಮುಸಲ್ಮಾನರ ಅಸಮಾಧಾನ*

**೭೨೦. ಶ್ರೀ ಮಹಮ್ಮದ ರಹಮತ್ ಉಲ್ಲಾ :** ಅ) ೧೯೪೫ರ ಸಕ್ಟೋಬರ್ ೨೭, ನವೆಂಬರ್ ೧೨ ಮತ್ತು ಡಿಸೆಂಬರ್ ೧೯ನೆಯ ದಿನಾಂಕಗಳಂದು ಡಾನ್‌ದಲ್ಲಿ ಪ್ರಕಟವಾದ ಲೇಖನಗಳು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿವೆಯೆ? ಮುಸಲ್ಮಾನರ ಅಸಮಾಧಾನವನ್ನು ಹೋಗಲಾಡಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? ಹಾಗಿಲ್ಲದಿದ್ದರೆ ಏಕೆ ಇಲ್ಲ?

ಆ) ೧೪ ಜನ ಸೂಪರಿಂಟೆಂಡಿಂಗ್ ಇಂಜಿನಿಯರರಲ್ಲಿ ಕೇವಲ ಒಬ್ಬರೇ ಮುಸಲ್ಮಾನರೆಂಬುದು ನಿಜವಲ್ಲವೆ?

ಇ) ಮುಖ್ಯಸ್ಥಾನದಲ್ಲಿ ಮೂರು ಜನ ಅರ್ಹತೆಯ ಕಾರ್ಯನಿರ್ವಾಹಕ ಇಂಜಿನಿಯರರು ಇದ್ದು ಅವರು ಸೂಪರಿಂಟೆಂಡಿಂಗ್ ಇಂಜಿನಿಯರರ ಹುದ್ದೆಯನ್ನು ನಿರ್ವಹಿಸಲು ಅರ್ಹರಾಗಿದ್ದುದು ಸರ್ಕಾರಕ್ಕೆ ಗೊತ್ತಿದೆಯೆ?

ಈ) ಇತರ ಸಮಾಜದ ಕಡಿಮೆ ಅರ್ಹತೆಯುಳ್ಳ ಜನರನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಗೆ ನೇಮಿಸಿದುದು ಸರ್ಕಾರಕ್ಕೆ ತಿಳಿದಿದೆಯೆ? ಹಾಗಿದ್ದಲ್ಲಿ ಮುಸಲ್ಮಾನರ ಬೇಡಿಕೆಯನ್ನು ಕಡೆಗಣಿಸಲಾಗಿದೆಯೆ?

ಉ) ಒಬ್ಬ ಅಯ್. ಎಸ್. ಇ. ಮುಸ್ಲಿಮ್ ಕಾರ್ಯನಿರ್ವಾಹಕ ಇಂಜಿನಿಯರನನ್ನು ಕಡೆಗಾಣಿಸಿ ಮತ್ತು ಮುಖ್ಯಸ್ಥಾನದಲ್ಲಿ ಕೆಳಗಿನ ಹುದ್ದೆಯಿಂದ ಬಂದವನನ್ನು ಸೂಪರಿಂಟೆಂಡಿಂಗ್ ಇಂಜಿನಿಯುರ್‌ನನ್ನಾಗಿ ನೇಮಿಸಲಾಯಿತು. ಮತ್ತು ಅವನು ಸದ್ಯದಲ್ಲಿಯೇ ನಿವೃತ್ತನಾಗಲಿರುವನೆಂಬ ವಿಷಯ ಸರ್ಕಾರಕ್ಕೆ ಗೊತ್ತಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನಾನು ಆ ಲೇಖನಗಳನ್ನು ನೋಡಿದ್ದೇನೆ. ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿರುವ ಆ ಹುದ್ದೆಗಳು ಜಾತಿಯ ಪ್ರಾತಿನಿಧ್ಯ ನಿಯಮದ ಆಧಾರ ಮೇಲೆ ಇವೆ. ಆ ನಿಯಮಗಳ ಪ್ರಕಾರ ಆ ಹುದ್ದೆಗಳನ್ನು ತಂಬಲಾಗಿದೆ. ಆದಾಗ್ಯೂ ಒಂದು ಬಿಡಿ ಹುದ್ದೆಯನ್ನು ಒಂದು ನಿರ್ದಿಷ್ಟ ಸಮಾಜದವರಿಗೆಂದು ಮೀಸಲಾಗಿಡುವುದು ಸಾಧ್ಯವಿಲ್ಲ.

ಆ) ಹೌದು.

ಇ) ಸನ್ಮಾನ್ಯ ಸದಸ್ಯರು ಯಾವ ಕಾರ್ಯನಿರ್ವಾಹಕ ಇಂಜಿನಿಯರರನ್ನು ಕುರಿತು ಹೇಳುತ್ತಿದ್ದಾರೆಂಬುದು ಸ್ಪಷ್ಟವಿಲ್ಲ. ಕೇಂದ್ರ ಸಾರ್ವಜನಿಕ ಕೆಲಸಗಳ ವಿಭಾಗದಲ್ಲಿ ದೆಹಲಿಯಲ್ಲಿ ಕೆಲಸ ಮಾಡುತ್ತಿರುವ ಯಾವ ಕಾರ್ಯನಿರ್ವಾಹಕ ಇಂಜಿನಿಯರರೂ ಸೂಪರಿಂಟೆಂಡಿಂಗ್ ಇಂಜಿನಿಯರರ ಹುದ್ದೆಗೆ ಬಡ್ತಿ ಹೊಂದಲು ಅರ್ಹರಿಲ್ಲ.

ಈ) ಮತ್ತು (ಉ) ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಗಳು ಆಯ್ಕೆಯ ಹುದ್ದೆಗಳು ಮತ್ತು ಈ ಹುದ್ದೆಗೆ ಕೇವಲ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ៦ನೇ ಮಾರ್ಚ್, ೧೯೪೬. ಪುಟ ೧೯೩೬

ಈ ಹುದ್ದೆಗಳನ್ನು ತುಂಬುವಾಗ ಎಲ್ಲ ಕಾರ್ಯನಿರ್ವಾಹಕ ಇಂಜಿನಿಯರರ ಕ್ಲೇಮುಗಳನ್ನು ವಿಚಾರಿಸಲಾಗುವುದು ಮತ್ತು ಯಾವ ಅಧಿಕಾರಿಯು ಹೆಚ್ಚು ಯೋಗ್ಯನೆಂದು ಕಂಡುಬರುವುದೋ ಅವನನ್ನು ನೇಮಿಸಲಾಗುವುದು. ಮಾನ್ಯ ಸದಸ್ಯರು ಉದ್ಧರಿಸಿದ ಅಯ್. ಎಸ್.ಇ. ಮುಸ್ಲಿಮ್ ಅಧಿಕಾರಿಯ ಪ್ರಕರಣವನ್ನು ಯಥೋಚಿತವಾಗಿ ವಿಚಾರಮಾಡಲಾಗಿದೆ.

## ೩೯೩
## ಬಿಹಾರದಲ್ಲಿ ಕೋಸಿ ನದಿಯ ಪ್ರವಾಹ ಕುಗ್ಗಿಸಲು ಹಣ ಮಂಜೂರು*

**೭೩೪. ಶ್ರೀ ಸತ್ಯನಾರಾಯಣ ಸಿನ್ಹಾ :** ಅ) ಗವರ್ನರ್ ಜನರಲ್ ಅವರು ತಮ್ಮ ಇತ್ತೀಚಿನ ಬಿಹಾರ ಪ್ರವಾಸದಲ್ಲಿ ಕೋಸಿ ನದಿಯ ರೌದ್ರತೆಯಿಂದ ನಾಶವಾದ ಪ್ರದೇಶಗಳಿಗೆ ಭೇಟಿಕೊಟ್ಟು ಅಲ್ಲಿಯ ಕರುಣಾಜನಕ ಸ್ಥಿತಿಯನ್ನು ನೋಡಿ ಅವರು ಕೋಸಿ ನದಿಯ ಪ್ರವಾಹವನ್ನು ಕುಗ್ಗಿಸಿ ಅದರಿಂದ ಲಕ್ಷಾಂತರ ಜನರ ಜೀವನ ಮತ್ತು ಅವರ ಆಸ್ತಿಗಳನ್ನು ರಕ್ಷಿಸಲು ಸಾಕಷ್ಟು ಹಣವನ್ನು ಮಂಜೂರು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ವಿನಂತಿಸಿಕೊಂಡಿದ್ದರು? ಹಾಗಿದ್ದಲ್ಲಿ ಆ ಬಗ್ಗೆ ಏನು ಮಾಡಿದ್ದೀರಿ?

ಆ) ಯಾವುದೇ ಯೋಜನೆಯನ್ನು ಸಿದ್ಧಪಡಿಸಿರುವಿರಾ? ಹಾಗಿಲ್ಲದಿದ್ದಲ್ಲಿ ಲಕ್ಷಾಂತರ ಜನರ ಜೀವನ್ಮರಣದ ಈ ವಿಷಯವನ್ನು ಕುರಿತು ಯಾವ ತುರ್ತುಕ್ರಮ ಕೈಕೊಂಡಿದ್ದೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಗವರ್ನರ್ ಜನರಲ್ ಅವರು ಇತ್ತೀಚೆಗೆ ತಮ್ಮ ಪ್ರವಾಸದ ಕಾಲಕ್ಕೆ ಕೋಸಿನದಿಯ ಪ್ರವಾಹದಿಂದ ನಾಶವಾದ ಪ್ರದೇಶಗಳ ಮೇಲೆ ವೈಮಾನಿಕ ಸಮೀಕ್ಷೆ ಮಾಡಿದರು. ಮತ್ತು ಆ ನದಿಯ ಪ್ರವಾಹವನ್ನು ಆದಷ್ಟು ಬೇಗ ನಿಯಂತ್ರಿಸುವ ಮಹತ್ವವನ್ನು ಕುರಿತು ಕಾರ್ಮಿಕ ವಿಭಾಗಕ್ಕೆ ತಿಳಿಸಿದ್ದಾರೆ.

ಆ) ಕೇಂದ್ರದ ಜಲಮಾರ್ಗ, ನೀರಾವರಿ ಮತ್ತು ಒಳನಾಡ ಜಲಸಂಚಾರ ಸಮಿತಿ ಇವು ಸಮೀಕ್ಷೆಯನ್ನು ನಡೆಸುತ್ತಿವೆ. ಅವು ನೇಪಾಳ ಸರ್ಕಾರದ ಅನುಮತಿಯಿಂದ ಈ ಉದ್ದೇಶಕ್ಕಾಗಿ ಆಕಾಶ ಸಮೀಕ್ಷೆಯನ್ನು ಮತ್ತು ಭೂ ಸಮೀಕ್ಷೆಯನ್ನು ಮತ್ತು ಭೂಗರ್ಭಶಾಸ್ತ್ರದ ಮತ್ತು ಜಲಧರ್ಮಶಾಸ್ತ್ರದ ತನಿಖೆಯನ್ನು ಮಾಡುತ್ತಿವೆ. ಕೋಸಿ ನದಿಯ ಪ್ರವಾಹ ತಡೆಗಟ್ಟಲು ಹಿಮಾಲಯದ ನೇಪಾಳದಲ್ಲಿ ನೀರುಸಂಗ್ರಹಣೆಯ ಒಂದು ಅಣೆಕಟ್ಟು ಕಟ್ಟುವ ಉದ್ದೇಶದಿಂದ ಈ ತನಿಖೆಯನ್ನು ಕೈಗೊಳ್ಳಲಾಗಿದೆ. ಇಂತಹ ಅಣೆಕಟ್ಟು ಕೇವಲ ಪ್ರವಾಹದ ನೀರನ್ನು ಮಾತ್ರ ಸಂಗ್ರಹಿಸದೆ, ಅದು ಬಹಳಷ್ಟು ದೊಡ್ಡಪ್ರಮಾಣದಲ್ಲಿ ರೇವೆ ಮಣ್ಣನ್ನು ತಡೆಹಿಡಿದು ಕೋಸಿ ನದಿ ಪ್ರವಾಹದಿಂದ ಸದ್ಯಕ್ಕೆ ಆಗುತ್ತಿರುವ ಅನಾಹುತಗಳನ್ನು ತಡೆಯಬಹುದು. ಇದಲ್ಲದೆ ಸುಮಾರು ೩೦ ಲಕ್ಷ ಎಕರೆಗಳಷ್ಟು ಬಿಹಾರ ಮತ್ತು ನೇಪಾಳದಲ್ಲಿಯ ಭೂಮಿಗಳು ಸದಾಕಾಲ ನೀರಾವರಿಗೆ ಒಳಪಡುವುವೆಂದು ಆಶಿಸಲಾಗಿದೆ. ಹಾಗೂ ಅಗ್ಗದ ದರದಲ್ಲಿ ಜಲವಿದ್ಯುತ್ ಉತ್ಪಾದನೆಗೆ ಅವಕಾಶ ದೊರೆಯುತ್ತದೆ. ಈ ಸಮೀಕ್ಷೆಯನ್ನು ಪ್ರಧಾನ ಆದ್ಯತೆಯ ಮೇಲೆ ನಡೆಸಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ३, ೬ನೇ ಮಾರ್ಚ್, ೧೯೪೬. ಪುಟ ೧೯೪೯

# ೩೯೪
# ಸರ್ಕಾರಿ ಮುದ್ರಣಾಲಯ, ನವದೆಹಲಿ ಇದರ ಜ್ಯೂನಿಯರ್ ನಕಲು ಮಾಡುವವರಿಗೆ ನಷ್ಟ*

**೭೪೦. ಮೌಲಾನಾ ಜಾಫರ್ ಅಲಿಖಾನ್ :** ಮುಂದಿನ ಪ್ರಶ್ನೆಗಳಿಗೆ ಕಾರ್ಮಿಕ ಮಾನ್ಯ ಮಂತ್ರಿಗಳು ಉತ್ತರಿಸಬೇಕಾಗಿ ವಿನಂತಿ. ಅ) ಭಾರತ ಸರ್ಕಾರದ ಮುದ್ರಣಾಲಯ, ನವದೆಹಲಿ ಇದರಲ್ಲಿ ಅನೇಕ ಜೂನಿಯರ್ ನಕಲು ಮಾಡುವವರು ತಮ್ಮ ಹುದ್ದೆಯಿಂದ ಜೂನಿಯರ್ ರೀಡರ್ ಹುದ್ದೆಗೆ ಪದೋನ್ನತಿ ಪಡೆಯುವ ಕ್ರಮದಲ್ಲಿ ತಿಂಗಳೊಂದಕ್ಕೆ ರೂ. ೧೦ ಅಥವಾ ರೂ. ೫ರಷ್ಟು ನಷ್ಟ ಅನುಭವಿಸುತ್ತಿದ್ದಾರೆ ಎನ್ನುವ ಸಂಗತಿ ನಿಜವೇ? ಇದಲ್ಲದೆ ನಕಲು ಮಾಡುವವರ ಸಂಬಂಧದಲ್ಲಿ ವಾರ್ಷಿಕ ಬಡ್ತಿದರವೂ ರೂ. ೫ ಆಗಿದ್ದು ಜೂನಿಯರ್ ರೀಡರ್‌ಗಳ ಸಂಬಂಧದಲ್ಲಿ ರೂ. ೩ ಮಾತ್ರ ಎನ್ನುವ ಸಂಗತಿಯೂ ನಿಜವೆ?

ಆ) ಅವರಿಗೆ ಉಂಟಾದ ಈ ನಷ್ಟಕ್ಕೆ ಪರಿಹಾರ ಒದಗಿಸಿಕೊಡಲು ಮತ್ತು ಕಾಪಿ–ಹೋಲ್ಡರ್‌ಗಳು ಮತ್ತು ಜೂನಿಯರ್ ರೀಡರ್‌ಗಳ ವೇತನದ ಹಾಲಿ ದರಗಳ ನಡುವಣ ಈ ಅಸಂಗತವನ್ನು ಹೋಗಲಾಡಿಸಲು ಸರ್ಕಾರವು ಯಾವ ಕ್ರಮಕೈಗೊಳ್ಳಲು ಆಲೋಚಿಸುತ್ತಿದೆ?

ಇ) ಇಷ್ಟೆ ಅಲ್ಲದೆ ಕಾಪಿ–ಹೋಲ್ಡರ್‌ಗಳಿಗೆ ೧೯೪೫ರ ಜುಲೈನಲ್ಲಿ ಮಂಜೂರಾದ ಏಕೀಕೃತ ವೇತನಶ್ರೇಣಿಯ ಬಾಕಿಯು ಸಂದಾಯವಾಗಬೇಕೆಂದು ಕೋರಿ ಹಲವಾರು ಮನವಿಗಳನ್ನು ಸಲ್ಲಿಸಿದ್ದಾಗ್ಯೂ ಈವರೆಗೂ ಸಂದಾಯವಾಗಿಲ್ಲವೆಂಬ ಸಂಗತಿಯು ನಿಜವೆ?

ಈ) ಆ ಬಗ್ಗೆ ಕಾರಣಗಳೇನು? ಅಂಥ ವಿಳಂಬದ ನಿಮಿತ್ತ ಮಜೂರಿ ಸಂದಾಯ ಅಧಿನಿಯಮದ ಅಡಿಯಲ್ಲಿ ಪರಿಹಾರವನ್ನೇನಾದರೂ ಕೊಡುವ ಆಲೋಚನೆ ಸರ್ಕಾರಕ್ಕೆ ಇದೆಯೆ? ಹಾಗೆ ಆಲೋಚನೆ ಇಲ್ಲದಿದ್ದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಏಕೀಕೃತ ವೇತನಶ್ರೇಣಿಯನ್ನು ಆಯ್ಕೆ ಮಾಡಿದ ಮತ್ತು ಆ ತರುವಾಯ ಜೂನಿಯರ್ ರೀಡರ್‌ಗಾಗಿ ಪದೋನ್ನತಿ ಪಡೆದ ಕಾಪಿ – ಹೋಲ್ಡರ್‌ಗಳ ಸಂಬಂಧದಲ್ಲಿ ಇದು ನಿಜ.

ಆ) ಈ ವಿಚಾರ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಆದೇಶಗಳನ್ನು ೧೯೪೫ರ ಜುಲೈನಲ್ಲಿ ಹೊರಡಿಸಿದಾಗ್ಯೂ ಅವು ೧೯೪೪ರ ಸಪ್ಟೆಂಬರ್ ೧ನೆಯ ದಿನಾಂಕದಿಂದ ಪೂರ್ವಾನ್ವಯ ಪರಿಣಾಮವನ್ನು ಹೊಂದಿದ್ದವು. ಏಕೀಕೃತ ವೇತನ ಶ್ರೇಣಿಯನ್ನು ಆಯ್ಕೆ ಮಾಡಲು ಸಂಬಂಧಪಟ್ಟ ನೌಕರರಿಗೆ ಕಾಲಾವಕಾಶ ಒದಗಿಸಿಕೊಡಬೇಕಾಗಿತ್ತು. ಆ ತರುವಾಯ ವೇತನಶ್ರೇಣಿಯನ್ನು ಆಯ್ಕೆಮಾಡಿದವರಲ್ಲಿ ಪ್ರತಿಯೊಬ್ಬರಿಗೆ ಮೂರು ವರ್ಷಗಳವರೆಗೆ ಹಿಂದಿನ ಸೇವೆಯ ಪ್ರಯೋಜನವನ್ನು ಒದಗಿಸಿಕೊಟ್ಟು ಅವರ ವೇತನವನ್ನು ನಿಗದಿಪಡಿಸಬೇಕಾಗಿತ್ತು. ಲೆಕ್ಕಪತ್ರದ ಅಧಿಕಾರಿಗಳು ಬಿಲ್ಲುಗಳ ಪೂರ್ವ ಪರಿಶೋಧನೆ ಮಾಡುತ್ತಿದ್ದಾರೆ. ಸದ್ಯದಲ್ಲಿಯೇ ಬಾಕಿಗಳನ್ನು ಸಂದಾಯ ಮಾಡಲಾಗುವುದು. ಪ್ರಶ್ನೆ ಎರಡನೆಯ ಭಾಗಕ್ಕೆ ಉತ್ತರ ಇಲ್ಲ ಎಂದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೬ನೇ ಮಾರ್ಚ್, ೧೯೪೬. ಪುಟ ೧೯೫೭.

# ೩೯೫
# ಎಸ್ಟೇಟ್ ಕಛೇರಿಯಲ್ಲಿ ಮುಸಲ್ಮಾನ್ ಪತ್ರಾಂಕಿತ ಅಧಿಕಾರಿಗಳು*

**೮೪೧. ಖಾನ್ ಬಹದೂರ್ ಮುಖದುಮ್ ಅಲ್–ಹಾಜ್ ಸೈಯದ್ ಶೇರ್‌ಷಾ ಜೀಲಾನಿ :** ಅ) ನವದೆಹಲಿಯ ಎಸ್ಟೇಟ್ ಕಛೇರಿಯಲ್ಲಿ ಸದ್ಯದಲ್ಲಿರುವ ಪತ್ರಾಂಕಿತ ಅಧಿಕಾರಿಗಳ ಸಂಖ್ಯೆಯನ್ನು ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ತಿಳಿಸುವರೆ?

ಆ) ಇವರಲ್ಲಿ ಎಷ್ಟು ಜನ ಮುಸಲ್ಮಾನರಿದ್ದಾರೆ?

ಇ) ೧೯೪೩ರಲ್ಲಿ ಕಾರ್ಮಿಕ ಇಲಾಖೆಯು ಗೃಹ ಇಲಾಖೆಯೊಡನೆ ವಿಚಾರ ವಿಮರ್ಶೆಯ ತರುವಾಯ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿರುವ ಅತ್ಯಂತ ಹೆಚ್ಚಿನ ಅರ್ಹತೆಗಳನ್ನು ಹೊಂದಿರುವ ಮೇಲ್ವಿಚಾರಕರುಗಳಿಗೆ ಬಡ್ತಿ ನೀಡುವ ಮೂಲಕ ಸಹಾಯಕ ಎಸ್ಟೇಟ್ ಅಧಿಕಾರಿಗಳ ಸ್ಥಾನಗಳನ್ನು ತುಂಬಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತೆಂಬ ಅಂಶ ಮಾನ್ಯ ಕಾರ್ಮಿಕ ಸದಸ್ಯರಿಗೆ ಗೊತ್ತಿದೆಯೇ? ಗೊತ್ತಿದ್ದ ಪಕ್ಷದಲ್ಲಿ ಮಾನ್ಯ ಸದಸ್ಯರು ಹೀಗೆ ತೆಗೆದುಕೊಂಡಿರುವ ಈ ನಿರ್ಣಯಗಳನ್ನು ಕಾರ್ಯಗತಗೊಳಿಸುವರೆ?

ಈ) ಈಗ ಖಾಲಿಯಿರುವ ಮತ್ತು ಮುಸಲ್ಮಾನರೊಬ್ಬರಿಗೆ ಆರಕ್ಷಿತವಾಗಿದ್ದ ಒಂದು ಹುದ್ದೆಯನ್ನು ಇನ್ನೊಬ್ಬ ಮುಸಲ್ಮಾನರಿಗೆ ಕೊಡುವ ಮೂಲಕ ತುಂಬಲಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಸದ್ಯಕ್ಕೆ ಇಲ್ಲ.

ಇ) ಎಸ್ಟೇಟ್ ಕಛೇರಿಯನ್ನು ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ವ್ಯವಸ್ಥೆಯಿಂದ ಪ್ರತ್ಯೇಕಿಸುವುದಕ್ಕೆ ಮೊದಲು ಮುಖ್ಯ ಇಂಜಿನಿಯರ್‌ರ ಕಛೇರಿಯಲ್ಲಿ ಸಹಾಯಕ ಎಸ್ಟೇಟ್ ಅಧಿಕಾರಿಯ ಹುದ್ದೆಗೆ ಆಯ್ಕೆಯ ಮೂಲಕ ಮತ್ತು ಕಛೇರಿಯ ಸೂಪರಿಂಟೆಂಡೆಂಟ್‌ರುಗಳೊಳಗೆ ಬಡ್ತಿಯ ಮೂಲಕ ತುಂಬುವುದು ಸಾಧಾರಣವಾದ ಪದ್ಧತಿಯಾಗಿತ್ತು. ಈಗ ಈ ಪದ್ಧತಿಯಲ್ಲಿ ಬದಲಾವಣೆಯಾಗಿದೆ. ಎಸ್ಟೇಟ್ ಕಛೇರಿಯು ಈಗ ಕೇಂದ್ರ ಲೋಕೋಪಯೋಗಿ ಇಲಾಖೆಯ ಅಂಗವಾಗಿರದೆ ಅದು ಕಾರ್ಮಿಕ ಖಾತೆಯ ನೇರ ನಿಯಂತ್ರಣದಲ್ಲಿದೆ. ಆದ್ದರಿಂದ ಮುಖ್ಯ ಇಂಜಿನಿಯರ್‌ರ ಕಛೇರಿಯಲ್ಲಿರುವ ಸೂಪರಿಂಟೆಂಡೆಂಟ್‌ರಿಗೆ ಎಸ್ಟೇಟ್ ಕಛೇರಿಯ ಸಹಾಯಕ ಎಸ್ಟೇಟ್ ಅಧಿಕಾರಿಗಳಾಗಿ ಬಡ್ತಿ ಪಡೆಯುವ ಯಾವ ನೇರ ಹಕ್ಕೂ ಇರುವುದಿಲ್ಲ. ಆದರೆ ಈ ಹುದ್ದೆಗಳಿಗೆ ಭರ್ತಿ ಮಾಡುವಾಗ ಅರ್ಹತೆಯ ಆಧಾರದ ಮೇಲೆ ಅವರನ್ನೂ ಪರಿಗಣಿಸಬಹುದು.

ಈ) ಈಗ ಖಾಲಿ ಇರುವ ಹುದ್ದೆಯನ್ನು ಯಾವ ರೀತಿ ತುಂಬಬೇಕೆಂಬ ಪ್ರಶ್ನೆ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

**ಶ್ರೀ ಮಹಮದ್ ನೌಮನ್ :** ಅ)ಗೆ ಸಂಬಂಧಿಸಿದಂತೆ ಈ ಐದು ಸ್ಥಾನಗಳನ್ನೂ ಯಾವ ರೀತಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ನೇ ಮಾರ್ಚ್,೧೯೪೬. ಪುಟ ೧೯೫೨.

ತುಂಬಲಾಯಿತು ಮತ್ತು ಈ ಸ್ಥಾನಗಳಿಗೆ ಯೋಗ್ಯರೆಂದು ಪರಿಗಣಿಸಬಹುದಾದವರಲ್ಲಿ ಯಾರಾದರೂ ಮುಸಲ್ಮಾನರಿದ್ದರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಕಾಲಾವಕಾಶ ಬೇಕು.

## ೩೯೬
## ಕಡ್ಡಾಯದ ದುಡಿಮೆಗಾಗಿ ಕಾರ್ಮಿಕರ ನಿಯೋಜನೆಯನ್ನು ನಿಲ್ಲಿಸುವುದು*

**೭೪೩. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸಬೇಕಾಗಿ ಪ್ರಾರ್ಥನೆ.

ಅ) ಈ ದೇಶದಲ್ಲಿ ಒತ್ತಾಯದ ದುಡಿಮೆಯ ಪ್ರಮಾಣವೆಷ್ಟು? ಅದರ ವ್ಯಾಪ್ತಿಯೆಷ್ಟು?

ಆ) ಈ ದೇಶದಲ್ಲಿ ಒತ್ತಾಯದ ದುಡಿಮೆಯಲ್ಲಿ ಕಾರ್ಮಿಕರ ನಿಯೋಜನೆಯನ್ನು ನಿಲ್ಲಿಸಲು ಸರ್ಕಾರವು ಯಾವುದಾದರೂ ಕ್ರಮಕೈಗೊಳ್ಳಲು ಪ್ರಸ್ತಾಪಿಸಿದೆಯೆ? ಹಾಗಿದ್ದರೆ ಆ ಕ್ರಮಗಳಾವುವು?

ಇ) ಈ ದೇಶದ ಅನೇಕ ಭಾಗದಲ್ಲಿ ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರ ಸಲುವಾಗಿ ಮಜೂರಿಗಳ ಕನಿಷ್ಠ ದರವನ್ನು ನಿಗದಿಪಡಿಸಲು ಸರ್ಕಾರ ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೆ?

ಈ) ಕಾರ್ಮಿಕರಿಗೆ ಸಾಕಷ್ಟು ಮತ್ತು ನಿಯಮಿತವಾಗಿ ಮಜೂರಿ ಪಡೆಯುವ ಹಾಗೆ ಶಾಸನದ್ವಾರಾ ಅಥವಾ ಯಾವುದೇ ಕ್ರಮಕೈಗೊಳ್ಳಲು ಸರ್ಕಾರ ಪ್ರಸ್ತಾಪಿಸಿದೆಯೆ? ಇದ್ದರೆ ಯಾವುದು? ಇಲ್ಲದಿದ್ದರೆ ಏಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈ ಕುರಿತು ಯಾವುದೇ ಸವಿಸ್ತರ ಮಾಹಿತಿ ಲಭ್ಯವಿಲ್ಲ.

ಆ) ಪ್ರೊಫೆಸರ್ ರಂಗಾ ಅವರು ೧೯೪೬ರ ಫೆಬ್ರವರಿ ೨೦ನೇ ದಿನಾಂಕದಂದು ಕೇಳಿದ ೩೮೧ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆಗೆ ಕೊಟ್ಟ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನ ಸೆಳೆಯಲಾಗಿದೆ.

ಇ) ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರ ಸಲುವಾಗಿ ಕನಿಷ್ಠ ಮಜೂರಿ ಶಾಸನವನ್ನು ರಚಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರಸ್ತಾವಿತ ಕನಿಷ್ಠ ಮಜೂರಿ ಶಾಸನವು ಕನಿಷ್ಠ ಮಜೂರಿಗಳನ್ನು ನಿಗದಿಪಡಿಸುವುದಕ್ಕೂ ನಿಗದಿಪಡಿಸಿದ ದರಕ್ಕಿಂತ ಕಡಿಮೆಯಲ್ಲದ ದರದಲ್ಲಿ ಸಂದಾಯವಾಗುವಂತೆ ಖಚಿತಪಡಿಸುವುದಕ್ಕೂ ವ್ಯವಸ್ಥೆ ಮಾಡುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೫೫.

# ೩೯೭
# ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಮುಸ್ಲಿಮರ ಪ್ರತಿನಿಯೋಜನೆ *

**೭೪೭. ಶೇಠ್ ಯೂಸುಫ್ ಅಬ್ದುಲ್ಲಾ ಹರೂನ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೆಳಕಂಡ ವಿಷಯಗಳ ಬಗ್ಗೆ ಮಾಹಿತಿ ನೀಡಬೇಕಾಗಿ ಪ್ರಾರ್ಥನೆ.

ಅ) ಕಳೆದ ವರ್ಷ ಎಲೆಕ್ಟ್ರಿಕಲ್ ಕಮೀಷನರ್ ಅವರು ಕಾರ್ಮಿಕ ಇಲಾಖೆಯ ಪರವಾಗಿ ಆಯ್ಕೆ ಮಾಡಿದ ಹಾಗೂ ಉನ್ನತ ತರಬೇತಿಗಾಗಿ ವಿದೇಶಗಳಿಗೆ ಪ್ರತಿನಿಯೋಜಿಸಲಾದ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳ ಸಂಖ್ಯೆಯೆಷ್ಟು?

ಆ) ಹಾಗೆ ಆಯ್ಕೆಯಾದವರಲ್ಲಿ ಮುಸ್ಲಿಮರು ಎಷ್ಟು ಜನ?

ಇ) ಪತ್ರಿಕೆಗಳಲ್ಲಿ ಪ್ರಚಾರ ಕೊಡದೆ ಈ ಆಯ್ಕೆಯು ನಡೆಯಿತೆಂಬ ಸಂಗತಿಯು ನಿಜವೆ?

ಈ) ಕಳೆದ ತಂಡದಲ್ಲಿ ಮುಸ್ಲಿಮ್ ಕೋಟಾಕ್ಕೆ ಅವಕಾಶ ಕೊಟ್ಟಿರದಿದ್ದರೆ ಮುಂದಿನ ತಂಡಗಳ ಆಯ್ಕೆಯಲ್ಲಿ ಸಾಕಷ್ಟು ಜನ ಮುಸ್ಲಿಮರನ್ನು ಸೇರಿಸಿಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಆಯ್ಕೆಯಾದವರು – ೧೦ ಜನ, ಪ್ರತಿನಿಯೋಜಿಸಲ್ಪಟ್ಟವರು – ೯ ಜನ.

ಆ) ಒಬ್ಬರು.

ಇ) ಪ್ರಾಂತಗಳಿಗೂ, ಮತ್ತು ರಾಜ್ಯಗಳಿಗೂ ವಿದೇಶಿಗಳಲ್ಲಿ ಭಾರತೀಯರಿಗೆ ತರಬೇತಿಯನ್ನು ನೀಡುವ ಬಗ್ಗೆ ತಿಳಿವಳಿಕೆ ನೀಡಲಾಗಿತ್ತು, ಮತ್ತು ಸೂಕ್ತ ಅಭ್ಯರ್ಥಿಗಳ ಪ್ರಾಥಮಿಕ ಆಯ್ಕೆಯನ್ನು ಮಾಡುವಂತೆಯೂ ತಿಳಿಸಲಾಗಿತ್ತು. ಅವರು ೨೪ ಹೆಸರುಗಳನ್ನು ಕಳಿಸಿಕೊಟ್ಟಿದ್ದರು. ಆ ಪೈಕಿ ೨೨ ಜನ ಸಂದರ್ಶನಕ್ಕೆ ಹಾಜರಾಗಿದ್ದರು ಮತ್ತು ಅವರಲ್ಲಿ ೧೦ ಜನರನ್ನು ಆಯ್ಕೆ ಮಾಡಲಾಯಿತು.

ಆದಕಾರಣ ಈ ಯೋಜನೆಗೆ ಪತ್ರಿಕೆಗಳಲ್ಲಿ ಪ್ರಚಾರಕೊಡುವ ಅಗತ್ಯವಿರಲಿಲ್ಲ.

ಈ) ಪ್ರಾಂತಗಳು ಹಾಗೂ ಪ್ರಮುಖ ಸಂಸ್ಥಾನಗಳು ಆಯ್ಕೆಗಾಗಿ ಶಿಫಾರಸ್ಸು ಮಾಡಿದ್ದು. ಒಬ್ಬರೇ ಮುಸ್ಲಿಮ್ ಅಭ್ಯರ್ಥಿಯನ್ನು ಮತ್ತು ಅವರನ್ನೇ ಸರ್ಕಾರದವರು ಆಯ್ಕೆ ಮಾಡಿದರು. ಆದಕಾರಣ ಪ್ರಶ್ನೆಯ ದ್ವಿತೀಯ ಭಾಗವು ಉದ್ಭವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೫೭

# ೩೯೮
# ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತಾಧಿಕಾರಿಯ ಹುದ್ದೆಗೆ ನೇಮಕಾತಿಗಳು*

**೭೫೨. ಸರ್ದಾರ್ ಮಂಗಲ್ ಸಿಂಗ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ :

ಅ) ಈವರೆಗೆ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತಾಧಿಕಾರಿಯ ಹುದ್ದೆಯಲ್ಲಿ ನಿರಂತರವಾಗಿ ಇದ್ದವರು ಎಷ್ಟು ಜನ?

ಆ) ಈ ಹುದ್ದೆಗೆ ಈವರೆಗೂ ಹಿಂದುವನ್ನಾಗಲಿ, ಸಿಖ್‌ನನ್ನಾಗಲಿ ನೇಮಿಸಿಲ್ಲ ಎಂಬ ಸಂಗತಿಯು ನಿಜವೆ? ಹಾಗಿದ್ದರೆ, ಕಾರಣವೇನು? ಮತ್ತು

ಇ) ಈಗ ಖಾಲಿ ಇರುವ ಆ ಹುದ್ದೆಗೆ ಒಬ್ಬನನ್ನು ನೇಮಿಸುವ ವಿಚಾರದ ಔಚಿತ್ಯವನ್ನು ಮಾನ್ಯ ಮಂತ್ರಿಗಳು ಪರಿಶೀಲಿಸುವರೆ? ಇಲ್ಲದಿದ್ದರೆ, ಕಾರಣವೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ನಾಲ್ವರು.

ಆ) ಆ ಅಧಿಕಾರಿಗಳ ಕೋಮುಗಳ ವಿವರಗಳು ಮುಂದಿನಂತೆ ಇವೆ:

೧. ಆಂಗ್ಲೋ ಇಂಡಿಯನ್.

೨. ಮುಸ್ಲಿಮ್.

೩. ಆಂಗ್ಲೋ–ಇಂಡಿಯನ್.

೪. ಮುಸ್ಲಿಮ್.

ಇ) ಹೌದು. ಸಂಬಂಧವಾದ ಸಾರ್ವಜನಿಕ ಸೇವೆಗಳಲ್ಲಿ ಕೋಮುವಾರು ಪ್ರಾತಿನಿಧ್ಯದ ಆದೇಶಗಳನ್ನು ಆಡಳಿತಾಧಿಕಾರಿಯ ಹುದ್ದೆಗೆ ಮಾತ್ರ ಪ್ರತ್ಯೇಕವಾಗಿ ಅನ್ವಯಿಸಲಾಗುತ್ತಿಲ್ಲ. ಸದರಿ ಆದೇಶಗಳನ್ನು ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಎಲ್ಲ ಪ್ರಥಮ ದರ್ಜೆ ಹುದ್ದೆಗಳನ್ನು ಒಟ್ಟಾಗಿ ಪರಿಗಣಿಸಿ ಅನ್ವಯಿಸಲಾಗುತ್ತಿದೆ, ಆದ್ದರಿಂದ ಆಡಳಿತಾಧಿಕಾರಿಯ ಹುದ್ದೆಯನ್ನು ನಿರ್ದಿಷ್ಟ ಕೋಮಿಗೆ ಸೇರಿದವನನ್ನು ನೇಮಿಸುವುದನ್ನು ಖಚಿತಪಡಿಸಿಕೊಳ್ಳುವುದು ಸಾಧ್ಯವಿಲ್ಲ.

ಈ) ಸದರಿ ಹುದ್ದೆಯನ್ನು ಭರ್ತಿಮಾಡುವ ವಿಚಾರ ಇನ್ನೂ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೫೯.

# ೩೯
# ಜೋಧಪುರ ರೈಲ್ವೆಗೆ ಮಜೂರಿ ಅಧಿನಿಯಮವನ್ನು ಅನ್ವಯಿಸುವ ವಿಚಾರ*

**೭೫೬. ಶೇಠ್ ಸುಖದೇವ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಅ) ಬ್ರಿಟಿಷ್ ಇಂಡಿಯಾದ ಮೂಲಕ ಹಾದುಹೋಗುವ ಜೋಧಪುರ ರೈಲ್ವೆಗೆ, ೧೯೩೬ನೇ ಇಸವಿಯ IVನೆಯ ಮಜೂರಿ ಸಂದಾಯ ಅಧಿನಿಯಮವು ಅನ್ವಯವಾಗುತ್ತದೆಯೆಂಬ ಸಂಗತಿಯು ನಿಜವೆ? ನಿಜವಾಗಿದ್ದರೆ ಇಂಡಿಯನ್ ಲೇಬರ್ ಗೆಜೆಟ್‌ನಲ್ಲಿ ಪ್ರಕಟಿಸಲಾದ ೧೯೪೧ರಿಂದ ೪೪ರವರೆಗಿನ ಮೂರು ವರ್ಷಗಳ ಸಂಬಂಧವಾದ ರಾಜಿ (ರೈಲ್ವೆ) ಅಧಿಕಾರಿ ಮತ್ತು ರೈಲ್ವೆ ಕಾರ್ಮಿಕರ ಪರಿವೀಕ್ಷಕ ವಾರ್ಷಿಕ ವರದಿಗಳಲ್ಲಿ ಜೋಧಪುರ ರೈಲ್ವೆ ಬಗ್ಗೆ ಯಾವುದೇ ಉಲ್ಲೇಖವನ್ನು ಯಾಕೆ ಒಳಗೊಂಡಿಲ್ಲ? ಮತ್ತು

ಆ) ಜೋಧಪುರ ರೈಲ್ವೆಯ ಬ್ರಿಟಿಷ್ ಭಾಗಕ್ಕೆ ಸಂಬಂಧಪಟ್ಟಂತೆ ಆ ಮೂರು ವರ್ಷಗಳ ಪರಿವೀಕ್ಷಣಾ ವರದಿಗಳು ಲಭ್ಯವಿದ್ದರೆ, ಮಾನ್ಯಮಂತ್ರಿಗಳು ಜೋಧಪುರ ರೈಲ್ವೆಗೆ ಸಂಬಂಧಿಸಿದಂತೆ ಕೆಳಕಂಡ ಮಾಹಿತಿಯನ್ನು ಒಳಗೊಂಡ ವಿವರಣೆಯನ್ನು ಸದನದ ಮುಂದೆ ಮಂಡಿಸಲು ಪ್ರಯತ್ನಿಸಿರುವರೆ?

೧) ಸಿಬ್ಬಂದಿಯ ಒಟ್ಟು ಸಂಖ್ಯೆ : ೧) ವಯಸ್ಕರು, ೨) ಮಕ್ಕಳು, ೩) ಬದಲಿಗಳು ಮತ್ತು ೪) ಅವರಿಗೆ ಸಂದಾಯವಾದ ಒಟ್ಟು ಮಜೂರಿ.

೨) ಜುಲ್ಮಾನೆ ವಿಧಿಸಲ್ಪಟ್ಟ ನೌಕರರ ಸಂಖ್ಯೆ ಮತ್ತು ವಸೂಲಾದ ಜುಲ್ಮಾನೆ ಮೊತ್ತ.

೩) ಸರಕುಗಳ ನಷ್ಟ ಅಥವಾ ಹಾನಿಯನ್ನು ಯಾವ ನೌಕರರ ಲೆಕ್ಕಕ್ಕೆ ಖರ್ಚು ಹಾಕಲಾಯಿತೊ ಅಂಥ ನೌಕರರ ಸಂಖ್ಯೆ ಮತ್ತು ಹಾಗೆ ವಸೂಲಾದ ಮೊತ್ತ, ಮತ್ತು

೪) ನಡೆಸಲಾದ ಪರಿವೀಕ್ಷಣೆಗಳ ಸಂಖ್ಯೆ ಮತ್ತು ಗಮನಿಸಲಾದ ಅಕ್ರಮಗಳ ಸಂಖ್ಯೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಪ್ರಶ್ನೆಯ ಪ್ರಥಮ ಭಾಗದ ಉತ್ತರ 'ನಿಜ' ಇಂಡಿಯನ್ ಲೇಬರ್ ಗೆಜೆಟ್‌ನಲ್ಲಿ ಪ್ರಕಟಿಸಲಾದ ಟಿಪ್ಪಣಿಯು ರೈಲ್ವೆಗಳಿಗೆ ಮಜೂರಿ ಸಂದಾಯ ಅಧಿನಿಯಮವನ್ನು ಅನ್ವಯಿಸಿರುವ ಬಗ್ಗೆ ವಿವರಗಳನ್ನು ಒಳಗೊಂಡಿದೆ. ಆ) ೧) ರಿಂದ ೩) ಲಭ್ಯವಿರುವ ಮಾಹಿತಿಯನ್ನು ಒಳಗೊಂಡ ವಿವರಣೆಯನ್ನು ಸದನದ ಮುಂದೆ ಮಂಡಿಸಲಾಗಿದೆ.

೪) ಮಾಹಿತಿ ಕೂಡಲೇ ಲಭ್ಯವಿಲ್ಲ.

**೧೯೩೮ರ ಮಜೂರಿ ಸಂದಾಯ (ಫೆಡರಲ್ ರೈಲ್ವೆ) ನಿಯಮಾವಳಿಯ ೧೭ನೆಯ ನಿಯಮದ ಉಪಬಂಧಗಳಿಗೆ ಅನುಗುಣವಾಗಿ ಸಾದರಪಡಿಸಿದ ರಿಟರ್ನ್‌ಗಳ ಪ್ರಕಾರ ರೈಲ್ವೆಯ ಬ್ರಿಟಿಷ್ ಭಾಗದಲ್ಲಿ ಜೋಧಪುರ ರೈಲ್ವೆ ಆಡಳಿತವು ಕಾರ್ಖಾನೆಗಳಲ್ಲಿ ಮತ್ತು ಕಾರ್ಖಾನೆಗಳ ಹೊರಗೆ ಇತರೆಡೆಗಳಲ್ಲಿ**

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ. ೧೯೬೧

**ನಿಯೋಜಿಸಿದ ಸಿಬ್ಬಂದಿಯನ್ನು ತೋರಿಸುವ ವಿವರಣೆ.**

| | ೧೯೪೧–೪೨ | ೧೯೪೨–೪೩ | ೧೯೪೩–೪೪ |
|---|---|---|---|
| ನಿಯೋಜಿತರಾದ ವ್ಯಕ್ತಿಗಳ ಸಂಖ್ಯೆ | | | |
| ವಯಸ್ಕರು | ೧೯೦೧ | ೧೯೩೩ | ೨೦೨೪ |
| ಮಕ್ಕಳು | ಯಾರು ಇಲ್ಲ | ಯಾರೂ ಇಲ್ಲ | ಯಾರೂ ಇಲ್ಲ |
| ಸಂದಾಯವಾದ ಒಟ್ಟು ಮಜೂರಿ | ರೂ. ೫,೮೨,೩೭೯ | ರೂ. ೬,೩೫,೯೩೮ | ರೂ. ೬,೨೧,೪೩೩ |
| ಜುಲ್ಮಾನೆ ವಿಧಿಸಲ್ಪಟ್ಟ ನೌಕರರ ಸಂಖ್ಯೆ | ೧೨೮ | ೧೦೨ | ೧೪೦ |
| ವಸೂಲಾದ ಜುಲ್ಮಾನೆ ಮೊತ್ತ | ರೂ. ೪೧ | ರೂ. ೩೧ | ರೂ. ೪೮ |
| ಸರಕುಗಳ ಹಾನಿ ಅಥವಾ ನಷ್ಟವನ್ನು ಯಾವ ನೌಕರರ ಲೆಕ್ಕಕ್ಕೆ ಖರ್ಚು ಹಾಕಲಾಯಿತೋ ಅಂಥ ನೌಕರರ ಸಂಖ್ಯೆ | ೧,೧೦೨ | ೧,೧೨೭ | ೧,೩೦೩ |
| ಹಾನಿಗಾಗಿ ವಸೂಲಾದ ಮೊತ್ತ | ರೂ. ೧,೨೮೭ | ರೂ. ೧,೧೨೯ | ರೂ. ೧,೯೮೫ |

## ೪೦೦
## ನವದೆಹಲಿಯಲ್ಲಿರುವ ಅಮೇರಿಕದ ಸೇನಾ ಚ್ಯಾಪೆಲ್‌ನ ವಿಲೇವಾರಿ*

**೭೬೪. ಶ್ರೀ ಎಸ್.ಟಿ. ಆದಿತ್ಯನ್ :** ನವದೆಹಲಿಯಲ್ಲಿಯ ಪಾರ್ಲಿಮೆಂಟ್ ಸ್ಟ್ರೀಟ್‌ನಲ್ಲಿರುವ ಅಮೇರಿಕದ ಸೇನಾ ಚ್ಯಾಪೆಲ್ ಅನ್ನು ಸರ್ಕಾರಕ್ಕೆ ವಾಪಸು ಒಪ್ಪಿಸಲಾಗುತ್ತಿದೆಯೆ? ಹಾಗಿದ್ದರೆ, ಅದನ್ನು ಕುರಿತು ಏನು ಮಾಡಬೇಕು ಎಂದು ಸರ್ಕಾರ ಪ್ರಸ್ತಾಪಿಸಿದೆ ಎಂಬುದರ ಬಗ್ಗೆ ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

## ೪೦೧
## ಸರ್ಕಾರಿ ಇಲಾಖೆಗಳಿಂದ ನೌಕರ ವರ್ಗದ ಬಿಡುಗಡೆ**

**೭೬೯, ಶ್ರೀ ಸುಬೇದಾರ್ :** ಕಾರ್ಮಿಕ ಇಲಾಖೆಯ ಮಾನ್ಯಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸಬೇಕಾಗಿ ಪ್ರಾರ್ಥನೆ.

ಅ) ೧) ಭೂಸೇನೆ, ನೌಕಾಸೇನೆ ಹಾಗೂ ವಾಯುಸೇನೆಗಳಿಗೂ ಸೇರಿ ಯುದ್ಧ ಇಲಾಖೆಯಿಂದ, ೨) ರೈಲ್ವೆ ಇಲಾಖೆಯಿಂದ ಮತ್ತು ೩) ಸರ್ಕಾರದ ಇತರ ಇಲಾಖೆಗಳಿಂದ ೧೯೪೬ರಲ್ಲಿ ಬಿಡುಗಡೆಯಾಗಬೇಕಾದ ಖಾಯಂ ಹಾಗೂ ಹಂಗಾಮಿ ನೌಕರರ ಒಟ್ಟು ಸಂಖ್ಯೆಯೆಷ್ಟು?

ಆ) ಅವರಲ್ಲಿ ಕೆಲವರು ಮಾದರಿ ಸೇವೆಯನ್ನು ಸಲ್ಲಿಸಿದ್ದರೂ ಅವರನ್ನು ಬಿಡುಗಡೆ ಮಾಡಲಾಗುತ್ತಿದೆಯೆಂಬ ಸಂಗತಿ ನಿಜವೆ?

ಇ) ಅವರನ್ನು ಇತರ ಇಲಾಖೆಗಳಲ್ಲಿ ಮರಳಿಸೇರಿಸಿಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ?

ಈ) ಅಂಥವರನ್ನು ಮರಳಿಸೇರಿಕೊಳ್ಳುಲು ಸರ್ಕಾರದ ಯಾವ ಉದ್ಯೋಗಗಳನ್ನು ಪ್ರಾರಂಭಿಸಲು ಆಲೋಚಿಸಿದೆ?

ಉ) ವಿವಿಧ ಸೇನೆಗಳಿಂದ ಭಾರತೀಯರನ್ನು ಬಿಡುಗಡೆ ಮಾಡುತ್ತಿರುವಾಗಲೇ ಬ್ರಿಟಿಷರನ್ನು ಇತರ ಸೇನೆಗಳಿಗೆ ಭರ್ತಿಮಾಡಿಕೊಳ್ಳಲಾಗುತ್ತಿದೆಯೆಂಬ ಸಂಗತಿ ನಿಜವೆ?

ಊ) ಅಂಥ ನೌಕರಿಭರ್ತಿಯನ್ನು ನಿಲ್ಲಿಸಿ, ಹೊಸದಾಗಿ ನೌಕರಿಭರ್ತಿ ಪ್ರಾರಂಭವಾಗಿರುವಂಥ ಇತರ ಉದ್ಯೋಗಿಗಳಿಗೆ ಹೊಂದಿಕೊಳ್ಳುವ ಹಾಗೆ ಭಾರತೀಯರಿಗೆ ಒಂದು ಅವಕಾಶವನ್ನು ಒದಗಿಸಿಕೊಡುವುದು ಸೂಕ್ತವೆಂದು ಸರ್ಕಾರವು ಭಾವಿಸಿಲ್ಲವೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೭೧

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೭೨

ಋ) ಕೇಂದ್ರ ಸರ್ಕಾರದಲ್ಲಿ ಮತ್ತು ವಿವಿಧ ಪ್ರಾಂತೀಯ ಸರ್ಕಾರಗಳಲ್ಲಿ ಉಂಟಾಗುವ ಅಥವಾ ತೆರವಾಗುವ ಹುದ್ದೆಗಳ ಪೈಕಿ ಶೇಕಡ ೭೦ರಷ್ಟನ್ನು ನೇರ ನೌಕರಿಭರ್ತಿ ಮೂಲಕ ತುಂಬಲಾಗುತ್ತಿದೆ. ಆ ಬಗ್ಗೆ ಅಗತ್ಯ ಏರ್ಪಾಡುಗಳನ್ನು ಮಾಡಲು ಸರ್ಕಾರವು ರೂಪಿಸಿರುವ ವ್ಯವಸ್ಥೆ ಯಾವುದು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಮಾಹಿತಿಯು ಕೂಡಲೇ ಲಭ್ಯವಾಗುತ್ತಿಲ್ಲ. ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಯಥಾಕ್ರಮದಲ್ಲಿ ಅದನ್ನು ಸದನದ ಮುಂದೆ ಮಂಡಿಸಲಾಗುವುದು.

ಆ) ಹೌದು.

ಇ) ಬಿಡುಗಡೆಯಾದ ನೌಕರ ವರ್ಗದವರನ್ನು ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೋಂದಣಿ ಮಾಡಲು ವ್ಯವಸ್ಥೆ ಮಾಡುವಂತೆ ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಉದ್ಯೋಗ ವಿನಿಮಯ ಕಛೇರಿಗಳ ಮುಖಾಂತರವೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ನಿರ್ದೇಶಿಸಿ ಎಲ್ಲಾ ಇಲಾಖೆಗಳಿಗೆ ಅಗತ್ಯಪಡಿಸುವ ಸೂಚನೆಗಳನ್ನು ನೀಡಲಾಗಿದೆ.

ಈ) ಕೇಂದ್ರೀಯ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳು ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಯಾವುದೇ ಪ್ರವೃತ್ತಿಯನ್ನು ಪ್ರತಿರೋಧಿಸುವ ವಿಶೇಷ ಉದ್ದೇಶದಿಂದ ಆಯ್ಕೆ ಮಾಡಿದ ಕಾರ್ಯಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಪ್ರಾರಂಭಿಸುತ್ತಿವೆ. ಈ ಯೋಜನೆಗಳಲ್ಲಿ ಉತ್ಪಾದಕ ಯೋಜನೆಗಳೂ ಆರ್ಥಿಕ ಮಹತ್ವದ ಯೋಜನೆಗಳೂ ಸೇರಿವೆ. ಅವು ಸ್ವಯಂ ಹಣಕಾಸು ಒದಗಿಸಿಕೊಳ್ಳುವ ಯೋಜನೆಗಳಾಗಿರಲಿಕ್ಕಿಲ್ಲ. ಉದಾಹರಣೆಗೆ, ಸಣ್ಣ ನೀರಾವರಿ, ರಸ್ತೆಗಳು, ಸವೆತ–ನಿರೋಧಕ ಕಾಮಗಾರಿಗಳು, ಕೃಷಿಸಂಬಂಧವಾದ ಕಾಮಗಾರಿಗಳು, ಅರಣ್ಯಗಳು ಮುಂತಾಗಿ ಈ ಎರಡೂ ಪ್ರಕಾರದ ಯೋಜನೆಗಳು, ಇತರ ಸಂಗತಿಗಳ ಜತೆ, ಕಟ್ಟಡ ಕಾಮಗಾರಿಗಳು, ತರಬೇತಿ ಮತ್ತು ಸಂಶೋಧನೆ, ಮಾಜಿ ಸೈನಿಕರಿಗೆ ಪುನರ್ವಸತಿ– ಈ ಕಾರ್ಯಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತವೆ. ಪಂಚವಾರ್ಷಿಕ ಯೋಜನೆಯ ಹೊರಗಿನ ಇತರ ಕೆಲವು ಯೋಜನೆಗಳು ಎಂದರೆ, ಉದಾಹರಣೆಗೆ ನೀರಾವರಿ, ಮಲೇರಿಯಾ ನಿರೋಧಕ ಕ್ರಮಗಳು, ನೀರು ಪೂರೈಕೆ ಮತ್ತು ಚರಂಡಿ ಯೋಜನೆಗಳಂಥ ಸಾಕಷ್ಟು ಉದ್ಯೋಗಗಳನ್ನು ಅವಕಾಶ ಒದಗಿಸುವ ಯೋಜನೆಗಳನ್ನೂ ಕೈಗೊಳ್ಳಲಾಗುತ್ತದೆ.

ಉ) ನಿರ್ದಿಷ್ಟ ನೇಮಕಾತಿಗಳಿಗೆ ತಜ್ಞರು ಅಗತ್ಯವಿರುವ ಸಂದರ್ಭಗಳಲ್ಲಿ ಅಥವಾ ಸಂಖ್ಯೆಯು ಅಲ್ಪವಾಗಿರುವಲ್ಲಿ ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಗತ್ಯವಾಗಿರುವ ಸಂದರ್ಭಗಳಲ್ಲಿ ಮಾತ್ರ ಹಾಗೆ ಮಾಡಲಾಗುತ್ತಿದೆ.

ಊ) ಉದ್ಭವಿಸುವುದಿಲ್ಲ.

ಋ) ೧೯೪೨ನೇ ಜೂನ್೨೦ನೇ ತಾರೀಖಿನಿಂದ ೧೯೪೫ನೇ ಡಿಸೆಂಬರ್ ೩೧ನೇ ತಾರೀಖಿನವರೆಗಿನ ಅವಧಿಯಲ್ಲಿ ಖಾಲಿಯಾಗುವ ಮತ್ತು ಸಾಮಾನ್ಯವಾಗಿ ನೇರ ನೇಮಕಾತಿಯಿಂದ ಭರ್ತಿಮಾಡಲಾಗುವ ಹುದ್ದೆಗಳ ಪೈಕಿ ಶೇಕಡ ೭೦ರಷ್ಟು ಈಗ ಯುದ್ಧ ಸೇವೆಗೆ ಮೀಸಲಿಟ್ಟಿದೆ. ವಿವಿಧ ಪ್ರಾಂತೀಯ ಸರ್ಕಾರಗಳು ಮೀಸಲಿಟ್ಟ ಖಾಲಿ ಹುದ್ದೆಗಳ ಪ್ರಮಾಣವನ್ನು ಕುರಿತ ಮಾಹಿತಿಯು ಸದ್ಯದಲ್ಲಿ ಲಭ್ಯವಾಗುತ್ತಿಲ್ಲ. ವರಿಷ್ಠ ಸೇವೆಗಳಲ್ಲಿ ಯುದ್ಧ ಮೀಸಲಾತಿಯ ಖಾಲಿ ಹುದ್ದೆಗಳಿಗಾಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದ್ದು

ತಾಂತ್ರಿಕವಲ್ಲದ ಸೇವೆಗಳಲ್ಲಿನ ಖಾಲಿ ಹುದ್ದೆಗಳಿಗೆ ಸಂಬಂಧಿಸಿ ೧೯೪೬ರ ಫೆಬ್ರವರಿ ೧೫ನೇ ತಾರೀಖನ್ನು ಮತ್ತು ತಾಂತ್ರಿಕ ಸೇವೆಗಳಲ್ಲಿನ ಖಾಲಿ ಹುದ್ದೆಗಳಿಗೆ ಸಂಬಂಧಿಸಿ ೧೯೪೬ರ ಏಪ್ರಿಲ್ ೧ನೇ ತಾರೀಖನ್ನೂ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ತಾರೀಖು ಎಂದು ನಿಗದಿಪಡಿಸಲಾಗಿದೆ. ತಾಂತ್ರಿಕ ಸೇವೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ಸಂದರ್ಶನ ನಡೆಸುತ್ತದೆ, ಮತ್ತು ಅಂತಿಮ ಆಯ್ಕೆಯನ್ನು ಮಾಡುತ್ತದೆ. ತಾಂತ್ರಿಕವಲ್ಲದ ಸೇವೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಕಮೀಷನ್ಡ್ ಅಧಿಕಾರಿಗಳನ್ನು ಭರ್ತಿಮಾಡಲು ಯುವಜನ ಇಲಾಖೆಯವರು ಬಳಸುವ ಪ್ರಕಾರದ ಆಯ್ಕೆ ಮಂಡಳಿಗಳು ಆಯ್ಕೆಮಾಡುತ್ತವೆ, ಮತ್ತು ಆ ತರುವಾಯ ಎಫ್.ಎಸ್.ಸಿ.ಯವರು ಅವರ ಸಂದರ್ಶನ ನಡೆಸುತ್ತಾರೆ ಮತ್ತು ಅಂತಿಮ ಆಯ್ಕೆಯನ್ನು ಮಾಡುತ್ತಾರೆ. ಅಧೀನ ಮತ್ತು ಕನಿಷ್ಠ ಸೇನೆಯಿಂದ ತೆಗೆದುಹಾಕಿದ ತರುವಾಯ ಆ ಮಾಜಿ ಸೈನಿಕರಿಂದ ಅರ್ಜಿಗಳನ್ನು ಸ್ವೀಕರಿಸಲು ಏರ್ಪಾಟು ಮಾಡಲಾಗಿದೆ.

## ೪೦೨
## ವೈಸ್‌ರೀಗಲ್ ಎಸ್ಟೇಟ್ ಡಿವಿಜನ್ನಿನಲ್ಲಿನ ಸಿಬ್ಬಂದಿ ವರ್ಗದ ಸೇವಾ ಷರತ್ತುಗಳು *

**೭೦. ಸರ್ದಾರ್ ಮಂಗಲ್ ಸಿಂಗ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೇ?

ಸಿಮ್ಲಾನಲ್ಲಿರುವ ಅಥವಾ ದಿಲ್ಲಿಯಲ್ಲಿರುವ ವೈಸ್‌ರೀಗಲ್ ಎಸ್ಟೇಟ್‌ಗಳಲ್ಲಿ ೧೯೪೬ನೆಯ ಜುಲೈ ೧೪ನೇ ತಾರೀಖಿಗೆ ಮುಂಚೆ ನಿಯೋಜಿತರಾಗುತ್ತಿದ್ದ ಲಿಪಿಕ ಮತ್ತು ಅಧೀನ ಸಿಬ್ಬಂದಿ ವರ್ಗದವರ ಸೇವಾ ಷರತ್ತುಗಳನ್ನು ಉದಾ: ಅವರ ವೇತನಶ್ರೇಣಿ, ನೀಡಲಾಗುವ ಇತರ ರಿಯಾಯಿತಿಗಳು ಮತ್ತು ಕರ್ತವ್ಯದ ಸ್ಥಳ ಮುಂತಾದವುಗಳನ್ನು ಕುರಿತು ವಿವರಗಳನ್ನು ತಿಳಿಸುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದನದ ಮುಂದೆ ವಿವರಣೆಯನ್ನು ಮಂಡಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೭೪.

## ವಿವರಣ ಪಟ್ಟಿ

(ಪ್ರ.ಸಂ. ೭೦ಕ್ಕೆ ಡಾ. ಅಂಬೇಡ್ಕರ್ ಉತ್ತರ ಕ್ರ.ಸಂ. ೪೦೨ ನೋಡಿ)

| ಕ್ರ. ಸಂ. | ಹೆಸರು | ಪದನಾಮ | ವೇತನಶ್ರೇಣಿ | ವೈಸರೀಗಲ್ ಎಸ್ಟೇಟುಗಳಿಂದ ವರ್ಗಾವಣೆ ಯಾದಾಗ ವೇತನ ರೂ. | ಅನುಭವಿಸಿದ ರಿಯಾಯಿತಿ ಸ್ವರೂಪ | ಕರ್ತವ್ಯದ ಸ್ಥಳ |
|---|---|---|---|---|---|---|
| ೧. | ಶ್ರೀ ಹುಸೇನ್ ಅಲಿ | ನೈರ್ಮಲ್ಯ ಮೇಲ್ವಿಚಾರಕ | ೮೦-೭-೨೫೫ | ೨೪೧ | ಬಾಡಿಗೆರಹಿತ ವಸತಿ ಮತ್ತು ತೆರಿಗೆಗಳು, ನೀರಿನ ದರಗಳು ಮತ್ತು ದೀಪದ ವೆಚ್ಚದ ಸಂದಾಯದಿಂದ ವಿನಾಯಿತಿ | ನವದೆಹಲಿ |
| ೨. | ಶ್ರೀ ಶಿವಶರಣ ದಾಸ್ | ಕಟ್ಟಡ ಮೇಲ್ವಿಚಾರಕ | ೨೦೦-೧೦-೪೦೦ | ೩೪೦ | " | " |
| ೩. | ಶ್ರೀ ಜಿ.ಜಿ. ಮಾಥುರ್ | " | " | ೨೯೦ | " | ಸಿಮ್ಲಾ |
| ೪. | ಶ್ರೀ ಬಿ.ಸಿ. ಬ್ಯಾನರ್ಜಿ | " | " | ೨೦೦ | " | ಕಲ್ಕತ್ತ |
| ೫. | ಶ್ರೀ ಮೋಹನ್‌ಲಾಲ್ | ನಕ್ಷೆಗಾರ | ೬೦-೫-೧೫೦ | ೧೩೦ | " | ನವದೆಹಲಿ |
| ೬. | ಶ್ರೀ ಮಧೊ ನಾರಾಯಣ್ | ಉಪ ಮೇಲ್ವಿಚಾರಕ | ೭೫–೪೯೫–೫–೧೫೦ | ೧೩೫ | " | ಸಿಮ್ಲಾ |
| ೭. | ಶ್ರೀ ಪಿ.ಎನ್. ಚಟರ್ಜಿ | ವಿದ್ಯುತ್‌ಮೇಲ್ವಿಚಾರಕ | ೨೦೦-೧೦-೪೦೦ | ೪೦೦ | " | " |

೧. ನಿವೃತ್ತ ೨. ಮೃತರಾಗಿರುವುದರಿಂದ ೩. ನಿವೃತ್ತ ೪-೭ ವೈಸ್‌ರೀಗಲ್ ಎಸ್ಟೇಟು ವಿಭಾಗದಲ್ಲಿಲ್ಲದಿರುವುದರಿಂದ

# ೪೦೩
# ಜೋಧಪುರ್ ರೈಲ್ವೆಗೆ ಕೆಲಸದ ಸಮಯದ ನಿಬಂಧನೆಗಳನ್ನು ಅನ್ವಯಿಸುವ ವಿಚಾರ *

**೭೧. ಶೇಠ್ ಸುಖದೇವ್ :** ಅ) ಬ್ರಿಟಿಷ್ ಇಂಡಿಯಾದಲ್ಲಿ ಹಾದುಹೋಗುವ ಜೋಧಪುರ್ ರೈಲ್ವೆಗೆ ಕೆಲಸದ ತಾಸುಗಳ ನಿಬಂಧನೆಗಳು ಅನ್ವಯಿಸುತ್ತವೆಯೆ ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಆ) ಅ) ಪ್ರಶ್ನೆಗೆ ಉತ್ತರ ಹೌದು ಎಂದಾದರೆ, ೧೯೪೫ರ ಡಿಸೆಂಬರ್‌ನ ಇಂಡಿಯನ್ ಲೇಬರ್ ಗೆಜೆಟ್‌ನಲ್ಲಿ ಪ್ರಕಟಿಸಲಾದ ೧೯೪೧–೪೪ ಈ ಮೂರು ವರ್ಷಗಳ ರೈಲ್ವೆ ಕಾರ್ಮಿಕರ ಅಧಿಕಾರಿ ಹಾಗೂ ಪರಿವೀಕ್ಷಕ ವರದಿಯಲ್ಲಿ ಆ ಕುರಿತು ಯಾವುದೇ ಉಲ್ಲೇಖವನ್ನು ಏಕೆ ಮಾಡಿಲ್ಲ? ಮತ್ತು

ಇ) ಮಾನ್ಯ ಮಂತ್ರಿಗಳು ೧೯೪೧–೪೪ರ ಮೂರು ವರ್ಷಗಳ ಬಗ್ಗೆ ಪ್ರತ್ಯೇಕವಾಗಿ, ಜೋಧಪುರ್ ರೈಲ್ವೆಯ ಬ್ರಿಟಿಷ್ ಭಾಗಕ್ಕೆ ಸಂಬಂಧಪಟ್ಟ ಹಾಗೆ ಈ ಕೆಳಕಂಡ ಮಾಹಿತಿಯನ್ನು ತೋರಿಸುವ ವಿವರಣೆಯನ್ನು ಸದನದ ಮುಂದೆ ಮಂಡಿಸಬೇಕಾಗಿ ಪ್ರಾರ್ಥನೆ.

೧. ನಿಯೋಜಿತರಾದ ಸಿಬ್ಬಂದಿ ವರ್ಗದವರ ಸಂಖ್ಯೆ.

೨. ನಿಬಂಧನೆಗಳಿಂದ ಬಾಧಿತರಾದ ಸಿಬ್ಬಂದಿ ವರ್ಗದವರ ಸಂಖ್ಯೆ.

೩. ನಿರಂತರ ಕೆಲಸಗಾರರು ಎಂದು ವರ್ಗೀಕರಿಸಲಾದ ಸಿಬ್ಬಂದಿ ವರ್ಗದವರ ಸಂಖ್ಯೆ.

೪. ಅತ್ಯವಶ್ಯಕವಾಗಿ ಆಗಾಗ್ಗೆ ಮಾತ್ರ ನೇಮಕ ಆಗುವ ಕೆಲಸಗಾರರು ಎಂದು ವರ್ಗೀಕರಿಸಲಾದ ಸಿಬ್ಬಂದಿ ವರ್ಗದವರ ಸಂಖ್ಯೆ.

೫. ಹೊರತುಪಡಿಸಲಾದ ಸಿಬ್ಬಂದಿ ವರ್ಗದವರ ಸಂಖ್ಯೆ.

೬. ಕ್ಯಾಲೆಂಡರ್ ದಿನದ ವಿಶ್ರಾಂತಿ ಪಡೆಯುವ ಸಿಬ್ಬಂದಿ ವರ್ಗದವರ ಶೇಕಡಾವಾರು.

೭. ನಡೆಸಲಾದ ಪರಿವೀಕ್ಷಣೆಗಳ ಸಂಖ್ಯೆ.

೮. ಕಾರ್ಮಿಕ ಪರಿವೀಕ್ಷಕರು ವರ್ಗೀಕರಣವನ್ನು ಆಕ್ಷೇಪಿಸಿದ ಪ್ರಕರಣಗಳ ಸಂಖ್ಯೆ.

೯. ತೀರ್ಮಾನವನ್ನು ಕೋರಿ ಭಾರತದ ಸರ್ಕಾರದ ಕಾರ್ಮಿಕ ಇಲಾಖೆಗೆ ಉಲ್ಲೇಖಿಸಲಾದ ಸಂದೇಹಾಸ್ಪದ ಪ್ರಕರಣಗಳ ಸಂಖ್ಯೆ.

೧೦. ಪಾಳಿ ಕೆಲಸದ ಅವಧಿಯನ್ನು ಮೀರಿ ಕೆಲಸಮಾಡುವವರನ್ನು ಕಂಡುಹಿಡಿಯಲಾದ ಕೆಲಸಗಾರರ ಸಂಖ್ಯೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಉತ್ತರವು ನಕಾರಾತ್ಮಕವಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಮಾಹಿತಿ ಲಭ್ಯವಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೭೬

# ೪೦೪
# ರೈಲ್ವೆ ಗುತ್ತಿಗೆದಾರರ ಕಾರ್ಮಿಕರ ಮೇಲ್ವಿಚಾರಣೆಗೆ ಸಂಬಂಧಿಸಿದ ಶಾಸನಬದ್ಧ ನಿಯಮಗಳು *

**೭೨. ಸೇಠ್ ಸುಖದೇವ್ :** ಮಾನ್ಯ ಕಾರ್ಮಿಕ ಸದಸ್ಯರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರ ನೀಡುವರೆ?: ಅ) ನವೆಂಬರ್ ೧೯೪೫ರ ಭಾರತದ ಕಾರ್ಮಿಕ ಗೆಜೆಟ್‌ನಲ್ಲಿ ಪೇಮೆಂಟ್ ಆಫ್ ವೇಜಸ್ ಆಕ್ಟ್‌ನಡಿಯಲ್ಲಿ ನೇಮಕಗೊಂಡಿರುವ ಕಾರ್ಮಿಕ ಮೇಲ್ವಿಚಾರಕ ಸಂಸ್ಥೆಯು ರೈಲ್ವೆ ಗುತ್ತಿಗೆದಾರರು ನೇಮಿಸಿಕೊಂಡ ಕಾರ್ಮಿಕರ ಕೂಲಿ, ದಂಡ ಮತ್ತು ಕಡಿತಗಳ ವಿವರಗಳನ್ನೊಳಗೊಂಡ ದಾಖಲೆ ಪುಸ್ತಕವನ್ನು ಇಡುವ ಬಗ್ಗೆ ಕಾಯ್ದೆಬದ್ಧ ನಿಯಮಗಳಿಲ್ಲದೇ ಇರುವ ಕಾರಣ ಮೇಲ್ವಿಚಾರಣೆಯ ಕಾರ್ಯದಲ್ಲಿ ತೊಂದರೆಯುಂಟಾಗಿದೆಯೇ? ಮತ್ತು

ಆ) ಈ ಸಂಬಂಧದಲ್ಲಿ ಇರಬಹುದಾದ ಕಾಯ್ದೆಬದ್ಧ ನಿಯಮಗಳಿಗೆ ತಿದ್ದುಪಡಿ ಮಾಡುವ ವಿಚಾರವಿದೆಯೇ, ಹಾಗಿದ್ದರೆ ಯಾವಾಗ ಮತ್ತು ಹಾಗಿಲ್ಲದಿದ್ದರೆ ಏಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಈ ಪ್ರಶ್ನೆಗೆ ಉತ್ತರ ಸಕಾರಾತ್ಮಕವಾಗಿದೆ.

ಇ) ಈ ವಿಷಯ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೬ ಮಾರ್ಚ್ ೧೯೪೬. ಪುಟ ೧೯೯೮.

## ೪೦೫
## ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ವಿಚಾರಣಾ ಸಮಿತಿಯ ವರದಿಯ ಮಂಡನೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯರು) ಮಾನ್ಯರೆ, ೧೯೩೪ರ ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿಗಳನ್ನು ಸೂಚಿಸುವ ವಿಚಾರಣಾ ಸಮಿತಿಯ ವರದಿಯನ್ನು ಮಂಡಿಸುತ್ತಿದ್ದೇನೆ.

## ೪೦೬
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ನಿಯೋಜಿತರಾದ ಮತ್ತು ನವದೆಹಲಿಯ ಕಟ್ಟಡ ಕಂಟ್ರಾಕ್ಟರ್‌ಗಳಿಂದ ನೇಮಕಗೊಂಡಿರುವ ಕಾರ್ಮಿಕರ ವಸತಿ ಪರಿಸ್ಥಿತಿಗಳು **

**೮೬೭. ಶ್ರೀ ಅನಂತಶಯನಂ ಅಯ್ಯಂಗಾರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಕೆಳಕಂಡ ವಿಚಾರಗಳನ್ನು ತಿಳಿಸಬೇಕಾಗಿ ಪ್ರಾರ್ಥನೆ.

ಅ) ನವದೆಹಲಿಯ ಮತ್ತು ಆಸುಪಾಸಿನಲ್ಲಿ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಕೇಂದ್ರೀಯ ಲೋಕೋಪಯೋಗಿ ಇಲಾಖೆಯವರು ನೇರವಾಗಿ ಮತ್ತು ನವದೆಹಲಿಯ ಕಂಟ್ರಾಕ್ಟರ್‌ಗಳು ನಿಯೋಜಿಸಿದ ಕಾರ್ಮಿಕರ ಸಂಖ್ಯೆ.

ಆ) ಈ ಕಾರ್ಮಿಕರು ಗಾಳಿ ಬೆಳಕಿನ ವ್ಯವಸ್ಥೆಯಿಲ್ಲದೆ ವರ್ಷವಿಡೀ ಮಳೆ, ಬಿಸಿಲು ಮತ್ತು ಚಳಿಗಳಿಗೆ ತುತ್ತಾಗುವಂಥ ಕೀಳುಮಟ್ಟದ ಗುಡಿಸಲುಗಳಲ್ಲಿ ವಾಸಿಸುತ್ತಾರೆ ಎಂಬ ಸಂಗತಿಯು ನಿಜವೆ? ಮತ್ತು

ಇ) ಮೇಲ್ಕಂಡ ಆ)ಗೆ ಉತ್ತರವು ನಿಜ ಎಂದಾದರೆ ಅವರಿಗೆ ಅಗ್ಗದ ದರದಲ್ಲಿ ನಿರ್ಮಲವಾದ ವಸತಿಯನ್ನು ಒದಗಿಸುವ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸುತ್ತಾರೆ? ಈ ಬಗ್ಗೆ ಯಾವುದೇ ಪ್ರಸ್ತಾಪವೂ ಇಲ್ಲದಿದ್ದರೆ ಅದಕ್ಕೆ ಕಾರಣವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ನೇರವಾಗಿ ೧೨,೦೦೦ ಜನ ಕಾರ್ಮಿಕರು ನೇಮಕಗೊಂಡಿದ್ದಾರೆ. ಆದರೆ ಕಟ್ಟಡ ಕಂಟ್ರಾಕ್ಟರ್‌ಗಳು ನೇಮಿಸಿಕೊಂಡ ಕಾರ್ಮಿಕರ ಸಂಖ್ಯೆಯು ಆಯಾ ಕಾಮಗಾರಿಗಳಿಗನುಸಾರ ಬದಲಾವಣೆಯಾಗುತ್ತಿರುತ್ತದೆ.

ಆ) ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಕಾರ್ಮಿಕರ ಪೈಕಿ ಕೆಲವರಿಗೆ ಸರ್ಕಾರಿ ವಸತಿಗೃಹಗಳನ್ನು ಹಂಚಲಾಗಿದೆ. ಉಳಿದವರು ತಮ್ಮ ವಸತಿ ವ್ಯವಸ್ಥೆಯನ್ನು ತಾವೇ ಮಾಡಿಕೊಂಡಿದ್ದಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ३, ೬ ಮಾರ್ಚ್ ೧೯೪೬. ಪುಟ ೧೯೯

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ३, ೬ ಮಾರ್ಚ್ ೧೯೪೬. ಪುಟ ೨೨೨೪.

ಇನ್ನು ಕಂಟ್ರಾಕ್ಟರ್‌ಗಳು ನಿಯೋಜಿಸಿಕೊಂಡ ಕಾರ್ಮಿಕರ ವಿಚಾರ. ಸುಮಾರು ೯.೦೦೦ ಜನ ಕಾರ್ಮಿಕರು ದೆಹಲಿಯ ನಗರ ಪ್ರದೇಶದಲ್ಲಿರುವ ತಮ್ಮ ಮನೆಗಳಲ್ಲಿ ವಾಸಿಸುತ್ತಾರೆ. ಉಳಿದ ಕಾರ್ಮಿಕರಲ್ಲಿ ಅನೇಕರು ತಮ್ಮ ಗ್ರಾಮಗಳಿಂದ ಪ್ರತಿದಿನ ಕೆಲಸಕ್ಕೆ ಬಂದುಹೋಗುತ್ತಾರೆ ಅಥವಾ ಕಾಮಗಾರಿ ನಡೆಯುವ ಸ್ಥಳದಲ್ಲಿ ಕಂಟ್ರಾಕ್ಟರ್‌ಗಳು ಒದಗಿಸಿದ ಚಳಿಗಾಳಿ, ಮಳೆಗಳಿಂದ ಒಂದಿಷ್ಟು ರಕ್ಷಣೆ ಸಿಗುವಂಥ ಹೊದಿಕೆ ಮನೆಗಳಲ್ಲಿ ವಾಸಮಾಡುತ್ತಾರೆ.

ಇ) ಕಂಟ್ರಾಕ್ಟರ್ ನಿಯೋಜಿಸಿಕೊಂಡ ಕಾರ್ಮಿಕರ ಸಲುವಾಗಿ ಖಾಯಂ ವಸತಿ ಒದಗಿಸುವ ಪ್ರಶ್ನೆಯು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಕಾರ್ಮಿಕರು ದೆಹಲಿಗೆ ಸಮೀಪದ ಯಾವ ಹಳ್ಳಿಗಳಿಂದ ಕೆಲಸಕ್ಕೆ ಬರುತ್ತಾರೊ ಆ ಹಳ್ಳಿಗಳಲ್ಲಿ ಮಾದರಿ ಬಸ್ತಿಗಳನ್ನು ಅಭಿವೃದ್ಧಿಪಡಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ.

## ೪೦೭
## “ಅಭ್ರಕ”ವನ್ನು ಕೇಂದ್ರೀಯ ವಿಷಯವನ್ನಾಗಿ ಮಾಡುವುದು*

**೮೯೦. ಸತ್ಯನಾರಾಯಣ ಸಿನ್ಹಾ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೆಳಕಂಡ ವಿಚಾರವನ್ನು ತಿಳಿಸಬೇಕಾಗಿ ಪ್ರಾರ್ಥನೆ. ಬ್ರಿಟಿಷ್ ಸಂಸತ್ತು, ಅಭ್ರಕವನ್ನು ಕೇಂದ್ರೀಯ ವಿಷಯವಾಗುವ ಹಾಗೆ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್‌ನ್ನು ತಿದ್ದುಪಡಿ ಮಾಡಲಿದೆಯೆಂಬ ಸಂಗತಿಯು ನಿಜವೆ?

ಆ) ನಿಜವಾಗಿದ್ದರೆ, ಇನ್ನೇನು ಕೆಲವೇ ವಾರಗಳಲ್ಲಿ ಬಿಹಾರ್‌ನಲ್ಲಿ ಪ್ರಾತಿನಿಧಿಕ ಸರ್ಕಾರವು ರಚನೆಯಾಗಲಿರುವ ನಿಮಿತ್ತ ಅಲ್ಲಿಯವರೆಗೂ ಸದರಿ ಪ್ರಸ್ತಾವವನ್ನು ಮಾನ್ಯ ಮಂತ್ರಿಗಳು ಮುಂದೆಹಾಕುವ ಏರ್ಪಾಟು ಮಾಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಯುದ್ಧದಿಂದ ಶಾಂತಿಯುತ ಬದಲಾವಣೆಯಾಗುವ ಸಂಕ್ರಮಣದ ಅವಧಿಯಲ್ಲಿ ಅಭ್ರಕ ಸೇರಿದಂತೆ ಕೆಲವು ವಿಷಯಗಳ ಸಂಬಂಧದಲ್ಲಿ ಶಾಸನ ರಚಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡುವ ಹಾಗೆ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ತಿದ್ದುಪಡಿಮಾಡಲು ಬ್ರಿಟಿಷ್ ಸಂಸತ್ತಿನಲ್ಲಿ ಒಂದು ವಿಧೇಯಕವನ್ನು ಮಂಡಿಸಲಾಗಿದೆ.

ಆ) ದೀರ್ಘಾವಧಿಯ ಸಲುವಾಗಿ, ಈ ಸರ್ಕಾರ, ಅಭ್ರಕದ ಸಂಬಂಧವಾದ ಕೆಲವು ಅಂಶಗಳನ್ನು ಕೇಂದ್ರದ ನಿಯಂತ್ರಣಕ್ಕೆ ಒಳಪಡಿಸುವ ಉದ್ದೇಶದಿಂದ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ೧ನೇ ಪಟ್ಟಿಯ ೩೬ನೇ ಬಾಬಿಗೆ ಸಂಬಂಧಪಟ್ಟ ಹಾಗೆ ಈ ಸದನದಲ್ಲಿ ಶಾಸನವನ್ನು ಮಂಡಿಸುವ ವಿಚಾರವನ್ನು ದೀರ್ಘಾವಧಿ ಕ್ರಮವಾಗಿ ಸರ್ಕಾರವು ಪರಿಶೀಲಿಸುತ್ತಿದೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೧೨ ಮಾರ್ಚ್ ೧೯೪೬. ಪುಟ ೨೨೩೬

# ೪೦೮
# ಅಲಿಗಡ್‌ನಲ್ಲಿರುವ ಸರ್ಕಾರಿ ಮುದ್ರಣಾಲಯದ ನೌಕರರ ಕುಂದುಕೊರತೆಗಳು*

**೮೯೬. ಪಂಡಿತ ಶ್ರೀ ಕೃಷ್ಣದತ್ತ ಪಲಿವಾಲ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

ಅ) ಅಲಿಗರ್ಢ್‌ನಲ್ಲಿರುವ ಸರ್ಕಾರಿ ಮುದ್ರಣಾಲಯದ ನೌಕರರು ಮುಷ್ಕರದ ನೋಟೀಸು ಕೊಟ್ಟಿದ್ದಾರೆಯೆ? ಕೊಟ್ಟಿದ್ದರೆ, ಅವರ ಕುಂದುಕೊರತೆಗಳೇನು? ಬೇಡಿಕೆಗಳೇನು?

ಆ) ಅವರಿಗೆ ಕನಿಷ್ಠ ಜೀವನ ಮಜೂರಿಯನ್ನು ಮಂಜೂರು ಮಾಡಲು ಸರ್ಕಾರ ಆಲೋಚಿಸುತ್ತಿದೆಯೆ? ಹಾಗಿದ್ದರೆ ಯಾವಾಗ ಮತ್ತು ಎಷ್ಟು?

ಇ) ಸ್ನಾನದ ಸೌಕರ್ಯ, ಹೊರಾಂಗಣ ಆಟಗಳು, ಮಕ್ಕಳ ವಿದ್ಯಾಭ್ಯಾಸ, ವಸತಿ ವ್ಯವಸ್ಥೆ ಮತ್ತು ವೈದ್ಯಕೀಯ ಸಹಾಯ ಮುಂತಾದ ಬಗ್ಗೆ ಸೌಕರ್ಯಗಳ ವಿವರಣೆಗಳೇನು? ಮತ್ತು

ಈ) ಪ್ರತಿವಾರಕ್ಕೆ ಅವರ ಕೆಲಸದ ಘಂಟೆಗಳೆಷ್ಟು? ಮತ್ತು ಈ ಘಂಟೆಗಳನ್ನು ವಾರಕ್ಕೆ ೪೦ ಘಂಟೆಗಳಿಗೆ ಮಟ್ಟಿಗೆ ಇಳಿಸುವ ವಿಚಾರ ಸರ್ಕಾರಕ್ಕಿದೆಯೆ?

ಉ) ದೆಹಲಿ ಪ್ರೆಸ್‌ನ ಮತ್ತು ಇತರ ಸರ್ಕಾರಿ ಇಲಾಖೆಗಳ ನೌಕರರು ಪಡೆಯುತ್ತಿರುವ ರಿಯಾಯಿತಿ ದರಗಳಿಗೆ ಸಮಾನವಾದ ರಿಯಾಯಿತಿ ದರಗಳಲ್ಲಿ ಅವರಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಸರ್ಕಾರ ಆಲೋಚಿಸಿದೆಯೆ?

ಊ) ಈಗಿನ ತುಂಡು ಮಜೂರಿ ಪದ್ಧತಿಯನ್ನು ರದ್ದುಗೊಳಿಸಿ ನೌಕರರು ಈಗ ಗಳಿಸುತ್ತಿರುವ ಮಜೂರಿಗಳನ್ನು ಆಧರಿಸಿ ಮಾಸಿಕ ವೇತನಪದ್ಧತಿಯನ್ನು ಪ್ರಾರಂಭಿಸುವ ವಿಚಾರ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಅವರ ಕುಂದುಕೊರತೆಗಳು ಕೆಳಕಂಡಂತಿವೆ:

೧. ಗೋಧಿ ಪಡಿತರ ಪ್ರಮಾಣದಲ್ಲಿ ಉತ್ತರ ಪ್ರದೇಶ ಸರ್ಕಾರವು ಮಾಡಿದ ಕಡಿತ.

೨. ವೇತನ ಮತ್ತು ಶ್ರೇಣಿಗಳ ಪರಿಷ್ಕರಣ.

೩. ದೆಹಲಿಯಲ್ಲಿನ ಸರ್ಕಾರಿ ನೌಕರರಿಗೆ ಕೊಡಲಾಗುವ ರಿಯಾಯಿತಿಗಳ ಮಾದರಿಯಲ್ಲಿ ದರಗಳಲ್ಲಿ ಆಹಾರ ಧಾನ್ಯಗಳ ಸರಬರಾಜು.

೪. ತುಂಡು ದರಗಳ ರದ್ದಿಯಾತಿ.

೫. ಕೆಲಸದ ಅವಧಿಯ ಪರಿಷ್ಕರಣ ಮತ್ತು

೬. ವಸತಿ ವ್ಯವಸ್ಥೆ.

ಮುಷ್ಕರಕ್ಕೆ ನೇರ ಕಾರಣವೆಂದರೆ ಗೋಧಿ ಪಡಿತರ ಪ್ರಮಾಣದಲ್ಲಿ ಕಡಿತ ಮಾಡಿದ್ದು.

ಆ) ಇದು ಸಾಮಾನ್ಯ ಸ್ವರೂಪದ ಪ್ರಶ್ನೆಯಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೧೨ ಮಾರ್ಚ್ ೧೯೪೬. ಪುಟ ೨೨೩೮

ಇ) ಹೊರಾಂಗಣ ಆಟಗಳು ಮತ್ತು ವೈದ್ಯಕೀಯ ಸಹಾಯ ಇವುಗಳ ಹೊರತಾಗಿ ಸದ್ಯಕ್ಕೆ ಯಾವುದೇ ಇತರ ಸೌಕರ್ಯಗಳನ್ನು ಒದಗಿಸಲಾಗುತ್ತಿಲ್ಲ. ಅವುಗಳನ್ನು ಒದಗಿಸುವ ವಿಚಾರ ಪರಿಶೀಲನೆಯಲ್ಲಿದೆ.

ಈ) ವಾರದ ಕೆಲಸದ ೪೮ ಅವಧಿ ಗಂಟೆಗಳು ಇವುಗಳನ್ನು ಕಡಿಮೆಮಾಡುವುದು ಸಮಂಜಸವೇ, ಅಲ್ಲವೇ ಎಂಬ ವಿಚಾರವನ್ನು ಪರಿಶೀಲಿಸಲಾಗುತ್ತಿದೆ.

ಉ) ಇಲ್ಲ, ಅಲಿಗಢ್ ಪ್ರೆಸ್‌ನ ನೌಕರರು ಉತ್ತರ ಪ್ರದೇಶ ಸರ್ಕಾರದ ಆದೇಶಗಳಿಗನುಸಾರ ರಿಯಾಯಿತಿ ದರಗಳಲ್ಲಿ ಆಹಾರ ಧಾನ್ಯಗಳನ್ನು ಪಡೆಯುತ್ತಿದ್ದಾರೆ.

ಊ) ಎರಡು ತುಂಡು ದರಗಳ ಬದಲಾಗಿ ಸಂದರ್ಭಗಳು ಒದಗಿಬಂದ ಹಾಗೆಲ್ಲ ಕಾಲಬದ್ಧವೇತನ ಶ್ರೇಣಿಗಳನ್ನು ಪ್ರಾರಂಭಿಸುವುದೇ ಸರ್ಕಾರದ ಪ್ರಸ್ತುತ ಕಾರ್ಯನೀತಿಯಾಗಿದೆ.

## ೪೦೯
## ಭಾರತ ಸರ್ಕಾರ ಮುದ್ರಣಾಲಯಗಳಲ್ಲಿ ಕೆಲವು ಜ್ಯೂನಿಯರ್ ರೀಡರ್‌ಗಳ ಪದೋನ್ನತಿಗಳು*

**೯೦೦. ಹಾಜಿ ಚೌಧರಿ ಮಹಮ್ಮದ್ ಇಸ್ಮಾಯಿಲ್‌ಖಾನ್ :** ಅ) ಭಾರತ ಸರ್ಕಾರದ ಮುದ್ರಣಾಲಯದ ಜ್ಯೂನಿಯರ್ ರೀಡರ್‌ಗಳಿಗೆ ಯಾವ ಆಧಾರದ ಮೇಲೆ ಸೀನಿಯರ್ ರೀಡರ್ ಹುದ್ದೆಗಳಿಗೆ ಪದೋನ್ನತಿ ನೀಡಲಾಗುತ್ತಿದೆಯೆಂಬ ಸಂಗತಿಯನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಿಳಿಸುವರೆ?

ಆ) ರೀಡರ್‌ಷಿಪ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಈ ಮುಂಚೆ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಕಿರಿಯ ರೀಟರ್ ವರ್ಗದಲ್ಲಿ ನೇಮಕಗೊಂಡವರನ್ನು ಆವರ್ಗದಲ್ಲಿ ಮಾತ್ರವಲ್ಲದೆ ಹಿರಿಯ ರೀಡರ್ ವರ್ಗದಲ್ಲಿ ಕೂಡ ಕಡೆಗಣಿಸಿ ಅವರ ನಂತರ ನೇಮಕವಾದ ಕಿರಿಯ ರೀಡರ್‌ಗಳಿಗೆ ಬಡ್ತಿಯನ್ನು ನೀಡಿರುವುದು ವಾಸ್ತವವೆ?

ಇ) ಕಿರಿಯ ರೀಡರ್‌ಗಳಾಗಿ ಹೆಚ್ಚಿನ ಅವಧಿಯ ಸೇವೆಯನ್ನು ಸಲ್ಲಿಸಿರುವ ವರ್ಗ ಕಾಪಿಹೋಲ್ಡರ್‌ಗಳಾಗಿ ಅವರಿಗಿಂತ ಕಡಿಮೆ ಅವಧಿಯ ಸೇವೆಯನ್ನು ಸಲ್ಲಿಸಿರುವ ಮತ್ತು ರೀಡರ್‌ಷಿಪ್ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವ ಕೆಲವು ಕಿರಿಯ ರೀಡರ್‌ಗಳಿಗಿಂತ ಕಿರಿಯರೆಂದು ಪರಿಗಣಿಸಲಾಗಿರುವುದು ವಾಸ್ತವವೆ?

ಈ) ನಕಲು ಮಾಡುವವರ ಹುದ್ದೆಗಳಲ್ಲಿ ಹೆಚ್ಚಿನ ಅವಧಿಯ ಸೇವೆಯನ್ನು ಸಲ್ಲಿಸಿರುವರನ್ನು ಸೀನಿಯರ್ ಎಂದು ಪರಿಗಣಿಸಲಾಗಿದೆಯೆಂಬ ಸಂಗತಿ ನಿಜವೆ?

ಉ) ಸೀನಿಯರ್ ರೀಡರ್ ಹುದ್ದೆಗಳನ್ನು ಭರ್ತಿಮಾಡುವಲ್ಲಿ ಜೂನಿಯರ್ ರೀಡರ್ ಗ್ರೇಡ್‌ನಲ್ಲಿ ಒಟ್ಟು ಹೆಚ್ಚಿನ ಅವಧಿಯ ಸೇವೆಯನ್ನು ಸಲ್ಲಿಸಿದವರನ್ನು ಪರಿಗಣಿಸುವುದು ಸೂಕ್ತವೆಂದು ಮಾನ್ಯ ಮಂತ್ರಿಗಳು ಪರಿಶೀಲಿಸುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೧೨ ಮಾರ್ಚ್ ೧೯೪೬. ಪುಟ ೨೨೪೦

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) "ಆಯ್ಕೆ ಹುದ್ದೆ" ಎಂದು ಪರಿಗಣಿಸಲಾಗಿರುವ ಹೆಡ್ ರೀಡರ್ ಹುದ್ದೆ ಒಂದನ್ನು ಹೊರತುಪಡಿಸಿ, ರೀಡರುಗಳಿಗೆ ಒಂದು ಗ್ರೇಡ್‌ನಿಂದ ಇನ್ನೊಂದು ಗ್ರೇಡ್‌ಗೆ ಪದೋನ್ನತಿ ನೀಡಲು ಆಧಾರವೆಂದರೆ ಸೀನಿಯಾರಿಟಿ ಮತ್ತು ಯೋಗ್ಯತೆ.

ಆ) ಮತ್ತು ಇ) ಹೌದು.

ಪರೀಕ್ಷೆಯು ಅರ್ಹತಾ ಪರೀಕ್ಷೆಯಾಗಿರುವ ನಿಮಿತ್ತ, ರೀಡರ್‌ಗಳಾಗಿ ನೇಮಕಾತಿ ಮಾಡುವ ಉದ್ದೇಶಕ್ಕಾಗಿ, ಜ್ಯೇಷ್ಠತೆಯನ್ನು ನಿರ್ಧರಿಸುವುದು ಸೇವಾ ಅವಧಿಯೇ ಹೊರತು ಪರೀಕ್ಷೆಯಲ್ಲಿ ತೇರ್ಗಡೆಯಾದ ದಿನಾಂಕವಲ್ಲ.

ಈ) ಹೌದು, ೧೯೪೩ರ ಏಪ್ರಿಲ್‌ವರೆಗೆ. ಆ ತರುವಾಯ ಜ್ಯೇಷ್ಠತೆಯು ನಿರಂತರಸೇವೆಯ ಮೇಲೆ ನಿರ್ಧರಿಸಲಾಗುತ್ತದೆ.

ಉ) ಮೇಲಿನ (ಅ) ವಿಭಾಗದಲ್ಲಿ ಹೇಳಿದಂತೆ, ಇದೇ ಕ್ರಮವನ್ನೇ ಅನುಸರಿಸಲಾಗುತ್ತಿದೆ. ಆದರೆ, ಕೆಲವು ಆಯ್ಕೆವರ್ಗಕ್ಕೆ ಸೇರಿದ ಮುಖ್ಯ ರೀಡರ್‌ಗಳ ಹುದ್ದೆಯನ್ನು ಭರ್ತಿಮಾಡುವಲ್ಲಿ ಅರ್ಹತೆಯನ್ನು ಮಾತ್ರ ಆಧಾರವನ್ನಾಗಿ ಪರಿಗಣಿಸಬೇಕಾಗುತ್ತದೆ.

## ೪೧೦
## ನವದೆಹಲಿಯಲ್ಲಿರುವ ಸರ್ಕಾರಿ ಮುದ್ರಣಾಲಯದಲ್ಲಿ ಮುಸ್ಲಿಮ್ ಸೆಕ್ಷನ್ ಹೋಲ್ಡರ್‌ಗಳು ಮತ್ತು ಓವರ್‌ಸೀಯರ್‌ಗಳು *

**೯೦೪, ಹಾಜಿ ಚೌಧರಿ ಮಹಮ್ಮದ್ ಇಸ್ಮಾಯಿಲ್ ಖಾನ್ :** ಅ) ನವದೆಹಲಿಯಲ್ಲಿರುವ ಸರ್ಕಾರಿ ಮುದ್ರಣಾಲಯದಲ್ಲಿ ನಿಯೋಜಿತರಾದ ಖಾಯಂ ಮತ್ತು ಹಂಗಾಮಿ ಓವರ್‌ಸೀಯರ್‌ಗಳು ಮತ್ತು ಸೆಕ್ಷನ್ ಹೋಲ್ಡರ್‌ಗಳ ಒಟ್ಟು ಸಂಖ್ಯೆಯೆಷ್ಟು? ಈಗ ಆ ಪೈಕಿ ಮುಸ್ಲಿಮರೆಷ್ಟು ಎಂಬ ಸಂಗತಿಯನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಿಳಿಸುವರೆ?

ಆ) ಸದರಿ ಪ್ರೆಸ್‌ಗಳಲ್ಲಿ ವಿವಿಧ ಓವರ್‌ಸೀಯರ್‌ಗಳ ಕರ್ತವ್ಯಗಳೇನು, ಕೆಲಸಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೭ ಜನ ಓವರ್‌ಸೀಯರ್‌ಗಳು ಮತ್ತು ೧೨ ಜನ ಸೆಕ್ಷನ್ ಹೋಲ್ಡರುಗಳು. ಏಳು ಜನ ಓವರ್‌ಸೀಯರ್‌ಗಳ ಪೈಕಿ ಇಬ್ಬರು ಮುಸ್ಲಿಮರು. ಒಂದು ಹುದ್ದೆ ತೆರವಾಗಿದೆ. ಸೆಕ್ಷನ್ ಹೋಲ್ಡರ್‌ಗಳ ೧೨ ಹುದ್ದೆಗಳ ಪೈಕಿ ನಾಲ್ವರು ಮುಸ್ಲಿಮರು.

ಆ) ಓವರ್‌ಸೀಯರ್ ಕೆಳಕಂಡ ಕಾರ್ಯಗಳ ಬಗ್ಗೆ ಸಂಪೂರ್ಣ ಜವಾಬ್ದಾರನಾಗಿರುತ್ತಾನೆ.

೧. ತನ್ನ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಕಾರ್ಯದ ಗುಣಮಟ್ಟ ಮತ್ತು ಪ್ರಮಾಣಗಳ ಪಾಲನೆ.

೨. ತನ್ನ ಅಧೀನದಲ್ಲಿರುವ ವಿಭಾಗಗಳು ಸಂಪೂರ್ಣವಾಗಿ ಕಾರ್ಯನಿರತವಾಗಿರುವಂತೆ ನೋಡಿಕೊಳ್ಳುವುದು.

೩. ಕಾರ್ಯನಿರ್ವಹಣೆಯಲ್ಲಿ ಶೀಘ್ರತೆ ಮತ್ತು ಮಿತಿವ್ಯಯಗಳನ್ನು ಸಾಧಿಸುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೧೨ ಮಾರ್ಚ್ ೧೯೪೬. ಪುಟ ೨೨೪೨.

೪. ಎಲ್ಲ ಓವರ್‌ಟೈಮ್ ಕೋರಿಕೆಗಳ ಲಕ್ಷ್ಯಪೂರ್ವಕ ಪರೀಕ್ಷೆ ಮತ್ತು

೫. ಕಾರ್ಮಿಕರಲ್ಲಿ ಕೆಲಸವು ಸಮಾನವಾಗಿ ಹಂಚಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.

ಒಬ್ಬ ತಾಂತ್ರಿಕೇತರ ಓವರ್‌ಸೀಯರ್, ಮುದ್ರಣಾಯದಲ್ಲಿ ನಿರ್ವಹಿಸಲಾದ ಎಲ್ಲಾ ಕಾರ್ಯಗಳಲ್ಲಿ ರಹಸ್ಯ ಮತ್ತು ಗೌಪ್ಯವನ್ನು ಕಾಯ್ದುಕೊಳ್ಳುವಲ್ಲಿ ಮತ್ತು ಈ ವಿಷಯದಲ್ಲಿ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮಾಡಲು ಜವಾಬ್ದಾರನಾಗಿರುತ್ತಾನೆ.

## ೪೧೧
## ಅಫಿಷಿಯೇಟಿಂಗ್ ಸೂಪರಿಂಟೆಂಡೆಂಟ್ ಇಂಜಿನಿಯರ್‌ರಾಗಿ ರಾಯ್‌ಸಾಹೆಬ್ ಸಿ.ಪಿ. ಮಲ್ಲಿಕ್ ಅವರ ಪದೋನ್ನತಿ*

**೯೦೭. ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ಅ) ರಾಯ್‌ಸಾಹೇಬ್ ಸಿ.ಪಿ. ಮಲ್ಲಿಕ್ ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಕಾರ್ಯವನ್ನು ನಿರ್ವಹಿಸುತ್ತಿರುವ ವಿಚಾರದಲ್ಲಿ, ೧೯೪೬ರ ಫೆಬ್ರವರಿ ೨೮ನೇ ತಾರೀಖಿನ ಚುಕ್ಕೆಗುರುತಿನ ಪ್ರಶ್ನೆಗೆ ತಾವು ನೀಡಿದ ಉತ್ತರಕ್ಕೆ ಸಂಬಂಧಿಸಿದ ಹಾಗೆ, ನೇಮಕಾತಿಯಿಲ್ಲದೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರನ್ನು ಕಾರ್ಯನಿರ್ವಹಿಸುವಂತೆ ಆಜ್ಞಾಪಿಸುವುದರ ಔಚಿತ್ಯವೇನು ಎಂದು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಿಳಿಸುವರೆ?

ಆ) ಹಾಗೆ ಆಜ್ಞಾಪಿಸಲಾದ ವ್ಯಕ್ತಿಯು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿರತಕ್ಕ ತನ್ನ ಮೂಲ ನೇಮಕಾತಿಯ ಕರ್ತವ್ಯಗಳನ್ನು ನೆರವೇರಿಸುತ್ತಿರುರುವನೆ? ಹಾಗಿದ್ದರೆ, ಆತನು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ತನ್ನ ವರದಿಗಳನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿರುವ ತನಕ ಸಾದರಪಡಿಸುತ್ತಿವನೆ? ಇಲ್ಲದಿದ್ದರೆ, ಆತನು ವರದಿಗಳನ್ನು ಯಾರಿಗೆ ಕಳಿಸುತ್ತಾನೆ? ಇಲ್ಲದಿದ್ದರೆ, ಮಾನ್ಯ ಮಂತ್ರಿಗಳು ನೇಮಕಾತಿ ಮತ್ತು ಕಾರ್ಯನಿರ್ವಹಣೆ ಇವುಗಳ ನಡುವಿನ ವ್ಯತ್ಯಾಸವನ್ನು ವಿವರಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಸದರಿ ವ್ಯವಸ್ಥೆಯ ಅರ್ಥವೆಂದರೆ ಆ ಅಧಿಕಾರಿಯು ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಯ ವೇತನವನ್ನು ಪಡೆಯುತ್ತಿಲ್ಲ. ಆದರೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ತನ್ನ ಸ್ವಂತ ಕರ್ತವ್ಯಗಳನ್ನು ನಿರ್ವಹಿಸುತ್ತ ಹೆಚ್ಚಿಗೆಯಾಗಿ ಮೇಲಿನ ಹುದ್ದೆಯ ಮಾಮೂಲು ಕರ್ತವ್ಯಗಳ ಚಾಲ್ತಿ ಹೊಣೆಯನ್ನು ಹೊಂದಿರುವ ಕಾರಣ ಒಂದಿಷ್ಟು ಹೆಚ್ಚಿನ ಭತ್ಯೆಯನ್ನು ಪಡೆಯುತ್ತಾನೆ, ಅಷ್ಟೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಅವನು ಸಲ್ಲಿಸತಕ್ಕ ವರದಿಗಳನ್ನು ತನ್ನ ಮೇಲಧಿಕಾರಿಗೆ ಅಂದರೆ ಚೀಫ್ ಇಂಜಿನಿಯರ್‌ಗೆ ಒಪ್ಪಿಸುತ್ತಾನೆ. ಈ ಏರ್ಪಾಡಿಗೆ ಆಡಳಿತ ನಿಯಮಾವಳಿ ಹಾಗೂ ರೀತಿ ರಿವಾಜಿನ ಪೂರ್ಣ ಅನುಮೋದನೆಯುಂಟು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೧೨ ಮಾರ್ಚ್ ೧೯೪೬. ಪುಟ ೨೨೪೪

# ೪೧೨
# ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತ ವಿಭಾಗದ ಕೆಲವು ಹುದ್ದೆಗಳನ್ನು ತುಂಬಲು ಮುಸ್ಲಿಮರನ್ನು ಹುಡುಕುವ ಪ್ರಯತ್ನಗಳು*

**೯೦೮. ಡಾ॥ ಸರ್ ಜಿಯಾ ಉದ್ದೀನ್ ಅಹಮ್ಮದ್ :** ಅ) ಆಡಳಿತ ಅಧಿಕಾರಿಯ ಹುದ್ದೆಯನ್ನು ಅಂಗೀಕರಿಸಬೇಕಾಗಿ ಪರಿಶಿಷ್ಟ ವರ್ಗದ ಒಬ್ಬ ವ್ಯಕ್ತಿಯನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೋರಿದ್ದಾರೆ ಎಂಬ ಸಂಗತಿಯು ನಿಜವೆ? ಹಾಗಿದ್ದರೆ, ಆ ವ್ಯಕ್ತಿ ಯಾರು? ಕೋರಿಕೆಗೆ ಅವರ ಉತ್ತರವೇನು?

ಆ) ಮಾನ್ಯ ಮಂತ್ರಿಗಳು ಸೂಕ್ತ ಮುಸ್ಲಿಮ್ ವ್ಯಕ್ತಿಯೊಬ್ಬನನ್ನು ಹುಡುಕಲು ಯಾವುದೇ ಪ್ರಯತ್ನವನ್ನು ಮಾಡಿದ್ದರೆ?

ಇ) ಮಾನ್ಯ ಮಂತ್ರಿಗಳು ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಆಡಳಿತ ವಿಭಾಗದ ಎಲ್ಲ ಹುದ್ದೆಗಳಿಗೆ ಹಿಂದುಗಳನ್ನು ಮತ್ತು ಪರಿಶಿಷ್ಟ ಜಾತಿಯ ಸದಸ್ಯರನ್ನು ನೇಮಿಸಬೇಕೆಂದು ನಿರ್ಧರಿಸಿದ್ದಾರೆಯೆ? ಇಲ್ಲದಿದ್ದರೆ, ಆಡಳಿತ ಅಧಿಕಾರಿಯ ಹುದ್ದೆಯನ್ನು ತುಂಬಲು ಸೂಕ್ತ ಅಧಿಕಾರಿಯನ್ನು ಕಂಡುಹಿಡಿಯಲು ಅವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ. ಪ್ರಶ್ನೆಯು ಉದ್ಭವಿಸುವುದಿಲ್ಲ.

ಆ) ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಯಾವುದೇ ನಿರ್ಧಾರಕ್ಕೆ ಬಂದಿಲ್ಲ. ಸದರಿ ಹುದ್ದೆಯನ್ನು ತುಂಬುವ ವಿಚಾರ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೩, ೧೨ ಮಾರ್ಚ್ ೧೯೪೬. ಪುಟ ೨೨೪೪

# ೪೧೩
# ನಿರುದ್ಯೋಗಿ ಮಹಿಳೆಯರನ್ನು ಕಲ್ಲಿದ್ದಲು ಗಣಿಗಳಲ್ಲಿ ನಿಯೋಜಿಸುವುದು*

೧೦೦೮. **ಪ್ರೊ॥ ಎನ್.ಜಿ. ರಂಗಾ :** ಕಾರ್ಮಿಕ ಇಲಾಖೆಯ ಮಂತ್ರಿಗಳು ಕೆಳಕಂಡ ಸಂಗತಿಗಳನ್ನು ದಯವಿಟ್ಟು ತಿಳಿಸುವರೆ?

ಅ) ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದು ಈ ಫೆಬ್ರವರಿ ೧ನೇ ತಾರೀಖಿನಿಂದ ನಿರುದ್ಯೋಗಿಗಳಾಗಿರುವ ಮಹಿಳೆಯರಿಗೆ ಪರ್ಯಾಯ ಉದ್ಯೋಗವನ್ನು ಒದಗಿಸಿ ಕೊಡಲು ಯಾವುದಾದರೂ ಪ್ರಯತ್ನಗಳನ್ನು ಮಾಡಲಾಗಿದೆಯೆ? ಹಾಗಿದ್ದರೆ, ಆ ಪ್ರಯತ್ನಗಳೇನು?

ಆ) ನಿರುದ್ಯೋಗಿಗಳಾದ ಆ ಮಹಿಳೆಯರ ಪೈಕಿ ಕೆಲವರಿಗೆ ಮತ್ತೊಂದು ಕೆಲಸವನ್ನು ಒದಗಿಸಿಕೊಡಲು ಕಂಟ್ರಾಕ್ಟರ್‌ಗಳ ಸೇವೆಯನ್ನು ಬಳಸಿಕೊಳ್ಳಲು ಸರ್ಕಾರ ನಿಯೋಜಕರಿಗೆ ಅವಕಾಶಕೊಡುವುದೆ?

ಇ) ಕಂಟ್ರಾಕ್ಟರ್‌ಗಳು ಆ ಮಹಿಳೆಯರಿಗೆ ಸಂದಾಯಮಾಡುವ ಮಜೂರಿಯೆಷ್ಟು?

ಈ) ಆ ಮಹಿಳೆಯರ ಕುಟುಂಬಗಳ ಪುರುಷ ಸದಸ್ಯರು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಕಾರಣಕ್ಕಾಗಿ, ಈ ಮಹಿಳೆಯರ ಬಾಬತ್ತು ಆ ಕುಟುಂಬಗಳಿಗೆ ಒದಗಿಸಲಾಗುತ್ತಿದ್ದ ಹೆಚ್ಚುವರಿ ಅರ್ಧ ಸೇರು ಅಕ್ಕಿ, ಅರ್ಧ ಸೇರು ಉಚಿತ ಹಾಲು ಮತ್ತು ಅಕ್ಕಿ ಮತ್ತು ಬೇಳೆಗಳ ಖರೀದಿಯಲ್ಲಿ ರಿಯಾಯಿತಿ–ಇವುಗಳನ್ನು ಮುಂದುವರಿಸಲು ಸರ್ಕಾರವು ನಿರಾಕರಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೪೬೬ನೇ ಸಂಖ್ಯೆಯ ಚುಕ್ಕೆಗುರುತಿನ ಪ್ರಶ್ನೆಯ ಆ) ಭಾಗಕ್ಕೆ ೧೯೪೬ರ ಫೆಬ್ರವರಿ ೨೫ನೇ ತಾರೀಖಿನಂದು ನೀಡಲಾದ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನ ಸೆಳೆಯಲಾಗಿದೆ.

ಇ) ಕಂಟ್ರಾಕ್ಟರ್‌ಗಳನ್ನು ಕಟ್ಟಡ ಕಾಮಗಾರಿ, ಮರಳು ತುಂಬುವುದು ಮತ್ತು ಇಳಿಸುವುದು, ಇಟ್ಟಿಗೆ ತಯಾರಿಸುವುದೇ ಮುಂತಾದ ಕೆಲಸಗಳಿಗಾಗಿ ನೇಮಿಸಲಾಗುತ್ತಿದೆ, ಮತ್ತು ಗಣಿಗಳಲ್ಲಿ ಕೆಲಸ ಮಾಡದಂತೆ ಹೊರತುಪಡಿಸಲಾದ ಮಹಿಳೆಯರನ್ನು ಈ ಬಗೆಯ ಕಾಮಗಾರಿಗಳಲ್ಲಿ ನೇಮಿಸಲಾಗುತ್ತಿದೆ. ಇಂಥ ಕಾಮಗಾರಿಗಳನ್ನು ಯಾವಾಗಲೂ ಗುತ್ತಿಗೆಗೆ ಕೊಡಲಾಗುತ್ತದೆ.

ಈ) ಹಾಗೆ ನಿಯೋಜಿಸಲಾದ ಮಹಿಳೆಯರು ಪ್ರತಿ ಹಾಜರಿಗೆ ಎರಡು ಸೇರು ಉಚಿತ ಅಕ್ಕಿ ಮತ್ತು ಎರಡು ಆಣೆ ಬೋನಸ್ ಅಲ್ಲದೆ ದಿನ ಒಂದಕ್ಕೆ ೧೦ರಿಂದ ೧೨ ಆಣೆಗಳ ಮಜೂರಿಯನ್ನು ಗಳಿಸುತ್ತಾರೆ.

ಉ) ಕಲ್ಲಿದ್ದಲು ಗಣಿ ಕೆಲಸಗಾರರಿಗೆ ಮಾತ್ರ ಹೆಚ್ಚುವರಿ ಪಡಿತರ ರಿಯಾಯಿತಿಗಳನ್ನು ಕೊಡಲಾಗುತ್ತದೆ.

ಕಲ್ಲಿದ್ದಲು ಗಣಿಗಳಲ್ಲಿ ನೇಮಿಸಲಾದ ಮಹಿಳಾ ಕೆಲಸಗಾರರಿಗೆ ಗೊತ್ತುಪಡಿಸಲಾದ ಉಚಿತ ಹಾಲು ಸರಬರಾಜಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅವರನ್ನು ಗಣಿಗಳ ಆಳದಲ್ಲಿ ನಿಯೋಜಿಸುವ ಬಗ್ಗೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೩, ೬ನೇ ಮಾರ್ಚ್,೧೯೪೬. ಪುಟ ೨೪೫೮

ಇದ್ದ ನಿಷೇಧವನ್ನು ತೆಗೆದುಹಾಕಿದ ನಿಮಿತ್ತ ಪರಿಹಾರ ಕ್ರಮವಾಗಿ ಹಾಗೆ ಗೊತ್ತುಪಡಿಸಲಾಗಿತ್ತು. ೧೯೪೬ರ ಫೆಬ್ರವರಿ ೧ನೇ ತಾರೀಖಿನಿಂದ ನಿಷೇಧವನ್ನು ಪುನಃ ವಿಧಿಸಲಾಗಿರುವ ಕಾರಣ ಆ ರಿಯಾಯಿತಿ ಕೊನೆಗೊಂಡಿದೆ.

**ಪ್ರೊ॥ ಎನ್.ಜಿ. ರಂಗಾ :** ಅಕ್ಕಿ ಮತ್ತು ತೊಗರಿ ಬೇಳೆ ಖರೀದಿಯಲ್ಲಿ ರಿಯಾಯಿತಿಗೆ ಸಂಬಂಧಪಟ್ಟ ಹಾಗೆ, ಈ ಹಿಂದೆ, ಗಣಿಯ ಆಳದಲ್ಲಿ ಕೆಲಸ ಮಾಡುತ್ತಿದ್ದು ಈಗ ಭೂಮಿಯ ಮೇಲೆ ಕೆಲಸಮಾಡುತ್ತಿರುವ ಮಹಿಳೆಯರ ವಿಷಯದಲ್ಲಿ ಆ ರಿಯಾಯಿತಿಯನ್ನು ಏಕೆ ಮುಂದುವರಿಸಬಾರದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಹಿಂದೆಯೇ ಹೇಳಿದ ಪ್ರಕಾರ ಆ ರಿಯಾಯಿತಿಗಳನ್ನು ಆ ಮಹಿಳೆಯರು ಗಣಿಯ ಆಳದಲ್ಲಿ ಕೆಲಸ ಮಾಡುತ್ತಿದ್ದಾಗ ನೀಡಲಾಗುತ್ತಿತ್ತು. ಈಗ ಸದರಿ ನಿಷೇಧವನ್ನು ಪುನಃ ಜಾರಿಗೊಳಿಸಿದ ಮೇಲೆ ಆ ರಿಯಾಯಿತಿಗಳನ್ನು ನೀಡಲು ಯಾವ ಸಮರ್ಥನೆಯೂ ಇಲ್ಲ.

**ಪ್ರೊ॥ ಎನ್.ಜಿ. ರಂಗಾ :** ಈ ಕಂಟ್ರಾಕ್ಟರ್‌ಗಳ ಮನಸ್ವೀ ವರ್ತನೆಯಿಂದ ಕೆಲಸಗಾರರನ್ನು ರಕ್ಷಿಸುವ ಸಲುವಾಗಿ ಕೆಲವು ಉಪಾಯಗಳನ್ನು ಕೈಗೊಳ್ಳಲಾಗುತ್ತಿದೆಯೆಂದು ಆ ದಿನ ಮಾನ್ಯ ಮಂತ್ರಿಗಳ ಕಾರ್ಯದರ್ಶಿಗಳು ಹೇಳುತ್ತಿದ್ದರು. ಈ ರಕ್ಷಣೆ ಶೋಷಣೆ ಎಂದು ಭಾವಿಸಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆ ಹೇಳುವವರು ಯಾರು ಎಂದು ನನಗೆ ಗೊತ್ತಾಗಲಿಲ್ಲ.

**ಪ್ರೊ॥ ಎನ್.ಜಿ. ರಂಗಾ :** ಮಾನ್ಯ ಮಂತ್ರಿಗಳ ಕಾರ್ಯದರ್ಶಿ ಶ್ರೀ ಜೋಷಿಯವರು ಕಂಟ್ರಾಕ್ಟರ್‌ಗಳನ್ನು ಬರಮಾಡಿಕೊಂಡು ಅವರ ಮುಖಾಂತರ ಈ ಮಹಿಳಾ ಕೆಲಸಗಾರರನ್ನು ನಿಯೋಜಿಸಿಕೊಳ್ಳಲಾಗುತ್ತಿದೆಯೆಂದು ಹೇಳಿದ್ದರು. ಹೀಗಿರುವಾಗ, ಈ ಕಂಟ್ರಾಕ್ಟರ್‌ಗಳು ಮಹಿಳಾ ಕೆಲಸಗಾರರನ್ನು ಶೋಷಣೆಗೆ ಗುರಿಪಡಿಸದ ಹಾಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೆಂದು ನಾವು ಭಾವಿಸೋಣವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವಿಚಾರದಲ್ಲಿ ನಾನು ಹೇಳುವುದಿಷ್ಟೆ. ಮಾನ್ಯ ಸದಸ್ಯರು ನಿರ್ದಿಷ್ಟ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರವನ್ನು ತರಿಸಿ ಸದನಕ್ಕೆ ಒದಗಿಸುತ್ತೇನೆ.

**ದಿವಾನ್ ಚಮನ್‌ಲಾಲ್ :** ಕರಾರಿನಲ್ಲಿ ನ್ಯಾಯಸಮ್ಮತ ಮಂಜೂರಿಗಳನ್ನು ಕುರಿತು ನಿಯಮವನ್ನು ಸೇರಿಸುವಂತೆ ಸರ್ಕಾರವು ಮಾಡಿರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ತಿಳಿದುಬಂದಮಟ್ಟಿಗೆ, ಅಂಥ ನಿಯಮವನ್ನು ಕರಾರುಗಳಲ್ಲಿ ಸೇರಿಸಲಾಗಿದೆ.

**ಶ್ರೀ ಮನುಸುಬೇದಾರ್ :** ಕಂಟ್ರಾಕ್ಟರ್‌ಗಳನ್ನು ತೆಗೆದುಹಾಕಿ ಸರ್ಕಾರವೇ ನೇರವಾಗಿ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಪ್ರಶ್ನೆಯನ್ನು ಸಾಮಾನ್ಯವಾಗಿ ಪರಿಶೀಲಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತಿವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

**ದಿವಾನ್ ಚಮನ್‌ಲಾಲ್ :** ನನ್ನ ಪ್ರಶ್ನೆ ಮಹಿಳಾ ಕೆಲಸಗಾರರ ಬಗ್ಗೆ ನ್ಯಾಯಸಮ್ಮತ ಮಜೂರಿಗಳ ನಿಯಮದ ಸೇರ್ಪಡೆಗೆ ಸಂಬಂಧಿಸಿದ್ದಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇನ್ನೂ ಸೇರಿಸಿಲ್ಲ. ವಿಚಾರವನ್ನು ಪರಿಶೀಲಿಸಲಾಗುವುದು.

# ೪೧೪
# ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಅಣೆಕಟ್ಟು ವಿಚಾರ *

**೧೦೦೯. ಶ್ರೀ ಡಿ.ಪಿ. ಕರಮರಕರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೈಗೊಂಡ ಸಂಗತಿಗಳನ್ನು ದಯೆಯಿಟ್ಟು ತಿಳಿಸುವರೆ?

ಅ) ಕೊಡಗಿನಲ್ಲಿ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟುವ ಯೋಜನೆ ಇದೆಯೆ? ಸದರಿ ಯೋಜನೆಯನ್ನು ಸುಮಾರು ೩೦,೦೦೦ ಎಕರೆ ಜಮೀನಿಗೆ ನೀರಾವರಿ ಒದಗಿಸುವ ನಿರೀಕ್ಷೆಯಲ್ಲಿ ಕೈಗೊಳ್ಳಲಾಗುತ್ತಿದೆಯೆ?

ಆ) ಸದರಿ ಯೋಜನೆಗೆ ಮೈಸೂರು ಸರ್ಕಾರ ಆಕ್ಷೇಪ ಎತ್ತಿದೆಯೆ?

ಇ) ಕೊಡಗಿನ ಚೀಫ್ ಕಮೀಷನರ್ ಅವರು ಈ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೆ?

ಈ) ಭಾರತ ಸರ್ಕಾರದವರು ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿದ್ದಾರೆಯೆ? ಹಾಗಿದ್ದರೆ, ಆ ನಿರ್ಧಾರವೇನು? ಇಲ್ಲದಿದ್ದರೆ, ಸದರಿ ಯೋಜನೆಯನ್ನು ಕೊಡಗು ಸರ್ಕಾರ ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಲು ಅನುಕೂಲವಾಗುವ ಹಾಗೆ ಸರ್ಕಾರವು ನಿರ್ಧಾರ ಕೈಗೊಳ್ಳಲು ಪ್ರಸ್ತಾಪಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಆದರೆ ೧೯೪೨ನೆಯ ಇಸವಿಯಲ್ಲಿ ಸಿದ್ಧಗೊಳಿಸಲಾದ ಆ ಯೋಜನೆಯ ಮೂಲಕ ಕೇವಲ ೩,೦೦೦ ಎಕರೆ ಭೂಮಿಗೆ ನೀರಾವರಿ ಒದಗಬಹುದು ಎಂದು ಅಂದಾಜು ಮಾಡಲಾಗಿತ್ತು.

ಆ) ಮಾಹಿತಿ ಲಭ್ಯವಾಗಿಲ್ಲ. ತರಿಸಿಕೊಳ್ಳಲಾಗುತ್ತಿದೆ.

ಇ) ಮತ್ತು ಈ) ಯೋಜನೆಯನ್ನು ಪರಿಶೀಲಿಸಿ ನೋಡಲಾಗಿ, ಅದರಲ್ಲಿ ಕೆಲವು ತಾಂತ್ರಿಕ ಕೊರತೆಯು ಕಂಡುಬಂತು. ಕೊಡಗಿನ ಚೀಫ್ ಕಮೀಷನರ್ ಅವರನ್ನು ತಾಂತ್ರಿಕ ಸಲಹೆಗಳ ಬೆಳಕಿನಲ್ಲಿ ಯೋಜನೆಯನ್ನು ಪರಿಷ್ಕರಿಸುವಂತೆ ಮತ್ತು ಈ ಯೋಜನೆಗೆ ನೆರೆಯ ರಾಜ್ಯದ ಆಕ್ಷೇಪವೇನಾದರೂ ಇದೆಯೆ ಎಂಬುದನ್ನು ವಿಚಾರಿಸುವಂತೆ ತಿಳಿಸಲಾಗಿತ್ತು. ಸದರಿ ಯೋಜನೆಯನ್ನು ಕೊಡಗು ಆಡಳಿತದ ಯುದ್ಧೋತ್ತರ ಯೋಜನೆಯಲ್ಲಿ ಸೇರಿಸಲಾಗಿದ್ದರೂ ಕೊಡಗಿನ ಚೀಫ್ ಕಮೀಷನರ್ ಅವರ ಕಡೆಯಿಂದ ಪರಿಷ್ಕೃತ ಯೋಜನೆ ಇನ್ನೂ ಕೇಂದ್ರ ಸರ್ಕಾರಕ್ಕೆ ಬಂದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೧೫ ಮಾರ್ಚ್ ೧೯೪೬. ಪುಟ ೨೪೫೯.

## ೪೧೫
## ಉದ್ಯೋಗ ಮತ್ತು ಪುನರ್ವಸತಿ ನಿರ್ದೇಶನಾಯಕ್ಕೆ ವೆಚ್ಚದ ಹಂಚಿಕೆ *

**೧೦೧೭. ಶ್ರೀ ವಾಡಿಲಾಲ್ ಲಲ್ಲೂಭಾಯ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ಉದ್ಯೋಗ ಮತ್ತು ಪುನರ್ವಸತಿ ನಿರ್ದೇಶನಾಲಯಕ್ಕೆ, ಕೇಂದ್ರ ಮತ್ತು ಪ್ರಾದೇಶಿಕ ಕೇಂದ್ರಗಳ ನಡುವೆ ಪ್ರತ್ಯೇಕವಾಗಿ ಹಂಚಿದ ವೆಚ್ಚವೆಷ್ಟು?

ಆ) ಈ ವಿಧದ ಕೇಂದ್ರಗಳಲ್ಲಿರುವ ಸಿಬ್ಬಂದಿ ವರ್ಗದ ಸಂಖ್ಯೆಯೆಷ್ಟು?

ಇ) ಉದ್ಯೋಗ ಕೋರಿ ತಮ್ಮ ಹೆಸರುಗಳನ್ನು ಈ ಕೇಂದ್ರಗಳಲ್ಲಿ ನೋಂದಾಯಿಸಿಕೊಂಡ ಮಾಜಿ ಸೈನಿಕರ ಸಂಖ್ಯೆಯೆಷ್ಟು?

ಈ) ನಿರ್ದೇಶನಾಲಯವು ಈ ಮಾಜಿ ಸೈನಿಕರ ಪೈಕಿ ಎಷ್ಟು ಜನಗಳಿಗೆ ಸೂಕ್ತವಾದ ಪರ್ಯಾಯ ಉದ್ಯೋಗವನ್ನು ಒದಗಿಸಿಕೊಟ್ಟಿದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಪ್ರಶ್ನೆ ಸ್ಪಷ್ಟವಾಗಿಲ್ಲ. ಬಹುಶಃ ಮಾನ್ಯ ಸದಸ್ಯರು ಪುನರ್ವಸತಿ ಮತ್ತು ಉದ್ಯೋಗ ನಿರ್ದೇಶನಾಲಯದ ನಿರ್ದೇಶನ ಮತ್ತು ಆಡಳಿತ ವಿಭಾಗಗಳ ಸಿಬ್ಬಂದಿಗೆ ೧೯೪೬–೪೭ನೇ ಸಾಲಿಗೆ ತಗಲುವ ವಾರ್ಷಿಕ ಅಂದಾಜು ವೆಚ್ಚವೆಷ್ಟು ಎಂದು ತಿಳಿಯಬಯಸುತ್ತಾರೆ ಎಂದು ತೋರುತ್ತದೆ. ಅದು ಕೆಳಕಂಡಂತಿದೆ:

| | ರೂ. |
|---|---|
| ಕೇಂದ್ರ ಕಾರ್ಯಾಲಯ | ೨೭,೧೪,೮೦೦ |
| ಪ್ರಾದೇಶಿಕ ಕೇಂದ್ರಗಳು | ೧,೦೮,೩೨,೫೦೦ |
| | **ಒಟ್ಟು ೧,೩೫,೪೭,೩೦೦** |

ವಿವರಗಳಿಗಾಗಿ ೧೯೪೬–೪೭ನೇ ಸಾಲಿನ ಬಜೆಟ್ ಅಂದಾಜುಗಳ ಕಡೆಗೆ ಸದಸ್ಯರ ಗಮನವನ್ನು ಸೆಳೆಯಲಾಗಿದೆ. ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ವಿನಿಮಯ ಕೇಂದ್ರಗಳ ಮೇಲಣ ವೆಚ್ಚವನ್ನು ಕೇಂದ್ರ ಮತ್ತು ಪ್ರಾಂತಗಳ ನಡುವೆ ಅನುಕ್ರಮವಾಗಿ ೬೦ ಮತ್ತು ೪೦ ಈ ಪ್ರಮಾಣದಲ್ಲಿ ಹಂಚಲಾಗುವುದು.

ಆ) ಸಂಘಟನೆಯ ಕೇಂದ್ರೀಯ ಮತ್ತು ಪ್ರಾದೇಶಿಕ ವಿಭಾಗಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆಯನ್ನು ಮತ್ತು ಈವರೆಗೆ ಭರ್ತಿಮಾಡಲಾದ ಹುದ್ದೆಗಳ ಸಂಖ್ಯೆಯನ್ನು ತೋರಿಸುವ ತಃಖ್ತೆಗಳನ್ನು ೧೯೪೪ನೇ ಸಾಲಿನ ಜುಲೈ ೮ನೇ ತಾರೀಖಿನಿಂದ ಡಿಸೆಂಬರ್ ೩೧ನೇ ತಾರೀಖಿನವರೆಗಿನ ಅವಧಿಯ ಪುನರ್ವಸತಿ ಮತ್ತು ಉದ್ಯೋಗ ಮಹಾನಿರ್ದೇಶನಾಲಯದ ಪ್ರಗತಿಯ ವರದಿಯ ಅನುಬಂಧ – ೭ರಲ್ಲಿ ಕೊಡಲಾಗಿದ್ದು, ವರದಿಯ ಪ್ರತಿಯನ್ನು ಸದನದ ಗ್ರಂಥಾಲಯದಲ್ಲಿ ಇಡಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ೧೫ ಮಾರ್ಚ್ ೧೯೪೬. ಪುಟ ೨೪೬೮.

ಇ) ಮಾಜಿ ಸೇನಾ ಸಿಬ್ಬಂದಿಯವರಷ್ಟೆ ಅಲ್ಲದೆ, ಬಿಡುಗಡೆಯಾದ ಯುದ್ಧ ಕಾರ್ಮಿಕರಿಗೂ ಕೂಡ ನೋಂದಣಿ ಮತ್ತು ಉದ್ಯೋಗ ಒದಗಿಸಿಕೊಡುವ ಕಾರ್ಯವು ಉದ್ಯೋಗ ವಿನಿಮಯ ಕಛೇರಿಗಳ ಹೊಣೆಯಾಗಿರುತ್ತದೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಮತ್ತು ಪುನರ್ವಸತಿ ಮತ್ತು ಉದ್ಯೋಗ ಕಛೇರಿಗಳಲ್ಲಿ ೧೯೪೫ರ ಡಿಸೆಂಬರ್ ೩೧ನೇ ತಾರೀಖಿನವರೆಗೆ ನೋಂದಣಿಯಾದ ಒಟ್ಟು ಸಂಖ್ಯೆ ೫೬,೬೫೮. ಆ ಪೈಕಿ ೨೯,೯೨೮ ಜನ ಮಾಜಿ ಸೈನಿಕರು. ಸೇನೆಯಿಂದ ನಿವೃತ್ತಿಗೊಳಿಸುವ ಪ್ರಕ್ರಿಯೆಯ ಎರಡನೇ ಹಂತವು ೧೯೪೫ರ ನವೆಂಬರ್ ೧೫ನೇ ತಾರೀಖಿನಿಂದ ಪ್ರಾರಂಭವಾಯಿತೆಂದು ಈ ಸಂದರ್ಭದಲ್ಲಿ ನಮೂದಿಸಬಹುದಾಗಿದೆ. ಸೇನಾ ಬಿಡುಗಡೆಯ ಮುನ್ಸೂಚನೆಯ ಪ್ರಕಾರ ಸುಮಾರು ೧೫,೦೦,೦೦೦ ವ್ಯಕ್ತಿಗಳನ್ನು ೧೯೪೭ರ ಮಾರ್ಚಿ ಕೊನೆಯವರೆಗೆ ಸೇನೆಯಿಂದ ನಿವೃತ್ತಿಗೊಳಿಸಲಾಗುವುದೆಂದು ಗೊತ್ತಾಗಿದೆ. ಈ ಹಂತದಲ್ಲಿ, ಈ ವ್ಯಕ್ತಿಗಳ ಪೈಕಿ ಎಷ್ಟು ಜನಗಳಿಗೆ ಪುನರ್ವಸತಿ ಮತ್ತು ಉದ್ಯೋಗ ನಿಯೋಜನೆಯ ಸಹಾಯ ಅಗತ್ಯವಾಗಬಹುದು ಎಂದು ಈಗಲೇ ಹೇಳುವುದು ಕಷ್ಟಸಾಧ್ಯ.

ಈ) ಉದ್ಯೋಗ ವಿನಿಮಯ ಕೇಂದ್ರಗಳು ಮತ್ತು ಪುನರ್ವಸತಿ ಮತ್ತು ಉದ್ಯೋಗ ವಿನಿಯೋಜನ ಕಚೇರಿಗಳ ಮೂಲಕ ೧೯೪೫ರ ಡಿಸೆಂಬರ್ ೩೧ನೇ ತಾರೀಖಿನವರೆಗೆ ಉದ್ಯೋಗ ನಿಯೋಜನೆ ಪಡೆದವರ ಒಟ್ಟು ಸಂಖ್ಯೆ ೯,೫೧೬. ಆ ಪೈಕಿ ೨,೮೪೧ ಜನ ಮಾಜಿ ಸೈನಿಕರು.

## ೪೧೬
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಿಂದ ಮುಸ್ಲಿಮರು ಮತ್ತು ಮುಸ್ಲಿಮೇತರರಿಗೆ ಗುತ್ತಿಗೆ ಕಾಮಗಾರಿಗಳು *

೧೦೨೧. **ಶೇಠ್ ಯೂಸುಫ್ ಅಬ್ದುಲ್ಲಾ ಹರೂನ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೆಳಕಂಡ ಕೋಷ್ಟಕವನ್ನು ಸದನದಲ್ಲಿ ಮಂಡಿಸುವರೆ? ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಲಿ ಇಂಜಿನಿಯರ್‌ಗಳು ಅಥವಾ ಅವರಿಗಿಂತ ಮುಂಚಿನವರು, ವರದಿಯಲ್ಲಿರುವ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ನಿರ್ಮಾಣ ವಿಭಾಗ ಕ್ರಮ ಸಂಖ್ಯೆ ಹೆಚ್.ಐ. ನವದೆಹಲಿ 'ಎ' ವಿಭಾಗ, ನವದೆಹಲಿ 'ಬಿ' ವಿಭಾಗ, ಪ್ರಾಂತೀಯ ವಿಭಾಗ ಮತ್ತು ವಿಶೇಷ ವಿಭಾಗ ಕ್ರಮ ಸಂಖ್ಯೆ ೧ ಇವುಗಳಲ್ಲಿ ಮುಸ್ಲಿಮ್ ಮತ್ತು ಮುಸ್ಲಿಮೇತರ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಟೆಂಡರ್‌ಗಳ ಮೂಲಕ ಮತ್ತು ವರ್ಕ್ ಆರ್ಡರ್‌ಗಳ ಮೂಲಕ ಕೊಟ್ಟ ಕಂಟ್ರಾಕ್ಟು ಕಾಮಗಾರಿಗಳ ಮೊತ್ತವನ್ನು ತೋರಿಸುವ ತುಲನಾತ್ಮಕ ವಿವರಣೆಗಳು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೋರಿದ ಮಾಹಿತಿಯು ಕೂಡಲೇ ಲಭ್ಯವಿಲ್ಲ. ಮತ್ತು ಅದನ್ನು ಸಂಗ್ರಹಿಸುವುದಕ್ಕೆ ಅಗತ್ಯವಾದ ಸಮಯ ಮತ್ತು ಶ್ರಮಗಳು ಫಲಿತಾಂಶದ ಮೌಲ್ಯಕ್ಕೆ ಅನುಗುಣವಾಗಿಲ್ಲ.

**ಶೇಠ್ ಯೂಸುಫ್ ಅಬ್ದುಲ್ಲಾ ಹರೂನ್ :** ಮಾನ್ಯ ಮಂತ್ರಿಗಳು ಈ ಮಾಹಿತಿಯನ್ನು ಬಹಿರಂಗಪಡಿಸಲು ಯಾಕೆ ಸಿದ್ಧರಿಲ್ಲ ಎಂದು ಕೇಳಬಹುದೆ? ಈ ವಿಭಾಗ ಮುಸಲ್ಮಾನ ಗುತ್ತಿಗೆದಾರನಿಗೆ ಕೊಟ್ಟ ಗುತ್ತಿಗೆಯ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೧೫ ಮಾರ್ಚ್ ೧೯೪೬. ಪುಟ ೨೪೭೨.

ಮೌಲ್ಯ ಅತ್ಯಲ್ಪ ಎಂದು ನನಗೆ ತಿಳಿದ ಮಾಹಿತಿಯಿಂದ ಖಂಡಿತ ಗೊತ್ತಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರಿಗೆ ಸದರಿ ಮಾಹಿತಿ ಗೊತ್ತಿದ್ದರೆ, ಆ ಕುರಿತು ನನಗೇಕೆ ತೊಂದರೆ ಕೊಡುತ್ತಾರೆ ಎಂಬುದು ನನಗೆ ತಿಳಿಯುವುದಿಲ್ಲ.

**ಶೇಠ್ ಯೂಸುಫ್ ಅಬ್ದುಲ್ಲಾ ಹರೂನ್ :** ನಮ್ಮ ಧ್ಯೇಯಕ್ಕೆ ಹಾನಿಯುಂಟಾಗಿರುವ ನಿಮಿತ್ತ ಮಾನ್ಯ ಮಂತ್ರಿಗಳ ಇಲಾಖೆಯು ಮುಸಲ್ಮಾನರನ್ನು ಕಡೆಗಣಿಸುತ್ತಿರುವ ಕಾರಣ, ಆ ವಿಷಯವನ್ನು ಸದನದಲ್ಲಿ ಬಹಿರಂಗಪಡಿಸಬೇಕೆಂದು ನನ್ನ ಅಪೇಕ್ಷೆಯಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಕೊಟ್ಟ ಉತ್ತರಕ್ಕೆ ಸೇರಿಸುವ ಸಂಗತಿ ಇನ್ನೇನೂ ಇಲ್ಲ.

**ಶೇಠ್ ಯುಸುಫ್ ಅಬ್ದುಲ್ಲಾ ಹರೂನ್ :** ಮಾನ್ಯ ಮಂತ್ರಿಗಳು ಇನ್ನು ಮುಂದಿನ ಹಂತದಲ್ಲಾದರೂ ಈ ಮಾಹಿತಿಯನ್ನು ಸದನದಲ್ಲಿ ಮಂಡಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಾಧ್ಯವಿಲ್ಲ.

**ಶ್ರೀ ಶ್ರೀಪ್ರಕಾಶ :** ಮಾನ್ಯ ಸದಸ್ಯರು ಚಿತ್ತಸ್ವಾಸ್ಥ್ಯ ಕಳೆದುಕೊಂಡಿದ್ದಾರೆಯೆ?

**ಮಾನ್ಯ ಅಧ್ಯಕ್ಷರು :** ಶಿಸ್ತು ಶಿಸ್ತು, ಮುಂದಿನ ಪ್ರಶ್ನೆ.

## ೪೧೭
## ಭಾರತ ಸರ್ಕಾರದಿಂದ ನವದೆಹಲಿಯಲ್ಲಿರುವ ಈಸ್ಟರ್ನ್ ಮತ್ತು ವೆಸ್ಟರ್ನ್ ಹೌಸ್‌ಗಳ ಮಾರಾಟ*

೧೧೩೧. **ಶೇಠ್ ಗೋವಿಂದ ದಾಸ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ? ಅ) ಅನುಕ್ರಮವಾಗಿ ಕರ್ಝನ್ ರೋಡ್ ಮತ್ತು ಅಶೋಕ ರೋಡ್‌ಗಳಲ್ಲಿರುವ ವೆಸ್ಟರ್ನ್ ಹೌಸ್ ಮತ್ತು ಈಸ್ಟರ್ನ್ ಹೌಸ್ ಇವುಗಳನ್ನು ಖರೀದಿಮಾಡುವಂತೆ ಭಾರತ ಸರ್ಕಾರದ ಮೇಲೆ ಬ್ರಿಟನ್ ಸರ್ಕಾರವು ಒತ್ತಡ ತರುತ್ತಿದೆಯೆಂಬುದಾಗಿ ೧೯೪೬ರ ಫೆಬ್ರವರಿ ೪ನೇ ತಾರೀಖಿನ ಹಿಂದುಸ್ತಾನ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಸುದ್ದಿಯು ನಿಜವಾಗಿದ್ದರೆ ಭಾರತ ಸರ್ಕಾರವು ಉತ್ತರವನ್ನೇನಾದರೂ ಕೊಟ್ಟಿದೆಯೆ? ಕೊಟ್ಟಿದ್ದರೆ, ಆ ಉತ್ತರವೇನು? ಮತ್ತು

ಆ) ಸಾಮಗ್ರಿಗಳಿಂದ ಪಡೆಯಲಾಗುವ ಬೆಲೆಯು ಖರೀದಿ ಬೆಲೆಯ ಅಂಶ ಮಾತ್ರ ಆಗುವುದೆಂಬ ವಿಚಾರವನ್ನು ಸರ್ಕಾರವು ಪರ್ಯಾಲೋಚಿಸಿರುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಈ ಸಂಬಂಧದಲ್ಲಿ, ಮಾನ್ಯ ವೆಂಕಟಸುಬ್ಬರೆಡ್ಡಿಯಾರ್ ಅವರು ಕೇಳಿದ ೧೯೪೭ರ ಫೆಬ್ರವರಿ ೮ನೆಯ ದಿನಾಂಕದ ೨೩ನೇಕ್ರಮ ಸಂಖ್ಯೆಯ ಅಲ್ಪಾವಧಿ ನೋಟೀಸ್‌ನ ಪ್ರಶ್ನೆಯ ಉತ್ತರದ ಅ) ಮತ್ತು ಆ) ಭಾಗಗಳಿಗೆ ನಾನು ಕೊಟ್ಟ ಉತ್ತರವನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೧ ಮಾರ್ಚ್ ೧೯೪೬. ಪುಟ ೨೬೮೯

ಮಾನ್ಯ ಸದಸ್ಯರು ಗಮನಿಸಬೇಕಾಗಿ ಕೋರುತ್ತೇನೆ.

ಆ) ಖರೀದಿ ಬೆಲೆಯನ್ನು ಈವರೆಗೂ ನಿರ್ಧರಿಸಿಲ್ಲ. ಆದರೆ ಕಟ್ಟಡವನ್ನು ಕೆಡವಿ ಹಾಕಿದ ನಂತರ ಅಲ್ಲಿನ ಸಾಮಗ್ರಿಗಳಿಗೆ ದೊರೆಯುವ ಬೆಲೆ ಕಟ್ಟಡದ ಬೆಲೆಗೆ ಹೋಲಿಸಿದಾಗ ಖಂಡಿತವಾಗಿಯೂ ಅತ್ಯಲ್ಪವಾಗಿರುತ್ತದೆ.

**ಶ್ರೀ ಅಹಮ್ಮದ್ ಇ.ಹೆಚ್. ಜಾಫರ್ :** ಭಾಗ ಅ) ಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೌದು ಎಂದು ಹೇಳಿದ್ದುಂಟು. ಅಂದರೆ ಬ್ರಿಟನ್ ಸರಕಾರವು ಒತ್ತಡವನ್ನು ಹೇರುತ್ತದೆ ಎಂದು ಅರ್ಥವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಲ್ಲ.

**ಶ್ರೀ ಮಹಮ್ಮದ್ ಇ.ಹೆಚ್. ಜಾಫರ್ :** ಅ) ಭಾಗಕ್ಕೆ ಕೊಟ್ಟ ಉತ್ತರ "ಹೌದು" ಎಂಬುದಕ್ಕೆ ಅರ್ಥವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಆ ಸುದ್ದಿಯನ್ನು ಹಿಂದೂಸ್ತಾನ್ ಟೈಂಸ್‌ನಲ್ಲಿ ನೋಡಿದ್ದೇನೆ ಎಂದು ಅದರ ಅರ್ಥ.

## ೪೧೮
## ಸರ್ಕಾರಿ ಮುದ್ರಣಾಲಯ, ಅಲಿಗಢ್‌ನಲ್ಲಿ ಮುಷ್ಕರದ ಬೆದರಿಕೆ *

**೧೧೩೪. ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಅ) ಅಲಿಗಢ್‌ನಲ್ಲಿರುವ ಸರ್ಕಾರಿ ಮುದ್ರಣಾಲಯದ ಇದರ ನೌಕರರು ಮುಷ್ಕರದ ನೋಟೀಸು ಕೊಟ್ಟಿರುವ ಸಂಗತಿಯು ಸರಕಾರದ ಗಮನಕ್ಕೆ ಬಂದಿದೆಯೆ ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

ಆ) ಕೆಲಸಗಾರರಿಗೆ ತಿಂಗಳಿಗೆ ರೂ. ೧೨, ರೂ. ೧೪ ಮತ್ತು ರೂ ೧೫ ಹೀಗೆ ಸಂದಾಯವಾಗುತ್ತಿರುವುದು ನಿಜವೆ?

ಇ) ವೇತನ, ಸೌಲಭ್ಯಗಳು ಕೆಲಸದ ವೇಳೆ, ಮತ್ತು ಪಡಿತರ ಸರಬರಾಜು ಇವುಗಳ ಸಂಬಂಧದಲ್ಲಿ ನೌಕರರ ಇತರ ಕುಂದುಕೊರತೆಗಳು ಗಮನಕ್ಕೆ ಬಂದಿದೆಯೆ?

ಈ) ಕೆಲಸಗಾರರ ಬೇಡಿಕೆಗಳನ್ನು ಪೂರೈಸಲು ಭಾರತ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲು ಉದ್ದೇಶಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಆ) ಹೌದು. ನೌಕರರ ಕೆಲವು ವರ್ಗಗಳಿಗೆ ಹಾಗೆ ಸಂದಾಯವಾಗುತ್ತಿದೆ.

ಇ) ಹೌದು.

ಈ) ಕುಂದುಕೊರತೆಗಳ ಬಗ್ಗೆ ಗಮನ ಕೊಡಲಾಗುತ್ತಿದೆ. ಈ ಸಂಬಂಧದಲ್ಲಿ ೧೯೪೬ರ ಮಾರ್ಚ್ ೧೨ನೇ ತಾರೀಖಿನ ೮೯೬ನೇ ಕ್ರಮ ಸಂಖ್ಯೆಯ ಚುಕ್ಕೆಗುರುತಿನ ಪ್ರಶ್ನೆಗೆ ಕೊಡಲಾದ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ೨೧ ಮಾರ್ಚ್, ೧೯೪೬, ಪು. ೨೬೯೧.

**ಪ್ರೊ॥ ಎನ್.ಜಿ. ರಂಗಾ :** ಈ ಪ್ರಶ್ನೆಯ ಅ) ಗೆ ಸಂಬಂಧಿಸಿದಂತೆ ಈ ಕೆಲಸಗಾರರಲ್ಲಿ ಎಷ್ಟು ಜನ ಕೆಲಸಗಾರರಿಗೆ ತಿಂಗಳಿಗೆ ಕೇವಲ ೧೨ ಮತ್ತು ೧೪ ಮತ್ತು ೧೫ರೂ.ಗಳನ್ನು ಕೊಡಲಾಗುತ್ತಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಈ ಅಂಕಿಅಂಶಗಳಿಲ್ಲ.

**ಪ್ರೊ॥ ಎನ್.ಜಿ. ರಂಗಾ :** ಇಷ್ಟು ಕಡಿಮೆ ಮಜೂರಿ ಪಡೆಯುತ್ತಿರುವ ಇಂತಹವರ ವೇತನಗಳನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರವು ವೇತನಗಳನ್ನು ಕುರಿತ ಒಂದು ಆಯೋಗವನ್ನು ರಚಿಸುವ ಸಂಗತಿ ನನ್ನ ಸನ್ಮಾನ್ಯ ಸ್ನೇಹಿತರಿಗೆ ಗೊತ್ತಿರುವ ಸಂಗತಿ. ಆ ಆಯೋಗವು ಇಂತಹ ಸಾಮಾನ್ಯ ಸಂಗತಿಗಳನ್ನು ಪರಿಶೀಲಿಸುವುದು.

**ಡಾ॥ ಸರ್ ಜಿಯಾಉದ್ದೀನ್ ಅಹಮದ್ :** ಅಲಿಘಡ್ ವಿಶ್ವವಿದ್ಯಾಲಯವು ಕಡಿಮೆ ವೇತನ ಪಡೆಯುವ ತನ್ನ ಸಿಬ್ಬಂದಿಗಳಿಗೆ ಮಾಹೆಯಾನ ೩೦ ರೂ.ಗಳನ್ನು ನೀಡುತ್ತಿದೆ ಎಂಬ ಅಂಶ ಮಾನ್ಯರಿಗೆ ಗೊತ್ತಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸ್ನೇಹಿತರನ್ನು ಇದಕ್ಕಾಗಿ ಅಭಿನಂದಿಸುತ್ತೇನೆ.

**ಡಾ॥ ಸರ್ ಜಿಯಾಉದ್ದೀನ್ ಅಹಮದ್ :** ನನ್ನನ್ನು ಅಭಿನಂದಿಸುವ ಇಲ್ಲವೇ ನಿಮಗೆ ಶೋಕ ಸೂಚಿಸುವ ಸಂಗತಿ ಇದಲ್ಲ. ಇದು ಜೀವನ ಮಟ್ಟದ ಕನಿಷ್ಠ ಮಿತಿ. ನಾವು ನಮ್ಮ ಉದ್ಯೋಗಿಗಳನ್ನು ಉಪವಾಸ ಕೆಡವಬಾರದು.

**ಪ್ರೊ॥ ಎನ್.ಜಿ. ರಂಗಾ :** ಈ ಮಾಹೆಯಾನ ದಯನೀಯ ಸಂಬಳಗಳಾದ ೧೨,೧೪ ಮತ್ತು ೧೫ ರೂ. ವೇತನಗಳನ್ನು ಹೆಚ್ಚಿಸುವುದಕ್ಕಾಗಿ ಭಾರತ ಸರ್ಕಾರದ ಎಲ್ಲಾ ಉದ್ಯೋಗಿಗಳ ಸಂಬಳ ಸಾರಿಗೆಗಳನ್ನು ಪರಿಷ್ಕರಿಸಲು ನೇಮಕಗೊಂಡಿರುವ ಆಯೋಗವು ವರದಿ ಸಲ್ಲಿಸುವ ತನಕ ಏಕೆ ಕಾಯಬೇಕು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವು ತಾತ್ವಿಕ ತಳಹದಿಯ ಮೇಲೆ ರೂಪಿತಗೊಂಡ ಏಕರೀತಿಯ ತತ್ವಗಳಿರಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಒಂದು ಆಯೋಗದ ಪರಿಶೀಲನೆ ಇಲ್ಲದೇ ಅಂತಹ ನೀತಿಯನ್ನು ಕಾರ್ಯಗತಗೊಳಿಸಲಾಗುವುದಿಲ್ಲ.

**ಸೇಠ್ ಗೋವಿಂದ ದಾಸ್ :** ಈ ಆಯೋಗದ ವರದಿ ಯಾವಾಗ ಬರಲಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದನ್ನು ನಾನು ಹೇಳಲಾರೆ. ಆದರೆ ಸರ್ಕಾರವು ಈ ವಿಷಯವನ್ನು ಆದಷ್ಟು ಬೇಗ ಬಗೆಹರಿಸಲು ಉದ್ದೇಶಿಸಿದೆ.

**ಸೇಠ್ ಗೋವಿಂದ ದಾಸ್ :** ಅಲ್ಲಿಯವರೆಗೆ ಈ ಜನರು ಉಪವಾಸ ಬೀಳುತ್ತಾರೆ. ಅಲ್ಲಿಯವರೆಗೆ ಈ ಜನರು ಮಾಹೆಯಾನ ೧೨, ೧೪ ಅಥವಾ ೧೫ರೂ. ಗಳಷ್ಟನ್ನೇ ಪಡೆಯಬೇಕೆಂಬುದು ಸರ್ಕಾರದ ಇಚ್ಛೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂತಹ ಯಾವುದೇ ಇಚ್ಛೆ ಸರ್ಕಾರಕ್ಕಿಲ್ಲ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಆಯೋಗದ ಶಿಫಾರಸ್ಸುಗಳು ಬರುವವರೆಗೆ ಇವರಿಗೆ ಸೂಕ್ತ ತಾತ್ಕಾಲಿಕ ಪರಿಹಾರವನ್ನು ನೀಡುವುದನ್ನು ಸರ್ಕಾರ ಪರಿಶೀಲಿಸುವುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿರುವಂತೆ ಅವರ ಕುಂದು ಕೊರತೆಗಳು ನಮ್ಮ ಗಮನಸೆಳೆದಿದೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಒಂದು ತೀರ್ಮಾನಕ್ಕೆ ಬರಲು ಎಷ್ಟು ಕಾಲ ಹಿಡಿಯುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವು ತೀವ್ರ ಪರಿಶೀಲನೆಯಲ್ಲಿದೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಬೇರೆ ಕಡೆಗಳಲ್ಲಿ ಮುದ್ರಣಾಲಯದ ನೌಕರರು ಮುಷ್ಕರ ಹೂಡಿರುವುದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ಅದು ನಿಜ. ಆದರೆ ಅವರು ಬೇರೆ ಎಲ್ಲಿಯೋ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ತಿಳಿದುಬಂದಿದೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಅವರು ಮುಷ್ಕರಕ್ಕೆ ಇಳಿಯುವ ಮುನ್ನ ಮಾನ್ಯ ಕಾರ್ಮಿಕ ಸದಸ್ಯರು ಅವರಿಗೆ ಏನಾದರೂ ತಾತ್ಕಾಲಿಕ ಪರಿಹಾರವನ್ನು ನೀಡುವ ವ್ಯವಸ್ಥೆ ಮಾಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಯಾವುದೇ ಕಾಲಮಿತಿಯನ್ನು ಕೊಡಲಾರೆ.

**ಶ್ರೀ ಅಹಮದ್ ಈ.ಎಚ್. ಜಾಫರ್ :** ಮಾನ್ಯ ಸ್ನೇಹಿತರ ದೃಷ್ಟಿಯಲ್ಲಿ ತೀವ್ರ ಪರಿಶೀಲನೆಯಲ್ಲಿದೆ ಎಂದರೆ ಅದಕ್ಕೆ ಯಾವ ಕಾಲಮಿತಿಯೂ ಇಲ್ಲವೆಂದೇ ಅರ್ಥವಲ್ಲವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಹಾಗೇನೂ ಅನ್ನಿಸುವುದಿಲ್ಲ.

## ೪೧೯
## ಕಲ್ಲಿದ್ದಲು ಗಣಿಗಳಲ್ಲಿ ಮಹಿಳಾ ಕಾರ್ಮಿಕರಿಗೆ ಭೂಮಿಯ ಮೇಲ್ಭಾಗದಲ್ಲಿ ಕೆಲಸ*

**೧೧೩೮. ಪ್ರೊ॥ ಎನ್.ಜಿ. ರಂಗಾ :** ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ಕಲ್ಲಿದ್ದಲು ಗಣಿಗಳಲ್ಲಿ ಭೂಪಾತಳಿಯ ಕೆಲಸದಿಂದ ಹಿಂತೆಗೆದುಕೊಂಡ ೨೦,೦೦೦ ಜನ ಮಹಿಳಾ ಕಾರ್ಮಿಕರಲ್ಲಿ, ಎಷ್ಟು ಜನರಿಗೆ ಭೂಮಿಯ ಮೇಲ್ಭಾಗದ ಕೆಲಸವನ್ನು ಕೊಡಲಾಗಿದೆ?

ಆ) ರಾಜ್ಯ ರೈಲ್ವೆ ಗಣಿಗಳಲ್ಲಿ ಭೂಪಾತಳಿಯ ಕೆಲಸದಿಂದ ಹಿಂತೆಗೆದುಕೊಂಡ ಮಹಿಳಾ ಕಾರ್ಮಿಕರಲ್ಲಿ ಎಷ್ಟು ಜನರಿಗೆ ಖಾಯಂ ಆಧಾರದ ಮೇಲೆ, ಮತ್ತು ಎಷ್ಟು ಜನರಿಗೆ ವಾರಕ್ಕೆ ಆರು ದಿವಸಗಳಂತೆ ನೇಮಕ ಮಾಡಲಾಗಿದೆ ಎಂಬ ಮಾಹಿತಿಯನ್ನು ವಿಚಾರಿಸಿ ತಿಳಿಸುವರೆ? ಮತ್ತು

ಇ) ಇವರಲ್ಲಿ ಎಷ್ಟು ಮಹಿಳೆಯರನ್ನು ಫೆಬ್ರವರಿ ೨೫, ೧೯೪೬ರಂದು ಚುಕ್ಕೆ ಪ್ರಶ್ನೆ ೪೬೬ಕ್ಕೆ ನೀಡಲಾದ ಉತ್ತರದಲ್ಲಿ ನಮೂದಿಸಲಾದ ಕಲ್ಯಾಣ ನಿಧಿಯನ್ವಯ ನೇಮಕ ಮಾಡಲಾಗಿದೆ ಮತ್ತು ಎಷ್ಟು ಜನ ಪ್ರಾಂತೀಯ ಸರ್ಕಾರಗಳಿಂದ ನೇಮಕಗೊಂಡಿರುತ್ತಾರೆ?

**ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನಿಖರವಾದ ಅಂಕಿಸಂಖ್ಯೆಗಳು ಲಭ್ಯವಿಲ್ಲ. ಆದರೆ ಸುಮಾರು ಶೇಕಡ ೫೦ರಷ್ಟು ಕಲ್ಲಿದ್ದಲು ಗಣಿಗಳಲ್ಲಿ ಭೂತಳದಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಕಾರ್ಮಿಕರಿಗೆ ಭೂಮಿಯ ಮೇಲ್ಭಾಗದಲ್ಲಿ ಕೆಲಸವನ್ನು ಕೊಡಲಾಗಿದೆ. ಉಳಿದ ಶೇಕಡ ೫೦ರಲ್ಲಿ ಸುಮಾರು ಅರ್ಧದಷ್ಟು ಕಾರ್ಮಿಕರು ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದ್ದಾರೆ. ಉಳಿದವರು ಗಣಿಗಳ ಬಳಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೧ ಮಾರ್ಚ್ ೧೯೪೬. ಪುಟ ೨೬೯೬.

ಕುಳಿತಿದ್ದಾರೆ. ಏಕೆಂದರೆ ಅವರು ಕಲ್ಲಿದ್ದಲನ್ನು ತುಂಬುವಂತಹ ಗುತ್ತಿಗೆ ಕೆಲಸಗಳನ್ನು ಮಾಡಲು ನಿರಾಕರಿಸುತ್ತಿದ್ದಾರೆ.

ಆ) ರಾಜ್ಯ ರೈಲ್ವೆ ಕಲ್ಲಿದ್ದಲು ಗಣಿಗಳ ಭೂಪಾತಳಿಯ ಕೆಲಸದಿಂದ ಹಿಂತೆಗೆದುಕೊಳ್ಳಲಾದ ಮಹಿಳೆಯರೆಲ್ಲರೂ ಮೇಲ್ಭಾಗದ ಖಾಯಂ ಆಗಿ ಕೆಲಸಗಳಲ್ಲಿ ನೇಮಕಗೊಂಡಿರುತ್ತಾರೆ. ಇವರಲ್ಲಿ ೧,೧೬೦ ಮಹಿಳೆಯರನ್ನು ವಾರದಲ್ಲಿ ಆರು ದಿವಸಗಳ ಕೆಲಸದಕ್ಕೆ ನೇಮಕ ಮಾಡಿಕೊಳ್ಳಲಾಗಿದೆ.

ಇ) ಕಲ್ಯಾಣ ನಿಧಿಯ ಆಶ್ರಯದಲ್ಲಿ ಯಾವ ಮಹಿಳೆಯೂ ನೇಮಕವಾಗಿಲ್ಲ. ಆದರೆ ಝರಿಯಾ ಮತ್ತು ರಾಣಿಗಂಜ್ ಕಲ್ಲಿದ್ದಲು ಗಣಿಗಳ ಪ್ರದೇಶದಲ್ಲಿ ತರಕಾರಿ ತೋಟಗಳು ಮತ್ತು ಫಾರಮ್‌ಗಳನ್ನು ಆರಂಭಿಸಲು ಅವಶ್ಯವಾದ ಜಾಗಗಳನ್ನು ಪಡೆದುಕೊಳ್ಳಲಾಗುತ್ತಿದೆ. ತದನಂತರ ಭೂಪಾತಳಿಯ ಕೆಲಸದಿಂದ ತೆಗೆದುಹಾಕಲಾದ ಮಹಿಳೆಯರನ್ನು ಇವುಗಳಲ್ಲಿ 'ಮಾಲಿ'ಗಳೆಂದು ಕಲ್ಯಾಣ ನಿಧಿಯಡಿಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು. ಪ್ರಾಂತೀಯ ಸರ್ಕಾರಗಳಿಂದ ನೇಮಕಗೊಂಡ ಮಹಿಳೆಯರ ಸಂಖ್ಯೆ ಸದ್ಯ ಲಭ್ಯವಿಲ್ಲ.

**ಪ್ರೊ॥ ಎನ್.ಜಿ. ರಂಗಾ :** ಗುತ್ತಿಗೆ ಕೆಲಸ ಮಾಡಲು ಒಪ್ಪದಿದ್ದ ಕಾರಣ ತಮ್ಮ ಮನೆಗಳಲ್ಲಿ ಕುಳಿತುಕೊಳ್ಳಬೇಕಾಗಿರುವ ಮಹಿಳೆಯರಿಗೆ ಗುತ್ತಿಗೆದಾರರ ಮಧ್ಯಸ್ಥಿಕೆಯಲ್ಲಿದ್ದಂತಹ ಕೆಲಸ ಕೊಡುವ ದಿಶೆಯಲ್ಲಿ ಸರ್ಕಾರವು ಯಾವ ಕ್ರಮಕೈಗೊಳ್ಳಲು ಯೋಚಿಸಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಕ್ಷಣ ಇದಕ್ಕೆ ಉತ್ತರ ನೀಡಲಾರೆ.

**ಪ್ರೊ॥ ಎನ್.ಜಿ. ರಂಗಾ :** ಗುತ್ತಿಗೆದಾರರ ಮಾಧ್ಯಮವಿಲ್ಲದೆ ಇವರಿಗೆ ಕೆಲಸ ಕೊಡುವಲ್ಲಿ ಸರ್ಕಾರ ಏಕೆ ವಿಫಲವಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪದ್ಧತಿ ರಾಜ್ಯ ರೈಲ್ವೆ ಗಣಿಗಳಲ್ಲಿ ಬಹುಕಾಲದಿಂದ ಆಚರಣೆಯಲ್ಲಿದೆ.

**ಪ್ರೊ॥ ಎನ್.ಜಿ. ರಂಗಾ :** ಕಾರ್ಮಿಕರನ್ನು ಕುರಿತ ರಾಯಲ್ ಕಮೀಷನ್ ಗುತ್ತಿಗೆ ಪದ್ಧತಿಗೆ ಸಂಪೂರ್ಣ ಮತ್ತು ಬಲವಾದ ವಿರೋಧವಾಗಿತ್ತೆಂಬುದು ನಿಜಸಂಗತಿಯಲ್ಲವೆ? ಗುತ್ತಿಗೆದಾರರ ಸ್ವೇಚ್ಛಾ ವರ್ತನೆಯನ್ನು ನಿಯಂತ್ರಿಸಲು ಮಾನ್ಯ ಕಾರ್ಮಿಕ ಸದಸ್ಯರು ಏನಾದರೂ ವ್ಯವಸ್ಥೆಮಾಡುವರೇ? ಈ ಮಹಿಳೆಯರಿಗೆ ಉದ್ಯೋಗ ಒದಗಿಸಲು ಸರ್ಕಾರವು ಬೇರೆ ಯಾವುದರೂ ಮಾರ್ಗವನ್ನು ಹುಡುಕುವುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯದ ಬಗ್ಗೆ ವಿಚಾರ ಮಾಡಲು ನಾವು ಪ್ರಯತ್ನಿಸುತ್ತೇವೆ.

**ಶ್ರೀ ಅಹಮದ್ ಈ.ಎಚ್. ಜಾಫರ್ :** ಈ ಸಮಸ್ಯೆಯನ್ನು ಸದ್ಯದಲ್ಲಿಯೇ ಭಾರತದಲ್ಲಿ ಸಂಚರಿಸಲಿರುವ ಕಲ್ಲಿದ್ದಲು ಆಯೋಗದ ಎದುರಿಗೆ ಇಡುವ ಪ್ರಶ್ನೆಯನ್ನು ಮಾನ್ಯ ಕಾರ್ಮಿಕ ಸದಸ್ಯರು ಪರಿಶೀಲಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೀಗೆ ಮಾಡಬಹುದೇ ಎಂಬುದು ನನಗೆ ತಿಳಿಯದು ವಿಷಯವನ್ನು ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತರುತ್ತೇನೆ.

# ೪೨೦
# ಕೇಂದ್ರ ಲೋಕೋಪಯೋಗಿ ಇಲಾಖೆಯ ಕಛೇರಿಗಳಲ್ಲಿ ಗುತ್ತಿಗೆದಾರರಿಗೆ ನಿಷೇಧ*

**೧೧೪೩. ಶ್ರೀ ಸತ್ಯನಾರಾಯಣ್** ಸಿನ್ಹಾ : ಅ) ಕೇಂದ್ರ ಲೋಕೋಪಯೋಗಿ ಇಲಾಖೆಯ ಕಛೇರಿಯ ಎಲ್ಲಾ ಅಧಿಕಾರಿಗಳ ಸಂಬಂಧಿಕರಿಗೆ ಯಾವುದೇ ಕೆಲಸವನ್ನು ಆ ಗುತ್ತಿಗೆಯನ್ನು ನೀಡಬಾರದೆಂದು ಆಜ್ಞೆ ಹೊರಡಿಸುವುದು ನಿಜವೇ ಹೇಗೆ ಎಂಬ ವಿಷಯವನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೇ?

ಆ) ಸಂಬಂಧಿಗಳು ಎಂದರೇ ಭ್ರಾತೃವರ್ಗದವರು, ಭಾವಮೈದುನರು, ಷಡ್ಡಕರು ಮುಂತಾದವರು ಮತ್ತು ಈ ಉದ್ದೇಶಕ್ಕಾಗಿ ಅಧಿಕಾರಿಗಳೆಂದರೆ ಮುಖ್ಯ ಗುಮಾಸ್ತರು, ಗುಮಾಸ್ತರು, ನಕ್ಷೆಗಾರರು, ಮೋಜಿಣಿದಾರರು ಮುಂತಾದವರನ್ನು ಸೇರಿಸಿರುವುದು ನಿಜವೇ?

ಇ) ಈ ಆಜ್ಞೆಯನ್ನು ಏಕೆ ಹೊರಡಿಸಲಾಗಿತ್ತು. ಮತ್ತು ಈ ಆಜ್ಞೆಯ ಪರಿಣಾಮವಾಗಿ ಎಷ್ಟು ಜನ ಗುತ್ತಿಗೆದಾರರನ್ನು ಪಟ್ಟಿಯಿಂದ ಹೊರಗಿಡಲಾಗಿದೆ?

ಈ) ಇಂತಹ ನಿಯಮವು ಯಾವುದೇ ಪ್ರಾಂತೀಯ ಲೋಕೋಪಯೋಗಿ ಇಲಾಖೆಗಳಲ್ಲಿ ಅಥವಾ ಇತರ ಇಲಾಖೆಗಳಲ್ಲಿ ಎಂದರೆ ಸೈನಿಕ ಇಂಜಿನಿಯರಿಂಗ್ ಸೇವೆಗಳು ರೈಲ್ವೆಗಳು, ಮುನಿಸಿಪಾಲಿಟಿ ಅಥವಾ ಜಿಲ್ಲಾ ಮಂಡಳಿಗಳಲ್ಲಿ ಅಥವಾ ಇತರೆ ದೇಶಗಳಲ್ಲಿ ಇದೆಯೇ?

ಉ) ಈ ಆಜ್ಞೆಯನ್ನು ಭಾರತ ಸರ್ಕಾರದ ನಿರ್ದೇಶನದಂತೆ ನೀಡಲಾಗಿತ್ತೇ? ಇಲ್ಲವೆ ಕೇಂದ್ರ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ರವರ ಉಪಕ್ರಮದಿಂದ ನೀಡಲಾಗಿತ್ತೇ?

ಊ) ಇಲಾಖೆಯಲ್ಲಿ ಕೆಲಸ ಮಾಡುವ ಯಾರೋ ಒಬ್ಬ ಅಧಿಕಾರಿಯ ಸಂಬಂಧಿಯಾಗಿರುವ ತಪ್ಪಿಗಾಗಿ ಇಂತಹ ವ್ಯಕ್ತಿಗಳಿಗೆ ಉಂಟಾಗಿರುವ ವ್ಯವಹಾರದಲ್ಲಿನ ನಷ್ಟಕ್ಕೆ ಪರಿಹಾರ ನೀಡಲು ಸರ್ಕಾರವು ಈ ಆಜ್ಞೆಯನ್ನು ವಾಪಸು ಪಡೆಯುವ ಇಲ್ಲವೆ ಪುನಃ ಪರಿಶೀಲಿಸುವ ವಿಚಾರ ಮಾಡುತ್ತಿದೆಯೇ? ಇಲ್ಲದಿದ್ದರೆ ಏಕೆ ಇಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಆ) ಹತ್ತಿರದ ಸಂಬಂಧಿಗಳು ಎಂಬ ಪದದಲ್ಲಿ ಭ್ರಾತೃಗಳು ಮತ್ತು ಭಾವಮೈದುನರು ಸೇರಿರುತ್ತಾರೆ.

'ಅಧಿಕಾರಿಗಳು' ಎಂದರೆ ಈ ಆಜ್ಞೆಯಡಿಯಲ್ಲಿ ನಾನ್ ಗೆಜೆಟೆಡ್ ಸಿಬ್ಬಂದಿಯವರು ಸೇರಿಲ್ಲ.

ಇ) ಕೇಂದ್ರ ಲೋಕೋಪಯೋಗಿ ಇಲಾಖೆಯ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ವಿಶ್ವಾಸವನ್ನುಂಟು ಮಾಡುವುದೇ ಈ ಆಜ್ಞೆಯ ಉದ್ದೇಶವಾಗಿತ್ತು.
ಮಂಜೂರಾತಿ ನೀಡಲಾದ ಗುತ್ತಿಗೆದಾರರ ಪಟ್ಟಿಯಿಂದ ಇಲ್ಲಿಯವರೆಗೆ ೨೫ ಗುತ್ತಿಗೆದಾರರನ್ನು ತೆಗೆದುಹಾಕಲಾಗಿದೆ. ಇತರ ಪ್ರಕರಣಗಳನ್ನು ಪರಿಶೀಲಿಸಲಾಗುತ್ತಿದೆ.

ಈ) ಈ ಬಗ್ಗೆ ವಿಚಾರಣೆ ಮಾಡಲಾಗಿಲ್ಲ. ಇನ್ನಾವುದೇ ಇಲಾಖೆಯಲ್ಲಿ ಇಲ್ಲವೇ ಇನ್ನಾವುದೇ ದೇಶದಲ್ಲಿ ಇಂತಹ ನಿಯಮ ಇರುವ ಸಂಗತಿ ಭಾರತ ಸರ್ಕಾರಕ್ಕೆ ತಿಳಿದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೧ ಮಾರ್ಚ್ ೧೯೪೬. ಪುಟ ೨೭೦೦

ಉ) ಭಾರತ ಸರ್ಕಾರದ ನಿರ್ದೇಶನದಂತೆ.

ಊ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

## ೪೨೧
## ಕುಟುಂಬ ಆಯವ್ಯಯ ಅಂದಾಜುಪಟ್ಟಿಯ ವಿಚಾರಣೆಗಳ ವರದಿ*

**೧೧೫೬. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಅ) ಸುಮಾರು ಮೂರು ವರ್ಷಗಳ ಹಿಂದೆ ಆರಂಭಿಸಲಾದ 'ಫ್ಯಾಮಿಲಿ ಬಜೆಟ್ ಎನ್‌ಕ್ವೈರಿ' ವರದಿಗಳನ್ನು ಪ್ರಕಟಿಸುವ ಉದ್ದೇಶ ಸರಕಾರಕ್ಕೆ ಇದೆಯೇ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯವಿಟ್ಟು ತಿಳಿಸುವರೇ?

ಆ) ಮೊದಲನೆಯ ಮತ್ತು ಕೊನೆಯ 'ಫ್ಯಾಮಿಲಿ ಬಡೆಟ್' ಅಂತಹ ವಿಚಾರಣೆ ನಡೆಸಲಾದ ಕೇಂದ್ರಗಳಲ್ಲಿ ನಡೆಸಿದ ದಿನಾಂಕಗಳನ್ನು ಮಾನ್ಯ ಸದಸ್ಯರು ಈ ಸದನದಲ್ಲಿ ತಿಳಿಸುವರೆ, ಮತ್ತು ವಿಚಾರಣೆಗಾಗಿ ಏಕೆ ಅಂತಹ ಅಸಾಧಾರಣ ಅವಧಿಯನ್ನು ಆಯ್ಕೆ ಮಾಡಲಾಗಿತ್ತು?

ಇ) ಈ ಕುಟುಂಬ ಆಯವ್ಯಯದ ವಿಚಾರಣೆಯ ಅಂಗವಾಗಿ ತಯಾರಿಸಲಾಗಿದ್ದ ಪ್ರಶ್ನಾವಳಿಗಳಿಂದ ಕಾರ್ಮಿಕರು ಬಳಸುವ ವಸ್ತುಗಳ ಗುಣಮಟ್ಟದ ಬಗ್ಗೆ ಪ್ರಶ್ನೆಗಳನ್ನು ಸೇರಿಸದೆ ಇರುವುದು ಈ ವಿಚಾರಣೆಯ ಇಡೀ ಉದ್ದೇಶ ಮತ್ತು ಪರಿಣಾಮಗಳನ್ನು ಗಂಭೀರ ರೀತಿಯಲ್ಲಿ ವಿಕೃತಗೊಳಿಸುವುದೆಂಬ ಅರಿವು ಸರ್ಕಾರಕ್ಕಿದೆಯೆ?

ಈ) ಕುಟುಂಬದ ಆಯವ್ಯಯ ವಿಚಾರಣೆಗಳಲ್ಲಿ ಏಕರೂಪತೆ ಮತ್ತು ಸರಿಯಾದ ವಿಧಾನವನ್ನು ಅನುಸರಿಸಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿದೆಯೆ ಹೇಗೆ ಎಂಬುದನ್ನು ಸನ್ಮಾನ್ಯ ಮಂತ್ರಿಗಳು ತಿಳಿಸುವರೆ? ರಚಿಸಿದ್ದ ಪಕ್ಷದಲ್ಲಿ ಅದು ಎಷ್ಟು ಸಾರಿ ಸಭೆ ನಡೆಸಿದೆ? ಗುಣ ಪರೀಕ್ಷೆಗಳಿಗಾಗಿ ಮಾದರಿಯನ್ನು ತೆಗೆಯುವ ವಿಧಾನಗಳನ್ನು ಮತ್ತು ಈ ವಿಧಾನಗಳನ್ನು ಅನುಸರಿಸಿ ಪಡೆದ ಹತ್ತಾಂಶಗಳನ್ನು ಸಂಕಲಿಸುವ ರೀತಿಗಳನ್ನು ಹಾಗೂ ಇತರ ಪ್ರಮುಖ ವಿಷಯಗಳ ವಿಶ್ಲೇಷಣೆಯ ವಿಧಾನಗಳನ್ನು ಈ ತಜ್ಞರ ಸಮಿತಿಯ ಒಪ್ಪಿದೆಯೇ? ಹಾಗಿಲ್ಲದಿದ್ದರೆ, ಏಕಿಲ್ಲ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಕುಟುಂಬ ಆಯವ್ಯಯ ವರದಿಗಳು ೧೯೪೬ ಸೆಪ್ಟೆಂಬರ್ ಕೊನೆಯ ಭಾಗದಲ್ಲಿ ಸಿದ್ಧಗೊಂಡು ಪ್ರಕಟವಾಗುವ ನಿರೀಕ್ಷೆ ಇದೆ.

ಆ) ಕೇಳಲಾಗಿರುವ ಮಾಹಿತಿಯನ್ನೊಳಗೊಂಡ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ.

ಜೀವನವೆಚ್ಚದ ಸೂಚ್ಯಂಕವು ತುಟ್ಟಿಭತ್ಯೆಯ ಅಗತ್ಯ ಹೊಂದಾಣಿಕೆ ಯುದ್ಧಕಾಲದಲ್ಲಿ ಜರೂರಾಗಿ ಬೇಕಾಗಿದ್ದುದರಿಂದ ಮತ್ತು ಈ ಬಗ್ಗೆ ನಂಬಲರ್ಹವಾದ ಬೇರಾವುದೇ ಸೂಚ್ಯಂಕಗಳು ದೊರಕದೇ ಇದ್ದುದರಿಂದ ಸಾಧಾರಣ ಪರಿಸ್ಥಿತಿ ಉಂಟಾಗುವವರೆಗೆ ಕಾಯದೆ ಕಾರ್ಯರಂಭಮಾಡಬೇಕಾಗಿದ್ದಿತ್ತು .

ಇ) ಇದಕ್ಕೆ ಉತ್ತರ ನಕಾರಾತ್ಮಕವಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೧ ಮಾರ್ಚ್ ೧೯೪೬. ಪುಟ ೨೭೧೦.

ಈ) ಜೀವನವೆಚ್ಚದ ಸೂಚ್ಯಂಕಗಳನ್ನು ಸಿದ್ಧಗೊಳಿಸುವ ವಿಧಾನಗಳನ್ನು ಚರ್ಚಿಸಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಅದು ಒಂದು ಸಭೆ ಸೇರಿ ಪರಿಶೋಧನೆಯ ವಿಧಾನಗಳ ಬಗ್ಗೆ ಸಾಮಾನ್ಯ ತತ್ವಗಳನ್ನು ನಿರ್ಧರಿಸಿತು ಮತ್ತು ಈ ತತ್ವಗಳನ್ನೇ ವ್ಯಾಪಕವಾಗಿ ಅನುಸರಿಸಲಾಯಿತು.

**ವಿವಿಧ ಆಯ್ದ ಕೇಂದ್ರಗಳಲ್ಲಿ ಕುಟುಂಬ ಆಯವ್ಯಯ ತನಿಖೆಯನ್ನು ಪ್ರಾರಂಭಿಸಿದ ಮತ್ತು ಪೂರೈಸಿದ ದಿನಾಂಕವನ್ನು ತೋರಿಸುವ ವಿವರಣ ಪಟ್ಟಿ**

| | ಕೇಂದ್ರದ ಹೆಸರು | ಬಜೆಟುಗಳ ಸಂಗ್ರಹಣೆಯನ್ನು ಪ್ರಾರಂಭಿಸುವ ದಿನಾಂಕ | ಕೆಲಸವನ್ನು ಪೂರೈಸಿದ ದಿನಾಂಕ |
|---|---|---|---|
| ೧. | ಅಜಮೀರ್ (೧) | ೧೫–೧೧–೪೩ | ೧೫–೧೧–೪೪ |
| ೨. | ಬಂಗಾಳ (೪) | | |
| | ೧. ಹೌರಾ ಮತ್ತು ಬಲ್ಲಿ | ೨೮–೭–೪೩ | ೨೮–೭–೪೪ |
| | ೨. ಖರಗಪುರ್ | ೨೮–೭–೪೩ | ೨೮–೭–೪೪ |
| | ೩. ನಾರಾಯಣ್‌ಗಂಜ್ | ೨೮–೭–೪೩ | ೨೮–೭–೪೪ |
| | ೪. ಕಲ್ಕತ್ತ | ೧–೮–೪೪ | ೩೧–೭–೪೫ |
| ೩. | ಬಿಹಾರ್ (೪) | | |
| | ೧. ಮಾಂಗೈರ್ ಮತ್ತು ಜಮಲ್‌ಪುರ್ | ೯–೫–೪೪ | ೩೧–೧೦–೪೪ |
| | ೨. ದೆಹ್ರಿ–ಆನ್–ಸೋನ್ | ೧–೧೧–೪೪ | ೩೧–೧–೪೫ |
| | ೩. ಜಮ್‌ಷೆಡ್‌ಪುರ್ | ೧–೨–೪೫ | ೩೦–೬–೪೫ |
| | ೪. ಝುರಿಯ | ೧–೭–೪೫ | ೨೫–೧೧–೪೫ |
| ೪. | ಮುಂಬಯಿ (೪) – | | |
| | ೧. ಮುಂಬಯಿ | ೨೨–೧–೪೪ | ೨೮–೨–೪೫ |
| | ೨. ಅಹಮದಾಬಾದ್ | ೨೨–೧–೪೪ | ೨೮–೨–೪೫ |
| | ೩. ಶೋಲಾಪುರ್ | ೨೨–೧–೪೪ | ೨೮–೨–೪೫ |
| | ೪. ಜಲಗಾಂವ್ | ೨೨–೧–೪೪ | ೨೮–೨–೪೫ |
| ೫. | ಮಧ್ಯ ಪ್ರಾಂತಗಳು ಮತ್ತು ಬೇರರ್ (೨) – | | |
| | ೧. ಜಬ್ಬಲ್‌ಪುರ್ | ೧೦–೪–೪೪ | ೧೫–೪–೪೫ |
| | ೨. ಅಕೋಲ | ಜುಲೈ ೧೯೪೪ರ ಎರಡನೇ ವಾರದಲ್ಲಿ | ೧೫–೪–೪೫ |
| ೬. | ದೆಹಲಿ (೧) | ೧೩–೧೦–೪೩ | ೩೧–೧೦–೪೪ |
| ೭. | ಪಂಜಾಬ್ (೩) – | | |
| | ೧. ಲಾಹೋರ್ | ೧–೧–೪೪ | ೩೦–೪–೪೫ |
| | ೨. ಲೂಧಿಯಾನ | ೧–೧–೪೪ | ೩೦–೪–೪೫ |

| | | | |
|---|---|---|---|
| | ೩. ಸಿಯಾಲ್‌ಕೋಟ್ | ೧–೧–೪೪ | ೩೦–೪–೪೫ |
| ೮. | ಖೇವ್ರ (೨) – | | |
| | ೧. ಖೇವ್ರ | ಏಪ್ರಿಲ್ ೧೯೪೪ರ ಮೊದಲ ವಾರದಲ್ಲಿ | ೧೦–೧–೪೫ |
| | ೨. ದಂಡೊತ್ ಮತ್ತು ಎ.ಸಿ.ಸಿ.ಐ | ೧೫–೧೦–೪೪ | ೧೦–೧–೪೫ |
| ೯. | ಸಿಂಧ್ (೧) – | | |
| | ೧. ಕರಾಚಿ | ೧–೮–೪೪ | ೩೧–೭–೪೫ |
| ೧೦. | ಒರಿಸ್ಸಾ (೨) – | | |
| | ೧. ಕಟಕ್ | ೧೫–೧೨–೪೪ | ೧೫–೯–೪೫ |
| | ೨. ಬೆರ್ಹಮ್‌ಪುರ್ | ೧೫–೧೨–೪೪ | ೧೫–೯–೪೫ |
| ೧೧. | ಉ.ಪ್ರ. (೧) – | | |
| | ೧. ಕಾವ್ನ್‌ಪುರ್ | ಜನವರಿ ೧೯೪೫ | ವಿಚಾರಣೆಗಳು ನಡೆಯುತ್ತಿವೆ. |
| ೧೨. | ಅಸ್ಸಾಂ (೩) – | | |
| | ೧. ತಿನ್‌ಸುಕಿಯ | ಏಪ್ರಿಲ್ ೧೯೪೪ | ೧೫–೧೦–೪೫ |
| | ೨. ಸಿಲ್ಚಾರ್ | ಏಪ್ರಿಲ್ ೧೯೪೪ | ೧೫–೧೦–೪೫ |
| | ೩. ಗೌಹಾಟಿ | ಏಪ್ರಿಲ್ ೧೯೪೪ | ೧೫–೧೦–೪೫ |

**ಪ್ರೊ॥ ಎನ್.ಜಿ. ರಂಗಾ :** ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಇಂತಹ ವಿಚಾರಣೆಗಳನ್ನು ಕೆಲವು ಪರೀಕ್ಷಾರ್ಥ ಪ್ರಕರಣಗಳಲ್ಲಾದರೂ ನಡೆಸಲಾಗುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದನ್ನು ಗಮನದಲ್ಲಿ ಇಟ್ಟುಕೊಂಡಿರುತ್ತೇನೆ ಆದರೆ ಯಾವ ಆಶ್ವಾಸನೆಯನ್ನು ಕೊಡಲಾರೆ.

# ೪೨೨
# ಮಹತ್ವವಿಲ್ಲದ ಚಿಲ್ಲರೆ ದರ ಸೂಚ್ಯಂಕದ ಸಂಖ್ಯೆಗಳ ಸಂಕಲನ

**೧೧೫೫. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಅ) ಇಂಡಿಯನ್ ಲೇಬರ್ ಗೆಜೆಟ್‌ನಲ್ಲಿ ಪ್ರಕಟವಾದ ಔದ್ಯೋಗಿಕ ನಗರಗಳು ಮತ್ತು ಪಟ್ಟಣಗಳಲ್ಲಿನ ಮಹತ್ವವಿಲ್ಲದ ಚಿಲ್ಲರೆ ದರಗಳ ಸೂಚ್ಯಂಕಗಳನ್ನು ಸಂಕಲನ ಮಾಡಿರುವುದರ ಉದ್ದೇಶವನ್ನು ಮಾನ್ಯ ಕಾರ್ಮಿಕ ಸದಸ್ಯರು ತಿಳಿಸುವರೇ?

ಆ) ಚಿಲ್ಲರೆ ದರಗಳ ಸೂಚ್ಯಂಕ ಸಂಖ್ಯೆಗಳ ಸಂಕಲನ ಮಾಡಿದ ವಸ್ತುಗಳು ಮತ್ತು ಗುಣಮಟ್ಟವನ್ನು ಸಾರ್ವಜನಿಕರಿಗೆ ತಿಳಿಸಲಾಗಿದೆಯೇ? ಇಲ್ಲದಿದ್ದರೆ, ಏಕೆ ಇಲ್ಲ?

ಇ) ಕಾರ್ಮಿಕ ಇಲಾಖೆಯಿಂದ ಬಿಡುಗಡೆ ಮಾಡಲಾಗಿರುವ ಪ್ರತಿಯೊಂದು ಕೇಂದ್ರದ ಪ್ರತಿಯೊಂದು ವಸ್ತು ಸಮೂಹದ ಒಟ್ಟು ಸಂಖ್ಯೆಗಳ ಚಿಲ್ಲರೆ ದರದ ಸೂಚ್ಯಂಕವನ್ನು, ಸಂಖ್ಯೆಗಳನ್ನು ಮಾನ್ಯ ಕಾರ್ಮಿಕ ಸದಸ್ಯರು ಈ ಸದನದಲ್ಲಿ ಮಂಡಿಸುವರೆ? ಈ ಸಂದರ್ಭದಲ್ಲಿ ಈ ಮಹತ್ವವಿಲ್ಲದ ಸಮೂಹಗಳ ಸೂಚ್ಯಂಕಗಳು ಮತ್ತು ವಸ್ತುಗಳು, ಅವುಗಳ ಗುಣಮಟ್ಟ ಮತ್ತು ಸಂಖ್ಯೆಗಳನ್ನು ನಿಗದಿಗೊಳಿಸಲು ಉಪಯೋಗಿಸಿದ ಆಧಾರವನ್ನು ತಿಳಿಯಪಡಿಸುವರೇ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಭಾರತ ಸರ್ಕಾರ ೧೯೪೨ರಲ್ಲಿ ಜೀವನ ವೆಚ್ಚದ ಸೂಚ್ಯಂಕಗಳನ್ನು ಒಂದು ಏಕರೂಪ ವಿಧಾನದಲ್ಲಿ ಸಂಕಲಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುವ ನಿರ್ಣಯ ಕೈಗೊಂಡಿತು. ಇಂತಹ ಸೂಚ್ಯಂಕಗಳನ್ನು ಸಿದ್ಧಪಡಿಸುವಲ್ಲಿ ವಿಳಂಬವಾಗಬಹುದೆಂಬ ಕಾರಣದಿಂದ ಕೆಲವು ಚಿಲ್ಲರೆ ದರಗಳ ಅಂಕಿಅಂಶಗಳೂ ಲಭ್ಯವಾಗಬಹುದಾಗಿದ್ದು ಅವುಗಳು ಕಾರ್ಮಿಕ ವ್ಯಾಜ್ಯಗಳಲ್ಲಿ ಉಪಯುಕ್ತವಾಗಬಹುದೆಂದು ತಿಳಿಯಲಾಯಿತು. ಆದ್ದರಿಂದ ಪ್ರಾಂತೀಯ ಸರ್ಕಾರಗಳೊಡನೆ ಚರ್ಚಿಸಿದ ನಂತರ ದೇಶದ ಕೆಲವು ಆಯ್ದ ಕೇಂದ್ರಗಳಿಂದ ದರಗಳ ಮಾಹಿತಿಯನ್ನು ಪಡೆದುಕೊಂಡು ಆ ಆಧಾರಾಂಶದ ಮೇಲೆ ಸೂಚ್ಯಂಕಗಳನ್ನು ಸಿದ್ಧಪಡಿಸಬಹುದೆಂದು ಸರ್ಕಾರ ನಿರ್ಣಯಿಸಿತು.

ಆ) ಈ ವಸ್ತುಗಳ ಸಮೂಹವನ್ನು ಪ್ರಕಟಿಸಲಾಗಿಲ್ಲ. ಈ ಬಗ್ಗೆ ಗೆಜೆಟ್‌ನಲ್ಲಿ ಸ್ಥಳಾವಕಾಶವಿಲ್ಲದಿರುವುದೊಂದೇ ಕಾರಣದ ಹೊರತು ಇನ್ನಾವ ವಿಶೇಷ ಕಾರಣವಿಲ್ಲ.

ಇ) ಪ್ರತಿಯೊಂದು ಕೇಂದ್ರದಿಂದ ಚಿಲ್ಲರೆ ದರಗಳ ಸೂಚ್ಯಂಕದ ಸಂಖ್ಯೆಯ ಸೇರಿಸುವ ಪ್ರತಿಯೊಂದು ವಸ್ತುಗಳ ಸಮೂಹದ ಬಗ್ಗೆ ವಿವರ ನೀಡುವ ಹೇಳಿಕೆಯನ್ನು ಸದನದ ಮುಂದೆ ಇಡಲಾಗಿದೆ. ಈ ವಸ್ತುಗಳ ಪಟ್ಟಿಯನ್ನು ತಯಾರಿಸಲು ಸಂಬಂಧಪಟ್ಟ ವರ್ಗಗಳ ಬಳಕೆಯ ಅಭ್ಯಾಸ ಮತ್ತು ಲಭ್ಯವಿರುವ ತುಲನಾತ್ಮಕ ಧಾರಣೆಗಳು ಆಧಾರವಾಗಿದ್ದವು.

**ಪ್ರೊ॥ ಎನ್. ಜಿ. ರಂಗಾ :** ಸಂಗ್ರಹಿಸಲಾದ ಈ ಅಂಕಿಗಳು ಕಾರ್ಮಿಕ ವರ್ಗದವರು ವಾಸ್ತವಿಕವಾಗಿ ಕೊಡುತ್ತಿರುವ ದರಗಳೊ, ಇಲ್ಲವೇ ಚಿಲ್ಲರೆ ಮಾರಾಟದ ಅಂಗಡಿಗಳಲ್ಲಿ ಕೊಡಬಹುದೆಂದು ನಿರೀಕ್ಷಿಸಿದ ದರಗಳೊ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಸ್ನೇಹಿತರು ಸ್ವಲ್ಪ ತಡೆಯುವುದಾದರೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೧, ೧೯೪೬, ಪು. ೨೭೦೮.

ಮಾನ್ಯ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಕುಟುಂಬ ಆಯವ್ಯಯದ ಬಗ್ಗೆ ಕೇಳಲಿರುವ ಮುಂದಿನ ಪ್ರಶ್ನೆಯ ಉತ್ತರದಲ್ಲಿ ಅವರಿಗೆ ಬೇಕಾಗಿರುವ ಮಾಹಿತಿ ದೊರೆಯುವುದು.

**ಪ್ರೊ॥ ಎನ್. ಜಿ. ರಂಗಾ :** ಸಾಮಾನ್ಯ ಕಾರ್ಮಿಕ ವರ್ಗದವರು ಪಟ್ಟಣಗಳಲ್ಲಿ ತಮ್ಮ ಆವಶ್ಯಕತೆಗಳನ್ನು ಕೊಳ್ಳುತ್ತಿರುವ ಕಾಳಸಂತೆಯ ದರಗಳ ಮಾಹಿತಿಯನ್ನು ಸರ್ಕಾರ ಹೊಂದಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಕಾಳಸಂತೆಯ ದರಗಳ ಬಗ್ಗೆ ಸರ್ಕಾರವು ಯಾವುದೇ ಮಾಹಿತಿಯನ್ನು ಹೊಂದಿರುವ ಬಗ್ಗೆ ನನಗೆ ತಿಳಿದಿಲ್ಲ.

**ಪ್ರೊ॥ ಎನ್.ಒ.ಜಿ. ರಂಗಾ :** ಸರ್ಕಾರವು ಆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಈ ಸಲಹೆಗೆ ನನ್ನ ಸಮ್ಮತಿ ಇಲ್ಲ.

**ಗೌರವಾನ್ವಿತ ಅಧ್ಯಕ್ಷರು :** ಆರ್ಡರ್, ಆರ್ಡರ್, ಮುಂದಿನ ಪ್ರಶ್ನೆ.

**ಭಾರತದ ಕಾರ್ಮಿಕ ಗೆಜೆಟ್‌ನಲ್ಲಿ ಚಿಲ್ಲರೆ ದರಸೂಚಿ ಸಂಖ್ಯೆಯನ್ನು ಮುದ್ರಿಸಬೇಕಾದ ಪ್ರತಿಯೊಂದು ಕೇಂದ್ರಕ್ಕಾಗಿ ವಿವಿಧ ವರ್ಗಗಳಲ್ಲಿ ಸೇರಿಸಲಾದ ಬಾಬುಗಳ ಸಂಖ್ಯೆಯನ್ನು ತೋರಿಸುವ ವಿವರಣ ಪಟ್ಟಿ**

**೧. ನಗರ ಕೇಂದ್ರಗಳು**

| | | ಧಾನ್ಯಗಳು ಧಾನ್ಯಗಳು | ದ್ವಿದಳ ವಸ್ತುಗಳು | ಆಹಾರದ ಇತರ ಆಹಾರ | ದೀಪ ವ್ಯವಸ್ಥೆ | ತೈಲ ಮತ್ತು | ಉಡುಪು | ಸಂಕೀರ್ಣ | ಒಟ್ಟು |
|---|---|---|---|---|---|---|---|---|---|
| | | ೧ | ೨ | ೩ | ೪ | ೫ | ೬ | ೭ | ೮ |
| ೧. | ಅಜಮೀರ್ | ೭ | ೫ | ೧೫ | ೨೭ | ೩ | ೯ | ೨ | ೧೧ |
| ೨. | ಹುಬ್ಬಳ್ಳಿ | ೨ | ೪ | ೧೩ | ೨೯ | ೩ | ೫ | ೬ | ೩೩ |
| ೩. | ಸೂರತ್ | ೩ | ೩ | ೧೧ | ೧೭ | ೩ | ೭ | ೬ | ೩೩ |
| ೪. | ದೋಹಡ್ | ೩ | ೩ | ೧೨ | ೧೮ | ೩ | ೬ | ೪ | ೩೧ |
| ೫. | ಅಕೋಲ | ೬ | ೩ | ೧೪ | ೨೦ | ೪ | ೮ | ೬ | ೩೮ |
| ೬. | ದೆಹಲಿ | ೯ | ೩ | ೧೬ | ೨೮ | ೫ | ೫ | ೬ | ೪೪ |
| ೭. | ರಾವಲ್‌ಪಿಂಡಿ | ೪ | ೩ | ೧೬ | ೨೩ | ೩ | ೫ | ೫ | ೩೬ |
| ೮. | ಅಮೃತ್‌ಸರ್ | ೪ | ೪ | ೧೫ | ೨೩ | ೩ | ೬ | ೪ | ೩೬ |
| ೯. | ಲೂಧಿಯಾನ | ೪ | ೩ | ೧೭ | ೨೪ | ೩ | ೬ | ೪ | ೩೭ |
| ೧೦. | ಸಿಯಾಲ್‌ಕೋಟ್ | ೪ | ೩ | ೧೫ | ೨೨ | ೩ | ೫ | ೪ | ೩೪ |
| ೧೧. | ಲಕ್ನೋ | ೯ | ೩ | ೧೦ | ೨೨ | ೩ | ೯ | ೭ | ೪೧ |
| ೧೨. | ಆಗ್ರಾ | ೯ | ೩ | ೧೦ | ೨೨ | ೩ | ೯ | ೭ | ೪೧ |
| ೧೩. | ಬರೇಲಿ | ೯ | ೩ | ೧೦ | ೨೨ | ೩ | ೯ | ೭ | ೪೧ |
| ೧೪. | ಗೌಹಾಟಿ | ೩ | ೪ | ೧೯ | ೨೬ | ೩ | ೬ | ೭ | ೪೨ |
| ೧೫. | ಟಿನ್‌ಸೂಕಿಯ | | | | | | | | |
| ೧೬. | ಡೆಹ್ರಿ- ಆನ್- ಸೋನ್ | ೫ | ೩ | ೧೧ | ೧೯ | ೪ | ೩ | ೬ | ೩೨ |
| ೧೭. | ಪಾಟ್ನ | ೫ | ೩ | ೧೨ | ೨೦ | ೪ | ೪ | ೬ | ೩೪ |

| | | ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|---|---|
| ೧೮. | ಕಟಕ್ | ೧ | ೪ | ೧೭ | ೨೨ | ೩ | ೪ | ೮ | ೩೭ |
| ೧೯. | ಬೇರ್ಹಮ್ ಪುರ್ | ೩ | ೨ | ೧೯ | ೨೪ | ೩ | ೩ | ೫ | ೩೫ |
| ೨೦. | ಖೆವ್ರಾ | ೪ | ೩ | ೧೬ | ೨೩ | ೩ | ೫ | ೪ | ೩೫ |
| ೨೧. | ಕರಾಚಿ | ೪ | ೨ | ೧೬ | ೨೨ | ೪ | ೪ | ೨ | ೩೨ |
| ೨೨. | ಬೆನಾರಸ್ | ೪ | ೩ | ೧೦ | ೧೭ | ೩ | ೯ | ೭ | ೩೬ |
| ೨೩. | ಮೀರತ್ | ೯ | ೩ | ೧೦ | ೨೨ | ೩ | ೯ | ೭ | ೪೧ |
| ೨೪. | ಹೌರಾ | ೪ | ೪ | ೧೬ | ೨೪ | ೫ | ೫ | ೭ | ೪೧ |
| ೨೫. | ಬಡ್ಜ್-ಬಡ್ಜ್ | " | " | " | " | " | " | " | " |
| ೨೬. | ಕಾನ್ಕಿನಾರಾ | " | " | " | " | " | " | " | " |
| ೨೭. | ನಾರಾಯಣಗಂಜ್ | " | " | " | " | " | " | " | " |
| ೨೮. | ಸೆರಮ್‌ಪೂರ್ | " | " | " | " | " | " | " | ' |
| ೨೯. | ಗೌರಿಪುರ್ | " | " | " | " | " | " | " | " |
| ೩೦. | ಕಂಚರಪುರ | " | " | " | " | " | " | " | " |
| ೩೧. | ಖರಗ್‌ಪುರ್ | " | " | " | " | " | " | " | " |
| ೩೨. | ಕಲ್ಕತ್ತ | " | " | " | " | " | " | " | " |
| ೩೩. | ರಾಣಿಗಂಜ್ | " | " | " | " | " | " | " | " |

ಭಾರತದ ಕಾರ್ಮಿಕ ಗೆಜೆಟ್‌ನಲ್ಲಿ ಉಡುಪು ಶ್ರೇಣಿಗಳಲ್ಲಿ ಬದಲಾವಣೆಯಾದ ಕಾರಣದಿಂದಾಗಿ ಉಡುಪುಗಳ ವರ್ಗಗಳಿಗೆ ಸೂಚಿಯನ್ನು ಲೆಕ್ಕಹಾಕಲು ಸಾಧ್ಯವಾಗುವುದಿಲ್ಲವೆಂಬುದನ್ನು ಈಗಾಗಲೇ ಹೇಳಲಾಗಿದೆ.

## II ಗ್ರಾಮೀಣ ಕೇಂದ್ರಗಳು

| | | ಧಾನ್ಯಗಳು | ದ್ವಿದಳ ಧಾನ್ಯಗಳು | ಇತರ ಆಹಾರದ ವಸ್ತುಗಳು | ಎಲ್ಲ ಆಹಾರ | ಇಂಧನ ಮತ್ತು ಬೆಳಕಿನ ವ್ಯವಸ್ಥೆ | ಉಡುಪು | ಸಂಕೀರ್ಣ | ಒಟ್ಟು |
|---|---|---|---|---|---|---|---|---|---|
| ೧. | ಬರ್ಮ | ೧ | ೨ | ೮ | ೧೧ | ೨ | ೩ | ೫ | ೨೧ |
| ೨. | ಮೈಬ್ಯಾಂಗ್ | ೧ | ೨ | ೧೦ | ೧೩ | ೨ | ೬ | ೫ | ೨೬ |
| ೩. | ರಾಜಾಪುರ್ | ೧ | ೨ | ೧೪ | ೧೭ | ೩ | ೬ | ೫ | ೩೧ |
| ೪. | ಶಂಕರಫುರ್ | ೭ | ೩ | ೮ | ೧೮ | ೨ | ೩ | ೪ | ೨೭ |
| ೫. | ಸೊನಾಯ್ಲಿ | ೩ | ೩ | ೧೨ | ೧೮ | ೨ | ೬ | ೫ | ೩೧ |
| ೬. | ಮುಲ್ಯಾಪಿ | ೨ | ೪ | ೯ | ೧೫ | ೨ | ೫ | ೪ | ೨೬ |
| ೭. | ನಾನಾ | ೪ | ೨ | ೧೩ | ೧೯ | ೩ | ೫ | ೩ | ೩೦ |
| ೮. | ಸಲ್ಮಾತ್‌ಪುರ್ | ೩ | ೪ | ೧೨ | ೧೯ | ೨ | ೪ | ೩ | ೨೮ |
| ೯. | ಷುಜಾಬಾದ್ | ೫ | ೪ | ೧೧ | ೨೦ | ೪ | ೬ | ೩ | ೩೩ |
| ೧೦. | ಗುಜರ್ ಖಾನ್ | ೨ | ೪ | ೧೨ | ೧೮ | ೩ | ೬ | ೨ | ೨೯ |
| ೧೧. | ಕೃಷ್ಣ | ೨ | ೨ | ೧೪ | ೧೮ | ೨ | ೬ | ೪ | ೩೦ |
| ೧೨. | ಲಖ್ | ೨ | ೩ | ೧೦ | ೧೫ | ೨ | ೫ | ೩ | ೨೫ |
| ೧೩. | ಮಾಲೂರ್ | ೩ | ೪ | ೧೩ | ೨೦ | ೨ | ೪ | ೫ | ೩೧ |
| ೧೪. | ಮುನಿಗುಡ | ೨ | ೩ | ೧೩ | ೧೮ | ೨ | ೪ | ೪ | ೨೮ |
| ೧೫. | ಕುಡ್ಡಿ | ೨ | ೨ | ೧೩ | ೧೭ | ೩ | ೭ | ೪ | ೩೧ |

# ೪೨೩
# ಈ ಹಿಂದೆ ಗಣಿಗಳ ಆಳತಳದಲ್ಲಿ ಕೆಲಸಮಾಡುತ್ತಿದ್ದ ಮಹಿಳೆಯರಿಗೆ ಪರ್ಯಾಯ ಉದ್ಯೋಗ*

**೧೫೨. ಮಿಸ್ ಮಣಿಬೆನ್ ಕಾರಾ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಕೆಳಕಂಡವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಅ) ಗಣಿಗಳಲ್ಲಿ ಆಳದಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದುದನ್ನು ನಿಷೇಧಿಸುವ ಆಜ್ಞೆಯನ್ನು ಮತ್ತೆ ವಿಧಿಸಿದ ದಿನಾಂಕಕ್ಕೆ ಮುನ್ನ, ಗಣಿಗಳಲ್ಲಿ ನೆಲತಳದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರೆಷ್ಟು?

ಆ) ಆಗ ಅವರಿಗೆ ಒದಗಿಸಲಾದ ಪರ್ಯಾಯ ಉದ್ಯೋಗ ಯಾವುದು?

ಇ) ಗಣಿಗಳ ಆಳದಲ್ಲಿ ಕೆಲಸಮಾಡುತ್ತಿದ್ದಾಗ ಅವರು ಪಡೆಯುತ್ತಿದ್ದ ಮಜೂರಿಗಳಿಗೂ ಈಗಿನ ಗಳಿಕೆಗಳಿಗೂ ವ್ಯತ್ಯಾಸವೇನು?

ಈ) ಅಲ್ಲಿ ಕೆಲಸ ಮಾಡುತ್ತಿರುವುದು ಕೊನೆಗೊಂಡ ಪರಿಣಾಮವಾಗಿ ಈಗ ಮಜೂರಿಯ ಹೊರತಾಗಿ ಅವರು ಇತರ ರಿಯಾತಿಗಳಲ್ಲಿ ಅನುಭವಿಸುವ ನಷ್ಟವೆಷ್ಟು?

ಉ) ಗಳಿಕೆಗಳಲ್ಲೂ ಇತರ ರಿಯಾಯಿತಿಗಳಲ್ಲೂ ಅವರಿಗೆ ಉಂಟಾದ ನಷ್ಟದ ಬಗ್ಗೆ ಪರಿಹಾರ ನೀಡುವ ವಿಚಾರದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರ ಯೋಚಿಸುತ್ತಿದೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಸುಮಾರು ೨೦,೦೦೦. ಆದರೆ ಖಚಿತವಾದ ಅಂಕಿ ಅಂಶಗಳು ಲಭ್ಯವಿಲ್ಲ. ಇವರ ಪೈಕಿ ಸರಿಸುಮಾರು ಶೇಕಡ ೫೦ರಷ್ಟು ಮಹಿಳೆಯರಿಗೆ ನಿಷೇಧವನ್ನು ವಿಧಿಸಲಾಯಿತು. ಅವರಿಗೆ ಪರ್ಯಾಯ ಉದ್ಯೋಗವನ್ನು ಒದಗಿಸಿಕೊಡಲಾಗಿದೆ. ಉಳಿದ ಶೇಕಡ ೫೦ರ ಪೈಕಿ ಅರ್ಧದಷ್ಟು ಮಹಿಳೆಯರು ತಮ್ಮ ಗ್ರಾಮಗಳಿಗೆ ಮರಳಿಹೋಗಿದ್ದಾರೆ. ಉಳಿದವರ ಪೈಕಿ ಕೆಲವರು ಕೆಳಗೆ ಗಣಿಗಳಲ್ಲಿ ನಿರುದ್ಯೋಗಿಗಳಾಗಿ ಕುಳಿತಿರುತ್ತಾರೆ. ಕಾರಣವೆಂದರೆ ಕರಾರು ಕೆಲಸವನ್ನು ಅಂದರೆ ಕಲ್ಲಿದ್ದಲು ಹೇರುವ ಕೆಲಸವನ್ನು ಮಾಡಲು ಅವರು ನಿರಾಕರಿಸುತ್ತಿದ್ದಾರೆ.

ಆ) ಭೂತಳದ ಮೇಲೆ ಕಲ್ಲಿದ್ದಲು ಹೇರುವ ಕೆಲಸ, ಕ್ವಾರಿಗಳಲ್ಲಿ ಮರಳನ್ನು ಹೇರುವುದು ಮತ್ತು ಇಳಿಸುವುದು, ಮತ್ತು ಹೆಚ್ಚು ಹೇರನ್ನು ತಗ್ಗಿಸುವುದು.

ಇ) ಹಾಗೆ ನಿಯೋಜಿತರಾದ ಮಹಿಳೆಯರು (ಅರ್ಧ ಸೇರು ಉಚಿತ ಅಕ್ಕಿ ಮತ್ತು ಮಹಿಳೆಯರಿಗೆ ತಲಾ ಎರಡು ಆಣೆ ಬೋನಸ್ ಇವುಗಳ ಹೊರತಾಗಿ) ದಿನಕ್ಕೆ ಹತ್ತರಿಂದ ಹನ್ನೆರಡು ಆಣೆಗಳಷ್ಟು ಗಳಿಸುತ್ತಾರೆ.

ಈ) ಹಾಗೆ ನಿಯೋಜಿತರಾದ ಮಹಿಳೆಯರಿಗೆ ಉಚಿತ ಹಾಲು ಸರಬರಾಜು ರಿಯಾಯಿತಿಯ ನಷ್ಟವಾಗಿದೆ. ಅವರು ಭೂತಳದಲ್ಲಿ ಕೆಲಸಮಾಡುತ್ತಾರೆ ಎಂಬ ಕಾರಣಕ್ಕಾಗಿ ಮಾತ್ರ ಆ ರಿಯಾಯಿತಿಯನ್ನು ಕೊಡಲಾಗುತ್ತಿತ್ತು.

---

* ಲೆಜಿಸ್ಲೇಟಿವ್ ಅಸೆಂಬ್ಲಿ (ಕೇಂದ್ರ), ಸಂ. ೪, ಮಾರ್ಚ್ ೨೬, ೧೯೪೬, ಪು. ೨೭೧೬.

ಉ) ಚುಕ್ಕೆಗುರುತಿನ ಕ್ರಮ ಸಂಖ್ಯೆ ೪೬೬ರ ಪ್ರಶ್ನೆಯ (ಆ) ಭಾಗಕ್ಕೆ ೧೯೪೬ರ ಫೆಬ್ರವರಿ ೨೫ನೇ ತಾರೀಖು ಕೊಟ್ಟ ಉತ್ತರದತ್ತ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಾಗಿದೆ.

## ೪೨೪
## ದೆಹಲಿಯಲ್ಲಿ ಬಾಡಿಗೆ ನಿಯಂತ್ರಣ ಆಜ್ಞೆಗಳಲ್ಲಿ ತಿದ್ದುಪಡಿ*

**೧೨೫೯. ಪಂಡಿತ ಠಾಕುರ್‌ದಾಸ್ ಭಾರ್ಗವ :** ಮಾನ್ಯ ಕಾರ್ಮಿಕ ಮಂತ್ರಿಗಳು ದಯೆಯಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಅ) ದೆಹಲಿಯಲ್ಲಿ ೧೯೪೪ರ ಜನವರಿಗೆ ಮುಂಚೆ ಬಾಡಿಗೆ ನಿಯಂತ್ರಣ ಆಜ್ಞೆಗಳ ಮೇರೆಗೆ ಮನೆ ಮಾಲೀಕನಿಗೆ ಮನೆಯು ತನ್ನ ಸ್ವಂತದ ಉಪಯೋಗಕ್ಕಾಗಿ ಅಗತ್ಯವಿದ್ದರೆ, ಬಾಡಿಗೆದಾರನನ್ನು ಖಾಲಿಮಾಡಿಸುವ ಅವಕಾಶವಿತ್ತು ಎಂಬ ಸಂಗತಿಯು ನಿಜವೆ?

ಆ) ಮೇಲ್ಕಂಡ ಆಜ್ಞೆಗಳನ್ನು ೧೯೪೪ರ ಜನವರಿಯಲ್ಲಿ ತಿದ್ದುಪಡಿ ಮಾಡಲಾಯಿತೆಂಬ ಮತ್ತು ಹಾಗೆ ಪರಿಷ್ಕೃತವಾದ ಆಜ್ಞೆಯಲ್ಲಿ ದೆಹಲಿ ನಿವಾಸಿಯಾದ ಮನೆ ಮಾಲೀಕನಿಗೆ ಮನೆಯು ತನ್ನ ಸ್ವಂತದ ಉಪಯೋಗಕ್ಕೆ ಅಗತ್ಯವಾಗಿದ್ದರೂ, ಬಾಡಿಗೆದಾರನನ್ನು ಖಾಲಿ ಮಾಡಿಸುವ ಅವಕಾಶಲ್ಲವೆಂಬ ಸಂಗತಿಯು ನಿಜವೆ?

ಇ) ಹಿಂದುಸ್ತಾನ್ ಟೈಂಸ್‌ನಲ್ಲಿ ೧೯೪೫ರ ಡಿಸೆಂಬರ್ ೨೨ರಂದು ಪ್ರಕಟಿಸಲಾದ ಮನೆ ಮಾಲೀಕನೊಬ್ಬನ ಪತ್ರವು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಮನೆಯ ಮಾಲೀಕರಿಗೆ ಮನೆಯು ತಮ್ಮ ಸ್ವಂತದ ಉಪಯೋಗಕ್ಕೆ ಅಗತ್ಯವಿರುವಾಗ ಬಾಡಿಗೆದಾರನನ್ನು ಖಾಲಿಮಾಡಿಸುವ ಆತನ ಹಕ್ಕನ್ನು ಪುನಃ ಸ್ಥಾಪಿಸುವ ಸೂಕ್ತತೆಯನ್ನು ಪರಿಶೀಲಿಸಲು ಸರ್ಕಾರ ಯೋಚಿಸುತ್ತಿದೆಯೆ?

ಉ) ಮನೆಗಳ ಪರಿಸ್ಥಿತಿಯು ಈ ಹಿಂದಿನ ಪರಿಸ್ಥಿತಿಗಿಂತ ಸುಗಮವಾಗಿದೆಯೆಂಬ ಸಂಗತಿಯು ಮತ್ತು ಫಲಿತಾಂಶವಾಗಿ ಯುದ್ಧದ ಅವಧಿಯಲ್ಲಿ ನಿರ್ಮಿಸಲಾದ ಹಂಗಾಮಿ ಕಟ್ಟಡಗಳನ್ನು ಕೆಡವಿಹಾಕಲು ಸರ್ಕಾರವು ನಿರ್ಧರಿಸಿದೆಯೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ|| ಬಿ. ಆರ್. ಅಂಬೇಡ್ಕರ್ :** ಅ) ಹೌದು, ೧೯೩೯ರ ನವದೆಹಲಿ ಮನೆ ಬಾಡಿಗೆ ನಿಯಂತ್ರಣ ಆಜ್ಞೆಯ ಅಡಿಯಲ್ಲಿ, ಮನೆಯ ಮಾಲೀಕನಿಗೆ ಮನೆಯು, ಸಕಾರಣವಾಗಿ ಮತ್ತು ವಾಸ್ತವವಾಗಿ ಅಗತ್ಯವಾಗಿದೆಯೆಂದು ಬಾಡಿಗೆ ನಿಯಂತ್ರಕನಿಗೆ ಮನದಟ್ಟಾದರೆ ಮಾತ್ರವೇ ಬಾಡಿಗೆದಾರನನ್ನು ಮನೆ ಮಾಲೀಕನು ಖಾಲಿಮಾಡಿಸಲು ಅವಕಾಶವಿತ್ತು.

ಆ) (೧) ಹೌದು, ೧೯೩೯ರ ನವದೆಹಲಿ ವಸತಿ ನಿಯಂತ್ರಣ ಅಧ್ಯಾದೇಶದ ಹಳೆಯ ಕಲಮಿನಲ್ಲಿದ್ದ "ಸಕಾರಣವಾಗಿ ಮತ್ತು ವಾಸ್ತವವಾಗಿ" ಎಂಬ ವಾಕ್ಯ ಭಾಗ, ಒಬ್ಬ ಅನೀತಿಯುತ ಮನೆ ಮಾಲೀಕನಿಗೆ, ಬಾಡಿಗೆದಾರನನ್ನು ನಿಗದಿತ ಬಾಡಿಗೆಗಿಂತ ಹೆಚ್ಚಿಗೆ ಬಾಡಿಗೆಯನ್ನು ಕೊಡುವಂತೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ ೪, ಮಾರ್ಚ್ ೨೭, ೧೯೪೬, ಪು. ೨೯೬೪.

ಬಲಾತ್ಕರಿಸಲು ಒಂದು ಅವಕಾಶವನ್ನು ಕೊಟ್ಟಿತ್ತು. ಇದಲ್ಲದೆ, ದೀರ್ಘಕಾಲದಿಂದ ಇದ್ದ ಮತ್ತು ದೆಹಲಿಯಲಿಯೇ ಅತ್ಯವಶ್ಯಕವಾಗಿ ವಾಸವಿರಬೇಕಾಗಿದ್ದ ಬಾಡಿಗೆದಾರನನ್ನು ಮನೆ ಬಿಡಿಸದ ಹಾಗೆ, ಅದರಲ್ಲೂ ಮನೆ ಮಾಲೀಕ ಈಗಾಗಲೇ ದೆಹಲಿಯಲ್ಲಿ ವಾಸಿಸುತ್ತಿದ್ದರೆ, ಆಗ ಅವರು ಅಂಥ ಬಾಡಿಗೆದಾರನನ್ನು ಮನೆ ಬಿಡಿಸದ ಹಾಗೆ ನಿಷೇಧಿಸುವುದು ಅತ್ಯಾವಶ್ಯಕವೆಂದು ಮನಗಾಣಲಾಯಿತು. ಪರಿಣಾಮವಾಗಿ ೧೧–ಆ ಕಲಮನ್ನು "೧೯೩೯ರ ನವದೆಹಲಿ ವಸತಿ ನಿಯಂತ್ರಣ ಅಧ್ಯಾದೇಶ"ಕ್ಕೆ ಸೇರ್ಪಡೆ ಮಾಡಲಾಯಿತು.

ಇ) ಹೌದು.

ಈ) ಇಲ್ಲ. ದೆಹಲಿಯಲ್ಲಿ ಆವಾಸ ಪರಿಸ್ಥಿತಿಯು ಉತ್ತಮಗೊಳ್ಳುವ ತನಕ ಇದನ್ನು ಮತ್ತೆ ಪರಿಶೀಲಿಸುವುದಿಲ್ಲ.

ಉ) ಪ್ರಶ್ನೆಯ ಮೊದಲ ಭಾಗಕ್ಕೆ ಉತ್ತರ ಇಲ್ಲ ಎಂದು.
ಕಟ್ಟಡಗಳು ಯಾವುದೇ ಅತ್ಯಾವಶ್ಯವಾಗಿಲ್ಲದಿದ್ದಾಗ ಮಾತ್ರವೇ ಸರ್ಕಾರದಿಂದ ಅವುಗಳನ್ನು ಕೆಡವಲಾಗುತ್ತದೆ. ಅಥವಾ ವಸತಿ ಪರಿಸ್ಥಿತಿಯ ಹಿತದೃಷ್ಟಿಯಲ್ಲಿ, ಹಂಗಾಮಿ ಕಟ್ಟಡದ ಬದಲಾಗಿ ಖಾಯಂ ಕಟ್ಟಡಗಳನ್ನು ನಿರ್ಮಿಸುವುದು ಅಗತ್ಯವೆಂದು ಪರಿಗಣಿಸಿದಾಗ ಮಾತ್ರ ಅಂಥ ಹಂಗಾಮಿ ಕಟ್ಟಡಗಳನ್ನು ಕೆಡವಲಾಗುತ್ತದೆ.

**ಶ್ರೀ ಮನು ಸುಬೇದಾರ್ :** ನಾನು ಕೇಳುವ ವಿಚಾರವನ್ನು ಸರ್ಕಾರವು ಪರಿಶೀಲಿಸಬಹುದೆಂದು ಅಪೇಕ್ಷಿಸಬಹುದೆ? ಬಾಡಿಗೆದಾರನು ಮನೆಯನ್ನು ಒಳಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಬಾಡಿಗೆದಾರನು ಲಾಭ ಗಳಿಸುತ್ತಿರುವಾಗಲೂ, ಸರ್ಕಾರವು ಅಂಥ ಬಾಡಿಗೆದಾರನ್ನು ಸುರಕ್ಷಿತವಾಗಿ ಇರಗೊಡಲು ಯೋಚಿಸುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಆ ವಿಚಾರವನ್ನು ಪರಿಶೀಲಿಸುತ್ತೇನೆ.

**ಪ್ರೊ॥ ಎನ್. ಜಿ. ರಂಗಾ :** ಈ ಸರ್ಕಾರಿ ಕಟ್ಟಡಗಳನ್ನು ಕೆಡವಿಹಾಕುವಲ್ಲಿ ನಮಗೆ ಆಸಕ್ತಿಯಿಲ್ಲ. ಹಾಗೆ ಕೆಡವಿಹಾಕುವಲ್ಲಿ ಮನೆಯ ಮಾಲೀಕರಿಗೆ ಆಸಕ್ತಿಯೆ ಅಥವಾ ಸರ್ಕಾರಕ್ಕೆ ಆಸಕ್ತಿಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನಗೆ ಪ್ರಶ್ನೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ.

**ಪ್ರೊ॥ ಎನ್. ಜಿ. ರಂಗಾ :** ಪ್ರಶ್ನೆಯ ಉ) ಭಾಗ ಹಾಗೆ ಕೇಳುತ್ತದೆ. "ದೆಹಲಿಯಲ್ಲಿ ವಸತಿ ಪರಿಸ್ಥಿತಿಯು ಹಿಂದಿಗಿಂತಲೂ ಸುಗಮವಾಗಿದೆಯೆಂದು ಮತ್ತು ಆ ಕಾರಣ ಯುದ್ಧದ ಅವಧಿಯಲ್ಲಿ ನಿರ್ಮಿಸಲಾದ ಹಂಗಾಮಿ ಸರ್ಕಾರಿ ಕಟ್ಟಡಗಳನ್ನು ಕೆಡವಿಹಾಕಲು ಸರ್ಕಾರವು ನಿರ್ಧರಿಸಿದೆಯೆಂಬ ಸಂಗತಿಯು ನಿಜವೆ?"

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಸರ್ಕಾರವು ನಿರ್ಧರಿಸಿದೆಯೆಂದು ನಾನು ಹೇಳಲಿಲ್ಲ. ಹಂಗಾಮಿ ಕಟ್ಟಡಗಳು ಅಗತ್ಯ ಉದ್ದೇಶಕ್ಕೆ ಬೇಕಾಗಿಲ್ಲವೆಂದು ಕಂಡುಬಂದ ಹೊರತು ಸರ್ಕಾರವು ಅವುಗಳನ್ನು ಕೆಡವಲಿಕ್ಕಿಲ್ಲ ಎಂದು ಹೇಳಿದೆ.

**ಪ್ರೊ॥ ಎನ್. ಜಿ. ರಂಗಾ :** ಕಟ್ಟಡಗಳ ಅಗತ್ಯ ಸರ್ಕಾರಕ್ಕೆ ಇಲ್ಲದಿದ್ದರೆ, ನಿವಾಸದ ಮನೆಗಳು ಅಗತ್ಯವಿರುವಂಥ ಸ್ಥಳೀಯ ಸಾರ್ವಜನಿಕರಿಗೆ ಅವುಗಳನ್ನು ಬಾಡಿಗೆಗೆ ಕೊಡುವುದರ ಸೂಕ್ತತೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೆ?

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ಸರ್ಕಾರದ ಉದ್ದೇಶಗಳಿಗೆ ಅವು ಅಗತ್ಯವಿಲ್ಲದಿದ್ದರೆ

ಮತ್ತು ಸಾರ್ವಜನಿಕರು ಅವುಗಳನ್ನು ಬಾಡಿಗೆಗೆ ತೆಗೆದುಕೊಳ್ಳಲು ಸಿದ್ಧರಿದ್ದರೆ, ಆ ವಿಚಾರವನ್ನು ಸರ್ಕಾರವು ಪರಿಶೀಲಿಸುವುದು.

**ಸರ್ ಮಹಮದ್ ಯಾಮಿನ್ :** ೧೯೪೪ರ ಈ ಬಾಡಿಗೆ ನಿಯಂತ್ರಣ ಅಧ್ಯಾದೇಶವು ಎಷ್ಟು ಸಮಯದವರೆಗೆ ಜಾರಿಯಲ್ಲಿರುವುದು?

**ಗೌರವಾನ್ವಿತ ಡಾ ॥ ಬಿ. ಆರ್. ಅಂಬೇಡ್ಕರ್ :** ತುರ್ತು ಪರಿಸ್ಥಿತಿಯು ಇರುವವರೆಗೂ ಸದರಿ ಅಧ್ಯಾದೇಶ ಜಾರಿಯಲ್ಲಿ ಇರುತ್ತದೆ ಎಂಬ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತುಂಟು.

**ಅಧ್ಯಕ್ಷರು :** ಮುಂದಿನ ಪ್ರಶ್ನೆ.

## ೪೨೫
## ದಿಲ್ಲಿಯಲ್ಲಿ ನಿಯಂತ್ರಣ ಆಜ್ಞೆಯ ರದ್ದು*

**೧೨೪೨. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಅ) ಹಿಂದುಸ್ತಾನ್ ಟೈಂಸ್‌ನಲ್ಲಿ ೧೯೪೬ ಮಾರ್ಚ್ ೩ನೇ ತಾರೀಖಿನಂದು ಪ್ರಕಟವಾದ ಸುದ್ದಿಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ?

ಆ) ಮಾನ್ಯ ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ವಾಸದ ಮತ್ತು ಈ ಸಂಬಂಧದಲ್ಲಿ ಎಲ್ಲ ನಿಯಂತ್ರಿತ ಸಾಮಗ್ರಿಗಳನ್ನು ಬಿಡುಗಡೆಮಾಡುವ ಅಗತ್ಯವನ್ನು ಕುರಿತಂತೆ ಇರುವ ವಿವರಣೆಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಇ) ಇಟ್ಟಿಗೆ ಮಾರಾಟ ಇನ್ನೂ ನಿಯಂತ್ರಣಕ್ಕೆ ಒಳಪಟ್ಟಿರುವುದೇಕೆ? ಇದಲ್ಲದೆ, ಯುದ್ಧ ಸಮಾಪ್ತಿಯಾಗಿ ಇಷ್ಟು ಸಮಯದ ನಂತರವೂ ದೆಹಲಿಯಲ್ಲಿ ಇಟ್ಟಿಗೆ ಖರೀದಿಗಾಗಿ ಪರ್ಮಿಟ್ ಯಾಕೆ ಪಡೆಯಬೇಕು ಮತ್ತು

ಈ) ದೆಹಲಿಯ ಹಾಗೂ ನವದೆಹಲಿಯ ಬೆಳೆಯುತ್ತಿರುವ ಅಪಾರ ಜನಸಂಖ್ಯೆಯ ಸಲುವಾಗಿ ಹೆಚ್ಚಿನ ಮನೆಗಳನ್ನು ಕಟ್ಟಿಸುವುದು ಅಗತ್ಯವಾಗಿರುವ ನಿಮಿತ್ತ ಈ ಹಣಕಾಸು ವರ್ಷದ ಕೊನೆಗೆ ಅಂದರೆ ೧೯೪೬ರ ಏಪ್ರಿಲ್ ೧ನೇ ತಾರೀಖಿಗೆ ಮುನ್ನ ತಮ್ಮ ಇಲಾಖೆಯಲ್ಲಿನ ಎಲ್ಲಾ ನಿಯಂತ್ರಣಗಳನ್ನು ರದ್ದುಗೊಳಿಸುವುದರ ಪರಿಶೀಲಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು, ಆ) ಹೌದು, ಮತ್ತು ಈ) ಇಟ್ಟಿಗೆಗಳ ಬೆಲೆಯು ಅಗತ್ಯ ಮಟ್ಟದಲ್ಲಿ ದೊರಕುವ ಹಾಗೆ ಮತ್ತು ಸರ್ಕಾರಿ ಮತ್ತು ಖಾಸಗಿ ದಾಸ್ತಾನುಗಳಿಂದ ಇಟ್ಟಿಗೆಗಳ ವಿಲೇವಾರಿ ಕ್ರಮಬದ್ಧವಾಗಿ ನಡೆಯುವ ಹಾಗೆ ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಬೆಲೆ ನಿಯಂತ್ರಣ ಮತ್ತು ವಿತರಣೆಯ ನಿಯಂತ್ರಣ–ಇವೆರಡನ್ನು ಮುಂದುವರಿಸುವುದು ಅಗತ್ಯವೆಂದು ಭಾವಿಸಲಾಗಿತ್ತು. ಆದಾಗ್ಯೂ ಈ ಇಡೀ ವಿಷಯವನ್ನು ಈಗ ಮತ್ತೆ ಪರಿಶೀಲಿಸಲಾಗುವುದು.

**ಪ್ರೊ॥ ಎನ್. ಜಿ. ರಂಗಾ :** ಕೇಂದ್ರಾಡಳಿತ ಈ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸುವುದೂ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ಮಾನ್ಯ ಮಂತ್ರಿಗಳ ಹೊಣೆಗಾರಿಕೆಗೆ ಸೇರಿಲ್ಲವೆ? ಸೇರಿದ್ದರೆ, ಕೇಂದ್ರದ ಆಡಳಿಕ್ಕೆ ಅಧೀನವಾದ ಇತರ ಪಟ್ಟಣಗಳಿಗೂ ಇದೇ ಪರ್ಯಾಲೋಚನೆಯನ್ನು ಅನ್ವಯಿಸುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೭, ೧೯೪೬, ಪು. ೨೯೬೭.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ಮಾನ್ಯ ಸ್ನೇಹಿತರು ಹೇಳಿದ್ದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

**ಶ್ರೀ ಮನುಸುಬೇದಾರ್ :** ಮುಂಬಯಿಯಲ್ಲಿ ಎಲ್ಲ ನಿಯಂತ್ರಣ ಆಜ್ಞೆಗಳನ್ನು ರದ್ದುಗೊಳಿಸಿರುವ ಕಾರಣ, ಅವುಗಳನ್ನು ಭಾರತಾದ್ಯಂತ ರದ್ದುಗೊಳಿಸುವುದು ಏಕೆ ಸಾಧ್ಯವಾಗಲಿಲ್ಲ ಎಂಬುದನ್ನು ಸರ್ಕಾರವು ವಿಚಾರಿಸುವುದೆ? ಮತ್ತು ಮಾನ್ಯ ಮಂತ್ರಿಗಳು ಮುಖ್ಯವಾಗಿ ಕೇಂದ್ರಾಧೀನ ಪ್ರದೇಶಗಳಲ್ಲಿ ಇವುಗಳನ್ನು ಏಕೆ ರದ್ದುಪಡಿಸಕೂಡದು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನಾನು ಆ ಕುರಿತು ವಿಚಾರಿಸುತ್ತೇನೆ.

## ೪೨೬
## ದೆಹಲಿಯ ಕರೋಲ್‌ಭಾಗ್‌ನಲ್ಲಿ ತೆಗೆದುಕೊಂಡ ಮನೆಗಳು*

**೧೨೫೮. ಮಿ. ಅಹಮ್ಮದ್ ಇ.ಎಚ್. ಜಾಫರ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಆ) ಸರ್ಕಾರವು ಸರ್ಕಾರಿ ನೌಕರರಿಗೆ ಹಂಚಿಕೆಮಾಡುವ ಸಲುವಾಗಿ ದೆಹಲಿಯ ಕರೋಲ್‌ಭಾಗ್‌ನಲ್ಲಿರುವ ಕೆಳಕಂಡ ಮನೆಗಳನ್ನು ತೆಗೆದುಕೊಂಡಿತ್ತೆಂಬ ಸಂಗತಿ ನಿಜವೆ? ಮತ್ತು ಮನೆಗಳಲ್ಲಿ ಒಂದರಿಂದ ಆರು ತಿಂಗಳವರೆಗಿನ ಅವಧಿಗಳವರೆಗೆ ಯಾರೂ ವಾಸವಾಗಿರಲಿಲ್ಲವೆಂಬ ಸಂಗತಿಯೂ ನಿಜವೆ?

| | | |
|---|---|---|
| ೧. | ೧೫–ಎ/೩೯ | ಮೊದಲ ಅಂತಸ್ತು I |
| ೨. | ೧೫/ಎ/೯ | ನೆಲ ಅಂತಸ್ತು I |
| ೩. | ೧೫–ಎ/೯ | ನೆಲ ಅಂತಸ್ತು II |
| ೪. | ೬/೭೩ | ಮೊದಲ ಅಂತಸ್ತು II |
| ೫. | ೬/೭೩ | ನೆಲ ಅಂತಸ್ತು I |
| ೬. | ೨೪–೨೫ | ಮೊದಲ ಅಂತಸ್ತು |
| ೭. | ಸಂ. ೧೯ | ಬಿರ್ಲಾ ಫ್ಲಾಟ್ |
| ೮. | ೫೩/೭ | ನೆಲ ಅಂತಸ್ತು I |
| ೯. | ೧೫ಎ/೨–೩–೪ | ನೆಲ ಅಂತಸ್ತು I |
| ೧೦. | ಬಿರ್ಲಾ ಕಟ್ಟಡ | ನೆಲ ಅಂತಸ್ತು II |
| ೧೧. | ಬಿರ್ಲಾ ಕಟ್ಟಡ | ನೆಲ ಅಂತಸ್ತು II |
| ೧೨. | ೬/೭೫–೭೬ | ಮೊದಲ ಅಂತಸ್ತು I |
| ೧೩. | ೬೪೨ | ಬಿ.ಡಿ. |

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೭, ೧೯೪೬, ಪು. ೨೯೭೭.

| | |
|---|---|
| ೧೪. ೨೫೩೧೦ | ಎಂ.ಸಿ. |
| ೧೫. ೧೫–ಎ/೩೯ | ನೆಲ ಅಂತಸ್ತು II |
| ೧೬. ೧೫–ಎ/೩೯ | ನೆಲ ಅಂತಸ್ತು I |
| ೧೭. ೬/೭೫–೭೬ | ಮೊದಲ ಅಂತಸ್ತು V |
| ೧೮. ಗಣೇಶ್ ಭವನ್ | –– |
| ೧೯. ೬/೬೪ | ನೆಲ ಅಂತಸ್ತು |

ಇ) ಈ ಮನೆಗಳನ್ನು ಒಬ್ಬರ ನಂತರ ಇನ್ನೊಬ್ಬರಿಗೆ ಹಂಚಿದರೂ ವಾಸಕ್ಕೆ ಅರ್ಹವಾದ ಸೌಕರ್ಯಗಳು ಮತ್ತು ಏಕಾಂತವಿಲ್ಲದ ಕಾರಣ ಎಲ್ಲರೂ ಆ ಮನೆಗಳನ್ನು ನಿರಾಕರಿಸಿದರು ಎಂಬುದು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇ) ಆಗ ಇದ್ದ ಅಗತ್ಯಗಳನ್ನು ಪೂರೈಸುವ ಸಲುವಾಗಿ ತೆಗೆದುಕೊಂಡ ಸದರಿ ಮನೆಗಳ ಸ್ಥಿತಿಗತಿಗಳನ್ನು ತೋರಿಸುವ ಕೋಷ್ಟಕವನ್ನು ಸದನದ ಮುಂದೆ ಮಂಡಿಸಲಾಗಿದೆ.

ಈ) ಈ ಮನೆಗಳ ಪೈಕಿ ಕೆಲವನ್ನು ತೆಗೆದುಕೊಳ್ಳುವಂತೆ ಕೇಳಿದಾಗ ಯಾರೂ ತೆಗೆದುಕೊಳ್ಳಲು ಒಪ್ಪಲಿಲ್ಲ. ಹೀಗಾಗಿ ಅವು ಸಾಕಷ್ಟು ಸಮಯದವರೆಗೆ ತೆರವಾಗಿದ್ದುವು. ಆ ಕುರಿತು ಕೋಷ್ಟಕವನ್ನು ಸದನದ ಮುಂದೆ ಇಡಲಾಗಿದೆ.

**ಗುತ್ತಿಗೆಗೆ ಪಡೆದುಕೊಂಡ ಸಮಸ್ಯಾತ್ಮಕ ಮನೆಗಳ ಸ್ಥಿತಿಯನ್ನು ತೋರುವ ವಿವರವಾದ ಪಟ್ಟಿ**

| ಕ್ರ.ಸಂ. | ಮನೆಯ ಹೆಸರು | ಖಾಲಿಯಾಗಿರುವ ದಿನಾಂಕ | ಷರಾ |
|---|---|---|---|
| ೧ | ೨ | ೩ | ೪ |
| ೧. | ೧೫ಎ/೩೯ಎಫ್.ಎಫ್.ಜಿ | ೨೬ನೇ ಜೂನ್ ೧೯೪೫ | ೧೯೪೫ರ ಜೂನ್ ೨೬, ೧೯೪೭ರ ಆಗಸ್ಟ್ ೧೫, ೧೯೪೫ರ ನವೆಂಬರ್ ೧೨, ೧೯೪೫ರ ನವೆಂಬರ್ ೨೧ ಮತ್ತು ೧೯೪೬ರ ಜನವರಿ ೩೧ರಂದು ಈ ಮನೆಯನ್ನು ಅಧಿಕಾರಿಗಳಿಗೆ ನೀಡಲಾಗಿದ್ದಿತು. ಆದರೆ ಎಲ್ಲರೂ ಅದನ್ನು ನಿರಾಕರಿಸಿದರು. ಅದನ್ನು ೧೯೪೬ರ ಮಾರ್ಚ್ ೮ರಂದು ಬಿಟ್ಟುಕೊಡಲಾಗಿದೆ. |
| ೨. | ೧೫ಎ/೯ಜಿ.ಎಫ್.೧ | ೧೪ನೇ ಜನವರಿ ೧೯೪೬ | ಈ ಹಿಂದೆ ಹಂಚಿಕೆ ಪಡೆದವನ ಹಂಚಿಕೆಯನ್ನು ೧೯೪೬ರ ಜನವರಿ ೧೪ರಿಂದ ರದ್ದುಮಾಡಲಾಯಿತು. ಅದನ್ನು ೧೯೪೬ರ ಜನವರಿ ೨೮ರಂದು ಮರುಹಂಚಿಕೆ ಮಾಡಲಾಯಿತು ಮತ್ತು ೧೯೪೬ರ ಫೆಬ್ರವರಿ ೭ರಂದು ಆ ಮನೆಯನ್ನು ಹಂಚಿಕೆ ಮಾಡಲ್ಪಟ್ಟವರು ಒಪ್ಪಿಕೊಂಡರು. |
| ೩. | ೧೫ಎ/೯ ಜಿ.ಎಫ್. II | ೧೫ನೇ ನವೆಂಬರ್ ೧೯೪೫ | ಮನೆಯನ್ನು ೧೯೪೫ರ ನವೆಂಬರ್ ೨೦, ೧೯೪೫ರ ಡಿಸೆಂಬರ್ ೨೧, ೧೯೪೬ರ ಜವನರಿ ೨೮ ಮತು ೧೯೪೬ರ ಫೆಬ್ರವರಿ ೧೬ರಂದು ಅಧಿಕಾರಿಗಳಿಗೆ ಮರುಹಂಚಿಕೆ |

| | | |
|---|---|---|
| | | ಮಾಡಲಾಗಿದ್ದಿತು. ಎಲ್ಲರೂ ಅದನ್ನು ನಿರಾಕರಿಸಿದರು. ಅದನ್ನು ೧೯೪೬ರ ಮಾರ್ಚ್ ೧೪ರಂದು ಮರುಹಂಚಿಕೆ ಮಾಡಲಾಯಿತು. |
| ೪. | ೬/೭೩ ಎಫ್. ಎಫ್.II ಸೆಪ್ಟೆಂಬರ್ ೧೯೪೫ | ಮನೆಯನ್ನು ೧೯೪೫ರ ಅಕ್ಟೋಬರ್ ೪, ೧೯೪೫ರ ಅಕ್ಟೋಬರ್ ೨೬ ಮತ್ತು ೧೯೪೫ರ ಡಿಸೆಂಬರ್ ೪ರಂದು ವಿವಿಧ ಅಧಿಕಾರಿಗಳಿಗೆ ನೀಡಲಾಗಿದ್ದಿತು. ಅದನ್ನು ಎಲ್ಲರೂ ನಿರಾಕರಿಸಿದರು. ಅದನ್ನು ಅಂತಿಮವಾಗಿ ೧೯೪೬ರ ಜನವರಿ ೩ರಂದು ಆಮನೆಯನ್ನು ಒಪ್ಪಿಕೊಂಡರು. |
| ೫. | ೬/೭೩ಜಿ. ಎಫ್.ಐ. ೫ನೇ ಫೆಬ್ರವರಿ ೧೯೪೬ | ಹಂಚಿಕೆ ಪಡೆದವರನ್ನು ಸರ್ಕಾರಿ ವಸತಿಯನ್ನು ಪಡೆಯಲು ಅನರ್ಹರೆಂದು ಘೋಷಿಲಾಯಿತು ಮತ್ತು ಅವರೇ ೧೯೪೬ ಫೆಬ್ರವರಿ ೫ರಂದು ಮನೆಯನ್ನು ಬಿಟ್ಟರು. ಅದನ್ನು ೧೯೪೬ರ ಫೆಬ್ರವರಿ ೨೨ರಂದು ಮರುಹಂಚಿಕೆ ಮಾಡಲಾಯಿತು. |
| ೬ | ೨೪/೨೬ (ಇದು ೨೨/೬ನವೆಂಬರ್ ೧೯೪೫ ಎಂದಿರ ಬೇಕು) | ಮನೆಯನ್ನು ೧೯೪೫ರ ಅಕ್ಟೋಬರ್ ೧೯, ೧೯೪೫ರ ನವೆಂಬರ್ ೨೬, ೧೯೪೫ರ ಡಿಸೆಂಬರ್ ೨೧ ಮತ್ತು ೧೯೪೬ರ ಜನವರಿ ೨೮ರಂದು ವಿವಿಧ ಸಿಬ್ಬಂದಿಗಳಿಗೆ ನೀಡಲಾಗಿದ್ದಿತು. ಆದರೆ, ಎಲ್ಲರೂ ಅದನ್ನು ನಿರಾಕರಿಸಿದರು. ಅಂತಿಮವಾಗಿ ಅದನ್ನು ೧೯೪೬ರ ಫೆಬ್ರವರಿ ೧೬ರಂದು ಒಪ್ಪಿಕೊಳ್ಳಲಾಯಿತು ಮತ್ತು ಹಂಚಿಕೆ ಪಡೆದವರು ಅದನ್ನು ವಶಪಡಿಸಿಕೊಂಡರು. |
| ೭. | ಸಂ. ೧೯ ಬಿರ್ಲಾಫ್ಲಾಟ್ ಜನವರಿ ೧೯೪೬ | ಅತಿಥಿಗಳಿಗಾಗಿ ಕಾಯ್ದಿರಿಸಿದೆ. |
| ೮. | ೫೩/೭೫ ಜಿ.ಎಫ್.ಐ. ೨೩ನೇ ಡಿಸೆಂಬರ್ | ೧೯೪೫ರ ಡಿಸೆಂಬರ್ ೨೩ರಂದು ಹಿಂದಿನ ಹಂಚಿಕೆ ಪಡೆದವರು ಹಿಂದಕ್ಕೆ ಒಪ್ಪಿಸಿದ್ದರು. ಅದನ್ನು ೧೯೪೫ರ ಡಿಸೆಂಬರ್ ೨೮ರಂದು ಮರುಹಂಚಿಕೆ ಮಾಡಲಾಯಿತು ಮತ್ತು ಇದನ್ನು ೧೯೪೬ರ ಜನವರಿ ೩ರಂದು ಹಂಚಿಕೆಯನ್ನು ಪಡೆದವರು ಒಪ್ಪಿಕೊಂಡರು. |
| ೯. | ೧೫ಎ/೨,೩, ೪ ಜಿ.ಎಫ್. I ೭ನೇ ಡಿಸೆಂಬರ್ ೧೯೪೫ | ಅದನ್ನು ೧೯೪೫ರ ಜನವರಿ ೩೦ ಮತ್ತು ೧೯೪೬ರ ಫೆಬ್ರವರಿ ೧೦ರಂದು ನೀಡಲಾಗಿದ್ದಿತು. ಆದರೆ ಪಡೆಯಬೇಕಾದವರು ಅದನ್ನು ನಿರಾಕರಿಸಿದರು. ಅದನ್ನು ಮತ್ತೆ ೧೯೪೬ರ ಮಾರ್ಚ್ ೧೪ರಂದು ಮರುಹಂಚಿಕೆ ಮಾಡಲಾಯಿತು. |
| ೧೦. | ಬಿರ್ಲಾ ಫ್ಲಾಟ್ ಜಿ.ಎಫ್. II | ಫ್ಲಾಟ್ ಸಂಖ್ಯೆ ೨೨ರಲ್ಲಿ ವಾಸವಿರುವ ಅಧಿಕಾರಿಗೆ ಪರಸ್ಪರ ವಿನಿಮಯದ ಮೇರೆಗೆ ಮನೆಯನ್ನು ಹಂಚಲಾಗಿದ್ದಿತು. ಅವರನ್ನು ತಮ್ಮ ಫ್ಲಾಟಿಗೆ ಬದಲಾಯಿಸಲು ಕೋರಲಾಗಿದ್ದಿತು. |
| ೧೧. | ಬಿರ್ಲಾ ಫ್ಲಾಟ್ ಜಿ.ಎಫ್. I | ಶಿಬಿರ ಸಂ. ೧೬೪ರ ಹಂಚಿಕೆ ಪಡೆದವರಿಂದ ಪರಸ್ಪರ |

| | | | |
|---|---|---|---|
| | | | ವಿನಿಮಯದ ಮೇರೆಗೆ ಈ ಫ್ಲಾಟನ್ನು ವಶಪಡಿಸಿ ಕೊಳ್ಳಲಾಗಿದ್ದಿತು. ಶಿಬಿರವನ್ನು ಖಾಲಿಮಾಡಲು ಮತ್ತು ತಮ್ಮ ಫ್ಲಾಟಿಗೆ ಹೋಗಲು ಕೋರಲಾಗಿದ್ದಿತು. |
| ೧೨. | ೬/೭೫೭೬ ಎಫ್.ಎಫ್.II | ೨೦ನೇ ಜನವರಿ ೧೯೪೬ | ಹಿಂದೆ ಹಂಚಿಕೆ ಪಡೆದವರು ರಾಜೀನಾಮೆಯ ಕಾರಣದಿಂದಾಗಿ ೧೯೪೬ರ ಜನವರಿ ೨೦ರಂದು ಮನೆಯನ್ನು ಖಾಲಿಮಾಡಿದರು ಅದನ್ನು ೧೯೪೬ರ ಮಾರ್ಚ್ ೪ರಿಂದ ಮರುಹಂಚಿಕೆ ಮಾಡಲಾಯಿತು. |
| ೧೩. | ಬಿ.ಡಿ./೬೪೨ | ಜನವರಿ ೧೯೪೬ | ಜನವರಿ ೧೯೪೬ರಲ್ಲಿ ಹಿಂದೆ ಹಂಚಿಕೆ ಪಡೆದವರು ಖಾಲಿಮಾಡಿದರು. ಅದನ್ನು ಬಿಡಿಸಲು ಶಿಫಾರಸು ಮಾಡಲಾಗಿತ್ತು. |
| ೧೪. | ೨೫೩೧೦ ಎಂ.ಸಿ. | ೧೮ನೇ ಆಗಸ್ಟ್ ೧೯೪೫ | ಈ ಮನೆಯನ್ನು ೧೯೪೫ರ ಜೂನ್ ೨೬, ೧೯೪೫ರ ಆಗಸ್ಟ್ ೧೫, ೧೯೪೫ ಸೆಪ್ಟೆಂಬರ್ ೧೩, ೧೯೪೫ರ ಅಕ್ಟೋಬರ್ ೧೯, ೧೯೪೫ರ ನವೆಂಬರ್ ೨೬ ಮತ್ತು ೧೯೪೫ರ ಡಿಸೆಂಬರ್ ೨೧ರಂದು ಅಧಿಕಾರಿಗಳಿಗೆ ನೀಡಲಾಗಿದ್ದಿತು. ಅದನ್ನು ಎಲ್ಲರೂ ನಿರಾಕರಿಸಿದರು. ಅದನ್ನು ೧೯೪೬ರ ಮಾರ್ಚ್ ೧೫ರಿಂದ ಬಿಟ್ಟುಕೊಡಲಾಯಿತು. |
| ೧೫. | ೧೫ಎ/೩೯ ಜಿ.ಎಫ್.II | ೩ನೇ ಜುಲೈ ೧೯೪೫ | ಈ ಎರಡು ಸೆಟ್ಟುಗಳು ಜನಪ್ರಿಯವಾದುದಲ್ಲವೆಂದು ರುಜುವಾತಾಯಿತು ಮತ್ತು ಅದನ್ನು ಎಲ್ಲರೂ ನಿರಾಕರಿಸಿದರು. |
| ೧೬. | ೧೫ಎ/೩೯ ಜಿ.ಎಫ್.I | ೯ನೇ ಆಗಸ್ಟ್ ೧೯೪೪ | ಈ ಸೆಟ್ಟುಗಳನ್ನು ೧೯೪೬ರ ಮಾರ್ಚ್ ೮ರಿಂದ ಮಾಲಿಕರಿಗೆ ಬಿಟ್ಟುಕೊಡಲಾಯಿತು. |
| ೧೭. | ಗಣೇಶ ಭವನ | ೨೮ನೇ ಫೆಬ್ರವರಿ ೧೯೪೬ | ಇದನ್ನು ಪಡೆದಿದ್ದವರು ಸರ್ಕಾರಿ ವಸತಿಗೆ ಅನರ್ಹರೆಂದು ಘೋಷಿಸಿದ್ದರಿಂದ ಮನೆಯ ಖಾಲಿ ಇತ್ತು. ಮನೆಯನ್ನು ೧೯೪೬ರ ಮಾರ್ಚ್ ೪ರಿಂದ ಮರುಹಂಚಿಕೆ ಮಾಡಲಾಯಿತು. |
| ೧೮. | ೬/೬೪ | ೨೮ನೇ ಫೆಬ್ರವರಿ ೧೯೪೬ | ಮನೆಯನ್ನು ೧೯೪೬ರ ಮಾರ್ಚ್ ೪ರಂದು ಮರುಹಂಚಿಕೆ ಮಾಡಲಾಯಿತು. |

# ೪೨೭
# ದೆಹಲಿಯ ಕರೋಲ್‌ಬಾಗ್‌ನಲ್ಲಿ ಕಡ್ಡಾಯವಾಗಿ ವಶಪಡಿಸಿಕೊಳ್ಳಲಾದ ಮನೆಗಳು*

**೧೨೫೫. ಮಿ॥ ಅಹಮ್ಮದ್ ಇ.ಹೆಚ್. ಜಾಫರ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ದೆಹಲಿಯ ಕರೋಲ್‌ಬಾಗ್‌ನಲ್ಲಿ ಕಡ್ಡಾಯವಾಗಿ ವಶಪಡಿಸಿಕೊಳ್ಳಲಾದ ಮನೆಗಳ ಪೈಕಿ ಹಂಚಿಕೆ ಪಡೆದವರು ಒಪ್ಪಿಕೊಂಡ ಮನೆಗಳಲ್ಲಿ ಬಹಳಷ್ಟು ಮನೆಗಳನ್ನು ದೆಹಲಿಯಲ್ಲಿ ನಿವಾಸದ ಮನೆಗಳ ತೀವ್ರ ಅಭಾವದ ಕಾರಣ ತಮಗೆ ವಿಧಿಸಿರುವ ದುಬಾರಿ ಬೆಲೆಗಳನ್ನು ಕೊಡಲು ಸಾಧ್ಯವಾಗದೆ ಸಾರ್ವಜನಿಕರಿಗೆ ಕಾಳಸಂತೆ ದರಗಳಲ್ಲಿ ಒಳಬಾಡಿಗೆಗೆ ಕೊಟ್ಟಿರುವರು ಎಂಬ ಸಂಗತಿಯು ನಿಜವೆ?

ಆ) ಈ ರೀತಿ ಒಳಬಾಡಿಗೆಗೆ ಕೊಡುವ ಈ ರೂಢಿ ವ್ಯಾಪಕವಾಗಿ ಪ್ರಚಲಿತವಾಗಿದ್ದು ಕರೋಲ್‌ಬಾಗ್‌ನಲ್ಲಿರುವ ೬/೭೩ ನಂಬರಿನ ಮನೆಯ ನಾಲ್ಕು ಫ್ಲಾಟುಗಳ ಪೈಕಿ ಮೂರು ಫ್ಲಾಟುಗಳನ್ನು ಒಳಬಾಡಿಗೆಗೆ ಕೊಡಲಾಗಿದೆಯೆಂದು ಎಸ್ಟೇಟು ಆಫೀಸರನು ತನಿಖೆ ಮಾಡಿದಾಗ ಕಂಡುಬಂದಿತೆಂಬ ಸಂಗತಿಯೂ ನಿಜವೆ?

ಇ) ಕರೋಲ್‌ಬಾಗ್‌ನಲ್ಲಿ ವಾಸವಾಗಿಲ್ಲದ ಮನೆಗಳ ಪೈಕಿ ಬಹಳಷ್ಟು ಮನೆಗಳನ್ನು ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಸ್ಥಳೀಯ ಸಿಬ್ಬಂದಿ ವರ್ಗದವರು ತಮ್ಮ ಖಾಸಗಿ ಉದ್ದೇಶಕ್ಕಾಗಿ ಬಳಸುತ್ತಿದ್ದಾರೆ ಎಂಬ ಸಂಗತಿಯು ನಿಜವೆ?

ಈ) ಈ ಸಂಗತಿಗಳ ನಿಮಿತ್ತ ಕಾಳಸಂತೆ ವ್ಯವಹಾರಗಳಿಂದ ಮತ್ತು ದುರಪಯೋಗದಿಂದ ಮುಕ್ತಗೊಳಿಸಲು ಮತ್ತು ಸರ್ಕಾರಿ ನೌಕರರು ಸೇರಿದಂತೆ ಸರ್ಕಾರಿ ಮನೆಗಳಿಗಾಗಿ ಕಾದಿರುವ ಪಟ್ಟಿಯಲ್ಲಿರುವ ಮನೆಗಳ ಅಗತ್ಯವಿರುವ ಸಾರ್ವಜನಿಕರಿಗಾಗಿ ಲಭ್ಯವಾಗುವಂತೆ ಮಾಡಲು ಈ ಮನೆಗಳ ಗುತ್ತಿಗೆಯನ್ನು ಕೊನೆಗೊಳಿಸುವುದರ ಸೂಕ್ತತೆಯನ್ನು ಪರ್ಯಾಲೋಚಿಸುವ ಆಲೋಚನೆ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ.

ಆ) ಕರೋಲ್‌ಬಾಗ್‌ನಲ್ಲಿ ೬/೭೩ ನಂಬರಿನ ಮನೆಯ ನಾಲ್ಕು ಫ್ಲಾಟುಗಳ ಪೈಕಿ ಎರಡು ಫ್ಲಾಟುಗಳನ್ನು ಒಳಬಾಡಿಗೆಗೆ ಕೊಟ್ಟಿರುವುದಾಗಿ ಕಂಡುಬಂದಿದೆ. ಆದರೆ ಈ ಒಂದು ಪ್ರಕರಣ ನಿಮಿತ್ತ ಒಳಬಾಡಿಗೆ ಕೊಡುವ ರೂಢಿ ವ್ಯಾಪಕವಾಗಿದೆಯೆಂದು ಅರ್ಥವಲ್ಲ.

ಇ) ಇಲ್ಲ.

ಈ) ಕರೋಲ್ ಬಾಗ್‌ನಲ್ಲಿ ಕಡ್ಡಾಯವಾಗಿ ಗುತ್ತಿಗೆ ಪಡೆದುಕೊಂಡಿರುವ ಕೆಲವು ಮನೆಗಳನ್ನು ಈಗಾಗಲೇ ಹಿಂದಿರುಗಿಸಲಾಗಿದೆ. ಇದಲ್ಲದೆ ತನಗೆ ಅಗತ್ಯವಿಲ್ಲದ ಮನೆಗಳನ್ನು ಅಥವಾ ತಾನು ಉಪಯೋಗಿಸುತ್ತಿಲ್ಲದ ಮನೆಗಳ ಕಡ್ಡಾಯ ಗುತ್ತಿಗೆಯನ್ನು ಹಿಂದಿರುಗಿಸಲು ಸರ್ಕಾರವು ಪರಿಶೀಲಿಸುತ್ತಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೯ ಮಾರ್ಚ್ ೧೯೪೬. ಪುಟ ೧೨೫೫

# ೪೨೮
# ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ*

**೧೨೬೫. ಶ್ರೀ ಎಮ್. ಅನಂತಶಯನಂ ಅಯ್ಯಂಗಾರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಅ) ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ ನಡೆದಿದೆಯೆ?

ಆ) ಮುಷ್ಕರವು ಕೊನೆಗೊಂಡಿದೆಯೆ?

ಇ) ಇತ್ತೀಚೆಗೆ ವಿದ್ಯಾರ್ಥಿಗಳ ನಿಯೋಗವೊಂದು ಮಾನ್ಯ ಮಂತ್ರಿಗಳನ್ನು ಕಾಣಲು ಬಂದಿತ್ತೆಂಬ ಸಂಗತಿಯು ನಿಜವೆ?

ಈ) ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನ ಪದವೀಧರರಿಗೆ ಕಲ್ಲಿದ್ದಲು ಗಣಿ ನಿಬಂಧನೆಗಳ ಮೂಲಕ ಕಲ್ಲಿದ್ದಲು ಗಣಿಯಲ್ಲಿ ಯಾವುದೇ ಹೊಣೆಗಾರಿಕೆಯ ಸ್ಥಾನವನ್ನು ಪಡೆಯಲು ಅವಕಾಶ ಸಿಗುತ್ತಿಲ್ಲವೆಂಬ ಸಂಗತಿಯು ನಿಜವೆ?

ಉ) ಇಂಡಿಯನ್ ಮೈನ್ಸ್ ಸ್ಕೂಲ್‌ನ ಡಿಪ್ಲೊಮ ಪಡೆದವರು ಒಂದು ವರ್ಷದ ಅವಧಿಯವರೆಗೆ ಕಲ್ಲಿದ್ದಲು ಗಣಿಗಳಲ್ಲಿ ವ್ಯಾವಹಾರಿಕ ಅನುಭವ ಪಡೆಯಬೇಕೆಂಬ ಷರತ್ತಿಗೆ ಒಳಪಟ್ಟು ಆ ಡಿಪ್ಲೊಮಾವನ್ನು ಸೆಕೆಂಡ್ ಕ್ಲಾಸ್ ಮೈನ್ ಮ್ಯಾನೇಜರ್ ಸರ್ಟಿಫಿಕೇಟ್ ಆಫ್ ಕಾಂಪಿಟೆನ್ಸಿಗೆ ಸಮವೆಂದು ಮನ್ನಿಸುವುದರ ಸೂಕ್ತತೆಯನ್ನು ಸರ್ಕಾರವು ಪರಿಶೀಲಿಸುವುದೆ? ಇಲ್ಲದಿದ್ದರೆ, ಏಕೆ?

ಊ) ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಹೌದು.

ಇ) ಹೌದು.

ಈ) ಹೌದು. ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನ ಸರ್ಟಿಫಿಕೇಟ್ ಪಡೆದಿರುವವರು ಅಥವಾ ಡಿಪ್ಲೊಮವನ್ನು ಪಡೆದಿರುವವರು ಕಲ್ಲಿದ್ದಲು ಗಣಿಯೊಂದರಲ್ಲಿ ಹೊಣೆಗಾರ ಸ್ಥಾನಕ್ಕೆ ನೇಮಕಗೊಳ್ಳುವುದಕ್ಕೆ ಮುನ್ನ ಸೆಕೆಂಡ್ ಕ್ಲಾಸ್ ಅಥವಾ ಕ್ಲಾಸ್ ಕೊಲಿಯರಿಯ ಮ್ಯಾನೇಜರ್ಸ್ ಸರ್ಟಿಫಿಕೇಟ್ ಅನ್ನು ಪಡೆದಿರಬೇಕು.

ಉ) ಮತ್ತು ಊ) ಈ ವಿಚಾರ ಪರಿಶೀಲನೆಯಲ್ಲಿದೆ. ಗಣಿಗಳ ಅಧಿನಿಯಮದ ಅಡಿಯಲ್ಲಿ ನಿಬಂಧನೆಗಳನ್ನು, ಸ್ಕೂಲ್ ಆಫ್ ಮೈನ್ಸ್‌ನ ಡಿಪ್ಲೊಮಾಕ್ಕೆ ಒಂದಿಷ್ಟು 'ವೈಟೇಜ್' ಕೊಡುವ ದೃಷ್ಟಿಯಿಂದ ಎಷ್ಟರಮಟ್ಟಿಗೆ ತಿದ್ದುಪಡಿಮಾಡಬಹುದು ಎಂಬ ವಿಷಯವೂ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಆದರೆ ಡಿಪ್ಲೊಮೊವು ನಿಬಂಧನೆಗಳ ಅಡಿಯಲ್ಲಿ ನೀಡಲಾದ ಸೆಕೆಂಡು ಕ್ಲಾಸ್ ಮೈನ್ ಮ್ಯಾನೇಜರ್ಸ್ ಸರ್ಟಿಫಿಕೇಟ್‌ಗೆ ಬದಲಿ ಎಂದು ಮನ್ನಿಸಲು ಸಾಧ್ಯ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ೧೯೪೬ ಮಾರ್ಚ್ ೨೯, ಪುಟ ೨೯೮೧.

ಎಂದು ಸರ್ಕಾರವು ಪರಿಗಣಿಸುವುದಿಲ್ಲ.

**ಶ್ರೀ ಎನ್. ಜಿ. ರಂಗಾ :** ಡಿಪ್ಲೊಮೊ ಹಾಗೂ ಸರ್ಟಿಫಿಕೇಟ್ ಇವೆರಡಕ್ಕೂ ಸರ್ಕಾರವೇ ಹೊಣೆಯಾಗಿರುವಾಗ, ಸರ್ಟಿಫಿಕೇಟ್ ಪಡೆದವರು ಹೊಂದಿರಬೇಕೆಂದು ಅಪೇಕ್ಷಿಸಲಾಗುವ ತರಬೇತಿ ಮತ್ತು ದಕ್ಷತೆಗಳಿಗೆ ಸಮಾನವಾಗುವಂಥ ತರಬೇತಿಯು ಡಿಪ್ಲೊಮವನ್ನು ಪಡೆದಿರುವವರಿಗೂ ಧಾರಕರಿಗೂ ದೊರೆಯುವಂತೆ ಮಾಡುವುದರಲ್ಲಿ ಸರ್ಕಾರಕ್ಕೆ ಇರುವ ಅಡ್ಡಿಯೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿಷಯವನ್ನು ಪರಿಶೀಲಿಸಿದ ನನಗೆ ಅದರಲ್ಲಿ ಕೆಲವು ಅಸಂಗತಗಳು ಕಂಡುಬಂದಿದೆ. ಅವುಗಳನ್ನು ಸರಿಪಡಿಸಲು ನಾನು ಕ್ರಮಕೈಗೊಳ್ಳುತ್ತಿದ್ದೇನೆ.

## ೪೨೯
## ಯುನೈಟೆಡ್ ಸ್ಟೇಟ್ಸ್ ಆರ್ಮಿ ಚಾಪೆಲ್, ನವದೆಹಲಿ*

**೧೨೬೮. ಶ್ರೀ ಎಸ್. ಟಿ. ಆದಿತ್ಯನ್ :** ಮಾನ್ಯ ಕಾರ್ಮಿಕ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಈ ವಿಷಯಗಳ ಬಗ್ಗೆ ಪ್ರಾರ್ಥನೆ :

ಅ) ನವದೆಹಲಿಯಲ್ಲಿರುವ ಯುನೈಟೆಡ್ ಸ್ಟೇಟ್ಸ್ ಆರ್ಮಿ ಚಾಪೆಲ್ ಅನ್ನು ಧರ್ಮ ನಿರ್ಲಿಪ್ತ ಲೌಕಿಕ ಉದ್ದೇಶಗಳಿಗಾಗಿ ಪರಿವರ್ತಿಸುವ ಪ್ರಸ್ತಾಪವಿದೆಯೆಂಬ ಸಂಗತಿಯು ನಿಜವೆ?

ಆ) ಈ ಚಾಪೆಲ್ ಅನ್ನು ಖರೀದಿ ಮಾಡುವುದಾಗಿ ಕೋರಿ ಅರ್ಜಿ ಸಲ್ಲಿಸಿದವರ ಹೆಸರುಗಳೇನು?

ಇ) ಇದನ್ನು ಕ್ರಿಶ್ಚಿಯನ್ ಧಾರ್ಮಿಕ ಆರಾಧನೆಯ ಹೊರತಾಗಿ ಬೇರೆ ಯಾವುದೇ ಉಪಯೋಗಕ್ಕೆ ಪರಿವರ್ತಿಸಿದರೆ, ಕ್ರಿಶ್ಚಿಯನ್ನರ ಪೈಕಿ ಬಹಳಷ್ಟು ಜನಗಳ ಧಾರ್ಮಿಕ ಭಾವನೆಗಳಿಗೆ ನೋವುಂಟಾಗುವುದೆಂಬ ಸಂಗತಿಯು ಸರ್ಕಾರಕ್ಕೆ ಗೊತ್ತಿಲ್ಲವೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :**

ಅ) ಸದರಿ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸರ್ಕಾರಕ್ಕೆ ಆ ಚಾಪೆಲ್ ಅನ್ನು ಖರೀದಿಸುವುದಾಗಿ ಕೋರಿ ಯಾವುದೇ ಅರ್ಜಿ ಬಂದಿಲ್ಲ.

ಇ) ಚಾಪೆಲ್ ಅನ್ನು ಅಪವಿತ್ರಗೊಳಿಸಿಲ್ಲ ಎಂದು ತಿಳಿದುಬಂದಿದೆ. ಕ್ರಿಶ್ಚಿಯನ್ ವಿಧಿ ವಿಧಾನಗಳಿಗನುಸಾರವಾಗಿ ಅಲ್ಲದೆ ಬೇರೆ ರೀತಿಯಲ್ಲಿ ಅದನ್ನು ಉಪಯೋಗಿಸುವುದರಿಂದ ಅದು ಕ್ರೈಸ್ತಮತದ ಅಧಿಕಾಂಶ ಜನಸಮುದಾಯದ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡುವ ಸಂಭವವಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೭, ೧೯೪೬, ಪು ೨೯೮೫.

## ೪೩೦
## ಭಾರತದಲ್ಲಿ ಥೋರಿಯಂ ಮತ್ತು ಯುರೇನಿಯಂ ನಿಕ್ಷೇಪಗಳು*

**೧೨೭೬. ದಿವಾನ್ ಚಮಲ್‌ಲಾಲ್ :**

ಭಾರತದ ಎಲ್ಲಿಯಾದರೂ ಥೋರಿಯಂ ಮತ್ತು ಯುರೇನಿಯಂ ನಿಕ್ಷೇಪಗಳಿವೆಯೇ? ಇದ್ದರೆ, ಆ ಎಷ್ಟು ಕಡೆಗಳಲ್ಲಿವೆ? ಆ ಸಾಧನ ಸಂಪತ್ತನ್ನು ಬಳಸಿಕೊಳ್ಳಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಆರ್ಥಿಕ ಮಹತ್ವದ ಯಾವುದೇ ನಿಕ್ಷೇಪವು ಕಂಡುಬಂದಿಲ್ಲ. ಥೋರಿಯಂ ಧಾತುವನ್ನು ಹೊಂದಿರುವಂಥ ಮೊನೆಝೈಟ್ ಧಾತುವಿನ ನಿಕ್ಷೇಪಗಳು ಭಾರತದ ದಕ್ಷಿಣ ಕರಾವಳಿಯಲ್ಲಿ, ಮುಖ್ಯವಾಗಿ ತಿರುವಾಂಕೂರು ಕರಾವಳಿಯಲ್ಲಿ ಕಂಡುಬರುತ್ತಿದೆ.

## ೪೩೧
## ಟೈಪ್‌ರೈಟರುಗಳ ಆಮದು**

**೧೨೭೯. ಶ್ರೀ ಮನುಸುಬೇದಾರ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ಅ) ಭಾರತದಲ್ಲಿ ೧೯೪೦ರ ಏಪ್ರಿಲ್ ೧ನೇ ತಾರೀಖಿನಿಂದ ಈಚೆಗೆ ಎಷ್ಟು ಟೈಪರೈಟುಗಳನ್ನು ಆಮದುಮಾಡಿಕೊಳ್ಳಲಾಗಿದೆ?

ಆ) ಆ ಟೈಪ್‌ರೈಟರುಗಳ ಪೈಕಿ ಎಷ್ಟನ್ನು ನಾಗಕರಿಗಾಗಿ ಬಿಡುಗಡೆ ಮಾಡಲಾಗಿದೆ, ಯಾವ ಪ್ರಾಂತಗಳಲ್ಲಿ? ಮತ್ತು ಯಾವ ಆಧಾರದ ಮೇಲೆ?

ಇ) ಭಾರತದಲ್ಲಿ ಈ ಯಂತ್ರಗಳ ತೀವ್ರ ಅಭಾವವಿದೆಯೆಂಬ ಮತ್ತು ಆ ಕಾರಣ ವ್ಯವಹಾರಸ್ಥ, ಸಮುದಾಯಕ್ಕೆ ಅತಿಶಯ ತೊಂದರೆಯುಂಟಾಗಿದೆಯೆಂಬ ಸಂಗತಿ ನಿಜವೆ?

ಈ) ಈ ಯಂತ್ರಗಳು ಇನ್ನಷ್ಟು ಅಧಿಕ ಪ್ರಮಾಣದಲ್ಲಿ ದೊರೆಯುವ ಹಾಗೆ ಮಾಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಉ) ಹೈದರಿ ನಿಯೋಗವು ನಡೆಸಿದ ಮಾತುಕತೆಗಳಲ್ಲಿ ಈ ವಿಚಾರವೂ ಒಂದು ಅಂಶವಾಗಿದ್ದಿತೆ?

ಊ) ಈ ಟೈಪ್‌ರೈಟರುಗಳು ದೊರೆಯುವ ವಿಚಾರದಲ್ಲಿ ಸದ್ಯದ ಸ್ಥಿತಿಯೇನು? ಮುಂಬರುವ ಹನ್ನೆರಡು ತಿಂಗಳುಗಳ ಆವಶ್ಯಕತೆಯ ಬಗ್ಗೆ ಈ ದಿಶೆಯಲ್ಲಿ ಸರ್ಕಾರದ ಮುಂಜಾಗ್ರತಾ ಕ್ರಮಗಳಾವುವು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಡಿಸೆಂಬರ್ ೧೯೪೫ರ ವರೆಗೆ ಸುಮಾರು ೭೬,೦೦೦.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೭, ೧೯೪೬, ಪು ೨೯೮೭

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೯, ೧೯೪೬, ಪು.೨೯೮

ಆ) ೧೯೪೦ರ ಏಪ್ರಿಲ್‌ನಿಂದ ೧೯೪೩ರ ಅಕ್ಟೋಬರ್‌ವರೆಗೆ – ಮಾಹಿತಿ ದೊರೆಯುತ್ತಿಲ್ಲ. ೧೯೪೩ರ ಅಕ್ಟೋಬರ್‌ನಿಂದ ೧೯೪೫ರ ಕೊನೆಯವರೆಗೆ ಸುಮಾರು ೨೯೫೦. ನಿಜವಾಸ ಆವಶ್ಯಕತೆಯು ಈ ಯಂತ್ರಗಳನ್ನು ಬಿಡುಗಡೆ ಮಾಡುವುದಕ್ಕೆ ಆಧಾರ. ಈ ಯಂತ್ರಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ, ಅಗತ್ಯವುಳ್ಳ ಸಾರ್ವಜನಿಕ ಸಂಸ್ಥೆಗಳಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ, ವೃತ್ತಿನಿರತರಿಗೆ ಮತ್ತು ವ್ಯಾಪಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿತ್ತು. ಇದಲ್ಲದೆ, ಏಜನ್ಸಿಗಳಿಗೆ ಆದ್ಯತಾ ಕ್ರಮದಲ್ಲಿ ನೀಡಲಾಗುತ್ತಿತ್ತು.

ಇ) ಹೌದು. ಭಾರತದಲ್ಲಿ ಟೈಪರೈಟರುಗಳ ಕೊರತೆ ತೀವ್ರವಾಗಿದೆ.

ಈ) ಯುದ್ಧ ಮುಗಿದ ಲಾಗಾಯಿತು, ಸಾರ್ವಜನಿಕ ಬಳಕೆ ಟೈಪ್‌ರೈಟರುಗಳನ್ನು ಯದ್ಧಪೂರ್ವದ ಸಮಯದಂತೆಯೇ ವಾಣಿಜ್ಯ ಸಂಸ್ಥೆಗಳ ಮೂಲಕ ಆಮದು ಮಾಡಿಕೊಳ್ಳಲಾಗುತ್ತಿದೆ. ಟೈಪ್‌ರೈಟರುಗಳನ್ನು ಸಾಧ್ಯವಾದಷ್ಟು ಅಧಿಕ ಸಂಖ್ಯೆಯಲ್ಲಿ ಆಮದುಮಾಡಿಕೊಳ್ಳುವುದು ಸೂಕ್ತವೆಂಬ ಸಂಗತಿಯನ್ನು ಆಮದುಮಾಡಿಕೊಳ್ಳುವ ವಿವಿಧ ಸಂಸ್ಥೆಗಳಿಗೆ ಸರ್ಕಾರವು ವಿವರಿಸಿ ಹೇಳಿದೆ. ಅಮೇರಿಕದಲ್ಲಿರುವ ಅವರ ಪ್ರಧಾನ ಕಛೇರಿಯ ಜತೆ ಸರಬರಾಜು ಸ್ಥಿತಿಯನ್ನು ಕುರಿತು ಖಚಿತಪಡಿಸಿಕೊಂಡ ತರುವಾಯ, ಸರ್ಕಾರದ ನೆರವಿಗೆ ಬರುವಂತೆ ಸಹ ಆ ಸಂಸ್ಥೆಗಳಿಗೆ ತಿಳಿಸಲಾಗಿದೆ. ಭಾರಿ ಪ್ರಮಾಣದಲ್ಲಿ ಟೈಪ್‌ರೈಟರುಗಳನ್ನು ಆಮದು ಮಾಡಿಕೊಳ್ಳುವ ಬಗ್ಗೆ ಆಮದು ಲೈಸೆನ್ಸುಗಳನ್ನು ನೀಡಲಾಗಿದೆ. ೧೯೪೫ರ ಜುಲೈನಿಂದ ಡಿಸೆಂಬರ್‌ವರೆಗಿನ ಅವಧಿಗೆ, ೧೧,೭೧೭ ಟೈಪ್‌ರೈಟರುಗಳನ್ನು ಅಮೇರಿಕಾದಿಂದ ಆಮದು ಮಾಡಿಕೊಳ್ಳಲು ಲೈಸನ್ಸ್ ನೀಡಲಾಗಿದೆ. ಟೈಪ್‌ರೈಟರುಗಳ ತೀವ್ರ ಕೊರತೆಯ ವಿಚಾರವನ್ನು ತಿಳಿಸಿದ್ದುಂಟು ಮತ್ತು ೧೯೪೬ರ ಕೊನೆಯ ಹೊತ್ತಿಗೆ ಕನಿಷ್ಠ ಪಕ್ಷ ೧೫,೦೦೦ ಟೈಪ್‌ರೈಟರುಗಳನ್ನು ಭಾರತಕ್ಕೆ ರಫ್ತು ಮಾಡಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಉ) ಇಲ್ಲ.

ಊ) ಭಾರತಕ್ಕೆ ಪ್ರತಿ ವರ್ಷ ಕನಿಷ್ಠ ಪಕ್ಷ ೧೫,೫೦೦ ಟೈಪ್‌ರೈಟುರುಗಳ ಅಗತ್ಯವಿರುತ್ತದೆ. ಆ ಪೈಕಿ ೧೯೪೫ರ ಸೆಪ್ಟೆಂಬರ್‌ನಿಂದ ೧೯೪೬ರ ಫೆಬ್ರುವರಿಯವರೆಗಿನ ಆರು ತಿಂಗಳ ಅವಧಿಯಲ್ಲಿ ಸ್ವಿಝರ್‌ಲಂಡ್‌ನಿಂದ ತರಿಸಿಕೊಂಡ (ಕ್ರಮಬದ್ಧ ಕಚೇರಿ ಕೆಲಸಕ್ಕೆ ಸೂಕ್ತವಲ್ಲದ ಹರ್ಮಿಸ್ "ಬೇಬಿ" ಟೈಪ್‌ರೈಟರುಗಳನ್ನು ಹೊರತುಪಡಿಸಿ) ಕೇವಲ ೪,೪೦೦ ಟೈಪ್‌ರೈಟರುಗಳನ್ನು ಆಮದು ಮಾಡಿಕೊಳ್ಳಲಾಯಿತು. ಆದ್ದರಿಂದ ಸದ್ಯದ ಪರಿಸ್ಥಿತಿ ತೃಪ್ತಿಕರವಾಗಿಲ್ಲ. ಆದಾಗ್ಯೂ ಬರುವ ಹನ್ನೆರಡು ತಿಂಗಳ ಅವಧಿಯೊಳಗೆ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯುಂಟು.

## ೪೩೨
## ನವದೆಹಲಿಯ ಕೇಂದ್ರೀಯ ಲೋಕೋಪಯೋಗಿ ತೋಟಗಾರಿಕೆಯ ವಿಭಾಗದವರು ನೀಡಿದ ಕರಾರು ಕಾಮಗಾರಿಗಳು*

೧೩೮೧. **ಮಿ॥ ಅಹಮ್ಮದ್ ಇ.ಎಚ್. ಜಾಫರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು, ಈಗಿನ ಅಧೀಕ್ಷಕರು, ನವದೆಹಲಿಯ ತೋಟಗಾರಿಕೆ ಕಾರ್ಯಚರಣೆಯ, ೧೯೪೨ರ ನವೆಂಬರ್ ೧ನೇ ತಾರೀಖಿನಿಂದ ೧೯೪೬ರ ಫೆಬ್ರವರಿ ೨೮ನೇ ತಾರೀಖಿನವರೆಗಿನ ಅವಧಿಯಲ್ಲಿ ನವದೆಹಲಿಯ ಕೇಂದ್ರೀಯ ಲೋಕೋಪಯೋಗಿ ಇಲಾಖೆಯ, ತೋಟಗಾರಿಕೆಯ ವಿಭಾಗದಲ್ಲಿ ಟೆಂಡರುಗಳ ಮೂಲಕ ಮತ್ತು ವರ್ಕ್ ಆರ್ಡರುಗಳ ಮೂಲಕ ಹಿಂದುಗಳು, ಮುಸ್ಲಿಮರು ಮತ್ತು ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕವಾಗಿ ನೀಡಿದ ಗುತ್ತಿಗೆ ಕಾಮಗಾರಿಗಳ ಮೌಲ್ಯವನ್ನು ತೊರಿಸುವ ತುಲನಾತ್ಮಕ ವಿವರಣೆಯನ್ನು ಸದನದ ಮುಂದೆ ಮಂಡಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೋರಿದ ಮಾಹಿತಿಯ ಕೊಡಲೇ ದೊರೆಯುತ್ತಿಲ್ಲ. ಇದಲ್ಲದೆ ಆ ಮಾಹಿತಿಯನ್ನು ಸಂಗ್ರಹಿಸಲು ತಗಲುವ ಸಮಯ ಮತ್ತು ಶ್ರಮ ಇವೆರಡೂ ಇದರಿಂದ ಸಿಗಬಹುದಾದ ಫಲಿತಾಂಶದ ಮೌಲ್ಯಕ್ಕೆ ಸಮವಾಗಲಿಕ್ಕಿಲ್ಲ.

**ಮಿ॥ ಅಹಮದ್ ಇ.ಹೆಚ್.ಜಾಫರ್ :** ಮಾಹಿತಿಯು ಕೂಡಲೆ ಲಭ್ಯವಾಗದಿರುವುದಕ್ಕೆ ಕಾರಣಗಳೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸ್ನೇಹಿತರಿಗೆ ಅದು ಯಾವ ನಮೂನೆಯಲ್ಲಿ ಬೇಕೊ ಆ ನಮೂನೆಯಲ್ಲಿ ಲಭ್ಯವಾಗುತ್ತಿಲ್ಲ.

**ಪ್ರೊ॥ ಎನ್. ಜಿ. ರಂಗಾ :** ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ ಅವರ ಪಾಲು ದೊರೆಯುವ ಹಾಗೆ ಹೆಚ್ಚುವರಿ ಅವಕಾಶಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಗೊತ್ತುಪಡಿಸಲಾದ ನಿಯಮಗಳ ಅಡಿಯಲ್ಲಿ ಅವರ ಪಾಲು ಅವರಿಗೆ ದೊರೆಯುತ್ತದೆ.

**ಪ್ರೊ॥ ಎನ್. ಜಿ. ರಂಗಾ :** ಪರಿಶಿಷ್ಟ ಜಾತಿಯವರು ಕಡುಬಡವರಾಗಿರುವ ಕಾರಣ ಅವರಲ್ಲಿ ಗುತ್ತಿಗೆದಾರರು ಅತಿ ವಿರಳ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೯, ೧೯೪೬, ಪು. ೩೧೩೩.

## ೪೩೩
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸ್ಲಿಮ್ ತೋಟಗಾರಿಕೆ ಸಹಾಯಕರು*

೧೩೮೭. **ಮಿ॥ ಅಹಮ್ಮದ್ ಇ.ಹೆಚ್. ಜಾಫರ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಈ ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ಕೇಂದ್ರಿಯ ಲೋಕೋಪಯೋಗಿ ಇಲಾಖೆಯ ತೋಟಗಾರಿಕೆ ವಿಭಾಗದಲ್ಲಿ ೧೯೪೫ರ ಫೆಬ್ರವರಿ ೨೮ರಂದು, ೧೯೪೫ರ ಮಾರ್ಚ್ ೧೯ರಂದು ಮತ್ತು ೧೯೪೫ರ ಮೇ ೨೩ರಂದು ಹೀಗೆ ಮೂವರು ಬಿ.ಎಸ್‌ಸಿ. ಪದವೀಧರ ತೋಟಗಾರಿಕಾ ಮುಸ್ಲಿಮರನ್ನು ಹಾರ್ಟಿಕಲ್ಚರಲ್ ಸಹಾಯಕರನ್ನಾಗಿ ನೇಮಕಮಾಡಲಾಯಿತೆಂದು, ಆದರೆ ೧೯೪೫ರ ನವೆಂಬರ್ ೨೮ರ ವರೆಗೆ ಅವರಿಗೆ ವಿಭಾಗಗಳ ಪ್ರಭಾರವನ್ನು ಕೊಡಲಿಲ್ಲವೆಂಬ ಸಂಗತಿಯು ನಿಜವೆ?

ಆ) ಅವರಿಗೆ ಆ ಮಧ್ಯಾವಧಿಯಲ್ಲಿ ಯಾವ ಕರ್ತವ್ಯಗಳನ್ನು ವಹಿಸಿಕೊಡಲಾಗಿತ್ತು?

ಇ) ಅವರಿಂದ ಅಪೇಕ್ಷಿಸಲಾದ ನಿರ್ದಿಷ್ಟ ಕೆಲಸಕ್ಕೆ ಅವರ ಅಗತ್ಯವಿಲ್ಲದಿದ್ದರೆ ೫೦೦ ರೂಪಾಯಿ ಸಾರ್ವಜನಿಕ ಹಣವನ್ನು ಈ ರೀತಿ ಅಪವ್ಯಯ ಮಾಡಿದ್ದೇಕೆ? ಅದಕ್ಕೆ ಯಾರು ಹೊಣೆಗಾರರು? ಸರ್ಕಾರ ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಯಾವ ಕ್ರಮಕೈಗೊಳ್ಳಲು ಪ್ರಸ್ತಾಪಿಸಿದೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅ) ಹೌದು.

ಆ) ಮತ್ತು ಇ) ಆ ವ್ಯಕ್ತಿಗಳು ಹೊಸದಾಗಿ ಕಾಲೇಜಿನಿಂದ ಬಂದವರಾಗಿದ್ದು ಅವರಿಗೆ ವ್ಯಾವಹಾರಿಕ ಅನುಭವಿಲ್ಲದ ಕಾರಣ, ವಿಭಾಗಗಳ ಔಪಚಾರಿಕ ಹೊಣೆಗಾರಿಕೆಯನ್ನು ವಹಿಸಿಕೊಡುವುದಕ್ಕೆ ಮುನ್ನ ಅವರಿಗೆ ಪ್ರೊಬೇಷನರುಗಳಾಗಿ ಪ್ರಾಥಮಿಕ ತರಬೇತಿ ನೀಡಲಾಯಿತು.

## ೪೩೪
## ತೋಟಗಾರಿಕೆ ವಿಭಾಗದಲ್ಲಿನ ಚೌಧರಿಗಳ ಮತ್ತು ಸಹಾಯ ಚೌಧರಿಗಳ ವೇತನ ಶ್ರೇಣಿಗಳು ಹಾಗೂ ಬಡ್ತಿ ದರಗಳು*

೧೩೮೩. **ಮಿ॥ ಆಹಮ್ಮದ್ ಇ.ಹೆಚ್. ಜಾಫರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತೋಟಗಾರಿಕೆ ವಿಭಾಗದ ಚೌಧರಿಗಳಿಗೆ ಮತ್ತು ಸಹಾಯಕ ಚೌಧರಿಗಳಿಗೆ ನೀಡಲಾಗುವ ವೇತನಶ್ರೇಣಿಗಳು ಮತ್ತು ಬಡ್ತಿ ದರಗಳನ್ನು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವೇತನಶ್ರೇಣಿಗಳು ಮತ್ತು ಬಡ್ತಿ ದರಗಳು ಕೆಳಕಂಡಂತಿವೆ.

ಚೌಧರಿಗಳು : ರೂ. ೨೦–೧–೩೫–೨–೫೫ (ಹಿಂದೆ ಸೇರಿದವರು)
ರೂ. ೨೫–೧–೪೫ (ಹೊಸದಾಗಿ ಸೇರಿದವರು)

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೯, ೧೯೪೬, ಪು. ೩೧೩೩.
* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೪, ಮಾರ್ಚ್ ೨೯, ೧೯೪೬, ಪು. ೩೧೩೪.

ಸಹಾಯಕ ಚೌಧರಿಗಳು : ರೂ ೨೦–೧–೨–೩೦ (ಹಿಂದೆ ಮತ್ತು ಹೊಸದಾಗಿ ಸೇರಿದವರು)

**ಪ್ರೊ॥ ಎನ್.ಜಿ. ರಂಗಾ :** ಚೌಧರಿಯೆಂಬ ಹುದ್ದೆಯ ನಿರ್ದಿಷ್ಟ ವಿವರಣೆಯೇನು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಒಂದು ರೀತಿಯ ಮುಖ್ಯ ಮಾಲಿ.

**ಶ್ರೀ ಮನುಸುಬೇದಾರ್ :** ಸದ್ಯದ ಜೀವನ ಪರಿಸ್ಥಿತಿಯಲ್ಲಿ ಚೌಧರಿಯು ೨೦ ರೂ. ಮಾಸಿಕ ವೇತನದ ಮೇಲೆ ಜೀವಸಬೇಕೆಂದು ಸರ್ಕಾರದ ಅಪೇಕ್ಷೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಅವರಿಗೆ ತುಟ್ಟಿಭತ್ಯ ಸಹ ದೊರೆಯುತ್ತದೆ.

**ಶ್ರೀ ಮನುಸುಬೇದಾರ್ :** ಅವರಿಗೆ ದೊರೆಯುವುದೆಷ್ಟು? ೧೪ರೂ. ಅಥವಾ ೮ ರೂ? ಎಷ್ಟು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ನನ್ನ ಬಳಿ ಮಾಹಿತಿ ಇಲ್ಲ.

**ಶ್ರೀ ಮನುಸುಬೇದಾರ್ :** ಕೈಗಾರಿಕಾ ವರ್ಗದ ಸರ್ಕಾರಿ ನೌಕರರು ಅವರಿಗೆ ದೊರೆಯುತ್ತಿರುವ ವೇತನದ ಮೇಲೆ ಉಪಜೀವನ ನಡೆಸುವುದು ಸಾಧ್ಯವೊ ಹೇಗೆ ಎಂಬ ಪ್ರಶ್ನೆಯನ್ನು ಸರ್ಕಾರವು ಪರಿಶೀಲಿಸುವುದೆ?

**ಪ್ರೊ॥ ಎನ್. ಜಿ. ರಂಗಾ :** ಮಾಲಿಗಳಿಗೆ ಎಷ್ಟು ವೇತನ ದೊರೆಯುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗಳಿಗೆ ಉತ್ತರಿಸಲು ಸಮಯಾವಕಾಶಬೇಕು.

## ೪೩೫
## ಕೇಂದ್ರಿಯ ಲೋಕೋಪಯೋಗಿ ಇಲಾಖೆಯ ತೋಟಗಾರಿಕೆ ವಿಭಾಗದ ಅಧೀಕ್ಷಕರು ಮಾಡಿದ ನೇಮಕಾತಿಗಳು*

**೧೩೮೪. ಮಿ॥ ಅಹಮ್ಮದ್ ಇ. ಹೆಚ್. ಜಾಫರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯದ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ನವದೆಹಲಿಯಲ್ಲಿನ ಕೇಂದ್ರಿಯ ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಕಾರ್ಯಾಚರಣೆಗಳ ಈಗಿನ ಅಧೀಕ್ಷಕರು ೧೯೪೩ರ ನವೆಂಬರ್ ೧ರಿಂದ ೧೯೪೬ರ ಫೆಬ್ರವರಿ ೨೮ರ ವರೆಗೆ ಗುಮಾಸ್ತರು, ಚೌಧರಿಗಳು, ಸಹಾಯಕ ಚೌಧರಿಗಳು, ಲಾರಿ ಡ್ರೈವರುಗಳು, ಫಿಟ್ಟರುಗಳು, ಟ್ರೈಂಕೀಪರುಗಳು ಮತ್ತು ಮೆಕ್ಯಾನಿಕರುಗಳು ಆಗಿ ನೇಮಿಸಿದ ವ್ಯಕ್ತಿಗಳ ಸಂಖ್ಯೆಯನ್ನು ಹಿಂದುಗಳು, ಮುಸ್ಲಿಮರು, ಇತರ ಅಲ್ಪಸಂಖ್ಯಾತ ಕೋಮುಗಳು ಮತ್ತು ಪರಿಶಿಷ್ಟ ಜಾತಿಗಳು ಹೀಗೆ ಕೋಮುವಾರಾಗಿ ಕೊಡಬೇಕಾಗಿ ವಿನಂತಿ.

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ವಿವರಣೆಯನ್ನು ಸದನದ ಮುಂದೆ ಮಂಡಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೯, ೧೯೪೬, ಪು. ೩೧೩೫.

**೧೯೪೩ರ ನವೆಂಬರ್ ೧ ರಿಂದ ೧೯೪೭ರ ಫೆಬ್ರವರಿ ೨೮ರವರೆಗೆ ಸೂಪರಿಟೆಂಡೆಂಟ್, ಹಾರ್ಟಿಕಲ್ಚರಲ್ ಆಪರೇಟರ್ಸ್, ನವದೆಹಲಿ, ಅವರು ನೇಮಿಸಿದ ವ್ಯಕ್ತಿಗಳ ಪಟ್ಟಿ ಸಂಖ್ಯೆಯಲ್ಲಿ ತೋರಿಸುವ ವಿವರಣೆ:**

| | ಹಿಂದುಗಳು | ಮುಸ್ಲಿಮರು | ಪರಿಶಿಷ್ಟ ಜಾತಿಯವರು | ಅಲ್ಪಸಂಖ್ಯಾತ ಕೋಮಿನವರು |
|---|---|---|---|---|
| ಗುಮಾಸ್ತರು | ೯ | ೨ | – | ೧ |
| ಚೌಧರಿಗಳು | – | ೧ | – | – |
| ಸಹಾಯಕ ಚೌಧರಿಗಳು | ೧ | – | – | – |
| ಲಾರಿ ಡ್ರೈವರುಗಳು | ೨ | – | – | – |
| ಫಿಟ್ಟರುಗಳು | ೨ | ೧ | – | – |
| ಟೈಂ ಕೀಪರುಗಳು | ೧ | ೧ | – | – |
| ಮೆಕ್ಯಾನಿಕ್‌ಗಳು | ೧ | – | – | – |

## ೪೩೭
## ಕಾರ್ಮಿಕ ಇಲಾಖೆಯಲ್ಲಿ ಮುಸ್ಲಿಮ್ ಅಧಿಕಾರಿಗಳು*

೧೩೮೫. **ಮಿ॥ ಅಹಮ್ಮದ್ ಇ.ಹೆಚ್. ಜಾಫರ್ :**

ಅ) ಕಾರ್ಮಿಕ ಇಲಾಖೆಯಲ್ಲಿ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿ ಇವರೆಲ್ಲರೂ ಹಿಂದುಗಳೆಂಬ ಸಂಗತಿಯು ನಿಜವೆ?
ಆ ಇಲಾಖೆಯ ಸಿಬ್ಬಂದಿಯ ಪ್ರಭಾರದಲ್ಲಿ ಒಬ್ಬ ಮುಸ್ಲಿಂ ಅಧಿಕಾರಿಯನ್ನು ನೇಮಿಸಲು ಮಾನ್ಯ ಮಂತ್ರಿಗಳು ಆಲೋಚಿಸಿರುವರೆ? ಇಲ್ಲದಿದ್ದರೆ, ಏಕೆ ಇಲ್ಲ?

ಆ) ಕಳೆದ ಐದು ವರ್ಷಗಳ ಅವಧಿಯಲ್ಲಿ ಎಷ್ಟು ಜನ ಅಧೀನ ಅಧಿಕಾರಿಗಳಿಗೆ ಸಬ್‌ಡಿವಿಷನಲ್ ಆಫೀಸರುಗಳಾಗಿ ಪದೋನ್ನತಿ ನೀಡಲಾಗಿದೆ? ಅದರಲ್ಲಿ ಯಾರೊಬ್ಬರಾದರೂ ಮುಸ್ಲಿಮರು ಇದ್ದಾರೆಯೆ? ಹಾಗಿದ್ದರೆ, ಎಷ್ಟು ಜನ? ಮತ್ತು ಯಾವ ಪ್ರಮಾಣದಲ್ಲಿ?

– ಈ ವಿಷಯಗಳ ಬಗ್ಗೆ ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಲ್ಲ. ಕಾರ್ಯದರ್ಶಿ ಯೂರೋಪಿಯನ್ ಮತ್ತು ಇಬ್ಬರು ಮುಸ್ಲಿಮರು ಇದ್ದಾರೆ. ಅವರ ಪೈಕಿ ಒಬ್ಬರು ಪದನಿಮಿತ್ತ ಜಂಟಿ ಕಾರ್ಯದರ್ಶಿ ಮತ್ತು ಇನ್ನೊಬ್ಬರು ಅಧೀನ ಕಾರ್ಯದರ್ಶಿ. ಈ ಇಬ್ಬರು ಅಧಿಕಾರಿಗಳು ಸಿಬ್ಬಂದಿ ಸಂಬಂಧವಾದ ವಿಚಾರಗಳನ್ನು ಸಹ ನೋಡಿಕೊಳ್ಳುತ್ತಾರೆ. ಪ್ರಶ್ನೆಯ ಉತ್ತರ ಭಾಗಕ್ಕೆ ಉತ್ತರಿಬೇಕಾದ ಅಗತ್ಯವು ಉದ್ಭವಿಸುವುದಿಲ್ಲ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ಮಾರ್ಚ್ ೨೯, ೧೯೪೭, ಪು. ೩೧೩೫.

ಆ) ಕಳೆದ ಐದು ವರ್ಷಗಳ ಅವಧಿಯಲ್ಲಿ ೩೮೫ ಅಧೀನ ಅಧಿಕಾರಿಗಳಿಗೆ ಎನ್.ಜಿ.ಓ.ಗಳಾಗಿ ಪದೋನ್ನತಿ ನೀಡಲಾಯಿತು. ಆ ಪೈಕಿ ೫೬ ಜನ ಮುಸ್ಲಿಮರು ಇದ್ದು ಶೇಕಡ ೧೪.೫ ಆಗುತ್ತದೆ.

**ಪ್ರೊ॥ ಎನ್. ಜಿ. ರಂಗಾ :** ಈ ಇಲಾಖೆಗೆ ಕಳೆದ ಹಲವಾರು ವರ್ಷಗಳಿಂದಲೂ ಭಾರತೀಯ ಕಾರ್ಯದರ್ಶಿಯು ಇಲ್ಲದಿರುವ ಕಾರಣ, ಇನ್ನೊಬ್ಬ ಭಾರತೀಯ ಈ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸುವ ವಿಚಾರವನ್ನು ಸರ್ಕಾರವು ಯಾವಾಗ ಪರ್ಯಾಲೋಚಿಸುವುದು?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಇದು ಆಯ್ಕೆ ಸಮಿತಿಗೆ ಸೇರಿದ ವಿಚಾರ.

**ಪ್ರೊ॥ ಎನ್.ಜಿ.ರಂಗಾ :** ಈ ಇಲಾಖೆಗಳ ಕಾರ್ಯದರ್ಶಿಗಳನ್ನು ಯಾರು ಆಯ್ಕೆ ಮಾಡುತ್ತಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದಕ್ಕೆ ಉತ್ತರಿಸಲು ನನಗೆ ಕಾಲಾವಕಾಶ ಬೇಕು.

**ಪ್ರೊ ॥ ಎನ್.ಜಿ. ರಂಗಾ :** ಈ ವಿಷಯವನ್ನು ನೋಡಿಕೊಳ್ಳಲು ಒಂದು ಆಯ್ಕೆ ಸಮಿತಿಯು ಇದೆಯೆ?

**ಗೌರವಾನ್ವಿತ ಡಾ॥ ಬಿ. ಆರ್. ಅಂಬೇಡ್ಕರ್ :** ಒಂದು ಸಮಿತಿಯುಂಟು ಮತ್ತು ಸಮಿತಿಗೆ ಆಯ್ಕೆಯ ವಿಚಾರವನ್ನು ಉಲ್ಲೇಖಿಸತಕ್ಕದು ಮತ್ತು ಅನುಮೋದಿತ ಪಟ್ಟಿಯಿಂದಲೇ ಆಯ್ಕೆ ಆಗುತ್ತದೆ.

**ಮಿ॥ ಅಹಮ್ಮದ್ ಇ.ಹೆಚ್. ಜಾಫರ್ :** ನೇಮಕಾತಿಗಳಲ್ಲಿ ಮಾನ್ಯ ಮಂತ್ರಿಗಳಿಗೆ ಯಾವುದೇ ಅಧಿಕಾರ ಇಲ್ಲ ಎಂದು ಅರ್ಥವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹುದ್ದೆ ಖಾಲಿಯಾಗುವತನಕ ಇಲ್ಲ ಎಂಬುದಂತೂ ಖಂಡಿತ.

## ೪೩೭
## ಸರ್ಕಾರಿ ವಾಸಗೃಹಗಳ ಹಂಚಿಕೆ ಪಡೆಯುವ ಉದ್ದೇಶಕ್ಕಾಗಿ ಕೆಲವು ಅಧಿಕಾರಿಗಳ ಸೀನಿಯಾರಿಟಿ*

**೧೩೮೯. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯದ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಅ) ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಕಚೇರಿಗೆ ಸೂಕ್ತ ಸ್ಥಳಾವಕಾಶದ ಅಭಾವವಿದ್ದ ಕಾರಣ, ಕೇಂದ್ರ ಸರ್ಕಾರದ ಕೆಲವು ಕಚೇರಿಗಳನ್ನು (ಸಚಿವಾಲಯ ಮತ್ತು ಸಂಯೋಜಿತ ಕಚೇರಿಗಳು) ದೆಹಲಿಯಿಂದ, ಸಿಮ್ಲಾದಿಂದ ಪರಸ್ಥಳಗಳಿಗೆ ಕಳಿಸಲಾಯಿತೆಂಬ ಸಂಗತಿಯು ನಿಜವೆ?

ಆ) ಆ ಕಚೇರಿಗಳ ಸಂಗಡ ವಾಪಸು ಬಂದ ಸಿಬ್ಬಂದಿ ವರ್ಗದವರು ದೆಹಲಿ, ಸಿಮ್ಲಾ ಇವುಗಳಿಗೆ ಹೊರತಾದ ಸ್ಥಳಕ್ಕೆ ಹೋಗುತ್ತೆಂಬ ಕಾರಣಕ್ಕಾಗಿ ಸರ್ಕಾರಿ ವಾಸಗೃಹಗಳ ಹಂಚಿಕೆ ಪಡೆಯುವ ಉದ್ದೇಶಕ್ಕಾಗಿ ಅವರ ಹಿಂದಿನ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಲು ಅನುಮತಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ४, ಮಾರ್ಚ್ ೨೯, ೧೯೪೬, ಪು. ೩೧೪೦.

ನೀಡುತ್ತಿಲ್ಲವೆಂಬ ಮತ್ತು ಅವರ ಸಂದರ್ಭಗಳಲ್ಲಿ ವಾಸಗೃಹಗಳಿಗೆ ಹಕ್ಕುದಾರಿಕೆ ಪಡೆಯಲು ಅವರ ಸೀನಿಯಾರಿಟಿಯನ್ನು ದಿಲ್ಲಿಗೆ ಅವರು ಆ ತರುವಾಯ ಬಂದ ದಿನಾಂಕದಿಂದ ಎಣಿಕೆಮಾಡಲಾಯಿತೆಂಬ ಸಂಗತಿಯು ನಿಜವೆ?

ಇ) ಕಲ್ಕತ್ತೆಯಲ್ಲಿ ಕೆಲಸ ಮಾಡುತ್ತಿರುವ ಸಚಿವಾಲಯ ಸಿಬ್ಬಂದಿಗೆ ಮನೆಗಳನ್ನು ಕೊಡಲಾದ ದಿನಾಂಕದಿಂದ ಜ್ಯೇಷ್ಠತೆಯನ್ನು ಪರಿಗಣಿಸಲಾಗಿದೆಯೆ?

ಈ) ಹಾಗಿದ್ದರೆ, ಸಚಿವಾಲಯ ಸಿಬ್ಬಂದಿ ವರ್ಗ ಮತ್ತು ಸಂಯೋಜಿತ ಕಚೇರಿಗಳ ಸಿಬ್ಬಂದಿ ವರ್ಗ ಇವರ ನಡುವೆ ವಾಸಗೃಹಗಳ ಹಂಚಿಕೆ ಪಡೆಯುವ ವಿಚಾರದಲ್ಲಿ ಈ ರೀತಿಯ ತಾರತಮ್ಯವೇಕೆ?

ಉ) ಈ ಜನಗಳಿಗೆ ರಾಷ್ಟ್ರಹಿತದೃಷ್ಟಿಯಿಂದ ಕಾರ್ಮಿಕ ಇಲಾಖೆಯ ಆದೇಶಾನುಸಾರ ಅನ್ಯಸ್ಥಳಕ್ಕೆ ಹೋಗಬೇಕಾದ ಕಾರಣ ಅವರ ಕಡೆಯಿಂದ ಯಾವುದೇ ಸಮಸ್ಯೆಯಿಲ್ಲದಿದ್ದರೂ ವಾಸಗೃಹಗಳ ಹಂಚಿಕೆ ಪಡೆಯುವ ವಿಚಾರದಲ್ಲಿ ಅವರನ್ನು ಅನಗತ್ಯ ತೊಂದರೆಗೆ ಗುರಿಪಡಿಸಲಾಗುತ್ತಿದೆಯೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಊ) ಈ ವ್ಯಕ್ತಿಗಳ ಸಂಬಂಧದಲ್ಲಿ ಅಮಾನತ್ತಿನಲ್ಲಿಡಲಾದ ಪಟ್ಟಿಯನ್ನು ಪುನಃ ಸ್ಥಾಪಿಸಿ, ಅವರಿಗೆ ದೆಹಲಿಯಲ್ಲಿ, ಸಿಮ್ಲಾದಲ್ಲಿ ಅವರು ಸೇವೆಗೆ ಸೇರಿದ ದಿನಾಂಕವನ್ನು ಅನುಸರಿಸಿ ವಾಸಗೃಹವನ್ನು ಹಂಚಿಹಾಕಲು ಸರ್ಕಾರವು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ನಿಜಸ್ಥಿತಿಯು ಹೀಗಿದೆ. ಸಿಬ್ಬಂದಿ ವರ್ಗದವರಲ್ಲಿ ಕೆಲವರು ದೆಹಲಿಯಲ್ಲಿ ಇಲ್ಲದ ಅವಧಿಯು ಒಂದು ವರ್ಷಕ್ಕಿಂತ ಹೆಚ್ಚಾಗಿಲ್ಲದಿದ್ದರೆ ಮತ್ತು ದೆಹಲಿಯಲ್ಲಿರುವ ಸರ್ಕಾರಿ ವಾಸಗೃಹಗಳು ಅವರ ಸ್ವಾಧೀನದಲ್ಲಿಯೆ ಇದ್ದರೆ, ಅವರಿಗೆ ಹಿಂದಿನ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಲು ಅನುಮತಿಸಲಾಗುತ್ತಿತ್ತು. ಈ ಅರ್ಹತಾ ಅವಧಿಯನ್ನು ಆ ತರುವಾಯ ಆರು ತಿಂಗಳಿಗೆ ಇಳಿಸಲಾಯಿತು.

ಇ) ಹೌದು. ಆದರೆ ಕಲ್ಕತ್ತೆಯಲ್ಲಿರುವ ಸಚಿವಾಲಯದ ಇಲಾಖೆಗೆ ನಿಯೋಜಿಸಲಾದ ಅಥವಾ ದಿಲ್ಲಿಯ ಸಿಮ್ಲಾದ ಸಚಿವಾಲಯ ಇಲಾಖೆಯಿಂದ ಕಲ್ಕತ್ತೆಯಲ್ಲಿರುವ ಸಚಿವಾಲಯದ ಇಲಾಖೆಗೆ ೧೯೪೫ರ ಏಪ್ರಿಲ್ ೧ನೇ ದಿನಾಂಕಕ್ಕೆ ಮುನ್ನ ವರ್ಗಾಯಿಸಲಾದ ಸಿಬ್ಬಂದಿ ವರ್ಗದವರಿಗೆ ಮಾತ್ರ ಹೀಗೆ ಮಾಡಲಾಗುತ್ತಿದೆ.

ಈ) ಸಚಿವಾಲಯದ ಸಿಬ್ಬಂದಿ ಮತ್ತು ಕಲ್ಕತ್ತೆಯಲ್ಲಿರುವ ಕಚೇರಿಗಳನ್ನು ಹೊರತುಪಡಿಸಿ ಸಂಯೋಜಿತ ಕಚೇರಿಗಳ ನಡುವೆ ಯಾವುದೇ ತಾರತಮ್ಯವನ್ನು ಮಾಡಿರುವುದಿಲ್ಲ. ಕಲ್ಕತ್ತೆಯ ಸಂದರ್ಭದಲ್ಲಿ ಮಾತ್ರ ಭಾರತ ಸರ್ಕಾರದ ಇಲಾಖೆಯ ಶಾಖಾ ಸಚಿವಾಲಯವು ಇದ್ದಿತು. ಮತ್ತು ಮುಖ್ಯಾಲಯ ಮತ್ತು ಶಾಖಾ ಸಚಿವಾಲಯ, ಇವುಗಳ ನಡುವೆ ನಿರಂತರ ವರ್ಗಾವಣೆಗಳು ಆಗುತ್ತಿದ್ದುವು. ಪರಿಷ್ಕೃತ ನಿಯಮಾವಳಿಯನ್ನು ಜಾರಿಗೊಳಿಸಿದ ತರುವಾಯ, ಈ ರಿಯಾಯಿತಿಯನ್ನು ೧೯೪೮ರ ಏಪ್ರಿಲ್ ೧ನೇ ದಿನಾಂಕದಿಂದ ಹಿಂತೆಗೆದುಕೊಳ್ಳಲಾಯಿತು ಮತ್ತು ಈ ದಿನಾಂಕದ ಅನಂತರ ಕಲ್ಕತ್ತೆಯಲ್ಲಿರುವ ಇಲಾಖಾ ಸಚಿವಾಲಯಕ್ಕೆ ವರ್ಗಾಯಿಸಲಾದ ವ್ಯಕ್ತಿಗಳಿಗೆ ದೆಹಲಿಯಲ್ಲಿ ವಾಸಗೃಹದ ಹಂಚಿಕೆ ಪಡೆಯುವ ಉದ್ದೇಶಕ್ಕಾಗಿ ತಮ್ಮ ಹಿಂದಿನ ಸೇವೆಯನ್ನು

ಗಣನೆಗೆ ಸೇರಿಸಲು ಅನುಮತಿ ನೀಡಲಾಗುತ್ತಿಲ್ಲ.

ಉ) ಈ ನಿಯಮಾವಳಿಯ ಕಾರಣ ಕೆಲವರು ಅಧಿಕಾರಿಗಳಿಗೆ ಪ್ರತಿಕೂಲವಾಗಿದೆಯೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಆದರೂ ಸ್ಥಳಾಂತರಗೊಳಿಸುವುದನ್ನು ಕನಿಷ್ಠಮಟ್ಟಕ್ಕೆ ಇಳಿಸಿ ಆಡಳಿತದಲ್ಲಿ ದಕ್ಷತೆಯನ್ನು ಖಚಿತಪಡಿಸಲು ಔಪಚಾರಿಕವಾಗಿ ರೂಪಿಸಲಾದ ಈ ನಿಯಮಾವಳಿಗಳನ್ನು ಕಾರ್ಯಗತಗೊಳಿಸುವಾಗ ಇಂಥ ಪರಿಣಾಮವು ಅನಿವಾರ್ಯವಾಗುತ್ತದೆ.

ಊ) ಸರ್ಕಾರ ಈ ಸಂಬಂಧದಲ್ಲಿ ರಚಿತವಾದ ನಿಯಮಗಳನ್ನು ಬದಲಾಯಿಸಲು ಯೋಚಿಸುತ್ತಿಲ್ಲ.

## ೪೩೮
## ನವದೆಹಲಿಯಲ್ಲಿ ಮನೆಗಳನ್ನು ಕಟ್ಟಲು ಸರ್ದಾರ್ ಶೋಭಾ ಸಿಂಗ್ ಅವರಿಗೆ ಸಾಮಗ್ರಿಗಳ ಸರಬರಾಜು*

**೧೫೯೦. ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ:

ಸರದಾರ್ ಶೋಭಾ ಸಿಂಗ್ ಅವರಿಗೆ ದಿಲ್ಲಿಯಲ್ಲಿ ಮನೆಗಳನ್ನು ಕಟ್ಟುವ ಸಲುವಾಗಿ ಸರ್ಕಾರ ಸಾಮಗ್ರಿಗಳನ್ನು ಕೊಟ್ಟಿತ್ತೆಂಬ ಸಂಗತಿಯು ನಿಜವೆ?

ಆ) ಸರಬರಾಜು ಮಾಡಿದ ಸಾಮಗ್ರಿಗಳ ಮೌಲ್ಯವೆಷ್ಟು? ಅವುಗಳನ್ನು ಯಾವ ಏರ್ಪಾಡಿನ ಅಡಿಯಲ್ಲಿ ಕೊಡಲಾಯಿತು?

ಇ) ಅವರು ಎಷ್ಟು ಫ್ಲಾಟುಗಳನ್ನು ಕಟ್ಟಿಸಿದ್ದಾರೆ? ಪ್ರತಿ ಫ್ಲಾಟಿನ ಬಾಡಿಗೆ ಎಷ್ಟು? ಅವುಗಳ ಪೈಕಿ ಎಷ್ಟು ಫ್ಲಾಟುಗಳು ಭರ್ತಿಯಾಗಿವೆ? ಎಷ್ಟು ಖಾಲಿ ಇವೆ?

ಈ) ಸರ್ಕಾರ ಯಾವುದೇ ಸಹಾಯಧನ ನೀಡುತ್ತಿದೆಯೇ? ಹಾಗಾದರೆ, ಯಾವ ರೀತಿಯಲ್ಲಿ ಮತ್ತು ಯಾವ ಎಡೆಯಲ್ಲಿ ಸದರಿ ಸರದಾರ್ ಶೋಭಾ ಸಿಂಗ್ ಅವರಿಗೆ ನೀಡಲಾಗಿದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಮಾನ್ಯ ಸದಸ್ಯರು ಸರ್.ಎಸ್.ಬಿ. ಶೋಭಾ ಸಿಂಗ್ ಅವರು ನವದೆಹಲಿಯಲ್ಲಿ ಕಾರ್ನ್‌ವಾಲಿಸ್ ರಸ್ತೆ ಮತ್ತು ಹುಮಾಯೂನ್ ರಸ್ತೆ ನಿವಾಸದ ಫ್ಲಾಟುಗಳ ಬಗ್ಗೆ ಉಲ್ಲೇಖಿಸುತ್ತಾರೆ ಎಂದು ಭಾವಿಸುತ್ತೇನೆ. ಹಾಗಿದ್ದರೆ, ನೀವು ಹೇಳುತ್ತಿರುವುದು ಸಂಗತಿ ನಿಜ.

ಆ) ಸರಬರಾಜು ಮಾಡಿದ ಸಾಮಗ್ರಿಗಳ ಮೌಲ್ಯ ಸುಮಾರು ೧½ ಲಕ್ಷ ರೂಪಾಯಿ. ಕಂಟ್ರಾಕ್ಟರ್‌ನು ಅವನಿಗೆ ಸರಬರಾಜು ಮಾಡಿದ ಯಾವತ್ತೂ ಸಾಮಗ್ರಿ ವೆಚ್ಚವನ್ನು ವಹಿಸಿಕೊಳ್ಳಬೇಕು.

ಇ) ಈವರೆಗೆ ಕಟ್ಟಲಾದ ಫ್ಲಾಟುಗಳ ಸಂಖ್ಯೆ ೭೨. ಎರಡು ಪ್ರಕಾರದ ಫ್ಲಾಟುಗಳಿವೆ. ಎರಡು ಕೋಣೆಗಳಿರುವ ಫ್ಲಾಟು ಮತ್ತು ಒಂದೇ ಕೋಣೆಯಿರುವ ಫ್ಲಾಟು. ಮೊದಲ ಪ್ರಕಾರದ ಫ್ಲಾಟು ಒಂದಕ್ಕೆ ಮಾಸಿಕ ರೂ. ೨೨೦ ಬಾಡಿಗೆಯನ್ನು ಎರಡನೆಯ ಪ್ರಕಾರದ ಫ್ಲಾಟು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬, ಪುಟ ೩೧೪೧

ಒಂದಕ್ಕೆ ರೂ. ೧೭೫ ಬಾಡಿಗೆಯನ್ನು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ. ಮನೆ ಮಾಲೀಕನಿಂದ ಕಟ್ಟಡದ ವೆಚ್ಚವನ್ನು ಕುರಿತು ಪೂರ್ಣ ಮಾಹಿತಿ ಇನ್ನೂ ಬಂದಿಲ್ಲವಾದ ಕಾರಣ ತಾತ್ಕಾಲಿಕ ಬಾಡಿಗೆಯನ್ನು ನಿಗದಿಪಡಿಸಲಾಗಿದೆ. ಈ ೭೨ ಫ್ಲಾಟುಗಳ ಪೈಕಿ ೬೫ ಫ್ಲಾಟುಗಳನ್ನು ಸರ್ಕಾರವು ವಹಿಸಿಕೊಂಡಿದ್ದು, ಅವುಗಳಲ್ಲಿ ೫೯ ಭರ್ತಿಯಾಗಿದೆ ಮತ್ತು ೬ ಫ್ಲಾಟುಗಳನ್ನು ಕಾಯುವ ಪಟ್ಟಿಯಲ್ಲಿರುವ ಅಧಿಕಾರಿಗಳಿಗೆ ಹಂಚಿಹಾಕಲಾಗಿದೆ.

**ಪ್ರೊ॥ ಎನ್.ಜಿ. ರಂಗಾ :** ಕಂಟ್ರಾಕ್ಟರ್‌ಗಳ ದೊರೆಯಾಗಿರುವ ಈ ಸರದಾರ್ ಬಹಾದೂರ್ ಸರ್ ಶೋಭಾ ಇವರ ಬಗ್ಗೆ ಸರ್ಕಾರ ಅಷ್ಟೊಂದು ಮಮತೆ ತೋರಿಸಲು ಕಾರಣವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದರಲ್ಲಿ ಯಾವುದೇ ಮಮತೆಯ ವಿಚಾರ ನನಗೆ ಗೋಚರಿಸುತ್ತಿಲ್ಲ.

**ಪ್ರೊ॥ ಎನ್.ಜಿ. ರಂಗಾ :** ಇತರ ಅನೇಕ ಕಂಟ್ರಾಕ್ಟರುಗಳ ಪೈಕಿ ಸರ್ಕಾರ ಅವರಿಗೆ ಮಾತ್ರ ಪ್ರಾಶಸ್ತ್ಯವನ್ನು ತೋರಿಸುತ್ತಿದೆಯೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಹಾಶಯರೆ, ಅದು ಖಂಡಿತವಾಗಿಯೂ ನಿಜವಲ್ಲ.

## ೪೩೯
## ಹಜಾರಿಬಾಗ್‌ನಲ್ಲಿ ಮೈಕಾ ಗಣಿಗಳ ಕಾರ್ಮಿಕರಿಗೆ ಅಗತ್ಯವಸ್ತುಗಳ ಮತ್ತು ಇತರ ಸೌಲಭ್ಯಗಳ ಪೂರೈಕೆ*

೧೪೦೯. **ಶ್ರೀ ಶೇಠ್ ದಾಮೋದರ್ ಸ್ವರೂಪ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ :

ಅ) ಹಜಾರಿಬಾಗ್‌ನಲ್ಲಿರುವ ಅಭ್ರಕ ಗಣಿಗಳ ಕಾರ್ಮಿಕರ ಉಪಯೋಗಕ್ಕೆ ಯೋಗ್ಯ ನೀರು ಪೂರೈಕೆ ವ್ಯವಸ್ಥೆಯು ಇಲ್ಲವೆಂಬ ಮತ್ತು ಆ ಸ್ಥಳವು ಸಾಂಕ್ರಾಮಿಕ ರೋಗಕ್ಕೆ ಕುಖ್ಯಾತವಾದ ನೆಲೆವೀಡಾಗಿದ್ದರೂ ಕಾರ್ಮಿಕರ ಬಗ್ಗೆ ವೈದ್ಯಕೀಯ ನೆರವಿನ ಸೌಕರ್ಯವು ಇಲ್ಲವೆಂಬ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಜೀವನದ ವೆಚ್ಚವು ಅದರಿಂದ ಒಂಬತ್ತು ಪಟ್ಟು ಅಧಿಕಗೊಂಡಿದ್ದರೂ ಕಾರ್ಮಿಕರಿಗೆ ಯಾವುದೇ ತುಟ್ಟಿಭತ್ಯ ಅಥವಾ ಅಂಥ ಇನ್ನಾವುದೇ ಭತ್ಯ ನೀಡಲಾಗುತ್ತಿಲ್ಲವೆಂಬುದೂ, ಆಹಾರ ಧಾನ್ಯಗಳು ಪೇಟೆಯಿಂದ ಕಣ್ಮರೆಯಾಗಿರುವ ಈ ಸಮಯದಲ್ಲಿ ಅಕ್ಕಿಯನ್ನಾಗಲಿ ಇತರ ಆಹಾರ ಧಾನ್ಯಗಳನ್ನಾಗಲಿ ನಿಯಂತ್ರಿತ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆಯಿಲ್ಲವೆಂಬುದೂ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಅಕ್ಕಿಯ ನಿಯಂತ್ರಿತ ಬೆಲೆಯ ರೂಪಾಯಿ ಒಂದಕ್ಕೆ ಎರಡು ಸೇರು ಮತ್ತು ಎಂಟು ಚಟಾಕು ಇರುವಾಗ ಆ ಸ್ಥಳದ ಸಬ್‌ಡಿವಿಜನಲ್ ಆಫೀಸರು ರೂಪಾಯಿ ಒಂದಕ್ಕೆ ಎರಡು ಸೇರು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ಮಾರ್ಚ್ ೨೯, ೧೯೪೬. ಪುಟ ೩೧೫೭

ಮತ್ತು ನಾಲ್ಕು ಚಟಾಕು ಈ ದರದಲ್ಲಿ ಮಾರಾಟಮಾಡಬೇಕೆಂದು ಆಜ್ಞೆಮಾಡಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ನೀರು ಪೂರೈಕೆ ವ್ಯವಸ್ಥೆಯು ತೃಪ್ತಿಕರವಾಗಿಲ್ಲ ಮತ್ತು ಈಗ ಒದಗಿಸಲಾಗುತ್ತಿರುವ ವೈದ್ಯಕೀಯ ನೆರವು ಸಾಕಷ್ಟು ಇಲ್ಲ ಆದಕಾರಣ ಈ ದಿಸೆಯಲ್ಲಿ ಸುಧಾರಣೆಗೆ ಇನ್ನೂ ಅವಕಾಶವುಂಟು. ಈ ವ್ಯವಸ್ಥೆಯನ್ನು ಶಾಸನದ ಮೂಲಕ ಸಧ್ಯದಲ್ಲೇ ಸುಧಾರಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸರ್ಕಾರಕ್ಕೆ ತಿಳಿಸಿರುವ ಮಟ್ಟಿಗೆ, ಕೆಲವು ಸಂದರ್ಭಗಳಲ್ಲಿ ಮಜೂರಿಗಳನ್ನು ಹೆಚ್ಚಿಸಲಾಗಿದ್ದು ಅದರಲ್ಲಿ ತುಟ್ಟಿಭತ್ಯೆಯನ್ನು ಸೇರಿಸಲಾಗಿದೆ. ಕೆಲವು ಪ್ರಮುಖ ಉದ್ಯಮ ಸಂಸ್ಥೆಗಳು ಮಜೂರಿಗಳ ಹೊರತಾಗಿ ತುಟ್ಟಿಭತ್ಯವನ್ನು ಸಹ ಪಾವತಿಮಾಡುತ್ತಿವೆ.

ಅಕ್ಕಿಯನ್ನು ಮತ್ತು ಇತರ ಆಹಾರ ಧಾನ್ಯಗಳನ್ನು ನಿಯಂತ್ರಿತ ಬೆಲೆಗಳಲ್ಲಿ ಮಾರಾಟ ಮಾಡುವ ವ್ಯವಸ್ಥೆಯು ಪ್ರಾಂತೀಯ ಸರ್ಕಾರಕ್ಕೆ ಸೇರಿದ ವಿಷಯವಾಗಿರುತ್ತದೆ. ಆದಕಾರಣ, ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಾಂತೀಯ ಸರ್ಕಾರದ ಜತೆ ಪ್ರಸ್ತಾಪಿಸಬೇಕೆಂಬುದು ನನ್ನ ಸಲಹೆ.

ಇ) ಈ ವಿಚಾರದಲ್ಲಿನ ಹೊಣೆ ಸ್ಥಳೀಯ ಪ್ರಾಧಿಕಾರಿಗಳಿಗೂ ಪ್ರಾಂತೀಯ ಸರ್ಕಾರಕ್ಕೂ ಸೇರಿದ್ದು.

## ೪೪೦
## ಹಜಾರಿಬಾಗ್‌ನಲ್ಲಿರುವ ಅಭ್ರಕದ ಗಣಿಗಳ ಕಾರ್ಮಿಕರ ಕುಂದುಕೊರತೆಗಳು*

೧೪೧೦. **ಶ್ರೀ ಶೇಠ್ ದಾಮೋದರ ಸ್ವರೂಪ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ಜಂಟಿ ಮೈಕಾ ಮಿಷನ್ ಸಂಸ್ಥೆಯು ಸಂದಾಯ ಮಾಡಿದ ಹಣವು ಹಜಾರಿಬಾಗ್‌ನಲ್ಲಿರುವ ಅಭ್ರಕದ ಗಣಿಗಳ ಕಾರ್ಮಿಕರಿಗೆ ಬಟವಾಡೆಯಾಗಿಲ್ಲವೆಂಬ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅಭ್ರಕದ ಗಣಿ ಕಂಪನಿಗಳು ಕಾರ್ಖಾನೆ ನಿಯಮಗಳ ನಿಬಂಧನೆಗಳನ್ನು ಬಹುಮಟ್ಟಿಗೆ ಕಡೆಗಣಿಸುತ್ತಿವೆಯೆಂದೂ ಕಾರ್ಮಿಕರ ಮಜೂರಿಯಿಂದ ರೂಪಾಯಿಗೆ ಒಂದಾಣೆಯಂತೆ ದಸ್ತೂರಿಯ ಹೆಸರಿನಲ್ಲಿ ಕಡಿತಮಾಡಿಕೊಳ್ಳುವ ಅತ್ಯಂತ ಆಕ್ಷೇಪಾರ್ಹ ಹಾಗೂ ಕಾನೂನುಬಾಹಿರವಾದ ಪದ್ಧತಿಯು ಬಹಿರಂಗವಾಗಿ ನಡೆಯುತ್ತಿದೆಯೆಂದೂ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಮೇಲೆ ಉಲ್ಲೇಖಿಸಿದ ಕುಂದುಕೊರತೆಗಳ ನಿಮಿತ್ತ ಮೈಕಾ ಮಜದೂರ್ ಸಂಘವು ಅನಿವಾರ್ಯವಾಗಿ ಒಂದು ತಿಂಗಳ ಮುಷ್ಕರ ಹೂಡುವ ಬಗ್ಗೆ ಸ್ಪಷ್ಟ ನೋಟೀಸು ಕೊಡುವಂತಾಯಿತೆಂಬ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದರೆ, ಕಾರ್ಮಿಕರ ಬೇಡಿಕೆಗಳನ್ನು ಪೂರೈಸಲು ಮತ್ತು ಮುಷ್ಕರದ ಅನಾಹುತವನ್ನು ತಡೆಯಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಲೋಚಿಸುತ್ತಿದೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬. ಪುಟ ೩೧೫೭

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮಾನ್ಯ ಸದಸ್ಯರು ಯಾವ ವಿಚಾರವನ್ನು ಉಲ್ಲೇಖಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿಲ್ಲ. ಉಲ್ಲೇಖವು ಜಂಟಿ ಮೈಕಾ ಮಿಷನ್ ಸಂಸ್ಥೆಯು ಸರಬರಾಜುದಾರರಿಗೆ ಸಂದಾಯಮಾಡುತ್ತಿರುವ ಬೆಲೆಯ ಮೇಲಣ ಹೆಚ್ಚುವರಿ ವೆಚ್ಚ ಭತ್ಯಕ್ಕೆ ಸಂಬಧಿಸಿದ್ದ ಪಕ್ಷದಲ್ಲಿ ಆ ವಿಷಯವು ಮಾಲೀಕರು ಮತ್ತು ಕಾರ್ಮಿಕರ ನಡುವಿನ ವಿಚಾರ ಮಾತ್ರ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಆ) ಕಾರ್ಖಾನೆಗಳ ಅಧಿನಿಯಮ ಮತ್ತು ಮಂಜೂರು, ಸಂದಾಯ ಅಧಿನಿಯಮ ಇವೆರಡೂ ಅಭ್ರಕದ ಕಾರ್ಖಾನೆಗಳಿಗೆ ಅನ್ವಯಿಸುವುದಿಲ್ಲ. ಮಾನ್ಯ ಸದಸ್ಯರು ಉಲ್ಲೇಖಿಸಿದ ಕಾನೂನುಬಾಹಿರ ಪದ್ಧತಿಯು ಪ್ರಚಲಿತವಾಗಿರುವ ಸಂಗತಿಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಅಭ್ರಕವನ್ನು ಕೇಂದ್ರೀಯ ನಿಯಂತ್ರಣಕ್ಕೆ ಒಳಪಡಿಸುವ ಸರ್ಕಾರದ ಪ್ರಸ್ತಾಪವು ಕಾರ್ಯರೂಪಕ್ಕೆ ಬಂದರೆ ಮತ್ತು ಈ ಸಂಬಂಧದಲ್ಲಿ ಅಭ್ರಕದ ವಿಚಾರಣಾ ಸಮಿತಿಯು ಸಾದರಪಡಿಸಿದ ಶಿಫಾರಸ್ಸುಗಳನ್ನು ಜಾರಿಗೊಳಿಸಿದರೆ ಆ ಪದ್ಧತಿಯು ಕಣ್ಮರೆಯಾಗುವುದೆಂದು ನಾನು ಭಾವಿಸುತ್ತೇನೆ.

ಇ) ಹೌದು. ಆ ವಿಷಯದ ಬಗ್ಗೆ ತನಿಖೆ ನಡೆಯುತ್ತಿದೆ.

## ೪೪೧
## ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ನಿಯೋಜಕರಿಗೆ ಸಂಬಂಧಿಸಿದ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೊಡುವುದರ ಮೇಲೆ ನಿಷೇಧ*

**೧೪೧೧. ಶ್ರೀ ಬಾಬು ನಾರಾಯಣ ಸಿಂಗ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಈ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಕಚೇರಿಗಳು ಮುಂತಾದವುಗಳಲ್ಲಿ ಕೆಲಸಮಾಡುತ್ತಿರುವವರಿಗೆ ಸಂಬಂಧಿಸಿದ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡುವುದನ್ನು ನಿಷೇಧಿಸುವ ಕಾರ್ಮಿಕ ಇಲಾಖೆಯ ೧೯೪೪ರ ನವೆಂಬರ್ ೧೪ನೇ ತಾರೀಖಿನ ಎಂ.ಎಸ್. ೨೧ ಸಂಖ್ಯೆಯ ಸುತ್ತೋಲೆಯನ್ನು ಹೊರಡಿಸಲು ಕಾರಣವಾದ ಸನ್ನಿವೇಶಗಳೇನು?

ಆ) ಅತ್ಯಂತ ವಿಖ್ಯಾತರಾದ ಮತ್ತು ಹಿಂದಿನಿಂದಲೂ ಪ್ರತಿಷ್ಠಿತರಾದ ಕಂಟ್ರಾಕ್ಟರುಗಳಿಗೆ ಈ ಸುತ್ತೋಲೆಯಿಂದ ಅತೀವ ಅಸಮಾಧಾನ ಮತ್ತು ಅಪಾರ ತೊಂದರೆ ಉಂಟಾಯಿತೆಂಬ ಸಂಗತಿ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಇ) ಸರ್ಕಾರದ ಇತರ ಇಲಾಖೆಗಳಲ್ಲೂ ಈ ಬಗೆಯ ಆಜ್ಞೆಗಳಿವೆಯೆ? ಇದ್ದರೆ, ಅಂಥ ಆಜ್ಞೆಗಳ ಪ್ರತಿಗಳನ್ನು ಸದನದ ಮುಂದೆ ಇರಿಸುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬. ಪುಟ ೩೧೫೮

ಈ) ಕಾರ್ಮಿಕ ಇಲಾಖೆಯು ಈ ಆಜ್ಞೆಗಳನ್ನು ಹೊರಡಿಸುವ ಮುನ್ನ ಭಾರತ ಸರ್ಕಾರದ ಕಾನೂನು ಇಲಾಖೆಯ ಜತೆ ಸಮಾಲೋಚನೆ ನಡೆಸಿತ್ತೆ? ಹಾಗಿದ್ದರೆ, ಕಾನೂನು ಇಲಾಖೆಯ ಅಭಿಪ್ರಾಯವೇನು?

ಉ) ಕಂಟ್ರಾಕ್ಟರನ ಸಂಬಂಧಿಕನು ಅವನಿಗೆ ಸಂಬಂಧಪಟ್ಟ ವಿಭಾಗದಲ್ಲಿಯೇ ಕೆಲಸಮಾಡುತ್ತಿದ್ದ ಪಕ್ಷದಲ್ಲಿ ಅವನನ್ನು ಬೇರೆ ಯಾವುದೇ ವಿಭಾಗಕ್ಕೆ ಅಥವಾ ಠಾಣೆಗೋ ವರ್ಗಾಯಿಸುವ ಮೂಲಕ ಆಜ್ಞೆಯ ಉದ್ದೇಶವನ್ನು ಪರಿಪಾಲಿಸುವುದು ಸಾಧ್ಯವಿಲ್ಲವೆ? ಸಾಧ್ಯವಿಲ್ಲದಿದ್ದರೆ, ಏಕೆ ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತೀರ?

ಊ) ಮಾನ್ಯ ಮಂತ್ರಿಗಳು ಸದರಿ ಆಜ್ಞೆಗಳನ್ನು ರದ್ದುಗೊಳಿಸುವುದರ ಸೂಕ್ತತೆಯನ್ನು ಪರ್ಯಾಲೋಚಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ, ಆ, ಇ, ಉ ಮತ್ತು ಊ ೧೧೪೩ನೆಯ ಕ್ರಮ ಸಂಖ್ಯೆಯ ಚುಕ್ಕಿಗುರುತಿನ ಪ್ರಶ್ನೆಗೆ ೧೯೪೬ರ ಮಾರ್ಚ್ ೨೧ರಂದು ನೀಡಲಾದ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಾಗಿದೆ.

ಈ) ಇಲ್ಲ. ಅದು ಕೇವಲ ಆಡಳಿತಾತ್ಮಕ ವಿಚಾರ.

## ೪೪೨
## ಸರ್ಕಾರಿ ವಾಸಗೃಹಗಳ ಹಂಚಿಕೆ ನಿಯಮಗಳ ಪರಿಷ್ಕರಣ*

**೧೪೧೨. ಶ್ರೀ ಬಾಬು ರಾಮನಾರಾಯಣ ಸಿಂಗ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಪ್ರಾರ್ಥನೆ : ಯುದ್ಧದ ಅವಧಿಯಲ್ಲಿ ನವದೆಹಲಿಯಲ್ಲಿನ ವಾಸಗೃಹಗಳ ಹಂಚಿಕೆಗೆ ಸಂಬಂಧಪಟ್ಟ ಹಾಲಿ ಹಂಚಿಕೆಯ ನಿಯಮಾವಳಿಗಳನ್ನು ಈ ಹಿಂದಿನ ನಿಯಮಾವಳಿಯಲ್ಲಿನ ನಿಯಮಗಳ ಪ್ರಕಾರ ವರ್ಗದ ಅಥವಾ ಸಮೂಹದ ನಡುವೆಯೇ ನಿವಾಸಗಳ ಪರಸ್ಪರ ಬದಲಾವಣೆಗೆ ಅನುಕೂಲವಾಗುವ ಹಾಗೆ ಈಗ ಯುದ್ಧ ಸಮಾಪ್ತಿಯಾಗಿರುವುದರಿಂದ ಯಾವಾಗ ಪರಿಷ್ಕರಿಸಲಾಗುವುದು?

ಆ) ತಮ್ಮ ಆಯ್ಕೆಗೆ ಅನುಗುಣವಾಗುವ ಹಾಗೆ ಮನೆ ಪಡೆಯಲು ಸಾಧ್ಯವಾಗದೆ ಬೇರೆ ಮನೆಯನ್ನು ಪಡೆದ ಕೆಲವರು, ಅವರಿಗೆ ಎಷ್ಟೇ ಅತೃಪ್ತಿಯಿದ್ದಾಗ್ಯೂ, ತಾವು ಪಡೆದ ಮನೆಗಳಲ್ಲಿಯೇ ಮುಂದುವರಿಯಬೇಕಾಗಿದೆಯೆಂಬ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಲಿ ನಿಯಮಾವಳಿಯ ಮೇರೆಗೆ ಮನೆಗಳ ಹಂಚಿಕೆ ಪಡೆಯುವ ವಿಚಾರದಲ್ಲಿ ದಿಲ್ಲಿಯಲ್ಲಿ ನೆಲೆಸಿರುವ ಜೂನಿಯರ್ ಆಫೀಸರುಗಳಿಗಿಂತ ಸಿಮ್ಲಾದಿಂದ ದೆಹಲಿಗೆ ಬರುವ ಸೀನಿಯರ್ ಆಫೀಸರುಗಳಿಗೆ ಹೆಚ್ಚಿನ ಅನನುಕೂಲವೆಂಬ ಸಂಗತಿಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹಾಲಿ ಇರುವ ಹಂಚಿಕೆ ನಿಯಮಾವಳಿಯನ್ನು ಪರಿಷ್ಕರಿಸುವುದರ ಸೂಕ್ತತೆಯ ಪ್ರಶ್ನೆಯನ್ನು ಸದ್ಯದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು. ಆಗ ಆ ನಿಯಮಗಳಲ್ಲಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬. ಪುಟ ೩೧೫೮

ಮನೆ ಬದಲಾವಣೆಯ ಬಗ್ಗೆ ಏರ್ಪಾಡು ಮಾಡುವ ಪ್ರಶ್ನೆಯನ್ನು ಪರಿಶೀಲಿಸಲಾಗುವುದು.

ಆ) ಇದು ಅಭಿಪ್ರಾಯದ ವಿಚಾರ.

ಇ) ಹೌದು. ಕೆಲವು ಪ್ರಸಂಗಗಳಲ್ಲಿ ಸೀನಿಯರ್ ಆಫೀಸರ್‌ಗಳಿಗೆ ಅನನುಕೂಲವುಂಟಾದದ್ದು ನಿಜ. ಆದರೆ ಅದು ಈ ಮನೆಗಳಲ್ಲಿ ಈಗಾಗಲೇ ವಾಸವಾಗಿರುವ ಹೆಚ್ಚಿನ ಸಂಖ್ಯೆಯ ಆಫೀಸರ್‌ಗಳನ್ನು ಕದಲಿಸಲು ಸಾಕಷ್ಟು ಕಾರಣವಾಗಲಾರದು.

## ೪೪೩
## ಹೆಚ್ಚು ಸಂಬಳಪಡೆಯುವ ಅಧಿಕಾರಿಗಳಿಗೆ ಕೆಳವರ್ಗದ ಮನೆಗಳನ್ನು ಹಂಚಿಕೆ ಮಾಡಿದ ಕಾರಣ ಆದಾಯ ನಷ್ಟ*

**೧೪೧೩. ಶ್ರೀ ಬಾಬು ರಾಮನಾರಾಯಣ ಸಿಂಗ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿ ಪ್ರಾರ್ಥನೆ. ಅ) ನವದೆಹಲಿಯಲ್ಲಿ ಮಾಹೆಯಾನ ರೂ. ೬೦೦/– ಅಥವಾ ಅದಕ್ಕಿಂತ ಹೆಚ್ಚಿಗೆ ಸಂಬಳ ಪಡೆಯುತ್ತಿರುವ ಅಧಿಕಾರಿಗಳು ತಮಗೆ ಮೀಸಲಾದ ಬಂಗಲೆಗಳಲ್ಲಿ ವಾಸಮಾಡುವ ಬದಲು ರೂ. ೬೦೦ಕ್ಕಿಂತ ಕಡಿಮೆ ಸಂಬಳ ಬರುವ ಅಧಿಕಾರಿಗಳಿಗೆ ಮೀಸಲಾದ ಗುಮಾಸ್ತರುಗಳ 'ಎ' ಮತ್ತು 'ಬಿ' ವರ್ಗದ ಕ್ವಾರ್ಟರ್ಸ್‌ಗಳಲ್ಲಿ ವಾಸಿಸುತ್ತಿದ್ದಾರೆ. ಅಂಥ ಅಧಿಕಾರಿಗಳ ಸಂಖ್ಯೆ ಎಷ್ಟು.

ಆ) ಈ ಅಧಿಕಾರಿಗಳಿಗೆ ಹಂಚಿಕೆಪಡೆಯಲು ಹಕ್ಕುಳ್ಳ ಅಥವಾ ಅದಕ್ಕಿಂತ ಕಡಿಮೆ ದರ್ಜೆಯ ಮನೆಗಳನ್ನು ಒದಗಿಸದಿರುವ ಕಾರಣ ಬಾಡಿಗೆಯ ರೂಪದಲ್ಲಿ ಸಾಕಷ್ಟು ಹಣ ನಷ್ಟವಾಗುತ್ತಿದೆಯೆಂಬ ಸಂಗತಿ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಇ) ಸರ್ಕಾರಿ ರಾಜಸ್ವದ ಈ ನಷ್ಟವನ್ನು ತಪ್ಪಿಸಲು ಸರ್ಕಾರ ಯಾವ ಕ್ರಮಕೈಗೊಳ್ಳಲು ಉದ್ದೇಶಿಸಿದೆ? ಇದಲ್ಲದೆ ಮೇಲ್ದರ್ಜೆಯ ಮನೆಗಳನ್ನು ಕಟ್ಟುವ ಪ್ರಸ್ತಾಪಗಳೇನಾದರೂ ಇವೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) (i) ೯೮, (ii) ೫೭, (iiii) ೧೩೮

ಆ) ಸರ್ಕಾರಕ್ಕೆ ನಷ್ಟವಾಗುತ್ತಿಲ್ಲ. ಕೆಳದರ್ಜೆ ಮನೆಗಳಲ್ಲಿ ವಾಸಿಸುವ ಅಧಿಕಾರಿಗಳು ಗರಿಷ್ಠ ಬಾಡಿಗೆಯನ್ನು ಸಂದಾಯ ಮಾಡುತ್ತಿದ್ದಾರೆ. ಇದಲ್ಲದೆ ಯಾವ ಮನೆಯೂ ಖಾಲಿಯಿಲ್ಲ.

ಇ) ಭಾಗ–೧–ಉದ್ಭವಿಸುವುದಿಲ್ಲ.
ಭಾಗ–೨–ಅಧಿಕಾರಿಗಳಿಗಾಗಿ ಇನ್ನಷ್ಟು ವಾಸದ ಮನೆಗಳನ್ನು ಒದಗಿಸುವ ಸಾರ್ವತ್ರಿಕ ಪ್ರಸ್ತಾಪದ ಭಾಗವಾಗಿ ಈ ವಿಚಾರವೂ ಪರಿಶೀಲನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬. ಪುಟ ೩೧೫೫

## ೪೪೪
## ನವದೆಹಲಿಯಲ್ಲಿ ಡಿ.ಐ.ಝಡ್.ನಲ್ಲಿ ಮತ್ತು ಮಿಂಟೋ ರಸ್ತೆಯಲ್ಲಿ ಇರುವ ಮನೆಗಳಲ್ಲಿ ಫಿಲ್ಟರ್ ಮಾಡದಿರುವ ನೀರಿನ ಸರಬರಾಜು*

**೧೪೧೫. ಶ್ರೀ ಬಾಬು ರಾಮನಾರಾಯಣ ಸಿಂಗ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯದ ಬಗ್ಗೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ : ನವದೆಹಲಿಯ ಡಿ. ಐ. ಝಡ್ ಮತ್ತು ಮಿಂಟೊ ರಸ್ತೆಯ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಕ್ವಾರ್ಟರ್ಸ್‌ಗಳಿಗೆ ಅಂಗಣಗಳಲ್ಲಿ ಫಿಲ್ಟರ್ ಮಾಡದಿರುವ ನೀರಿನ ಪೂರೈಕೆಗಾಗಿ ಪೈಪುಗಳನ್ನು ಸ್ಥಾಪಿಸಲು ಯಾವುದೇ ಪ್ರಸ್ತಾಪವಿದೆಯೆ?

ಆ) ನೆಲತೊಳೆಯಲು, ಪಾಯಿಖಾನೆತೊಳೆಯಲು, ಹೂಗಿಡಗಳಿಗೆ ನೀರು ಹಾಕಲು, ತರಕಾರಿಗಿಡಗಳಿಗೆ ನೀರು ಹಾಕಲು ಮತ್ತು ಬೇಸಿಗೆ ಕಾಲದಲ್ಲಿ ಕುಶ್‌ಕಿ ತಟ್ಟಿಗಳಿಗೆ ನೀರು ಸಿಂಪಡಿಸಲು ಪ್ರತಿಯೊಂದು ಕ್ವಾರ್ಟರ್ಸ್‌ಗಳಲ್ಲಿ ಗ್ಯಾಲನ್‌ಗಟ್ಟಲೆ ಫಿಲ್ಟರ್ ಮಾಡಿದ ನೀರನ್ನು ಅಪವ್ಯಯ ಮಾಡಲಾಗುತ್ತಿದೆಯೆಂಬ ಸಂಗತಿ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಇ) ಈಗ ಬೇಸಿಗೆ ಕಾಲವು ಸಮೀಪಿಸುತ್ತಿರುವ ಕಾರಣ, ಸೇವೆ ಮತ್ತು ಮಿತವ್ಯಯಗಳ ದೃಷ್ಟಿಯಿಂದ ಕ್ವಾರ್ಟರ್ಸ್‌ಗಳಲ್ಲಿ ಫಿಲ್ಟರ್ ಮಾಡದಿರುವ ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಏರ್ಪಡಿಸುವುದರ ಬಗ್ಗೆ ಮಾನ್ಯ ಮಂತ್ರಿಗಳು ಪರ್ಯಾಲೋಚಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು. ಆ) ಇಲ್ಲ. ಈ ಕ್ವಾರ್ಟರ್ಸ್‌ಗಳ ನಿವಾಸಿಗಳಿಗೆ ಫಿಲ್ಟರ್ ಮಾಡದಿರುವ ನೀರು ತೆಗೆದುಕೊಳ್ಳಲು ಅನುಕೂಲವಾಗುವ ಹಾಗೆ ಪ್ರತಿ ಬೇಸಿಗೆ ಕಾಲದಲ್ಲಿ ಈ ಕ್ವಾರ್ಟರ್ಸ್‌ಗಳಿಗೆ ಸಮೀಪದ ಅನುಕೂಲ ಸ್ಥಳಗಳಲ್ಲಿ ಫಿಲ್ಟರ್ ಮಾಡದಿರುವ ನೀರಿನ ಹೈಡ್ರಂಟ್ಸ್‌ಗಳ ಮೇಲೆ ಒಂದು ಬೆಂಡ್ ಮತ್ತು ಒಂದು ಗ್ಲಾಂಡ್ ಕಾಕ್ ಅನ್ನು ಒದಗಿಸಲಾಗುತ್ತದೆ. ಆದ ಕಾರಣ ವರ್ಷದ ಉಳಿದ ಭಾಗದಲ್ಲಿ ಈ ಉದ್ದೇಶಗಳಿಗೆ ಮಾಡಲಾಗುವ ಫಿಲ್ಟರ್ ಮಾಡಿದ ನೀರಿನ ಬಳಕೆಯು ಅತಿಯಾಗುತ್ತದೆ ಎಂದು ನಾನು ಎಣಿಸುವುದಿಲ್ಲ.

ಇ) ಇಲ್ಲ. ಸರ್ಕಾರವು ಈ ಸಲಹೆಯನ್ನು ಈ ಹಿಂದೆಯೇ ಕೂಲಂಕಷವಾಗಿ ಪರ್ಯಾಲೋಚಿಸಿದ್ದು, ಆ ಬಗ್ಗೆ ವಿಪರೀತ ವೆಚ್ಚವಾಗುವ ಕಾರಣಕ್ಕಾಗಿ ಅದನ್ನು ಕೈಬಿಡಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ಮಾರ್ಚ್ ೨೯, ೧೯೪೬. ಪುಟ ೩೧೫೯

## ೪೪೫
## ಸಬ್ ಡಿವಿಜನ್‌ನಲ್ ಆಫೀಸರ್‌ಗಳಾಗಿ ಮತ್ತು ಓವರ್‌ಸೀಯರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವರು ಅರ್ಹ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾಗಿ ಪದೋನ್ನತಿ ನೀಡದಿರುವ ವಿಚಾರ*

**೧೪೧೬. ಶ್ರೀ ಬಾಬು ರಾಮನಾರಾಯಣ ಸಿಂಗ್ :** ಅ) ಕೇಂದ್ರೀಯ ಲೋಕೋಪಯೋಗಿ ಇಲಾಖೆಯ ಕಟ್ಟಡಗಳು ಹಾಗೂ ರಸ್ತೆ ಮತ್ತು ವಿದ್ಯುಚ್ಛಕ್ತಿ ಈ ಎರಡೂ ಶಾಖೆಗಳಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರುಗಳ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಹುದ್ದೆಗಳನ್ನು ತುಂಬಲು ಇಂಜಿನಿಯರುಗಳ ಕೊರತೆ ಇದೆಯೆಂಬ ಸಂಗತಿಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಆ) ಸಬ್ ಡಿವಿಜನ್ ಆಫೀಸರ್‌ಗಳಾಗಿ ಮತ್ತು ಓವರ್‌ಸೀಯರ್‌ಗಳಾಗಿ ಕೂಡ ಕೆಲಸ ಮಾಡುತ್ತಿರುವ ವಿದೇಶಿ ಅರ್ಹತೆ ಪಡೆದ ಹಾಗೂ ಅನುಭವಿಕರಾದ ಇಂಜಿನಿಯರುಗಳು ಇದ್ದಾರೆಂಬುದೂ ಅವರು ಅರ್ಹರಲ್ಲದ ಅಧೀನ ಸಬ್ ಡಿವಿಜನಲ್ ಆಫೀಸರುಗಳಿಗಿಂತ ಇನ್ನೂ ಜ್ಯೂನಿಯರ್ ಆಗಿರುವರೆಂಬ ಕಾರಣ ಅವರಿಗೆ ಡಿವಿಜನಲ್ ಚಾರ್ಜ್ ಅಥವಾ ಅದಕ್ಕಿಂತ ಹೆಚ್ಚಿನ ಚಾರ್ಜ್‌ನ್ನು ವಹಿಸಿಕೊಳ್ಳಲು ಆ ಪದೋನ್ನತಿ ನೀಡಲಾಗುತ್ತಿಲ್ಲವೆಂಬ ಸಂಗತಿಯು ಅವರ ಗಮನಕ್ಕೆ ಬಂದಿದೆಯೇ?

ಇ) ಇಷ್ಟೇ ಅಲ್ಲದೆ, ವಿದೇಶದಲ್ಲಿ ಅಧ್ಯಯನ ಮಾಡಿದ ಅರ್ಹ ವ್ಯಕ್ತಿಗಳಿಂದ ಮೇಲಿನ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶದಿಂದ ವಿದ್ಯಾರ್ಥಿಗಳನ್ನು ಸರ್ಕಾರವು ಸಾಗರೋತ್ತರ ಅಧ್ಯಯನಕ್ಕೆ ಕಳಿಸಿಕೊಡುತ್ತಿದೆಯೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ವಿದೇಶದಲ್ಲಿ ಅಧ್ಯಯನ ಮಾಡಿ ಅರ್ಹರಾದ ಕೆಲವರು ಇಂಜಿನಿಯರ್‌ಗಳು ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಇದ್ದಾರೆ. ಆದರೆ ಅವರು ಇಲಾಖೆಯಲ್ಲಿ ಆಗಲೇ ಇರುವ ಅರ್ಹ ಇಂಜಿನಿಯರ್‌ಗಳಿಗೆ ಜ್ಯೂನಿಯರ್ ಆಗಿರುವರೆಂಬ ಕಾರಣ ಅಥವಾ ಅವರು ಪದೋನ್ನತಿಗೆ ಸೂಕ್ತರಲ್ಲವೆಂಬ ಕಾರಣದಿಂದಾಗಿ ಅವರಿಗೆ ಇನ್ನೂ ಪದೋನ್ನತಿ ನೀಡಿಲ್ಲ.

ಇ) ಹೌದು.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ಮಾರ್ಚ್ ೨೯, ೧೯೪೬. ಪುಟ ೩೧೬೦.

## ೪೪೬
## ಸಬ್ ಡಿವಿಜನಲ್ ಆಫೀಸರ್‌ಗಳಾಗಿ ಮತ್ತು ಓವರಿಸೀಯರ್‌ಗಳಾಗಿ ಕೆಲಸಮಾಡುತ್ತಿರುವ ಕೆಲವರು ಅರ್ಹ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಪದೋನ್ನತಿ ನೀಡದಿರುವ ವಿಚಾರ*

**೧೪೧೭. ಶ್ರೀ ಬಾಬು ರಾಮನಾರಾಯಣ ಸಿಂಗ್ :** ಅ) ವಿದೇಶದಲ್ಲಿ ಅಧ್ಯಯನ ಮಾಡಿ ಅರ್ಹರಾದ ಅನುಭವಿಕ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಪೈಕಿ ಪ್ರತಿಯೊಬ್ಬರ ವಿದ್ಯಾರ್ಹತೆಗಳು, ಒಟ್ಟು ಅನುಭವ, ಸೇವಾವಧಿ ಮತ್ತು ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ನೇಮಕಾತಿ ದಿನಾಂಕ ಇವುಗಳನ್ನು ತೋರಿಸುವ ಪಟ್ಟಿಯನ್ನು ಸದನದ ಮುಂದೆ ಇಡಬೇಕಾಗಿ ವಿನಂತಿ.

ಆ) ೧೯೪೦ರ ಲಾಗಾಯಿತು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾಗಿ ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಾಗಿ ನೇರಭರ್ತಿ ಮೂಲಕ ನೇಮಿಸಲ್ಪಟ್ಟ ಆಫೀಸರುಗಳ ಸಂಖ್ಯೆಯೆಷ್ಟು?

ಇ) ಮೇಲ್ಕಂಡ (ಅ) ವಿಭಾಗದಲ್ಲಿ ನಮೂದಿಸಲಾದ ನೇಮಕಗಳನ್ನು ಮಾಡುವಾಗ (ಆ) ವಿಭಾಗಕ್ಕೆ ನೀಡಿದ ಉತ್ತರಗಳಲ್ಲಿ ನಮೂದಿಸಿದ ವ್ಯಕ್ತಿಗಳ ಪೈಕಿ ಪ್ರತಿಯೊಬ್ಬರ ಪ್ರಕರಣವನ್ನು ಅಂಥ ನೇಮಕದ ಸಂಬಂಧದಲ್ಲಿ ಪರಿಗಣಿಸಲಾಯಿತೆ? ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

–ಈ ವಿಷಯಗಳನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ವಿವರಣೆಯನ್ನು ಸದನದ ಮುಂದೆ ಇಡಲಾಗಿದೆ.

ಆ) ಸೂಪರಿಂಟೆಂಡಿಂಗ್ ಇಂಜಿನಿಯರ್ – ಯಾರೂ ಇಲ್ಲ.
ಎಕ್ಸಿಕ್ಯೂಟಿವ್ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರ್ – ೨೮

ಇ) ಈ ಕೆಳಗೆ ನಮೂದಿಸಲಾದವರ ಹೊರತಾಗಿ ಉಳಿದ ಎಲ್ಲರ ಪ್ರಕರಣಗಳನ್ನು ಪರಿಗಣಿಸಲಾಗಿತ್ತು.

| | | |
|---|---|---|
| ೧. | ಶ್ರೀ ಬಿ.ಎಸ್. ಕೃಷ್ಣಸ್ವಾಮಿ | ಅವರು ಹಂಗಾಮಿ ಅಧೀನ ಅಧಿಕಾರಿಗಳು ಎಕ್ಸಿಕ್ಯೂಟಿವ್ ಇಂಜಿನಿಯರುಗಳಾಗಿ ಪದೋನ್ನತಿ ಪಡೆದ ಅಧೀನ ಅಧಿಕಾರಿ. ಉಳಿದ ಎಲ್ಲರೂ ಖಾಯಂ ಅಧೀನ ಅಧಿಕಾರಿಗಳು ಅಥವಾ ಗೆಜೆಟೆಡ್ ಹಂಗಾಮಿ ಇಂಜಿನಿಯರುಗಳು. |
| ೨. | ಎ.ಕೆ. ಸೆನ್ ಮತ್ತು ನಾಸಿರ್ ಹುಸೇನ್ | ಈ ಪ್ರಕರಣಗಳು ಸೀನಿಯಾರಿಟಿ ಪಟ್ಟಿಯಲ್ಲಿ ಮೇಲಕ್ಕೆ ಬಂದಿಲ್ಲವಾದ ಕಾರಣ, ಈವರೆಗೂ ಪರಿಗಣನೆಗೆ ಬಂದಿಲ್ಲ. ಈವರೆಗೆ ಇಲೆಕ್ಟ್ರಿಕಲ್ ಇಂಜಿನಿಯರುಗಳಾಗಿ ಪದೋನ್ನತಿ ಪಡೆದವರು ಅವರಿಗಿಂತ ಸೀನಿಯರ್ ಆಗಿದ್ದವರು. |

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ಮಾರ್ಚ್ ೨೯, ೧೯೪೬. ಪುಟ ೩೧೬೦

ಈ) ಅಂಥ ವಾಗ್ದಾನ ಕೊಡಲು ಸಾಧ್ಯವಿಲ್ಲ. ಕಾರಣವೆಂದರೆ ಅ) ಭಾಗಕ್ಕೆ ಕೊಟ್ಟ ಉತ್ತರದಲ್ಲಿ ನಮೂದಿಸಿದ ಅಧಿಕಾರಿಗಳು ಅನುಭವ ಇಲ್ಲದವರು ಅಥವಾ ಡಿವಿಜನ್ ಚಾರ್ಜ್ ಧಾರಣ ಮಾಡಲು ಅರ್ಹರಲ್ಲದವರು.

ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿರುವ ವಿದೇಶದಲ್ಲಿ ಅಧ್ಯಯನ ಮಾಡಿ ಅರ್ಹತೆ ಪಡೆದ ಸಬ್ ಡಿವಿಜನ್ ಆಫೀಸರುಗಳ ಪಟ್ಟಿ.

## ೧. ಇಂಜಿನಿಯರಿಂಗ್ ವಿಭಾಗ

| ಕ್ರ ಸಂ. | ಹೆಸರು | ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೇಮಕಾತಿಯ ದಿನಾಂಕ | ವಿದ್ಯಾರ್ಹತೆ | ಹಿಂದಿನ ಅನುಭವ, ಯಾವುದಾದರೂ ಇದ್ದಲ್ಲಿ |
|---|---|---|---|---|
| ೧ | ಶ್ರೀ ಎನ್. ಎನ್. ಮೆಹ್ತೆ | ೧೭–೯–೧೯೩೫ | ಬಿ.ಎ., ಬಿ.ಎಸ್‌ಸಿ. (ಇಂಜಿನಿಯರಿಂಗ್) ಷೆಫೀಲ್ಡ್ ಎ.ಎಂ.ಐ.ಇ. | – |
| ೨ | ಶ್ರೀ ಗುರ್ಬಚನ್ ಸಿಂಗ್ | ೫–೩–೧೯೪೨ | ಬಿ.ಎಸ್‌ಸಿ. (ಸಿವಿಲ್) ಎಡಿನ್‌ಬರ್ಗ್ | ಸೂಪರಿಟೆಂಡೆಂಟರಂತೆ ೧೨ ವರ್ಷಗಳನು ಕೇಂದ್ರ ಲೋಕೋಪಯೋಗಿ ಇಲಾಖೆ ಕಿಯೊಟ್ರ ರಾಜ್ಯ, ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ೧೫ ತಿಂಗಳು ಶಿಶಿಕ್ಷು |
| ೩ | ಶ್ರೀ ಆರ್. ಆರ್. ಕೋಮರ್ | ೧೮–೫–೧೯೪೨ | ಚೆಟರ್‌ಸಿ ಪಾಲಿಟೆಕ್ನಿಕ್ ಲಂಡನ್ನಿನ ಡಿಪ್ಲೊಮೊ ಪಡೆದವನು | – |
| ೪ | ಶ್ರೀ ಬಿ. ಎಸ್. ಕೃಷ್ಣಸ್ವಾಮಿ | ೧೩–೭–೧೯೪೨ | ಬಿ.ಎಸ್‌ಸಿ. (ಇಂಜಿನಿಯರಿಂಗ್) ರಂಗೂನ್ (ಬರ್ಮಾ) | – |
| ೫ | ಶ್ರೀ ಎಸ್. ವಿ. ಸುಬ್ಬರಾವ್ | ೨೦–೭–೧೯೪೨ | ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿವಿಲ್ ಇಂಜಿನಿಯರಿಂಗ್ ಎಡಿನ್‌ಬರ್ಗ್ | ೧ ವರ್ಷಗಳ ಹಿಂದಿನ ಅನುಭವ |
| ೬ | ಶ್ರೀ ಎ. ಕೆ. ದಾಸ್ | ೧–೧–೧೯೪೩ | ಬಿ.ಎಸ್‌ಸಿ. ಸಿವಿಲ್ ಇಂಜಿನಿಯುರಿಂಗ್ (ಎಡಿನ್‌ಬರ್ಗ್) | – |
| ೭ | ಶ್ರೀ ಎಂ. ರೆಹಮಾನ್ | ೧೯–೪–೧೯೪೩ | ಬಿ.ಎಸ್‌ಸಿ. (ದೆಹಲಿ), ಬಿ.ಎಸ್‌ಸಿ. (ಸಿವಿಲ್) ದರ್ರಮ್ | – |
| ೮ | ಶ್ರೀ ಅಬ್ದುಲ್ ಘಫಾರ್ | ೧–೨–೧೯೪೨ | ಬಿ.ಎಸ್‌ಸಿ. ಸಿವಿಲ್ ಇಂಜಿನಿಯುರಿಂಗ್ (ಎಡಿನ್‌ಬರ್ಗ್) | ಇಂಗ್ಲೆಂಡಿನಲ್ಲಿ ಸಂಸ್ಥೆಯೊಂದಿಗೆ ಸ್ವಲ್ಪಮಟ್ಟಿನ ಅನುಭವ ಹೊಂದಿದ್ದಾರೆ. |
| ೯ | ಶ್ರೀ ಮೊಹಮ್ಮದ್ ಷಫಿ | ೧೫–೩–೧೯೪೪ | ಸಿ.ಇ. (ಬ್ರಿಸ್ಟಲ್) | – |
| ೧೦ | ಶ್ರೀ ನಿರಂಜನ್ ಸಿಂಗ್ ಬಿಸರ್ಬಿ | ೪–೪–೧೯೪೪ | ಬಿ.ಎಸ್‌ಸಿ. (ಸಿವಿಲ್) ಗ್ಲಾಸ್‌ಗೊ (ಎಡಿನ್‌ಬರ್ಗ್) | – |
| ೧೧ | ಶ್ರೀ ಎಸ್. ಎ. ಹಕೀಂ | ೩೦–೮–೧೯೪೪ | ಎಂ.ಇ.ಎಸ್. ಸಾಂದರ್ಭಿಕ ಮೇಲ್ವಿಚಾರಕರು (ಓವರ್‌ಸೀಯರ್) ಸಿ.ಇ. (ಷಫೀಲ್ಡ್) ಎ.ಎಮ್. ಐ.ಇ. (ಭಾರತ) ಸಿ.ಐ.ಎಸ್.ಇ. (ಲಂಡನ್) | ಮೊದಲಾದವುಗಳಲ್ಲಿ ೧೫ ವರ್ಷಗಳ ಅನುಭವ ಪಂಜಾಬ್‌ನಲ್ಲಿನ ಲೋಕೋಪಯೋಗಿ ಇಲಾಖೆಯಲ್ಲಿ ೧೫ ವರ್ಷಗಳು ಮತ್ತು ಜಿಲ್ಲಾ ಮಂಡಳಿ ಸೇವೆಯಲ್ಲಿ ೮ ವರ್ಷಗಳು |

## II ಇಲೆಕ್ಟ್ರಿಕಲ್ ವಿಭಾಗ

| ಕ್ರ. ಸಂ. | ಹೆಸರು | ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೇಮಕಾತಿಯ ದಿನಾಂಕ | ವಿದ್ಯಾರ್ಹತೆ | ಹಿಂದಿನ ಅನುಭವ, ಯಾವುದಾದರೂ ಇದ್ದಲ್ಲಿ |
|---|---|---|---|---|
| ೧೨. | ಶ್ರೀ ಬಿ.ಕೆ. ಮುಜುಮ್‌ದಾರ | ೪-೫-೧೯೪೨ | ಫ್ಯಾರಡೆ ಹೌಸ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕಾಲೇಜು,ಲಂಡನ್‌ನಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ | ಮೆಸರ್ಸ್ ಕ್ರಾಸ್‌ಲಿ ಬ್ರದರ್ಸ್ ನಿಯಮಿತ,ಮ್ಯಾಚೆಂಸ್ಟರ್ ಮತ್ತು ಸದರ್ನ್ ಎಲೆಕ್ಟ್ರಿಕಲ್ ಬಿಲ್ಡಿಂಗ್ಸ್‌ಗೆ ಅಪ್ರೆಂಟಸ್ ಇಂಜಿನಿಯರಂತೆ ೨ ವರ್ಷಗಳು ಸೇವೆ. ಕಲ್ಕತ್ತ ಪೂರೈಕೆ ನಿಗಮದೊಂದಿಗೆ ೩ ವರ್ಷಗಳ ಅವಧಿ |
| ೧೩. | ಶ್ರೀ ಎಂ.ಎನ್. ದತ್ | ೨೩-೯-೧೯೪೨ | ಬಿ.ಎಸ್‌ಸಿ. (ಗ್ಲಾಸ್‌ಗೊ) | ಸ್ವಲ್ಪ ಹಿಂದಿನ ಅನುಭವವಿದೆ ವಿವರಗಳು ಲಭ್ಯವಿಲ್ಲ. |
| ೧೪. | ಶ್ರೀ ಎ.ಕೆ. ಸೇನ್ | ೧೩-೩-೧೯೪೩ | – | – |
| ೧೫. | ಶ್ರೀ ನಾಸಿರ್ ಹುಸೇನ್ | ೧-೫-೧೯೪೫ | ಬಿ.ಎಸ್.ಸಿ. ಎ.ಎಮ್. (ಲಂಡನ್) | – |

## ೪೪೭
## ವೈಸ್ ರೀಗಲ್ ಎಸ್ಟೇಟಿನ ಸೂಪರಿಂಡೆಂಟ್ ಅವರು ನೇಮಿಸಿದ ಲಿಪಿಕ ಸಿಬ್ಬಂದಿಯ ಸೇವಾನಿಬಂಧನೆಗಳು ಮತ್ತು ಷರತ್ತುಗಳು*

**೧೪೧೯. ಸರ್ದಾರ್ ಮಂಗಲ ಸಿಂಗ್ :** ವೈಸ್ ರೀಗಲ್ ಎಸ್ಟೇಟಿನ ಸೂಪರಿಂಟೆಂಡೆಂಟ್ ಅವರು ೧೯೩೬ರ ಜುಲೈ ೧೪ನೇ ತಾರೀಖಿಗೆ ಮುನ್ನ ಸಿಮ್ಲಾದಲ್ಲಿ ಮತ್ತು ದಿಲ್ಲಿಯಲ್ಲಿ ನಿರ್ದಿಷ್ಟ ಕರ್ತವ್ಯದ ಬಗ್ಗೆ ನೇರವಾಗಿ ನೇಮಿಸಿಕೊಂಡ ಲಿಪಿಕ ಸಿಬ್ಬಂದಿಗೆ ಕೊಡಮಾಡಿದ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಸ್ಯಾಂಪಲ್ ಪ್ರತಿಯನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಸದನದ ಮುಂದೆ ಇಡಬೇಕಾಗಿ ವಿನಂತಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಿಬ್ಬಂದಿಗೆ ನೇಮಕಾತಿಯ ಪ್ರಸ್ತಾವಗಳನ್ನು ಕಳಿಸುವಾಗ ಯಾವುದೇ ನಿರ್ದಿಷ್ಟ ನಮೂನೆಯನ್ನು ನಿಯಮಿಸಿರಲಿಲ್ಲ. ಈ ಅವಧಿಯಲ್ಲಿ ನೀಡಲಾದ ನೇಮಕಾತಿ ಆಜ್ಞೆಯ ಪ್ರತಿಯನ್ನು ಸದನದ ಮುಂದೆ ಇಡಲಾಗಿದೆ.

## ೪೪೮
## ಸರ್ಕಾರಿ ನಿವಾಸಗಳ ಹಂಚಿಕೆ ನಿಯಮಗಳ ಪರಿಷ್ಕರಣ**

**೧೪೨೦. ಸರ್ದಾರ್ ಮಂಗಲ್ ಸಿಂಗ್ :** ಅ) ದೆಹಲಿಯಿಂದ ಸಿಮ್ಲಾಕ್ಕೆ ಅಥವಾ ಕಲ್ಕತ್ತೆಯಲ್ಲಿರುವ ಸಚಿವಾಲಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಅಧಿಕಾರಿಯು, ದೆಹಲಿಗೆ ಅವನ ಪುನರ್ವರ್ಗಾವಣೆಯಾದ ಮೇಲೆ ನಿವಾಸಗಳ ಹಂಚಿಕೆಯ ಉದ್ದೇಶಕ್ಕಾಗಿ ಸೀನಿಯಾರಿಟಿಯನ್ನು ಹೊಸದಾಗಿ ಗಳಿಸಿಕೊಳ್ಳಬೇಕಾಗುತ್ತದೆ ಎಂಬ ಸಂಗತಿಯು ನಿಜವೆ ಎನ್ನುವುದನ್ನು ಇಲಾಖೆಯ ಮಾನ್ಯ ಮಂತ್ರಿಗಳು ದಯೆಯಿಟ್ಟು ತಿಳಿಸುವರೆ?

ಆ) ವರ್ಗಾವಣೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆಜ್ಞೆ ಮಾಡಿರುವಾಗ ದೆಹಲಿಯಲ್ಲಿಯೆ ಕರ್ತವ್ಯದ ಮೇಲೆ ಇರುವ ಅಧಿಕಾರಿಗಳಿಗೆ ಸಂಬಂಧಪಟ್ಟ ಹಾಗೆ ಅಂಥ ಅಧಿಕಾರಿಗಳಿಗೆ ಅರ್ಹತಾ ನಿಯೋಜನೆಯ ದಿನಾಂಕದಿಂದಲೆ ಸೀನಿಯಾರಿಟಿಯನ್ನು ಕೊಡದಿರುವ ಮೂಲಕ ಯಾವ ಉದ್ದೇಶವನ್ನು ಸಾಧಿಸಿದಂತಾಗಿದೆ?

ಇ) ನಿವಾಸದ ಮನೆಗಳಿಗೆ ಸಂಬಂಧಿಸಿದ ಪರಿಸ್ಥಿತಿ ಅತ್ಯಂತ ತೀವ್ರವಾಗಿರುವ ಕಾರಣ ಮತ್ತು ಹಾಗೆ ಕಷ್ಟಕ್ಕೆ ಒಳಗಾದವರು ಅನೇಕ ವರ್ಷಗಳ ಸರ್ಕಾರಿ ಸೇವೆಯನ್ನು ಸಲ್ಲಿಸಿದವರಾಗಿದ್ದು ದೊಡ್ಡ ಕುಟುಂಬಗಳನ್ನು ಹೊಂದಿದವರೂ ಆಗಿರುವ ನಿಮಿತ್ತ, ಮಾನ್ಯ ಮಂತ್ರಿಗಳು ಈ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಲು ಉದ್ದೇಶಿಸಿರುವರೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೯ನೇ ಮಾರ್ಚ್, ೧೯೪೬. ಪುಟ. ೩೧೬೨

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೪, ೨೯ನೇ ಮಾರ್ಚ್, ೧೯೪೬. ಪುಟ. ೩೧೬೨

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ತುಲನಾತ್ಮಕವಾಗಿ ಜೂನಿಯರ್ ಆಗಿರುವ ಯಾವ ವ್ಯಕ್ತಿಗಳ ದೆಹಲಿಯ ವಾಸವು ನಿರಂತರವಾಗಿದ್ದಿತೊ ಮತ್ತು ಯಾರು ಸಿಮ್ಲಾ ಅಥವಾ ದಿಲ್ಲಿಯಲ್ಲಿ ಮನೆಗಳ ಕಠಿಣ ಪರಿಸ್ಥಿತಿಗಳಿಂದ ತೊಂದರೆಗಳಿಗೊಳಗಾಗಿದ್ದರೊ ಅಂತಹವರಿಗೆ ಪರಿಹಾರ ಒದಗಿಸುವುದಕ್ಕಾಗಿ.

ಇ) ಹಂಚಿಕೆ ನಿಯುವಮಾವಳಿಯು ಸಾವಮಾನ್ಯ ಪರಿಷ್ಕರಣವನ್ನು ಕೈಗೊಂಡಾಗ ಈ ನಿಯಮವನ್ನು ಪುನಃ ಪರಿಶೀಲಿಸಲಾಗುವುದು.

## ೪೪೯
## ಮುಂಬಯಿ ಪ್ರಾಂತದ ನಾಲಾ ನೀರಾವರಿಯಾಗುವ ಡೆಕ್ಕನ್ ಪ್ರದೇಶದ ಕೆಲವು ಭಾಗಗಳಲ್ಲಿ ಇನ್ನಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ*

**೧೪೨೧, ಶ್ರೀ ಬಿ.ಎಸ್. ಹಿರೆ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ನೀಡುವರೆ?

ಅ) ಮುಂಬಯಿ ಪ್ರಾಂತದ ಡೆಕ್ಕನ್ ಪ್ರದೇಶದಲ್ಲಿ ರಕ್ಷಣಾ ಉದ್ದೇಶಗಳಿಗಾಗಿ ಕಾಲುವೆಗಳನ್ನು ನಿರ್ಮಿಸಲಾಯಿತು ಎಂಬ ಸಂಗತಿ ನಿಜವೆ?

ಆ) ಅದೇ ಉದ್ದೇಶವು ನೆರವೇರಿದೆಯೆ? ಇಲ್ಲದಿದ್ದರೆ ಕಬ್ಬಿನ ಬೆಳೆಯ ಉದ್ದೇಶಕ್ಕಾಗಿ ಸಕ್ಕರೆ ಕಾರ್ಖಾನೆಗಳ ಅಡಿಯಲ್ಲಿ ಬರುವ ಪ್ರದೇಶವನ್ನು ವಿಸ್ತರಿಸಲು ಸರ್ಕಾರ ಪ್ರಸ್ತಾಪಿಸಿದೆಯೆ?

ಇ) ಈ ಪ್ರದೇಶದಲ್ಲಿ ನೀರಾವರಿಯಾಗುವ ಭೂಮಿಯ ಎಕರೆ ವಿಸ್ತೀರ್ಣವೆಷ್ಟು? ಅವುಗಳ ಪೈಕಿ ಎಷ್ಟು ಭೂಮಿಯನ್ನು ಸಕ್ಕರೆ ಕಾರ್ಖಾನೆಗಳು ತಮ್ಮ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿವೆ?

ಈ) ಈ ಪ್ರದೇಶದಲ್ಲಿ ಇನ್ನಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವ ಸಲುವಾಗಿ ಅನುಮತಿ ನೀಡಲು ಸರ್ಕಾರವು ಪ್ರಸ್ತಾಪಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವಂತೆ ಮುಂಬಯಿ ಸರ್ಕಾರವನ್ನು ಕೇಳಲಾಗಿದೆ. ಮಾಹಿತಿಯ ದೊರೆತನಂತರ ಅದನ್ನು ಸದನದ ಮುಂದೆ ಇಡಲಾಗುವುದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬ ಪು. ೩೧೬೩.

# ೪೫೦
# ಸಿಮ್ಲಾದಲ್ಲಿನ ವೈಸ್‌ರೀಗಲ್ ಎಸ್ಟೇಟ್‌ಗಳ ಸಿಬ್ಬಂದಿವರ್ಗವು ಅನುಭವಿಸುತ್ತಿರುವ ರಿಯಾಯಿತಿಗಳನ್ನು ಕೇಂದ್ರೀಯ ಪಿ.ಡಬ್ಲ್ಯೂ.ಡಿ.ಯ ಸಿಮ್ಲಾ ಕೇಂದ್ರೀಯ ವಿಭಾಗದ ಸಿಬ್ಬಂದಿವರ್ಗಕ್ಕೂ ನೀಡುವುದು.*

**೧೬೫. ಸರ್ದಾರ್ ಮಂಗಲ್‌ಸಿಂಗ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಈ ಮಾಹಿತಿಯನ್ನು ನೀಡುವರೆ?

ಚುಕ್ಕೆಗುರುತಿಲ್ಲದ ಕ್ರಮ ೧೩೬ನೇ ಕ್ರಮಸಂಖ್ಯೆ ಪ್ರಶ್ನೆಯ ಆ) ಭಾಗಕ್ಕೆ ೧೯೪೫ರ ಏಪ್ರಿಲ್ ೯ನೇ ತಾರೀಖಿನಿಂದು ನೀಡಿದ ಉತ್ತರವನ್ನು ಉಲ್ಲೇಖಿಸುತ್ತ ವೈಸ್‌ರೀಗಲ್ ಎಸ್ಟೇಟ್, ಸಿಮ್ಲಾ ಇದರ ಸಿಬ್ಬಂದಿ ವರ್ಗವು ಅನುಭವಿಸುತ್ತಿರುವ ರಿಯಾಯಿತಿಗಳನ್ನೇ ಸಿಮ್ಲಾ ಕೇಂದ್ರ ವಿಭಾಗದ ಲಿಪಿಕ ಹಾಗೂ ಕೆಳದರ್ಜೆಯ ಸಿಬ್ಬಂದಿವರ್ಗದವರಿಗೂ ಒದಗಿಸುವುದರ ಸೂಕ್ತತೆಯ ಬಗ್ಗೆ ಮಾನ್ಯ ಮಂತ್ರಿಗಳು ಯಾವುದಾದರೂ ನಿರ್ಣಯಕ್ಕೆ ಬಂದಿದ್ದಾರೆಯೆ? ಹಾಗಿದ್ದರೆ, ಈ ವಿಷಯದಲ್ಲಿ ಹೊರಡಿಸಲಾದ ಆಜ್ಞೆಗಳ ಪ್ರತಿಯನ್ನು ಸದನದ ಮುಂದೆ ಮಂಡಿಸುವರೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ಪ್ರಕರಣದಲ್ಲಿ ಕೈಗೊಂಡ ನಿರ್ಣಯಗಳನ್ನು ಒಳಗೊಂಡ ಆಜ್ಞೆಯ ಪ್ರತಿಯನ್ನು ಸದನದ ಮುಂದೆ ಇಡಲಾಗಿದೆ.

ಭಾರತ ಸರ್ಕಾರದ ಸಹಾಯಕ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ನವದೆಹಲಿ, ಇವರು ಅಡಿಷನಲ್ ಚೀಫ್ ಇಂಜಿನಿಯರ್, ಕೇಂದ್ರೀಯ ಲೋಕೋಪಯೋಗಿ ಇಲಾಖೆ, ಪಶ್ಚಿಮ ವಲಯ, ನವದೆಹಲಿ ಇವರಿಗೆ ಬರೆದ ಪತ್ರ ಕ್ರಮಸಂಖ್ಯೆ E–೬ ದಿನಾಂಕ ೬ನೇ ಡಿಸೆಂಬರ್ ೧೯೪೫ ಇದರ ಪ್ರತಿ ಹೀಗಿದೆ.

**ವಿಷಯ :** ಸಿಮ್ಲಾ ಕೇಂದ್ರೀಯ ವಿಭಾಗದ ಮತ್ತು ಸಿಮ್ಲಾದಲ್ಲಿರುವ ಲೋಕೋಪಯೋಗಿ ಕಾಮಗಾರಿ ಇಲಾಖೆಯ ಬಾಡಿಗೆ ನಿಯಂತ್ರಣ ಕಛೇರಿಯ ಸಿಬ್ಬಂದಿವರ್ಗದವರಿಗೆ ಪರಿಹಾರ ಭತ್ಯೆ ನೀಡಿಕೆ.

ಉಲ್ಲೇಖ ನಿಮ್ಮ ಪತ್ರ ಕ್ರಮಸಂಖ್ಯೆ ೦೧೧೭೧–E, ದಿನಾಂಕ ೭ನೆಯ ಜೂನ್ ೧೯೪೪, ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಸಿಮ್ಲಾ ಕೇಂದ್ರೀಯ ವಿಭಾಗದ ಮತ್ತು ಲೋಕೋಪಯೋಗಿ ಕಾಮಗಾರಿ ಇಲಾಖೆಯ ಬಾಡಿಗೆ ನಿಯಂತ್ರಣ ಕಛೇರಿಯ ಸಿಬ್ಬಂದಿವರ್ಗಕ್ಕೆ ಪರಿಹಾರ ಭತ್ಯೆ ನೀಡಿಕೆಯನ್ನು ಕೆಳಕಂಡ ದರಗಳಲ್ಲಿ ಮಂಜೂರುಮಾಡುತ್ತಾರೆ.

ಅ) ಕೆಳದರ್ಜೆ ನೌಕರರ ಹೊರತಾಗಿ ನಾನ್‌ಗೆಜೆಟೆಡ್ ಲಿಪಿಕ ಮತ್ತು ತಾಂತ್ರಿಕ ಸಿಬ್ಬಂದಿಗೆ ತಿಂಗಳಿಗೆ ಅವರ ವೇತನದ ಶೇಕಡ ೧೫ರಂತೆ ಕನಿಷ್ಠ ಹದಿನೈದು ರೂಪಾಯಿ ಮತ್ತು ಗರಿಷ್ಠ ಮುವತ್ತೈದು ರೂಪಾಯಿ ಮಿತಿಗೆ ಒಳಪಟ್ಟು.

ಆ) ಕೆಳದರ್ಜೆ ಸಿಬ್ಬಂದಿ : ತಿಂಗಳಿಗೆ ಎರಡು ರೂಪಾಯಿ ನಿಗದಿತ.

೨. ಈ ಆದೇಶಗಳು ೧ನೇ ಜುಲೈ, ೧೯೪೫ ರಿಂದ ಪೂರ್ವಾನ್ವಯವಾಗಿ ಜಾರಿಯಾಗುತ್ತದೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೪, ಮಾರ್ಚ್ ೨೯, ೧೯೪೬, ಪು. ೩೧೬೫

# ೪೫೧
# ದಾಮೋದರ ಕಣಿವೆ ಅಭಿವೃದ್ಧಿ ಯೋಜನೆ*

**೧೫೦೩. ಬಾಬು ರಾಮನಾರಾಯಣ ಸಿಂಗ್ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ಬಗ್ಗೆ ದಯವಿಟ್ಟು ತಿಳಿಸುವರೆ? : ಅ) ದಾಮೋದರ ಕಣಿವೆ ಯೋಜನೆಯ ಅಭಿವೃದ್ಧಿಯ ಈಗಿನ ಹಂತ.

ಆ) ಪ್ರಾಥಮಿಕ ಸರ್ವೆ ಪೂರ್ಣಯಾಗಿದೆಯೆ ಹೇಗೆ?

ಇ) ಸಂಬಂಧಪಟ್ಟ ಜಿಲ್ಲೆಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಮತ್ತು ಸ್ವಾಧೀನಪಡಿಸಿಕೊಳ್ಳಬೇಕಾದ ಒಟ್ಟು ಸಾಗುವಳಿ ಜಮೀನು.

ಈ) ಎಲ್ಲ ಜಿಲ್ಲೆಗಳಲ್ಲಿ ಬಾಧಿತವಾಗುವ ಗ್ರಾಮಗಳ ಸಂಖ್ಯೆ.

ಉ) ೧) ತಮ್ಮ ಮನೆಗಳನ್ನು ಕಳೆದುಕೊಳ್ಳಬೇಕಾದವರ ಸಂಖ್ಯೆ ೨) ತಮ್ಮ ಜಮೀನುಗಳನ್ನು ಕಳೆದುಕೊಳ್ಳಬೇಕಾದವರ ಸಂಖ್ಯೆ ಮತ್ತು ೩) ತಮ್ಮ ಮನೆಗಳನ್ನು ಮತ್ತು ಜಮೀನು ಎರಡನ್ನೂ ಕಳೆದುಕೊಳ್ಳಬೇಕಾದವರ ಸಂಖ್ಯೆ.

ಊ) ಹಾಗೆ ಒಕ್ಕಲೆಬ್ಬಿಸಲಾದ ಜನಗಳ ಪುನರ್ವಸತಿಗೆ ಯೋಜನೆಯೇನಾದರೂ ಇದೆಯೆ?

ಋ) ಬಾಧಿತವಾಗುವ ಪ್ರದೇಶಗಳ ಮತ್ತು ಜನಗಳ ಭಾವನೆಗಳು ಮಂತ್ರಿಗಳ ಗಮನಕ್ಕೆ ಬಂದಿದೆಯೆ? ಹಾಗೆಯೇ ಯೋಜನೆಯನ್ನು ಕುರಿತು ಬಿಹಾರ್ ಕಾಂಗ್ರೆಸ್ ಕಾರ್ಯಕಾರಿಣಿಯ ಗೊತ್ತುವಳಿಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ೠ) ಪ್ರಾಂತಗಳಲ್ಲಿ ಮತ್ತು ಕೇಂದ್ರದಲ್ಲಿ ಜನಪ್ರಿಯ ಸರ್ಕಾರಗಳು ಅಧಿಕಾರಕ್ಕೆ ಬರುವವರೆಗೆ ಈ ಯೋಜನೆಯ ಕಾರ್ಯಾಚರಣೆಯನ್ನು ಮುಂದೂಡುವುದರ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಪ್ರಾಥಮಿಕ ತನಿಖೆಯು ಮುಂದುವರಿಯುತ್ತಿದೆ. ಆ) ಇಲ್ಲ, ಇ) ಮತ್ತು ಈ), ಉ) ಈ ಅಂಶಗಳ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಊ) ಈವರೆಗೆ ಯಾವುದೇ ಯೋಜನೆಯನ್ನು ಆಖೈರಾಗಿ ರೂಪಿಸಿಲ್ಲ. ಆದರೆ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಮತ್ತು ತಮ್ಮ ಮನೆಮಠಗಳನ್ನು ಕಳೆದುಕೊಳ್ಳುವವರ ಬಗ್ಗೆ ಸಾಕಷ್ಟು ಪುನರ್ವಸತಿಯನ್ನು ಒದಗಿಸುವ ಅಗತ್ಯವನ್ನು ಸರ್ಕಾರವು ಪ್ರಮುಖವಾಗಿ ಮನಸ್ಸಿನಲ್ಲಿಟ್ಟುಕೊಳ್ಳುವುದೆಂಬ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇನೆ.

ಋ) ಈ ವಿಷಯವನ್ನು ಕುರಿತು ಕೆಲವು ಪತ್ರಿಕಾ ಸುದ್ದಿಗಳು ಸರ್ಕಾರದ ಗಮನಕ್ಕೆ ಬಂದಿದೆ.

ೠ) ಈ ಪ್ರಾಥಮಿಕ ತನಿಖೆಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಸರ್ಕಾರವು ಅವುಗಳನ್ನಾಗಲಿ ಅಥವಾ ಅವುಗಳ ಪರಿಶೀಲನೆಯಿಂದ ಕಂಡುಬರಬಹುದಾದ ಕ್ರಮವನ್ನಾಗಲಿ ಮುಂದೂಡುವುದು ಯುಕ್ತವೆಂದು ಭಾವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೫, ಏಪ್ರಿಲ್ ೩, ೧೯೪೬, ಪು. ೩೪೨೨.

**ಶ್ರೀ ಬಾಬು ರಾಮನಾರಾಯಣ ಸಿಂಗ್ :** ಜನಗಳ ಪುನರ್ವಸತಿಯ ಪ್ರಕ್ರಿಯೆ ಯಾವ ಬಗೆಯಲ್ಲಿ ಜರುಗುವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಬಗ್ಗೆ ಯಾವುದೇ ಖಚಿತ ಹೇಳಿಕೆಯನ್ನು ಈ ಸಮಯದಲ್ಲಿ ನೀಡಲಾರೆನು.

**ಪ್ರೊ॥ ಎನ್.ಜಿ.ರಂಗಾ :** ಈ ಜನಗಳಿಗೆ, ಅದರಲ್ಲೂ ಒಕ್ಕಲೆಬ್ಬಿಸಲಾಗುವ ರೈತರಿಗೆ, ಅವರು ತಮ್ಮ ಕೃಷಿಯನ್ನು ಮಾಡಲು ಅನುಕೂಲವಾದ ಪರ್ಯಾಯ ಜಮೀನುಗಳನ್ನು ನೀಡುವ ಅಗತ್ಯವನ್ನು ಮಾನ್ಯ ಮಂತ್ರಿಗಳು ಪರಿಗಣಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಚಾರವನ್ನು ಖಂಡಿತವಾಗಿಯು ನಾನು ಪರಿಗಣಿಸುತ್ತೇನೆ.

**ಶ್ರೀ ಬಾಬು ರಾಮನಾರಾಯಣ ಸಿಂಗ್ :** ಸ್ವಾಧೀನಪಡಿಸಿಕೊಳ್ಳಲಾದ ಪ್ರದೇಶಗಳಲ್ಲಿರುವ ತಮ್ಮ ಮನೆಗಳನ್ನು ತೊರೆದುಹೋಗಬೇಕಾಗಿರುವ ಮತ್ತು ಹೊಸ ಸ್ಥಳಗಳಲ್ಲಿ ತಮ್ಮ ಮನೆಗಳನ್ನು ಕಟ್ಟಿಕೊಂಡು ಅಲ್ಲಿ ನೆಲೆಸಲು ಮೂಲಮನೆಗಳನ್ನು ಬಿಟ್ಟು ಹೋಗುವ ಜನರಿಗೆ, ಅನುಕೂಲವಾಗುವಂತೆ ಎರಡು ಮೂರು ವರ್ಷಗಳ ನೋಟಿಸ್ ಕೊಡಲಾಗುತ್ತದೆಯೆ ಎಂದು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಷ್ಟೇ ಅವಧಿ ಎಂದು ನಾನು ಮಾತು ಕೊಡಲಾರೆ. ಆದರೆ ಅವರಿಗೆ ಅಗತ್ಯವಾಗುವಷ್ಟು ದೀರ್ಘ ನೋಟಿಸ್ ಕೊಡಲಾಗುವುದು ಎಂದು ಹೇಳಲು ಸಿದ್ಧನಿದ್ದೇನೆ.

**ಶ್ರೀ ಬಾಬು ರಾಮನಾರಾಯಣ ಸಿಂಗ್ :** ಸಂತಾಲ್ ಪರಗಣ ಜಿಲ್ಲೆಯಲ್ಲಿನ ನದಿಗಳ ಮೇಲೆ, ದಾಮೋದರ ಕಣಿವೆ ಯೋಜನೆಯ ಭಾಗವಾಗಿ, ಒಡ್ಡುಗಳನ್ನು ಕಟ್ಟಲಾಗುವುದೆ ಎಂದು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಹಂತದಲ್ಲಿ ನಾನು ಅದನ್ನು ಹೇಳಲಾರೆನು.

**ಮೌಲಾ ಜಾಫರ್ ಅಲಿಖಾನ್ :** ಪ್ರಶ್ನೆಯ ಇ) ಭಾಗದಿಂದ ಉದ್ಭವಿಸುವ ವಿಚಾರಕ್ಕೆ ಸಂಬಂಧಿಸಿದಂತೆ, ಅಸ್ಸಾಂನಲ್ಲಿ ಅನೇಕ ಹಳ್ಳಿಗರನ್ನು ಅಸ್ಸಾಂನಲ್ಲಿರುವ ಮನೆಗಳಿಂದ ಓಡಿಸಲಾಗಿದೆಯೆಂಬ, ಅವರ ಮನೆಗಳನ್ನು ಕೆಡವಿಹಾಕಲಾಗಿದೆಯೆಂಬ, ಅವರನ್ನು ನಾನಾ ತೊಂದರೆಗಳಿಗೆ ಗುರಿಪಡಿಸಲಾಗಿದೆಯೆಂಬ ಮತ್ತು ಅವರ ಜಮೀನುಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆಯೆಂಬ ಸಂಗತಿಗಳು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಯ ಮೂಲಕ ಈ ವಿಚಾರ ಹೇಗೆ ಉದ್ಭವಿಸುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ.

**ಗೌರವಾನ್ವಿತ ಅಧ್ಯಕ್ಷರು :** ಅವರು ಯೋಜನೆಗೆ ಸಂಬಂಧಿಸಿ ಹೇಳುತ್ತಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಯೋಜನೆ ಅಸ್ಸಾಮನ್ನು ಬಾಧಿಸುವುದೇ ಇಲ್ಲ.

**ಶ್ರೀ ಬಾಬು ರಾಮನಾರಾಯಣ ಸಿಂಗ್ :** ಈ ಯೋಜನೆಯನ್ನು ಕುರಿತು ಆಖೈರು ನಿರ್ಣಯವಾಗಿದೆಯೆ ಎಂದು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸ್ವಾಮಿ.

**ಪ್ರೊ॥ ಎನ್.ಜಿ. ರಂಗಾ :** ಅದು ವಿವಿದೋದ್ದೇಶ ಯೋಜನೆಯಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸ್ವಾಮಿ.

# ೪೫೨
# ಧನಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ*

**೧೫೦೪, ಶ್ರೀ ಬಾಬು ರಾಮನಾರಾಯಣ ಸಿಂಗ್ :** ಧನಬಾದ್‌ನಲ್ಲಿರುವ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಲ್ಲಿ ಮುಷ್ಕರ ನಡೆದಿದೆಯೆ ಎಂಬ ಸಂಗತಿಯನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಸಂಬಂಧದಲ್ಲಿ ೧೨೬೫ನೇ ಕ್ರಮ ಸಂಖ್ಯೆಯ ಚುಕ್ಕೆ ಗುರುತಿನ ದಿನಾಂಕ ೧೯೪೬ರ ಮಾರ್ಚ್ ೨೬ರಂದು ನೀಡಿದ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಾಗಿದೆ.

**ಪ್ರೊ॥ ಎನ್.ಜಿ. ರಂಗಾ :** ಡಿಪ್ಲೊಮಾಗಳಿಗೆ ಮನ್ನಣೆ ನೀಡುವುದಕ್ಕೆ ಸಂಬಂಧಿಸಿದ ಹಾಗೆ ಅವರು ಕೊಟ್ಟಿದ್ದ ದೂರಿನ ಆ ವಿಚಾರದಲ್ಲಿ ಸರ್ಕಾರವು ಯಾವುದಾದರೂ ನಿರ್ಣಯಕ್ಕೆ ಬಂದಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಷಯ ಪರ್ಯಾಲೋಚನೆಯಲ್ಲಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೫, ಏಪ್ರಿಲ್ ೩, ೧೯೪೬, ಪು. ೩೪೨೯.

## ೪೫೩
## ಇಂಟರ್‌ನ್ಯಾಷನಲ್ ಲೇಬರ್ ಆಫೀಸಿನಲ್ಲಿ ನಿಯೋಜಿತರಾದ ಭಾರತೀಯರ ಸಂಖ್ಯೆ*

**೧೫೧೧, ಪ್ರೊ॥ ಎನ್.ಜಿ. ರಂಗಾ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ಮುಂದಿನ ವಿಷಯಗಳ ದಯವಿಟ್ಟು ತಿಳಿಸುವರೆ?

ಅ) ಇಂಟರ್‌ನ್ಯಾಷನಲ್ ಲೇಬರ್ ಆಫೀಸಿನ (ಐ.ಎಲ್.ಒ) ಮುಖ್ಯಾಲಯದಲ್ಲಿ ನೇಮಿಸಲ್ಪಟ್ಟ ಭಾರತೀಯರ ಸಂಖ್ಯೆಯೆಷ್ಟು?

ಆ) ಐ.ಎಲ್.ಒ. ಕಚೇರಿಗಳು ಭಾರತೀಯ ಸದಸ್ಯರ ಮೇಲೆ ವೆಚ್ಚಮಾಡುವ ಒಟ್ಟು ಮೊತ್ತವೆಷ್ಟು ಮತ್ತು ಐ.ಎಲ್.ಓ. ಗೆ ಭಾರತ ಸರ್ಕಾರವು ನೀಡುವ ವಂತಿಗೆ ಹಣವೆಷ್ಟು?

ಇ) ಭಾರತದಲ್ಲಿರುವ ಐ.ಎಲ್.ಓ. ಕಚೇರಿಯ ಸಿಬ್ಬಂದಿವರ್ಗವನ್ನು ಅಧಿಕಗೊಳಿಸಲು ಮತ್ತು ಪ್ರಾಂತ ಸರ್ಕಾರಗಳ ಜತೆ ಐ.ಎಲ್.ಒ. ಸಂಪರ್ಕವನ್ನು ಇರಿಸಿಕೊಳ್ಳುವ ಹಾಗೆ ಎಲ್ಲ ಪ್ರಾಂತೀಯ ರಾಜಧಾನಿಗಳಲ್ಲಿ ಅದರ ಶಾಖೆಗಳನ್ನು ತೆರೆಯುವ ಪ್ರಸ್ತಾವಗಳೇನಾದರು ಇವೆಯೆ?

ಈ) ಸರ್ಕಾರ ತನ್ನ ಸಚಿವಾಲಯದ ಕೆಲವು ಸದಸ್ಯರು ಕಾರ್ಮಿಕ ಶಾಸನಗಳನ್ನು ಅವುಗಳ ಕಾರ್ಯಾಚರಣೆಯನ್ನು ಅಧ್ಯಯನ ಮಾಡಲು ಹಾಗೂ ಐ.ಎಲ್.ಒ. ಕಾರ್ಯಕ್ರಮಗಳ ಜತೆ ಸಂಪರ್ಕವಿರಿಸಿಕೊಳ್ಳಲು ಅನುಕೂಲವಾಗುವ ಹಾಗೆ ಅವರನ್ನು ಐ.ಎಲ್.ಒ. ಮುಖ್ಯಾಲಯಕ್ಕೆ ಕಳಿಸಿಕೊಡಲು ಉದ್ದೇಶಿಸಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಇಂಟರ್‌ನ್ಯಾಷನಲ್ ಲೇಬರ್ ಆಫೀಸಿನ ಮುಖ್ಯಾಲಯದಲ್ಲಿ ಮೂವರು ಭಾರತೀಯರು ನಿಯೋಜಿತರಾಗಿದ್ದಾರೆಂದು ತಿಳಿದುಬಂದಿದೆ. ಇಂಟರ್‌ನ್ಯಾಷನಲ್ ಲೇಬರ್ ಆಫೀಸಿನ ಭಾರತೀಯ ಶಾಖೆಯಲ್ಲಿ ನಿಯೋಜಿತವಾದ ಸಿಬ್ಬಂದಿವರ್ಗದಲ್ಲಿ ಎಲ್ಲರೂ ಭಾರತೀಯರೆ, ಸೀನಿಯರ್ ಆಫೀಸರ್ ಸೇರಿ ೧೯೪೬ನೇ ಸಾಲಿನಲ್ಲಿ ಇದ್ದಂತೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಏಳು ಜನ.

ಆ) ೧೯೪೬ನೇ ಸಾಲಿಗೆ ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಜೇಷನ್ ತನ್ನ ವಿವಿಧ ಕಚೇರಿಗಳಲ್ಲಿ ನಿಯೋಜಿತರಾದ ಭಾರತೀಯ ಮೇಲೆ ವಹಿಸಿದ ವೆಚ್ಚ ಕೆಳಕಂಡಂತಿದೆ:

| | | |
|---|---|---|
| ಮುಖ್ಯಾಲಯ | – – | ೬೦,೦೦೦ ಸ್ವಿಸ್ ಫ್ರಾಂಕು<br>ಅಥವಾ<br>ಸುಮಾರು ೪೫, ೯೦೦ ರೂಪಾಯಿ |
| ಭಾರತೀಯ ಶಾಖೆಗಳು | – | ರೂ. ೪೪,೬೪೦ ರೂಪಾಯಿ |

ಭಾರತವು ಐ.ಎಲ್.ಒ. ನಿಧಿಗಳಿಗೆ ನೇರವಾಗಿ ವಂತಿಗೆ ನೀಡುತ್ತಿಲ್ಲ, ಆದರೆ ಭಾರತವು ಲೀಗ್ ಆಫ್ ನೇಷನ್ಸ್‌ಗೆ ಸಂದಾಯ ಮಾಡಿದ ವಂತಿಗೆಯ ಪೈಕಿ ಒಂದಿಷ್ಟು ಭಾಗವನ್ನು ಐ.ಎಲ್.ಓ.ಕ್ಕೆ ಕೊಡಲಾಗುತ್ತದೆ. ಮುಂದಿನ ತಃಖ್ತೆಯಲ್ಲಿ ಅದರ ಬಗ್ಗೆ ವಿವರಗಳಿವೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂ. ೫, ಏಪ್ರಿಲ್ ೩, ೧೯೪೬, ಪು. ೩೪೨೯.

| ವರ್ಷ | ಲೀಗ್ ಆಫ್ ನೇಷನ್ಸ್‌ಗೆ ಕೊಡಲಾದ ಒಟ್ಟು ದೇಣಿಗೆ (ಬಂಗಾರದ ಫ್ರಾಂಕುಗಳಲ್ಲಿ) | ಅಂತರರಾಷ್ಟ್ರೀಯ ಕಾರ್ಮಿಕ ಕಛೇರಿಗೆ ನಿಗದಿತವಾದ ಭಾಗ (ಬಂಗಾರದ ಫ್ರಾಂಕ್‌ಗಳಲ್ಲಿ) |
|---|---|---|
| ೧೯೪೩ | ೮೯೩,೦೪೪,೨೪ | ೩೦೦,೭೩೧,೮೮ |
| ೧೯೪೪ | ೮೧೪,೦೨೪,೬೪ | ೩೦೦,೯೬೦,೧೮ |
| ೧೯೪೫ | ೧೯೯,೦೩೩,೩೯ | ೮೯೫,೨೦೦ (ಸ್ವಿಸ್ ಫ್ರಾಂಕುಗಳು) |
| ೧೯೪೬ | ೧,೩೦೨,೯೩೮,೬೭ | ಗೊತ್ತಿಲ್ಲ |

ಈ ಮಾಹಿತಿಯನ್ನು ನಿರ್ದೇಶಕರು, ಇಂಟರ್‌ನ್ಯಾಷನಲ್ ಲೇಬರ್ ಆಫೀಸ್, ಭಾರತ ಶಾಖೆಯಿಂದ ಪಡೆದುಕೊಳ್ಳಲಾಗಿದೆ.

ಸೂಚನೆ : ೧. ಬಂಗಾರದ ಫ್ರ್ಯಾಂಕ್ – ರೂ. ಆ. ಪೈ. ೧–೧–೫ (ಸುಮಾರು)
ಸ್ವಿಸ್ ಫ್ರ್ಯಾಂಕ್ – ರೂ. ಆ. ಪೈ ೦–೦೨–೪

ಇ) ಸರ್ಕಾರದ ಬಳಿ ಮಾಹಿತಿ ಇಲ್ಲ

ಈ) ಉತ್ತರ ಹೌದು ಎಂದು.

೧. ಮಾಂಟ್ರಿಯಲ್‌ನಲ್ಲಿರುವ ಇಂಟರ್‌ನ್ಯಾಷನಲ್ ಲೇಬರ್ ಆಫೀಸ್‌ನ ಲಿಪಿಕ ಸಿಬ್ಬಂದಿಯಲ್ಲಿ ನೇಮಕದ ಸಲುವಾಗಿ ಕೆಲವರು ಸೂಕ್ತ ಅಭ್ಯರ್ಥಿಗಳನ್ನು ಇಂಡಿಯನ್ ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ಆಯ್ಕೆ ಮಾಡುತ್ತದೆ.

೨. ಮೇಲ್ದರ್ಜೆಯ ಉನ್ನತ ಹುದ್ದೆಗಳ ಪೈಕಿ ಒಂದರಲ್ಲಿ ಸಹಾಯಕ ನಿರ್ದೇಶಕನಾಗಿ ಭಾರತೀಯನೊಬ್ಬನನ್ನು ನೇಮಿಸುವ ವಿಚಾರ ಪರಿಶೀಲನೆಯಲ್ಲಿದೆ.

ಉ) ಈ ವಿಚಾರ ಪರಿಶೀಲನೆಯಲ್ಲಿದೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಒಂದು ಫ್ರಾಂಕ್‌ನ ರೂಪಾಯಿ ಮೌಲ್ಯವೆಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮೌಲ್ಯ ರೂ ೧–೧–೫. ಈ ಮಾಹಿತಿ ಒದಗಿಸಿದವರು ಇಂಟರ್‌ನ್ಯಾಷನಲ್ ಆಫೀಸಿನವರು. ನಾನು ಆ ಕುರಿತು ದೃಢೀಕರಣ ನೀಡಲಾರೆ.

**ಪ್ರೊ॥ ಎನ್.ಜಿ. ರಂಗಾ :** ಭಾಗ ಉ)ಗೆ ಸಂಬಂಧಪಟ್ಟ ಹಾಗೆ ಐ.ಎಲ್.ಓ. ಎಲ್ಲ ಪ್ರಾಂತ ಸರ್ಕಾರಗಳ ಜತೆ ಸಂಪರ್ಕವಿರಿಸಿಕೊಳ್ಳಲು ಅನುಕೂಲವಾಗುವ ಹಾಗೆ, ಎಲ್ಲ ಪ್ರಾಂತೀಯ ರಾಜಧಾನಿಗಳಲ್ಲಿ ಅದರ ಶಾಖಾ ಕಚೇರಿಗಳನ್ನು ತೆರೆಯಲು ಅದಕ್ಕೆ ಸರ್ಕಾರವು ಸಲಹೆ ನೀಡುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಚಾರವನ್ನು ನಾನು ಪರಿಶೀಲಿಸುತ್ತೇನೆ.

**ಪ್ರೊ॥ ಎನ್.ಜಿ. ರಂಗಾ :** ಏಶಿಯದ ದೇಶಗಳಿಗೂ ಇತರ ವರ್ಣೀಯರ ದೇಶಗಳಿಗೂ ಐ.ಎಲ್.ಓ. ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ಪರ್ಯಾಪ್ತ ಪ್ರಾತಿನಿಧ್ಯ ಕೊಡಲಾಗುತ್ತಿಲ್ಲವೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ಯಾವಾಗಲೂ ಭಾರತದ ಕ್ಷೇಮವನ್ನು ಸಮರ್ಥಿಸುತ್ತ ಇರುತ್ತೇವೆ.

**ಪ್ರೊ॥ ಎನ್.ಜಿ. ರಂಗಾ :** ಫಲಿತಾಂಶವೇನು? ಏನಾದರೂ ಸುಧಾರಣೆ ಆಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಒಂದು ದಿನ ನಾವು ಯಶಸ್ವಿಯಾಗುತ್ತೇವೆ ಎಂಬ ಆಸೆಯುಂಟು.

**ಪ್ರೊ॥ ಎನ್.ಜಿ. ರಂಗಾ :** ಕಳೆದ ಮೂರು ವರ್ಷಗಳ ಸ್ಥಿತಿಗೆ ಹೋಲಿಸಲಾಗಿ ಈಗ ಆಡಳಿತ ಮಂಡಳಿಯಲ್ಲಿನ ನಮ್ಮ ಸ್ಥಾನಮಾನ ದುರ್ಬಲವಾಗಿರುವ ಸಂಗತಿ ನಿಜವಲ್ಲವೆ?

**ಮಾನ್ಯ ದಿವಾನ್ ಬಹದೂರ್ ಸರ್ ಎ. ರಾಮಸ್ವಾಮಿ ಮುದಲಿಯಾರ್ :**

ಈ ಪ್ರಶ್ನೆಗೆ ನಾನು ಉತ್ತರ ನೀಡಲೆ? ನನಗೆ ನೆನಪಿರುವ ಮಟ್ಟಿಗೆ ಅನೇಕ ವರ್ಷಗಳಾಯಿತು, ಸರ್ಕಾರದ ಭಾಗದಲ್ಲೂ ಕಾರ್ಮಿಕ ಭಾಗದಲ್ಲೂ ಪ್ರಾತಿನಿಧ್ಯವುಂಟು. ಈ ಸದನದಲ್ಲಿ ನಮ್ಮ ಹಿಂದಿನ ಸಹೋದ್ಯೋಗಿಯಾಗಿದ್ದ ಶ್ರೀ ಜೋಷಿ ಅವರು ೧೦ರಿಂದ ೧೨ ವರ್ಷಗಳಿಗೂ ಅಧಿಕ ಅವಧಿಯವರೆಗೆ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಸರ್ಕಾರದ ಪರವಾಗಿ ಆಡಳಿತ ಮಂಡಳಿಯಲ್ಲಿ ಶ್ರೀ ಅತುಲ ಚಟರ್ಜಿ ಸದಸ್ಯರಾಗಿದ್ದರು ಮತ್ತು ಒಮ್ಮೆ ಚೇರ್‌ಮನ್ ಆಗಿದ್ದರು. ಈಗಿನ ಹೈ ಕಮೀಷನರ್ ಸರ್ ಸ್ಯಾಮ್ಯುಯಲ್ ಎಲ್. ರಂಗನಾಥನ್ ಅವರು ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ ಮತ್ತು ಕಳೆದ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಆಡಳಿತ ಮಂಡಳಿಯ ಸಂವಿಧಾನ ರಚನಾ ಸಮಿತಿಯ ಚೇರ್‌ಮನ್ ಆಗಿದ್ದರು. ಈಗ ನನಗೆ ತಿಳಿದಿರುವ ಮಟ್ಟಿಗೆ ಕಳೆದ ವರ್ಷ ಶ್ರೀ ಜೋಷಿಯವರ ಆಡಳಿತ ಮಂಡಳಿಯ ಸದಸ್ಯತ್ವ ಮುಗಿದ ತರುವಾಯ ಆಡಳಿತ ಮಂಡಳಿಯಲ್ಲಿ ಭಾರತದ ಕಾರ್ಮಿಕರ ಪ್ರತಿನಿಧಿಯಾಗಿ ಯಾರೂ ಇಲ್ಲ. ಇದೊಂದೇ ಪರಿಸ್ಥಿತಿಯಲ್ಲಿ ಒದಗಿದ ಅವನತಿ. ಅದಕ್ಕೆ ಅವನತಿ ಎನ್ನುವುದಾದರೆ, ಸರ್ಕಾರಕ್ಕೆ ಸಂಬಂಧಿಸುವಷ್ಟು ಮಟ್ಟಿಗೆ, ಹೈ ಕಮೀಷನರ್ ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ. ನಾನು ಇತರ ವರ್ಣೀಯರ ಬಗ್ಗೆ ಏನೂ ಹೇಳಲಾರೆನು. ಸರ್ಕಾರದ ಪರವಾಗಿಯೂ ಕಾರ್ಮಿಕರ ಪರವಾಗಿಯೂ ಭಾರತವು ಆಡಳಿತ ಮಂಡಳಿಯ ಸದಸ್ಯತ್ವವನ್ನು ಹೊಂದಿದೆ.

**ಶ್ರೀ ಎನ್.ವಿ. ಗಾಡ್ಗೀಳ್:** ಆಡಳಿತ ಮಂಡಳಿಯ ಸಂವಿಧಾನದಲ್ಲಿ ಕೆಲವು ಮಾರ್ಪಾಟುಗಳನ್ನು ಶಿಫಾರಸ್ಸು ಮಾಡಲಾಗಿದೆಯೆಂಬ ಮತ್ತು ಶಿಫಾರಸ್ಸುಗಳನ್ನು ಸದನದ ಮುಂದೆ ಇಡಲಾಗಿದೆಯೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಷಯವು ನಾನು ಮಂಡಿಸಬಯಸುವ ಠರಾವಿನ ಸಂಬಂಧದಲ್ಲಿ ಚರ್ಚೆಗೆ ಬರುವ ವಿಚಾರವಾಗಿದೆ.

**ದಿವಾನ್ ಚಮನ್‌ಲಾಲ್ :** ಮಾನ್ಯ ಮಂತ್ರಿಗಳು ಅದನ್ನು ಯಾವಾಗ ಮಂಡಿಸುವರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಅಧಿವೇಶನ ಅವಧಿಯಲ್ಲಿ.

**ಶ್ರೀ ಅನಂತಶಯನಂ ಅಯ್ಯಂಗಾರ್ :** ಈಗ ಲೀಗ್ ಆಫ್ ನೇಷನ್ಸ್ ಅನ್ನು ವಿಸರ್ಜಿಸಬೇಕೆಂಬ ಪ್ರಸ್ತಾಪವಿರುವಾಗ ಐ.ಎಲ್.ಓ. ಕ್ಕೆ ಭಾರತದ ಬೊಕ್ಕಸದಿಂದ ನೇರವಾಗಿ ವಂತಿಗೆ ಪಾವತಿಯಾಗುವ ಪ್ರಸ್ತಾವವಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಕುರಿತು ಏನೂ ಹೇಳಲಾರೆ. ಇದು ಐ.ಎಲ್.ಓ. ತೀರ್ಮಾನಿಸಬೇಕಾದ ವಿಚಾರ.

# ೪೫೪
# ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳ ಮುದ್ರಣಾಲಯಗಳಲ್ಲಿ ಮುಷ್ಕರಗಳು*

**೧೫೨೬. ಪ್ರೊ॥ ಎನ್.ಜಿ. ರಂಗಾ :**

ಅ) ನವದೆಹಲಿಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯಗಳಲ್ಲಿ ಎಷ್ಟು ಸಮಯದಿಂದ ಮುಷ್ಕರ ನಡಯುತ್ತಿದೆ?

ಆ) ಸರ್ಕಾರದ ಗಮನಕ್ಕೆ ತರಲಾದ ಕಾರ್ಮಿಕರ ಕುಂದುಕೊರತೆಗಳೇನು ಮತ್ತು ಬೇಡಿಕೆಗಳೇನು?

ಇ) ಈ ಬೇಡಿಕೆಗಳನ್ನು ಸರ್ಕಾರದ ಮುಂದೆ ಯಾವಾಗ ಸಲ್ಲಿಸಲಾಯಿತು ಮತ್ತು ಕಾರ್ಮಿಕರ ನ್ಯಾಯಸಮ್ಮತ ಅಗತ್ಯಗಳನ್ನು ಪೂರೈಸಲು ಯಾವ ಕ್ರಮಕೈಗೊಳ್ಳಲಾಗಿತ್ತು?

ಈ) ಈಗ ಮುಷ್ಕರದಲ್ಲಿ ಎಷ್ಟು ಜನ ಒಳಗೊಂಡಿದ್ದಾರೆ?

ಉ) ಕೇಂದ್ರ ಸರ್ಕಾರದ ಇತರ ಮುದ್ರಣಾಲಯ ಅಥವಾ ಪ್ರಾಂತೀಯ ಸರ್ಕಾರಗಳ ಮುದ್ರಣಾಲಯಗಳಿಗೆ ಈ ಮುಷ್ಕರವು ಹರಡಿದೆಯೆಂಬ ಅಥವಾ ಅದೇ ಬಗೆಯ ಮುಷ್ಕರಗಳು ಮುಂದುವರಿಯುತ್ತಿವೆಯೆಂಬ ಸಂಗತಿಯು ನಿಜವೆ?

ಊ) ಮುಂಬಯಿಯಲ್ಲಿ ಅಂಥ ಮುಷ್ಕರವು ಮುಂದುವರಿಯುತ್ತಿದೆಯೆಂಬ ಸಂಗತಿಯು ನಿಜವೆ? ಮಾರ್ಚ್ ೨೧ನೇ ತಾರೀಖಿನ ಹಿಂದೂಸ್ತಾನ್ ಟೈಂಸ್ ಪತ್ರಿಕೆಯ ಪುಟ ೪ ನೋಡಿ.

ಋ) ಕಾರ್ಮಿಕರೊಂದಿಗೆ ಒಡಂಬಡಿಕೆಗೆ ಬರಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

– ಈ ವಿಷಯವನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ:

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮುಷ್ಕರ ೧೯೪೬ರ ಮಾರ್ಚ್ ೨೪ನೇ ತಾರೀಖಿನಿಂದ ೧೯ ದಿನಗಳವರೆಗೆ ನಡೆಯಿತು.

ಆ) ಅವರ ಬೇಡಿಕೆಗಳೆಂದರೆ :

೧) ಮಾಸಿಕ ರೂ. ೫೦ಕ್ಕೆ ಕಡಿಮೆಯಿಲ್ಲದ ದರದಲ್ಲಿ ನ್ಯಾಯಸಮ್ಮತ ಜೀವನ ಮಜೂರಿಯನ್ನು ನಿಗದಿಪಡಿಸುವುದು.

೨) ಭಾರತ ಸರ್ಕಾರದ ಎಲ್ಲಾ ಮುದ್ರಣಾಲಯಗಳಲ್ಲಿ ಸಮಾನ ಸ್ತರದ ಮೇಲೆ ಹಾಲಿ ವೇತನ ಶ್ರೇಣಿಗಳ ಪರಿಷ್ಕರಣ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ೩ ಏಪ್ರಿಲ್ ೧೯೪೬. ಪುಟ ೩೪೪೩

೩) ಸ್ಟೇಟ್ ರೈಲ್ವೆ ಪ್ರಾವಿಡೆಂಟ್ ಫಂಡ್‌ಗೆ ಸಮವಾಗಿರುವಂತೆ ವಂತಿಗೆ ನೀಡುವ ಭವಿಷ್ಯ ನಿಧಿ ನಿಯಮಾವಳಿಯ ಪರಿಷ್ಕರಣ ಮತ್ತು ನಿವೃತ್ತಿ ಅಥವಾ ಮರಣೋತ್ತರ ಉಪದಾನ ನೀಡಿಕೆ.

೪. ತುಟ್ಟಿಭತ್ಯೆ ಮತ್ತು ಯುದ್ಧಭತ್ಯೆಗಳ ಏರಿಕೆ.

೫. ರಜಾ ನಿಯಮಾವಳಿಯ ಪರಿಷ್ಕರಣ.

೬. ಪ್ರತಿ ವಾರಕ್ಕೆ ೪೮ರಿಂದ ೪೦ಕ್ಕೆ ಕೆಲಸದ ಘಂಟೆಗಳ ಭತ್ಯೆ.

೭. ಕೆಲಸದ ಸಮಯವನ್ನು ವಾರದಲ್ಲಿ ೪೮ರಿಂದ ೪೦ಕ್ಕೆ ಇಳಿಸುವುದು.

೮. ತುಂಡುಕೆಲಸಗಳ ದರದಲ್ಲಿ ಏರಿಕೆ.

೯. ತುಂಡುಕೆಲಸಗಾರರಿಗೆ ವೇತನ ಸಹಿತ ಸಾಂದರ್ಭಿಕ ರಜೆ ಮತ್ತು ರಜಾ ದಿನಗಳು.

೧೦. ಹಂಗಾಮಿ ಕೆಲಸಗಾರರನ್ನು ಮುಂದುವರಿಸುವುದು.

ಇ) ಮತ್ತು ಖು) ಸದರಿ ಬೇಡಿಕೆಗಳನ್ನು ಕಳೆದ ಫೆಬ್ರವರಿ ತಿಂಗಳಲ್ಲಿ ಸರ್ಕಾರದ ಗಮನಕ್ಕೆ ತರಲಾಗಿತ್ತು. ಕೊನೆಯ ಐದು ಬೇಡಿಕೆಗಳನ್ನು ಒಪ್ಪಿಕೊಳ್ಳಲಾಗಿದೆ ಮತ್ತು ರಿಯಾಯಿತಿಗಳನ್ನು ಘೋಷಿಸಲಾಗಿದೆ. ಮೊದಲನೆಯ ಐದು ಬೇಡಿಕೆಗಳು ಕೇಂದ್ರ ಸರ್ಕಾರದ ಎಲ್ಲ ವರ್ಗಗಳ ನೌಕರರಿಗೆ ಅನ್ವಯಿಸುವ ಸಾಮಾನ್ಯ ಸ್ವರೂಪದ ಬೇಡಿಕೆಗಳಾಗಿರುವ ನಿಮಿತ್ತ, ಯಥೋಚಿತ ಪರ್ಯಾಲೋಚನೆಯ ಹೊರತು ಅವುಗಳಿಗೆ ಒಪ್ಪಿಗೆ ನೀಡುವುದು ಸಾಧ್ಯವಿಲ್ಲ. ಇದಲ್ಲದೆ ಆ ಬಗ್ಗೆ ವೇತನ ಪಡೆಯುವ ನೌಕರಿಗೆ ಸಂಬಂಧಪಟ್ಟ ಹಾಗೆ ವೇತನ ಆಯೋಗದ ಶಿಫಾರಸ್ಸುಗಳನ್ನು ಇದಿರು ನೋಡಬೇಕು. ಸರ್ಕಾರವು ಎಲ್ಲ ಮುದ್ರಣಾಲಯಗಳ ಕಾರ್ಮಿಕರಿಗೆ ಕೆಳಕಂಡ ಹೆಚ್ಚುವರಿ ರಿಯಾಯಿತಿಗಳನ್ನು ಮಂಜೂರು ಮಾಡಿದೆ.

೧) ಹೆಚ್ಚಿಸಿದ ತುಟ್ಟಿಭತ್ಯೆಯನ್ನು ೧೯೪೩ರ ಜನವರಿ ೧ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸುವುದಕ್ಕೆ ಬದಲಾಗಿ ೧೯೪೪ರ ಜುಲೈ ೧ರಿಂದ ಜಾರಿಗೊಳಿಸಲಾಗುವುದು.

೨) ತುಟ್ಟಿಭತ್ಯೆಯನ್ನು ಪಡೆಯುವ ಕಾರ್ಮಿಕರ ನಿವೃತ್ತಿವೇತನದ ಮೊತ್ತದಲ್ಲಿ ಲೆಕ್ಕಹಾಕುವ ಉದ್ದೇಶಕ್ಕಾಗಿ ಅಂಥ ತುಟ್ಟಿಭತ್ಯದ ಅರ್ಧದಷ್ಟು ಮೊಬಲಗನ್ನು ವೇತನ ಎಂದು ಪರಿಗಣಿಸಲಾಗುವುದು.

೩) ಕೆಳಗಿನವರು ಎಂದು ವರ್ಗೀಕರಿಸಲಾದ ಕಾರ್ಮಿಕರು ತಮ್ಮ ಸರಾಸರಿ ವೇತನದ ಅರ್ಧದವರೆಗೆ ನಿವೃತ್ತಿವೇತನ ಪಡೆಯುವರು.

ಭಾರತ ಸರ್ಕಾರದ ವಿವಿಧ ಮುದ್ರಣಾಲಯಗಳ ವಿಭಿನ್ನ ವರ್ಗಗಳ ಪ್ರೆಸ್ ಕಾರ್ಮಿಕರ ನಡುವಿನ ಈಗಿನ ವೇತನ ಮತ್ತು ಸೇವಾ ಷರತ್ತುಗಳಲ್ಲಿನ ಅಸಂಗತಗಳನ್ನು ಕುರಿತು ವರದಿ ಮಾಡುವ ಸಲುವಾಗಿ ವಿಶೇಷ ಮೇಲಧಿಕಾರಿಯನ್ನು ನೇಮಿಸಲು ಸಹ ಸರ್ಕಾರವು ಪ್ರಸ್ತಾಪಿಸಿದೆ.

ಈ) ೭೭೫ ಕೈಗಾರಿಕಾ ಕಾರ್ಮಿಕರು ಒಳಗೊಂಡಿದ್ದರು.

ಉ) ಹೌದು. ಅಲಿಘಡದಲ್ಲಿರುವ ಭಾರತ ಸರಕಾರದ ಫಾರ್ಮ್ಸ್ ಮುದ್ರಣಾಲಯಕ್ಕೂ ಈ ಮುಷ್ಕರ ಹರಡಿದೆ. ಅಲ್ಲಿನ ಕಾರ್ಮಿಕರು ೧೯೪೬ರ ಮಾರ್ಚಿ ೧೫ರಿಂದ ಮುಷ್ಕರ ಹೂಡಿದ್ದಾರೆ. ಕಲ್ಕತ್ತಾದಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯ ಮತ್ತು ಫಾರ್ಮ್ಸ್ ಮುದ್ರಣಾಲಯದ ಹಾಗೂ ಅಲ್ಲಿನ ಕೈಗಾರಿಕಾ ಕಾರ್ಮಿಕರು ಸಹ ಮುಷ್ಕರದ ನೋಟೀಸ್ ಕೊಟ್ಟಿದ್ದಾರೆ. ಆದರೆ ಇನ್ನೂ ಮುಷ್ಕರ ಹೂಡಿಲ್ಲ.

ಊ) ವೃತ್ತಪತ್ರಿಕೆಗಳಲ್ಲಿ ಬಂದ ಸಮಾಚಾರದ ಹೊರತು, ಸರ್ಕಾರದ ಬಳಿ ಯಾವುದೇ ಮಾಹಿತಿ ಲಭ್ಯವಿಲ್ಲ. ಸಂಬಂಧಪಟ್ಟ ಮುದ್ರಣಾಲಯವು ಪ್ರಾಂತೀಯ ಸರ್ಕಾರದ ಅಧೀನದಲ್ಲಿದೆ.

## ೪೫೫
## ನವದೆಹಲಿಯಲ್ಲಿ ನಿವಾಸದ ಆಸ್ತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು*

**೧೫೩೦. ಶ್ರೀ ದಿವಾನ್ ಚಮನ್‌ಲಾಲ್ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

೯೨೪ನೇ ಸಂಖ್ಯೆಯ ಚುಕ್ಕೆಗುರುತಿನ ಪ್ರಶ್ನೆಗೆ ೧೯೪೬ರ ಮಾರ್ಚ್ ೧೩ನೇ ದಿನಾಂಕದಂದು ನೀಡಿದ ಉತ್ತರದಲ್ಲಿ ಹೇಳಿರುವಂತೆ ಖಾಸಗಿ ನಿವಾಸದ ಆಸ್ತಿಯನ್ನು ಕಡ್ಡಾಯವಾಗಿ ಸ್ವಾಧೀನಕ್ಕೆ ಪಡೆದುಕೊಳ್ಳುವ ಆಜ್ಞೆಯನ್ನು ಹಿಂತೆಗೆದುಕೊಳ್ಳುವ ವಿಚಾರದಲ್ಲಿ ಆದಷ್ಟು ಶೀಘ್ರ ಕ್ರಮಕೈಗೊಳ್ಳುವುದಾಗಿ ಯುದ್ಧ ಇಲಾಖೆಯು ಘೋಷಿಸಿದ ಆಶಯದ ನಿಮಿತ್ತ, ಕಾರ್ಮಿಕ ಇಲಾಖೆಯು ಕೂಡ ಕೇಂದ್ರೀಯ ಸರ್ಕಾರದ ಅಧಿಕಾರಿಗಳ ನಿವಾಸಕ್ಕಾಗಿ ನವದೆಹಲಿಯಲ್ಲಿ ಇನ್ನು ಮುಂದೆ ಖಾಸಗಿ ನಿವಾಸಗಳನ್ನು – ಆಸ್ತಿಯನ್ನು ಕಡ್ಡಾಯವಾಗಿ ಸ್ವಾಧಿನ ಪಡೆದುಕೊಳ್ಳುವುದನ್ನು ಕೈಬಿಡಲು ಇಚ್ಚಿಸಿದೆಯೆ?

ಆ) ನವದೆಹಲಿಯಲ್ಲಿ ಯಾವುದೇ ವಾಸದ ಮನೆಯನ್ನು (ಉದಾ : ನಂ. ೪, ರಾಟೆಂಡೋನ್ ರಸ್ತೆ) ಈ ಹಿಂದೆ ಕಡ್ಡಾಯವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಆದೇಶ ಮಾಡಿದ್ದರೂ, ನಂತರ ಅದನ್ನು ತೆಗೆದುಕೊಳ್ಳಲಿಲ್ಲ. ಹಾಗೆಯೇ ಇನ್ನು ಮುಂದೆಯೂ ಕಡ್ಡಾಯವಾಗಿ ಸ್ವಾಧೀನತೆಗೆದುಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೆ? ಕಡ್ಡಾಯವಾಗಿ ಅಂಥ ಆಸ್ತಿಯನ್ನು ಸ್ವಾಧೀನಪಡೆದುಕೊಳ್ಳುವುದು ಅಗತ್ಯವೆಂದು ಭಾವಿಸಲು ಇನ್ನೂ ಕಾರಣಗಳೇನಾದರೂ ಇದೆಯೆ?

ಇ) ಅಗತ್ಯ ಕೋರಿಕೆಯನ್ನು ಹಿಂತೆಗೆದುಕೊಳ್ಳುವ ಕಾರ್ಯಕ್ರಮದ ನಿಮಿತ್ತ, ಮೇಲ್ಕಂಡ ಭಾಗ ಆ)ನಲ್ಲಿ ನಮೂದಿಸಲಾದ ನಿವಾಸದ ಮನೆಯಲ್ಲಿ ಬಾಡಿಗೆದಾರನಿಗೆ ಮುಂದುವರಿಯಲು ಅನುಮತಿಸುವುದರ ಸೂಕ್ತತೆಯನ್ನು ಸರ್ಕಾರವು ಪರಿಶೀಲಿಸಿದೆಯೆ? ಹಾಗಿದ್ದರೆ, ಆ ಮೇರೆಗೆ ಶೀಘ್ರ ಆಜ್ಞೆಗಳನ್ನು ಹೊರಡಿಸಲು ಸರ್ಕಾರವು ಉದ್ದೇಶಿಸಿದೆಯೆ? ಇಲ್ಲದಿದ್ದರೆ, ಕಾರಣವೇನು?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಜಪಾನ್ ಜತೆ ನಡೆದಿದ್ದ ಯುದ್ಧವು ಕೊನೆಗೊಂಡಿರುವ ಕಾರಣ ಕೇಂದ್ರ ಸರ್ಕಾರದ ಆಫೀಸರುಗಳ ನಿವಾಸಕ್ಕಾಗಿ ನಿವಾಸದ ಆಸ್ತಿಯನ್ನು ಕಡ್ಡಾಯವಾಗಿ ಸ್ವಾಧೀನಪಡೆದುಕೊಳ್ಳುವ ಕ್ರಮವನ್ನು ಕೈಬಿಟ್ಟಿದೆ.

ಆ) ಈ ಕುರಿತು ಸಾಮಾನ್ಯ ನಿಯಮವನ್ನು ಗೊತ್ತುಪಡಿಸುವುದು ಸಾಧ್ಯವಿಲ್ಲ. ಪೂಲ್‌ಗಾಗಿ ಈಗಾಗಲೇ ಕಡ್ಡಾಯವಾಗಿ ಸ್ವಾಧೀನ ಪಡೆದುಕೊಂಡಿರುವ ಯಾವುದೇ ಬಂಗಲೆಯಲ್ಲಿ

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೩, ೧೯೪೬. ಪುಟ ೩೪೪೫

ಸರ್ಕಾರವು ತನ್ನ ನೌಕರರಿಗೆ ವಾಸಮಾಡಲು ಅನುಮತಿಸಿರುವುದಿಲ್ಲ. ಸರ್ಕಾರಕ್ಕೆ ಪೂಲ್‌ಗಾಗಿ ಬಂಗ್ಲೆಯನ್ನು ಬಳಸಿಕೊಳ್ಳುವ ಹಕ್ಕು ಇರುತ್ತದೆ. ನಂ. ೪, ರಾಟೆಂಡೋನ್ ರಸ್ತೆ, ಈ ಬಗೆಗೆ ಒಂದು ಉದಾಹರಣೆ.

ಸರ್ಕಾರದ ಉದ್ದೇಶಗಳಿಗಾಗಿ ಪೂಲ್‌ನಲ್ಲಿರುವ ಮನೆಯನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಈ ಕ್ರಮ ಅತ್ಯಗತ್ಯ.

ಇ) ಪೂಲ್‌ನಲ್ಲಿರುವ ಮನೆಯನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ದೃಷ್ಟಿಯಿಂದ ಪ್ರತಿಯೊಂದು ಪ್ರಕರಣವನ್ನು ಅವುಗಳ ಅರ್ಹತೆಯ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ.

## ೪೫೬
## ಅಭ್ರಕದ ಮೈನ್ಸ್ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ*

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಮಂತ್ರಿ) : ಸ್ವಾಮಿ, ಅಭ್ರಕದ ಗಣಿ ಉದ್ಯಮದಲ್ಲಿ ನಿಯೋಜಿತರಾದ ಕಾರ್ಮಿಕರ ಕಲ್ಯಾಣಭಿವೃದ್ಧಿಯ ಕಾರ್ಯಚಟುವಟಿಕೆಗಳಿಗೆ ಹಣಕಾಸು ಒದಗಿಸುವ ಸಲುವಾಗಿ ನಿಧಿಯನ್ನು ರಚಿಸಲು ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಅಧ್ಯಕ್ಷರು** : ವಿಷಯವೆಂದರೆ

"ಮೈಕಾ ಗಣಿ ಉದ್ಯಮದಲ್ಲಿ ನಿಯೋಜಿತರಾದ ಕಾರ್ಮಿಕ ಕಲ್ಯಾಣಾಭಿವೃದ್ಧಿಯ ಉತ್ತೇಜಿಸುವ ಕಾರ್ಯಚಟುವಟಿಕೆಗಳಿಗೆ ಹಣಕಾಸು ಒದಗಿಸಲು ನಿಧಿಯನ್ನು ರಚಿಸುವ ಸಲುವಾಗಿ ಮಸೂದೆಯನ್ನು ಮಂಡಿಸಲು ಅನುಮತಿ ನೀಡಬೇಕು"

ಪ್ರಸ್ತಾವವು ಅಂಗೀಕೃತವಾಯಿತು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** : ಸ್ವಾಮೀ, ನಾನು ಈ ಮಸೂದೆಯನ್ನು ಮಂಡಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೩, ೧೯೪೬. ಪುಟ ೩೪೫೭.

# ೪೫೭
# ಕಾರ್ಖಾನೆಗಳ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಮಂತ್ರಿ) : "ಸ್ವಾಮಿ, ಆಯ್ಕೆ ಸಮಿತಿಯು ವರದಿ ಮಾಡಿರುವಂತೆ ೧೯೩೪ರ ಕಾರ್ಖಾನೆಗಳ ಅಧಿನಿಯಮಕ್ಕೆ ಮತ್ತೆ ಇನ್ನಷ್ಟು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಶೀಲಿಸಬೇಕೆಂದು ಕೋರುತ್ತೇನೆ."

ಮಸೂದೆ ಆಯ್ಕೆ ಸಮಿತಿಯಿಂದ ಪರಿಶೀಲಿಸಲ್ಪಟ್ಟು ಬಂದಿರುವ ಕಾರಣ ಅದನ್ನು ಕುರಿತು ವಿಚಾರಗಳನ್ನು ನಾನು ಸುದೀರ್ಘವಾಗಿ ವ್ಯಕ್ತಪಡಿಸುವ ಅಗತ್ಯವಿಲ್ಲ ಎಂದು ಭಾವಿಸಿದ್ದೇನೆ. ಈ ಮಸೂದೆಯಲ್ಲಿ ಮೂಲತಃ ಏಳು ಖಂಡಗಳಿದ್ದು, ಏಳು ಖಂಡಗಳ ಪೈಕಿ ನಾಲ್ಕು ಖಂಡಗಳಿಗೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯವರು ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಆ ತಿದ್ದುಪಡಿಗಳು ವಿಧೇಯಕದಲ್ಲಿನ ಮೂಲ ಉಪಬಂಧಗಳನ್ನು ಕಾರ್ಮಿಕರ ಪರವಾಗಿ ಇನ್ನಷ್ಟು ಉದಾರಗೊಳಿಸಿವೆಯೆಂದು ಧಾರಾಳವಾಗಿ ಹೇಳಬಹುದು. ಮಸೂದೆಯ ಮೂಲ ಕರಡಿಗೆ ಆಯ್ಕೆ ಸಮಿತಿಯ ವರದಿಯಲ್ಲಿ ಮಾಡಲಾದ ಕೆಲವು ತಿದ್ದುಪಡಿಗಳು, ಸರ್ಕಾರದ ಮೂಲ ಉದ್ದೇಶದ ವ್ಯಾಪ್ತಿಯನ್ನು ಸ್ವಲ್ಪ ಮೀರಿವೆಯೆಂದು ನನಗೆ ಅನಿಸಿದರೂ, ಈ ಮಸೂದೆಯು ಆಯ್ಕೆ ಸಮಿತಿಯ ಪರಿಶೀಲನೆಯಾಗಿ ಬಂದಿರುವ ನಿಮಿತ್ತ, ನಾನು ಯಾವುದೇ ಆಕ್ಷೇಪವನ್ನು ಎತ್ತ ಬಯಸುವುದಿಲ್ಲ. ಅದು ಈಗ ಇರುವ ರೂಪದಲ್ಲಿಯೇ ಅದನ್ನು ನೀನು ಒಪ್ಪಿಕೊಳ್ಳುತ್ತೇನೆ. ಸ್ವಾಮಿ, ನಾನು ಮಸೂದೆಯನ್ನು ಮಂಡಿಸುತ್ತೇನೆ.

**ಮಾನ್ಯ ಉಪಾಧ್ಯಕ್ಷರು** : ವಿಷಯವೆಂದರೆ :

"ಆಯ್ಕೆ ಸಮಿತಿಯು ವರದಿ ಮಾಡಿದಂತೆ ೧೯೩೪ರ ಕಾರ್ಖಾನೆಗಳ ಅಧಿನಿಯಮಕ್ಕೆ, ಇನ್ನಷ್ಟು ತಿದ್ದುಪಡಿಮಾಡುವ ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ."

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ ೫, ಏಪ್ರಿಲ್ ೩, ೧೯೪೬. ಪುಟ ೩೪೫೭.

# ೪೫೮
# ಭಾರತೀಯ ಕಾರ್ಮಿಕರ ಒಕ್ಕೂಟಕ್ಕೆ ಮಾಹೆಯಾನ ಅನುದಾನ*

**೧೬೩೨. ಶ್ರೀ ಸತ್ಯನಾರಾಯಣ ಸಿನ್ಹಾ :** ಅ) ಭಾರತೀಯ ಕಾರ್ಮಿಕರ ಒಕ್ಕೂಟಕ್ಕೆ ಪ್ರಚಾರದ ಸಲುವಾಗಿ ಮಾಸಿಕ ೧೩,೦೦೦ ರೂಪಾಯಿ ಗ್ರಾಂಟು ನೀಡಿಕೆಗೆ ಸಂಬಂಧಪಟ್ಟ ಹಾಗೆ ದೊರೆಯುವ ಅಂಕಿಅಂಶಗಳ ವಿಚಾರದಲ್ಲಿ 'ನ್ಯಾಷನಲ್ ಕಾಲ್' ತನ್ನ ಮಾರ್ಚಿ ೨೪ನೇ ದಿನಾಂಕದ ಮುಂಜಾನೆಯ ಆವೃತ್ತಿಯಲ್ಲಿ ಪ್ರಕಟಿಸಿರುವ ವರದಿಯ ಕಡೆಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯಬಹುದೆ?

ಆ) ಪ್ರಚಾರಕರ ವೇತನವು ಕಡಿಮೆಯಾಗುತ್ತಲೆ ವಾರ್ತಾ ವೆಚ್ಚವು ಪ್ರಮಾಣಾನುಸಾರ ಹೆಚ್ಚಾಗಿದೆಯೆಂಬ ಸಂಗತಿಯು ನಿಜವೆ?

ಇ) ಲೆಕ್ಕವನ್ನಿಡುವ ಪದ್ಧತಿಯ ಬಗ್ಗೆ ಅಸಮಾಧಾನ ತಳೆದ ಅಕೌಂಟೆಂಟ್ ಜನರಲ್ ಅವರು ಲೆಕ್ಕಗಳನ್ನು ಇಟ್ಟಿರುವ ರೀತಿಯನ್ನು ತೀವ್ರವಾಗಿ ಟೀಕಿಸಿದ್ದಾರೆ ಎಂಬ ಸಂಗತಿಯು ನಿಜವೆ?

–ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಈ ಸದನದ ಮುಂದೆ ೧೯೪೬ರ ಮಾರ್ಚ್ ೧೯ನೇ ತಾರೀಖಿನಂದು ಇಡಲಾದ ಭಾರತೀಯ ಕಾರ್ಮಿಕರ ಒಕ್ಕೂಟದ ಲೆಕ್ಕದ ವಿವರಣೆಯು, ೧೯೪೫ರ ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ, "ಪ್ರಚಾರಕರ ವೇತನ" ಶೀರ್ಷಿಕೆಯ ಅಡಿಯಲ್ಲಿ ಕಡಿತಗಳನ್ನು ಮತ್ತು "ವಾರ್ತಾ ಪ್ರಚಾರ"ದ ಅಡಿಯಲ್ಲಿ ಸಂವಾದಿ ಹೆಚ್ಚಳಗಳಲ್ಲಿ ಹೇಗೆ ಏರುಪೇರುಗಳು ಉಂಟಾದವು ಎಂಬುದನ್ನು ತೋರಿಸುತ್ತದೆ. ಕಾರ್ಮಿಕ ಪ್ರಚಾರ ಯೋಜನೆಯ ಕಾರ್ಯಾಚರಣೆಗಳ ನಿಯಂತ್ರಣವನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಕಾರ್ಮಿಕ ಇಲಾಖೆಗೆ ವರ್ಗಾಯಿಸಿದ್ದರ ಪರಿಣಾಮವಾಗಿ ಈ ವೆಚ್ಚದಲ್ಲಿನ ಈ ವ್ಯತ್ಯಾಸಗಳು ಕಂಡುಬಂದಿವೆ. ಅಂದರೆ ಆವರೆಗೂ "ಸಿಬ್ಬಂದಿ ವೇತನ" ಎಂಬ ಶೀರ್ಷಿಕೆ ಅಡಿಯಲ್ಲಿ ತೋರಿಸಲಾಗುತ್ತಿದ್ದ, ಕಾರ್ಮಿಕ ಕೇಂದ್ರಗಳು, ಕಾರ್ಮಿಕರ ಕ್ಲಬ್‌ಗಳು ಹಾಗೂ ವಾರ್ತಾ ಪ್ರಸಾರದ ಇತರ ಏಜೆನ್ಸಿಗಳ ಪ್ರಭಾರದಲ್ಲಿರುವ ಪ್ರಚಾರಕರ ಭತ್ಯೆಗಳ ಮೇಲಣ ವೆಚ್ಚವನ್ನು ೧೯೪೫ರ ಮೇ ತಿಂಗಳ ಲಾಗಾಯಿತು "ವಾರ್ತಾ ಪ್ರಸಾರಕ್ಕಾಗಿ ಗೌರವಧನ" ಎಂಬ ಶೀರ್ಷಿಕೆಯ ಅಡಿಯಲ್ಲಿ ತೋರಿಸಲಾಗಿದೆ. ಆದಾಗ್ಯೂ, "ಪ್ರಚಾರಕರ ವೇತನ' ಮತ್ತು 'ವಾರ್ತಾ ಪ್ರಸಾರ' ಇವುಗಳಿಗೆ ಸಂಬಂಧಪಟ್ಟ ಶೀರ್ಷಿಕೆಯ ಅಡಿಯಲ್ಲಿನ ಒಟ್ಟಾರೆ ವೆಚ್ಚವು ಸರಿಸುಮಾರು ಈ ಹಿಂದಿನ ವರ್ಷಗಳಲ್ಲಿ ಇದ್ದಷ್ಟೇ ಉಳಿಯಿತು.

ಇ) ಮಾನ್ಯ ಸದಸ್ಯರ ಗಮನವವನ್ನು ಶ್ರೀ ಲಾಲ್‌ಚಂದ್ ನವಲ್‌ರಾಯ್ ಅವರು ಕೇಳಿದ ಪ್ರಶ್ನೆ ಸಂಖ್ಯೆ ೩೧ರ ಆ) ಮತ್ತು ಈ)ಗಳ ಮೊದಲ ಭಾಗಕ್ಕೆ ನಾನು ೧೯೪೫ರ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೮, ೧೯೪೬. ಪುಟ. ೩೬೪೫.

ನವೆಂಬರ್ ೨ನೇ ತಾರೀಖು ನೀಡಿದ ಉತ್ತರದ ಕಡೆಗೆ ಹಾಗೂ ೧೯೪೩–೪೪ರ ಲೆಕ್ಕಗಳ ಮೇಲಣ ಸಾರ್ವಜನಿಕ ಲೆಕ್ಕ ಸಮಿತಿಯ ವರದಿಯ ಪ್ಯಾರಾ ೬೮ರ ಕಡೆಗೂ ಸೆಳೆಯಲಾಗಿದೆ.

**ಶ್ರೀ ಸತ್ಯನಾರಾಯಣ ಸಿನ್ಹಾ :** ಆ ತರುವಾಯ ಏನಾಯಿತು? ಈ ಎಲ್ಲ ಲೆಕ್ಕಗಳನ್ನು ಮಾನ್ಯ ಮಂತ್ರಿಗಳು ಸಾರ್ವಜನಿಕ ಲೆಕ್ಕ ಸಮಿತಿಯ ಮುಂದೆ ಇಡುವರೆ? ಆ ವೆಚ್ಚವೆಲ್ಲ ಸಾರ್ವಜನಿಕ ಹಣದ ಅಪವ್ಯಯ ಎಂದು ನನ್ನ ಅನಿಸಿಕೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಲೆಕ್ಕಗಳನ್ನು ಸಾರ್ವಜನಿಕ ಲೆಕ್ಕ ಸಮಿತಿಯವರು ಪರಿಶೀಲಿಸಿದ್ದುಂಟು. ಇದಲ್ಲದೆ, ನಾನು ನನ್ನ ಉತ್ತರದಲ್ಲಿ ಹೇಳಿದ ಹಾಗೆ ಮಾನ್ಯ ಸದಸ್ಯರ ಗಮನವನ್ನು ೧೯೪೩–೪೪ರ ಲೆಕ್ಕಗಳ ಮೇಲಣ ಸಾರ್ವಜನಿಕ ಲೆಕ್ಕ ಸಮಿತಿಯ ವರದಿಯ ಪ್ಯಾರಾ ೬೮ರ ಕಡೆಗೆ ಸೆಳೆಯಲಾಗಿದೆ.

**ದಿವಾನ್ ಚಮನ್‌ಲಾಲ್ :** ಈ ಸಂಬಂಧದಲ್ಲಿ ೧೯೪೫ರ ತರುವಾಯದ ಸ್ಥಿತಿಯೇನು ಮತ್ತು ಅನುದಾನವನ್ನು ನಿಲ್ಲಿಸಲಾಗಿದೆಯೆ ಎಂಬುದರ ಬಗ್ಗೆ ನನ್ನ ಮಾನ್ಯ ಸ್ನೇಹಿತರನ್ನು ಕೇಳಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದನ್ನು ನಿಲ್ಲಿಸಲಾಗಿದೆ.

**ದಿವಾನ್ ಚಮನ್‌ಲಾಲ್ :** ೧೯೪೫ ಮತ್ತು ಅದನ್ನು ನಿಲ್ಲಿಸಿದ ಸಮಯದ ನಡುವಣ ಸ್ಥಿತಿ ಏನಿತ್ತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಕುರಿತ ಮಾಹಿತಿ ನನ್ನ ಬಳಿ ಇಲ್ಲ. ಆದರೆ ಮಾನ್ಯ ಸ್ನೇಹಿತರು ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ನೀಡುತ್ತೇನೆ.

**ದಿವಾನ್ ಚಮನ್‌ಲಾಲ್ :** ಈ ಅನುದಾನವನ್ನು ನಿಲ್ಲಿಸುವ ಸಮಯಕ್ಕೆ ಸದರಿ ಲೆಕ್ಕಗಳನ್ನು ಪರಿಶೋಧಿಸಿ ನೋಡಲಾಯಿತೆಂಬ ಸಂಗತಿ ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಬಗ್ಗೆ ಹೇಳಿಕೆ ನೀಡಲು ನನಗೆ ಸಮಯಾವಕಾಶ ಬೇಕು.

**ದಿವಾನ್ ಚಮನ್‌ಲಾಲ್ :** ಆ ತರುವಾಯ ಅವುಗಳನ್ನು ಪರಿಶೋಧಿಸಿ ನೋಡಲಾಯಿತೆಂಬ ಸಂಗತಿ ನನ್ನ ಸ್ನೇಹಿತರಿಗೆ ಗೊತ್ತಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಅದನ್ನು ಹೇಳಲಾರೆನು.

**ಶ್ರೀ ಸತ್ಯನಾರಾಯಣ ಸಿಂಹ :** ಇಡೀ ವಿಷಯವನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಿ ನೋಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಪರಿಶೀಲಿಸಿದ್ದೇನೆ. ಅದಕ್ಕೂ ಮೀರಿ ನಾನೇನು ಮಾಡಲಿ?

**ಶ್ರೀಮನು ಸುಬೇದಾರ್ :** ಭಾರತೀಯ ಕಾರ್ಮಿಕರ ಒಕ್ಕೂಟ ಮೂಲಕ ನಡೆಯುವ ಕಾರ್ಮಿಕ ಪ್ರಚಾರಕ್ಕೆ ತಗಲುವ ಹಾಲಿ ವೆಚ್ಚವೆಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ತಿಳಿಸಿದ ಪ್ರಕಾರ ಆ ಅನುದಾನವನ್ನು ನಿಲ್ಲಿಸಲಾಗಿದೆ.

**ಶ್ರೀ ಮೋಹನಲಾಲ್ ಸಕ್ಸೇನಾ :** ಅದನ್ನು ಯಾವತ್ತಿನಿಂದ ನಿಲ್ಲಿಸಲಾಯಿತು ಎಂದು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೋದ ವರ್ಷದಿಂದ, ನನಗೆ ಸರಿಯಾಗಿ ತಿಳಿದ ಮಟ್ಟಿಗೆ.

**ಮಿಸ್ ಮಣಿಬೆನ್ ಕಾರಾ :** ಸದರಿ ಅನುದಾನವನ್ನು ನೀಡಿದಾಗ, ವಾರ್ತಾ ಮತ್ತು ಪ್ರಸಾರ

ಇಲಾಖೆಯು ಗೊತ್ತು ಪಡಿಸಿದ ಪ್ರಕ್ರಿಯೆಗನುಗುಣವಾಗಿ ಭಾರತೀಯ ಕಾರ್ಮಿಕ ಒಕ್ಕೂಟವು ಲೆಕ್ಕಗಳನ್ನು ಸಲ್ಲಿಸಿದ್ದು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಜವೆಂದು ಭಾವಿಸಿದ್ದೇನೆ.

**ಪ್ರೊ॥ ಎನ್.ಜಿ. ರಂಗಾ :** ಭಾರತೀಯ ಕಾರ್ಮಿಕ ಒಕ್ಕೂಟವು ಅನುದಾನವನ್ನು ನೀಡಿದ ತರುವಾಯ ಬಹಳ ಸಮಯ ಗತಿಸಿದರೂ ತನ್ನದೇ ಆದ ಪ್ರಕ್ರಿಯೆಯನ್ನು ಗೊತ್ತುಪಡಿಸಿಕೊಳ್ಳಲಿಲ್ಲ ಎಂಬ ಸಂಗತಿಯು ನಿಜವಲ್ಲವೆ? ಇಲಾಖೆಯು ಅನುಸರಿಸುತ್ತಿದ್ದ ಪ್ರಕ್ರಿಯೆಯೆ ಆಡಿಟರ್ ಜನರಲ್ ಅವರ ತೀವ್ರ ಆಕ್ಷೇಪಕ್ಕೆ ಗುರಿಯಾಯಿತೆಂಬ ಸಂಗತಿಯು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಉತ್ತರವನ್ನು ಕೊಡುವಾಗ, ನಾನು ಕೇಳಿದ ಹಾಗೆ ಈ ಅನುದಾನದ ಆಡಳಿತವನ್ನು ವಾರ್ತಾ ಮತ್ತು ಪ್ರಸಾರ ಇಲಾಖೆಯೇ ನೋಡಿಕೊಳ್ಳುತ್ತಿತ್ತು. ಆ ತರುವಾಯದ ಹಂತದಲ್ಲಿ ಆಡಳಿತವನ್ನು ಕಾರ್ಮಿಕ ಇಲಾಖೆಗೆ ವರ್ಗಾಯಿಸಿದ್ದು.

**ದಿವಾನ ಚಮನ್‌ಲಾಲ್ :** ಕಾರಣವೇನು?

**ಮಿಸ್ ಮಣಿಬೆನ್ ಕಾರಾ :** ೧೯೪೬ರ ಮೇ ತಿಂಗಳಿಗೆ ಮುಂಚೆ, ಒಕ್ಕೂಟಕ್ಕೆ ವೋಚರುಗಳನ್ನು ಒಪ್ಪಿಸುವ ಅಗತ್ಯವಿಲ್ಲವೆಂದು, ಕೇವಲ ಲೆಕ್ಕಗಳನ್ನು ಒಪ್ಪಿಸಿದರೆ ಸಾಕೆಂದು ಹೇಳಿರುವುದು ಮತ್ತು ಭಾರತೀಯ ಕಾರ್ಮಿಕ ಒಕ್ಕೂಟವು ಇಲಾಖೆಯ ಸೂಚನೆಗಳ ಮೇರೆಗೆ ಹಾಗೆ ಮಾಡಲಿಲ್ಲವೆನ್ನುವುದೂ ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಏನೂ ಹೇಳಲಾರೆ. ಆ ವಿಷಯದ ಆಡಳಿತವನ್ನು ಬೇರೆ ಇಲಾಖೆಯು ನೋಡಿಕೊಳ್ಳುತ್ತಿತ್ತು.

**ಮಿಸ್ ಮಣಿಬೆನ್ ಕಾರಾ :** ಯುದ್ಧಸಮಾಪ್ತಿಯ ಕಾರಣ ಅನುದಾನವನ್ನು ನಿಲ್ಲಿಸಲಾಗಿದೆಯೆಂಬ ಸಂಗತಿಯು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ನಾನು ಹಾಗೆಂದು ಹೇಳಿದ್ದೇನೆ.

**ಪ್ರೊ॥ ಎನ್.ಜಿ. ರಂಗಾ :** ಅನುದಾನದ ಅಡಿಯಲ್ಲಿ "ವಾರ್ತಾ ಮತ್ತು ಪ್ರಸಾರ"ದ ಪ್ರಚಾರಕರಾಗಿ ಈ ಹಿಂದೆ ನಿಯೋಜಿತರಾಗಿದ್ದವರ ಪೈಕಿ ಎಷ್ಟು ಜನರನ್ನು "ವಾರ್ತಾ ಮತ್ತು ಪ್ರಸಾರ" ಇಲಾಖೆಯಲ್ಲಿ ವಿಲೀನಗೊಳಿಸಿಕೊಳ್ಳಲಾಗಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಯನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಾನ್ಯ ಮಂತ್ರಿಗಳಿಗೆ ಕೇಳಬೇಕು.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಅನುದಾನವನ್ನು ಯುದ್ಧಸಮಾಪ್ತಿಗೆ ಮುನ್ನ ಅಥವಾ ಆ ತರುವಾಯ ನಿಲ್ಲಿಸಲಾಯಿತೆಂದು ಹೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಖಚಿತವಾಗಿ ಹೇಳಲಾರೆನು.

**ಶ್ರೀ ಮೋಹನ್‌ಲಾಲ್ ಸಕ್ಸೇನಾ :** ಅದನ್ನು ಕಳೆದ ವರ್ಷ ಅಂದರೆ ೧೯೪೬ರ ಏಪ್ರಿಲ್ ತಿಂಗಳಲ್ಲಿ ನಿಲ್ಲಿಸಲಾಯಿತಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ದಿವಾನ್ ಚಮನ್‌ಲಾಲ್ :** ಆಖೈರು ಲೆಕ್ಕಗಳನ್ನು ಸಾರ್ವಜನಿಕ ಲೆಕ್ಕ ಸಮಿತಿಯ ಮುಂದೆ ಒಪ್ಪಿಸಲಾಗಿದೆಯೆ ಹೇಗೆ ಎಂಬುದನ್ನು ಮಾನ್ಯ ಮಿತ್ರರನ್ನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವುಗಳನ್ನು ಯಥಾ ಸಕ್ರಮದಲ್ಲಿ ಲೆಕ್ಕ ಸಮಿತಿಯ

ಮುಂದೆ ಒಪ್ಪಿಸಲಾಗುವುದೆಂದು ಖಚಿತವಾಗಿ ಹೇಳಬಲ್ಲೆನು.

**ಮಿ॥ ಅಹಮ್ಮದ್ ಇ. ಹೆಚ್. ಜಾಫರ್ :** ಈ ೩೦,೦೦೦ ರೂಪಾಯಿ ಮೊಬಲಗು ದುರುಪಯೋಗವಾಯಿತೆಂಬ ಸಂಗತಿ ನಿಜವಲ್ಲವೆ? ಯಾವ ಉದ್ದೇಶಕ್ಕಾಗಿ ಸರ್ಕಾರ ಆ ಮೊಬಲಗನ್ನು ಹಂಚಿಕೊಟ್ಟಿತೋ ಆ ಉದ್ದೇಶಕ್ಕೆ ಬಳಸಲಿಲ್ಲವೆನ್ನುವುದೂ, ಇಷ್ಟೇ ಅಲ್ಲದೆ ಅದನ್ನು ಮಾನ್ಯ ಮಂತ್ರಿಗಳ ಪಕ್ಷದ ಪ್ರಚಾರಕ್ಕಾಗಿ ಬಳಸಲಾಯಿತೆನ್ನುವುದೂ ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಹಣವನ್ನು ಪಕ್ಷದ ಪ್ರಚಾರಕ್ಕೆ ಬಳಸಲಾಯಿತೆಂದು ನನ್ನ ಮಾನ್ಯ ಮಿತ್ರರ ಹೇಳಿಕೆಯನ್ನು ನಾನು ತೀವ್ರವಾಗಿ ಆಕ್ಷೇಪಿಸುತ್ತೇನೆ. ನೀವು ಹೇಳಿಕೆಯನ್ನು ವಾಪಸು ಪಡೆಯಬೇಕು.

**ಅಧ್ಯಕ್ಷರು :** ಆರ್ಡರ್, ಆರ್ಡರ್.

**ಪ್ರೊ॥ ಎನ್.ಜಿ. ರಂಗಾ :** ಅವರು ಹಾಗೆ ಹೇಳಲಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರು ಹೇಳಿದ್ದುಂಟು.

**ಮಿ॥ ಅಹಮ್ಮದ್ ಇ. ಎಚ್. ಜಾಫರ್ :** ಮಾನ್ಯ ಸದಸ್ಯರು ಆ ಹೇಳಿಕೆಯನ್ನು ಸದನದಲ್ಲಿ ನಿರಾಕರಿಸಲು ಅವಕಾಶ ಕೊಡಿ. ಸುಮ್ಮನೆ ತಾಳ್ಮೆಗೆಡಬೇಡಿ.

**ಅಧ್ಯಕ್ಷರು :** ಆರ್ಡರ್, ಆರ್ಡರ್, ಮಾನ್ಯ ಸದಸ್ಯರು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕಾಗಿ ಕೋರುತ್ತೇನೆ. ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಾಳ್ಮೆಗೆಟ್ಟರು ಎಂದು ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ.

**ಮಿ॥ ಅಹಮ್ಮದ್ ಇ.ಹೆಚ್. ಜಾಫರ್ :** ಮಾನ್ಯ ಮಂತ್ರಿಗಳು ಸಾಮಾನ್ಯವಾಗಿ ಸದನದಲ್ಲಿ ತಾಳ್ಮೆಗೆಡುತ್ತಾರಲ್ಲ, ಹಾಗೆ ತಾಳ್ಮೆಗೆಡುವುದು ಸರಿಯೆ ಎಂದು ಕೇಳಬಹುದೆ?

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಮಾನ್ಯ ಮಂತ್ರಿಗಳು ತಾವು ತೀವ್ರವಾಗಿ ಪ್ರತಿಭಟಿಸುವುದಾಗಿ ಹೇಳಿದರಲ್ಲ, ಇವು ಸಭಾಗೌರವದ ಪದಗಳೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಹಣವನ್ನು ನನ್ನ ಪಕ್ಷದ ಪ್ರಚಾರಕ್ಕಾಗಿ ಬಳಸಲಾಯಿತೆಂಬ ಹೇಳಿಕೆಯನ್ನು ತೀವ್ರವಾಗಿ ಪ್ರತಿಭಟಿಸುತ್ತೇವೆ ಎಂದು ಹೇಳಿದೆನು. ನಾನು ಭಾರತೀಯ ಕಾರ್ಮಿಕ ಒಕ್ಕೂಟದ ಸದಸ್ಯನಲ್ಲ. ಡಾ॥ ಸರ್ ಜಿಯಾಉದ್ದೀನ್ ಅವರ ಆಕ್ಷೇಪಣೆಯು ನನಗೆ ಅರ್ಥವಾಗಲಿಲ್ಲ.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಮಾನ್ಯ ಮಂತ್ರಿಗಳು ಯಾವುದೇ ವಿಷಯವನ್ನು ಕುರಿತು ನಾನು ತೀವ್ರವಾಗಿ ಪ್ರತಿಭಟಿಸುತ್ತೇನೆ ಎಂದು ಹೇಳಬಹುದೆ?

**ದಿವಾನ್ ಚಮನ್‌ಲಾಲ್ :** ಈ ಹಣವನ್ನು ಭಾರತೀಯ ಕಾಮಿಕ ಒಕ್ಕೂಟದ ಸಂಸ್ಥೆಯ ಪ್ರಚಾರಕ್ಕಾಗಿ ಬಳಸಲಾಯಿತೆ ಹೇಗೆ ಎಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯದಲ್ಲಿ ಏನನ್ನೂ ನಾನು ಹೇಳಲಾರೆನು. ಸರ್ಕಾರಕ್ಕೆ ಗೊತ್ತಿರುವ ಮಾಹಿತಿಯ ಪ್ರಕಾರ ಅದನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿತ್ತೊ ಆ ಉದ್ದೇಶಕ್ಕೆ ಬಳಸಲಾಗಿದೆ.

**ದಿವಾನ್ ಚಮನ್‌ಲಾಲ್ :** ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಂಥ ಪ್ರಾಮಾಣಿಕ ಹಾಗೂ ಸ್ವಚ್ಛ ಸಂಘಟನೆಗಳು ಅಂಥ ಹಣವನ್ನು ಮುಟ್ಟಲು ಸಹ ಸಿದ್ಧವಾಗಿದ್ದಿಲ್ಲ ಎಂಬ ಸಂಗತಿಯು ನಿಜವೇ ಎಂದು ನನ್ನ ಮಾನ್ಯ ಸ್ನೇಹಿತರನ್ನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೆಲವು ವಿಷಯಗಳನ್ನು ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿರಲು ನನ್ನ ಮಾನ್ಯ ಸ್ನೇಹಿತರು ಸ್ವತಂತ್ರರು.

**ದಿವಾನ್ ಚಮನ್‌ಲಾಲ್ :** ನನ್ನ ಮಾನ್ಯ ಸ್ನೇಹಿತರು ಈ ವಿಷಯದಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಹತ್ತಿರ ಪ್ರಸ್ತಾಪಿಸಿದರೆಂಬ ಹಾಗೂ ಆ ಯೂನಿಯನ್ ಆ ಹಣವನ್ನು ಸ್ವೀಕರಿಸಲು ನಿರಾಕರಿಸಿತೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಎಲ್ಲ ಸಂಘಟನೆಗಳ ಹತ್ತಿರ ಈ ವಿಷಯವನ್ನು ಪ್ರಸ್ತಾಪಿಸಿದೆ. ಕಾರ್ಮಿಕ ವರ್ಗದವರ ಮನಸ್ಥೈರ್ಯವನ್ನು ಹೆಚ್ಚಿಸುವ ಬಗ್ಗೆ ಯೋಜನೆಯೊಂದನ್ನು ಹೊಂದಿರಲು ಬಯಸುವುದಾದರೆ ಭಾರತ ಸರ್ಕಾರ ನೆರವು ನೀಡಲು ಸಿದ್ಧವಿದೆಯೆಂದು ಹೇಳುವ ಸುತ್ತೋಲೆಗಳನ್ನು ಎಲ್ಲಾ ಸಂಘಗಳಿಗೂ ಕಳಿಸಿದ್ದೆವು. ಈ ಯೋಜನೆಗೆ ಯಾವುದೇ ನಿದಿಷ್ಟ ಸಂಘಗಳಿಗೆ ಮಾತ್ರ ಭಾರತ ಸರ್ಕಾರವು ಆಮಂತ್ರಣವನ್ನು ನೀಡಿರಲಿಲ್ಲ

**ದಿವಾನ್ ಚಮನ್‌ಲಾಲ್ :** ನಮ್ಮ ಮಾನ್ಯ ಮಿತ್ರರ ಬಳಿಗೆ ಬಂದ ಮತ್ತು ಈ ಹಣವನ್ನು ಬಳಸಿದ ಒಂದೇ ಸಂಘಟನೆಯೆಂದರೆ ಭಾರತೀಯ ಕಾರ್ಮಿಕ ಒಕ್ಕೂಟ ಎಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು.

**ಮಿ॥ ಅಹಮ್ಮದ್ ಇ. ಎಚ್. ಜಾಫರ್ :** ಅದೇನೇ ಇರಲಿ, ಎಷ್ಟೋ ಪ್ರಶ್ನೆಗಳ ಮೂಲಕ ನಡೆದ ಚರ್ಚೆಯ ಫಲಿತಾಂಶವಾಗಿ ಈ ಹಣವನ್ನು ಯುಕ್ತವಾಗಿ ಬಳಸಲಾಗಿಲ್ಲವೆಂದು ಮತ್ತು ಸಂಶಯಕ್ಕೆ ಕಾರಣವಾಗಿದೆಯೆಂದು ಮಾನ್ಯ ಮಂತ್ರಿಗಳಿಗೆ ಮನವರಿಕೆಯಾಗಿರಬೇಕು. ಆದಕಾರಣ, ಮಾನ್ಯ ಮಂತ್ರಿಗಳು ಈ ಹಣದ ಲೆಕ್ಕಗಳನ್ನು ಪರಿಶೀಲಿಸಲು ಅಧಿಕಾರೇತರ ಆಡಿಟ್ ಅವರನ್ನು ನೇಮಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆ ಮಾಡುವುದು ಅಗತ್ಯವಿಲ್ಲವೆಂದು ನನ್ನ ಭಾವನೆ. ಈ ವಿಷಯವು ಸದನವು ನೇಮಿಸಿರುವ ಸಾರ್ವಜನಿಕ ಲೆಕ್ಕಗಳ ಸಮಿತಿಯ ಮುಂದೆ ಬರಲಿದೆ.

**ದಿವಾನ್ ಚಮನ್‌ಲಾಲ್ :** ಸಾರ್ವಜನಿಕ ಲೆಕ್ಕ ಸಮಿತಿಯ ಮುಂದೆ ಈ ವಿಷಯವನ್ನು ಇಡುವಲ್ಲಿ ಮಾನ್ಯ ಮಂತ್ರಿಗಳು ವಿಳಂಬ ಮಾಡಿರುವುದೇಕೆ ಎಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಚಾರದಲ್ಲಿ ವಿಳಂಬವಾಗಿಲ್ಲ.

**ದಿವಾನ್ ಚಮನ್‌ಲಾಲ್ :** ಈ ವೆಚ್ಚವು ಕಳೆದ ವರ್ಷವೇ ಅಂತ್ಯವಾಯಿತೆಂಬ ವಿಚಾರವನ್ನು ಗಮನಿಸಲಾಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಚಾರದಲ್ಲಿ ವಿಳಂಬವಾಗಿಲ್ಲ. ಅದನ್ನು ಸಾರ್ವಜನಿಕ ಲೆಕ್ಕ ಸಮಿತಿಯ ಮುಂದೆ ಇಡಲಾಗಿದೆ.

**ದಿವಾನ್ ಚಮನ್‌ಲಾಲ್ :** ಈವರೆಗೂ ಏಕೆ ಇಡಲಿಲ್ಲ?

**ಅಧ್ಯಕ್ಷರು :** ಮುಂದಿನ ಪ್ರಶ್ನೆ.

## ೪೫೯
## ಗವರ್ನಮೆಂಟ್ ಪ್ರೆಸ್‌ನಲ್ಲಿ ಜ್ಯೂನಿಯರ್ ರೀಡರ್‌ಗಳು*

**೧೬೩೩. ಹಾಜಿ ಚೌಧರಿ ಮಹಮ್ಮದ್ ಇಸ್ಮಾಯಿಲ್ ಖಾನ್ :** ಅ) ಭಾರತದ ಎಲ್ಲಾ ಸರಕಾರಿ ಮುದ್ರಣಾಲಯಗಳಲ್ಲಿನ ಅಫಿಷಿಯೇಟಿಂಗ್ ಜ್ಯೂನಿಯರ್ ರೀಡರ್‌ಗಳನ್ನು, ಯಾವ ಆಧಾರದ ಮೇಲೆ ಖಾಯಂಗೊಳಿಸಲಾಯಿತೆಂದು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

ಆ) ಕಾಪಿ–ಹೋಲ್ಡರ್‌ಗಳ ಕರ್ತವ್ಯಗಳ ಸ್ವರೂಪ ಮತ್ತು ಜ್ಯೂನಿಯರ್ ರೀಡರ್‌ಗಳ ಕರ್ತವ್ಯಗಳ ಸ್ವರೂಪ ಮತ್ತು ವರ್ಗ ವಿಭಿನ್ನವಾಗಿವೆ ಎಂಬ ಸಂಗತಿಯು ನಿಜವೆ?

ಇ) ಭಾರತದ ಸರ್ಕಾರಿ ಮುದ್ರಣಾಲಯಗಳ ಪೈಕಿ ಯಾವುದೇ ಮುದ್ರಣಾಲಯದಲ್ಲಿ ಈ ಹಿಂದೆಯೇ ಜ್ಯೂನಿಯರ್ ರೀಡರ್ ಗ್ರೇಡ್ ಅನ್ನು ಸೇರಿದ ಕೆಲವರು ಅಫಿಷಿಯೇಟಿಂಗ್ ಜ್ಯೂನಿಯರ್ ರೀಡರ್‌ಗಳನ್ನು ಅವರ ಜತೆಗೆ ರೀಡರ್‌ಷಿಪ್ ಪರೀಕ್ಷೆಗೆ ಕುಳಿತು ಪಾಸಾಗಿ ಅರ್ಹರಾಗಲು ವಿಫಲರಾದ ಕೆಲವರು ಕಾಪಿ–ಹೋಲ್ಡರ್‌ಗಳಿಗಿಂತ, ಜೂನಿಯರ್ ರೀಡರ್ ಗ್ರೇಡ್‌ನಲ್ಲಿ ಜ್ಯೂನಿಯರ್ ಎಂದು ಘೋಷಿಸಲಾಗಿದೆಯೆಂಬ ಸಂಗತಿಯು ನಿಜವೆ?

ಈ) ಕಿರಿಯ ರೀಡಲ್ ಹುದ್ದೆಗಳಲ್ಲಿ ಕೆಲಸಮಾಡಲು ಕಾಪಿ ಹೋಲ್ಡರುಗಳಗೆ ಅನುಮತಿಯನ್ನು ಆದೇಶವನ್ನು, ಆ ಕಾಪಿಹೋಲ್ಡರುಗಳು ತಮ್ಮ ದಕ್ಷತೆಯನ್ನು ಕಾಪಾಡಿಕೊಂಡು ಹೋದರೆ ಸದರಿ ಆದೇಶವನ್ನು ತಿದ್ದುಪಡಿಮಾಡಬಹುದು ಎಂಬುದು ವಾಸ್ತವವೆ?

ಉ) ಅಫಿಷಿಯೇಟಿಂಗ್ ಜ್ಯೂನಿಯರ್ ರೀಡರ್‌ಗಳಾಗಿ ಇನ್ನೂ ಹೆಚ್ಚು ಸೇವಾವಧಿಯನ್ನು ಹೊಂದಿರುವ ಅರ್ಹ ಕಾಪಿ–ಹೋಲ್ಡರುಗಳಿಗೆ ಖಾಯಂ ಜೂನಿಯರ್ ರೀಡರ್ ಹುದ್ದೆಗಳನ್ನು ಕೊಡುವುದರ ಸೂಕ್ತತೆಯನ್ನು ಸರ್ಕಾರವು ಪರ್ಯಾಲೋಚಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ರೀಡರ್ಸ್ ಪರೀಕ್ಷೆಯಲ್ಲಿ ಮೂರನೆಯ ಸರದಿಯಲ್ಲಿ ಪಾಸಾದ ಯಾವ ಕಾಪಿ–ಹೋಲ್ಡರ್‌ಗಳಿಗೆ ಕೆಲವು ಮೀಸಲಾತಿಗಳನ್ನು ಒದಗಿಸಲಾಗಿದೆಯೊ ಆ ಕಾಪಿ–ಹೋಲ್ಡರ್‌ಗಳನ್ನು ಹೊರತುಪಡಿಸಿ ಕಾಪಿ–ಹೋಲ್ಡರ್‌ಗಳ ದರ್ಜೆಯಲ್ಲಿರುವವರನ್ನು ಸೀನಿಯಾರಿಟಿ ಆಧಾರದ ಮೇಲೆ ಖಾಯಂಗೊಳಿಲಾಗುತ್ತದೆ.

ಆ) ಹೌದು.

ಇ) ಹೌದು.

ಈ) ಹೌದು. ಜೂನಿಯರ್ ಕಾಪಿ–ಹೋಲ್ಡರ್‌ನನ್ನು ಮುಂಚಿತವಾಗಿ ಖಾಯಂಗೊಳಿಸಿದ್ದನ್ನು ಹೊರತುಪಡಿಸಿ.

ಉ) ಹಾಲಿ ನಿಯಮಾವಳಿಯನ್ನು ಪೂರ್ಣ ಪರಿಶೀಲಿಸಿದ ಅನಂತರವೆ ರೂಪಿಸಿಲಾಗಿದೆ.

**೧೬೩೬. ಹಾಜಿ ಚೌಧರಿ ಮಹಮ್ಮದ್ ಇಸ್ಮಾಯಿಲ್ ಖಾನ್ :** ಅ) ನವದೆಹಲಿಯಲ್ಲಿರುವ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ನಿಯೋಜಿತರಾದ ಹೊಸ ಶ್ರೇಣಿಯ ಜೂನಿಯರ್ ರೀಡರ್ಸ್‌ಗಳ ವೇತನಶ್ರೇಣಿಯು ರೂ. ೫೫–೩–೮೫ ಮತ್ತು (ಸಂಯುಕ್ತ 'ಸಿ'ಗ್ರೇಡಿನಲ್ಲಿರುವ) ಕಾಪಿ–ಹೋಲ್ಡರ್‌ಗಳ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೮, ೧೯೪೬. ಪುಟ ೩೬೪೯–೫೦

ವೇತನಶ್ರೇಣಿಯು ರೂ. ೪೫–೪–೬೦ಇಬಿ೫–೮೦ ಎಂದು ಇರುವುದೆ ಎಂದು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ?

ಆ) ಕಾಪಿ–ಹೋಲ್ಡರ್‌ಗಳು ಮತ್ತು ಜ್ಯೂನಿಯರ್ ರೀಡರ್‌ಗಳ ವೇತನಗಳಲ್ಲಿ ಇನ್ನೂ ಅಸಂಗತಗಳು ಇವೆ. ಯೋಜನೆ ಅಂದರೆ ತನ್ನ ಲೆಕ್ಕದಲ್ಲಿ ನಾಲ್ಕು ಅಥವಾ ಐದು ವರ್ಷ ಸೇವೆಯನ್ನು ಹೊಂದಿರುವ ಖಾಯಂ ಜ್ಯೂನಿಯರ್ ರೀಡರ್ ರೂ. ೬೪ ಮಾಸಿಕ ವೇತನ ಪಡೆಯುತ್ತಾನೆ. ಆದರೆ ಹಂಗಾಮಿ ಕಾಪಿ–ಹೋಲ್ಡರ್, ಜೂನಿಯರ್ ರೀಡರ್ ಆಗಿ ಅಫಿಷಿಯೇಟ್ ಮಾಡುತ್ತಿದ್ದರೂ ರೂ. ೪೭ ಮಾಸಿಕ ವೇತನ ಪಡೆಯುತ್ತಾನೆ ಎಂಬ ಸಂಗತಿಯೂ ನಿಜವೆ?

ಇ) ಹಾಲಿ ಅಸಂಗತಗಳನ್ನು ಹೋಗಲಾಡಿಸಲು ಜೂನಿಯರ್ ರೀಡರ್‌ಗಳಿಗೆ 'ಬಿ' ಗ್ರೇಡನ್ನು ಶಿಫಾರಸ್ಸು ಮಾಡುವುದೊಂದೇ ಪರ್ಯಾಯವಾಗಿರುವ ನಿಮಿತ್ತ ಸದರಿ ಪ್ರೆಸ್‌ನ ಮ್ಯಾನೇಜರ್ ಲಕ್ಷ್ಯಪೂರ್ವಕ ಪರ್ಯಾಲೋಚನೆಯ ತರುವಾಯ ಜ್ಯೂನಿಯರ್ ರೀಡರ್‌ಗಳಿಗೆ ಆ ಗ್ರೇಡನ್ನು ಶಿಫಾರಸ್ಸು ಮಾಡಿರುವ ಸಂಗತಿಯು ನಿಜವೆ?

ಈ) ಈ ಅಸಂಗತಗಳನ್ನು ಹೋಗಲಾಡಿಸುವ ಸಲುವಾಗಿ ಮಾನ್ಯ ಮಂತ್ರಿಗಳು, ಜೂನಿಯರ್ ರೀಡರ್‌ಗಳಿಗೆ ಸಂಯುಕ್ತ ಶ್ರೇಣಿಯ 'ಬಿ' ಗ್ರೇಡನ್ನು ಶೀಘ್ರವಾಗಿ ಮಂಜೂರು ಮಾಡಲು ಪ್ರಸ್ತಾವಿಸುವರೆ? ಇಲ್ಲದಿದ್ದರೆ, ಕಾರಣವೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಖಾಯಂ ಜೂನಿಯರ್ ರೀಡರ್ ಪರಿಷ್ಕೃತ ಶ್ರೇಣಿಯಲ್ಲಿ ನಾಲ್ಕು ವರ್ಷಗಳ ಸೇವೆ ಪೂರ್ಣಗೊಂಡಾಗ ಮಾಸಿಕ ರೂ. ೬೪ರಂತೆ ಮತ್ತು ಐದು ವರ್ಷಗಳ ಸೇವೆ ಪೂರ್ಣಗೊಂಡಾಗ ಮಾಸಿಕ ರೂ. ೬೭ರಂತೆ ವೇತನಕ್ಕೆ ಅರ್ಹನಾಗುತ್ತಾನೆ. ಕೆಲವು ಸಂದರ್ಭಗಳಲ್ಲಿ ಹಂಗಾಮಿ ಕಾಪಿ–ಹೋಲ್ಡರ್ ರೀಡರ್ ಆಗಿ ನೇಮಿಸಲ್ಪಟ್ಟ ರೂ. ೬೭ರಂತೆ ಮಾಸಿಕ ವೇತನಕ್ಕೆ ಅರ್ಹನಾಗುತ್ತಾನೆ.

ಇ) ಹೌದು.

ಈ) ಸಂಯುಕ್ತ ಶ್ರೇಣಿ ಹಂಗಾಮಿ ಶ್ರೇಣಿಯಾಗಿದ್ದು, ಅದನ್ನು ಭಾರತ ಸರ್ಕಾರದ ಲಿಪಿಕ ಸಿಬ್ಬಂದಿಯ ಸಲುವಾಗಿ ರಚಿಸಲಾಗಿತ್ತು. ಅದನ್ನು ಭಾರತ ಸರ್ಕಾರದ ಮುದ್ರಣಾಲಯಗಳ ಕಾಪಿ–ಹೋಲ್ಡರ್‌ಗಳಿಗೆ ಮತ್ತು ಜ್ಯೂನಿಯರ್ ರೀಡರ್‌ಗಳಿಗೆ ಅನ್ವಯಿಸಲಾಯಿತು. ಭಾರತ ಸರ್ಕಾರದ ವಿವಿಧ ಮುದ್ರಣಾಲಗಳಲ್ಲಿ ವಿಭಿನ್ನ ವೇತನದರಗಳ ಹಲವಾರು ಗ್ರೇಡುಗಳ ರೀಡರುಗಳು ಇರುವುದರಿಂದ ಸಂಯುಕ್ತ ಶ್ರೇಣಿಯ 'ಬಿ' ಗ್ರೇಡ್ ಅನ್ನು ಅನ್ವಯಿಸಿದರೆ ಇನ್ನಷ್ಟು ಅಸಂಗತಗಳಿಗೆ ಮತ್ತು ಜಟಿಲತೆಗಳಿಗೆ ಎಡೆಮಾಡಿ ಕೊಟ್ಟಂತಾಗುತ್ತದೆ.

## ೪೬೦
## ಥೋರಿಯಂನ ಬಳಕೆ*

**೧೬೪೨. ಶ್ರೀ ಎಂ.ಕೆ. ಜಿನಚಂದ್ರನ್ :** ಥೋರಿಯಂ ಅನ್ನು ಮಿಲಿಟರಿ ಕಾರ್ಯದಲ್ಲಿ ಯಾವ ರೀತಿಯಲ್ಲಿ ಬಳಸಬಹುದು ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಿಳಿಸುವರೆ? ಆ ಪದಾರ್ಥವನ್ನು ಯಾವುದೇ ನಾಗರಿಕ ಉದ್ದೇಶಕ್ಕೆ ಬಳಸಬಹುದೆ? ಹಾಗಿದ್ದರೆ, ಯಾವ ಉದ್ದೇಶಗಳಿಗೆ ಬಳಸಬಹುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇತ್ತೀಚಿನ ವರದಿಗಳ ಪ್ರಕಾರ ಅಣುಶಕ್ತಿಯ ಬಿಡುಗಡೆಗೆ ಕಾರಣವಾದ ಟೆಲರ್ ರಿಯಾಕ್ಟರ್‌ಗಳಲ್ಲಿ ಯುರೇನಿಯಂನ ಒಂದು ಭಾಗಕ್ಕೆ ಬದಲಾಗಿ ಥೋರಿಯಂ ಅನ್ನು ಬಳಸಬಹುದಾಗಿದೆ.

**ಪ್ರೊ॥ ಎನ್.ಜಿ. ರಂಗಾ :** ಭಾರತದಲ್ಲಿ ಅದು ಎಲ್ಲಿ ದೊರೆಯುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತಿರುವಾಂಕೂರಿನಲ್ಲಿ.

**ಶ್ರೀ ಎ. ಕರುಣಾಕರ ಮೆನನ್ :** ತಿರುವಾಂಕೂರಿನಲ್ಲಿ ಮಾತ್ರವೆ? ಅಥವಾ ಭಾರತದ ಇನ್ನಾವುದೇ ಭಾಗದಲ್ಲಿ ದೊರೆಯುತ್ತದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಬಗ್ಗೆ ಸಮಯಾವಕಾಶ ಬೇಕು.

**ಮಿ॥ ಮನು ಸುಬೇದಾರ್ :** ದೊರೆಗಳ ಘನಸರ್ಕಾರ ಆಗಲಿ ಅಥವಾ ಭಾರತದ ಹೊರಗಿನ ಇನ್ನಾರೆ ಆಗಲಿ ಥೋರಿಯಂನ ಸರಬರಾಜನ್ನು ನಿಯಂತ್ರಿಸುವ ದೃಷ್ಟಿಯಿಂದ ಸರ್ಕಾರದೊಡನೆ ಮಾತುಕತೆ ನಡೆಸಿದ್ದಾರೆಯೆ? ಈ ವಿಚಾರ ಯಾವುದೇ ದೇಶದೊಡನೆ ಒಪ್ಪಂದ ಆಗಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಯಾವುದೇ ಸಲಹೆಯ ಬಗ್ಗೆ ನನ್ನ ಬಳಿ ಮಾಹಿತಿಯಿಲ್ಲ.

**ಪ್ರೊ॥ ಎನ್.ಜಿ. ರಂಗಾ :** ಈ ವಿಷಯವನ್ನು ಸರ್ಕಾರವು ಭೂವಿಜ್ಞಾನ ವಿಶಾರದರ ಮೂಲಕ ಪರಿಶೀಲನೆ ಮಾಡಿಸುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಸಲಹೆಯನ್ನು ನನ್ನ ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

**ಪ್ರೊ॥ ಎ. ಕರುಣಾಕರ ಮೆನನ್ :** ಈ ಉತ್ಪತ್ತಿಯನ್ನು ಸರ್ಕಾರವು ಯಾವುದೇ ವಿದೇಶಕ್ಕೆ ರಫ್ತು ಮಾಡುತ್ತಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಚಾರ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಮಾಹಿತಿ ಬೇಕಾದರೆ ನನಗೆ ಸಮಯಾವಕಾಶ ಕೊಡಬೇಕು.

**ಪ್ರೊ॥ ಎನ್.ಜಿ. ರಂಗಾ :** ಅದನ್ನು ರಫ್ತು ಮಾಡಲಾಗುತ್ತಿದೆಯೆ? ಹಾಗಿದ್ದರೆ, ರಾಷ್ಟ್ರ ಭದ್ರತೆಯ ದೃಷ್ಟಿಯಿಂದ ಅದರ ರಫ್ತನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ಬಗ್ಗೆ ವಿಚಾರಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೮, ೧೯೪೬. ಪುಟ ೩೬೫೫.

# ೪೬೧
# ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಮುಸ್ಲಿಮರು*

**೧೬೪೬. ಮಿ॥ ಮಹಮ್ಮದ್ ರಹಿಮತ್ ಉಲ್ಲಾ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ? ಅ) ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಕೆಳಕಂಡ ಹುದ್ದೆಗಳ ನೌಕರರ ಪೈಕಿ ಮುಸ್ಲಿಮ್ ನೌಕರರ ಪ್ರಮಾಣ ಎಷ್ಟು ?

೧) ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.

೨) ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು.

೩) ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು.

೪) ಸಬ್ ಡಿವಿಜನಲ್ ಆಫೀಸರ್‌ಗಳು.

೫) ಸಬಾರ್ಡಿನೇಟರ್‌ಗಳು. ೬) ಹೆಡ್‌ಕ್ಲರ್ಕ್‌ಗಳು ೭) ಡಿವಿಜನಲ್ ಅಕೌಂಟೆಂಟ್‌ಗಳು.

ಆ) ಗೆಜೆಟೆಡ್ ಹುದ್ದೆಗಳಲ್ಲಿ ಮುಸ್ಲಿಮರ ದಾಮಾಷಾ ಪ್ರಮಾಣ ಇಲ್ಲವೇಕೆ?

ಇ) ನೇಮಕಾತಿಗಳನ್ನು ಜಾತಿಯ ಆಧಾರದ ಮೇಲೆ ಮಾಡುವಾಗ ಮತ್ತು ಮುಸ್ಲಿಮರ ಪ್ರಮಾಣ ಶೇಕಡ ಎಂಟಕ್ಕೂ ಕಡಿಮೆಯಿರುವಾಗ ಮುಸ್ಲಿಮರಿಗೆ ಜಾತಿಯ ಆಧಾರದ ಮೇಲೆ ಪದೋನ್ನತಿಯನ್ನು ಯಾಕೆ ನೀಡುತ್ತಿಲ್ಲ?

ಈ) ಸದ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಗೆ ಖಾಯಂಗೊಳಿಸುವಾಗ ಸರ್ಕಾರದ ನೀತಿಯೇನು? ಎಲ್ಲ ಹುದ್ದೆಗಳಲ್ಲೂ ಪ್ರಮಾಣವನ್ನು ಸರಿಹೊಂದಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಉ) ನಿರ್ಮಾಣ ಕಾಮಗಾರಿಗಳನ್ನು ಮತ್ತು ನಿರ್ವಹಣಾ ಕಾಮಗಾರಿಗಳನ್ನು ಸಬ್‌ಡಿವಿಜನಲ್ ಆಫೀಸರ್‌ಗಳಲ್ಲಿ ಮತ್ತು ಸಬಾರ್ಡಿನೇಟರ್‌ಗಳಲ್ಲಿ ಯಾವ ಆಧಾರದ ಮೇಲೆ ಹಂಚಲಾಗುತ್ತದೆ? ಮುಸ್ಲಿಮರಿಗೆ ಈ ಮೇಲ್ಕಂಡ ಕಾಮಗಾರಿಗಳನ್ನು ಕೊಡದೆ ಹೋದರೆ ಮತ್ತು ಚೀಫ್ ಇಂಜಿನಿಯರ್ ಅವರಿಗಾಗಲಿ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗಾಗಲಿ ದೂರು ಸಲ್ಲಿಸಿದರೆ ಜಾತೀಯತೆಯನ್ನು ತಡೆಯಲು ಅವರು ಯಾವ ಕ್ರಮಗಳನ್ನು ಕೈಗೊಳ್ಳುವರು?

ಊ) ಮುಸ್ಲಿಮ್ ಸಬಾರ್ಡಿನೇಟರ್‌ಗಳಿಗೆ ಸ್ಟೋರ್ ಮತ್ತು ಸ್ಟಾಂಡರ್ಡ್ ಮೆಜರ್‌ಮೆಂಟ್ ಬುಕ್ಸ್ ಈ ವಿಷಯಗಳನ್ನು ಮಾತ್ರ ಹಂಚಲಾಗುತ್ತಿದೆಯೆಂಬ ಸಂಗತಿಯು ನಿಜವೆ? ದೆಹಲಿಯಲ್ಲಾಗಲಿ ಹೊರಗಡೆಯಲ್ಲಾಗಲಿ ಕೇಂದ್ರೀಯ ಲೋಕೋಪಯೋಗಿ ಇಲಾಖೆಯಲ್ಲಿ ಇವರಿಗೆ ನಿರ್ಮಾಣ ಮತ್ತು ನಿರ್ವಹಣಾ ಕಾಮಗಾರಿಗಳನ್ನು ವಹಿಸಿಕೊಡಲಾಗುತ್ತಿಲ್ಲವೆಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೧. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು – ಶೇಕಡ ೧೭.

೨. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು – ಶೇಕಡ ೧೪

೩. ಸಬ್ ಡಿವಿಜನಲ್ ಆಫೀಸರ್‌ಗಳು – ಶೇಕಡ ೧೭

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೮, ೧೯೪೬. ಪುಟ ೩೬೫೬.

೪. ಸಬಾರ್ಡಿನೇಟರ್‌ಗಳು – ಶೇಕಡ ೨೨

೫. ಡಿವಿಜನಲ್ ಅಕೌಂಟೆಂಟ್ಸ್‌ಗಳಿಗೆ ಸಂಬಂಧಿಸಿದ ಅಂಕಿಗಳು ಸದ್ಯದಲ್ಲಿ ದೊರೆಯುತ್ತಿಲ್ಲ.

ಆ) ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಹುದ್ದೆಗಳನ್ನು ಪದೋನ್ನತಿಯ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತದೆ. ಅಲ್ಪಸಂಖ್ಯಾತ ಜಾತಿಗಳಿಗೆ ನೇಮಕಾತಿ ಮೀಸಲಾತಿಗೆ ಸಂಬಂಧಪಟ್ಟ ಆಜ್ಞೆಗಳು ಪದೋನ್ನತಿ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಅಂಥ ಹುದ್ದೆಗಳಲ್ಲಿ ಮುಸ್ಲಿಮರ ಸಲುವಾಗಿ ಶೇಕಡ ೨೫ರ ಕೋಟಾವನ್ನು ಭದ್ರಗೊಳಿಸಲು ಸಾಧ್ಯವಿಲ್ಲ. ಇನ್ನು ನೇರಭರ್ತಿಯ ಮೂಲಕ ಹಾಗೂ ಪದೋನ್ನತಿ ಮೂಲಕ ನೇಮಿಸಿಕೊಳ್ಳಲಾಗುವ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗಳ ವಿಚಾರ. ಆ ಹುದ್ದೆಗಳಲ್ಲಿ ಮುಸ್ಲಿಮರ ಕೊರತೆಗೆ ಕಾರಣವೆಂದರೆ ಇತ್ತೀಚೆಗೆ ಮುಸ್ಲಿಂ ಅಭ್ಯರ್ಥಿಗಳಿಗೆ ನೇಮಕಾತಿಯನ್ನು ಪ್ರಸ್ತಾಪಿಸಿದ್ದರೂ ಅವರು ಅದನ್ನು ಸ್ವೀಕರಿಸಲು ನಿರಾಕರಿಸಿದ್ದು.

ಇ) ಈಗಾಗಲೇ ಹೇಳಿದ ಮೇರೆಗೆ, ಜಾತಿಯ ಆಧಾರದ ಮೇಲೆ ಪದೋನ್ನತಿಗಳನ್ನು ಮಾಡಲಾಗುವುದಿಲ್ಲ.

ಈ) ನೇರವಾಗಿ ನೇಮಕವಾಗಿರುವ ಮತ್ತು ಸರ್ಕಾರದ ಅಧೀನದಲ್ಲಿ ಖಾಯಂ ಹುದ್ದೆಗಳನ್ನು ಹೊಂದಿರುವ ಇತರ ಹಂಗಾಮಿ ಸಿಬ್ಬಂದಿಯ ಖಾಯಂಗಳನ್ನು ಅಲ್ಪಸಂಖ್ಯಾತ ಕೋಮುಗಳಿಗೆ ನೇಮಕಾತಿಗಳಲ್ಲಿ ಮೀಸಲಾತಿ ಆಜ್ಞೆಯ ಅಗತ್ಯಗಳನ್ನು ಯಥಾರೀತಿ ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ. ಆದರೆ, ಪದೋನ್ನತಿಯ ಮೂಲಕ ಮಾಡಲಾಗುವ ನೇಮಕಾತಿಗಳ ಸಂದರ್ಭದಲ್ಲಿ ಪ್ರಮಾಣದಲ್ಲಿ ಹೊಂದಾಣಿಕೆಯನ್ನು ಮಾಡಲಾಗುವುದಿಲ್ಲ. ಹುದ್ದೆಗಳಲ್ಲಿ ಕಡಿತವನ್ನು ಮಾಡುವ ಸಂದರ್ಭದಲ್ಲಿ ಮಾತ್ರ ಕೋಮುವಾರು ಪ್ರಾತಿನಿಧ್ಯ ನಿಯಮಾವಳಿಯ ಪಾಲನೆಯನ್ನು ಕುರಿತು ಆಜ್ಞೆಗಳನ್ನು ಯಥಾರೀತಿ ಅನುಸರಿಸಲಾಗುತ್ತದೆ.

ಉ) ನಿರ್ಮಾಣ ಕಾಮಗಾರಿಗಳನ್ನು ಮತ್ತು ನಿರ್ವಹಣಾ ಕಾಮಗಾರಿಗಳನ್ನು ಸಬ್‌ಡಿವಿಜನಲ್ ಆಫೀಸರ್‌ಗಳಿಗೆ ಮತ್ತು ಅಧೀನ ಅಧಿಕಾರಿಗಳಿಗೆ ಯಾವುದೇ ಕೋಮು ಆಧಾರದ ಮೇಲೆ ನೀಡಲಾಗುವುದಿಲ್ಲ.

ಊ) ಇಲ್ಲ.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಯ ನೇಮಕಾತಿಗೆ ಸಂಬಂಧಪಟ್ಟಹಾಗೆ, ಒಂದು ಸ್ಥಳ ಖಾಲಿಯಿತ್ತೆಂದೂ ಆ ಹುದ್ದೆಗೆ ಅರ್ಹ ಮುಸಲ್ಮಾನರು ಇದ್ದರೂ ಅವರಲ್ಲಿ ಯಾರನ್ನೂ ನೇಮಿಸಲಿಲ್ಲವೆಂದೂ ಆದರೆ ಮಾನ್ಯ ಮಂತ್ರಿಗಳು ಅರ್ಹತೆಯನ್ನು ಸಹ ಹೊಂದಿಲ್ಲದ ವ್ಯಕ್ತಿಯನ್ನು ನೇಮಿಸಿದರೆಂದೂ ತಾವೇ ಸದನದಲ್ಲಿ ಹೇಳಿದ ವಿಚಾರವನ್ನು ನಾನು ಕೇಳಬಹುದೆ? ನಾನು ಅವರಿಗೆ ಸದರಿ ನೇಮಕಾತಿಯು ಸಭೆಯು ಮುಕ್ತಾಯವಾದ ನಂತರ ಮಾಡಲಾಗುವುದೆಂದೂ ಆ ಕುರಿತು ನಾವು ನಿಲುವಳಿ ಸೂಚನೆಯನ್ನು ಮಂಡಿಸಬೇಕಾಗುವುದೆಂದೂ ಸದನದಲ್ಲಿ ಹೇಳಿದ್ದುಂಟಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಸ್ನೇಹಿತರಿಗೆ ಪೂರ್ಣವಾಗಿ ತಪ್ಪು ತಿಳಿವಳಿಕೆಯಾಗಿದೆ. ಆ ಹುದ್ದೆಯ ಚಾಲ್ತಿ ಕರ್ತವ್ಯಗಳ ಕಾರ್ಯಭಾರವನ್ನು ವಹಿಸಿಕೊಳ್ಳಲು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೇಳಲಾಗಿತ್ತು ಅಷ್ಟೆ. ಆ ಹುದ್ದೆಗೆ ಯಾವುದೇ ನೇಮಕಾತಿ ಮಾಡಿಲ್ಲ.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ನೀವು ಹೇಳಿದ್ದು ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಕಾರ್ಯಭಾರವನ್ನು ನಿರ್ವಹಿಸುವುದು ಮಾತ್ರ ಎಂಬುದಾಗಿ. ಆದರೆ ಈ ವ್ಯಕ್ತಿಯು ಒಂದೆರಡು ದಿನ ಕಾರ್ಯಭಾರವನ್ನು ನಿರ್ವಹಿಸುತ್ತಿಲ್ಲ, ತಿಂಗಳುಗಟ್ಟಲೆಯಿಂದ ನಿರ್ವಹಿಸುತ್ತಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಇದೇ ಏನು ಭಾರತೀಯ ಕಾರ್ಯದಕ್ಷತೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಸ್ನೇಹಿತರಿಗೆ ತಮ್ಮ ಅಭಿಪ್ರಾಯಗಳನ್ನು ಹೊಂದಿರುವ ಸ್ವಾತಂತ್ರ್ಯವುಂಟು.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ನಮ್ಮ ಅಭಿಪ್ರಾಯದಲ್ಲಿ ಇಡೀ ಇಲಾಖೆಯು ಅತ್ಯಂತ ಅದಕ್ಷವಾಗಿದೆ. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಹುದ್ದೆಯ ಸಂಬಂಧದಲ್ಲಿ ಅವರ ಬಳಿಯಿರುವ ಪಟ್ಟಿಯ ಬಗ್ಗೆ ಹೇಳಬೇಕಾದರೆ, ಇಡೀ ಪಟ್ಟಿಯಲ್ಲಿ ಒಬ್ಬ ಮುಸ್ಲಿಮನೂ ಇಲ್ಲ.

**ಅಧ್ಯಕ್ಷರು :** ಆರ್ಡರ್, ಆರ್ಡರ್, ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕೇಳುವರೆ?

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ನಾನು ಅದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಮುಸ್ಲಿಮರಾರೂ ಇಲ್ಲವೆಂಬ ಸಂಗತಿಯು ನಿಜವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರರಿಗೆ ಅದು ಹೇಗೆ ಗೊತ್ತಾಯಿತು? ಆ ಪಟ್ಟಿ ಇನ್ನೂ ನನಗೇ ತಲುಪಿಲ್ಲ.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಫಲಿತಾಂಶವೆಂದರೆ ಆ ಪಟ್ಟಿಯಲ್ಲಿ ಒಬ್ಬ ಮುಸ್ಲಿಮನೂ ಇಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಥ ಹೇಳಿಕೆ ನನ್ನ ಮಾನ್ಯ ಮಿತ್ರರು ಹೇಗೆ ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಈವರೆಗೆ ಸರ್ಕಾರ ಯಾವುದೇ ಕ್ರಮಕೈಗೊಂಡಿಲ್ಲ.

**ಅಧ್ಯಕ್ಷರು :** ಆರ್ಡರ್, ಆರ್ಡರ್.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಮಾನ್ಯ ಮಂತ್ರಿಗಳು ತಾವು ಸೂಪರಿಂಟೆಂಡಿಂಗ್ ಇಂಜಿನಿಯರ್ ಬಗ್ಗೆ ತಯಾರಿಸಿದ ಪಟ್ಟಿಯಲ್ಲಿ ಒಬ್ಬ ಮುಸಲ್ಮಾನನೂ ಇಲ್ಲ ಎಂಬ ಸಂಗತಿಯನ್ನು ನಿರಾಕರಿಸುವರೆ?

**ಅಧ್ಯಕ್ಷರು :** ಆರ್ಡರ್, ಆರ್ಡರ್.

**ಮಿ॥ ಅಹಮದ್ ಇ.ಎಚ್. ಜಾಫರ್ :** ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಮತ್ತು ಇತರ ಹುದ್ದೆಗಳ ನೇಮಕಾತಿಗಳಲ್ಲಿ ಮುಸ್ಲಿಮರ ಶೇಕಡಾವಾರು ೧೯೩೪ರ ಗೃಹ ಇಲಾಖೆಯ ಜಿ. ಆರ್. ನ ಅಡಿಯಲ್ಲಿ ಮುಸಲ್ಮಾನರಿಗೆ ನಿಗದಿಪಡಿಸಿದ ಕೋಟಾಕ್ಕಿಂತ ಎಷ್ಟೋ ಕಡಿಮೆಯಾಗಿದೆಯೆಂಬ ಸಂಗತಿಯನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಲು ಸಿದ್ಧರಿದ್ದಾರೆಯೆ ಮತ್ತು ಹಾಗಿದ್ದರೆ, ಕೋಟಾವನ್ನು ಕಾಪಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಿದ್ದಾರೆ?

**ಅಧ್ಯಕ್ಷರು :** ಮಾನ್ಯ ಮಂತ್ರಿಗಳು ಅದಕ್ಕೆ ಈಗಾಗಲೇ ಉತ್ತರ ನೀಡಿದ್ದಾರಲ್ಲವೆ?

**ಮಿ॥ ಅಹಮದ್ ಇ.ಎಚ್. ಜಾಫರ್ :** ಇಲ್ಲ, ಸ್ವಾಮಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಕಿಅಂಶಗಳು ಸಾಕಷ್ಟು ಸ್ಪಷ್ಟವಾಗಿವೆ.

**ಮಿ॥ ಅಹಮದ್ ಇ. ಎಚ್. ಜಾಫರ್ :** ಅಂದರೆ ಮಾನ್ಯ ಮಂತ್ರಿಗಳು ಮುಸ್ಲಿಮರ ಕೋಟಾ ಶೇಕಡ ೨೫ಕ್ಕಿಂತ ಎಷ್ಟೋ ಕಡಿಮೆಯಾಗಿದೆಯೆಂದು ಒಪ್ಪಿಕೊಳ್ಳುತ್ತಾರೆ ಎಂದ ಹಾಗಾಯಿತು. ಮುಸ್ಲಿಮರ ಕೋಟಾ ಸರಿಯಾಗಿರುವಂತೆ ನೋಡಿಕೊಳ್ಳಲು ಮಾನ್ಯ ಮಂತ್ರಿಗಳು ಶೀಘ್ರ ಕ್ರಮಕೈಗೊಳ್ಳುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಪ್ರಶ್ನೆಯ ಭಾಗ ಇ) ಗೆ ಕೊಟ್ಟ ಉತ್ತರದ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯಲಾಗಿದೆ.

**ಡಾ॥ ಸರ್ ಜಿಯಾಉದ್ದೀನ್ ಅಹಮ್ಮದ್ :** ಆ ಸಂಗತಿಯನ್ನು ಒಪ್ಪಿಕೊಂಡರೆ, ಮುಸ್ಲಿಮರ ನೇಮಕಾತಿಯಾಗುವುದೇ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳು ಆ ಕೆಲಸವನ್ನು ಮಾಡಲು ಬೇರೆ ಯಾರನ್ನಾದರೂ ಕೇಳಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಜವಾದ ದೂರು ಇರುವುದು ಗೃಹ ಇಲಾಖೆಯು ಹೊರಡಿಸಲಾದ ಸುತ್ತೋಲೆಯ ವಿರುದ್ಧವೇ ಹೊರತು ಕಾರ್ಮಿಕ ಇಲಾಖೆಯ ವಿರುದ್ಧವಲ್ಲ.

## ೪೬೨
## ಕೈಗಾರಿಕಾ ನಿಯೋಜನೆಯ (ಸ್ಥಾಯಿ ಆದೇಶಗಳು) ವಿಧೇಯಕ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಇಲಾಖೆಯ ಮಂತ್ರಿಗಳು) : ಕೈಗಾರಿಕಾ ಉದ್ಯಮ ಸಂಸ್ಥೆಗಳ ನಿಯೋಜಕರು ತಮ್ಮ ಅಧೀನದಲ್ಲಿರುವ ನಿಯೋಜನೆಯ ಷರತ್ತುಗಳನ್ನು ಔಪಚಾರಿಕವಾಗಿ ವ್ಯಾಖ್ಯಾನಿಸುವಂತೆ ಅವರನ್ನು ಅಗತ್ಯಪಡಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

**ದಿವಾನ್ ಚಮನ್‌ಲಾಲ್ (ಪಶ್ಚಿಮ ಪಂಜಾಬ – ಮುಸ್ಲಿಮೇತರ) :** ಕ್ರಿಯಾಲೋಪವನೆತ್ತಿ ಇನ್ನೊಂದು ವಿಧೇಯಕದ ಚರ್ಚೆ ನಡೆಯುತ್ತಿರುವಾಗ ಈ ವಿಧೇಯಕವನ್ನು ಹೇಗೆ ಮಂಡಿಸಲಾಗುತ್ತಿದೆಯೆಂದು ಕೇಳಬಹುದೆ? ಇನ್ನೊಂದು ವಿಧೇಯಕವನ್ನು ಕುರಿತ ಚರ್ಚೆ ಆದ ತರುವಾಯ, ಈ ವಿಧೇಯಕವನ್ನು ಎತ್ತಿಕೊಳ್ಳುವುದು ಉಚಿತವಲ್ಲವೆ?

**ಅಧ್ಯಕ್ಷರು :** ಈ ಸದನದ ಮುಂದೆ ಇತ್ಯರ್ಥದಲ್ಲಿರುವ ಇನ್ನೊಂದು ವಿಧೇಯಕದ ಚರ್ಚೆಯನ್ನು ನಾವು ಪ್ರಾರಂಭಿಸಿಲ್ಲ. ಇದು ಕೇವಲ ಔಪಚಾರಿಕ ವಿಚಾರ. ಇದು ಹೆಚ್ಚು ಅನುಕೂಲಕರ. ಇದಲ್ಲದೆ, ನನಗೆ ತಿಳಿದ ಮಟ್ಟಿಗೆ ಸದನದ ಮುಂದೆ ಇತ್ಯರ್ಥದಲ್ಲಿರುವ ವಿಷಯವನ್ನು ಮುಂದಕ್ಕೆ ಹಾಕಿದ ಪೂರ್ವ ನಿದರ್ಶನಗಳುಂಟು. ಇದು ಕೇವಲ ಪ್ರಕ್ರಿಯೆಯ ಮತ್ತು ಹೊಂದಾಣಿಕೆಯ ವಿಚಾರ.

ಪ್ರಸ್ತುತ ವಿಷಯವೆಂದರೆ : "ಕೈಗಾರಿಕಾ ಉದ್ಯಮ ಸಂಸ್ಥೆಗಳ ನಿಯೋಜಕರು ತಮ್ಮ ಅಧೀನದಲ್ಲಿರುವ ನಿಯೋಜನೆಯ ಷರತ್ತುಗಳನ್ನು ವ್ಯಾಖ್ಯಾನಿಸುವಂತೆ ಅವರನ್ನು ಅಗತ್ಯಪಡಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕೆಂದು ಕೋರಲಾಗಿದೆ."

ನಿರ್ಣಯವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ವಿಧೇಯಕವನ್ನು ಮಂಡಿಸುತ್ತಿದ್ದೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೮, ೧೯೪೬. ಪುಟ ३६६೭

# ೪೬೩
# ಕಾರ್ಮಿಕ ತನಿಖಾ ಸಮಿತಿಯ ವರದಿಗಳು ಸದನದ ಮುಂದೆ ಇಡಲಾದ ಕಾಗದಪತ್ರಗಳು*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಮಂತ್ರಿಗಳು) : ಕಾರ್ಮಿಕ ತನಿಖಾ ಸಮಿತಿಯು ಸಲ್ಲಿಸಿದ ಕೆಳಕಂಡ ವರದಿಗಳನ್ನು ನಾನು ಸದನದ ಮುಂದೆ ಇಡುತ್ತಿದ್ದೇನೆ.

೧. ಭಾರತದ ರೇಷ್ಮೆ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.
೨. ಭಾರತದ ಸಿಮೆಂಟ್ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.
೩. ಕಾರ್ಪೆಟ್ ನೇಯುವ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೪. ಕಬ್ಬಿಣದ ಅದಿರು ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೫. ತೆಂಗಿನ ನಾರಿನ ಚಾಪೆಗಳು ಮತ್ತು ಚಾಪೆಗಳ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೬. ಅಭ್ರಕದ ಗಣಿ ಮತ್ತು ಅಭ್ರಕದ ತಯಾರಿಕೆ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೭. ಭಾರತದ ಹಡಗು ಕಟ್ಟೆಗಳಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೮. ಅರಗು ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೯. ರಿಕ್ಷಾಗಾಡಿ ಎಳೆಯುವವರನ್ನು ಕುರಿತ ವರದಿ.
೧೦. ಅಕ್ಕಿ ಗಿರಣಿಗಳಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೧೧. ಗಾಜಿನ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೧೨. ಬೀಡಿ, ಸಿಗಾರ್ ಮತ್ತು ಸಿಗರೇಟ್ ಕೈಗಾರಿಕೆಗಳಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.
೧೩. ಭಾರತದ ಪ್ಲಾಂಟೇಷನುಗಳಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.
೧೪. ಭಾರತದ ಚಿನ್ನದ ಗಣಿ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೧೫. ಕುಂಬಾರಿಕೆ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೧೬. ರಾಸಾಯನಿಕ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವರದಿ.
೧೭. ಭಾರತದ ಮ್ಯಾಂಗನೀಸ್ ಗಣಿ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.
೧೮. ಭಾರತದ ಖನಿಜ ತೈಲ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೯, ೧೯೪೬. ಪುಟ ೩೭೪೪.

೧೯. ಭಾರದದ ಉಣ್ಣೆ ಬಟ್ಟೆ ಕೈಗಾರಿಕೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.

೨೦. ಭಾರತದಲ್ಲಿ ಕಾಗದದ ಕಾರ್ಖಾನೆಗಳ ಉದ್ದಿಮೆಯಲ್ಲಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ವರದಿ.

**ಶ್ರೀ ಎನ್. ವಿ. ಗಾಡ್ಗೀಳ್ :** ಈ ಕಾಗದಪತ್ರಗಳನ್ನು ವಿತರಿಸಲಾಗಿಲ್ಲ. ಅವುಗಳನ್ನು ಕೋರಿರುವ ಸದಸ್ಯರುಗಳಿಗೆ ಅವುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾನ್ಯ ಸದಸ್ಯರು ಮಾಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಖಂಡಿತವಾಗಿಯೂ ಪರಿಶೀಲಿಸಲಾಗುವುದು. ಸ್ವಾಮಿ, ಅವುಗಳ ಸಾಕಷ್ಟು ಪ್ರತಿಗಳು ನಮ್ಮಲ್ಲಿಲ್ಲ.

**ಗೌರವಾನ್ವಿತ ಅಧ್ಯಕ್ಷರು :** ಯಾರು ಕೇಳುವರೋ ಅವರಿಗೆ ಮಾತ್ರ ಪ್ರತಿಗಳನ್ನು ಒದಗಿಸುವುದು ಸದ್ಯದ ಕೋರಿಕೆಯಾಗಿದೆ.

## ೪೬೪
## ಕನಿಷ್ಠ ಮಜೂರಿ ವಿಧೇಯಕ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ಕೆಲವು ನಿಯೋಜನೆಗಳಲ್ಲಿ ಕನಿಷ್ಠ ಮಜೂರಿಯನ್ನು ನಿಗದಿಪಡಿಸುವ ಬಗ್ಗೆ ಏರ್ಪಾಟು ಮಾಡುವ ವಿಧೇಯಕವನ್ನು ಮಂಡಿಸಲು ನಾನು ಅನುಮತಿ ಕೋರುತ್ತೇನೆ.

**ಅಧ್ಯಕ್ಷರು :** ವಿಷಯವೇನೆಂದರೆ.

"ಕೆಲವು ನಿಯೋಜನೆಗಳಲ್ಲಿ ಕನಿಷ್ಠ ಮಜೂರಿಯನ್ನು ನಿಗದಿಪಡಿಸುವ ಬಗ್ಗೆ ಏರ್ಪಾಡು ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕಾಗಿ ಕೋರಿಕೆ" ಮಂಡನೆಯನ್ನು ಅಂಗೀಕರಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ವಿಧೇಯಕವನ್ನು ಮಂಡಿಸುತ್ತೇನೆ.

## ೪೬೫
## ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ವಿಧೇಯಕ ವಿಚಾರಣಾ ಸಮಿತಿಯ ವರದಿಯನ್ನು ಸಾದರಪಡಿಸುವುದು*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಮಂತ್ರಿ) : ಸ್ವಾಮಿ, ಅಭ್ರಕದ ಗಣಿ ಉದ್ಯಮದಲ್ಲಿ ನಿಯೋಜಿತರಾದ ಕಾರ್ಮಿಕರ ಕಲ್ಯಾಣದ ಸಂವರ್ಧನೆಯ ಕಾರ್ಯಚಟುವಟಿಕೆಗಳಿಗೆ ಹಣಕಾಸು ವಿನಿಯೋಗಿಸಲು ಒಂದು ನಿಧಿಯನ್ನು ರಚಿಸಲು ಏರ್ಪಟ್ಟ ವಿಧೇಯಕದ ಮೇಲೆ ವಿಚಾರಣಾ ಸಮಿತಿಯು ಸಲ್ಲಿಸಿದ ವರದಿಯನ್ನು ಸಾದರಪಡಿಸಲು ಅನುಮತಿಯನ್ನು ಕೋರುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೧, ೧೯೪೬. ಪುಟ ३೮೪೭

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೧, ೧೯೪೬. ಪುಟ ३೮೪೭

## ೪೬೬
## ಥೋರಿಯಂ ನಿಕ್ಷೇಪಗಳು **

**೧೭೪೦. ಮಿ॥ ಅಹಮ್ಮದ್ ಇ.ಎಚ್. ಜಾಫರ್ :** ಅಣುಶಕ್ತಿಯ ತಯಾರಿಕೆಯಲ್ಲಿ ಬಳಸಲಾಗುವ ಥೋರಿಯಂ ನಿಕ್ಷೇಪಗಳನ್ನು ಭಾರತದ ಅನೇಕ ಭಾಗಗಳಲ್ಲಿ ಕಂಡುಹಿಡಿಯಲಾಗಿದೆಯೆ ಹೇಗೆ ಎಂಬುದನ್ನು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರ ಗಮನವನ್ನು ಈ ಸದನದಲ್ಲಿ ೧೨೭೬ನೆಯ ಚುಕ್ಕೆಗುರುತಿನ ಪ್ರಶ್ನೆಗೆ ೧೯೪೬ನೇ ಮಾರ್ಚ್ ೨೬ರಂದು ನೀಡಿದ ಉತ್ತರದ ಕಡೆಗೆ ಸೆಳೆಯಲಾಗಿದೆ.

**ಮಿ॥ ಅಹಮ್ಮದ್ ಇ.ಎಚ್. ಜಾಫರ್ :** ತಿರವಾಂಕೂರು ಸಂಸ್ಥಾನದಲ್ಲಿ ಗಣನೀಯ ಪ್ರಮಾಣದಲ್ಲಿ ಥೋರಿಯಂ ನಿಕ್ಷೇಪಗಳನ್ನು ಕಂಡುಹಿಡಿಯಲಾಗಿದೆಯೆಂಬ ಸಂಗತಿಯು ನಿಜವೆ? ಹಾಗಿದ್ದರೆ, ಸರ್ಕಾರದವರು ಆ ನಿಕ್ಷೇಪಗಳ ವಿಲೇವಾರಿಯನ್ನು ನಿಯಂತ್ರಿಸುವ ವಿಚಾರದಲ್ಲಿ ಯಾವುದೇ ಕ್ರಮಗಳನ್ನು ಕೈಗೊಂಡಿದ್ದಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ದೇಶೀಯ ಸಂಸ್ಥಾನವಾಗಿರುವ ಕಾರಣ, ಈ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಹಸ್ತಕ್ಷೇಪ ಮಾಡಲು ಯಾವುದೇ ಹಕ್ಕು ಇಲ್ಲ.

**೧೭೪೩. ಸರದಾರ್ ಮಂಗಲ ಸಂಗ್ :** ಕಾರ್ಮಿಕ ಇಲಾಖೆಯಯ ಮಾನ್ಯ ಮಂತ್ರಿಗಳು ಮುಂದಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೆಹಲಿ ಮತ್ತು ನವದೆಹಲಿಯ ನಿವಾಸಗಳಿಗಾಗಿ ಸಲುವಾಗಿ ಸರ್ಕಾರ ಎಷ್ಟು ರೆಫ್ರಿಜಿರೇಟರ್‌ಗಳನ್ನು ಖರೀದಿಮಾಡಿದೆ?

ಆ) ಆ ಕಟ್ಟಡಗಳ ನಿವಾಸಗಳಿಗೆ ಯಾವ ನಿಬಂಧನೆಗಳು ಹಾಗೂ ಷರತ್ತುಗಳ ಮೇಲೆ ಆ ರೆಫ್ರಿಜಿರೇಟರ್‌ಗಳನ್ನು ಬಾಡಿಗೆಗೆ ಕೊಡಲಾಗಿದೆ?

ಇ) ರೆಫ್ರಿಜಿರೇಟರ್‌ಗಳನ್ನು ಖಾಯಂ ಆಗಿ ಅಥವಾ ಹಂಗಾಮಿಯಾಗಿ ಒದಗಿಸಲಾದ ಎಸ್ಟೇಟ್ ಆಫೀಸಿನ ಮತ್ತು ಲೋಕೋಪಯೋಗಿ ಇಲಾಖೆಯ ನೌಕರರ ವಿವರಗಳೇನು?

ಈ) ಕೇಂದ್ರೀಯ ವಿಧಾನಮಂಡಲದ ಮಾನ್ಯ ಸದಸ್ಯರು ಅಧಿವೇಶನಗಳಿಗೆ ಮತ್ತು ಸಮಿತಿಗಳ ಕೆಲಸಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಮೇಲೆ ಆ ಕಟ್ಟಡಗಳಲ್ಲಿ ವಾಸಮಾಡುವಾಗ ಅವರಿಗೆ ಅವು ಯಾಕೆ ಲಭ್ಯವಾಗುತ್ತಿಲ್ಲ?

ಉ) ಆ ಕಟ್ಟಡಗಳಲ್ಲಿ ವಾಸವಾಗಿಲ್ಲದ ಆಫೀಸಿನ ಮತ್ತು ಇಲಾಖೆಯ ನೌಕರರ ಪೈಕಿ ಬಹುತೇಕ ಮಂದಿಗೆ ಅವುಗಳನ್ನು ಒದಗಿಸಲಾಗಿದೆಯೆಂಬ ಸಂಗತಿಯು ನಿಜವೆ?

ಊ) ಅವುಗಳನ್ನು ಆಫೀಸಿನ ಮತ್ತು ಇಲಾಖೆಯ ಸಿಬ್ಬಂದಿ ವರ್ಗದವರ ಮನೆಗಳಿಂದ ವಾಪಸ್ಸು ಪಡೆದುಕೊಂಡು, ಕೇಂದ್ರೀಯ ವಿಧಾನಮಂಡಲದ ಮಾನ್ಯ ಸದಸ್ಯರಿಗೆ ಒದಗಿಸುವ ಆಲೋಚನೆ ಸರ್ಕಾರಕ್ಕಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ೩೩೪ ಆ)ದಲ್ಲಿ ಮತ್ತು ನವದೆಹಲಿಯಲ್ಲಿ ರೇಫ್ರಿಜಿರೇಟರ್‌ಗಳ ಹಂಚಿಕೆಗೆ ಸಂಬಂಧಿಸಿದ ನಿಯಮಾವಳಿಯಲ್ಲಿ ಬಾಡಿಗೆಯ ನಿಬಂಧನೆಗಳನ್ನೂ

---

** ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ೧೯೪೬. ಪುಟ ೩೮೭೩

ಷರತ್ತುಗಳನ್ನು ಗೊತ್ತುಪಡಿಸಲಾಗಿದೆ. ಅದರ ಪ್ರತಿಯನ್ನು ಸದನದ ಮುಂದೆ ಇಡಲಾಗಿದೆ.

ಇ) ೧೯೪೬ರ ಬೇಸಿಗೆಯ ಸಲುವಾಗಿ ಒಂದು ರೆಫ್ರಿಜಿರೇಟರ್ ಅನ್ನು ಒಬ್ಬನೇ ಒಬ್ಬ ಅಧಿಕಾರಿಗೆ ಅಂದರೆ ಅಡಿಷನಲ್ ಚೀಫ್ ಸೆಕ್ರೆಟರಿ, ಕೇಂದ್ರೀಯ ಲೋಕೋಪಯೋಗಿ ಇಲಾಖೆ ಇವರಿಗೆ ಒದಗಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.

ಊ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

* * *

**ದಿವಾನ್ ಚಮನ್‌ಲಾಲ್ :** ಈ)ಗೆ ಕೊಟ್ಟ ಉತ್ತರವನ್ನು ಉಲ್ಲೇಖಿಸುತ್ತ, ವಿಧಾನಮಂಡಲದ ಸದಸ್ಯರಿಗೆ ಅವುಗಳನ್ನು ಏಕೆ ಒದಗಿಸಲಾಗುತ್ತಿಲ್ಲ ಎಂದು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಿಯಮಗಳ ಅಡಿಯಲ್ಲಿ ಅವುಗಳನ್ನು ಒದಗಿಸಲಾಗುವುದಿಲ್ಲ.

**ಮಿಸ್॥ ಮನುಸುಬೇದಾರ್ :** ಯುದ್ಧಕಾಲದಲ್ಲಿ ಸರ್ಕಾರವು ಖಾಸಗಿ ವ್ಯಕ್ತಿಗಳಿಂದ ತೆಗೆದುಕೊಂಡ ರೆಫ್ರಿಜಿರೇಟರ್‌ಗಳು ಏನಾದವು ಎಂದು ನಾನು ಕೇಳಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಪ್ರಶ್ನೆಗೆ ಉತ್ತರಿಸಲು ನನಗೆ ಕಾಲಾವಕಾಶ ಬೇಕು.

## ೪೬೭
## ನವದೆಹಲಿಯ ಹನುಮಾನ್ ಲೇನ್‌ನಲ್ಲಿರುವ ನಂ. ೪೨–ಬಿ ಮನೆಯನ್ನು ಕಡ್ಡಾಯ ಸ್ವಾಧೀನತೆಗೆದುಕೊಳ್ಳುವ ವಿಚಾರ*

**೧೭೫೬. ಮಿ॥ ಬಿ. ಗೋಳೆ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಸರ್ಕಾರವು ಕಡ್ಡಾಯ ಸ್ವಾಧೀನದಿಂದ ತೆಗೆದುಕೊಂಡ ನವದೆಹಲಿಯ ಹನುಮಾನ್‌ಲೇನಿನ ೪೨ ಬಿ ಸಭೆಯ ಮನೆ ಬಹಳ ಸಮಯದಿಂದಲೂ ಖಾಲಿಬಿದ್ದಿದೆಯೆಂಬ ಸಂಗತಿಯು ನಿಜವೆ? ಹಾಗಿದ್ದರೆ, ಎಂದಿನಿಂದ ಖಾಲಿಬಿದ್ದ ಮನೆಯ ಬಾಡಿಗೆಯನ್ನು ಸರ್ಕಾರವು ಎಂದಿನಿಂದ ಸಂದಾಯಮಾಡುತ್ತಿದೆ?

ಆ) ಸರ್ಕಾರವು ಅದನ್ನು ಕಡ್ಡಾಯ ಸ್ವಾಧೀನತೆಗೆದುಕೊಳ್ಳುವಾಗ ಅದರಲ್ಲಿ ಮಿ॥ ಮೋಹನ ಲಾಲ್ ತುಲಿ ಅವರು ವಾಸವಾಗಿದ್ದರೆಂಬ ಸಂಗತಿಯು ನಿಜವೆ?

ಇ) ಆ ಮನೆಯನ್ನು ಮಿ॥ ಮನೋಹರಲಾಲ್ ಅವರು ಖಾಲಿ ಮಾಡಿದಾಗ ಅದು ನಾದುರಸ್ತು ಸ್ಥಿತಿಯಲ್ಲಿದ್ದಿತೆಂದೂ ಅದರ ಹಂಚಿಕೆಯನ್ನು ಪಡೆದ ಯಾರೂ ಅಲ್ಲಿ ವಾಸಮಾಡಲು ಸಿದ್ಧರಿರಲಿಲ್ಲವೆಂಬ ಸಂಗತಿಯು ನಿಜವೆ?

ಈ) ಸರ್ಕಾರವು ಈಗ ಆ ಮನೆಯನ್ನು ಬಿಟ್ಟುಕೊಡಲು ಪ್ರಸ್ತಾವಿಸುತ್ತಿದೆಯೆಂಬ ಸಂಗತಿಯು ನಿಜವೆ?

ಉ) ಆ ಮನೆಯನ್ನು ಸರ್ಕಾರವು ಬಿಟ್ಟುಕೊಡಲಿರುವ ಖಚಿತ ದಿನಾಂಕ ಯಾವುದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಆ ಮನೆಯನ್ನು ೧೯೪೫ ಫೆಬ್ರವರಿ ೧೫ರಂದು ಒಬ್ಬ ಆಫೀಸರಿಗೆ ಹಂಚಿಹಾಕಲಾಯಿತು. ಆದರೆ ಅವರು ಅದರಲ್ಲಿ ವಾಸಮಾಡಲಿಲ್ಲವಾದ ಕಾರಣ ಅದು ಆ ತಾರೀಖಿನ ಲಾಗಾಯಿತು ಖಾಲಿಬಿದ್ದಿದೆ. ಸರ್ಕಾರವು ಮನೆ ಖಾಲಿ ಬಿದ್ದಸಮಯದಿಂದಲೂ ಬಾಡಿಗೆ ಪಾವತಿ ಮಾಡುತ್ತಿದೆ.

ಆ) ಹೌದು.

ಇ) ಇಲ್ಲ.

ಈ) ಹೌದು.

ಉ) ಪ್ರಶ್ನೆಯ (ಈ) ಭಾಗಕ್ಕೆ ಉತ್ತರ ಕೊಟ್ಟಿರುವ ಕಾರಣ ಪ್ರಶ್ನೆಯ ಉತ್ತರ ಭಾಗವು ಉದ್ಭವಿಸುವುದಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ಪು. ೩೮೮೬.

# ೪೬೮
# ಮರ್ಚೆಂಟ್ ನೇವಿಯ ಆಫೀಸರುಗಳಿಗೆ ರಾಷ್ಟ್ರೀಯ ಕಾರ್ಮಿಕ ನ್ಯಾಯ ಮಂಡಳಿಯ ಅಧ್ಯಾದೇಶವನ್ನು ಅನ್ವಯಿಸುವುದು*

**೧೭೫೭. ಮಿಸ್ ಮಣಿಬೆನ್ ಕಾರಾ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವರೆ?

ಅ) ೧೯೪೪ರ ಡಿಸೆಂಬರ್‌ನಲ್ಲಿ ಭಾರತದಲ್ಲಿ ರಿಜಿಸ್ಟರ್ ಆದ ನೌಕೆಗಳಲ್ಲಿ ನಿಯೋಜಿತರಾದ ಆಫೀಸರುಗಳಿಗೆ ರಾಷ್ಟ್ರೀಯ ಕಾರ್ಮಿಕ ನ್ಯಾಯಮಂಡಳಿಯ ಅನ್ವಯಿಸಲಾದ ಅಧ್ಯಾದೇಶವನ್ನು ಅನ್ವಯಿಸುವುದು ತುರ್ತುಪರಿಸ್ಥಿತಿಯ ಕ್ರಮವಾಗಿತ್ತೆ?

ಆ) ಅದೇ ಬಗೆಯ ತುರ್ತುಪರಿಸ್ಥಿತಿಯು ಇನ್ನೂ ಮುಂದುವರಿದಿದೆ ಎಂದು ಸರ್ಕಾರವು ಯೋಚಿಸುತ್ತಿದೆಯೆ? ಹಾಗಿದ್ದರೆ, ಕಾರಣಗಳೇನು? ಮತ್ತು

ಇ) ಈ ಅಧ್ಯಾದೇಶವು ನಾವಿಕನ ಸ್ವಾತಂತ್ರ್ಯಗಳ ಮೇಲೆ ವಿಧಿಸುವ ನಿರ್ಬಂಧಗಳ ಕಾರಣ, ಶೀಘ್ರವಾಗಿ ಮರ್ಚಂಟ್ ನೇವಿಯ ಆಫೀಸರುಗಳಿಗೆ ಸಂಬಂಧಪಡುವಷ್ಟು ಮಟ್ಟಿಗಾದರೂ, ಈ ಅಧ್ಯಾದೇಶವನ್ನು ರದ್ದುಗೊಳಿಸಲು ಉದ್ದೇಶಿಸಿರುವರೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅ) ಹೌದು.

ಆ) ಇಲ್ಲ.

ಇ) ೧೯೪೦ರ ರಾಷ್ಟ್ರೀಯ ಸೇವಾ (ತಾಂತ್ರಿಕ ಸಿಬ್ಬಂದಿ) ಅಧ್ಯಾದೇಶದ ಇದರ ಉಪಬಂಧಗಳನ್ನು ೧೯೪೬ರ ಫೆಬ್ರವರಿ ಲಾಗಾಯಿತು ಸಾಮಾನ್ಯವಾಗಿ ಸಡಿಲಿಸಲಾಗಿದೆ. ರಾಷ್ಟ್ರೀಯ ಮಹತ್ವದ ಕಾರ್ಯದಲ್ಲಿ ನಿರತವಾದ ತಾಂತ್ರಿಕ, ಮುಖ್ಯ ತಾಂತ್ರಿಕ ಸಿಬ್ಬಂದಿಯ ಸಂಬಂಧದಲ್ಲಿ ಹೊರತು, ತಾಂತ್ರಿಕ ಸಿಬ್ಬಂದಿಯ ಚಲನವಲನದ ಮೇಲಣ ನಿಯಂತ್ರಣವನ್ನು ಸಡಿಲಿಸಲಾಗಿದೆ. ಹಡಗುಗಳ ಪೈಲೆಟ್‌ಗಳ ಸಂದರ್ಭದಲ್ಲಿ ೧೯೪೬ರ ಏಪ್ರಿಲ್ ಕೊನೆಯವರೆಗೆ ಅವರನ್ನು ಅವರ ಕರ್ತವ್ಯದ ಠಾಣೆಗಳಲ್ಲಿ ಇರುವ ಬಗ್ಗೆ ಅಗತ್ಯವಾದವಷ್ಟು ಮಟ್ಟಿಗೆ ಮಾತ್ರ ಈ ಅಧ್ಯಾದೇಶದ ಉಪಬಂಧಗಳಿಗೆ ಮೊರೆ ಹೋಗಲಾಗುವುದು. ಆ ದಿನಾಂಕದ ಹೊತ್ತಿಗೆ ನಿಯಂತ್ರಣವು ಬಂದರುಗಳಲ್ಲಿ ಆಮದುಮಾಡಲಾದ ಆಹಾರ ಧಾನ್ಯಗಳನ್ನು ತ್ವರೆಯಿಂದ ಸಾಗಿಸುವ ದೃಷ್ಟಿಯಿಂದ ಇನ್ನೂ ಅಗತ್ಯವಿರುವವರೆಗೆ ಅದನ್ನು ಹಿಂತೆಗೆದುಕೊಳ್ಳಲಾಗದೆಂದು ನಿರೀಕ್ಷಿಸಲಾಗಿದೆ. ಇತರ ತಾಂತ್ರಿಕ ಸಿಬ್ಬಂದಿಯ ಚಲನವಲನದ ಮೇಲಣ ನಿಯಂತ್ರಣವನ್ನು ೧೯೪೬ ಏಪ್ರಿಲ್ ತಿಂಗಳ ಕೊನೆಯ ಹೊತ್ತಿಗೆ ಹಿಂತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾಗಿದೆ.

**ಮಿಸ್ ಮಣಿಬೆನ್ ಕಾರಾ :** ಈ ಅಧ್ಯಾದೇಶವನ್ನು ಇಂಡಿಯನ್ ಮರ್ಚಂಟ್ ನೇವಿಯ ಆಫೀಸರುಗಳ ವಿರುದ್ಧ, ಉಪಯೋಗಿಸಲಾಗುತ್ತಿದೆಯೆಂಬ ಮುಖ್ಯವಾಗಿ ಇಂಡಿಯನ್ ಕಂಪನಿಗಳು ಇದಕ್ಕೆ ಒಳಪಡುತ್ತಿವೆಯೆಂದೂ ಮತ್ತು ಈ ಅಧ್ಯಾದೇಶದ ಬೆದರಿಕೆ ತೋರಿಸಿ ಮರ್ಚಂಟ್ ನೇವಿ ಆಫೀಸರುಗಳಿಗೆ ಕಿರುಕುಳ ಕೊಡಲಾಗುತ್ತಿದೆಯೆಂಬ ಸಂಗತಿಯು ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳಿಗೆ ತಿಳಿದಿದೆಯೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ೧೯೪೬. ಪುಟ ೩೮೮೭.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ತಿಳಿದಿಲ್ಲ. ಆದರೆ ನಿರ್ದಿಷ್ಟ ಪ್ರಸಂಗಗಳನ್ನು ನನ್ನ ಗಮನಕ್ಕೆ ತಂದರೆ, ನಾನು ಆ ಕುರಿತು ವಿಚಾರಿಸುತ್ತೇನೆ.

**ಮಿಸ್ ಮಣಿಬೆನ್ ಕಾರಾ :** ಸಿಂಧಿಯಾ ಕಂಪನಿ (ಇಂಡಿಯಾ)ಯು ಈ ಅಧ್ಯಾದೇಶಗಳನ್ನು ಬಳಸಿದ್ದರ ವಿರುದ್ಧ ಮೆರಿಟೈಮ್ ಯೂನಿಯನ್ ಆಫ್ ಇಂಡಿಯಾ ಒಂದು ಅಪೀಲು ಸಲ್ಲಿಸಿತ್ತು ಎಂಬ ಸಂಗತಿಯು ನಿಜವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದಕ್ಕೆ ಉತ್ತರ ನೀಡಲು ನನಗೆ ಸಮಯಾವಕಾಶ ಬೇಕೆಂದು ತೋರುತ್ತದೆ.

**ಅಧ್ಯಕ್ಷರು :** ಅವರಿಗೆ ಸಮಯಾವಕಾಶಬೇಕು.

## ೪೬೯
## ನವದೆಹಲಿ ಮುಂಬಯಿ ಮತ್ತು ಕಲ್ಕತ್ತೆಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ದರಗಳು*

**೧೭೭೧. ಪಂಡಿತ ಠಾಕುರದಾಸ್ ಭಾರ್ಗವ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ?

ಅ) ಕಲ್ಕತ್ತೆ ಮತ್ತು ಮುಂಬಯಿಗಳಲ್ಲಿರುವ ವಿದ್ಯುಚ್ಛಕ್ತಿ ಸರಬರಾಜು ದರಗಳಿಗೆ ಹೋಲಿಸಲಾಗಿ ದೆಹಲಿ ಮತ್ತು ನವದೆಹಲಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ದರಗಳೇನು?

ಆ) ದೆಹಲಿ ಮತ್ತು ನವದೆಹಲಿಯಲ್ಲಿನ ದರಗಳನ್ನು ಕಲ್ಕತ್ತೆ ಮತ್ತು ಮುಂಬಯಿಯಲ್ಲಿರುವ ದರಗಳ ಮಟ್ಟದಲ್ಲಿ ತರಲು ಸಾಧ್ಯವಾಗದಿರಲು ಕಾರಣಗಳೇನು?

ಇ) ಸದ್ಯದಲ್ಲಿ ದೆಹಲಿಯಲ್ಲಿನ ದರಗಳಲ್ಲಿ ಏನಾದರೂ ಇಳಿತವಾಗಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ವಿವರಣೆಯನ್ನು ಸದನದ ಮುಂದೆ ಇಡಲಾಗಿದೆ.

ಆ) ದೆಹಲಿ ಮತ್ತು ನವದೆಹಲಿಯ ದೀಪದ ಮತ್ತು ಫ್ಯಾನಿನ ದರಗಳು ಈಗಾಗಲೇ ಏಕರೂಪವಾಗಿದೆ. ಸಂಬಂಧಪಟ್ಟ ದರಗಳಲ್ಲಿ ಇರುವ ಒಂದಿಷ್ಟು ವ್ಯತ್ಯಾಸಗಳನ್ನು ಹೋಗಲಾಡಿಸುವ ವಿಚಾರ ಪರಿಶೀಲನೆಯಲ್ಲಿದೆ.

ಒಂದೆಡೆ ನವದೆಹಲಿಯ ಮತ್ತು ದೆಹಲಿಯ ದರಗಳ ನಡುವಣ ಇನ್ನೊಂದೆಡೆ ಕಲ್ಕತ್ತೆ ಅಥವಾ ಮುಂಬಯಿ ದರಗಳಿಗೆ ಹೋಲಿಸಲಾದ ದರಗಳ ನುಡವಣ ವ್ಯತ್ಯಾಸಗಳಿಗೆ ಕಾರಣವಿಷ್ಟೆ. ಮುಂಬಯಿ ಮತ್ತು ಕಲ್ಕತ್ತೆಯ ಸರಬರಾಜು ಉದ್ಯಮ ಸಂಸ್ಥೆಯು ಗಣನೀಯ ಪ್ರಮಾಣದಲ್ಲಿ ಮನೆಬಳಕೆ ಮತ್ತು ಕೈಗಾರಿಕೆ ಈ ಎರಡೂ ಕ್ಷೇತ್ರಗಳಲ್ಲಿ ಅಧಿಕ 'ಲೋಡ್' ಹೊಂದಿದ್ದು ದೆಹಲಿಯ ಅಥವಾ ನವದೆಹಲಿಯ ಸಣ್ಣ ಉದ್ಯಮ ಸಂಸ್ಥೆಗಳು ನಿರ್ವಹಿಸುವ ಲೋಡ್‌ಗಿಂತ ಹೆಚ್ಚಿನ ಲೋಡನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ಇದಲ್ಲದೆ, ಸ್ಥಳದಿಂದ ಸ್ಥಳಕ್ಕೆ ಪರಿಸ್ಥಿತಿಗಳು ಭಿನ್ನವಾಗಿರುತ್ತವೆ ಮತ್ತು ಬಳಸಲಾಗುವ ಜನರೇಟಿಂಗ್

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ೧೯೪೬. ಪುಟ ೩೮೯೭.

ಪ್ಲಾಂಟುಗಳ ಪ್ರಕಾರ ಮತ್ತು ಅಂಥ ಪ್ಲಾಂಟಿಗೆ ಸಂಬಂಧಪಟ್ಟ ಇತರ ಸೌಕರ್ಯಗಳು ಸಹ ಇದಕ್ಕೆ ಬಹುತೇಕ ಕಾರಣವಾಗಿರುತ್ತದೆ.

ಇ) ಈ ವಿಷಯದ ಬಗ್ಗೆ ಯಾವುದೇ ಚರ್ಚೆ ಸಾಧ್ಯವಿಲ್ಲ. ಆದರೆ ಈ ವಿಷಯ ಪರಿಶೀಲನೆಯಲ್ಲಿ ಇದೆಯೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

## ೪೭೦
## ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ರಚನೆ *

**೧೭೭೨. ಪಂಡಿತ ಠಾಕುರ್‌ದಾಸ ಭಾರ್ಗವ :** ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವರೆ? ಅ) ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ಕಂಪನಿ ಲಿಮಿಟೆಡ್‌ಯ ರಚನೆ ಹೇಗಿದೆ?

ಆ) ಒಬ್ಬ ಭಾರತೀಯನನ್ನು ಬಿಟ್ಟರೆ ಮಂಡಳಿಯ ಎಲ್ಲ ಸದಸ್ಯರು ಯೂರೋಪಿಯನ್ನರು ಎಂಬ ಸಂಗತಿಯು ನಿಜವೆ?

ಇ) ಸರ್ಕಾರವು ದೆಹಲಿ ಇಲೆಕ್ಟ್ರಿಕ್ ಅಂಡ್ ಟ್ರ್ಯಾಕ್ಷನ್ ಕಂಪನಿ ಲಿಮಿಟೆಡ್ ಅನ್ನು ವಹಿಸಿಕೊಳ್ಳಲು ಉದ್ದೇಶಿಸಿದೆಯೆ? ಆ ಕಂಪನಿಯು ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ಮಂಡಳಿಯಲ್ಲಿ ಪ್ರಾತಿನಿಧ್ಯವನ್ನು ಹೊಂದಿದೆಯೆ?

ಈ) ದೆಹಲಿ ಇಲೆಕ್ಟ್ರಿಕ್ ಅಂಡ್ ಟ್ರಾಕ್ಷನ್ ಕಂಪನಿ, ಲಿಮಿಟೆಡ್ ಅನ್ನು ವಹಿಸಿಕೊಂಡ ಮೇಲೆ ಆ ಕಂಪನಿಯು ಹೊಂದಿದ್ದ ಪ್ರಾತಿನಿಧ್ಯವನ್ನು ದೆಹಲಿ ಪುರಸಭೆಗೆ ಕೊಡುವ ವಿಚಾರದಲ್ಲಿ ಸರ್ಕಾರಕ್ಕೆ ಆಕ್ಷೇಪವೇನಾದರೂ ಇದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಮಾನ್ಯ ಸದಸ್ಯರು ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ಲಿಮಿಟೆಡ್ ಅನ್ನು ಉಲ್ಲೇಖಿಸುತ್ತಿರುವಂತೆ ಕಾಣುತ್ತದೆ. ಸದರಿ ಪ್ರಾಧಿಕಾರದ ಸದಸ್ಯತ್ವದ ವಿವರ ಕೆಳಕಂಡಂತಿದೆ.

೧. ಗವರ್ನರ್ ಜನರಲ್ ಇನ್ ಕೌನ್ಸಿಲ್

೨. ದೆಹಲಿ ಫ್ಯಾಕ್ಟರೀಸ್ ಓನರ್ಸ್ ಫೆಡರೇಶನ್

೩. ಕಮಾಂಡಂಟ್, ದೆಹಲಿ ಇಂಡಿಪೆಂಡೆಂಟ್ ಏರಿಯಾ

೪. ಪಂಜಾಬ್ ಚೇಂಬರ್ ಆಫ್ ಕಾಮರ್ಸ್

೫. ದೆಹಲಿ ಇಲೆಕ್ಟ್ರಿಕ್ ಸಪ್ಲೈ ಅಂಡ್ ಟ್ರಾಕ್ಷನ್ ಕಂಪನಿ ಲಿಮಿಟೆಡ್.

೬. ನವದೆಹಲಿ ಮುನಿಸಿಪಲ್ ಕಮಿಟಿ.

ಅ) ಹೌದು.

ಇ) ಇಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ೧೯೪೬. ಪುಟ ೩೯೯೯

ಈ) ೧೯೩೮ರಲ್ಲಿ ದೆಹಲಿ ಸೆಂಟ್ರಲ್ ವಿದ್ಯುಚ್ಛಕ್ತಿ ಪ್ರಾಧಿಕಾರವನ್ನು ಸ್ಥಾಪಿಸಿದಾಗ, ದೆಹಲಿ ಮುನಿಸಿಪಲ್ ಕಮಿಟಿಯ ನಿಲುವು ಹಾಗಿತ್ತು. ತರುವಾಯ ಆ ವಿಷಯವನ್ನು ಪ್ರಸ್ತಾಪಿಸಿಲ್ಲ.

ಉ) ಹೌದು.

ಊ) ದೆಹಲಿ ಪುರಸಭಾ ಸಮಿತಿಯು ದೆಹಲಿ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ಇದರ ಸದಸ್ಯತ್ವ ಹೊಂದಿಲ್ಲದ ಕಾರಣ, ಅದಕ್ಕೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

## ೪೭೧
## ಭಾರತದ ಖನಿಜ ಸಂಪನ್ಮೂಲಗಳನ್ನು ಕುರಿತು ಡಾ॥ ಕೃಷ್ಣನ್ ಅವರ ಸಲಹೆಗಳು*

**೧೭೭೩. ಪ್ರೊ॥ ಎನ್. ಜಿ. ರಂಗ :** ಅ) ಕಾರ್ಮಿಕ ಇಲಾಖೆಯ ಮಾನ್ಯ ಮಂತ್ರಿಗಳು ದಯವಿಟ್ಟು ಮುಂದಿನ ವಿಷಯಗಳ ಬಗ್ಗೆ ತಿಳಿಸುವರೆ :

ಡಾ॥ ಎಂ.ಎಸ್. ಕೃಷ್ಣನ್ ಅವರು ಮಾರ್ಚ್ ೧೪ನೇ ತಾರೀಖಿನ ಹಿಂದೂನಲ್ಲಿ ವರದಿಯಾದಂತೆ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಭೂವಿಜ್ಞಾನ ಸಂಘದಲ್ಲಿ ಕೊಟ್ಟ ಭಾಷಣ ವರದಿಯು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಆ) ತಾಮ್ರ, ಗಂಧಕ ನಿಕ್ಕಲ್, ಪ್ಲಾಟಿನಮ್, ತವರ, ಪಾದರಸ ಗ್ರಾಫಾಯಿಟ್–ಇವುಗಳ ಮೀಸಲು ದಾಸ್ತಾನುಗಳನ್ನು ಏರ್ಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?

ಇ) ಯಾವ ಪ್ರಾಂತಗಳಲ್ಲಿ ಕಲ್ಲಿದ್ದಲು ಗಣಿಗಳು ಸಮೀಪದಲ್ಲಿವೆಯೋ ಆ ಎಲ್ಲ ಪ್ರಾಂತಗಳಲ್ಲಿ ಸ್ಥಳೀಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾಗುವಂತೆ ಜಲವಿದ್ಯುತ್ (ವಿದ್ಯುತ್) ಶಕ್ತಿಯ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಹಾಗೂ ಉಪಯೋಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?

ಈ) ವಾಯುಯಂತ್ರಗಳ ಮೂಲಕ ವಾಯುಶಕ್ತಿಯನ್ನು ಪಡೆದುಕೊಳ್ಳಲು ಮತ್ತು ವಾಯುಯಂತ್ರಗಳ ಬಳಕೆಯನ್ನು ಜನಪ್ರಿಯಗೊಳಿಸಲು ಕ್ರಮಗಳನ್ನೇನಾದರೂ ಕೈಗೊಳ್ಳಲಾಗುತ್ತಿದೆಯೆ?

ಉ) ಡಾ॥ ಕೃಷ್ಣನ್ ಅವರು "ವಿವಿಧ ಖನಿಜಗಳ ಪ್ರಮಾಣ ಮತ್ತು ಗುಣಮಟ್ಟವನ್ನು" ಅಂದಾಜು ಮಾಡಲು "ಸುಸಜ್ಜಿತ ಪ್ರಯೋಗಶಾಲೆಗಳನ್ನು ಸ್ಥಾಪಿಸುವ ಬಗ್ಗೆ" ಕೊಟ್ಟ ಸಲಹೆಯ ಪ್ರಕಾರ ಸ್ಥಳೀಯವಾಗಿ ಲಭ್ಯವಿರುವ ಖನಿಜಗಳನ್ನು ಆಮದು ಮಾಡಿದ ಖನಿಜಗಳಿಗಿಂತ ಆದ್ಯತೆಯ ಕ್ರಮದಲ್ಲಿ ಬಳಸಿಕೊಳ್ಳಬೇಕೆಂಬ ಸಲಹೆಯನ್ನು ಕುರಿತು ಪೂರ್ಣ ಅಧ್ಯಯನ ನಡೆಸಲಾಗುತ್ತದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅ) ಹೌದು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ. ೫, ಏಪ್ರಿಲ್ ೧೨, ೧೯೪೬. ಪುಟ ೩೮೯.

ಆ) ಭಾರತದಲ್ಲಿ ಕೆಲವು ಪ್ರಮುಖ ಖನಿಜಗಳ ಹಾಗೂ ಸಂಬಂಧಪಟ್ಟ ಸಾಮಗ್ರಿಗಳ ದಾಸ್ತಾನುಗಳನ್ನು ನಿರ್ವಹಿಸಿಕೊಂಡು ಬರುವ ಪ್ರಸ್ತಾವ ಯುದ್ಧಕಾಲದಲ್ಲಿ ಸರ್ಕಾರದ ಪರಿಶೀಲನೆಯಲ್ಲಿತ್ತು. ಆದರೆ ಅದು ಕೈಗೂಡಲಿಲ್ಲ. ಈಗ ಸರ್ಕಾರ ಖನಿಜ ಸಂಬಂಧವಾದ ತನ್ನ ನೀತಿಯನ್ನು ಪರಿಷ್ಕರಿಸುತ್ತಿದ್ದು, ಭಾರತದಲ್ಲಿ ಕೊರತೆಯಿರುವ ಈ ಖನಿಜಗಳ ಬಗ್ಗೆ ಆ ವಿಚಾರದಲ್ಲಿ ಯಥೋಚಿತ ಗಮನಕೊಡಲಾಗುವುದು.

ಇ) ಪ್ರಾಂತ ಸರ್ಕಾರಗಳು ಹಾಗೂ ಸಂಸ್ಥಾನಗಳ ಸರ್ಕಾರಗಳು ಜಲವಿದ್ಯುಚ್ಛಕ್ತಿಯ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಹಾಗೂ ಬಳಸಿಕೊಳ್ಳಲು, ಅಂಥ ಅನ್ವೇಷಣೆಗೆ ಸದ್ಯದಲ್ಲಿ ಲಭ್ಯವಿರುವ ತಾಂತ್ರಿಕ ಮಾನವ ಶಕ್ತಿಯ ಗರಿಷ್ಠಮಟ್ಟದವರೆಗೂ ಕ್ರಮ ಕೈಗೊಳ್ಳುತ್ತಿವೆಯೆಂದು ಸ್ಥೂಲವಾಗಿ ಹೇಳಬಹುದು. ಕೇಂದ್ರೀಯ ತಾಂತ್ರಿಕಶಕ್ತಿ ಮಂಡಲಿಯು, ತನ್ನ ತಾಂತ್ರಿಕ ಹಾಗೂ ಮಾನವಶಕ್ತಿಯ ಹಾಲಿ ಸಾಮರ್ಥ್ಯದ ಮಿತಿಗಳಿಗೆ ಒಳಪಟ್ಟು, ಕೆಲವು ಸಂದರ್ಭಗಳಲ್ಲಿ ನೆರವು ನೀಡುತ್ತಿದೆ ಮತ್ತು ಸಾಕಷ್ಟು ತಾಂತ್ರಿಕ ಸಿಬ್ಬಂದಿಯನ್ನು ಒದಗಿಸಿಕೊಂಡ ತರುವಾಯ ಆ ದಿಶೆಯಲ್ಲಿ ಇನ್ನಷ್ಟು ಕೆಲಸ ಮಾಡಬಹುದು. ಇಡೀ ದೇಶದಲ್ಲಿ ಮುಖ್ಯವಾಗಿ ಕಲ್ಲಿದ್ದಲು ಗಣಿಗಳಿಂದ ದೂರದಲ್ಲಿ ಇರುವ ಪ್ರದೇಶಗಳಲ್ಲಿ ಈಗ ಕೈಗೊಳ್ಳಲಾಗಿರುವ ಪ್ರಮಾಣಕ್ಕೂ ಮಿಗಿಲಾಗಿ ಜಲ ವಿದ್ಯುತ್ ವ್ಯವಸ್ಥೆಯನ್ನು ವಿಕಾಸಗೊಳಿಸುವ ಅಗತ್ಯವನ್ನು ಭಾರತ ಸರ್ಕಾರವು ಪೂರ್ಣವಾಗಿ ಅರಿತಿದೆ. ಆದರೆ ಈ ಕಾರ್ಯವನ್ನು ಹಾಲಿ ಇರುವ ಸಿಬ್ಬಂದಿಯವರಿಂದ ಸಾಧಿಸಲಾರೆವು ಎಂಬುದು ಅವರಿಗೆ ಗೊತ್ತು. ಆದ ಕಾರಣ ಆ ದಿಶೆಯಲ್ಲಿ ತಜ್ಞ ತಾಂತ್ರಿಕ ಸಿಬ್ಬಂದಿವರ್ಗವನ್ನೂ ಕರಾರಿನ ಮೇಲೆ ಭರ್ತಿಮಾಡಿಕೊಳ್ಳಲು ಸರ್ವಪ್ರಯತ್ನ ನಡೆಸಿದ್ದಾರೆ.

ಈ) ಸದ್ಯಕ್ಕೆ ಪವನಶಕ್ತಿಯನ್ನು ಅಥವಾ ಗಾಳಿಗಿರಣಿಗಳನ್ನು ಜನಪ್ರಿಯಗೊಳಿಸುವತ್ತ ಸರ್ಕಾರ ಯಾವುದೇ ವಿಶೇಷ ಕ್ರಮಕೈಗೊಂಡಿರುವುದಿಲ್ಲ ಅದು ಹವಾಮಾನ ಪರಿಸ್ಥಿತಿಯನ್ನು ಆಧರಿಸಿ ಆಯ್ಕೆ ಮಾಡಲಾದ ಕೆಲವು ಪ್ರದೇಶಗಳಲ್ಲಿ ಉಪಯುಕ್ತವಾಗಬಹುದಾದರೂ, ಅತ್ಯಂತ ಅಲ್ಪ ಪ್ರಮಾಣದ ಶಕ್ತಿಯನ್ನು ಉತ್ಪಾದಿಸುತ್ತವೆ ಮತ್ತು ಈ ಉತ್ಪಾದನೆಯು ನಿರುತರವಾಗಿರುವುದಿಲ್ಲ ಎಂಬ ಸರಕಾರಕ್ಕೆ ದೊರೆತಿದೆ.

ಉ) ಭಾರತದ ಭೂವಿಜ್ಞಾನ ಸರ್ವೇಕ್ಷಣಾ ಇಲಾಖೆಯನ್ನು ಇತ್ತೀಚೆಗೆ ಪುನಃ ಸಂಘಟಿಸಲಾಗಿದ್ದು, ಅದರ ಪ್ರಯೋಗಶಾಲಾ ಸೌಕರ್ಯಗಳನ್ನು ಗಣನೀಯವಾಗಿ ವಿಸ್ತರಿಸಲಾಗಿದೆ. ಇದಲ್ಲದೆ ಖನಿಜ ಮತ್ತು ಖನಿಜ ವಿಷಯಗಳ ಬಗ್ಗೆ ಉಚಿತ ಸಲಹೆ ಮತ್ತು ಮಾಹಿತಿ ನೀಡಲು ಈ ದಿಶೆಯಲ್ಲಿ ಇನ್ನಷ್ಟು ವಿಸ್ತರಣೆ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ಯೋಜಿಸಲಾದ ನ್ಯಾಷನಲ್ ಮೆಟಲರ್ಜಿಕಲ್ ಅಂಡ್ ನ್ಯಾಷನಲ್ ಕೆಮಿಕಲ್ ಲ್ಯಾಬೊರೇಟರೀಸನ್ನು ಭಾರತದ ಖನಿಜ ಗುಣಮಟ್ಟವನ್ನು ಅಳೆಯಲು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೆ ಇತರ ರೀತಿಗಳಲ್ಲಿ ಅದಿರು ಉದ್ದಿಮೆಗಳ ಬೆಳವಣಿಗೆಯಲ್ಲಿ ಮಹತ್ವದ ಸಹಾಯವಾಗುತ್ತದೆ. ಭಾರತದ ಖನಿಜಗಳು ಮತ್ತು ಅದಿರುಗಳನ್ನು ಕಚ್ಚಾ ರೂಪದಲ್ಲಿಯೇ ರಫ್ತು ಮಾಡುವ ಬದಲು ಆಂತರಿಕವಾಗಿಯೇ ಸಂಸ್ಕರಿಸಿ ಬಳಸಿಕೊಳ್ಳುವ ಸಲಹೆಯೂ ಸರ್ಕಾರದ ಪರಿಶೀಲನೆಯಲ್ಲಿದೆ. ೧೯೪೪ರಿಂದ ನಡೆಸಲ್ಪಟ್ಟ ಅನೇಕ ಔದ್ಯೋಗಿಕ ಅಧ್ಯಯನ ಗೋಷ್ಠಿಗಳು ಈ ಬಗ್ಗೆ ೬ ಮುಖ್ಯವಾದ

ಮಾಹಿತಿಯನ್ನು ಸಂಗ್ರಹಿಸಿವೆ. ಇವನ್ನೂ ಭಾರತದ ಹೊಸ ಖನಿಜ ನೀತಿಯನ್ನು ರೂಪಿಸಲು ಬಳಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಪ್ರೊ॥ ಎನ್. ಜಿ. ರಂಗಾ :** 'ಸಿ' ಭಾಗಕ್ಕೆ ನೀಡಿದ ತಮ್ಮ ಉತ್ತರದಲ್ಲಿ ಮಾನ್ಯ ಮಂತ್ರಿಗಳು ಜಲ ವಿದ್ಯುತ್ ಸಂಪನ್ಮೂಲಗಳನ್ನು ವೃದ್ಧಿಗೊಳಿಸುವುದಕ್ಕಾಗಿ ಇನ್ನೂ ಅನೇಕ ವಿಶೇಷಜ್ಞರ ಅಗತ್ಯವಿದೆ ಎಂದು ಹೇಳಿದ್ದಾರೆ. ಈ ದಿಶೆಯಲ್ಲಿ ಅಗತ್ಯವಾದ ಅರ್ಹತೆಗಳನ್ನು ಹೊಂದಿರುವ ಭಾರತೀಯರು ನೈಪುಣ್ಯವನ್ನು ಪಡೆದುಕೊಂಡ ನಂತರ ಅವರ ಸೇವೆಯನ್ನು ಬಳಸಿಕೊಳ್ಳುವುದಕ್ಕಾಗಿ ಸರ್ಕಾರ ಯಾವ ಕ್ರಮಕೈಗೊಂಡಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇವರುಗಳೂ ಅಲ್ಲದೆ, ಇತರೆಯವರನ್ನೂ ಸಹ ಕಳುಹಿಸಲಾಗಿದೆ.

**ಪ್ರೊ॥ ಎನ್.ಜಿ. ರಂಗಾ :** 'ಡಿ' ಭಾಗಕ್ಕೆ ಸಂಬಂಧಿಸಿದಂತೆ ಉತ್ತರಕೊಡುತ್ತಾ ನನ್ನ ಮಾನ್ಯ ಸ್ನೇಹಿತರು ಪವನಶಕ್ತಿಯ ಬಳಕೆಯ ಬಗ್ಗೆ ನೀಡಲಾದ ಸಲಹೆಗೆ ಅದು ಕೇವಲ ಇದರಿಂದ ವಿದ್ಯುತ್ತು ನಿರಂತರವಾಗಿ ದೊರೆಯುವುದಿಲ್ಲ ಹೇಳಿ ಆ ಸಲಹೆಯನ್ನು ನಿರಾಕರಿಸಿದರು. ಸಾವಿರಾರು ರೈತರು ಈ ಪವನಶಕ್ತಿಯನ್ನು ಬಳಸಿಕೊಳ್ಳುವುದರಲ್ಲಿ ಆಸಕ್ತಿಹೊಂದಿರುವ ಕಾರಣ, ಸರ್ಕಾರವು ಈ ಸಲಹೆಯನ್ನು ಹೆಚ್ಚು ಗಂಭೀರವಾಗಿ ಮತ್ತು ಎಚ್ಚರಿಕೆಯಿಂದ ಪರಿಶೀಲಿಸಿ, ನಮ್ಮ ರೈತರು ಪವನಶಕ್ತಿಯಿಂದ ಹೆಚ್ಚು ಹೆಚ್ಚು ವಿದ್ಯುತ್ತನ್ನು ಪಡೆದುಕೊಳ್ಳಲು ಸಹಾಯಕವಾಗುವ ಮಾರ್ಗಗಳನ್ನು ರೂಪಿಸುವುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿರುವಂತೆ ಅದು ಯಾವ ಕ್ಷೇತ್ರದಲ್ಲಿ ಎಷ್ಟು ಗಾಳಿಯು ದೊರೆಯುವುದು ಎಂಬುದನ್ನು ಅವಲಂಬಿಸುತ್ತದೆ.

**ಪ್ರೊ॥ ಎನ್.ಜಿ. ರಂಗಾ :** ನಮ್ಮಲ್ಲಿ ಹವಾಮಾನತಜ್ಞರಿದ್ದು ದೇಶದ ವಿವಿಧ ಭಾಗಗಳಲ್ಲಿ ಗಾಳಿಯನ್ನು ಬಳಸಿ ಎಷ್ಟು ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಬಹುದೆಂಬ ಬಗ್ಗೆ ಯೋಜನೆಗಳನ್ನು ಅವರು ಸಿದ್ಧಗೊಳಿಸಬಹುದಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ನಾವು ಈ ವಿಷಯವನ್ನು ಪರಿಗಣಿಸಿದ್ದೇವೆ.

# ೪೭೨
# ನಾಗರಿಕ ಸೇವೆಯಲ್ಲಿ ವಿಸರ್ಜಿತ ಮಿಲಿಟರಿ ಅಧಿಕಾರಿಗಳು*

**೨೧೪. ಶ್ರೀ ಸೇಠ್ ಸುಖದೇವ್ :** ಕಳೆದ ಆರು ತಿಂಗಳುಗಳ ಅವಧಿಯಲ್ಲಿ ಎಷ್ಟು ಜನ ವಿಸರ್ಜಿತಗೊಂಡ ಮಿಲಿಟರಿ ಅಧಿಕಾರಿಗಳನ್ನು ಕೇಂದ್ರ ಸರ್ಕಾರದ ನಾಗರಿಕ ಸೇವೆಗಳಲ್ಲಿ ನೇಮಕ ಮಾಡಲಾಗಿದೆ ಎಂಬುದನ್ನು ಮಾನ್ಯ ಕಾರ್ಮಿಕ ಸದಸ್ಯರು ದಯಮಾಡಿ ತಿಳಿಸುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ಕೇಳಲಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಅದು ದೊರೆತೊಡನೆಯೆ ಮಾನ್ಯ ಸದಸ್ಯರಿಗೆ ತಿಳಿಸಲಾಗುವುದು.

**ಜನವರಿ ೨೬, ೧೯೫೦ರಂದು ಒಂದು ವಿರೋಧಾಭಾಸದ ಜೀವನವನ್ನು ಪ್ರವೇಶಿಸಲಿದ್ದೇವೆ. ರಾಜಕೀಯದಲ್ಲಿ ಸಮಾನತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕಜೀವನದಲ್ಲಿ ಅಸಮಾನತೆಯನ್ನು ಹೊಂದಲಿದ್ದೇವೆ. ರಾಜಕೀಯದಲ್ಲಿ, ಒಬ್ಬನಿಗೆ ಒಂದೇ ಮತ ಮತ್ತು ಒಂದು ಮತಕ್ಕೆ ಒಂದು ಬೆಲೆ ಎಂಬ ತತ್ವವನ್ನು ಮಾನ್ಯ ಮಾಡಲಿದ್ದೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಕಾರಣದಿಂದ ಒಬ್ಬನಿಗೆ ಒಂದೇ ಬೆಲೆಯ ತತ್ವವನ್ನು ನಿರಾಕರಿಸಲಿದ್ದೇವೆ.**

**ಎಲ್ಲಿಯವರೆಗೆ ನಾವು ಇಂತಹ ವಿರೋಧಾತ್ಮಕ ಜೀವನವನ್ನು ನಡೆಸಲು ಸಾಧ್ಯ? ಎಲ್ಲಿಯವರೆಗೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಿರಾಕರಿಸಲಿದ್ದೇವೆ?**

**ನಾವು ಸಮಾನತೆಯನ್ನು ಎಲ್ಲಿಯವರೆಗೆ ನಿರಾಕರಿಸುತ್ತೇವೆಯೋ ಅಲ್ಲಿಯವರೆಗೆ ನಮ್ಮ ಪ್ರಜಾಪ್ರಭುತ್ವನ್ನು ಗಂಡಾಂತರಕ್ಕೆ ಸಿಲುಕಿಸುತ್ತೇವೆ. ನಾವು ಈ ವಿರೋಧಭಾಸವನ್ನು ಆದಷ್ಟು ತೀವ್ರ ತೊಡೆದುಹಾಕಬೇಕು. ಇಲ್ಲವಾದರೆ ಈ ಅಸಮಾನತೆಯಿಂದ ತೊಳಲುವ ಜನರು ಈ ಸಭೆಯು ಪರಿಶ್ರಮದಿಂದ ಕಟ್ಟಿರುವ ಈ ರಾಜಕೀಯ ಪ್ರಜಾಸತ್ತೆಯ ವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ.**

# ವಿಷಯಸೂಚಿ


## ಅ

ಅಂಜುಮನ್ ೩೭೨
ಅಕೋಲಾ ೩೭೩
ಅಜ್ಮೀರ್ ೧೫೯
ಅಡಜ್ಜೈ ೪೦೩
ಅಡೂರ್ ರಹಮಾನ್‌ಪುರಿ ೧೬೨
ಅನಂಗ್ ೭೫, ೧೩೫
ಅನಂತಶಯನಮ್ ಅಯ್ಯಂಗಾರ್ ಎಮ್. ೩೮೫, ೩೮೬, ೩೮೭, ೩೮೯, ೩೯೬, ೪೧೧, ೪೨೮, ೪೩೬, ೪೫೫, ೪೫೯, ೪೬೯, ೪೭೩, ೪೭೬, ೪೭೮, ೪೯೭
ಅನ್ವರ್ ೧೨೭
ಅಬ್ದುರ್ ರಹೀಮ್ ೧೨, ೨೫, ೪೬, ೬೧, ೬೪, ೬೮, ೭೦, ೧೦೧, ೧೦೨, ೧೨೫, ೧೨೬, ೧೨೭, ೧೨೮, ೧೨೯, ೧೫೨, ೧೬೫, ೧೬೬, ೧೮೬, ೧೮೭, ೨೧೫, ೨೨೪, ೨೩೩, ೨೩೪, ೨೩೮, ೨೩೯, ೨೪೦, ೨೬೧, ೨೬೭, ೨೬೮, ೨೭೦, ೨೭೭, ೨೭೯, ೨೮೭, ೩೨೩, ೩೨೪, ೩೩೫, ೩೩೯, ೩೫೮, ೩೭೩
ಅಬ್ದುರ್ ರೆಹಮಾನ್ ೧೫
ಅಬ್ದುಲ್ ಖಯೂಮ್ ೨೮೨, ೨೮೮, ೨೯೩, ೨೯೫, ೩೩೬, ೩೩೯, ೩೪೦, ೩೪೮, ೩೪೯, ೩೫೦,೩೬೦,
ಅಬ್ದುಲ್ ಬಸಿತ್ ಚೌಧರಿ ೩೪೫, ೩೪೭, ೩೫೧,
ಅಬ್ದುಲ್ ರಹೀಮ್ ೪, ೨೦, ೨೫, ೨೭,
ಅಬ್ದುಲ್ ಹಮೀದ್‌ಪುರಿ ೧೬೨
ಅಬ್ದುಲ್ ಹಲೀಮ್ ಘಜನವಿ ೨೦, ೨೨, ೨೪, ೭೯, ೧೦೯, ೧೧೦, ೧೧೧, ೧೨೫, ೧೨೬, ೧೨೭, ೨೫೫,
ಅಬ್ದುಲ್ಲ ಫಜಲ್‌ಭಾಯ್ ೩೭೧
ಅಮರೇಂದ್ರನಾಥ ಚಟ್ಟೋಪಾಧ್ಯಾಯ ೧೧, ೯೨, ೧೦೨, ೧೦೪, ೧೨೪, ೧೨೫, ೧೯೬, ೧೯೭, ೩೨೫, ೩೨೭, ೩೨೮, ೩೨೯
ಅಮೇರಿಕಾ ೩೫, ೩೬, ೩೭, ೩೮, ೩೯, ೯೦, ೯೧, ೧೧೫, ೧೨೨, ೨೧೫, ೨೧೬, ೨೧೭, ೨೩೭, ೨೩೮, ೨೪೨, ೨೪೩, ೨೪೪, ೨೫೧, ೨೫೬, ೩೫೭, ೩೭೬, ೩೮೨, ೪೩೨, ೪೭೨
ಅಮ್ರೆ ೧೭೯
ಅರವಂಕಡಾ ೩೭೫
ಅರೆಬಿಕ್ ೩೭೧
ಅಲಹಾಬಾದ್ ೧೫೭
ಅಲಿಖಾನ್ ೧೪೬, ೧೭೩, ೨೦೩, ೪೨೫, ೪೯೪
ಅಲಿಗಢ್ ೮೪, ೮೬, ೩೭೨, ೩೭೩, ೩೭೪, ೪೩೮, ೪೩೯, ೪೪೯, ೪೯೯
ಅಲಿಫರ್ ೨೬೯
ಅಲ್ಕುಸಾ ೪೦೩
ಅಲ್ಮೋರಾ ೪೧೧
ಅವಕಫ್ ೩೬೫
ಅವಿನಾಶಿಲಿಂಗಂ ಚೆಟ್ಟಿಯಾರ್ ಟಿ.ಎಸ್. ೨೩೨, ೨೩೩, ೨೩೪, ೨೬೧, ೨೭೯, ೨೮೧, ೨೯೧, ೨೯೨, ೨೯೩, ೨೯೪, ೩೨೧, ೩೩೫, ೩೩೬, ೩೫೬, ೩೫೮, ೩೬೪, ೩೬೭, ೩೭೨, ೩೮೦
ಅಸನ್‌ಸಾಲ್ ೧೫೯, ೧೮೫

ಅಸೀಫ್ ೩೫೪, ೩೯೬, ೩೯೭
ಅಸ್ಮಾರ ೨೪೨
ಅಸ್ಸಾಂ ೩೦, ೪೫, ೧೫೬, ೩೨೪, ೩೪೫, ೩೪೬, ೩೪೭, ೩೫೧, ೪೧೧, ೪೯೪
ಅಹಮದಾಬಾದ್ ೧, ೧೫೭, ೨೯೪, ೩೧೯, ೩೨೦
ಅಹಮ್ಮದ್ ಈ. ಎಚ್. ಜಾಫರ್ ೪೧೪, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೩, ೪೪೮, ೪೫೩, ೪೬೮, ೪೭೨, ೪೭೩, ೪೭೪, ೪೭೫, ೪೭೬, ೫೦೪, ೫೧೫, ೫೧೮
ಅಹಿರ್ ೩೮೩

## ಆ

ಆಂಗ್ಲೋಇಂಡಿಯನ್ ೧೮೯, ೪೩೦
ಆಂಥೋಣಿ ೩೨೩
ಆದಿತ್ಯನ್ ೪೩೨, ೪೭೦
ಆಭ್ರಕರು ೪೭೯
ಆರಾಮ್‌ಬಾಗ್ ೨೪೩
ಆಲಿಖಾನ್ ೧೧೨, ೧೪೫
ಆಲಿಢ ೮೬

## ಇ

ಇಂಗ್ಲೆಂಡ್ ೯, ೧೦, ೧೫, ೩೨, ೧೦೫, ೧೨೪, ೧೩೫, ೧೭೯, ೧೮೩, ೨೦೧, ೨೧೬, ೨೫೮, ೩೩೮, ೩೫೭, ೩೮೨, ೩೯೨, ೩೯೩, ೩೯೫, ೪೦೮
ಇಎಸ್‌ಟಿಎಸ್ ೨೦೬
ಇತ್ತೆಹಾದ್ ೧೫೭
ಇಬಿ ೫೦೭
ಇಬೆಟ್ಸನ್ ೬೩
ಇರ್ವಿನ್ ೨೨೪
ಇಲಾಹಿ ೧೦೫, ೧೦೬
ಇಸಾಕ್ ೪೭, ೪೮
ಇಸಾಖ ೪೨೧
ಇಸಾಬೆಲ್ಲಾ ೪೦೨
ಇಸ್ಸಾಕ್ ಶೇಟ್ ಎಚ್. ೨೯೯

## ಈ

ಈಶ್ವರ್ ೩೩೧

## ಎ

ಎಕ್ರಾ ಖಾಸ ೪೦೨, ೪೦೩
ಎಲ್ಲಿಸ್ ೭೦
ಎಸ್ಸಾಕ್ ೧೨೬, ೧೫೩, ೧೫೪

## ಏ

ಏಷ್ಯಾ ೨೪೨, ೪೯೬

## ಒ

ಒಕ್ರಾ ೧೧೪, ೧೧೫
ಒರಿಸ್ಸಾ ೧೭೫, ೧೭೬, ೧೭೭, ೧೮೦, ೨೫೦, ೨೭೨

## ಓ

ಓಂಡಾಲ್ ೧೧೪, ೧೧೫

## ಕ

ಕಂಕಣಿ ೪೦೨
ಕಜೋರಾ ೧೧೪
ಕಟಕ್ ೨೭೨
ಕನ್ನಾಟ್‌ಪ್ಲೇಸ್ ೩೮೭, ೩೮೮
ಕರಮರಕರ್ ಡಿ. ಪಿ. ೪೪೪
ಕರಾಚಿ ೩೦, ೨೦೯, ೨೧೮
ಕರೀಂ ೧೫೯
ಕರೀಂ ಬಕ್ಷ್ ೬೯

ಕರುಣಾಕರ ಮೆನನ್ ಎ. ೫೦೮, ೫೦೯
ಕರೋಲ್‌ಬಾಗ್ ೫೪, ೫೬, ೧೦೮, ೨೪೩, ೩೬೫, ೪೬೮, ೪೭೪
ಕಲತ್ ೯೫
ಕಲ್ಕತ್ತಾ ೪೬, ೭೭, ೭೮, ೮೧, ೮೩, ೮೪, ೮೫, ೯೮, ೧೦೮, ೧೫೩, ೧೭೩, ೧೮೮, ೨೯೦, ೨೯೪, ೩೦೬, ೩೧೧, ೩೧೨, ೩೨೯, ೩೪೮, ೩೪೯, ೩೫೦, ೪೦೭, ೪೦೮, ೪೭೭, ೪೭೮, ೪೯೦, ೪೯೯, ೫೨೨
ಕಲ್ಹಾರ ೩೮೩
ಕಹಾರ್ ೩೮೩
ಕಾಂಗ್ರಾಕೊಳ್ಳ ೪೧೧
ಕಾಂಗ್ರೆಸ್ ೧೫೫, ೨೧೮, ೨೩೦, ೨೩೧, ೨೩೨, ೨೩೮, ೨೫೬, ೪೯೩, ೫೦೫
ಕಾನ್ಪುರ ೩೦, ೧೮೬, ೨೯೪
ಕಾನ್ರಾನ್‌ಸ್ಮಿತ್ ೧೭೯
ಕಾರ್ನ್‌ವಾಲಿಸ್ ೪೭೮
ಕಾವಾಸ್ಜಿ ಜಹಂಗೀರ್ ೧೬
ಕುಂಜ್ರು ಎಚ್.ಎನ್. ೧೪೩
ಕೃಷ್ಣದತ್ತ ಪಲಿವಾಲ, ಪಂಡಿತ ೪೩೮
ಕೃಷ್ಣನ್ ೩೪೦, ೫೨೪
ಕೃಷ್ಣಮಾಚಾರಿ ಟಿ.ಟಿ. ೧೧೯, ೧೨೧, ೧೨೩, ೧೨೫, ೨೨೭, ೨೯೦, ೩೧೮, ೩೧೯
ಕೃಷ್ಣಸ್ವಾಮಿ ಬಿ.ಎಸ್. ೪೮೯
ಕೃಷ್ಣಾನಗರ ೩೭೨
ಕೈಲಾಶ್ ೨೬೮
ಕೈಲಾಸ್ ೧೯೩, ೧೯೫, ೨೦೪, ೨೭೪
ಕೊಡಗು ೪೪೪, ೪೪೫
ಕೊಯಂಬತ್ತೂರ್ ೧, ೩೭೩
ಕೊಹ್–ಇ–ಸುಲ್ತಾನ್ ೬, ೯೪, ೯೫
ಕೋಟಾ ೩೫೨, ೪೧೮, ೪೧೯, ೪೨೯, ೫೧೦, ೫೧೫
ಕೋಸಿನದಿ ೪೨೫
ಕೌವೆನ್ ಡಬ್ಲ್ಯೂ.ವಿ. ೫, ೬, ೭
ಕ್ರಿಶ್ಚಿಯನ್ ೧೫, ೮೧, ೧೧೭, ೧೪೧, ೧೭೪, ೧೮೯, ೩೬೬, ೪೨೦, ೪೭೦
ಕ್ರೈಸ್ತ ೨೮೭, ೨೮೮, ೪೭೦
ಕ್ವಿನೈನ್ ೨೬೨
ಕ್ಷೇತ್ರಪಾಲ್‌ಸಿಂಗ್ ೧೮೯

## ಖ

ಖರಗ್‌ಪುರ್ ೧೫೭
ಖಲೀಲ್ ೧೬೩
ಖಸ್‌ಖಸ್ ೩೭೦, ೩೭೧
ಖಾನ್ ೪೯, ೫೦, ೫೧, ೬೭, ೬೯, ೭೦, ೭೭, ೯೧, ೧೦೩, ೧೨೬, ೧೨೭, ೧೨೮, ೧೨೯, ೧೪೨, ೧೭೩, ೨೧೪, ೨೨೮, ೨೪೬, ೩೨೨, ೩೬೬, ೩೭೨, ೪೧೪, ೪೧೮, ೪೨೭, ೪೪೦, ೫೦೬, ೫೦೭
ಖಾನ್ ಬಹದೂರ್ ಮಿಯಾನ್ ಗುಲಾಮ್ ಕದೀರ್ ಮುಹಮ್ಮದ್ ಶಹ್‌ಬಾನ್ ೧೪೨
ಖಾನ್ ಬಹದೂರ್ ಮುಖದುಮ್ ಅಲ್–ಹಾಜ್ ಸೈಯದ್ ಶೇರ್‌ಷಾ ಜೀಲಾನಿ ೪೨೭
ಖಾನ್ ಬಹದ್ದೂರ್ ಷಾಹಿಕ್ ಫಜ್ಲ್–ಇ–ಹಕ್ ಪಿರಚಾ ೪೯, ೫೦, ೫೧, ೬೭, ೬೯, ೭೦, ೨೨೮, ೨೪೬
ಖಾಸರ್ಝೂರಿಯಾ ೪೦೧
ಖುರೇಶಿ ೩೩೨

## ಗ

ಗಜಿಯಾಬಾದ್ ೧೦೫
ಗಡರಿಯಾ ೩೮೩
ಗಣಪತರಾಜ ೩೮೦
ಗಣೇಶ್ ೩೩೧, ೪೬೫, ೪೬೭

ಗರ್ಮುಕ್ತೇಸರ್ ೧೫೭
ಗಾಡ್ಗೀಳ್ ಎನ್.ವಿ. ೪೯೭, ೫೧೭
ಗಿಯಾಸುದ್ದೀನ್ ಎಂ. ೩೮೩, ೩೮೪
ಗುಪ್ತಾ ಆರ್. ಆರ್. ೧೧೯, ೧೨೧, ೧೨೩,
ಗುಪ್ತಾ ಕೆ. ಎಸ್. ೨೧೫
ಗುರುದ್ವಾರ ೩೮೭, ೩೮೮
ಗೂಡೂರು ೩೫೨, ೩೫೩
ಗೆಜೆಟ್ ೪೩೦, ೪೩೧, ೪೩೫, ೪೫೯
ಗೋಡೂರ ೪೦೨
ಗೋರಖ್‌ಪುರ ೧೫೭, ೧೫೭, ೩೦೨, ೩೦೩, ೩೦೪, ೩೦೫, ೩೧೩, ೩೯೯, ೪೦೦
ಗೋವಿಂದ ವಿ. ದೇಶಮುಖ್ ೯, ೧೦, ೩೭, ೧೩೫, ೧೪೭, ೧೪೮, ೧೫೨, ೧೮೭, ೨೮೭, ೨೩೩, ೨೪೭, ೨೪೯, ೨೫೩, ೨೬೬, ೨೮೦
ಗ್ರೀನ್‌ವಿಚ್ ೧೧೩
ಗ್ವಾಲಿಯರ್ ೩೩೧

## ಚ

ಚನುಯಾಡಿಹಾ ೪೦೧
ಚಮನ್‌ದಾಸ್ ೩೮೦
ಚಮನ್‌ಲಾಲ್ ೪೪೪, ೪೯೭, ೫೦೦, ೫೦೩, ೫೦೪, ೫೦೫, ೫೦೬, ೫೧೬, ೫೧೯
ಚಮಲ್‌ಲಾಲ್ ೪೭೧
ಚಾತಕಬಾರ್ವಾರಾ ೧೨೩
ಚಾಪುಯಿ ೪೦೨

## ಜ

ಜಪಾನ್ ೬೭, ೫೦೦
ಜಮುನಾ ೧೦೪, ೧೦೫
ಜಮ್ನಾದಾಸ್ ಎಂ. ಮೆಹ್ತಾ ೧೬, ೨೫, ೬೮, ೬೯, ೨೩೫, ೨೭೮, ೨೭೯, ೨೮೦, ೨೯೨
ಜಮ್‌ಷೆಡ್‌ಪುರ ೪
ಜಲಪೈಗುರಿ ೧೫೯
ಜವಾಹರ್ ೧೨೩
ಜಾಧವ್ ೧೫೯, ೧೬೨, ೧೬೩
ಜಾಮಬಾದ ೪೦೨
ಜಿತಪೂರ ೪೦೩
ಜಿನಗೋರಾ ೪೦೧
ಜಿನಚಂದ್ರನ್ ೫೦೮
ಜಿನರಾಜ ಹೆಗ್ಡೆ ಕೆ. ಬಿ. ೨೭೪, ೩೬೭, ೩೬೮, ೩೭೪, ೩೭೫
ಜಿನೇವಾ ೨೪೯
ಜಿಯಾಉದ್ದೀನ್ ಅಹಮದ್ ೨, ೧೦, ೧೨, ೧೫, ೨೬, ೨೭, ೨೮, ೨೯, ೩೦, ೩೧, ೩೩, ೫೭, ೧೦೦, ೧೪೮, ೧೮೩, ೧೮೭, ೧೯೪, ೧೯೮, ೨೦೮, ೨೦೯, ೨೨೭, ೨೩೪, ೨೪೦, ೨೪೧, ೨೪೮, ೨೭೯, ೩೧೧, ೩೭೧, ೩೭೨, ೩೭೩, ೪೧೩, ೪೧೫, ೪೪೧, ೪೪೯, ೪೫೦, ೪೫೧, ೫೦೫, ೫೧೪, ೫೧೫,
ಜೀಲಾನಿ ೪೨೭
ಜುಂಕುಂಡ ೪೦೨
ಜುಮ್ಮಾದಾಸ್ ೬೮
ಜುಮ್ಮಾನದಾಸ್ ೨೩೬
ಜೆರೆಮಿ ರೈಸ್‌ಮನ್ ೩೫೭
ಜೆವಿನ್ ೩೯೨
ಜೇಮ್ಸ್ ೭೯, ೧೬೯, ೧೭೮, ೧೭೯, ೧೮೫, ೨೩೬, ೨೩೭, ೨೪೧, ೨೫೯
ಜೈಪುರ್ ೧೨೩
ಜೈರಂಡಹ ೪೦೩
ಜೊಯ್ರಾಮಪೂರ ೪೦೩
ಜೋಟೆ ೪೦೨
ಜೋಧಪುರ ೯೫, ೩೮೮, ೪೩೦, ೪೩೧, ೪೩೪, ೪೩೫
ಜೋನ್ಸ್ ೫೦, ೫೧

ಜೋರ್ರ್ಯಾಪುರ ೪೦೧
ಜೋಷಿ ೨, ೩, ೪, ೧೪, ೧೫, ೨೬, ೨೭, ೪೪, ೪೬, ೧೩೦, ೧೩೪, ೧೩೫, ೧೪೮, ೧೬೬, ೧೭೨, ೧೭೩, ೧೭೯, ೧೮೧, ೧೮೨, ೧೮೫, ೧೮೬, ೨೧೪, ೨೧೬, ೨೫೧, ೨೫೪, ೨೫೫, ೨೬೧, ೨೯೭, ೩೧೭, ೩೧೮, ೩೨೩, ೩೩೦, ೩೩೨, ೩೩೪, ೩೩೭, ೩೩೮, ೩೩೯, ೩೪೦, ೩೪೨, ೩೬೪, ೩೮೨, ೪೪೩, ೪೯೭
ಜ್ಯಾಕ್ ಡಿ. ಟಿ. ೨೦೦
ಜ್ವಾಲಾ ಪ್ರಸಾದ್ ಶ್ರೀವಾಸ್ತವ ೧೪೩, ೨೦೪

## ಝ

ಝಿಯಾವುದ್ದೀನ್ ಅಹಮದ್ ಡಾ॥ ಸರ್ ೧೮೭
ಝುವಾರ ೫
ಝರಿಯಾ ೧೬೫, ೧೬೬, ೧೮೫, ೨೬೨, ೨೬೩, ೨೬೪, ೨೮೫, ೩೩೯, ೪೦೧, ೪೦೨, ೪೦೩

## ಟ

ಟಾಟಾ ೩, ೧೧೯, ೨೪೪, ೩೨೯, ೪೦೨
ಟೆನ್ನಿಸ್ಸಿ ಕಣಿವೆ ೨೮೫
ಟೈಸನ್ ೩೧೭
ಟ್ರಾವಂಕೂರು ೨೮೪

## ಡ

ಡಾಕಾ ೧೫೯
ಡಾನ್ ೧೦೫, ೪೧೫, ೪೨೩
ಡಾಯ್‌ಮೋನೆ ೪೦೧
ಡೆಲ್ಲಿ ೧೫೭, ೨೫೭
ಡೆಹರಾಡೂನ್ ೪೧೧

## ತ

ತಲ್ಕತೋರಾ ೨೮೭, ೩೮೮
ತಾಂಬೇಲಿ ೩೮೩
ತಾತಾನಗರ ೧೫೯
ತಿಮರ್‌ಪುರ್ ೩೭೮
ತಿರುಚಿನಾಪಲ್ಲಿ ೧೫೮
ತಿರುವಾಂಕೂರು ೧೧೯, ೪೭೧, ೫೦೮, ೫೧೮
ತಿರುಹಟ್ ೪೫, ೧೨೬
ತೆತುಲಮರಿ ೪೦೨
ತ್ರೀವೇಂದ್ರಮ್ ೩೭೩

## ಥ

ಥಾಣೆ ೪೮೫

## ದ

ದಯಾಲ್‌ಬಾಗ್ ೩೭೪
ದರಿಯಾಗಂಜ್ ೪೯, ೫೪, ೫೬, ೩೩೨
ದಿಗ್‌ವರ್ದಿ ೨೮೨
ದುರ್ಗಾದಾಸ್ ೨೧೪
ದೆಹಲಿ ೨೦, ೩೩, ೪೪, ೪೮, ೪೯, ೫೧, ೫೩, ೫೪, ೬೦, ೬೪, ೯೦, ೯೧, ೧೦೩, ೧೦೪, ೧೦೫, ೧೦೮, ೧೩೯, ೧೫೧, ೧೭೮, ೧೯೪, ೧೯೫, ೧೯೯, ೨೦೪, ೨೦೭, ೨೧೨, ೨೧೩, ೨೧೪, ೨೨೧, ೨೨೨, ೨೨೩, ೨೨೮, ೨೨೯, ೨೩೭, ೨೩೯, ೨೪೦, ೨೪೧, ೨೫೭, ೨೫೮, ೨೫೯, ೨೬೦, ೨೬೮, ೨೭೪, ೨೮೬, ೨೮೭, ೨೮೮, ೨೯೧, ೨೯೪, ೩೧೨, ೩೨೧, ೩೩೦, ೩೩೧, ೩೩೨, ೩೩೩, ೩೩೪, ೩೫೦, ೩೬೫, ೩೬೮, ೩೬೯, ೩೭೦, ೩೭೧, ೩೭೩, ೩೭೮, ೩೭೯, ೩೮೭, ೩೮೯, ೩೯೭, ೪೧೧, ೪೧೩, ೪೨೩, ೪೨೪, ೪೩೭, ೪೩೮, ೪೬೧, ೪೬೨, ೪೬೮, ೪೭೩, ೪೭೪, ೪೭೭, ೪೭೮, ೪೮೫, ೪೯೦, ೫೧೦, ೫೧೯, ೫೨೨, ೫೨೩, ೫೨೪
ದೊರಬ್ಜಿ ಟಾಟಾ ೩೨೯

ಧನಬಾದ್ ೧೪೮, ೨೫೪, ೨೭೩, ೨೮೫, ೨೮೬, ೨೯೪, ೩೦೩, ೩೫೯, ೪೯೪
ಧನ್ಸಾರ ೪೦೨

## ನ

ನಂದಲಾಲ್ ಕುರೀಲ್ ೧೮೯
ನಬಿ ನಕ್ಷ್ ಇಲಾಹಿ ಬಕ್ಷ್ ಭುಟ್ಟೋ ೧೦೫, ೧೦೬
ನವಾಡಿಯಾ ೪೨
ನವಾಬ್ ಝಖೂಡಾ ಮಹಮ್ಮದ್ ಲಿಯಾಖತ್ ಅಲಿಖಾನ್ ೧೨೯, ೧೭೩
ನವಾಬ್ ಸಿದ್ದಿಕ್ ಆಲಿಖಾನ್ ೧೪೫, ೧೪೬
ನಾಗಪುರ ೪೫, ೯೫, ೧೪೭, ೧೫೭, ೨೯೪, ೩೭೩
ನಾದಿರ್‌ಶಾಹಿ ೨೦೪
ನಾರಾಯಣ ೭
ನಾರಾಯಣಗಂಜ್ ೩೭೨
ನಾಸಿಕ್ ೨೪೪
ನಾಸಿರ್ ಹುಸೇನ್ ೪೮೯
ನಿಂಬ್ಕರ್ ಆರ್.ಎಸ್. ೩೩
ನೇಪಾಳ ೨೭೩, ೪೨೫
ನೈನಿತಾಲ್ ೨೮೯

## ಪ

ಪಂಜಾಬ್ ೧೩, ೩೦, ೪೯, ೫೨, ೯೦, ೧೧೯, ೩೩೫, ೫೧೬, ೫೨೩
ಪಂಡಲಬೇರಾ ೪೦೧
ಪಂಡಿತ ಠಾಕುರದಾಸ್ ಭಾರ್ಗವ ೪೬೧, ೫೨೨, ೫೨೩
ಪಠಾರ್‌ಡಿಹಾ ೪೦೧
ಪಯೋನಿಯರ್ ೧೪೦, ೧೪೨
ಪರ್ಬೇಲಿಯಾ ೪೦೩
ಪರ್ಮಾನಂದ್ ೮೭, ೮೮, ೯೭
ಪಲಿವಾಲ ೪೩೮
ಪವನಶಕ್ತಿ ೫೨೫, ೫೨೬
ಪಾಟ್ನ ೧೬೭, ೩೭೩
ಪಾಣಿಪಟ್ ೧೫೭
ಪಾರ್ಸಿ ೧೫
ಪಿಟ್‌ಕೀತ್ಲಿ ೨೨೨
ಪಿಯರ್ (ಪ್ಯಾರೆ)ಲಾಲ್ ಕುರೀಲ್ ೧೪೦, ೧೪೨, ೧೮೮, ೧೮೯, ೨೦೪, ೨೧೮, ೨೮೯, ೩೧೦
ಪೂನಾ ೧೦೫, ೨೪೪
ಪೆರಂಬೂರ್ ೧೫೮
ಪೋಲಾವರಂ ೨೮೪, ೨೮೫

## ಫ

ಫಿರೋಜ್‌ಖಾನ್ ನೂನ್ ೩೩
ಫಿಲಡೆಲ್ಫಿಯಾ ೨೩೦, ೨೩೫, ೨೩೬
ಫ್ರಾಂಕ್ ಆಂಥೋಣಿ ೩೨೩
ಫ್ಲೆಮಿಂಗ್ ೭

## ಬ

ಬಂಕೂರ ೯೫
ಬಂಕ್ಸಿಮುಲ್ಲಾ ೪೦೩
ಬಂಗಾಳ ೨, ೧೩, ೨೦, ೨೪, ೨೯, ೪೫, ೭೫, ೮೧, ೯೫, ೯೮, ೯೯, ೧೦೮, ೧೧೪, ೧೨೩, ೧೩೨, ೧೩೩, ೧೫೦, ೧೫೧, ೧೬೯, ೧೭೬, ೧೭೭, ೧೭೮, ೧೮೦, ೨೫೦, ೨೫೯, ೨೬೨, ೨೭೩, ೨೮೨, ೨೮೫, ೨೯೦, ೩೧೩, ೩೧೪, ೩೨೬, ೩೨೭, ೩೪೮, ೩೫೧, ೩೭೨, ೩೯೪, ೪೦೬, ೪೧೧
ಬಟಾಲ ೯೫
ಬದ್ರಿ ದತ್ತ ಪಾಂಡೆ ೨೨೭, ೨೩೩, ೨೩೮, ೨೭೫, ೨೭೬, ೨೭೭, ೨೮೦, ೨೮೯, ೨೯೩, ೩೫೪, ೩೭೮, ೩೭೯, ೩೮೦, ೩೮೧
ಬನಾರಸ್ ೩೭೪

ಬರೋಡಾ ೪೫
ಬರ್ಮಾ ೬, ೬೯, ೧೫೭, ೩೦೫
ಬರ್ವಾಯೀಜ್ ೩೮೩
ಬರ್ವಾಯರು ೩೮೩
ಬಲಾಸೂರ್ ೨೭೨
ಬಲೂಚಿಸ್ತಾನ ೧೨೧, ೧೨೨, ೩೬೦, ೩೬೧
ಬಲ್ಗೋರಾ ೪೦೧
ಬಲ್ಬೇಕ್ ೧೪೭
ಬಹಾದೂರ್ ೫೦, ೫೧, ೬೪, ೬೭, ೬೮, ೬೯, ೭೦, ೮೦, ೮೧, ೮೨, ೮೩, ೮೪, ೮೬, ೪೭೯
ಬಾಂಬೆ ೧೫೬, ೧೫೭, ೧೬೦, ೧೬೨, ೧೭೫, ೧೭೬, ೧೭೭, ೨೩೫, ೩೭೩
ಬಾಬರ್ ೧೦೬, ೧೦೮
ಬಾಬು ಬೈಜನಾಥ ಬಜೋರಿಯಾ ೧೬, ೧೮, ೩೫, ೩೬, ೩೭, ೩೯, ೪೦
ಬಾಬು ರಾಮನಾರಾಯಣ ಸಿಂಗ್ ೪೧೨, ೪೮೫, ೪೮೬, ೪೮೭, ೪೮೮, ೪೯೨, ೪೯೩, ೪೯೪
ಬಾರ್ಬ್ರೋನಿ ೪೦೩
ಬಾಸ್ವನ್ ೩೩೨
ಬಿಜವಾಡ ೩೭೩
ಬಿಹಾರ ೩೦, ೩೫, ೭೫, ೯೬, ೯೮, ೯೯, ೧೧೪, ೧೫೦, ೧೫೧, ೧೬೯, ೧೭೬, ೧೭೭, ೧೮೦, ೧೯೩, ೨೫೦, ೨೬೨, ೨೭೨, ೨೭೩, ೨೭೭, ೨೮೫, ೨೮೬, ೨೮೯, ೩೧೩, ೩೧೪, ೩೨೬, ೩೨೭, ೩೫೯, ೩೯೪, ೪೦೬, ೪೨೫
ಬಿಹಾರಿಲಾಲ್ ೧೯೩, ೧೯೫, ೨೦೪, ೨೬೮, ೨೭೪
ಬೀರಾರ್ ೩೦
ಬೆರಾರ್ ೨೫೦, ೪೦೧
ಬೆಲೂಚಿಸ್ತಾನ ೯೪
ಬೆವರಿಡ್ಜ್ ೧೪೨
ಬೇರಾರ್ ೧೪೭, ೧೫೦, ೧೬೬, ೧೭೫, ೧೭೬, ೧೭೭, ೧೮೦, ೧೮೭
ಬೊಂಬಾಯಿ ೧, ೨೯, ೩೦, ೧೧೯
ಬ್ಯಾನರ್ಜಿ ಪಿ.ಎನ್. ೧೦೩
ಬ್ರಾಂಕ್ ಹರ್ಸ್ಟ್ ೭೦
ಬ್ರಿಟನ್ ೧೫, ೧೬, ೧೩೦, ೧೮೨, ೨೧೫, ೨೧೬, ೨೧೭, ೨೪೯, ೨೫೧, ೩೨೧, ೩೨೯, ೩೭೬, ೩೯೨, ೩೯೩, ೪೪೮
ಬ್ರೌನ್ ೭೦

## ಭ

ಭಾಯ್ ಪರ್ಮಾನಂದ್ ೮೭, ೮೮, ೯೭, ೨೪೬
ಭಾಲೆರಾವ್ ೧೮೯
ಭುಟ್ಟೋ ೧೦೫, ೧೦೬
ಭೂಸಾವಲ್ ೧೫೭

## ಮ

ಮಂಗಲ್‌ಸಿಂಗ್ ೨೩೨, ೪೨೯, ೪೩೪, ೪೯೦, ೪೯೧
ಮಂತ್ರಾಲಯ ೨೦೧
ಮಜಲಿಸ್–ಎ–ಅವಕಫ್ ೩೬೫
ಮಣಿಬೆನ್ ಕಾರಾ ೪೬೦, ೫೦೩, ೫೨೧, ೫೨೨
ಮದನ್‌ಸಿಂಗ್ ೧೧೭
ಮದ್ರಾಸ್ ೧೩, ೨೯, ೪೦, ೪೫, ೧೫೬, ೧೫೮, ೧೭೫, ೧೭೬, ೧೭೭, ೨೮೩, ೨೮೪, ೨೮೫, ೨೯೪, ೩೨೮, ೩೪೦, ೩೫೩, ೩೭೨, ೩೭೩, ೩೮೫, ೪೧೦, ೫೨೪
ಮನುಸುಬೇದಾರ್ ೨೪೯, ೨೫೧, ೨೫೪
ಮನೋಹರಲಾಲ್ ೫೨೦
ಮರಾಠಾ ೧೫೮
ಮಲೀಕ್ ಎಸ್.ಕೆ. ೧೮೯
ಮಲ್ಲಿಕ್ ೩೩೨
ಮಲ್ಲಿಕ್ ಸಿ. ಪಿ. ೪೧೩, ೪೪೧
ಮಹಮದ್ ಅಜರ್ ಆಲೀ ೧೯, ೨೦, ೪೮, ೫೩, ೯೬, ೧೨೦, ೧೫೫, ೧೯೪, ೨೦೭, ೨೨೦,

೨೨೧, ೨೨೨, ೨೨೩, ೨೨೪, ೨೩೦
ಮಹಮದ್ ಅಹಮದ್ ಕಾಜ್ಮಿ ೧೩, ೬೫, ೬೬, ೭೧, ೭೨, ೭೩, ೭೪, ೧೧೨, ೧೪೫, ೧೪೬, ೧೯೨, ೧೯೯, ೨೧೦, ೨೧೧, ೨೬೯, ೨೭೦, ೨೭೧, ೩೭೫
ಮಹಮದ್ ಯಾಮಿನ್ ಖಾನ್ ೧೦೩, ೧೨೬, ೧೨೭, ೧೨೮, ೧೭೨, ೧೭೩, ೨೧೪, ೩೨೨, ೩೬೬, ೩೭೨, ೪೬೩, ೪೭೩
ಮಹಮದ್ ರಹಮತ್ ಉಲ್ಲಾ ೪೧೩, ೪೧೪, ೪೧೫, ೪೨೩, ೫೦೯
ಮಹಮ್ಮದ್‌ಪುರ ೩೦೯
ಮಹಾತ್ಮಾಗಾಂಧಿ ೪
ಮಾಂಟ್ರಿಯಲ್ ೪೯೬
ಮಾವ್ಲಿ ೫, ೭
ಮಿಂಟೋ ೯೨, ೯೩, ೧೩೬, ೧೩೭, ೧೮೯, ೨೪೩, ೪೮೭
ಮುಂಬಯಿ ೪೭೪, ೪೯೧, ೪೯೮, ೫೨೨
ಮುಂಬೈ ೩೩, ೨೬೫, ೨೯೪, ೩೧೧, ೩೧೨, ೩೨೦, ೩೨೮, ೩೨೯, ೩೩೦, ೩೩೧, ೩೭೧, ೪೦೭
ಮುಕ್ತೇಶ್ವರ ೨೮೯
ಮುಜಲಿಸ್–ಎ–ಅವಕಫ್ ೩೬೫
ಮುರ್ತುಜಾ ೬೪, ೬೮, ೮೦, ೮೧, ೮೨, ೮೩, ೮೪, ೮೬
ಮುಹಮ್ಮದ್ ೫೩, ೬೫, ೬೬, ೬೮, ೭೦, ೭೨, ೭೩, ೭೪, ೭೬, ೭೭, ೭೯, ೯೧, ೯೬, ೧೦೩, ೧೧೨, ೧೨೦, ೧೨೬, ೧೨೭, ೧೨೮, ೧೨೯, ೧೩೧, ೧೪೨, ೧೪೫, ೧೪೬, ೧೪೮, ೧೫೫, ೩೬೫, ೩೭೨, ೩೭೫
ಮುಹಮ್ಮದ್ ಅಬ್ದುಲ್ ಘನಿ ೩೪, ೩೫, ೬೮, ೭೬, ೭೯, ೧೩೧, ೧೪೮, ೧೪೯, ೧೭೩, ೨೧೨, ೨೧೪, ೨೬೭, ೨೭೦, ೩೬೫, ೩೬೬, ೩೭೩,
ಮೇವಾರ ೬, ೯೩, ೯೪
ಮೈಮನ್ ೩೭೨
ಮೈಲಾಪುರ್ ೧೫೮
ಮೊಜುಂದಾರ್ ೨೧೨, ೨೧೩
ಮೊರಾದಾಬಾದ್ ೧೫೭
ಮೊಹನ್‌ಲಾಲ್ ೪೫೧
ಮೋರಿಸ್ ೩೦೫
ಮೋಹನ್‌ಲಾಲ್ ಸಕ್ಸೇನಾ ೩೯೬, ೪೪೯, ೪೫೧, ೪೯೬, ೫೦೩, ೫೦೪
ಮೌಲಾನ ಜಫಾರ್ ಅಲಿಖಾನ್ ೨೦೩
ಮ್ಯಾಕ್‌ವರ್ತ್ ಯಂಗ್ ಜಿ. ೧೭೯

## ಯ

ಯಮುನಾ ೨೨೨, ೨೨೩
ಯುರೋಪ್ ೩೮೯

## ರ

ರಂಗನಾಥನ್ ಸ್ವಾಮ್ಯುಯಲ್ ಎಲ್. ೪೯೭
ರಂಗಯ್ಯ ನಾಯ್ಡು ಜಿ. ೧೭೪, ೧೭೮, ೧೮೮, ೨೨೯, ೨೬೨
ರಂಗಾ ಎನ್.ಜಿ. ಪ್ರೊ॥ ೩೭೬, ೪೨೮, ೪೪೨, ೪೪೩, ೪೪೯, ೪೫೦, ೪೫೧, ೪೫೨, ೪೫೯, ೪೬೨, ೪೭೦, ೪೭೩, ೪೭೪, ೪೭೬, ೪೭೯, ೪೯೩, ೪೯೪, ೪೯೫, ೪೯೬, ೪೯೭, ೪೯೮, ೫೦೩, ೫೦೪, ೫೦೮, ೫೦೯, ೫೨೫, ೫೨೬
ರಂಜಾನ್ ೨೪
ರಾಂಚಿ ೧೬೭
ರಾಜಪುಟಾಣ ೯೩
ರಾಜಶಾಹಿ ೩೭೨
ರಾಣಿಗಂಜ್ ೧೮೫, ೨೬೩, ೨೬೪, ೨೮೨, ೨೯೦, ೩೫೯, ೪೫೨
ರಾಧಾಬಾಯಿ ಸುಬ್ಬರಾಯನ್ ಕೆ. ೨೫೨, ೨೬೨,

೨೯೧, ೨೯೫, ೨೯೬, ೨೯೭, ೨೯೮, ೩೧೭, ೩೧೮, ೩೨೨, ೩೩೦, ೩೩೧, ೩೩೨, ೩೩೩, ೩೩೪, ೩೩೭, ೩೩೮, ೩೩೯, ೩೪೩, ೩೫೨, ೩೫೩, ೩೬೧, ೩೭೩
ರಾಮ ನಾರಾಯಣ ಸಿಂಗ್ ೩೮೧, ೩೮೨, ೪೧೨, ೪೮೪
ರಾಮಸ್ವಾಮಿ ಮುದಲಿಯಾರ್ ಎ. ೪೯೭
ರಾಯ್‌ಮೆಹ್ತಾ ೨೭೮
ರಾಯ್‌ಸಾಹೇಬ್ ೪೪೧
ರಾವ್ ಬಹದ್ದೂರ್ ಎನ್. ಶಿವರಾಜ್ ೧೪, ೧೭, ೧೮, ೧೮೬
ರಾವಲ್‌ಪಿಂಡಿ ೨೯೦
ರೇಣುಕಾ ರಾಯ್(ರೇ) ೧೬೫, ೧೬೬, ೧೮೦, ೨೬೦, ೨೬೧, ೨೬೨, ೨೬೩, ೨೬೪, ೨೬೬, ೨೬೭, ೨೯೭, ೨೯೮, ೨೯೯, ೩೨೩, ೩೩೪, ೩೩೫
ರೊಬಾಟ್ಟಂ ೬
ರೊಹಿಕುಂಡ ೪೫

## ಲ

ಲಕ್ನೋ ೧೫೬, ೧೫೭, ೨೭೮, ೩೭೨
ಲಕ್ಷ್ಮಣತೀರ್ಥ ೪೪೪
ಲಕ್ಷ್ಮೀಕಾಂತ ೪, ೬, ೭, ೧೯, ೧೦೫, ೧೭೯, ೨೮೩
ಲತೀಫಿ ೩೩೧
ಲಲ್ಲೂಭಾಯ್ ೪೦೯, ೪೧೫, ೪೧೬, ೪೪೫
ಲಾಲ್‌ಚಾಂದ್ ನವಲ್‌ರಾಯ್ ೨, ೨೧, ೪೧, ೪೨, ೪೪, ೪೬, ೫೬, ೫೭, ೭೯, ೯೭, ೧೦೩, ೧೦೪, ೧೦೫, ೧೦೬, ೧೧೦, ೧೧೧, ೧೩೩, ೧೩೪, ೧೭೩, ೧೭೯, ೧೮೧, ೧೮೮, ೨೦೯, ೨೧೪, ೨೧೫, ೨೨೬, ೨೨೭, ೨೨೯, ೨೩೦, ೨೩೩, ೨೩೪, ೨೩೫, ೨೩೬, ೨೩೭, ೨೩೮, ೨೪೫, ೨೬೫, ೨೭೮, ೨೭೯, ೨೮೦, ೨೯೨, ೩೦೬, ೩೦೭, ೩೨೨, ೩೮೦, ೫೦೩
ಲಾಯಿಲ್ಲಪುರ ೩೭೩
ಲಾಹೋರ್ ೪೬, ೧೫೬, ೧೫೭, ೧೯೪, ೧೯೫, ೨೯೪, ೩೩೨
ಲಿನ್‌ಲಿತ್‌ಗೋ ೨೩೬, ೨೩೭
ಲೋಹಾರ್ ೩೮೩

## ವ

ವಕ್ಫ್ ೩೬೫
ವರ್ಲಿ ೩೭೩
ವಾಡಿಲಾಲ್ ಲಲ್ಲೂಭಾಯ್ ೪೦೯, ೪೧೫, ೪೧೬, ೪೪೫
ವಾಲ್ಷ್ ೩೦೫
ವಾಲ್ಸ್ ೩೯
ವಿಠ್ಠಲ್ ಎನ್. ಚಂದ್ರಾವರ್ಕರ್ ೩೩೪
ವಿಲ್ಲುಪುರಂ ೧೫೮
ವಿಶ್ವೇಶ್ವರಯ್ಯ ೨೭೨
ವುಲ್‌ಫ್ರಮ್ ೫, ೬
ವೆಂಕಟಸುಬ್ಬ ರೆಡ್ಡಿಯಾರ್ ಆರ್. ೩೯೫, ೪೪೮
ವೇವೆಲ್ ೨೩೭
ವೋಲ್‌ಫಾರ್ಮ್ ೯೫

## ಶ

ಶಾಂಪುರ ೪೦೨
ಶಿವರಾಜ ಎನ್. ೧೩, ೧೪, ೧೭, ೧೮, ೧೮೬
ಶಿವರಾವ್ ೨೧೩
ಶೇತ್ ೪೭೯, ೪೮೩
ಶೇತ್ ದಾಮೋದರ್ ಸ್ವರೂಪ ೪೭೯
ಶೇತ್ ಯೂಸುಫ್ ಅಬ್ದುಲ್ಲಾ ಹರೂನ್ ೧೨೯, ೪೨೮, ೪೪೬, ೪೪೭,
ಶೇತ್ ಸುಖದೇವ್ ೪೩೦, ೪೩೪,

ಶೇರ್‌ಷಾ ೪೨೭
ಶೋಭಾಸಿಂಗ್ ೪೭೮, ೪೭೯
ಶ್ರೀಪ್ರಕಾಶ ೪೪೭
ಶ್ರೀಮನು ೪೭೧, ೫೦೩
ಶ್ರೀಮನುಸುಬೇದಾರ್ ೨೫೧
ಶ್ರೀರಾಮ್ ೨೩೯
ಶ್ರೀಲಾಲ್ ೨೨೬, ೨೩೦
ಶ್ರೀವಾಸ್ತವ ೧೪೩, ೨೦೪

## ಷ

ಷಹದಾರ ೪೮, ೪೯, ೨೦೭, ೨೨೨, ೨೨೩, ೨೨೯, ೨೩೯, ೨೪೦
ಷಹದಾರಾ ೨೦೭, ೨೨೨, ೨೨೩, ೨೨೯, ೨೩೯
ಷಾಹಿಕ್ ೨೨೮
ಷಿಲಾಂಗ್ ೨೩೯

## ಸ

ಸಂಕ್ಟೋರಿಯಾ ೪೦೨
ಸಂಗ್ ೫೧೯
ಸಂತ್ ೫೪, ೫೮, ೫೯, ೬೦, ೬೧, ೬೩, ೯೦, ೧೦೫, ೧೦೮, ೧೦೯, ೧೧೬, ೧೧೭, ೧೩೬, ೧೩೮, ೧೩೯, ೧೪೩, ೧೪೪, ೧೮೯, ೨೦೧, ೩೨೩, ೩೬೮, ೩೬೯
ಸಂತಾಲ್ ೪೯೪
ಸಂಬಾರ್‌ಪೂರ್ ೨೭೨
ಸಂಸೇನಾ ೩೯೬
ಸಕ್ಸೇನಾ ೪೪೯, ೪೫೧, ೪೯೬, ೫೦೩, ೫೦೪
ಸತ್ತಾರ್ ೪೭, ೪೮, ೧೨೬, ೧೫೩, ೧೫೪, ೨೯೯
ಸತ್ಯನಾರಾಯಣ್ ೪೫೩
ಸತ್ಯನಾರಾಯಣ ೨೭೭, ೩೨೧, ೩೮೧, ೪೨೫, ೪೩೭, ೫೦೨, ೫೦೩
ಸನ್ಯಾಲ್ ೩೯೬, ೩೯೭
ಸಮರ್‌ಸ್ಕೈಟ್ ೨೮೪
ಸಯದ್ ೮೦, ೮೧, ೮೨, ೮೩, ೮೪, ೮೬, ೧೧೦, ೧೧೧
ಸಯದ್ ಗುಲಾಮ್ ಭಿಕ್ ನೈರಂಗ್ ೧೧೦, ೧೧೧, ೧೮೨, ೧೮೩, ೧೮೪, ೩೧೧, ೩೫೫
ಸಯಮ್ಸರು ೭
ಸಯಿದ್ ೨೮೭
ಸಯಿದ್ ರಾಜಾ ಅಲಿ ೨೮೭
ಸಯ್ಯದ್ ೬೪, ೬೮, ೧೮೨, ೧೮೩, ೧೮೪, ೩೧೧
ಸರ್‌ದಾರ್ ೫೮, ೬೨, ೬೩, ೯೦, ೧೦೫, ೧೦೮, ೧೦೯, ೧೧೧, ೧೧೨, ೧೧೬, ೧೧೭, ೧೩೬, ೧೩೮, ೧೩೯, ೧೪೩, ೧೪೪, ೩೬೯
ಸಹರಣಪುರ ೨೩೯, ೨೪೦
ಸಹರಾನ್‌ಪುರ್ ೧೫೭
ಸಾಗರ್ ೧೮೯
ಸಿಂಗರೇಣಿ ೧೭೦, ೩೧೩, ೩೧೪
ಸಿಂತ್ ೬೨
ಸಿಂಧ್ ೩೦, ೨೭೮
ಸಿಂಧಿಯಾ ೫೨೨
ಸಿಂನ್ಹಾ ೩೮೧
ಸಿಜುಯಾ ೪೦೨
ಸಿದ್ದಿಕ್ ೧೪೫, ೧೪೬
ಸಿದ್ದು ೩೩೨
ಸಿನ್ಹ ೨೭೭, ೩೨೧
ಸಿನ್ಹಾ ೪೨೫, ೪೩೭, ೪೫೩, ೫೦೨, ೫೦೩
ಸಿಮ್ಲಾ ೫೧, ೫೨, ೧೦೨, ೧೦೩, ೧೦೪, ೧೧೧, ೧೧೨, ೨೮೭, ೩೧೧, ೩೧೨, ೩೭೯, ೪೩೪, ೪೭೭, ೪೮೫, ೪೮೯, ೪೯೦, ೪೯೧, ೪೯೨
ಸಿರ್ಕಾ ೪೦೨
ಸಿಲೋನ್ ೧೭೩
ಸುದಂಡಿಹಾ ೪೦೧
ಸುಬೇದಾರ್ ೨೪೪, ೨೫೩, ೨೯೬, ೩೦೮, ೩೦೯,

೩೧೦, ೩೧೬, ೩೧೭, ೩೨೪, ೩೭೭, ೩೯೬, ೪೦೬, ೪೦೮, ೪೨೧, ೪೩೨, ೪೪೪, ೪೬೨, ೪೭೧, ೪೭೪, ೫೦೩, ೫೦೮, ೫೨೦
ಸೆನ್ ಎಚ್.ಕೆ. ಡಾ॥ ೧೬೭, ೪೮೯
ಸೇ(ಟ್)ಠ್ ಯೂಸುಫ್ ಅಬ್ದೂಲಾ ಹರೂನ್ ೧೨೯, ೧೯೮, ೧೯೯, ೨೧೮, ೪೨೮, ೪೪೬, ೪೪೭
ಸೇನ್ ಗುಪ್ತಾ ಬಿ.ಸಿ. ೮೩
ಸೇನ್‌ಗುಪ್ತಾ ೮೩
ಸೊರನ್‌ಸೆನ್ ೨೧೫
ಸೋಡೆಪೂರ ೪೦೩
ಸೋನಾಚಾರ ೩೭೨
ಸೋನೆಪತ್ ೧೫೭, ೩೭೩
ಸ್ಮಿಥ್ ೬
ಸ್ವಿಝರ್‌ಲಂಡ್ ೪೭೨

**ಹ**

ಹಜಾರಿಬಾಗ್ ೯೬, ೩೭೩, ೪೧೨, ೪೧೩, ೪೭೯, ೪೮೩
ಹಟ್ಟನ್ ಟಿ.ಡೆ. ೧೭೯
ಹನುಮಾನ್ ೫೨೦
ಹಮೀದ್ ೧೫೯
ಹಸನ್ ಸುಹ್ರಾವರ್ದಿ ೩೯೭
ಹಳೆದೆಹಲಿ ೯೦, ೨೦೭
ಹಳೇಬಿಹಾರ ೧೯೫
ಹಾಜ್ ೪೨೭
ಹಾಜಿ ಚೌಧುರಿ ಮುಹಮ್ಮದ್ ಇಸ್ಮಾಯಿಲ್ ಖಾನ್ ೭೭, ೯೧, ೪೩೯, ೪೪೦, ೫೦೬, ೫೦೭
ಹಾರ್ಕ್‌ನೆಸ್ ೩೮೯
ಹಿಂದುಸ್ತಾನ್ ಟೈಂಸ್ ೪೪೮, ೪೬೧, ೪೭೩
ಹುಗ್ಲಿ ೩೭೩
ಹುಬ್ಬಳ್ಳಿ ೩೭೩
ಹುಶೇನಿ ಬಾಯ್ ಎ. ಲಾಲ್‌ಜೀ ೨೭
ಹುಸೇನ್ ಭಾಯ್ ಎ. ಲಾಲ್‌ಜೀ ೧೩೦, ೧೩೧, ೧೩೪, ೧೬೮,
ಹೂಗ್ಲಿ ೧೫೭
ಹೂಸಿನ್ ೧೬೮
ಹೈದರಾಬಾದ್ ೩೦